
ಸಮಗ್ರ ದಾಸ ಸಾಹಿತ್ಯ

ಸಂಪುಟ : ೩೫ - ಭಾಗ ೧



ಬೇಲೂರು ವೈಕುಂಠದಾಸರು
ಮತ್ತು ಇತರ
ಶ್ರೀವೈಷ್ಣವ ಹರಿದಾಸರ ಕೀರ್ತನೆಗಳು

ಸಮಗ್ರ ದಾಸ ಸಾಹಿತ್ಯ
ಸಂಪುಟ : ೩೫ – ಭಾಗ ೧

ಬೇಲೂರು ವೈಕುಂಠದಾಸರು ಮತ್ತು ಇತರ ಶ್ರೀವೈಷ್ಣವ ಹರಿದಾಸರ ಕೀರ್ತನೆಗಳು

ಸಂಪಾದಕರು
ನಾ. ಗೀತಾಚಾರ್ಯ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

SAMAGRA DASA SAHITYA VOLUME - 35 Part 1:
Beluru Vykuntadasaru Mattu Ithara ShriVyshnava Haridasara Keerthanegalu, Edited by Na. Geethacharya and Published by Sri. Y. K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 219 + ೬೧೨

ಪ್ರಥಮ ಮುದ್ರಣ : ೨೦೦೩
ಪ್ರತಿಗಳು : ೧೨೫೦

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು – ೫೬೦ ೦೫೨.

ಮುದ್ರಕರು :

ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩.

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

•

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಡಾ. ಟಿ. ಎನ್. ನಾಗರತ್ನ

ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ

ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಮಂದಾಕಿನಿ

ಪ್ರೊ. ಸುಧಾಕರ

ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ, ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ, ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಆವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿ.ಡಿ. ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್

ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸ ಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮೂವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ.ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು) ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ–ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕನ್ನಡಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ) ನಾಲ್ಕುನೂರಕ್ಕೂ ಮೀರಿದ ದಾಸರಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' – ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೇ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆಯ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ–ಪೀಳಿಗೆ'ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯದಲ್ಲಿ ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ–ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದುಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯ ವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದೂ, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದೂ ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು* ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ-ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು, ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ-ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು- ಎಂಬುದಾಗಿ ನಿರ್ಧರಿಸಲಾಯಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ, ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, "ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ" ಎಂದು ಘೋಷಿಸಿದರು. ಅದರಂತೆ, ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಭಾಗ – ೧

೧. ಪ್ರವೇಶಿಕೆ

ಈ ಸಮಗ್ರ ದಾಸಸಾಹಿತ್ಯ ಸಂಪುಟ ೩೫ರಲ್ಲಿ ಎರಡು ಭಾಗಗಳಿವೆ. ಈ ಎರಡೂ ಭಾಗಗಳಲ್ಲಿ ಶ್ರೀವೈಷ್ಣವ ಹರಿದಾಸರ ಕೀರ್ತನೆಗಳಿವೆ. (೧೮ನೇ ಸಂಪುಟದ ೪ನೇ ಭಾಗದಲ್ಲಿ ಮಹಿಳಾ ಕೀರ್ತನೆಗಳಿವೆ) ಕನ್ನಡ ಹರಿದಾಸ ಸಾಹಿತ್ಯ ಚರಿತ್ರೆಯಲ್ಲಿ ಶ್ರೀವೈಷ್ಣವ ಕೀರ್ತನೆಗಳು ಎನ್ನುವುದೇ ಹೊಸ ಮಾತು. 'ಕನ್ನಡದಲ್ಲಿ ಶ್ರೀವೈಷ್ಣವ ಸಾಹಿತ್ಯವೇ ಇಲ್ಲ' ಎಂಬ ಅಭಿಪ್ರಾಯದಲ್ಲಿದ್ದ ಸಾಹಿತ್ಯ ಚರಿತ್ರಕಾರರಿಗೆ ಇದು ಹೊಸ ವಿಚಾರ. ಈ ಅಭಿಪ್ರಾಯದ ಹಿನ್ನೆಲೆಯಲ್ಲಿಯೇ ಸಾಹಿತ್ಯ ಚರಿತ್ರೆಯಲ್ಲಿ ಅಲ್ಲಲ್ಲಿ ಕೆಲವು ಮಾತುಗಳು ಕಾಣಿಸಿಕೊಂಡಿರುವುದನ್ನು ಬಿಟ್ಟರೆ ಶ್ರೀವೈಷ್ಣವ ಸಾಹಿತ್ಯದ ಅಸ್ತಿತ್ವವನನ್ನು ಗುರುತಿಸುವ ಅಥವಾ ಹುಡುಕುವ ಪ್ರಯತ್ನವೇ ಈವರೆಗೆ ಆಗಿರಲಿಲ್ಲ. ಆದರೆ ೧೯೯೦ರ ದಶಕದಿಂದಲೇ ಈ ಬಗೆಯ ಪ್ರಯತ್ನಗಳು ಕಾಣಿಸಿಕೊಂಡು ಕನ್ನಡ ಸಾಹಿತ್ಯದಲ್ಲಿ ಶ್ರೀವೈಷ್ಣವ ಹರಿದಾಸ ಸಾಹಿತ್ಯವೂ ಇದೆ ಎಂಬುದನ್ನು ಪ್ರತಿಪಾದಿಸಿರುವುದು ಕಂಡುಬಂದಿದೆ. ಈ ನಿಟ್ಟಿನಲ್ಲಿ ಹಲವು ಲೇಖನಗಳು, ಪ್ರಕಟನೆಗಳು ಬಂದಿವೆಯಾದರೂ ಎಲ್ಲ ಕೀರ್ತನೆಗಳನ್ನು ಸಂಗ್ರಹಿಸಿ ಸಮಗ್ರ ಸಂಪುಟವಾಗಿ ಕಾಣಿಸಿಕೊಳ್ಳುತ್ತಿರುವುದಕ್ಕೆ ಈ ಸಂಪುಟವೇ ನಾಂದಿಯಾಗಿದೆ. ಈ ಮೂಲಕ ೮೦ರ ದಶಕದಲ್ಲಿ ಬೆಳಕಿಗೆ ಬಂದ ಅದ್ವೈತ ಹರಿದಾಸ ಸಾಹಿತ್ಯದೊಂದಿಗೆ ಈ ವಿಶಿಷ್ಟಾದ್ವೈತ ಹರಿದಾಸ ಸಾಹಿತ್ಯವೂ, ಮುಖ್ಯವಾಹಿನಿಯಾಗಿದ್ದ ದ್ವೈತ ತತ್ವದೊಂದಿಗೆ ಸೇರಿಕೊಂಡು ಕನ್ನಡ ಹರಿದಾಸ ಸಾಹಿತ್ಯ ಎಂದರೆ ವೈದಿಕ ಧರ್ಮದ ಮುಖ್ಯ ತತ್ವಗಳಾದ ಈ ಮೂರು ಧರ್ಮದ ಸಮಾನ ಪ್ರತಿಪಾದನೆ ಎಂಬ ಹೊಸ ಚಿಂತನೆಗೂ ಈ ಸಂಪುಟ ನಾಂದಿಯಾಗಲಿವೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ವಿಶಿಷ್ಟಾದ್ವೈತ ಕೀರ್ತನೆಗಳ ಪ್ರಕಟನೆ ಮಹತ್ವದ ಹೆಜ್ಜೆ. ಈ ಯೋಜನೆಯಲ್ಲಿ ಮೂರು ಸಂಪುಟಗಳಲ್ಲಿ ಹೊರಬಂದಿರುವ ಈ ಶ್ರೀವೈಷ್ಣವ ಕೀರ್ತನೆಗಳ ಸಂಖ್ಯಾಬಾಹುಳ್ಯವೇ ಇದರ ಪ್ರಾಮುಖ್ಯತೆಯನ್ನು ಹೇಳಬಹುದಾದರೂ ಇದರ ಒಳಹೊಕ್ಕು ನೋಡಿದಾಗ ಸಂಖ್ಯೆಯಷ್ಟೇ ಅಲ್ಲ, ಈ ಕೀರ್ತನೆಗಳ ಗುಣ ವಿಶಿಷ್ಟತೆಗಳೂ ಈ ಸಾಹಿತ್ಯದ ಪ್ರಾಮುಖ್ಯತೆಯ ಕುರುಹುಗಳಾಗಿವೆ ಎಂದು ಯಾರಿಗಾದರೂ ಅನ್ನಿಸದಿರದು. ಕನ್ನಡ ಕೀರ್ತನ ಸಾಹಿತ್ಯಕ್ಕೇ ಈ ಶ್ರೀವೈಷ್ಣವ ಕೀರ್ತನೆಗಳು ಹೊಸ ಭಾಷ್ಯವನ್ನು ಬರೆಯಬಲ್ಲಷ್ಟು ಮೌಲಿಕವಾಗಿವೆ. ಅಷ್ಟೇ ಅಲ್ಲ ಕನ್ನಡ ಸಾಹಿತ್ಯಕ್ಕೇ ಹೊಸ ವ್ಯಾಖ್ಯಾನವನ್ನು ಇವು ನೀಡಬಲ್ಲವಾಗಿವೆ. ಕೀರ್ತನ ಸಾಹಿತ್ಯದ ಎಲ್ಲ ವೈವಿಧ್ಯತೆಗಳೂ, ಲಕ್ಷಣಗಳೂ ಇದರಲ್ಲೂ ಇರುವುದರ ಜೊತೆಗೆ ವಿಶಿಷ್ಟಾದ್ವೈತದ ಕೆಲವು ವಿಶಿಷ್ಟ ಲಕ್ಷಣಗಳು ಮೊದಲಬಾರಿಗೆ ಕನ್ನಡ ಸಾಹಿತ್ಯಕ್ಕೆ ಪರಿಚಯವಾಗುತ್ತಿವೆ. ವಿಶಿಷ್ಟಾದ್ವೈತದ ತತ್ವಗಳು ಅತ್ಯಂತ ಸರಳವಾಗಿ ಮತ್ತು ಅಷ್ಟೇ ಸಮರ್ಥವಾಗಿ ಈ ಕೀರ್ತನೆಗಳಲ್ಲಿ ಕಾಣಿಸಿಕೊಳ್ಳುವ ಮೂಲಕ 'ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ ಇಲ್ಲ' ಎಂಬ ಈವರೆಗಿದ್ದ ಸಿದ್ಧ ಹೇಳಿಕೆಯನ್ನು ಈ ಸಂಪುಟಗಳು ಬದಲಾಯಿಸಿವೆ. ಬೇಲೂರು ವೈಕುಂಠದಾಸರ ತತ್ವ ಇಲ್ಲಿ ಖಚಿತತೆಯನ್ನು ಪಡೆದುಕೊಳ್ಳುತ್ತದೆ. ಲಕ್ಷ್ಮೀಶನು ಕೀರ್ತನಕಾರನಾಗಿ ಸ್ಥಾನ ಪಡೆಯುವುದರ ಜೊತೆಗೆ ಅವನ ಮತ- ಧರ್ಮವೂ ನಿಶ್ಚಿತವಾಗುತ್ತದೆ. ವಿಮರ್ಶಕರು ಗುರುತಿಸಿರುವ ಆಧುನಿಕ ಮಹಿಳಾ ಲೇಖಕಿ ತಿರುಮಲಾಂಬ ಇಲ್ಲಿ ಕೀರ್ತನಕಾರಳಾಗಿಯೂ ಅಸ್ತಿತ್ವ ಪಡೆದುಕೊಳ್ಳುತ್ತಾರೆ. ಉಳಿದ ಎಲ್ಲ ಕೀರ್ತನಕಾರರೂ ಕನ್ನಡ ಸಾಹಿತ್ಯಕ್ಕೆ ಹೊಸ ಪರಿಚಯವಾಗಿದ್ದಾರೆ. ಇವರಲ್ಲಿ ಕನಕ–ಪುರಂದರರಷ್ಟೇ ಸಮರ್ಥರಾದ ಕೀರ್ತನಕಾರರೂ ಇದ್ದಾರೆ.

ಈ ಶ್ರೀವೈಷ್ಣವ ಕೀರ್ತನ ಸಂಪುಟಗಳು ಕನ್ನಡ ಸಾಹಿತ್ಯದ ಮುಖ್ಯ ಕವಿಗಳಾದ ಕನಕದಾಸ ಲಕ್ಷ್ಮೀಶ ಮತ್ತು ಕುಮಾರವ್ಯಾಸರನ್ನು ಪುನರ್‌ಮೌಲ್ಯ ವಿವೇಚನೆಗೆ ಒಳಪಡಿಸಬಲ್ಲವಾಗಿವೆ. ನನ್ನ ಈವರೆಗಿನ ಅಧ್ಯಯನ ಕನಕದಾಸನನ್ನು ವಿಶಿಷ್ಟಾದ್ವೈತ ತತ್ವ ಪ್ರತಿಪಾದಕ ಎಂಬುದನ್ನೇ ಸಮರ್ಥಿಸಬಲ್ಲುವಾಗಿವೆ. ಈಗಾಗಲೇ ವಿಮರ್ಶಕರು ಸೂಚಿಸಿರುವ ಈ ಅಂಶ ಈ ವಿಶಿಷ್ಟಾದ್ವೈತ ತತ್ವಗಳ ಹಿನ್ನೆಲೆಯಲ್ಲಿ ಇನ್ನಷ್ಟು

ಹೆಚ್ಚು ಖಚಿತಗೊಳ್ಳುತ್ತವೆ. ಪುರಂದರದಾಸ ಮತ್ತು ಕನಕದಾಸರ ಕೀರ್ತನೆಗಳಲ್ಲಿ ಏಕೆ ಭಿನ್ನತೆಯಿದೆ ಎಂಬುದಕ್ಕೆ ಈ ಚಿಂತನೆ ಸ್ಪಷ್ಟ ಉತ್ತರವನ್ನು ನೀಡುತ್ತದೆ. ಹಾಗೆಯೇ ಕುಮಾರವ್ಯಾಸನ ತತ್ವ ಪ್ರತಿಪಾದನೆಯನ್ನೂ ಈ ತತ್ವದ ಹಿನ್ನೆಲೆಯಲ್ಲಿಯೇ ಸುಲಭವಾಗಿ ಗುರುತಿಸಬಹುದಾಗಿದೆ. ಹೀಗೆ ಹಲವು ದೃಷ್ಟಿಗಳಲ್ಲಿ ಕನ್ನಡ ಸಾಹಿತ್ಯವನ್ನು ಒರೆಗೆ ಹಚ್ಚಲು ಈ ಸಂಪುಟಗಳು ಆಕರಗಳಾಗಬಲ್ಲವಾಗಿವೆ.

ಈ ಎರಡೂ ಶ್ರೀವೈಷ್ಣವ ಸಂಪುಟಗಳಲ್ಲಿ ಒಟ್ಟು ೧೦೧೪ ಕೀರ್ತನೆಗಳು ಸಂಗ್ರಹವಾಗಿವೆ. ಇದರೊಂದಿಗೆ ಮಹಿಳಾ ಕೀರ್ತನಕಾರರ ಕೃತಿಗಳು ಸುಮಾರು ೩೦೦ ಇವೆ. ಬೇರೆ ಬೇರೆ ಕಾರಣಗಳಿಗಾಗಿ ಈ ಸಂಪುಟದಲ್ಲಿ ಸೇರಿಲ್ಲದ ಇನ್ನು ೫೦ –೮೦ ಕೀರ್ತನೆಗಳೂ ಇವೆ. ಸಂಗ್ರಹ ಕಾಲದಲ್ಲಿ ತೋರಿ ಬಂದ ಹಲವು ಗ್ರಂಥ ಶೀರ್ಷಿಕೆಗಳು ಮತ್ತು ಮಾಹಿತಿಗಳು ಇನ್ನೂ ಇದ್ದಿರಬಹುದಾದ ಶ್ರೀವೈಷ್ಣವ ಕೀರ್ತನೆಗಳತ್ತ ಬೆಳಕು ಚೆಲ್ಲುತ್ತಿದ್ದರೂ ಖಚಿತ ಮಾಹಿತಿದಾರರು ಮತ್ತು ಗ್ರಂಥ ಪ್ರತಿಗಳು ಲಭ್ಯವಾಗುತ್ತಿಲ್ಲ. ಸದ್ಯಕ್ಕೆ ಈ ಯೋಜನೆಗಾಗಿ ಒಟ್ಟು ೧೦೧೪ ಕೀರ್ತನೆಗಳನ್ನು ಮಾತ್ರ ಎರಡು ಭಾಗಗಳಲ್ಲಿ ಸಿದ್ಧಪಡಿಸಲಾಗಿದೆ.

ಮೊದಲನೆಯ ಭಾಗದಲ್ಲಿ ೫೩೪ ಕೀರ್ತನೆಗಳಿದ್ದು ಬೇಲೂರು ವೈಕುಂಠದಾಸರು ಮತ್ತು ಇತರ ಎಂಟು ಜನ ಕೀರ್ತನಕಾರರ ಕೀರ್ತನೆಗಳಿವೆ. ಎರಡನೆಯ ಭಾಗದಲ್ಲಿ ಮುಖ್ಯವಾಗಿ ಆಸೂರಿರಾಮಸ್ವಾಮಿ ಅಯ್ಯಂಗಾರ್ಯರ ಕೀರ್ತನೆಗಳು ಮತ್ತು ಹೆಸರು ಕಾಲ ಗೊತ್ತಿಲ್ಲದ ಇನ್ನಿಬ್ಬರ ೧೮ ಕೀರ್ತನೆಗಳು ಸೇರಿ ಒಟ್ಟು ೪೮೦ ಕೀರ್ತನೆಗಳಿವೆ. ಮಹಿಳಾಕೀರ್ತನಕಾರರ ಸಂಪುಟ ಬೇರೆಯೇ ಸಿದ್ಧವಾಗುತ್ತಿರುವುದರಿಂದ ಶ್ರೀವೈಷ್ಣವ ಮಹಿಳಾಕೀರ್ತನಕಾರರಾದ ಯದುಗಿರಿಯಮ್ಮ ಮತ್ತು ನಂಜನಗೂಡು ತಿರುಮಲಾಂಬ ಅವರ ಸುಮಾರು ೩೦೦ ಕೀರ್ತನೆಗಳನ್ನು ೧೮ನೇ ಸಂಪುಟದ ನಾಲ್ಕನೇ ಭಾಗದಲ್ಲಿ ನೋಡಬಹುದು.

ಯೋಜನೆಗೆ ಸೂಚಿಸಿರುವ ಸೂಚನೆಗಳಂತೆಯೇ ಇಲ್ಲಿಯ ಕೀರ್ತನೆಗಳನ್ನು ವಿಂಗಡಿಸಲಾಗಿದ್ದರೂ ವಿಶಿಷ್ಟಾದ್ವೈತ ತತ್ವದ ಹಿನ್ನೆಲೆಯಲ್ಲಿ ದೇವತಾ ತಾರತಮ್ಯವನ್ನು

ಸ್ವಲ್ಪ ವ್ಯತ್ಯಾಸಮಾಡಿಕೊಳ್ಳಲಾಗಿದೆ. ಹಾಗೆ ನೋಡಿದರೆ ಶ್ರೀವೈಷ್ಣವ ಧರ್ಮದಲ್ಲಿ ದೇವತಾ ತಾರತಮ್ಯವೇ ಇಲ್ಲ. ಏಕೆಂದರೆ ಇಲ್ಲಿಯ ದೇವರು ಶ್ರೀಹರಿಯೊಬ್ಬನೇ. ಆದರೂ ಈ ತತ್ವದಲ್ಲಿ ಶ್ರೀಹರಿಯ ರೂಪಭೇದಗಳನ್ನು ಒಂದು ವ್ಯೂಹದಲ್ಲಿ ಕಲ್ಪಿಸಿಕೊಳ್ಳಲಾಗಿದ್ದು ಅದಕ್ಕೊಂದು ಕ್ರಮವನ್ನು ಹೇಳಲಾಗಿದೆ. ಆ ಕ್ರಮದಂತೆಯೇ ಇಲ್ಲಿ ದೇವತಾಸ್ತುತಿಗಳನ್ನು ಜೋಡಿಸಲಾಗಿದೆ. ಶ್ರೀಹರಿಯ ಈ ವ್ಯೂಹರಚನೆ ರೀತಿ ಇದೆ.

೧. ಶ್ರೀಮಹಾವಿಷ್ಣು - ವಾಸುದೇವ- ಹರಿ (ಪರ)

೨. ಸಂಕರ್ಷಣ - ಪ್ರದ್ಯುಮ್ನ - ಅನಿರುದ್ಧ ಮತ್ತು ದ್ವಾದಶ ನಾಮಗಳು (ಕೇಶವ, ನಾರಾಯಣ, ಮಾಧವ, ಗೋವಿಂದ ಅಚ್ಯುತ ಇತ್ಯಾದಿ) (ವ್ಯೂಹ)

೩. ದಶಾವತಾರಗಳು (ಬುದ್ಧನ ಬದಲಿಗೆ ಬಲರಾಮನನ್ನು ಕಲ್ಪಿಸಿಕೊಂಡು) ಮತ್ತು ಇತರ ಅವತಾರಗಳು (ವಿಭವ)

೪. ಅರ್ಚಾವತಾರಗಳು (ರಂಗನಾಥ, ಶ್ರೀನಿವಾಸ, ವೆಂಕಟೇಶ, ಚನ್ನಕೇಶವ ಇತ್ಯಾದಿ)

ಶ್ರೀಹರಿಯ ಈ ಎಲ್ಲ ರೂಪಗಳ ಸ್ತುತಿಗಳ ನಂತರ

೫ ಶ್ರೀ ಮಹಾಲಕ್ಷ್ಮೀ ಸ್ತುತಿ ಬರುತ್ತದೆ. ಇದಾದ ನಂತರ

೬ ವಿಶ್ವಕ್ಸೇನ ಸ್ತುತಿ, ನಂತರ

೭ ಆಳ್ವಾರ್-ಆಚಾರ್ಯರ ಸ್ತುತಿ ಬರುತ್ತದೆ.

ಶ್ರೀವೈಷ್ಣವ ಸಂಪ್ರದಾಯ ಅನುಸರಿಸುವ ಇದೇ ಕ್ರಮದಲ್ಲಿ ಇಲ್ಲಿಯೂ ಕೀರ್ತನೆಗಳನ್ನು ಜೋಡಿಸಿದೆ. ಗುರು ಪರಂಪರೆಯು ಹೇಳುವ ಈ ದೇವತಾ ಕ್ರಮವನ್ನು ಬಿಟ್ಟರೆ ಬೇರೆ ಯಾವ ದೇವತೆಗಳ ಸ್ತುತಿಯನ್ನೂ ಈ ಸಂಪ್ರದಾಯ ಹೇಳುವುದಿಲ್ಲ. ಆದರೆ ಕೆಲವು ಕೀರ್ತನಕಾರರು ಸರ್ವದೈವಗಳನ್ನು ಸ್ತುತಿಸಿದ್ದು

ಅವುಗಳನ್ನು ಈ ಪಾರಂಪರಿಕ ದೇವತಾಸ್ತುತಿಯ ನಂತರ ಸೇರಿಸಿದೆ. ಉಳಿದಂತೆ ಯೋಜಿತ ಸೂಚನೆಗಳನ್ನೇ ಅನುಸರಿಸಲಾಗಿದೆ.

ಪ್ರಸ್ತಾವನೆಯ ಮುಂದಿನ ಭಾಗದಲ್ಲಿ ಶ್ರೀವೈಷ್ಣವ ಹರಿದಾಸ ಸಾಹಿತ್ಯದ ಬಗ್ಗೆ ಈವರೆಗೆ ನಡೆದಿರುವ ಸಂಶೋಧನೆಯನ್ನು, ಶ್ರೀವೈಷ್ಣವ ಧರ್ಮ–ತತ್ವದ ಬಗ್ಗೆ ಸ್ಥೂಲವಿವರಣೆಯನ್ನು, ಶ್ರೀವೈಷ್ಣವ ಕೀರ್ತನೆಗಳ ಸಾಮಾನ್ಯ ಲಕ್ಷಣಗಳನ್ನು ಹೇಳಲಾಗಿದೆ. (ಈ ವಿವರಗಳು ಈ ಸಂಪುಟದ (೩,೫) ಎರಡೂ ಭಾಗಗಳಲ್ಲಿದ್ದು ಉಳಿದ ಸಂಪುಟಗಳಲ್ಲಿ ಅಭ್ಯಾಸ ಮಾಡುವವರು ಇದನ್ನು ಗಮನಿಸುವುದು ಉಚಿತವೆನಿಸುತ್ತದೆ.) ಉಳಿದಂತೆ ಆಯಾ ಭಾಗಗಳಲ್ಲಿ ಬರುವ ಕೀರ್ತನಕಾರರ ಜೀವನವಿವರ, ದಾಸರ ಇತರ ಗ್ರಂಥಗಳ ಪರಿಚಯ ಮತ್ತು ಕೀರ್ತನೆಗಳ ಪರಿಚಯ ಹಾಗೂ ಕೀರ್ತನೆಗಳ ಆಕರಗಳನ್ನು ಆಯಾ ಭಾಗಗಳಲ್ಲೇ ನೀಡಿದೆ. ಅನುಬಂಧದಲ್ಲಿ ದಾಸರಬಗ್ಗೆ ಬೇರೆ ದಾಸರು ರಚಿಸಿರುವ ಕೀರ್ತನೆಗಳನ್ನು ಮತ್ತು ದಾಸರ ಅಪ್ರಕಟಿತವಾದ ಕೆಲವು ಸಣ್ಣಕೃತಿಗಳನ್ನು ನೀಡಲಾಗಿದೆ. ಕೆಲವು ಅನ್ಯಭಾಷೆಯ ಮಿಶ್ರಣದ ಹಾಡುಗಳಿದ್ದು, ದಾಸರಿಗಿದ್ದ ಬಹುಭಾಷಾಜ್ಞಾನವು ಇದರಿಂದ ವ್ಯಕ್ತವಾಗುತ್ತದೆ ಎಂಬ ಕಾರಣಕ್ಕಾಗಿ ಮಾದರಿಗಾಗಿ ನೀಡಲಾಗಿದೆ. ಒಂದು ಸಂಪುಟದಲ್ಲಿರುವ ದಾಸರು ಅದೇ ಸಂಪುಟದಲ್ಲಿರುವ ಇನ್ನೊಬ್ಬ ದಾಸರನ್ನು ಸ್ತುತಿಸಿರುವ ಕೀರ್ತನೆಗಳು ಮಾತ್ರ ಮೂಲದಾಸರ ಕೀರ್ತನೆಗಳ ಜೊತೆಯಲ್ಲೇ ಇದ್ದು, ಅಡಿಟಿಪ್ಪಣಿಯಲ್ಲಿ ಯಾವ ದಾಸರನ್ನು ಕುರಿತದ್ದು ಎಂಬ ಸೂಚನೆ ನೀಡಲಾಗಿದೆ. ಇತರ ಅನುಬಂಧಗಳಾದ ಪುರಾಣಪ್ರತಿಮೆಗಳು, ವಿಶಿಷ್ಟ ಪದಸೂಚಿ ಮತ್ತು ಸಂಖ್ಯಾಪದ ಸೂಚಿಗಳಲ್ಲಿ ಶ್ರೀವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಅನೇಕ ವಿಚಾರಗಳು ಮೊದಲ ಬಾರಿಗೆ ಕನ್ನಡ ಸಾಹಿತ್ಯಕ್ಕೆ ಪರಿಚಿತವಾಗುತ್ತವೆ.

ನಮ್ಮ ತಂದೆಯವರು ಬರೆದಿದ್ದ ಕೆಲವು ಕೀರ್ತನೆಗಳನ್ನು ಸಂಪಾದಿಸಿ ಪ್ರಕಟಿಸುವ ಮೂಲಕ ೬೦ರ ದಶಕದಿಂದ ಈ ಕ್ಷೇತ್ರದಲ್ಲಿ ಕೆಲಸ ಪ್ರಾರಂಭಿಸಿದ ನನಗೆ ಒಂದೊಂದೇ ಕೃತಿಗಳು ದೊರಕತೊಡಗಿದವು; ಒಬ್ಬೊಬ್ಬರೇ ಕೀರ್ತನಕಾರರು ಕಾಣಿಸಿಕೊಳ್ಳತೊಡಗಿದರು. ಆದರೂ ಇಷ್ಟು ಅಗಾಧ ಪ್ರಮಾಣದಲ್ಲಿ ಈ ಸಂಗ್ರಹ

ಆಗುತ್ತದೆಂದು ನಾನು ಕಲ್ಪಿಸಿಕೊಂಡಿರಲ್ಲಿಲ್ಲ. ನನ್ನ ಈ ಸಂಗ್ರಹಕಾರ್ಯಕ್ಕೆ ಇಂಬು ದೊರೆತದ್ದು ಡಾ. ಶ್ರೀನಿವಾಸ ಹಾವನೂರರು ಈ ಕೀರ್ತನೆಗಳದ್ದೇ ಪ್ರತ್ಯೇಕ ಸಂಪುಟವೊಂದನ್ನು ಸಿದ್ಧಪಡಿಸಿಕೊಡಬೇಕೆಂದು ಒಪ್ಪಿಸಿದಾಗ. ಆಗಲೂ ಒಂದು ಸಂಪುಟಕ್ಕಾಗುವಷ್ಟು ಕೀರ್ತನೆಗಳು ದೊರೆಯುವ ಬಗ್ಗೆ ಅನುಮಾನವೇ ಇತ್ತು. ಡಾ. ಹಾವನೂರರೊಂದಿಗೆ ಡಾ. ಅನಂತ ಪದ್ಮನಾಭರಾವ್, ಪ್ರೊ. ಜಿ. ಅಶ್ವತ್ಥನಾರಾಯಣ, ಶ್ರೀ ಕೃಷ್ಣಗಿರಿಮುರಳೀಧರ, ಶ್ರೀ ರಘುಸುತ, ಶ್ರೀ ಕೆಳದಿ ಗುಂಡಾ ಜೋಯಿಸ್ ಹೀಗೆ ಹಲವರು ನೀಡಿದ ಮಾಹಿತಿ – ಸುಳಿವುಗಳನ್ನು ಹಿಡಿದು ಕ್ಷೇತ್ರಕಾರ್ಯಕ್ಕೆ ತೊಡಗಿದಾಗ ಸಾವಿರಕ್ಕೂ ಅಧಿಕ ಕೀರ್ತನೆಗಳು ಲಭ್ಯವಾದವು. ಇವರಿಗೆಲ್ಲ ನನ್ನ ಕೃತಜ್ಞತೆಯ ವಂದನೆಗಳು ಸಲ್ಲುತ್ತವೆ. (ಈ ಕ್ಷೇತ್ರ ಕಾರ್ಯದ್ದೇ ಒಂದು ವಿಶಿಷ್ಟವಾದ ಅನುಭವವಾಗುವಂತಹುದು.)

ಈ ಸಂಪುಟದ ಹಸ್ತಪ್ರತಿಯನ್ನು ಸಿದ್ಧಮಾಡುತ್ತಿದ್ದಂತೆ ಹೊಸ ಕೀರ್ತನೆಗಳು ದೊರೆಯುತ್ತಿದ್ದುದರಿಂದ ಅಂತಿಮ ಹಸ್ತಪ್ರತಿ ಸಿದ್ಧಪಡಿಸುವುದು ತಡವಾಗುತ್ತ ಹೋಯಿತು. ಆದರೂ ಕಾಲಮಿತಿಗೆ ಬದ್ಧವಾಗಬೇಕಿದ್ದುದರಿಂದ ಕೆಲವು ಕೀರ್ತನೆಗಳನ್ನು ಬಿಟ್ಟೇ ಈ ಹಸ್ತಪ್ರತಿ ಅಂತಿಮರೂಪವನ್ನು ಪಡೆಯಬೇಕಾಯಿತು. ನನ್ನಿಂದಾದ ಈ ಅಸಾಧ್ಯ ತಡವನ್ನು, ಸಬೂಬುಗಳನ್ನು ಡಾ. ಹಾವನೂರರು ಸಂಯಮದಿಂದಲೇ ಸ್ವೀಕರಿಸಿ ಬೇಸರವಾದರೂ ಸಹಿಸಿಕೊಂಡು ಸಹಕರಿಸಿದ್ದಾರೆ. ಅವರ ಕಾರಣದಿಂದಲೇ ಈ ಸಂಪುಟಗಳು ಹೊರಬರಲು ಸಾಧ್ಯವಾಗಿದೆ. ಅವರಿಗೆ ನಾನು ಅಭಾರಿಯಾಗಿದ್ದೇನೆ. ಈ ಯೋಜನೆಯ ಅವಕಾಶ ಲಭ್ಯವಾಗದಿದ್ದರೆ ಈ ಕೀರ್ತನೆಗಳು ಇನ್ನೂ ಅದೆಷ್ಟು ವರ್ಷ ಅಜ್ಞಾತವಾಗಿಯೇ ಇರಬೇಕಾಗುತ್ತಿತ್ತೋ. ಇದರಲ್ಲಿ ಏನಾದರೂ ಅರೆಕೊರೆಗಳಿದ್ದರೆ ಅದಕ್ಕೆ ನಾನೇ ಸಂಪೂರ್ಣವಾಗಿ ಹೊಣೆಗಾರನಾಗಿದ್ದೇನೆ. ನನ್ನ ತಿಳುವಳಿಕೆಯ ಮಿತಿಯಲ್ಲಿ ಈ ಕೀರ್ತನೆಗಳ ಪಠ್ಯಗಳನ್ನು ಸಂಪಾದಿಸಿದ್ದೇನೆ. ಹಾಗೆ ನೋಡಿದರೆ ಇಲ್ಲಿ ಸಂಪಾದನೆಯ ಕೆಲಸ ಕಡಿಮೆ, ಸಂಕಲನದ ಕೆಲಸ ಮಾತ್ರ. ಆದರೂ ಹಸ್ತಪ್ರತಿಗಳಲ್ಲಿ ಖಿಲವಾಗಿದ್ದ ಭಾಗಗಳನ್ನು ತುಂಬುವಾಗ, ಪ್ರಾಸಭಂಗಗಳನ್ನು ಸರಿಪಡಿಸುವಾಗ, ಪಾಠ ದೋಷಗಳನ್ನು ತಿದ್ದುವಾಗ ಅಲ್ಪಸ್ವಲ್ಪ ಗ್ರಂಥ ಸಂಪಾದನೆಯ ವಿಧಾನಗಳನ್ನು

ಅನುಸರಿಸಲಾಗಿದೆ. ಏನಾದರೂ ದೋಷಗಳು ಕಂಡುಬಂದಲ್ಲಿ ಪ್ರಾಜ್ಞರು ತಿಳಿಸುವ ಕೃಪೆಮಾಡಬೇಕಾಗಿ ಕೋರುತ್ತೇನೆ.

ನನ್ನ ಈ ಸಂಪಾದನೆಯಲ್ಲಿ ಹಲವು ರೀತಿಯಲ್ಲಿ ನೆರವಾಗಿರುವ ಹಿರಿಯರಾದ ಶ್ರೀ. ಎನ್.ಎಸ್. ರಾಮಸ್ವಾಮಿ ಅಯ್ಯರ್ ಅವರನ್ನು ಸ್ಮರಿಸುವುದು ನನ್ನ ಕರ್ತವ್ಯವಾಗಿದೆ. ಹಸ್ತಪ್ರತಿಯನ್ನು ಅಂದವಾಗಿ ಪ್ರತಿಮಾಡಿಕೊಟ್ಟಿರುವ ಅವರ ಉಪಕಾರ ಸ್ಮರಣೀಯ. ಅದೇ ರೀತಿ ಗೆಳೆಯ ಶ್ರೀ ಬಿಳಿಗಿರಿ ವಾಸನ್ ಕೂಡ ಕೆಲವು ಹಾಡುಗಳನ್ನು ಪ್ರತಿಮಾಡಿ ಸಹಕರಿಸಿದ್ದಾರೆ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಕಚೇರಿ, ಗ್ರಂಥ ಭಂಡಾರ ನನಗೆ ಮೂಲ ಆಕರವಾಗಿದೆ. ಪ್ರತಿಷ್ಠಾನದ ಬೆರಳಚ್ಚುಗಾರ್ತಿಯರಾದ ಶ್ರೀಮತಿ ವರಲಕ್ಷ್ಮೀ ಮತ್ತು ಶ್ರೀಮತಿ ರಾಜಲಕ್ಷ್ಮೀ ಅವರುಗಳು ಹಲವು ಪುಟಗಳನ್ನು ಬೆರಳಚ್ಚು ಮಾಡಿ ಸಹಕರಿಸಿದ್ದಾರೆ. ನನ್ನ ಪತ್ನಿ ಪುಷ್ಪಲತ, ಮಗಳು ಕಣ್ಮಣಿ, ಹಾಗೂ ನನ್ನ ಸ್ನೇಹಿತರುಗಳಾದ ಶ್ರೀ. ಜಿ. ಶಂಭಣ್ಣ, ಎಂ. ಕೃಷ್ಣಯ್ಯ, ಶಶಿಧರ್, ಕುಮಾರ್, ವರದರಾಜು, ಪಿ.ಈ. ಸೋಮಯ್ಯ: ಪ್ರತಿಷ್ಠಾನದ ಕಚೇರಿ ಸಹಾಯಕರಾಗಿರುವ ಶ್ರೀ ಆರ್. ವ್ಯಾಸರಾಜು ಅವರುಗಳು ಅನೇಕ ರೀತಿಯಲ್ಲಿ ನನ್ನ ಕಾರ್ಯದಲ್ಲಿ ನೆರವಾಗಿದ್ದಾರೆ. ಈ ಎಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

೨. ಕನ್ನಡದಲ್ಲಿ ಶ್ರೀವೈಷ್ಣವ ಕೀರ್ತನಸಾಹಿತ್ಯ

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅತ್ಯಂತ ಪ್ರಮುಖ ಪ್ರಕಾರವಾಗಿರುವ ಹರಿದಾಸ ಅಥವಾ ಕೀರ್ತನ ಸಾಹಿತ್ಯ ಪರಂಪರೆ ನಾಲ್ಕು ಘಟ್ಟಗಳಲ್ಲಿ ಬೆಳೆದಿದೆಯೆಂಬುದು ಸರ್ವವಿದಿತ. ನರಹರಿತೀರ್ಥರು, ಶ್ರೀಪಾದರಾಜರಿಂದ ಇದರ ಆರಂಭಕಾಲವನ್ನೂ ವ್ಯಾಸರಾಯರು ಪುರಂದರ ದಾಸರು, ಕನಕದಾಸರು, ವಾದಿರಾಜರು, ವೈಕುಂಠದಾಸರ ಕಾಲವನ್ನು ಎರಡನೆಯ ಘಟ್ಟ ಅಥವಾ ಉನ್ನತಿಯ ಕಾಲವೆಂದೂ ವಿಜಯದಾಸರು, ಗೋಪಾಲದಾಸರು, ರಾಘವೇಂದ್ರ

ತೀರ್ಥರು, ಜಗನ್ನಾಥದಾಸರು ಮುಂತಾದವರ ಕಾಲವನ್ನೂ ಮೂರನೇ ಘಟ್ಟ ಅಥವಾ ವಿಸ್ತಾರಕಾಲವೆಂದೂ ವೇಣುಗೋಪಾಲದಾಸರು, ಪ್ರಾಣೇಶವಿಠಲರು ಮುಂತಾದವರ ಕಾಲವನ್ನು ನಾಲ್ಕನೆಯ ಅಥವಾ ಅವನತಿಯ ಕಾಲವೆಂದೂ ಸಾಮಾನ್ಯವಾಗಿ ಗುರುತಿಸಲಾಗುತ್ತಿದೆ.

ವಿಜಯನಗರ ಸಾಮ್ರಾಜ್ಯದ ಸ್ವರ್ಣಯುಗದ ಜೊತೆ ಜೊತೆಗೇ ಹರಿದಾಸರ ವಾಙ್ಮಯವೂ ಜನಜನಿತವಾಗಿ ಸಾಮ್ರಾಜ್ಯದ ಪತನಾನಂತರ ಅದರ ಜನಪ್ರಿಯತೆಯೂ ಕುಗ್ಗಿತು ಎಂಬುದು ಇತಿಹಾಸಕಾರರ ಅಭಿಪ್ರಾಯ. 'ವಿಜಯನಗರ ಸಾಮ್ರಾಜ್ಯದ ಸ್ವರ್ಣಯುಗದಲ್ಲಿ ಪುರಂದರ ಕನಕದಾಸರು ನಾಡಿನಾದ್ಯಂತ.... ವಾದಿರಾಜರು ದಕ್ಷಿಣ ಕನ್ನಡದಾದ್ಯಂತ, ವೈಕುಂಠದಾಸರು ಬೇಲೂರಿನ ಸುತ್ತ ಮುತ್ತ ಬೆಳೆಸುವುದರ ಮೂಲಕ ೧೬೦೦ರವರೆಗೆ ಹರಿದಾಸ ಸಾಹಿತ್ಯ ಪ್ರಸರಿಸಿತ್ತು...... ಅನಂತರ ಕಾರಣಾಂತರದಿಂದ ಹರಿದಾಸ ಪರಂಪರೆ ಅಷ್ಟಾಗಿ ಸ್ಪಷ್ಟವಾಗಿ ಮುಂದುವರಿಯಲಿಲ್ಲ. ಪುರಂದರದಾಸರ ಶಿಷ್ಯರೂ, ವೈಕುಂಠದಾಸರ ಶಿಷ್ಯರೂ ಏನು ಕಾರಣದಿಂದಲೋ ಹೊರಗೆ ಬರಲಿಲ್ಲ. ಹೆಸರು ಪಡೆಯಲಿಲ್ಲ, ಪದಗಳನ್ನು ರಚಿಸಿದಂತೆ ಕಾಣಲಿಲ್ಲ, (ಎಸ್.ಕೆ.ರಾಮಚಂದ್ರರಾವ್, ದಾಸಸಾಹಿತ್ಯ, ಐ.ಬಿ.ಹೆಚ್.ಪು.೮೯) ಸಾಹಿತ್ಯ ಚರಿತ್ರಕಾರರಿಂದ ಹಿಡಿದು ಹೆಚ್ಚು ಕಡಿಮೆ ಎಲ್ಲ ವಿದ್ವಾಂಸರೂ ಈ ಅಭಿಪ್ರಾಯವನ್ನು ಹೊಂದಿದ್ದಾರೆ. ಈ ಕಾಲದಲ್ಲಿ ನಡೆದ ರಾಜಕೀಯ ಸ್ಥಿತ್ಯಂತರಗಳು, ಆ ಮೂಲಕ ಸಮಾಜಜೀವನ ಮತ್ತು ಧರ್ಮದ ಮೇಲಾದ ಆಘಾತಗಳು ಇದಕ್ಕೆ ಕಾರಣವೆಂದೂ ಊಹಿಸುತ್ತಾರೆ.

ಮಾಧ್ವಮತ ತತ್ವಗಳ ಮುಖ್ಯವಾಹಿನಿಯಾಗಿ ಕೀರ್ತನ ಸಾಹಿತ್ಯವನ್ನು ಗುರುತಿಸಲಾಗುತ್ತದೆ. ಈ ಬಗೆಗಿನ ಈವರೆಗಿನ ಅಧ್ಯಯನವೂ ಇದರ ಹಿನ್ನೆಲೆಯಲ್ಲಿಯೇ ನಡೆದುಬಂದಿದೆ. ೨೦ರ ದಶಕದಲ್ಲಿ ಸ್ಮಾರ್ತ ಸಂಪ್ರದಾಯದ ಕೀರ್ತನಕಾರರೂ ಇರುವುದನ್ನು ಪ್ರೊ: ಎಂ.ವಿ. ಸೀತಾರಾಮಯ್ಯ ಮುಂತಾದವರು ಬೆಳಕಿಗೆ ತಂದಿದ್ದಾರೆ. ಚಿದಾನಂದವಧೂತ, ತಿಮ್ಮಪ್ಪದಾಸರು ಮತ್ತು ಅವರ ಶಿಷ್ಯರು ಪರಮದೇವ, ವೇದಾಂತ ಶಿವರಾಮ ಶಾಸ್ತ್ರಿಗಳು ಮುಂತಾದವರನ್ನು

ಇಲ್ಲಿ ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಕನ್ನಡ ಹರಿದಾಸ ಸಾಹಿತ್ಯದಲ್ಲಿ ದ್ವೈತಕೀರ್ತನ ಪರಂಪರೆಯ ಜೊತೆಗೆ ಅದ್ವೈತಕೀರ್ತನ ಪರಂಪರೆಯನ್ನು ವಿದ್ವಾಂಸರು ಸ್ಪಷ್ಟವಾಗಿ ಗುರುತಿಸುತ್ತಿದ್ದಾರೆ.

ವೈಧಿಕ ಧರ್ಮದ ಇನ್ನೊಂದು ಪ್ರಮುಖ ಶಾಖೆಯಾದ ವಿಶಿಷ್ಟಾದ್ವೈತ ಸಂಪ್ರದಾಯದಲ್ಲಿಯೂ ಇರುವ ಕೀರ್ತನ ಸಾಹಿತ್ಯವನ್ನು ಈಚೆಗೆ ೯೦ರ ದಶಕದಲ್ಲಿ ಶ್ರೀ. ನಾ. ಗೀತಾಚಾರ್ಯ ಅವರು ಶೋಧಿಸಿ ದಾಖಲಿಸಿದ್ದಾರೆ. ೧೯೯೩ ಮತ್ತು ೧೯೯೪ ರಲ್ಲಿ ಸಂಪಾದಿಸಿ ಪ್ರಕಟಿಸಿರುವ ನಾರಾಯಣಶರ್ಮರ ಕೀರ್ತನೆಗಳು, ಮತ್ತು ರಂಗದಾಸರ ಕೀರ್ತನೆಗಳು ಎಂಬ ಎರಡು ಪುಸ್ತಕಗಳು; ೧೯೯೫ ರಲ್ಲಿ (ಡಿಸೆಂಬರ್ ನಂ ೮–೨) 'ಕರ್ನಾಟಕ ಲೋಚನ" ದಲ್ಲಿ ಬಂದಿರುವ 'ಮೂವರು ಶ್ರೀವೈಷ್ಣವ ಹರಿದಾಸರು' ಎಂಬ ಒಂದು ಲೇಖನ; ೧೯೯೮ರಲ್ಲಿ ಪ್ರಕಟವಾದ ತುಮಕೂರು ಜಿಲ್ಲೆಯ ಮೂವರು ಕೀರ್ತನಕಾರರು ಎಂಬ ಪುಸ್ತಕ; ಶ್ರೀವೈಷ್ಣವ ಹರಿದಾಸಸಾಹಿತ್ಯ–ಹೊಸ ಶೋಧ (ಇತಿಹಾಸ ದರ್ಶನ ಪು.೧೦) ಎಂಬ ಲೇಖನ ಹಾಗೂ ೧೯೯೯ರಲ್ಲಿ ಪ್ರಕಟವಾದ (ಶ್ರೀ ವೈಷ್ಣವ ಹರಿದಾಸ ಸಾಹಿತ್ಯ–ಒಂದು ಪರಿಚಯ (ಭೂಷಣ ಪು. ೬೩೪) ಲೇಖನ ಮತ್ತು ನಾರಾಯಣಶರ್ಮಾ ಸಂಸ್ಕೃತಿ ಕೇಂದ್ರ ಪ್ರಕಟಿಸಿರುವ ಮೂವರು ಶ್ರೀ ವೈಷ್ಣವ ಹರಿದಾಸರ ಕೀರ್ತನೆಗಳು ಎಂಬ ಪುಸ್ತಕವನ್ನು ಉಲ್ಲೇಖಿಸಬಹುದು. ಈ ಮೂಲಕ ಕೀರ್ತನ ಸಾಹಿತ್ಯದ ಅಧ್ಯಯನದ ಇತಿಹಾಸದಲ್ಲಿ ಮಧ್ವ ಸಂಪ್ರದಾಯದ ಜೊತೆಗೆ ಅದ್ವೈತ ಸಂಪ್ರದಾಯದ ಕಿರ್ತನಕಾರರು ಸೇರ್ಪಡೆಯಾದ ನಂತರ ವಿಶಿಷ್ಟಾದ್ವೈತ–ಸಂಪ್ರದಾಯದ ಕೀರ್ತನಕಾರರೂ ಸೇರ್ಪಡೆಯಾಗಿರುವುದನ್ನು ಕಾಣಬಹುದಾಗಿದೆ.

ಕರ್ನಾಟಕದಲ್ಲಿ ವಿಶಿಷ್ಟಾದ್ವೈತದ ಇತಿಹಾಸ ದ್ವೈತಕ್ಕಿಂತ ಹಿಂದಿನಿಂದ ಇದ್ದರೂ ೧೨ನೇ ಶತಮಾನದಲ್ಲೇ ಹೊಯ್ಸಳರ ರಾಜಧರ್ಮವಾಗಿ ಬೆಳೆದುಬಂದಿದ್ದರೂ ಇದು ಜನಸಾಮಾನ್ಯರ ನಡುವೆ ಬೆಳೆದುಬರಲಿಲ್ಲ. ಇದಕ್ಕೆ ಕಾರಣವಾಗಿ ಇದರ ಧಾರ್ಮಿಕ ಆಚರಣೆಗಳು ತಮಿಳು ಭಾಷೆಯಲ್ಲಿದ್ದುದು ಮತ್ತು ಮತೀಯ ಗ್ರಂಥಗಳು ಸಂಸ್ಕೃತ ಹಾಗೂ ದ್ರಾವಿಡ (ತಮಿಳು) ಪ್ರಬಂಧಗಳಾಗಿದ್ದುದು ಎಂಬ ಸಾಮಾನ್ಯ

ಅಭಿಪ್ರಾಯವೊಂದಿದೆ. 'ರಾಮಾನುಜಾಚಾರ್ಯರು ಈ ಧರ್ಮದ ತಿರುಳನ್ನು ಎಲ್ಲರಿಗೂ ತಿಳಿಯುವಂತೆ ಸಾರ್ವಜನಿಕವಾಗಿ ಪ್ರಕಟಿಸುವುದರ ಮೂಲಕ ಸಾಮಾನ್ಯ ಜನರನ್ನು ಈ ಧರ್ಮದತ್ತ ಸೆಳೆದು ಭಕ್ತರನ್ನಾಗಿ, ಅನುಯಾಯಿಗಳನ್ನಾಗಿ ಮಾಡಿದರೇ ವಿನಾ ಮತೀಯ ಆಚರಣೆಯ ವಿಧಿವಿಧಾನಗಳಲ್ಲಿ ನೆಲೆಗೊಳಿಸಲಿಲ್ಲ. ಆದ್ದರಿಂದ ಅನ್ಯಮತೀಯರು ಶ್ರೀವೈಷ್ಣವ ಮತಾನುಯಾಯಿಗಳಾದರೇ ವಿನಾ ಶ್ರೀವೈಷ್ಣವ ಬ್ರಾಹ್ಮಣರಾಗಲಿಲ್ಲ ಎಂಬುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಆದ್ದರಿಂದಲೇ ವಿಶಿಷ್ಟಾದ್ವೈತವನ್ನು ಪ್ರತಿಪಾದಿಸುವ ಗ್ರಂಥಗಳು ಕನ್ನಡದಲ್ಲಿ ಪ್ರಸಾರಗೊಳ್ಳಲೂ ಇಲ್ಲ ಮತ್ತು ಸೃಷ್ಟಿಯಾಗಲೂ ಇಲ್ಲ. 'ಮೂವರು ವೈಷ್ಣವ ಹರಿದಾಸರು ೧೯೯೯ ಎಂಬ ಮಾತು ಹೆಚ್ಚು ಸಮರ್ಥವಾಗಿರುವಂತೆ ತೋರುತ್ತದೆ. ಆದರೂ ಶ್ರೀವೈಷ್ಣವರೇ ಆದ ಬೇಲೂರು ವೈಕುಂಠದಾಸರ ಮತ್ತು ಪೂರ್ವದಲ್ಲಿ ಶ್ರೀವೈಷ್ಣವ ಅನುಯಾಯಿಗಳಾಗಿದ್ದ ಕನಕದಾಸರ ಕೀರ್ತನೆಗಳಲ್ಲಿ (ವಿಶೇಷವಾಗಿ ಮೋಹನ ತರಂಗಿಣಿ ಕೃತಿಯಲ್ಲಿ) ವಿಶಿಷ್ಟಾದ್ವೈತ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದಾದರೂ ಈವರೆಗೆ ಇವು ಮಧ್ವಪರಂಪರೆಯ ಮುಖ್ಯವಾಹಿನಿಯೊಳಗೇ ಸೇರಿ ಹೋಗಿವೆ. (ಇನ್ನು ಮುಂದೆ ಇವರಿಬ್ಬರನ್ನು ಶ್ರೀವೈಷ್ಣವ ಪರಂಪರೆಯಲ್ಲಿ ಗುರುತಿಸಬೇಕಾಗುತ್ತದೆ.) ಹಾಗೆಯೇ ಚರಿತ್ರಕಾರರು ಇದಮಿತ್ಥಂ ಎಂದು ಹೇಳಲಾಗದ, ಕುಮಾರವ್ಯಾಸ, ಲಕ್ಷ್ಮೀಶರ ಕೃತಿಗಳನ್ನು ಶ್ರೀವೈಷ್ಣವತತ್ವದ ಹಿನ್ನೆಲೆಯಲ್ಲಿ ಪುನರಾಲೋಚಿಸಬಹುದಾಗಿದೆ. ಲಕ್ಷ್ಮೀಶನಂತು ಸ್ಪಷ್ಟವಾಗಿ ಶ್ರೀವೈಷ್ಣವ ಮತೀಯನೇ ಆಗಿದ್ದು ವಿದ್ವಾಂಸರು ಅವನನ್ನು ಲಕ್ಷ್ಮೀಕಾಂತ ಹೆಬ್ಬಾರ್ ಎಂದು ಹೆಸರಿಸಿದ್ದಾರೆ. ಅವನ ಹೆಸರಿನಲ್ಲಿ ಹತ್ತಾರು ಕೀರ್ತನೆಗಳೂ ಇವೆ. ಈ ಹಿನ್ನೆಯಲ್ಲಿ ಇಲ್ಲಿ ವೈಕುಂಠದಾಸರು ಮತ್ತು ಲಕ್ಷ್ಮೀಶರನ್ನು ಶ್ರೀವೈಷ್ಣವ ಕೀರ್ತನಕಾರರನ್ನಾಗಿ ಸ್ವೀಕರಿಸಿದೆ. ಹೀಗೆ ಹರಿದಾಸ ಸಾಹಿತ್ಯದ ಉನ್ನತಿಯ ಕಾಲದಲ್ಲೆ ಶ್ರೀವೈಷ್ಣವ ಕೀರ್ತನಸಾಹಿತ್ಯ ಕಾಣಿಸಿಕೊಂಡಿರುವುದನ್ನು ಕಾಣಬಹುದು.

ಚಿಕ್ಕದೇವರಾಯ ಒಡೆಯರ ಕಾಲದಲ್ಲಿ ಇದು ರಾಜಧರ್ಮವಾಗಿ ಪ್ರವರ್ಧಮಾನಕ್ಕೆ ಬಂದ ನಂತರವೇ ಮತ್ತೆ ನೇರವಾಗಿ ಕನ್ನಡ ಸಾಹಿತ್ಯದಲ್ಲಿ

ವಿಶಿಷ್ಟಾದ್ವೈತ ಕಾಣಿಸಿಕೊಂಡಿದ್ದು ಈ ಕಾಲದ ಚಿಕ್ಕದೇವ ರಾಜನ ಚಿಕ್ಕದೇವ-ರಾಜಬಿನ್ನಪ, ತಿರುಮಲಾರ್ಯನ ಗೀತಗೋಪಾಲ, ಚಿಕ್ಕುಪಾಧ್ಯಾಯನ ದಿವ್ಯಸೂರಿಚರಿತ, ಸಂಚಿಹೊನ್ನಮ್ಮನ ಹದಿಬದೆಯ ಧರ್ಮ ಮುಂತಾದವು ವಿಶಿಷ್ಟಾದ್ವೈತ ತತ್ವವನ್ನು ಪ್ರತಿಪಾದಿಸುವ ಕನ್ನಡ ಕೃತಿಗಳಾಗಿವೆ. ಳನೇ ಘಟ್ಟದ ಕೀರ್ತನ ಸಾಹಿತ್ಯ ಪರಂಪರೆಯ ಸೃಷ್ಟಿಗೆ ಗೀತಗೋಪಾಲವೇ (ಸು.೧೭೦೦) ಮೂಲವಾಗಿದೆ ಎಂಬುದು ಎಲ್ಲ ವಿದ್ವಾಂಸರ ಮತ. 'ಹರಿದಾಸ ಸಾಹಿತ್ಯದ ಕೀರ್ತನ ಪ್ರಕಾರವನ್ನು ಶ್ರೀವೈಷ್ಣವ ಕವಿಗಳು ಬಳಸಿಕೊಂಡರು.' (ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪು. ೩೦) 'ಹರಿಸಂಕೀರ್ತನೆಗಳ ಭಂಡಾರಕ್ಕೆ ಗೀತ ಗೋಪಾಲವು ಉನ್ನತವಾದ ಅಲ್ಲದಿದ್ದರೂ ತುಂಬ ಮೆಚ್ಚುವಂಥ ಗೀತ ನಿಧಿಯನ್ನು ನೀಡಿರುತ್ತದೆ.' (ಅದೇ ಪು. ೩೦.೩೧) 'ಶ್ರೀವೈಷ್ಣವ ಸಂಪ್ರದಾಯದ ಗೀತೆಗಳಲ್ಲಿಯಂತು ಕನ್ನಡದಲ್ಲಿ ಇದೇ ಮೊದಲನೆಯದು' (ಎಂ.ವಿ.ಸೀ. ಹರಿದಾಸರು ಮತ್ತು ಅನುಭಾವ ಕವಿಗಳು. ಪು.೫) ಎಂಬ ಹೆಗ್ಗಳಿಕೆಗೆ ಈ ಕೃತಿ ಪಾತ್ರವಾಗಿದೆ. ಆದರೆ ಇದು ಶುದ್ಧ ಕೀರ್ತನಸಾಹಿತ್ಯವಲ್ಲ ಅಂದರೆ ಪುರಂದರ - ಕನಕದಾಸರುಗಳಂತಹ ಭಿನ್ನವಸ್ತು - ವಿಷಯವಿರುವ ಬಿಡಿಬಿಡಿ ಕೀರ್ತನೆಗಳಲ್ಲ. ಒಂದು ನಿರ್ಧಿಷ್ಟಕಾವ್ಯದ ಸ್ವರೂಪದ್ದಾಗಿದ್ದು ಜಯದೇವನ ಗೀತಗೋವಿಂದದ ಅನುವಾದವಾಗಿದೆ. ಇದರೊಂದಿಗೆ ಸಿಂಗಿರಾರ್ಯನ ಗೀತರಂಗೇಶ್ವರ, ಚಿಕ್ಕುಪಾಧ್ಯಾಯನ ಚಿಕ್ಕದೇವರಾಯ ಶೃಂಗಾರ ಪದಗಳು, ರಂಗನಾಥನ ಲಾಲೀ ಪದಗಳು, ಅನಂತರದ ಕಳಲೆ ಕಾಂತರಾಜನ ಮಗಳಾದ ದೊಡ್ಡಒಡೆಯರ ಪಟ್ಟಮಹಿಷಿ (೧೭೨೫) ಚೆಲುವಾಂಬೆಯು ವೆಂಕಟಾಚಲ ಮತ್ತು ಅಲಮೇಲುಮಂಗಮ್ಮ ಲಾಲೀಪದಗಳು, ವರನಂದಿ ಕಲ್ಯಾಣ ಮುಂತಾದವು ಶ್ರೀವೈಷ್ಣವ ಕೀರ್ತನಸಾಹಿತ್ಯದಲ್ಲಿ ಬರಬಲ್ಲವೆನಿಸಿದರೂ ಇವೂ ಸಹ ನಿರ್ದಿಷ್ಟ ವಸ್ತು-ವಿಷಯಕ್ಕೆ ಸಂಬಂಧಿಸಿದ ಕೀರ್ತನಪ್ರಕಾರದ ಕಾವ್ಯಕೃತಿಗಳಾಗಿ ನಿಲ್ಲುತ್ತವೆಂಬ ಕಾರಣದಿಂದ ಈ ಯೋಜನೆಯಲ್ಲಿ ಅಳವಡಿಸಿಕೊಂಡಿಲ್ಲ. ತತ್ವ ಪ್ರತಿಪಾದನೆಯನ್ನು ಒಳಗೊಂಡಿರುವ ಶುದ್ಧ-ಸಾಹಿತ್ಯಕೃತಿಯಾದ ಗೀತಗೋಪಾಲದ ಪ್ರಭಾವದಿಂದಲೂ ಈ ಕಾಲದಲ್ಲಿ ಸೃಷ್ಟಿಯಾಗಬಹುದಾಗಿದ್ದ ಕೀರ್ತನ ಸಾಹಿತ್ಯ ಹತ್ತೊಂಬತ್ತನೆಯ ಶತಮಾನದವರೆಗೆ ಕಾಣಸಿಗುವುದಿಲ್ಲ ಎಂದೇ ಹೇಳಬೇಕು.

೧೯-೨೦ನೇ ಶತಮಾನ ಶ್ರೀವೈಷ್ಣವ ಹರಿದಾಸಸಾಹಿತ್ಯದ ಸಮೃದ್ಧಿಯ ಕಾಲವಾಗಿದೆ. ಕ್ರಿ.ಶ. ೧೮೪೭ರ ಸುಮಾರಿನಲ್ಲಿದ್ದ ತುಳಸೀರಾಮದಾಸರು ಹಾಗೂ ೧೮೩೦ರ ಅವಧಿಯಲ್ಲಿ ಕಾಣಿಸಿಕೊಂಡ ರಂಗದಾಸರು, ವೆಂಕಟವರದಾರ್ಯರು ಮತ್ತು ಯದುಗಿರಿಯಮ್ಮ ಅವರುಗಳು ೧೯ನೇ ಶತಮಾನದ ವಿಶಿಷ್ಟಾದ್ವೈತ ಹರಿದಾಸಪರಂಪರೆಯ ಆರಂಭದ ಕೀರ್ತನಕಾರರಾಗಿ ಕಂಡುಬರುತ್ತಾರೆ. ಯದುಗಿರಿಯಮ್ಮ ಶ್ರೀವೈಷ್ಣವ ಮಹಿಳಾಕೀರ್ತನಕಾರರಲ್ಲಿ ಪ್ರಥಮರೆನಿಸಿದ್ದಾರೆ. ಇವರನಂತರ ಇನ್ನೂ ಹತ್ತಾರು ಜನರು ಗಮನಕ್ಕೆ ಬಂದಿದ್ದು, ಈವರೆಗಿನ ಪರಿವೀಕ್ಷಣೆಯ ಹಿನ್ನೆಲೆಯಲ್ಲಿ ಶ್ರೀವೈಷ್ಣವ ಹರಿದಾಸರನ್ನು ಈ ರೀತಿ ಪಟ್ಟಿ ಮಾಡಬಹುದು.

೧. ಬೇಲೂರು ವೈಕುಂಠದಾಸರು ಬೇಲೂರು (ಕ್ರಿ.ಶ.ಸು ೧೪೫೦)
೨. ಕವಿ ಲಕ್ಷ್ಮೀಶ (ಲಕ್ಷ್ಮೀಕಾಂತ ಹೆಬ್ಬಾರ) ದೇವನೂರು (ಸು.೧೬೦೦)
೩. ತುಳಸೀರಾಮದಾಸರು ಕ್ರಿ.ಶ. ೧೮೪೭ (ಬೆಂಗಳೂರು)
೪. ಯದುಗಿರಿಯಮ್ಮ, ಬೆಂಗಳೂರು (ಕ್ರಿ.ಶ.ಸು. ೧೮೨೦)
೫. ರಂಗದಾಸರು, ಕ್ರಿ.ಶ. ೧೮೩೦ (ತುಮಕೂರು ಜಿಲ್ಲೆ)
೬. ವೆಂಕಟವರದಾರ್ಯ ಕ್ರಿ.ಶ. ಸು. ೧೮೩೦ (ಸರಗೂರು, ಚಾಮರಾಜನಗರ)
೭. ಮಳಿಗೆ ರಂಗಸ್ವಾಮಿದಾಸರು (೧೮೬೮ - ಮುಳಬಾಗಿಲು)
೮. ಚನ್ನಪಟ್ಟಣದ ಅಹೋಬಲದಾಸರು, ಕ್ರಿ.ಶ. ೧೮೭೦ (ಚನ್ನಪಟ್ಟಣ)
೯. ಆಸೂರಿ ರಾಮಸ್ವಾಮಿ ಅಯ್ಯಂಗಾರ್ ಕ್ರಿ.ಶ. ೧೮೮೮ (ಬೆಂಗಳೂರು)
೧೦. ನಂಜನಗೂಡು ತಿರುಮಲಾಂಬ (ಕ್ರಿ.ಶ. ಸು ೧೮೯೦)
೧೧. ಶಾಮಶರ್ಮದಾಸರು ಕ್ರಿ.ಶ. ೧೮೯೧ (ಬೆಂಗಳೂರು ಜಿಲ್ಲೆ)
೧೨. ಎಸ್. ಸಂಪತ್ತೈಯಂಗಾರ್. ಕ್ರಿ.ಶ. ೧೯೦೦ (ಬೆಂಗಳೂರು)
೧೩. ನಾರಾಯಣಶರ್ಮರು ಕ್ರಿ.ಶ. ಸು. ೧೯೧೧ (ಬೆಂಗಳೂರು ಜಿಲ್ಲೆ)

೧೪. ಕೋಸಲಪುರಿವಾಸ ಅಂಕಿತದ ಒಬ್ಬ ಕೀರ್ತನಕಾರರು (ಹೆಸರು - ಕಾಲ - ಸ್ಥಳ ಗೊತ್ತಿಲ್ಲ)

೧೫. ಬಡ್ಡಣ್ಣಯ್ಯಾಚಾರ್ (ಅಣ್ಣಾವಧೂತರು) (ಹೆಸರು - ಸ್ಥಳ -ಕಾಲ ಗೊತ್ತಿಲ್ಲ)

ಸರಿಯಾಗಿ ಸರ್ವೇಕ್ಷಣೆಮಾಡಿದಲ್ಲಿ ಈ ಸಂಪ್ರದಾಯದಲ್ಲಿ ಇನ್ನೂ ಹೆಚ್ಚಿನ ಕೀರ್ತನಕಾರರು ಲಭ್ಯವಾಗುವ ಸಾಧ್ಯತೆಯಿದೆ. ಈವರೆಗೆ ಲಭ್ಯವಾಗಿರುವುದನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ. ಲಭ್ಯವಾಗಬೇಕಾದ ಕೀರ್ತನಕಾರರ ಮತ್ತು ಕೀರ್ತನೆಗಳ ಸಂಖ್ಯೆ ಅಪಾರವಾಗಿಯೇ ಇದೆ. ಈವರೆಗಿನ ದಾಖಲೆಯಲ್ಲೇ ಸಾವಿರವನ್ನು ದಾಟುವ ಇವರ ಕೀರ್ತನೆಗಳ ಸಂಖ್ಯೆ ಸಮಗ್ರ ಸರ್ವೇಕ್ಷಣೆಯ ನಂತರ ಎರಡು ಸಾವಿರಕ್ಕೂ ಮಿಗಿಲಾಗುತ್ತದೆ.

ಶ್ರೀವೈಷ್ಣವ ಕೀರ್ತನಕಾರರು ಎಂದರೆ ಶ್ರೀವೈಷ್ಣವ ಸಂಪ್ರದಾಯದಲ್ಲಿ ಅಂದರೆ ವಿಶಿಷ್ಟಾದ್ವೈತ ತತ್ವದ ತಳಹದಿಯ ಮೇಲೆ ಕೃತಿಗಳನ್ನು ರಚಿಸುವವರು ಎಂದು ಗ್ರಹಿಸಲಾಗಿದೆ. ಸಾಮಾನ್ಯವಾಗಿ ಶ್ರೀವೈಷ್ಣವ ಮತೀಯರಷ್ಟೇ ಈ ತತ್ವ ಪ್ರತಿಪಾದನೆ ಮಾಡಿರುವರಾದರೂ ತುಳಸಿರಾಮದಾಸರ ಪರಂಪರೆಯಲ್ಲಿ ಅನ್ಯಮತೀಯರೂ ಈ ತತ್ವಪ್ರತಿಪಾದನೆಯಲ್ಲಿ ಕಾಣಸಿಗುತ್ತಾರೆ. (ಮಳಿಗೆ ರಂಗಸ್ವಾಮಿದಾಸರು, ಚನ್ನಪಟ್ಟಣದ ಅಹೋಬಲದಾಸರು ಮುಂತಾದವರು) ಆದ್ದರಿಂದ ಕೀರ್ತನೆಗಳಲ್ಲಿ ಕಂಡುಬರುವ ಶ್ರೀವೈಷ್ಣವ ತತ್ವದ ಲಕ್ಷಣಗಳ ದೃಷ್ಟಿಯಿಂದ ಇಲ್ಲಿ ಕೀರ್ತನಕಾರರನ್ನು ಪಟ್ಟಿ ಮಾಡಲಾಗಿದೆ.

೩. ಶ್ರೀವೈಷ್ಣವ ತತ್ತ್ವ

ಕೀರ್ತನೆಗಳಲ್ಲಿ ಕಂಡುಬರುವ ಈ ಧರ್ಮ-ತತ್ವದ ಪ್ರತಿಪಾದನೆಯನ್ನು ಅರ್ಥಮಾಡಿಕೊಳ್ಳುವ ಉದ್ದೇಶಕ್ಕಾಗಿ ಇಲ್ಲಿ ಶ್ರೀವೈಷ್ಣವ ಧರ್ಮದ ಮುಖ್ಯ ತತ್ವಗಳನ್ನು ಸ್ಥೂಲವಾಗಿ ವಿವರಿಸಲಾಗಿದೆ.

ಶ್ರೀವೈಷ್ಣವ ಧರ್ಮ: ಶ್ರೀವೈಷ್ಣವ ಧರ್ಮವು 'ಶ್ರೀವೈಷ್ಣವ ಮತ' 'ಪ್ರಪತ್ತಿ ಧರ್ಮ' 'ಶ್ರೀವೈಷ್ಣವ ಸಿದ್ಧಾಂತ' 'ರಾಮಾನುಜ ದರ್ಶನ' 'ಭಗವದ್ರಾಮಾನುಜೀಯ' 'ಉಭಯವೇದಾಂತ' 'ಸವಿಶೇಷಾದ್ವೈತ' 'ವಿಶಿಷ್ಟಾದ್ವೈತ' 'ವೀರವೈಷ್ಣವ' ಮುಂತಾದ ಹೆಸರುಗಳಿಂದ ಪ್ರಚಲಿತವಾಗಿರುವ ವಿಷ್ಣುಪಾರಮ್ಯದಿಂದ ಕೂಡಿದ ಧರ್ಮ. ದಕ್ಷಿಣಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಬಹುಸಂಖ್ಯಾತರ ಧರ್ಮ. ವೈದಿಕ ಜನಾಂಗದಲ್ಲಿರುವ ಒಂದು ಮುಖ್ಯ ಪಂಗಡ. ತ್ರಿಮತಸ್ಥ ಬ್ರಾಹಣರಲ್ಲಿ ಒಂದು ಗುಂಪು.

ವೇದಕಾಲದಿಂದಲೂ ರೂಢಿಯಲ್ಲಿದ್ದ ವಾಸುದೇವ ಅಥವ ಕೃಷ್ಣಪೂಜೆಯ ಭಕ್ತಿಪಂಥ ಅಥವ ಭಾಗವತ ಸಂಪ್ರದಾಯವು ಹಲವು ಮಾರ್ಪಾಟುಗಳನ್ನು ಹೊಂದುತ್ತ ಮಹಾಭಾರತದಲ್ಲಿ ಒಂದು ಖಚಿತವಾದ ರೂಪವನ್ನು ಪಡೆಯಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ರಾಮಾಯಣ, ಮಹಾಭಾರತ, ಭಗವದ್ಗೀತೆಗಳ ಮೂಲಕ ವಿಷ್ಣುವಿನ ರಾಮ-ಕೃಷ್ಣ-ಅವತಾರದ ಕಥೆಗಳು ಜನಪ್ರಿಯವಾಗಿ ವೇದ-ಆಗಮ-ಉಪನಿಷತ್ತುಗಳ ಸಾರವೆಲ್ಲ ಇವುಗಳಲ್ಲಿ ಮೈಗೂಡಿಕೊಂಡು ಹಲವು ರೂಪಗಳಲ್ಲಿ ಆಚರಣೆಯಲ್ಲಿದ್ದ ವೈದಿಕ ಸಂಸ್ಕೃತಿಯೊಂದು ಪ್ರಬಲವಾಗಿ ಈ ನೆಲದಲ್ಲಿ ಬೇರೂರಿತು. ಪದೇ ಪದೇ ಅನ್ಯಸಂಸ್ಕೃತಿಗಳು ಇದರ ಮೇಲೆ ದಾಳಿ ಮಾಡಿ – ಪ್ರಭಾವಬೀರಿ ಭಿನ್ನಾಪ್ರಾಯಗಳಿಗೆ ಭಿನ್ನಪಂಥಗಳಿಗೆ ಕಾರಣವಾಗಿರುವುದನ್ನು ಇತಿಹಾಸ ಹೇಳುತ್ತದೆ. ಅಂತಹ ಸಂದರ್ಭದಲ್ಲೆಲ್ಲ ಒಬ್ಬೊಬ್ಬ ಸಮಾಜಸುಧಾರಕರು, ಧರ್ಮಗುರುಗಳು ಆಚಾರ್ಯ ಪುರುಷರು ಹುಟ್ಟಿಕೊಂಡು ವೈದಿಕ ಧರ್ಮ – ಸಂಸ್ಕೃತಿಯನ್ನು ಇನ್ನಷ್ಟು ಭದ್ರಪಡಿಸಿರುವುದನ್ನು ಕಾಣುತ್ತೇವೆ. ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ಬಸವಣ್ಣ, ವಿವೇಕಾನಂದ, ಗಾಂಧೀಜಿ ಇವರೆಲ್ಲ ಆ ಸಾಲಿನಲ್ಲಿ ನಿಲ್ಲುವವರೇ.

ತತ್ವತ್ರಯ: ಪ್ರಪಂಚದ ಮೂರು ತತ್ವಗಳಾದ ಪುರುಷ-ಪ್ರಕೃತಿ-ಪರಮಾತ್ಮ ಅಥವಾ ಜೀವ-ಜಗತ್ತು-ಜಗನ್ನಿಯಾಮಕ ಅಥವ ಚೇತನ – ಅಚೇತನ ಬ್ರಹ್ಮ

ಅಥವಾ ಚಿತ್ - ಅಚಿತ್ - ಈಶ್ವರ ಈ ಮೂರನ್ನು ವಿವರಿಸಿ ಪರಸ್ಪರ ಸಂಬಂಧ - ಅರ್ಥಗಳನ್ನು ತಿಳಿಸುವುದೇ ಎಲ್ಲ ಧರ್ಮಗಳ ಗುರಿ. ಇದರ ಜಿಜ್ಞಾಸೆಯೇ ಅನೇಕ ಪಂಥಗಳಿಗೆ, ಸಿದ್ಧಾಂತಗಳಿಗೆ, ಮತಗಳಹುಟ್ಟಿಗೆ ಕಾರಣವಾಗಿದೆ. ಅದ್ವೈತ-ವಿಶಿಷ್ಟಾದ್ವೈತ-ದ್ವೈತಗಳೂ ಇದರ ಫಲವೇ ಆಗಿದೆ. ಜಗತ್ ಸ್ವರೂಪಿಯಾದ ದೇವರನ್ನು ಪುರುಷ ಬ್ರಹ್ಮ ಈಶ್ವರ ಎಂದೆಲ್ಲ ಕರೆದು ಅವನಿಗೂ ಈ ಜಗತ್ತಿನಲ್ಲಿ ಕಾಣುವ ಜಡ - ಚೇತನಗಳು ಅಥವ ಚಿತ್ - ಅಚಿತ್‌ಗಳಿಗೂ ಇರುವ ಪರಸ್ಪರ ಸಂಬಂಧದ ಸ್ವರೂಪವನ್ನು ಈ ಮೂರು ಮತಗಳು ಮೂರು ಬೇರೆ ಬೇರೆ ರೀತಿಯಲ್ಲಿ ಚರ್ಚಿಸುವುದರ ಮೂಲಕ ಭಿನ್ನಮತಗಳಾಗಿ ಬೇರ್ಪಟ್ಟಿವೆ.

ಜೀವ ಮತ್ತು ಜಗತ್ತುಗಳು ಜಗದೀಶ್ವರನಿಂದಲೇ ಪ್ರೇರಿತವಾದವುಗಳು, ಇವೆರಡೂ ಒಂದೇ, ಇವುಗಳಲ್ಲಿ ಭೇದವಿಲ್ಲ, ಪರಮಾತ್ಮನಿಂದಲೇ ನಡೆಯತಕ್ಕವುಗಳು, ಪರಮಾತ್ಮನ ವಿನಾ ಬೇರೆ ವಸ್ತುವಿಲ್ಲ, ಪರಮಾತ್ಮನೊಬ್ಬನೇ ಎಂದು ಅಭೇದವನ್ನು ಹೇಳುವ ತತ್ವವೇ ಅದ್ವೈತ. ಇವೆರಡೂ ಬೇರೆ ಬೇರೆ ಎಂದು ಭೇದವನ್ನು ಕಲ್ಪಿಸುವ ತತ್ವ ದ್ವೈತ. ವಿಶಿಷ್ಟಾದ್ವೈತ ಈ ಎರಡು ತತ್ವಗಳನ್ನೂ ಬೆಸೆಯುವ ಕೆಲಸಮಾಡಿರುವಂತಿದೆ. ಚಿತ್ - ಅಚಿತ್‌ಗಳು ಈಶ್ವರನಿಂದ ಬೇರೆಯಾದರೂ ಅವನಿಗೆ ಶರೀರವಾಗಿರತಕ್ಕವು, ಅವನ ವಿಶೇಷಣಗಳು, ಆದ್ದರಿಂದ ಅವನಿಲ್ಲದೆ ಇವಕ್ಕೆ ಅಸ್ತಿತ್ವವಿಲ್ಲ. ಹಾಗಾಗಿ ಈ ವಿಶೇಷಣಗಳಿಂದ ಕೂಡಿದ ಪರಮಾತ್ಮನೊಬ್ಬನೇ ದೈವ. ಜೀವ, ಜಗತ್ತುಗಳು ಜಗದೀಶ್ವರನ ಶರೀರ, ವಿಶೇಷಣ ಎಂಬ ವೈಶಿಷ್ಟ್ಯವನ್ನು ಹೇಳುವ ಮೂಲಕ ವಿಶಿಷ್ಟಾದ್ವೈತವೆನಿಸಿದೆ.

ಈ ತತ್ವಗಳು ಮತ - ಪಂಥಗಳಾಗಿ ಬಳಕೆಗೆ ಬರುವ ಕಾಲದಲ್ಲಿ ವೈದಿಕ ಸಂಸ್ಕೃತಿಯಲ್ಲಿ ಪೂಜೆಗೊಳ್ಳುತ್ತಿದ್ದ ಈಶ್ವರ ಸ್ವರೂಪಕ್ಕೆ ಎರಡು ರೂಪಗಳಿದ್ದವು. ಶಿವ - ಕೇಶವ ಅಥವಾ ಹರಿ -ಹರ. ವೇದಗಳ ಕಾಲದಲ್ಲಿ ಇವುಗಳ ಜೊತೆಗೆ ಇಂದ್ರ, ವರುಣ, ಅಗ್ನಿ, ಸೂರ್ಯ, ಬ್ರಹ್ಮ ಇನ್ನೂ ಮುಂತಾದ ಅನೇಕ ದೇವತೆಗಳೂ ಪೂಜಾರ್ಹವಾಗಿದ್ದವು. ಕಾಲಕ್ರಮೇಣ ಅವುಗಳೆಲ್ಲ ಹಿಂದೆ ಸರಿದು ಈ ಎರಡು ದೈವಗಳೇ ಪ್ರಾಬಲ್ಯ ಸಾಧಿಸಿದ್ದವು. ಅದ್ವೈತತತ್ವವು ಹರಿ-ಹರ ಇಬ್ಬರನ್ನೂ

ಸಮಾನವಾಗಿ ಕಂಡು ಈಶ್ವರರೂಪವನ್ನು ಬ್ರಹ್ಮ ಎಂದು ಕರೆದು ಅಬೇಧ ಕಲ್ಪಿಸಿದರೆ ದ್ವೈತದಲ್ಲಿ ಹರನನ್ನು ಒಪ್ಪಿಕೊಂಡು ಈಶ್ವರಸ್ವರೂಪವನ್ನು ಹರಿ ಎಂದು ಕರೆದು ಹರಿಪಾರಮ್ಯವನ್ನು ಸಾಧಿಸಿರುವುದನ್ನು ಕಾಣುತ್ತೇವೆ. ವಿಶಿಷ್ಟಾದ್ವೈತ ಹರನನ್ನು ನಿರಾಕರಿಸಿ ಹರಿಸರ್ವೋತ್ತಮತ್ವವನ್ನು ಮಾತ್ರ ಸ್ವೀಕರಿಸಿ ಹರಿಏಕನಿಷ್ಠೆಯನ್ನು ಸಾಧಿಸಿದೆ. ಇದನ್ನು ಈ ಕೆಳಕಂಡ ವಿಶೇಷ ಲಕ್ಷಣಗಳಿಂದ ಗುರುತಿಸಬಹುದಾಗಿದೆ.

೧. **ಶ್ರೀಹರಿ ಏಕನಿಷ್ಠೆ:** ಈ ಭೂಲೋಕ, ಇದರೊಂದಿಗಿರುವ ಇನ್ನೂ ಹಲವು ಲೋಕಗಳನ್ನು ಹೊಂದಿರುವ, ಬ್ರಹ್ಮಾಂಡವನ್ನೇ ವ್ಯಾಪಿಸಿರುವ, ಈ ಜಗತ್ತನ್ನೇ ದೇಹವನ್ನಾಗಿಸಿಕೊಂಡಿರುವ, ಸರ್ವಶಕ್ತಿ ಸ್ವಾತಂತ್ರ್ಯಗಳಿಂದ ಕೂಡಿರುವ ಪುರುಷನೊಬ್ಬನಿರುವನು. ಅವನು ಊಹಿಸಲಸಾಧ್ಯವಾದ ವಿಶ್ವರೂಪಿಯಾಗಿರುವನಾದರೂ ಬೇರೆ ಬೇರೆ ರೂಪಗಳನ್ನೂ ಧರಿಸುವ ಶಕ್ತಿಯುಳ್ಳವನು. ಸರ್ವೇಶ್ವರನೂ ಪರಮಪುರುಷನೂ ಸರ್ವಶಕ್ತನೂ ಪರಮಾತ್ಮನೂ ಆದ ಈತನು 'ನಾರಾಯಣ' ರೂಪದಿಂದ ವೈಕುಂಠದಲ್ಲಿರುವನು. ವೈಕುಂಠ ಲೋಕವನ್ನು 'ಪರಮಪದ' ಎಂದು ಕರೆದಿದ್ದು ನಾರಾಯಣನನ್ನು 'ಪರವಾಸುದೇವ ರೂಪದಲ್ಲೂ ಗುರುತಿಸಲಾಗಿದೆ. ಇವನು ಸಮಸ್ತಕಲ್ಯಾಣಗುಣಾನ್ವಿತ, ದಿವ್ಯಮಂಗಳಕರ ವಿಗ್ರಹ, ಸಮಸ್ತ ಸಂಪತ್ತುಳ್ಳವನು, ಪರಮಕಾರುಣ್ಯಮೂರ್ತಿ. ಇವನಿಗೆ ಸಮಾನರೂ ಅಧಿಕರೂ ಈ ಬ್ರಹ್ಮಾಂಡದಲ್ಲಿ ಮತ್ತೊಬ್ಬರಿಲ್ಲ. ಇವನು 'ಶ್ರೀ' ಅಥವ 'ಲಕ್ಷ್ಮೀ' ಹೆಸರಿನ ಪತ್ನೀ ಸಮೇತನಾಗಿರುತ್ತಾನೆ. ಶ್ರೀಮನ್ನಾರಾಯಣನಂತೆ ಶ್ರೀದೇವಿಯೂ ಈಶ್ವರ ಸ್ವರೂಪಳಾದರೂ ನಾರಾಯಣನಿಗೆ ಅಧೀನ ಸ್ವಾತಂತ್ರ್ಯವುಳ್ಳವಳು. ವೈಕುಂಠದಲ್ಲಿ ಲಕ್ಷ್ಮೀನಾರಾಯಣನೊಂದಿಗೆ ಅನಂತ (ಆದಿಶೇಷ) ಗರುಡ, ವಿಶ್ವಕ್ಸೇನರೂ ಇದ್ದು ಇವರೆಲ್ಲ ನಿತ್ಯರು ಮತ್ತು ನಾರಾಯಣನ ಸೇವಕರು. ಹೀಗೆ ಸರ್ವೋತ್ತಮವಾಗಿರುವ ಶ್ರೀಮನ್ನಾರಾಯಣನೇ 'ಪರತತ್ವ' ಎಂದು ನಂಬುವುದೇ ಶ್ರೀವೈಷ್ಣವ ಧರ್ಮದ ಸಿದ್ಧಾಂತ. ಈ ಸಿದ್ಧಾಂತಜ್ಞಾನವು ಜೀವನ ಆತ್ಮಶ್ರೇಯಸ್ಸಿಗೆ ಕಾರಣವಾಗಿ ಆ ಶ್ರೇಯಸ್ಸೇ ಮುಕ್ತಿ ಎನಿಸಿಕೊಳ್ಳುತ್ತದೆ. ಇತರ ಮತಗಳು ದುಃಖವನ್ನು ದೂರಮಾಡಿ ಸುಖಾಪೇಕ್ಷೆಗಾಗಿ 'ತತ್ವ'ವನ್ನು, ಅದನ್ನು ಪಡೆಯುವ ಫಲವಾದ

'ಪುರುಷಾರ್ಥ'ವನ್ನು, ಅದಕ್ಕಾಗಿ ಕ್ರಮಿಸುವ ಮಾರ್ಗವಾದ 'ಹಿತ'ವನ್ನು ವಿವಿಧ ಸಾಧನೋಪಾಯಗಳಿಂದ ಕಂಡುಕೊಂಡಿವೆಯಾದರೆ ವಿಶಿಷ್ಟಾದ್ವೈತ ಈ ಒಂದೊಂದಕ್ಕೂ ಪ್ರತ್ಯೇಕವಾಗಿ ಸಾಧನೆ ಮಾಡಬೇಕಾದ ಅಗತ್ಯವಿಲ್ಲವೆಂದೂ ಎಲ್ಲಕ್ಕೂ ಶ್ರೀಮನ್ನಾರಾಯಣ ನೊಬ್ಬನನ್ನೇ ಆಶ್ರಯಿಸಿದರೆ ಸಾಕೆಂದೂ ಎಲ್ಲವನ್ನೂ ಅವನೇ ಕರುಣಿಸುತ್ತಾನೆಂದೂ ಏಕನಿಷ್ಠ ದೇವೋಪಾಸನೆಯನ್ನು ವಿಶಿಷ್ಟವಾಗಿ ಪ್ರತಿಪಾದಿಸಿದೆ. ಮೋಕ್ಷಕ್ಕೆ ಅತ್ಯಂತ ಸರಳ – ಸುಲಭ ಉಪಾಯವಾಗಿ 'ಪ್ರಪತ್ತಿ' ಅಥವಾ 'ಧ್ಯಾನ'ದ ಮಾರ್ಗವನ್ನು ಹೇಳುತ್ತದೆ. ಇದರ ಸಾಧನೆಗೆ ಹರಿನಾಮಸ್ಮರಣೆಯಷ್ಟೇ ಸಾಕೆನ್ನುತ್ತದೆ.

೨. **ಪ್ರಪತ್ತಿ–ಶರಣಾಗತಿ:** ಇತರ ಧರ್ಮಗಳಲ್ಲಿ ಮೋಕ್ಷಪಡೆಯಲು ಹಲವು ಜನ್ಮಗಳನ್ನು ಅನುಭವಿಸಬೇಕಾಗುತ್ತದೆ. ಪಾಪಶೇಷಗಳು ಕಳೆಯುವವರೆಗೂ ಜೀವಕ್ಕೆ ಮುಕ್ತಿಯಿಲ್ಲ. ಅಲ್ಲಿಯವರೆಗೆ ಸಾಧನೆ ಮಾಡುತ್ತಲೇ ಇರಬೇಕಾಗುತ್ತದೆ. ಆದರೆ ಶ್ರೀವೈಷ್ಣವ ಧರ್ಮದಲ್ಲಿ ಮನುಷ್ಯಜನ್ಮವೇ ಸರ್ವಶ್ರೇಷ್ಠ ಮತ್ತು ಜನ್ಮಾಂತರ ವಿಕಾಸದಲ್ಲಿ ತುಟ್ಟತುದಿಯದು. ಇಲ್ಲಿಂದ ಎಂದಿಗೂನಾಶವಿಲ್ಲದ, ಶಾಶ್ವತವಾದ, ಜ್ಞಾನಾನಂದಮಯವಾದ ವೈಕುಂಠ ಸೇರುವುದೇ ಮೋಕ್ಷದ ಸ್ಥಿತಿ. ಅದಕ್ಕಾಗಿ ಕ್ಲಿಷ್ಟಕರವಾದ ಹಲವು 'ಯೋಗ'ಗಳನ್ನು ಅನುಸರಿಸಬೇಕಾಗಿಲ್ಲ. ಶ್ರೀಮ–ನ್ನಾರಾಯಣನಲ್ಲಿ ಪ್ರಪತ್ತಿ ಅಥವಾ ಶರಣಾಗತಿ ಅಥವ ಭರನ್ಯಾಸ ಮಾಡುವುದು ಅತ್ಯಂತ ಸುಲಭ ಉಪಾಯ. ಜೀವನು ಸಂಪೂರ್ಣವಾಗಿ ಪರಮಾತ್ಮನಲ್ಲಿ ಶರಣಾದರೆ ಅವನ ಹೊಣೆ ಆ ಪರಮಾತ್ಮನಿಗೆ ಸೇರುವುದು. ಅವನು ಮೋಕ್ಷವನ್ನು ಕರುಣಿಸುತ್ತಾನೆ. ಜಗತ್ತಿಗೇ ಮಾತಾ ಪಿತೃಗಳಾದ ಲಕ್ಷ್ಮೀ ನಾರಾಯಣರು ಅಭಯ ನೀಡುತ್ತಾರೆ, ಕರುಣೆತೋರುತ್ತಾರೆ. ವೈಕುಂಠದಲ್ಲಿ ಸೇರಿಸುತ್ತಾರೆ ಎಂದು ನಂಬುವುದೇ ಶ್ರೀವೈಷ್ಣವ ಧರ್ಮ. ಈ ಪ್ರಪತ್ತಿ ಧರ್ಮವನ್ನು ಈ ಎರಡು ಶ್ಲೋಕಗಳು ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ.

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚಯಾಚತೆ
ಅಭಯಂ ಸರ್ವಭೂತೇಭ್ಯೋ ಪರಮ್ಯೇತದ್ವತಂಮಮ

– ಶ್ರೀರಾಮ, ರಾಮಾಯಣ

(ಒಂದು ಬಾರಿ ನನ್ನಲ್ಲಿ ಪ್ರಪತ್ತಿಯನ್ನು ಮಾಡಿದರೆ, ಎನ್ನವನೆಂದು ಯೋಚಿಸುವ ಸರ್ವಭೂತಗಳಿಗೂ ಅಭಯವನ್ನು ಕೊಡುತ್ತೇನೆ.)

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ
ಅಹಂ ತ್ವಾಂ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ

– ಶ್ರೀ ಕೃಷ್ಣ, ಭಗವದ್ಗೀತೆ.

(ಸಮಸ್ತ ಉಪಾಯಗಳನ್ನು (ಅನ್ಯ ಧರ್ಮ, ದೈವಗಳನ್ನು) ಬಿಟ್ಟು ನನ್ನೊಬ್ಬನಲ್ಲಿಯೇ ಶರಣಾದರೆ ನಾನು ನಿನ್ನನ್ನು ಸಮಸ್ತ ಪಾಪಗಳಿಂದಲೂ ಮುಕ್ತನನ್ನಾಗಿಸುತ್ತೇನೆ.)

ಪ್ರಪತ್ತಿಯೋಗ ಶ್ರೀವೈಷ್ಣವ ಧರ್ಮದ ಏಕೈಕ ಸಾಧನ ಕ್ರಮ. ಜ್ಞಾನ, ಭಕ್ತಿ, ಯಜ್ಞ, ಕರ್ಮ ಯೋಗಗಳಿಗಿಂತ ಈ ಶರಣಾಗತಿಯೋಗವನ್ನೇ ಇದು ಸುಲಭೋಪಾಯವಾಗಿ ಸ್ವೀಕರಿಸಿದೆ. ಮೋಕ್ಷವನ್ನು ಬಯಸುವ ಜೀವನಾದ ಮುಮುಕ್ಷು ಭಗವಂತನಲ್ಲಿ ಸಂಪೂರ್ಣ ಶರಣಾಗಿ ನಾಮಸ್ಮರಣೆ ಮಾಡಿದರೂ ಸಾಕು ಅವನು ಕೃಪೆದೋರುತ್ತಾನೆನ್ನುವ ಈ ಉಪಾಯವು ದೇವರನ್ನು ಬಯಸುವ ಜಗತ್ತಿನಲ್ಲಿರುವ ವಿಧಾನಗಳಲ್ಲೆಲ್ಲ ಅತಿಸುಲಭ ವಿಧಾನವೆನಿಸಿದೆ ಎಂದು ಚಿಂತಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ಧ್ಯಾನ ಧಾರಣನಾಗಬೇಕಂತೆ ಪ್ರಪಂಚದೊಳಗೆ ದೀನ ನಾನಾದೊಡೆ ಮುಖ್ಯಸಾಕಂತೆ' ಎಂಬಷ್ಟು ಸರಳವಾಗಿ ಇದು ಜನಪ್ರಿಯವಾಗಿದೆ.

೩. **ಮಹಾಲಕ್ಷ್ಮೀ ಪ್ರಾಧಾನ್ಯತೆ ಮತ್ತು ವಿಷ್ವಕ್ಸೇನ ಕಲ್ಪನೆ:** ವಿಶಿಷ್ಟಾದ್ವೈತ ತತ್ವವನ್ನು ಶ್ರೀಮನ್ನಾರಾಯಣನಿಂದ ಉಪದೇಶ ರೂಪದಲ್ಲಿ ತಿಳಿದುಕೊಂಡು ಶ್ರೀಮಹಾಲಕ್ಷ್ಮಿ ವಿಷ್ವಕ್ಸೇನರಿಗೆ ಉಪದೇಶ ಮಾಡಿದಳೆಂದೂ ವಿಷ್ವಕ್ಸೇನರಿಂದ ನಾಲ್ವಾರ್ ಭಗವದ್ಭಕ್ತರ ಮೂಲಕ ಜಗತ್ತಿಗೆ ಉಪದೇಶವಾಯಿತೆಂದೂ ಶ್ರೀವೈಷ್ಣವ ತತ್ವ ನಂಬುವುದರಿಂದಲೇ ಶ್ರೀಮಹಾಲಕ್ಷ್ಮೀ ಸಮೇತನಾದ ಶ್ರೀಮನ್ನಾರಾಯಣನನ್ನು ಅನುಸಂಧಾನ ಮಾಡುತ್ತದೆ. ಈ ಧರ್ಮದಲ್ಲಿ ನಾರಾಯಣನ ನಂತರ ಲಕ್ಷ್ಮಿಗೆ ಎರಡನೇ ಸ್ಥಾನ. ನಾರಾಯಣನ ಕೃಪೆ ದೊರಕಬೇಕಾದರೆ ಲಕ್ಷ್ಮಿಯನ್ನೇ

ಮೊರೆಹೋಗಬೇಕು. ಲಕ್ಷ್ಮಿಯಿಲ್ಲದೆ ನಾರಾಯಣನಿಲ್ಲ. (ಇದು ಪುರುಷ ಪ್ರಾಧಾನ್ಯತೆಯನ್ನು ಹೊಂದಿರುವ ಆರ್ಯಸಂಸ್ಕೃತಿಗಿಂತ ಭಿನ್ನವಾದ ಸ್ತ್ರೀ ಸಮಾನತೆ, ಸ್ತ್ರೀ ಪ್ರಾಧಾನ್ಯತೆಯನ್ನು ಸಾರುವ ದ್ರಾವಿಡಸಂಸ್ಕೃತಿಯೂ ಆಗಿರುವಂತಿದೆ.) ಆದ್ದರಿಂದಲೇ ಹರಿಯನ್ನು 'ಶ್ರೀಹರಿ' ಎಂದು ಕರೆದಿರುವುದು ಮತ್ತು ಹರಿಯ ಎಲ್ಲ ರೂಪಗಳನ್ನು ಲಕ್ಷ್ಮೀ ಅಥವಾ ಶ್ರೀ ಸಮೇತವಾಗಿಯೇ ಕಲ್ಪಿಸಿರುವುದು. (ಲಕ್ಷ್ಮೀನಾರಾಯಣ, ಲಕ್ಷ್ಮೀವೆಂಕಟೇಶ್ವರ, ಲಕ್ಷ್ಮೀನರಸಿಂಹ, ಶ್ರೀರಾಮ, ಶ್ರೀಕೃಷ್ಣ, ಶ್ರೀನಿವಾಸ ಇತ್ಯಾದಿ). ಶ್ರೀವೈಷ್ಣವ ಭಕ್ತರು ಲಕ್ಷ್ಮಿಯನ್ನು ತಾಯಿಯ ರೂಪದಲ್ಲೂ ವಿಷ್ಣುವನ್ನು ತಂದೆಯ ರೂಪದಲ್ಲೂ ಸ್ವೀಕರಿಸಿದ್ದಾರೆ. ತಾಯಿಯ ಮೂಲಕ ತಂದೆಯಿಂದ ತಮಗೆ ಬೇಕಾದ ಅಗತ್ಯಗಳನ್ನು ಪೂರೈಸಿಕೊಳ್ಳುವ ಮಗನಂತಹ ಅತ್ಯಂತ ಸಹಜವಾದ ವಾತ್ಸಲ್ಯಮಯಭಾವ ಈ ಧರ್ಮದ ಜೀವ-ದೇವರ ನಡುವೆ ಕಂಡುಬರುತ್ತದೆ. ಹೀಗೆ ಲಕ್ಷ್ಮೀ ಸಮೇತ ಧರ್ಮವಾದ್ದರಿಂದ ಇದು 'ಶ್ರೀವೈಷ್ಣವ'ವಾಗುತ್ತದೆ.

ವಿಶ್ವಕ್ಸೇನರೇ ಜಗತ್ತಿನ ಜೀವಕೋಟಿಗೆ ಧರ್ಮದ ಮೂಲವಾಗಿರುವುದರಿಂದ ವಿಶ್ವಕ್ಸೇನರ ಆರಾಧನೆಗೆ ಈ ಧರ್ಮ ಮಹತ್ವ ಕೊಡುತ್ತದೆ. ವಿಶ್ವಕ್ಸೇನರನ್ನು 'ಕುಮುದಗಣೇಶ' ಎಂದೂ ಕರೆಯಲಾಗಿದೆ. ವೈಕುಂಠದಲ್ಲಿ ಸೇನಾಧಿಪತಿ-ಯಾಗಿರುವ ಈ ವಿಶ್ವಕ್ಸೇನರನ್ನು ಒಲಿಸಿಕೊಂಡರೆ ಲಕ್ಷ್ಮಿನಾರಾಯಣರ ದರ್ಶನ ಸುಲಭವೆಂದು ಭಾವಿಸಲಾಗಿದೆ. ಆದ್ದರಿಂದಲೇ ಶ್ರೀವೈಷ್ಣವಧರ್ಮದಲ್ಲಿ ಗಣೇಶ (ಗೌರೀಪುತ್ರ, ಗಜವದನ)ನ ಪೂಜೆಯಿರುವುದಿಲ್ಲ. ಬದಲಿಗೆ ಈ ವಿಶ್ವಕ್ಸೇನರನ್ನೇ ವಿಘ್ನವಿನಾಶಕರನನ್ನಾಗಿ ಭಾವಿಸಿ ಪ್ರತಿಯೊಂದು ಕಾರ್ಯದಲ್ಲಿಯೂ ಮೊದಲು ಪ್ರಾರ್ಥಿಸಲಾಗುತ್ತದೆ. ಈ ವಿಶ್ವಕ್ಸೇನರಿಗೆ ಮೂರ್ತಿಪೂಜೆ ರೂಢಿಯಲ್ಲಿಲ್ಲ. ಮಂತ್ರಪೂಜೆ ಮಾತ್ರವಿದೆ. 'ಶುಕ್ಲಾಂಬರಧರಂ ವಿಷ್ಣುಂ....' ಎಂಬ ಪ್ರಸಿದ್ಧ ವಿನಾಯಕಶ್ಲೋಕ ವಾಸ್ತವವಾಗಿ ಈ ವಿಶ್ವಕ್ಸೇನರ ಪ್ರಾರ್ಥನೆಯೇ ಆಗಿದೆ. ಈಗ ನಂಬಿರುವಂತೆ ಗೌರೀಪುತ್ರ ಗಣೇಶನದಲ್ಲ. ಈ ಶ್ಲೋಕದಲ್ಲಿ ಗಜಮುಖಗಣೇಶನ ವರ್ಣನೆ ಬರುವುದಿಲ್ಲ. ವಿಷ್ಣುದೇವಾಲಯಗಳಲ್ಲಿರುವ ದ್ವಾರಪಾಲಕರ ರೂಪದಂತಿರುವ ಸುಂದರವದನದ ಈ ವಿಶ್ವಕ್ಸೇನರ ಸಂಕೇತವಾದ ವಿಘ್ನವಿನಾಶಕನವರ್ಣನೆಯಿದೆ.

೪. **ಶ್ರೀಹರಿಯ ರೂಪಭೇದಗಳು** : ಕೈವಲ್ಯ ಪದವಿಗಾಗಿ ಶ್ರೀಹರಿಯೊಬ್ಬನನ್ನೇ ಈ ಧರ್ಮ ಸ್ವೀಕರಿಸಿದ್ದರೂ ಸಹ ಅವನಲ್ಲೇ ಸ್ವರೂಪಭೇದವನ್ನು ಕಲ್ಪಿಸಿದೆ, ಪರಾತ್ಪರನಾಗಿರುವ ಶ್ರೀಮನ್ನಾರಾಯಣನ ಸ್ವರೂಪ ಐದು ಬಗೆಯಾಗಿದ್ದು ಅವನ್ನು 'ಪರ, ವ್ಯೂಹ, ವಿಭವ, ಅಂತರ್ಯಾಮಿ ಮತ್ತು ಅರ್ಚಾ' ಎಂದು ಹೇಳಲಾಗಿದೆ. 'ಪರ'ದಲ್ಲಿ ನಿತ್ಯ, ನಿರ್ವಿಕಾರ, ಲೋಕಾತೀತನಾದ ವಾಸುದೇವನನ್ನು ಮಾತ್ರ ಕಲ್ಪಿಸಲಾಗಿದೆ. 'ವ್ಯೂಹ'ದಲ್ಲಿ ಸಂಕರ್ಷಣ, ಅನಿರುದ್ಧ, ಪ್ರದ್ಯುಮ್ನರನ್ನು ಇವರುಗಳ ಮೂಲಕ ದ್ವಾದಶನಾಮಗಳ ರೂಪವನ್ನು ಭಗವಂತನಿಗೆ ಹೆಸರಿಸಲಾಗಿದೆ. 'ವಿಭವ'ದಲ್ಲಿ ಭಗವಂತನ ದಶಾವತಾರಗಳನ್ನು ಒಳಗೊಂಡು ೩೯ ಅವತಾರಗಳನ್ನು ಕಲ್ಪಿಸಲಾಗಿದೆ. ದಶಾವತಾರದಲ್ಲಿ ಪ್ರಚಲಿತವಿರುವ ಬುದ್ಧನನ್ನು ಶ್ರೀ ವೈಷ್ಣವಧರ್ಮ ತನ್ನ ತತ್ವಕ್ಕೆ ಅನುಗುಣವಾಗಿ ಸ್ವೀಕರಿಸಿಲ್ಲ. ಬದಲಿಗೆ ಬಲರಾಮ ಅಥವಾ ತ್ರಿಪುರಾಂತಕಹರಿ ರೂಪಗಳನ್ನು ಅನುಸಂಧಾನ ಮಾಡುತ್ತದೆ. 'ಅಂತರ್ಯಾಮಿ' ರೂಪವು ಅಗೋಚರವಾದುದು, ಯೋಗಸಿದ್ಧಿಯ ದಾರ್ಶನಿಕರಿಗೆ ಮಾತ್ರ ಕಾಣಸಿಗುವ ದರ್ಶನರೂಪ. ಇದು ಆಕಾರ ಬಣ್ಣ ಹೆಸರಿಲ್ಲದ ಇಡೀ ಜಗತ್ತನ್ನು ನಡೆಸುತ್ತಿರುವ ಒಂದು ಶಕ್ತಿವಿಶೇಷ. 'ಅರ್ಚ' ರೂಪ ಸಾಮಾನ್ಯ ಭಕ್ತರ ಕಲ್ಪನೆಗೆ ಒಳಪಟ್ಟು ಆಲಯ -- ಮನೆಗಳಲ್ಲಿ ಅರ್ಚಿಸಲ್ಪಡುವ ವಿಗ್ರಹರೂಪ. ಈ ಅರ್ಚಾರೂಪದ ಭಗವಂತ ಮಾತ್ರ ಭಕ್ತರ ಕೈಗೆ ಎಟುಕುವಂತಹುದು.

ಹೀಗೆ ಅನೇಕ ರೂಪಗಳಲ್ಲಿರುವ ಭಗವಂತ ಸಕಲ ಜೀವಕೋಟಿಗಳಲ್ಲಿ ಜೀವಾತ್ಮನ ರೂಪದಲ್ಲೂ ಇದ್ದಾನೆ. ಈ ಜೀವಿಗಳ ವ್ಯಾಪಾರ ಈ ಆತ್ಮ ಇರುವವರೆಗೆ ಮಾತ್ರ. ಶ್ರೀಮನ್ನಾರಾಯಣನೇ ಜಗತ್ತನ್ನು ನಡೆಸುವ ಸೂತ್ರಧಾರ. ಶ್ರೀಹರಿಯು ತನ್ನ ಸಂಕಲ್ಪದಿಂದ ಬ್ರಹ್ಮನನ್ನೂ ಅವನಿಂದ ರುದ್ರನನ್ನೂ ಇಂದ್ರಾದಿ ಸಕಲ ದೇವತೆಗಳನ್ನೂ ಸೃಷ್ಟಿಸಿ ಅವರವರಿಗೆ ನಿರ್ದಿಷ್ಟವಾದ ಲೋಕಕಲ್ಯಾಣ ಕಾರ್ಯವನ್ನು ನಿಯಮಿಸುತ್ತಾನೆ. ಈ ಒಬ್ಬೊಬ್ಬ ದೇವ – ದೇವತೆಗಳಿಗೂ ನಾರಾಯಣನು ನೇಮಿಸಿರುವ ಕಾರ್ಯಗಳಲ್ಲಿ ಮಾತ್ರ ಅಧಿಕಾರವಿರುತ್ತದೆ. ನಾರಾಯಣನ ಜಗತ್ತಿನ ಈ ರಕ್ಷಣಾಕಾರ್ಯ ಒಂದು ರೀತಿಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಂತಿದೆ. ಪ್ರಧಾನಮಂತ್ರಿ ಮತ್ತು ಅವನ ಮಂತ್ರಿ ಮಂಡಲ; ಅವರಿಂದ ನೇಮಿಸಲ್ಪಡುವ ಅಥವಾ ಅವರಿಗೆ ಅಧೀನರಾದ ರಾಜ್ಯಗಳ ಮುಖ್ಯಮಂತ್ರಿ

ಮತ್ತು ಸಚಿವ ಮಂಡಲವಿದ್ದಂತೆ. ಎಲ್ಲ ಅಧಿಕಾರವೂ ಸರ್ವಶಕ್ತನಾದ ಶ್ರೀಮನ್ನಾರಾಯಣನ ಕೈಯಲ್ಲಿರುತ್ತದೆ. ಹೀಗೆ ಇಡೀ ಜೀವ-ಜಗತ್ತನ್ನು ನಾರಾಯಣಮಯವನ್ನಾಗಿ ಮಾಡಿ ಹರಿಸರ್ವೋತಮತ್ವವನ್ನು ಸಾಧಿಸಿರುವುದು ಈ ಧರ್ಮದ ವೈಶಿಷ್ಟ್ಯ. ಅದಕ್ಕಾಗಿಯೇ ಇದು ಹರಿಏಕನಿಷ್ಠೆಯನ್ನು ಅನುಸರಿಸುವುದು.

೫. **ಪಂಚಸಂಸ್ಕಾರ:** ಈ ಧರ್ಮೀಯರು ಲೋಕದಲ್ಲಿ ಧರ್ಮಾನುಸರಣೆಯನ್ನು ಪಂಚಸಂಸ್ಕಾರಭೂತವಾಗಿ ಸ್ವೀಕರಿಸಿರುತ್ತಾರೆ. ತಮ್ಮ ಭುಜಗಳ ಮೇಲೆ ಭಗವಂತನ ಚಿನ್ಹೆಗಳಾದ ಶಂಖಚಕ್ರಗಳನ್ನು ಧಾರಣಮಾಡಿಕೊಳ್ಳುವ 'ತಾಪ'; ಹಣೆಯ ಮೇಲೆ ಮತ್ತು ದೇಹದ ೧೨ ಭಾಗಗಳಲ್ಲಿ ಎರಡು ಬಿಳಿಯ ನಾಮಗಳ ನಡುವೆ ಒಂದು ಶ್ರೀಚೂರ್ಣದ ನಾಮವನ್ನು ಧರಿಸುವ 'ಪುಂಡ್ರ'; ಆಚಾರ್ಯರ ಮೂಲಕ 'ದಾಸ' ಎಂಬ ಅಂಕಿತವನ್ನು ಪಡೆಯುವ ಮೂಲಕ ಪ್ರಪತ್ತಿ ಅಥವಾ ಶರಣಾಗತಿಮಾರ್ಗದ ಸ್ವೀಕಾರದ 'ನಾಮ'; ತತ್ವ-ಹಿತ-ಪುರುಷಾರ್ಥಸಾಧಕಗಳ ರೂಪವೆನಿಸಿದ ರಹಸ್ಯತ್ರಯದ ಉಪದೇಶವಾದ 'ಮಂತ್ರ' ಮತ್ತು ಮಾನಸಿಕ ಮನಃಶುದ್ಧಿಯ ಇಂದ್ರಿಯನಿಗ್ರಹ ಹಾಗೂ ಬಾಹ್ಯಮನಃ ಶುದ್ಧಿಯ 'ಅರ್ಚಾ' ಪೂಜಾ ವಿಧಿಗಳನ್ನು ಸ್ವೀಕರಿಸುವ 'ಯಾಗ' ಎಂಬ ಐದು ಸಂಸ್ಕಾರಗಳು ಶ್ರೀವೈಷ್ಣವ ಧರ್ಮೀಯನಿಗೆ ಉಪನಯನ ಕಾಲದಲ್ಲೇ ಆಚಾರ್ಯಾಭಿಮುಖದಲ್ಲಿ ನಡೆಯುವುದರ ಮೂಲಕ ಪ್ರತಿಯೊಬ್ಬ ಶ್ರೀವೈಷ್ಣವನೂ ಸಂಸ್ಕಾರದ ಮೂಲಕ ದಾಸನೇ ಆಗಿರುತ್ತಾನೆ. ಅವರವರ ಪ್ರವರ ಹೇಳುವ ಕಾಲದಲ್ಲಿ ಪ್ರತಿಯೊಬ್ಬರೂ ತಮ್ಮ ಹೆಸರಿನ ಮುಂದೆ ದಾಸನ್ ಎಂದು ಸೇರಿಸಿಕೊಳ್ಳುವುದು ಈ ಕಾರಣಕ್ಕಾಗಿಯೇ.

೬. **ಮಂತ್ರರಹಸ್ಯ:** ಈ ಪ್ರಪತ್ತಿಧರ್ಮದ ಸಾಧನೆಗಾಗಿ ಮುಮುಕ್ಷುವು ಆಚಾರ್ಯಾಭಿದಾನವಾಗಿರುವ 'ರಹಸ್ಯತ್ರಯ ಮಂತ್ರ'ವನ್ನು ಸದಾ ಅನುಸಂಧಾನ ಮಾಡಬೇಕೆಂಬ ನಿಯಮವಿದೆ. ಈ ರಹಸ್ಯತ್ರಯದಲ್ಲಿ ಮೂರು ಮಂತ್ರಗಳಿವೆ. (೧) ಮಂತ್ರರಾಜವೆನಿಸಿರುವ ಮೂಲಮಂತ್ರವಾದ ಅಷ್ಟಾಕ್ಷರಿಮಂತ್ರ : 'ಓಂ ನಮೋ ನಾರಾಯಣಾಯಃ' (೨) ದ್ವಯಮಂತ್ರವಾದ 'ಶ್ರೀಮನ್ನಾರಾಯಣ ಚರಣೌ

ಶರಣಂ ಪ್ರಪದ್ಯೇ ಶ್ರೀಮತೇ ನಾರಾಯಣಾಯ' ಹಾಗೂ (೩) ಚರಮಶ್ಲೋಕವೆನಿಸಿರುವ 'ಸರ್ವಧರ್ಮಾನ್ ಪರಿತ್ಯಜ್ಯ..........' ಎಂಬ ಶ್ಲೋಕ. ಇವುಗಳನ್ನು ಪ್ರತಿನಿತ್ಯ, ಪ್ರತಿಕ್ಷಣ ಅನುಸಂಧಾನ ಮಾಡಬೇಕೆಂದೂ ಇವು ಅತ್ಯಂತ ರಹಸ್ಯಮಂತ್ರಗಳಾಗಿರುವುದರಿಂದ ಇತರರಿಗೆ ಮತ್ತು ಗಟ್ಟಿಯಾಗಿ ಹೇಳಬಾರದೆಂದೂ ವಿಧಿಯಿದೆ. (ಈ ಮಂತ್ರಗಳನ್ನೇ ರಾಮಾನುಜರು ಗಿರಿಯಮೇಲೆ ನಿಂತು ಜನಕ್ಕೆಲ್ಲ ತಿಳಿಯುವಂತೆ ಉದ್ಘೋಷ ಮಾಡಿ ಇದರ ಪ್ರಯೋಜನ ಸಾಮಾನ್ಯ ಜನರಿಗೂ ಸಿಗಲೆಂದು ಪ್ರಚಾರಮಾಡಿದ್ದು) ಈ ಮಂತ್ರಗಳ ಬಗ್ಗೆ ಶ್ರೀವೈಷ್ಣವ ಧರ್ಮಗ್ರಂಥಗಳಲ್ಲಿ ವಿಶೇಷವಾದ ವ್ಯಾಖ್ಯಾನಗಳಿವೆ. ರಾಮಾನುಜರೇ 'ರಹಸ್ಯತ್ರಯಸಾರ' ಎಂಬ ಗ್ರಂಥವನ್ನು ಬರೆದಿದ್ದಾರೆ. ಶ್ರೀವೈಷ್ಣವ ಧರ್ಮದ ತಿರುಳೇ ಇದರಲ್ಲಿದೆ.

೭. **ಆಳ್ವಾರರ ಪ್ರಬಂಧಗಳು:** ಶ್ರೀ ವೈಷ್ಣವಧರ್ಮದ ಈ ಸಿದ್ಧಾಂತಗಳಿಗೆ ಆಧಾರ, ಇತರ ಧರ್ಮಗಳಿಗೆ ಆಧಾರವಾಗಿರುವ ಪ್ರಸ್ಥಾನತ್ರಯಗಳೇ ಆದರೂ (ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ) ವಿಶಿಷ್ಟಾದ್ವೈತಕ್ಕೆ ಆಳ್ವಾರರ ಪ್ರಬಂಧಗಳೂ ಒಂದು ಆಧಾರವಾಗಿರುವುದರಿಂದ ಇದು 'ಪ್ರಸ್ಥಾನಚತುಷ್ಟಯ' ವೆನಿಸಿದೆ. ಕ್ರಿ.ಶ. ೭ನೇ ಶತಮಾನದಿಂದ ೯ನೇ ಶತಮಾನದ ಅವಧಿಯವರೆಂದು ಇತಿಹಾಸಕಾರರು ಗುರುತಿಸಿರುವ ೧೨ ಜನ ಆಳ್ವಾರರು ಶರಣಾಗತಿಯ ಮೂಲಕ ಭಗವಂತನನ್ನು ವಿವಿಧ ರೀತಿಯಲ್ಲಿ ಭಾವನಾತ್ಮಕವಾಗಿ ಸ್ತುತಿಸಿರುವ ಹಾಡುಗಳ ನಾಲ್ಕು ಸಾವಿರ ಪಾಶುರ (ಶ್ಲೋಕ) ಗಳನ್ನು ರಚಿಸಿದ್ದು ಇವುಗಳನ್ನು 'ನಾಲಾಯಿರ ದಿವ್ಯಪ್ರಬಂಧಗಳು' ಎಂದು ಕರೆಯಲಾಗಿದೆ. ಈ ಪ್ರಬಂಧಗಳಲ್ಲೂ ವೇದ - ಉಪನಿಷತ್ತು - ರಾಮಾಯಣ - ಮಹಾಭಾರತ - ಭಾಗವತ ವಿಶೇಷವಾಗಿ ಭಗವದ್ಗೀತೆಯ ಸಾರ ಅಡಗಿರುವುದರಿಂದ ಈ ಮತವನ್ನು ಸ್ಥಾಪಿಸಿದ ರಾಮಾನುಜಾಚಾರ್ಯರು ಇದನ್ನು ಒಂದು ಪ್ರಮಾಣವಾಗಿ ಸ್ವೀಕರಿಸಿ ಇದನ್ನು ವೇದಸಮಾನಗೊಳಿಸಿದ್ದಾರೆ. ಅನೇಕ ವಿಮರ್ಶಕರು ಈ ಪ್ರಬಂಧಗಳಲ್ಲಿ ವೈದಿಕ ಸಾಹಿತ್ಯದಲ್ಲಿಲ್ಲದ ಎಷ್ಟೋ ಹೊಸ ವಿಚಾರಗಳು ಇವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಭಾರತದಾದ್ಯಂತ ಧರ್ಮದ ಮೂಲವಾಗಿರುವ ವೈದಿಕ ಸಾಹಿತ್ಯಕ್ಕೆ ಸರಿಸಮನಾಗಿ, ಸ್ಥಳೀಯ ಭಾಷೆಯಲ್ಲಿರುವ ದ್ರಾವಿಡ ಪ್ರಬಂಧಗಳು

ಧರ್ಮಸ್ಥಾಪನೆಗೆ ಮತ್ತು ದರ್ಶನ ವ್ಯಾಖ್ಯಾನಕ್ಕೆ ಆಕರವಾಗಿ ನಿಂತಿರುವುದು ಬಹುಶಃ ಇಲ್ಲೊಂದೇ ಕಡೆ ಎನಿಸುತ್ತದೆ. ಆರ್ಯಸಂಸ್ಕೃತಿಗಿಂತ ಭಿನ್ನವಾದ ದ್ರಾವಿಡ ಸಂಸ್ಕೃತಿಯೊಂದು ಈ ದೇಶದಲ್ಲಿ ಅತ್ಯಂತ ಶಕ್ತಿಯುತವಾಗಿ ಮತ್ತು ಗಟ್ಟಿಯಾಗಿ ಬೇರೂರಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಆಳ್ವಾರರುಗಳೆಲ್ಲ ಸಾಮಾನ್ಯ ಜನವರ್ಗದ ಪ್ರತಿನಿಧಿಗಳಾಗಿದ್ದು ಇವರಲ್ಲಿ ವೈದಿಕರಲ್ಲದೆ ಇತರ ಜಾತಿಯವರೂ – ಅಂತ್ಯಜರೂ ಕ್ಷತ್ರಿಯರೂ ಮಹಿಳೆಯರೂ – ಇರುವುದು ವಿ ಷ, ಧರ್ಮೋಪದೇಶ ಮತ್ತು ದೈವಸಾಕ್ಷಾತ್ಕಾರ ಕೇವಲ ವೇದಪಾರಂಗತರಿಗೆ ಮಾತ್ರ ಎಂಬ ಆರ್ಯಮತದ ಸಿದ್ಧಹೇಳಿಕೆಯನ್ನು ಬದಲಾಯಿಸಿದ ಸ್ಥಿತಿಗೆ ಮತ್ತು ಹೊಸ ವ್ಯಾಖ್ಯಾನಕ್ಕೆ ಇದು ದಾರಿ ಮಾಡಿಕೊಟ್ಟಿದೆ. ಈ ಆಳ್ವಾರರುಗಳ ಸಾಧನೆಯಾದ ಅತ್ಯಂತ ಸರಳ ಮತ್ತು ಸುಲಭವಾದ ಶರಣಾಗತಿಯ ತತ್ವ ಶ್ರೀವೈಷ್ಣವಧರ್ಮದ ಮುಖ್ಯ ತಿರುಳಾಗುವ ಮೂಲಕ ಇತರ ಧರ್ಮಗಳಿಂದ ಇದು ಸಹಜವಾಗಿ ಭಿನ್ನವಾಗಿ ಮತ್ತು ವಿಶಿಷ್ಟವಾಗಿ ನಿಲ್ಲುವಂತಾಗಿದೆ. ಈ ಧರ್ಮದಲ್ಲಿ ಬರುವ ೧೨ ಜನ ಆಳ್ವಾರರನ್ನು ಬೇರೆ ಬೇರೆ ಶ್ರೀವೈಷ್ಣವ ಧರ್ಮಗ್ರಂಥಗಳಲ್ಲಿ ಬೇರೆ ಬೇರೆ ಕ್ರಮದಲ್ಲಿ ಗುರುತಿಸಿರುವುದು ಕಂಡು ಬರುತ್ತದಾದರೂ ಸಂಪ್ರದಾಯದ ಮುಖ್ಯ ಗ್ರಂಥವಾದ 'ಗುರುಪರಂಪರಾ ಪ್ರಭಾವ' 'ಹೇಳುವ ಕ್ರಮವನ್ನೇ ಎಲ್ಲರೂ ಒಪ್ಪಿದ್ದು ಆ ಕ್ರಮ ಈ ರೀತಿ ಇದೆ.

೧. ಪೊಯ್‌ಗೈಯಾಳ್ವಾರ್

೨. ಪೂದತ್ತಾಳ್ವಾರ್

೩. ಪೇಯಾಳ್ವಾರ್

ಇವರನ್ನು ಮೊದಲಾಳ್ವಾರರೆಂದು ಕರೆಯಲಾಗಿದೆ. ಇತಿವೃತ್ತ, ಜಾತಿ, ಇತ್ಯಾದಿಗಳೇನೂ ತಿಳಿದಿಲ್ಲ, ಇವರು ಮೂವರು ಕಂಚಿಯುವರೆಂದೂ ಬೇರೆಬೇರೆಯಾಗಿ ಊರಾರು ಸುತ್ತುತ್ತ ಅಕಸ್ಮಾತ್ತಾಗಿ ಒಂದೆಡೆ ಸಂಧಿಸಿದ್ದರೆಂದೂ ಮತ್ತು ಒಂದೇ ತೆರನಾದ ಜೀವನಕ್ರಮ, ಭಕ್ತಿಮಾರ್ಗ ಹೊಂದಿದ್ದರೆಂದೂ ಹೇಳಲಾಗಿದ್ದು ಇವರನ್ನು 'ಪುಷ್ಪಜಾತರು' ಎಂದೇ ಗ್ರಹಿಸಲಾಗಿದೆ.

೪. ತಿರುಮಳಿಶೈಯಾಳ್ವಾರ್ (ತಿರುವಳಿಶೈ ಊರಿನವರು, ಜಾತಿ ಗೊತ್ತಿಲ್ಲ)

೫. ಕುಲಶೇಖರಾಳ್ವಾರ್ (ಕ್ಷತ್ರಿಯರು, ಕೇರಳದ ತಿರುವಾಂಕೂರಿನ ರಾಜ)

೬. ಪೆರಿಯಾಳ್ವಾರ್ (ಭಟ್ಟನಾಥ ಎಂಬ ಪರ್ಯಾಯ ನಾಮವಿರುವ ಶ್ರೀವಿಲ್ಲಿಪುತ್ತೂರಿನ ಬ್ರಾಹ್ಮಣರು)

೭. ಆಂಡಾಳ್ (ಗೋದಾದೇವಿ, ಪೆರಿಯಾಳ್ವಾರರ ಸಾಕುಮಗಳು)

೮. ತೊಂಡರಡಿಪ್ಪೊಡಿಯಾಳ್ವಾರ್ (ಭಕ್ತಾಂಘಿರೇಣು, ವಿಪ್ರನಾರಾಯಣ ಎಂದು ಹೆಸರುಗಳೂ ಇರುವ ಮಂಡಂಗುಡಿಯ ಬ್ರಾಹ್ಮಣರು)

೯. ತಿರುಪ್ಪಾಣಾಳ್ವಾರ್ (ತಿರುಪ್ಪಾಣಿ, ಯೋಗಿವಾಹನ ಹೆಸರುಗಳೂ ಇರುವ ಉರೈಯೂರಿನ ಅಂತ್ಯಜರು)

೧೦. ತಿರುಮಂಗೈ ಆಳ್ವಾರ್ (ನೀಲ ಹೆಸರೂ ಇದೆ. ತಿರುಮಂಗೈ ಊರಿನ ಕಳ್ಳರ ಜಾತಿ ಮನರು)

೧೧. ಮಧುರಕವಿಯಾಳ್ವಾರ್ (ತಿರುಕ್ಕೋವಿಳೂರಿನ ಬ್ರಾಹ್ಮಣರು)

೧೨. ನಮ್ಮಾಳ್ವಾರ್ (ಷಡಗೋಪನ್ ಎಂಬ ಹೆಸರೂ ಇದೆ. ತಿರುಕ್ಕುರುಗೂರಿನ ವೆಳ್ಳಾಳ - ಶೂದ್ರ ಜಾತಿಯರು)

ಈ ೧೨ ಜನ ಆಳ್ವಾರರಲ್ಲಿ ಯೋಗಿಗಳಾಗಿರುವ ನಮ್ಮಾಳ್ವಾರರು ಪ್ರಧಾನ ಆಳ್ವಾರರಾಗಿ ಸ್ತುತಿಸಲ್ಪಟ್ಟಿದ್ದಾರೆ. (ಈ ಆಳ್ವಾರರ ಜೀವನ ವಿವರಗಳಿಗೆ ಟಿಪ್ಪಣಿ ಭಾಗ ನೋಡಿ)

೮. ಆಚಾರ್ಯ ಪರಂಪರೆ: ಶ್ರೀವೈಷ್ಣವ ಮತವನ್ನು ಸ್ಥಾಪಿಸಿದವರು ರಾಮಾನುಜಾಚಾರ್ಯರಾದರೂ ಅವರೇ ಈ ಧರ್ಮದ ಮೊದಲ ಆಚಾರ್ಯರಲ್ಲ. ಅವರಿಗಿಂತ ಮೊದಲು ಹಲವು ಆಚಾರ್ಯರು ಆಗಿಹೋಗಿದ್ದಾರೆ. ಅವರಲ್ಲಿ ಮುಖ್ಯವಾಗಿ ಸ್ತುತಿಸುವ ಆಚಾರ್ಯರೆಂದರೆ ನಾಥಮುನಿಗಳು ಮತ್ತು ಯಾಮುನಾಚಾರ್ಯರು. ಆಳ್ವಾರರ ಪ್ರಬಂಧಗಳನ್ನೆಲ್ಲ ಸಂಗ್ರಹಿಸಿ ನಾಲಾಯಿರ ದಿವ್ಯಪ್ರಬಂಧ ರೂಪಕ್ಕೆ ತಂದವರು ನಾಥಮುನಿಗಳು. ಇವರು ಈ ಪ್ರಬಂಧಗಳನ್ನು

ನಿತ್ಯಪಾರಾಯಣದಲ್ಲಿ, ಭಗವದಾರಾಧನೆಯಲ್ಲಿ ಬಳಕೆಗೆ ತರುವುದರ ಮೂಲಕ ಶ್ರೀವೈಷ್ಣವ ಧರ್ಮಕ್ಕೆ ಉಭಯವೇದಾಂತ ಎಂಬ ಹೆಸರನ್ನು ತಂದರು. ಉಭಯವೇದಗಳೆಂದರೆ ಚತುರ್‌ವೇದಗಳು ಮತ್ತು ವೇದಸಮಾನವಾದ ಪ್ರಬಂಧಗಳು. ಇವರ ನಂತರ ಯಾಮುನಾಚಾರ್ಯರು ಈ ಧರ್ಮದ ಸಿದ್ಧಾಂತ ಸ್ಥಾಪನೆಗೆ ರಾಮಾನುಜರನ್ನು ನೇಮಿಸುವುದರ ಜೊತೆಗೆ ವಿಶಿಷ್ಟಾದ್ವೈತ ತತ್ವವನ್ನು ಎಲ್ಲಡೆ ಹರಡಿ ಕಂಚಿ, ಶ್ರೀರಂಗಗಳಂಥ ಪ್ರಮುಖ ಕೇಂದ್ರಗಳನ್ನು ರೂಪಿಸಿದ್ದರು. ಅನಂತರ ಬಂದ ರಾಮಾನುಜಾಚಾರ್ಯರು ಈ ಧರ್ಮವನ್ನು ಜನಮತವನ್ನಾಗಿ ಪರಿವರ್ತಿಸಿ ಸಮರ್ಥವಾದ ವ್ಯಾಖ್ಯಾನಗಳನ್ನು ರಚಿಸಿ ವೇದಾಂತದ, ಶಾಸ್ತ್ರ ಜ್ಞಾನದ ಸಂಪ್ರದಾಯದ ಜೊತೆಗೆ ಆಳ್ವಾರರ ಭಕ್ತಿ ಸಂಪ್ರದಾಯವನ್ನು ಸೇರಿಸಿ ದೇವ-ಜೀವರನ್ನು ಒಂದುಗೂಡಿಸಿ ವಿಶಿಷ್ಟಾದ್ವೈತ ಸಿದ್ಧಾಂತವಾಗಿ ಸ್ಥಾಪಿಸಿದರಲ್ಲದೆ ಅದನ್ನು ಜನಪ್ರಿಯಗೊಳಿಸಿದರು. ದಕ್ಷಿಣ ಭಾರತದಾದ್ಯಂತ ಪ್ರಚಾರ ಮಾಡಿ ತಿರುಪತಿ-ಮೇಲುಕೋಟೆಗಳನ್ನೂ ಕೇಂದ್ರಗಳನ್ನಾಗಿ ಮಾಡಿ ತಮಿಳುನಾಡಿನಲ್ಲಿ ಮಾತ್ರ ಇದ್ದ ಈ ಧರ್ಮವನ್ನು ಆಂಧ್ರ-ಕರ್ನಾಟಕಗಳಿಗೂ ವಿಸ್ತರಿಸಿ ಭಾರತದ ಪ್ರಮುಖ ವೈದಿಕಮತತ್ರಯಗಳಲ್ಲಿ ಒಂದನ್ನಾಗಿಸಿದರು. ಆದ್ದರಿಂದಲೇ ಈ ವಿಶಿಷ್ಟಾದ್ವೈತವನ್ನು 'ರಾಮಾನುಜದರ್ಶನ' ಎಂದೇ ಕರೆಯುವ ಸಂಪ್ರದಾಯವೂ ಇದೆ.

ಇವರ ನಂತರವೂ ಈ ಧರ್ಮ ಅನೂಚಾನವಾಗಿ ಬೆಳೆಯಲು ರಾಮಾನುಜರು ೭೪ ಪೀಠಗಳನ್ನು ನೇಮಿಸಿ ಅಸಂಖ್ಯಾತ ಶಿಷ್ಯಕೋಟಿಯನ್ನು ಸೃಷ್ಟಿಸಿದ್ದಾರೆ. ಈ ಆಚಾರ್ಯಪೀಠಗಳು ಈ ಧರ್ಮವನ್ನು ಇನ್ನಷ್ಟು ಜಿಜ್ಞಾಸೆಗೆ ಒಳಪಡಿಸಿ ಕನ್ನಡ ಹರಿದಾಸ ಸಾಹಿತ್ಯದಲ್ಲಿ ಕಂಡುಬರುವ ದಾಸಕೂಟ – ವ್ಯಾಸಕೂಟದಂತೆ ಇಲ್ಲೂ ವೇದಪ್ರಮಾಣವನ್ನೇ ಮುಖ್ಯವಾಗಿ ಪರಿಗಣಿಸುವ 'ತೇಂಗಲೆ' ವಡಗಲೆ ಸಂಪ್ರದಾಯಗಳು ಬೆಳೆದುನಿಂತಿವೆ. ಇಂದು ಈ ಎರಡೂ ಸಂಪ್ರದಾಯಗಳಲ್ಲಿ ನೂರಾರು ಪೀಠಗಳ ಆಶ್ರಯದಲ್ಲಿ ಈ ಧರ್ಮೀಯರು ವಿಶಿಷ್ಟಾದ್ವೈತವನ್ನು ಆಚರಿಸುತ್ತ ಶ್ರೀವೈಷ್ಣವ ಧರ್ಮವನ್ನು ಪಾಲಿಸುತ್ತ ರಾಮಾನುಜ ದರ್ಶನವನ್ನು ಪ್ರಚಾರ ಮಾಡುತ್ತಾ ಆಳ್ವಾರರ ಭಕ್ತಿಮಾರ್ಗದಲ್ಲಿ ಮುನ್ನಡೆ-ಯುತ್ತಿದ್ದಾರೆ. ಇದರ ಸುಲಭೋಪಾಯವನ್ನು

ಸ್ವೀಕರಿಸಿ ಸಮಾಜದ ಇತರ ಮತೀಯರು ಈ ಧರ್ಮಾನುಯಾಯಿಗಳಾಗಿ ಇದರ ತತ್ವಗಳನ್ನನುಸರಿಸುವ ಮೂಲಕ ಇದನ್ನು 'ಜನಮತ'ವನ್ನಾಗಿಸಿದ್ದಾರೆ.

೪. ಶ್ರೀವೈಷ್ಣವ ಕೀರ್ತನಸಾಹಿತ್ಯದ ಲಕ್ಷಣಗಳು

ಸದ್ಯಕ್ಕೆ ಲಭ್ಯವಿರುವ ಶ್ರೀವೈಷ್ಣವಕೀರ್ತನೆಗಳನ್ನು ಪರಿಶೀಲಿಸಿದಾಗ ಇವು ದ್ವೈತ ಮತ್ತು ಅದ್ವೈತಕ್ಕಿಂತ ಭಿನ್ನವಾದ ಪರಿಭಾಷೆಯಲ್ಲಿಯೇ ರಚನೆಯಾಗಿರುವುದು ಕಂಡುಬರುತ್ತದೆ. ಶ್ರೀವೈಷ್ಣವ ತತ್ವವಾದ ಶರಣಾಗತಿ ಮಾರ್ಗ ಅಥವಾ ಪ್ರಪತ್ತಿ ಧರ್ಮ ಈ ಕೀರ್ತನೆಗಳ ಮುಖ್ಯ ಭಾವ. ಸಾಮಾನ್ಯವಾಗಿ ದ್ವೈತವೆಂದರೆ ಹರನನ್ನು ಒಪ್ಪಿಕೊಂಡು ಹರಿಸರ್ವೋತ್ತಮತ್ವವನ್ನು ಹೇಳುವುದೆಂದೂ ಅದ್ವೈತವೆಂದರೆ ಹರಿ-ಹರ ಅಭೇದವನ್ನು ಪ್ರತಿಪಾದಿಸುವುದೆಂದೂ ವಿಶಿಷ್ಟಾದ್ವೈತವೆಂದರೆ ಹರನಿರಾಕರಣೆಯೊಂದಿಗೆ ಹರಿಏಕನಿಷ್ಠೆಯನ್ನು ಸಾರುವುದೆಂದೂ ಗ್ರಹಿಸಬಹುದು. ಈ ತತ್ವಕ್ಕೆ ಅನುಗುಣವಾಗಿಯೇ ಶ್ರೀವೈಷ್ಣವ ಕೀರ್ತನೆಗಳಿವೆ. ಇಲ್ಲಿಯ ಗುರುಸ್ತುತಿ ಕೀರ್ತನೆಗಳೆಲ್ಲ ಶ್ರೀವೈಷ್ಣವ ಆಳ್ವಾರರು ಮತ್ತು ಆಚಾರ್ಯರ ಸ್ತುತಿಗಳಾಗಿ ಕನ್ನಡಸಾಹಿತ್ಯಕ್ಕೆ ಹೊಸ ಪರಿಭಾಷೆಯನ್ನು ನೀಡಿರುವುದನ್ನು ನೋಡಬಹುದು. ಶ್ರೀವೈಷ್ಣವ ಧರ್ಮದ ಮುಖ್ಯ ಸಾಹಿತ್ಯವಿರುವುದು ತಮಿಳಿನಲ್ಲಾದ್ದರಿಂದ ಆ ಧಾರ್ಮಿಕಕೃತಿಗಳ ಉಲ್ಲೇಖ ಅಲ್ಲಿಯ ಭಕ್ತರಾದ ಆಳ್ವಾರ್ - ಆಚಾರ್ಯರ ಜೀವನದ ರಸಮಯ ಸಂಗತಿಗಳ ಸೂಚನೆ ಈ ಕೀರ್ತನೆಗಳಲ್ಲಿ ಧಾರಾಳವಾಗಿ ಕಂಡುಬರುತ್ತದೆ. ಹರಿಯ ಅದರಲ್ಲೂ ವಿಶೇಷವಾಗಿ ಕೇಶವಾದಿ ದ್ವಾದಶನಾಮಗಳ ಸ್ತುತಿ ಇಲ್ಲಿ ಎದ್ದು ಕಾಣುವ ಸಂಗತಿಯಾಗಿದೆ. ಪ್ರಪತ್ತಿಧರ್ಮದ ತಿರುಳಾದ ನಾಮಸ್ಮರಣೆ, ಮಂತ್ರಮಹಿಮೆ, ಆತ್ಮಸಮರ್ಪಣೆ, ವಿರಕ್ತಿ, ಲೋಕಸುಖನಿರಾಕರಣೆ, ದೀನತೆ, ದಾಸ್ಯಮನೋಭಾವ, ಗುರುಮುಖೇನ ಹರಿದರ್ಶನ, ಹರಿಪಾದ ಸೇರುವ ಏಕೈಕ ಹಂಬಲ ಇತ್ಯಾದಿ ಭಾವಗಳು ಈ ದಾಸರ ಕೃತಿಗಳಲ್ಲಿ ಮಡುಗಟ್ಟಿ ನಿಂತಿರುವುದನ್ನು ಯಾರಾದರೂ ಸುಲಭವಾಗಿ ಗುರುತಿಸಬಹುದು.

ಶ್ರೀವೈಷ್ಣವ ಕೀರ್ತನಕಾರರು ಹರಿದಾಸವೃತ್ತಿಯನ್ನು ವೃತ್ತಿಯನ್ನಾಗಿ ಸ್ವೀಕರಿಸಿದವರಲ್ಲ. ಪ್ರಪತ್ತಿಯ ಮಾರ್ಗವಾಗಿ ಕಂಡುಕೊಂಡವರು. ಯಾವುದೇ ಗುರುವಿನ ಮೂಲಕ ಅಂಕಿತವನ್ನಾಗಲೀ ದೀಕ್ಷೆಯನ್ನಾಗಲೀ ಪಡೆದಿಲ್ಲ. ಅರ್ಚಾ ಮೂರ್ತಿಯನ್ನೇ ಅಂಕಿತವಾಗಿಟ್ಟುಕೊಂಡು ಮೋಕ್ಷಸಾಧನೆಯ ರೂಪವಾದ ಭಗವನ್ನಾಮ ಸ್ಮರಣೆಯನ್ನು ಆತ್ಮ ನಿವೇದನೆಯ, ಆತ್ಮ ಸಮರ್ಪಣೆಯ ಮೂಲಕ ಮಾಡುವ ಅಂತರಂಗಭಕ್ತಿ ಈ ಕೀರ್ತನೆಗಳಲ್ಲಿ ಹೊರಹೊಮ್ಮಿದೆ. ಇವರಿಗೆ ಶ್ರೀಹರಿಯೇ ಗುರು, ತಂದೆ, ಅಂಕಿತ, ಆರಾಧ್ಯದೈವ, ಸರ್ವಸ್ವ. ಆದ್ದರಿಂದಲೇ ಇದರಲ್ಲಿ ಗುರುಮುಖೇನ ಅಂಕಿತ ಹರಿದಾಸವೃತ್ತಿಯನ್ನು, ದೀಕ್ಷೆಯನ್ನು ಸ್ವೀಕರಿಸಿರುವ ನಿದರ್ಶನಗಳು ಕಂಡು ಬರುವುದಿಲ್ಲ. ಅದ್ವೈತ ಕೀರ್ತನಕಾರರಿಗೂ ಈ ಮಾತು ಅನ್ವಯವಾಗುವುದಲ್ಲದೆ ದ್ವೈತ ಕೀರ್ತನಕಾರರಲ್ಲೂ ಕೆಲವರಿಗೆ ಅನ್ವಯವಾಗುತ್ತದೆ. ಈ ಹಿನ್ನೆಲೆಯಲ್ಲಿ 'ಹರಿದಾಸರು' ಎಂಬ ಪದದ ಅರ್ಥವ್ಯಾಪ್ತಿಯನ್ನು ಪುನರ್‌ವ್ಯಾಖ್ಯಾನಿಸಬೇಕಾದ ಅಗತ್ಯವಿದೆ.

ಈವರೆಗಿನ ಕೀರ್ತನಕಾರರ ಬಗೆಗಿನ ಅಧ್ಯಯನಗಳೆಲ್ಲ ಮಧ್ವ ಸಂಪ್ರದಾಯದ ಕೀರ್ತನೆಯ ಹಿನ್ನೆಲೆಯಲ್ಲೇ ನಡೆದಿರುವುದರಿಂದ ಕನ್ನಡ ಸಾಹಿತ್ಯದಲ್ಲಿ ಮಧ್ವೇತರ ಸಂಪ್ರದಾಯಗಳೂ ಹೆಚ್ಚುಹೆಚ್ಚಾಗಿ ಕೂಡಿಕೊಳ್ಳುತ್ತಿರುವುದರಿಂದ ಹರಿದಾಸರನ್ನು ಗುರುತಿಸುವ ದೃಷ್ಟಿಕೋನವೇ ಬದಲಾಗಬೇಕಾಗಿದೆ. 'ಕ್ರಮಬದ್ಧವಾಗಿ ಗುರುವಿನಿಂದ ದಾಸದೀಕ್ಷೆಯನ್ನು ಅಂಕಿತವನ್ನು ವಿಠಲ ನಾಮವನ್ನು ಸ್ವೀಕರಿಸಿದವರಷ್ಟೇ ಹರಿದಾಸರು. ಉಳಿದವರು ತಮ್ಮ ನಾಮದ ಮುಂದೆ ದಾಸ ಎಂಬ ಪದವನ್ನು ಕೂಡಿಸಿಕೊಂಡವರಾದರೂ ಕೃತಿರಚನೆ ಮಾಡಿದ ಹರಿದಾಸರ ಶ್ರೇಣಿಗೆ ಸೇರುವುದಿಲ್ಲ.' (ಜಿ. ವರದರಾಜರಾವ್, ಶ್ರೀಪಾದರಾಜರ ಕೃತಿಗಳು ಪೀಠಿಕೆ) ಎಂಬಂತಹ ಭಿನ್ನತೆಯನ್ನು ತರುವ ಮನೋಭಾವದಿಂದ ದೂರಾಗಿ ಸಮಷ್ಟಿ ದೃಷ್ಟಿಯಿಂದ ದ್ವೈತ ಅದ್ವೈತ ವಿಶಿಷ್ಟಾದ್ವೈತ ಭೇದವಿವಕ್ಷೆಯಿಲ್ಲದೆ ಸಮನಾಗಿ ನೋಡಬೇಕಾಗುತ್ತದೆ. ದೀಕ್ಷಾಬದ್ಧರಾದವರ ರಚನೆಗಳು ಮಾತ್ರ 'ಕೃತಿಗಳು'. ಉಳಿದವರವು 'ಪದಗಳು' ಎಂಬ ಭೇದ ತೋರದೆ ಕೀರ್ತನೆಗಳ ರಚನೆ ಮಾಡಿರುವವರೆಲ್ಲರೂ ಕೀರ್ತನಕಾರರೇ,

ಹರಿದಾಸರೇ ಅವರ ರಚನೆಗಳೆಲ್ಲವೂ ಕೃತಿಗಳೇ, ಕೀರ್ತನೆಗಳೇ, ಹರಿದಾಸರ ಹಾಡುಗಳೇ ಎಂಬ ಧೋರಣೆಗೆ ಬರಬೇಕಾಗುತ್ತದೆ. ಇತ್ತೀಚೆಗೆ ವಿದ್ವಾಂಸರು ಇಂಥ ಪ್ರಯತ್ನ ಮಾಡುತ್ತಿರುವುದು ಆರೋಗ್ಯಕರ ಲಕ್ಷಣವಾಗಿದೆ.

'ಹರಿದಾಸ ಸಾಹಿತ್ಯ ಪ್ರಧಾನವಾಗಿ ಭಕ್ತಿಪರವಾದದ್ದು. ಭಗವದ್ಭಕ್ತನು ತನ್ನ ಆತ್ಮಶೋಧನೆಯನ್ನು ಮಾಡಿಕೊಂಡು ಭಗವಂತನ ಅನುಗ್ರಹಕ್ಕಾಗಿ ಹಗಲಿರುಳೂ ಹಂಬಲಿಸುತ್ತ, ಇಷ್ಟಾರ್ಥ ಸಿದ್ಧಿಯಾದಮೇಲೆ ತನ್ನ ದಿವ್ಯಾನುಭವವನ್ನು ಇತರರಿಗೂ ತಿಳಿಯಹೇಳಿ ಸಮಸ್ತರನ್ನೂ ಸಮಷ್ಟಿದೃಷ್ಟಿಯಿಂದ ಸಮೀಕ್ಷಿಸಿದಾಗ ಅಲ್ಲಿ ಆಯಾ ಹರಿದಾಸರ ಆತ್ಮಶೋಧನೆ ಅಪರೋಕ್ಷಾನುಭವ, ಭಗವಂತನನ್ನು ಅವರು ಆರಾಧಿಸುವ ನಾನಾ ವಿಧಾನಗಳು ಮೊದಲು ನಮ್ಮ ಮನಸ್ಸನ್ನು ಸೆಳೆಯುತ್ತವೆ.' (ಜಿ. ವರದರಾಜರಾವ್ ಶ್ರೀಪಾದರಾಜರ ಕೃತಿಗಳು ಪು.೨೦) ಎಂಬ ಹರಿದಾಸಸಾಹಿತ್ಯದಬಗೆಗಿನ ಸಾಮಾನ್ಯವಾದ ಅಭಿಪ್ರಾಯಕ್ಕೆ ಈ ಕೀರ್ತನೆಗಳೂ ಸಹಜವಾಗಿ ಸ್ಪಂದಿಸುತ್ತವೆ.

ಈ ಕೀರ್ತನೆಗಳಲ್ಲಿ ಆತ್ಮನಿವೇದನೆ, ಭಕ್ತಿಭಾವನೆಗಳು ಬೇರೆ ಯಾವ ಕೀರ್ತನೆಗಳಿಗೂ ಕಡಿಮೆಯಿಲ್ಲದಂತೆ ಅಭಿವ್ಯಕ್ತವಾಗಿರುವುದನ್ನು ಕಾಣಬಹುದು. (ತತ್ವಪ್ರತಿಪಾದನೆ, ದಾರ್ಶನಿಕ ಕೃತಿಗಳೂ ಇಲ್ಲದಿಲ್ಲ). ಭಗವಂತನ ಸ್ತುತಿಯನ್ನು ವಿವಿಧರೂಪದಲ್ಲಿ ಅದರಲ್ಲೂ ವಿಶೇಷವಾಗಿ ದ್ವಾದಶ ನಾಮ ಮತ್ತು ದಶಾವತಾರ ರೂಪದಲ್ಲಿ ಭಕ್ತಿ ಪರವಶತೆಯಿಂದ ಮಾಡಿರುವುದು ಈ ಕೀರ್ತನಕಾರರ ವೈಶಿಷ್ಟ್ಯ. ಇವರಿಗೆ ಹರಿ, ನಾರಾಯಣ, ರಾಮ, ಕೃಷ್ಣ ಅತ್ಯಂತ ಪ್ರಿಯವಾದ ಭಗವನ್ನಾಮ. ಭಗವಂತನನ್ನು ಸದಾ ಧ್ಯಾನಿಸುತ್ತಾ ಆರಾಧಿಸುತ್ತ, ಗೀತೆ, ಸ್ತುತಿ, ಪ್ರಬಂಧಗಳನ್ನು ಅಧ್ಯಯನ ಮಾಡುತ್ತ ಹಗಲಿರುಳೂ ಅವನ ನಾಮಸ್ಮರಣೆಯಲ್ಲೇ ತಲ್ಲೀನರಾಗಿರುವ ಈ ಕೀರ್ತನಕಾರರು ಒಂದಲ್ಲ ಹಲವುಬಾರಿ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಂಡು ಧನ್ಯರಾಗಿದ್ದಾರೆ. ಆ ವಿಶೇಷ ದರ್ಶನವನ್ನು–ಕನಸನ್ನು– ತಮ್ಮ ಕೀರ್ತನೆಗಳಲ್ಲಿ ಹಿಡಿದಿಟ್ಟಿದ್ದಾರೆ.

ಇವರ ಕೀರ್ತನೆಗಳಲ್ಲಿ ಸಮಾಜದರ್ಶನ, ಬದುಕಿನಬವಣೆಯ ಚಿತ್ರಣ ಇತರರಿಗಿಂತ ಸ್ವಲ್ಪ ಕಡಿಮೆಯೇ ಆದರೂ ಲೋಕನೀತಿಯನ್ನು ಹೇಳುವಲ್ಲಿ, ಸಾಮಾಜಿಕ ವಿಡಂಬನೆ ಮಾಡುವಲ್ಲಿ ಹಿಂದೆ ಬಿದ್ದಿಲ್ಲ. ಅತ್ಯಂತ ಸೂಕ್ಷ್ಮಜ್ಞರಾಗಿ ಹಲವಾರು ಅಪರೂಪದ ಮತ್ತು ನೂತನ ಪ್ರತಿಮೆಗಳ ಮೂಲಕ ಸಮಕಾಲೀನ ಸಮಾಜವನ್ನು ಸಾಮಾಜಿಕ ಸ್ವರೂಪವನ್ನು ಹಿಡಿದಿಡುತ್ತಾರೆ. ಪುರಂದರದಾಸರಷ್ಟೇ ಸಮರ್ಥವಾಗಿ ಆದರೆ ಅವರಿಗಿಂತ ಭಿನ್ನವಾಗಿ 'ರಾಗಿ' ಪ್ರತಿಮೆಯನ್ನು ದುಡಿಸಬಲ್ಲವರಾಗಿದ್ದಾರೆ. ಕುದುರೆ, ಯೋಗ, ಮಾತ್ರೆ, ತಾಳ, ರಸಾಯನ, ಸುರಾಪಾನ, ವೃಕ್ಷ, ಮುತ್ತು-ರತ್ನಗಳು, ಅಳು, ನಗು, ನಂಬಿಕೆ, ಹೀಗೆ ಹಲವು ಪ್ರತಿಮೆಗಳನ್ನು ಚಮತ್ಕಾರವಾಗಿ, ತಾತ್ವಿಕವಾಗಿ, ದಾರ್ಶನಿಕವಾಗಿ ಕಲ್ಪಿಸಿ ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಪ್ರಪತ್ತಿಯ ಮೂಲಕ ದೇವನಲ್ಲಿ ಸಂಪೂರ್ಣ ಶರಣಾಗತರಾಗಿ ಸಮಸ್ತವೂ – ತನ್ನ ರಕ್ಷಣೆಯೂ–ಭಗವಂತನದೆಂಬ ದಾಸ್ಯ ಭಾವದಲ್ಲಿದ್ದರೂ ಬದುಕಿನ ಜಂಜಾಟಗಳನ್ನು, ಸಮಾಜದ ದುಷ್ಕೃತ್ಯಗಳನ್ನು, ಮೌಲ್ಯಗಳ ಅಧಃಪತನಗಳನ್ನು ತಮ್ಮ ಕೃತಿಗಳಲ್ಲಿ ದಾಖಲಿಸುವ ಮೂಲಕ ಸಾಮಾಜಿಕ ಸ್ಪಂದನದಲ್ಲೂ ಇವರು ಹಿಂದೆ ಬಿದ್ದಿಲ್ಲ. ಆಚಾರ – ವಿಚಾರಗಳು, ನಡೆ – ನುಡಿ, ಕೌಟುಂಬಿಕ ವ್ಯವಸ್ಥೆ, ಮೇಲು – ಕೀಳು, ಜಾತಿ – ಕುಲ, ಮಾನವ ಸಂಬಂಧ ಹೀಗೆ ಹಲವು ಸಾಮಾಜಿಕ ದೃಷ್ಟಿಗಳು ಇವರ ಕೀರ್ತನೆಗಳಲ್ಲಿವೆ.

ಕೀರ್ತನ ಸಾಹಿತ್ಯದಲ್ಲಿ ಬರುವ ಸುಳಾದಿ, ಉಗಾಭೋಗ, ಮುಂಡಿಗೆ, ದಂಡಕ, ಮೂರ್ತಿಧ್ಯಾನ ಅಥವ ಚೂರ್ಣಿಕೆ, ಜಾವಳಿ, ಜಾನಪದ ಧಾಟಿ, ತತ್ವಪದ ಹೀಗೆ ಎಲ್ಲ ಸ್ವರೂಪದ ಕೃತಿಗಳನ್ನು ಈ ಕೀರ್ತನಕಾರರೂ ರಚಿಸಿದ್ದಾರೆ. ಸರಳಶೈಲಿಯ ಕೀರ್ತನೆಗಳಿಂದ ಹಿಡಿದು ರಾಗ – ತಾಳ – ಪ್ರಾಸಬದ್ಧ, ಶಾಸ್ತ್ರನಿಷ್ಠ, ಸಂಗೀತ – ನಾಟ್ಯಪ್ರಧಾನಕೃತಿಗಳವರೆಗೆ ಕೀರ್ತನೆಗಳಿವೆ. ಜಾನಪದ ಶೈಲಿ, ಭಾವನಾತ್ಮಕ, ಬೋಧಪ್ರದ, ವರ್ಣನಾಪ್ರಧಾನ, ಭಾವಗೀತಾತ್ಮಕ, ಪ್ರಕೃತಿಚಿತ್ರಣ ಹೀಗೆ ಎಲ್ಲ ವಿಧದ ರಚನೆಗಳನ್ನೂ ಕಾಣಬಹುದು. ಹಾಗೆಯೇ ಭಾಷಿಕವಾಗಿ ದೇಸೀಕನ್ನಡ – ಸಂಸ್ಕೃತಭೂಯಿಷ್ಟವಾದ ಕೃತಿಗಳ ಜೊತೆಗೆ ಭಿನ್ನ ಭಾಷೆಗಳ ಸಮ್ಮಿಶ್ರಣದಲ್ಲಿ ರಚನೆಯಾಗಿರುವ ಅತ್ಯಂತ ವಿಶಿಷ್ಟವಾದ ಕೀರ್ತನೆಗಳಿವೆ. ಇದರಿಂದ ಈವರೆಗಿನ

ಕೀರ್ತನ ಸಾಹಿತ್ಯಕ್ಕೆ ಯಾವ ರೀತಿಯಲ್ಲೂ ಕಡಿಮೆಯಿಲ್ಲದಂತೆ, ಸರಿಸಾಟಿ ಯಾಗುವಂತೆ ಶ್ರೀವೈಷ್ಣವ ಹರಿದಾಸ ಸಾಹಿತ್ಯವೂ ಇದೆ ಎಂಬುದನ್ನು ಸುಲಭವಾಗಿ ಗ್ರಹಿಸಬಹುದಾಗಿದೆ. ಕೀರ್ತನ ಸಾಹಿತ್ಯವನ್ನು ಸಾಮಾನ್ಯವಾಗಿ ವಿಭಾಗಿಸಬಹುದಾದ ಅ) ಆತ್ಮನಿವೇದನೆ ಆ) ತತ್ವಪ್ರತಿಪಾದನೆ ಇ) ಉಪದೇಶಾತ್ಮಕ – ಈ ಮೂರು ಮುಖ್ಯ ವಿಭಾಗಗಳಲ್ಲಿ ಈ ಕೀರ್ತನೆಗಳೂ ವಿಭಾಗಗೊಳ್ಳುತ್ತವೆಯಲ್ಲದೆ ಉಳಿದವುಗಳಿಗಿಂತ ಭಿನ್ನವಾಗಿ ಹರಿಏಕ ನಿಷ್ಠೆ, ಆಳ್ವಾರ್–ಆಚಾರ್ಯ ಸ್ತುತಿ, ಶರಣಾಗತಿ–ಮಂತ್ರಮಹಿಮೆ, ನಾಮಸ್ಮರಣೆ, ಧ್ಯಾನಧಾರಣೆ, ದೈನ್ಯತೆ–ಗಳ ಮೂಲಕ ತಮ್ಮ ವಿಶಿಷ್ಟತೆಯನ್ನು ಕಾಯ್ದು ಕೊಳ್ಳುತ್ತವೆ.

ಶ್ರೀವೈಷ್ಣವ ಹರಿದಾಸರ ಎಲ್ಲ ಕೀರ್ತನೆಗಳೂ ಶರಣಾಗತಿ ತತ್ವದ ಲಕ್ಷಣವಾದ ಆತ್ಮಶೋಧನೆ, ದೈನ್ಯತೆ, ಆತ್ಮಸಮರ್ಪಣೆ, ಹರಿ–ಗುರುಪಾದ ಸೇವನೆಯ ಭಾವದಿಂದ ತುಂಬಿವೆ. ಈ ಶರಣಾಗತಿಭಕ್ತಿಯ ಮೂಲಕ ದೈವಸಾನ್ನಿಧ್ಯ ಸೇರಿರುವ ಪುರಾಣ ಪ್ರತಿಮೆಗಳನ್ನು ವಿವಿಧ ರೀತಿಯಲ್ಲಿ ಹೋಲಿಸಿಕೊಂಡು ಹರಿಧ್ಯಾನವೊಂದನ್ನೇ ಧಾರಣ ಮಾಡಿಕೊಂಡು ತಮ್ಮ ಅಸ್ತಿತ್ವವನ್ನು ನಿರಾಕರಿಸಿ, ಲೋಕಾಸಕ್ತಿಯನ್ನು ತ್ಯಜಿಸಿ, ದೈವದತ್ತ ತುಡಿಯುವುದೇ ಇವರ ಗುರಿ. ಜೀವಸುಖ ಬೇಡದ, ಮರುಜನ್ಮವಿಲ್ಲದ, ಶಾಶ್ವತ ಮುಕ್ತಿಯ ಮಾರ್ಗದ ಸಾಧಕರಾಗಿ ಈ ದಾಸರು ನಿಲ್ಲುತ್ತಾರೆ.

ಈ ಶರಣಾಗತಿ ಧರ್ಮದ ಎಲ್ಲ ತಿರುಳನ್ನು ಅಹೋಬಲದಾಸರು ಈ ಕೃತಿಯಲ್ಲಿ ತತ್ವಪದದ ಧಾಟಿಯಲ್ಲಿ ಸೊಗಸಾಗಿಸಿದ್ದಾರೆ.

ಧ್ಯಾನ ಧಾರಣನಾಗಬೇಕಂತೆ ಪ್ರಪಂಚದೊಳಗೆ
ದೀನನಾನಾದಡೆ ಮುಖ್ಯ ಸಾಕಂತೆ ಪ

ಪ್ರಾಣ ಪಾನ ಸಮಾನ ವ್ಯಾನವು
ದಾನ ಹೀಗೆಂದೆಂಬೊ ಪಂಚಕ
ನೀನೆ ನಿನ್ನೊಳು ಹುಡುಕಿ ದಿವ್ಯ
ಜ್ಞಾನಗುರುಗಳು ತೋರಿಸಿದು ನಿಜ ೧

ಆಗ ನೀನದ ಕಾಣಬಹುದಂತೆ ಆಧ್ಯಾತ್ಮ ಸತ್ಯವು
ಯೋಗವೆ ನಿಜ ತಾನಹುದಂತೆ
ಭಾಗವತಗಿದು ಮುಖ್ಯವೆನ್ನುತ
ಬಾಗಿನಡೆದ ಅವಿಜ್ಞನಿಗೆ ಅದು
ಭೋಗಿಭೂಷಣ ಸರ್ವ ಸಾಕ್ಷಿ ಸ-
ರಾಗ ಮುದ್ರೆ ಸಮಾಧಿ ಹೊಂದುವ ೨

ಸ್ಮರಣೆ ನಿಂತೊಡೆ ಧ್ಯಾನ ಸಾಕಂತೆ ಅಭಯ ಪ್ರಸಿದ್ಧವು
ಕರಣನಿಗ್ರಹ ನಿನಗೆ ಬಹುದಂತೆ
ಧರಣಿ ಮದ್ಗುರು ತುಳಸಿರಾಮ ದಾ
ಸರಪ್ಪಣೆಗೊಳುಹಲಾತನ
ಚರಣ ಸೇವೆಯೊಳಿರುತಿಹುದೆ ನಿಜ
ಪರಮಪದವಿದು ಸತ್ಯನಿತ್ಯವು ೩

ಶ್ರೀನಿವಾಸ ನಿನ್ನ ದಾಸನು ನಾನಲ್ಲವೇ
ಮಾನ ಪ್ರಾಣಗಳಿಗೆ ದೊರೆಯು ನೀನಲ್ಲವೇ

ಎಂದು ಸರ್ವಸ್ವವನ್ನೂ ಭಗವಂತನಿಗರ್ಪಿಸಿ ಅವನ ಮತ್ತು ಅವನ ಭಕ್ತರ ಪಾದಸೇವನೆಮಾಡುತ್ತ ದೀನನಾಗಿ ನಡೆದುಕೊಳ್ಳುವ ಈ ತತ್ವದ ಭಕ್ತರೆಲ್ಲರ ಲೋಕಸುಖತ್ಯಾಗ ಹೀಗಿರುತ್ತದೆ.

'ಧರೆಯ ರಾಜ್ಯವನೊಲ್ಲೆ ಸಿರಿಯ ಸಂಪದವೊಲ್ಲೆ
ಸುರರು ಭೋಗಿಪ ಸುರಪುರವ ನಾನೊಲ್ಲೆ
ಪರಮೇಷ್ಠಿಪುರದೊಳಗಿರಲು ನಾನೊಲ್ಲೆ ನಿನ್ನ
ಹೊರತಾದ ಕೈವಲ್ಯ ಸ್ಥಿರವೊಲ್ಲೆನಾ' (೮)

ಆವಾವ ಪರಿಯಲಿ ರಾಮನಾಮವನು
ಆವ ಪರಿಯಲಿ ನೆನೆದು ಸುಖಿಯಾಗು ಮನವೆ (೮)

ಶ್ರೀನಿವಾಸನ ಮೂಲನಾಮವ ಸೊಗಸಿನಿಂದ
ಗಾನ ಮಾಳ್ಪ ಧೀರನಾವನೋ (ವೆಂ)

ಓಂ ನಮೋ ನಾರಾಯಣಾಯ
ಎನ್ನುವ ನಾಮದ ಬೀಜವನು ರಾ
ಮಾನುಜ ಬೆಳೆದ ಧರೆಯೊಳಗೆ (ನಾ)

ಮೂಲಮಂತ್ರವ ಜಪಿಸು ಅರ್ಹತೆಯಿರುವಂತೆ (ಇ)

ತಿರುಮಂತ್ರದ್ವಯರ್ಥದ್ವವ ಬೋಧಿಸಿ (ರಂ)

ಮುಂತಾದ ಕೀರ್ತನೆಗಳಲ್ಲಿ ಈ ತತ್ವದ ಶರಣಾಗತಿಗೆ ಸಾಧನವಾದ 'ಮಂತ್ರ ಮಹಿಮೆ', 'ನಾಮ ಸ್ಮರಣೆಗಳು' ಹೇರಳವಾಗಿ ಗೋಚರವಾಗುತ್ತವೆ.

ಸೃಷ್ಟಿನಾಥಪದಯುಕ್ತರ ಭಕ್ತಿಯು
ಕೊಟ್ಟರಭೀಷ್ಟವು ಎನಗಯ್ಯ
ಇಷ್ಟರ ಮೇಲಿನ್ನು ಲಕ್ಷ ಕೊಟ್ಟರು ಎನ
ಗಿಷ್ಟವಿಲ್ಲ ಶ್ರೀಕೃಷ್ಣಯ್ಯ. (ವೆಂ)

ಎಂಬಷ್ಟು ಅಚಲವಾದ ನಿಷ್ಠೆ ಈ ದಾಸರ ಶರಣಾಗತಿಗೆ. ತನ್ನನ್ನು ತಾನು ದೇವನಲ್ಲಿ ಅರ್ಪಿಸಿಕೊಂಡನೆಂದರೆ ಆ ನಿಷ್ಠೆಗೆ ಎಂದೂ ಕುಂದಾಗದಂತೆ ನಡೆದುಕೊಳ್ಳುವ ವ್ರತ ಈ ಪ್ರಪತ್ತಿ. ಅದಕ್ಕಾಗಿಯೇ ಅಸಾಧ್ಯವಾದ ದೈನ್ಯತೆ, ದಾಸ್ಯ ಪ್ರವೃತ್ತಿ, ತನ್ನದೇನೂ ಇಲ್ಲ ಎಂಬ ನಿವೃತ್ತಿ, ಬದುಕಿನ ನಿರಾಸಕ್ತಿ, ದೇವ - ದೈವಭಕ್ತರ ಪಾದಸೇವನೆಯೊಂದೇ ಮುಕ್ತಿಗೆ ದಾರಿ ಎಂಬ ಅಚಲ ನಂಬಿಕೆ ಈ ದಾಸರಲ್ಲಿ ಎದ್ದು ಕಾಣುವುದು ಈ ತತ್ವ ನಿಷ್ಠೆಯಿಂದಲೇ. (ಕನಕದಾಸರಲ್ಲೂ ಕಾಣುವುದು ಇದನ್ನೇ, ಕನಕದಾಸರು ವಿಶಿಷ್ಟಾದ್ವೈತ ತತ್ವಾನುಯಾಯಿಗಳೇ ವಿನಾ ಮಧ್ವ (ದ್ವೈತ) ತತ್ವಾನುಯಾಯಿಗಳಲ್ಲ ಅದಕ್ಕಾಗಿಯೇ ಅವರು ಪುರಂದರರಿಗಿಂತ ಭಿನ್ನವಾಗಿ ತೋರುವುದು).

ಇವರ ಆತ್ಮನಿವೇದನೆಯ ಕೃತಿಗಳು ಸಮರ್ಪಣೆಯ ಭಾವದಿಂದ ಸಾರ್ಥಕತೆಯನ್ನು ಪಡೆದಿವೆ. ಅದು ಗರುಡ, ಹನುಮಂತ, ಲಕ್ಷ್ಮಣರಂತೆ ಕಷ್ಟಗಳನ್ನು ಸಂತೋಷವಾಗಿ ಅನುಭವಿಸುತ್ತ, ವಿರಾಮವಿಲ್ಲದೆ ಸೇವೆಗೈಯುತ್ತ ಆನಂದಿಸಬಹುದು. ಕೌಸಲ್ಯೆ, ದೇವಕಿ, ಯಶೋದೆ, ಪೆರಿಯಾಳ್ವಾರರಂತೆ ದೇವರನ್ನು ಮಗುವಾಗಿ ಭಾವಿಸಿ, ಪ್ರೀತಿಸಿ ಮಾತೃವಾತ್ಸಲ್ಯದ ಆರೈಕೆ ಮಾಡಬಹುದು. ಆಂಡಾಳ್, ರಾಧೆ, ನಮ್ಮಾಳ್ವಾರರಂತೆ ಭಗವಂತನನ್ನು ಪತಿ ಎಂದು ಭಾವಿಸಿ ಸತಿ – ಪತಿ ಭಾವದ ಪ್ರೇಮ–ವಿರಹದಲ್ಲಿ ಮುಳುಗಬಹುದು. ಬಲಿ, ತಿರುಪ್ಪಾಣಾಳ್ವಾರ್, ತೊಂಡರಡಿಪ್ಪಡಿಯಾಳ್ವಾರರಂತೆ ಸರ್ವಸ್ವವನ್ನೂ ಸಮರ್ಪಿಸಿ ಅಡಿಯಾಳಾಗಬಹುದು. ಅಂಬರೀಷ, ವಿಭೀಷಣ, ಸುಗ್ರೀವರಂತೆ ಶರಣಾಗತಿ ಮಾಡಬಹುದು. ಅರ್ಜುನನಂತೆ ಸಖನಾಗಿರಬಹುದು. ಪ್ರಹ್ಲಾದ, ಶುಕ, ಧ್ರುವ, ಜನಕರಂತೆ ಏಕಚಿತ್ತದಿಂದ ಸ್ತುತಿಸಿ ಕಾರುಣ್ಯ ಸಂಪಾದಿಸಬಹುದು; ಅಜಾಮಿಳ, ವಾಲ್ಮೀಕಿ, ಗಜೇಂದ್ರ ದ್ರೌಪದಿಯರಂತೆ ನಾಮಸ್ಮರಣೆಯಿಂದಲೇ ಇಚ್ಛಿಸಿದುದನ್ನು ಪಡೆಯಬಹುದು. ಕುಬ್ಜೆ, ಕುಚೇಲ, ವಿದುರ, ಶಬರಿ, ಗೋಪಿಕೆಯರು, ಶಿಬಿ, ಜಟಾಯು, ಅಕ್ರೂರ, ಅಹಲ್ಯೆಯರಂತೆ ಅನನ್ಯವಾಗಿ ಸ್ತುತಿಸುತ್ತಾ ದೈವದರ್ಶನಕ್ಕಾಗಿ ಕಾಯುತ್ತಾ ಮುಕ್ತಿಪಡೆಯಬಹುದು. ಹಿರಣ್ಯಾಕ್ಷ, ಕಶಿಪು, ರಾವಣ, ಶಿಶುಪಾಲ, ದುರ್ಯೋಧನರಂತೆ ದ್ವೇಷಿಸುತ್ತ ನಿಂದಿಸುತ್ತಲೂ ದೇವರನ್ನು ಕಾಣಬಹುದು. ಹೀಗೆ ಎಲ್ಲ ರೀತಿಯ ದಿವ್ಯದರ್ಶನದ ಮಾರ್ಗಗಳನ್ನು ಶರಣಾಗತಿಯ ತಳಹದಿಯ ಮೇಲೆ ಕಲ್ಪಿಸಿಕೊಂಡು ಆತ್ಮವನ್ನು ಪರಿಪರಿಯಾಗಿ ದೇವರಿಗೆ ಸಮರ್ಪಿಸುತ್ತ ನವವಿಧಭಕ್ತಿಯ ಮೂಲಕ ಮೋಕ್ಷಕ್ಕಾಗಿ ಹಾತೊರೆಯುವುದೇ ಈ ಕೀರ್ತನಕಾರರ ಪರಮಗುರಿಯಾಗಿರುತ್ತದೆ. ಪುರಾಣ ಪ್ರತಿಮೆಗಳಿಲ್ಲದ ಕೀರ್ತನೆಗಳೇ ಇಲ್ಲ ಎನ್ನುವಷ್ಟು ಬಾಹುಳ್ಯದಿಂದ ಮೇಲಿನ ಎಲ್ಲ ಭಕ್ತರ, ಆಳ್ವಾರರ ನಿದರ್ಶನಗಳನ್ನು ಯಥೇಚ್ಛವಾಗಿ ತರುತ್ತಾರೆ. ಭಗವಂತನ ಲೀಲಾವಿಲಾಸಗಳನ್ನು – ಅದು ಈ ಭಕ್ತರಿಗೆ ಒಲಿದದ್ದೂ ಆಗಿರಬಹುದು–ಶಿಷ್ಟ ನಿಗ್ರಹವಾಗಿರಬಹುದು – ಕೃಷ್ಣನ ಲೀಲೆಗಳಾಗಿರಬಹುದು–ಮನ ತುಂಬಿ ಸ್ತುತಿಸುವ ಭಾವಪರವಶತೆಯನ್ನು ಈ ಕೀರ್ತನೆಗಳಲ್ಲಿ ಕಾಣಬಹುದು.

ತತ್ವಪ್ರತಿಪಾದನೆಯನ್ನೇ ನೇರವಾಗಿ ಮಾಡಿರುವ ತಾತ್ವಿಕ, ದಾರ್ಶನಿಕ ಕೃತಿಗಳೂ ಪ್ರತ್ಯೇಕವಾಗಿ ಈ ಕೀರ್ತನಕಾರರಲ್ಲಿ ಕಂಡುಬಂದರೂ ಆತ್ಮ ನಿವೇದನೆಯ ಕೃತಿಗಳೆಲ್ಲವೂ ತತ್ವ ಪ್ರತಿಪಾದನೆಯ ಕೃತಿಗಳೂ ಆಗಬಲ್ಲವು. ಏಕೆಂದರೆ ಆತ್ಮ ನಿವೇದನೆಯ ಕೀರ್ತನೆಗಳನ್ನು ಈ ಕೀರ್ತನಕಾರರು ಶ್ರೀವೈಷ್ಣವ ತತ್ವವಾದ ಶರಣಾಗತಿಯ ತಳಹದಿಯ ಮೇಲೆಯೇ ಕಟ್ಟಿರುತ್ತಾರೆ. ಶ್ರೀವೈಷ್ಣವ ಮತಕ್ಕೆ ಈ ಪ್ರಪತ್ತಿಯೇ ಮೂಲಾಧಾರ, ಶರಣಾಗತಿ ಎಂಬುದು ಅತ್ಯಂತ ಸರಳವಾದ ಆದರೆ ಅಷ್ಟೆ ಕಠಿಣವಾದ ಭಕ್ತಿಯ ಮಾರ್ಗ. ಸುಖಾಪೇಕ್ಷೆ ತೊರೆದು ತನ್ನದೇನೂ ಇಲ್ಲವೆನ್ನುವ, ನಾನು ನಾನಲ್ಲವೆಂಬ ಸ್ಥಿತಿ.

ತನ್ನ ರಕ್ಷಣೆಯ ಹೊಣೆಯನ್ನು ಭಗವಂತನ ಮೇಲೆ ಹಾಕಿ ತಾನು ನಿಶ್ಚಿಂತನಾಗಿ (ತನ್ನ ರಕ್ಷಣೆಯಿಂದ ಮತ್ತು ಲೌಕಿಕ ಜೀವನದಿಂದ) ಶ್ರೀಹರಿಯೊಬ್ಬನನ್ನೇ ಧ್ಯಾನಿಸುತ್ತಾ ಭಗವಂತನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುವುದೇ ಪ್ರಪತ್ತಿಯ ಸಾಧನೆ. ತತ್ವ – ಹಿತ – ಪುರುಷಾರ್ಥಗಳೆಲ್ಲ ನಾರಾಯಣನ ನಾಮೋಚ್ಚಾರಣೆಯೇ. ಅನ್ಯ ಮಾರ್ಗವಿಲ್ಲದೆ, ಅನ್ಯ ದೈವ ಕಲ್ಪನೆಯಿಲ್ಲದೆ ಪರಮಾತ್ಮನೇ ಸರ್ವೋತ್ತಮನೆಂದು ನಂಬಿ, ಅವನ ಪ್ರಾಪ್ತಿಗಾಗಿ ಸರ್ವಸ್ವವನ್ನೂ ತ್ಯಜಿಸಿ ಅವನ ಸಾಕ್ಷಾತ್ಕಾರವೇ ತನ್ನ ಜೀವಿತದ ಪರಮಗುರಿಯಾಗಿಸಿ ಅವನ ಧ್ಯಾನವನ್ನೇ ಸದಾಕಾಲಮಾಡುತ್ತಾ ಇರುವುದೇ ಶರಣಾಗತಿ ಮಾರ್ಗದ ಧರ್ಮ. ಈ ಧರ್ಮದ ಪ್ರತಿಪಾದನೆಯಾಗಿ ಇವರ ಒಂದೊಂದು ಕೃತಿಗಳೂ ನಿಲ್ಲುತ್ತವೆ. ಇದರ ಸಾಧನೆಗಾಗಿ 'ರಹಸ್ಯತ್ರಯ ಮಂತ್ರ'ವನ್ನು ಅನುಸಂಧಾನಮಾಡುವುದೇ ಈ ಭಕ್ತನ ಉಪಾಸನೆ. ಈ ತತ್ವಗಳನ್ನು ಸಾರಿರುವ ಆಳ್ವಾರರ–ಆಚಾರ್ಯರ ಸ್ತುತಿ ಮತ್ತು ನಾಮಮಹಿಮೆ ಇವರ ಕೃತಿಗಳಲ್ಲಿ ಮೇಲಿಂದಮೇಲೆ ಬರುತ್ತವೆ.

ಶ್ರೀವೈಷ್ಣವ ತತ್ವಗಳನ್ನು ಅವುಗಳ ಒಳಗುಟ್ಟುಗಳನ್ನು ಅತ್ಯಂತ ಸರಳವಾಗಿ ನೇರವಾಗಿ ಸ್ಪಷ್ಟವಾಗಿ ಕೀರ್ತನಸಾಹಿತ್ಯದಲ್ಲಿ ತರುವುದರ ಮೂಲಕ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ ತತ್ವವನ್ನು ಸೊಗಸಾಗಿ ಮೂಡಿಸಿರುವ ಪ್ರಮುಖ ದಾಖಲೆಗಳಾಗಿ ಇವು ನಿಲ್ಲುತ್ತವೆ. ಶ್ರೀವೈಷ್ಣವ ತತ್ವದ ಎಲ್ಲ ಪ್ರಮೇಯಗಳನ್ನೂ

ಇವುಗಳಲ್ಲಿ ತರಲಾಗಿದೆ. ಆಳ್ವಾರರು – ಆಚಾರ್ಯರು ಈ ಶ್ರೀ ವೈಷ್ಣವ ತತ್ವದ ಮೂಲ ಪ್ರತಿಪಾದಕರು. ಈ ತತ್ವಾನುಯಾಯಿಗಳಿಗೆ ಇವರೇ ಗುರುಗಳು. ಇವರನ್ನು ಹೊರತಾಗಿ ಅನ್ಯಗುರುಗಳ ಸ್ತುತಿ ಇವರಲ್ಲಿ ಕಂಡುಬರುವುದಿಲ್ಲ. ಇಲ್ಲಿಯ ಗುರುಸ್ತುತಿಯ ಇನ್ನೊಂದು ವಿಶೇಷ ಗುರುವನ್ನು ದೈವಸಮಾನವಾಗಿ ಸ್ವೀಕರಿಸಿರುವುದು, ಇವರ ಪಾದಸೇವನೆಯೇ ಮುಕ್ತಿಗೆ ದಾರಿ ಎಂಬ ಅಚಲನಂಬಿಕೆಯಿರುವುದು. ಈ ಆಳ್ವಾರಾಚಾರ್ಯರು ಮತ್ತು ದಾಸರನ್ನೂ ಗುರುಗಳಾಗಿ ಸ್ವೀಕರಿಸುವವರೆಗೂ ಈ ಭಾವವಿರುತ್ತದೆ. ಈ ಗುರುಸ್ತುತಿಯ ರೂಪದಲ್ಲಿರುವ ಆಳ್ವಾರ್–ಆಚಾರ್ಯರ ಸ್ತುತಿ ಈ ಕೀರ್ತನೆಗಳ ಬಹಳ ಮುಖ್ಯ ವೈಶಿಷ್ಟ್ಯವಾಗಿದ್ದು, ಕನ್ನಡ ಕೀರ್ತನೆಗಳಿಗೆ ಹೊಸ ಓದನ್ನು, ಪರಿಕಲ್ಪನೆಯನ್ನು ಒದಗಿಸುವಲ್ಲಿ ಇದು ಯಶಸ್ವಿಯಾಗಿದೆ.

'ಆಚಾರ್ಯ ಪ್ರಾಚಾರ್ಯ ಪರಮಾಚಾರ್ಯ'
'ಆಳ್ವಾರ್ ತಿರುವಡಿಗಳೆ ಶರಣೆನ್ನುತ
ಬಾಳ್ವರು ಭಜಿಪುದು ಭಕುತಿಯಲಿ'
'ವಕುಳಾಭರಣನೆ ಶರಣೆಂಬೆ'

'ನಾಥವಾನಸ್ಮಿ ವಿಪ್ರನಾರಾಯಣೇನ'
'ಶ್ರೀಗೋದಾದೇವಿ ಶ್ರೀಭೂನೀಳಾ ಆಂಡಾಳ್ ದೇವಿ'
'ರಾಮಾನುಜಾಚಾರ್ಯ ಮೌನಿವರ್ಯ
ನೇಮದಿಂದಲಿ ಗೈದೆ ನಾಂ ಸ್ವಾಮಿಕಾರ್ಯ'

ಮುಂತಾದ ಇನ್ನೂ ಹಲವು ಕೃತಿಗಳಲ್ಲಿ ಈ ಬಗೆಯ ನೂತನ ಗುರುಸ್ತುತಿ ಸ್ವರೂಪವನ್ನು ಕಾಣಬಹುದು. ವಿಶಿಷ್ಟಾದ್ವೈತ ಮತದ ಎಲ್ಲ ಲಕ್ಷಣಗಳನ್ನೂ ಈ ಕೃತಿಯಲ್ಲಿ ಯಶಸ್ವಿಯಾಗಿ ಹಿಡಿದಿಟ್ಟಿರುವುದನ್ನು ನೋಡಬಹುದು.

ವಿಶಿಷ್ಟಾದ್ವೈತ ಮತವೇ ಮತವು
ವಿಷ್ಣುಪದವೇ ಶಾಶ್ವತ ಪದವು ಪ.

ವಸಿಷ್ಠ ನಾರದ ಸನಕಾದಿ ವಂದನ
ವಿಶಿಷ್ಟ ಪರಿಗ್ರಹ ವೇದಾಂತಸಾರದ ಅ.ಪ.

ಅಸೇತು ಹಿಮಾಚಲ ವಿಶೇಷದ
ವಿಶೇಷ ಪ್ರಮಾಣ ಚತುಷ್ಟಯದ ೧

ಚಿತ್ತು ಅಚಿತ್ತೀಶ್ವರ ತತ್ವವನು
ಪ್ರತ್ಯೇಕವಾಗಿಯೇ ಬೋಧಿಸಿಹ ೨

ಪರ ವ್ಯೂಹ ವಿಭವಾಂತರ್ಯ ಅರ್ಚಾ
ಪರಿಪರಿ ರೂಪದ ಶ್ರೀಹರಿ ಪೂಜನ ೩

ರಹಸ್ಯತ್ರಯ ಮಂತ್ರ ವಿಶಿಷ್ಟದ
ಸಹಮತ ಸುಲಭೋಪಾಯ ವಿಧಾನದ ೪

ಹರ ಅಜ ಸುರರೆಲ್ಲರು ಹರಿಮತ
ಹರಿಯೊಬ್ಬನ ಪಾದವೆ ಮೋಕ್ಷಪಥದ ೫

ಪ್ರಪತ್ತಿಮಾರ್ಗದ ಪ್ರಧಾನ ಧರ್ಮದ
ಉಪವೃತ್ತಿಯ ಬೇಡದ ಶರಣಾಗತಿಯ ೬

ಸತತವು ಹೆಬ್ಬಾಜಿ ಕೇಶವನಾಮ
ನುತಿಸಿದವನ ಭವಬಂಧನ ಬಿಡಿಸುವ ೭

(ನಾರಾಯಣ ಶರ್ಮ – ೪೮೪)

'ನೀನಾರು ನಾನಾರು ನೀನೆನ್ನೊಳಿರಲು'

'ನೀನೆನ್ನೊಳಡಗಿಹೆಯೋ ರಂಗಯ್ಯ ನಾನಿನ್ನೊಳಡಗಿಹೆನೊ,'

ಮುಂತಾದ ಕೀರ್ತನೆಗಳ ಮೂಲಕ ದೇವ –ಜೀವಗಳ ಸಂಬಂಧದ ವಿಶಿಷ್ಟಾದ್ವೈತ ದೃಷ್ಟಿಯಾದ ಜೀವ–ಜಡಗಳೆರಡೂ 'ದೇವನಲ್ಲಿ ಲೀನವಾಗಿವೆ.

ಇವುಗಳನ್ನು ವಿಶೇಷಣವಾಗಿ ಹೊಂದಿರುವ ವಿಶ್ವವ್ಯಾಪಕ ರೂಪ ಶ್ರೀಹರಿ' ಎಂಬುದನ್ನು ಈ ಕೀರ್ತನೆಗಳು ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ. ಪುರಂದರ ದಾಸರ–

ಎರಡೂ ಒಂದಾಗದು ರಂಗ ಪ

ಎರಡು ಒಂದಾಗದು ಎಂದೆಂದಿಗು ರಂಗ ಅ.ಪ

ಒಂದೆ ವೃಕ್ಷದಲಿ ಎರಡು ಪಕ್ಷಿಗಳು
ಒಂದೇ ಗೂಡಿನಲಿ ಇರುತಿಹವು.......

ಎಂದು ಸಾರುವ ದ್ವೈತಪ್ರತಿಪಾದನೆಯಂತೆ ಅಷ್ಟೇ ಸ್ಪಷ್ಟವಾಗಿ ಆಸೂರಿ ರಾಮಸ್ವಾಮಿ ದಾಸರೂ ಈ ತತ್ವವನ್ನು ಒಂದು ಕೃತಿಯಲ್ಲಿ ನಿರೂಪಿಸಿದ್ದಾರೆ.

ಒಂದಿಲ್ಲದಮೇಲೆರಡುಂಟೆ ಭಕ್ತಿ
ಒಂದಲ್ಲದೆ ಹರಿಯೊಲವುಂಟೆ ಪ

ಒಂದಲ್ಲದೆ ರುಚಿ ಔಷಧಿಯುಂಟೆ
ನೊಂದಲ್ಲದೆ ರಂಗಾ ಎಂಬುವುದುಂಟೆ ಅ.ಪ

ಗಿಡ ಮರವಾಗದೆ ಕ್ರಿಮಿಯಾಗುವೆನೆ
ಅಡವಿಯೊಳಿರದೆ ಗೋವಾಗುವೆನೆ
ಪಡೆಯದೆ ಪುಣ್ಯವ ನರನಾಗುವೆನೆ
ಮೃಡನ ಪೂಜಿಸದೆ ದ್ವಿಜನಾಗುವೆನೆ ೧

ಸುಗುಣವಿರದೆ ಮಾತಿನಿದಾಗುವುದೆ
ಸೊಗಮಿಲ್ಲದೆ ಬಾಯ್ ನಗೆದೋರುವುದೆ
ಸುಗುಣವಿಲ್ಲದೆ ನಿರ್ಗುಣಬಹುದೆ
ಮುಗಿಲಿಲ್ಲದೆ ಮಳೆಧರೆಗೆ ಬೀಳುವುದೆ ೨

ತಂಗಿದ್ದಲ್ಲದೆ ಭಾವ ಎಂಬೋದುಂಟೋ
ಹಂಗಿಲ್ಲದೆ ಮರೆ ಹಿತಕುಂಟೊ

ತಂಗಿನೋಡಲು ಭಾವ ಮರೆಯಹುದುಂಟೊ
ಮಾಂಗಿರಿರಂಗ ನೀನೆನ್ನಯ ನಂಟೊ ೩

ದ್ವೈತ ಅದ್ವೈತಗಳ ಸಗುಣನಿರ್ಗುಣಗಳನ್ನು ಸಮ್ಮಿಳನಗೊಳಿಸಿರುವ ವಿಶಿಷ್ಟಾದ್ವೈತವನ್ನು ಇಲ್ಲಿ ಬಹಳ ಸೊಗಸಾಗಿ ಸಾಧಿಸಿದ್ದಾರೆ.

'ಹರಿಏಕನಿಷ್ಠೆ' ಈ ಧರ್ಮದ ಇನ್ನೊಂದು ಮುಖ್ಯ ಲಕ್ಷಣ. ಜಗತ್ತೆಲ್ಲವೂ ಹರಿಮಯ, ಅವನೇ ತಂದೆ, ಮಹಾಲಕ್ಷ್ಮಿಯೇ ತಾಯಿ. ಇವರನ್ನು ಹೊರತುಪಡಿಸಿ ಇನ್ನೊಂದು ದೈವವಿಲ್ಲ. ಇದ್ದರೆ ಅವೆಲ್ಲ ಇವನ ಅಧೀನ, ಇವನು ನೇಮಿಸಿದ ಕಾರ್ಯಗಳನ್ನು ಮಾಡಬಲ್ಲವರಷ್ಟೇ. ಆದ್ದರಿಂದ ಅವರನ್ನು ಅನುಸರಿಸುವುದರಿಂದ ಹರಿ ಒಲಿಯುವುದಿಲ್ಲ: ಎಂಬ ಪ್ರಬಲವಾದ ನಂಬಿಕೆ–ಆಚರಣೆ ಈ ಧರ್ಮೀಯರಲ್ಲಿದೆ. ಆಧುನಿಕ ಸಮಾಜದಲ್ಲಿ ಈ ನಿಷ್ಠೆ ಅಷ್ಟಾಗಿ ಆಚರಣೆಯಲ್ಲಿಲ್ಲದಿದ್ದರೂ ಧರ್ಮನಿಷ್ಠರು ಇಂದಿಗೂ ಈ ತತ್ವಕ್ಕೆ ಬದ್ಧರಾಗಿದ್ದಾರೆ. ಶ್ರಿವೈಷ್ಣವಧರ್ಮೀಯರ ಮನೆಗಳಲ್ಲಿ ಇಂದಿಗೂ ಶ್ರೀಹರಿ ಮತ್ತು ಅವನ ಅವತಾರದ ಹಾಗೂ ಅರ್ಚಾರೂಪದ ಫೋಟೋಗಳನ್ನು ಬಿಟ್ಟರೆ ಅನ್ಯದೈವಗಳ ಫೋಟೋಗಳು ಕಂಡುಬರುವುದಿಲ್ಲ, ಗಣೇಶನದೂ ಕೂಡ. ಈ ಗಣೇಶನಿಗೂ ಈ ಧರ್ಮೀಯರಲ್ಲಿ ಬೇರೆಯದೇ ಕಲ್ಪನೆಯಿದೆ.

ಕುಮುದಗಣೇಶ ಎಂಬ ಕಲ್ಪನೆಯಲ್ಲಿ 'ವಿಶ್ವಕ್ಸೇನ'ನನ್ನು ವಿಘ್ನನಾಶಕನನ್ನಾಗಿ ಸ್ತುತಿಸಲಾಗುತ್ತದೆ. ಶಾಮಶರ್ಮದಾಸರು ಈ ಗಣೇಶನ ಬಗ್ಗೆ ಒಂದು ಸ್ವತಂತ್ರ ಕೃತಿಯನ್ನೇ ರಚಿಸಿದ್ದರೆ, ಉಳಿದವರು ಪ್ರತಿಮೆಯನ್ನಾಗಿಸಿದ್ದಾರೆ.

'ಶ್ರೀನಾಥಾಜ್ಞಾಪ್ರಕಾರ ನಡೆಯುವ ಸೂತ್ರವತೀರಮಣ'
ಮಾನಿತಪ್ರಧಾನಿಮಂತ್ರಿ ಪೂಜಿಪೆ ವಿಘ್ನೇಶಾ ನಮಿಪೆ'

ಎಂದು ಆರಂಭವಾಗುವ ಈ ಕೃತಿ ಮೂಲತಃ ಸಂಸ್ಕೃತ ಶ್ಲೋಕಗಳಾದ 'ಶುಕ್ಲಾಂಬರಧರಂ . . . . .'ಗಳನ್ನು ಸ್ವಂತಿಕೆಯೊಂದಿಗೆ ಕನ್ನಡೀಕರಿಸಿರುವುದಾಗಿ, ಅತ್ಯುತ್ತಮವಾಗಿದೆ.

'ಬಿಳಿಯುಡೆ ತುಂಬಿದ ತಿಂಗಳಬೆಳಗಾ
ತೊಳಗುವ ನಾಲಕು ತೋಳುಗಳ

ಬಲು ನಗೆಮೊಗ ವಿಷ್ಣು ನೆನೆವೆ
ಸುಲಭದಿಕಾರ್‍ಯವ ಗೈಸುವನೇ'

ಲಕ್ಷೀಸಮೇತನಾದ ಶ್ರೀಹರಿಯೊಬ್ಬನನ್ನೇ ಅವಲಂಬಿಸಿರುವುದು ಈ ಶ್ರೀವೈಷ್ಣವ ಕೀರ್ತನೆಗಳಲ್ಲಿ ದಟ್ಟವಾಗಿ ಕಾಣಿಸುತ್ತದೆ. ಸರ್ವದೈವಗಳನ್ನು ಸ್ತುತಿಸಿದರೂ ಅವುಗಳನ್ನೂ ಶ್ರೀಹರಿಯಿಂದ ನಿಯಮಿತರಾದ ದೇವತೆಗಳನ್ನಾಗಿಯೋ ಮತ್ತು ಶ್ರೀಹರಿಯನ್ನೇ ಸ್ತುತಿಸುವ ದೇವತೆಗಳಾಗಿಯೋ ಕಾಣುವುದು ಇಲ್ಲಿಯ ವೈಶಿಷ್ಟ್ಯ.

'ಶಿವಸುತ', 'ಬ್ರಹ್ಮಪೂಜಿತ', 'ಅಜಪಿತ', 'ಶಂಕರಸೇವಿತ' ಎಂದೆಲ್ಲ ಶ್ರೀಹರಿಯನ್ನು ಇಲ್ಲಿ ಹೆಸರಿಸಲಾಗಿದೆ.

'ತಾಯಿಲಕುಮಿ ತಂದೆನಾರಾಯಾಣ ನಿ-
ಮಯ್ಯ ನೆಚ್ಚಿನ ಮಗ ನಾನಣ್ಣ'

ಎಂಬುವ ಕೌಟುಂಬಿಕ ಚೌಕಟ್ಟಿನಲ್ಲಿಯೇ ಇಲ್ಲಿಯ ದಾಸರಿಗೆ ದೈವದೊಲವಿದೆ.

'ಆಕಾರವಿಲ್ಲದ ಅನಾಬಿಯೊಳು ಪಂಥ
ಸಾಕಾರವಾಗಿಹನು ಶ್ರೀಲಕ್ಷ್ಮೀಕಾಂತ'

ಎಂಬಂತಹ ಹರಿಏಕನಿಷ್ಠೆ ಎಲ್ಲ ಶ್ರೀವೈಷ್ಣವ ಹರಿದಾಸರಲ್ಲೂ ಕಂಡುಬರುತ್ತದೆ. ಆದರೆ ಬೇಲೂರು ವೈಕುಂಠದಾಸರು (ಶನೇಶ್ವರದಂಡಕ) ಅಹೋಬಲದಾಸರು ಶಾಮಶರ್ಮರು ಹಾಗೂ ಆಸೂರಿ ರಾಮಸ್ವಾಮಿ ದಾಸರಲ್ಲಿ ಮಾತ್ರ ಸರ್ವದೇವತೆಗಳನ್ನು ಕುರಿತ ಸುಂದರವಾದ ಸ್ತುತಿರೂಪದ ಕೆಲವು ಕೀರ್ತನೆಗಳು ಇವೆ. ಅಷ್ಟೇ ಅಲ್ಲ, ಗುರುರಾಯ ರಾಘವೇಂದ್ರರು ಮತ್ತು ಆಧುನಿಕ ಗುರು ಶ್ರೀಸಾಯಿಬಾಬರನ್ನೂ ಕುರಿತು ಆಸೂರಿಯವರು ಕೀರ್ತನೆಗಳನ್ನು ರಚಿಸಿದ್ದಾರೆ.

ಆದರೆ ಇವು ಶ್ರೀವೈಷ್ಣವೇತರ ಹರಿದಾಸರಲ್ಲಿ ಕಂಡುಬರುವಂತೆ ಶ್ರೀಹರಿಗೆ ಸಮಾನ ಅಥವ ಪರ್ಯಾಯ ದೇವತಾಸ್ತುತಿಗಳಾಗಿಲ್ಲ. ಬದಲು ಹರಿಏಕನಿಷ್ಠೆಗೇ ಬದ್ಧವಾಗಿ ಅವನ ಅಧೀನ ದೇವತೆಯಾಗಿ, ಅವನದೇ ಭಿನ್ನರೂಪವಾಗಿ ಕಲ್ಪಿಸಿರುವಂತಿದೆ. (ಆಸೂರಿಯವರು ತಮ್ಮ ಆರಾಧ್ಯದೈವವನ್ನೇ ಹರಿಹರ ಅಭೇದದಲ್ಲಿ ಸ್ವೀಕರಿಸಿದ್ದಾರೆ; 'ಮಾಂಗಿರಿರಂಗ' ಹರಿಯೂ ಹೌದು ಹರನೂ ಹೌದು. ಅವನಿಗೆ ಸ್ಥಳಪುರಾಣದಲ್ಲೆ ಈ ಅಭೇದವಿದೆ. ಇದರ ಬಗ್ಗೆ ಇವರು ಹತ್ತಾರು ಕೃತಿಗಳನ್ನು ರಚಿಸಿದ್ದಾರೆ.) ಸರ್ವದೇವೋಪಾಸನೆಯ ಇಂದಿನ ಆಧುನಿಕ ಸಾಮಾಜಿಕ ಸಂದರ್ಭದಲ್ಲಿ ಶ್ರೀವೈಷ್ಣವ ಹರಿದಾಸರ ಹರ ಮತ್ತು ಇತರ ದೇವತೆ-ಗುರುಗಳ ಸ್ತುತಿ ಅತ್ಯಂತ ಸಹಜವಾದುದಾಗಿದೆ. ಇದು ಸಾಮಾಜಿಕ ಬದಲಾವಣೆಗೆ ಸ್ಪಂದಿಸಿರುವ ದಾಸರ ಸಮಕಾಲೀನ ಪ್ರಜ್ಞೆಯೂ ಆಗಿರುತ್ತದೆಯಾದ್ದರಿಂದ ಇದನ್ನು ವಿಶಿಷ್ಟ ಲಕ್ಷಣವಾಗಿಯೇ ಪರಿಭಾವಿಸಿ, ತತ್ವದ ಬಗೆಗಿನ ಬಿಗಿ ನಿಲುವನ್ನು ಸಡಿಲಿಸುವ ಮೂಲಕ ಶ್ರೀವೈಷ್ಣವ ಕೀರ್ತನ ಸಾಹಿತ್ಯದಲ್ಲಿ ಧರ್ಮಸಮಾನತೆಯನ್ನು ಸಾಧಿಸಿದಂತಾಗಿದೆ ಎಂದೇ ಹೇಳಬಹುದಾಗಿದೆ.

ಏನೋ ಒಂದಿಹುದು ಕೋಟಿ ಬಾಳುವ ನುಂಗಿಹುದು ಪ

ದೀನನಾಗಿ ಗುರುಧ್ಯಾನವ ಮಾಡಿ ಆದೆಯೊಳೀ ಬಹು
ಮಾನದಿ ಕಾಣುವುದೇನೋ ಅ.ಪ.

ಳಿರಬಹುದು ಅದು ನಮ್ಮ ನಮ್ಮೊಳಿರಬಹುದು
ಹಮ್ಮುಗಳೆಂಬುವ ಹೆಮ್ಮೆಯನಳಿಯಲು
ಸುಮ್ಮನೆ ಗಮ್ಮನೆ ಕಾಣಬರುತ್ತಿಹುದೇನೋ ೧

ಅದಕ್ಕಿನ್ನೆಣೆಯಿಲ್ಲ ಅದನು ಗುರುಸೇವಕಬಲ್ಲ
ಮದನಜನಕ ಶ್ರೀತುಳಸೀರಾಮನ
ಪದಭಜನೆಯೊಳು ವುದಯಸಿ ತಾನೇ ೨

(೩೦೪)

ಅಹೋಬಲದಾಸರ ಈ ಕೃತಿ ವಿಶಿಷ್ಟಾದ್ವೈತದ ಭಕ್ತಿ ಸಾಧಕನಿಗೆ ಒದಗುವ ಸಿದ್ಧಿಯನ್ನು ಅತ್ಯಂತ ಆಕರ್ಷಣೀಯವಾಗಿ ತಿಳಿಸುವ ಸರಳ ತತ್ವವಾಗಿ ಹೊರಹೊಮ್ಮಿದೆ.

ಕೇವಲ ತತ್ವದ ದೃಷ್ಟಿಯಿಂದಷ್ಟೇ ಇವು ವಿಶಿಷ್ಟವಾಗುಳಿಯದೆ ಹರಿದಾಸಸಾಹಿತ್ಯ ಲಕ್ಷಣ ದೃಷ್ಟಿಯಿಂದಲೂ ವಿಶಿಷ್ಟತೆಯನ್ನು ಗಳಿಸುತ್ತವೆ. ಸಾಮಾಜಿಕವಾಗಿಯೂ ಸಮರ್ಥವಾಗಿಯೆ ಸ್ಪಂದಿಸುತ್ತವೆ. ಮತ, ಕುಲ, ಲೋಭತನ, ಕಂದಾಚಾರ, ಕಪಟತನ, ಮೋಸ, ಸಂಬಂಧಗಳ ಮೌಲ್ಯಗಳು, ಭಾವನೆಗಳ ಮೌಲ್ಯಗಳು, ಹಣ, ಅಧಿಕಾರ, ಆಸೆ ಇತ್ಯಾದಿ ಎಲ್ಲ ಸಾಮಾಜಿಕ ಸಂಗತಿಗಳಿಗೂ ಇತರ ಹರಿದಾಸರಂತೆ ಇವರೂ ಸಹಜವಾಗಿ ಸ್ಪಂದಿಸಿದ್ದಾರಲ್ಲದೆ, ಜಾತ್ರೆ, ಬರಗಾಲ, ಕ್ಷಾಮ, ಖಾಯಿಲೆ, ಸ್ವಾತಂತ್ರ್ಯಹೋರಾಟ, ಚೀನಾ-ಪಾಕಿಸ್ತಾನದೊಂದಿಗಿನ ಯುದ್ಧ ಹೀಗೆ ಹಲವು ಸಮಕಾಲೀನ ಸಂಗತಿಗಳಿಗೂ ಪ್ರತಿಕ್ರಿಯಿಸಿದ್ದಾರೆ.

ಶ್ರೀವೈಷ್ಣವ ಹರಿದಾಸರು ಇತರ ಹರಿದಾಸರಂತೆ ಕ್ಷೇತ್ರ ದರ್ಶನದ ಸ್ತುತಿಗಳನ್ನೂ ಸಾಂದರ್ಭಿಕ ಸನ್ನಿವೇಶಗಳ-ಸ್ಥಳೀಯ ಘಟನಾವಳಿಗಳ ಚಿತ್ರಣಗಳನ್ನೂ ತತ್ವಪದಗಳ ಧಾಟಿಯ ಕೃತಿಗಳನ್ನೂ ರಚಿಸಿದ್ದಾರೆ. ಒಟ್ಟಾರೆ ಈ ಕೀರ್ತನಕಾರರ ಮುಖ್ಯ ವೈಶಿಷ್ಟ್ಯವಿರುವುದು ಶ್ರೀವೈಷ್ಣವ ತತ್ವಗಳನ್ನು ತಮ್ಮ ಕೀರ್ತನೆಗಳಲ್ಲಿ ಅಳವಡಿಸಿರುವುದರಲ್ಲಿ. 'ಕನ್ನಡ ಸಾಹಿತ್ಯದಲ್ಲಿ ಶ್ರೀವೈಷ್ಣವತತ್ವ ಪ್ರತಿಪಾದಿತವಾಗಿಲ್ಲ' ಎಂಬ ವಿಮರ್ಶಕರ ಹೇಳಿಕೆಗಳಿಗೆ ಇವು ಉತ್ತರವಾಗಿ ನಿಲ್ಲುವ ಸಾಮರ್ಥ್ಯ ಹೊಂದಿವೆ. 'ರಾಮಾನುಜರು ಕರ್ನಾಟಕಕ್ಕೆ ಬಂದರೂ ಶ್ರೀವೈಷ್ಣವ ಸಂಪ್ರದಾಯದ ಭಕ್ತಿಪಂಥ ಕನ್ನಡ ಭಾಷೆಯಲ್ಲಿ ಆರಂಭವಾಗದುದೊಂದು ಸೋಜಿಗದ ಸಂಗತಿ. ಒಂದು ಪಕ್ಷ ಶ್ರೀವೈಷ್ಣವಭಕ್ತಿಪಂಥ ತನ್ನ ಅಭಿವ್ಯಕ್ತಿ ಮಾಧ್ಯಮವಾಗಿ ಕನ್ನಡವನ್ನು ಬಳಸಿಕೊಂಡಿದ್ದರೆ ಅದು ಯಾವ ಸ್ವರೂಪದಲ್ಲಿರುತ್ತಿತ್ತೋ, ವಚನ ಸಾಹಿತ್ಯಕ್ಕಿಂತ ಹೇಗೆ ಭಿನ್ನವಾಗಿರುತ್ತಿತ್ತೋ ಊಹಿಸುವುದು ಕಷ್ಟ' (ಕನಕದಾಸರ ಕೀರ್ತನೆಗಳು ಲೇಖನದಲ್ಲಿ, ಬೆಂ.ವಿ.ವಿ.ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಭಾಗ ೪-೨,ಪು.೪೯೦)ಎಂಬ ಹೇಳಿಕೆಗಳಿಗೆ ಇನ್ನು ಉತ್ತರ ಸಿಕ್ಕಿದಂತಾಗಿದೆ. ರಾಮಾನುಜರು ಕರ್ನಾಟಕಕ್ಕೆ ಬಂದ ತಕ್ಷಣದಲ್ಲೇ ಇದು ಸಾಧ್ಯವಾಗದೇ ಹೋದರೂ ಆನಂತರ ಬೇಲೂರು-ವೈಕುಂಠದಾಸರು, ಕನಕದಾಸ, ಕುಮಾರವ್ಯಾಸ, ಲಕ್ಷ್ಮೀಶ ಇವರುಗಳಲ್ಲಿ ಅಲ್ಪಸ್ವಲ್ಪ ಕಾಣಿಸಿಕೊಂಡು ೧೯ನೇ ಶತಮಾನದಲ್ಲಿ ದಟ್ಟವಾಗಿಯೇ ರೂಪುಗೊಂಡಿವೆ.

ಕೀರ್ತನ ಸಾಹಿತ್ಯದಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡು ಸಮರ್ಥವಾಗಿ ಸಂಪುಷ್ಟವಾಗಿ ಬೆಳೆದಿದೆ. ಕನ್ನಡ ಕೀರ್ತನ ಪರಂಪರೆಯಲ್ಲಿಯೇ ಒಂದು ವಿಶಿಷ್ಟ ಪರಿಭಾಷೆಯನ್ನು ರೂಢಿಸಿದೆ. ಬೇರೆ ಕೀರ್ತನ ಸಾಹಿತ್ಯದಲ್ಲಿ ಕಾಣಸಿಗದ ಹರಿ ಏಕನಿಷ್ಠೆ, ಪ್ರಪತ್ತಿ ಅಥವಾ ಶರಣಾಗತಿಮನೋಭಾವದ ಸರ್ವಸಮರ್ಪಣಸ್ಥಿತಿ, ಆತ್ಮನಿವೇದನ. ದೈವಕಲ್ಪನೆ ಮತ್ತು ಮೋಕ್ಷ ಗಳಿಗೆ ಹೊಸ ವ್ಯಾಖ್ಯಾನ, ಆಳ್ವಾರರು–ಆಚಾರ್ಯಸ್ತುತಿ ಮುಂತಾದ ವಿಶೇಷ ಅಂಶಗಳ ಮೂಲಕ ಕನ್ನಡ ಕೀರ್ತನ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ.

೫. ೧೯ನೇ ಶತಮಾನದಲ್ಲೊಂದು ಹರಿದಾಸ ಆಂದೋಲನ

೧೯ನೇ ಶತಮಾನದ ಅಂತ್ಯ ಭಾಗದಲ್ಲಿ ೧೮೭೫ ರಿಂದ ಕರ್ನಾಟಕದಲ್ಲಿ ಬೆಂಗಳೂರನ್ನು ಕೇಂದ್ರವಾಗಿಟ್ಟುಕೊಂಡು ಕೋಲಾರದಿಂದ ಮೈಸೂರಿನವರೆಗೆ ಇಡೀ ದಕ್ಷಿಣ ಕರ್ನಾಟಕದಾದ್ಯಂತ ಸದ್ದಿಲ್ಲದೆ ಒಂದು ಹರಿದಾಸ ಆಂದೋಲನವೇ ನಡೆದು ಹೋಗಿರುವುದು ಇತ್ತೀಚೆಗೆ ಬೆಳಕಿಗೆ ಬಂದಿದೆ.

ಈ ಸಂಪುಟದಲ್ಲಿ ಸೇರಿರುವ ತುಳಸಿರಾಮದಾಸರೇ ಇದರ ಮೂಲ ಕೇಂದ್ರ. ಇವರ ಶಿಷ್ಯಪರಂಪರೆ ಬಹಳ ದೊಡ್ಡದಿದೆ. ಇದೇ ಸಂಪುಟದಲ್ಲಿರುವ ಚನ್ನಪಟ್ಟಣದ ಅಹೋಬಲದಾಸರು ಇವರ ಶಿಷ್ಯರೇ ಆಗಿದ್ದಾರೆ. ಶಿಷ್ಯರು, ಅವರ ಶಿಷ್ಯ – ಪ್ರಶಿಷ್ಯರೆಲ್ಲ ಸೇರಿ ನೂರಕ್ಕೂ ಅಧಿಕವಾಗುವ ಸಾಧ್ಯತೆಯಿದೆ. ಇನ್ನೊಬ್ಬ ಶಿಷ್ಯ ಮಳಿಗೆ ರಂಗಸ್ವಾಮಿದಾಸರ ಕೆಲವು ಹಾಡುಗಳು ಈಚೆಗೆ ದೊರೆಕಿದ ಹಿನ್ನೆಲೆಯಲ್ಲಿ ಮುಳಬಾಗಿಲಿನ ಮಳಿಗೆ ರಂಗಸ್ವಾಮಿದಾಸರ ಶಿಷ್ಯ ಶಠಗೋಪದಾಸರ ಶಿಷ್ಯರಾಗಿರುವ ಚೌಡಯ್ಯನವರೊಂದಿಗೆ ಕ್ಷೇತ್ರಕಾರ್ಯಕ್ಕೆ ಹೋಗಿದ್ದಾಗ (೧೭–೫–೦೩) ಆಶ್ಚರ್ಯಕರ ಅನುಭವವಾಗಿದೆ. ಈ ಆಂದೋಲನದ ಸ್ಪಷ್ಟರೂಪ ಗೋಚರವಾಗಿದೆ.

ಸಾಮಾನ್ಯ ಜನವರ್ಗದಲ್ಲಿ ತುಳಸಿರಾಮದಾಸರು, ಪವಾಡ ಸದೃಶ್ಯ ಕ್ರಾಂತಿಯನ್ನುಂಟುಮಾಡಿದ್ದಾರೆ. ಗೌಡ, ಬಣಜಿಗ, ಗಾಣಿಗ, ಉಪ್ಪಾರ, ದರ್ಜಿ, ಅಕ್ಕಸಾಲಿಗ, ಶೆಟ್ಟಿ, ಶೂದ್ರ, ಇತ್ಯಾದಿಗಳ ಮನೆ ಮನೆಗಳಲ್ಲಿ ದಾಸರ ಫೋಟೋ ಇಟ್ಟುಕೊಂಡು ದಾಸರ ಹಾಡು ಹೇಳಿಕೊಂಡು 'ಇವರಿಂದ ಜೀವನ ಕಂಡಿದ್ದೇವೆ. ಈ ಸ್ವಾಮಿಗಳನ್ನೇ ೨೪ ಗಂಟೆ ಧ್ಯಾನ ಮಾಡುತ್ತಿದ್ದೇವೆ.' ಎಂದು ಕೃತ ಕೃತ್ಯರಾಗಿರುವುದನ್ನು ಕಂಡು ನಿಬ್ಬೆರಗಾಗಿದೆ.

ವ್ಯಾಸರಾಯರ ಕಾಲದಲ್ಲಿನ ಕನಕದಾಸರೊಬ್ಬರನ್ನು ಬಿಟ್ಟರೆ ವೈದಿಕೇತರರು ಇಡೀ ಹರಿದಾಸ ಸಾಹಿತ್ಯದಲ್ಲಿ ಕಂಡು ಬರುವುದಿಲ್ಲ. ಅದು ವೈದಿಕ ಸಮಾಜದಲ್ಲೇ ನಡೆದಿರುವ ಆಂದೋಲನವಾಗಿದೆ. ಆದರೆ ತುಳಸಿರಾಮದಾಸರ ಕಾಲದಲ್ಲಿ ವೈದಿಕೇತರ ಸಮಾಜವನ್ನೇ ಕೇಂದ್ರವಾಗಿಟ್ಟುಕೊಂಡು ಯಶಸ್ವೀ ಆಂದೋಲನ ನಡೆದಿರುವುದು ಕಂಡುಬರುತ್ತದೆ. ತುಳಸಿರಾಮದಾಸರು ದಕ್ಷಿಣ ಕರ್ನಾಟಕದಾದ್ಯಂತ ಸಂಚರಿಸಿ ಎಲ್ಲ ಪ್ರಮುಖ ಸ್ಥಳಗಳಲ್ಲೂ ಶ್ರೀಮಂತ ಭಕ್ತಾದಿಗಳನ್ನು ಸೆಳೆದು ಅವರಲ್ಲಿ ಧಾರ್ಮಿಕ ಚಿಂತನೆಯ ಮೂಲಕ ಸಮಾಜ ಸೇವಾ ಮನೋಭಾವವನ್ನು ಮೂಡಿಸಿ ಭಾರ್ಗವರಾಮ (ಬಾರಾ ಮಾರ್ಗ) ಭಜನ ಮಂದಿರಗಳನ್ನು ಕಟ್ಟಿ ಅನುಚನವಾಗಿ ಧಾರ್ಮಿಕ ಕಾರ್ಯಗಳು ನಡೆದು ಕೊಂಡು ಹೋಗುವಂತೆ ಮಾಡಿದ್ದಾರೆ. ಭಜನೆ, ರಾಮೋತ್ಸವ, ಕೃಷ್ಣೋತ್ಸವ, ರಾಮಕೋಟಿ (ಅಖಂಡ ಭಜನೆ) ಹರಿಕಥೆ ಇತ್ಯಾದಿಗಳನ್ನು ರೂಢಿಗೆ ತಂದಿದ್ದು ಇವು ಇಂದಿಗೂ ನಡೆದುಕೊಂಡು ಬರುತ್ತಿವೆ. ಇವರ ಶಿಷ್ಯಕೋಟಿ ಗೌಡ, ಬಣಜಿಗ, ಇತ್ರಾದಿ., ವೈದಿಕೇತರ ವರ್ಗದವರಲ್ಲೇ ಪ್ರದಾನವಾಗಿದ್ದು ಅನೇಕರು ದಾಸರಾಗಿ ಹಾಡುಗಳನ್ನು ರಚಿಸಿದ್ದಾರೆ. ತುಳಸಿರಾಮದಾಸರ ಮೇಲೆ ೩೦ ಕ್ಕೂ ಹೆಚ್ಚು ಶಿಷ್ಯ ದಾಸರು ಕೃತಿರಚನೆ ಮಾಡಿದ್ದಾರೆ. ಮಹಾರಾಜರಾದಿಯಾಗಿ ಪರಕಲ ಮಠವನ್ನು ಒಳಗೊಂಡು ವೈದಿಕಗಣ್ಯರನೇಕರೂ ಸ್ತುತಿಸಿದ್ದಾರೆ.

ಕನಕದಾಸರಿಗೆ ಸರಿಸಾಟಿಯಾಗುವ ಶಿಶುನಾಳ ಶರೀಫರನ್ನು ಸಮೀಪಿಸುವ ಚನ್ನಪಟ್ಟಣದ ಆಹೋಬಲದಾಸರು ಬಣಜಿಗರು , ಮುಳಬಾಗಿಲಿನ ರಂಗಸ್ವಾಮಿದಾಸರು ಗಾಣಿಗರು, ಕೋಲಾರದ ಚೆಂಚುದಾಸ ದಲಿತರು, ಶ್ರೀರಂಗಪಟ್ಟಣದ ಸಮೀಪದ ದರಿಶಕುಪ್ಪದ ಕೃಷ್ಣದಾಸ ಗೌಡರು, ವೆಂಕಟದಾಸ, ವೈಷ್ಣವರು, ಆಲಂಗೂರಿನ ಅಣ್ಣಾಜಿದಾಸರು ದರ್ಜಿಗರು, ಚಿಂತಾಮಣಿಯ ಶ್ರೀನಿವಾಸದಾಸ ಉಪ್ಪಾರರು, ಶಂಕರದಾಸ ಅಂಕಿತದಿಂದ ಪ್ರಸಿದ್ಧವಾಗಿರುವ ಮೈಸೂರಿನ ವೇದಾಂತ ಶಿವರಾಮಶಾಸ್ತ್ರಿಗಳು ಇವರಿಂದ ವೇದಾಂತ ವಿಷಯ ತಿಳಿದವರಾಗಿ ಇವರ ಶಿಷ್ಯರೆನಿಸುತ್ತಾರೆ.

ಹೀಗೆ ಎಲ್ಲ ಜನವರ್ಗದಲ್ಲೂ ವಿದ್ಯುತ್ ಸಂಚಾರವನ್ನುಂಟುಮಾಡಿ, ಸ್ವಾತಂತ್ರ್ಯದ ಅಸ್ಥಿರತೆ, ಸಾಮಾಜಿಕ ಅರಾಜಕತೆ, ಕಾಮ ಬರ, ಯುದ್ಧಬೀತಿಗಳಿಂದ ನಲುಗಿದ್ದ

ಜನರಲ್ಲಿ ಮಾನಸಿಕ ಶಾಂತಿಯನ್ನು, ಜೀವನದ ನಿರ್ದಿಷ್ಟ ಗುರಿಯನ್ನು, ಸಾಮಾಜಿಕ ಬದ್ಧತೆಯನ್ನು ಮೂಡಿಸುವಲ್ಲಿ ತುಳಸಿರಾಮದಾಸರು ಅಪಾರವಾಗಿ ಶ್ರಮಿಸಿದ್ದಾರೆ. ಧನಿಕರಿಂದ ದಾನಧರ್ಮಗಳನ್ನು ಮಾಡಿಸಿ ನೊಂದವರಿಗೆ ಆರೈಕೆ ಮಾಡುವ ಶಿಬಿರಗಳನ್ನು ನಡೆಸಿ ಸಮಾಜದಲ್ಲಿ ಸ್ವಾಸ್ಥ್ಯವನ್ನು ಕಾಪಾಡಿರುವ ನಿಜವಾದ ಭವರೋಗ ವೈದ್ಯರೆನಿಸಿದ್ದಾರೆ. ಅದಕ್ಕಾಗಿಯೇ ಇಂದಿಗೂ ಜನಮನದಲ್ಲಿ ಶಾಶ್ವತವಾಗುಳಿದಿದ್ದಾರೆ. ಇವರ ಶಿಷ್ಯಪರಂಪರೆ ಇಂದಿಗೂ ಮುಂದುವರೆದಿದ್ದರೂ ಆಧುನಿಕದ ಅಬ್ಬರದಲ್ಲಿ ಗುಪ್ತಗಾಮಿಯಾಗಿದ್ದಾರೆ, ಮುಳ ಬಾಗಿಲಿನಲ್ಲಿ ಬೆಂಗಳೂರಿನಲ್ಲಿ ಇವರ ದೇವಾಲಯವೇ ಇದೆ.

ಕೇವಲ ನೂರು ವರ್ಷಗಳ ಹಿಂದೆ ಇವರು ನಡೆಸಿದ ಈ ಸಾಮಾಜಿಕ ಧಾರ್ಮಿಕ ಹರಿದಾಸ ಆಂದೋಲನ ಇತಿಹಾಸದಲ್ಲಿ ಸರಿಯಾದ ರೀತಿಯಲ್ಲಿ ದಾಖಲಾಗಬೇಕಾಗಿದೆ.

೪ನೇ ಘಟ್ಟದವರೆಗೆ ಮಾತ್ರ ಗುರುತಿಸಲ್ಪಟ್ಟಿದ್ದ ಕೀರ್ತನ ಸಾಹಿತ್ಯಚರಿತ್ರೆಗೆ ಇನ್ನುಮುಂದೆ ಅದು ಐದನೇ ಘಟ್ಟವೊಂದನ್ನು ಗುರುತಿಸಿಕೊಂಡಿರುವುದನ್ನು ಮತ್ತು ಈ ಘಟ್ಟದಲ್ಲಿ ದ್ವೈತ–ಅದ್ವೈತ–ವಿಶಿಷ್ಟಾದ್ವೈತ ಈ ಮೂರು ತತ್ವಗಳ ಕೀರ್ತನೆಗಳೂ ಸರಿಸಮನಾಗಿ ಬೆಳೆದಿರುವುದನ್ನು ಹಾಗೂ ಒಂದು ಯಶಸ್ವಿ ಹರಿದಾಸ ಆಂದೋಲನವೇ ನಡೆದಿರುವುದನ್ನೂ ವೈದಿಕೇತರವರ್ಗದವರನ್ನೂ ಈ ಹರಿದಾಸ ಸಾಹಿತ್ಯ ಒಳಗೊಂಡಿರುವುದನ್ನು ನೂತನವಾಗಿ ಸೇರಿಸಿಕೊಂಡು ಅಧ್ಯಯನಮಾಡಬೇಕಾದ ಅವಶ್ಯಕತೆಯಿದೆ. ಕನ್ನಡ ಹರಿದಾಸ ಸಾಹಿತ್ಯಚರಿತ್ರೆಯನ್ನು ಪುನಾಃರಚಿಸಬೇಕಾಗಿದೆ.

ಭಾಗ –೨

ಕೀರ್ತನಕಾರರ ಪರಿಚಯ

ಈ ಸಂಪುಟದಲ್ಲಿರುವ ಕೀರ್ತನಕಾರರನ್ನು ಈ ಕೆಳಕಂಡ ಕ್ರಮದಲ್ಲಿ ಪರಿಚಯಿಸಿದೆ.

(೧) ಜೀವನವಿವರ

(೨) ಇತರ ಗ್ರಂಥಗಳ

(೩) ಕೀರ್ತನೆಗಳ ಪರಿಚಯ

(೪) ಕೀರ್ತನೆಗಳ ಆಕರ

೧. ಬೇಲೂರು ವೈಕುಂಠದಾಸರು

ಬೇಲೂರು ವೈಕುಂಠದಾಸರು ಆದ್ಯ ಶ್ರೀವೈಷ್ಣವ ಹರಿದಾಸರು. ವಾದಿರಾಜರು ಪುರಂದರದಾಸರು, ಕನಕದಾಸರು, ಅಚ್ಯುತದಾಸರು(?) ತೆಲುಗಿನ ತಾಳ್ಳಪಾಕಂ ಮನೆತನದ ಚೆನ್ನಯ್ಯ (ಅನ್ನಮಾಚಾರ್ಯರ ಮೊಮ್ಮಗ) ಇವರುಗಳಿಂದ ಸ್ತುತಿಸಲ್ಪಟ್ಟಿರುವ ಪ್ರಮುಖ ಹರಿದಾಸರರು ಹರಿದಾಸಸಾಹಿತ್ಯದ ಉಚ್ಛ್ರಾಯಸ್ಥಿತಿಯಲ್ಲಿಯೇ ಶ್ರೀವೈಷ್ಣವ ಹರಿದಾಸಸಾಹಿತ್ಯ ಪರಂಪರೆಯನ್ನು ಹುಟ್ಟು ಹಾಕಿದವರು.

(೧) ಜೀವನವಿವರ:

ಬೇಲೂರು ವೈಕುಂಠದಾಸರು ಕನ್ನಡ ಹರಿದಾಸ ಸಾಹಿತ್ಯಕ್ಕೆ ಹೊಸ ಪರಿಚಯವೇನೂ ಅಲ್ಲ. ಆದರೂ ಇವರ ಬಗ್ಗೆ ಈವರೆಗೆ ಹೆಚ್ಚಿನ ಚರ್ಚೆ ಆಗಿಲ್ಲ. ಈವರೆಗಿನ ಉಲ್ಲೇಖಗಳೆಲ್ಲ ಇವರನ್ನು ಶ್ರೀವೈಷ್ಣವ ಹರಿದಾಸ ಪರಂಪರೆಯಲ್ಲೇ ಗುರುತಿಸಿದ್ದರೂ ಪ್ರತ್ಯೇಕವಾಗಿ ಚರ್ಚಿಸದೆ ಮಾಧ್ವಪರಂಪರೆಯಲ್ಲೇ ಉಲ್ಲೇಖಿಸಿವೆ. 'ಇವರು ಶ್ರೀವೈಷ್ಣವ ದೀಕ್ಷೆ ತಳೆದವರು,' 'ಇವರ ಕೀರ್ತನೆಗಳಲ್ಲಿ 'ಪ್ರಪತ್ತಿಧರ್ಮ'

ಎದ್ದುಕಾಣುತ್ತದೆ' ಮುಂತಾದ ಹೇಳಿಕೆಗಳನ್ನು ಎಲ್ಲರೂ ನೀಡಿದ್ದಾರೆ. 'ಇವರ ಕೀರ್ತನೆಗಳನ್ನೆಲ್ಲ ಕಲೆಹಾಕಿ ಪ್ರಕಟಿಸುವ ಕೆಲಸವಿನ್ನೂ ನಡೆದಿಲ್ಲ' ಎಂಬ ಕೊರತೆಯ ಹಿನ್ನೆಲೆಯಲ್ಲೂ ಹೆಚ್ಚಿನ ಚರ್ಚೆಗಳು ಆದಂತೆ ತೋರುವುದಿಲ್ಲ.

'ಬೇಲೂರು ವೈಕುಂಠದಾಸರು' ಎಂದೇ ಎಲ್ಲ ಗ್ರಂಥಗಳೂ ಹೆಸರಿಸಿಕೊಂಡು ಬಂದಿರುವುದರಿಂದ ಇವರಿಗೆ ಬೇರೊಂದು ಹೆಸರಿದ್ದುದನ್ನು ಖಚಿತ ಪಡಿಸಲಾಗುವುದಿಲ್ಲ, ಆದರೆ ಇವರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿರುವ 'ಶ್ರೀಕರ್ಣಾಟಕ ಭಕ್ತಿವಿಜಯ'ದ ಬೇಲೂರು ಕೇಶವದಾಸರು 'ಕೇಶವಯ್ಯಂಗಾರ್ಯ' ಎಂಬ ಹೆಸರಿತ್ತೆಂದು ಹೇಳುತ್ತಾರೆ. 'ಮಹಾಕ್ಷೇತ್ರವಾಸಿಗಳು ತಮ್ಮ ಮಕ್ಕಳಿಗೆ ಆ ಕ್ಷೇತ್ರಮೂರ್ತಿಯ ನಾಮಕರಣ ಮಾಡುವ ಪದ್ಧತಿಯಂತೆ ವೈಕುಂಠ ದಾಸರಿಗೂ ಅವರ ತಂದೆ-ತಾಯಿಗಳು ಕೇಶವನೆಂದು ನಾಮಕರಣ ಮಾಡಿದರು' ಎಂದು ಹೇಳುತ್ತಾರಾದರೂ ಇದಕ್ಕೆ ಖಚಿತ ಮಾಹಿತಿಗಳಾಗಲಿ ದಾಖಲೆಗಳಾಗಲಿ ಇಲ್ಲವಾದ್ದರಿಂದ ಇದನ್ನು ಕಾಲ್ಪನಿಕ ಹೆಸರೆಂದೇ ಸ್ವೀಕರಿಸಬಹುದಾಗಿದೆ. ಕೇಶವದಾಸರು ವೈಕುಂಠದಾಸರ ಬಗ್ಗೆ ಅವರ ದೌಹಿತ್ರ ಸಂತತಿಯಿಂದ ಮತ್ತು ಸಂಪ್ರದಾಯದವರಿಂದ ಮಾಹಿತಿಗಳನ್ನು ಸಂಗ್ರಹಿಸಿ ದಾಸರ ಕೀರ್ತನೆಗಳನ್ನು ಕಲೆಹಾಕಿ ಶ್ರಮವಹಿಸಿ ದಾಸರ ಬಗ್ಗೆ ಒಂದು ಸುಂದರವಾದ ಜೀವನ ಕಥೆಯನ್ನು ಕಟ್ಟಿದ್ದಾರೆ. ಅವರ ಈ ಊಹೆಯನ್ನು ನಿರಾಕರಿಸಲೂ ಆಗುವುದಿಲ್ಲವಾದ್ದರಿಂದ ಇವರ ಜೀವನ ವಿವರಗಳಿಗೆ ಖಚಿತ ಮಾಹಿತಿಗಳು ಲಭ್ಯವಾಗುವವರೆಗೆ ಈ ಕಥೆಯನ್ನೇ ಸ್ವೀಕರಿಸುವುದರಲ್ಲಿ ತಪ್ಪೇನೂ ಕಂಡುಬರುವುದಿಲ್ಲ.

ಇವರ ತಂದೆ-ತಾಯಿಗಳ ಬಗೆಗೂ ಏನೂ ಮಾಹಿತಿಗಳಿಲ್ಲದಿದ್ದರೂ ಕೀರ್ತನೆಯೊಂದರಲ್ಲಿ ಇವರ ತಂದೆಯ ಹೆಸರು 'ತಿರುಮಲಾರ್ಯ' ಎಂಬ ಉಲ್ಲೇಖ ದೊರಕುತ್ತದೆಯಲ್ಲದೆ ಇವರ ವೃತ್ತಿ 'ವರ್ಣಿಕರ ವೃತ್ತಿ'ಯಾಗಿತ್ತೆಂದೂ ಕಂಡುಬರುತ್ತದೆ. 'ಪೆತ್ತಯ್ಯ ತಿರುಮಲಾರ್ಯರು ವರ್ಣಿಕರ ಚಕ್ರವರ್ತಿಯೆಂಬಾ ಬಿರುದ' (೩.೧) ಆದರೆ ಈ ವೃತ್ತಿಯಾವುದೆಂಬುದು ಸ್ಪಷ್ಟವಿಲ್ಲ. ಈತಿರುಮಾಲಾರ್ಯರು ಪ್ರಾಯಶಃ ವಿಜಯನಗರದ ಕಾಲದಲ್ಲಿದ್ದ ರಾಜಗುರು ತಾತಾಚಾರ್ಯರನ್ನು ಸೂಚಿಸುತ್ತಿರ ಬಹುದು.

ಈ ಸಂತತಿಯವರೇ ಈಗಲೂ ಬೇಲೂರಿನ ದೇವಾಲಯದ ಅರ್ಚಕ ಮನೆತನದವರಾಗಿದ್ದಾರೆಂಬ ಕೇಶವದಾಸರ ಹೇಳಿಕೆ ಮತ್ತು ಸಂಪ್ರದಾಯದವರ ಅಭಿಪ್ರಾಯಕ್ಕೆ ಅನುಗುಣವಾಗಿ, ದಾಸರ ಕೀರ್ತನೆಗಳಲ್ಲಿ ಸ್ಪಷ್ಟವಾಗಿ ಶ್ರೀವೈಷ್ಣವ ತತ್ವಗಳು ಅಭಿವ್ಯಕ್ತವಾಗಿರುವುದರಿಂದ ದಾಸರ ಮತವನ್ನು 'ಶ್ರೀವೈಷ್ಣವ' ಎಂದು ನಿರ್ಧಾರಕವಾಗಿ ಹೇಳಬಹುದು. ಆದರೆ ಇದರಲ್ಲಿ ಯಾವ ಸಂಪ್ರದಾಯಕ್ಕೆ ಸೇರಿದವರೆಂಬುದು ಖಚಿತವಾಗುವುದಿಲ್ಲ, ಏಕೆಂದರೆ ಕೇಶವದಾಸರು ಒಂದೆಡೆ (ದ್ರಾವಿಡ ಪ್ರಬಂಧಗಳನ್ನು ಹೇಳುತ್ತಿದ್ದರೆಂದು) 'ತೇಂಗಲೆ' ಎಂದೂ ಇನ್ನೊಂದೆಡೆ 'ಹೆಬ್ಬಾರ' ಎಂದೂ (ಪ್ರಾಯಶಃ ಬೇಲೂರಿನಲ್ಲಿರುವ ಇವರ ದೌಹಿತು ಸಂತತಿಯವರ ಹಿನ್ನೆಲೆಯಲ್ಲಿ, ಹೇಳುತ್ತಾರೆ. ಆದರೆ ಬೇಲೂರಿನ ಈ ಸಂತತಿಯ ಶ್ರೀವೈಷ್ಣವರು ಸಂಪ್ರದಾಯದಲ್ಲಿ ವಡಗಲೆ ಪರಂಪರೆಯನ್ನು ಹೇಳುವರು. ವಡಗಲೆ ಮತ್ತು ತೇಂಗಲೆ ಶ್ರೀವೈಷ್ಣವ ಸಂಪ್ರದಾಯದಲ್ಲಿರುವ ಎರಡು ಭಿನ್ನ ಪರಂಪರೆಗಳು. ಹರಿದಾಸ ಸಾಹಿತ್ಯದಲ್ಲಿ ವ್ಯಾಸರಾಯರ ಕಾಲದಲ್ಲಿ ಕಂಡುಬಂದ ವ್ಯಾಸಕೂಟ, ದಾಸಕೂಟಗಳಂತೆ ಇವು ಶ್ರೀವೈಷ್ಣವ ಧರ್ಮಾನುಷ್ಠಾನದ ಸಂದರ್ಭದಲ್ಲಿ ಕಂಡುಬಂದ ಭಿನ್ನತೆಗಳು. ರಾಮಾನುಜರ ನಂತರ ವೇದಾಂತ ದೇಶಿಕರ ಕಾಲದಲ್ಲಿ ತಮಿಳು ದ್ರಾವಿಡ ಮಂತ್ರಗಳ ಪ್ರಾಧಾನ್ಯತೆಯನ್ನು ತೇಂಗಲೆ ಸಂಪ್ರದಾಯ ಅನುಸರಿಸಿದರೆ, ಸಂಸ್ಕೃತ ಪ್ರಾಧಾನ್ಯತೆಯನ್ನು ವಡಗಲೆ ಸಂಪದ್ರಾಯ ಅನುಸರಿಸುತ್ತ ಬಂದಿದೆ ಎಂದು ಸ್ಥೂಲವಾಗಿ ಹೇಳಬಹುದಾದರೂ ಎರಡೂ ಸಂಪ್ರದಾಯದವರು ಎರಡೂ ಭಾಷೆಗಳನ್ನೂ ಬಹುಮಟ್ಟಿಗೆ ಸಮಾನವಾಗಿಯೇ ಉಳಿಸಿಕೊಂಡಿದ್ದು ಗುರುಪರಂಪರೆ ಮತ್ತು ಕೆಲವು ಆಚರಣೆಗಳಲ್ಲಿ ಮಾತ್ರ ಭಿನ್ನತೆಗಳನ್ನು ಗುರುತಿಸಿಕೊಂಡಿದ್ದಾರೆ. ಹೀಗಾಗಿ ಬೇಲೂರಿನ ಈ ಹೆಬ್ಬಾರರ ಪಂಗಡ ತೇಂಗಲೆಯಲ್ಲಿ ಬರುವುದಿಲ್ಲವಾದ್ದರಿಂದ ವೈಕುಂಠದಾಸರ ಗುರು ಪರಂಪರೆಯಾಗಲಿ, ಸಂಪ್ರದಾಯವಾಗಲಿ ಖಚಿತವಾಗಿ ಗೊತ್ತಾಗುವುದಿಲ್ಲವಾದರೂ ಇವರನ್ನು ಶ್ರೀವೈಷ್ಣವಧರ್ಮೀಯರು ಎನ್ನುವುದರಲ್ಲಿ ಅನುಮಾನವಿರುವುದಿಲ್ಲ. ಆದರೆ ಇವರ ತಂದೆ 'ತಿರುಮಲಾರ್ಯ'ರನ್ನು ತಾತಾಚಾರ್ಯರು ಎಂದು ನಿರ್ಧರಿಸಿದಲ್ಲಿ ಈ ತಾತಾಚಾರ್ಯರದ್ದೇ ಒಂದು ಮತಪರಂಪರೆಯಿದ್ದು ಅದಕ್ಕೆ ಸೇರಿದವರೆಂದು ತೀರ್ಮಾನಿಸಬಹುದು.

ವೈಕುಂಠದಾಸರಿಗೆ ಗುರುಗಳು ಯಾರಾಗಿದ್ದರೆಂಬುದೂ ಇನ್ನೂ ಖಚಿತವಾಗ ಬೇಕಾಗಿದೆ. ಇವರ ಕೀರ್ತನೆಗಳು ಶ್ರೀವೈಷ್ಣವ ಧರ್ಮದಲ್ಲೇ ಗುರುತಿಸಿಕೊಳ್ಳುತ್ತಿರುವುದರಿಂದ ಶ್ರೀವೈಷ್ಣವ ಸಂಪ್ರದಾಯದ ಗುರುವನ್ನೇ ನಿರ್ಧರಿಸಬೇಕಾಗಿದೆ. ಹಲವು ವಿದ್ವಾಂಸರು 'ವ್ಯಾಸತೀರ್ಥರ ಬಳಿ ಶಿಷ್ಯವೃತ್ತಿಯನ್ನು ಮಾಡಿದರೋ ಇಲ್ಲವೊ ಖಚಿತವಾಗಿ ತಿಳಿದು ಬರುವುದಿಲ್ಲ', ಎಂದು ಈಗಾಗಲೆ ಸ್ಪಷ್ಟಪಡಿಸಿದ್ದು ಇದರಾಚೆಗೆ ನಿಂತೇ ಆಲೋಚಿಸುವುದು ಉಚಿತವೆನಿಸುತ್ತದೆ. ಸದ್ಯಕ್ಕೆ ಇವರೇ ಆದ್ಯ ಶ್ರೀವೈಷ್ಣವ ಹರಿದಾಸರಾಗಿ ಕಾಣಿಸಿರುವುದರಿಂದ ಇವರಿಗಿಂತ ಮೊದಲು ಇಂಥದೊಂದು ಪರಂಪರೆ ಇಲ್ಲದಿದ್ದುದರಿಂದ ಇವರ ಗುರುವನ್ನು ಚರ್ಚಿಸುವಾಗ ಎರಡು ರೀತಿಯಲ್ಲಿ ಆಲೋಚಿಸಬಹುದು. ಒಂದು ಮಧ್ವೇತರ ಹರಿದಾಸರು ಗುರುಮುಖೇನ 'ದಾಸದೀಕ್ಷೆ', 'ಮುದ್ರೆ'ಗಳನ್ನು ವಿಧಿವತ್ತಾಗಿ ಪಡೆಯುವ ಸಂಪ್ರದಾಯದವರಲ್ಲ ಎಂಬುದು. ಇನ್ನೊಂದು ಇವರು 'ಹರಿದಾಸ ವೃತ್ತಿ' ಯೊಳಗೆ ಬರುವವರಲ್ಲ ಎಂಬುದು. ಈ ದೃಷ್ಟಿಕೋನದಿಂದಾಚೆಗೆ ನಿಂತೇ ಮಧ್ವೇತರ ಹರಿದಾಸ ಸಾಹಿತ್ಯವನ್ನು ಚರ್ಚಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಬೇಲೂರು ವೈಕುಂಠದಾಸರನ್ನು ಯಾವುದಾದರೊಬ್ಬ ಗುರು ಮುಖೇನ ಅಂಕಿತ, ಮುದ್ರೆ, ದೀಕ್ಷೆ ಪಡೆದಿರಲೇಬೇಕೆಂಬ ತತ್ವಕ್ಕೆ ನಾವು ಬದ್ಧರಾಗಬೇಕಾಗಿರುವುದಿಲ್ಲ, ವೈಕುಂಠದಾಸರಿದ್ದ ಕಾಲ ವಿಜಯನಗರದ ಸುವರ್ಣಕಾಲ. ಶ್ರೀವೈಷ್ಣವ ಧರ್ಮ ರಾಜಧರ್ಮವಾಗಿದ್ದ ಕಾಲ. 'ತಾತಾಚಾರ್ಯ'ರೆಂಬುವರು ರಾಜಗುರುಗಳಾಗಿದ್ದ ಕಾಲ. ಇವರಿಗೆ ತಿರುಮಲಾರ್ಯ ಎಂಬ ಹೆಸರೂ ಇತ್ತು. ಇದಕ್ಕೆ ಅನೇಕ ಶಾಸನಾಧಾರಗಳು ಲಭ್ಯವಿವೆ. ಈ ಪ್ರಭಾವವಲಯದಲ್ಲಿದ್ದ ಬೇಲೂರು ಈ ಧರ್ಮದ ಪ್ರಮುಖ ಕೇಂದ್ರ. ಇದರ ಒಂದು ಭಾಗವಾಗಿದ್ದ ವೈಕುಂಠದಾಸರು ಅಂತರಂಗಭಕ್ತರಾಗಿದ್ದರು. ಸಾಮಾನ್ಯವಾಗಿ ಎಲ್ಲ ಶ್ರೀವೈಷ್ಣವ ಹರಿದಾಸರೂ ಸಂಸ್ಕಾರಯುತರಾಗಿ 'ದಾಸ'ರಾಗಿರುತ್ತಾರೆ. ಈ ದಾಸತ್ವ ಶ್ರೀವೈಷ್ಣವ ತತ್ವವಾದ 'ಶರಣಾಗತಿ' ಅಥವ ಪ್ರಪತ್ತಿಯ ಹಿನ್ನೆಲೆಯಲ್ಲಿ ಬಂದಿರುತ್ತದೆ. ಶ್ರೀವೈಷ್ಣವ ಬ್ರಾಹ್ಮಣನಾದವನು 'ಪಂಚ ಸಂಸ್ಕಾರ' ಕ್ಕೊಳಗಾಗುವ ವಿಧಿಯಲ್ಲಿಯೇ ಈ 'ದಾಸದೀಕ್ಷೆ' ಅಥವ 'ಮಂತ್ರೋಪದೇಶ' ಇರುತ್ತದೆ. ಆದ್ದರಿಂದ ಅವರವರ ಸಂಪ್ರದಾಯದ ಯತಿಗಳು (ಎಲ್ಲ ಶ್ರೀವೈಷ್ಣವ ಸಂಪ್ರದಾಯದವರೂ ತಮ್ಮದೇ

ಆದ ಗುರುಪೀಠ (ಮಠ)ಗಳನ್ನು ರೂಪಿಸಿಕೊಂಡು ಅದಕ್ಕೆ ನಡೆದುಕೊಳ್ಳುತ್ತಿರುತ್ತಾರೆ, ಆ ಮಠದ ಯತಿಗಳು ಈ ಪಂಚಸಂಸ್ಕಾರದ 'ಮಂತ್ರೋಪದೇಶ'ವನ್ನು ಮಾಡುತ್ತಾರೆ) ಗುರುಗಳಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಆ ಕಾಲದ ತಾತಾಚಾರ್ಯರೋ ಅಥವ ಇನ್ನೊಬ್ಬ ಶ್ರೀವೈಷ್ಣವ ಮಠಾಧಿಪತಿಗಳೋ ಅಥವ ಹಿರಿಯ ಧರ್ಮಿಯರೋ ಗುರುಗಳಾಗಿದ್ದಿರಬಹುದು. ಎಷ್ಟೋ ವೇಳೆ ತಂದೆಯವರೇ (ದಾಸರು ಉಲ್ಲೇಖಿಸಿರುವ ತಿರುಮಲಾರ್ಯರೇ ತಾತಾಚಾರ್ಯರಾಗಿದ್ದಲ್ಲಿ ಅವರೇ ಇವರ ಗುರುಗಳಾಗಿರುತ್ತಾರೆ.) ಈ ಗುರುಸ್ಥಾನದಲ್ಲಿರುವ ಸಾಧ್ಯತೆಯೂ ಉಂಟು. ಆರಾಧ್ಯ ದೈವವೂ ಆಗಿರುವುದುಂಟು. ವೈಕುಂಠದಾಸರು ಬೇಲೂರನ್ನು ಬಿಟ್ಟು ಬೇರೆಲ್ಲೂ ಹೋಗಿಲ್ಲದಿರುವುದು ಅವರ ಕೀರ್ತನೆಗಳಿಂದಲೇ ಸ್ಪಷ್ಟವಾಗುತ್ತಿರು ವುದರಿಂದ ಬೇಲೂರು ಚೆನ್ನಕೇಶವನಿಗೇ ಶರಣಾಗತರಾಗಿರುವ ಭಗವದ್ಭಕ್ತರಾಗಿರು ವುದರಿಂದ ಆರಾಧ್ಯದೈವವನ್ನೇ ಗುರುಸ್ಥಾನದಲ್ಲಿ ಸ್ವೀಕರಿಸಿ ಅವನ ಅಂಕಿತದಲ್ಲೇ ಕೃತಿರಚನೆ ಮಾಡಿದ್ದಾರೆಂದು ಹೇಳಬಹುದು.

ವೈಕುಂಠದಾಸರ ಕಾಲದ ಬಗೆಗೂ ಎಲ್ಲಿಯೂ ಖಚಿತವಾದ ದಾಖಲೆಗಳು ಲಭ್ಯವಿಲ್ಲ. ವಿದ್ವಾಂಸರು ಕ್ರಿ.ಶ.೧೪೫೦ ರಿಂದ ೧೬೮೦ರವರೆಗೆ ಊಹಿಸಿದ್ದಾರೆ. (ಕವಿಚರಿತಕಾರರು ಒಂದೆಡೆ ೧೪೫೦, ಇನ್ನೊಂದೆಡೆ ೧೬೮೦; ಜಿ.ವರದರಾಜ ರಾವ್: ೧೫೦೦; ಎಸ್.ಕೆ.ರಾಮಚಂದ್ರರಾವ್ ಮತ್ತು ಬೇಲೂರು ಕೇಶವದಾಸರು: ವಾದಿರಾಜರು, ಪುರಂದರ, ಕನಕದಾಸರ ಸಮಕಾಲೀನ ಇತ್ಯಾದಿ) ಇದರಲ್ಲಿ ಕ್ರಿ.ಶ.೧೪೫೦ ಎಂದು ದಾಸರ ಕಾಲವನ್ನು ಗುರುತಿಸಬಹುದು. ದಾಸರನ್ನು ಸ್ತುತಿಸಿರುವ ವಾದಿರಾಜರು (ಕ್ರಿ.ಶ.೧೪೮೧) ಪುರಂದರ ದಾಸರು. (ಕ್ರಿ.ಶ.೧೪೮೪) ಕನಕದಾಸರು (ಕ್ರಿ.ಶ.೧೪೮೮) ದಾಸರನ್ನು ಹಿರಿಯ ಸಮಕಾಲೀನರನ್ನಾಗಿ ಗೌರವಿಸಿರುವಂತೆ ಕಂಡುಬರುತ್ತದೆ. ಇವರುಗಳೇ ದಾಸರ ಬಳಿಗೆ ಹೋಗಿ ವಯೋವೃದ್ಧರಾಗಿದ್ದ ದಾಸರನ್ನು ಹೊಗಳಿರುವಂತೆಯೇ ಇವರ ಕೀರ್ತನೆಗಳಿವೆ. ಸಂಪ್ರದಾಯದ ಟಿಪ್ಪಣಿಗಳೂ ಇದನ್ನೇ ಹೇಳುತ್ತವೆ. ಅಲ್ಲದೆ ಅನ್ನಮಾಚಾರ್ಯರ ಮೊಮ್ಮಗ ಚಿನ್ನತಿರುವೆಂಗಳನಾಥ (ಚಿನ್ನಯ್ಯ ಕ್ರಿ.ಶ.೧೪೯೮)ನೂ ಬಂದು ದಾಸರನ್ನು

ಸ್ತುತಿಸಿರುವುದನ್ನು ಗಮನಿಸಿದರೆ ಇವರೆಲ್ಲರಿಗೂ ವೈಕುಂಠದಾಸರು ಹಿರಿಯ ಸಮಕಾಲೀನರಾಗಿಯೇ ಕಂಡುಬರುತ್ತಾರೆ. ಅಚ್ಯುತದಾಸರೆಂಬುವರನ್ನೂ ಒಳಗೊಂಡಂತೆ ಎಲ್ಲರ ಸ್ತುತಿಗಳಲ್ಲೂ ದಾಸರ ಬಗೆಗಿನ ಎಲ್ಲ ಪವಾಡಸದೃಶ ಸಂಗತಿಗಳೂ ಉಲ್ಲೇಖಗೊಂಡಿರುವುದರಿಂದಲೂ ಇದನ್ನು ಸಮರ್ಥಿಸಬಹುದಾಗಿದೆ. ಆದ್ದರಿಂದ ಇವರನ್ನು ವ್ಯಾಸರಾಯರ (ಕ್ರಿ.ಶ.೧೪೪೭–೧೫೩೯) ಸಮಕಾಲೀನರು ಎಂದೇ ನಿರ್ಧರಿಸುವುದು ಹೆಚ್ಚು ಸೂಕ್ತವೆನಿಸುತ್ತದೆ.

ಏಕೆಂದರೆ ವ್ಯಾಸರಾಯರ ಶಿಷ್ಯ ಪರಂಪರೆಯಲ್ಲಿ ಗುರುತಿಸುತ್ತಿರುವ ಕನಕದಾಸರನ್ನು ಇನ್ನು ಮುಂದೆ ವೈಕುಂಠದಾಸರ ಶಿಷ್ಯಪರಂಪರೆಯಲ್ಲಿ ಗುರುತಿಸಬೇಕಾಗುತ್ತದೆ. ಕನಕದಾಸರ ಕೀರ್ತನೆಗಳಲ್ಲಿ ಈಗಾಗಲೆ ವಿದ್ವಾಂಸರು ಊಹಿಸಿರುವ ಪುರಂದರದಾಸರಿಗಿಂತ ಭಿನ್ನವಾಗಿರುವ ಅಂಶಗಳೆಲ್ಲ ವಿಶಿಷ್ಟಾದ್ವೈತ ತತ್ವಕ್ಕೇ ಹೊಂದಿಕೆಯಾಗುತ್ತವೆ. ಅಲ್ಲದೆ ಕನಕದಾಸರು ರಾಮಾನುಜರನ್ನು ತಿರುಮಲಾರ್ಯರನ್ನು, ವೈಕುಂಠದಾಸರನ್ನು ಕುರಿತು ಸ್ತುತಿಸಿರುವ ಕೀರ್ತನೆಗಳು ಹೆಚ್ಚಾಗಿ ದೊರೆಯುತ್ತವೆ (ವ್ಯಾಸರಾಯರನ್ನು ಸ್ತುತಿಸಿರುವ ಕೀರ್ತನೆಗಳು ಆ ಪ್ರಮಾಣದಲ್ಲಿ ಕಂಡುಬರುವುದಿಲ್ಲ.) ಇವರ ಜೀವನ ಚರಿತ್ರೆಯಲ್ಲಿ ವ್ಯಾಸರಾಯರ ಬಳಿಗೆ ಬರುವ ಮೊದಲು ತಾತಾಚಾರ್ಯರಲ್ಲಿ ಶಿಷ್ಯವೃತ್ತಿ ಅನುಸರಿಸಿದ್ದರೆಂಬುದನ್ನೂ ಎಲ್ಲ ವಿದ್ವಾಂಸರೂ ಒಪ್ಪಿದ್ದಾರೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಕನಕದಾಸರು ಸ್ಪಷ್ಟವಾಗಿ ಶ್ರೀವೈಷ್ಣವ ಸಂಪ್ರದಾಯದ ಕೀರ್ತನಕಾರರೇ ಆಗುತ್ತಾರೆಂಬುದು ನನ್ನ ಅಭಿಪ್ರಾಯವಾಗಿದೆ. (ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಬೇಕಾಗಿದೆ.) ಅವರ ಮೋಹನ ತರಂಗಿಣಿ, ನರಸಿಂಹಸ್ತವ, ಹರಿಭಕ್ತಸಾರ ಮತ್ತು ಬಹಳಷ್ಟು ಕೀರ್ತನೆಗಳು ಶ್ರೀವೈಷ್ಣವ ತತ್ವವಾದ 'ಶ್ರೀಹರಿ ಏಕನಿಷ್ಠೆ'ಯನ್ನೇ ಪ್ರತಿಪಾದಿಸಬಲ್ಲವಾಗಿವೆ ಮತ್ತು ಪುರಂದರದಾಸರ ಕೀರ್ತನೆಗಳಲ್ಲಿ ಕಾಣಸಿಗದ 'ಪ್ರಪತ್ತಿಧರ್ಮ' ಅಥವ 'ಶರಣಾಗತಿಭಾವ ದೀನತೆ' ಸ್ಪಷ್ಟವಾಗಿ ಗೋಚರಿಸುತ್ತದೆ. (ಈ ಕಾರಣದಿಂದಲೇ ಇವರ ಕೀರ್ತನೆಗಳು ಪುರಂದರರ ಕೀರ್ತನೆಗಳಿಗಿಂತ ಭಿನ್ನತೆಯನ್ನು ಪಡೆಯುತ್ತಿವೆಯೇ ವಿನಾ ವಿಮರ್ಶಕರು ಹೇಳುತ್ತಿರುವ ಜಾತಿಯ ಅಂಶದಿಂದ ಅಲ್ಲ)

ಈ ಹಿನ್ನೆಲೆಯಲ್ಲಿ ಕನಕದಾಸರು ವ್ಯಾಸರಾಯರ ಬಳಿ ಇದ್ದಿರಬಹುದಾದರೂ ಪುರಂದರರಂತೆ ವಿಧಿವತ್ತಾಗಿ ಅವರಿಂದ ದೀಕ್ಷೆ ಪಡೆದವರಾಗಲಿ, ಅವರ ನೇರ ಶಿಷ್ಯರಾಗಲಿ ಆಗಿದ್ದರೆಂಬುದನ್ನು ಹೇಳಬರುವುದಿಲ್ಲ. ಹಾಗಾಗಿ ತಾತಾಚಾರ್ಯರು ಅಥವ ಅವರ ಮೂಲಕ ವೈಕುಂಠದಾಸರ ಶಿಷ್ಯರಾಗಿಯೇ ಕಾಣಿಸಿಕೊಳ್ಳುತ್ತಾರೆ. ಇದಕ್ಕೆ ಪೂರಕವಾಗಿ, ಇವರು 'ಬಂಟನಾಗಿ ಬಾಗಿಲ ಕಾಯ್ವೆ' ಎಂದು ವೈಕುಂಠದಾಸ ರನ್ನು ನೇರವಾಗಿ ಸ್ತುತಿಸಿರುವುದು; 'ಹರಿ ನಿಮ್ಮ ಪದಕಮಲ ನಿರುತ ಧ್ಯಾನದಿ ಎನಗೆ ದೊರಕಿತೀ ಗುರುಸೇವೆ' ಎಂದು ಸ್ತುತಿಸಿರುವುದು; ಬಹುಕಾಲ ಬೇಲೂರಿನಲ್ಲೆ ಇದ್ದು ಕೆಲವು ಕೃತಿಗಳನ್ನು ರಚಿಸಿರುವುದು ಇವೆಲ್ಲ ಬೆಂಬಲವಾಗಿ ನಿಲ್ಲುತ್ತವೆ. ಹೀಗೆ ಪುರಂದರರ ಸಮಕಾಲೀನರಾದ ಕನಕದಾಸರನ್ನು ಶಿಷ್ಯರಾಗಿ ಪಡೆದಿರುವುದರಿಂದ ವೈಕುಂಠದಾಸರು ಇವರಿಗಿಂತ ಹಿರಿಯರಾಗಿ ವ್ಯಾಸರಾಯರ ಸಮಕಾಲೀನರಾಗಿದ್ದರು ಎಂದೇ ಹೇಳುವುದು ಸೂಕ್ತವೆನಿಸುತ್ತದೆ.

ವೈಕುಂಠದಾಸರ ಸಾಂಸಾರಿಕ ವಿವರಗಳ ಬಗೆಗೂ ಕೇಶವದಾಸರು ಕಲ್ಪಿಸಿರುವ ಕಥೆಯನ್ನೇ ಸದ್ಯಕ್ಕೆ ಒಪ್ಪಿಕೊಂಡಿರಬಹುದು. ಕೀರ್ತನೆಗಳಲ್ಲಿ ಕಂಡುಬರುವ ಪವಾಡದಂತಹ ಪ್ರಸಂಗಗಳನ್ನಾಧರಿಸಿಯೇ ಅವರೂ ಒಂದು ಚಿತ್ರವನ್ನು ಕೊಟ್ಟಿದ್ದಾರೆ. ಆದರೆ ದಾಸರ ಮದುವೆ ಹಾಗು ಹೆಂಡತಿಯ ಬಗ್ಗೆ ಬಿಡಿಸಿರುವ ಚಿತ್ರಕ್ಕೆ ಮತ್ತು ಹೆಂಡತಿಯ ಹೆಸರು 'ಸೌಮ್ಯನಾಯಕಿ' ಎಂದಿರುವುದಕ್ಕೆ ಆಧಾರವಿಲ್ಲ. ಬದಲು ಒಂದು ಕೀರ್ತನೆ (೪೧)ಇವರ ಹೆಂಡತಿಯನ್ನು 'ತಿರುಮಲೆ' ಎಂದು ಹೆಸರಿಸುತ್ತದೆ. ಅದು ತಿರುಮಾಲಾಂಬ ಇರಬಹುದು ಅಥವ ತಿರುಮಲದೇವಿ ಆಗಿರಬಹುದು. ಈ ಕೃತಿಯಲ್ಲಿ ಹೆಂಡತಿಯ ರೂಪದಲ್ಲಿ ಶ್ರೀಹರಿ ಶಯನಕ್ಕೂ ಆಗಮಿಸಿ ಎಲೆಯಡಕೆ ಮಡಚಿಕೊಟ್ಟು ಕಾಲೊತ್ತಿದಂತೆ 'ದರ್ಶನ' ಕಂಡು ಅದಕ್ಕೆ 'ಪ್ರಾಯಶ್ಚಿತ್ತವೇನುಂಟದ ಮಾಡು ಎನಗೆ' ಎಂದು ಪ್ರಾರ್ಥಿಸಿದ್ದಾರೆ. ವಾದಿರಾಜರ ಸ್ತುತಿಗೆ ಉತ್ತರ ರೂಪವಾಗಿ ಹೇಳುತ್ತಿರುವಂತಿರುವ ಒಂದು ಕೃತಿಯಲ್ಲಿ (೨೩) ತಮ್ಮನ್ನು ಮೂಢಮನುಷ್ಯ, ಗೂಢಪಾಪಿ, ಕಡುಪಾತಕ ಎಂದೆಲ್ಲ ಆತ್ಮನಿಂದನೆ ಮಾಡಿಕೊಂಡಿರುವುದನ್ನು (ಇನ್ನೂ ಕೆಲವು ಕೀರ್ತನೆಗಳಲ್ಲಿ ಇದೇ ಬಗೆಯ

ಆತ್ಮನಿಂದನೆ ಬರುತ್ತದೆ) ನೋಡಿದರೆ ದಾಸರು ಬದುಕಿನ ಹುರುಪಿನ ಕಾಲದಲ್ಲಿ ಲೌಕಿಕಾಸಕ್ತಿಯಲ್ಲೇ ತೊಳಲಿದ್ದಂತೆ ಕಾಣುತ್ತದೆ. ಇನ್ನೊಂದು ಕೀರ್ತನೆ (೨೯) ಹೆಂಡತಿಯ ಬಗ್ಗೆ ವ್ಯಕ್ತಪಡಿಸುತ್ತಿರುವ ಒಲವಿನಂತೆಯೂ ಭಾಸವಾಗುತ್ತಿದೆ. ಆದರೆ ೩೦, ೩೧–(ಒಲ್ಲೆನೀಕವಚಕುಂಡಲಗಳ, ಒಲ್ಲೆ ಸಂಪದವನೆಲ್ಲ) ರಲ್ಲಿ ಇದಕ್ಕೆ ವಿರುದ್ಧವಾದ ಭಾವ ವ್ಯಕ್ತವಾಗುತ್ತಿದೆ. ತಂದೆಯಿಂದ ಬಂದ ಸಂಪತ್ತು ಯಾವುದೂ ಬೇಡವೆಂಬ ನಿರಾಕರಣೆ ಮತ್ತು ಸ್ವಯಾರ್ಜಿತದ ಮೂಲಕ ಬದುಕಬಲ್ಲ ಆತ್ಮಸ್ಥೈರ್ಯವಿದೆ. ಅನಾಯಾಸವಾಗಿ ಬರುವ ಈ 'ಸತ್ತವರಸಂಪದ' ದಿಂದ ಮನಸ್ಸು ಕೆಡುತ್ತದೆ, 'ಇದನು ಕೊಂಡಾಡಬೇಕಾದಡೆಯು ಮುಕ್ತ್ಯಾಂಗನೆಯ ಮದುವೆಯನು ಮಾಡಿದ ಬಳಿಕ ಅನಿತನೊಪ್ಪಿಸುವ ಒಪ್ಪಂದವಾಗಿದೆ' ಎಂಬಲ್ಲಿ ದಾಸರು ಮದುವೆಗೆ ಮುಂಚಿನಿಂದಲೇ ಶರಣಾಗತಿಧರ್ಮವನ್ನು ಅನುಸರಿಸಿ ವೈಕುಂಠ ಕೇಶವನ ನಾಮಸ್ಮರಣೆಯಲ್ಲಿರುವ ಭಗವಂತನ ಪರಮಭಕ್ತರಂತೆ ಕಂಡು ಬರುತ್ತಾರೆ. ಈ ಹಿನ್ನೆಲೆಯಲ್ಲಿ ಇವರ ಆತ್ಮನಿಂದನೆಯನ್ನು, ಪ್ರಪತ್ತಿಧರ್ಮವನ್ನನುಸರಿಸಿದ ಭಕ್ತನ ಪೂರ್ವಜನ್ಮದ ಪಾಪಗಳ ಕಲ್ಪನೆಯ ಚಿತ್ರಗಳನ್ನಾಗಿಯೇ ಗ್ರಹಿಸಬೇಕಾಗುತ್ತದೆ. ಹೆಂಡತಿಯಲ್ಲಿಯೂ ಆರಾಧ್ಯದೈವವನ್ನು ಕಂಡಿರುವುದು ಇದಕ್ಕೆ ಪೂರಕವಾಗಿಯೇ ಇದೆ. ಇಷ್ಟರಹೊರತಾಗಿ ದಾಸರ ಸಾಂಸಾರಿಕ ವಿವರಗಳನ್ನು ಕುರಿತಂತೆ ಬೇರೇನನ್ನೂ ಹೇಳಬರುವುದಿಲ್ಲ.

ಸಂಪ್ರದಾಯದಲ್ಲಿ ದಾಸರು ಅರ್ಜುನಾಂಶರೆಂದು ಭಾವಿಸಲಾಗಿದೆ. ದಾಸರಜೀವನ ಸಂಪೂರ್ಣವಾಗಿ ವೈಕುಂಠಕೇಶವನಿಗೇ ಮೀಸಲಾದದ್ದು ಎನ್ನುವಷ್ಟರ ಮಟ್ಟಿಗೆಶರಣಾಗತಿಧರ್ಮದ ಪಾಲನೆಯಿದೆ. ದಾಸರು ಬಯಸಿದಾಗಲೆಲ್ಲ ಬಯಸಿದ ರೂಪದಲ್ಲಿ ಕೇಶವ ಒಲಿಯುತ್ತಿದ್ದ, ಇವರ ಎಲ್ಲ ಅಗತ್ಯಗಳನ್ನೂ ಪೂರೈಸುವ ಊಳಿಗದವನಾಗಿಯೂ ಕಾಣಿಸಿಕೊಳ್ಳುತ್ತಿದ್ದ ಎನ್ನುವಷ್ಟರಮಟ್ಟಿಗೆ ಕೀರ್ತನೆಗಳಲ್ಲಿ ಸಂದರ್ಭ–ಸನ್ನಿವೇಶದ ಪವಾಡ–ಸದೃಶ ಚಿತ್ರಣಗಳು ತುಂಬಿವೆ. ಸಮಕಾಲೀನ ಎಲ್ಲ ದಾಸರಿಂದಲೂ ಸ್ತುತಿಸಿಕೊಂಡಿರುವ ದಾಸರ ಭಕ್ತಿಯ ಮಹಿಮೆ ದೂರದ ತಿರುಪತಿಯ ಚಿನ್ನಯ್ಯ, (ತಾಳ ಪಾಕಂ ಮನೆತನ) ಅಚಲಾನಂದರ

ಶಿಷ್ಯಪರಂಪರೆಯುವರಾಗಿದ್ದಿರಬಹುದಾದ ಅಚ್ಯುತದಾಸರುಗಳನ್ನೂ ಕರೆಸಿಕೊಳ್ಳುವಷ್ಟು ಉತ್ಕೃಷ್ಟವಾಗಿ ಬೆಳೆದಿತ್ತು. ಇವರ ಕೀರ್ತಿ ಹರಡಿತ್ತು. ಅನೇಕ ಬಿರುದುಗಳು, ಗೌರವಗಳು, ಸಂಪತ್ತು ಬಂದು ಸೇರುತ್ತಿತ್ತು. ಆದರೂ ದಾಸರು ಎಂದೂ ಇದಕ್ಕೆ ಸೋತದ್ದಾಗಲಿ, ಆಸೆಪಟ್ಟದ್ದಾಗಲಿ ಕಂಡುಬರುವುದಿಲ್ಲ, ಬದಲು ಇವನ್ನೆಲ್ಲ ನಿರಾಕರಿಸಿ ತಮ್ಮ ಅಂತರಂಗ ಭಕ್ತಿಗೆ ಅಡ್ಡಿಯಾಗದಂತೆ ಮಾಡೆಂಬ, ಎಲ್ಲಿ ಇವೆಲ್ಲ ಮನಸ್ಸನ್ನು ಕೆಡಿಸುತ್ತವೋ ಎಂಬ ಎಚ್ಚರದಲ್ಲಿ ಸದಾ ಇದ್ದರೆಂಬುದು ತಿಳಿದುಬರುತ್ತದೆ.

ಇತರರಿಗಿಂತ ಭಿನ್ನವಾಗಿದ್ದ ಇವರ ಈ ಭಕ್ತಿಮಾರ್ಗವೇ ಇವರನ್ನು ವಿಶೇಷಪದವಿಗೆ ಕೊಂಡೊಯ್ದಿರುವಂತೆ ಕಂಡುಬರುತ್ತದೆ. ಅಚಲವಾದ ಭಕ್ತಿ, ದೃಢವಾದ ದೈವಾವಲಂಬನ, ಲೌಕಿಕಾಸಕ್ತಿಯ ಹಂಗೇ ಇಲ್ಲದ ದೈವಸಾನ್ನಿಧ್ಯದ ಹಂಬಲ, ಸುಖಾಪೇಕ್ಷೆಯಿಲ್ಲದ ಮುಕ್ತಿಯ ಆಶಯ, ಲೋಕಸುಖದ ನಿರಾಕರಣೆ, ಹರಿಯೊಬ್ಬನಲ್ಲೇ ದೈವಸಾಕ್ಷಾತ್ಕಾರದ ಯಶಸ್ಸು ಇತ್ಯಾದಿ ವಿಶಿಷ್ಟಾದ್ವೈತದ ಲಕ್ಷಣಗಳೆಲ್ಲ ವೈಕುಂಠದಾಸರನ್ನು 'ವಿಶಿಷ್ಟದಾಸ'ರನ್ನಾಗಿಸಿ ವಿಶೇಷವಾದ ಗೌರವವನ್ನು ತಂದುಕೊಟ್ಟಿವೆ ಎಂದರೆ ತಪ್ಪಾಗಲಾರದು. ದಾಸರು ಸಾವಿರಾರು ಕೀರ್ತನೆಗಳನ್ನು ರಚಿಸಿದ್ದಾರೆಂದು ಸಂಪ್ರದಾಯದ ಅಭಿಪ್ರಾಯವಾದರೂ ಲಭ್ಯವಿರುವುದು ೬೬ ಮಾತ್ರ. ಇವರ ಕೀರ್ತನೆಗಳು ಇತರರ ಕೃತಿಗಳಂತೆ ಹೆಚ್ಚು ಬಳಕೆಗೆ ಬರದೆ ಇದ್ದುದರಿಂದ ಕಣ್ಮರೆಯಾಗಿರಲೂಬಹುದು. ಅವನ್ನೆಲ್ಲ ಕಲೆಹಾಕುವ ಕೆಲಸ ಆಗಬೇಕಾಗಿದೆ.

(೨) ಇತರ ಗ್ರಂಥಗಳು

ವೈಕುಂಠದಾಸರು ಕೀರ್ತನೆಗಳನ್ನೇ ಅಲ್ಲದೆ 'ಗಜೇಂದ್ರಮೋಕ್ಷ' ಮತ್ತು 'ಶನೇಶ್ವರದಂಡಕ' ಎಂಬ ಎರಡು ಕೃತಿಗಳನ್ನೂ ರಚಿಸಿರುವುದಾಗಿ ತಿಳಿದು ಬರುತ್ತದಾದರೂ ಇವೆರಡರ ಕರ್ತೃತ್ವದ ಬಗ್ಗೆ ಇನ್ನೂ ಚರ್ಚೆಯಾಗಬೇಕಾಗಿದೆ. ಗಜೇಂದ್ರಮೋಕ್ಷ ವಾರ್ಧಕ ಷಟ್ಪದಿಯಲ್ಲಿರುವ ೧೦ ಪದ್ಯಗಳ ಪುಟ್ಟ ಕೃತಿ. ಆದರೆ ಇದು ಪುರಂದರದಾಸ, ಕನಕದಾಸ ಲಕ್ಷ್ಮೀಶರ ಹೆಸರಿನಲ್ಲೂ

ಕಂಡುಬರುತ್ತದೆ. ಈ ನಾಲ್ವರಲ್ಲಿ ಇದರ ನಿಜವಾದ ಕರ್ತೃ ಯಾರೆಂಬುದು ಇನ್ನೂ ನಿರ್ಧಾರ ವಾಗಬೇಕಾಗಿದೆ. ಶನೇಶ್ವರದಂಡಕ ವೈಕುಂಠದಾಸರೊಬ್ಬರ ಹೆಸರಿನಲ್ಲೇ ಇದ್ದರೂ ಇದರ ಕರ್ತೃತ್ವದ ಬಗೆಗೂ ಅನುಮಾನವೇರ್ಪಡುತ್ತದೆ. ತಮ್ಮ ಕೃತಿಗಳಲ್ಲಿ ವಿಶಿಷ್ಟಾದ್ವೈತ ಲಕ್ಷಣವಾದ 'ಶ್ರೀಹರಿ ಏಕ ನಿಷ್ಠೆ'ಗೆ ಬದ್ಧರಾಗಿರುವ ದಾಸರು ಇಲ್ಲಿ ಅದನ್ನು ಮೀರಲು ಸಾಧ್ಯವೇ ಎಂಬ ಪ್ರಶ್ನೆ ಏಳುತ್ತದೆ. ಶ್ರೀವೈಷ್ಣವ ಸಂಪ್ರದಾಯದಲ್ಲಿ ಶ್ರೀಹರಿಯನ್ನು ಹೊರತುಪಡಿಸಿ ಬೇರೆ ಯಾವ ದೈವವನ್ನೂ ಸ್ತುತಿಸುವುದಿಲ್ಲ. ಆದರೆ ಈಚಿನ ದಿನಗಳಲ್ಲಿ ಇದನ್ನು ಸಡಿಲಿಸಿ ಸರ್ವದೈವವನ್ನೂ ಸ್ತುತಿಸುವ ಪರಿಪಾಠವಿದೆ. ೧೯-೨೦ನೇ ಶತಮಾನದ ಕೆಲವು ಶ್ರೀವೈಷ್ಣವ ಹರಿದಾಸರಲ್ಲಿ ಈ ಸರ್ವದೈವಸ್ತುತಿಯ ಪರಂಪರೆಯನ್ನು ಕಾಣಬಹುದಾಗಿದೆ. ಆದರೆ ವೈಕುಂಠದಾಸರ ಕೃತಿಗಳಲ್ಲಿ ಇದು ಕಂಡುಬರುವುದಿಲ್ಲ. ಎಲ್ಲ ಕೀರ್ತನೆಗಳಲ್ಲೂ 'ಹರಿಏಕನಿಷ್ಠೆ'ಗೇ ಬದ್ಧರಾಗಿದ್ದಾರೆ. ಈ ಶನೇಶ್ವರದಂಡಕ ಮಾತ್ರ ಅದಕ್ಕೆ ಅಪವಾದವಾಗಿದ್ದರೂ ಸದ್ಯಕ್ಕೆ ಇದನ್ನು ವೈಕುಂಠದಾಸರದ್ದೆನ್ನಲು ಅಡ್ಡಿಯಿಲ್ಲ. ಅನ್ಯಕರ್ತೃತ್ವದ ಪ್ರಶ್ನೆ ಇಲ್ಲದಿರುವುದರಿಂದ ವೈಕುಂಠದಾಸರದ್ದೇ ಎಂದು ಸ್ವೀಕರಿಸಲಾಗಿದೆ. ಈ ಮೂಲಕ ವೈಕುಂಠದಾಸರ ಕಾಲದಿಂದಲೇ ಈ ಏಕನಿಷ್ಠೆ ಸಡಿಲಗೊಂಡು ಸರ್ವದೈವ ಸ್ತುತಿಯ ಬಳಕೆ ವಿಶಿಷ್ಟಾದ್ವೈತ ತತ್ವದಲ್ಲಿ ಕಾಣಿಸಿಕೊಂಡು ಸಮಾಜಮುಖಿಯಾಗತೊಡಗಿತು ಎಂದೂ ಹೇಳಬಹುದಾಗಿದೆ. ದಂಡಕ ನಾದಮಯವಾಗಿ ಸಂಸ್ಕೃತಪದ ಸಮ್ಮಿಳಿತದೊಂದಿಗೆ ಸರಾಗವಾಗಿ ಹೇಳಿಸಿಕೊಂಡು ಹೋಗುತ್ತದೆ. ಅಲ್ಲಲ್ಲೆ ಪಾಠಗಳು ತ್ರುಟಿತವಾಗಿದ್ದು ಸಾಧ್ಯವಾದ ಕಡೆಗಳಲ್ಲಿ ಊಹಾಪಾಠವನ್ನು ನೀಡಲಾಗಿದೆ.

(೩) ಕೀರ್ತನೆಗಳು

ಬೇಲೂರು ವೈಕುಂಠದಾಸರ ಲಭ್ಯವಿರುವ ೬೬ ಕೀರ್ತನೆಗಳನ್ನು ಶ್ರೀಹರಿಸ್ತುತಿ, ಲಕ್ಷ್ಮೀಸ್ತುತಿ, ಗುರುಸ್ತುತಿ, ಆತ್ಮನಿವೇದನೆ, ಲೋಕನೀತಿ ಮತ್ತು ಕ್ಷೇತ್ರವರ್ಣನೆಗಳಲ್ಲಿ ವಿಭಾಗಮಾಡಲಾಗಿದೆ. ಇವೆಲ್ಲ ಶ್ರೀವೈಷ್ಣವತತ್ವಕ್ಕನುಗುಣವಾಗಿ ಹರಿಏಕನಿಷ್ಠೆಯನ್ನು ಸಾಧಿಸಲಾಗಿದೆ. ಎಲ್ಲಿಯೂ ಸರ್ವದೈವಸ್ತುತಿ ಕಂಡುಬಂದಿಲ್ಲ. ಕೀರ್ತನೆಗಳ ಸಾಮಾನ್ಯ ಲಕ್ಷಣಗಳಾದ ಆತ್ಮನೀವೇದನೆ ಮತ್ತು ಲೊಕನೀತಿಯ ಕೃತಿಗಳೊಂದಿಗೆ

ತಾತ್ವಿಕ ಚಿಂತನೆಗಳನ್ನು ವೈಕುಂಠದಾಸರ ಕೀರ್ತನೆಗಳಲ್ಲಿ ನೋಡಬಹುದು. ದೊರೆತಿರುವ ಕೀರ್ತನೆಗಳಲ್ಲಿ ೯ಸುಳಾದಿಗಳೂ ೨ ಉಗಾಭೋಗಗಳೂ ಇವೆ. ನಿಯಮಕ್ಕೆ ಬದ್ಧವಾಗಿ ಕಂಡುಬರುವ ಸುಳಾದಿಗಳಲ್ಲಿ ತಾಳ ನಿರ್ದೇಶನ ಸ್ಪಷ್ಟವಾಗಿದೆ. ಕೃಷ್ಣಲೀಲೆಯ ಕೃತಿಗಳನ್ನೂ ನಿಂದಾಸ್ತುತಿಗಳನ್ನೂ ಮಾಡಿರುವ ವೈಕುಂಠದಾಸರು ಕನಕ–ಪುರಂದರರ ಹಿರಿಯ ಸಮಕಾಲೀನರಾಗಿ ಕನ್ನಡ ಹರಿದಾಸ ಸಾಹಿತ್ಯದಲ್ಲಿ ಮುಖ್ಯಕೀರ್ತನಕಾರರಾಗಿ ನಿಲ್ಲುತ್ತಾರೆ.

ಶ್ರೀಹರಿಯನ್ನು ಕುರಿತು ೧೯ ಕೃತಿಗಳಲ್ಲಿ ಸ್ತುತಿಸಿರುವ ದಾಸರು ಹರಿಯನ್ನು ವಿಷ್ಣು, ಕೇಶವ, ಸಂಕರ್ಷಣ, ನರಸಿಂಹ, ವೆಂಕಟೇಶ, ಚನ್ನಕೇಶವ, ಹೀಗೆ ವಿವಿಧರೂಪಗಳಲ್ಲಿ ಕಂಡಿದ್ದಾರೆ. ಈ ಎಲ್ಲ ಕೃತಿಗಳಲ್ಲೂ 'ಹರಿಏಕನಿಷ್ಠೆ' ಮುಖ್ಯವಾಗಿದೆ, ಶ್ರೀವೈಷ್ಣವ ಕಲ್ಪನೆಯಾದ ಲಕ್ಷ್ಮೀಸಮೇತವಿಷ್ಣುವನ್ನು ಕಂಡಿದ್ದಾರೆ. ಸೌಂದರ್ಯವರ್ಣನೆ ದಾಸರಿಗೆ ಅತ್ಯಂತ ಪ್ರಿಯವಾದ ಆಸಕ್ತಿಯಾಗಿದೆ.

'ಶ್ರೀದೇವಿಗೆ ಯೌವನವರೆಯಹುದೆಂದು
ರವಿಶಶಿಗಳ ನೀ ಪಡೆದೆ
. . .ಇಂದ್ರಾಗ್ನಿಗಳ ನೀನೇ ಪಡೆದೆ, . .
ವಾಯುವಿರಂಚಿಮೊದಲಾದವರ ಪಡೆದೆ
ಶ್ರೀದೇವಿಯನೆದೆಗೇರಿಸಿಕೊಂಡೆ, ...
ಪೇರ ಧರಿಸಿಕೊಂಡೆ' ೧೧

ಎಂಬ ಈ ಉಗಾಭೋಗದಲ್ಲಿ ಈ ಎರಡೂ ಲಕ್ಷಣಗಳಿರುವುದನ್ನು ನೋಡಬಹುದು. ದಾಸರು ಲಕ್ಷ್ಮಿಯನ್ನು ಕುರಿತು ರಚಿಸಿರುವ ಎರಡೇ ಕೃತಿಗಳು ಅತ್ಯಂತ ಮಧುರವಾಗಿವೆ. 'ಅರಿತು ಸಿಂಗರವ ಮಾಡಿ' ಮತ್ತು 'ಗಾಡಿ ಎತ್ತಲಿಂದ ಬಂದುದೇ' ಈ ಎರಡೂ ಲಕ್ಷ್ಮಿಯ ಸೌಂದರ್ಯ ವರ್ಣನೆಯನ್ನೇ ಹೇಳುತ್ತವೆ. ದಾಸರು ರಚಿಸಿರುವ ಒಂದೇ ಒಂದು (೧೮) ನಿಂದಾಸ್ತುತಿ ಭಕ್ತನೊಬ್ಬನ ಆಧ್ಯಾತ್ಮ ಶಕ್ತಿಯ ದ್ಯೋತಕವಾಗಿ ಬಂದಿದೆ. ಶ್ರೀಹರಿಯನ್ನು ವರ್ಣಿಸುವಲ್ಲಿ ತೋರಿದ

ಸೌಂದರ್ಯಪ್ರಿಯತೆಯನ್ನೇ ಅವಗುಣವಾಗಿಸಿ ದೇವರನ್ನು ಜಗ್ಗಿಸುವ ಪರಿ ಅದ್ಭುತವಾದ ಪ್ರತಿಮಾಲೋಕವನ್ನು ಸೃಷ್ಟಿಸುತ್ತದೆ.

ವೈಕುಂಠದಾಸರಲ್ಲಿ, ಎಲ್ಲ ಶ್ರೀವೈಷ್ಣವ ಹರಿದಾಸರಲ್ಲಿ ಕಂಡುಬರುವ ಗುರುಸ್ತುತಿರೂಪದ ಆಳ್ವಾರ್ ಆಚಾರ್ಯಸ್ತುತಿ ಕಂಡುಬಾರದೆ ಇರುವುದು ಸೋಜಿಗ. ಇವರ ಶಿಷ್ಯರಾಗಿರುವ ಕನಕದಾಸರಲ್ಲಿ ರಾಮಾನುಜರನ್ನು ಕುರಿತ ಸ್ತುತಿಗಳು ಬಂದರೂ ಇವರಲ್ಲಿ ಕಾಣಸಿಗುವುದಿಲ್ಲ. ಪ್ರಾಯಶಃ ಇವರ ಎಲ್ಲ ಕೀರ್ತನೆಗಳೂ ಲಭ್ಯವಾದಲ್ಲಿ ಅದರಲ್ಲಿ ಈ ಸ್ತುತಿಗಳು ದೊರಕಬಹುದೇನೋ. ಇವರನ್ನು ಸ್ತುತಿಸಿರುವ ವಾದಿರಾಜರನ್ನು ಮೂರು ಕೃತಿಗಳಲ್ಲಿ ಮರುಸ್ತುತಿಸಿದ್ದಾರೆ. ಹಾಗೆಯೇ ಅಚ್ಯುತದಾಸರನ್ನು ಎರಡು ಕೃತಿಗಳಲ್ಲೂ ತಾಳ್ಳಪಾಕಂ ಚಿನ್ನಯ್ಯನನ್ನು ಒಂದು ಕೃತಿಯಲ್ಲೂ ಮರು ಸ್ತುತಿಸಿದ್ದಾರೆ.

'ಅತಿಮಧುರ ಪಂಕೇಜ ದ್ವಿಜರಾಜ ಶ್ರೀ–
ಪತಿಪದಾಂಬುಜ ಮಧುಕರ ವಾದಿ ವಾದಿರಾಜ' (೨೨)

ಎಂದು ಅತ್ಯಂತ ಗೌರವಪೂರ್ವಕವಾಗಿ ವಾದಿರಾಜರನ್ನು ಸ್ತುತಿಸಿದ್ದು 'ಧಾರುಣಿಯ ಜನರ ಮತಿಗುಂದಿಸುವ ಖಳಮತ್ತವಾರಣ ಮೃಗೇಂದ್ರ', 'ಧರೆಯ ಸುಜನರ ಮೋಹಿಸುವ ಶೂನ್ಯಜನನಿಕರ', 'ಮೃಡಮುಖ್ಯ' ಎಂದೆಲ್ಲ ಕೀರ್ತಿಸುತ್ತಾರೆ. ನಿಮ್ಮಂತಹವರ ಹೊಗಳಿಕೆಗೆ ಮೂಢಮನುಷ್ಯ ಗೂಢಪಾಪಿಯಾದ ನನ್ನನ್ನು 'ಕೊಂಡಾಡಬಹುದೆ ಯತೀಂದ್ರ' (೨೩)ಎಂದೂ ವಿನಯಪೂರ್ವಕವಾಗಿ ವಿನಂತಿಸಿದ್ದಾರೆ. 'ಮಗುವು ಕಾಣಯ್ಯ ಮಾಯದ ಮಗುವು ಕಾಣಯ್ಯ ಸುಗುಣವಾದಿರಾಜರೆ ಮೂಜಗವಾನುದರದೊಳಗಿಟ್ಟ' (೨೪) ಕೃತಿಯಲ್ಲಿ ವಾದಿರಾಜರಿಗೆ ಶ್ರೀಹರಿಯು ಏಕನಿಷ್ಠೆಯನ್ನು, ಕೃಷ್ಣನ ಲೀಲೆಗಳನ್ನು ಪರಿಚಯಿಸಿಕೊಡುವ ಧಾಟಿಯಲ್ಲಿದೆ. ಇವರಿಬ್ಬರ ನಡುವೆ ನಿರಂತರ 'ಪ್ರಸಂಗವೂ' ವಾದಿರಾಜರೇ ಬೇಲೂರಿಗೆ ಆಗಾಗ್ಗೆ ಬರುತ್ತಿದ್ದುದೂ ಇತ್ತೆಂದು ಸಂಪ್ರದಾಯದಲ್ಲಿ ರಂಜನೀಯ ಕಥೆಗಳೇ ಸೃಷ್ಟಿಯಾಗಿವೆ.

ಪಂಡರಾಪುರದಿಂದ ಬಂದಿದ್ದವರೆಂದೂ ಅಚಲಾನಂದ ಪರಂಪರೆಯ-ವರೆಂದೂ ಹೇಳಲಾಗುವ ಅಚ್ಯುತದಾಸರು ಇವರೊಂದಿಗೆ ವಾದಮುಖಕ್ಕೆ ಬಂದುದರ ಪರಿಣಾಮವಾಗಿ ಕಣ್ಣು ನಾಲಿಗೆ ಕಳೆದುಕೊಂಡರೆಂದೂ ಅವರಿಗಾಗಿ ಕೇಶವನಲ್ಲಿ ಪ್ರಾರ್ಥಿಸಿಕೊಂಡು ಅವರನ್ನು ಆ ವಿಪತ್ತಿನಿಂದ ರಕ್ಷಿಸಿದರೆಂದೂ ಹೇಳುವ ಸಂಪ್ರದಾಯದ ಮಾತುಗಳಿಗೆ ಪೂರಕವಾಗಿ

'ಕೊಡುವುದಿಲ್ಲವೆ ಪೋದ ಕಣ್ಣು ನಾಲಗೆಯ' (೨೫)
'ಪಾಲಿಪುದು ನಯನಗಳ ನಾಲಗೆಯ ನೀನು' (೨೬)

ಈ ಕೃತಿಗಳೂ ನಿಲ್ಲುತ್ತವೆ. ಇವರಂತೆಯೇ ತಾಳ್ಳಪಾಕಂ ಚಿನ್ನಯ್ಯನೂ (ಅನ್ನಮಾಚಾರ್ಯರ ಮೊಮ್ಮಗ) ಇವರಲ್ಲಿಗೆ ಬಂದು ಇವರಿಗೂ ದಾಸರು ಕೇಶವನನ್ನು ತೋರಿಸಿರುವ 'ನೋಡಲೆಬೇಕೆ ಎನ್ನೊಡೆಯನ' (೬೨) ಈ ಕೃತಿಯೂ ಇದೆ. ಇವರುಗಳು ದಾಸರನ್ನು ಸ್ತುತಿಸಿರುವುದಕ್ಕೆ ಉತ್ತರರೂಪದಲ್ಲಿ ಈ ಕೃತಿಗಳಿವೆಯೇ ವಿನಾ ದಾಸರೇ ಸ್ವಯಂಪ್ರೇರಿತರಾಗಿ ಸ್ತುತಿಸಿಲ್ಲ. ಇದನ್ನುಗಮನಿಸಿದರೆ ದಾಸರ ಪ್ರಖ್ಯಾತಿ, ದಾಸರಿಗಿದ್ದ, ಗೌರವ, ಗೋಚರವಾಗುತ್ತದೆ.

ಆತ್ಮನಿವೇದನೆಯ ಇಪ್ಪತ್ತು ಕೃತಿಗಳಿದ್ದು ಇವೆಲ್ಲ 'ಪ್ರಪತ್ತಿ' ಧರ್ಮವನ್ನು ಸಾರುತ್ತವೆ. ಪ್ರತಿಯೊಂದು ಕೃತಿಯೂ ಶ್ರೀಹರಿಯನ್ನು 'ಏಕಮೇವಾದ್ವಿತೀಯ' ದೈವವನ್ನಾಗಿ ಅವನ ಅಥವ ಅವನ ಭಕ್ತರ ಪಾದಸೇವನೆಯ ಮೂಲಕ ಅವನಲ್ಲಿ ಶರಣಾಗತಿಯನ್ನು ವ್ಯಕ್ತಪಡಿಸುತ್ತವೆ. 'ದಾಸರದಾಸರದಾಸರಮನೆಯ' ಊಳಿಗ ಮಾಡುವುದೇ ಶ್ರೀವೈಷ್ಣವ ಮುಕ್ತಿ ತತ್ವದಆಶಯ. ಈ ಕೃತಿಗಳಲ್ಲಿ ಪವಾಡದೋಪಾದಿಯ ಹಲವು ಪ್ರಸಂಗಗಳ ವಿವರಣೆಗಳು ಕಂಡುಬರುತ್ತವೆ. ವರದನ ಪ್ರಸಂಗ, ಹೆಂಡತಿಯ ಶಯನಪ್ರಸಂಗ, ಗೋದಾನದ ಪ್ರಸಂಗ, ದೀವಟಿಗೆಯಪ್ರಸಂಗ, ಶ್ರಾದ್ಧದ ಪ್ರಸಂಗ, ನಂಜನನ್ನು ಬದುಕಿಸಿದ್ದು, ಆನೆಯಪ್ರಸಂಗ, ಹೀಗೆ ಹಲವಿವೆ. ಇವುಗಳಲ್ಲೆಲ್ಲ ದಾಸರ ಸಾಧನೆ, ಸಿದ್ಧಿ, ದೈವಸಾಕ್ಷಾತ್ಕಾರ ಸಾಧ್ಯತೆಯನ್ನು ಕಾಣಬಹುದಾಗಿದೆ. ದಾಸರ ಪ್ರಪತ್ತಿಯ ಸಾಧನೆಗಳು ದೈವವನ್ನು

ಯಾವ ರೂಪದಲ್ಲಾದರೂ ಕಾಣುವಂತಹ, ದೈವಸಹಾಯವನ್ನು ಪಡೆಯುವಂತಹ ಮಹಾಪುರುಷನನ್ನಾಗಿ ಈ ಪ್ರಸಂಗಗಳು ಕಲ್ಪಿಸಿವೆ.

ಸತಿಪತಿಭಾವದಲ್ಲಿಯೂ ದಾಸರು ಸೊಗಸಾದ ಆತ್ಮರತಿಯನ್ನು ವ್ಯಕ್ತಪಡಿಸಿದ್ದಾರೆ. 'ಒಲವಿಲ್ಲವೆನ್ನಬಹುದೆ ನೀರೆ ನಿನ್ನಲ್ಲಿ' (೨೯)ಮತ್ತು 'ಮರೆದೆಯೇನೋ ಚೆನ್ನರಾಯ' (೪೪) ಕೃತಿಗಳಲ್ಲಿ ಈ ಭಾವ ವ್ಯಕ್ತವಾಗಿದೆ. ಕನ್ನಡ ಹರಿದಾಸರ ಸತಿಪತಿಭಾವ ಅಭಿವ್ಯಕ್ತಿಗೆ ಈ ಕೃತಿಗಳು ಉತ್ತಮ ಕೊಡುಗೆಗಳಾಗಬಲ್ಲವಾಗಿವೆ.

'ಕಂತುಪಿತಕರುಣಾಕರ ನಿನ್ನ
ಚಿಂತೆಯೊಳಗಿರಿಸಯ್ಯ ಜನಾರ್ಧನ'
'ನೀನೇ ದಯಾ ಸಂಪನ್ನ ಭಕ್ತ ಪ್ರಸನ್ನ'
'ನೊಂದೆ ನಾನಾವಿಧದಲಿ ಬಂದ ಜನ್ಮಾವಳಿಯಲಿ'

ಮುಂತಾದ ಕೃತಿಗಳು ಸುಂದರವಾದ ಆತ್ಮನಿವೇದನೆಯ ಕೀರ್ತನೆಗಳಾಗಿವೆ. ಪುರಾಣ ಪ್ರತಿಮೆಗಳನ್ನು ಪುಂಖಾನುಪುಂಖವಾಗಿ ತರುವ ಮೂಲಕ ಮನಸ್ಸನ್ನು ಪರಿಪರಿಯಾಗಿ ಭಗವಂತನಲ್ಲಿ ಬಿಚ್ಚಿಡುತ್ತಾರೆ, ಸಂಪೂರ್ಣವಾಗಿ ಶರಣಾಗತರಾಗುತ್ತಾರೆ.

'ಹೆಂಡಿರಿಬ್ಬರನಾಳ್ವಗುಂಟೆ ಸುಖ' (೪೦)ಎಂಬ ಕೀರ್ತನೆಯಲ್ಲಿ 'ಆಸೆ' ಮತ್ತು 'ಲಜ್ಜೆ'ಗಳನ್ನೇ ಹೆಂಡಂದಿರನ್ನಾಗಿ ಭಾವಿಸಿ ಅವುಗಳ ದ್ವಂದ್ವ ಸಂಘರ್ಷವನ್ನು, ಅದರಿಂದಾಗುವ ಮನೋಲೋಕದ ಅಸ್ಥಿರತೆಯನ್ನು ಅತ್ಯಂತ ಸಮರ್ಥವಾಗಿ ತಂದಿದ್ದಾರೆ.

'ಗಾಸಿಯಾದುದು ಚಿತ್ತವಿಬ್ಬರಿಂ ವೈಕುಂಠ
ಕೇಶವ ಮನದ ಸಂಸಾರವಂ ಬಿಡಿಸಯ್ಯ'

ಎಂಬ ಆತ್ಮನಿವೇದನೆಯ ಮೂಲಕ ತಾತ್ವಿಕ ಚಿಂತನೆಯನ್ನು ಯಶಸ್ವಿಯಾಗಿ ತಂದಿದ್ದಾರೆ.

ಇಲ್ಲಿ ಬರುವ ಸುಳಾದಿಗಳೂ ಈ ಆತ್ಮನಿವೇದನಾ ಭಾವವನ್ನು ಅಭಿವ್ಯಕ್ತಿಸುವಲ್ಲಿ ಹಿಂದೆ ಬಿದ್ದಿಲ್ಲ.

'ಮನಕೆನ್ನಿನಿಯನ ನೆನೆವುದೇ ಜೀವನ
ತನುವಿಗೆ ನಿನ್ನಡಿಗೆರಗಿ ಪುಳಕಿತವ
ಸಂಧಿಸುವುದೇ ಜೀವನ' (೪೭)

ಎಂಬ ಒಂದೇ ಮುಖ್ಯ ಉದ್ದೇಶ ಹೊಂದಿರುವ ದಾಸರು ದಾಸ್ಯ ಜೀವನವನ್ನು, ವೈಕುಂಠ ಕೇಶವನನ್ನು ಸೇವಿಸುವುದು ಮತ್ತು ಸೇರುವುದಕ್ಕಾಗಿಯೇ ಮೀಸಲಿಟ್ಟಿವರು.

ಕೃಷ್ಣಲೀಲೆಗಳನ್ನೂ ರಚಿಸಿರುವ ವೈಕುಂಠದಾಸರು ಹರಿದಾಸ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಹರಿದಾಸರಲ್ಲಿ ಕೃಷ್ಣಲೀಲೆ ಎಂದಕೂಡಲೆ ಪುರಂದರದಾಸರ ಬಾಲಲೀಲಾ ಕೀರ್ತನೆಗಳು ನೆನಪಿಗೆ ಬರುತ್ತವೆ. ಆದರೆ ವೈಕುಂಠದಾಸರು ಅದಕ್ಕಿಂತ ಭಿನ್ನವಾಗಿ ಅಪರೂಪವೆನಿಸಿರುವ ಕೃಷ್ಣನ ಮಧುರಾಲೀಲೆಗಳನ್ನು ಚಿತ್ರಿಸಿದ್ದಾರೆ.

'ಎಲ್ಲಿಹ ಮಧುರಾಪುರ ಇನ್ನೆಲ್ಲಿಹ ಕಂಸಾಸುರನೆ
ಎಲ್ಲಿಂದ ಬಂದುದೆ ಬಿಲ್ಲುಹಬ್ಬ' (೮೯)

ಕೃತಿಯಲ್ಲಿ ಈ ಭಾವ ತುಂಬಿ ಬಂದಿದೆ. ಇಲ್ಲಿ ಅಪರೂಪಕ್ಕಾದರೂ ಶ್ರೀ ವೈಷ್ಣವ ಆಳ್ವಾರರಿಬ್ಬರ, ಜೀವನ ಪ್ರಸಂಗಗಳನ್ನು ನೆನಪಿಸುವ ಪ್ರತಿಮೆ ಬಳಕೆಯಾಗಿದೆ.

'ಮುಟ್ಟದಿರಿ ಗೋಪವನಿತೆಯರು ಗಲಭೆಯದೇನು ತೊಲಗೀರೆ', ಕೃತಿಯಲ್ಲಿ ಬಾಲಲೀಲೆಯ ಪ್ರಸಂಗಗಳನ್ನು ಅತ್ಯಂತ ಆತ್ಮೀಯವಾಗಿ ತಂದಿದ್ದಾರೆ.

ಲೋಕನೀತಿಯನ್ನು ಕುರಿತ ಕೀರ್ತನೆಗಳೂ ವೈಕುಂಠದಾಸರಲ್ಲಿದ್ದು ಆ ಮೂಲಕ ಅವರು ಸಮಾಜಮುಖಿಯಾಗಿರುವುದನ್ನೂ ಗಮನಿಸಬಹುದು.

'ಕಟಾ ಕಟಾ ಕಂಡೆವಲ್ಲ
ಕುಟಿಲವರ್ತನ ಕೆಲಕೆಲವು ಈ ಕಲಿಯುಗದಿ' (೫೩)

ಎಂಬುದು ಅತ್ಯಂತ ಮುಖ್ಯವಾದ ಸಾಮಾಜಿಕ ಚಿಂತನೆಯ ಕೃತಿಯಾಗಿದೆ.

'ಮಳೆಯಿಲ್ಲ ಬಂದರಿಳೆಬೆಳೆಯದು ಬೆಳೆಯೆ ಧರಣಿ
ಹುಲಿಸಿಲ್ಲ ಹುಲಿಸಾದರಿಲ್ಲ ಪ್ರಜೆಗೆ
ಸಲುವ ಕೋರಲ್ಪವನು ಬಿಡರು ರಾಜರುಗಳ ಹಾಮಳಿ
ಯಲುಳುಹಿಲ್ಲ ಯಿನ್ನೆಂತು ಕೃಷಿಕರಿಗೆ'

ಎಂಬುದು ಗ್ರಾಮೀಣ ಬದುಕಿನ ಸಾರ್ವಕಾಲಿಕ ಸತ್ಯವಾಗಿದೆ. 'ಬಯಲ ಮಮತೆ', ಸ್ವಾಮಿದ್ರೋಹ', 'ಬಾಯಬಡುಕತನ' ಮುಂತಾದ ಸಾಮಾಜಿಕ ಕ್ಲೀಷೆಗಳನ್ನೂ ದಾಸರು ಅರ್ಥಪೂರ್ಣವಾಗಿ ಬಯಲಿಗೆಳೆದಿದ್ದಾರೆ.

'ವಸುಮತಿಯಸುರವಧೆ ಘನವಾಯಿತಲ್ಲ'

ಎಂಬ ಸಾಲಿಗೆ ಸಮಾಜದಲ್ಲಿ ನಡೆಯುವ ನೈತಿಕ ಅಧಃಪತನವನ್ನು ಹೇಳುವ ಹಾಗೆಯೇ ಸಮಕಾಲೀನ ರಾಜಕೀಯ ಅರಾಜಕತೆಯನ್ನೂ ಹೇಳಬಹುದಾಗಿದೆ. ಆಗಿನ 'ಮುಸಲ್ಮಾನದಾಳಿ'ಯನ್ನೂ ಇದು ಸೂಚಿಸುತ್ತಿರುವಂತಿದೆ.

'ಮಾಡು ದಾನಧರ್ಮ ಪರ ಉಪಕಾರ'
'ಏನುನೆಲೆಯೆನುತಿಹೆ ಮನುಜ'
'ಸತ್ಯಂವದ ಧರ್ಮಂ ಚರ'
'ಕಡೆಯಿಲ್ಲದೀ ಭವಾಂಬುಧಿಯ ದಾಂಟುವೊಡೆ'

ಇತ್ಯಾದಿ ಕೀರ್ತನೆಗಳಲ್ಲಿ ಸಮಾಜಕ್ಕೆ ಒಳಿತನ್ನು ಬಯಸುವ ಆಶಯಗಳಿವೆ. ಲೋಕವ್ಯವಹಾರಗಳನ್ನು ತಿದ್ದುವುದಕ್ಕಿಂತ ಅದರ ವಾಸ್ತವ ಸ್ಥಿತಿಯನ್ನು ತಿಳಿಸುವ ರೀತಿಯಲ್ಲಿ ದಾಸರ ಸಾಮಾಜಿಕ ಸ್ಪಂದನವಿದೆ. ಅನೇಕ ಗಾದೆ ಮಾತುಗಳನ್ನು ಧ್ವನಿಪೂರ್ಣವಾಗಿ ನುಡಿಸಿಕೊಳ್ಳುವ ಚಾತುರ್ಯ ದಾಸರಿಗಿದೆ.

'ಸೀಗೆಯೊಳಗಿರ್ದ ಬಾಳೆಯಾದುದು'

'ಒಂದೆಸಗಲೇಳಡಸಿತು'

'ಯಾತಮುಳಿದರೆ ಜನವನುಳಿಪವರಾರು'

'ಹಗಲುಹಾದರಗಿತ್ತಿಯಂತಿಪ್ಪ'

ಇತ್ಯಾದಿ ಅನೇಕ ನುಡಿಗಟ್ಟು - ಲೋಕರೂಢಿಗಳ ಜೊತೆಗೆ ರೂಪಕಗಳನ್ನು ಕಟ್ಟುವ ಕಲೆಯಿದೆ. 'ನೀರಡಸಿ ಜಾನ್ಹವಿಯ ತೀರದಲಿ ಬಾವಿಯನೀರಕುಡಿವ ಮಾನವನತೆರದಿ' (೫೭) ಎಂಬಂತಹ ಪರಿಣಾಮಕಾರಿ ಹೋಲಿಕೆಗಳ ಮೂಲಕ ಮಾನವ ಸಹಜಗುಣಗಳನ್ನೂ ಜೀವನದ ರೀತಿನೀತಿಗಳನ್ನೂ, ಲೋಕ ವ್ಯವಹಾರವನ್ನೂ ದಾಸರು ಕಟ್ಟಿಕೊಡುತ್ತಾರೆ.

ದಾಸರು ಬೇಲೂರನ್ನೇ ಕೇಂದ್ರವಾಗಿಟ್ಟುಕೊಂಡು ಹರಿದಾಸಸಾಹಿತ್ಯ ಬೆಳೆಸಿದವರೆಂದೂ ಬೇಲೂರು ಬಿಟ್ಟು ಬೇರೆಲ್ಲೂ ಹೋದವರಲ್ಲವೆಂದೂ ಒಂದು ಅಭಿಪ್ರಾಯವಿದೆ. ಆದ್ದರಿಂದಲೇ ಇವರಲ್ಲಿ ಹೆಚ್ಚು ಕ್ಷೇತ್ರವರ್ಣನೆಯ ಕೃತಿಗಳು ಕಂಡುಬರುವುದಿಲ್ಲ. ಸ್ವಕ್ಷೇತ್ರವಾದ ಬೇಲೂರಿನ ಕೇಶವ ಮತ್ತು ಸೌಮ್ಯನಾಯಕಿಯನ್ನು ಸ್ತುತಿಸಿರುವ ಒಂದೆರಡು ಕೃತಿಗಳಿವೆ.

'ಚೆನ್ನಕೇಶವರಾಯ ಚೆಲುವ ಚೆನ್ನಿಗರಾಯ
ನಿನ್ನಕಾಣದೆ ನಿಲಲಾರೆ ಬೇಲೂರ' (೬೧)

'ಪೊಗಳಲರಿಯೆನೆ ಲೋಕಮಾತೆ' (೬೩)

ಇವೆರಡೂ ಅತ್ಯಂತ ಸುಂದರವಾದ ವರ್ಣನಾಮಯ ಕೃತಿಗಳು.

ಇದರೊಂದಿಗೆ ನಂಜನಗೂಡು, ತಿರುವಾಂಕೂರು, ಗೊರೂರು ದೈವಗಳ ಸ್ತುತಿಗಳೂ ಕಂಡು ಬರುತ್ತವೆ. ನಂಜನಗೂಡನ್ನು ಕುರಿತ 'ದೇವತಾಮಯನಾಗಿ' ಎಂಬ ಕೃತಿಯಲ್ಲಿ ಬರುವ 'ನಂಜುಂಡಮಹದೇವ' ಶ್ಲೇಷಾರ್ಥದ ಶ್ರೀಹರಿಯ ಸ್ತುತಿಯೇ ಆಗಿದೆ. ಶ್ರೀರಂಗಯಾತ್ರೆ ಶ್ರೀವೈಷ್ಣವರಿಗೆ ಕಾಶೀಯಾತ್ರೆಯಂತೆ. ಅದು ಶ್ರೀವೈಷ್ಣವ ಪ್ರಮುಖ ದಿವ್ಯದೇಶಗಳಲ್ಲಿ ಒಂದು. ಅಲ್ಲಿಗೆ ಹೋಗಲಾಗದುದನ್ನು 'ಪವಾಡ ಅಥವ 'ದರ್ಶನ'ದ ನೆಲೆಯಲ್ಲಿ ಹೇಳುವ ಕೃತಿಯೂ ಒಂದಿದೆ.

'ಶ್ರೀರಂಗ ಯಾತ್ರೆಯನು ಮಾಡಿ ಬಾರೆಂದೆನ್ನ . . .' (೪೬)

ಹೀಗೆ ವೈಕುಂಠದಾಸರ ಕೃತಿಗಳಲ್ಲಿ ಕ್ಷೇತ್ರದರ್ಶನವೂ ವೈವಿಧ್ಯಮಯವಾಗಿ ಮೂಡಿಬಂದಿದೆ. ಒಟ್ಟಾರೆ ವೈಕುಂಠದಾಸರ ಕೀರ್ತನೆಗಳು ಕನ್ನಡ ಹರಿದಾಸ ಸಾಹಿತ್ಯದಲ್ಲಿ ಉತ್ತಮ ಸ್ಥಾನವನ್ನು ಪಡೆಯಬಲ್ಲವಾಗಿವೆ.

ವೈಕುಂಠದಾಸರನ್ನು ಕುರಿತು ೧೨ ಕೀರ್ತನೆಗಳು ಲಭ್ಯವಿದ್ದು, ಆಕಾಲದ ಎಲ್ಲ ಪ್ರಮುಖ ಕೀರ್ತನಕಾರರೂ ದಾಸರನ್ನು ಸ್ತುತಿಸಿರುವುದು ಕಂಡುಬರುತ್ತದೆ. ವಾದಿರಾಜರು ನಾಲ್ಕು ಕೃತಿಗಳಲ್ಲಿ ವೈಕುಂಠದಾಸರನ್ನು ಸ್ತುತಿಸಿದ್ದರೆ ಪುರಂದರದಾಸರು ಒಂದು ಕೃತಿಯಲ್ಲೂ ಕನಕದಾಸರು ಎರಡು ಕೃತಿಗಳಲ್ಲೂ ಸ್ತುತಿಸಿದ್ದಾರೆ. ಅಚ್ಯುತದಾಸರೆನ್ನುವವರು ಮೂರು ಕೃತಿಗಳಲ್ಲೂ ತೆಲುಗಿನ ಚಿನ್ನಯ್ಯ ಎನ್ನುವವರು ತೆಲುಗಿನಲ್ಲಿ ಎರಡು ಕೃತಿಗಳಲ್ಲೂ ಸ್ತುತಿಸಿದ್ದಾರೆ. ಈ ಸ್ತುತಿಗೀತೆಗಳನ್ನು ನೋಡಿದರೆ ದಾಸರು ಆ ಕಾಲಕ್ಕೆ ಅತ್ಯಂತ ಜನಪ್ರಿಯ ರಾಗಿದ್ದರೆಂದೂ ಗೌರವಾನ್ವಿತರಾಗಿದ್ದರೆಂದೂ ಹೇಳಬಹುದು. ಸಂಪ್ರದಾಯದ ಪುಸ್ತಕಗಳಲ್ಲಿ ಈ ಒಂದೊಂದು ಕೀರ್ತನೆಗೂ ಸಾಂದರ್ಭಿಕ ಟಿಪ್ಪಣಿಗಳನ್ನೂ ಕಾಣಬಹುದು. ಈ ಟಿಪ್ಪಣಿಗಳು ದಾಸರ ಪ್ರಸಿದ್ಧಿಯನ್ನೂ ದಾಸರೊಂದಿಗೆ ಸ್ತುತಿಕಾರರಿಗೆ ಇದ್ದಿರಬಹುದಾದ ನಿಕಟಸಂಪರ್ಕಗಳನ್ನೂ ದೃಢಪಡಿಸುತ್ತವೆ.

ವಾದಿರಾಜರು ಹಲವು ಬಾರಿ ಬೇಲೂರಿಗೆ ಬಂದು ವೈಕುಂಠದಾಸರನ್ನು ಕಂಡು ಅವರಲ್ಲಿ ಪವಾಡ ಸದೃಶವಾದ ವ್ಯಕ್ತಿತ್ವ, ದೈವತ್ವವನ್ನು ಕಣ್ಣಾರೆ ಕಂಡಿರುವ

ರೀತಿಯಲ್ಲಿ ದಾಸರನ್ನು ಸ್ತುತಿಸಿದ್ದಾರೆ. 'ದಾಸೋತ್ತಮನೆ ಕೇಳೋ ಶ್ರೀವೈಕುಂಠ ದಾಸೋತ್ತಮನೆ ಕೇಳೋ' ಎಂದು ಕೊಂಡಾಡಿದ್ದಾರೆ. ಇನ್ನೊಂದೆಡೆ

'ಎಂಜಲೆನ್ನಲಿಬಹುದೆ ಮಾನುಜರಿದನ ಅಘವನಘ
ನಂಜಯದ ವೈಕುಂಠದಾಸರ ವದನದಕಣಾ'

ಎಂದು ಸ್ತುತಿಸಿದ್ದಾರೆ. ಇವೆರಡರಲ್ಲೂ ನೇರವಾಗಿ ವೈಕುಂಠದಾಸರನ್ನೇ ಹೆಸರಿಸಿದ್ದರೆ ಇನ್ನೆರಡರಲ್ಲಿ ಅವರ ಮೂಲಕ ಕಂಡ ವೇಲಾಪುರದ ಚೆನ್ನಕೇಶವನನ್ನು ಸ್ತುತಿಸಿದ್ದಾರೆ. ಪುರಂದರದಾಸರ 'ಅಳುವುದ್ಯಾತಕೊರಂಗ' ಎಂಬುದೂ ವೈಕುಂಠದಾಸರ ತೊಡೆಯ ಮೇಲೆ ಪವಡಿಸಿದ್ದ ಚೆನ್ನಕೇಶವನ ಸ್ತುತಿಯಾಗಿದ್ದೂ ಕೊನೆಯ 'ಶರಣುವೇಲಾಪುರ ಚೆಲುವ ಚೆನ್ನಿಗರಾಯ' ಎಂಬುದು ದೈವಕ್ಕೆ ಎಂತೋ ಅಂತೇ ದಾಸರಿಗೂ ಅನ್ವಯವಾಗುವಂತಿದೆ.

'ಬಂಟನಾಗಿ ಬಾಗಿಲ ಕಾಯ್ವೆ ಹರಿಯ ವೈ
ಕುಂಠದಾಸೋತ್ತಮ ದಾಸರ ಮನೆಯ' (೫೧)

ಎಂಬುದು ಕನಕದಾಸರು ವೈಕುಂಠದಾಸರನ್ನು ಸೇವಿಸಿರುವ ಕೃತಿಯಾಗಿದೆ. ಬೇಲೂರಿನಲ್ಲೆ ಬಹಳ ಕಾಲ ಇದ್ದರೆಂಬುದಕ್ಕೆ ಈ ಕೃತಿ ಇಂಬುನೀಡುತ್ತದೆ. ದಾಸರ ಶಿಷ್ಯರಾಗಿ ಅವರ ಸೇವೆ ಮಾಡಿದ್ದಾರೆಂಬುದೂ ಇದರಿಂದ ವ್ಯಕ್ತವಾಗುತ್ತದೆ. ಭಕ್ತನಾದವನಿಗೆ ದೈವದರ್ಶನ, ದೈವಕೃಪೆಯು ಗುರು–ಆಚಾರ್ಯರ ಸೇವೆಯ ಮೂಲಕವೇ ಎಂಬ ಶ್ರೀವೈಷ್ಣವ ತತ್ವಕ್ಕೆ ಅನುಗುಣವಾಗಿ ಈ ಕೃತಿಯಿದೆ. 'ಹರಿನಿಮ್ಮಪದಕಮಲ ನಿರುತಧ್ಯಾನದಿ' ಕೃತಿ ನೇರವಾಗಿ ವೈಕುಂಠದಾಸರನ್ನು ಹೆಸರಿಸದಿದ್ದರೂ ಇದರಲ್ಲಿ ಬರುವ ಶ್ರೀವೈಷ್ಣವ ಪರಿಭಾಷೆಯಿಂದ ('ತಿರುಮಂತ್ರ', 'ರಹಸ್ಯ', 'ವೀರವೈಷ್ಣವ' ಇತ್ಯಾದಿ) ವೈಕುಂಠದಾಸರನ್ನೇ ಕುರಿತದ್ದೆಂದು ಹೇಳಬಹುದಾಗಿದೆ. ಕನಕದಾಸರು ವೈಕುಂಠದಾಸರ ಶಿಷ್ಯರಾಗಿ ಶ್ರೀವೈಷ್ಣವ ತತ್ವವನ್ನು ಸ್ವೀಕರಿಸಿ ತಮ್ಮ ಜನುಮವನ್ನು ಸಾರ್ಥಕಮಾಡಿಕೊಂಡುದರ ಧನ್ಯತೆಯ ಭಾವ ಇದರಲ್ಲಡಗಿದೆ.

'ಅರಿಯದಪರಾಧಕೊಡ್ಡಿದೆನೊಡಲನು' 'ತಪ್ಪನೀನೊಪ್ಪಿಕೊಳಬೇಕು', 'ನಿನಗೆಲ್ಲದಾರಿಗಳಳವಡುವುದಯ್ಯ' ಕೃತಿಗಳು ಅಚ್ಯುತದಾಸರು ವೈಕುಂಠದಾಸರನ್ನು ಸ್ತುತಿಸಿರುವವು. ಈ ಅಚ್ಯುತದಾಸರು ಯಾರು ಎಂಬುದು ಸ್ಪಷ್ಟವಿಲ್ಲ. ಈ ಹೆಸರಿನ ದಾಸರಿದ್ದುದರ ಬಗೆಗೆ ಎಲ್ಲಿಯೂ ಉಲ್ಲೇಖಗಳಿಲ್ಲ. ಆದರೆ ಇವರನ್ನು ಪಂಡರಾಪುರದವರು, ಬ್ರಹ್ಮಾನಂದರ ಶಿಷ್ಯ ಪರಂಪರೆಯವರು ಎಂದು 'ಸಂಪ್ರದಾಯದ ಪುಸ್ತಕ' ಉಲ್ಲೇಖಿಸುತ್ತದೆ. ದಾಸರನ್ನು ಭಂಗಪಡಿಸಲು (ವಾದಮುಖದಿಂದ) ಬಂದು ತಾವೇ ಭಂಗಗೆಟ್ಟುದನ್ನು ದಾಸರಿಂದ ಸದ್ಗತಿ ದೊರೆತುದನ್ನು ಅತ್ಯಂತ ಕೃತಜ್ಞತೆಯ ಭಾವದಿಂದ ಸ್ತುತಿಸಿದ್ದಾರೆ. ಇದನ್ನೇ ಸಂಪ್ರದಾಯದ ಟಿಪ್ಪಣಿಗಳೂ ದೃಢಪಡಿಸುತ್ತವೆ. ತಮಗಿದ್ದ ಬಿರುದುಗಳನ್ನೆಲ್ಲ ದಾಸರಿಗೇ ಸಮರ್ಪಿಸಿ 'ರಾಮಾನುಜಾಚಾರ್ಯ ಮತೋದ್ಧಾರಕ ತಾಮರಸಭೃಂಗ ವೈಕುಂಠದಾಸೋತ್ತಮ' ಎಂದು ವರ್ಣಿಸಿರುವ ಅಚ್ಯುತದಾಸರು ಇವರನ್ನು ಜನ ಹೇಗೆ ಗೌರವಿಸುತ್ತಿದ್ದರೆಂಬುದನ್ನೂ ಇವರು ನಡೆಸಿದ ಪವಾಡ ಸದೃಶ ಸಂಗತಿಗಳನ್ನೂ 'ನಿನಗೆಲ್ಲದಾರಿಗಳಳವಡುವುದಯ್ಯ' ಕೃತಿಯಲ್ಲಿ ಬಹಳ ಸೊಗಸಾಗಿ ದಾಖಲಿಸಿದ್ದಾರೆ.

ತೆಲುಗಿನ ಅತ್ಯಂತ ಪ್ರಸಿದ್ಧವಾದ ಅನ್ನಮಾಚಾರ್ಯರ ತಾಳ್ಳಪಾಕಂ ಮನೆತನಕ್ಕೂ ದಾಸರಿಗೂ ಇದ್ದ ಸಂಬಂಧವನ್ನು ಖಚಿತಪಡಿಸುವ

'ಚೂಪುರಾನಾಕುಚೂಪುರಾ ಬೇ–
ಲಾಪುರಿ ಚನ್ನುನಿ ವೈಕುಂಠದಾಸುಡಾ (೫೨೦)

ಮತ್ತು

ಯಾಲಕಾನಕ ಪೋಯೇವು ವೋಚೆನ್ನುಡ' (೫೨೧)

ಎಂಬ ಎರಡು ತೆಲುಗು ಕೃತಿಗಳು ದೊರೆಯುತ್ತವೆ. ಈ ಕೃತಿಗಳ ಮೂಲಕ ಇವುಗಳನ್ನು ಬರೆದಿರುವವನು 'ತಾಳಪಾಕಂ ಚಿನ್ನಯ್ಯ' ಎಂಬುದು (ನಾ ಮರಿತಾಳಪಾಕಿ ಚನ್ನಯ್ಯಕು) ಗೊತ್ತಾಗುತ್ತದೆ. ಈ ಚಿನ್ನಯ್ಯ ಅನ್ನಮಾಚಾರ್ಯರ ಮಗನಾದ ಪೆದ್ದತಿರುಮಲಾಚಾರ್ಯರ ನಾಲ್ಕನೆಯ ಮಗ ಚಿನ್ನತಿರುವೆಂಗಳನಾಥ

(ಕ್ರಿ.ಶ.೧೪೯೮–ಚಿನ್ನನ್ನ) ನೆಂದು ಹೇಳಬಹುದು. ಈತನೂ ಹರಿದಾಸನಾಗಿದ್ದು ಅನ್ನಮಾಚಾರ್ಯರನ್ನೇ ಗುರುವಾಗಿ ಸ್ವೀಕರಿಸಿದ್ದಾನೆ. ಈತ ಬರೆದಿರುವ 'ದ್ವಿಪದ ಪ್ರಬಂಧ' ದಲ್ಲಿ ಹಣ್ಣುಹಣ್ಣು ಮುದಕರಾಗಿದ್ದ ಅನ್ನಮಾಚಾರ್ಯರನ್ನು ಪುರಂದರ ದಾಸರು ಹಲವು ಬಾರಿ ಭೇಟಿಮಾಡಿ ಚರ್ಚಿಸುತ್ತಿದ್ದರೆಂದು ದಾಖಲಿಸಿದ್ದಾನೆ. ತನ್ನ ತಾತನವರ ವಯೋಮಾನದಲ್ಲೇ ಇದ್ದಿರಬಹುದಾದ ವೈಕುಂಠದಾಸರನ್ನು ಕಂಡು ಈ ಚಿನ್ನಯ್ಯ ಅತ್ಯಂತ ಧನ್ಯತೆಯ ಭಾವದಿಂದ ಈ ಕೃತಿಗಳಲ್ಲಿ ಸ್ತುತಿಸಿರುವಂತಿದೆ. 'ಗುರುಲ್ಯಾಕ ತ್ರೈಜಗ ಗುರುವು ನೀಗಾ' 'ಅಂದಕಿಪ್ಪುಡುನೀ ಅಂದ ಮ್ಯೆ' ಎಂದೆಲ್ಲ ಸ್ತುತಿಸುವ ಮೂಲಕ ವೈಕುಂಠದಾಸರಿಗಿದ್ದ ವಿಶೇಷ ಮಾನ್ಯತೆಯನ್ನು ಈ ಕೃತಿಗಳು ದಾಖಲಿಸುತ್ತವೆ.

ಕರ್ನಾಟಕದ ಅನ್ನಮಾಚಾರ್ಯರಾಗಿ ಶ್ರೀವೈಷ್ಣವ ತತ್ವವನ್ನು ದಾಸ ಸಾಹಿತ್ಯದ ಉನ್ನತಿಯ ಕಾಲದಲ್ಲಿ ಬಿತ್ತರಿಸುತ್ತ ಬೇಲೂರಿನಲ್ಲಿದ್ದುಕೊಂಡೇ ದಕ್ಷಿಣ ಭಾರತದಾದ್ಯಂತ ಜನಜನಿತರಾಗಿದ್ದ ಬೇಲೂರು ವೈಕುಂಠದಾಸರು ನಿಜಕ್ಕೂ ದಾಸಶ್ರೇಷ್ಠರು. ಸಮಕಾಲೀನ ಎಲ್ಲ ದಾಸವರ್ಯರೂ ಸ್ತುತಿಸಿರುವಂತೆ ದಾಸೋತ್ತಮರು. ಕನ್ನಡ ಹರಿದಾಸ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಳ್ಳುವ ಮುಖ್ಯಹರಿದಾಸರಾಗಿ ಶ್ರೀವೈಷ್ಣವ ತತ್ವದ ಆದ್ಯಕೀರ್ತನಕಾರರಾಗಿ ಸ್ಥಾನ ಪಡೆಯುತ್ತಾರೆ.

(೪) ಕೀರ್ತನೆಗಳ ಆಕರ

ಈ ಕೀರ್ತನೆಗಳಿಗೆ ಕೆಲವು ಪ್ರಕಟಿತ ಗ್ರಂಥಗಳು ಮತ್ತು ಹಸ್ತಪ್ರತಿಗಳನ್ನು ಬಳಸಿಕೊಳ್ಳಲಾಗಿದೆ. ಆದರೆ ಇವು ಯಾವುವೂ ವೈಕುಂಠದಾಸರ ಕೃತಿಗಳಿಗೇ ಮೀಸಲಾದ ಪ್ರತ್ಯೇಕ ಪುಸ್ತಕಗಳಲ್ಲ. ಅಂತಹ ಒಂದು ಗ್ರಂಥವೂ ಈವರೆಗೆ ಪ್ರಕಟವಾಗಿಲ್ಲ. ಸಂಪ್ರದಾಯದ ಪುಸ್ತಕಗಳಲ್ಲಿ ಇವರ ಕೀರ್ತನೆಗಳಲ್ಲಿ ಕೆಲವನ್ನು ಅಚ್ಚು ಮಾಡಿದೆಯಷ್ಟೇ. ಅವುಗಳೆಂದರೆ (೧) 'ಶ್ರೀಪಾದರಾಜಾದಿ ದಾಸವರ್ಯರ ಸ್ತೋತ್ರಪದಗಳು' (೧೯೬೭) ಹನುಮಂತರಾವ್ ಗೋರೆಬಾಳ, ಶ್ರೀವರದೇಂದ್ರ ಸಾಹಿತ್ಯಭಂಡಾರ, ಲಿಂಗಸೂಗೂರು ಮತ್ತು ಇವರದೇ ಆದ (೨) 'ಹರಿದಾಸರ ಪದ ಸುಳಾದಿಗಳು'. ಹಾಗೂ (೩) 'ದಾಸರ ಪದಸಂಗ್ರಹ' (೧೯೪೩) ಶ್ರೀಮನ್

ಮಾಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ, ಈ ಸಂಪ್ರದಾಯದ ಪುಸ್ತಕಗಳಲ್ಲಿ ಪ್ರಕಟವಾಗಿರುವ ಕೀರ್ತನೆಗಳನ್ನು ಈ ಗ್ರಂಥಕ್ಕೆ ಆರಿಸಿಕೊಳ್ಳಲಾಗಿದೆ. ಇದರ ಜೊತೆಗೆ ಕೆಲವು ಹಸ್ತಪ್ರತಿಗಳಲ್ಲಿ ಪ್ರಕಟವಾಗಿದ್ದ ಕೃತಿಗಳನ್ನು ಪಾಠ ಪರಿಷ್ಕರಣಕ್ಕೆ ಬಳಸಿಕೊಂಡಿದೆಯಲ್ಲದೆ ಅಪ್ರಕಟಿತವಾಗಿದ್ದ ಕೀರ್ತನೆಗಳನ್ನೂ ಸೇರಿಸಿಕೊಳ್ಳಲಾಗಿದೆ. ಈ ಹಸ್ತಪ್ರತಿಗಳೆಂದರೆ (೧) ಕೊರಟಿ ಶ್ರೀನಿವಾಸರಾವ್ ಅವರ ಸಂಗ್ರಹದ 'ಕೆಲವು ದೇವರನಾಮದ ಹಾಡುಗಳು' (೨) ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯ 'ವೈಕುಂಠದಾಸರ ಕೀರ್ತನೆಗಳು' ಮತ್ತು (೩) ಕೆಳದಿ ವಸ್ತುಸಂಗ್ರಹಾಲಯದ 'ವೇಲಾಪುರಿ ಕೇಶವನೇತಿ ಗೀತಾ' ಎಂಬ ಓಲೆಗರಿಗ್ರಂಥದಿಂದ ನಕಲಾದ ಕಾಗದ ಹಸ್ತಪ್ರತಿ.

ಇವು ಮೂರೂ ಕಾಗದದ ಹಸ್ತಪ್ರತಿಯಾಗಿವೆ ಇವೂ ಸಹ ಪ್ರಕಟಿತ ಗ್ರಂಥಗಳಂತೆ ಮಿಶ್ರಹಸ್ತ ಪ್ರತಿಗಳು. ಮೈಸೂರಿನ ಹಸ್ತಪ್ರತಿಗೆಗೆ ಹೆಸರಿನಲ್ಲಿ ವೈಕುಂಠದಾಸರದ್ದೆಂದಿದ್ದರೂ ಲಕ್ಷ್ಮೀಶನ ಹಾಡುಗಳನ್ನು ಒಳಗೊಂಡಿದ್ದರೆ ಉಳಿದೆರಡರಲ್ಲಿ ಅನೇಕದಾಸರ ಹಾಡುಗಳಿವೆ. ಕೆಳದಿಯ ಹಸ್ತಪ್ರತಿ ಬೇಲೂರು ಕೇಶವನ ಸ್ತುತಿಗಳನ್ನು ಸಂಗೀತಕ್ಕೆ ಅಳವಡಿಸಿರುವಂತಹುದು. ಪ್ರತಿಯೊಂದು ಕೀರ್ತನೆಗೂ ಸ್ವರ ಪ್ರಸ್ತಾರವನ್ನು ಹಾಕಲಾಗಿದೆ. ಕೊರಟಿಯವರ ಹಸ್ತಪ್ರತಿಯಲ್ಲಿ ಮಾತ್ರ ವೈಕುಂಠದಾಸರ ಇತರ ಕೃತಿಗಳಾದ ಗಜೇಂದ್ರ ಮೋಕ್ಷ ಮತ್ತು ಶನೇಶ್ವರ ದಂಡಕಗಳು ದೊರಕಿವೆ.

ಮುದ್ರಿತ ಗ್ರಂಥಗಳು ಮತ್ತು ಹಸ್ತಪ್ರತಿಗಳಲ್ಲಿ ಅನೇಕ ಪಾಠದೋಷಗಳಿವೆ. ಇದ್ದುದರಲ್ಲಿ ಮೈಸೂರಿನ ಹಸ್ತಪ್ರತಿ ಮಾತ್ರ ತಕ್ಕಮಟ್ಟಿಗೆ ಉತ್ತಮ ಪಾಠವನ್ನು ಒಳಗೊಂಡಿದೆಯಲ್ಲದೆ ಹೆಚ್ಚಿನ ಸಂಖ್ಯೆಯ ಕೀರ್ತನೆಗಳೂ ಇವೆ. ಪಾಠ ಪರಿಷ್ಕರಣಕ್ಕೆ ಈ ಹಸ್ತಪ್ರತಿಯ ಪಾಠಗಳನ್ನೇ ಹೆಚ್ಚಾಗಿ ಅವಲಂಬಿಸಿದೆಯಾದರೂ ಇದರಲ್ಲೂ ಬಹಳಷ್ಟುಕಡೆ ಪಾಠಗಳು ಹಾಳಾಗಿವೆ ಮತ್ತು ಅಸ್ಪಷ್ಟವಾಗಿವೆ. ಅಗತ್ಯ ಕಂಡುಬಂದ ಕಡೆಗಳಲ್ಲಿ ಮಾತ್ರ ಪಾಠ ದೋಷಗಳನ್ನು ತಿದ್ದಿಯೋ ಊಹಾಪಾಠ ನೀಡಿಯೋ ಪರಿಷ್ಕರಣಕಾರ್ಯ ಮಾಡಲಾಗಿದ್ದು ಈ ಪರಿಷ್ಕೃತ ಪಾಠದಿಂದ ಕೂಡಿದ 'ಬೇಲೂರು ವೈಕುಂಠದಾಸರ ಕೀರ್ತನೆಗಳು' ಎಂಬ ಗ್ರಂಥದ ಪಠ್ಯವನ್ನು ಇಲ್ಲಿ ನೀಡಲಾಗಿದೆ.

ವೈಕುಂಠದಾಸರ ಕೀರ್ತನೆಗಳಿಗೆ ಇನ್ನೂ ಸಮಗ್ರವಾದ ಪರಿವೀಕ್ಷಣೆ ಆಗಬೇಕಾದ ಅಗತ್ಯವಿದೆ. ಇನ್ನೂ ಕೆಲವು ಸಂಪ್ರದಾಯದ ಪುಸ್ತಕಗಳಲ್ಲಿ ಇವು ಪ್ರಕಟವಾಗಿರುವ ಸಾಧ್ಯತೆ ಇರುತ್ತದೆ. ಬೇಲೂರು ಕೇಶವದಾಸರ 'ಕರ್ಣಾಟಕ ಭಕ್ತಿವಿಜಯ'ವೂ ಒಂದು ಮುಖ್ಯ ಆಕರಗ್ರಂಥವಾಗಿದ್ದು ಇದು ವೈಕುಂಠದಾಸರ ಬಗ್ಗೆ ವಿವರವಾದ ಮಾಹಿತಿಯನ್ನೊದಗಿಸುವ ಏಕೈಕ ಗ್ರಂಥವಾಗಿದೆ. ಈ ಗ್ರಂಥದಲ್ಲಿ ಸೂಚಿಸಿರುವ ದಾಸರ 'ದೌಹಿತ್ರ ಸಂತತಿ', 'ಹಿಪ್ಪರಗಿಯ ಜೀರ್ಣವಹಿ ಸಂಗ್ರಹ'ವಾಗಲಿ ಮತ್ತು ದಾಸರ ವಂಶಸ್ಥರೆಂದು ಹೇಳುತ್ತಿರುವ 'ರಾಮದಾಸರ ಸಂಗ್ರಹ'ವಾಗಲಿ (Library of Mr. RamaDas a Aescendont of the Famous scholar mussisiaion and poet Vaikuntha Dasa of Belur-MAR 1931, p.80) ಇವು ಯಾವುವೂ ಈವರೆಗೆ ಲಭ್ಯವಾಗಿಲ್ಲ. ಇವುಗಳನ್ನೂ ಪತ್ತೆಮಾಡಿ ಸಂಗ್ರಹಿಸಿದ್ದೇ ಆದಲ್ಲಿ ದಾಸರ ಕೀರ್ತನೆಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ದೊರೆಯುವ ಸಾಧ್ಯತೆಯಿದೆ.

೨. ಕವಿ ಲಕ್ಷ್ಮೀಶ

ಜೈಮಿನಿಭಾರತದ ಕವಿಯಾಗಿ ಜನಪ್ರಿಯನಾಗಿರುವ ಕವಿ ಲಕ್ಷ್ಮೀಶ ಕೆಲವು ಕೀರ್ತನೆಗಳನ್ನು ಬರೆದಿದ್ದರೂ ಸಾಹಿತ್ಯವಲಯದಲ್ಲಿ ಅಷ್ಟಾಗಿ ಪರಿಗಣಿತವಾಗದೆ ಕೇವಲ ಕವಿಯಾಗಿ ಮಾತ್ರ ಪ್ರಚಲಿತನಾಗಿದ್ದಾನೆ. ಅವನ ಮತವೂ ಇದೇ ಎಂದು ಖಚಿತವಾಗಿ ಹೇಳಲಾಗದೆ 'ಭಾಗವತ' ಎಂದಷ್ಟೇ ಗುರುತಿಸಲಾಗುತ್ತಿದೆ. ವಾಸ್ತವವಾಗಿ ಭಾಗವತ ಎನ್ನುವುದು ಒಂದು ನಿರ್ದಿಷ್ಟಮತವನ್ನು ನಿರ್ದೇಶಿಸುವುದಿಲ್ಲ; ಧರ್ಮವನ್ನು ಸೂಚಿಸುತ್ತದೆ. ಭಾರತದ ಪ್ರಾಚೀನ ಧರ್ಮವಾಗಿದ್ದ ಇದು ಕಾಲಾನಂತರದಲ್ಲಿ ತ್ರಿಮತಾಚಾರ್ಯರ ವ್ಯಾಖ್ಯಾನಗಳಿಗೆ ಒಳಗಾಗಿ ತ್ರಿಮತಗಳಾಗಿ ವಿಭಾಗಗೊಳ್ಳುತ್ತಾಬಂದಿತೆನ್ನಬಹುದು. ಆದ್ದರಿಂದ ಭಾಗವತಧರ್ಮ ಇಂದು ಈ ಮೂರೂ ಮತಗಳಲ್ಲಿ ಹಂಚಿಹೋಗಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಭಾಗವತ ಧರ್ಮದ ಕವಿಯನ್ನು ಕೇವಲ ಭಾಗವತ ಮತಕ್ಕೆ ಸೇರಿದವನು ಎಂದಷ್ಟೇ ಹೇಳದೆ ಈ ಭಾಗವತದ ಯಾವ ಶಾಖೆಗೆ (ದ್ವೈತ, ಅದ್ವೈತ, ವಿಶಿಷ್ಟಾದ್ವೈತ) ಸೇರಿದವನೆಂದು ಖಚಿತಪಡಿಸುವುದು ಸೂಕ್ತವಾದದ್ದು. ಒಬ್ಬ ಶ್ರೇಷ್ಠಕವಿಯ ಅಭಿವ್ಯಕ್ತಿಕ್ರಮ ಮತಾತೀತವಾದ

ಮಾನವಧರ್ಮದತ್ತ ಸಹಜವಾಗಿ ವಾಲುವುದರಿಂದ ಅವನಲ್ಲಿ ಎಲ್ಲ ಶಾಖೆಗಳಿಗೂ ಅನ್ವಯವಾಗುವ ಹೇಳಿಕೆಗಳು ಲಭ್ಯವಾಗುತ್ತದಾದರೂ ಅವನ ಆರಾಧ್ಯದೈವ, ಕುಲ, ಗುರು, ಪರಂಪರಾಸ್ತುತಿ, ಅಂಕಿತ ಇತ್ಯಾದಿಗಳ ಹಿನ್ನೆಲೆಯಲ್ಲಿ ಅವನ ನಿರ್ದಿಷ್ಟ ಮತವನ್ನೂ ಗುರುತಿಸಿ ಖಚಿತಪಡಿಸುವುದು ಅತ್ಯಗತ್ಯ.

ಇಲ್ಲಿ ಲಕ್ಷ್ಮೀಶನನ್ನು ಕೀರ್ತನಕಾರ (ಹರಿದಾಸ) ನನ್ನಾಗಿಯೂ ಪ್ರಚುರಪಡಿಸುವುದರ ಜೊತೆಗೆ ಅವನ ಮತವನ್ನು ವಿಶಿಷ್ಟಾದ್ವೈತ ಎಂದು ನಿರ್ದಿಷ್ಟಪಡಿಸಲಾಗುತ್ತಿದೆ. ಈಗಾಗಲೆ ವಿದ್ವಾಂಸರು ಈ ವಿಚಾರಗಳಲ್ಲಿ ಸಾಕಷ್ಟು ಅಧ್ಯಯನ, ಚರ್ಚೆ, ಕ್ಷೇತ್ರಕಾರ್ಯ ನಡೆಸಿ ಇವನ ಮತ ಶ್ರೀವೈಷ್ಣವ ; ಇವನು ಕೀರ್ತನೆಗಳನ್ನೂ ರಚಿಸಿದ್ದಾನೆ ಎಂದು ಖಚಿತಪಡಿಸಿದ್ದಾರೆ. ಅದನ್ನೆ ಇಲ್ಲಿ ಮತ್ತೂ ಸ್ಪಷ್ಟಪಡಿಸುವ ಮೂಲಕ ಈ ಚರ್ಚೆಗೊಂದು ನಿರ್ಣಾಯಕ ನೆಲೆಯನ್ನು ತಂದುಕೊಡಲಾಗಿದೆ.

(ಅ) ಜೀವನ ವಿವರ

ಕವಿ ಲಕ್ಷ್ಮೀಶನು ಕಡೂರು ತಾಲೂಕು ದೇವನೂರಿನವನು. ಇದಕ್ಕೆ ಸುರಪುರ ಸುಮನಸಪುರ ಎಂಬ ಪರ್ಯಾಯ ನಾಮಗಳೂ ಇವೆ. ಅಲ್ಲಿಯ ಲಕ್ಷ್ಮೀಕಾಂತ ದೇವಾಲಯದ ಅರ್ಚಕ ಕುಟುಂಬಕ್ಕೆ ಸೇರಿದ ಶ್ರೀವೈಷ್ಣವ ಬ್ರಾಹ್ಮಣನಾದ ಇವನ ಪೂರ್ಣ ಹೆಸರು ಲಕ್ಷ್ಮೀಕಾಂತ ಹೆಬ್ಬಾರ. ಇವನ ಕಾವ್ಯದಲ್ಲಿ 'ಲಕ್ಷ್ಮೀಶ, ಲಕ್ಷ್ಮೀಪತಿ' ಹೆಸರುಗಳೂ ಬಳಕೆಯಲ್ಲಿವೆ. ಭಾರದ್ವಾಜ ಗೋತ್ರಜನಾದ ಇವನು ವಡಗಲೆ ಸಂಪ್ರದಾಯದ 'ಹೆಬ್ಬಾರ್' ಮನೆತನಕ್ಕೆ ಸೇರಿದವನು. ಇವನ ತಂದೆಯ ಹೆಸರು ಅಣ್ಣಮಾಂಕ. ಇವನಿಗೆ ಅಣ್ಣಯ್ಯಹೆಬ್ಬಾರನೆಂಬ ಒಬ್ಬ ಮಗನಿದ್ದನು. ಲಕ್ಷ್ಮೀಶನು ಶ್ರೀವೈಷ್ಣವ ಪ್ರಪತ್ತಿ ಧರ್ಮಾನುಯಾಯಿಯಾಗಿ ಭಗವಂತನಲ್ಲಿ ಶರಣಾಗತನಾಗಿ ಕಾವ್ಯ, ಕೀರ್ತನೆಗಳನ್ನೆಲ್ಲ ಬರೆಯುವ ಸಾಧಕನಾಗಿ ದೈವಸಾಕ್ಷಾತ್ಕಾರ ಮಾಡಿಕೊಂಡಿದ್ದ ಪರಮಭಾಗವತನಾಗಿದ್ದ. ಲಕ್ಷ್ಮೀಶನೇ ಪ್ರಾರಂಭಿಸಿದ್ದ ಸುರಪುರದ ದೇವಾಲಯದ ಒಂದು ಭಾಗವನ್ನು ಇವನ ಮಗ ಅಣ್ಣಯ್ಯ ಪೂರ್ಣಗೊಳಿಸಿ ಆಳ್ವಾರರ ವಿಗ್ರಹಗಳೊಂದಿಗೆ ಲಕ್ಷ್ಮೀಶನ ವಿಗ್ರಹವನ್ನೂ ಪ್ರತಿಷ್ಠಾಪಿಸಿದ್ದು ಇಲ್ಲಿ ಪ್ರತಿವರ್ಷ ಚೈತ್ರ ಶುದ್ಧ ಹುಣ್ಣಿಮೆಯ ದಿನ ಈ ಕವಿಯ ತಿರುನಕ್ಷತ್ರವನ್ನು ಆಚರಿಸಲಾಗುತ್ತಿದೆ. ಉತ್ಸವಕಾಲದಲ್ಲಿ ಈ ದೇವಾಲಯದಲ್ಲಿ ಆಳ್ವಾರರ

ಪ್ರಬಂಧಗಳೊಂದಿಗೆ ಲಕ್ಷ್ಮೀಶಕವಿಯ ಜೈಮಿನಿ ಭಾರತದ ದೇವತಾಸ್ತುತಿಗಳನ್ನೂ, ದೇವರನಾಮಗಳನ್ನೂ ಹಾಡುವ ಸಂಪ್ರದಾಯವಿದೆ. ಈ ದೇವಾಲಯದ ಶಿಲ್ಪಗಳನ್ನು ಕವಿ ತನ್ನ ಕೃತಿಗಳಲ್ಲಿ ಉಲ್ಲೇಖಿಸಿದ್ದಾನೆ. ಇವನು ಕ್ರಿ.ಶ. ೧೫೫೦ರಿಂದ ೧೬೦೦ ಸುಮಾರಿನಲ್ಲಿ ಬರುವವನೆಂದು ನಿರ್ಧರಿಸಲಾಗಿದೆ. ಈಗಾಗಲೆ ವಿದ್ವಾಂಸರು ಸಾಕಷ್ಟು ಚರ್ಚೆ, ಜಿಜ್ಞಾಸೆಗಳನ್ನು ನಡೆಸಿದನಂತರ ರೂಪಗೊಂಡಿರುವ ಕವಿಯ ಜೀವನ ವಿವರಗಳು ಇಷ್ಟು. ಇದನ್ನೇ ಇಲ್ಲಿ ಸ್ವೀಕರಿಸಲಾಗಿದೆ.

(ಆ) ಇತರ ಗ್ರಂಥಗಳು

ಇವನು ರಚಿಸಿರುವ ಕಾವ್ಯ ಜೈಮಿನಿ ಭಾರತ, ಇದು ಜೈಮುನಿ ಬರೆದಿರುವ ಮೂಲಸಂಸ್ಕೃತ ಕಾವ್ಯದ ಅನುವಾದ. ಅನುವಾದವಾದರೂ ಸ್ವಂತಿಕೆಯನ್ನು ಮೆರೆದಿರುವ ಸ್ವತಂತ್ರ ಮಹಾಕಾವ್ಯ. ಸಂಸ್ಕೃತ ಪಂಡಿತರಿಗೇ ಕಗ್ಗಂಟಾಗಿದ್ದ ಮೂಲಕಾವ್ಯವನ್ನು ಕನ್ನಡಕವಿ ಕನ್ನಡದಲ್ಲಿ ಸರಾಗವಾಗಿ-ಸರಳವಾಗಿ ಪುನಃಸೃಷ್ಟಿಸಿದ್ದಾನೆ. ವಾರ್ಧಕಷಟ್ಪದಿಯಲ್ಲಿ ಅತ್ಯಂತ ಮನಮೋಹಕವಾಗಿ ಬಂದಿರುವ ಈ ಕಾವ್ಯ ಕನ್ನಡ ಓದುಗರಿಗೆ ಪಾರಾಯಣಕ್ಕೆ, ಗಮಕಕ್ಕೆ ಪ್ರಿಯವಾದದ್ದು. ಇದರಲ್ಲಿ ಇವನು ತಂದಿರುವ ಲಯಮಾಧುರ್ಯದಿಂದ ಇವನನ್ನು 'ನಾದಲೋಲ ಲಕ್ಷ್ಮೀಶ' ಎಂದೇ ಕರೆಯುತ್ತಾರೆ. ಇವನಿಗಿದ್ದ ಒಂದು ಪ್ರಸಿದ್ಧ ಬಿರುದು 'ಕರ್ಣಾಟಕ' ವಿಚೂತವನ ಚೈತ್ರ'. 'ದೇವಪುರದ ಲಕ್ಷ್ಮೀಕಾಂತ'ನ ಅಂಕಿತದಲ್ಲಿ ತನ್ನ ಕೃತಿಗಳನ್ನು ರಚಿಸಿದ್ದಾನೆ.

ಇವನ ಕಾವ್ಯದಲ್ಲಿ ಎಲ್ಲ ಮತಧರ್ಮಗಳನ್ನೂ ಸಮನ್ವಯಗೊಳಿಸುವ ನಿಜವಾದ ಭಾಗವತ ಧರ್ಮ 'ಮಾನವಧರ್ಮ'ವಾಗಿ ಬಂದಿರುವುದರಿಂದ ಇವನ ಮತದ ಬಗ್ಗೆ ವಿದ್ವಾಂಸರು ಜಿಜ್ಞಾಸೆಗೊಳಗಾಗಿದ್ದರು. ಇವನ ಸ್ಥಳನಿಷ್ಕರ್ಷೆ ಮತ್ತು ಇವನ ಸಂತತಿಯವರ ಸುಳಿವು ದೊರೆತನಂತರ ಅದು ನಿವಾರಣೆಯಾಗಿದೆ. ವಾಸ್ತವವಾಗಿ ಇವನ ಹೆಸರೇ ಇವನ ಮತವನ್ನು ನಿರ್ದೇಶಿಸುತ್ತಿದೆ. 'ಲಕ್ಷ್ಮೀಶ', 'ಲಕ್ಷ್ಮೀಕಾಂತ' 'ಲಕ್ಷ್ಮೀಪತಿ'-ಇವುಗಳೆಲ್ಲ ಶ್ರೀವೈಷ್ಣವ ಪರಿಭಾಷೆಯಲ್ಲಿ ಮಾತ್ರ ಬರುವ ಲಕ್ಷ್ಮೀಸಮೇತ ಶ್ರೀಹರಿಯ ಕಲ್ಪನೆಯ ಪರ್ಯಾಯನಾಮಗಳು. ಅಲ್ಲದೆ, ಇವನು

'ಲಕ್ಷ್ಮೀಕಾಂತನ' ಆರಾಧಕ, ಅವನನ್ನೇ ಅಂಕಿತವಾಗಿಸಿಕೊಂಡು ಕಾವ್ಯ ರಚಿಸಿದ್ದಾನೆ. ಇದೂ ಇವನ ಮತಸೂಚನೆಯೇ ಆಗುತ್ತದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಇವನನ್ನು ಸ್ತುತಿಸಿರುವ ವಿರೂಪಾಕ್ಷಪಂಡಿತ 'ಶರಣಾಗತಾನಂದ-ಚೂತವನಕ್ಷೇತ್ರ-ಭೂವರಶಿಖಾಮಣಿ' ಎಂದಿರುವಲ್ಲಿ ಸ್ಪಷ್ಟವಾಗಿ ಇವನ ಮತ-ಧರ್ಮವನ್ನು ಹೇಳಿದ್ದಾನೆ. ಇಲ್ಲಿ ಬರುವ 'ಶರಣಾಗತಾನಂದ' ಶ್ರೀವೈಷ್ಣವ 'ಪ್ರಪತ್ತಿಧರ್ಮ'ವೇ ಆಗಿದೆ. ಈ ಪ್ರಪತ್ತಿಯನ್ನು ಅನುಸರಿಸುವವರನ್ನು ಶರಣಾಗತರು ಎನ್ನುತ್ತಾರೆ. ಆದ್ದರಿಂದ ಇದು ಶರಣಾಗತಿ ಧರ್ಮವೆನಿಸುತ್ತದೆ. ವಿದ್ವಾಂಸರೇ ಗುರುತಿಸಿರುವ ಇವನ ಕಾವ್ಯದ ಪ್ರಧಾನಧರ್ಮ ಶ್ರೀವೈಷ್ಣವ, ದೈವ ಶ್ರೀಕೃಷ್ಣ. ಕೃಷ್ಣಪಾರಮ್ಯವೇ ಇಲ್ಲಿಯ ಕಥಾವಸ್ತು. ಎಲ್ಲ ಭಕ್ತರೂ ಕೃಷ್ಣನಲ್ಲಿ ಲೀನವಾಗುವ ಪ್ರಪತ್ತಿಯ ಅನುಸಂಧಾನಕಾರರೇ ಆಗಿದ್ದಾರೆ ; ಕೃಷ್ಣನ ಭಗವದ್ಗೀತೆಯ ಸಂದೇಶವಾದ 'ಸರ್ವಧರ್ಮಾನ್ ಪರಿತ್ಯಜ್ಯ. . . ' ಕ್ಕೆ ತಮ್ಮನ್ನು ಒಪ್ಪಿಸಿಕೊಂಡವರೇ. ಈ ಶ್ಲೋಕ ಶ್ರೀವೈಷ್ಣವ ಧರ್ಮದ ಮಂತ್ರರಹಸ್ಯದಲ್ಲಿ ಒಂದು. ಆದ್ದರಿಂದಲೇ ಶ್ರೀವೈಷ್ಣವ ಧರ್ಮೀಯರಿಗೆ ಈ ಕಾವ್ಯ ಪರಮಪ್ರಿಯವಾದದ್ದು. ಇಂದಿಗೂ ಇದನ್ನು (ಮತ್ತು ಕುಮಾರವ್ಯಾಸಭಾರತವನ್ನು- ಇದರ ಬಗೆಗೂ ವಿದ್ವಾಂಸರಲ್ಲಿ ಇದೇ ಬಗೆಯ ಜಿಜ್ಞಾಸೆಯಿದೆ. ಈ ಕಾವ್ಯವೂ ಸಹ ಈ ಶ್ರೀವೈಷ್ಣವತತ್ವದ ಹಿನ್ನೆಲೆಯಲ್ಲಿ ವಿಶಿಷ್ಟಾದ್ವೈತ ತತ್ವವನ್ನೂ ಸಾರುವಂಥದೇ ಆಗಿದೆ. ಇದರ ಕವಿಯೂ ಈ ಮತೀಯನೆ ಆಗಿದ್ದಾನೆ ಎಂಬುದನ್ನು ಸುಲಭವಾಗಿ ಸಾಬೀತುಪಡಿಸಬಹುದಾಗಿದೆ.) ದ್ರಾವಿಡ ಪ್ರಬಂಧಗಳ ಜೊತೆಗೆ ನಿತ್ಯಪಾರಾಯಣಕ್ಕೆ ಸ್ವೀಕರಿಸಿರುವ ಪವಿತ್ರ ಧಾರ್ಮಿಕ ಕೃತಿಗಳೆನಿಸಿವೆ.

ಲಕ್ಷ್ಮೀಶನು ಬರೆದಿರುವ ಕೃತಿ ಈ ಜೈಮಿನಿಭಾರತವೊಂದೇ ಆದರೂ ಕೀರ್ತನೆಗಳ ಜೊತೆಯಲ್ಲಿ 'ಗಜೇಂದ್ರಮೋಕ್ಷ'ವೆಂಬ ಕೇವಲ ೧೦ ವಾರ್ಧಕಷಟ್ಪದಿಯ ಪುಟ್ಟಕೃತಿಯನ್ನೂ ಬರೆದಿದ್ದಾನೆಂದು ಹಸ್ತಪ್ರತಿಗಳಲ್ಲಿ ಲಭ್ಯವಿದೆ. ಇದು ಪುರಂದರದಾಸರು ಮತ್ತು ವೈಕುಂಠದಾಸರ ಅಂಕಿತದಲ್ಲೂ ಲಭ್ಯವಿದೆ. ಇದರ ಬಗ್ಗೆ ಪರ್ಯಾಲೋಚಿಸಬೇಕಾದ ಅಗತ್ಯವಿದೆ.

(ಇ) ಕೀರ್ತನೆಗಳು

ಲಕ್ಷ್ಮೀಶನ ಹೆಸರಿನಲ್ಲಿ ಈವರೆಗೆ ಕೇವಲ ಹತ್ತು ಕೀರ್ತನೆಗಳು ಮಾತ್ರ ಲಭ್ಯವಾಗಿದ್ದವು. ಇವುಗಳನ್ನು ಕುರಿತೇ ಸಾಹಿತ್ಯ ವಲಯದಲ್ಲಿ ಅಲ್ಲೊಂದು ಇಲ್ಲೊಂದು ಚರ್ಚೆ ಕಂಡುಬರುತ್ತದೆ. 'ಇವು ಗ್ರಂಥಸ್ಥವಾಗಿರಲಿಲ್ಲ; ಅಂಕಿತದಲ್ಲಿ ಏಕತೆಯಿಲ್ಲ. ಸಂಸ್ಕೃತ ಭೂಯಿಷ್ಟವಾಗಿವೆ' ಎಂಬಂತಹ ಮೇಲ್ನೋಟದ ಹೇಳಿಕೆಗಳಿಂದ 'ಇವುಗಳನ್ನು ನಾದಲೋಲ ಲಕ್ಷ್ಮೀಶ ಬರೆದನೆಂದು ನಂಬುವುದು ಕಷ್ಟ' ಎಂಬಂತಹ ಅಭಿಪ್ರಾಯವೊಂದು ಈ ಕೀರ್ತನೆಗಳ ಬಗ್ಗೆ ಬೆಳೆದಿದೆ. ಆದ್ದರಿಂದಲೇ ವಿದ್ವಾಂಸರು ಇವುಗಳನ್ನು ಅಷ್ಟಾಗಿ ಗಮನಿಸಲು ಹೋಗಿಲ್ಲವೆನ್ನ-ಬಹುದೇನೋ. ಆದರೆ ಈಚೆಗೆ ಇವುಗಳ ಜೊತೆಗೆ ಇನ್ನೂ ಹನ್ನೆರಡು ಕೀರ್ತನೆಗಳು ಸೇರಿಕೊಂಡಿದ್ದು (ಮಹಾಕವಿ ಲಕ್ಷ್ಮೀಶನ ಕೀರ್ತನೆಗಳು–ಡಿ. ಆರ್.ಪಾಂಡುರಂಗ, ಉಡುಪಿ. ವರ್ಷ ಇಲ್ಲ) ಪರಿವೀಕ್ಷಣೆಯ ಸಂದರ್ಭದಲ್ಲಿ ಇನ್ನೂ ಐದು ಹಾಡುಗಳು ದೊರೆತಿದ್ದು ಇವುಗಳನ್ನೆಲ್ಲ ಪರಿಷ್ಕರಿಸಿ ಈ ಸಂಪುಟದಲ್ಲಿ ಲಕ್ಷ್ಮೀಶನ ಹೆಸರಿನಲ್ಲಿ ೨೦ ಕೀರ್ತನೆಗಳನ್ನು ಕೊಡಲಾಗಿದೆ. ಅನುಬಂಧದಲ್ಲಿ ಕೀರ್ತನೆಗಳೆಂದು ನಿರ್ಧರಿಸಲಾಗದ ಏಳು ಹಾಡುಗಳನ್ನೂ ನೀಡಿದೆ.

ಇಲ್ಲಿರುವ ಕೀರ್ತನೆಗಳು ಲಕ್ಷ್ಮೀಶನನ್ನು ಕೀರ್ತನಕಾರನನ್ನಾಗಿಯೂ ಗುರುತಿಸುವಷ್ಟು ಪ್ರಮುಖವಾಗಿವೆ. ಲಕ್ಷ್ಮೀಶನ ನಾದಲೋಲುಪತೆಗೆ ಅನುಗುಣವಾಗಿಯೇ ಇವೂ ಇದ್ದು ಕವಿ ಲಕ್ಷ್ಮೀಶನಿಗೆ ಮೆರುಗನ್ನು ಕೊಡಬಲ್ಲವಾಗಿವೆ. ಶ್ರೀಹರಿಸ್ತುತಿ, ಲಕ್ಷ್ಮೀಸ್ತುತಿ ಮತ್ತು ಆತ್ಮನಿವೇದನಾ ಸ್ತುತಿಗಳೆಂದು ಮೂರುಭಾಗದಲ್ಲಿ ಗುರುತಿಸಿಕೊಳ್ಳುವ ಈ ಕೀರ್ತನೆಗಳು ಅವನ ಮತತತ್ವಕ್ಕೆ ಇನ್ನಷ್ಟು ಸ್ಪಷ್ಟವಾದ ಮತ್ತು ನಿಖರವಾದ ನಿದರ್ಶನಗಳಾಗುತ್ತವೆ. ಕನ್ನಡ ಹರಿದಾಸ ಸಾಹಿತ್ಯದಲ್ಲಿಯೇ ಲಕ್ಷ್ಮೀಶನ ಕೀರ್ತನೆಗಳಿಗೆ ಒಂದು ಪ್ರತ್ಯೇಕವಾದ ಸ್ಥಾನ ನಿರ್ಮಾಣವಾಗುವ ಮಟ್ಟಿಗೆ ಈ ಕೀರ್ತನೆಗಳು ಮುಖ್ಯವಾಗುತ್ತವೆ ಎಂದು ಹೇಳಬಹುದು.

ಶ್ರೀಹರಿಸ್ತುತಿಯಲ್ಲಿ ಶ್ರೀವೈಷ್ಣವ ಪರಿಕಲ್ಪನೆಯಂತೆಯೇ ಶ್ರೀಹರಿಯನ್ನು 'ಏಕನಿಷ್ಠೆ'ಯಲ್ಲಿ ಕಲ್ಪಿಸಲಾಗಿದೆ. ಶ್ರೀಹರಿಯನ್ನು ಸರ್ವಾಂತರ್ಯಾಮಿ ಲೋಕೈಕನಾಥ, ಪರಮಪುರುಷ ಎಂದೆಲ್ಲ ಸ್ತುತಿಸಲಾಗಿದೆ.

'ಏಳಯ್ಯ ಕಾರುಣ್ಯನಿಧಿ ಕಮಲದಳನೇತ್ರ' (೬೭)

ಕೃತಿಯಲ್ಲಿ 'ಏಳು' ಪದವನ್ನು ಅನೇಕಾರ್ಥಗಳಲ್ಲಿ ಬಳಸಿರುವ ಶಬ್ದಚಮತ್ಕಾರ ದೊಂದಿಗೆ ಹರಿಯ ಸರ್ವವ್ಯಾಪಕತೆ, ದಶಾವತಾರ ಇತ್ಯಾದಿಗಳನ್ನೆಲ್ಲ ಕುಶಲಾತ್ಮಕ-ವಾಗಿ ನಿರ್ಮಿಸಿದೆ. 'ಏಳು' ಸಂಖ್ಯೆಗಳ ಸಂಖ್ಯಾಪದಗಳೂ ಇಲ್ಲಿ ಅಷ್ಟೇ ಚಮತ್ಕಾರಕವಾಗಿ ಪ್ರಯೋಗವಾಗಿವೆ.

'ಐಸಿರಿಯನೇನೆಂದು ಪಾಡಲಿ ಶ್ರೀಹರಿಯ' (೬೯)
ಮೈಸಿರಿಯ ಪಾದಾದಿ ಕೇಶಪರ್ಯಂತ'

'ಶ್ರೀಕಾಮಕೋಟಿ ಲಾವಣ್ಯಮೋಹನ ರೂಪಿನ
ಶ್ರೀಕಾಂತ ಮಂಗಳಮೂರುತಿ ವರದೇವಾ' (೭೪)

ಇವೆರಡೂ' ಒಂದೇ ಬಗೆಯ ವರ್ಣನೆಯ ವಿಭಿನ್ನ ಕೃತಿಗಳು. ಒಂದು 'ಪಾದಾದಿಕೇಶ ಪರ್ಯಂತ' ವರ್ಣಿಸಿದರೆ ಇನ್ನೊಂದು 'ಕೇಶಾದಿಪಾದ ಪರ್ಯಂತ' ವರ್ಣಿಸುತ್ತದೆ. ವರ್ಣನೆಯಲ್ಲಿ ಕವಿಸಹಜ ಕಾವ್ಯಭಾಷೆ ಪಡಿಮೂಡಿದೆ. ಪಾದಾದಿ ಕೃತಿ ಅತ್ಯಂತ ಸುಂದರವಾದ ಶ್ರೀಹರಿಯ ವಿವರ ವಿವರವಾದ ವರ್ಣನೆಯಾಗಿದೆ. ಶ್ರೀಹರಿಗೇ ವಿಶೇಷವಾದ ಕೌಸ್ತುಭ, ಮೌಕ್ತಿಕ ಮುಂತಾದ ಹಾರಗಳ ಉಲ್ಲೇಖದೊಂದಿಗೆ ಶ್ರೀಹರಿಏಕನಿಷ್ಠೆ ಇವೆರಡರಲ್ಲೂ ಪ್ರಸಿದ್ಧವಾಗಿದೆ.

'ನಾಗವೇಣಿಯೆ ಕರೆದುತಾರೆ ನಾಗಶಯನನ'
'ಭಜಿಸಿರೋ ಮನದಣಿಯ ಸುಜನಾಬ್ಜದಿನಮಣಿಯ'
'ಶರಣಾಗು ಸಂಪೂರ್ಣ ಶರಣಾಗು ಜಿತಾರ್ಣ'

ಮುಂತಾದ ಕೃತಿಗಳಲ್ಲಿ ಅಪ್ಯಾಯಮಾನವಾದ ಹರಿಸ್ಮರಣೆಯಿದೆ. ದಶಾವತಾರದ ವರ್ಣನೆಯಲ್ಲಿ ಶ್ರೀವೈಷ್ಣವ ಸಂಪ್ರದಾಯಕ್ಕನುಗುಣವಾಗಿ ತ್ರಿಪುರಾಂತಕನ ಚಿತ್ರವನ್ನು ಕವಿ ಬಿಡಿಸುತ್ತಾನೆ. ವಿದ್ವಾಂಸರು ಈ ದಿಗಂಬರ ಮೂರ್ತಿಯ ಕಲ್ಪನೆಗೆ ಸುರಪುರದ ದೇವಾಲಯದ ಕಂಬದ ಶಿಲ್ಪವನ್ನು ಗುರುತಿಸುತ್ತಾರೆ.

'ಸಚ್ಚಿದಾನಂದಮಯಗೆಚ್ಚರಿಕೆ' (೭೫)

ಕೃತಿಯಲ್ಲಿ ಒಂದು ಹೊಸಬಗೆಯ 'ಹರಿಲೀಲೆ'ಯನ್ನು ಕವಿ ಸೃಷ್ಟಿಸಿದ್ದಾನೆನ್ನಬಹುದು.

'ಕಾಂತೆಯರ ಮನೆಗೆ ಶ್ರೀಕಾಂತ ಪೊರಮಡುತಿಹನು'
'ದೇವಿಯರ ಮನೆಗೆ ವಿವಾಹ ತಾಬೇಡಿ ಬಂದ'

ಪ್ರತಿಮೆಗಳ ಮೂಲಕ 'ವರನಾಗಿ' 'ವಧುಗಳ' ಮನೆಗೆ ಹೋಗುವ ಮನ್ಮಥರೂಪಿನಲ್ಲಿ ಶ್ರೀಹರಿಯನ್ನು ಕಂಡಿರುವ ಚಿತ್ರ ಅದ್ಭುತವಾಗಿದೆ. ಇಲ್ಲಿಯ ಆಕರ್ಷಣೀಯ ಪದಬಳಕೆ, ಶೀಲಗಳ ಬಗೆಗಿನ ಎಚ್ಚರಿಕೆ ಹೊಸದಾಗಿದೆ.

'ನಮೋನಮೋ ನಾರದವಂದ್ಯ' ಇನ್ನೊಂದು ರೀತಿಯ ಶಬ್ದಚಮತ್ಕಾರದ ಕೃತಿ. ಇರುವ ಮೂರುನುಡಿಗಳನ್ನೂ ಕ್ರಮವಾಗಿ ಹರಿ, ಶಿವ, ಸುರ ಪದಗಳಲ್ಲೆ ಇಡಿಯಾಗಿ ಕಟ್ಟಿರುವ ಪ್ರತಿಮೆ ಸೊಗಸಾಗಿದೆ.

'ಆವಾವಪರಿಯಿಂದಲೂ ರಾಮನಾಮವನು
ಆವಪರಿಯಲಿ ನೆನೆದು ಸುಖಿಯಾಗು ಮನವೆ' (೭೮)

ಇದೊಂದು ಸುಂದರವಾದ ಮಂತ್ರಮಹಿಮೆಯನ್ನು ಕುರಿತ ಕೃತಿ. ಪುರಾಣ ಪ್ರತಿಮೆಗಳ ಮೂಲಕವೇ ಈ ಕೀರ್ತನೆಯನ್ನು ರೂಪಿಸಲಾಗಿದ್ದರೆ ಇನ್ನೊಂದರಲ್ಲಿ

'ದೇವನೀನಹುದೋ ದೇವರದೇವ ನೀನಹುದೋ' (೭೯)

ಕೃತಿಯಲ್ಲಿ ಸಂಕ್ಷೇಪ ಜೈಮಿನಿಭಾರತವೇ ಅಡಗಿದೆ. ಈ ಎರಡೂ ಕೃತಿಗಳಲ್ಲಿ ಜೈಮಿನಿಭಾರತದ ಭಾಗವತ ಭಕ್ತರ ಪ್ರತಿಮೆಗಳನ್ನು ಕಲಾತ್ಮಕವಾಗಿ

ಜೋಡಿಸಲಾಗಿದೆ. ಸುಧನ್ವ, ಹಂಸಧ್ವಜ, ತಾಮ್ರಧ್ವಜ ಮುಂತಾದ ಪ್ರತಿಮೆಗಳು ಬೇರಾವ ಹರಿದಾಸರಲ್ಲೂ ಕಾಣಸಿಗುವುದಿಲ್ಲ. ಶ್ರೀವೈಷ್ಣವ ಹರಿದಾಸರು ಮಾತ್ರ ಈ ಪ್ರತಿಮಾ ಪ್ರಯೋಗ ನಿಪುಣರಾಗಿದ್ದಾರೆ. ಇದಕ್ಕೆ ಈ ಪಾತ್ರಗಳನ್ನು ಸೃಷ್ಟಿಸಿದ ಕವಿ ಲಕ್ಷ್ಮೀಶನೇ ಮೊದಲಿಗನಾಗಿದ್ದಾನೆ. ಕವಿ ಲಕ್ಷ್ಮೀಶನ ಕಾವ್ಯಶೈಲಿ ಈ ಕೀರ್ತನೆಯಲ್ಲೂ ನುಸುಳಿರುವುದು ಇಲ್ಲಿ ಸ್ಪಷ್ಟ.

ಲಕ್ಷ್ಮೀಸ್ತುತಿಯಲ್ಲಿಯೂ ಹೊಸತನವನ್ನು ತಂದಿರುವ ಕವಿ ಕಾವ್ಯಭಾಷೆಯಲ್ಲಿಯೇ ಲಕ್ಷ್ಮಿಯ ಸೌಂದರ್ಯವನ್ನು ಹಿಡಿದಿಡುತ್ತಾನೆ.

'ಅಂಗನೆ ನಿನ್ನಯ ಮುಖದಿರುವಿಂತು' ಮತ್ತು 'ಗಾಡಿಎತ್ತಲಿಂದ ಬಂದುದೇ' ಎರಡೂ ಶೃಂಗಾರದ ಸೊಗಸನ್ನು ಬಟ್ಟಿ ಇಳಿಸಿದಂತಿವೆ. ಈ ಬಗೆಯ ಪುತ್ಥಳಿಯ ಭಾವಭಂಗಿಯ ವರ್ಣನೆಯನ್ನು ಗಮನಿಸಿದರೆ ಇದು ಕವಿ ತನ್ನ ದೇವಾಲಯದ ವಿಗ್ರಹದಿಂದಲೇ ಪ್ರಭಾವಿತನಾಗಿರಬಹುದೆನ್ನಿಸುತ್ತದೆ.

'ಎಂತವಗೊಲಿದು ನೆರೆದೆ ಎಲೆಬಾಲೆ ನೀಬರಿದೆ' (೮೩)

ಎಂಬುದೂ ಒಂದು ವಿನೂತನ ನಿಂದಾಸ್ತುತಿಯಾಗಿದೆ. ಲಕ್ಷ್ಮಿಯನ್ನು ಪ್ರಶ್ನಿಸುತ್ತ ಶ್ರೀಹರಿಯನ್ನು ಮೂದಲಿಸುವ ಪರಿ ವಿಶೇಷವಾಗಿದೆ. ಅವನ ಅವತಾರಗಳನ್ನೇ ಇಲ್ಲಿ ಅವಗಡಗೊಳಿಸಲಾಗಿದೆ.

'ಆಕಾರವಿಲ್ಲದ ಅನಾದಿಯೊಳು ಪಂತ
ಸಾಕಾರನಾಗಿಹನು ಶ್ರೀಲಕ್ಷ್ಮೀಕಾಂತ'

ದೈವಸಾಕ್ಷಾತ್ಕಾರಕ್ಕೆ ಅಗತ್ಯವಾದ ಆತ್ಮಸ್ಥಿತಿಯ ಪೂರ್ವಸಿದ್ಧತೆಯನ್ನು ಹೇಳುವ ಈ ಕೃತಿ ಮನುಷ್ಯನ ಬದುಕಿನ ಗುರಿಯನ್ನೂ ಭಗವಂತನ ಭಕ್ತಿಯ ಸ್ವರೂಪವನ್ನೂ ಸರಳವಾಗಿ ಆದರೆ ಅಷ್ಟೇ ತಾತ್ವಿಕವಾಗಿ ನಿರೂಪಿಸುತ್ತದೆ. ಇಂಥದೊಂದರ ಸ್ಥಿತಿಯ ಹಂಬಲವನ್ನೂ ಕವಿ ಇಲ್ಲಿ ಅರ್ಥಿಸಿದ್ದಾನೆ.

ಹೀಗೆ ಹತ್ತುಹಲವು ದೃಷ್ಟಿಗಳಿಂದ ಮುಖ್ಯವಾಗಿರುವ, ವಿಶೇಷವೆನಿಸುವ ಕೀರ್ತನೆಗಳನ್ನು ನೀಡುವ ಮೂಲಕ ಕವಿ ಲಕ್ಷ್ಮೀಶ ಯಶಸ್ವಿಕೀರ್ತನಕಾರನೂ ಆಗಿ ಮೂಡಿಬರುತ್ತಾನೆ.

ಅನುಬಂಧದಲ್ಲಿರುವ ಏಳು ಕೃತಿಗಳು ಹಾಡಿನ ರೂಪದಲ್ಲಿದ್ದರೂ ಅವು ಕೀರ್ತನೆಯ ಚೌಕಟ್ಟಿಗೆ ಬರುವುದಿಲ್ಲ. ಕಾವ್ಯವೊಂದರ ಭಾಗಗಳಾಗಿಯೋ ನಿರ್ದಿಷ್ಟವಸ್ತುವೊಂದರ ವರ್ಣನೆಯಾಗಿಯೋ ಕಾಣುವ ಅವು ಲಯಬದ್ಧವಾದ ನುಡಿಗಳಿಗೂ ಹೊಂದುವುದಿಲ್ಲ. ವಿರಹ, ವಸಂತ, ಮನ್ಮಥ ವರ್ಣನೆಗಳಾಗಿ ಕಂಡುಬರುತ್ತವೆ ಮತ್ತು ಅದೇ ರೀತಿಯ ಶೀರ್ಷಿಕೆ, ಟಿಪ್ಪಣಿ, ವಿವರಗಳನ್ನೂ ಹೊಂದಿವೆಯಾದ್ದರಿಂದ ಇವುಗಳ ನಿರ್ಧಾರ ಗೊಂದಲದಲ್ಲಿದ್ದು ಓದುಗರ ಅನುಕೂಲಕ್ಕಾಗಿ ಅನುಬಂಧದಲ್ಲಿ ಇತರ ಕೃತಿಗಳ ಅಡಿಯಲ್ಲಿ ನೀಡಲಾಗಿದೆ.

(೪) ಕೀರ್ತನೆಗಳ ಆಕರ

ಇಲ್ಲಿ ಬಳಸಿರುವ ಕೀರ್ತನೆಗಳಿಗೆ ಮುಖ್ಯವಾಗಿ ಮೂರು ಮುದ್ರಿತ ಗ್ರಂಥಗಳನ್ನು ಮತ್ತು ಎರಡು ಹಸ್ತಪ್ರತಿಗಳ ಆಕರಗಳನ್ನು ಸ್ವೀಕರಿಸಲಾಗಿದೆ. (೧) ಕನ್ನಡ ಜೈಮಿನಿಭಾರತ (ಕನ್ನಡ ಸಂಸ್ಕೃತಿ ಇಲಾಖೆ, ಸಂ: ದೇವುಡು ಮತ್ತು ಬಿ ಶಿವಮೂರ್ತಿಶಾಸ್ತ್ರೀ ೧೯೮೫. ಬೆಂಗಳೂರು.) ಇದರಲ್ಲಿ ಅನುಬಂಧದಲ್ಲಿ ಕೊಟ್ಟಿರುವ 'ಕವಿ ಲಕ್ಷ್ಮೀಶನ ಕೀರ್ತನೆಗಳು' (೨) 'ಮಹಾಕವಿಲಕ್ಷ್ಮೀಶನ ಕೀರ್ತನೆಗಳು' (ಸಂ. ಡಾ॥ ಡಿ.ಆರ್.ಪಾಂಡುರಂಗ, ಮಹಾಕವಿ ಲಕ್ಷ್ಮೀಶ ಸಾಂಸ್ಕೃತಿಕವೇದಿಕೆ, ಉಡುಪಿ, ೨೦೦೨.) (೩) ಲಕ್ಷ್ಮೀಶ ಕವಿಯ ಕೀರ್ತನೆಗಳು (ಸಂ. ನಾ. ಗೀತಾಚಾರ್ಯ ನಾರಾಯಣ ಸಂಸ್ಕೃತಿ ಕೇಂದ್ರ, ಬೆಂಗಳೂರು, ೨೦೦೨) ಇವುಗಳ ಜೊತೆಗೆ ಬೇಲೂರು ವೈಕುಂಠದಾಸರ ಹಾಡುಗಳ ಹಸ್ತಪ್ರತಿಗಳಾದ ಕೊರಟಿ ಸಂಗ್ರಹದ ದೇವರನಾಮಗಳು ಮತ್ತು ಮೈಸೂರು ಹಸ್ತಪ್ರತಿಗಳಲ್ಲೂ ಕವಿ ಲಕ್ಷ್ಮೀಶನ ಕೆಲವು ಕೀರ್ತನೆಗಳಿದ್ದು ಅವುಗಳನ್ನೂ ಪರಿಗಣಿಸಿದೆ.

೩. ತುಳಸಿರಾಮದಾಸರು

ತುಳಸಿರಾಮದಾಸರು ೧೯ನೇ ಶತಮಾನದಲ್ಲಿ ವಿಶಿಷ್ಟಾದ್ವೈತ ತತ್ವವನ್ನು ಜನಪ್ರಿಯಗೊಳಿಸಿದ ಯೋಗಿಗಳು. ಹರಿಕಥಾ ವಿದ್ವಾಂಸರಾಗಿ, ತತ್ವಜ್ಞಾನಿಗಳಾಗಿ ಹರಿದಾಸರಾಗಿ, ದಕ್ಷಿಣ ಕರ್ನಾಟಕದಾದ್ಯಂತ ಮನೆಮಾತಾಗಿದ್ದ ಪವಾಡ ಪುರುಷರು, ವಿಶಿಷ್ಟಾದ್ವೈತ ತತ್ವವನ್ನು ಜನಸಾಮಾನ್ಯರಲ್ಲಿ ಅನುಸಂಧಾನಗೊಳಿಸಿ ಅದರ ಮೂಲಕ ಸಮಾಜೋದ್ಧಾರ, ಧರ್ಮೋನ್ನತಿಯನ್ನು ಸಾಧಿಸಿದ ಪುಣ್ಯಪುರುಷರು. ೩೦೦ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿರುವ ಪ್ರಮುಖ ಶ್ರೀವೈಷ್ಣವ ಹರಿದಾಸರು. ೧೯ ನೇ ಶತಮಾನದಲ್ಲಿ ಹರಿದಾಸ ಆಂದೋಲನವನ್ನೇ ನಡೆಸಿ ವೈದಿಕೇತರ ವರ್ಗವನ್ನು ಹರಿದಾಸ ವಾಹಿನಿಗೆ ಸೇರಿಸಿದ.

(೧) ಜೀವನ ವಿವರ

ಆಂಧ್ರಪ್ರದೇಶದ ಕಡಪಜಿಲ್ಲೆಯ ಸಿದ್ಧವಟ್ಟಂ ಎಂಬ ಗ್ರಾಮದಲ್ಲಿ ವಡಗತಿ ಸಂಪ್ರದಾಯವನ್ನವಲಂಬಿಸಿದ ಪ್ರಪನ್ನವೈಷ್ಣವಕುಲದಲ್ಲಿ 'ತುಳಸಿ' ಹೆಸರಿನ ವಂಶದಲ್ಲಿ ಕೊಂಡಯ್ಯ ಮತ್ತು ವೆಂಕಟಲಕ್ಷಮ್ಮ ಎಂಬ ಸಾತ್ವಿಕ ದಂಪತಿಗಳಿಗೆ ಪ್ಲವಂಗಾಷಾಢ ಬಹುಳ ದಶಮಿ ಶುಕ್ರವಾರ ಚಂದ್ರಾದಿತ್ಯ ಮೃಗಶಿರ ಪ್ರಥಮ ಚರಣ ಧನುರ್ಲಗ್ನದ ಶುಭವೇಳೆಯಲ್ಲಿ (೧೩-೭-೧೮೪೭) ಇವರು, ಜನ್ಮಸ್ಥಳದ ಪೂರ್ವಋಷಿಗಳ ಅವತಾರವಾಗಿ ಜನ್ಮವೆತ್ತಿದರು. ಇವರನ್ನು ಸಂಪ್ರದಾಯ ವಿಶ್ವಕ್ಸೇನರ ಮತ್ತು ಶಠಗೋಪರ ಅಂಶವೆಂದೂ ನಂಬಿದೆ. ಇವರನ್ನು ಕುರಿತು ರಚಿಸಿರುವ 'ತುಳಸಿರಾಮದಾಸಲುನ ಚರಿತ್ರಮು' ಎಂಬ ಹರಿಕಥಾ ಗ್ರಂಥದಲ್ಲಿ ೨೭೫ ಸಂಕೀರ್ತನೆ ಪಾಡಿ ದಾಸರು ಮಹದಾನಂದದಿಂದ ಶ್ರೀರಾಮೋತ್ಸವ ನಡೆಸಿ ದಾಸ ವಂಶಾಭಿವೃದ್ಧಿಗಾಗಿ ಬಂದಿದ್ದ ಸಿದ್ಧಸಂಕಲ್ಪರು' ಎಂದು ವರ್ಣಿಸುತ್ತದೆ.

ತಾಡಪರ್ತಿ ಭಾಸ್ಕರಾಚಾರ್ಯರಲ್ಲಿ ವಿದ್ಯಾಭ್ಯಾಸ ಪೂರೈಸಿದ ದಾಸರು ಬಾಲ್ಯದಿಂದಲೂ ತಾರಕಮಂತ್ರಾನುಷ್ಠಾನದಲ್ಲಿ ನಿಷ್ಠೆಯುಳ್ಳವರಾಗಿದ್ದು ೨೦ನೇ ವರ್ಷಕ್ಕೇ ವ್ಯಾಕರಣ, ಜ್ಯೋತಿಷ್ಯ, ಛಂದಸ್ಸು, ಕಾವ್ಯ, ಸಂಗೀತ, ಸಾಹಿತ್ಯ ಮತ್ತು ಹಲವು ಭಾಷೆಗಳಲ್ಲಿ ಪರಿಣತಿ ಹೊಂದಿದ್ದರೆಂದು ಅಹೋಬಲ ಮಠದ

ಪಠಗೋಪಾಯತಿ-ಗಳಿಂದ ಪಂಚಸಂಸ್ಕಾರ ಪಡೆದಿದ್ದರೆಂದು ಪ್ರತೀತಿ. ಶಾಲಿವಾಹನ ಶಕ ೧೭೯೫ (ಕ್ರಿ.ಶ.೧೮೭೩) ರಲ್ಲಿ ಅಕ್ಷಯ ಸಂ. ದಲ್ಲಿ ತಂದೆತಾಯಿಗಳ ನಿಧನದಿಂದ ಲೌಕಿಕಾಸಕ್ತಿಯನ್ನು ತೊರೆದು ಹಿಮಾಲಯದ ಬದರಿ ಕ್ಷೇತ್ರದಲ್ಲಿ ತಪೋನಿರತರಾಗಿದ್ದಾಗ ನರನಾರಾಯಣನು ಸ್ವಪ್ನ ದರ್ಶನನಾಗಿ 'ಕರ್ನಾಟಕದಲ್ಲಿ ಆಂಗ್ಲೇಯರ ಪ್ರವೇಶದಿಂದ ಹಿಂದೂಧರ್ಮ ನಾಶವಾಗುತ್ತಿದ್ದು ನೀನು ನನ್ನ ಅವತಾರ ರೂಪದಲ್ಲಿ ಉದ್ಧರಿಸು' ಎಂಬ ಸಂದೇಶವಾಗಿ ಅದರಂತೆ ಬೆಂಗಳೂರಿನ ಸಮೀಪದ ಕರಣ್ಣೆಪಾಳ್ಯ (ಶಾಖಾಪುರ ಈಗಿನ ದಂಡುಪ್ರದೇಶದ ಸಮೀಪದ ಕರಿಯಣ್ಣನ ಪಾಳ್ಯ) ದಲ್ಲಿ ಬಂದು ನೆಲೆಸಿ ಸತ್ಕರ್ಮಾನುಷ್ಠಾನದಲ್ಲಿದ್ದು ಭಕ್ತಾದಿಗಳನ್ನು ಕೂಡಿಸಿ ಅನೇಕ ಭಜನೆಮಂದಿರಗಳನ್ನು ನಿರ್ಮಾಣಮಾಡಿ ರಾಮೋತ್ಸವಗಳನ್ನು ಏರ್ಪಡಿಸಿ ಸಂಕೀರ್ತನೆಗಳನ್ನೂ ನಡೆಸುತ್ತಿದ್ದರು ಎಂಬ ಸಂಗತಿ ಅವರ ಹರಿಕಥಾ ಕೃತಿಯಿಂದ ಲಭ್ಯವಾಗುತ್ತದೆ. ಈ ಕೃತಿ ಇವರ ಚರಿತ್ರೆಯನ್ನು ಇಲ್ಲಿಂದೀಚೆಗೆ ಪಟ್ಟಿಮಾಡಿದ್ದು ದಾಸರಿಗೆ ಈ ವೇಳೆಗೆ ಕೇವಲ ೨೬ ವರ್ಷವಾಗಿದ್ದ ಇಲ್ಲಿಯವರೆಗಿನ ವಿವರಗಳು ಸಂಕ್ಷಿಪ್ತಗೊಂಡಿದೆ. ೧೯೦೩ ಫೆಬ್ರವರಿ ೩ ರಂದು (ಕಲಿಯುಗ ೫೦೦೪ರ ಶೋಭಕೃತು ಸಂವತ್ಸರ ಮಾಘ ಬಹುಳ ೨ ಬುಧವಾರ ಅಪರಾಹ್ನ, ಕರ್ಕಾಟಕ ಲಗ್ನದಲ್ಲಿ) ಶ್ರೀರಂಗಪಟ್ಟಣ ತಾಲೂಕಿನ ಆಸುಪಾಸಿನಲ್ಲಿದ್ದಿರ-ಬಹುದಾದ 'ದರಿಶಕುಪ್ಪ'ದಲ್ಲಿ ಭಾಗವತರು, ಶಿಷ್ಯರು, ಸಾಹಿತ್ಯ, ಸಂಗೀತ ಪಂಡಿತಜ್ಞರ ಸಭೆಯಲ್ಲಿ ಪರಕಾಲಮಠದ ಶ್ರೀಪಾದತೀರ್ಥಸೇವಿಸಿ ಶ್ರೀರಾಮಪೂಜಾಕೈಂಕರ್ಯ ನಡೆಸಿ ಪರಮಪದಸೇರಿದರು' ಎಂದು ಈ ಕೃತಿ ಹೇಳುತ್ತ ದಾಸರು ೫೭ ವರ್ಷ ಬದುಕಿದ್ದರೆಂಬ ಜೀವಿತಾವಧಿ ದಾಸರಿಂದಲೆ ಸ್ಥಾಪಿತಗೊಂಡು ಸಂಪ್ರದಾಯದಲ್ಲಿ ರೂಢಿಯಾಗಿರುವುದರಿಂದ ಇದೇ ಪ್ರಮಾಣವಾಗಿರುತ್ತದೆ.

ಬೆಂಗಳೂರಿನ ಕೋಲ್ಸ್ ಪಾರ್ಕ್‌ನಲ್ಲಿ ಮತ್ತು ಕೋಲಾರದ ಮುಳಬಾಗಿಲಿನಲ್ಲಿ ಹಾಗೂ ಶ್ರೀರಂಗಪಟ್ಟಣದ ದರಿಶಕುಪ್ಪದಲ್ಲಿ ಮೂರು ಕಡೆ ಮಠಗಳನ್ನು ನಿರ್ಮಿಸಿ ಕೇಂದ್ರ ಮಾಡಿಕೊಂಡು ಕೋಲಾರ, ಬೆಂಗಳೂರು, ಮಂಡ್ಯ ಮೈಸೂರು ಈ ಎಲ್ಲ ಜಿಲ್ಲೆಗಳ ಬಹುಮಟ್ಟಿಗೆ ಎಲ್ಲ ತಾಲೂಕು ಕೇಂದ್ರಗಳಲ್ಲೂ ಸಂಚರಿಸಿ ಕೆಲ ದಿನಗಳಿದ್ದು ಭಜನ ಮಂಡಲಿಗಳನ್ನು ಪ್ರಾರಂಭಿಸಿ 'ಭಾರ್ಗವರಾಮಭಜನ ಮಂದಿರಗಳನ್ನು'

ನಿರ್ಮಾಣ ಮಾಡಿಸಿದ್ದಾರೆ. ಇದಕ್ಕೆ ಸಮಾಜದ ಎಲ್ಲ ವರ್ಗದ ಜನಪ್ರತಿನಿಧಿಗಳ-ನ್ನೊಳಗೊಂಡ ಭಕ್ತಮಂಡಲಿಗಳನ್ನು ರಚಿಸಿದ್ದು ಇವುಗಳಲ್ಲಿ ಹಲವು ಈಗಲೂ ಅಸ್ತಿತ್ವದಲ್ಲಿದ್ದು ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿವೆ. ಇಂತಹ ಭಜನಮಂದಿರಗಳಲ್ಲಿ ದಾಸರ ದ್ವಾದಶನಾಮಾಲಂಕಾರವಿರುವ ಕಿರೀಟಧಾರಿಗಳಾಗಿ ನಿಂತಿರುವ ಅಥವ ಪದ್ಮಾಸನ ಭಂಗಿಯಲ್ಲಿ ಕುಳಿತಿರುವ ಭಾವಚಿತ್ರಗಳು ಕಾಣಸಿಗುತ್ತವೆ. ಈ ಹರಿಕಥಾಗ್ರಂಥದಲ್ಲಿ ಇವರು ಪ್ರವಾಸಮಾಡಿರುವ ಸ್ಥಳಗಳು, ಸಹಾಯ ಪಡೆದಿರುವ ಅಥವ ಇವರನ್ನು ಕರೆಸಿ ವ್ಯವಸ್ಥೆಮಾಡಿರುವ ಸೇವಾಕರ್ತರ ಭಕ್ತರ, ಶಿಷ್ಯರ ಪಟ್ಟಿಯಿದ್ದು ಅವರ ಸಂಖ್ಯೆ ನೂರನ್ನು ದಾಟುವಷ್ಟಿದೆ. ಇವರ ಶಿಷ್ಯರ ಹೆಸರೇ ೩೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುತ್ತಿದ್ದು ಇವರೆಲ್ಲರೂ ದಾಸರನ್ನು ಕುರಿತು ಕೃತಿಗಳನ್ನು ರಚಿಸಿದ್ದಾರೆ.

ಮೈಸೂರಿನ ಪರಕಾಲಮಠ ಇವರಿಗೆ ಶ್ರೀಮುಖವನ್ನು ನೀಡಿ ಮಂಗಳಾಶಾಸನ ಮಾಡಿ ಸ್ತುತಿಸುವಷ್ಟರ ಮಟ್ಟಿಗೆ ಇವರ ಶ್ರೀವೈಷ್ಣವ ಧರ್ಮಪ್ರಚಾರ ನಡೆದಿದೆ. ಮೈಸೂರಿನ ಪ್ರಸಿದ್ಧ ಅದ್ವೈತ ಗುರುಗಳೂ 'ಶಂಕರದಾಸ' ಅಂಕಿತದ ಕವಿ-ಕೀರ್ತನಕಾರರೂ ಆದ ವೇದಾಂತ ಶಿವರಾಮ ಶಾಸ್ತ್ರಿಗಳು, ಬೆಂಗಳೂರಿನ ಪ್ರಸಿದ್ಧ ವಿದ್ವಾಂಸ ತೂಪ್ಪಲ್ ವೆಂಕಟಾಚಾರ್ಯರುಗಳು ಇವರನ್ನು ಸ್ತುತಿಸಿರುವ ಪದ್ಯಮಾಲಿಕೆಗಳಿವೆ. 'ಪಾತ್ರತ್ಯಾಗ, ಸಾತ್ವಿಕಯೋಗ, ನಿಶ್ಚಲತತ್ವ, ಜಿತೇಂದ್ರಿಯತ್ವವನ್ನು ಸಾಧಿಸಿದವರು, ಮಾಯವನ್ನು ಜಯಿಸಿದವರು, ದಾಸವರ್ಯ, ಅಸ್ಖಲಿತ ಬ್ರಹ್ಮಚಾರಿ, ಸದಾಚಾರನಿಷ್ಠಗರಿಷ್ಠ, ಪುಣ್ಯಶರೀರ, ತತ್ವಜ್ಞಾನಸುಧಾಮಣಿ, ಯೋಗೀಶ್ವರಸತ್ಯಸ್ವರೂಪ, ದೀನಜನಮನೋಹರ, ಸುಜ್ಞಾನಿ, ಅಧ್ಯಾತ್ಮ ತತ್ವನಿಷ್ಠ, ವೈಷ್ಣವ ಶಿಖಾಮಣಿ, ಹರಿದಾಸಾಗ್ರೇಸರ, ರಾಮತಾರಕೋಪಾಸಿ, ರಾಮಾವತಾರ, ಕೈವಲ್ಯಮೂರ್ತಿ, ಸತ್ಕವಿತಾ ನಿಪುಣ, ಅಷ್ಟಾಕ್ಷರೀ ಜಪನಿಷ್ಠ, ಭಾರ್ಗವಾಸರ ಭಜನೋನ್ನೋಲ್ಲಾಸ, ಭಕ್ತಪ್ರಿಯ ಎಂದೆಲ್ಲ ಇವರನ್ನು ಸ್ತುತಿಸಲಾಗಿದೆ. ಶ್ರೀರಾಮಕಥಾ ನಿಪುಣರಾದ ಇವರಿಗೆ ಮಹಾಜನತೆ ಚಿನ್ನದ ಕಿರೀಟವನ್ನು ತೊಡಿಸಿದ್ದರೆ ಮೈಸೂರು ಮಹಾರಾಜರು ಚಿನ್ನದ ಕಡಗವನ್ನು ತೊಡಿಸಿ ಸತ್ಕರಿಸಿ 'ಶ್ರೀ ಚಾಮರಾಟ್ಪಾಲಿತ ಸತ್ಸಂಪ್ರದಾಯ ಸುಜ್ಞಾನ ಬೊಧಿನೀ ಸಮಾಜೋದ್ಧಾರಕಾ' ಎಂಬ ಬಿರುದನ್ನು ನೀಡಿ ಗೌರವಿಸಿದ್ದಾರೆ.

ಹೀಗೆ ಪವಾಡ ಸದೃಶ ಜೀವನ ನಡೆಸಿರುವ ದಾಸರು ೭ ಕೃತಿಗಳನ್ನೂ ೨೫೫ ಕನ್ನಡ ಕೀರ್ತನೆಗಳನ್ನೂ ೨೫೦ಕ್ಕೂ ಅಧಿಕ ತೆಲುಗು ಕೀರ್ತನೆಗಳನ್ನೂ ರಚಿಸಿದ್ದಾರೆ. ೧೮೭೬–೭೮ರಲ್ಲಿ ಕಾಡಿದ್ದ ದೊಡ್ಡಬರಗಾಲ. ಧಾತುಸಂವತ್ಸರ ಕ್ಷಾಮ ಮತ್ತು ೧೯೦೦ರಲ್ಲಿ ಕಾಣಿಸಿಕೊಂಡ ಪ್ಲೇಗು ಸಂದರ್ಭಗಳಲ್ಲಿ ೧೯ ನೇ ಶತಮಾನದ ಕೊನೆಯ ಭಾಗದಲ್ಲಿ ಸದ್ದಿಲ್ಲದೆ ಸಾಮಾಜಿಕಕ್ರಾಂತಿ ನಡೆಸಿದರು. ಜೀವನದ ಅಸ್ಥಿರತೆ, ಅರಾಜಕತೆ, ಕ್ಷಾಮ, ಯುದ್ಧಭೀತಿಗಳಿಂದ ನಲುಗಿದ್ದ ಸಮಾಜದ ಸಾಮಾನ್ಯ ಜನವರ್ಗಕ್ಕೆ ಆಸರೆಯಾಗಿ ಅವರಲ್ಲಿ ಭಕ್ತಿಯನ್ನು ಭಗವತ್ಸೇವೆಯನ್ನು ಸಾಮಾಜಿಕ ಸೌಹಾರ್ದತೆಯನ್ನು ಬಿತ್ತಿ ಬೆಳೆದ ಸ್ವಲ್ಪ ನಿಜವಾದ ಆಂದೋಲನಕಾರರು ಈ ತುಳಸಿರಾಮದಾಸರು. ಸಾಮಾಜಿಕ ಸೇವೆ (ಶುಶ್ರೂಷೆ, ಆಹಾರವಿತರಣೆ ಇತ್ಯಾದಿ) ಯನ್ನು ಮಾಡಿ ಜನಾನುರಾಗಿಗಳಾಗಿದ್ದರು, ಮಹಾನ್ ಮಾನವತಾವಾದಿಯಾಗಿದ್ದರು.

ಇವರ ಬಗ್ಗೆ ಅನೇಕ ದಂತ ಕಥೆಗಳು ಪ್ರಚಲಿತವಿದ್ದು ಮೈಸೂರು ಪ್ರಾಂತ್ಯದಲ್ಲಿ ಇಂದಿಗೂ ಕೆಲವರು ಹಿರಿಯರು ಇವುಗಳನ್ನು ನೆನಪಿಸಿಕೊಳ್ಳುತ್ತಾರೆ.

–ಇವರು ಹರಿಕಥೆ ಮಾಡುವಾಗ ಗರುಡಪಕ್ಷಿ ತಪ್ಪದೆ ಬರುತ್ತಿತ್ತು, ದರ್ಶನಕೊಡುತ್ತಿತ್ತು. ಅನಂತರವಷ್ಟೇ ಕಥೆ ಮುಕ್ತಾಯವಾಗುತ್ತಿತ್ತು.

–ಧ್ಯಾನಮಾಡುತ್ತ ಗಾಳಿಯಲ್ಲಿ ತೇಲುವ ಪವಾಡ ಮಾಡುತ್ತಿದ್ದರು.

–ಶ್ರೀನಿವಾಸಕಲ್ಯಾಣದ ಹರಿಕಥಾ ಸಂದರ್ಭದಲ್ಲಿ ಒಮ್ಮೆ ಮಂಗಳಾರತಿ ಮಾಡುತ್ತಿರುವಾಗ ತಿರುಪತಿಯಲ್ಲಿ ಅಮ್ಮನವರ ವಸ್ತ್ರಕ್ಕೆ ಬೆಂಕಿ ತಗುಲಿದೆಯೆಂದು ಕೈಯಲ್ಲಿ ಆರಿಸಿದ್ದರು.

–ಇವರ ಹರಿಕಥೆಗೆ ಯಾರಾದರೂ ಅಡ್ಡಿಯುಂಟು ಮಾಡಿದರೆ ಅವರಿಗೇ ತೊಂದರೆಯಾಗುತ್ತಿತ್ತು (ಈ ಸಂಗತಿಯ ಬಗ್ಗೆ ಹರಿಕಥಾಕೃತಿಯಲ್ಲೇ ಒಂದೆರಡು ಪ್ರಸಂಗಗಳ ಉಲ್ಲೇಖವಿದೆ. ಉದಾ: (೧) ಮೈಸೂರಿನಲ್ಲಿ ಮಠದ ಬೆಂಬಲ (೨) ಶಿರಸ್ತೆದಾರ ಮಾರಪ್ಪ ಮುದ್ದಪ್ಪರ ಕಿರುಕುಳಕ್ಕೆ ರಾಜರಿಂದ ಶಿಕ್ಷೆ. (೩) ಅಲಗೂರಿನಲ್ಲಿ ಬಂದ ಅಪವಾದ–ನಿವಾರಣೆ ಇತ್ಯಾದಿ).

- ದಾಸರ ಬ್ರಹ್ಮಚರ್ಯವನ್ನೂ ಪ್ರಶ್ನಿಸಲು ಕಿಡಿಗೇಡಿಗಳು ನವಯುವತಿಯ ವೇಷದಲ್ಲಿ ಬಂದು ಇವರ ಕೊಠಡಿಯಲ್ಲಿ ರಾತ್ರಿ ತಂಗಿಪೇಚಿಗೆ ಸಿಕ್ಕಿದ್ದು. ಸಾಪೂರಿನಲ್ಲಿ ಸೂರದಾಸರು ಕಬೀರ ದಾಸರ ಕಥೆಗೆ ಮೆಚ್ಚಿ ಅಲ್ಲಿಯ ಮಠದ ವಿದ್ಯಾಶಂಕರ ಭಾರತಿ ಶ್ರೀ ಶ್ರೀಗಳೊಂದಿಗೆ ಕಬೀರರ ರೂಪದಲ್ಲಿ ರೂಪದಲ್ಲಿ ಸ್ವಾಮಿದರ್ಶನ-ಸಂವಾದ.

- ಮೈಸೂರಿನಲ್ಲಿ ಹರಿಕಥೆ ಮಾಡುತ್ತಿರುವಾಗ ಪರಕಾಲಮಠದ ಸ್ವಾಮಿಗಳಿಗೆ ಶ್ರೀನಿವಾಸ ದೇವರು ಕನಸಿನಲ್ಲಿ ಬಂದು ದಾಸರನ್ನು ಸತ್ಕರಿಸಲು ಸೂಚಿಸಿದ್ದ.

-ಮಹಾರಾಜರು ತೊಡಿಸಿದ ಚಿನ್ನದ ಕಡಗದ ಚಿನ್ನದಿಂದ ತಾವೇ ಸ್ವತಃ ಶ್ರೀರಾಮ ಪಟ್ಟಾಭಿಷೇಕದ ಚಿತ್ರಪಟಕ್ಕೆ ಚಿನ್ನದ ರೇಖೆಗಳನ್ನು ಚಿತ್ರಿಸಿದ್ದೆಂದು ಬೆಂಗಳೂರಿನ ಮಠದಲ್ಲಿ ಅಭಿಪ್ರಾಯವಿದೆ.

ಇತ್ಯಾದಿ ಹತ್ತು ಹಲವು ಸಂಗತಿಗಳು ಇವರ ಸುತ್ತ ಹೆಣೆದುಕೊಂಡು ಜನಜನಿತವಾಗುವಷ್ಟರ ಮಟ್ಟಿಗೆ ಇವರು ಜನಪ್ರಿಯರಾಗಿದ್ದರೆಂಬುದು ಸುಸ್ಪಷ್ಟ. ಇವರ ಬಗ್ಗೆ ಬೇಲೂರು ಕೇಶವದಾಸರು ತಮ್ಮ 'ಶ್ರೀ ಕರ್ನಾಟಕಭಕ್ತಿವಿಜಯ'ದಲ್ಲಿ ಮತ್ತು ಡಿವಿಜಿಯವರು 'ಜ್ಞಾಪಕ ಚಿತ್ರಶಾಲೆ'ಯಲ್ಲಿ ಕೆಲವು ವಿವರಗಳನ್ನು ದಾಖಲಿಸಿದ್ದಾರೆ. ಈಚೆಗೆ ಅರಳುಮಲ್ಲಿಗೆ ಪಾರ್ಥಸಾರಥಿ ಅವರು 'ಭೂಷಣ'ದಲ್ಲಿ ಉಲ್ಲೇಖಿಸಿದ್ದಾರೆ, ಮೆಜೆಸ್ಟಿಕ್‌ನಲ್ಲಿರುವ ತುಳಸಿತೋಟಕ್ಕೆ ಇವರಿಂದಲೇ 'ತುಳಸಿ' ಹೆಸರು ಬಂದಿದೆಯೆಂಬ ಸಂಬಂಧಕಲ್ಪಿಸುವ ಹೊಸ ಅಂಶವನ್ನು ಹೇಳಿದ್ದಾರೆ. ಆದರೆ ಇದಕ್ಕೆ ದಾಸರನ್ನು ಕುರಿತ ಕಥಾಕೃತಿಯಲ್ಲಿ ಆಧಾರ ದೊರಕುವುದಿಲ್ಲ. ಬದಲು ದಂಡುಪ್ರದೇಶದಲ್ಲಿ ಇವರ ವಾಸ್ತವ್ಯವಿತ್ತೆಂದೂ ಅಲ್ಲಿಯೇ ಮಠವನ್ನು ರೂಪಿಸಿದ್ದರೆಂದೂ ಸ್ಪಷ್ಟವಾಗಿದ್ದರೂ ಮೆಜೆಸ್ಟಿಕ್ಕಿನ ತುಳಿಸಿತೋಟದ ದೇವಾಲಯದ ಅರ್ಚಕರಾದ ತೂಪ್ಪಲ್ ವೆಂಕಟಾಚಾರ್ಯರ ಸಂಪರ್ಕವಿತ್ತೆಂದೂ ಅಂತ್ಯಕಾಲದಲ್ಲಿ ತಾವು ಜೊತೆಯುಲ್ಲಿ ಕೊಂಡೊಯ್ಯುತ್ತಿದ್ದ ಶ್ರೀರಾಮ ಶ್ರೀಕೃಷ್ಣರ ಪೂಜಾವಿಗ್ರಹಗಳನ್ನು ಅವರಿದ್ದ ಮೆಜೆಸ್ಟಿಕ್ಕಿನ ತುಳಸಿತೋಟದ ದೇವಾಲಯಕ್ಕೆ ಕೊಟ್ಟರೆಂದು ಹರಿಕಥಾಕೃತಿಯಲ್ಲಿದೆ ತುಳಸಿರಾಮದಾಸರ ಶಿಷ್ಯ ಶ್ರೀ

ಚೌಡಯ್ಯನವರೂ ಹೇಳುತ್ತಾರೆ. ಹಾಗೆಯೇ ಇವರ ರಾಮಕಥಾ ಸಂಕೀರ್ತನೆಯ ಜನಪ್ರಿಯತೆಯಿಂದ ಇವರನ್ನು ಜನ ಹಿಂದಿಯ ರಾಮಚರಿತ ಮಾನಸದ ತುಳಸೀದಾಸರ ಅವತಾರವೆಂದು ಭಾವಿಸಿ ತುಳಸಿರಾಮ ದಾಸರೆಂದು ಕರೆದಿರುವುದನ್ನು ಈ ಎರಡೂ ಉಲ್ಲೇಖಗಳು ಊಹಿಸುತ್ತವಾದರೂ ಇದಕ್ಕೂ ಹರಿಕಥಾಕೃತಿಯಲ್ಲಿ ಆಧಾರ ದೊರೆಯುವುದಿಲ್ಲ. ಅಲ್ಲದೆ ಆ ಕಾಲಕ್ಕೆ ಜನಸಾಮಾನ್ಯವಲಯದಲ್ಲಿ ರಾಮಚರಿತಮಾನಸ ಅಷ್ಟೊಂದು ಜನಪ್ರಿಯವಾಗಿತ್ತೆಂದು ಹೇಳಬರುವುದಿಲ್ಲ. ಬದಲಿಗೆ ರಾಮದಾಸರು ಇದ್ದ ಮಠವನ್ನು ತುಳಸೀತೋಟ 'ತುಳಸೀವನ'ವೆಂದು ಹರಿಕಥಾಕೃತಿ ಹಲವುಕಡೆ ಉಲ್ಲೇಖಿಸಿದೆ-ಯಲ್ಲದೆ ಅದರ ಸ್ಥಳಪರಿಶೀಲನೆಯಲ್ಲೂ ಅದಕ್ಕೆ ಆ ರೂಢಿನಾಮ ಇದ್ದುದರ ನಿದರ್ಶನ ದೊರೆಯುತ್ತದೆ. ಅಲ್ಲಿ ದಾಸರು ತುಳಸಿತೋಟವನ್ನು ನಿರ್ಮಿಸಿ ದೇವರಿಗೆ ಪ್ರತಿನಿತ್ಯ ತುಳಸಿ ಅರ್ಪಿಸುತ್ತಿದ್ದರೆಂಬ ಮಾತನ್ನೂ ನೆನಪಿಸಿಕೊಳ್ಳುತ್ತಾರೆ. ಈ ಸಂಗತಿಗಳಿಗಿಂತ ದಾಸರಿಗೆ 'ತುಳಸಿ' ಎಂಬ ವಿಶೇಷಣ ವಂಶಮೂಲದಿಂದ ಸೇರಿಕೊಂಡಿರುವುದು ಹೆಚ್ಚು ಸಂಭವನೀಯವಾಗಿ ತೋರುತ್ತದೆ.

ಇವರು ಪರಕಾಲಮಠದಿಂದ ಶ್ರೀಮುಖವನ್ನು ಪಡೆದಿರುವುದರಿಂದ ಮಠದ ಸಂಪ್ರದಾಯವಾದ ದೇಶಿಕರ ಸಂಪ್ರದಾಯಕ್ಕೆ (ವಡಗಲೆ) ಸೇರಿದ್ದಾರೆ. ತಮ್ಮ ಕೀರ್ತನೆಗಳ ಗ್ರಂಥವನ್ನು ವೇದಾಂತದೇಶಿಕರ ಗುರುಪರಂಪರಾ ಸ್ತುತಿಯೊಂದಿಗೇ ಆರಂಭಿಸಿರುವುದು ಇದನ್ನೇ ಸಮರ್ಥಿಸುತ್ತದೆ. ಇವರ ಕಾರ್ಯವ್ಯಾಪ್ತಿ ಇಡೀ ಸಮಾಜದ ಅಭಿವೃದ್ಧಿಯನ್ನು ಒಳಗೊಂಡಿದ್ದುದನ್ನು ಅದೇ ಕೃತಿ ಕೊಡುವ ವಿವರಗಳಿಂದ ದೃಢಪಡಿಸಬಹುದಾಗಿದೆ. ಸಮಾಜೋದ್ಧಾರಕ್ಕಾಗಿ ಇವರು ಮಾಡಿದ ಪ್ರವಾಸದ ಪಟ್ಟಿಯನ್ನು ಈ ಕೃತಿ ಹೇಳುತ್ತದೆ. ವರ್ಷವಾರು ಭೇಟಿನೀಡಿದ ಸ್ಥಳ, ಅಲ್ಲಿ ನಡೆಸಿದ ರಾಮೋತ್ಸವ, ಕೃಷ್ಣೋತ್ಸವಗಳ ವಿವರ, ಅದಕ್ಕಾಗಿ ಅಲ್ಲಿ ನೆರವಾದ ಸೇವಾಕರ್ತರ, ಶಿಷ್ಯರ ಹೆಸರುಗಳು ಮುಂತಾದ ವಿವರಗಳನ್ನು ಖಚಿತವಾಗಿ ಉಲ್ಲೇಖಿಸುತ್ತದೆ. ಇದು ಅತ್ಯಂತ ಕುತೂಹಲಕರ ಮಾಹಿತಿಯಾಗಿದ್ದು ಈ ಸ್ಥಳಗಳ ವ್ಯಕ್ತಿಗಳ ಜಾಡುಹಿಡಿದು ಪರಿವೀಕ್ಷಣೆ ನಡೆಸಿದಲ್ಲಿ ಇವರ ಬಗ್ಗೆ ಇನ್ನೂ ಹೆಚ್ಚಿನ ಸಂಗತಿಗಳು ಮತ್ತು ಇವರ ಶಿಷ್ಯ ಪರಂಪರೆ ಗೋಚರವಾಗುವ ಸಾಧ್ಯತೆಯಿದೆ.

ತುಳಸಿರಾಮದಾಸರ ಬೆಂಗಳೂರು ವಾಸದ ಜೀವಿತಕಾಲವೆಲ್ಲ ಈ ಬಗೆಯ ಪ್ರವಾಸದಲ್ಲೇ ಕಳೆದುಹೋಗಿದೆ. ಹೋದಲ್ಲೆಲ್ಲ ದೈವಭಕ್ತಿಯನ್ನು ಹರಡಿದ್ದಷ್ಟೇ ಅಲ್ಲದೆ ಶಾಶ್ವತವಾಗಿ ವ್ಯವಸ್ಥೆಗೊಳಿಸಿ ಸಮಾಜ ಜೀವನಕ್ಕೆ ಆಧ್ಯಾತ್ಮಿಕ ಭದ್ರತೆಯನ್ನೂ ಆತ್ಮಸ್ಥೈರ್ಯವನ್ನೂ ಮೋಕ್ಷಮಾರ್ಗದ ಸುಲಭೋಪಾಯವನ್ನೂ ಕಲ್ಪಿಸಿದ್ದಾರೆ. ಕೇವಲ ೫೭ ವರ್ಷಗಳವರೆಗೆ ಜೀವಿಸಿದ್ದು ಬಿಡುವಿಲ್ಲದ ಓಡಾಟ–ಸಂಕೀರ್ತನೆ ಇವುಗಳಿಂದ ಸಹಜವಾಗಿ ದೇಹಾಲಸ್ಯವಾಗಿದ್ದರೂ ಅದಕ್ಕಿಂತ ಹೆಚ್ಚಾಗಿ ಜನರಲ್ಲಿ ಸಮಾಜದಲ್ಲಿ ಆಗುತ್ತಿರುವ ಬದಲಾವಣೆ ಕಂಡು ಅಂತಿಮದಿನಗಳಲ್ಲಿ ನೋವನ್ನು ಅನುಭವಿಸಿರುವುದು ಕಂಡು ಬರುತ್ತದೆ. "ಶ್ರೀಕೃಷ್ಣ, ಪರಾಂಬರಿಸು ಇನ್ನು ಉತ್ಸವ – ಕಥೆಗಳನ್ನು ಈ ದಾಸ ಮಾಡಲಾರ. ಕಲಿಯ ಕೋಲಾಹಲ ಜಾಸ್ತಿಯಾಗಿದೆ, ಧರ್ಮ ಲೋಪವಾಗಿದೆ ಶರೀರವೂ ಶಕ್ತಿಹೀನವಾಗಿದೆ, ೩೧ ವರ್ಷಕಾಲ ರಾಮ–ಕೃಷ್ಣೋತ್ಸವ ಸೇವೆಗಳನ್ನೂ ಮಾಡಿಸಿಕೊಂಡ ನನ್ನ ಮೇಲ ಕೃಪೆಹರಿಸು ಸ್ವಾಮಿ" ಎಂದು ದಾಸರೇ ಬಿನ್ನವಿಸಿಕೊಂಡಿರುವ ಮಾತುಗಳು ಶಿಷ್ಯ ಚೌಡಯ್ಯನವರು ಪ್ರಕಟಿಸಿರುವ ಪುಸ್ತಕದಲ್ಲಿದೆ. ದಾಸರು ತಮ್ಮ ಕೊನೆಯ ಉಸಿರಿರುವವರೆಗೂ ಸಮಾಜಸೇವೆ ಮಾಡಿರುವುದನ್ನು ಹರಿಕಥಾಕೃತಿ ದಾಖಲಿಸುತ್ತದೆ. 'ದೇಹಧರ್ಮ ಕಾರಣಾಂತರದಿಂದಾದ ಅನಾರೋಗ್ಯ ಸಮಯದಲ್ಲಿ ರಚಿಸಿದ ಕೀರ್ತನೆಗಳು' ಎಂದೇ ಹತ್ತಾರು ಕೀರ್ತನೆಗಳನ್ನು ಕೀರ್ತನೆಗಳಪುಸ್ತಕದಲ್ಲಿ ಮುದ್ರಿಸಲಾಗಿದೆ.

'ತಂಡ್ರೀ ಕೋದಂಡಿ ನೀತನಯುನಿ ಕಠಿಣಮುಗ ದಂಡಿಂಚತಗುನೇಮಯ್ಯ ರಾಮಯ್ಯ' ಎಂಬಂತಹ ಹಲವು ಕೀರ್ತನೆಗಳಲ್ಲಿ ತಮ್ಮ ನೋವನ್ನು ವಿಧವಿಧವಾಗಿ ತೋಡಿಕೊಂಡಿದ್ದಾರೆ.

ಈ ನಡುವೆಯೂ ಕೊನೆಯ ಆರು ತಿಂಗಳು (೧೯೦೩ರ ಶೋಭಕೃತು ಸಂ.ದ ಶ್ರಾವಣದಿಂದ ಮಾಘಮಾಸದವರೆಗೆ) ದಾಸರ ನಿರಂತರ ಚಟುವಟಿಕೆಗಳನ್ನು ನೋಡಬಹುದು. ಶ್ರಾವಣಮಾಸದಲ್ಲಿ ಬೆಂಗಳೂರಿನ ಭರತಪುರ ಮಠದಲ್ಲಿ ಕೃಷ್ಣೋತ್ಸವ ನಡೆಸಿ, ಅನಾರೋಗ್ಯ ಕಾರಣದಿಂದ ಮಠದ ಕೈಂಕರ್ಯಗಳನ್ನು ಬೇರೆಯವರಿಗೆ ವಹಿಸಿ, ತಮ್ಮ ಜೊತೆಯಲ್ಲಿದ್ದ ರಾಮ ಕೃಷ್ಣರ ವಿಗ್ರಹಗಳನ್ನು

ತುಳಸಿತೋಟದ ದೇವಾಲಯಕ್ಕೆ ವಹಿಸಿ; ದರಿಶಕುಪ್ಪೆಗೆ ಹೋಗಿ ಅಲ್ಲಿಯೂ ಬೇರೆ ವ್ಯವಸ್ಥೆಗಳನ್ನು ಮಾಡಿ, ಅಲ್ಲಿಂದ ಮೈಸೂರಿಗೆ ಹೋಗಿ ಅರಮನೆಯಿಂದ ಸಲ್ಲುತ್ತಿದ್ದ, ವರ್ಷಾಸನವನ್ನು ತುಳಸಿವನಕ್ಕೆ ಶಾಶ್ವತವಾಗಿ ಸಲ್ಲಿಸಲು ವ್ಯವಸ್ಥೆ ಮಾಡಿ; ಶ್ರೀರಂಗಪಟ್ಟಣದ ಗಂಜಾಂಗೆ ಬಂದು ಸಾಹುಕಾರ ಮಲ್ಲಯ್ಯನಿಂದ ಮಠಕ್ಕೆ ವರ್ಷಂಪ್ರತಿ ಧಾನ್ಯ ಕಳುಹಿಸಲು ಏರ್ಪಾಡು ಮಾಡಿ; ಮಠ ತಮ್ಮ ನಂತರವೂ ಶಾಶ್ವತವಾಗಿ ನಡೆದುಕೊಂಡು ಹೋಗಲು ಶ್ರಮಿಸಿರುವ ದಾಸರ ಧಾರ್ಮಿಕ ಶ್ರದ್ಧೆ ಅಸಾಧಾರಣವಾದದ್ದು. ಇವೆಲ್ಲ ಒಂದು ವ್ಯವಸ್ಥೆಯಾದ ಮೇಲೆ ಪ್ರವಾಸ ಕೈಗೊಂಡು ತಿರುಪತಿ, ಶ್ರೀರಂಗ, ತಿರುಚ್ಚಾನೂರು ಮುಂತಾದ ದಿವ್ಯಕ್ಷೇತ್ರಗಳ ದರ್ಶನ ಮಾಡಿ ಅಲ್ಲೆಲ್ಲ ಸೇವಾಕಾರ್ಯಕ್ಕೆ ಏರ್ಪಾಡು ಮಾಡಿ ಮತ್ತೆ ಮೈಸೂರಿಗೆ ಹೊಗಿ ಪೇಟೆ, ಕೊಪ್ಪಲು, ಗ್ರಾಮಗಳಲ್ಲೆಲ್ಲ ಸಂಚರಿಸಿ ಭಜನಮಂದಿರಗಳನ್ನು ಸ್ಥಾಪಿಸಲು ಶ್ರಮಿಸಿದ್ದಾರೆ. ಅಲ್ಲಿಂದ ಮುಳಬಾಗಿಲಿಗೆ ಬಂದು ಅಲ್ಲಿಯ ಆಂಜನೇಯ, ಸೋಮೇಶ್ವರ ಮತ್ತು ವಿಠಲನಾರಾಯಣ ದೇವಾಲಯಗಳಿಗೆ ಮುಜರಾಯಿ ಇಲಾಖೆಯ ವತಿಯಿಂದಲೇ ಪ್ರತಿವರ್ಷ ಉತ್ಸವಗಳು ಜರುಗುವಂತೆ ಮಲ್ಲಕುಪ್ಪದ ಬತ್ತಲೂರು ಚೆಂಗಪ್ಪ ಶೆಟ್ಟಿ ಮುಂತಾದ ಭಕ್ತರಿಂದ ನಿದಿ ಸ್ಥಾಪಿಸಿರುವ ವ್ಯವಸ್ಥೆ ಮಾಡುತ್ತಾರೆ. ಮತ್ತೆ ಮೈಸೂರಿಗೆ, ಹೊಗಿ ಪರಕಾಲಮಠದ ಸನ್ನಿಧಿಯಲ್ಲಿ ಮಾಘಶುದ್ಧ ದ್ವಾದಶಿಯಿಂದ ಚತುರ್ದಶಿವರೆಗೆ (೧೯೦೩ ಜನವರಿ ೨೯ ಶುಕ್ರವಾರದಿಂದ ೩೧ ಭಾನುವಾರದ ವರೆಗೆ) ಇದ್ದು, ಬುಧವಾರ ಬಿದಿಗೆ ಅಪರಾಹ್ನ ಕರ್ಕಾಟಕ ಲಗ್ನದಲ್ಲಿ ತಮ್ಮ 'ಮಹಾಯಾತ್ರೆ'ಗೆ ಅನುಜ್ಞೆ ಪಡೆದು ದರಿಶಕುಪ್ಪೆಗೆ ಭಾನುವಾರವೇ ಬಂದು ಸಾಧು ಸಜ್ಜನರ ಸಭೆಯಲ್ಲಿ ತಮ್ಮ ಮಹಾಯಾತ್ರೆಯ ಸಂಕಲ್ಪ ತಿಳಿಸಿ ಭಾಗವತ ಸಮಾರಾಧನೆ ನಡೆಸುತ್ತಾರೆ. ಮತ್ತೆ ಮಂಗಳವಾರ ಶ್ರೀನಿವಾಸಪುರದ ಚೌಡನಪಲ್ಲಿಯ ಶಿಷ್ಯ ಶ್ರೀನಿವಾಸದಾಸನಿಂದ ಸನ್ಮಾನ ಸ್ವೀಕರಿಸಿ ಅಲ್ಲೆ ಸೇವೆ ಸಲ್ಲಿಸಲು ತಿಳಿಸಿ ಕಳುಹಿಸುತ್ತಾರೆ. ಬುಧವಾರ ೧೯೦೩ ಫೆಬ್ರವರಿ ೩ ರಂದು ಬೆಳಗಿನಿಂದ ಭಾಗವತರು, ಶಿಷ್ಯರು, ಸಾಹಿತಿ, ಪಂಡಿತರು, ಸಂಗೀತಜ್ಞರು ಸಭೆ ಸೇರಿ ಭಜನೆ, ರಾಮತಾರಕೋಪಾಸನೆಗಳನ್ನು ನಡೆಸುತ್ತಿರುವಾಗ ತಾವು ಸಂಕಲ್ಪಿಸಿದ್ದಂತೆ ನಿಗದಿತ ಸಮಯಕ್ಕೇ (ಕರ್ಕಾಟಕಲಗ್ನ ಅಪರಾಹ್ನ) ಸರಿಯಾಗಿ ಪದ್ಮಾಸನಸ್ಥಿತರಾಗಿ ಧ್ಯಾನಾಸಕ್ತರಾಗಿರುವಾಗಲೇಪರಕಾಲಮಠದಿಂದ ತರಿಸಿದ

ಶ್ರೀಪಾದತೀರ್ಥ ಸೇವಿಸಿ 'ಮಹಾಯಾತ್ರೆ' ಕೈಗೊಳ್ಳುತ್ತಾರೆ. ಅಂದರೆ ದೇಹತ್ಯಾಗ ಮಾಡುತ್ತಾರೆ. ಈ ಸಂಗತಿ 'ಹರಿಕಥಾಕೃತಿ'ಯಲ್ಲಿ ಮತ್ತು ಚೌಡಯ್ಯನವರ ಪುಸ್ತಕದಲ್ಲಿ ವಿವರವಾಗಿ ದಾಖಲಾಗಿದೆ.

ಮಹಾಯೋಗಿಗಳಂತೆ ಬದುಕಿದ ತುಳಸಿರಾಮದಾಸರು 'ಯೋಗಿಸಾವನ್ನೇ' ಪಡೆದಿದ್ದಾರೆ. ಇವರ ಪವಿತ್ರ ಕಳೇಬರವನ್ನು ಭಕ್ತರು – ಶಿಷ್ಯರು ಪರಕಾಲ ಮಠದ ಸೂಚನೆಯಂತೆ ಶ್ರೀವೈಷ್ಣವ ಭಾಗವತ ಸಂಪ್ರದಾಯ ರೀತಿಯಲ್ಲಿ ಶ್ರೀರಂಗಪಟ್ಟಣದ ಕಾವೇರಿತೀರದ 'ಸಿದ್ಧಂಬೈಲು' ವರೆಗೆ ಭಜನೆ, ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಾರೆ. ಮಠವೇ ದಾಸರ ಅಂತ್ಯಸಂಸ್ಕಾರವನ್ನು ಯಥಾರೀತಿಯಲ್ಲಿ ನಡೆಸಿ ಶುಭಸ್ವೀಕಾರದವರೆಗೆ ಎಲ್ಲ ಕಾರ್ಯಗಳನ್ನೂ ಪೂರೈಸಿತು ಎಂದು ಹರಿಕಥಾ ಕೃತಿ ದಾಖಲಿಸಿದೆ.

ಹೀಗೆ ತುಳಸಿರಾಮದಾಸರ ಜೀವನಚರಿತ್ರೆ ಅತ್ಯಂತ ವರ್ಣಮಯವಾಗಿದ್ದು ೧೯ನೇ ಶತಮಾನದ ಪ್ರಭಾವಿ ಕ್ರಾಂತಿಪುರುಷರಾಗಿ ದಕ್ಷಿಣ ಕರ್ನಾಟಕದಲ್ಲಿ ಆಗಿ ಹೋಗಿದ್ದಾರೆ. ಸಾಮಾನ್ಯ ಜನವರ್ಗದಲ್ಲಿ ಒಂದಾಗಿ, ಅವರ ನೋವುಗಳಿಗೆ ಸ್ಪಂದಿಸಿ ಕಷ್ಟಕಾಲದಲ್ಲಿ ಆಸರೆಯನ್ನು ನೀಡಿದ್ದಾರೆ. ಬರಗಾಲ ಮತ್ತು ಪ್ಲೇಗು ಪಿಡುಗಿನ ಕಾಲದಲ್ಲಿ ಜನರ ನಡುವಿದ್ದು ಆರೈಕೆ ಮಾಡುವ ಮೂಲಕ, ಭವರೋಗವೈದ್ಯರೆನಿಸಿದ್ದಾರೆ. ಧನಿಕರಿಂದ ಧವಸಧಾನ್ಯ ಅನ್ನವಸ್ತ್ರಗಳನ್ನು ದಾನವಾಗಿ ಪಡೆದು ಇಲ್ಲದವರಿಗೆ ನೀಡುವ ಅನ್ನದಾತರಾಗಿದ್ದಾರೆ. ದೈವಭಕ್ತಿಯನ್ನು ಕೇವಲ ಆತ್ಮತೃಪ್ತಿಗೆ ಸೀಮಿತಗೊಳಿಸದೆ ಸಮೂಹ ಸಂತೋಷಕ್ಕೆ, ಸಮಾಜನಿರ್ಮಿತಿಗೆ ದುಡಿಸಿದ್ದಾರೆ. ಬೀಳುವ ಬದುಕಿಗೆ ಆಸರೆಯನ್ನಾಗಿ ಭಗವನ್ನಾಮಸ್ಮರಣೆಯನ್ನು ರೂಪಿಸಿರುವ ಇವರ ಸಾಧನೆ ಅನನ್ಯವಾದದ್ದು.

ಇವರು ಪ್ರವಾಸಕಾಲದಲ್ಲಿ ತಂಗಿದ್ದಾಗ ಕಟ್ಟಿಸಿದ 'ಭಾರ್ಗವರಾಮಭಜನ ಮಂದಿರ'ಗಳು ಮೈಸೂರು ಪ್ರಾಂತ್ಯದ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಇಂದಿಗೂ ಇವರ ಸಾಧನೆಗೆ ಸಾಕ್ಷಿಯಾಗಿ ನಿಂತಿವೆ. ಅವುಗಳ ಮೂಲಕ ನಡೆಯುತ್ತಿರುವ

ಭಜನೆ, ಧಾರ್ಮಿಕ ಚಟುವಟಿಕೆಗಳು ಇವರ ಧರ್ಮಪ್ರಚಾರದ ಸಮಾಜೋದ್ಧಾರದ ದ್ಯೋತಕವಾಗಿವೆ. ಇವರು ಹಾಕಿಕೊಟ್ಟ ಮಾರ್ಗವನ್ನು ಅನುಸರಿಸುತ್ತಿರುವ ಶಿಷ್ಯಪರಂಪರೆ ಇಂದಿಗೂ ನಮಗೆ ಕಾಣಸಿಗುತ್ತದೆ.

ಸಾಮಾನ್ಯ ಸ್ತರದಲ್ಲಿ ಜಾಗೃತಿ ಮೂಡಿಸಿದ ಈ ಪವಾಡ-ಅವತಾರ ಪುರುಷನನ್ನು ಎರಡನೇ ರಾಮಾವತಾರವಾಗಿ ಪರಿಗಣಿಸಿ ಸಮಾಜದ ಗಣ್ಯರು, ಮಠ, ಮಹಾರಾಜರು ಮೆಚ್ಚಿ ಗೌರವಿಸಿ, ಪ್ರೋತ್ಸಾಹಿಸುವಷ್ಟು ಪ್ರಜವೀವಲಯ ತುಳಸಿರಾಮದಾಸರ ಜೀವನದ ಸುತ್ತ ಹಬ್ಬಿರುವುದು ಅವರ ಹಿರಿಮೆಗೆ ಸಾಕ್ಷಿಯಾಗಿದೆ.

ಇನ್ನೊಂದು ಹರಿದಾಸ ಚಳವಳಿಯ ನೇತಾರರು

೧೯ ನೇ ಶತಮಾನದಲ್ಲಿ ತುಳಸಿರಾಮದಾಸರು ಸಮಾಜದಲ್ಲಿ ನಡೆಸಿರುವ ಕ್ರಾಂತಿ ತನ್ನದೇ ಆದ ವಿಶಿಷ್ಟತೆಯಿಂದ ಕೂಡಿದೆ. ಪುರಂದರ-ಕನಕದಾಸರ ಕಾಲದ ನಂತರ ನಡೆದ ಇನ್ನೊಂದು ಯಶಸ್ವೀ ಸಾಮಾಜಿಕ ಆಂದೋಲನವೆಂದೇ ಇವರ ಸಾಧನೆಯನ್ನು ಗುರುತಿಸಬೇಕಾಗುತ್ತದೆ. ಹಾಗೆ ನೋಡಿದರೆ ಅವರ ಕಾಲಕ್ಕಿಂತ ಒಂದು ಹೆಜ್ಜೆ ಮುಂದಾಗಿರುವಂತೆಯೇ ತುಳಸಿರಾಮದಾಸರ ಆಂದೋಲನವನ್ನು ನೋಡಬೇಕಾಗಿದೆ. ಪುರಂದರ-ಕನಕರ ಸಾಮಾಜಿಕಬದ್ಧತೆ ಈಗ ಅವರ ಕೀರ್ತನೆಗಳಲ್ಲಿ ಕಂಡುಬರುತ್ತಿರುವ ಹಾಗೆ ಸಮಕಾಲೀನದಲ್ಲಿ ಸಾಮಾಜಿಕರಲ್ಲಿ ಬದಲಾವಣೆಯನ್ನು ರೂಪಿಸುತ್ತಿತ್ತೇ ಎಂದು ಹೇಳಬರುವುದಿಲ್ಲ. ಆದರೆ ತುಳಸಿರಾಮದಾಸರು ಆ ಕಾರ್ಯವನ್ನು ಮಾಡಿದ್ದಾರೆ. ಸಮಾಜದಲ್ಲಿ ಈ ಬದಲಾವಣೆಯ ಸ್ಪಷ್ಟನಿದರ್ಶನವಿದೆ. ಅವರ ಮುಖ್ಯ ಉದ್ದೇಶವೇ ಸಾಮಾಜಿಕರಲ್ಲಿ ಧಾರ್ಮಿಕಶ್ರದ್ಧೆಯನ್ನು ಮೂಡಿಸುವುದು, ಸಾಮಾಜಿಕ ಅಸ್ಥಿರತೆಯನ್ನು ತಪ್ಪಿಸುವುದು, ಜೀವನಾಸಕ್ತಿಯನ್ನು ಬೆಳೆಸುವುದೇ ಆಗಿದೆ. ಸಮಾಜದ ಎಲ್ಲಾ ಸ್ತರದ ಜನರೂ ಇದಕ್ಕೆ ಸ್ಪಂದಿಸಿದ್ದಾರೆ. ಇವರ ಆಂದೋಲನದ ಇನ್ನೂ ಒಂದು ವೈಶಿಷ್ಟವೆಂದರೆ ಸಮಾಜದ ಎಲ್ಲಾ ಸ್ತರದವರನ್ನೂ ಇದರಲ್ಲಿ ತೊಡಗಿಸಿದ್ದು, ವೈದಿಕೇತರ ವರ್ಗವನ್ನು ಮುಖ್ಯವಾಗಿ ಸೆಳೆದು ಅವರಲ್ಲಿ ಧರ್ಮಶ್ರದ್ಧೆ - ಸಮಾಜೋದ್ಧಾರದ ಕಿಡಿ ಮೂಡಿಸಿದ್ದು. ಇವರ ಶಿಷ್ಯಪರಂಪರೆಯಲ್ಲಿ ಹೆಚ್ಚಿನವರು ವೈದಿಕೇತರರೇ ಆಗಿದ್ದಾರೆ.

ಗೌಡ, ರೆಡ್ಡಿ, ಅಕ್ಕಸಾಲಿಗ, ದರ್ಜಿ, ಬಣಜಿಗ, ಗಾಣಿಗ, ಉಪ್ಪಾರ, ದಲಿತ ಹೀಗೆ ಕೆಳವರ್ಗದವರೂ ಬ್ರಾಹ್ಮಣರೂ ಇದ್ದಾರೆ. ಮೂವತ್ತಕ್ಕೂ ಹೆಚ್ಚು ಜನ ಹರಿದಾಸರನ್ನಾಗಿ ಬೆಳೆಸಿರುವುದು ಕಂಡುಬರುತ್ತದೆ. ದಾಸರ ಈ ಶಿಷ್ಯಪರಂಪರೆ ಇಂದಿಗೂ ಜೀವಂತವಾಗಿದೆ. ಶಿಷ್ಯರ ಶಿಷ್ಯರುಗಳೂ ಹರಿದಾಸರಾಗಿದ್ದಾರೆ. ವೈದಿಕೇತರ ವರ್ಗದಲ್ಲಿ ಹರಿದಾಸ ಚಳುವಳಿಯನ್ನು ಬೆಳೆಸಿದ ಕೀರ್ತಿ ಇಡೀ ಹರಿದಾಸಸಾಹಿತ್ಯ ಚರಿತ್ರೆಯಲ್ಲೇ ತುಳಸಿರಾಮದಾಸರಿಗೆ ಮಾತ್ರವೇ ಸಲ್ಲುವಂತಹುದು. ಕನಕದಾಸರನ್ನು ಬಿಟ್ಟರೆ ಇನ್ಯಾರೂ ವೈದಿಕೇತರ ಹರಿದಾಸರು ಕಂಡುಬರುವುದಿಲ್ಲ. 'ರಾಮದಾಸರು ಮತ್ತು ಶಿಶುನಾಳಶರೀಫರನ್ನೂ ಹೆಸರಿಸಬಹುದು.' ವಿಶೇಷವೆಂದರೆ ತುಳಸಿರಾಮದಾಸರ ಚಳುವಳಿ ವಿಶಿಷ್ಟಾದ್ವೈತಾನುಯಾಯಿಯಾಗಿರುವುದು. ಇವರ ಚಳುವಳಿಯ ಪ್ರಭಾವ ಕೇವಲ ಹರಿದಾಸರನ್ನು ಸೃಷ್ಟಿಸಿ ಕೀರ್ತನೆ ರಚಿಸುವಂತಹ ವೈದಿಕಪರಂಪರೆಯ ಸೀಮಿತ ಉದ್ದೇಶದ ಮಿತಿಗೆ ಸಿಲುಕದೆ, ನೇರವಾಗಿ ಜನರ ಬದುಕನ್ನು ಪ್ರವೇಶಿಸಿದೆ. ದಕ್ಷಿಣ ಕರ್ನಾಟಕದಲ್ಲಿ ಇಂದು ಜನಪ್ರಿಯವಾಗಿರುವ ರಾಮೋತ್ಸವ, ಭಜನೆ, ರಾಮಕೋಟಿ (ಅಖಂಡನಾಮಸ್ಮರಣೆ) ಗಳಿಗೆ ತುಳಸಿರಾಮದಾಸರೇ ಮೂಲಪುರುಷರು. ಇವರು ಓಡಾಡಿದ್ದ ಊರುಗಳಲ್ಲಿ ಮನೆಮನೆಗಳಲ್ಲಿ ಇವರ ಭಾವಚಿತ್ರ ಪೂಜೆಗೊಳ್ಳುತ್ತಿದೆ. 'ಈ ಸ್ವಾಮಿಯಿಂದಲೇ ನಮ್ಮ ಬದುಕು' ಎಂಬ ಧನ್ಯತೆಯನ್ನು ಬೆಳೆಸಿ, ಅವರ ಕುಟುಂಬವನ್ನೇ ಸುಸಂಸ್ಕೃತಗೊಳಿಸಿದೆ. ಇವರು ಸ್ಥಾಪಿಸಿದ ಭಜನ ಮಂದಿರಗಳು ಅದೇ ಸ್ಥಿತಿಯಲ್ಲಿ ಅಥವಾ ದೇವಾಲಯವಾಗಿ ಭಕ್ತಿಚಳುವಳಿಯನ್ನು ಇಂದಿಗೂ ಮುಂದುವರಿಸಿವೆ. ಈ ಬಗ್ಗೆ ಇನ್ನೂ ಹೆಚ್ಚಿನ ಬೆಳಕು ಚೆಲ್ಲಬೇಕಾದ ಅಗತ್ಯವಿದೆ.

(೨) ಇತರಗ್ರಂಥಗಳು

ತುಳಸಿರಾಮದಾಸರು ರಚಿಸಿರುವ ಏಳು ಕೃತಿಗಳು ಧಾರ್ಮಿಕವಾಗಿದ್ದು ದೈವಸ್ತುತಿಯ ರೂಪದವಾಗಿದೆ. ಇವೆಲ್ಲವೂ ತೆಲುಗು ಭಾಷೆಯಲ್ಲೇ ಇವೆ.

೧. ಶ್ರೀರಾಮಶತಕಮು

೨. ಲಕ್ಷ್ಮೀಶತಕಮು

೩. ಕಂದಾರ್ಥಪಂಚರತ್ನಮುಲು

೪. ಶ್ರೀರಾಮನಾಮಶತಕಮು

೫. ವಡ್ಡಪಲ್ಲೆಗ್ರಾಮ ಹನುಮಸ್ತುತಿ

೬. ಸಿರಿತಾರಾವಳಿ

೭. ಪರಕಾಲ ಗುರುಸ್ತೋತ್ರ

ಈ ಎಲ್ಲ ಕೃತಿಗಳೂ ಇವರ ಹರಿಕಥಾಗ್ರಂಥದಲ್ಲಿವೆ. 'ಶ್ರೀರಾಮ ಶತಕಮು' ದ್ವಿಪದಿಗಳಲ್ಲಿ ನಾಮಾವಳಿರೂಪದಲ್ಲಿದೆ. ೫೬ ನುಡಿಗಳನ್ನು ಹೊಂದಿರುವ ಈ ಸ್ತುತಿಯಲ್ಲಿ ಕೊನೆಯಲ್ಲಿ ನಾಲ್ಕು ಕಂದಪದ್ಯಗಳಲ್ಲಿ ಫಲಶೃತಿಯಿದೆ. 'ಲಕ್ಷ್ಮೀಶತಕಮು' ಕಂದ ಪದ್ಯಗಳಲ್ಲಿ ರಚನೆಯಾಗಿದ್ದು ೪೯ ಪದ್ಯಗಳಲ್ಲಿ ಲಕ್ಷ್ಮೀಯನ್ನು ವಿಧವಿಧವಾಗಿ ಸ್ತುತಿಸಲಾಗಿದೆ. 'ಕಂದಾರ್ಥ ಪಂಚರತ್ನಮುಲ' ಹೆಸರೇ ಹೇಳುವಂತೆ ಐದು ಮತ್ತು ಫಲಶೃತಿಯು ಒಂದು ಕಂದ ಪದ್ಯಗಳನ್ನೊಳಗೊಂಡ ಸ್ತುತಿಗೀತೆಯಾಗಿದೆ. ಅದರ ಒಂದು ನುಡಿ ಹೀಗಿದೆ.

ಶ್ರೀಮತ್ಕೊಡಿಯಾಲಂಬನು
ಗ್ರಾಮಂಬುನ ವೆಲಸಿನಟ್ಟಿ ಕಂಜದಳಾಕ್ಷ
ಸ್ವಾಮಿ ಶ್ರೀಮನ್ನಾರಾಯಣ
ಕ್ಷೇಮಾನಯಪದ್ಮಶಾಲೀ ಪ್ರೇಮಿತಚಂಗಾಬ್ರೋವವೆನನ್ನು'

'ಶ್ರೀರಾಮಶತಕಮು' ಶ್ರೀರಾಮನಾಮ ಶತಕಕ್ಕಿಂತ ಭಿನ್ನವಾಗಿದ್ದು ೧೪೦ ದ್ವಿಪದಿಗಳಲ್ಲಿದೆ. ರಾಮಕಥೆಯನ್ನು ಇದರಲ್ಲಿ ವಿಸ್ತರಿಸಿರುವಂತೆ ತೋರುತ್ತದೆ.

ಶ್ರೀಯಹೋಬಲ ನರಹರಿ ಕೃಪ ಚೇತ ಚೆಲಗು ಶ್ರೀ ಶಠಗೋಪುಲೊ
ಆಯತೀಂದ್ರುಲ ಚರಣಮುಲ್ ಮದಿಲೋನಯಾದಿಚೇಶೆದಮರಾಮ

ಎಂಬರೀತಿಯಲ್ಲಿ ಈ ನುಡಿಗಳು ಸಾಗುತ್ತವೆ. 'ವಡ್ಡಪಲ್ಲೆ ಗ್ರಾಮ ಹನುಮ ಸ್ತುತಿ'ಯು ಆ ಗ್ರಾಮದ (ವಾಲ್ಮೀಕಿಪುರ) ಆಂಜನೇಯನನ್ನು ಕುರಿತ ೧೪

ಕಂದಪದ್ಯಗಳ ಸ್ತುತಿಯಾಗಿದೆ. 'ಸಿರಿತಾರಾವಳಿ' ಕೂಡ ೨೮ ಕಂದಪದ್ಯಗಳ ಕೃತಿಯಾಗಿದ್ದು ಲಕ್ಷ್ಮೀಸ್ತುತಿಯಾಗಿದೆ. ಇದನ್ನು ಕಾವೇರಿತೀರದ ಲಕ್ಷ್ಮೀಕ್ಷೇತ್ರದ ಸ್ತುತಿ ಎನ್ನಲಾಗಿದ್ದು ಪ್ರಾಯಶಃ ಶ್ರೀರಂಗಪಟ್ಟಣದ ಗಂಜಾಂ ನಲ್ಲಿರುವ 'ನಿಮಿಷಾಂಬ'ವಾಗಿರುವಂತಿದೆ. ಇಲ್ಲೆಲ್ಲ ದಾಸರು ಸಂಚರಿಸಿರುವುದಲ್ಲದೆ ಅನೇಕ ಸೇವಾಕರ್ತರನ್ನೂ ಹೊಂದಿದ್ದುದನ್ನು ಅವರ ಪ್ರವಾಸವಿವರ ಶೃಶ್ರುತಪಡಿಸುತ್ತದೆ. 'ಪರಕಾಲಗುರು ಸ್ತೋತ್ರ' ಎಂಬ ಹೆಸರು ಮಾತ್ರ ಲಭ್ಯವಿದೆ. ಈ ಹೆಸರಿನಿಂದಲೇ ಮೈಸೂರಿನ ಪರಕಾಲಮಠದ ಗುರುಗಳನ್ನು ಸ್ತುತಿಸಿರುವ ಸ್ತೋತ್ರ ರೂಪದ ಕೃತಿಯೆಂದು ಹೇಳಬಹುದು. ದಾಸರು ಈ ಮಠದ ಶಿಷ್ಯರಾಗಿದ್ದು ಹಲವು ಬಾರಿ ಇಲ್ಲಿಗೆ ಭೇಟಿ ನೀಡಿರುವ, ಇಲ್ಲಿಯ ಗುರುಗಳು ಇವರನ್ನು ಗೌರವಿಸಿರುವ ನಿದರ್ಶನವಿದೆ. ಹೀಗೆ ಇವರ ಈ ಎಲ್ಲ ಕೃತಿಗಳೂ ವಸ್ತುನಿಷ್ಠವಾಗಿ ಕೀರ್ತನೆಗಳೇ ಆಗಿದ್ದರೂ ಆ ಪ್ರಕಾರದಿಂದ ಭಿನ್ನವಾಗಿರುವುದರಿಂದ ಸ್ವತಂತ್ರ ಕೃತಿಗಳಾನ್ನಾಗಿ ಪರಿಗಣಿಸಲಾಗಿದೆ.

(೩) ಕೀರ್ತನೆಗಳು

ದಾಸರು ೨೭೫ ಕೀರ್ತನೆಗಳನ್ನು ರಚಿಸಿದ್ದು ಅದರಲ್ಲಿ ಸು.೨೫ ಮಾತ್ರ ಕನ್ನಡದಲ್ಲಿ ದೊರಕುತ್ತವೆ. ಉಳಿದವು ತೆಲುಗಿನಲ್ಲಿವೆ. ದಾಸರ ಶಿಷ್ಯಪರಂಪರೆ ಬಹಳ ದೊಡ್ಡದಿದ್ದು ಹರಿಕಥಾಗ್ರಂಥದಲ್ಲೇ ೩೦ಕ್ಕೂ ಹೆಚ್ಚುಜನ ಶಿಷ್ಯರು ಉಲ್ಲೇಖಗೊಂಡಿದ್ದಾರೆ. ಈ ಶಿಷ್ಯರುಗಳಿಂದ ದಾಸರನ್ನು ಸ್ತುತಿಸಿರುವ ೪೦ಕ್ಕೂ ಅಧಿಕ ಕೀರ್ತನೆಗಳು ದೊರಕುತ್ತವೆ. ಇವರಲ್ಲಿ ಮುಖ್ಯರಾದವನಾಗಿ ಚನ್ನಪಟ್ಟಣದ ಅಹೋಬಲದಾಸ, ಮಳಿಗೆ ರಂಗಸ್ವಾಮಿದಾಸ, ಚೌಡನಪಲ್ಲಿ ಶ್ರೀನಿವಾಸದಾಸರು ಕಾಣಿಸುತ್ತಾರೆ. ಅಹೋಬಲದಾಸ ತುಳಸಿದಾಸರ ಹೆಸರನ್ನೇ ತನ್ನ ಅಂಕಿತವನ್ನಾಗಿಸಿ-ಕೊಂಡು ದಾಸರು ತೋರಿಕೊಟ್ಟ ಆಧ್ಯಾತ್ಮಿಕ ಮಾರ್ಗದಲ್ಲಿ ನಡೆದು ದಾಸರ ಉಪದೇಶದ ಆಧಾರದಿಂದ 'ವೇದಾಂತಸಿದ್ಧಾಂತ' ಎಂಬ ಕೃತಿಯನ್ನೂ ೧೦೦ಕ್ಕೂ ಅಧಿಕ ಕೀರ್ತನೆಗಳನ್ನೂ ರಚಿಸಿದ್ದಾನೆ. ಈತನ ತತ್ವಪದಗಳು ಶಿಶುನಾಳ ಶರೀಫರ ಪದಗಳನ್ನು ಸರಿಗಟ್ಟುವಂತಿವೆ. ಶ್ರೀನಿವಾಸದಾಸರು, ಮುಳಬಾಗಿಲು ರಂಗಸ್ವಾಮಿ

ದಾಸರು ತಮ್ಮ ಹೆಸರನ್ನೇ ಅಂಕಿತವಾಗಿಟ್ಟುಕೊಂಡು ೧೦೦ ಕ್ಕೂ ಅಧಿಕ ಕೀರ್ತನೆ ರಚಿಸಿದ್ದರೂ ಬಹಳಷ್ಟು ತೆಲುಗಿನಲ್ಲಿವೆ. ೧೫-೨೦ ಮಾತ್ರ ಕನ್ನಡದಲ್ಲಿವೆ. ತುಳಸಿರಾಮದಾಸರಂತೆ ಇವರಿಗೂ ಶಿಷ್ಯಪರಂಪರೆಯಿದೆ.

೧೯ನೇ ಶತಮಾನದಲ್ಲಿ ವಿಶಿಷ್ಟಾದ್ವೈತ ಸಂಪ್ರದಾಯದ ಹರಿದಾಸ ಪರಂಪರೆಯನ್ನು ಮುಂದುವರಿಸಿಕೊಂಡು ಬಂದದ್ದಲ್ಲದೆ ಅದಕ್ಕೊಂದು ಭದ್ರ ಬುನಾದಿ ಹಾಕಿದ ಕೀರ್ತಿ ಈ ತುಳಸಿರಾಮದಾಸರಿಗೆ ಸಲ್ಲುತ್ತದೆ. ಶ್ರೀವೈಷ್ಣವ ತತ್ವವನ್ನನುಸರಿಸಿ ಅದನ್ನು ಯಶಸ್ವಿಯಾಗಿ ಜನಸಾಮಾನ್ಯರಿಗೆ ಪರಿಚಯಿಸಿದ, ವೈದಿಕೇತರರನ್ನೂ ಕೀರ್ತನಕಾರರನ್ನಾಗಿಸಿದ ಕೀರ್ತಿ ಈ ತುಳಸಿರಾಮದಾಸರಿಗೆ ಸಲ್ಲುತ್ತದೆ.

'ತುಳಸಿರಾಮದಾಸ' ಎಂಬ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿರುವ ತುಳಸಿರಾಮದಾಸರು ೨೭೫ ಸಂಕೀರ್ತನೆಗಳನ್ನು ಪಾಡಿದ್ದಾರೆಂದು ಹರಿಕಥಾ ಗ್ರಂಥ ಹೇಳಿದೆ. ಇವರ ಕೀರ್ತನೆಗಳ ಮುದ್ರಿತ ಗ್ರಂಥದಲ್ಲಿ ಈ ೨೭೫ ಕೀರ್ತನೆಗಳಿವೆ. ಹರಿಕಥಾಕೃತಿಯಲ್ಲಿ ೬೦ಕ್ಕೂ ಹೆಚ್ಚಿನ ಕೀರ್ತನೆಗಳಿದ್ದು ಈ ಕೀರ್ತನೆಗಳಲ್ಲಿ ದಾಸರ ಇತರ ಕೃತಿಗಳೂ, ದಾಸರನ್ನು ಸ್ತುತಿಸಿರುವ ಶಿಷ್ಯರ ಮತ್ತು ಇತರರ ಕೃತಿಗಳೂ ಇವೆ. ದಾಸರನ್ನು ಕುರಿತ ಸ್ತುತಿಗಳೇ ೪೦ನ್ನು ದಾಟಿ ಹರಿಕಥಾ ಗ್ರಂಥದಲ್ಲಿ ದೊರೆಯುತ್ತವೆ. ಇದರಲ್ಲೂ ಕನ್ನಡಕ್ಕಿಂತ ತೆಲುಗು ಭಾಷೆಯ ಸ್ತುತಿಗಳೇ ಅಧಿಕವಾಗಿವೆ.

ದಾಸರ ೨೭೫ ಕೀರ್ತನೆಗಳಲ್ಲಿ ೨೫ಮಾತ್ರ ಕನ್ನಡದಲ್ಲಿವೆ. ಇವು ಶ್ರೀವೈಷ್ಣವ ಸಂಪ್ರದಾಯಕ್ಕೆ ಅನುಗುಣವಾಗಿ ಶ್ರೀಹರಿಸ್ತುತಿ, ಲಕ್ಷ್ಮೀಸ್ತುತಿ, ಆಳ್ವಾರಾಚಾರ್ಯ ಸ್ತುತಿಯಾಗಿಯೇ ಹೆಚ್ಚಾಗಿ ಕಾಣಿಸಿಕೊಂಡಿವೆ. ಲೋಕನೀತಿ ಮತ್ತು ಕ್ಷೇತ್ರವರ್ಣನೆಗಳಲ್ಲೂ ಕೆಲವು ಕೃತಿಗಳು ಲಭ್ಯವಿವೆ.

'ಎಷ್ಟು ಆನಂದವೋ ಶ್ರೀಹರಿಯಭಜನೆ' ೮೭

ಎಂಬ ಕೃತಿ ದಾಸರ ಸಾಧನೆಗಳ ಪಕ್ಷಿನೋಟದಂತೆಯೂ ಇದ್ದು ಅವರ ಬದುಕಿನ ಮುಖ್ಯ ಉದ್ದೇಶವೂ ಆದ ಭಜನೆಯ ಮತ್ತು ಅದರಿಂದೊದಗುವ ಉತ್ಕೃಷ್ಟ

ಪದವಿಯ ದರ್ಶನ ಇಲ್ಲಿದೆ. 'ಲಕ್ಷ್ಮೀ ಇಷ್ಟನಾರಾಯಣ' ಎಂಬುದು ಶ್ರೀವೈಷ್ಣವ ಕಲ್ಪನೆಯ ಶ್ರೀಹರಿಯ ಸ್ತುತಿಯಾಗಿರುವುದನ್ನು ಇಲ್ಲಿ ಗಮನಿಸಬಹುದು. ಈ ಕೃತಿಯಲ್ಲಿ ಬರುವ 'ಪದ್ಮಶಾಲಿಭಕ್ತರೆಲ್ಲರು' ಎಂಬುದು ದಾಸರು ಮುಖ್ಯವಾಗಿ ಉದ್ಧರಿಸಿದ ವೈದಿಕೇತರ ಜನಾಂಗವನ್ನೂ 'ಮಂದಿರವು ಕಟ್ಟಿಸಿ' ಎಂಬುದು ದಾಸರು ಕಟ್ಟಿಸಿದ 'ಭಾರ್ಗವರಾಮ ಭಜನ ಮಂದಿರ'ಗಳನ್ನೂ 'ತಂಬುರೆ ಕರತಾಳವಾದ್ಯ ವಿಜೃಂಭಿಸಿ ಹರಿಸ್ಮರಣೆಮಾಡುತ' ಎಂಬುದು ದಾಸರು ಹರಿದಾಸ ವೃತ್ತಿಯನ್ನೇ ಕೈಗೊಂಡಿದ್ದರು ಎಂಬುದನ್ನೂ ಸೂಚಿಸುತ್ತಿದೆ. ಶ್ರೀಹರಿ, ಶ್ರೀಧರ, ಮಾಧವ, ರಾಮ, ಕೃಷ್ಣ, ವೆಂಕಟೇಶನ ರೂಪದಲ್ಲಿ ಹರಿಯನ್ನು ಕಂಡಿರುವ ದಾಸರು ಅತ್ಯಂತ ಭಾವನಾತ್ಮಕವಾಗಿ ಸ್ತುತಿಸಿದ್ದಾರೆ. 'ಮಾಧವಭವಂತುತೇ ಮಂಗಳಂ' (೮೯) ಎಂಬುದರಲ್ಲಿ 'ನಾದನಾಮಕ್ರಿಯೆ' ಯಾಗಿ ದಂಡಕದಂತೆ ಬೆಳೆಸಿದ್ದರೆ 'ಶ್ರೀಮಾಧವದಾಮೋದರ ನಾಮಾರ್ಚಿತ ಶಾಮ' ಎಂಬುದರಲ್ಲಿ ಜಿನೇ ನುಡಿ ಸಂಪೂರ್ಣವಾಗಿ ತಮಗಿದ್ದ ಬಿರುದುಗಳನ್ನೇ ದೈವಸ್ತುತಿಯನ್ನಾಗಿಸಿದ್ದಾರೆ.

ಶ್ರೀಮದಖಿಲಾಂಡಕೋಟಿಬ್ರಹ್ಮಾಂಡನಾಯಕ
ಆದಿಮಧ್ಯಾಂತರಹಿತ ಘನಸಾರವಿಲಸನ್‌ಭ್ರೂಮಧ್ಯ
ಕಸ್ತೂರಿ ತಿಲಕೋಜ್ವಲಾ ದಿವ್ಯ ಪೀತಾಂಬರಧಾರಿ
ಶ್ರೀಯಲಮೇಲ್‌ಮಂಗಾಮನೋಹರಾ
ಶ್ರೀಭಾರ್ಗವಾಸರ ಭಜನೋಲ್ಲಾಸ
ಶ್ರೀಚಾಮರಾಟ್ಪಾಲಿತ ಸತ್ಸಂಪ್ರದಾಯ ಸುಜ್ಞಾನ
ಬೋಧಿನೀ ಸಮಾಜೋದ್ಧಾರಕಾ ಎಚ್ಚರಿಕೆ.

ಇವೆಲ್ಲ ಬಿರುದು ಅಥವಾ ವಿಶೇಷಣಗಳು, ದಾಸರನ್ನು ರಾಜರು, ಶ್ರೀಮಠ ಮತ್ತು ಇತರರು ಸ್ತುತಿಸಿರುವವೇ ಆಗಿವೆ.

ಹತ್ತು ಕೃತಿಗಳಲ್ಲಿ ಲಕ್ಷ್ಮಿಯನ್ನು ಸ್ತುತಿಸಿರುವ ದಾಸರು ಲಕ್ಷ್ಮೀ ಪ್ರಾಧಾನ್ಯತೆ ಯನ್ನು ಎತ್ತಿ ಹಿಡಿಯುವ ಮೂಲಕ ಶ್ರೀವೈಷ್ಣವ ದೃಷ್ಟಿಯನ್ನು ತೋರಿದ್ದಾರೆ. ಎಲ್ಲ ಕೃತಿಗಳೂ ಅತ್ಯಂತ ಸುಂದರವಾದ ಸ್ತುತಿಗೀತೆಗಳಾಗಿವೆ. 'ಭಾರ್ಗವರಾಮ' ಇವರಿಗೆ ಅತ್ಯಂತ ಪ್ರಿಯನಾಗಿರುವುದರಿಂದ ಲಕ್ಷ್ಮಿಯನ್ನು 'ಭಾರ್ಗವಿಲಕ್ಷ್ಮೀ' ಎಂದು

ಕಂಡಿದ್ದಾರೆ. 'ಪಾಲಯಮಾಂ ಶ್ರೀಭಾರ್ಗವಿಲಕ್ಷ್ಮೀ' (೯೭) 'ಬಾರಮ್ಮ ಶೇಷಾದ್ರಿ ಭಾರ್ಗವಿದೇವಿ' ಮುಂತಾದವುಗಳನ್ನು ನೋಡಬಹುದು.

'ಮಾನಾಭಿಮಾನವಿಲ್ಲವೆ ಮಹಲಕ್ಷ್ಮೀ ನಿನಗೆ' ೧೦೩

ಎಂಬುದು ದಾಸರಿಗಿದ್ದ ದೈವಾವಲಂಬನದ ಸಿದ್ಧಿಯ ದ್ಯೋತಕವಾಗಿದೆ. ಲಕ್ಷ್ಮಿಯ ಮೂಲಕ ಶ್ರೀಹರಿಯ ಕೃಪೆ ಬಯಸುವ ಶ್ರೀವೈಷ್ಣವ ತತ್ವದಂತೆ ಸಾಗುವ ಈ ಕೃತಿಯಲ್ಲಿ ತನ್ನನ್ನು ಸಂರಕ್ಷಣೆ ಮಾಡುವುದಕ್ಕೆ ಬದಲಾಗಿ

'ಹೀನ ಜನಂಗಳ ಬೇಡುತ ನಿರುತವು
ಹೀನವೃತ್ತಿಯಿಂದೋಡುತ ತಿರುಗುವೆ'

ಎಂದು ಜಗ್ಗಿಸಿ ಕೇಳುವಷ್ಟು ಭಕ್ತಿಯಸಾಧನೆ, ಆತ್ಮಸ್ಥೈರ್ಯ ದಾಸರಲ್ಲಿರುವುದನ್ನು ಕಾಣಬಹುದು.

'ಶ್ರೀ ರುಕ್ಮಿಣೀಮಣಿ ಶ್ರೀಕೃಷ್ಣಪ್ರಿಯತರುಣಿ' ೧೦೪

ಕೃತಿಯಲ್ಲಿ ರುಕ್ಮಿಣಿ ರೂಪದಲ್ಲಿ ಲಕ್ಷ್ಮೀಸ್ತುತಿ ವ್ಯಕ್ತವಾಗಿರುವುದು ವಿಶೇಷ.

ಆಳ್ವಾರಾಚಾರ್ಯ ಸ್ತುತಿಯಲ್ಲಿ ರಾಮಾನುಜರನ್ನು ಸ್ತುತಿಸಿರುವ ಎರಡು ಕೃತಿಗಳಿವೆ. 'ಭಜರೆಗುರುಚರಣಂ ದುಸ್ತರ ಭವಸಾಗರ ತರಣಂ' (೧೦೬) ಕೃತಿ ಗುರುಭಕ್ತಿ ರೂಪದಲ್ಲಿದ್ದರೆ 'ಶ್ರೀಮತೆ ಶ್ರೀರಾಮಸೋದರಾ' ಕೃತಿರಾಮಾನುಜರ ಸಾಧನೆಗಳ ಸ್ತುತಿರೂಪದಲ್ಲಿದೆ.

ಇವರಲ್ಲಿ ಆಂಜನೇಯನನ್ನು ಸ್ತುತಿಸಿರುವ ಒಂದು ಕೀರ್ತನೆಯಿದ್ದು ('ಶ್ರೀಮದ್ರಾಮನೃಪಾಲಸೇವಕ' ೧೦೫) ಅದನ್ನು ಆಳ್ವಾರ್ ಸ್ತುತಿಯಡಿಯಲ್ಲೇ ಸೇರಿಸಲಾಗಿದೆ. (ಗರುಡ ಮತ್ತು ಹನುಮಂತರನ್ನು ಶ್ರೀವೈಷ್ಣವ ಸಂಪ್ರದಾಯ ಪೆರಿಯತಿರುವಡಿ, ಕಿರಿಯತಿರುವಡಿ ಎಂದು ಗೌರವಿಸಿ ಆಳ್ವಾರರ ಸ್ಥಾನದಲ್ಲೇ ಪೂಜಿಸುತ್ತದೆ.) 'ದರಿಶಕುಪ್ಪ ಶ್ರೀ ಅಂಜನಿ ತನಯ' ಎಂಬುದೂ ಆಂಜನೇಯನ

ಸ್ತುತಿಯೇ ಆಗಿದ್ದು ಕ್ಷೇತ್ರದೇವತಾಸ್ತುತಿಯಾಗಿ ಕಾಣಿಸಿಕೊಂಡಿದೆ. ತಿರುಪತಿ ಶ್ರೀನಿವಾಸನನ್ನು ಕುರಿತ ಎರಡು ಕೃತಿಗಳೂ ಇವೆ. ದಾಸರು ಇಲ್ಲಿಗೆ ಭೇಟಿ ನೀಡಿದ್ದುದನ್ನು ಹರಿಕಥಾಕೃತಿ ಉಲ್ಲೇಖಿಸುತ್ತದೆ. ಇದರಲ್ಲಿ 'ಶರಣುವಕುಳಾ ಭರಣಪೋಷಿತ ಶರಣುಯಾಮುನ ಪೂಜಿತ' (೧೦೯) ಎಂಬುದು ನಮ್ಮಾಳ್ವಾರ್ ಮತ್ತು ಯಾಮುನಾಚಾರ್ಯರಿಂದ ಸ್ತುತಿಸಲ್ಪಟ್ಟವನು ಎಂದು ವಿಶೇಷವಾಗಿ ಸ್ತುತಿಸಿರುವ ಕೀರ್ತನೆಯಾಗಿದೆ.

'ವೃಥಾಮಾಡಬೇಡ ಈ ಜನ್ಮವು ಸದಾಬರದು ಮೂಢ' (೧೦೮) ಎಂಬ ಒಂದೇ ಕೃತಿ ಲೋಕನೀತಿಯನ್ನು ಹೇಳುವಂತಿದ್ದು ಪರೋಕ್ಷವಾಗಿ ಶ್ರೀವೈಷ್ಣವ ತತ್ವವನ್ನೂ ಸಾರುವಂತಿದೆ. ದಾಸರ ಕನ್ನಡ ಕೀರ್ತನೆಗಳಲ್ಲಿ ಅಷ್ಟು ವೈವಿಧ್ಯತೆ ಇಲ್ಲದಿದ್ದರೂ ಶ್ರೀವೈಷ್ಣವತತ್ವ ಸ್ಪಷ್ಟವಾಗಿ ಮೂಡಿದೆ. ತೆಲುಗು ಕೀರ್ತನೆಗಳು ವೈವಿಧ್ಯತೆಯಿಂದ ಕೂಡಿದ್ದು ಆತ್ಮಸಮರ್ಪಣೆ, ಲೋಕನೀತಿ, ತತ್ವಪ್ರತಿಪಾದನೆಯಲ್ಲಿ ವಿಶಿಷ್ಟವಾಗಿ ಗುರುತಿಸಿಕೊಳ್ಳುತ್ತವೆ. ಕನ್ನಡದ ಈ ಕೆಲವು ಕೃತಿಗಳಿಂದ ಮತ್ತು ಹರಿದಾಸಪರಂಪರೆಯನ್ನು ಬೆಳೆಸಿರುವ ಆಂದೋಳನದಿಂದ ತುಳಸಿರಾಮದಾಸರನ್ನು ಶ್ರೀವೈಷ್ಣವ ಹರಿದಾಸವಾಹಿನಿಯಲ್ಲಿ ಮತ್ತು ಒಟ್ಟು ಕೀರ್ತನ ಸಾಹಿತ್ಯದಲ್ಲೇ ಮುಖ್ಯ ಕೀರ್ತನಕಾರರನ್ನಾಗಿ ಹಾಗೂ ಇನ್ನೊಬ್ಬ ಹರಿದಾಸ ಆಂದೋಳನಕಾರರನ್ನಾಗಿ ಗುರುತಿಸಬಹುದಾಗಿದೆ.

೪. ದಾಸರನ್ನು ಕುರಿತ ಸ್ತುತಿಗಳು

ತುಳಸಿರಾಮದಾಸರನ್ನು ಕುರಿತು ಸ್ತುತಿಸಿರುವ ೪೦ಕ್ಕೂ ಹೆಚ್ಚಿನ ಸಂಖ್ಯೆಯ ಕೀರ್ತನೆಗಳನ್ನು ಗಮನಿಸಿದರೆ ಇವರು ಬೀರಿದ್ದ ಪ್ರಭಾವಕ್ಕೂ ಇವರಿಗಿದ್ದ ಶಿಷ್ಯ ಪರಂಪರೆಗೂ ಇದು ದ್ಯೋತಕವಾಗಿದೆ. ಕನ್ನಡದಲ್ಲೇ ೩೦ಕ್ಕೂ ಹೆಚ್ಚು ಸ್ತುತಿಗಳು ದೊರಕುತ್ತವೆ. ಶ್ರೀಮಠ, ವೇದಾಂತ ಶಿವರಾಮಶಾಸ್ತ್ರಿ (ಅದ್ವೈತ ಪರಂಪರೆಯ ಶಂಕರದಾಸ) ತೂಪ್ಪಲ್ ವೆಂಕಟಾಚಾರ್ಯ (ಶ್ರೀವೈಷ್ಣವಗಣ್ಯರು) ಮುಂತಾದ ಗಣ್ಯರೂ ಇವರನ್ನು ಸ್ತುತಿಸುವಷ್ಟು ಅತಿಗಣ್ಯರಾಗಿದ್ದರೆಂದು ಹೇಳಬಹುದಾಗಿದೆ. ಇವರ

ಹೆಸರನ್ನೇ ಅಂಕಿತವಾಗಿಸಿ ಕೊಂಡಿದ್ದ ಚನ್ನಪಟ್ಟಣದ ಅಹೋಬಲದಾಸ, ಕೋಲಾರದ ದಲಿತ ಚೆಂಚುದಾಸ, ಚೌಡನಪಲ್ಲಿ ಶ್ರೀನಿವಾಸದಾಸ, ಚಿಂತಾಮಣಿಯ ಉಪ್ಪಾರ ಶ್ರೀನಿವಾಸದಾಸ ಇವರಿಗೆ ದೇವಾಯವನ್ನೇ ನಿರ್ಮಿಸಿದ ಮುಳಬಾಗಿಲಿನ ಮಳಿಗೆ ರಂಗಸ್ವಾಮಿದಾಸರು ಮತ್ತು ಇವರನ್ನು ಕುರಿತು ಹರಿಕಥೆಯನ್ನೇ ಕಟ್ಟಿದ ಕಾಹಾಳಬೈರವದಾಸರಂತಹ ಬಲಿಷ್ಠ ಶಿಷ್ಯಪರಂಪರೆಯನ್ನು ಬೆಳೆಸಿದ್ದ ಪ್ರಮುಖ ಕೀರ್ತನಕಾರರಾಗಿ ತುಳಸಿರಾಮದಾಸರು ವ್ಯಕ್ತವಾಗುತ್ತಾರೆ.

ಇವರನ್ನು ಸ್ತುತಿಸಿರುವ ಪ್ರಮುಖರು ಮತ್ತು ಶಿಷ್ಯರನ್ನು ಹೀಗೆ ಪಟ್ಟಿಮಾಡಬಹುದು (ಈ ಹೆಸರುಗಳನ್ನು ಅವರ ಕೀರ್ತನೆಗಳನ್ನು ಹರಿಕಥಾಕೃತಿ ದಾಖಲಿಸಿದೆ).

(ಅ) ಹರಿಕಥಾಕೃತಿಯಲ್ಲಿರುವ ಕೀರ್ತನೆಗಳ ಸ್ತುತಿಕಾರರು.
(ಕಂಪದಲ್ಲಿರುವುದು ಕೀರ್ತನೆಗಳ ಮೊದಲ ಸಾಲು)

೧. ಬೆಂಗಳೂರಿನ ದಂಡು ಪ್ರದೇಶದ ಸಂಸ್ಕೃತಾಂಧ್ರಕವಿ 'ಗಂಡಭೇರುಂಡ ಪ್ರಚಂಡ ಭಾರತಿ', ಪರವಸ್ತುಜೀಯರ್ ಸೂರಿದಾಸ ತನ್ನ ಭಕ್ತವಿಜಯದ ಆದಿಯಲ್ಲಿ ವೀರವೈಷ್ಣವ ಪಾರಂತಂತ್ರೀಯ ನಿಷ್ಠೆಯನ್ನು ನೀಡಿದ ಗುರುವನ್ನಾಗಿ.

೨. ಶ್ರೀಮದಾಧ್ಯಾತ್ಮನಿಷ್ಠ ಗರಿಷ್ಟನಾದ **ಚನ್ನಪಟ್ಟಣದ ಅಹೋಬಲದಾಸ** (೧೪ ಸ್ತುತಿಗಳಿವೆ. ಇವರ ನೂರಕ್ಕೂ ಅಧಿಕ ಕೀರ್ತನೆಗಳು ಮತ್ತು ೧ ಗ್ರಂಥ ಲಭ್ಯವಿದೆ.)

೩. **ದರಿಶಕುಪ್ಪದ ಕೃಷ್ಣದಾಸ** (ಚರಣಸೇವೆಯ ಬೇಡುವೆ ಗುರು ತುಳಸಿರಾಮನ')

೪. ಯಲದೂರು **ಕೊಡದವಾಡಿರಂಗದಾಸ** ('ಇಂದುನಾರವ್ಮು ಸ್ವಾಚಾರ್ಯುಲು')

೫. ಅಲಂಗೂರಿನ ಭಕ್ತಿವಯೋವೃದ್ಧ **ಅಣ್ಣಾಜಿದಾಸ** ('ಹರಿರೂಪ ಮಹನೀಯಲು ವೇಲ್ಪುಲು ಶ್ರೀತುಳಸಿರಾಮ ದಾಸರ್ಯುಲು')

೬. **ಅಗರದ ಸಂಜೀವ ನಾರಾಯಣದಾಸ** ('ತುಲಸಿರಾಮದಾಸುಲಕುನು ತೆಲುತೆನು ಪಲಿವೇದವಂದನಮು')

೭. **ಮುಳಬಾಗಿಲು ವಿಠಲಂ ಮುನಿಸ್ವಾಮಾಚಾರ್ಯ**- ('ಶ್ರೀ ತುಳಸಿರಾಮರ್ಯನಮೋಸ್ತುತೇ')

೮. **ಆಲಂಗೂರು ಸುಬ್ಬಾಚಾರ್ಯ** ('ಶ್ರೀತುಲಸಿರಾಮದಾಸಭಾಸ್ಕರ ಮಾಲಾ'- ಅಕ್ಷರಸ್ತುತಿ)

೯. **ಚನ್ನಪಟ್ಟಣದ ವೆಂಕಟಗಿರಿದಾಸ** ('ಗಾಲಚೀದಲ ಜೀವೇ ಮಾ')

೧೦. **ಪುರಿಗಂ ತಿಮ್ಮರಾಯ ಶೆಟ್ಟಿ** ('ಗುರುನಾಮ ಸ್ಮರಣ ಚೆಯುಡೇ ಭಕ್ತವರುಲಾರ')

೧೧. **ಯಲದೂರು ಶಾಮದಾಸ** ('ದೇಶಿಕಾಗ್ರಣಿ ತುಲಸಿರಾಮದೈವ ತಿರುನಕ್ಷತ್ರೋತ್ಸವಮು')

೧೨. **ಮುಳಬಾಗಿಲು ಪಾಂಚಾನನಂ (ಕುದುರೆ) ಗುರ್ರಾಲರಾಯಪ್ಪಾಚಾರ್ಯ** ('ಶ್ರೀ ತುಲಸೀಕುಲ ಶಶಿಯೈಖ್ಯಾತಿಗ ಜನ್ಮಿಂಚಿರಾವು ಕರುಣಾನಿಧಿ ಪಾ')

೧೩. ಮದರಾಸು ಕವಿವರ ಪಂಡಿತ **ಸಿಂಗರಾಚಾರ್ಯ** (ಮುಳಬಾಗಿಲು ಕೃಷ್ಣೋತ್ಸವ ಸಪ್ತಾಹಕ್ಕೆ ಬಂದಿದ್ದಾಗ 'ಕಮಗೋನಿ ಸೇವಿಂದಗಲಿಗೇನು ಕಮಲನಯನ ಮಹೋತ್ಸವಮುನು')

೧೪. **ಕೋಲಾರದ ದಲಿತ ಚೆಂಚುದಾಸ** (೨ ಸ್ತುತಿ)

೧) 'ತುಲಸಿರಾಮದಾಸುಲ ದಿವ್ಯತಿರುವಡಿಗಳೇ ಶರಣಂ'

೨) 'ಗುರುಮಹರಾಜಗುರು ಶ್ರೀಮನ್ ತುಳಸಿರಾಮಸದ್ಗುರು ದಯಾಳ್'

೧೫. ಬೆಂಗಳೂರು ದಂಡಿನ ಸಿಂಗೀತಂ **ವೆಂಕಟ್ರಾಮದಾಸ** ('ತುಲಸೀ-ರಾಮಾರ್ಯುಲ ದಿವ್ಯ ಚರಣ ರೇಣು ಸ್ಮರಣಯು ಚೇಸೇದಮು')

೧೬. **ದರಿಶಕುಪ್ಪದ ವೆಂಕಟದಾಸ** (೪ ಸ್ತುತಿ – ಮಳಿಗೆ ರಂಗಸ್ವಾಮಿದಾಸರ ಶಿಷ್ಯ)

೧೭. **ಚವುಡನಪಲ್ಲೆ ಶ್ರೀನಿವಾಸದಾಸ** ('ಇಂದೂ ನಿಲಚಿಯುನ್ನಾವು ಯಿಂದೀವರ ಶಾಮಸುಂದರ ಶ್ರೀ ತುಲಸಿರಾಮ ಗುರುವರ್ಯ'- ಮುಳಬಾಗಿಲಿನಲ್ಲಿ ದಾಸರನ್ನು, ಕನಸಿನ ಸೂಚನೆಯಂತೆ ಬಂದು ಸೇವಿಸಿದಾಗ)

೧೮. ಮೈಸೂರಿನ **ವೇದಾಂತ ಶಿವರಾಮ ಶಾಸ್ತ್ರೀ** 'ಶಂಕರದಾಸ' (೨ಸ್ತುತಿ)

೧೯. **ಮುಳಬಾಗಿಲಿನ ಮಳಿಗೆ ರಂಗಸ್ವಾಮಿದಾಸ.** (೪ಸ್ತುತಿಗಳು) ದಾಸರು ಬೆಂಗಳೂರಿನ ಮಂಡಿಮೇಕಲ ಮಲ್ಲಯ್ಯ ಛತ್ರದಲ್ಲಿದ್ದಾಗ ಬಂದು ಸ್ತುತಿಸಿದ ಕೀರ್ತನೆಗಳು ಇವರ ಸು.೭೫ ಕೀರ್ತನೆಗಳು ಲಭ್ಯವಿದೆ.

೨೦. **ಬಾರಾಮಾರ್ಗಂಶ್ರೀನಿವಾಸದಾಸ** ('ಗುರುವರ ಈ ತುಳಸಿರಾಮ ದೇಶಿಕ ಸಾರ್ವಭೌಮ) ೨-ಈ ಉಲ್ಲೇಖ ಚೌಡಯ್ಯನವರ ಗ್ರಂಥದಲ್ಲಿದೆ.

೨೧. **ತೂಪ್ಪಲ್ ವೆಂಕಟಚಾರ್ಯರು** (ಮಂಗಳಂ ತುಳಸೀರಾಮದಾಸವರಿಗೆ)

(ಆ) **ಹರಿಕಥಾಕೃತಿಯಲ್ಲಿ ಉಲ್ಲೇಖಿಸಿರುವ ಸ್ತುತಿಕಾರರು** (ಕೀರ್ತನೆಗಳು ಲಭ್ಯವಿಲ್ಲ)

೧. ಮೈಸೂರು ಪರಕಾಲಮಠದ ಶ್ರೀ **ಶ್ರೀಪರಕಾಲ ಬ್ರಹ್ಮತಂತ್ರ ಕೃಷ್ಣದೇಶಿಕರಿಂದ** ಶ್ರೀಮುಖ (ಮಂಗಳಾಶಾಸನ)

೨. ಅಹೋಬಲಮಠದಲ್ಲಿ **ದೀಕ್ಷಿತರು**

೩. **ಕಾಹಾಳಭೈರವ ಕವೀಶ್ವರ** (ಈತನೇ ದಾಸರನ್ನು ಕುರಿತ 'ತುಳಸಿರಾಮದಾಸ ಚರಿತಮು' ಎಂಬ ತೆಲುಗಿನಲ್ಲಿ ಹರಿಕಥೆಯನ್ನು ಬರೆದಿರುವ ಶಿಷ್ಯ. ದಾಸರು ಚಿಂತಾಮಣಿ ತಾ|| ವಡ್ಡಪಲ್ಲಿಯಲ್ಲಿ ಕೃಷ್ಣೋತ್ಸವವಾಚರಿಸುತ್ತಿದ್ದಾಗ ಈ ಕವೀಶ್ವರ ಹೇಳಿದ ಮಾತನ್ನು

ಹರಿಕಥಾಕೃತಿ ಹೀಗೆ ಉಲ್ಲೇಖಿಸಿದೆ. "ವಡ್ಡಪಲ್ಲಿ ಶ್ರೀನಿವಾಸದಾಸ ಹನುಮಂತ, ಬೆಂಗಳೂರು ಗಿರೆಪ್ಪಯ್ಯ ಸಂಚಾರ ಶಕ್ತಿಯ ಆದಿಶೇಷ, ನೀವೇ ಶ್ರೀರಾಮ, ವಡ್ಡಪಲ್ಲಿಯೇ ಅಯೋಧ್ಯೆ, ನಿಷ್ಠರಾದ ಬ್ರಾಹ್ಮಣರೇ ವಸಿಷ್ಠರು. ಶ್ರಾವಣ ಮಾಸದಲ್ಲಿ ಜರುಗಿದ ಕೃಷ್ಣೋತ್ಸವವೇ ಶ್ರೀರಾಮರ ಅಶ್ವಮೇಧಯಾಗ".)

೪. **ನರಸಿಂಹದಾಸ**

೫. **ಜಗನ್ನಾಥಸಾಧು**

೬. **ಮುಳಬಾಗಿಲು ರಾಮಯ್ಯ**

೭. **ವಡ್ಡಪಲ್ಲಿ ಶ್ರೀನಿವಾಸದಾಸ.**

೮. **ಉಪ್ಪರಂಶ್ರೀನಿವಾಸದಾಸ** (ಇತ್ತೀಚೆಗೆ ಚಿಂತಾಮಣಿಯ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿ. ಅಲ್ಲಿಯ ಭಜನಮಂದಿರ (ಈಗ ಶ್ರೀನಿವಾಸ ದೇವಾಲಯ) ದಲ್ಲಿ ಇವರ ಭಾವಚಿತ್ರವಿದೆ. ಅದರ ಎದುರಿನ ಮನೆಗಳೇ ಈ ದಾಸರ ಮಕ್ಕಳ ಮನೆಗಳು).

ಈ ಎಲ್ಲದಾಸರುಗಳಿಂದ ೪೦ಕ್ಕೂ ಹೆಚ್ಚು ಕೀರ್ತನೆಗಳು (ಸ್ತುತಿಗಳು, ಶ್ಲೋಕಗಳೂ) ರಚನೆಯಾಗಿದ್ದು ಇವುಗಳಲ್ಲಿ ಕನ್ನಡದವು ಸು.೩೦ ಇದ್ದು ಅದರಲ್ಲಿ ಅಹೋಬಲದಾಸರವೇ ೧೪ ಸ್ತುತಿಗಳಿವೆ. ಇದರಲ್ಲಿ ೧೧ ಕೀರ್ತನೆಗಳು ಅವರ ಕೀರ್ತನೆಗಳ ಜೊತೆಯಲ್ಲೇ ಇವೆ. ಉಳಿದ ೩ ಕೀರ್ತನೆಗಳನ್ನು ಮಾತ್ರ ಈ ಭಾಗದಲ್ಲಿ ನೀಡಿದೆ. ಇದರೊಂದಿಗೆ ಇತರರ ೯ ಕನ್ನಡ ಕೀರ್ತನೆಗಳನ್ನೂ ೧ ತೆಲುಗು ಕೀರ್ತನೆಯನ್ನೂ ಈ ಭಾಗದಲ್ಲಿ ಕೊಟ್ಟಿದೆ. ಉಳಿದ ಕೀರ್ತನೆಗಳ ಮೊದಲ ಸಾಲುಗಳನ್ನು ಮಾತ್ರ ಮೇಲಿನ ಪಟ್ಟಿಯಲ್ಲೇ ಆಯಾ ದಾಸರ ಮುಂದೆ ಕಂಸದಲ್ಲಿ ಕೊಟ್ಟಿದೆ. ಇವರುಗಳ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾದಲ್ಲಿ ಇವರಲ್ಲಿ ಅನೇಕರು ವೈದಿಕೇತರರಾಗಿದ್ದು ಎಲ್ಲರೂ ಶ್ರೀವೈಷ್ಣವ ಹರಿದಾಸರ ಪಟ್ಟಿಗೆ ಸೇರುತ್ತಾರೆ. ಅಲ್ಲದೆ ಕನ್ನಡ ಹರಿದಾಸ ಸಾಹಿತ್ಯಕ್ಕೇ ಹೆಚ್ಚಿನ ವಿಶಿಷ್ಟಸೇರ್ಪಡೆಯಾಗುತ್ತಾರೆ.

ಈ ಸ್ತುತಿಗಳಲ್ಲಿ ತುಳಸಿರಾಮದಾಸರನ್ನು ಗುರುಸ್ಥಾನದಲ್ಲಿ, ದೈವಸ್ಥಾನದಲ್ಲಿ ಗೌರವಿಸಿರುವ ಸ್ತುತಿರೂಪಗಳೇ ಅಧಿಕವಾಗಿವೆ. ಕೆಲವು ಆತ್ಮನಿವೇದನೆಯ

ರೂಪದಲ್ಲೂ ಇದ್ದು ಗುರುಮುಖೇನ ದೈವಕೃಪೆ ಹಂಬಲಿಸುವ ಶ್ರೀವೈಷ್ಣವ ತತ್ವಕ್ಕೆ ಅನುಗುಣವಾಗಿ ಆಚಾರ್ಯಸ್ಥಾನದಲ್ಲಿಟ್ಟು ದೈವಸಮಾನವಾಗಿ ಪ್ರಾರ್ಥಿಸಿವೆ. ಮುಜರಾಯಿ ಇಲಾಖೆಯಲ್ಲಿ ಆಗಮಮಹಾಪಂಡಿತರಾಗಿದ್ದ ಶ್ರೀ ತೂಪ್ಪಲ್ ವೆಂಕಟಾಚಾರ್ಯರು ತುಳಸಿರಾಮದಾಸರಿಂದ ಬೆಂಗಳೂರಿನ ತುಳಸಿತೋಟದ ದೇವಾಲಯದಲ್ಲಿ ದಾಸರಲ್ಲಿದ್ದ ದೇವತಾ ಮೂರ್ತಿಗಳ ಕೈಂಕರ್ಯಸೇವೆಗೆ ನಿಯಾಮಕವಾಗಿದ್ದ ಆಚಾರ್ಯರು. ಇವರು ದಾಸರನ್ನು ಕುರಿತು ೨೬ ನುಡಿಗಳ ಶ್ಲೋಕರೂಪದ ಮಂಗಳಸ್ತುತಿಯನ್ನು ರಚಿಸಿದ್ದಾರೆ.

'ಮಂಗಳಂ ತುಲಸೀರಾಮ ದಾಸವರ್ಯಕೃಪಾನಿಧೇ
ಮಂಗಳಂ ರಾಮಭದ್ರಾಂಘ್ರಿ ಪದ್ಮಭೃಂಗಮಹಾನುತೇ'

ಎಂಬಂತೆ ಸಾಗುವ ಈ ಕೃತಿ ಸಂಸ್ಕೃತದಲ್ಲಿದ್ದು ಬಿಗಿ ಬಂಧದಿಂದ ಕೂಡಿದೆ. ವೆಂಕಟಾಚಾರ್ಯರಿಗಿರುವ ಸಂಸ್ಕೃತಭಾಷಾ ಪ್ರೌಢಿಮೆಗೆ, ಪಾಂಡಿತ್ಯಕ್ಕೆ ಇದು ಸಾಕ್ಷಿಯಾಗಿರುವಂತೆ ದಾಸರ ಬಗ್ಗೆ ಇವರಿಗಿದ್ದ ಅನನ್ಯ ಭಕ್ತಿಯ ಭಾವವೂ ವ್ಯಕ್ತವಾಗುತ್ತದೆ.

'ಶಂಕರದಾಸ'. ಅಂಕಿತದಿಂದ ಹಲವಾರು ಕೃತಿಗಳನ್ನು ಬರೆದು ವೇದಾಂತ ಪ್ರವಚನಕಾರರಾಗಿದ್ದ, ಪ್ರಸಿದ್ಧ ಅದ್ವೈತ ಸಿದ್ಧಾಂತಕಾರರಾಗಿದ್ದ ಮೈಸೂರಿನ ವೇದಾಂತ ಶಿವರಾಮಶಾಸ್ತ್ರಿಗಳು ತುಳಸಿರಾಮದಾಸರ ನಿಕಟವರ್ತಿಗಳಾಗಿದ್ದರು. ಶಾಸ್ತ್ರಿಗಳು ಹಲವಾರುಬಾರಿ ದಾಸರನ್ನು ಸಂದರ್ಶಿಸಿರುವ ಸಂಗತಿ ದಾಸರನ್ನು ಕುರಿತ ಹರಿಕಥಾ ಕೃತಿಯಿಂದ ತಿಳಿದುಬರುತ್ತದೆ. ಶಾಸ್ತ್ರಿಗಳು ದಾಸರ ತತ್ವಮಸ್ಯಾದಿ ಮಹಾವಾಕ್ಯವಿಶೇಷದಿಂದ ಆನಂದಿತರಾಗಿ ಸ್ತುತಿಸಿದ ಸ್ತುತಿ ಎಂದು

'ಸಕಲಭೂಮೀಶ್ವರ ಶಿರೋಧೃತ ಮಕುಟತಟ ಸಂಘಟಿತ ರತ್ನ'

ಎಂಬ ಸಾಲಿನಿಂದ ಆರಂಭವಾಗುವ ಚೌಪದಿಯ ೩೦ ನುಡಿಗಳಲ್ಲಿ ದಾಸರನ್ನು ಸ್ತುತಿಸಿರುವ ಶಾಸ್ತ್ರಿಗಳ ಕೃತಿಗೆ ಟಿಪ್ಪಣಿಯಿದೆ. ಅಲ್ಲದೆ 'ದಾಸರು ವೇದಾಂತಾರ್ಥದ

ಬಗ್ಗೆ ಶಿವರಾಮ ಶಾಸ್ತ್ರಿಗಳಿಗೆ ಸೂಚನೆ ಕೊಟ್ಟಂತೆ ಸಂಭಾಷಣಾ ಸಂಗತಿಯಿದೆ' ಎಂಬ ಇನ್ನೊಂದು ಟಿಪ್ಪಣಿಯೂ ಇದ್ದು ಶಾಸ್ತ್ರಿಗಳು ಸ್ತುತಿಸಿರುವ

'ತತ್ವದೊಳು ವಾಚ್ಯಾರ್ಥಜನಿತಾ
ನಿತ್ಯಸರ್ವಾಲ್ಪಜ್ಞತಾ ಶ
ಕ್ತಿತ್ವ ಮುಖ್ಯ ವಿರೋಧಭಾಗ ನಿರೋಧದಿಂದುಳಿದ
ಸತ್ಯವಹಲಕ್ಷ್ಯಾರ್ಥ ಲಕ್ಷಿತ
ವಸ್ತುವನು ನಿಮ್ಮಡಿಗೆ ದೇಹವ
ನೊತ್ತೆಯಿಟ್ಟವ ಬಲ್ಲ ತುಳಸೀರಾಮದಾಸಾರ್ಯ ೯

ಎಂಬ ನುಡಿಯಲ್ಲೂ ಅದಕ್ಕೆ ಸೂಚನೆ ಸಿಗುತ್ತದೆ. ಶಿವರಾಮಶಾಸ್ತ್ರಿಗಳು ತುಳಸಿ ರಾಮದಾಸರನ್ನು ಗುರುಸ್ಥಾನದಲ್ಲಿ ಸ್ತುತಿಸಿರುವುದನ್ನು ಗಮನಿಸಿದರೆ ಶಾಸ್ತ್ರಿಗಳಿಗೆ ತುಳಸಿರಾಮದಾಸರು ಗುರುಸ್ಥಾನೀಯರಾಗಿದ್ದರೆಂದು ಹೇಳಬಹುದು.

ಯಾಕೆ ಜಪತಪಯಾಗಯೋಗಗ
ಳ್ಯಾಕೆ ಯಾತ್ರಾಯಾತ ಯಾತ್ರೆಗ–
ಳ್ಯಾಕೆ ವ್ರತ್ಯನಿತ್ಯೋಪವಾಸವು ಬರಿದೆ ದುಃಖವಿದು
ಲೋಕ ಪಾವನಮೂರ್ತಿ ನೀ ಪರ
ಲೋಕ ಬಾಂಧವನಿರಲು ಮುಕ್ತಿಗೆ
ಸಾಕು ನಿಮ್ಮಕಟಾಕ್ಷ ತುಳಸೀರಾಮದಾಸಾರ್ಯ

ಶಿಷ್ಟರರ್ಥವ ನಿಮ್ಮ ಚರಣಕೆ
ಕೊಟ್ಟರೆಂಬುವದಧಿಕವಲ್ಲದ
ನಷ್ಟು ಸೃಷ್ಟೀಶನಲಿ ಮನನೆಟ್ಟವರ ಹೊಟ್ಟೆಯಲಿ
ಇಟ್ಟು ನೀನದ ಕೊಟ್ಟು ಭಕ್ತರ
ಕಷ್ಟಗಳ ಪರಿಹರಿಸಿ ವರ ಪರಮೇಷ್ಟಿ
ಪಟ್ಟವಕೊಟ್ಟೆ ತುಲಸೀರಾಮದಾಸಾರ್ಯ

ರಾಮ ಬೇರಿನ್ನಲ್ಲ ತುಲಸೀ
ರಾಮನೇ ಶ್ರೀರಾಮನೆಂಬಭಿ
ರಾಮಮಾನಸರಾಗಿ ಬಳಿಕೀ ರಾಮಸೇವೆಯೊಳು
ಪ್ರೇಮಪಿಡಿದವರೆಲ್ಲರಾತ್ಮಾ
ರಾಮರಾದುದ ತಿಳಿದು ಯೀ ಶಿವ
ರಾಮ ಬಂದನು ಪೊರೆಯೊ ತುಳಸೀರಾಮದಾಸಾರ್ಯ. ॥೨॥

ಎಂದು ವಿವಿಧ ರೀತಿಯಲ್ಲಿ ಭಕ್ತಿಭಾವದಿಂದ ಸ್ತುತಿಸಿದ್ದಾರೆ. ಈ ನುಡಿ ಮಾಲಿಕೆ ಸೊಗಸಾದ ಕನ್ನಡದ ಭಾಮಿನಿಷಟ್ಪದಿಯ ಬಂಧದಲ್ಲಿದ್ದರೆ ದಾಸರನ್ನು ಸ್ತುತಿಸಿರುವ ಇದೇ ಬಗೆಯ ಆರು ನುಡಿಗಳ ಇನ್ನೊಂದು ಕೃತಿ ಅಷ್ಟೇ ಸೊಗಸಾದ ಸಂಸ್ಕೃತ ಶ್ಲೋಕ ಬಂಧದಲ್ಲಿದೆ.

ಶ್ರೀವಾಣೀವಿಭವ ವಿಲಸತ್ಸಾಮ್ರಾಟ್ಕಿರೀಟೋಲ್ಲ
ಸನ್ನಾನಾರತ್ನಮರೀಚಿ ದೀಪ ಕಲಿಕಾನಿ ರಾಜಿತಾಂಘ್ರಿದ್ವಯ ಃ
ಸೀತಾನಾಥ ಪದಾಬ್ಜಲೀನ ವಿಮಲ ಸ್ವಸ್ವಾಂತ ಷಷ್ಪಂಧಯೋ
ಜೀಯಾತ್ಸಹೃದಯೈಕವೇದ್ಯ ತುಲಸೀರಾಮಾಖ್ಯ ಯೋಗೀಶ್ವರಃ ॥

ಮುಂತಾಗಿಸ್ತುತಿಸಿರುವ ವೇದಾಂತ ಶಿವರಾಮಶಾಸ್ತ್ರಿಗಳನ್ನು ತುಳಸಿರಾಮ ದಾಸರ ಹರಿಕಥಾಕೃತಿ 'ಶ್ರೀಮನ್ಮಹೀಶೂರ ವಾಸ್ತವ್ಯ ಬ್ರಹರ್ಷಿ ಬ್ರಾಹ್ಮಣವಂಶೋದ್ಭವ, ತಾರಕಸ್ಥಖ್ಯಮನಸ್ಕ, ಯೋಗಾತೀತ, ಸತ್ಯಾಸತ್ಯವಿವೇಕಜ್ಞಾನನಿಷ್ಠ, ಗರಿಷ್ಠತತ್ವಾನುಗತ, ಆಂಧ್ರ ಸಂಸ್ಕೃತ ಕರ್ಣಾಟಕಾದಿ ಭಾಷಾಪರಿಶ್ರಮಜನಿತ, ಸತ್ಕವಿತಾನಿಪುಣ, ಸರ್ವಭೂತಾಭೇದಜ್ಞಾನಧುರೀಣ, ಎಂದು ವಿಶೇಷವಾಗಿ ಉಲ್ಲೇಖಿಸಿದೆ. ಇಂತಹ ಬ್ರಹ್ಮಜ್ಞಾನಿಗಳಾಗಿದ್ದ, ಅದ್ವೈತವೇದಾಂತಿಗಳಾಗಿದ್ದ ಶಿವರಾಮಶಾಸ್ತ್ರಿಗಳು, ತುಳಸಿರಾಮದಾಸರಿಂದ ವೇದಾಂತಜ್ಞಾನವನ್ನು ಪಡೆದಿದ್ದಾರೆಂದರೆ ದಾಸರ ಆಧ್ಯಾತ್ಮಸಿದ್ಧಿ ಎಷ್ಟಿತ್ತೆಂಬುದನ್ನು ಊಹಿಸಬಹುದಾಗಿದೆ. ಈ ಶಿವರಾಮಶಾಸ್ತ್ರಿಗಳು, ತುಳಸಿರಾಮದಾಸರು ಆಗಾಗೆ, ಹೋಗಿ ತಂಗುತ್ತಿದ್ದ ದರಿಶಕುಪ್ಪದಲ್ಲಿ ಆಶ್ರಮವಾಸಿಗಳಾಗಿದ್ದದರೆಂದೂ ಅವರಿದ್ದ ತೋಟದ ಮನೆಯಲ್ಲಿ, ಅವರ

ಮಕ್ಕಳಿದ್ದರೆಂದೂ ಸ್ಥಳೀಯರು ಹೇಳುವುದನ್ನು ಇತ್ತೀಚಿನ ಕ್ಷೇತ್ರಭೇಟಿಯಲ್ಲಿ ಕಂಡುಬಂದಿದೆ.

೫೨೫ರಿಂದ ೫೨೮ರವರೆಗಿನ ನಾಲ್ಕುಕೃತಿಗಳು ದರಿಶಕುಪ್ಪಂ ವೆಂಕಟದಾಸರವು. ಇವರು ತುಳಸಿರಾಮದಾಸರ ಪ್ರಿಯಶಿಷ್ಯರಾಗಿದ್ದಂತೆ ತೋರುತ್ತದೆ. ಇವರು ದಾಸರಿಗೆ ಹತ್ತಿರದವರಾಗಿ ಸ್ವಕ್ಷೇತ್ರ ದರಿಶಕುಪ್ಪದಲ್ಲಿ ದಾಸರೊಂದಿಗೇ ಇದ್ದು ಸೇವೆ ಮಾಡುತ್ತಿದ್ದುದಾಗಿ ಹರಿಕಥಾಕೃತಿ ತಿಳಿಸುತ್ತದೆ. ದಾಸರನ್ನೇ ದೈವಸ್ವರೂಪದಲ್ಲಿ ಸ್ವೀಕರಿಸಿ ದಾಸರಲ್ಲೇ ಶರಣಾಗತಿ ಹೊಂದಿರುವ ಗುರುಮುಖೇನ ದೈವಸಾಕ್ಷಾತ್ಕಾರದ ಶ್ರೀವೈಷ್ಣವನಿಷ್ಠೆ ಇವರ ಸ್ತುತಿಗಳಲ್ಲಿ ಎದ್ದು ಕಾಣುತ್ತದೆ. ರಂಗಸ್ವಾಮಿ ದಾಸರ ಮೂಲಕ ದಾಸರ ಕೃಪೆಗೆ ಪಾತ್ರರಾಗಿರುವುದನ್ನು ತಮ್ಮ ಕೃತಿಗಳಲ್ಲಿ ಕೃತಜ್ಞತೆಯಿಂದ ಸ್ಮರಿಸಿದ್ದಾರೆ.

ಗುರುವರ ತುಳಸಿರಾಮ ದೇಶಿಕಸಾರ್ವಭೌಮ

ಗುರುರಾಯ ನೀ ಪದಕಂಜಮುಲ್ ನೆರನಮ್ಮಿತೀನನ್ನು ಬ್ರೋವರಾ (೫೨೮) ದಂತಹ ಕನ್ನಡ ತೆಲುಗು ಮಿಶ್ರಿತ ಕೃತಿಯೂ ಇವರ ರಚನೆಯಲ್ಲಿದೆ.

'ಶ್ರೀ ಶಠಗೋಪದಯಾಪಾತ್ರಂ ಶ್ರೀಮದ್ಗುರು ತುಲಸೀರಾಮಾರ್ಯಂ' (೫೨೯) ಎಂಬುದು ರಂಗಸ್ವಾಮಿದಾಸರ ಕೃತಿ. ಈ ರಂಗಸ್ವಾಮಿ ದಾಸರು ಮುಳಬಾಗಿಲಿನವರು. ಅಲ್ಲಿಯ ಭಾರ್ಗವರಾಮಭಜನಮಂದಿರದಲ್ಲಿ ದಾಸರ ತಿರುನಕ್ಷತ್ರ ಆಚರಿಸಿದ್ದ ಉಲ್ಲೇಖವಿದೆ. ದಾಸರ ಶಿಷ್ಯವರ್ಗದಲ್ಲಿ ಪ್ರಮುಖ ಪ್ರಭಾವಿ ಶಿಷ್ಯರಾಗಿದ್ದಂತೆ ಕಂಡುಬರುತ್ತದೆ. ದರಿಶಕುಪ್ಪ ವೆಂಕಟದಾಸರು ಮತ್ತು ಇನ್ನು ಕೆಲವರು ಈ ರಂಗಸ್ವಾಮಿದಾಸರ ಶಿಷ್ಯರಾಗಿದ್ದಾರೆ. ದಾಸರ ನಂತರ ಅವರ ಪರಂಪರೆಯನ್ನು ಮುಂದುವರಿಸಿ 'ರಾಮಕೋಟಿ' (ಅಖಂಡನಾಮಸ್ಮರಣೆ) ಭಜನೆಗಳನ್ನು ಆಚರಣೆಗೆ ತಂದಿದ್ದಾರೆ. ಮುಳಬಾಗಿಲಿನ ಭಜನಮಂದಿರ ಸ್ವತಃ ಇವರ ಆಸ್ತಿಯಾಗಿದ್ದು, ಅನಂತರ ಗುರುಗಳ ಸ್ಮರಣೆಯಲ್ಲಿ 'ತುಳಸಿರಾಮ ದೇವಾಲಯ'ವನ್ನಾಗಿಸಿದ್ದಾರೆ. ಇವರು ಗಾಣಿಗವರ್ಗದವರಾಗಿದ್ದು ಸು ೭೫ ಕೀರ್ತನೆಗಳನ್ನು ರಚಿಸಿದ್ದಾರೆ. ರಂಗಸ್ವಾಮಿದಾಸರ ಕೀರ್ತನೆಗಳಲ್ಲಿ ಸು. ೧೫ ಕನ್ನಡ

ಕೀರ್ತನೆಗಳಿವೆ. ಇವು ಈಚೆಗೆ ಇವರ ಪ್ರಶಿಷ್ಯರಾದ ಶ್ರೀ ಚೌಡಯ್ಯದಾಸರಿಂದ ದೊರಕಿದ್ದು, ಇವುಗಳನ್ನು ಸಂಪುಟ (ತಿಮ್ಮಪ್ಪದಾಸರ ಕೀರ್ತನೆಗಳು) ರಲ್ಲಿ ನೋಡಬಹುದು. ಹರಿಕಥಾ ಕೃತಿಯಲ್ಲಿ ಇವರು ತುಳಸಿ ರಾಮದಾಸರನ್ನು ಕುರಿತು ಸ್ತುತಿಸಿರುವ ನಾಲ್ಕು ಕೃತಿಗಳಿವೆ. ಮೇಲಿನ ಕೃತಿಯನ್ನು ಬಿಟ್ಟರೆ ಉಳಿದವು ತೆಲುಗಿನಲ್ಲಿದ್ದು. ಅವುಗಳ ಮೊದಲ ಸಾಲು ಹೀಗಿವೆ.

'ವಂದನ ಮುಲುಚೇತು ಮೀಪದ'
'ಶ್ರೀ ತುಳಸಿರಾಮ ಸದ್ಗುರುವರ್ಯ'
'ಆನಂದನಿಲಯ್ಯಾನು ನೆಂದು ಗಂದುನೀ'

ತುಳಸಿರಾಮದಾಸರು 'ಬೆಂಗಳೂರಿನ ಮಂಡಿಮೇಕಲ ಮಲ್ಲಯ್ಯ ಧರ್ಮಛತ್ರ, ದಲ್ಲಿದ್ದಾಗ ಬಂದು ಸೇವಿಸಿ ಅನುಗ್ರಹಪಡೆದು ಸ್ತುತಿಸಿದ ಕೀರ್ತನೆಗಳು' ಎಂದು ಇದಕ್ಕೆ ಟಿಪ್ಪಣಿಯೂ ಇದೆ.

ಈ ಕೃತಿಗಳಲ್ಲಿ ಶಠಗೋಪ (ನಮ್ಮಾಳ್ವಾರ್), ವರವೈಷ್ಣವಕುಲ, ರಹಸ್ಯಾರ್ಥ ಮುಂತಾದ ಶ್ರೀವೈಷ್ಣವ ಪರಿಭಾಷೆಗಳನ್ನು ಬಳಸಿಕೊಂಡು ದಾಸರ ಸಾಧನೆ ಸಿದ್ಧಿಗಳನ್ನು ಅತ್ಯಂತ ಸುಂದರವಾಗಿ ಸ್ತುತಿಸಲಾಗಿದೆ. 'ಭಕ್ತಿಜ್ಞಾನ ವೈರಾಗ್ಯ ಸುಬೋಧಂ ಭಕ್ತಪ್ರಿಯ ನಿಜದಾಸಶ್ರೇಷ್ಠಂ' ಎಂದು ತುಳಸಿ ರಾಮದಾಸರನ್ನು 'ದಾಸಶ್ರೇಷ್ಠ'ರನ್ನಾಗಿ ಗೌರವಿಸಲಾಗಿದೆ.

೫೩೦, ೫೩೧,೫೩೨ ಈ ಮೂರು ಕೀರ್ತನೆಗಳು ಚನ್ನಪಟ್ಟಣದ ಅಹೋಬಲದಾಸರವು. ದಾಸರನ್ನು ಕುರಿತು ಇನ್ನೂ ಹತ್ತು ಕೃತಿಗಳು ಇದೇ ಗ್ರಂಥದಲ್ಲಿರುವ ಇವರ ಕೀರ್ತನೆಗಳಲ್ಲಿವೆ. ಚನ್ನಪಟ್ಟಣದ ಅಹೋಬಲದಾಸರು ತುಳಸಿರಾಮದಾಸರ ಪ್ರಮುಖ ಶಿಷ್ಯರಾಗಿದ್ದು ಸು.೧೩೦ ಕೀರ್ತನೆಗಳನ್ನೂ ಒಂದು ವೇದಾಂತ ಕೃತಿಯನ್ನೂ ರಚಿಸಿರುವ ಶ್ರೀವೈಷ್ಣವ ಕೀರ್ತನಕಾರರಾಗಿದ್ದಾರೆ. ಈ ಮೂರೂ ಕೀರ್ತನೆಗಳು ಇವರ ಕೀರ್ತನೆಗಳ ಸಂಗ್ರಹದಲ್ಲಿಲ್ಲದ ತುಳಸಿರಾಮದಾಸರ ಹರಿಕಥಾ ಕೃತಿಯಲ್ಲಿರುವವು. ಈ ಹರಿಕಥಾ ಕೃತಿಯಲ್ಲಿ 'ಶ್ರೀರಂಗಪಟ್ಟಣದ ಕಾವೇರಿತೀರದ ಕಿರಂಗೂರುಸಮೀಪ ದಾಸರ ಸಂಸ್ಕಾರ ಸ್ಥಳದಲ್ಲಿ ಪ್ರಾತಃ ಭಜನೆಗಾಗಿ ಅನೇಕ ಭಜನಾವಳಿ ಕೀರ್ತನೆಗಳನ್ನೂ ರಚಿಸಿದ್ದಾರೆ. ಗುರುಭಕ್ತಿಯ ಅಮಲಿನಲ್ಲೇ

ತೇಲಿ ಅಲ್ಲೇ ಉಳಿದು ಗುರುಸಿದ್ಧಾಂತೋಪದೇಶ ಪಡೆದು ಅನೇಕ ತತ್ವಪದಗಳನ್ನು ರಚಿಸಿದ್ದಾರೆ.' ಎಂಬ ಟಿಪ್ಪಣಿಯಿದೆ. ಇವರ ಕೀರ್ತನೆಗಳ ಮುದ್ರಿಕೆಯೇ 'ಮದ್ಗುರು ತುಳಸಿರಾಮ'. ಇಷ್ಟರಮಟ್ಟಿಗೆ ಗುರುವಿನಿಂದ ಪ್ರಭಾವಿತರಾಗಿರುವ ಅಹೋಬಲದಾಸರು ನೇರವಾಗಿ ೧೪ ಕೀರ್ತನಗಳಲ್ಲಿ ಗುರುವನ್ನು ಸ್ತುತಿಸಿದ್ದರೂ ಪರೋಕ್ಷವಾಗಿ ಇನ್ನೂ ಅನೇಕ ಕೀರ್ತನೆಗಳಲ್ಲಿ ಗುರು ಸ್ತುತಿಯನ್ನು ಮಾಡಿದ್ದಾರೆ, ಗುರೂಪದೇಶಗಳನ್ನು ಸ್ಮರಿಸಿದ್ದಾರೆ. ಇವರ ಗ್ರಂಥ 'ವೇದಾಂತ ಸಿದ್ಧಾಂತವು' ಎಂಬುದು ಗುರೂಪದೇಶದ ಸಾರಸಂಗ್ರಹವೇ ಆಗಿದೆ.

ಗುರುಸೇವೆಯ ಮೂಲಕವೇ ದೈವಸಾಕ್ಷಾತ್ಕಾರ ಪಡೆದಿರುವ ಸಾಧಕರಿವರು. ಗುರುವಿನಲ್ಲೇ ದೈವವನ್ನು ಕಂಡುಕೊಂಡು ಗುರುಪಾದಸೇವೆಯನ್ನೇ ಮೋಕ್ಷದ ಮಾರ್ಗವನ್ನಾಗಿಸಿಕೊಂಡ ಪರಮಭಕ್ತರು.

'ಓಡಿತೆನ್ನಯ ಭವಗಳೆಲ್ಲವು ಕಂಡೆನಾ ನಿಜಗಂಡನಾ
ದೇಶಿಕೋತ್ತಮನಾದ ನಿಜಗುರು ದಾಸ ತುಳಸೀರಾಮನ
'ನಮಃ ಓನ್ನಮಃ ಮಮದೇಶಿಕ
'ಭುವನದೊಳಗೊಬ್ಬ ಶಿವಯೋಗಿನಾ ಕಂಡೆ'
'ವೇದಾಂತ ಗುರುಸಾರ್ವಭೌಮ'
'ನಿನ್ನೊಳಗಿರಿಸೆನ್ನ ಚಿತ್ತ'
'ಧ್ಯಾನಧಾರಣನಾಗಬೇಕಂತೆ'.

ಮುಂತಾದ ಹಲವು ಕೀರ್ತನೆಗಳಲ್ಲಿ ಗುರುವೇ ಸರ್ವಸ್ವ ಎಂಬ ಏಕಚಿತ್ತದ ದೈವೀಭಾವ ಅದ್ಭುತವಾಗಿ ಮೂಡಿಬಂದಿದೆ. ತುಳಸಿ ರಾಮದಾಸರು ಈ ದಾಸರ ಸ್ತುತಿಗಳಲ್ಲಿ 'ದೈವವೇ ಸರ್ವರೂಪವನು ಬಿಟ್ಟು ಅವತರಿಸಿರ್ಪ ಸತ್ಯ ಸ್ವರೂಪ'ರಾಗಿದ್ದಾರೆ. ಇದೇ ಬಗೆಯ ಧಾಟಿಯಲ್ಲಿಯೇ ದರಿಶಕುಪ್ಪ ಕೃಷ್ಣದಾಸರು ('ಚರಣಸೇವೆಯ ಬೇಡುವೆ ಗುರು ತುಳಸಿರಾಮನ') ಮುಳಬಾಗಿಲು ವಿಠಲಂ ಮುನಿಸ್ವಾಮಾಚಾರ್ಯರು ('ಶ್ರೀ ತುಲಸಿರಾಮಾರ್ಯ ನಮೋಸ್ತುತೇ ನಿತ್ಯತೃಪ್ತ ನಿರ್ಲಿಪ್ತನಮೋಸ್ತುತೇ') ಮುಂತಾದ ಇನ್ನೂ ಅನೇಕ ಶಿಷ್ಯರು ತುಳಸಿರಾಮ ದಾಸರನ್ನು ಸ್ತುತಿಸಿದ್ದಾರೆ.

ಹೀಗೆ ಅನೇಕ ಶಿಷ್ಯರುಗಳಿಂದ ದೈವೀಸ್ವರೂಪದಲ್ಲಿ ಸ್ತುತಿಸಲ್ಪಟ್ಟಿರುವ ತುಳಸಿರಾಮದಾಸರು ಹತ್ತೊಂಬತ್ತನೇ ಶತಮಾನದ ಕೊನೆಯ ದಶಕಗಳಲ್ಲಿ ಮೈಸೂರು ಪ್ರಾಂತ್ಯದಲ್ಲಿ ಜನಸಾಮಾನ್ಯರಲ್ಲಿ ಆಧ್ಯಾತ್ಮಿಕ ಕ್ರಾಂತಿಯನ್ನೇ ಮೂಡಿಸಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಬದುಕಿರುವಾಗಲೇ ಹೀಗೆ ದೈವತ್ವಕ್ಕೆ ಏರುವ ಸ್ಥಾನ ಸುಲಭಕ್ಕೆ ಯಾರಿಗೂ ಲಭ್ಯವಾಗುವುದಿಲ್ಲ. ಅಂತಹ ಅವತಾರ ಪುರುಷರಾಗಿ ಮೆರೆದ ತುಳಸಿರಾಮದಾಸರು ನಿಜಕ್ಕೂ 'ದಾಸಶ್ರೇಷ್ಠ' ರೆಂದರೆ ಉತ್ಪ್ರೇಕ್ಷೆಯಾಗದು. ವೈದಿಕೇತರ ವರ್ಗದಲ್ಲೂ ಹರಿದಾಸ ಜಾಗೃತಿ ಮೂಡಿಸಿದ ವಿಶಿಷ್ಟ ಆಂದೋಲನಕಾರರೂ ಆಗಿರುವ ಇವರನ್ನು ವಿಶೇಷ ಅಧ್ಯಯನಕ್ಕೆ ಒಳಪಡಿಸಬೇಕಾದ ಅಗತ್ಯವಿದೆ.

(೪) ಕೀರ್ತನೆಗಳ ಆಕರ

ದಾಸರ ಕೀರ್ತನೆಗಳಿಗೆ 'ಶ್ರೀ ತುಲಸಿರಾಮದಾಸು ಕೀರ್ತನಲು' ಎಂಬ ತೆಲುಗುಭಾಷೆ ಕನ್ನಡಲಿಪಿಯ ಮುದ್ರಿತ ಗ್ರಂಥವನ್ನು ಮತ್ತು ಇನ್ನೊಂದು ಮುದ್ರಿತ ತೆಲುಗು ಕೃತಿ 'ಶ್ರೀತುಲಸಿರಾಮುದಾಸುಲವಾರಿ ಚರಿತ್ರಮು' ಎಂಬ ಹರಿಕಥಾಕೃತಿಯನ್ನು ಸ್ವೀಕರಿಸಿದೆ. ಮೊದಲನೆಯದು, ೧೬೪ ಪುಟಗಳ ಡೆಮಿ ಅಷ್ಟದಳಾಕಾರದಲ್ಲಿರುವ ಪುಸ್ತಕ. ಇದರ ಕೊನೆಯಲ್ಲಿ 'ಶ್ರೀ ವೆಂಕಟೇಶ್ವರ ಪ್ರೆಸ್ ಬೆಂಗಳೂರು ಸಿಟಿ' ಎಂದು ಮುದ್ರಕರ ಉಲ್ಲೇಖವಿದೆಯಾದರೂ ಅದರ ವಿಳಾಸ ದೊರಕುವುದಿಲ್ಲ. ಆರಂಭದ ಪುಟವಿಲ್ಲ. (ಎರಡನೆಯ ಚರಿತ್ರ ಗ್ರಂಥವೂ ಇದರೊಂದಿಗೇ ಬೈಂಡಾಗಿ ಒಂದೇ ಪುಸ್ತಕದಂತಿದೆ.) ಮೊದಲ ೨೦ ಪುಟಗಳಲ್ಲಿ ಪರಿವಿಡಿ ಮತ್ತು ಒಪ್ಪೋಲೆಗಳಿದ್ದು ಇದು ಮಾತ್ರ ತೆಲುಗು ಲಿಪಿಯಲ್ಲಿಯೇ ಇದೆ. ಈ ಪರಿವಿಡಿಯಲ್ಲಿ ಕೀರ್ತನೆಗಳು ಅಕಾರಾದಿಯಾಗಿದ್ದು ಎರಡೂ ಗ್ರಂಥಗಳಲ್ಲಿರುವ ಒಟ್ಟು ೩೩೧ ಕೀರ್ತನೆಗಳನ್ನು ಒಳಗೊಂಡಿದೆ. ಇದರಲ್ಲಿ ೨೭೪ ಕೀರ್ತನೆಗಳೂ ದಾಸರ ಇತರ ೫ ಕೃತಿಗಳೂ ಇವೆ. ಎಲ್ಲ ಕೀರ್ತನೆಗಳಿಗೂ ರಾಗ-ತಾಳಸೂಚನೆಗಳೂ ಇವೆ. ಮುದ್ರಣ ವರ್ಷ ಲಭ್ಯವಿಲ್ಲ.

ಎರಡನೆಯದು, ದಾಸರನ್ನು ಕುರಿತ ಹರಿಕಥಾಕೃತಿಯಾಗಿದೆ. ಇದು ಸಂಪೂರ್ಣತೆಲುಗು ಕೃತಿಯಾಗಿದೆ. ದಾಸರ ಕೀರ್ತನೆಗಳು ಮತ್ತು ದಾಸರನ್ನು

ಕುರಿತು ಶಿಷ್ಯರು, ಇತರರು ಬರೆದಿರುವ ಕೀರ್ತನೆಗಳನ್ನು ಆಧರಿಸಿ ದಾಸರು ಬೆಂಗಳೂರಿನಲ್ಲಿ ನಡೆಸಿದ ಪವಾಡ ಸದೃಶ ಜೀವನ ಚರಿತ್ರೆಯನ್ನು ಈ ಕೃತಿಯಲ್ಲಿ ಹಿಡಿದಿಡಲಾಗಿದೆ. ದಾಸರನ್ನು ಕುರಿತ ಹಾಡುಗಳಿಗೂ ದಾಸರ ಜೀವನ ಚರಿತ್ರೆಗೂ ಈ ಹರಿಕಥಾ ಕೃತಿಯನ್ನೇ ಮುಖ್ಯವಾಗಿ ಬಳಸಿಕೊಂಡಿದೆ. ಇದರಲ್ಲಿಯೂ ಮೊದಲ ಮತ್ತು ಕೊನೆಯ ಪುಟಗಳಿಲ್ಲ. ಈ ಕೃತಿಯನ್ನು ರಚಿಸಿರುವವನು 'ಕಾಹಾಳ ಭೈರವ ಕವಿ'. 'ಭದ್ರಾಚಲ ರಾಮದಾಸ ಚರಿತ್ರೆಯನ್ನು ಸಿಂಗರಿದಾಸ ಗ್ರಂಥಮಾಡಿದಂತೆ ಈ ತುಳಸಿರಾಮದಾಸಚರಿತ್ರೆಯನ್ನು ಕಾಹಾಳ ಭೈರವಕವಿ ಆಚಂದ್ರಾರ್ಕತಾರ ಸ್ಥಿರವಾಗಿರುವಂತೆ ಶಾಶ್ವತವಾದ ತಾರಕೋಪಾಸನೆಗಾಗಿ, ಎಂದು ರಚಿಸಿದ್ದಾನೆ. ಇದರ ಮುನ್ನುಡಿಯ ರೂಪದ ಪುಟಕ್ಕೆ (ಮೊದಲ ೭ ಪುಟ ಇಲ್ಲ.) 'ಮಳಿಗೆರಂಗಸ್ವಾಮಿ ಮುಳಬಾಗಿಲು, ಬಾರಾಮಾರ್ಗದಲ್ಲಿ ಶ್ರೀನಿವಾಸದಾಸ ಪ್ರಕಾಶಿಸಿದ್ದಾನೆ' ಎಂದು ಉಲ್ಲೇಖ ದೊರಕುತ್ತದೆ. 'ಚನ್ನಪಟ್ಟಣದ ನರಸಿಂಹಯ್ಯನ ಮಗ ರಾಮಯ್ಯ ಪಿತೃಸಂಕಲ್ಪ ಪರಿಪಾಲನೆಗಾಗಿ ಈ ಗ್ರಂಥಗಳನ್ನು ಸಾವಿರ ಪ್ರತಿಗಳಲ್ಲಿ ಮುದ್ರಣ ಮಾಡಿಸಿದ'ನೆಂದೂ ತಿಳಿದು ಬರುತ್ತದಾದರೂ ಮುದ್ರಣ ವರ್ಷ ಲಭ್ಯವಿಲ್ಲ. ಈ ಎರಡೂ ಗ್ರಂಥಗಳು ಸೇರಿ ಬೈಂಡಾಗಿರುವ ಸುಸ್ಥಿತಿಯಲ್ಲಿದ್ದ ಪುಸ್ತಕ ಚನ್ನಪಟ್ಟಣದ ತುಳಸಿರಾಮದಾಸರ ಶಿಷ್ಯಪರಂಪರೆಯವರಾದ ಬಣಜಿಗ ವಂಶಸ್ಥರೂ ತುಳಸಿರಾಮದಾಸರು ಚನ್ನಪಟ್ಟಣದಲ್ಲಿ ಸ್ಥಾಪಿಸಿರುವ ಭಾರ್ಗವರಾಮ ಭಜನ ಮಂದಿರದ ಈಗಿನ ಮೇಲ್ವಿಚಾರಕರೂ ಆದ ರಾಮಣ್ಣದಾಸರ ಮನೆಯಲ್ಲಿ ದೊರೆತಿದ್ದು ಅದರ ಜೆರಾಕ್ಸ್ ಪ್ರತಿಯನ್ನು ಬಳಸಿಕೊಳ್ಳಲಾಗಿದೆ.

ಶ್ರೀ ರಾಮಣ್ಣದಾಸರು 'ದಾಸ ಬಣಜಿಗ' ವರ್ಗಕ್ಕೆ ಸೇರಿದವರು ಸುಮಾರು ೭೫ ವರ್ಷದವರಾಗಿದ್ದು ದಾಸವೃತ್ತಿಯನ್ನೇ ಜೀವನಾಧಾರವಾಗಿ ಸ್ವೀಕರಿಸಿ ಬಾಳಿದವರು. ಇಳಿವಯಸ್ಸಿನಲ್ಲೂ ಸೈಕಲ್ಲಿನಲ್ಲೆ ಓಡಾಡುತ್ತ ಭಜನೆ, ಕೀರ್ತನೆಗಳನ್ನು ಮಾಡುತ್ತಾರೆ (ಈಚೆಗೆ ನಿಧನರಾಗಿದ್ದಾರೆ). ಇವರು ಹಾಡುವ ಕೀರ್ತನೆಗಳೆಲ್ಲ ತುಳಸಿರಾಮದಾಸರವು. ಇವರ ತಂದೆ ತುಳಸಿರಾಮದಾಸರ ಶಿಷ್ಯಪರಂಪರೆಯವ-ರಾಗಿದ್ದು ತುಳಸಿರಾಮದಾಸರನ್ನೂ ಚನ್ನಪಟ್ಟಣದ ಅಹೋಬಲದಾಸರನ್ನೂ ನೋಡಿದ್ದರೆಂದೂ ಅವರ ಬಗ್ಗೆ ಹೇಳುತ್ತಿದ್ದರೆಂದೂ ಸ್ಮರಿಸಿಕೊಳ್ಳುತ್ತಾರೆ. ಇವರು

ತಂದೆಯವರ ಶಿಷ್ಯರಾಗಿ ಈ ಶಿಷ್ಯಪರಂಪರೆಯಲ್ಲಿ ಮುಂದುವರಿದಿದ್ದಾರೆ. ಚನ್ನಪಟ್ಟಣದಲ್ಲಿ ಇವರ ಮನೆಯನ್ನು 'ದಾಸರ ಮನೆ' ಎಂದೇ ಗುರುತಿಸಲಾಗುತ್ತಿದೆ. ಈ ಪರಂಪರೆಯ ದಾಸರುಗಳ ಹಾಡುಗಳ ಹಾಡುಗಾರಿಕೆಯ ಸಂಪ್ರದಾಯದವನ್ನು ಇವರು ಉಳಿಸಿಕೊಂಡು ಬಂದಿದ್ದಾರೆ.

ಇತ್ತೀಚೆಗೆ ಪರಿಚಿತರಾದ ಚೌಡಯ್ಯದಾಸರು ನೇಯ್ಗೆ ಮತಸ್ಥರು. ದಾಸದೀಕ್ಷ ಪಡೆದಿರುವ ತುಳಸಿರಾಮದಾಸರ ಶಿಷ್ಯಪರಂಪರೆಯವರು. (ಇವರ ಮೂಲಕ ಮೂಲಬಾಗಿಲಿನಲ್ಲಿ ರಂಗಸ್ವಾಮಿದಾಸರು ಸ್ಥಾಪಿಸಿರುವ ತುಳಸಿ ರಾಮಾಲಯ ದೇವಸ್ಥಾನದ ಪರಿಚಯವಾಗಿ ಆ ಸಮಿತಿಯವರ ಮೂಲಕ ಈಚೆಗೆ (೮.೨.೨೦೦೪) ತುಳಸಿರಾಮದಸರ ಶತಮಾನೋತ್ಸವವನ್ನು ನಡೆಸಲಾಯಿತು.) ಈ ಚೌಡಯ್ಯ ದಾಸರ ನೆನಪುಗಳು ಮತ್ತು ಇವರು ಪ್ರಕಟಿಸಿರುವ ದಾಸರ ಹಾಡುಗಳ ಪುಸ್ತಕದಲ್ಲಿನ ಮಾಹಿತಿಗಳನ್ನೂ ಇಲ್ಲಿ ಬಳಸಿ ಕೊಳ್ಳಲಾಗಿದೆ.

೪. ರಂಗದಾಸರು

ರಂಗದಾಸರು ೧೯ನೇ ಶತಮಾನದ ಶ್ರೀವೈಷ್ಣವ ಹರಿದಾಸ ಸಾಹಿತ್ಯದಲ್ಲಿ ಮುಖ್ಯ ಹರಿದಾಸರಾಗಿ ಕಾಣಿಸಿಕೊಂಡಿದ್ದಾರೆ. ಅಂತರಂಗಭಕ್ತರಾಗಿ ಆರಾಧ್ಯದೈವ-ದಲ್ಲೇ ಶರಣಾಗತಿ ಸ್ವೀಕರಿಸಿ ಸ್ವಯಂಸಾಧನೆಯಿಂದ ಆಧ್ಯಾತ್ಮ ಸಿದ್ಧಿಯನ್ನು ಪಡೆದು ಹಲವು ಕೃತಿಗಳ ಮೂಲಕ ಅದನ್ನು ಸಮರ್ಥವಾಗಿ ಅಭಿವ್ಯಕ್ತಿಸಿರುವ ಪರಮ ಭಕ್ತರೆನಿಸಿದ್ದಾರೆ.

(೧) ಜೀವನ ವಿವರ

ಕವಿಯ ಹೆಸರು 'ರಂಗದಾಸ' ಎಂದೇ ಅವರ ಕೃತಿಗಳಲ್ಲೂ ಪ್ರಚಲಿತವಾಗಿದೆ. ರಂಗದಾಸರು ತಮ್ಮನ್ನು ತಮ್ಮ ಕೃತಿಗಳಲ್ಲಿ 'ಶ್ರೀ ಗುರುರಂಗೇಶ ಧ್ಯಾನಾಂತರಂಗ ಪುಂಗವ' ಎಂದು ವಿಶೇಷೀಕರಿಸಿಕೊಂಡಿದ್ದಾರೆ. ಇದು ಅವರ ಆಧ್ಯಾತ್ಮಿಕ ಸಾಧನೆಯ ದ್ಯೋತಕವಾದ ವ್ಯಕ್ತಿಗತ ಬಿರುದೆ ವಿನಾ ಅವರ ಹೆಸರೆಂದು

ಹೇಳಬರುವುದಿಲ್ಲ. ರಂಗದಾಸರು ತುಮಕೂರು ತಾಲೂಕು ಊರ್ಡಿಗೆರೆ ಹೋಬಳಿಯಲ್ಲಿರುವ 'ಮಾದಗೋನಹಳ್ಳಿ' (ಮಾದಗೊಂಡನಹಳ್ಳಿ) ಯವರಾಗಿದ್ದಾರೆಂಬುದನ್ನು ಅವರೇ ದಾಖಲಿಸಿದ್ದಾರೆ. ಇಲ್ಲಿಯ ರಂಗನಾಥ ದೇವಾಲಯದ ಅರ್ಚನೆ ರಂಗದಾಸರ ವೃತ್ತಿ. ಇವರ ವಂಶಸ್ಥರೇ ಇಂದಿಗೂ ಈ ದೇವಾಲಯ ಮತ್ತು ಸುತ್ತಮುತ್ತಲ ಹಳ್ಳಿಗಳ (ಆಲೇನಹಳ್ಳಿ, ಪೆಮ್ಮನಹಳ್ಳಿ ಮುಂತಾದುವು) ವಿಷ್ಣು ದೇವಾಲಯಗಳ ಪೂಜಾ ಕೈಂಕರ್ಯವನ್ನು ನಡೆಸಿಕೊಂಡು ಬರುತ್ತಿದ್ದಾರೆ. ದಾಸರು ಶ್ರೀವತ್ಸ– ಗೋತ್ರೋದ್ಭವರಾಗಿದ್ದು ವಿಶಿಷ್ಟಾದ್ವೈತ ತೆಂಗಲೆ ಸಂಪ್ರದಾಯಕ್ಕೆ ಸೇರಿದ ಉಡೈಯರ್ ರಾಮಾನುಜಮತ ಪರಂಪರೆಯವರಾಗಿದ್ದಾರೆ.

ದಾಸರ ಕಾಲವನ್ನು ಕುರಿತಂತೆ ಆಂತರಿಕ ಮತ್ತು ಬಾಹ್ಯ ಆಧಾರಗಳಿಂದ ಕ್ರಿ.ಶ ಸು.೧೮೩೦ ರಿಂದ ೧೯೧೦ ಎಂದು ನಿರ್ಧರಿಸಲಾಗಿದೆ. ಕೀರ್ತನಕಾರರ ಯಾವ ಕೃತಿಗಳಲ್ಲೂ ಈ ಬಗ್ಗೆ ಖಚಿತ ಉಲ್ಲೇಖಗಳಿಲ್ಲ. ಅವರ ಕೃತಿಗಳೆಲ್ಲ ೧೮೯೭ರಿಂದ ೧೯೦೪ರ ನಡುವೆ ಪ್ರಕಟವಾಗಿವೆ. ೧೯೦೪ರ ಕೃತಿಯಲ್ಲಿನ 'ದೇಹಾಲಸ್ಯವುಳ್ಳವನಾಗಿ ಸದ್ಯಕ್ಕೆ ವಿರಾಮ ಹೊಂದಿದವನಾದ ನಾನು'ಎಂಬ ಹೇಳಿಕೆಯ ಹಿನ್ನೆಲೆಯಲ್ಲಿ ಆ ವೇಳೆಗೆ ಅವರ ಕಾರ್ಯಕಲಾಪ ಪೂರ್ಣಗೊಂಡಿರುವಂತೆ ಭಾವಿಸಬಹುದಾಗಿದೆ. ಇದನ್ನು ಬಿಟ್ಟರೆ ಬೇರೆ ಯಾವ ಸುಳಿವೂ ಲಭ್ಯವಾಗುವುದಿಲ್ಲ. ದಾಸರನ್ನು ನೋಡಿರುವ ಒಬ್ಬರೇ ಒಬ್ಬರು ಇದ್ದುದನ್ನು ಪತ್ತೆ ಹಚ್ಚಿ ಅವರ ನೆನಪಿನ ಆಧಾರಗಳ ಹಿನ್ನೆಲೆಯಲ್ಲಿ ಅವರ ಕಾಲವನ್ನು ನಿರ್ಧರಿಸಲಾಗಿದೆ. 'ಈಗ ೯೪ನೇ ವರ್ಷದಲ್ಲಿರುವ ಅವರು ತಮ್ಮ ಹತ್ತನೇ ವರ್ಷದಲ್ಲಿ ದಾಸರನ್ನು ನೋಡಿರುವುದನ್ನು ಗಮನಿಸಿದರೆ, ೧೯೧೦ರ ಸುಮಾರಿನಲ್ಲಿ ಅವರು ದೈವಾಧೀನರಾಗಿರಬಹುದೆಂದು ಸು. ಎಂಬತ್ತು ವರ್ಷಗಳು ಅವರು ಜೀವಿಸಿದ್ದರೆಂಬ ಅಭಿಪ್ರಾಯದ ಬಲದಿಂದ ಕ್ರಿ.ಶ. ೧೮೩೦ರ ಸುಮಾರಿನಲ್ಲಿ ಅವರು ಹುಟ್ಟಿರಬಹುದೆಂದೂ ಊಹಿಸಬಹುದಾಗಿದೆ.' (ರಂಗದಾಸರ ಕೀರ್ತನೆಗಳು. ಪೀಠಿಕೆ ೧೯೯೪) ಈ ಬಗ್ಗೆ ಇನ್ನೂ ನಿಖರವಾದ ಮತ್ತು ಖಚಿತವಾದ ಸಾಕ್ಷ್ಯಗಳನ್ನು ಸಂಗ್ರಹಿಸಿ ನಿರ್ಧರಿಸಬೇಕಾಗಿದೆ. ದಾಸರು ಅನೇಕ ವ್ಯಕ್ತಿ, ಮಠಗಳೊಂದಿಗೆ ಪತ್ರವ್ಯವಹಾರ ನಡೆಸಿದ್ದು, ಆ ದಾಖಲೆಗಳನ್ನೂ ಪರಿಶೀಲಿಸುವ ಅಗತ್ಯವಿದೆ. ಆವರೆವಿಗೂ ಸಂಪಾದಕರು ನಿರ್ಧರಿಸಿರುವ ಕಾಲವನ್ನೇ ದಾಸರ ಕಾಲವೆಂದು ಸ್ವೀಕರಿಸಲು ಅಡ್ಡಿಯಿಲ್ಲ.

ರಂಗದಾಸರು ಜೀವನ ಪೂರ್ತಿ ತಮ್ಮ ಅಧಿದೈವವೂ ಇಷ್ಟದೈವವೂ ಆದ ಮಹದೇವಪುರರಂಗ' (ರಂಗನಾಥಸ್ವಾಮಿ) ನನ್ನು ಪೂಜಿಸುತ್ತಾ, ಧ್ಯಾನಿಸುತ್ತಾ, ಸ್ತುತಿಸುತ್ತ ಆರಾಧನಾಕೈಂಕರ್ಯದಲ್ಲೇ ಕಳೆದಂತೆ ಭಾಸವಾಗುತ್ತದೆ. ವಿಶಿಷ್ಟಾದ್ವೈತ ಗ್ರಂಥಗಳ ಅಧ್ಯಯನ, ಅನುಷ್ಠಾನ, ಮನನ ಮುಂತಾಗಿ ಸ್ವಯಂ ಅಧ್ಯಯನಶೀಲರಾಗಿದ್ದಂತೆಯೂ ತೋರುತ್ತದೆ. ಇವರ ಕೃತಿಗಳಲ್ಲಿ ರಂಗನಾಥನೇ ಗುರುವೂ ದೈವವೂ ಆಗಿ ಸ್ತುತಿಸಲ್ಪಟ್ಟಿದ್ದಾನೆ. ಯಾವೊಬ್ಬ ಗುರುವಿನ ಬಳಿಯೂ ಶಿಷ್ಯವೃತ್ತಿಯನ್ನು ಸ್ವೀಕರಿಸಿರುವಂತೆ ಕಂಡುಬರುವುದಿಲ್ಲ. ಇವರ ವಂಶಸ್ಥರು ತಿಳಿಸುವಂತೆ ಇವರ ಬಳಿಯಿದ್ದ ಅಪಾರ ಧಾರ್ಮಿಕ ಗ್ರಂಥಗಳು ಬಹುದೊಡ್ಡ ಜಾಕಾಯಿ ಪೆಟ್ಟಿಗೆಯಲ್ಲಿದ್ದು, ಗೆದ್ದಲು, ಜಿರಲೆ, ಮಳೆಯಿಂದ ದಿನೇ ದಿನೇ ನಾಶವಾದವು. ಇವರನ್ನು ನೋಡಿದ, ಇವರ ಮನೆಯಲ್ಲಿಯೇ ಒಂದೆರಡು ವರ್ಷ ವಿದ್ಯಾಭ್ಯಾಸ ಮಾಡಿದ್ದ ಬೆಂಗಳೂರಿನ ಲಗ್ಗೆರೆಯ ವೆಂಕಟೇಶಯ್ಯಂಗಾರರೂ (ಇವರೂ ಶತಾಯುಷಿಗಳಾಗಿ ಈಚೆಗೆ ನಿಧನರಾಗಿದ್ದಾರೆ) ಈ ಮಾತನ್ನು ಧೃಢಪಡಿಸಿರುವುದರಿಂದ ಇವರು ಜ್ಞಾನಸಂಪಾದನೆಗಾಗಿ ಅನೇಕ ಗ್ರಂಥಗಳನ್ನು ಅಧ್ಯಯನ ಮಾಡಿದ್ದರೆಂದು ಸುಲಭವಾಗಿ ಊಹಿಸಬಹುದು. ಇವರ ಒಂದು ಗ್ರಂಥವಾದ 'ನಾನಾಮತೋತ್ಪತ್ತಿ ಸಿದ್ಧಾಂತ ಸುಧಾರಸ' ಬೃಹದ್ಗ್ರಂಥವಾಗಿದ್ದು ವೇದ, ಉಪನಿಷತ್ತು, ಆಗಮ ಮತ್ತು ಅನೇಕ ಧಾರ್ಮಿಕ ಗ್ರಂಥಗಳ ಉಲ್ಲೇಖಗಳನ್ನು ಒಳಗೊಂಡಿರುವುದನ್ನು ನೋಡಿದರೆ ಈ ಮಾತು ನಿಜವೆನಿಸುತ್ತದೆ.

'ಜನ್ಮ ಪ್ರಭೃತಿ ಸ್ವಮತ ಪ್ರದರ್ಶನಕ್ಕಾಗಿಯೇ ತೊಳಲಿ ಬಳಲುವ ಈ ಭಗವದ್ದಾಸ' ಎಂಬ ದಾಸರ ಹೇಳಿಕೆಯು ದಾಸರ ಜೀವನ ಸ್ವರೂಪದ ಮೇಲೆ ಬೆಳಕು ಚೆಲ್ಲಬಲ್ಲುದಾಗಿದೆ. ಇವರು ಅನೇಕ ಮಠಗಳೊಂದಿಗೆ ನಡೆಸಿರುವ ಪತ್ರವ್ಯವಹಾರ ಈ ಉದ್ದೇಶವನ್ನು ಹೊಂದಿದ್ದ , ಅವುಗಳಲ್ಲಿಯೂ ಅವರ ಜೀವನಕ್ಕೆ ಸಂಬಂಧಿಸಿದ ಅಂಶಗಳು ಕಂಡುಬರುತ್ತಿವೆ. ದಾಸರನ್ನು ಅವರ ಇಳಿಗಾಲದಲ್ಲಿ ನೋಡಿರುವ ಅಯ್ಯಂಗಾರ್ಯರು ಅವರ ಒಂದು ಚಿತ್ರವನ್ನು ಹೀಗೆ ನೆನಪಿಸಿಕೊಳ್ಳುತ್ತಾರೆ. ಸುಮಾರು ೫.೫ ಅಡಿಯ ಉದ್ದನೆಯ ನಿಲುವಿನ, ಕೋಲು ಮುಖದವುಧ್ಯವು ಕಾಯದವರಾಗಿದ್ದ ರಂಗದಾಸರು ಎಣ್ಣೆಗೆಂಪಿನ ಬಣ್ಣದಿಂದಿದ್ದರು. ಉದ್ದನೆಯ ಗಡ್ಡವನ್ನು ಬೆಳೆಸಿಕೊಂಡು, ತಲೆಗೂದಲನ್ನು ಉದ್ದಕ್ಕೆ ಬಿಟ್ಟು ಸದಾ ಊರ್ಧ್ವ

ಪುಂಡ್ರಧಾರಿಗಳಾಗಿ ತಪಸ್ವಿಗಳಂತೆ ಕಾಣುತಿದ್ದರು. ಬಿಳಿಯ ಮೇಲುಕೋಟೆ ಅಂಚಿನ ಕಚ್ಚೆಪಂಚೆಯನ್ನು, ಮೇಲುಹೊದಿಕೆಯನ್ನು ಹಾಕುತ್ತಿದ್ದರು. ಸದಾ ತಮ್ಮ 'ಮಠದ ಮನೆ'ಯಲ್ಲಿ ಇದ್ದುಕೊಂಡು ಗ್ರಂಥಾಧ್ಯಯನ, ದೇವತಾಸ್ತೋತ್ರ ಪಠನಗಳಲ್ಲಿ ಕಾಲಕಳೆಯುತ್ತಿದ್ದರು'. ಎಂಬುದು ರಂಗದಾಸರ ಆಧ್ಯಾತ್ಮಿಕ ಸಿದ್ಧಿಯ ಸಾಕಾರರೂಪವೇ ಆಗಿದೆ. 'ಮಠದ ಮನೆ' ಎಂಬುದು ಮಾದಗೊಂಡನಹಳ್ಳಿಯ ರಂಗನಾಥ ಸ್ವಾಮಿಯ ದೇವಾಲಯದ ಪೌಳಿಯಲ್ಲೇ ಇದ್ದ ಒಂದು ಮಂಟಪ, ಅದರಲ್ಲೇ ಅವರು ವಾಸವಾಗಿದ್ದರೆಂದು ಪ್ರತೀತಿ. ಇಂದಿಗೂ ಈ ಮಂಟಪವನ್ನು ಅಲ್ಲಿ ಉಳಿಸಿಕೊಂಡು ಬರಲಾಗಿದೆ. ಹಿಂದೆ ಇದ್ದ ಮಂಟಪಸಾಲು ಇಂದು ಇಲ್ಲವಾಗಿ ದೇವಾಲಯವನ್ನು ಪುನಃ ನಿರ್ಮಿಸಿದ್ದರೂ ಅಲ್ಲಿಯ ಜನ ಈ 'ಮಠದ ಮನೆ'ಯನ್ನು ಉಳಿಸಿ ಕೊಂಡಿರುವುದು ರಂಗದಾಸರ ಸಾಧಕ ಜೀವನದ ಪ್ರಭಾವವನ್ನು ಹೇಳುತ್ತದೆ.

ರಂಗದಾಸರ ಕುಟುಂಬದ ವಿವರದ ಬಗ್ಗೆ ಅವರ ವಂಶಸ್ಥರಾಗಿ ಉಳಿದಿರುವ ವರಲ್ಲಿಯೂ ದಾಖಲೆಗಳಿಲ್ಲ. ಮನೆತನದ ತರ್ಪಣವಿಧಿಯಲ್ಲಿ ಪ್ರಪಿತಾಮಹಾವರ್ಗ ದಲ್ಲಿ ದಾಸರ ಹೆಸರೊಂದೇ ಪ್ರಚಲಿತವಿದೆ. ಅವರ ಕೀರ್ತನೆಗಳಲ್ಲಾಗಲಿ, ಕೃತಿಗಳಲ್ಲಾಗಲಿ ಎಲ್ಲಿಯೂ ಸುಳಿವು ಸಿಕ್ಕುವುದಿಲ್ಲ. ಹೀಗಾಗಿ ದಾಸರ ತಂದೆ-ತಾಯಿಗಳು ಹೆಂಡತಿ-ಮಕ್ಕಳು ಯಾರ ಹೆಸರೂ ಉಪಲಬ್ಧವಿಲ್ಲ. ಕೀರ್ತನೆಗಳ ಸಂಕಲನಾಕಾರರು ವಂಶಸ್ಥರ ಮೂಲಕ ಪಡೆದಿರುವ ಮಾಹಿತಿಯಿಂದ ದಾಸರ ವಂಶಸ್ಥರನ್ನು ನಿರ್ಧಾರಿಸಿದ್ದಾರೆ. ರಂಗದಾಸರ ತಂದೆ ತಾಯಿಗಳ ಬಗ್ಗೆ ಮಾಹಿತಿ ಲಭ್ಯವಿಲ್ಲ ಆದರೆ ಅಪ್ಪಾಜಪ್ಪ (ಇದು ರೂಢಿನಾಮ, ನಿಜನಾಮ ಗೋಚರವಾಗಿಲ್ಲ) ಎಂಬ ಒಬ್ಬರೆ ತಮ್ಮಂದಿರಿದ್ದರು. ಇವರಿಗೆ ನಾಲ್ಕು ಜನ ಗಂಡು ಮಕ್ಕಳು. ಇವರ ಕುಟುಂಬಗಳೊಂದಿಗೆ ತುಂಬು ಸಂಸಾರ, ಆಧ್ಯಾತ್ಮಸಾಧನೆ, ಶಾನಭೋಗಿಕೆಯಿದ್ದ ಗೌರವಸ್ಥ ಮನೆತನವಾಗಿತ್ತು. ಕುದುರೆ ಸವಾರಿ ಮಾಡುತ್ತ ಠಾಕುಟೀಕಾಗಿದ್ದ ತಮ್ಮನೂ ತನ್ನ ಕಣ್ಮುಂದೆಯೇ ಕಾಲವಾದ ಮೇಲೆ ತರುಣದಲ್ಲೆ ಹೆಂಡತಿಯನ್ನು ಕಳೆದುಕೊಂಡು ವಿರಕ್ತರಾಗಿದ್ದ ದಾಸರು ಸಂಪೂರ್ಣವಾಗಿ ಸಂಸಾರತ್ಯಾಗ ಮಾಡಿ ಶರಣಾಗತಿ ಸ್ವೀಕರಿಸಿ ನೆಪಕ್ಕೆ ಮಾತ್ರ ತಮ್ಮನ ಕುಟುಂಬದೊಂದಿಗಿದ್ದರು. 'ತಂದೆ ನೀನೆ ದಯದಿಪಾಲಿಸೆಂದು ಬಂದೆನೋ ಹಿಂದುಮುಂದು ಗತಿಯದಾರು

ಇಲ್ಲವೆಂಬೆನೋ' ಎಂಬ ಕೀರ್ತನೆಯ ಎರಡನೆ ಸಾಲಿನಲ್ಲಿ ಮತ್ತು 'ಸನ್ನುತ ಗುರುವರ ತತ್ವಬೋಧಿಸಿ' ಕೀರ್ತನೆಯ 'ಸಾಧಿಸಿ ವಿರತಿಯ ಸಂಶಯಗ್ಳೆಯದ' ಎಂಬ ಮಾತುಗಳಲ್ಲಿ ಇವರು ಬ್ರಹ್ಮಚಾರಿಗಳಾಗಿಯೇ ಉಳಿದ ಅಥವ ಒಂಟಿ ಜೀವನದ ಧ್ವನಿಯನ್ನು ಗುರುತಿಸಬಹುದಾಗಿದೆ.

ರಂಗದಾಸರು 'ವಿರತಿ' ಯನ್ನು ಸಾಧಿಸಿದ ಧೀಮಂತರಾಗಿ ತೋರುತ್ತಾರೆ. ಅವರ ನಡೆ-ನುಡಿಗಳಲ್ಲಿ ಆಹಾರ ಉಡುಪುಗಳಲ್ಲಿ ಶುಚಿ, ಶುದ್ಧಿ ಮತ್ತು ಶ್ರದ್ಧೆಗಳು ಇದ್ದವೆಂದು ಹೇಳಲಾಗಿದೆ, ಇವರ ಆಹಾರ ಕುಟ್ಟಿದ ಅವಲಕ್ಕಿ, ಹಾಲು, ಹಣ್ಣುಗಳು ಮಾತ್ರವಾಗಿದ್ದವೆಂದೂ ಎಂದೂ ಬೇಯಿಸಿದ ಪದಾರ್ಥಗಳನ್ನು ಸ್ವೀಕರಿಸುತ್ತಿರಲಿಲ್ಲ-ವೆಂದೂ ಅವಲಕ್ಕಿಯನ್ನು ಮಡಿಯಿಂದ ಶುಚಿರ್ಭೂತರಾಗಿ ಕುಟ್ಟಿ ಸಿದ್ದಪಡಿಸ-ಬೇಕಿತ್ತೆಂದೂ ಇನ್ನೊಬ್ಬ ಬಂಧು ಶ್ರೀ ರಾಮಕೃಷ್ಣನ್ ಅವರ ತಾಯಿ, ತಮ್ಮ ತಾಯಿಯವರು ಹೇಳುತ್ತಿದ್ದ ಪ್ರಸಂಗಗಳ ನೆನಪಿನಿಂದ ತಿಳಿಸುತ್ತಾರೆ (ತಾಯಿಯ ತಾಯಿ ರಂಗದಾಸರ ತಮ್ಮಂದಿರ ಮೊದಲ ಸೊಸೆಯಾಗಿದ್ದು ಹಲವುಕಾಲ ದಾಸರ ಸೇವೆ ಮಾಡಿದ್ದವರು), ಹೀಗೆ ಋಷಿ ಜೀವನವನ್ನು ಕೈಗೊಂಡು ಸಾತ್ವಿಕರಾಗಿ ಧ್ಯಾನ, ಅಧ್ಯಯನ ನಿರತರಾಗಿ ಬದುಕಿದ ರಂಗದಾಸರನ್ನು 'ಗುರು'ಗಳು ಎಂದು ಕರೆಯಲಡ್ಡಿಯಿಲ್ಲ, ಇವರ ಪತ್ರವ್ಯವಹಾರಗಳಲ್ಲಿ ಮತ್ತು ಸಂಪ್ರದಾಯದವರಲ್ಲಿ ಇವರು ಒಂದು ಮಠದ ಗುರುಗಳೇ ಆಗಿದ್ದುದರ ಬಗ್ಗೆ ಮಾಹಿತಿಯಿದೆ. ಇವರ ಸಂಪ್ರದಾಯಕ್ಕೆ ಸೇರಿದ್ದ ಮೇಲುಕೋಟೆಯ ಉಡ್ಯೆಯರ್ ರಾಮಾನುಜ ಮಠದ ಗುರುಪರಂಪರೆಯಲ್ಲಿ ಇವರ ಹೆಸರೂ ಲಭ್ಯವಿರುವುದೂ ಇದನ್ನು ದೃಢಪಡಿಸುತ್ತದೆ. (ಶ್ರೀವೈಷ್ಣವ ಸಂಪ್ರದಾಯದಲ್ಲಿ ಪ್ರತಿಯೊಂದು ಪಂಗಡಕ್ಕೂ ಒಂದೊಂದು ಪ್ರತ್ಯೇಕ ಗುರುಪೀಠಗಳಿವೆ. (ಯತಿರಾಜಮಠ, ಪರಕಾಲಮಠ, ಆಂಡವನ್ ಮಠ ಇತ್ಯಾದಿ. ೭೪ ಪೀಠಗಳನ್ನು ರಾಮಾನುಜರೇ ಸ್ಥಾಪಿಸಿದ್ದು, ಅವುಗಳಲ್ಲಿ ಇಂದು ಅನೇಕಾನೇಕ ಶಾಖೆಗಳು ಆಗಿವೆ. ಎಷ್ಟೋ ಮಠಗಳು ಒಂದೊಂದು ಮನೆತನಕ್ಕೇ ಪ್ರತ್ಯೇಕವಾಗಿರುವುದೂ ಉಂಟು. ರಂಗದಾಸರು ಗುರುಗಳಾಗಿದ್ದ ಮಠ 'ಉಡ್ಯೆಯರ್ ರಾಮಾನುಜಮಠ' ರಾಮಾನುಜರಿಂದಲೇ ಸ್ಥಾಪನೆಯಾಗಿದ್ದ ಬಗ್ಗೆ ಐತಿಹ್ಯವಿದ್ದರೂ ದಾಖಲೆಗಳ ಅಭಾವವಿದೆ) ಯಾವ ಗುರುವಿನಿಂದಲೂ ದಾಸರು ಶಿಷ್ಯವೃತ್ತಿ ಸ್ವೀಕರಿಸದೆ ಹೋದರೂ ತಾವು ಶಿಷ್ಯ ಪಂಪರೆಯನ್ನು ಬೆಳೆಸಿ 'ಗುರು'ಗಳೆನಿಸಿದ್ದಾರೆ.

ಒಂದು ಪರಂಪರೆಯ ಮುಂದುವರಿಕೆಗೆ ಕಾರಣರಾಗಿದ್ದಾರೆ. ಮುಂದಿನ ಈ ಸಂಪ್ರದಾಯದ ಕೀರ್ತನಕಾರರಾದ ಶಾಮಶರ್ಮರು. ನಾರಾಯಣಶರ್ಮರ ಮೇಲೆ ಪ್ರಭಾವಬೀರಿ ವಿಶಿಷ್ಟಾದ್ವೈತ ಕೀರ್ತನ ಪರಂಪರೆಯೊಂದು ಅವ್ಯಾಹತವಾಗಿ ಬೆಳೆಯಲು ಪೋಷಕರಾಗಿದ್ದಾರೆ.

೨. ಇತರ ಕೃತಿಗಳ ಪರಿಚಯ

ರಂಗದಾಸರು ಒಟ್ಟು ನಾಲ್ಕು ಕೃತಿಗಳನ್ನು ರಚಿಸಿದ್ದಾರೆ. ಇವು (೧) ನಾನಾ ಮತೋತ್ಪತ್ತಿ ಸಿದ್ಧಾಂತ ಸುಧಾರಸ (೧೮೯೪) (೨) ಶ್ರೀವೈಷ್ಣವ ಮನೋರಂಜನಿ (೧೯೦೪) (೩) ಶ್ರೀವೈಷ್ಣವ ಮತಪ್ರದರ್ಶಿನಿ (೪) (೧೯೦೭) ಶ್ರೀವೈಷ್ಣವ ಜೀವರತ್ನ (೧೯೦೭). ಇವೆಲ್ಲ ಧಾರ್ಮಿಕ ಕೃತಿಗಳಾಗಿದ್ದು ಅದರಲ್ಲೂ ಮತಪ್ರಚಾರ ಕೃತಿಗಳಾಗಿವೆ. ನಾನಾ ಮತೋತ್ಪತ್ತಿ ಸಿದ್ಧಾಂತ ಸುಧಾರಸ ಮಾತ್ರ ಪಾಂಡಿತ್ಯ ಕೃತಿಯಾಗಿದ್ದರೂ ಇಲ್ಲಿಯು ಪಾಂಡಿತ್ಯವೂ ಶ್ರೀವೈಷ್ಣವ ಮತ ಸಿದ್ಧಾಂತ ಸಮರ್ಥನೆಗೆ ಪೂರಕವಾಗಿಯಷ್ಟೇ ವ್ಯಕ್ತವಾಗುತ್ತದೆ. ಈ ನಾಲ್ಕು ಕೃತಿಗಳೂ ಗದ್ಯ ಸ್ವರೂಪದಲ್ಲಿದ್ದು ಶ್ಲೋಕ ಅರ್ಥವಿವರಣೆಯ ಭಾಗವೇ ಅಧಿಕವಾಗಿರುತ್ತದೆ.

ಶ್ರೀವೈಷ್ಣವ ಮನೋರಂಜನಿ ಎಂಬುದು ಒಂದು 'ಕರೆಸ್ಪಾಂಡೆನ್ಸ್' ಆಗಿದ್ದು ಅನೇಕ ಮತ ಮತ್ತು ವ್ಯಕ್ತಿಗಳಿಂದ ಬಂಧ ಪತ್ರಗಳಿಗೆ ಉತ್ತರ ರೂಪದಲ್ಲಿದೆ. ಉಳಿದೆರಡರಲ್ಲಿ ಆಚಾರ – ವಿಚಾರಗಳಿವೆ, ಶಾಸ್ತ್ರಸಮ್ಮತಿಯ ವಿವರಗಳಿವೆ.

'ಸ್ವಮತ ಪ್ರದರ್ಶನಕ್ಕಾಗಿಯೇ ತೊಳಲಿ ಬಳಲುವ ಭಗವದ್ದಾಸ' ಎಂದು ತಮ್ಮನ್ನು ಕರೆದುಕೊಂಡಿರುವುದು. 'ಛಳಿಜ್ವರಾದಿ ದೇಹಾಲಸ್ಯಬಾಧೆಯ ನಡುವೆಯೂ' ಸ್ವಮತ ಖಂಡನೆಗೆ ಪ್ರತಿಕ್ರಿಯಿಸುವ ಉತ್ಸಾಹವುಳ್ಳವರಾಗಿರುವುದನ್ನು ನೋಡಿದರೆ ಈ ಕಾರಣದಿಂದಲೇ ಜಿಜ್ಞಾಸಾತ್ಮಕವಾದ ಅಥವ ಜ್ಞಾನ ವಿಸ್ತರಣದಂತಹ ಗಟ್ಟಿ ಕೃತಿಗಳು ಪ್ರೌಢಗ್ರಂಥಗಳು ಇವರಿಂದ ರಚನೆ ಯಾಗಲಿಲ್ಲವೇನೋ ಎನಿಸುತ್ತದೆ. ಕೀರ್ತನೆಗಳಲ್ಲಿ ಸೊಗಸಾದ ಕರ್ತೃತ್ವ ಶಕ್ತಿಯನ್ನು ತೋರಿರುವ ದಾಸರ ಪ್ರತಿಭಾಶಕ್ತಿಯನ್ನು ಅಲ್ಲಗಳೆಯಲಾಗುವುದಿಲ್ಲ. ಆದರೆ ಈ ಮತನಿಷ್ಠೆಯ ಕಾರಣದಿಂದ ಅದು ಗ್ರಂಥಗಳಲ್ಲಿ ಕುಂದಿದಂತೆ ತೋರುತ್ತದೆ. ಆದರೂ ಈ

ಗ್ರಂಥಗಳನ್ನು ತಳ್ಳಿ ಹಾಕುವಂತಿಲ್ಲ. ಆ ಕಾಲದಲ್ಲಿ ಮತಧರ್ಮಗಳ ಬಗ್ಗೆ ಸಾಮಾಜಿಕವಾಗಿ ಇದ್ದ ಅಭಿಪ್ರಾಯಗಳು ಅವುಗಳ ಮೂಲಕ ಜನಾಂಗಗಳನ್ನು ಗುರುತಿಸುತ್ತಿದ್ದ ರೀತಿ, ಭಿನ್ನ ಸಮಾಜಗಳ ನಡುವಿನ-ಒಂದೇ ಸಮಾಜದ ಭಿನ್ನ ಪಂಗಡಗಳ ನಡುವಿನ ವ್ಯತ್ಯಾಸಗಳು, ಅವುಗಳ ಸ್ವಭಾವ, ಸ್ಥಾನೀಕರಣ, ಅದರ ಪರಿಣಾಮ ಇತ್ಯಾದಿ ಸಮಾಜೋಸಾಂಸ್ಕೃತಿಕ ನೆಲೆಗಳಲ್ಲಿ ಅಧ್ಯಯನ ಮಾಡಲು ಇಂತಹ ಮತೀಯ ಕೃತಿಗಳು ಮುಖ್ಯವೆನಿಸುತ್ತವೆ.

೨. ಕೀರ್ತನೆಗಳ ಪರಿಚಯ

ರಂಗದಾಸರು ೧೬ ಕೀರ್ತನೆಗಳನ್ನು ಮಾತ್ರ ರಚಿಸಿರುವುದು ಕಂಡುಬರುತ್ತದೆ. 'ಮಹದೇವಪುರರಂಗ' ಇವರ ಕೀರ್ತನೆಗಳ ಅಂಕಿತ. ಆರಾಧ್ಯ ದೈವದ ಹೆಸರಿನಲ್ಲೇ ಈ ಅಂಕಿತವನ್ನೂ ಆತನಲ್ಲೇ ಶರಣಾಗತಿಯನ್ನೂ ಸ್ವೀಕರಿಸಿದ್ದಾರೆ. ಎಲ್ಲ ಶ್ರೀವೈಷ್ಣವ ಹರಿದಾಸರಂತೆ ಭಗವಂತನಲ್ಲೆ ಶರಣಾದ ದಾಸರು ಲೌಕಿಕಾಸಕ್ತಿಯನ್ನು ತೊರೆದು ಸದಾ ದೇವರ ಧ್ಯಾನ, ಆರಾಧನ ಅಧ್ಯಯನಗಳಲ್ಲೇ ಮನಸ್ಸನ್ನು ತೊಡಗಿಸಿ ಶ್ರೀಪಾದವನ್ನು ನಂಬಿ ಅದರಲ್ಲೇ ಲೀನವಾಗುವ ಮೋಕ್ಷ ಪಥದಲ್ಲಿ ನಡೆದ ಸಾಧಕರಾಗಿದ್ದಾರೆ.

ರಂಗದಾಸರ ಕೀರ್ತನೆಗಳಲ್ಲಿ ವಿಷಯವೈವಿಧ್ಯತೆ ಸಾಮಾಜಿಕಕಾಳಜಿ ಅಷ್ಟಾಗಿ ಕಂಡುಬರದಿದ್ದರೂ ಭಗವದ್ಭಕ್ತನೊಬ್ಬನ ಆತ್ಮನಿವೇದನೆ, ಆತ್ಮಸಮರ್ಪಣೆ ದೈವಸಾಕ್ಷಾತ್ಕಾರಕ್ಕಾಗಿ ಹಂಬಲ, ದರ್ಶನದ ಅನುಭವಗಳಂತಹ ಸಾಮಾನ್ಯ ಲಕ್ಷಣಗಳು ದಟ್ಟವಾಗಿವೆ. ಇವರ ಕೀರ್ತನೆಗಳ ವೈಶಿಷ್ಟ್ಯವಿರುವುದು ಶ್ರೀವೈಷ್ಣವ ತತ್ವಗಳ ಅನುಷ್ಠಾನದಲ್ಲಿ 'ಹರಿಏಕನಿಷ್ಠೆ' ವಿಶಿಷ್ಟಾದ್ವೈತ ಹರಿದಾಸರ ಒಂದು ಮುಖ್ಯ ಲಕ್ಷಣ. ಇದಕ್ಕೆ ಅನುಗುಣವಾಗಿರುವ ರಂಗದಾಸರ ಎಲ್ಲ ಕೀರ್ತನೆಗಳೂ ವಿಷ್ಣುಸ್ತುತಿಗಳೇ ಆಗಿವೆ. ವಿಶಿಷ್ಟಾದ್ವೈತದ ಇನ್ನೊಂದು ಮುಖ್ಯ ಲಕ್ಷಣ 'ಆಳ್ವಾರ್-ಆಚಾರ್ಯರ ಸ್ತುತಿ'. ಆಳ್ವಾರರು-ಆಚಾರ್ಯರುಗಳ ಸ್ಮರಣೆಯಿಲ್ಲದೆ ಶ್ರೀ ವೈಷ್ಣವಧರ್ಮ ಸಾರ್ಥಕತೆ ಪಡೆಯುವುದಿಲ್ಲ. ನಿತ್ಯ ಉಪಾಸನೆಯಲ್ಲಿ, ತಮಿಳುನಾಡಿನ ಸಂತಶ್ರೇಷ್ಠರಾದ ಆಳ್ವಾರರನ್ನು ಸ್ತುತಿಸುವ, ಅವರು ರಚಿಸಿರುವ ಪಾಶುರ (ಶ್ಲೋಕ)ಗಳನ್ನು

ಅನುಸಂಧಾನ ಮಾಡುವ ಪರಿಪಾಠವಿದೆ. ಹಾಗೆಯೇ ರಾಮಾನುಜಾಚಾರ್ಯರಾದಿ ಆಚಾರ್ಯರುಗಳನ್ನು ಸ್ತುತಿಸಲಾಗುತ್ತದೆ. ಈ ಆಳ್ವಾರರು ಮತ್ತು ಆಚಾರ್ಯರ ರಸಮಯ ಜೀವನ ಸಂಗತಿಗಳನ್ನು ಶ್ರದ್ಧೆಯಿಂದ ಪಾರಾಯಣ ಮಾಡಲಾಗುತ್ತದೆ. ರಂಗದಾಸರ ಕೀರ್ತನೆಗಳಲ್ಲಿ ಇಂತಹ ಸಂಗತಿಗಳನ್ನು ಸುಲಭವಾಗಿ ಗ್ರಹಿಸಬಹುದುದಾಗಿದೆ. 'ಸನ್ನುತಿ ಗುರುವರ ತತ್ವವ ಬೋಧಿಸಿ, ಕೀರ್ತನೆಯಲ್ಲಿ ಬರುವ ಆಳ್ವಾರರುಗಳ ಕಥಾಪ್ರಸಂಗದ ಚಿತ್ರ ಕನ್ನಡ ಓದುಗನಿಗೆ ಹೊಸ ಪರಿಚಯವಾಗುತ್ತದೆ. 'ಚರಮಶ್ಲೋಕವನ್ನು ಅಷ್ಟಾಕ್ಷರ ಮಂತ್ರವನ್ನು ತಿರುಮಂತ್ರಾರ್ಥವ' ಎಂಬ ನುಡಿಯಾಗಲಿ 'ತಿರುನಾರಾಯಣಸ್ವಾಮಿ' 'ಬೇಡಿಕೊಂಬುವೆನು ನಿಮ್ಮ ರಾಮಾನುಜರ' ಎಂಬ ನುಡಿಯಾಗಲಿ ಇಲ್ಲೆಲ್ಲ ಈ ಅಂಶ ಎದ್ದು ಕಾಣುತ್ತದೆ. ಹಾಗೆಯೇ ಮಂತ್ರ ಮತ್ತು ನಾಮ ಮಹಿಮೆ, ಶರಣಾಗತಿ ತತ್ವಗಳನ್ನು ಹೇಳುವ ಕೀರ್ತನೆಗಳೂ ಇದ್ದು ಇವು ಶ್ರೀವೈಷ್ಣವ ನಿಷ್ಠೆಯನ್ನೇ ಹೇಳುತ್ತವೆ.

ಈ ಮೂಲಕ ರಂಗದಾಸರ ಕೀರ್ತನೆಗಳು ಕನ್ನಡ ಸಾಹಿತ್ಯದಲ್ಲಿ ಶ್ರೀವೈಷ್ಣವ ಪರಂಪರೆಯನ್ನು ೧೯ನೇ ಶತಮಾನದಲ್ಲಿ ಮುಂದುವರಿಸಿರುವ ಮಾದರಿಗಳಾಗಿವೆ ಎನ್ನಬಹುದು. ಈ ಕೀರ್ತನೆಗಳು ಇತರರ ಕೀರ್ತನೆಗಳಿಗಿಂತ ಭಿನ್ನವಾಗಿದ್ದು ಪಲ್ಲವಿ ಅನುಪಲ್ಲವಿಯ ಸ್ಥಾನದಲ್ಲಿ ಬಹಳಷ್ಟು ಕಡೆ ಕಂದ ಪದ್ಯವನ್ನು ಬಳಸಲಾಗಿದೆ. ಕೀರ್ತನೆಯ ಸಾರವನ್ನು ಈ ಕಂದದಲ್ಲಿ ಸಂಗ್ರಹಿಸಲಾಗಿದೆ. ಎಲ್ಲ ಕೀರ್ತನೆಗಳೂ ರಾಗ ತಾಳ ಬದ್ಧವಾಗಿದ್ದರೂ ಹಲವು ಕೀರ್ತನೆಗಳಿಗೆ ಅವುಗಳ ನಿರ್ದೇಶನವಿಲ್ಲ. ಕಂದಪದ್ಯ ರಚನಾ ಸಾಮರ್ಥ್ಯ ಮತ್ತು ಕೀರ್ತನೆಗಳಿಗೆ ರಾಗ–ತಾಳ ನಿರ್ದೇಶನದ ಸಾಮರ್ಥ್ಯವನ್ನು ಗಮನಿಸಿದರೆ, ದಾಸರು ಉತ್ತಮ ಸಂಗೀತ ಜ್ಞಾನವುಳ್ಳವರೂ ಪಂಡಿತರೂ ಆಗಿದ್ದರೆಂದು ಹೇಳಬೇಕಾಗುತ್ತದೆ. ಕೀರ್ತನೆಗಳನ್ನು ಹೆಬ್ಬೂರಿನ ಗಂಗಾಧರಶಾಸ್ತ್ರಿಗಳಿಂದ ಪರಿಷ್ಕರಿಸಿದ್ದು, ಅವರ ನೆರವನ್ನೂ ಪಡೆದಿರುವುದು ಕಂಡುಬರುತ್ತದೆ. (ಈ ಕೀರ್ತನೆಗಳಿರುವ ಪೇಟೆ ಮುದ್ರಣ ಪ್ರತಿಯಲ್ಲಿ 'ಹೆಬ್ಬೂರು ಶ್ರೀ ವೇ|| 'ಗಂಗಾಧರಶಾಸ್ತ್ರಿಗಳಿಂದ ಪರಿಷ್ಕರಿಸಲ್ಪಟ್ಟಿತು' ಎಂಬ ಉಲ್ಲೇಖವಿದೆ ಶೀರ್ಷಿಕೆ ಪುಟದಲ್ಲೇ ಈ ಪ್ರತಿ 'ಬೆಂಗಳೂರಿನ ವಿಚಾರಾಕ್ಷರ ಮುದ್ರಣಶಾಲೆ'ಯಲ್ಲಿ ಮುದ್ರಿಸಿರುವ ವಿಚಾರವೂ ಇದೆ.)

ರಂಗದಾಸರಿಂದ ಒಂದು ಶಿಷ್ಯ ಪರಂಪರೆಯೇ ಬೆಳೆದಿದ್ದು ದೊಡ್ಡ ಹೆಜ್ಜಾಜಿಯ (ಬೆಂಗಳೂರು ಜಿಲ್ಲೆ) ಶಾಮಶರ್ಮರು ಮತ್ತು ನಾರಾಯಣ ಶರ್ಮರು ಇವರ ಶಿಷ್ಯರಾಗಿ ಕಾಣಿಸಿಕೊಂಡಿದ್ದಾರೆ. ಈ ಮೂವರೂ ಒಂದೇ ಸಂಪ್ರದಾಯದ ಮತ ಪರಂಪರೆಗೆ ಸೇರಿದವರಾಗಿದ್ದಾರೆ. ಶಾರ್ಮರ್ಮರು ರಂಗದಾಸರನ್ನು ಭೇಟಿಮಾಡಿದ್ದಂತೆ ಕಂಡುಬರುವುದಿಲ್ಲವಾದರೂ ಸಂಪ್ರದಾಯದಲ್ಲಿ ಪ್ರಚಲಿತವಿದ್ದ ರಂಗದಾಸರ ಪ್ರಭಾವ ವಲಯದಲ್ಲಿ ಇವರಿಬ್ಬರೂ ಬೆಳೆದಿದ್ದಾರೆ ಪ್ರಪತ್ತಿ ಧರ್ಮವನ್ನು ಆಶ್ರಯಿಸಿದ ಮೇಲೆ ರೂಢಿಯಲ್ಲಿದ್ದ ದಾಸರ ಕೀರ್ತನೆಗಳು ಇವರುಗಳನ್ನೂ ಆಕರ್ಷಿಸಿ ರಂಗದಾಸರನ್ನು ಗುರುಸ್ಥಾನದಲ್ಲಿಟ್ಟುಕೊಂಡು ಅವರಂತೆ ತಾವೂ ಕೀರ್ತನಕಾರರಾಗಿ ಬೆಳೆದಿದ್ದಾರೆ. ಶಾಮಶರ್ಮರು ತಮ್ಮ 'ಮೂಜಗ ಪೂಜಿತ ಮಾಧವ ನಮ್ಮ ಹೆಜ್ಜಾಜಿಯಚನ್ನಕೇಶವ' (೩೫೦) ಕೃತಿಯಲ್ಲಿ ತಂದೆ, ತಾಯಿ, ಬಂಧುಗಳು, ತಮ್ಮ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳು ಮತ್ತು ಗುರುಪರಂಪರೆಯನ್ನು ಸ್ಮರಿಸುತ್ತ ರಂಗದಾಸರನ್ನೂ ಸ್ತುತಿಸಿದ್ದಾರೆ. ಈ ಎಲ್ಲರ ಹೆಸರುಗಳನ್ನೂ ಶ್ಲೇಷಾರ್ಥದಲ್ಲಿ ತಂದಿರುವ ಈ ಕೃತಿಯನ್ನು ಶ್ರೀಹರಿಯ ಸ್ತುತಿಯನ್ನಾಗಿಯೂ ರೂಪಿಸಿದ್ದಾರೆ. ನಾರಾಯಾಣಶರ್ಮರು

'ವಂದಿಪೆ ಶ್ರೀಮನ್ನಾರಾಯಣಗೆ
ವಂದಿಪೆ ಅಮ್ಮ ಲಕ್ಷ್ಮೀದೇವಿಗೆ' ೪೬೫

ಎಂಬ ಕೃತಿಯಲ್ಲಿ ಶ್ರೀಹರಿಯಿಂದ ಮೊದಲ್ಗೊಂಡು ಸಂಪ್ರದಾಯದಂತೆ ಲಕ್ಷ್ಮೀ ವಿಷ್ವಕ್ಸೇನ, ಆಳ್ವಾರರು, ಆಚಾರ್ಯರನ್ನು ಸ್ತುತಿಸುತ್ತ ರಂಗದಾಸರು ಮತ್ತು ಶಾಮಶರ್ಮರನ್ನೂ ಗುರುಸ್ಥಾನದಲ್ಲಿ ಸ್ತುತಿಸಿದ್ದಾರೆ. ಈ ಮೂಲಕ ನಾರಾಯಣ ಶರ್ಮರು ಇವರಿಬ್ಬರ ಶಿಷ್ಯರಾಗಿ ಈ ಪರಂಪರೆಯಲ್ಲಿ ಈಚಿನವರಾಗಿ ಕಾಣಿಸಿಕೊಂಡಿದ್ದಾರೆ.

(೪) ಕೀರ್ತನೆಗಳ ಆಕರ

ರಂಗದಾಸರ ಕೀರ್ತನೆಗಳಿಗೆ ಮುದ್ರಿತ ಗ್ರಂಥವನ್ನು ಆಕರವಾಗಿ ಬಳಸಿಕೊಳ್ಳಲಾಗಿದೆ. ಇದೇ ಸಂಪಾದಕರಿಂದ ೧೯೯೪ ರಲ್ಲಿ ಸಂಪಾದನೆಯಾಗಿರುವ

'ರಂಗದಾಸರ ಕೀರ್ತನೆಗಳು' ಎಂಬ ಪುಸ್ತಕದಲ್ಲಿ ಇವರ ೧೬ ಕೀರ್ತನೆಗಳೂ ಪ್ರಕಟವಾಗಿವೆ. ದಾಸರ ಜೀವನ ವಿವರಕ್ಕೆ ಈ ಗ್ರಂಥದೊಂದಿಗೆ ಇದೇ ಸಂಪಾದಕರಿಂದ ೧೯೬೮ರಲ್ಲಿ ಪ್ರಕಟವಾಗಿರುವ 'ತುಮಕೂರು ಜಿಲ್ಲೆಯ ಮೂವರು ಕೀರ್ತನಕಾರರು' ಎಂಬ ಗ್ರಂಥವನ್ನೂ ಬಳಸಿಕೊಳ್ಳಲಾಗಿದೆ. ಇವರ ಕೀರ್ತನೆಗಳನ್ನು ಹಾಡುವ ಸಂಪ್ರದಾಯವಿದ್ದು ಸಂಪ್ರದಾಯದವರ ಅಭಿಪ್ರಾಯಗಳನ್ನೂ ಪರಿಗಣಿಸಲಾಗಿದೆ.

೫. ವೆಂಕಟವರದಾರ್ಯರು

ಹತ್ತೊಂಬತ್ತನೇ ಶತಮಾನದ ಉತ್ತರಭಾಗದಲ್ಲಿ ಮೈಸೂರು ಪ್ರಾಂತ್ಯದಲ್ಲಿ ಹೆಚ್ಚು ಜನಪ್ರಿಯರಾಗಿದ್ದ ವೆಂಕಟವರದಾರ್ಯರು ನಾಟಕಕಾರ, ಕೀರ್ತನಕಾರರಾಗಿ ಕಾಣಿಸಿಕೊಂಡಿದ್ದಾರೆ. ಅನೇಕ ನಾಟಕಗಳನ್ನೂ, ಯಕ್ಷಗಾನ ಕೃತಿಗಳನ್ನೂ ಐನೂರಕ್ಕೂ ಅಧಿಕ ಕೀರ್ತನೆಗಳನ್ನೂ ಬರೆದಿದ್ದಾರೆಂದು ಕಂಡು ಬರುತ್ತದೆ. ಬಿ.ಎಲ್. ರೈಸ್ ರಿಂದ ಉತ್ತಮ ವಿಮರ್ಶೆ ಪಡೆಯುವಂತಹ ಗಣ್ಯ ಕೃತಿಗಳನ್ನು ರಚಿಸಿರುವ ವೆಂಕಟವರದಾರ್ಯರು ಶ್ರೀವೈಷ್ಣವ ಕೀರ್ತನ ಸಾಹಿತ್ಯದಲ್ಲಿ ಮುಖ್ಯ ಹರಿದಾಸರಲ್ಲೊಬ್ಬರಾಗಿದ್ದಾರೆ.

(೧) ಜೀವನ ವಿವರ

ವೆಂಕಟವರದಾರ್ಯರನ್ನು ಬೆಳಕಿಗೆ ತಂದವರು ನಂಜನಗೂಡಿನ ತಿರುಮಲಾಂಬ ಅವರು, ತಮ್ಮ 'ಸನ್ಮಾರ್ಗದರ್ಶಿ', 'ಕರ್ನಾಟಕ ನಂದಿನಿ' ಪತ್ರಿಕೆಗಳ ಮೂಲಕ ಇವರು ತಿಳಿಸುವ ಅಲ್ಪ ಸ್ವಲ್ಪ ವಿವರಗಳೇ ವೆಂಕಟವರದಾರ್ಯರ ಬಗ್ಗೆ ಲಭ್ಯವಾಗುವ ಅಧಿಕೃತ ಮಾಹಿತಿಯಾಗಿದೆ. ಸನ್ಮಾರ್ಗದರ್ಶಿಯ ೧೯೨೩ರ ಜುಲೈ-ಡಿಸೆಂಬರ್ ಸಂಚಿಕೆಯಲ್ಲಿ ಇವರ ಕೀರ್ತನೆಗಳ ಸಂಕಲನ 'ಶ್ರೀನಿವಾಸ ಸಂಕೀರ್ತನಂ' ಕೃತಿಯ ಮುಖಪುಟವನ್ನು ನೀಡಿದ್ದಾರೆ. ಅದರ ಹಿಂಬದಿಯಲ್ಲಿರುವ 'ಒಂದು ಮಾತು' ಎಂಬುದರಲ್ಲಿ ದಾಸರ ಜೀವನ ಸಂಗತಿಗಳ ಬಗ್ಗೆ ಈ ರೀತಿ ಹೇಳಿದ್ದಾರೆ. ' ಈ ಕವಿಯವರು ನಮ್ಮ ನಂದಿನಿಯಲ್ಲಿ ಪ್ರಕಟವಾಗಿರುವ ಭಾಗವತಶ್ರೀಕೃಷ್ಣಲೀಲಾ

ಗ್ರಂಥಕರ್ತರಾದ ದಿ. ರಾಮಾನುಜಾಚಾರ್ಯರ ಸಹಜಾತರು. ಇವರು ಕಾಲವಾಗಿ ಸು.೩೦ವರ್ಷಗಳ ಮೇಲಾಗಿರಬಹುದು. ಇವರ ಸ್ಥಳವು ಚಾಮರಾಜನಗರ ತಾಲೂಕು ಸರಗೂರು ಗ್ರಾಮ. ಇವರು ಕವಿ, ಭಗವದ್ಭಕ್ತ, ಸರಸಿಗಳೂ ಆಗಿದ್ದರು. ಇವರಿಗೆ ಜಾತಸ ಪುತ್ರರಿಲ್ಲ. ದತ್ತು ಪುತ್ರ ಸಂತತಿಯವರು ಅಂದರೆ ದತ್ತು ಪುತ್ರರ ಪುತ್ರ (ಪೌತ್ರ) ಅವರ ಪತ್ನಿ ಪುತ್ರ ಪುತ್ರಿಯರು ಇರುವರು'.

ಇದರಿಂದ ದಾಸರಿಗೆ ರಾಮಾನುಜಾಚಾರ್ಯರೆಂಬ ಸಹೋದರರಿದ್ದರೆಂದೂ ಮಕ್ಕಳಿರಲಿಲ್ಲವೆಂದು ೧೯೦೦ರ ಸುಮಾರಿಗೇ ಕಾಲವಾಗಿದ್ದರೆಂದೂ ತಿಳಿದುಬರುತ್ತದೆ. ಕವಿಚರಿತಕಾರರು ಪ್ರಾಯಶಃ ಈ ಒಂದು ಮಾತನ್ನು ಆಧರಿಸಿಯೇ 'ವೆಂಕಟವರದಾಚಾರ್ಯ'ರನ್ನು ಉಲ್ಲೇಖಿಸಿ ಇವರ ಕೃತಿಗಳನ್ನು ಪಟ್ಟಿಮಾಡಿ 'ಇವನು ಶ್ರೀವೈಷ್ಣವ ಕವಿ, ಇವನ ಸ್ಥಳ ಚಾಮರಾಜನಗರ ತಾ|| ಸರಗೂರು, ಇವನ ಕಾಲ ಸು.೧೮೭೫' ಎಂದಿದ್ದಾರೆ. ಆದರೆ ಈ 'ಒಂದುಮಾತು' ಪ್ರಕಟವಾಗಿರುವ ಕೃತಿಯ ಕಾಲ ೧೯೨೩ರ ವೇಳೆಗೇ ಇವರು ಕಾಲವಾಗಿ ಸು.೩೦ವರ್ಷಗಳ ಮೇಲಾಗಿರಬಹುದು ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ದಾಸರ ಜೀವಿತಾವಧಿ ಸು.೭೦ ವರ್ಷಗಳು ಎಂದಿಟ್ಟುಕೊಂಡರೂ ೧೮೩೦ಕ್ಕೆ ಇವರು ಬರುತ್ತಾರೆ. ಆದ್ದರಿಂದ ಇವರನ್ನು ೧೮೩೦–೧೯೦೦ರ ಅವಧಿಯಲ್ಲಿ ಗುರುತಿಸಬಹುದು.

ದಾಸರಿಗೆ ಮಕ್ಕಳಿರಲಿಲ್ಲವೆಂದು ಹೇಳುವ ಮೂಲಕ ಮದುವೆಯಾಗಿತ್ತು ಎಂಬುದನ್ನು ಈ 'ಒಂದು ಮಾತು' ಖಚಿತಪಡಿಸುತ್ತದೆ. ಅದಕ್ಕೆ ದಾಸರ ಕೀರ್ತನೆಯೊಂದರಲ್ಲೂ ಸುಳಿವೂ ಸಿಗುತ್ತದೆ.

'ನೀನುಳಿಯೆ ರಕ್ಷಕರಕಾಣೆನೀ ಜಗದೊಳಗೆ,' ಎಂಬ ಕೀರ್ತನೆಯಲ್ಲಿ ಬರುವ

'ಇಂದು ನಿಜಸತಿಯು ನೊಂದಳುಬ್ಬಸರೋಗದಿಂದ' ೧೮೭

ಎಂಬ ಸಾಲು ಉಬ್ಬಸರೊಗದಿಂದ ಬಳಲುತ್ತಿದ್ದ ಪತ್ನಿಯನ್ನು ಹೇಳುತ್ತಿದ್ದು,ದಾಸರ ಸಾಂಸಾರಿಕ ಚಿತ್ರದತ್ತ ಬೆಳಕುಮಾಡುತ್ತದೆ. ಇದರಲ್ಲೇ ಬರುವ ಇನ್ನೊಂದು

ಸಾಲು ಗುರುಸುತನ ಸಂಯಮದೀ ಪುರದಿಂದ ತಂದಿತ್ತೆ, ಎಂಬುದು ದಾಸರು ಸ್ವೀಕರಿಸಿದ್ದ 'ದತ್ತುಪುತ್ರ' ನನ್ನು ಸೂಚಿಸುತ್ತಿರುವಂತಿದೆ. ದಾಸರಿಗೂ ಇದೇ ಬಗೆಯ ರೋಗವಿದ್ದುದರ ಬಗೆಗೂ ಒಂದು ಕೀರ್ತನೆಯಿದ್ದು ಅವರು ಅಂತಿಮಕಾಲದಲ್ಲಿ ಅನುಭವಿಸಿದ್ದ ರೋಗದ ಬಾಧೆಯನ್ನು ಎಳೆಎಳೆಯಾಗಿ ಬಿಡಿಸಿಡುತ್ತದೆ.

'ಸಲಹೋ ಶ್ರೀನಿವಾಸ ಸದ್ಗುಣನಿಲಯ ವೆಂಕಟೇಶ' (೨೦೦) ಎಂಬ ಈ ಕೀರ್ತನೆಯಲ್ಲಿ

'ವಾತವು ಮಿತಿಮೀರಿ ಪಿತ್ತವ್ರಾತದೊಡನೆ ಸೇರಿ
ಧಾತುಗಳೆಲ್ಲ ವಿಘಾತಿಸಿ ಕಫಸಂಘಾತವು
ಹೆಚ್ಚಿದಸೇದುವನೋಡಿ'
'ಕಾಯದ ಬಲವೆಲ್ಲಕದಲುತ ಮಾಯವಾದುವಲ್ಲ
ದಾರಿತಪ್ಪಿದುದಾ್ಯಯುವಿನಿಂದ ತಲೆನೋಯುತ
ದೇಹದೊಳಾಯಸ ಹೆಚ್ಚಿತು'

ಎಂದು ಪರಿಪರಿಯಾಗಿ ರೋಗ ಲಕ್ಷಣಗಳನ್ನು ಇಲ್ಲಿ ಪಟ್ಟಿಮಾಡಿದ್ದಾರೆ. ಪ್ರಾಯಶಃ ಸು. ಎಪ್ಪತ್ತು ವರ್ಷದ ನಂತರದ ಮುಪ್ಪಿನಲ್ಲಿ ಕಾಣಿಸಿಕೊಂಡಿರುವ ರೋಗದ ಚಿತ್ರ ಇದಾಗಿರುವಂತಿದೆ. ಇದರಿಂದ ದಾಸರು ದೀರ್ಘಕಾಲ ಬದುಕಿರುವಂತೆ ತೋರುವುದಿಲ್ಲ.

ದಾಸರ ಕೀರ್ತನೆಗಳಿಂದ ದಾಸರು ಅಸಾಧ್ಯವಾದ ಸಂಸ್ಕೃತ ಪಾಂಡಿತ್ಯವನ್ನು ಹೊಂದಿರುವುದು ವ್ಯಕ್ತವಾಗುತ್ತದೆ. ಅನೇಕ ದೀರ್ಘಸಮಾಸಯುಕ್ತ ಸಂಸ್ಕೃತ ಪದಗಳನ್ನು ಸಂಸ್ಕೃತಭೂಯಿಷ್ಟ ಕೀರ್ತನೆಗಳನ್ನು ಕಾಣುತ್ತೇವೆ. ಇದಕ್ಕೆ ಅನುಗುಣವಾಗಿ ಕನ್ನಡಭಾಷಾ ಪ್ರೌಢಿಮೆಯೂ ಮೇಳವಿಸಿದೆ. ಇದರ ಹಿನ್ನೆಲೆಯಲ್ಲಿ ದಾಸರಿಗೆ ಕನ್ನಡ–ಸಂಸ್ಕೃತಗಳಲ್ಲಿ ಹೆಚ್ಚಿನ ಪ್ರಮಾಣದ ಶಿಕ್ಷಣ–ಅಧ್ಯಯನ ಆಗಿರುವುದನ್ನು ಸುಲಭವಾಗಿ ಹೇಳಬಹುದು. ಆದರೆ ಅನೇಕ ಕೀರ್ತನೆಗಳಲ್ಲಿ

'ಯತಿಗಣ ನೇಮವನರಿಯದ ಸ್ವರ
ಗತಿ ತಾಳ ಲಯಬಂಧ ತಿಳಿಯದ
ಗತಿ ಮತಿಗಳೇನನರಿಯದ'
ಮತಿಹೀನನಾದೆನ್ನ ಮತಿಗೆ ಗೋಚರನಾಗಿ' ೧೮೦

'ಗುರುಕುಲವಾಸದ ಗುರುತೆನಗಿಲ್ಲ
ಪರಮಭಾಗವತರ ಪರಿಚಯವಿಲ್ಲ' ೧೮೮

ಎಂಬಂತಹ ಅಜ್ಞಾನ ಪ್ರದರ್ಶನ ಕಂಡುಬರುತ್ತದಾದರೂ ಇದು 'ಪ್ರಪತ್ತಿ'ಯಲ್ಲಿ ಶರಣಾಗತನಾಗಿರುವ ದಾಸನೊಬ್ಬನ ವಿನಯ ಪ್ರದರ್ಶನ, 'ಅಹಂ' ನ ನಿರಾಕರಣೆ ಎಂದೇ ಸ್ವೀಕರಿಸಬೇಕಾಗುತ್ತದೆ.

ಆದರೆ ದಾಸರ ಜೀವಿತಾವಧಿ ಅಷ್ಟೇನೂ ಸುಖಕರವಾಗಿದ್ದಂತೆ ಕಂಡು ಬರುವುದಿಲ್ಲ. ಏಕೆಂದರೆ ಒಂದೆರಡು ಕೀರ್ತನೆಗಳಲ್ಲಿ ಬರುವ

'ಹಿಂದೆ ನಾನಾ ನಗರಿಯಿಂದ ಬಹ ದಾರಿಯೊಳು
ದಂದುಗಳೀಚಲುಭಂಡಿ ಸಂಜೆಯೊಳಗೆ
ಮುಂದಾಗ ಜೊತೆಯೊಳಗೆ ಬಂಧುಜನದಲ್ಲಿ ನೀ
ಬಂದು ಬೆಳಕನು ತೋರಿ ಮುಂದೆಗೂಡಿದೆ ಕೃಷ್ಣ' ೧೮೨

ಎಂಬತಂಹ ಮಾತುಗಳು ದಾಸರ ಜೀವನದ ಪಯಣ ಪ್ರಯಾಸಕರವಾಗಿದ್ದುದನ್ನು ಧ್ವನಿಸುತ್ತಿರುವಂತಿವೆ. ಹಾಗೆಯೇ ಇವರ ಪೂರ್ವಜೀವನ (ಪ್ರಪತ್ತಿಯನ್ನು ಸ್ವೀಕರಿಸುವುದಕ್ಕೆ ಮೊದಲಿನ ಸಾಂಸಾರಿಕ, ಲೌಕಿಕಜೀವನ) ಸಂಪೂರ್ಣವಾಗಿ ಲೌಕಿಕಾಸಕ್ತಿಯಲ್ಲಿ ಲೀನವಾಗಿತ್ತೇನೋ ಎಂಬ ಅನುಮಾನವನ್ನು ಮೂಡಿಸುತ್ತದೆ.

ಮಾಡಬಾರದ ಪಾಪ ಮಾಡಿದೆನನುದಿನ
ಮೂಢನ ಸುಕೃತವನಾಡಿತೋರಿಸಲೇಕೆ
ಹರಿಗುರುಹಿರಿಯರ ಜರಿದು ಸಜ್ಜನರನು
ತೊರೆದು ದುರ್ಜನರೊಳು ಬೆರೆದು ಪಾಮರನಾದ' ೧೮೭

'ತನುವೆನ್ನದು ಚೇತನ ವೆನ್ನದು ಎಂದು
ಅನುದಿನ ಪೋಷಣೆಯನು ಮಾಡಿದೆ ಹರಿ' ೧೮೩

ಎಂಬಂತಹ ಹಲವು ಕೀರ್ತನೆಗಳು ಈ ಭಾವ ವ್ಯಕ್ತಪಡಿಸುತ್ತವೆಯಾದರೂ ಇದೂ ಸಹ ಆತ್ಮನಿರಾಕರಣೆಯ, ಪ್ರಾಯಶ್ಚಿತ್ತರೂಪದ ಪ್ರಪತ್ತಿಭಾವವೆಂದೇ ಹೇಳಬಹುದಾಗಿದೆ. ದಾಸರ ಜೀವನದಬಗ್ಗೆ ಖಚಿತವಿವರಗಳು ಗೋಚರವಾಗುವವರೆಗೆ ಏನನ್ನೂ ಹೇಳಲಾಗುವುದಿಲ್ಲ.

ಇದರಾಚೆಗೆ ದಾಸರ ತಂದೆ-ತಾಯಿಗಳಾಗಲಿ; ಮನೆತನ, ಗೋತ್ರ, ಸಂಪ್ರದಾಯವಾಗಲಿ; ವಿದ್ಯಾಭ್ಯಾಸ, ವೃತ್ತಿಗಳಾಗಲಿ ಏನೊಂದೂ ಗೊತ್ತಾಗುವುದಿಲ್ಲ. ಸ್ಥಳಪರಿಶೀಲನೆಯಲ್ಲಿಯೂ ಯಾವ ಪ್ರಯೋಜನವೂ ಆಗಿಲ್ಲ. ದಾಸರ ಬಗ್ಗೆ ಮಾಹಿತಿ ಗೊತ್ತಿರುವವರು ಇಲ್ಲವೆಂದೇ ಹೇಳಬೇಕು. ದಾಸರ ಸ್ಥಳ ಸರಗೂರು ಎಂಬುದು ಖಚಿತ. ಅಂಕಿತ 'ವರದವಿಠಲ', ಆರಾಧ್ಯದೈವ ಸಮೀಪದ ಗುಂಡ್ಲುಪೇಟೆ ತಾಲೂಕಿನ ಹುಲಿಗನಮೊರಡಿಯ ಗಿರಿಯ ಮೇಲಿರುವ ವರದವೆಂಕಟೇಶ್ವರ. ಈ ದೇವಾಲಯ ಬೆಟ್ಟದ ಮೇಲಿದೆ. ಇದು ಕೆಂಪು ಕಲ್ಲುಗಳಿಂದ ಆವರಿಸಿರುವ ಮೂರು ಬೆಟ್ಟಗಳಿರುವ ಕಣಿವೆ ಪ್ರದೇಶ. ಇದನ್ನು ದಕ್ಷಿಣಶೇಷಾದ್ರಿ, ಭುಜಂಗಗಿರಿ, ಮಾಂಡವ್ಯಕ್ಷೇತ್ರ, ವ್ಯಾಘ್ರಾಚಲ, ಪುಲಿಗಿರಿ, ಎಂದೆಲ್ಲ ಕರೆಯಲಾಗಿದೆ. ಇದಕ್ಕೊಂದು ಐತಿಹ್ಯವೇ ಇದ್ದು ಸ್ಥಳಪುರಾಣದ ಪ್ರಕಾರ ಈ ಪ್ರದೇಶಕ್ಕೆ ಕೃತಯುಗದಲ್ಲಿ 'ಶೇಷಾದ್ರಿ' ಎಂದೂ ತ್ರೇತಾಯುಗದಲ್ಲಿ 'ಕನಕಾದ್ರಿ'ಎಂದೂ ದ್ವಾಪರಯುಗದಲ್ಲಿ 'ವೆಂಕಟಾದ್ರಿ' ಎಂದೂ ಕಲಿಯುಗದಲ್ಲಿ 'ವ್ಯಾಘ್ರಾದ್ರಿ' ಎಂದೂ ಕರೆಯಲಾಗಿದೆ. ಮಾಂಡವ್ಯ ಋಷಿಗಳ ತಪೋಕ್ಷೇತ್ರವೆಂದೂ ಅವರ ಅಪೇಕ್ಷೆಯಂತೆ ವೆಂಕಟೇಶ್ವರ ಅವತರಿಸಿ ವ್ಯಾಘ್ರಾಸುರನನ್ನು ಸಂಹರಿಸಿ ಶಾಪವಿಮೋಚನೆ ಮಾಡಿದ ನಂತರ ಇಲ್ಲಿ ವರದ ವೆಂಕಟೇಶನಾಗಿ ಶ್ರೀದೇವಿ ಭೂದೇವಿ ಸಮೇತ ಭಕ್ತರಿಗೆ ದರ್ಶನ ನೀಡುತ್ತಿದ್ದಾನೆಂದೂ ಕಥೆಯಿದೆ. ಭವ್ಯವಾದ ರಾಜಗೋಪುರವಿರುವ ಈ ದೇವಾಲಯ ಅನೇಕ ಶ್ರೀವೈಷ್ಣವ ಕುಟುಂಬಗಳಿಗೆ ಹೇಗೋ ಹಾಗೇ ಅನೇಕಮತೀಯರಿಗೆ ಮನೆದೇವರಾಗಿ ಸದಾ ಭಕ್ತರನ್ನಾಕರ್ಷಿಸುತ್ತಿದೆ.

ದಾಸರು ಈ ಕ್ಷೇತ್ರವನ್ನು ಕುರಿತೇ ಕೆಲವು ಕೀರ್ತನೆಗಳನ್ನು ರಚಿಸಿದ್ದಾರೆ.

ಶೇಷಾದ್ರಿಯನು ನೋಡಿರೋ ಸೇವಕಪರಿ
ತೋಷಾದ್ರಿಯನು ಕಾಣಿರೋ ೨೨೩

ಶ್ರೀನಿವಾಸನ ಸೇವೆಗೈಯುವ ಜಾಣರೆಲ್ಲರು ಬನ್ನಿರೈ ೨೨೪

ಶ್ರೀವ್ಯಾಘ್ರಗಿರಿವಾಸ ಶ್ರೀ ಶ್ರೀನಿವಾಸ ೨೨೫

ಮುಂತಾದವುಗಳಲ್ಲಿ ಈ ಕ್ಷೇತ್ರವನ್ನೇ ವರ್ಣಿಸಿದ್ದರೆ ಅನೇಕ ಕೀರ್ತನೆಗಳಲ್ಲಿ ಇದರ ಐತಿಹ್ಯಗಳನ್ನು ಉಲ್ಲೇಖಿಸಿದ್ದಾರೆ. 'ವರದವಿಠಲ'ದ ಜೊತೆಗೆ ಈ ಕ್ಷೇತ್ರದ ಪ್ರತಿನಾಮವೊಂದು ಪ್ರತಿಯೊಂದು ಕೀರ್ತನೆಯಲ್ಲೂ ಕಂಡುಬರುತ್ತದೆ.

ದಾಸರು ಈ ಕ್ಷೇತ್ರದಲ್ಲೇ ತಂಗಿದ್ದರೋ ಭೇಟಿನೀಡುತ್ತಿದ್ದರೋ ತಿಳಿದು ಬರುವುದಿಲ್ಲ. ದಾಸರ ಜೀವನದೊಂದಿಗೆ ಈ ಕ್ಷೇತ್ರ ಅವಿನಾಭಾವ ಸಂಬಂಧ ವನ್ನಂತೂ ಹೊಂದಿರುವುದು ಕೀರ್ತನೆಗಳಿಂದ ಸ್ಪಷ್ಟವಿದ್ದರೂ ಸ್ಥಳೀಯವಾಗಿ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಈ ಕ್ಷೇತ್ರದ ಉಲ್ಲೇಖದ ಹಿನ್ನೆಲೆಯಿಂದ ದಾಸರ ಸ್ಥಳವಾದ ಸರಗೂರು ಹುಲಿಗನಮೊರಡಿಗೆ ಸಮೀಪವಾಗಿರುವ ಚಾಮರಾಜನಗರ ತಾ॥ನಲ್ಲಿರುವ ಸರಗೂರು ಎಂಬುದನ್ನು ಖಚಿತ ಪಡಿಸಬಹುದಾಗಿದೆ.

(೨) ಇತರ ಗ್ರಂಥಗಳು

ವೆಂಕಟವರದಾಚಾರ್ಯರ ಹೆಸರಿನಲ್ಲಿ ೧೦೨ ಕೀರ್ತನೆಗಳುಳ್ಳ 'ಶ್ರೀನಿವಾಸ ಸಂಕೀರ್ತನಾ' ಕೃತಿಯಲ್ಲದೆ ಇನ್ನೂ ಕೆಲವು ಯಕ್ಷಗಾನ ಮತ್ತು ನಾಟಕ ಕೃತಿಗಳಿವೆ. ಅವುಗಳೆಂದರೆ

೧. ತಪತೀಕಲ್ಯಾಣ (ನಾಟಕ)
೨. ಗೋಪಿಕಾಗೀತೆ (?)
೩. ವ್ಯಾಘ್ರಾಚಲಮಹಾತ್ಮೆ (ಯಕ್ಷಗಾನ)
೪. ರಾಧಾಕೃಷ್ಣವಿಲಾಸ (ಯಕ್ಷಗಾನ)

ಈ ಯಾವ ಕೃತಿಗಳೂ ಪರಿಶೀಲನೆಗೆ ದೊರೆತಿಲ್ಲದಿರುವುದರಿಂದ ಇವುಗಳ ಬಗ್ಗೆ ಏನನ್ನೂ ಹೇಳಲಾಗಿಲ್ಲ. 'ತಪತೀಕಲ್ಯಾಣ' ಆ ಕಾಲದ ಮುಖ್ಯ ಕೃತಿಗಳಲ್ಲಿ ಒಂದಾಗಿತ್ತು ಮತ್ತು ಬಿ.ಎಲ್.ರೈಸ್ ಅವರು ಇದನ್ನು ಬಹುವಾಗಿ ಮೆಚ್ಚಿ ತಮ್ಮ ಸಾಹಿತ್ಯ ಚರಿತ್ರೆಯ ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ `a dramatic work of high order very well written' (ಕರ್ನಾಟಕ ಶಬ್ದಾನುಶಾಸನದ ಮುನ್ನುಡಿಯಲ್ಲಿ) ಎಂದು ಡಾ॥ ಶ್ರೀನಿವಾಸಹಾವನೂರರು ತಮ್ಮ ಹೊಸಗನ್ನಡದ ಅರುಣೋದಯ ಪುಸ್ತಕದಲ್ಲಿ ದಾಖಲಿಸಿದ್ದಾರೆ. (ಪು. ೨೭೦)

ಗೋಪಿಕಾಗೀತೆ ನಾಟಕವೋ ಯಕ್ಷಗಾನವೊ ಅಥವ ಕೀರ್ತನರೂಪದ ಹಾಡುಗಳ ಕೃತಿಯೋ ಗೊತ್ತಾಗುವುದಿಲ್ಲ. ಉಳಿದೆರಡನ್ನು ಯಕ್ಷಗಾನ ಕೃತಿಗಳೆಂದು 'ಸತೀಹಿತೈಷಿಣಿ' ಸ್ಪಷ್ಟಪಡಿಸಿದೆ. ದಾಸರ ಈ ಎಲ್ಲ ಕೃತಿಗಳನ್ನೂ ಸತೀಹಿತೈಷಿಣಿಯೇ ಪ್ರಕಟಿಸಿದೆ. ತಪತೀಕಲ್ಯಾಣ ೧೯೨೨ಕ್ಕೆ ಮೊದಲೇ ಪ್ರಕಟವಾಗಿದ್ದರೆ ಉಳಿದವು ೧೯೨೩ರ ನಂತರ ಪ್ರಕಟವಾಗಿವೆ. ಸನ್ಮಾರ್ಗದರ್ಶಿಯ ೧೯೨೨ರ ಜೂನ್ ಸಂಚಿಕೆಯಲ್ಲಿ ಕೀರ್ತನೆಗಳನ್ನು ಪ್ರಕಟಿಸುವಾಗ ಅಡಿ ಟಿಪ್ಪಣಿಯಲ್ಲಿ 'ಈ ಕೀರ್ತನೆಗಳನ್ನು ರಚಿಸಿರುವವರು ಕರ್ನಾಟಕ ನಂದಿನೀ, ಸತೀ ಹಿತೈಷಿಣಿಯುವರಿಂದ ಉಲ್ಲೇಖಿಸಲ್ಪಟ್ಟಿರುವ ತಪತೀಕಲ್ಯಾಣ ಕರ್ತೃಗಳಾದ ದಿವಂಗತ ಸರಗೂರು ವೆಂಕಟವರದಾಚಾರ್ಯರು'. ಎಂದು ಹೇಳಿರುವುದರಿಂದ ಇದಕ್ಕೆ ಮೊದಲೇ ಈ ಕೃತಿ ಪ್ರಕಟವಾಗಿರುವುದು ಸ್ಪಷ್ಟವಿದೆ. ಹಾಗೆಯೇ 'ಶ್ರೀನಿವಾಸ ಸಂಕೀರ್ತನಾ'ದ ಒಂದು ಮಾತಿನಲ್ಲಿ 'ಕರ್ನಾಟಕ ನಂದಿನಿಯಲ್ಲಿ ಇದೇ ಕವಿಯ ಗೋಪಿಕಾಗೀತೆಯು ಪ್ರಕಟವಾಗಿರುವುದು' ಎಂದಿರುವುದರಿಂದ ಹಾಗೂ ೧೯೨೨ರ ಅಡಿ ಟಿಪ್ಪಣಿಯಲ್ಲಿ ಇದರ ಉಲ್ಲೇಖ ಇಲ್ಲದಿರುವುದರಿಂದ ಈ ಕೃತಿ ೧೯೨೩ರಲ್ಲಿ ಪ್ರಕಟವಾಗಿದೆ ಎಂದು ಹೇಳಬಹುದು. ಇದೇ 'ಒಂದುಮಾತಿ'ನಲ್ಲಿ 'ಇವರಿಂದ ರಚಿತವಾದ 'ವ್ಯಾಘ್ರಾಚಲ ಮಹಾತ್ಮೆ', 'ರಾಧಾಕೃಷ್ಣವಿಲಾಸ' ಎಂಬ ಯಕ್ಷಗಾನ ಪ್ರಬಂಧಗಳನ್ನೂ ಇನ್ನು ಉಳಿದ ಕೀರ್ತನೆಗಳನ್ನೂ ಅವಕಾಶಾನುಸಾರವಾಗಿ ಪ್ರಕಟಿಸಬೇಕೆಂಬ ಸಂಕಲ್ಪವಿದೆ' ಎಂದೂ ಹೇಳಿರುವುದರಿಂದ ಇವು ೧೯೨೩ರ ನಂತರ

ಪ್ರಕಟವಾಗಿರುವುದು ಸ್ಪಷ್ಟವಿದೆ. ಕವಿಚರಿತೆಯಲ್ಲಿ ಈ ಕೃತಿಗಳು ಉಲ್ಲೇಖವಾಗಿರು-ವುದರಿಂದ ಇವು ಪ್ರಕಟವಾಗಿವೆ ಎಂದೇ ನಂಬಬಹುದಾಗಿದೆ. ಈ ಉಲ್ಲೇಖಗಳ ಹಿನ್ನೆಲೆಯಲ್ಲಿ ೧೯೨೨-೨೩ರ ಆಸುಪಾಸಿನಲ್ಲಿ 'ಸತೀಹಿತೈಷಿಣಿ' ಗ್ರಂಥ ಮಾಲೆಯಲ್ಲಿ ಈ ಕೃತಿಗಳೆಲ್ಲ ಪ್ರಕಟನೆಯಾಗಿರುವುದು ಕಂಡುಬಂದರೂ ದಾಸರ ಜೀವಿತಾವಧಿಯಲ್ಲಿ ಇವು ಪ್ರಕಟವಾಗಿದ್ದವೆ ಎಂಬುದನ್ನು ಪರಿಶೀಲಿಸಬೇಕಿದೆ.

(೩) ಕೀರ್ತನೆಗಳು

'ಶ್ರೀನಿವಾಸ ಸಂಕೀರ್ತನಂ' ಹೆಸರಿನಲ್ಲಿ ಸತಿಹಿತೈಷಿಣಿ ಗ್ರಂಥಮಾಲೆಯ ೬ನೇ ಗ್ರಂಥವಾಗಿ ೧೯೨೩ರಲ್ಲಿ ನಂಜನಗೂಡಿನಿಂದ ಪ್ರಕಟವಾಗಿರುವ ಗ್ರಂಥದಲ್ಲಿರುವ ೧೦೨ ಕೀರ್ತನೆಗಳಷ್ಟೇ ವೆಂಕಟವರದಾಚಾರ್ಯರ ಹೆಸರಿನಲ್ಲಿರುವುದು. ಆದರೆ ದಾಸರು ೫೦೦ಕ್ಕೂ ಅಧಿಕ ಕೀರ್ತನೆಗಳನ್ನು ಮಾಡಿರಬಹುದೆಂದು ಸಂಪ್ರದಾಯದವರಲ್ಲಿ ಪ್ರಚಲಿತವಿದ್ದರೂ 'ನಮಗೆ ಆ ಗ್ರಾಮದ ಮಹಾಜನರು, ಶ್ರೀವರದಾರ್ಯರ ಶಿಷ್ಯ ಪ್ರಶಿಷ್ಯ ವರ್ಗಕ್ಕೆ ಸೇರಿದ ಅಭಿಮಾನಿಗಳ ಕಡೆಯಿಂದ ದೊರೆತಿರುವಷ್ಟನ್ನು ಮಾತ್ರ ಈಗ ಪ್ರಕಟಿಸಿದ್ದೇವೆ' ಎಂದು 'ಒಂದು ಮಾತಿ'ನಲ್ಲಿ ತಿಳಿಸಿರುವುದರಿಂದ ದೊರೆತಿರುವ ಕೀರ್ತನೆಗಳು ಇಷ್ಟೇ ಎಂದು ಹೇಳಬಹುದು.

'ಶ್ರುತಿಹೀನತೆಯಿಂದತಿಶಯಮಾಗದು ಕೃತಿಶತವದು ಸಾರಿ' ೨೨೨

ಎಂಬ ಕೀರ್ತನೆಯೂ ಇದಕ್ಕೆ ಪೂರಕವಾಗಿದ್ದು ಇಲ್ಲಿಯ 'ಕೃತಿಶತ' ಎಂಬುದು ದಾಸರು ರಚಿಸಿರುಬಹುದಾದ ಕೀರ್ತನೆಗಳ ಸಂಖ್ಯೆಯನ್ನೇ ಹೇಳುತ್ತಿರುವಂತಿದೆ. ಆದರೆ ಮೈಸೂರಿನ ಪ್ರಣತಾರ್ಥಿಹರನ್ ಅವರ ಸಂಗ್ರಹದಹಸ್ತಪ್ರತಿಯಲ್ಲಿ ಇವರ ಪ್ರಕಟಿತ 'ಶ್ರೀನಿವಾಸ ಸಂಕೀರ್ತನಂ' ನಲ್ಲಿಲ್ಲದ ಒಂದು ಕೀರ್ತನೆ

ಪಾಲಿಸೆನ್ನ ಶ್ರೀಲೋಲ ಕೃಪಾಳು ೧೯೦

ಲಭ್ಯವಾಗಿರುವುದು ಇನ್ನೂ ಹೆಚ್ಚಿನ ಕೀರ್ತನೆಗಳು ಇದ್ದಿರಬಹುದಾದ ಸಾಧ್ಯತೆಯತ್ತ ಗಮನ ಸೆಳೆಯುತ್ತದೆ. ಸಂಪ್ರದಾಯದವರಲ್ಲಿ ಇಂತಹ ಇನ್ನೂ ಹಲವು ದಾಸರ

ಅಪ್ರಕಟಿತ ಕೀರ್ತನೆಗಳು ಗೋಚರವಾಗಬಹುದು. ದಾಸರ ಶಿಷ್ಯವರ್ಗವಾಗಲಿ ವಂಶಸ್ಥರಾಗಲಿ ಸಂಪ್ರದಾಯವಾಗಲಿ ಬೆಳಕಿಗೆ ಬಂದರೆ ಮಾತ್ರ ಮತ್ತಷ್ಟು ಕೀರ್ತನೆಗಳು ಸೇರ್ಪಡೆಯಾಗುತ್ತವೆ.

ವೆಂಕಟವರದಾರ್ಯರ ಕೀರ್ತನೆಗಳ ಅಂಕಿತ 'ವರದ ವಿಠಲ'. ಇದನ್ನು ದಾಸರು ಎಲ್ಲ ಶ್ರೀವೈಷ್ಣವ ಹರಿದಾಸರಂತೆ ಪ್ರಪತ್ತಿ ಮಾರ್ಗದಲ್ಲಿ ಆರಾಧ್ಯದೈವದ ಹೆಸರಿನಲ್ಲಿ ಸ್ವೀಕರಿಸಿರುವುದು ಸ್ಪಷ್ಟವಿದೆ. ಆದರೆ 'ವಿಠಲ' ಎಂಬುದು ಇಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಶ್ರೀವೈಷ್ಣವ ಕೀರ್ತನಕಾರರಲ್ಲಿ (ಒಟ್ಟಾರೆ ಮಧ್ವೇತರ ಹರಿದಾಸರಲ್ಲೇ) ಸಾಮಾನ್ಯವಾಗಿ ಈ ವಿಠಲಾಂಕಿತ ಇರುವುದಿಲ್ಲ. ವೆಂಕಟವರದಾರ್ಯರು ಶ್ರೀವೈಷ್ಣವ ಮತ-ತತ್ವಪ್ರತಿಪಾದಕರು ಎಂಬುದರಲ್ಲಿ ಅನುಮಾನವಿಲ್ಲ. ಇವರ ಸಹೋದರ 'ರಾಮಾನುಜಾಚಾರ್ಯ'ರಾಗಿರುವುದು ಮತ್ತು ಆರ್. ನರಸಿಂಹಾಚಾರ್ಯರ ಉಲ್ಲೇಖಗಳನ್ನು ಬಿಟ್ಟರೆ ಇದಕ್ಕೆ ಬೇರೆ ಉಲ್ಲೇಖಗಳಿಲ್ಲದಿದ್ದರೂ ಕೀರ್ತನೆಗಳಲ್ಲೂ ನೇರವಾಗಿ ತಾತ್ವಿಕಪರಿಭಾಷೆ ಕಂಡು ಬರದಿದ್ದರೂ ಎಲ್ಲ ಕೀರ್ತನೆಗಳೂ ಶ್ರೀವೈಷ್ಣವ ತತ್ವಗಳನ್ನೇ ಪ್ರತಿಪಾದಿಸುತ್ತವೆ.

ವೆಂಕಟವರದಾರ್ಯರ ಕೀರ್ತನೆಗಳು ಕನ್ನಡ ಹರಿದಾಸಸಾಹಿತ್ಯಕ್ಕೇ ಉತ್ತಮ ಕೊಡುಗೆಯಾಗಿವೆ. ಶ್ರೀಹರಿಸ್ತುತಿ, ಲಕ್ಷ್ಮೀಸ್ತುತಿ ಎಂದು ಶ್ರೀವೈಷ್ಣವತತ್ವಕ್ಕೆ ಅನುಗುಣವಾಗಿ ದೇವತಾಸ್ತುತಿಗಳು ವಿಭಾಗಗೊಳ್ಳುತ್ತವೆ. ಸಾಮಾನ್ಯ ಕೀರ್ತನೆಗಳ ಲಕ್ಷಣದಂತೆ ಉಳಿದವು ಆತ್ಮನಿವೇದನೆ, ಲೋಕನೀತಿ, ತಾತ್ವಿಕ ಕೃತಿಗಳು ಕ್ಷೇತ್ರವರ್ಣನೆ ಇತ್ಯಾದಿಯಾಗಿ ವಿಭಾಗಗೊಳ್ಳುತ್ತವೆ. ಭಾಷೆ, ಬಂಧ ಮತ್ತು ಭಾವಗಳಲ್ಲಿ ಉತ್ತಮ ಸಿದ್ಧಿಯನ್ನು ಸ್ಥಾಪಿಸಿರುವಂತೆ ಈ ಕೀರ್ತನೆಗಳು ತೋರುತ್ತವೆ. 'ಹರಿದಾಸ ವೃತ್ತಿ'ಯನ್ನು ಕುರಿತು ಇವರ ಹಲವು ಕೀರ್ತನೆಗಳಲ್ಲಿ ಉಲ್ಲೇಖವಿದ್ದು ಹರಿದಾಸ ವೃತ್ತಿಯಲ್ಲೇ ಈ ಕೀರ್ತನಕಾರರು ಜೀವಿಸಿದ್ದರೆಂಬುದನ್ನು ದೃಢಪಡಿಸುತ್ತವೆ.

'ತಾಳ ತಂಬೂರಿಯ ತಪ್ಪದೆ ತಂದು ಮೇಳೈಸಿ ಶ್ರುತಿಯ
ಹಾಳು ಹರಟೆಯಿಂದ ಕಾಲವಕಳೆಯದೆ
ಶ್ರೀಲಲಾಮನ ಕಥೆ ಪೇಳುವ ಕೇಳುವ

ಹರಿವಾಸರವನು ಸಾಧಿಸಿ ಮುರಹರನಾಮಗಳ
ಹರಿದಾಸರೊಡಗೂಡಿ ಹರುಷದಿಂದೆಚ್ಚೆತ್ತು
ವರದ ವಿಠಲ ನರಹರಿಯೆಂದು ಪಾಡುವ' ೨೦೬

'ಹರಿಕೃಪೆಯಿಂದಲಿ ದೊರೆತಿತು ಎನಗೀ ಸಿರಿತಂಬೂರಿ' ೨೨೨

'ಹರಿದಾಸರನು ಬಲು ಹಿರಿದಾಗಿ ಮೆರೆಸುವ' ೧೨೫

'ಇಳೆಯೊಳು ಪುಲಿಗಿರಿ ದಾಸರ
ಬಲುಹು ಕುಂದಕವಹುದೆ' ೧೫೬

ಎಂಬ ಕೆಲವು ಉಲ್ಲೇಖಗಳಲ್ಲಿ ಈ ಅಂಶ ಸ್ಪಷ್ಟವಾಗುತ್ತದೆ. ಈ ಕಾಲದವರೆಗೂ 'ಹರಿದಾಸವೃತ್ತಿ' ನಿರಂತರವಾಗಿ ಬೆಳೆದು ಬಂದಿರುವುದು; ಶ್ರೀವೈಷ್ಣವ ಹರಿದಾಸರು ದೀಕ್ಷೆಯಾಗಿ ಇದನ್ನು ಸ್ವೀಕರಿಸದಿದ್ದರೂ ಈ ವೃತ್ತಿಯನ್ನು ಅನುಸರಿಸುತ್ತಿದ್ದುದು ಇದರಿಂದ ಸ್ಪಷ್ಟವಾಗುತ್ತದೆ. ಇವರ ದೈವಸ್ತುತಿಗಳಲ್ಲಿ 'ಶ್ರೀಹರಿಏಕನಿಷ್ಠೆ' ಸ್ಪಷ್ಟವಾಗಿ ಪಡಿಮೂಡಿದೆ. ಲಕ್ಷ್ಮಿ ಮತ್ತು ಲಕ್ಷ್ಮೀಸಮೇತ ವಿಷ್ಣುವನ್ನು ಬಿಟ್ಟರೆ ಇತರದೈವಗಳನ್ನು ಅಂದರೆ ಸರ್ವದೈವವನ್ನು ಇವರು ಸ್ತುತಿಸಿಲ್ಲ. ಇದೂ ಶ್ರೀವೈಷ್ಣವೂ ನಿಷ್ಠೆಯನ್ನು ತೋರಿಸುತ್ತದೆ.

'ಪಾಲಿಸೊ ಎನ್ನ ಪರಾತ್ಪರ–ಹರಿ
ಪಾಲಿಸೋ ಬುಧಹಿತ ಫಾಲನಯನನುತ' ೧೩೪

ಎಂಬಂತಹ ಹಲವು ಕೀರ್ತನೆಗಳಲ್ಲಿ ಈ ಅಂಶ ವ್ಯಕ್ತವಾಗಿದೆ. ಇಲ್ಲಿ ಶ್ರೀಹರಿಯನ್ನು 'ಪರಾತ್ಪರ' ಎಂದು ಕರೆದಿರುವುದಲ್ಲದೆ 'ಫಾಲನಯನನುತ' ಎನ್ನುವ ಮೂಲಕ ಶ್ರೀಹರಿಏಕನಿಷ್ಠೆಯನ್ನು ಕಾಣಬಹುದು. ಹಾಗೆಯೇ ಇದೊಂದು ದಶಾವತಾರ ಸ್ತುತಿಯಾಗಿದ್ದು ಶ್ರೀವೈಷ್ಣವ ಕಲ್ಪನೆಯಂತೆ ಬುದ್ಧನ ಬದಲಿಗೆ ಬಲರಾಮನನ್ನು ಕಲ್ಪಿಸಲಾಗಿದೆ. ಇವರ ೫೦ ದೇವತಾಸ್ತುತಿಗಳಲ್ಲಿ ೧೫ ಶ್ರೀಹರಿಯ ವಿವಿಧ ಪರ, ವ್ಯೂಹ ರೂಪಗಳನ್ನು ಕುರಿತಿದ್ದರೆ ೩ ಶ್ರೀರಾಮನನ್ನೂ ೬ ಶ್ರೀಕೃಷ್ಣನನ್ನೂ ೧೧ ಶ್ರೀನಿವಾಸನನ್ನೂ ಕುರಿತಿವೆ. ಶ್ರೀನಿವಾಸ ಈ ದಾಸರಿಗೆ ಮೆಚ್ಚಿನ ದೈವವಾಗಿದೆ. ೪ ಲಕ್ಷ್ಮೀಸ್ತುತಿಯಲ್ಲಿ ಒಂದು ರಾಧೆಯನ್ನು ಕುರಿತದ್ದಾಗಿದೆ.

'ಸುರಾಸುರಾರ್ಚಿತ ಸರೋಜಲೋಚನ
ಸರಾಗದಿಂದೆನ್ನನೀಕ್ಷಿಸೈ
ಪರಾಪರೇಶನೆ ಪರಾತ್ಪರನೆ ನೀ
ಪರಾಕು ಮಾಡದೆ ಪಾಲಿಸೈ ೧೪೨

ಹರಿಯೆ ಎನ್ನದೊರೆಯೆ ನಿನ್ನಯ
ಮೊರೆಯ ಹೊಕ್ಕೆನೋ ೧೪೫

ಮರೆತಿರಲಾರೆ ಮನಸಾರೆ ಹರೇ ೧೯೩

ಎಂತು ನುತಿಪೆ ನಾನು ಈ ಜಗದಂತರ್ಯಾಮಿಯನು ೧೪೬

ಮನವೆ ಚಿಂತಿಸು ಹರಿ ಮುರಾರಿಯ ೧೫೧

'ರಾಮನ ನೆನೆಮನವೆ ಹೃದಯರಾಮನ ನೆನೆಮನವೆ' ೧೫೫

'ಪರಮಪುರುಷ ಬಾರೋ ಪಾವನ
ಚರಣ ಯುಗವ ತೋರೋ' ೧೫೬

'ಬೃಂದಾವನವೇರಿ ಬಹುನಲವಿಂದ ಬಂದ ಶೌರಿ, ೧೫೮

'ಶ್ರೀನಿವಾಸ ಮುನಿಮಾನಸ ಹಂಸ
ಮಹಾನುಭಾವ ದೇವ' ೧೬೨
'ವೆಂಕಟಾಚಲವಾಸ ಪಂಕಜಪ್ರಿಯಭಾಸ' ೧೭೦

ಮುಂತಾದ ಹಲವು ಕೀರ್ತನೆಗಳಲ್ಲಿ ಅತ್ಯಂತ ಸುಂದರವಾಗಿ ಶ್ರೀಹರಿಯನ್ನು ಸ್ತುತಿಸಲಾಗಿದೆ.

'ಕಲಯೇಹಂ ಶ್ರೀಕನಕಾದ್ರೀಶಂ' ೧೫೧
'ನಮೋಸ್ತುತೇ ಕಮಲಾಪತೇ' ೧೩೩

ಮುಂತಾದ ಸಂಸ್ಕೃತಮಯವಾದ ಕೃತಿಗಳೂ ಇವೆ.

ಲಕ್ಷ್ಮಿಯನ್ನು ಸ್ತುತಿಸಿರುವ ಮೂರು ಕೀರ್ತನೆಗಳೂ ಉತ್ತಮವಾಗಿವೆ. ರಾಧೆಯನ್ನು ಕುರಿತು ಒಂದು ಕೃತಿಯಿದ್ದು ವಿಶೇಷವೆನಿಸಿದೆ. ಕನ್ನಡ ಹರಿದಾಸ

ಸಾಹಿತ್ಯದಲ್ಲೇ ಅಪರೂಪವಾದ ರಾಧಾಸ್ತುತಿಗೆ ಇದು ನಿದರ್ಶನವಾಗಿ ಆ ಕೊರತೆಯನ್ನು ನೀಗಿಸುತ್ತಿದೆ. ರಾಧೆಯನ್ನು ಕೃಷ್ಣಲೀಲೆಗಳಲ್ಲಿ ಕೆಲವು ದಾಸರು ಸ್ತುತಿಸಿದ್ದರೂ ಲಕ್ಷ್ಮೀ ಸಮಾನವಾಗಿ ಯಾರೂ ಸ್ತುತಿಸಿಲ್ಲ ಎಂದೇ ಹೇಳಬೇಕು. ಇಲ್ಲಿಯ

'ಶ್ರೀಕರಮಾಗಿಹ ಗೋಕುಲದಲಿ
ಕರುಣಾಕರ ಕೃಷ್ಣನು ನೆಲೆಸಿರಲು' ೧೭೫

ಎಂಬ ರಾಧಾಸ್ತುತಿಯು ಕಥನರೂಪದಲ್ಲಿದ್ದು ಭಾಗವತದಲ್ಲಿ ಬರುವ ನಂದಾದಿಗಳು ಕಾಳಿಂದೀ ತೀರದ ನಂದನವನಕ್ಕೆ ಬಂದಿದ್ದಾಗ ಸಂಜೆಯಲ್ಲಿ ಕೃಷ್ಣನನ್ನು ಮನೆಗೆ ಕರೆತರುವ ಜವಾಬ್ದಾರಿಯನ್ನು ನಂದನಿಂದ ಪಡೆದ ರಾಧೆ ಅತ್ಯುತ್ಸಾಹದಿಂದ ಅವನನ್ನೊಡಗೂಡುವ ಚಿತ್ರ ಈ ಕೀರ್ತನೆಯಲ್ಲಿ ಬರುತ್ತದೆ. ಸ್ತ್ರೀಸಹಜ ಸುಪ್ತಭಾವನೆಗಳು ಇಲ್ಲಿ ಭಕ್ತಿಯ ರೂಪದಲ್ಲಿ ಮೇಳೈಸಿರುವ ಪರಿ ಅತ್ಯಂತ ಸುಂದರವಾಗಿ ಬಂದಿದೆ.

ಸುಮಾರು ೩೦ ಕೀರ್ತನೆಗಳಲ್ಲಿ ಆತ್ಮನಿವೇದನೆಯ ಭಾವ ವ್ಯಕ್ತವಾಗಿದ್ದು ಅವೆಲ್ಲ ಶ್ರೀವೈಷ್ಣವ ತತ್ವವಾದ 'ಶರಣಾಗತಿ' ಧರ್ಮಕ್ಕೆ ಸಹಜವಾಗಿ ಸ್ಪಂದಿಸಿವೆ. ವೆಂಕಟವರದಾರ್ಯರ ಕೀರ್ತನೆಗಳ ಮುಖ್ಯಭಾವವೇ ಈ ಶರಣಾಗತಿಯಾಗಿದ್ದು ಹಲವು ಕೀರ್ತನೆಗಳಲ್ಲಿ ಅದನ್ನು ಪರಿಪರಿಯಾಗಿ ಬಿನ್ನವಿಸಿದ್ದಾರೆ.

ಇದನಾದರು ಕೊಡದಿದ್ದರೆ ನಿನ್ನ
ಪದಸೇವೆಗೆ ಜನರೊದಗುವರೆ ೧೭೬

ದೊರೆತನವಾಗಬೇಕೆನಲಿಲ್ಲ ಬಲು
ಸಿರಿತನವನು ವಾಂಛಿಸಲಿಲ್ಲ
ಪರಿಭೋಗದಸ್ಪೃಹೆ ಎನಗಿಲ್ಲ ನಿನ್ನ
ಸ್ಮರಣೆಯೊಂದಿತ್ತರೆ ಸಾಕಲ್ಲ.

ಎಂಬುದು ದಾಸರ ಶರಣಾಗತಿಯ ಮುಖ್ಯಲಕ್ಷಣವಾಗಿದೆ.

ಧರೆಯ ರಾಜ್ಯವನೊಲ್ಲೆ ಸಿರಿಯ ಸಂಪದವೊಲ್ಲೆ
ಸುರರುಭೋಗಿಪ ಸುರಪುರವನಾನೊಲ್ಲೆ
ಪರಮೇಷ್ಠಿಪುರದೊಳಗಿರೆ ನಾನೊಲ್ಲೆನು ನಿನ್ನ
ಹೊರತಾದ ಕೈವಲ್ಯ ಸ್ಥಿರವೊಲ್ಲೆನು ೧೮೪

ನಿರುತನಿನ್ನಯ ಚರಿತೆಯಲಿ ಮನವಿರಲಿ ನಾನಾ
ತೆರದ ಭಕ್ತಿಯೊಳಿರಲಿ ಎನ್ನಯ ಕರಣವೃತ್ತಿಯು
ಪರಮಪುಲಿಗಿರಿ ವರದವಿಠಲ

ಇದು ಎಲ್ಲ ಶ್ರೀವೈಷ್ಣವ ಹರಿದಾಸರ ಧೋರಣೆಯೇ ಆಗಿದೆ. ಇವರ ಭಕ್ತಿಯ ಸ್ವರೂಪ ಅತ್ಯಂತ ವಿಶಿಷ್ಟವಾದದ್ದು. ಲೋಕದಲ್ಲಿದ್ದೂ ಲೋಕಕ್ಕೆ ಅಂಟಿಕೊಳ್ಳದ ರೀತಿಯಲ್ಲಿ ಸಮಾಜದಲ್ಲಿದ್ದೂ ಸಾಮಾಜಿಕ ಅಗತ್ಯಗಳಿಗೆ ಕಿವಿಗೊಡದ ರೀತಿಯಲ್ಲಿ ಸಂಸಾರದಲ್ಲಿದ್ದೂ ಸಾಂಸಾರಿಕ ಸುಖಾಪೇಕ್ಷೆಗಳಿಗೆ ತೆರೆದುಕೊಳ್ಳದ ರೀತಿಯಲ್ಲಿ ವಿಶಿಷ್ಟ ವಿರಕ್ತಿಯನ್ನು ಸಾಧಿಸಿರುವದನ್ನು ಕಾಣಬಹುದು. ದೇವರು ಪ್ರತ್ಯಕ್ಷನಾದರೂ ಇವರು ಕೇಳುವ ವರ ಶರಣಾಗತಿಯೊಂದನ್ನೇ

ಕೊಡುಕೊಡು ವರವನು ತಡವ ಮಾಡದೆ ಎ-
ನ್ನೊಡೆಯ ಶ್ರೀಹರಿ ಕೃಪೆಮಾಡಯ್ಯ
ಬಿಡದಿರೆನ್ನನು ಜಗದೊಡತಿಯಾಣೆ ನಿ
ನ್ನಡಿಗಳನೆಂದಿಗೂ ಬಿಡೆನಯ್ಯ ೧೮೧

ಲಕ್ಷ ಲಕ್ಷ ಸುರಿದರೂ ಶರಣಾಗತಿಯ ಹೊರತು ಅದರ ಲಕ್ಷ್ಯವಿಲ್ಲ ಈ ದಾಸರಿಗೆ.

ಸೃಷ್ಟಿನಾಥ ಪದವಿಷ್ಟರ ಭಕ್ತಿಯ
ಕೊಟ್ಟರಭೀಷ್ಟವು ಎನಗಯ್ಯ

ಇಷ್ಟರ ಮೇಲಿನ್ನು ಲಕ್ಷಕೊಟ್ಟರೂ ಎನ
ಗಿಷ್ಟವಿಲ್ಲ ಶ್ರೀ ಕೃಷ್ಣಯ್ಯ ೧೮೨

ಎಂಬಂತಹ ದಿಟ್ಟ ಧೋರಣೆಯ ಈ ದಾಸರ ಭಕ್ತಿ ಅನನ್ಯವಾದದ್ದು.

ಆಡಿಸೊ ನಿನ್ನವರೊಳು ಪಾಡಿಸೋ ನಿನ್ನಯ ಕೀರ್ತಿ
ನೋಡಿಸೋ ನಿನ್ನಯ ಮೂರ್ತಿ ಬೇಡಿಸದಿರು
ಆಡಿಸದೆ ಭವವೆಂಬ ಕಾಡಿನೊಳ್ಕಟಾಕ್ಷದಿಂದ
ನೋಡಿ ನಿನ್ನ ನಾಡಿನೊಳಗಾಡಿಸೋ ಮುರಾರಿಹರಿ ೧೯೭

ಎಂಬ ಒಂದೇ ಬಯಕೆಯನ್ನು ಯಾಚಿಸುತ್ತ ಶ್ರೀಹರಿಯನ್ನು ವಿವಿಧ ರೀತಿಯಲ್ಲಿ ಸ್ತುತಿಸುವ ಪರಿ ಇವರ ಕೀರ್ತನೆಗಳಲ್ಲಿ ವಿಶೇಷವಾಗಿದೆ. ಭಕ್ತಿಯ ಅಭಿವ್ಯಕ್ತಿಗೆ ಈ ಶರಣಾಗತಿಯ ಮನೋಧರ್ಮ ಒಂದು ರೀತಿಯ ಹೊಸ ಪರಿಭಾಷೆಯನ್ನೇ ತಂದುಕೊಡಬಲ್ಲದಾಗಿದೆ.

ಸುಮಾರು ಹದಿನಾಲ್ಕು ಕೀರ್ತನೆಗಳಲ್ಲಿ ತಾತ್ವಿಕ ಚಿಂತನೆಯನ್ನು ಮಾಡಿರುವ ವೆಂಕಟವರದಾರ್ಯರು ಶ್ರೀವೈಷ್ಣವ ತತ್ವಗಳಾದ ನಾಮ-ಮಂತ್ರ ಮಹಿಮೆ, ಮೋಕ್ಷವಿಚಾರ, ಶ್ರೀಹರಿಏಕನಿಷ್ಠೆ ಮುಂತಾದವುಗಳನ್ನು ಅತ್ಯಂತ ಸರಳವಾಗಿ ಪಚ್ಚೆ ಹಣ್ಣು, ಮುತ್ತು, ನಂಟರು ಮುಂತಾದ ಅನೇಕ ಪ್ರತಿಮೆಗಳ ಮೂಲಕ ಸಾರಸ್ಯಕರವಾಗಿ ಹೇಳಿದ್ದಾರೆ.

ನಾರಾಯಣನೆಂಬ ನಾಮವ ನೇಮದಿ
ಪಾರಾಯಣಮಾಡಿರೋ
ಸಾರವಿಲ್ಲದ ಭವ ಪಾರಾವಾರದೊಳು
ತಾರಕವಿದು ನೋಡಿರೊ ೨೦೯

ಈತನೀತನೆ ರಮಾವಿಲಾಸನು ಕೇಳಿ ಜನರು
ಈತನೀಗ ಚಿದ್ವಿಲಾಸನು ೨೧೦

ನೀರಜಾಕ್ಷ ನಿನ್ನೂರಿಗೆ ಪೋಗುವ ದಾರಿಯ ತೋರಯ್ಯ ೨೧೭

ಶ್ರೀನಿವಾಸನಂಘ್ರಿ ಕಮಲ ಧ್ಯಾನ ಮಾಡಿರೋ
ಅನುಮಾನಬೇಡಿರೊ ೨೧೮

ಮುಂತಾದ ಕೀರ್ತನೆಗಳಲ್ಲಿ ತಾತ್ವಿಕವಿಚಾರಗಳು ಸ್ಪಷ್ಟವಾಗಿ ಮತ್ತು ದಟ್ಟವಾಗಿದ್ದರೂ ಅದು ಹೊರೆ ಎನಿಸದೆ ಭಾರವಾಗದೆ ಆಕರ್ಷಣೀಯವಾದ ಸರಳ–ಸುಲಭ ಸಾಧನವಾಗಿ ತೋರುವಂತಿದೆ. ವಾಸ್ತವವಾಗಿ ಭಕ್ತಿಯನ್ನರಸುವ ಜೀವಿಗೆ ತತ್ವ ಮುಖ್ಯವಾಗುವುದಿಲ್ಲ. ತನಗೆ ಹಿಡಿಸುವ, ಸುಲಭವೆನಿಸುವ ಮಾರ್ಗದಲ್ಲಿ ಅವನು ಸಾಗುತ್ತಾನೆ. ಅಂತಹ ಸುಲಭೋಪಾಯವಾಗಿ ಈ ಕೀರ್ತನೆಗಳು ತತ್ವದಾಚೆಗೂ ನಿಂತು ಯಶಸ್ವಿಯಾಗಿವೆ.

'ಎಂತೋ ಪೂಜಿಪುದಂತರ್ಯಾಮಿಯನನಂತಾದಿರಹಿತನ' ೨೧೧

ಎಂಬುದರಲ್ಲಿ ಶ್ರೀಹರಿಯ ವಿಶ್ವ ವ್ಯಾಪಕತೆಯನ್ನೂ ಸರ್ವಾಂತರ್ಯಾಮಿತ್ವವನ್ನೂ ಹೇಳುತ್ತ ಪೂಜಾವಿಧಾನದ ಷೋಡಶ ಕ್ರಮಗಳನ್ನು ಹೋಲಿಸುತ್ತ ಅವೆಲ್ಲವೂ ಅವನೇ ಆಗಿರುವಾಗ ಅಂಥವನನ್ನೂ ಅವುಗಳಿಂದಲೇ ಪೂಜಿಸುವುದಾದರೂ ಹೇಗೆ ಎಂದು ಪ್ರಶ್ನಿಸುತ್ತಲೇ ಅವನ ಚರಣಭಜಕರನ್ನು (ಭಕ್ತ) ಸೇವಿಸಿದರೆ ಸಾಕೆಂದು ಹೇಳುವ ಈ ಕೀರ್ತನೆ ಏಕಕಾಲದಲ್ಲಿ ಶ್ರೀಹರಿಏಕನಿಷ್ಠೆಯನ್ನೂ ದೇವ–ಜೀವ–ಲೋಕದ ಏಕತೆಯನ್ನೂ ಆಚಾರ್ಯರು, ಭಕ್ತರ ಮೂಲಕ ಮಾತ್ರ ಮೋಕ್ಷ, ದೈವ ಕೃಪೆ ಸಾಧ್ಯವೆಂಬುದನ್ನೂ ಪ್ರತಿಪಾದಿಸುತ್ತದೆ.

'ಎನಗೆ ನಾನೇ ಸರಿ ನಿನಗೆ ನೀನೇ ಹರಿ' ೨೧೨

ಎಂಬ ಇನ್ನೊಂದು ಕೀರ್ತನೆ ವಿಶಿಷ್ಟಾದ್ವೈತದ ವಿಶಿಷ್ಟ ತತ್ವವನ್ನು ಅತ್ಯಂತ ಮಾರ್ಮಿಕವಾಗಿ ಧ್ವನಿಸುತ್ತದೆ. ದೇವ–ಜೀವ ಎರಡೂ ಬೇರೆಬೇರೆ ಎಂಬ ದ್ವೈತವನ್ನು ಹೇಳುತ್ತಲೇ ಕೊನೆಯಲ್ಲಿ ಅದ್ವೈತವನ್ನೂ ಸಾಧಿಸಿ ಅದನ್ನು ವಿಶೇಷೀಕರಿಸುತ್ತದೆ. ಜೀವ ದೇವರಿಂದ ಬೇರೆಯಾದರೂ ಸಂಪೂರ್ಣ ಬೇರಲ್ಲ, ಅದಕ್ಕೇ ಸಂಬಂಧಿಸಿದುದು, ಅದರಲ್ಲೇ ಲೀನವಾಗಿರುವಂತಹುದು ಎಂಬ ವಿಶೇಷ

ಸಂಬಂಧದ ಮೂಲಕ ಅಭಿವ್ಯಕ್ತವಾಗಿರುವ ವಿಶಿಷ್ಟಾದ್ವೈತವನ್ನೇ ಇದು ನಿರ್ದೇಶಿಸುತ್ತದೆ. 'ನಿಜ ಶರಣರ ಚರಣ ಧೂಳೀಪಟಲ' ಎಂಬ ಸಾಲಿನಲ್ಲಿ ಈ ತತ್ವ ಅಡಗಿದೆ.

ಲೆಕ್ಕವಿಲ್ಲದ ಹಣವಿತ್ತರು ಸಿಕ್ಕದ ದುರ್ಲಭ ಮುತ್ತು
ರೊಕ್ಕವಿಲ್ಲದೆ ಭಕ್ತರಿಗೆ ಪುಕ್ಕಟ್ಟೆಯಾಗಿ ಸಿಕ್ಕುವಂಥ ೨೧೭

ಕೈಗೆ ಸಿಕ್ಕುವುದಿಲ್ಲವೈ ತಕ್ಕಡಿಯಲ್ಲಿ
ತೂಗಿ ನೋಡುವುದಲ್ಲವೈ
ಆಗಮಾಂತಗಳಲ್ಲಿ ಯೊಗಿಹೃದಯದಲ್ಲಿ
ಭಾಗವತರೊಳನುರಾಗದಿ ದೊರೆಯುವ ೨೧೫

ಹುಟ್ಟಿಬೆಳೆಯದ ಜನರು ಮುಟ್ಟಿ ತೊಳೆಯದ
ಎಷ್ಟುದಿವಸವಿಟ್ಟಿರಲು ಕೊಳೆತು ಕೆಟ್ಟುಹೊಗದ ೨೩೧

ಈ ಮೂರೂ ಕ್ರಮವಾಗಿ ಮುತ್ತು, ಪಚ್ಚೆ, ಹಣ್ಣುಗಳನ್ನು ಹೇಳುವ ಪ್ರತಿಮೆಗಳು. ಅತ್ಯಂತಸುಂದರವಾದ ಪ್ರತಿಮಾವಿಧಾನದಿಂದ ಈ ಕೀರ್ತನೆಗಳು ಉತ್ಕೃಷ್ಟಸ್ಥಾನವನ್ನು ಪಡೆಯುತ್ತವೆ. ಪುರಂದರದಾಸರ ಕಲ್ಲುಸಕ್ಕರೆ, ರಾಗಿ ಮುಂತಾದ ಪ್ರತಿಮೆಗಳ ಸಾಲಿನಲ್ಲಿ ನಿಲ್ಲುವ ಈ ಕೀರ್ತನೆಗಳು ಕನ್ನಡ ಹರಿದಾಸಸಾಹಿತ್ಯಕ್ಕೆ ವಿನೂತನ ಕೊಡುಗೆಗಳಾಗಿವೆ.

ವೆಂಕಟವರದಾರ್ಯರ ಕೀರ್ತನೆಗಳಲ್ಲಿ ದೈವಸ್ತುತಿ ಆತ್ಮನಿವೇದನೆ ಮತ್ತು ತತ್ವಪ್ರತಿಪಾದನೆಯ ಸ್ತುತಿಗಳೇ ಅಧಿಕವಾದರೂ ಸಾಮಾಜಿಕ ಸ್ಪಂದನದ ಕೃತಿಗಳೂ ಇಲ್ಲದಿಲ್ಲ. ಇವರ ತತ್ವಪ್ರತಿಪಾದಕ ಕೃತಿಗಳು ತಾತ್ವಿಕ ಪರಿಭಾಷೆಯ ತತ್ವನಿಷ್ಠೆಗೆ ಬದ್ಧವಾಗದೆ ತತ್ವದ ಎಳೆಹಿಡಿದು ಸಾಮಾಜಿಕ ಬದ್ಧತೆಯಲ್ಲಿಯೇ ಗುರುತಿಸಿ ಕೊಂಡಿರುವುದರಿಂದ ಇವೂ ಒಂದು ರೀತಿಯಲ್ಲಿ ಲೋಕನೀತಿಯನ್ನು ಹೇಳುವ ಕೀರ್ತನೆಗಳೇ ಆಗಿವೆ. ಹಾಗೆ ನೋಡಿದರೆ ಈ ದಾಸರ ಕೃತಿಗಳಲ್ಲಿ ಎಲ್ಲಿಯೂ

ತತ್ವಪ್ರತಿಪಾದನೆ ನೇರವಾಗಿ ಕಾಣಿಸಿಕೊಂಡೇ ಇಲ್ಲ. ಎಲ್ಲ ಶ್ರೀವೈಷ್ಣವ ಹರಿದಾಸರೂ ತಪ್ಪದೆ ಸ್ತುತಿಸುವ ಆಚಾರ್ಯ-ಆಳ್ವಾರರ ಸ್ತುತಿ ಇವರಲ್ಲಿ ಇಲ್ಲವೇ ಇಲ್ಲ. ಇದೂ ಸಹ ಇವರ ಈ ಮನೋಭಾವಕ್ಕೆ ಪೂರಕವಾಗಿಯೇ ಇದೆ. ಈ ಹಿನ್ನೆಲೆಯಲ್ಲಿ ಇವರ ಕೀರ್ತನೆಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ ಎಂದರೆ ತಪ್ಪಾಗದು. ಹರಿದಾಸ ವೃತ್ತಿಯನ್ನೇ ಅನುಸರಿಸಿ ಅದಕ್ಕೆ ಸಕ್ರಿಯವಾಗಿ ಸ್ಪಂದಿಸಿರುವ ಈ ದಾಸರ ಕೀರ್ತನೆಗಳು ಹರಿದಾಸ ಸಾಹಿತ್ಯದ ಸಂದರ್ಭದಲ್ಲಿ ಯಾವುದೇ ಸಮರ್ಥ ಕೀರ್ತನೆಗಳೊಂದಿಗೆ ಸರಿಸಮನಾಗಿ ನಿಲ್ಲುವ ಶಕ್ತಿಯನ್ನು ಪಡೆಯಬಲ್ಲವು ಎನಿಸುತ್ತದೆ.

ಏನಯ್ಯ ದೊರೆಯೆ ನಿನನಗಾನಂದವೆ ದೊರೆಯೆ
ಮಾನಿತಜನರವಮಾನವ ನೋಡದೆ
ಹೀನಜನರನುಡಿ ನೀನೊಲಿದಾಲಿಪುದು ೨೦೪

ದೀನನ ಸೇರಿದರೇನು ಫಲ ಗುಣಹೀನನ
ಸೇರಿದರೇನು ಫಲ ೨೦೭

ಎಂಬಂತಹ ಕೀರ್ತನೆಗಳಲ್ಲಿ ತಮ್ಮ ಕಾಲದಲ್ಲಾಗುತ್ತಿದ್ದ ಸಾಮಾಜಿಕ ಮೌಲ್ಯಗಳ ಅಧಃಪತನವನ್ನು, ಅನೈತಿಕತೆಯ ಮೇಲಾಟವನ್ನು ಅತ್ಯಂತ ಸೂಕ್ಷ್ಮವಾಗಿ ಬಿಡಿಸಿದ್ದಾರೆ. ಸತ್ಯವಂತರಿಗೆ ಕಾಲವಿಲ್ಲ ಎಂಬುದನ್ನು ಅಸತ್ಯವಂತರ ಅಟ್ಟಹಾಸದ ಮೂಲಕ ಚಿತ್ರಿಸಿರುವುದು ಸಮಕಾಲೀನ ಸಾಮಾಜಿಕ ಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

'ತಿಗಣೆಯ ಕಾಟವೆಕಾಟ ಚೆಲ್ವ ಸುಗುಣೆಯ ಕೂಟವೆಕೂಟ' ೨೦೫

ಎಂಬುದು ವಿನೂತನ ಪ್ರತಿಮೆಯನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟಿರುವ ಕೀರ್ತನೆ. ತಿಗಣೆಯ ಕಾಟವನ್ನು ವಿಚಿತ್ರವಾದ ರೀತಿಯಲ್ಲಿ ಸುಗುಣೆಯ ಕೂಟಕ್ಕೆ ಹೋಲಿಸಿರುವ ಪರಿ ಅದ್ಭುತವಾಗಿ ಮೂಡಿಬಂದಿದೆ. ಲೌಕಿಕ ಜೀವನದಿಂದ ವಿಮುಕ್ತಿ ಹೊಂದಿ ಪ್ರಪತ್ತಿಯನ್ನು ಸಾಧಿಸಿರುವ ದಾಸರ ಪಕ್ವಗೊಂಡ ಮನಸ್ಸು ಸುಗುಣೆಯ ಕೂಟವನ್ನು ತಿಗಣೆಯ ಕಾಟವೆಂದು ಗ್ರಹಿಸಿರುವುದು ಸಹಜವಾದುದೇ ಆಗಿದೆ.

ಸಮಕಾಲೀನ ಸಮಸ್ಯೆಗಳಿಗೂ ದಾಸರು ಸ್ಪಂದಿಸುತ್ತಿದ್ದುದನ್ನು ೨೨೮-೨೩೦ರ ಬರಗಾಲವನ್ನು ಕುರಿತ ಕೀರ್ತನೆಗಳಿಂದ ಗುರುತಿಸಬಹುದು. ಇತಿಹಾಸ ದಾಖಲಿಸುವ 'ಧಾತುಸಂವತ್ಸರ ಬರಗಾಲ (ಕ್ರಿ.ಶ.೧೮೭೬-೭೯) ಚಿತ್ರ ಇದಾಗಿರುವಂತಿದೆ. ಈ ಕಾಲದಲ್ಲಿ ದಾಸರ ಜೀವಿತಾವಧಿ ಇರುವುದು ಸ್ಪಷ್ಟವಿದೆ. ಮಳೆಗಾಗಿ ಹಾಹಾಕಾರ, ನೀರಿನಬವಣೆ, ಹಸುಕರುಗಳ ಸಾವು, ಮೇವಿನ ಆಹಾರದ ಕೊರತೆ ಇತ್ಯಾದಿ ಬರದ ಎಲ್ಲ ವಿವರಗಳನ್ನೂ ಈ ಕೀರ್ತನೆಗಳು ದಾಖಲಿಸಿರುವ ಮೂಲಕ ಐತಿಹಾಸಿಕ ಮಹತ್ವವನ್ನೂ ಪಡೆಯುತ್ತವೆ. ಹರಿದಾಸರು ಎಷ್ಟೇ ವಿರಕ್ತರಾಗಿದ್ದರೂ ಸಮಕಾಲೀನ ಸಮೂಹದ ಘಟನೆಗಳು, ಜೀವನ, ಸಾಮಾಜಿಕ ಬದಲಾವಣೆಗಳ, ಮೌಲ್ಯಗಳ ಸಂಘರ್ಷಗಳಿಂದ ವಿಮುಕ್ತರಾಗಲು ಸಾಧ್ಯವಿಲ್ಲ ಎಂಬ ಸಾರ್ವಕಾಲಿಕ ಸತ್ಯಕ್ಕೆ ಈ ಪಂಥದ ಎಲ್ಲ ದಾಸರೂ ಸ್ಪಂದಿಸಿರುವುದು ಕಂಡುಬರುತ್ತದೆ.

(೪) ಕೀರ್ತನೆಗಳ ಆಕರ

ವೆಂಕಟವರದಾರ್ಯರ ಕೀರ್ತನೆಗಳಿಗೆ 'ಸನ್ಮಾರ್ಗದರ್ಶಿ'ಯ ೧೯೨೩ನೇ ವರ್ಷದ ಜನವರಿಯಿಂದ ಡಿಸೆಂಬರ್ ವರೆಗಿನ ಸಂಚಿಕೆಗಳನ್ನು ಆಕರವಾಗಿ ಬಳಸಿಕೊಳ್ಳಲಾಗಿದೆ. ಈ ಸಂಚಿಕೆಗಳಲ್ಲಿ ಪ್ರಕಟವಾಗಿರುವ ೧೦೨ ಕೀರ್ತನೆಗಳೊಂದಿಗೆ ಅನಂತಪದ್ಮನಾಭರಾವ್ ಅವರ ಮೂಲಕ ಬಂದಿರುವ ಮೈಸೂರಿನ ಪ್ರಣತಾರ್ಥಿಹರನ್ ಅವರ ಸಂಗ್ರಹದ್ದೆನ್ನಲಾದ ಒಂದು ಕೀರ್ತನೆ (ಪಾಲಿಸೆನ್ನ ಶ್ರೀಲೋಲ ಕೃಪಾಳು ೧೯೦) ಯೂ ಈ ಸಂಪುಟದಲ್ಲಿ ಸೇರಿದೆ. ಇದು ದಾಸರ ಪ್ರಕಟಿತ ಕೃತಿಯಿಂದ ಹೊರಗಿರುವುದನ್ನು ಗಮನಿಸಿದರೆ ಸಂಪ್ರದಾಯದ ಮಾತಿನಂತೆ ದಾಸರ ಇನ್ನೂ ಹಲವು ಕೃತಿಗಳು ಅಪ್ರಕಟಿತವಾಗಿರುವ ಸಾಧ್ಯತೆ ಕಂಡುಬರುತ್ತದೆ.

೬. ಚನ್ನಪಟ್ಟಣದ ಅಹೋಬಲದಾಸರು

ತುಳಸಿರಾಮದಾಸರ ಶಿಷ್ಯಪರಂಪರೆಯಲ್ಲಿ ಕಾಣಿಸಿಕೊಂಡಿರುವ ಪ್ರಮುಖ ಶ್ರೀವೈಷ್ಣವ ಕೀರ್ತನಕಾರರಾದ ಚನ್ನಪಟ್ಟಣದ ಅಹೋಬಲದಾಸರು ೧೨೦ಕ್ಕೂ

ಹೆಚ್ಚಿನ ಕೀರ್ತನೆಗಳನ್ನು ಕನ್ನಡ ಹರಿಸದಾಸ ಸಾಹಿತ್ಯಕ್ಕೆ ನೀಡುವ ಮೂಲಕ ಮುಖ್ಯಕೀರ್ತನಕಾರರಾಗಿ ಹೊರಹೊಮ್ಮಿದ್ದಾರೆ. ಕನಕದಾಸರಂತೆ ಶ್ರೀವೈಷ್ಣವ ತತ್ವವನ್ನು ಅನುಸರಿಸಿ ಅಷ್ಟೇ ಸತ್ವಯುತವಾದ ಕೃತಿಗಳನ್ನು ; ಶಿಶುನಾಳ ಶರೀಫರಂತೆ ಸಮರ್ಥ ತತ್ವಪದಗಳನ್ನು ರಚಿಸಿರುವ ವಿಶಿಷ್ಟ ಹರಿದಾಸರನ್ನಾಗಿ ಇವರನ್ನು ಗುರುತಿಸಬಹುದು.

೧) ಜೀವನ ವಿವರ

ಇವರ ನಿಜನಾಮ, ಇತಿವೃತ್ತ, ಕಾಲ, ದೇಶ, ಮತ ಇತ್ಯಾದಿ ಯಾವ ವಿವರಗಳೂ ಸದ್ಯಕ್ಕೆ ಲಭ್ಯವಿಲ್ಲ. ಇವರ ಹೆಸರಿನಲ್ಲಿ ಸೇರಿಕೊಂಡಿರುವ 'ಚನ್ನಪಟ್ಟಣ'ದಿಂದ ಇವರನ್ನು ಚನ್ನಪಟ್ಟಣದವರು ಎಂದು ಹೇಳಬಹುದಾದರೂ ಸ್ಥಳ ಪರಿಶೀಲನೆಯಲ್ಲಿ ಇಂಥವರೊಬ್ಬರು ಅಲ್ಲಿ ಇದ್ದುದರ ಯಾವ ಸೂಚನೆಯೂ ದೊರಕುವುದಿಲ್ಲ. ಆದರೆ ತುಳಸಿರಾಮದಾಸರ ಶಿಷ್ಯ ಪರಂಪರೆಯಲ್ಲಿ ಈಗಲೂ ಕಾಣಸಿಗುವ ಶ್ರೀ ರಾಮಯ್ಯದಾಸರು 'ಅಹೋಬಲ ದಾಸರ ಹೆಸರು ಕೇಳಿದ್ದೇನೆ ಆದರೆ ಅವರ ಬಗ್ಗೆ ಗೊತ್ತಿಲ್ಲ. ಗಾಣಿಗ ಮತಸ್ತರಾಗಿದ್ದ ರಾಮಾನುಜದಾಸರು ಮತ್ತು ಅವರ ತಮ್ಮ ಒಬ್ಬರು (ಹೆಸರು ಗೊತ್ತಿಲ್ಲ) ಚನ್ನಪಟ್ಟಣದಲ್ಲಿದ್ದುದನ್ನು ನಮ್ಮ ತಂದೆ ನೋಡಿದ್ದರೆಂದೂ ನನಗೆ ಆಗಾಗ್ಗೆ ಹೇಳುತ್ತಿದ್ದರೆಂದೂ ಭಜನೆ ಮಾಡಿಕೊಂಡು ತುಳಸಿದಾಸರೊಂದಿಗೆ ಇರುತ್ತಿದ್ದರೆಂದೂ, ನೆನಪಿಸಿಕೊಳ್ಳುವ ಒಂದು ಆಧಾರ ಬಿಟ್ಟರೆ ಬೇರೇನೂ ಅಲ್ಲಿ ದೊರಕುವುದಿಲ್ಲ. ರಾಮಾನುಜದಾಸರ ತಮ್ಮ ಮತ್ತು ಈ ಅಹೋಬಲದಾಸರು ಒಬ್ಬರೋ ಬೇರೆ ಬೇರೆಯೋ ತಿಳಿಯುತ್ತಿಲ್ಲ.

ತುಳಸಿರಾಮದಾಸರ ಶಿಷ್ಯಪರಂಪರೆಯಲ್ಲಿ ಇವರನ್ನು ಅತ್ಯಂತ ಪ್ರಮುಖ ವಾಗಿ ಸ್ಮರಿಸಲಾಗುತ್ತಿದೆ. 'ಶ್ರೀಮದಾಧ್ಯಾತ್ಮನಿಷ್ಠ. ಗರಿಷ್ಠನಾದ ಚನ್ನಪಟ್ಟಣದ ಅಹೋಬಲದಾಸ ಶ್ರೀರಂಗಪಟ್ಟಣದ ಕಾವೇರಿ ತೀರದ ಕಿರಂಗೂರು ಸಮೀಪ ದಾಸರ ಸಂಸ್ಕಾರ ಸ್ಥಳದಲ್ಲಿ ಪ್ರಾತಃ ಭಜನೆಗಾಗಿ ಅನೇಕ ಭಜನಾವಳಿ ಕೀರ್ತನೆಗಳನ್ನು ರಚಿಸಿದ್ದಾರೆ. ಗುರು ಭಕ್ತಿಯ ಅಮಲಿನಲ್ಲೆ ತೇಲಿ ಅಲ್ಲೇ ಉಳಿದು ಗುರುವಿನಿಂದ

ಸಿದ್ಧಾಂತೋಪದೇಶ ಪಡೆದು ಅನೇಕ ತತ್ವಪದಗಳನ್ನು ರಚಿಸಿದ್ದಾರೆ' ಎಂದು 'ತುಳಸಿರಾಮದಾಸರ ಹರಿಕಥಾ ಕೃತಿ' ಉಲ್ಲೇಖಿಸುತ್ತದೆ. ಇದರಿಂದ ಇವರು ಕಿರಂಗೂರಿನ ಸಮೀಪವಿದ್ದವರೆಂದು ಹೇಳಬಹುದಾದರೂ ಇವರ ಸ್ವಂತ ಸ್ಥಳ ಯಾವುದೆಂಬುದು ನಿರ್ಧಾರವಾಗುವುದಿಲ್ಲ. ಇದೇ ಕೃತಿ ಇನ್ನೊಂದೆಡೆ ತುಳಸಿರಾಮದಾಸರು ರಾಜಾಪೇಟೆಗೆ ಹೋಗಿದ್ದಾಗ ಅಲ್ಲಿಯ ಧನಾಢ್ಯರಾದ ಹನುಮಂತರೆಡ್ಡಿ, ರಾಮರೆಡ್ಡಿ, ಸುಬ್ಬರೆಡ್ಡಿ, ಅಹೋಬಲರೆಡ್ಡಿ ಮುಂತಾದವರು ವೈಷ್ಣವದೀಕ್ಷೆ ಪಡೆದು ದಾಸರ ಬೋಧೆಗೆ ಪರವಶರಾಗಿ ದಾಸರಾದರು' ಎಂದೂ ಉಲ್ಲೇಖಿಸಿದ್ದು ಈ ಅಹೋಬಲ ರೆಡ್ಡಿಯೇ ಅಹೋಬಲದಾಸರಾಗಿರುವುದೇ ಎಂಬುದೂ ಸ್ಪಷ್ಟವಾಗುವುದಿಲ್ಲ. ಹೆಸರಿನೊಂದಿ ಗಿರುವ 'ಚನ್ನಪಟ್ಟಣ'ವನ್ನು ಇವರ ಕೀರ್ತನೆಗಳಿರುವ 'ವೇದಾಂತ ಸಿದ್ಧಾಂತವು' ಎಂಬ ಮುದ್ರಿತ ಗ್ರಂಥದಲ್ಲಿ, ದಾಸರ ಹೆಸರು ಬರುವ ಎಲ್ಲ ಕಡೆಯೂ ಸೇರಿಸಿಯೇ ಮುದ್ರಿಸಿರುವುದನ್ನು ಗಮನಿಸಿದರೆ ದಾಸರು ಉದ್ದೇಶ ಪೂರ್ವಕವಾಗಿಯೇ ತಮ್ಮ ಹೆಸರಿನೊಂದಿಗೆ ಈ ಸ್ಥಳ ಸೂಚಿಯನ್ನು ಸೇರಿಸಿಕೊಂಡಿರುವಂತೆ ತೋರುತ್ತದೆ. ಪ್ರಾಯಶಃ ತುಳಸಿರಾಮದಾಸರ ಶಿಷ್ಯಪರಂಪರೆಯಲ್ಲಿದ್ದ ಇನ್ನೊಬ್ಬ ಅಹೋಬಲದಾಸರಿಂದ ಪ್ರತ್ಯೇಕವಾಗಿ ಗುರುತಿಸಿಕೊಳ್ಳುವ ಸಂಕೇತವೂ ಇದಾಗಿದ್ದಿರಬಹುದು. ಒಟ್ಟಿನಲ್ಲಿ ಇವರ ಹೆಸರು, ಸ್ಥಳ, ಮತ, ಇತ್ಯಾದಿ ಇತಿ ವೃತ್ತಕ್ಕೆ ಈ ಮುದ್ರಿತ ಗ್ರಂಥದಲ್ಲಾಗಲಿ ಕೀರ್ತನೆಗಳಲ್ಲಾಗಲಿ ಹೆಚ್ಚಿನ ಸುಳಿವುಗಳು ಇಲ್ಲದೆ ಅನಿಶ್ಚಿತವಾಗಿಯೇ ಇದೆ. ತುಳಸಿರಾಮದಾಸರ ಶಿಷ್ಯರು ಅನೇಕರಿದ್ದು ಕೋಲಾರ, ಬೆಂಗಳೂರು, ಮೈಸೂರು ಪ್ರಾಂತಗಳಲ್ಲಿ ಹರಡಿದ್ದಾರೆ, ಇವರ ಹೆಸರು ಮತ್ತು ಗುರುಗಳನ್ನು ಸ್ತುತಿಸಿರುವ ಒಂದೆರಡು ಕೀರ್ತನೆಗಳು ಮಾತ್ರ 'ಹರಿಕಥಾಕೃತಿ'ಯಲ್ಲಿ ಕಂಡು ಬರುತ್ತದೆ. ಈ ಶಿಷ್ಯರ ಬಗೆಗೆ ಹೆಚ್ಚಿನ ವಿವರ ಲಭ್ಯವಾದರೆ ಇವರ ಬಗೆಗೂ ಖಚಿತ ಮಾಹಿತಿ ದೊರಕಬಹುದೆನಿಸುತ್ತದೆ.

ಇವರ ಕೀರ್ತನೆಗಳು ಮತ್ತು ಇವರ ಹೆಸರಿನಲ್ಲಿರುವ ಒಂದೇ ಒಂದು ಕೃತಿ 'ವೇದಾಂತಸಿದ್ಧಾಂತವು' ಎರಡರಲ್ಲೂ 'ಗುರು ತುಳಸಿರಾಮ' ಅಂಕಿತವಿದ್ದು

ಗುರೂಪದೇಶದಿಂದ ಪ್ರಭಾವಿತರಾಗಿರುವ ಮತ್ತು ಗುರುವಿನಲ್ಲಿಯೇ ದೈವವನ್ನು ಕಂಡಿರುವ ವಿಶಿಷ್ಟ ಗುರು-ಶಿಷ್ಯ ಸಂಬಂಧವಿದೆ. ಇದು ದೇವ-ಜೀವ ಸಂಬಂಧವಾಗಿ ಮಾರ್ಪಟ್ಟಿರುವ ಪರಿ ಅಸದೃಶವಾಗಿದೆ. ಈ ಹಿನ್ನೆಲೆಯಲ್ಲಿ ಇವರ ಜೀವನ ಪೂರ್ತಿ ಗುರುವಿನಿಂದಲೇ ಅವಲಂಬಿತವಾಗಿದ್ದು ಈ ನಿಟ್ಟಿನಲ್ಲಿಯೇ ಇವರ ಇತಿವೃತ್ತಗಳನ್ನು ಶೋಧಿಸಬೇಕಾಗುತ್ತದೆ. ತುಳಸಿರಾಮದಾಸರ ಮತತತ್ವಕ್ಕೆ ಪ್ರಭಾವಿತರಾಗಿ 'ದೀಕ್ಷೆ' ಪಡೆದು ಶಿಷ್ಯರಾಗಿ ಹರಿದಾಸರಾಗಿರುವವರಲ್ಲಿ ಅನೇಕರು ವೈದಿಕೇತರರಿರುವುದು ಕಂಡುಬಂದಿದೆ. ಇದೊಂದು ವಿಶೇಷ ಬೆಳವಣಿಗೆ, ಅಹೋಬಲದಾಸರೂ ಇವರಲ್ಲಿ ಒಬ್ಬರಾಗಿರಬಹುದು. ದಾಸಬಣಜಿಗರೋ ಗಾಣಿಗರೋ ಆಗಿರುವ ಸಾಧ್ಯತೆಯಿದೆ. ಕವಿಚರಿತಕಾರರು 'ಈತನು ಶೂದ್ರನು' ಎಂದಷ್ಟೇ ಉಲ್ಲೇಖಿಸುತ್ತಾರೆ. ತುಳಸಿರಾಮದಾಸರ ನಿಧನಾನಂತರ ಅವರ ಸಮಾಧಿ ಸ್ಥಳ (ಕಿರಂಗೂರು ಸಮೀಪ) ದಲ್ಲೇ ಇವರು ವಾಸ್ತವ್ಯ ಹೂಡಿ ಭಜನೆ-ಕೀರ್ತನೆ - ತತ್ವಪದಗಳನ್ನು ಹೇಳುತ್ತ ಗುರುಸ್ಮರಣೆಯಲ್ಲಿ ತಲ್ಲೀನರಾಗಿದ್ದುದನ್ನು ಆ ಸಂದರ್ಭದಲ್ಲೆ ವೇದಾಂತೋಪದೇಶವಾಗಿ ಅದರ ಸಾರವನ್ನು ಕೃತಿರೂಪದಲ್ಲಿ ರಚಿಸಿದರೆಂಬುದನ್ನೂ ತುಳಸಿರಾಮದಾಸರ ಹರಿಕಥಾಕೃತಿ ಹೇಳುವುದನ್ನು ಗಮನಿಸಿದರೆ ಅಹೋಬಲದಾಸರು ತುಳಸಿರಾಮದಾಸರ ನಿಧನಾನಂತರವೇ ತಮ್ಮ ಬಹುಪಾಲು ಕೀರ್ತನೆಗಳನ್ನೂ ಕೃತಿಯನ್ನೂ ರಚಿಸಿರಬಹುದೆನಿಸುತ್ತದೆ. ಇವುಗಳಲ್ಲಿ ವ್ಯಕ್ತವಾಗಿರುವ ದಟ್ಟವಾದ ಗುರುಪ್ರಭಾವವೂ ಇದನ್ನೇ ಸಮರ್ಥಿಸುತ್ತದೆ. ಈ ಹಿನ್ನೆಲೆಯಲ್ಲಿ ತುಳಸಿರಾಮದಾಸರ ನಂತರ ಕನಿಷ್ಟ ೧೫-೨೦ ವರ್ಷಗಳವರೆಗಾದರೂ ಈ ದಾಸರು ಜೀವಿಸಿದ್ದರೆಂದು ಊಹಿಸಬಹುದಾಗಿದೆ. ಶೃಂಗೇರಿ ಗುರುಗಳ ಬೆಂಗಳೂರು ಪ್ರವಾಸದರ್ಶನದ ಒಂದು ಕೀರ್ತನೆಯನ್ನು ಅಹೋಬಲದಾಸರು ಬರೆದಿದ್ದು ಅದು ಬೆಂಗಳೂರಿನಲ್ಲಿ ಶಂಕರಮಠ ಪ್ರಾರಂಭಿಸಿದ ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತಿಯವರ (ಕ್ರಿ.ಶ.೧೮೬೬-೧೯೧೨) ಬೆಂಗಳೂರಿನ ಪ್ರಥಮ ಭೇಟಿಯನ್ನು ಕುರಿತದ್ದಾಗಿದ್ದು ಆಕಾಲದಲ್ಲಿ ಅಹೋಬಲದಾಸರೂ ಬೆಂಗಳೂರಿಗೆ ಬಂದಿದ್ದುದನ್ನು ಸಮರ್ಥಿಸುತ್ತದೆ. ಇದೇ ಕೀರ್ತನೆಯಲ್ಲಿ ಬರುವ 'ಕುಂಪಣಿದೊರೆ'ಯ ಪದಪ್ರಯೋಗವು ವಿಕ್ಟೋರಿಯಾ ಆಳ್ವಿಕೆಗಿಂತ ಮೊದಲಿನ

ಕಾಲವನ್ನೇ ಹೇಳುತ್ತದೆ. ಒಂದು ಕೀರ್ತನೆಯಲ್ಲಿ ಸರಗೂರನ್ನೂ ಉಲ್ಲೇಖಿಸಿದ್ದು ಸರಗೂರಿನ ವೆಂಕಟವರದಾರ್ಯರನ್ನೂ ಭೇಟಿಮಾಡಿರುವ ಸಾಧ್ಯತೆಯಿದೆ ಎನಿಸುತ್ತದೆ. ಈ ಎಲ್ಲ ಆಧಾರಗಳಿಂದ ಅಹೋಬಲದಾಸರ ಕಾಲವನ್ನು ಕ್ರಿ.ಶ. ಸು. ೧೮೫೦ – ೧೯೨೦ ಎಂದು ಇಟ್ಟುಕೊಳ್ಳಬಹುದು.

ಅಹೋಬಲದಾಸರ ಬಾಲ್ಯ, ವೈವಾಹಿಕ ಇತ್ಯಾದಿ ಜೀವನ ವಿವರಗಳು ಅಲಭ್ಯ. ಒಂದು ಕಡೆ ತಮ್ಮನ್ನು 'ಅವಧೂತ' ಎಂದು ಕರೆದುಕೊಂಡಿರುವುದು (ದುಡ್ಡಿನಾಸೆಗೀ ಕಳ್ಳವಧೂತನು ದೊಡ್ಡದಾಗಿ ಬರೆದಿಹುದಲ್ಲ') ಮತ್ತು ತುಳಸಿದಾಸರ ಕಟ್ಟಾಶಿಷ್ಯರಾಗಿರುವುದರಿಂದ ಅವರನ್ನೇ ಅನುಸರಿಸಿರುವುದನ್ನು ಗಮನಿಸಿದರೆ ಗುರುಗಳೊಂದಿಗೇ ಇದ್ದು ಸಂಸಾರವಂದಿಗರಾಗದೆ ಬ್ರಹ್ಮಚಾರಿಗಳಾಗಿರುವ ಸಾಧ್ಯತೆಯೇ ಹೆಚ್ಚೆನಿಸುತ್ತದೆ. ಈಚೆಗೆ ದೊರೆತ ತುಳಸಿರಾಮದಾಸರ ಶಿಷ್ಯಪರಂಪರೆಯವರಾದ ಶ್ರೀಚೌಡಯ್ಯ (ರಾಮಾನುಜ)ನವರು ಹೇಳುವ ಅಭಿಪ್ರಾಯ ಇದಕ್ಕೆ ಇನ್ನಷ್ಟು ಪುಷ್ಟಿ ಕೊಂಡುವಂತಿದೆ. "ಅಹೋಬಲದಾಸರು ತುಳಸಿರಾಮದಾಸರ ನೇರ ಶಿಷ್ಯರಲ್ಲ. ಚನ್ನಪಟ್ಟಣ, ದರಿಶಕುಪ್ಪ ಸುತ್ತಮುತ್ತ ತತ್ವಪದಗಳನ್ನು ಹೇಳಿಕೊಂಡು ತಂಬೂರಿ ನುಡಿಸುತ್ತ ಅವದೂತರಾಗಿ ಓಡಾಡುತ್ತಿದ್ದರು. ತುಳಿಸಿರಾಮದಾಸರ ಹೆಸರನ್ನು ಹೇಳಿಕೊಂಡು ಬಂಗಿಸೇದುತ್ತ ಕಾಲಕಳೆಯುತ್ತಿದ್ದರು. ಒಮ್ಮೆ ದಾಸರು ಎದುರಿಗೆ ಸಿಕ್ಕಿ ದಾಸರಿಂದ ಆಧ್ಯಾತ್ಮಿಕ ಬೋಧೆಯನ್ನು ದೃಷ್ಟಿ ಬಲದಿಂದಲೇ ಪಡೆದಿದ್ದರು". ಇದರ ಹಿನ್ನಲೆಯಲ್ಲಿ ತುಳಸಿ ರಾಮದಾಸರಲ್ಲಿ ಅಹೋಬಲದಾಸರ ಶಿಕ್ಷತ್ವ ಏಕಲವ್ಯ ನಿಷ್ಠೆಯದ್ದಾಗಿರುವಂತಿದೆ. ಏನಾದರೂ ಗುರುಗಳ ಮೂಲಕವೇ ತಮ್ಮನ್ನು ಗುರುತಿಸಿಕೊಳ್ಳುವುದರಿಂದ ಇವರ ತತ್ವ ವಿಶಿಷ್ಟಾದ್ವೈತ ಎಂಬುದರಲ್ಲಿ ಅನುಮಾನವಿಲ್ಲ. ಆ ಮೂಲಕ ಲಭಿಸಿದ ಆಧ್ಯಾತ್ಮ ಜ್ಞಾನವನ್ನು ಅರಗಿಸಿಕೊಂಡಿರುವ ದಾಸರು ವಿಶಿಷ್ಟಾದ್ವೈತ ತತ್ವವನ್ನು ಅತ್ಯಂತ ಸರಳವಾದ ಶೈಲಿಯಲ್ಲಿ ಬಹಳ ಸ್ಪಷ್ಟವಾಗಿ ಜನಮನಕ್ಕೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ವೇದಾಂತ ಸಿದ್ಧಾಂತವನ್ನೇ ಬರೆಯಬಲ್ಲಷ್ಟು ಆಧ್ಯಾತ್ಮಿಕ ಜ್ಞಾನದ ಸಿದ್ಧಿ, ಸಾಧನೆ ಈ ದಾಸರಲ್ಲಿದೆ ಎಂಬುದು ಇವರ ಕೀರ್ತನೆಗಳಿಂದಲೇ ವ್ಯಕ್ತವಾಗುತ್ತದೆ.

ಶಿಶುನಾಳಶರೀಫರ ತತ್ವಪದಗಳ ಧಾಟಿಯಲ್ಲೇ ಸಾಗುವ ಇವರ ಕೀರ್ತನೆಗಳು ಕನಕದಾಸರ ಕಿರ್ತನೆಗಳಂತೆ ವಿಶಿಷ್ಟ ಗುಣ ಸಂಪನ್ನತೆಯಿಂದ ಕನ್ನಡ ಹರಿದಾಸ ಸಾಹಿತ್ಯಕ್ಕೇ ಅಮೂಲ್ಯ ನಿಧಿಯಾಗಿವೆ. ವಿಶಿಷ್ಟಾದ್ವೈತ ತತ್ವದ ಸಾರ ಸರ್ವಸ್ವವನ್ನೂ ಸರಳವಾಗಿ ಕನ್ನಡ ಸಾಹಿತ್ಯದಲ್ಲಿ ಪರಿಮೂಡಿಸುವಲ್ಲಿ ಇತರ ಶ್ರೀವೈಷ್ಣವ ಹರಿದಾಸರಿಗಿಂತ ಅಹೋಬಲದಾಸರು ಹೆಚ್ಚು ಯಶಸ್ವಿಯಾಗಿದ್ದಾರೆ ಎಂದು ಹೇಳಬಹುದು.

೨) ಇತರ ಗ್ರಂಥಗಳು

ಚನ್ನಪಟ್ಟಣದ ಅಹೋಬಲದಾಸರ ಹೆಸರಿನಲ್ಲಿ 'ವೇದಾಂತ ಸಿದ್ಧಾಂತವು' ಎಂಬ ಒಂದೇ ಕೃತಿ ಇದೆ. ಇದು ೧೧೦ ಕಂದ ಪದ್ಯಗಳಿಂದ ಕೂಡಿದ ಪುಟ್ಟಗ್ರಂಥ. ಕೊನೆಯಲ್ಲಿ ೫೦ಸಾಲುಗಳ ರಗಳೆಯೂ ಇದೆ. ವಿಶಿಷ್ಟಾದ್ವೈತ ಸಿದ್ಧಾಂತವನ್ನು ಗುರುಬೋಧನೆಯ ಸ್ವರೂಪದಲ್ಲಿ ಪ್ರತಿಪಾದಿಸಿದ್ದರೂ ತತ್ವದ ಪರಿಭಾಷೆಯನ್ನು ಬಳಸದೆ, ಸರಳವಾಗಿ, ಸಾಮಾಜಿಕ ನಿದರ್ಶನಗಳ ಮೂಲಕ ಸಮಾಜಮುಖಿಯಾಗಿಸಿರುವುದು ಇಲ್ಲಿಯ ವೈಶಿಷ್ಟ್ಯ. ಇಂಗ್ಲಿಷ್ ಪದಗಳನ್ನು ಯಥಾವತ್ತಾಗಿ (ತತ್ಸಮ) ಮತ್ತು ಬದಲಾವಣೆಗಳೊಂದಿಗೆ (ತದ್ಭವ) ಯಥೇಚ್ಛವಾಗಿ ಬಳಸಿ ಪದ್ಯದ ಮಾಧ್ಯಮಕ್ಕೆ ಅಳವಡಿಸುವ ಮೂಲಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿಯೇ ವಿಶಿಷ್ಟ ಮಾದರಿಯ ಶೈಲಿಯನ್ನು ಹುಟ್ಟುಹಾಕಿರುವ ಇವರ ಈ ಕೃತಿ ಅಧ್ಯಯನಯೋಗ್ಯವಾಗಿದೆ.

ಲಿಮ್ಟೇಷನ್ ಬಾರಾದೊಡೆ
ಕಮ್ಮಿಗೆ ಅದು ಸಲ್ಲದಂತೆ ಆಪರಿಜೀವಿ
ಕಂಟೋನ್ಮೆಂಟಧಿಕಾರಿಯು
ಸೆಂಟರ ಜೈಲೇಳ್ದ ಬಳಿಕ ತಂಟೆಗಳುಂಟೇ

ಎಂಬಂತಹ ವಿಶಿಷ್ಟಶೈಲಿಯ ಪ್ರಯೋಗಗಳು ಈ ಕೃತಿಯಲ್ಲಿ ಬಹಳಷ್ಟಿವೆ.

ಮಾತೇಮುತ್ತು ಮಾತೇಮಿತ್ತು
ನೇತಿಯನರಿಯೋನಭಿಜ್ಞನೇ ಸತ್ತು

ಆ ತೆರ ಗೀತೆಯೊಳಗೆ ಹೀಗಿತ್ತು
ಪ್ರೀತಿಯೊಳಿದ ನಂಬರುಹುವೆ ಮತ್ತೂ

ಪಟ್ಟೆನಾಮಗಳಿಕ್ಕಿಯು
ಬಟ್ಟೆಗಳಂಬುಟ್ಟು ಒಗೆದು ತೊಟ್ಟೊಡೇನೈ
ಗುಟ್ಟಿನ ಗುರುತುಗಳುಸುರಲು
ಬಿಟ್ಟೆಯ ಮಾತೇನಿದನೀ ಕಟ್ಟಿರಿಸಬೇಕೆಂದು ನಮ್ಮ ಗುರುವಾಕ್ಯಂ.

ಈ ಬಗೆಯಲ್ಲಿ ಸಾಗುವ ತತ್ವದ ಎಳೆ ಎಲ್ಲಿಯೂ ಉಪದೇಶದ ಜಾಡನ್ನು ಹಿಡಿಯದೆ ಪರಿಭಾಷೆಯ ಭಾರವನ್ನು ಹೇರದೆ ಸುಲಭ ಸಾಧ್ಯವಾಗಿಸಿದೆ.

ದುಡ್ಡಿನಾಸೆಗೀ ಕಳ್ಳವಧೂತನು ದೊಡ್ಡದಾಗಿ ಬರೆದಿಹುದಲ್ಲ
ಹೆಡ್ಡನಹುದು ನಾನೋಡಿದೆ ಸತ್ಯವು
ಯೋಗಿಯೊಳಧಮನು ಮಹಾಸುಳ್ಳ.

ಎಂದು ಹಲವು ಸಾಮಾಜಿಕ ನೈತಿಕ ಮೌಲ್ಯಗಳತ್ತ ಬೊಟ್ಟುಮಾಡಿ ತೋರಿಸುವಲ್ಲಿ ಈ ರಗಳೆಯ ಸಾಲುಗಳೂ ಮುಖ್ಯವೆನಿಸುತ್ತವೆ. ಸಮಕಾಲೀನ ಸಾಮಾಜಿಕ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ಎಲ್ಲ ರೀತಿಯ ಅಸಾಮಾಜಿಕ ಗುಣಗಳನ್ನು ದಾಖಲಿಸುವ ಮೂಲಕ ಮೌಲಿಕ ಮತ್ತು ಒಪ್ಪಿತ ಸಮಾಜ ನಿರ್ಮಿತಿಗೆ ಸ್ಪಂದಿಸಿರುವ ಚನ್ನಪಟ್ಟಣದ ಅಹೋಬಲದಾಸರ ಈ ಕೃತಿ ಕೇವಲ ವೇದಾಂತ ಕೃತಿಯಾಗಿ ಉಳಿಯದೆ ಸಮಾಜೋಸಾಂಸ್ಕೃತಿಕ ಅಧ್ಯಯನಕ್ಕೆ ವಸ್ತುವೂ ಆಗಬಲ್ಲದಾಗಿದೆ.

೩) ಕೀರ್ತನೆಗಳು

ಅಹೋಬಲದಾಸರ ಕೀರ್ತನೆಗಳು ಶ್ರೀವೈಷ್ಣವ ಕೀರ್ತನೆಗಳಲ್ಲಷ್ಟೇ ಅಲ್ಲದೆ ಕನ್ನಡಹರಿದಾಸ ಸಾಹಿತ್ಯದಲ್ಲಿಯೇ ವಿಶಿಷ್ಟವಾದ ಸ್ಥಾನದಲ್ಲಿ ನಿಲ್ಲಬಲ್ಲವು. ಕೀರ್ತನೆಗಳು ಮತ್ತು 'ವೇದಾಂತ ಸಿದ್ಧಾಂತ' ಕೃತಿಯಿರುವ ಪೇಟೆ ಮುದ್ರಣ ಗ್ರಂಥದ ಜೆರಾಕ್ಸ್ ಪ್ರತಿಯಲ್ಲಿ ೧೨೮ ಕೀರ್ತನೆಗಳಿದ್ದು ಅವುಗಳಲ್ಲಿ ಕೆಲವನ್ನು ಹೊರತುಪಡಿಸಿ ೧೧೪

ಕೀರ್ತನೆಗಳನ್ನೂ ತುಳಸಿರಾಮದಾಸರ ಚರಿತೆಯಲ್ಲಿದ್ದ ೨ ಕೀರ್ತನೆಗಳನ್ನೂ ಈ ಸಂಪುಟಕ್ಕೆ ಬಳಸಿಕೊಂಡಿದೆ. ಮುದ್ರಿತಗ್ರಂಥದಲ್ಲಿ ಪ್ರತಿಯೊಂದು ಕೀರ್ತನೆಗೂ ರಾಗ-ತಾಳ ಎಂಬ ಸೂಚನೆಯಿದೆಯಾದರೂ ನಿರ್ದಿಷ್ಟ ರಾಗ-ತಾಳಗಳ ಹೆಸರುಗಳಿಲ್ಲ. ಕೆಲವಕ್ಕೆ ಮಾತ್ರ ಕಂಡುಬರುತ್ತದೆ. ಇನ್ನೂ ಕೆಲವಕ್ಕೆ ಪ್ರಸಿದ್ಧ ಕೃತಿಗಳನ್ನು ಹೆಸರಿಸಿ ಅದರಂತೆ ಎಂಬ ಸೂಚನೆಯಿದೆ. ಒಂದು ಕೀರ್ತನೆಯಲ್ಲಿ (೨೫೮) ಸ್ವರ ಜತಿಯನ್ನು ತಂದಿದ್ದಾರೆ. ಇದನ್ನು ಗಮನಿಸಿದರೆ ದಾಸರಿಗೆ ರಾಗ-ತಾಳಗಳ ಸಂಗೀತ ಜ್ಞಾನವಿದ್ದಂತೆ ತೋರುತ್ತದೆ. ಗುರು ತುಳಸಿರಾಮದಾಸರ ಭಜನೆ ಸಂಕೀರ್ತನೆಗಳಲ್ಲಿ ಸಾಮೂಹಿಕವಾಗಿ ಪಾಲ್ಗೊಳ್ಳುತ್ತ ಹಾಡುತ್ತ, ಕೇಳುತ್ತ ಕೀರ್ತನೆಗಳ ಲಯಗಳನ್ನು ಹುಡುಕಿ ಕೊಂಡಿರುವಂತೆ ಭಾಸವಾಗುತ್ತದೆ. ಮೂಲಭೂತವಾಗಿ ಅವಧೂತ ಭಾವದ ಅನುಭಾವ ಕವಿಯಾಗಿರುವುದರಿಂದ ಇವರ ಕೀರ್ತನೆಗಳೆಲ್ಲ ಬಹುಮಟ್ಟಿಗೆ ಶಿಷ್ಟ ಪರಿಭಾಷೆಗೆ ನಿಲುಕದೆ ಅಶುಗೀತೆಗಳಂತೆ ಜಾನಪದ ಧಾಟಿಯಲ್ಲಿ ನಿಲ್ಲುತ್ತವೆನ್ನ ಬಹುದು. ಇದಕ್ಕೆ ಪೂರಕವಾಗಿ ಈ ಕೃತಿಗಳಿಗೆ 'ಭಜನೆ','ಕೀರ್ತನೆಗಳು', ತತ್ವಪದಗಳು 'ಜಾವಡಿ'ಗಳೆಂದು ಶೀರ್ಷಿಕೆಗಳನ್ನು ಕೊಟ್ಟು ವಿಭಾಗಿಸಿದ್ದಾರೆ. ಈ ಗ್ರಂಥ ದಾಸರ ಜೀವಿತಾವಧಿಯಲ್ಲೇ ಪ್ರಕಟವಾಗಿರುವಂತೆ ಭಾಸವಾಗುತ್ತದೆ.

ಶ್ರೀವೈಷ್ಣವ ಪ್ರಪತ್ತಿ ಧರ್ಮವನ್ನು ಅನುಸರಿಸಿ ದಾಸವೃತ್ತಿಯಲ್ಲೇ ಬದುಕು ಸಾಧಿಸಿರುವ ಅಹೋಬಲದಾಸರ ಕೀರ್ತನೆಗಳಲ್ಲಿ ಜ್ಞಾನ, ವೈರಾಗ್ಯ ಭಕ್ತಿಗಳು ಅನುಭಾವ ಸ್ಥಿತಿಯನ್ನು ತಲುಪಿ ಅನುಭಾವ ಗೀತೆಗಳಾಗಿ ಮೇಳವಿಸಿವೆ. ಅತ್ಯಂತ ಸರಳವಾಗಿವೆಯೆನಿಸಿದರೂ ಒಳಹೊಕ್ಕು ನೋಡಿದರೆ ಆಳವಾದ ಅರ್ಥವನ್ನು ಹೊರಹೊಮ್ಮಿಸುತ್ತವೆ. ಜನ ಸಾಮಾನ್ಯರ ಭಾಷೆಯಲ್ಲಿ, ಆಡುನುಡಿಯಲ್ಲಿ, ಮಾತಿನ ಧಾಟಿಯಲ್ಲೇ ಕೀರ್ತನೆಗಳು ರಚನೆಯಾಗಿರುವುದು ಇವರಿಗಿದ್ದ ಸಾಮಾಜಿಕ ಬದ್ಧತೆಯನ್ನು ತೋರಿಸುತ್ತದೆ. ಸಾಮಾನ್ಯ ಹರಿದಾಸ ಲಕ್ಷಣಗಳಿಗೆ ಬದ್ಧವಾಗಿರುವ ಇವರ ಕೀರ್ತನೆಗಳು ಶ್ರೀವೈಷ್ಣವ ತತ್ವಗಳ ಹಿನ್ನೆಲೆಯಲ್ಲಿ ನಿಲ್ಲುತ್ತವೆ. ಶ್ರೀವೈಷ್ಣವ ಕೀರ್ತನೆಗಳ ಲಕ್ಷಣಗಳಾದ ಶ್ರೀಹರಿಏಕನಿಷ್ಠೆ, ಮಂತ್ರಮಹಿಮೆ, ಶರಣಾಗತಿ ಭಾವ, ಆಳ್ವಾರ-ಆಚಾರ್ಯರ ಸ್ತುತಿ ಇತ್ಯಾದಿಗಳೊಂದಿಗೆ ಆತ್ಮನಿವೇದನೆ, ದೈವಸಾಕ್ಷಾತ್ಕಾರ

ದರ್ಶನ, ಭಕ್ತಿಯ ತಲ್ಲೀನತೆ, ವಿವಿಧ ರೀತಿಯ ದೈವಸ್ತುತಿಗಳೂ ಲೋಕನೀತಿ, ಸಾಮಾಜಿಕ ಸ್ಪಂದನ, ಕ್ಷೇತ್ರವರ್ಣನೆಗಳೂ ಇವರ ಕೀರ್ತನೆಗಳಲ್ಲಿ ಕಂಡುಬರುತ್ತದೆ.

ಸುಮಾರು ಹದಿನೇಳು ಕೀರ್ತನೆಗಳಲ್ಲಿ ಶ್ರೀಹರಿಸ್ತುತಿಯನ್ನು ಮಾಡಿರುವ ದಾಸರು ಶ್ರೀಹರಿಯ ವಿವಿಧ ರೂಪಗಳನ್ನೂ ಅತ್ಯಂತ ಮನಮೋಹಕವಾಗಿ ಚಿತ್ರಿಸಿದ್ದಾರೆ. ನಾರಾಯಣ, ಮಾಧವ, ರಾಮ, ಕೃಷ್ಣ ಹೀಗೆ ಹಲವು ರೂಪಗಳಲ್ಲಿ ಸ್ತುತಿಸಿದ್ದಾರೆ.

'ಕ್ಷೀರಾಪುರಾಧೀಶನ ಸರೋಜದಳಮುಖ' ೨೩೧

'ಭಕ್ತಜನೋದ್ಧಾರನ್ಯಾರೋ ದೇವನ್ಯಾರೋ' ೨೩೬

'ಮಾಧವ ಮಧುಸೂದನನೆನಿಪನ
ಪಾದಭಜನೆಯ ಮಾಡುವೆ' ೨೩೭

'ನಾರಾಯಣ ನರಹರಿಪರಮಾತ್ಮಾ ನೀಪಾಲಿಸೋ' ೨೩೯

'ಇಂದಿರಾಪತಿ ನಿನ್ನ ಸುಂದರ ಚರಣವ
ನಾನೆಂದಿಗೆ ಕಾಣುವೆನೊ' ೨೪೨

'ಪಾಲಿಸೋ ರಂಗ ಲೋಲ ಕೃಪಾಂಗ' ೨೪೬

ಮುಂತಾದ ಸುಂದರ ಕೃತಿಗಳೊಂದಿಗೆ

'ಅಮ್ಮ ನಿಮ್ಮ ಮನೆಗಳಲ್ಲಿ ನಮ್ಮ ಕಂದನ ಕಾಣಿರೇನೆ' ೨೪೪

ಎಂಬ ಒಂದೇ ಒಂದು ಕೃಷ್ಣನ ಬಾಲಲೀಲೆಯ ಸ್ತುತಿಯೂ ಇದೆ. ಈ ಎಲ್ಲ ಕೃತಿಗಳಲ್ಲೂ ಶ್ರೀಹರಿಏಕನಿಷ್ಠೆ, ಲಕ್ಷ್ಮೀಸಮೇತ ಶ್ರೀಹರಿಯ ಕಲ್ಪನೆ ಸ್ಪಷ್ಟವಾಗಿದೆ.

ಶ್ರೀವೈಷ್ಣವ ಸಂಪ್ರದಾಯದಂತೆ ಶ್ರೀಹರಿಯ ನಂತರ ಲಕ್ಷ್ಮಿಯನ್ನು ಸ್ತುತಿಸಿರುವ ದಾಸರ ಮೂರು ಕೀರ್ತನೆಗಳಿವೆ.

'ನಾರೀಮಣಿಯೆ ನಿನ್ನಾಣೆ ನಾಕಾಣೆ
ಕರತಂದು ತೋರೆ ಚಲ್ವರಂಗನ' ೨೪೮

ಎಂದೇ ಪ್ರಾರಂಭವಾಗುವ ಈ ಸ್ತುತಿಗಳಲ್ಲಿ 'ಲಕ್ಷ್ಮಿಯ ಮೂಲಕವೇ ಶ್ರೀಹರಿ ದರ್ಶನ' ಎಂಬ ವಿಶಿಷ್ಟಾದ್ವೈತ ತತ್ವವನ್ನು ಎತ್ತಿ ಹಿಡಿದಿರುವುದನ್ನು ಕಾಣಬಹುದು. ಇವುಗಳಲ್ಲಿ ಬಂದು ಸೀತಾಸ್ತುತಿಯಾಗಿದೆ.

'ಜನನಿ ಜಾನಕಿ ನೀ ದಯಮಾಡೆ' ೨೫೦

ಎಂಬುದು ಲಕ್ಷ್ಮೀರೂಪದಲ್ಲಿ ಸೀತೆಯನ್ನು ಕಂಡಿರುವ ವಿಶೇಷವಾದ ಕೃತಿ.

'ಜಂಗಮಾರ್ಚಿತ ಶ್ರೀಗುರುವು ತುಳಸೀ
ಬೆಂಗಳೂರೊಳಗಿರುವ ಕಾರಣ'

ಎಂಬುದರಲ್ಲಿ ತುಳಸಿರಾಮದಾಸರ ಬೆಂಗಳೂರು ವಾಸ ಮತ್ತು ಅಲ್ಲಿಗೆ ಅಹೋಬಲದಾಸರು ಬಂದು ಸ್ತುತಿಸಲ್ಪಟ್ಟಿದೆ.

ಆಳ್ವಾರ್-ಆಚಾರ್ಯರ ಸ್ತುತಿ ಶ್ರೀವೈಷ್ಣವ ಕೀರ್ತನೆಗಳ ಬಹುಮುಖ್ಯ ಲಕ್ಷಣ. ಗುರುಸೇವೆಯ ಮೂಲಕ ದೈವದರ್ಶನವೆಂಬ ತತ್ವಕ್ಕನುಗುಣವಾಗಿ ಈ ಗುರುಪರಂಪರೆಯನ್ನು ಸ್ತುತಿಸಲಾಗುತ್ತದೆ. ಪುರಾತನ ಸಂತರಾದ ಆಳ್ವಾರರು ಧರ್ಮಸ್ಥಾಪಕರೂ-ಪ್ರಚಾರಕರೂ ಆದ ಆಚಾರ್ಯರು ಮತ್ತು ಗುರುಗಳವರೆಗೆ ಈ ಗುರುಪರಂಪರೆಯಿರುತ್ತದೆ. ಅಹೋಬಲದಾಸರಲ್ಲಿ ಆಳ್ವಾರರ ಸ್ತುತಿ ಕಂಡುಬರದಿದ್ದರೂ ಆಚಾರ್ಯರಲ್ಲಿ ರಾಮಾನುಜಾಚಾರ್ಯರು ಮತ್ತು ವೇದಾಂತ ದೇಶಿಕರು ಹಾಗೂ ಗುರು ತುಳಸಿರಾಮದಾಸರ ಸ್ತುತಿಗಳಿವೆ.

'ಬೋಧಾಚಾರ್ಯನೆ ದಯಮಾಡೋ', ಶ್ರೀಮತೆ ಶ್ರೀಭಾಷ್ಯಕಾರನೆ'

ಕೃತಿಗಳಲ್ಲಿ ರಾಮಾನುಜರ ಜೀವನ ಸಂಗತಿಗಳ ಸ್ತುತಿಗಳಿದ್ದರೆ

'ಮರೆತಿರಲಾರೆ ನಿಮ್ಮನು ಪರಿಯೆ ದೊರೆಯೆ'

ಎಂಬುದರಲ್ಲೂ ಶ್ರೀಹರಿಯ ರೂಪದಲ್ಲೇ ಸ್ತುತಿಸಿರುವ ದೇವ-ಜೀವ ಸಮೀಕರಣವಿದೆ. 'ಯತಿರಾಜ, ಸಂಪತ್ಕುಮಾರ' ಕೃತಿ ಮೇಲುಕೋಟೆಯ ಮೂರ್ತಿಯನ್ನು ಕುರಿತದ್ದಾಗಿದೆ.

'ಯತಿಸಾರ್ವಭೌಮ ಸದ್ಗುರುಸ್ವಾಮಿ'
'ವೇದಾಂತ ಗುರುಸಾರ್ವಭೌಮ ಜ್ಞಾನ
ಬೋಧಾನುಕೂಲ ನಿಸ್ಸೀಮ'

ಕೃತಿಗಳಲ್ಲಿ ವೇದಾಂತದೇಶಿಕರನ್ನು ದಾಸರು ಸ್ತುತಿಸಿದ್ದಾರೆ. ಇವರನ್ನು ಸ್ತುತಿಸಲು ಕಾರಣ ತುಳಸಿ ರಾಮದಾಸರ ಶಿಷ್ಯರಾಗಿ, ಅವರು ಅನುಸರಿಸಿದ್ದ ವಡಗಲೆ ಸಂಪ್ರದಾಯ ನಿಷ್ಠೆ. (ಶ್ರೀವೈಷ್ಣವ ಧರ್ಮೀಯರಲ್ಲಿ ವಡಗಲೆ ಸಂಪ್ರದಾಯದವರು ವೇದಾಂತ ದೇಶಿಕರನ್ನೂ ತೇಂಗಲೆ ಸಂಪ್ರದಾಯದವರು ಮಣವಾಳಮಾಮುನಿ-ಗಳನ್ನೂ ತಮ್ಮ ಗುರುಪರಂಪರೆಯಲ್ಲಿ ಸ್ತುತಿಸುವ ಸಂಪ್ರದಾಯವಿದೆ) ಇವರ ಕೀರ್ತನೆಗಳಲ್ಲಿ ಪದೇ ಪದೇ ಬರುವ 'ಸರ್ವತಂತ್ರ ಸ್ವತಂತ್ರ, ಪರಕಾಲ, ಪರತಂತ್ರ ಮುಂತಾದ ಪದಗಳು ಈ ವೇದಾಂತದೇಶಿಕರನ್ನು ಕುರಿತವೇ ಆಗಿವೆ-ಇವರ ಈ ಬಿರುದುಗಳನ್ನೆ ಈ ದಾಸರಿಬ್ಬರೂ ಅನುಸರಿಸುತ್ತಿದ್ದ ಮೈಸೂರಿನ ಈ ಸಂಪ್ರದಾಯದ ಮಠಕ್ಕೆ ಇಡಲಾಗಿದೆ (ಸರ್ವತಂತ್ರ ಸ್ವತಂತ್ರ ಪರಕಾಲಮಠ). ದಾಸರು ಈ ಎರಡೂ ಕೃತಿಗಳಲ್ಲಿ ಆಚಾರ್ಯರ ಬೋಧೆಯಿಂದ ತಮಗೊದಗಿದ ಸಾಧನೆ ಸಿದ್ಧಿಗಳನ್ನು ಸ್ಮರಿಸಿದ್ದಾರೆ. ಹಲವು ಸಂಖ್ಯಾಪದಗಳನ್ನು ಬಳಸಿ ಅವುಗಳ ಮೂಲಕ ತತ್ವಗಳನ್ನು ಧ್ವನಿಸುತ್ತಾರೆ.

'ಶುದ್ಧರೂಪನಮಾಡಿ ನನಗಾ
ಚಿದ್ವಿವೇಕದ ಕವಚತೊಡಿಸಿದ
ಸತ್ವರೂಪಾಚಾರ್ಯನಹುದೆಲೋ'

ಎಂಬುದರಲ್ಲಿ ಗುರುವಿನ ಮೂಲಕ ತಾವು ಕಲಿತ ವೇದಾಂತ, ಜ್ಞಾನ, ಭಕ್ತಿಯ ಸೂಚನೆಯಿದೆ. ಇದೇ ರೀತಿಯಲ್ಲಿ ಗುರುಗಳಾದ ತುಳಸಿರಾಮದಾಸರನ್ನು

ವಿಧವಿಧವಾಗಿ ಸ್ತುತಿಸಿರುವ ೧೩ ಕೀರ್ತನೆಗಳಿವೆ. (೨೫೬-೬೦, ೨೭೯, ೩೧೭, ೩೭೦, ೩೭೩, ೩೪೩), ೫೩೦-೩೨೨ರಲ್ಲಿರುವ ಮೂರು ಕೀರ್ತನೆಗಳು ತುಳಸಿರಾಮದಾಸರ ಹರಿಕಥಾಕೃತಿಯಲ್ಲಿ ಕಂಡುಬಂದಿದ್ದು ಇವು ಅಹೋಬಲದಾಸರ ಕೀರ್ತನೆಗಳ ಮುದ್ರಿತ ಗ್ರಂಥದಲ್ಲಿಲ್ಲದಿರುವುದನ್ನು ಗಮನಿಸಿದರೆ ಅಹೋಬಲದಾಸರ ಇನ್ನೂ ಕೆಲವು ಅಪ್ರಕಟಿತ ಕೀರ್ತನೆಗಳಿರುವ ಸಾಧ್ಯತೆಯಿದೆ.

'ನಮಃ ಓನ್ನಮಃ ಮಮದೇಶಿಕ ತಿರುವಡಿಗಳೇ ಶರಣಂ' ೨೫೮

ಕೀರ್ತನೆಯಲ್ಲಿ ತತ್ವನಿಷ್ಠರು ಸಾಮಾನ್ಯವಾಗಿ ಬಳಸುವ 'ತಿರುವಡಿಗಳೇ ಶರಣಂ' 'ಅಡಿಯೇನ್' ಎಂಬ ರೂಢಿ ಪದಗಳನ್ನು (ಇವು ತಮಿಳು ಪದಗಳು. ಇವುಗಳ ಅರ್ಥ'ನಮಸ್ಕಾರ'ಎಂದು) ಉಳಿಸಿಕೊಂಡಿರುವುದರ ಜೊತೆಗೆ ಪದ (ಸಾಲು) ಗಳ ಸ್ಥಾನದಲ್ಲಿ ರಾಗಾಲಾಪನೆಯ ಪರಿಭಾಷೆಯನ್ನೂ (ಧಾಪದನಿಸರಿ) ಉಳಿಸಿದ್ದಾರೆ. ಇದರಿಂದ ದಾಸರಿಗೆ ಸಂಗೀತಜ್ಞಾನ ಇತ್ತೆಂದು ಹೇಳಬಹುದು. ಕೀರ್ತನೆಗಳಿಗೆ ರಾಗ ತಾಳ ನಿರ್ದೇಶನಗಳಿಲ್ಲದಿದ್ದರೂ ಅವುಗಳಿಗೆ ಬದ್ಧವಾಗಿಯೇ ರಚನೆ ಯಾಗಿರುವುದನ್ನು ಗಮನಿಸಬಹುದಾಗಿದೆ.

ನನ್ನಗುರುಯೆಂತಪ್ಪ ದೊಡ್ಡವನೋ ೨೭೯

ಬಂದರ್‍ನೊಡಿ ಸುಂದರ್ತುಲಸೀರಾಮದಾಸರ್ ೨೫೯

ಧೀರಾ ಭವದೂರ ಸುಕುಮಾರಾ ಮುಖತೋರೋ ಜೀಯ ೨೫೭

ಭುವನದೊಳಗೆ ಒಬ್ಬ ಶಿವಯೊಗಿ ನಾ ಕಂಡೆ ೩೭೩

ನಿನ್ನೊಳಗಿರಿಸೆನ್ನ ಚಿತ್ತ ೩೧೭

ಓಡಿತೆನ್ನಯ ಭವಗಳೆಲ್ಲವು ಕಂಡೆನಾನಿಜಗಂಡನ ೫೩೦

ಧ್ಯಾನಧಾರಣನಾಗಬೇಕಂತೆ ಪ್ರಪಂಚದೊಳಗೆ ೫೩೨

ಮುಂತಾದ ಹಲವು ಕೀರ್ತನೆಗಳಲ್ಲಿ ಗುರು ತುಳಸಿರಾಮದಾಸರನ್ನು ಗುರುವಾಗಿ, ದೈವವಾಗಿ, ಆತ್ಮೋದ್ಧಾರನನ್ನಾಗಿ, ಹೀಗೆ ಹಲವು ದೃಷ್ಟಿಗಳಿಂದ ಸ್ತುತಿಸಿದ್ದಾರೆ. ಇವರ ಮೂಲಕ ಗುರು ದೈವತ್ವಕ್ಕೇರಿದ್ದಾರೆ, ಶ್ರೀಹರಿಯ ಅವತಾರವೆನಿಸಿದ್ದಾರೆ.

'ಧ್ಯಾನಧಾರಣನಾಗಬೇಕಂತೆ' ಎಂಬುದಂತೂ ಅಹೋಬಲದಾಸರ ಆಧ್ಯಾತ್ಮ ಸಿದ್ಧಿಗೆ ದ್ಯೋತಕವಾಗಿದೆ. ವಿಶಿಷ್ಟಾದ್ವೈತ ತತ್ವದ ಮೋಕ್ಷದ ಸುಲಭೋಪಾಯವನ್ನು (ನಾಮಸ್ಮರಣೆ, ಶರಣಾಗತಿ) ಭಕ್ತಿಸ್ವರೂಪದ ಪರಾಕಾಷ್ಠತೆಯನ್ನು ಇದರಷ್ಟು ಸುಲಭವಾಗಿ, ನಿಶ್ಚಿತವಾಗಿ ಮತ್ತು ಆಕರ್ಷಣೀಯವಾಗಿ ಹೇಳುವ ಕೀರ್ತನೆ ಇನ್ನೊಂದಿಲ್ಲ ಎಂದೇ ಹೇಳಬೇಕು.

ಇವು ಇಡಿಯಾಗಿ ದಾಸರನ್ನು ಸ್ತುತಿಸಿರುವ ನೇರವಾದ ಕೀರ್ತನೆಗಳಾದರೂ ಸಾಂದರ್ಭಿಕವಾಗಿ ಇನ್ನೂ ಹಲವು ಕೀರ್ತನೆಗಳಲ್ಲೂ ಪರೋಕ್ಷವಾಗಿ ತುಳಸಿರಾಮದಾಸರನ್ನು ಸ್ತುತಿಸಿದ್ದಾರೆ. ಇವರ ಕೀರ್ತನೆಗಳ ಅಂಕಿತವೇ ಗುರುಸ್ಮರಣೆಯ ರೂಪವಾಗಿರುವುದರಿಂದ ('ಮದ್ಗುರುತುಳಸಿ ರಾಮ') ಇವರ ಬಹುಪಾಲು ಕೀರ್ತನೆಗಳು ಗುರುಸ್ತುತಿಯಾಗಿಯೇ ಕಾಣಿಸಿಕೊಳ್ಳಬಲ್ಲವು.

ಸರ್ವದೈವಸ್ತುತಿಯನ್ನು ಮಾಡಿರುವ ಅಹೋಬಲದಾಸರು ವಿಶಿಷ್ಟಾದ್ವೈತಕ್ಕೇ ತಮ್ಮ ನಿಷ್ಠೆಯನ್ನು ತೋರಿದ್ದರೂ ಸರ್ವದೈವವನ್ನೂ ಸ್ವೀಕರಿಸಿದ್ದ ಸಮಾನಧರ್ಮೀಯ-ರಾಗಿ ಭಾಗವತ ನಿಷ್ಠರಾಗಿ ಕಂಡುಬರುತ್ತಾರೆ. ಗಣೇಶ ಶಿವ ಮತ್ತು ದುರ್ಗಾ ಸ್ತುತಿಗಳಿದ್ದು ಇವುಗಳನ್ನೂ ಶ್ರೀ ಹರಿಯನ್ನು ಹೇಗೋ ಹಾಗೇ ಆತ್ಮೋದ್ಧಾರಕರನ್ನಾಗಿ, ಜಗನ್ನಿಯಾಮಕರನ್ನಾಗಿ, ಮೋಕ್ಷಾಪೇಕ್ಷೆಯಿಂದ ಭಕ್ತಿಭಾವದಿಂದ ಸಮಾನವಾಗಿ ಸ್ತುತಿಸಿದ್ದಾರೆ. ಇತರ ಶ್ರೀವೈಷ್ಣವ ಹರಿದಾಸರರಂತೆ ಶ್ರೀಹರಿಯ ಅಧೀನದೈವದಂತೆ ಕಲ್ಪಿಸಿಲ್ಲದಿರುವುದು ಇವರ ಭಾಗವತ ಸಿದ್ಧಿಯ ನಿದರ್ಶನವಾಗಿದೆ. ಆತ್ಮನಿವೇದನೆಯ ಇನ್ನೂ ಕೆಲವು ಕೀರ್ತನೆಗಳಲ್ಲೂ ಸರ್ವದೈವ ಸ್ತುತಿಯಿರುವುದರೊಂದಿಗೆ ಶೃಂಗೇರಿಸ್ವಾಮಿಗಳ ಮತ್ತು ರೇವಣಸಿದ್ಧೇಶ್ವರರ ಸಾಂದರ್ಭಿಕ ಸ್ತುತಿಗಳೂ ಇರುವುದು ಇದಕ್ಕೆ ಪೂರಕವಾಗಿಯೇ ಇದೆ.

ಸುಮಾರು ೩೦ ಆತ್ಮನಿವೇದನಾ ಕೃತಿಗಳನ್ನು ರಚಿಸಿರುವ ದಾಸರು ಇವುಗಳಲ್ಲಿ ಶ್ರೀವೈಷ್ಣವ ತತ್ವದ ಶರಣಾಗತಿ(ಪ್ರಪತ್ತಿ) ಭಾವವನ್ನು ಅಭಿವ್ಯಕ್ತಿಸಿದ್ದಾರೆ. ಆತ್ಮನಿವೇದನೆಗಿಂತ ಆತ್ಮಸಮರ್ಪಣೆಯ ಮೂಲಕ ಧನ್ಯತೆಯನ್ನು ಪಡೆದಿದೆ.

'ಎಂದಿಗೊ ಕಂದನ ಪಾಲಿಸುವುದು ಎಂದಿಗೊ	೨೭೮
ಕರುಣಬರುವುದೆಂದಿಗೋ ಶ್ರೀರಾಮಚಂದ್ರ	೨೭೦
ಕಾಯಬೇಕೋ ಶಂಕರೇಶ್ವರ ನೀನೆನ್ನನು	೨೭೩

ಎಂದು ಹಂಬಲಿಸುತ್ತ

ನರಹರಿ ಎನಬಾರದೇ ನಾಲಗೆಯೊಳು	೨೭೬
ಪಶುಗಳ ಒಡನಾಡಿ ಪಾಮರನು ನಾನಾದೆ	೨೮೩
ನನ್ನಕರ್ಮವು ಬಂದು ಇನ್ನು ಬಾಧಿಸುತಿರೆ	೨೭೮

ಎಂದು ತನ್ನನ್ನು ತಾನು ತಿದ್ದಿಕೊಳ್ಳುತ್ತ

ನಾನಿಮ್ಮದಾಸನಯ್ಯಾ ಸೀತಾರಾಮ	೨೮೦
ನೀ ಕೈಯ ಬಿಟ್ಟರಿನ್ಯಾತಕೆನಗೀಸುಖ	೨೮೨
ಹಿಡಿಹಿಡಿಕಯ್ಯ ಬಿಡಲೇತಕೆಲೊ ಜೀಯ	೨೯೧

ಎಂದು ಆತ್ಮಸಮರ್ಪಣೆ ಮಾಡುತ್ತ ಭಗವಂತನನ್ನು ವಿಧವಿಧವಾಗಿ ಧ್ಯಾನಿಸುವ ಪರಿ ಯಾವುದೇ ಪ್ರಮುಖ ಹರಿದಾಸರಿಗಿಂತ ಕಡಿಮೆಯಿಲ್ಲ. ಈ ಅಹೋಬಲದಾಸರು ಕನಕ–ಪುರಂದರರಂತೆ ದಾಸವೃತ್ತಿಯಲ್ಲೇ ಬೆಳೆದು ದಾಸಸಾಹಿತ್ಯವನ್ನು ೧೯ನೇ ಶತಮಾನದಲ್ಲಿಯೂ ಜನಪ್ರಿಯಗೊಳಿಸಿದ ಧೀಮಂತರೆನಿಸಿದ್ದಾರೆ.

ಸತಿಪತಿಭಾವದಲ್ಲಿಯೂ ಐದಾರು ಕೃತಿಗಳನ್ನು ಬರೆದಿರುವ ಅಹೋಬಲದಾಸರು ಭಕ್ತಿಯ ವಿವಿಧ ಮಾಧ್ಯಮಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ.

ಎಂದಿಗೆ ತೀರಿಪೆ ಸುಂದರನಾಯಕಿ
ಅಂಗಜ ಬಾಣದ ಆತುರವನ್ನು ೨೯೨

ಕನಸು ಕಂಡೆನು ಕೇಳೇ ಪ್ರಾಣಸಖಿ ೨೯೩

ನಿನಗಿದು ಸರಿಯೆ ನನ್ನ ದೊರೆಯೆ ೨೯೪

ಬಲ್ಲೆನೇಳೋ ನನ್ನನಲ್ಲ ಬೆಲ್ಲಮಾತುಗಳನ್ನ ೨೯೭

ಮುಂತಾದ ಕೃತಿಗಳಲ್ಲಿ ಭಾವಪೂರ್ಣವಾದ ಸಹಜವಾದ ಸತೀ ಮನೋಭಾವದಲ್ಲಿ ದೈವವನ್ನು ಕಂಡಿರುವ ಸಮರ್ಥ ಭಕ್ತನ ಆಧ್ಯಾತ್ಮ ಸಿದ್ಧಿಯನ್ನು ಕಾಣಬಹುದಾಗಿದೆ.

ಸುಮಾರು ೩೫ ಕೃತಿಗಳಲ್ಲಿ ಲೋಕನೀತಿಯನ್ನು ಹೇಳಿರುವ ಅಹೋಬಲ ದಾಸರು ಸಮಾಜದ ಎಲ್ಲ ಸ್ತರಗಳನ್ನೂ ಗಮನಿಸಿರುವ ಸೂಕ್ಷ್ಮಜ್ಞರಾಗಿದ್ದಾರೆ. ಅನುಭವದ ಕೊರತೆ, ಮಾನವೀಯತೆಯ ಲಕ್ಷಣಗಳು, ಮನುಷ್ಯನ ಅಸಹಜ ಗುಣಗಳು, ಜಾತಿ, ಧರ್ಮ, ಮತ, ಮೇಲು-ಕೀಳು, ಸ್ತ್ರೀ ಅಸಮಾನತೆ, ನಡತೆ, ಇತ್ಯಾದಿಗಳನ್ನೆಲ್ಲ ತಮ್ಮ ಕೀರ್ತನೆಗಳಲ್ಲಿ ದಾಖಲಿಸುವ ಮೂಲಕ ೧೯ನೇ ಶತಮಾನದ ಸಮಾಜ ಚಿತ್ರಣವನ್ನು ನಮ್ಮ ಮುಂದಿಡುತ್ತಾರೆ.

ಅರಿತರೆ ಮನುಜ ನೀನಹುದಣ್ಣ ನಿಜ
ದರಿವುಯಿಲ್ಲದೆ ಹ್ಯಾಂಗಹುದಣ್ಣ ೨೯೯

ಎಂದು 'ಅರಿವಿ'ನ ಪ್ರಜ್ಞೆಯನ್ನು ತಿಳಿಸುತ್ತಲೇ

ಇಂತಾ ಸಾಟಿಗಳೆಷ್ಟೋ ಜಗದೊಳ
ಗಿಂತಾ ಸಪ್ಪಳವೆಷ್ಟೋ ಪ

ಅಂತರವರಿಯದೆ ಅಧಮನು ತಾನಾ
ಗಿಂತಿದರೊಳು ಬೊಗಳುವ ಕಂತೆ ಅಪ

ಕುಂತರೆ ನಿಂತರೆ ಸುಜನರ ದೂಷಿಸಿ
ಅಂತಕನಿಗೆ ಸಿಲ್ಕುವೆಯಹುದೊ
ಪಂಥವಿಲ್ಲ ಪರೀಕ್ಷಿಸಿ ನೋಡೆಲೊ
ಸಂತೆಯೊಳಗೆ ನೀಮಾಡುವ ಡಂಬದ ೩೦೦

ಎಂಬ ಧಾಟಿಯಲ್ಲಿ ಸವಾಲಿನೋಪಾದಿಯಲ್ಲಿ ತಮ್ಮ ಆಧ್ಯಾತ್ಮ ಸಿದ್ಧಿಯ ಮೂಲಕ ಕಂಡುಕೊಂಡ ನಿಜಜೀವನ ದರ್ಶನವನ್ನು ಡಂಬದ ಬದುಕಿಗೊಡ್ಡುವ ಆತ್ಮಸ್ಥೈರ್ಯ ತೋರುತ್ತಾರೆ.

ಎಂತಾ ಗರತಿಯ ಕಂಡೆ ಇ–
ನ್ನಿಂತಾವಳೀ ಜಗದೊಳುಂಟೇನೆ ರಮಣಿ ೩೦೧

ಏನೇ ನಾರಿ ಕನಸುತೋರಿ ಹಾರಿತಲ್ಲೆ ೩೦೩

ಏನೋ ಬಂದಿಹುದು ಕೋರಿಬಾಳುವ ನುಂಗಿಹುದು ೩೦೪

ಓದಲ್ಯಾಕೋ ಬರಿದೆ ಓದಲ್ಯಾಕೋ ೩೦೬

ಕನ್ನೆಪ್ರಾಯದ ಹೆಣ್ಣು ಕಾಣಿರೋ ಅ–
ದನ್ನು ಕಂಡು ಪರಲೋಕ ಸೂರೆಮಾಡಿರೊ ೩೦೭

ಮುಂತಾದ ಹಲವು ಕೀರ್ತನೆಗಳಲ್ಲಿ ತತ್ವಪದದ ಧಾಟಿಯಲ್ಲಿ ಗಂಭೀರ ತಾತ್ವಿಕ ವಿಚಾರಗಳನ್ನು ಸರಳವಾದ ಪ್ರತಿಮೆಗಳ ಮೂಲಕ ಸರಾಗವಾಗಿ ಹೇಳುವ ಜಾಣ್ಮೆ ತೋರಿದ್ದಾರೆ. ಇಂತಹ ಕವಿತೆಗಳಲ್ಲಿ ಶಿಶುನಾಳ ಶರೀಫರ ತತ್ವಪದಗಳ ಧಾಟಿಯನ್ನೂ ತೀಕ್ಷ್ಣತೆಯನ್ನೂ ಕಾಣಬಹುದು.

ಏಕಾದಶಿ ದಿವಸ ನಮ್ಮ ಶ್ರೀಕೇಶವ
ನಾಮವ ಭಜಿಸುವವರಿಗೆ ೩೦೨

ಓ ದಯಾನಿಧಿ ನೀ ದಯಮಾಡೋ
ಓಂಕಾರ ಪ್ರಣವ ಮೊದಲೊ ೩೦೫

ಕೇಳಿದಾಗಲೆ ಹೇಳಬಹುದೇನೋ ಬ್ರಹ್ಮಾನುಭವವಿದು ೩೧೦

ಜನನ ಮರಣ ಎರಡು ಇಲ್ಲವೊ ತಾ ತಿಳಿದ ಮೇಲೆ ೩೧೧

ಪಾವನ ಪಾದವ ಭಜಿಸೆಲೊ ಮನುಜ ನೀ ೩೨೦

ಪ್ರಥಮಾಕ್ಷರನೆ ದೇವ ಮಹಾನುಭಾವ ೩೨೧

ಮಾಡಬೇಕೆಲೊ ಭಜನೆ ಮಾಡಬೇಕೆಲೊ ೩೨೪

ರಾಮನ ನಾಮವ ಪಾಡೆಲೊ ಮನುಜ ೩೨೭

ಸಮಾಧಿಯೊಳು ನೋಡೊ ನಮ್ಮ
ರಮಾಪತಿ ನಿನ್ನೊಳಗಿರುತಿಹನು ೩೩೦

ಸ್ಮರಣೆ ಮಾತ್ರದಿ ಸ್ವತಂತ್ರ ದೊರಕುವುದು ೩೩೨

ಹರಿಹರ ಬ್ರಹ್ಮವೆ ನಾನಂತಿ
ನಿಜದಲು ಹೊಂದಿಲ್ಲದೇ ನೀ ಕುಂತಿ ೩೩೩

ಮುಂತಾದ ಹಲವು ಕೀರ್ತನೆಗಳಲ್ಲಿ ತಾತ್ವಿಕ ವಿಚಾರಗಳನ್ನೂ ಅವು ತತ್ವವೆನಿಸದಂತೆ ಸರಳಗೊಳಿಸಿ ಸಾಮಾನ್ಯೀಕರಿಸಿ ಸಾಮಾಜಿಕ ಅಗತ್ಯಗಳೆನಿಸಿದ ತತ್ವಪದಗಳ ಧಾಟಿಯಲ್ಲೇ ಸುಂದರವಾದ ನಿರೂಪಣೆಯನ್ನು ಗುರುತಿಸಬಹುದು. ಶ್ರೀಹರಿಏಕನಿಷ್ಠೆ ಹರಿನಾಮಸ್ಮರಣೆ, ಶರಣಾಗತಿಭಾವ ಮುಂತಾದ ಹಲವು ತಾತ್ವಿಕ ವಿಚಾರಗಳು ಇಲ್ಲಿ ಸಾಮಾಜಿಕ ಸಂಗತಿಗಳಾಗಿ ಪರಿವರ್ತಿತವಾಗಿರುವ ಪರಿ ಅದ್ಭುತವಾಗಿದೆ. ಕನ್ನಡ ಸಾಹಿತ್ಯದಲ್ಲೆ ವಿಶಿಷ್ಟಾದ್ವೈತ ತತ್ವದ ಶ್ರೇಷ್ಠ ಪ್ರತಿಪಾದನೆಯಾಗಿ ಹೊರಹೊಮ್ಮಿದೆ.

ಕಲಿಧರ್ಮ ಮಾಡುತಿದ್ದ ಜಂಗಮಲಿಂಗ
ಶಿವಪೂಜೆ ಮಾಡುತಿದ್ದ ೩೦೮

ಎಂಬುದು ಅಹೋಬಲದಾಸರ ವೇದಾಂತ ಜ್ಞಾನದ ಶಿಖರ ಪ್ರಾಯದ ಕೃತಿಯಾದರೆ

ಕಾಲ ಮಹಿಮೆ ಕೇಳಿ ಜಗದಾಲೋಚನೆ ತಾಳಿ ಪ

ಕೀಳು ಖೂಳರಿಗೆ ಮೇಲು ಹಾಸಿಗೆ ಮಂಚ
ಬಾಲಾಜಿಭಜನೆ ಜನಕೆ ಜೋಳಿಗೆಯೀ ಪ್ರಪಂಚ ೩೦೯

ಎಂಬುದು ಅದ್ಭುತವಾದ ಸಾಮಾಜಿಕ ಚಿತ್ರಣವನ್ನು ನೀಡುವ ಕೃತಿಯಾಗಿದೆ. ಸಾತ್ವಿಕರನ್ನು ನಿರ್ಲಕ್ಷಿಸಿ, ಖೂಳಜನರ ಮೇಲುಗೈ ಸಾಧಿಸುತ್ತಿದ್ದ ಸಾಮಾಜಿಕ ಬದಲಾವಣೆಗೆ ತೀವ್ರವಾಗಿ ಪ್ರತಿಕ್ರಿಯಿಸಿರುವ ದಾಸರು ಮಾನವನ ಅವಗುಣಗಳ ಪಟ್ಟಿಯನ್ನೇ ಇಲ್ಲಿ ಕೊಟ್ಟು ಸಮಕಾಲೀನ ಸ್ಥಿತಿಯನ್ನು ಮುಂದಿಡುತ್ತಾರೆ.

ಹಣದ ಮೋಹದಬಗೆಗೂ ದಾಸರು ಸ್ಪಂದಿಸಿದ್ದಾರೆ.

ದುಗ್ಗಾಣಿಯು ದೊಡ್ಡದಲ್ಲ ನಿನ್ನ
ಪೆಗ್ಗೆಗೆ ಯಮನಾಳು ಹೊರಿಸ್ಯಾರು ಕಲ್ಲ ೩೧೪

ಎಂದು ಧ್ವನಿಪೂರ್ಣವಾಗಿ ಹಣಕ್ಕೇ ದಾಸರಾಗುವವರನ್ನು ಎಚ್ಚರಿಸಿದ್ದಾರೆ.

ನಂಬಿಗೆಯು ಕಾರಣವು ತಿಳಿಯೊ ಇದ
ನಂಬದೆ ಹಸಿವಲ್ಲೊ ಚಿಃ ಮಂಕುಮರುಳೆ ೩೧೯

ನುಡಿಯು ನುಡಿದಾ ನಡೆಯಬಾರದು
ಜಗದೊಳಗ ತತ್ವದ
ಸತ್ಸಂಗದೊಳಗಿರಿಸೊ ದೇವ ೩೨೯

ಮುಂತಾದ ಕೃತಿಗಳಲ್ಲಿ ಮನುಷ್ಯನ ಮನಸ್ಸನ್ನೂ ಮೀಟುತ್ತಾರೆ. ನಂಬಿಕೆ ನುಡಿನಿಷ್ಠೆ, ಸತ್ಸಂಗಗಳಂತಹ ಸನ್ನಡತೆಗಳತ್ತ ಮನಸ್ಸು ತಿರುಗಿಸುವ ಅಗತ್ಯವನ್ನು ಮಾರ್ಮಿಕವಾಗಿ ಮುಂದಿಡುತ್ತಾರೆ.

ಪತಿಯಿಂದಲೆ ಸದ್ಗತಿಯೆಂಬುವಳು
ಅತಿಮತಿಯೆನುವಳು ನಮ್ಮ ಶ್ರೀದೇವಿ
ಕ್ಷಿತಿಯೊಳು ತನ್ನಯ ಪತಿಯೊಳುಸಲ್ಲದೆ
ಇತರವನೆಣಿಪಳೆ ಮೂದೇವಿ ೩೧೯

ಎಂಬುದರಲ್ಲಿ ಶ್ರೀದೇವಿ–ಮೂದೇವಿ ಪ್ರತಿಮೆಯ ಮೂಲಕ ಸ್ತ್ರೀ ಸನ್ನಡತೆ ಮತ್ತು ದುರ್ನಡತೆಗಳನ್ನು ಪಟ್ಟಿ ಮಾಡುತ್ತ ಆ ಮೂಲಕ ಇಡೀ ಸಮಾಜದ ನಡತೆಯನ್ನೇ ಧ್ವನಿಸಿದ್ದಾರೆ.

ಹೀಗೆ ಹಲವಾರು ರೀತಿಯಲ್ಲಿ ಸಮಾಜವನ್ನು ಚಿಕಿತ್ಸಕ ದೃಷ್ಟಿಯಿಂದ ವಿಶ್ಲೇಷಿಸುವ ಅಹೋಬಲದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಪ್ರಜ್ಞೆ ದಟ್ಟವಾಗಿ ಮೂಡಿಬಂದಿದೆ. ಬದಲಾಗುತ್ತಿದ್ದ ಸಾಮಾಜಿಕ ಮೌಲ್ಯಗಳನ್ನು ದಾಖಲಿಸುವ ಮೂಲಕ ತಮಗಿದ್ದ ಸಾಮಾಜಿಕ ಬದ್ಧತೆಯನ್ನೂ ಎತ್ತಿ ಹಿಡಿದಿದ್ದಾರೆ. ಶರಣಾಗತನಾದವನು ಎಲ್ಲದರಿಂದಲೂ ನಿರ್ಲಿಪ್ತನಾದರೂ ತನ್ನ ಕಣ್ಣೆದುರಿಗೆ ಕಾಣುವ ಸಂಗತಿಗಳಿಗೂ ನಿರ್ಲಿಪ್ತನಾಗದೆ ಅದನ್ನು ತನ್ನ ಶರಣಾಗತಿಗೆ ಪೂರಕವಾಗಿಯೇ ಸ್ವೀಕರಿಸಿ ಭಕ್ತಿಯನ್ನು ಪ್ರಕಟಿಸಿರುವ ಹರಿದಾಸರಂತೆ ಅಹೋಬಲದಾಸರೂ ನಿಲ್ಲುತ್ತಾರೆ.

ದಾಸರು ಹಲವು ಕ್ಷೇತ್ರಗಳಿಗೂ ಭೇಟಿ ಕೊಟ್ಟಿದ್ದು ಅದರ ದ್ಯೋತಕವಾಗಿ ಮೇಲುಕೋಟೆ, ತಿರುಪತಿ, ಶ್ರೀರಂಗ, ಕಂಚಿಗಳಂತಹ ಶ್ರೀವೈಷ್ಣವ ದಿವ್ಯಕ್ಷೇತ್ರಗಳು ಮತ್ತು ಕಾವೇರಿ, ಭಾಗೀರಥಿ (ಗಂಗೆ) ಭಾಗಮಂಡಲ, ಕಾಶಿ ಮುಂತಾದ ಕ್ಷೇತ್ರಗಳನ್ನು ಕುರಿತ ಕೀರ್ತನೆಗಳನ್ನು ರಚಿಸಿದ್ದಾರೆ.

ಯಾತ್ರೆಮಾಡಿಕೊಂಡ್ಯೆದೆ ಜಾಹ್ನವಿಗೆ ಹೋಗಿ ತೀರ್ಥ ೩೩೭

ಎಂಬ ಕೃತಿಯಲ್ಲೂ ಅದನ್ನು ಹೇಳಿಕೊಂಡಿದ್ದಾರೆ.

ಆರತಿ, ಮಂಗಳ, ಸೋಬಾನೆಗಳಂತಹ ಕೆಲವೇ ಸಂಪ್ರದಾಯದ ಹಾಡುಗಳನ್ನು ಬರೆದಿರುವ ಅಹೋಬಲದಾಸರು ಒಂದೆರಡು ವಿಶೇಷ ಸಂದರ್ಭದ ಹಾಡುಗಳನ್ನೂ ನೀಡಿದ್ದಾರೆ.

'ಗುರುವೆ ಪೂಜಿಪೆ ನಿಮ್ಮಯ ಚರಣಗಳನು' (೩೪೨) ಎಂಬುದು ಶೃಂಗೇರಿ ಜಗದ್ಗುರುಗಳನ್ನು ಕುರಿತದ್ದಾಗಿದ್ದು ಎರಡು ಸಾಲುಗಳ ೧೫ ನುಡಿಗಳಲ್ಲಿದೆ. ಸಚ್ಚಿದಾನಂದ ಶಿವಾಭಿನವ ನರಸಿಂಹಭಾರತಿಯವರು (ಕ್ರಿ.ಶ.೧೮೬೬-೧೯೧೨) ಬೆಂಗಳೂರಿನಲ್ಲಿ ಶಂಕರಮಠ ಸ್ಥಾಪಿಸಲು ತಮ್ಮ ಜಯಂತಿಯುತ್ಸವ ಸಂದರ್ಭದಲ್ಲಿ ಬಂದಾಗ ಅವರನ್ನು ಸ್ವಾಗತಿಸಿದ ಸಮಾರಂಭವನ್ನು ಕುರಿತ ಸ್ತುತಿಯಾಗಿ ಇದು ಸಾಂಸ್ಕೃತಿಕ ವಿಶೇಷತೆಯನ್ನೂ ಪಡೆದಿದೆ. ಅವರ ಮೆರವಣಿಗೆಯ ವೈಭವ ಕಂಪನಿ ಸರ್ಕಾರದ ದೊರೆಗಳು, ಅಧಿಕಾರಿಗಳು ಅವರನ್ನು ಗೌರವಿಸಿದ್ದು ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಬಿಡಿಸಿದ್ದಾರೆ. ಇದೇ ರೀತಿಯಲ್ಲಿ

'ಯೋಗಿಶೇಖರನಾಗಿಬೆಳಗುವ' (೩೪೪)ಎಂಬುದು ರೇವಣಸಿದ್ದೇಶ್ವರರನ್ನು ಅಲ್ಲಿಯ ಉತ್ಸವ ವಿಶೇಷವನ್ನು ಕುರಿತದ್ದಾಗಿದೆ.

'ಬೆಂಗಳೂರಿಗೆ ಹೋಗಿಬಂದರು ಮೈಸೂರಿಂದ' ೩೪೩

ಎಂಬುದು ಗುರು ತುಳಸಿರಾಮದಾಸರು ತಮ್ಮ ಅಂತ್ಯಕಾಲದಲ್ಲಿ ಹಲವು ಬಾರಿ ಬೆಂಗಳೂರು-ಮೈಸೂರಿಗೆ ಓಡಾಡಿದ್ದು ದರಿಳಕುಪ್ಪೆ - ಮೈಸೂರಿನಲ್ಲಿದ್ದಾಗ ಬೆಂಗಳೂರಿಗೆ ಬಂದು ಹೋದ ಸಂದರ್ಭವೊಂದರ ಚಿತ್ರವನ್ನು ಇಲ್ಲಿ ಕೊಟ್ಟಿದ್ದಾರೆ. ಇದರಿಂದ ಅಹೋಬಲದಾಸರು ಶ್ರೀರಂಗಪಟ್ಟಣದ ಆಸುಪಾಸಿನಲ್ಲೆ ತಂಗಿದ್ದುದು ಸ್ಪಷ್ಟವಾಗುತ್ತದೆ.

೪) ಕೀರ್ತನೆಗಳ ಆಕರ

ಅಹೋಬಲದಾಸರ ಕೀರ್ತನೆಗಳು ಮುಖ್ಯವಾಗಿ 'ಅಹೋಬಲದಾಸರ ಕೀರ್ತನೆಗಳು' ಎಂಬ ಪೇಟೆ ಮುದ್ರಣದ ಗ್ರಂಥವನ್ನು ಆಧರಿಸಿವೆ. ಇದು

'ಪಾಪಯ್ಯನವರ ವಿಶಿಷ್ಟ ಹಕ್ಕನ್ನು ಕ್ರಯಕ್ಕೆ ಪಡೆದಿರುವ ತರಗಿನಪೇಟೆ ದೇಸಾಯಿ ಶೆಟ್ಟಿ ರಾಮಸಂಜೀವಪ್ಪನ ಕುಮಾರ ರಾಮಸ್ವಾಮಿಶೆಟ್ಟರ ಸ್ವಕೀಯ ಸೀತಾರಾಮಾಂಜನೇಯ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು, ಬೆಂಗಳೂರು ಸಿಟಿ ಕಿಲಾರಿರೋಡ್ ೧೯೫ ಡೋರ್‌ನಂಬರ್' ಎಂಬ ವಿವರದೊಂದಿಗೆ 'ಭಜನಕೀರ್ತನೆಗಳು' ಎಂಬ ಹೆಸರಿನಲ್ಲಿದೆ. ಇದರಲ್ಲೇ ತತ್ವಗಳು ಜಾವಳಿಗಳು ಎಂಬ ಉಪವಿಭಾಗಗಳೂ 'ವೇದಾಂತ ಸಿದ್ಧಾಂತವು' ಎಂಬ ಕೃತಿಯೂ ಇವೆ. ಒಟ್ಟು ೧೨೮ ಕೀರ್ತನೆಗಳಿವೆ. ಮುದ್ರಣ ವರ್ಷವಿಲ್ಲ. ಜಾವಳಿಗಳ ಕೊನೆಯಲ್ಲಿ

ಪನ್ನಗಶಯನ ದಯ ಶಿಂಗರಿ
ಚನ್ನಪ್ಪನು ಮಾಡಿಸಿದನು ಪ್ರಿಂಟನಿದೆಲ್ಲಂ
ಅಣ್ಣದಿರೆಲ್ಲರು ಕೇಳಿರಿ
ಬಣ್ಣಿಪನಿದು ಭಾಗ್ಯಶಾಲಿ ಹುಚ್ಚೇಗೌಡ

ಎಂಬ ಕಂದಪದ್ಯವಿದೆ. ಕೊನೆಯ ಸಾಲಿನ ಮೂಲಕ ಈ ಕೀರ್ತನೆಗಳ ಕರ್ತೃ 'ಹುಚ್ಚೇಗೌಡ' ಎಂಬ ಅರ್ಥ ಬರುವಂತಿದ್ದರೂ ಇದು ಅಹೋಬಲದಾಸರ ಪೂರ್ವ ನಾಮಧೇಯವೆಂದು ಹೇಳುವುದು ಕಷ್ಟವಾಗುತ್ತದೆ. ಏಕೆಂದರೆ ಈ ಕೃತಿಯಲ್ಲೇ ದಾಸರ ಹೆಸರನ್ನು 'ಚನ್ನಪಟ್ಟಣದ ಅಹೋಬಲದಾಸ' 'ತುಳಸಿರಾಮದಾಸರ ಪ್ರಿಯಶಿಷ್ಯ' ಎಂದು ಉಲ್ಲೇಖವಿದೆ. ಅಲ್ಲದೆ, ಈ ಹುಚ್ಚೇಗೌಡ ಹೆಸರು ತುಳಸಿದಾಸರ ಹರಿಕಥಾ ಕೃತಿಯಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ಆದರೂ ಈ ಉಲ್ಲೇಖಗಳಲ್ಲಿ ಬರುವ ಪಾಪಯ್ಯ, ಶಿಂಗರಿಚನ್ನಪ್ಪ, ಹುಚ್ಚೇಗೌಡ ಹೆಸರಿನ ವ್ಯಕ್ತಿಗಳ ಮೂಲ ಹಿಡಿದು ಹೆಚ್ಚಿನ ಶೋಧನೆ ಮಾಡುವ ಅಗತ್ಯವಿದೆ. ಇದರಿಂದಲೂ ದಾಸರ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗುವ ಸಾಧ್ಯತೆಯಿದೆ.

'ತುಳಸಿರಾಮದಾಸುಲ ಚರಿತ್ರಮು' ಎಂಬ ಹರಿಕಥಾ ಕೃತಿಯಲ್ಲಿ ಅಹೋಬಲ ದಾಸರು ತುಳಸಿದಾಸರನ್ನು ಕುರಿತ ಮತ್ತು ವೇದಾಂತ ಕುರಿತ ಕೆಲವು ಕೀರ್ತನೆಗಳಿದ್ದು ಇದರಲ್ಲಿದ್ದ ಮೂರು ಕೀರ್ತನೆಗಳನ್ನು ಮಾತ್ರ ಸ್ವೀಕರಿಸಲಾಗಿದೆ.

೭. ಶಾಮಶರ್ಮರು

ಶ್ರೀವೈಷ್ಣವ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಒಬ್ಬ ಮುಖ್ಯ ಹರಿದಾಸರಾಗಿ ಕಾಣಿಸಿಕೊಳ್ಳುವ ಶಾಮಶರ್ಮರು ಹತ್ತೊಂಬತ್ತನೇ ಶತಮಾನದಲ್ಲಿದ್ದರು. ರಂಗದಾಸರ ಶಿಷ್ಯಪರಂಪರೆಯಲ್ಲಿ ಬಂದ ಇವರು ೧೧೩ ಕೀರ್ತನೆಗಳನ್ನು ರಚಿಸಿದ್ದಾರೆ. ಬೆಂಗಳೂರು ಜಿಲ್ಲೆಯ ದೊಡ್ಡಹೆಜ್ಜಾಜಿ ಇವರ ಸ್ಥಳ. ಇವರೂ ಶಿಷ್ಯ ಪರಂಪರೆಯನ್ನು ಮುಂದುವರಿಸಿದ್ದು ಇದೇ ಊರಿನ ನಾರಾಯಣಶರ್ಮರು ಇವರ ಶಿಷ್ಯರಾಗಿದ್ದಾರೆ.

ಶ್ರೀವೈಷ್ಣವ ತೇಂಗಲೆ ಸಂಪ್ರದಾಯದ 'ಉಡೈಯರ್ ರಾಮಾನುಜ ಮಠ'ಪರಂಪರೆಗೆ ಸೇರಿದ ಶಾಮಶರ್ಮರು ದೊಡ್ಡ ಹೆಜ್ಜಾಜಿಯಲ್ಲಿದ್ದ ಏಕೈಕ ಶ್ರೀವೈಷ್ಣವ ಕುಟುಂಬದಿಂದ ಬಂದವರು. ಇದು ಊರಿನ ಅಧಿದೈವ ಶ್ರೀ ಲಕ್ಷ್ಮೀ ಚನ್ನಕೇಶವಸ್ವಾಮಿಯ ಅರ್ಚಕರ ಮನೆತನ. ತಂದೆ ಭಾಗವತೋತ್ತಮರಾಗಿದ್ದ ಕೌಂಡಿನ್ಯಗೋತ್ರೋದ್ಭವರಾದ ರಂಗಸ್ವಾಮಯ್ಯಂಗಾರ್, ತಾಯಿ ಸಾಧ್ವೀಮಣಿ ರಂಗಮ್ಮಾಳ್,ಇವರ ಏಕೈಕ ಪುತ್ರರಾಗಿ ೨೮-೮-೧೮೯೧ ರಂದು ಹುಟ್ಟಿದರು. ರಂಗಮಣಿ ಎಂಬ ಒಬ್ಬ ಅಕ್ಕನನ್ನೂ ಹೊಂದಿದ್ದ ಶಾಮಶರ್ಮರು ವೆಂಕಟರಂಗನ್ ಮತ್ತು ತಿರುಮಲಾಂಬ ಎಂಬ ಮಲ ಅಣ್ಣ, ಅಕ್ಕಂದಿರನ್ನೂ ಪಡೆದಿದ್ದರು (ದಾಸರ ತಂದೆಯವರಿಗೆ ಇಬ್ಬರು ಪತ್ನಿಯರಿದ್ದು ಹಿರಿಯ ಪತ್ನಿಯಾದ ತಾಯಮ್ಮಾಳ್ ಅವರ ಮಕ್ಕಳಾದ ಈ ವೆಂಕಟರಂಗನ್ ಇದೇ ಊರಿನ ಇನ್ನೊಬ್ಬ ಹರಿದಾಸರಾದ ನಾರಾಯಣಶರ್ಮರ ತಂದೆ.) ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಶಾಮಶರ್ಮರ ಪ್ರಾಥಮಿಕ ವಿದ್ಯಾಭ್ಯಾಸ ಅಣ್ಣ ವೆಂಕಟರಂಗನ್ ಅವರ ಆಶ್ರಯದಲ್ಲೆ ನಡೆಯಿತು. ಚಿಕ್ಕಬೆಳವಂಗಲದ ರಾಮರಾಯರ ಹತ್ತಿರ ಕನ್ನಡ ಲೋಯರ್ ಸೆಕೆಂಡರಿ (ಎಲ್.ಎಸ್.೭ನೇ ತರಗತಿ) ಓದಿ ಪಾಸು ಮಾಡಿದನಂತರ ಉಪಾಧ್ಯಾಯರಾಗಿ ಕೆಲಸವೂ ದೊರಕಿತು. ಅಣ್ಣನವರೇ ನಿಂತು ಸಿಂಗೋನಹಳ್ಳಿಯ ವೆಂಕಟಲಕ್ಷ್ಮಿಯವರೊಂದಿಗೆ ವಿವಾಹವನ್ನೂ ಮಾಡಿದರು.

ನಂತರ ಮೈಸೂರಿಗೆ ಹೋಗಿ ಅಪ್ಪರ್ ಸೆಕೆಂಡರಿ (೮ನೇ ತರಗತಿ) ಪರೀಕ್ಷೆಯನ್ನೂ ಪಾಸು ಮಾಡಿದರು. ಮರಳಿ ಉಪಾಧ್ಯಾಯ ವೃತ್ತಿಗೇ ಬಂದು ಚನ್ನಪಟ್ಟಣ ತಾಲುಕು ಹೊಂಗನೂರು, ದೊಡ್ಡಬಳ್ಳಾಪುರ ತಾ॥ ಸಾಸಲುಹೋಬಳಿ ಆರೂಡಿ, ನೆಲಮಂಗಲ ತಾಲುಕು ದಾಬಸ್‌ಪೇಟೆ, ಪುರುಷನಹಳ್ಳಿ ಮುಂತಾದ ಸುತ್ತಲಿನ ಹಲವು ಊರುಗಳಿಗೆ ನಡೆದೇ ಹೋಗುತ್ತಿದ್ದರೆಂದು ನಾರಾಯಣಶರ್ಮರು ತಮ್ಮ ಆತ್ಮಚರಿತ್ರೆಯಲ್ಲಿ ಉಲ್ಲೇಖಿಸಿದ್ದಾರೆ. ಇದರೊಂದಿಗೆ, ತಮ್ಮ ಅಣ್ಣ ರಂಗಸ್ವಾಮಯ್ಯಂಗಾರ್‌ನ ಮದುವೆ ಸಂದರ್ಭದಲ್ಲಿ ತಮ್ಮ ಸಂಸಾರದೊಂದಿಗೆ ಬೇರೆ ಹೋದರೆಂದೂ ಆರಂಭದಲ್ಲಿ ಊರಿನಲ್ಲೇ ಬಾಡಿಗೆ ಮನೆಯಲ್ಲಿದ್ದು ಅನಂತರ ಸ್ವಂತ ಮನೆ ಮಾಡಿಕೊಂಡು ಸ್ವತಂತ್ರ ಜೀವನ ನಡೆಸುತ್ತಿದ್ದರೆಂದೂ ದಾಖಲಿಸಿದ್ದಾರೆ. ಇದಕ್ಕೆ ಕೀರ್ತನೆಯೊಂದರಲ್ಲೂ ನಿದರ್ಶನ ದೊರಕುತ್ತದೆ. (ಕಲ್ಯಾಣ ಸಮಯದಲಿ ಕಲಹಗಳ ಹೂಡುತ್ತ–೪೧೨)

ಜಯಲಕ್ಷ್ಮೀ ಮತ್ತು ಕನಕಲಕ್ಷ್ಮೀ ಎಂಬ ಇಬ್ಬರು ಹೆಣ್ಣು ಮಕ್ಕಳನ್ನು ಪಡೆದ ನಂತರ ಕೆಲವು ವರ್ಷ ಮಕ್ಕಳಿಲ್ಲದುದರಿಂದ ಹಾಗೂ ಗಂಡು ಮಗುವಿಗಾಗಿ ಅಣ್ಣ ವೆಂಕಟರಂಗನ್ ಅವರೊಂದಿಗೆ ಊರಿನ ಬೀದಿಗಳಲ್ಲಿ ದೇವರನಾಮ ಹಾಡಲು ಹೋಗುತ್ತಿದ್ದರೆಂದೂ ಆನಂತರ ಗೋಪಾಲಚಕ್ರವರ್ತಿ ಎಂಬ ಪುತ್ರನ ಜನನವಾಯಿತೆಂದೂ ಅಲ್ಲೇ ಉಲ್ಲೇಖವಿದೆ. ಹೆಂಡತಿ–ಮಕ್ಕಳೊಂದಿಗೆ ಸಂತೃಪ್ತ ಜೀವನ ನಡೆಸಿದ ದಾಸರು ಕಡು ಬಡತನದಲ್ಲಿದ್ದ ಅಣ್ಣನ ಕುಟುಂಬವನ್ನು ಅಂಟಿಸಿಕೊಂಡಿರಲಿಲ್ಲ. ಹೆಣ್ಣು ಮಕ್ಕಳಿಗೆ ಮದುವೆ ಮಾಡಿ ಮಗನನ್ನೂ ಓದಿಸಿ ಉಪಾಧ್ಯಾಯನನ್ನಾಗಿಸಿದ್ದರು. ಮಗನ ಮದುವೆ ಸಂದರ್ಭದಲ್ಲಿ ೩೦.೯.೧೯೪೬ ರಲ್ಲಿ ಹೆಂಡತಿ ವೆಂಕಟಲಕ್ಷ್ಮೀಯವರನ್ನು ಕಳೆದುಕೊಂಡರು. (ಈ ದಿನಾಂಕಗಳನ್ನು ಇವರ ಮಗ ಗೋಪಾಲಚಕ್ರವರ್ತಿ ನೀಡಿದ್ದಾರೆ). ಹೆಂಡತಿಯನ್ನು ಬಹುವಾಗಿ ಪ್ರೀತಿಸುತ್ತಿದ್ದರಿಂದಲೋ ಏನೋ ವಿಹ್ವಲಗೊಂಡವರಾಗಿ ಬಹಳ ಕಾಲದವರೆಗೆ ಅವರ ನೆನಪಿನಲ್ಲೇ ಲೌಕಿಕಾಸಕ್ತಿಯಲ್ಲಿ ಕಾಲ ಕಳೆದರೆಂದು ತಿಳಿದುಬರುತ್ತದೆ.

ನಂತರ ಆ ವಿರಹವನ್ನು ದೈವಧ್ಯಾನದ ಕಡೆ ತಿರುಗಿಸಿ ಸಂಪೂರ್ಣವಾಗಿ ಭಗವಂತನ ನಾಮಸ್ಮರಣೆಯಲ್ಲಿ ತೊಡಗಿಸಿರುವುದು ಕಂಡುಬರುತ್ತದೆ. ಬಾಲ್ಯದಿಂದಲೂ ಧಾರ್ಮಿಕ ವಾತಾವರಣದಲ್ಲಿ ಬೆಳೆದ ದಾಸರು; ಆ ಧಾರ್ಮಿಕ ಶ್ರದ್ಧೆ, ಮನೆಯಲ್ಲಿ ನಡೆಯುತ್ತಿದ್ದ ಆಳ್ವಾರರ ಪ್ರಬಂಧಗಳು, ಆಚಾರ್ಯರಗ್ರಂಥಗಳು, ರಾಮಾಯಣ, ಮಹಾಭಾರತ, ಭಾಗವತಗಳ ಪಾರಾಯಣ, ಭಜನೆ, ಪೂಜಾಕಾರ್ಯ, ಹಬ್ಬ ಹರಿದಿನಗಳಲ್ಲಿ ನಡೆಯುತ್ತಿದ್ದ ವಿಶೇಷ ಧಾರ್ಮಿಕ ಚಟುವಟಿಕೆಗಳು ಮತ್ತು ಅಣ್ಣನವರ ಹರಿನಾಮಸ್ಮರಣೆಯ ಹವ್ಯಾಸ (ಇವರು ಪ್ರತಿ ದಿನ ಊರಿನ ಬೀದಿಗಳಲ್ಲಿ ತಂಬೂರಿ ಹಿಡಿದು ದೇವರ ನಾಮಗಳನ್ನು ಹಾಡುತ್ತ ಹರಿದಾಸ ವೃತ್ತಿಯನ್ನು ನಡೆಸುತ್ತಿದ್ದರು. ಇದನ್ನು ನಾರಾಯಣಶರ್ಮರು 'ಊಂಚವೃತ್ತಿ', 'ಉಪಾದಾನ' ಎಂದು ಕರೆದಿದ್ದಾರೆ.) ಇವುಗಳಿಂದ ಪಕ್ವಗೊಂಡಿದ್ದ ದಾಸರ ಮನಸ್ಸು ಈ ಹಂತದಲ್ಲಿ ಸಂಪೂರ್ಣವಾಗಿ ಶ್ರೀಹರಿಯಲ್ಲಿ ತಲ್ಲೀನವಾದಂತೆ ತೋರುತ್ತದೆ. 'ಜೀವಿತ ಕಾಲದಲ್ಲಿ ಲೌಕಿಕ ಕಾರ್ಯಗಳ ಗೊಂದಲದಲ್ಲಿ ಮನಸ್ಸನ್ನು ದೇವರ ಕಡೆಗೆ ತಿರುಗಿಸುವುದು ಬಹು ಕಷ್ಟಕರವಾದ ಕಾರ್ಯ. ಪಂಚೇಂದ್ರಿಯಗಳ ವ್ಯಾಪಾರವಂತು ಮನುಷ್ಯನನ್ನು ನಾನಾ ರೀತಿಯಲ್ಲಿ ಹದಗೆಡಿಸುವುವು. ಇವನ್ನು ಋಜುಮಾರ್ಗದಲ್ಲಿ ತರಲು ಒಳ್ಳೆಯ ಸಹವಾಸವೂ ಅಭ್ಯಾಸವೂ ಅನುಷ್ಠಾನವನ್ನು ಭದ್ರಪಡಿಸುತ್ತದೆ' ಎಂದು ತಮ್ಮ ಕೀರ್ತನೆಗಳ ಮುನ್ನುಡಿಯಲ್ಲಿ ದಾಸರೇ ಬರೆದಿರುವ ಮಾತುಗಳು ಇದನ್ನು ಸ್ಪಷ್ಟಪಡಿಸುತ್ತವೆ.

ಮುಂದೆ ಎಂದೂ ಲೌಕಿಕದ ಕಡೆ ಮುಖ ತಿರುಗಿಸದೆ 'ಎಲ್ಲವನ್ನೂ ಭಗವಂತನಲ್ಲಿ ಸಮರ್ಪಿಸಿ ಭಗವಂತನ ಕಾರುಣ್ಯ ಕಟಾಕ್ಷವಿಲ್ಲದೆ ಯಾವುದೂ ಲಭ್ಯವಾಗುವುದಿಲ್ಲ' ಎಂಬುದನ್ನರಿತು 'ಸಕಲ ಕಾರ್ಯಗಳಲ್ಲಿಯೂ ಮನಸ್ಸನ್ನು ದೇವರಕಡೆಗೆ ತಿರುಗಿಸಿ ಯಾವ ಕಾರ್ಯಾಪೇಕ್ಷೆಯೂ ಇಲ್ಲದೆ ಭಗವದರ್ಪಣ ಬುದ್ಧಿಯಿಂದ ಕಾಯಾ–ವಾಚಾ–ಮನಸಾ ಕಾರ್ಯನಡೆಸಿ ನಿತ್ಯಕರ್ಮಾನುಷ್ಠಾನದ ಜೊತೆಗೆ ದೇವಾಲಯ ಶುದ್ಧಿ–ಅಲಂಕಾರ–ಉತ್ಸವ–ದೀಪಾರಾಧನೆ–ಭಗವತ್ಸೇವೆ–ಭಾಗವತರಸೇವೆ–ಭಜನೆ–ಭಕ್ತಿರೂಪದ ಉಪನ್ಯಾಸ, ಹರಿಕಥಾಶ್ರವಣ–ಪ್ರಬಂಧಗಳು,

ರಾಮಾಯಣಾದಿ ಗ್ರಂಥಗಳ ಪಠನ-ಧ್ಯಾನ ಮೊದಲಾದುವುಗಳನ್ನು ನಡೆಸುತ್ತ, ಮನಸ್ಸನ್ನು ಪವಿತ್ರಗೊಳಿಸುತ್ತ, ಬಂದಿರುವುದಾಗಿ ದಾಸರೇ ಹೇಳಿಕೊಂಡಿದ್ದಾರೆ. ಈ ನಡುವೆ ೨೮-೮-೧೯೪೯ ರಂದು ತಮ್ಮ ಉಪಾಧ್ಯಾಯ ವೃತ್ತಿಯಿಂದಲೂ ಬಿಡುಗಡೆ ಹೊಂದಿ ಮನಸ್ಸನ್ನು ನಿರಾಳ ಮಾಡಿಕೊಂಡಿದ್ದರು. ಈ ಬಿಡುವಿನ ಸಮಯವನ್ನು ಸಂಪೂರ್ಣವಾಗಿ ಭಗವಂತನಿಗೆ ಅರ್ಪಿಸಿ ಶರಣಾಗತಿಯನ್ನು ಅನುಸರಿಸಿದ್ದಾರೆ. ಇವರ ಕೃತಿಗಳಲ್ಲಿ ಈ ಶರಣಾಗತಿಯ ಭಾವ ತುಂಬಿಕೊಂಡಿದೆ. ಇದಕ್ಕೂ ಮೊದಲಿನಿಂದ ದೇವರನಾಮಗಳನ್ನು ರಚಿಸಿರುವುದು ಕಂಡುಬರುತ್ತದೆ. ೧೯೧೫ರಿಂದ ೧೯೬೫ನೇ ಇಸವಿವರೆಗೆ ಆಗಾಗ್ಗೆ ಭಗವತ್ಪ್ರೇರಣೆಯಾದಾಗಲೆಲ್ಲ ಈ ದೇವರನಾಮಗಳ ರಚನೆಯ ಕಾರ್ಯ ನಡೆದಿದೆಯೆಂದು ದಾಸರೇ ಹೇಳಿರುವುದು ಸ್ಪಷ್ಟವಿದೆ.

ತಮ್ಮ ಸಂಪ್ರದಾಯದ ಗುರುಪೀಠದ ಗುರುಗಳಾಗಿದ್ದ ರಂಗದಾಸರ ಕೀರ್ತನೆಗಳಿಂದ ಪ್ರಭಾವಿತರಾಗಿದ್ದ ದಾಸರು ಆರಾಧ್ಯದೈವ 'ಹೆಜ್ಜಾಜಿ ಚನ್ನಕೇಶವ'ನ ಅಂಕಿತದಲ್ಲಿ ಇವರನ್ನೇ ಗುರುಸ್ಥಾನದಲ್ಲಿ ಕಲ್ಪಿಸಿಕೊಂಡು ರಚಿಸಿರುವ ದೇವರ ನಾಮಗಳನ್ನು 'ಕವಿತೆ ಮಾಡಬೇಕೆಂದು ಕುರಿತು ಬರೆದವುಗಳಲ್ಲ ನಾನು ಕವಿಯೂ ಅಲ್ಲ, ಸಂಗೀತಗಾರನೂ ಅಲ್ಲ' ಎಂದು ವಿನಯ ಪ್ರದರ್ಶಿಸಿದ್ದರೂ ಅನೇಕರ ನೆರವನ್ನು ಪಡೆದು ಇವುಗಳನ್ನು ಸಾಕಾರಗೊಳಿಸಿದ್ದಾರೆ. ವಿಶೇಷವಾಗಿ ಅದೇ ಊರಿನವರಾದ ಸೀತಾರಾಮಶಾಸ್ತ್ರಿಗಳು ಮತ್ತು ಪಕ್ಕದೂರು ದೊಡ್ಡಬೆಳವಂಗಲದ ಶಾಮಯ್ಯಂಗಾರ್ ಅವರ ನೆರವನ್ನು ಸ್ಮರಿಸಿದ್ದಾರೆ. ಸೀತಾರಾಮಶಾಸ್ತ್ರಿಗಳು ಹರಿಕಥಾ ವಿದ್ವಾಂಸರಾಗಿದ್ದರೆ ಶಾಮಯ್ಯಂಗಾರ್ಯರು ದಾಸರ ಭಾವನವರೇ ಆಗಿದ್ದು (ಅಕ್ಕ ತಿರುಮಲಾಂಬ ಅವರ ಪತಿ) ಇವರೂ ಹರಿಕಥೆ ಮಾಡುತ್ತಿದ್ದುದಲ್ಲದೆ ನಾಟಕಶಿಕ್ಷಕರೂ ಆಗಿ ಸಂಗೀತ ಜ್ಞಾನವುಳ್ಳವರಾಗಿದ್ದರು. ಇವರೊಂದಿಗೆ ಅರಸಿಕೆರೆಯ ಇನ್ನೊಬ್ಬ ಹರಿಕಥಾ ವಿದ್ವಾಂಸರಾದ ನಂಜುಂಡಯ್ಯನವರೂ ತಮ್ಮ ಹರಿಕಥೆಗಳಲ್ಲಿ ದಾಸರ ಹಾಡುಗಳನ್ನು ಹಾಡಿ ವ್ಯಾಖ್ಯಾನ ಮಾಡುತ್ತಿದ್ದರೆಂದೂ ನೆನಪಿಸಿಕೊಳ್ಳುತ್ತಾರೆ.

ತಮ್ಮ ಜೀವಿತ ಕಾಲದಲ್ಲೆ ಇವುಗಳನ್ನು ಪ್ರಕಟಿಸಲು ಪ್ರಯತ್ನಿಸಿ ವಿಫಲರಾಗಿರುವ ಅಂಶ ಮುನ್ನುಡಿಯಿಂದ ತಿಳಿದುಬರುತ್ತದೆ. ೧೯೩೧ ರಲ್ಲಿ ಒಮ್ಮೆ ಕಳೆದುಹೋಗಿ ವಿದ್ಯಾರ್ಥಿಗಳಿಂದ ಮರಳಿ ಸಿಗುವಾಗ ಮಳೆಯಲ್ಲಿ ನೆಂದಿತ್ತೆಂದೂ ಮತ್ತೊಮ್ಮೆ ೧೯೪೫ರಲ್ಲಿ ಮನೆಯಲ್ಲೇ ಕಳ್ಳತನವಾದಾಗ ಆ ಕಳ್ಳರಿಂದ ನೀರುಪಾಲಾಗಿತ್ತೆಂದೂ ಎರಡು ಬಾರಿ ಜಲಗಂಡಾಂತರದಿಂದ ಪಾರಾಗಿಬಂದ ಪ್ರಸಂಗವನ್ನೂ ಬೆಂಗಳೂರಿನ ಚೌಡಪ್ಪ ಅಂಡ್ ಸನ್ಸ್ ನ ಶ್ರೀ ಶಾಮಪ್ಪ ಮತ್ತು ದಾಸಪ್ಪ ಅವರು ಪ್ರಕಟಿಸುವುದಾಗಿ ಪಡೆದಿದ್ದ ಹಸ್ತಪ್ರತಿಯನ್ನು ಬಹು ಪ್ರಯಾಸಪಟ್ಟು ಗೌರಿಬಿದನೂರು ತಾ॥ ವರವಣಿಯ ಕೃಷ್ಣಯ್ಯಂಗಾರ್ (ಅಳಿಯ–ಮಗಳು ಕನಕಲಕ್ಷ್ಮಿಯ ಪತಿ) ಅವರ ಮೂಲಕ ವಾಪಸು ಪಡೆದದ್ದನ್ನೂ ಹೇಳಿದ್ದಾರೆ. 'ಭಗವಂತನ ಕರುಣದಿಂದ ನನ್ನ ಹಸ್ತಗತವಾದ ಈ ಸ್ತೋತ್ರ ಗ್ರಂಥವು ಭವದ್ಭಕ್ತರ ಕೈಸೇರಿ ಅವರು ಆನಂದಿಸಿದರೆ ಈ ದಾಸನ ಕೈಂಕರ್ಯ ಸಾರ್ಥಕವಾಗುವುದೆಂದು ಭಾವಿಸಿ ಈಗ ಪ್ರಕಾಶಿಸುತ್ತಿದ್ದೇನೆ. ಈಗ ಅಚ್ಚಿಡುವ ಕಾರ್ಯದಲ್ಲಿ ವಿಶ್ವಾಸಿಸಿ ಕ್ಷಿಪ್ರದಲ್ಲಿ ಮಾಡಿಕೊಟ್ಟ ಶ್ರೀ– – – – – ಅವರಿಗೆ ಕೃತಜ್ಞನಾಗಿದ್ದೇನೆ'. ಎಂದು ಮುಗಿಸಿ ಮುದ್ರಕರ ಹೆಸರನ್ನು ಹಾಕಲು ಜಾಗವಿಟ್ಟಿದ್ದಾರೆ. ಈ ಹಂತದಲ್ಲೂ ಕಾರಣಾಂತರದಿಂದ ಇದು ಮುದ್ರಣಗೊಂಡಿಲ್ಲ. ನಂತರ ೩೦.೬.೧೯೬೬ರಲ್ಲಿ ಒಂದು ಟಿಪ್ಪಣಿ ಬರೆದಿರುವುದನ್ನು ನೋಡಿದರೆ ಇದಕ್ಕೆ ಮುಂಚೆಯೇ ಈ ಪ್ರಯತ್ನ ನಡೆದಿದೆ. ಇದಾದ ನಂತರವೂ ಹಲವು ಕೀರ್ತನೆಗಳನ್ನು ರಚಿಸಿರುವುದು ಮತ್ತು ಈ ಹಸ್ತಪ್ರತಿಯನ್ನು ಹಲವು ಬಾರಿ ಓದಿ ಪರಿಷ್ಕರಿಸಿರುವುದೂ ಕಂಡುಬರುತ್ತದೆ. ಕೀರ್ತನೆಗಳ ಮತ್ತು ಹಸ್ತಪ್ರತಿಯ ಕೊನೆಯಲ್ಲಿ ಇವುಗಳ ದಿನಾಂಕಗಳನ್ನೂ, ಟಿಪ್ಪಣಿಗಳನ್ನೂ ನಮೂದಿಸಿದ್ದಾರೆ.

೧೭.೭.೧೯೭೧ರ ಒಂದು ಟಿಪ್ಪಣಿ ಹೀಗಿದೆ. 'ಪಾದಗಳೆರಡೂ ನೆಲದಲ್ಲಿ ಊರಲು ಆಗುವುದಿಲ್ಲ. ಕೈಕಾಲು ನೋವು, ಛಳುಕು, ನನ್ನ ಶರೀರವೇ ನನಗೆ ಸ್ವತಂತ್ರ ತಪ್ಪುತ್ತಿದೆ. ಈಗ ಎಲ್ಲ ವಿಧದಲ್ಲಿಯೂ ದಿನೇ ದಿನೇ ಶಕ್ತಿ ಕ್ಷೀಣ ಹೊಂದುತ್ತಾ ಬಂದಿದೆ. ಆಯಾಸ, ಉಬ್ಬಸ, ಬಹುಯಾತನೆ, ಕೂಡಲಾಗದು, ಓದಲಾಗದು'. ಇದು ದಾಸರ ಕೊನೆಯ ದಿನಗಳ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ

ಬಿಡಿಸಿಡುತ್ತದೆ. ಕೊನೆಯ ಕೆಲವು ವರ್ಷ ಅನಾರೋಗ್ಯದಿಂದ ಬಳಲಿ ಹಾಸಿಗೆ ಹಿಡಿದು ಬಹು ಯಾತನೆ ಅನುಭವಿಸುತ್ತಿದ್ದುದನ್ನು ಬಾಲ್ಯದ ದಿನಗಳಲ್ಲಿ ಈ ಸಂಪಾದಕನೂ ನೋಡಿರುವ ಅನುಭವವಿದೆ. ಈ ಅವಧಿ ದಾಸರ ಶರಣಾಗತಿ ಧರ್ಮ ಪಕ್ವಗೊಂಡಿದ್ದ ಕಾಲ. ಯಾತನೆಯನ್ನೆಲ್ಲ ಭಗವನ್ನಾಮ ಸ್ಮರಣೆಗೇ ಮೀಸಲಿಟ್ಟು ಸದಾಕಾಲ ಭಗವಂತನನ್ನೇ ಅನುಸಂಧಾನ ಮಾಡುತ್ತಿದ್ದ ಮನಸ್ಸು ಭಗವಂತನನ್ನು ಹಲವು ಬಾರಿ ಕನಸಿನಲ್ಲಿ ಕಂಡು ಸಾಕ್ಷಾತ್ಕಾರ ಮಾಡಿಕೊಂಡು ಪರಮಪದಕ್ಕಾಗಿ ಹಂಬಲಿಸುತ್ತಿತ್ತೆನಿಸುತ್ತದೆ. ೨೩.೯.೭೨ರಂದು ವೈಕುಂಠವಾಸಿಗಳಾದ ದಾಸರು ಕೊನೆ ದಿನದವರೆಗೂ ಕೀರ್ತನೆ ರಚಿಸುತ್ತಿದ್ದುದನ್ನು ನೋಡಬಹುದಾಗಿದೆ. ೧೧.೮.೭೨ರಂದು ಒಂದು ಕೀರ್ತನೆ ಬರೆದಿರುವ ಉಲ್ಲೇಖವಿದೆ.

(೨) ಇತರ ಕೃತಿಗಳು

ದಾಸರು ಕೀರ್ತನೆಗಳನ್ನಲ್ಲದೆ ಬೇರೆ ಯಾವ ಕೃತಿಗಳನ್ನೂ ಬರೆದಿಲ್ಲ. ಆದರೆ ೧. ಹರೇಕೃಷ್ಣನಾಮಾವಳಿ,೨. ಶ್ರೀ ಗೋವಿಂದ ನಾಮಾವಳಿ, ೩. ಶ್ರೀಮನ್ನಾರಾಯಣ ಸುಧಾರಸ ಮತ್ತು ೪. ಕೇಶವನಾಮರಸಾಯನ ಎಂಬ ನಾಲ್ಕು ನಾಮಾವಳಿಗಳನ್ನು ರಚಿಸಿದ್ದಾರೆ. ಇವು ಕೀರ್ತನೆಗಳ ಭಾಗಗಳೆಂದೇ ಹೇಳಬಹುದಾದರೂ ಮಾದರಿಗಾಗಿ ಕೇಶವನಾಮ ರಸಾಯನವೊಂದನ್ನು ಮಾತ್ರ ಇಲ್ಲಿ ಸೇರಿಸಿದೆ. ಪರಮಭಕ್ತನೊಬ್ಬ ದೇವರನ್ನು ಸ್ತುತಿಸಲು ಕಂಡುಕೊಂಡ ಮಾರ್ಗೋಪಾಯವಾಗಿ ಈ ನಾಮಾವಳಿಗಳನ್ನು ನೋಡಬೇಕಾಗುತ್ತದೆ. 'ಹರೇಕೃಷ್ಣ' ಕೃಷ್ಣ ಪಂಥದ ಪ್ರಭಾವಕ್ಕೂ 'ಗೋವಿಂದ' ತಿರುಪತಿ ಭಕ್ತರ ಸ್ಮರಣೆಯ ಪ್ರಭಾವಕ್ಕೂ ಒಳಗಾಗಿರುವ, ಈ ಪದಗಳಿಂದಲೇ ಅಂತ್ಯವಾಗುವ ಶತನಾಮಾವಳಿಗಳು, 'ಶ್ರೀಮನ್ನಾರಾಯಣ ಸುಧಾರಸ' ಅಷ್ಟಾಕ್ಷರಿ ಮತ್ತು ಕನ್ನಡ ವರ್ಣಮಾಲೆಯ ಅಕ್ಷರಗಳಿಂದ ಆರಂಭವಾಗುವ ನಾಮಾವಳಿಯಾಗಿ ಪ್ರತಿಯೊಂದೂ 'ನಾರಾಯಣ' ದಿಂದ ಅಂತ್ಯವಾಗುತ್ತದೆ.

೩) ಕೀರ್ತನೆಗಳ ಪರಿಚಯ

ಶಾಮಶರ್ಮರ ೧೧೦ ಕೀರ್ತನೆಗಳನ್ನು ಈ ಸಂಪುಟದಲ್ಲಿ ಸೇರಿಸಿದ್ದರೂ ಹಸ್ತಪ್ರತಿಯಲ್ಲಿ ನಾಮಾವಳಿಗಳೂ ಸೇರಿ ೧೧೩ ಇವೆ. ಈ ಕೀರ್ತನೆಗಳು

ಶ್ರೀವೈಷ್ಣವ ಲಕ್ಷಣಗಳೊಂದಿಗೆ ಸಾಮಾನ್ಯ ಹರಿದಾಸರ ಲಕ್ಷಣಗಳನ್ನೂ ಮೈಗೂಡಿಸಿಕೊಂಡು ವೈವಿಧ್ಯವಾಗಿವೆ. ಸು.೨೫ ಕೀರ್ತನೆಗಳಲ್ಲಿ ಶ್ರೀಹರಿಯನ್ನು ಸ್ತುತಿಸಿರುವ ದಾಸರು ಅನನ್ಯ ಭಕ್ತಿಭಾವದಿಂದ ಶ್ರೀಹರಿಯ ಪರ, ವ್ಯೂಹ, ವಿಭವ ಮತ್ತು ಅರ್ಚಾರೂಪಗಳ ಹಲವು ಅವತಾರಗಳನ್ನು ಸ್ತುತಿಸಿದ್ದಾರೆ. ಶ್ರೀಹರಿ ನಾರಾಯಣ, ಅಚ್ಯುತ, ಶ್ರೀಧರ, ವಾಸುದೇವ, ಮಾಧವ, ದಶಾವತಾರ, ರಾಮ, ಕೃಷ್ಣ, ರಂಗನಾಥ, ಚನ್ನಕೇಶವ, ಶ್ರೀನಿವಾಸ ಮುಂತಾದ ರೂಪಗಳಲ್ಲಿ ಸ್ತುತಿಸಿದ್ದರೂ ರಾಮ,ಕೃಷ್ಣ,ಚನ್ನಕೇಶವ ಇವರಿಗೆ ಪ್ರಿಯವಾದ ದೈವರೂಪಗಳಾಗಿವೆ.

'ನಿನ್ನಸೊಬಗಿದೇನೊ ಶ್ರೀಹರಿ ಉನ್ನತವಿಭವಚನ್ನಕೇಶವ' ೩೪೬

ಎಂಬುದು ಒಂದು ಸೊಗಸಾದ ದೈವಸ್ತುತಿಯಾಗಿದೆ.

'ಮೂಜಗಪೂಜಿತ ಮಾಧವ ನಮ್ಮ ಹೆಜ್ಜಾಜಿಯಚನ್ನಕೇಶವ' ೩೫೦

ಎಂಬ ಕೀರ್ತನೆಯಲ್ಲಿ ಹರಿಸ್ತುತಿ ಮಾಡುತ್ತಾ ಸಾಗುವ ೧೨ ನುಡಿಗಳಲ್ಲಿ ಶ್ಲೇಷಾರ್ಥವನ್ನು ಸಾಧಿಸಿ ಒಂದೊಂದು ನುಡಿಯಲ್ಲೂ ತಮ್ಮ ದಾಸಜೀವನಕ್ಕೆ ನೆರವಾದ ಬಂಧು-ಗುರು-ಹಿರಿಯರು-ಸ್ನೇಹಿತರನ್ನು ಸ್ಮರಿಸಿ ಅಡಿ ಟಿಪ್ಪಣಿಯಲ್ಲಿ ಅವುಗಳ ವಿವರವನ್ನು ನೀಡಿದ್ದಾರೆ.

ಶ್ರೀಶ್ರೀ ಶ್ರೀಕೇಶವನೆ ಬಾ ಪರಮಪುರುಷ
ಶೇಷಶಯನ ಮುಕುಂದ ಶರಣರಾನಂದ ೩೫೪

ಶ್ರೀಹರಿ ನಿನ್ನಲೀಲೆ ಏನು ಹೇಳಲಯ್ಯನಾನು ೩೫೭

ನೀನೇ ಸಕಲವೆನಗೆ ಶ್ರೀರಾಮಚಂದ್ರ ೩೫೯

ಶ್ರೀಪಾರ್ಥಸಾರಥಿ ನಿರುಪಮಗುಣ ನಿತ್ಯಕಲ್ಯಾಣ ೩೬೨

ಮಂಗಳಾಂಗ ಶ್ರೀರಂಗಪಾಲಿಪುದೈ
ರಮಾವಧು ಮನೋಹರ ೩೬೬

ಶರಣು ಶರಣು ಚನ್ನಕೇಶವರಾಯ ೩೬೭

ಅಪ್ರತಿಮ ಹೇ ದೇವ ಶ್ರೀನಿವಾಸ ೩೬೮

ಮುಂತಾದ ಹಲವು ಸುಂದರ ಗೀತೆಗಳು ಈ ಕೀರ್ತನೆಗಳಲ್ಲಿವೆ. ಪರಮ ಭಾಗವತಭಕ್ತನೊಬ್ಬ ದೈವವನ್ನು ಕಾಣುವ ಎಲ್ಲ ರೀತಿಯ ಸಂಭ್ರಮ, ತನ್ಮಯತೆ, ಮತ್ತು ಮಹಿಮಾಸ್ತುತಿಗಳನ್ನು ಇಲ್ಲಿ ಕಾಣಬಹುದು.

ಅಮ್ಮನ ತೊಡೆಯಮೇಲೆ ನಮ್ಮ ಕೃಷ್ಣ
ಸುಮ್ಮನೆ ಮಲಗಿಹನು ೩೬೪

ಕುರಂಗನಯನೆ ಮಂಗಳಾಂಗನ ಕರೆದುತಾರೆ ೩೬೫

ಈ ಎರಡೂ ಕೃತಿಗಳು ಕೃಷ್ಣನ ಬಾಲಲೀಲೆಗಳಾಗಿದ್ದು ಕನ್ನಡ ಕೀರ್ತನೆಗಳಲ್ಲಿಯ ಬಾಲಲೀಲೆಗಳ ಸಂಗ್ರಹಕ್ಕೆ ಉತ್ತಮ ಸೇರ್ಪಡೆಯೆನಿಸಿವೆ. ಮೊದಲನೆಯದು ಬಾಲಲೀಲೆಯಾದರೆ ಎರಡನೆಯದು ಗೋಪೀಲೀಲೆಯಾಗಿ ಗೋಪಿಕೆಯರು ಅವನ ತುಂಟಾಟಗಳನ್ನು ನೆನಪಿಸಿಕೊಳ್ಳುವ ಶೈಲಿಯಲ್ಲಿದ್ದು ವಿಶೇಷತೆಯನ್ನು ಪಡೆದಿದೆ.

'ಅಮ್ಮಾ ನೀನೆಮ್ಮ ಮನೆಯಲಿಹುದಮ್ಮಾ' ೩೭೦

ಎಂಬುದು ಲಕ್ಷ್ಮೀಸ್ತುತಿಯಾಗಿದ್ದು ೧೫ ನುಡಿಗಳಲ್ಲಿ ಶ್ರೀವೈಷ್ಣವ ಧರ್ಮಕ್ಕನುಗುಣವಾಗಿ ಲಕ್ಷ್ಮೀ ಮೂಲಕ ಶ್ರೀಹರಿಕೃಪೆಗೆ ಅರ್ಥಿಸಿರುವ ಲಕ್ಷ್ಮೀವೈಭವವನ್ನು ಮನಸಾರೆ ಸ್ತುತಿಸಿರುವ ವಾತ್ಸಲ್ಯಮಯ ಭಾವ ಇದರಲ್ಲಿ ಅಡಕವಾಗಿದೆ.

ಆಳ್ವಾರ್-ಆಚಾರ್ಯರ ಸ್ತುತಿಗಳಲ್ಲಿ ವಿಶೇಷವಾಗಿ ಶಾಮಶರ್ಮರು ವಿಶ್ವಕ್ಸೇನರನ್ನು ಸ್ತುತಿಸಿದ್ದಾರೆ. ಈವರೆಗೆ ದೊರೆತಿರುವ ಶ್ರೀವೈಷ್ಣವ ಕೀರ್ತನೆಗಳಲ್ಲಿ ಇದೊಂದೇ ವಿಶ್ವಕ್ಸೇನರನ್ನು ಸ್ತುತಿಸಿರುವ ಕೀರ್ತನೆಯಾಗಿದೆ. ಇದು ವಾಸ್ತವವಾಗಿ ಪ್ರಸಿದ್ಧವಾಗಿರುವ 'ಶುಕ್ಲಾಂಬರಧರಂ ವಿಷ್ಣುಂ.......' ಶ್ಲೋಕಗುಚ್ಛದ ಅನುವಾದ. ಈ ಶ್ಲೋಕ ಮೂಲತಃ ವಿಶ್ವಕ್ಸೇನರ ಪ್ರಾರ್ಥನೆಯೇ ಆಗಿದೆ.

ಶ್ರೀನಾಥಾಜ್ಞಾಪ್ರಕಾರ ನಡೆಯುವ ಸೂತ್ರವತೀರಮಣ
ಮಾನಿತ ಪ್ರಧಾನ ಮಂತ್ರಿ ಪೂಜಿಪೆ ವಿಷ್ವೇಶಾ ನಮಿಪೆ ಪ

ಎಂಬುದೊಂದು ನುಡಿ ಮಾತ್ರ ದಾಸರ ಸ್ವಂತ ರಚನೆ

ಬಿಳಿಯುಡೆ ತುಂಬಿದ ತಿಂಗಳ ಬೆಳಗ
ತೊಳಗುವನಾಲಕು ತೋಳುಗಳ
ಒಲಿದಿಹ ನಗೆಮೊಗ ವಿಷ್ಣು ನೆನೆವೆ
ಸುಲಭದಿ ಕಾರ್ಯವ ಗೈಸುವನೆ ೩.೭.೨

ಎಂದು ಸಾಗುವ ಈ ಕೀರ್ತನೆ ಮೇಲ್ನೋಟಕ್ಕೆ ಅನುವಾದವೆನಿಸುವುದಿಲ್ಲ. ಅಷ್ಟರಮಟ್ಟಿಗೆ ಸ್ವಂತಿಕೆಯನ್ನು ಉಳಿಸಿಕೊಳ್ಳುವ ಮೂಲಕ ದಾಸರು ತಮ್ಮ ಕವಿತಾ ಚಾತುರ್ಯವನ್ನು ತೋರಿದ್ದಾರೆ.

'ವಕುಳಾಭರಣನೆ ಶರಣೆಂಬೆ' ಎಂಬುದು ನಮ್ಮಾಳ್ವಾರರ ಸ್ತುತಿಯಾದರೆ 'ಆಳ್ವಾರ್ ತಿರುವಡಿಗಳೆ ಶರಣೆನ್ನುತ ' ಎಂಬುದು ಎಲ್ಲ ಆಳ್ವಾರರ ಸ್ತುತಿಯಾಗಿದೆ. ಶ್ರೀಗೋದಾದೇವಿ ಶ್ರೀಭೂನೀಳಾ ಆಂಡಾಳ್ ದೇವಿ' ಎಂಬುದು ಆಂಡಾಳ್ ಅನ್ನು ಕುರಿತ ಸ್ತುತಿ. ನಮ್ಮಾಳ್ವಾರ್ ಮತ್ತು ಆಂಡಾಳರನ್ನು ಪ್ರತ್ಯೇಕವಾಗಿ ಹಾಗೂ ಉಳಿದ ಆಳ್ವಾರರನ್ನು ಒಂದೇ ಕೃತಿಯಲ್ಲಿ ಸ್ತುತಿಸುವ ಮೂಲಕ ಧರ್ಮನಿಷ್ಠೆಯನ್ನೂ ಸಂಪ್ರದಾಯನಿಷ್ಠೆಯನ್ನೂ ತೋರಿದ್ದರೂ ಅದು ಕನ್ನಡ ಕೀರ್ತನ ಸಾಹಿತ್ಯಕ್ಕೆ ಹೊಸ ಚಿಂತನೆಯೇ ಆಗಿ ಬಂದಿದೆ. ಶ್ರೀವೈಷ್ಣವ ಕೀರ್ತನಕಾರರ ಗುರುಸ್ತುತಿಯೇ ಆಳ್ವಾರ್-ಆಚಾರ್ಯ ಸ್ತುತಿಯಾಗಿ ಹೊಸ ಪರಿಭಾಷೆಯಾಗಿ ಕಾಣಿಸಿಕೊಂಡಿರುವುದೇ ಕನ್ನಡಸಾಹಿತ್ಯಕ್ಕೆ ವಿಶೇಷ. ಆಚಾರ್ಯರಲ್ಲಿ ರಾಮಾನುಜರನ್ನು ಸ್ತುತಿಸಿರುವ ಎರಡು ಕೃತಿಗಳು ಇವೆ.

ಆಚಾರ್ಯ ಪ್ರಾಚಾರ್ಯ ಪರಮಾಚಾರ್ಯ ೩.೭೬
ರಾಮಾನುಜಾಚಾರ್ಯ ಮೌನಿವರ್ಯ ೩.೭೭

ಎರಡೂ ಸುಂದರ ಸ್ತುತಿಗೀತೆಗಳೇ ಆಗಿವೆ. ಇವುಗಳಲ್ಲಿ ಆಚಾರ್ಯರನ್ನು ದೈವ ಸ್ಥಾನದಲ್ಲಿಟ್ಟು ಅವರ ಜೀವನ ಸಂಗತಿಗಳನ್ನು ಸ್ತುತಿಸಿದ್ದಾರೆ.

ಶಂಕರ, ಸರಸ್ವತಿ, ನವಗ್ರಹ ಮತ್ತು ಧನ್ವಂತರಿಗಳನ್ನೂ ಸ್ತುತಿಸುವ ಮೂಲಕ ಶಾಮಶರ್ಮರೂ ಸರ್ವದೈವ ಸ್ತುತಿಯಲ್ಲಿ ಕಾಣಿಸಿಕೊಳ್ಳುತ್ತಾರೆ.

'ಭಾಗವತಾಗ್ರೇಸರ ಶಿವಶಂಕರ'
'ಸರಸ್ವತಿ ಭಾರತಿ ಭಗವತಿ'
'ಸಕಲ ಗ್ರಹಬಲವು ನೀನೆ ಶ್ರೀನಿವಾಸ'

ಇವು ಅತ್ಯಂತ ಉತ್ತಮವಾದ ದೈವಸ್ತುತಿಗಳಾಗಿ ಸಂಪ್ರದಾಯದಲ್ಲಿ ಪ್ರಚಾರದಲ್ಲಿವೆ. ಇವರ ಅನೇಕ ಕೀರ್ತನೆಗಳಿಗೆ ಹಾಡಿನ ಸಂಪ್ರದಾಯವಿದೆ.

ಸುಮಾರು ೪೦ ಕೀರ್ತನೆಗಳಲ್ಲಿ ಆತ್ಮನಿವೇದನೆಯನ್ನು ಮಾಡಿರುವ ದಾಸರು ಭಕ್ತಿಯ ವಿವಿಧಭಾವಗಳನ್ನು ತೆರೆದಿಟ್ಟಿದ್ದಾರೆ.

ಅಭಯ ಪ್ರದಾಯಕ ಶ್ರೀರಮೇಶ
ಉಭಯ ವೇದ ಪೂಜಿತ ಪಾದಪದ್ಮ ೩.೮೨

ಎಂದು ಉಭಯವೇದ ಪ್ರಿಯನ ಪಾದಪದ್ಮಗಳನ್ನೇ ಆಶ್ರಯಸಿರುವ ಭಕ್ತರು ಇವರು.

ಎನ್ನತಂದೆಕಾಯೊ ಚನ್ನಕೇಶವ ಪ

ನಿನ್ನಮೆಚ್ಚಿಸುವುದೆನ್ನಿಂದಾಗದೂ ಸಂ-
ಪನ್ನರಾರ್ತಿಹರ ಮಾಮನೋಹರ ಅ ಪ

ಶ್ರವಣ ಕೀರ್ತನ ಸ್ಮರಣ ಸೇವೆಯು
ಸುವಂದನಾರ್ಚನೆ ದಾಸ್ಯ ಸಖ್ಯಗಳು

ಕುವಲಯಾಕ್ಷಗಾತ್ಮಾರ್ಪಣೆಗೆ ಗೈ
ವಿವನು ಕಾಣೆನೈ ಜಾಜೀಶ ಶ್ರೀಶ

ಎಂದು ನವವಿಧ ಭಕ್ತಿಯಿಂದ ನಿವೇದನೆ ಮಾಡಿದರೂ ಭಗವಂತನೊಲಿಯನು, ಇವೂ ಸಾಲವು ಎಂಬ ಕೊರತೆಯಲ್ಲೇ ದೈವಧ್ಯಾನ ಮಾಡುವ ಅದಮ್ಯನಿಷ್ಠೆ ಹಲವು ಕೀರ್ತನೆಗಳಲ್ಲಿದೆ.

'ಏಕೆ ದಯ ಬಾರದೋ ಶ್ರೀಕಾಂತನಿನಗೆ'
'ಕಂತು ಜನಕನೆ ಪಂಥ ವೇನಿದು'
'ಕೈಬಿಡದೆ ಕಾಪಾಡು ಕರುಣಾಳುಹರಿಯೆ'
'ದೊರೆಯೆನ್ನ ಕಾಯ್ಯೆ ಶ್ರೀಚಕ್ರಪಾಣಿ'
'ನಾಬೇಡುವೆನೋ ನಿನ್ನ ಸೌಭಾಗ್ಯಸಾಗರ'
'ಮರೆವರೇನಯ್ಯ ಮಾಧವ ಮಮತೆ ತೋರಯ್ಯ'
'ಶ್ರೀರಮಣ ಶರಣಾರ್ಥಿನಿವಾರಣಾ'

ಮುಂತಾದ ಹಲವಾರು ಕೀರ್ತನೆಗಳಲ್ಲಿ ವಿಧ ವಿಧವಾಗಿ ದೀನನಾಗಿ ಭಕ್ತಿ ಪರವಶತೆಯಿಂದ ದೈವಸ್ತುತಿ ಮಾಡಿದ್ದಾರೆ. ಎಲ್ಲ ಕೀರ್ತನೆಗಳ ಮುಖ್ಯಭಾವ ಪ್ರಪತ್ತಿ. ಸರ್ವವನ್ನೂ ಭಗವಂತನಿಗರ್ಪಿಸಿ ಅವನ ಲೀಲೆಗಳನ್ನೇ ಧ್ಯಾನಿಸುವ ಅವನ ನಾಮಸ್ಮರಣೆ ಮಾಡುವುದೇ ಶರಣಾಗತರಾದ ಶ್ರೀವೈಷ್ಣವ ದಾಸರ ಪರಮ ಗುರಿ. ಶಾಮಶರ್ಮರಲ್ಲೂ ಇದೇ ಭಾವವನ್ನು ಕಾಣುತ್ತೇವೆ.

'ದ್ವಂದ್ವಾತೀತನ ಮಾಡೊ ನಿರ್ದ್ವಂದ್ವನೆ'
'ನಾರಾಯಣ ನಿನ್ನ ಚರಣಸೇವೆಯ ಬಿಟ್ಟು'
'ನೆನೆಮನವೆ ನಾರಾಯಣ ನಾಮವ'
'ಶ್ರೀಮನೋಹರ ನಿನ್ನ ನಾಮವೆ ಎನ್ನುಸಿರು'

ಕೀರ್ತನೆಗಳಲ್ಲಿ ಈ ಭಾವವನ್ನು ಕಾಣಬಹುದು.

ನಿಂದಾಸ್ತುತಿ ಭಕ್ತಿಯಲ್ಲಿ ಮುಳುಗಿದ ಪರಮಭಕ್ತನ ಧ್ಯಾನಸಿದ್ಧಿಯ ಒಂದು ಸ್ಥಿತಿ. ಅಂತಹ ಸ್ಥಿತಿಯನ್ನು ಹೊಂದಿದ ಶಾಮಶರ್ಮ ದಾಸರೂ ಒಂದೆರಡು ಉತ್ತಮವಾದ ನಿಂದಾಸ್ತುತಿಗಳನ್ನು ನೀಡಿದ್ದಾರೆ.

ನಿಜದಿಸುಖಪದ ಕೊಡುವೆಯೋ
ಭಜಕರಿಗೆ ಶುಭದಾಯಿಯೊ'
'ನಿನ್ನ ಭಕ್ತರು ಬಹಳ ಬಲವಂತರಹುದೈ'
'ಬಹುಲೋಭಿಯೋ ನೀನು ಮುರಹರ'

ಈ ಕೆಲವು ಕೃತಿಗಳಲ್ಲಿ ನಿಂದಾಸ್ತುತಿಯ ಮೂಲಕವೂ ದೈವವನ್ನು ಒಲಿಸಿಕೊಳ್ಳುವ ಉತ್ಕಟತೆಯಿದೆ.

ಪೂರ್ವಜೀವನದ ದೋಷಗಳನ್ನು ತಪ್ಪುಗಳನ್ನೇ ದೊಡ್ಡದು ಮಾಡಿಕೊಂಡು ಪಶ್ಚಾತ್ತಾಪ ಪಡುವ ಪಾಪ ಪ್ರಜ್ಞೆಯಲ್ಲಿ ತೊಳಲಾಡುತ್ತ ಅದರಿಂದ ಮುಕ್ತಗೊಳಿಸಲು ದೈನ್ಯತೆಯಿಂದ ಪ್ರಾರ್ಥಿಸುವ ಜೀವದ ಹಳಹಳಿಕೆಯೂ ದಾಸರ ಕೀರ್ತನೆಯಲ್ಲಿದೆ.

'ಬಡತನವೆನ್ನನು ಬಾಧಿಪುದೈಹರಿ'
'ಬಿಡಬೇಡ ರಂಗಯ್ಯ ಬಡವನೂ ಪಿಡಿಕಯ್ಯ'

ಮುಂತಾದ ಕೃತಿಗಳಲ್ಲಿ ದಾಸರ ಜೀವನದ ಎಳೆಗಳನ್ನು ಗುರುತಿಸಬಹುದು. ಇಲ್ಲಿ ಬಡತನ ಎಂಬುದನ್ನು ಬದುಕಿಗೂ ಭಕ್ತಿಗೂ ಅನ್ವಯವಾಗುವ ವಿಶೇಷ ಅರ್ಥವನ್ನೂ ಹೊಂದಿದೆ. ಈ ಕೀರ್ತನೆಯಲ್ಲಿ ಪುರಾಣಪ್ರತಿಮೆಗಳ ಚಿತ್ರದ ಸಾಲನ್ನೇ ಕಟ್ಟಿದ್ದಾರೆ.

'ಮುಂದೆನಗೆ ಗತಿಯೇನೊ ಇಂದಿರೇಶ'

ಕೃತಿ ನೇರವಾಗಿ ದಾಸರ ಜೀವನಕ್ಕೆ ಸೇರಿದ್ದು. ಪ್ರಪತ್ತಿಯನ್ನು ಅನುಸಂಧಾನ ಮಾಡುವುದಕ್ಕೆ ಮೊದಲಿನ ತಮ್ಮ ಲೋಭತನವನ್ನು, ಜೀವನ ಲೋಲುಪತೆಯನ್ನು, ಕಲ್ಯಾಣ ಸಮಯದಲ್ಲಿ ಕಲಹಗಳನ್ನು ಮಾಡುವಂತಹ ವಿಘ್ನಸಂತೋಷಗಳನ್ನು ನೆನಪಿಸಿಕೊಳ್ಳುತ್ತ ಅದರಿಂದೆಲ್ಲ ಬಿಡುಗಡೆ ಬಯಸಲು ತೊಳಲಿರುವ ಚಿತ್ರ ಇದರಲ್ಲಿದೆ.

ನಾರಾಯಣಶರ್ಮರ ಆತ್ಮಕಥೆಯಲ್ಲಿ ಬರುವ ದಾಸರ ಜೀವನ ಸಂಗತಿಗಳಿಗೆ ಈ ಕೀರ್ತನೆಯ ಹಲವು ಸಾಲುಗಳು ಸಮರ್ಥನೆಯನ್ನೂ ಒದಗಿಸುತ್ತವೆ. ಇಲ್ಲಿ ಬರುವ

'ನರ್ಮದಾನದಿಸ್ನಾನ ನಿರ್ಮಲೋದಕಪಾನ'

ಸಾಲಿಗೆ ವಿಷ್ಣುಪುರಾಣದ ಉಲ್ಲೇಖವನ್ನು ಕೊಡುವ ಮೂಲಕ (ಅಂಕ-೪, ಅಧ್ಯಾಯ-೩, ಪು ೨೦೧) ಅನೇಕ ಧಾರ್ಮಿಕ ಗ್ರಂಥಗಳ, ವೇದ-ಪುರಾಣಗಳ ಅಧ್ಯಯನ ಮಾಡುತ್ತಿದ್ದುದನ್ನೂ ದಾಸರಲ್ಲಿ ಗುರುತಿಸಬಹುದಾಗಿದೆ.

ನಾಟ್ಯದ ಮೂಲಕವೂ ದೇವರನ್ನು ಒಲಿಸಿಕೊಳ್ಳುವ ಪರಿ ದಾಸರಿಗೆ ಸಿದ್ಧಿಸಿದೆ. ನಾಟ್ಯಕ್ಕಾಗಿಯೇ ಆ ಸೂಚನೆಗಳೊಂದಿಗೆ ಕೀರ್ತನೆಗಳ ರಚನೆಯಿರುವುದು ಕನ್ನಡ ಕೀರ್ತನ ಸಾಹಿತ್ಯದಲ್ಲಿಯೇ ಅಪರೂಪದ್ದಾಗಿದೆ.

'ಚನ್ನಕೇಶವ ಪನ್ನಗಶಯನ'

'ಭಾಗವತರ ನೋಡುವ ಭಾಗ್ಯಸ್ವರೂಪ'

ಈ ಎರಡೂ ನೇರವಾಗಿ ನಾಟ್ಯ ಪರಿಭಾಷೆಯಲ್ಲಿಯೇ ಇವೆ. ಮೊದಲನೆಯದನ್ನು ದಾಸರೇ 'ರೂಪಕ, 'ಆತ್ಮ-ಪರಮಾತ್ಮಸಂವಾದ' ಎಂದು ಹೆಸರಿಸಿ ಪಾತ್ರಗಳನ್ನೂ ಸೃಷ್ಟಿಸಿದ್ದಾರೆ. ಇನ್ನೊಂದರಲ್ಲಿ ಪ್ರತಿನುಡಿಯ ನಂತರ 'ತಾಂ ಝಂ ತರಿಝಂತ, ತಧಿಗಿತೋಂ, ಮುಂತಾದ ನಾಟ್ಯ ತಾಳಲಯಗಳನ್ನೇ ನೀಡಿದ್ದಾರೆ. ಅವುಗಳಿಗೆ 'ತ್ವರಿತ' ಎಂಬ ಸೂಚನೆಯನ್ನು ನೀಡಿದ್ದಾರೆ. ಇನ್ನೂ ಕೆಲವು ಕೀರ್ತನೆಗಳಲ್ಲೂ ಈ ಸೂಚನೆ ಕಂಡುಬರುತ್ತದೆ.

ಹೀಗೆ ವಿವಿಧ ರೀತಿಗಳಲ್ಲಿ ದೈವಧ್ಯಾನ ಮಾಡುತ್ತ , ದೇವರ ಮಹಿಮೆಗಳನ್ನು ಕೊಂಡಾಡುತ್ತ, ಭಕ್ತಿ ಪರವಶತೆಯಿಂದ ಸ್ತುತಿಸುತ್ತ, ದೈವಸಾಕ್ಷಾತ್ಕಾರಕ್ಕಾಗಿ ಹಂಬಲಿಸುವ ತವಕವಿದ್ದ ದಾಸರಿಗೆ ಆ ದರ್ಶನವೂ ಲಭ್ಯವಾಗಿ ಧನ್ಯತೆಯನ್ನು ಹೊಂದಿದ್ದಾರೆ.

'ಇಂದು ದಯದಿ ದರ್ಶನವಿತ್ತೆಯ'
'ಏನು ಧನ್ಯನೋ ನಾನೇನು ಮಾನ್ಯನೋ'
'ನಾಕಣ್ಣ ತುಂಬ ನೋಡಿನಲಿವೆನು'

ಎಂಬಂತಹ ಹಲವು ಕೀರ್ತನೆಗಳು ದಾಸರಿಗೆ ದೈವ ಸಾಕ್ಷಾತ್ಕಾರವಾಗಿರುವುದನ್ನು ಸಾರುತ್ತಿವೆ. ಸಾಕ್ಷಾತ್ಕಾರವೆನ್ನುವುದು ಆಧುನಿಕ ಪರಿಭಾಷೆಯಲ್ಲಿ ವ್ಯಕ್ತಿಯೊಬ್ಬ ಸದಾಕಾಲ ಯಾವುದನ್ನು ಧ್ಯಾನಿಸುತ್ತಾನೋ ಅದರಲ್ಲೇ ತನ್ಮಯವಾಗಿರುವ ಮನಸು ನಿದ್ರಾಸ್ಥಿತಿಯಲ್ಲೂ ಜಾಗೃತವಾಗಿದ್ದು ಅದರ ವಿವಿಧ ಕಾಣ್ಕೆಗಳನ್ನು ಅವನ ದರ್ಶನಕ್ಕೆ ತರುವುದು ಕನಸು. ಇಂತಹ ಹತ್ತಾರು ಕನಸುಗಳನ್ನು ಕಾಣುವ ಮೂಲಕ ತಾವು ನಂಬಿದ್ದ ದೈವ ತನ್ನನ್ನು ಒಲಿದಿದೆ ಎಂಬ ಆತ್ಮವಿಶ್ವಾಸಕ್ಕೆ, ಧನ್ಯತೆಯ ಹತ್ತಿರಕ್ಕೆ ದಾಸರು ಬಂದಿರುವಂತೆ ತೋರುತ್ತದೆ.

ಶಾಮಶರ್ಮರು ಆಗೊಮ್ಮೆ ಈಗೊಮ್ಮೆ ಹರಿದಾಸ ವೃತ್ತಿಯಲ್ಲಿ ತೊಡಗಿದ್ದರೂ ಆತ್ಮೋನ್ನತಿಗಾಗಿ ಕೀರ್ತನೆಗಳನ್ನು ರಚಿಸಿದ್ದರೂ ಶರಣಾಗತಿಯಲ್ಲಿ ಮುಳುಗಿದ್ದರೂ ಸಮಾಜಕ್ಕೆ ವಿಮುಖವಾಗದೆ ಕೆಲವಾದರೂ ಲೋಕನೀತಿಯ ಕೃತಿಗಳನ್ನೂ ರಚಿಸಿದ್ದಾರೆ.

'ಕೆಟ್ಟಗುಣಗಳು ನರನ ಅಟ್ಟಿ ಕೆಡಹುತಲಿಹವು'
'ಗತಿಯಾರೊ ಈ ಜಗದಿ ಮತಿಗೆಟ್ಟಮನುಜ'
'ಮನವೇ ನೀನೆಚ್ಚರಿಕೆ ಬಿಡದಿರು'

ಮುಂತಾದ ಕೀರ್ತನೆಗಳಲ್ಲಿ ಸಮಾಜ ಜೀವನದ ಗುಣಾವಗುಣಗಳನ್ನು ದಾಖಲಿಸಿದ್ದಾರೆ.

ಶ್ರೀವೈಷ್ಣವ ನಿಷ್ಠೆಯನ್ನು ವ್ಯಕ್ತಪಡಿಸುವ ಹಲವು ಶ್ರೇಷ್ಠ ಮಾದರಿಯ ತಾತ್ವಿಕ ಕೃತಿಗಳನ್ನೂ ಶಾಮಶರ್ಮರು ಕನ್ನಡಕ್ಕೆ ಕೊಟ್ಟಿದ್ದಾರೆ.

'ಜಗವ ಪೆತ್ತಿಹ ಪ್ರಭು ನೀನಯ್ಯ'

ಎಂಬುದರಲ್ಲಿ ಪುರುಷಸೂಕ್ತದ ಛಾಂಯಾನುವಾದವಿದ್ದು ವಿಷ್ಣುವಿನ ಸರ್ವವ್ಯಾಪಕತೆಯನ್ನೂ ಏಕೀಭಾವವನ್ನೂ ಕಾಣಬಹುದು.

'ತಿರುಮಣಿಧರಿಸಿದ ತೀರ್ಥರ ಕಂಡರೆ'

'ಮೂಲಮಂತ್ರವ ಜಪಿಸು ಅರ್ಹತೆಯಿರುವಂತೆ'

'ರಾಮಕೋಟಿ ನಾಮಭಜನ ನೇಮದಿಂದ ಮಾಳ್ಪನು ಧನ್ಯ'

'ಶ್ರೀಪತಿಹಾಕಿದ ಶ್ರೀವೈಷ್ಣವಸುರಭೂಜವು ನಿತ್ಯ'

ಮುಂತಾದವು ಶ್ರೀವೈಷ್ಣವ ಭಾಗವತರ ಲಕ್ಷಣ, ಅವರ ಪಾದಸೇವನೆಯಿಂದ ಹರಿದರ್ಶನದ ಸುಲಭಮಾರ್ಗ, ತತ್ವ, ಮಂತ್ರಮಹಿಮೆ, ಆಳ್ವಾರಾಚಾರ್ಯ ಸ್ತುತಿ ಮುಂತಾದ ಹಲವು ಧಾರ್ಮಿಕ ಪ್ರಮೇಯಗಳನ್ನು ಸಮರ್ಥವಾಗಿ ಸಾದರಪಡಿಸಿದ್ದಾರೆ. ಶ್ರೀವೈಷ್ಣವ ತತ್ವವನ್ನು ಕನ್ನಡ ಸಾಹಿತ್ಯದಲ್ಲಿ ಕಂಡರಿಸಿರುವ ಮುಖ್ಯ ಕೀರ್ತನೆಗಳಲ್ಲಿ ಇವು ಸೇರುತ್ತವೆ.

'ಹಸಿದು ನಾ ಬಳಲಲೇಕೋ ಈ ಸಮಯದಲ್ಲಿ

ಬಿಸಿಯೂಟ ಮಾಡುವೆನು'

ಕೀರ್ತನೆಯು ಶ್ರೀವೈಷ್ಣವ ತತ್ವವನ್ನು ವಿಶಿಷ್ಟ ರೀತಿಯಲ್ಲಿ ಅಡಿಗೆಯ ಪರಿಭಾಷೆಯಲ್ಲಿ ಉಣಬಡಿಸುತ್ತದೆ. ಶ್ರೀಹರಿಯ ವಿವಿಧ ರೂಪಗಳನ್ನೆಲ್ಲ ರುಚಿರುಚಿಯಾದ ಒಂದೊಂದು ಊಟದ ಪದಾರ್ಥಗಳಿಗೆ ಹೋಲಿಸಿ 'ಹಸನಾದ ಶೇಷಶಯನನ ನಾಮಪಡಿಗೆಯನ್ನು' ಮಾಡಿದ್ದಾರೆ. ಪುರಂದರದಾಸರ 'ರಸಾಯನ'ದ ಕೀರ್ತನೆಯಂತೆ ಇದು ಸಾಗಿದರೂ ಅದರಿಂದ ಪ್ರಭಾವಿತವಾಗಿದ್ದರೂ ಅದಕ್ಕಿಂತ ಭಿನ್ನವಾಗಿ ತನ್ನ ವಿಶಿಷ್ಟತೆಯನ್ನು ಕಾಯ್ದುಕೊಂಡು ತನ್ನತನವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಹಲವು ದಿವ್ಯಕ್ಷೇತ್ರಗಳನ್ನು ಸಂದರ್ಶಿಸಿರುವ ದಾಸರು ಆ ಕ್ಷೇತ್ರಗಳ ಅರ್ಚಾ ರೂಪಗಳನ್ನೂ ತಮ್ಮ ಕೀರ್ತನೆಗಳಲ್ಲಿ ಸ್ತುತಿಸಿದ್ದಾರೆ. ಶ್ರೀರಂಗ, ಕಂಚಿ, ತಿರುಪತಿ, ಮೇಲುಕೋಟೆ, ಉಡುಪಿ, 'ತಟ್ಟೆಕೆರೆಯ ರಂಗನಾಥ' (ಮಾಗಡಿ ತಾ||ಗೊರೂರು), 'ಕೆಂಗಲ್ಲ ಹನುಮಂತರಾಯ', 'ವೀರನಗೆರೆಯ ಹನುಮಂತ'ರನ್ನೂ ಸ್ತುತಿಸಿದ್ದಾರೆ.

'ಆರತಿಬೆಳಗುವೆ ನಿನಗೆ ಶ್ರೀರಾಮ' 'ತಾಂಬೂಲ ಕೊಡುವೆನೀಗ',

ಹಸೆಗೆ ಕರೆವಹಾಡು, 'ಭರ್ತೃಭಾವದಿಂದ ಮಗಳೆ ಚಿರಕಾಲ ಸುಖಿಸು' 'ಮಂಗಳವಾಗಲಿ ಶ್ರೀ ಮಾಧವನಿಗೆ' 'ಮಡಿಲು ತುಂಬಿದರಮ್ಮ ಮುತ್ತೈದೆಯರೆಲ್ಲ', 'ಮಾಲೆಹಾಕುವ ಲೀಲೆಯಿಂದ', 'ಲಾಲಿಹಾಡು ಹೀಗೆ ಹತ್ತಾರು ಸುಂದರ ಸಂಪ್ರದಾಯದ ಹಾಡುಗಳನ್ನೂ ದಾಸರು ರಚಿಸಿದ್ದಾರೆ.

'ನಿರ್ದಯನಾಗಬೇಡವೋ ಭಗವಂತ
ದುರ್ದಿನದೂರಮಾಡೊ ದೇಶಕ್ಕೆ ಪ್ರಶಾಂತ'
'ನಾರಾಯಣಾ ಕೃಷ್ಣ ಬೆಳಗಾಯಿತೇಳಯ್ಯ
ಮೂರುಲೋಕಂಗಳಿಗೆ ಮಂಗಳವ ತಾರಯ್ಯಾ'

ಈ ಕೃತಿಗಳು ಭಾರತ ಮತ್ತು ಪಾಕೀಸ್ಥಾನ ಹಾಗೂ ಚೀನಾಗಳ ನಡುವೆ ನಡೆದ ಯುದ್ಧ, ಬರಗಾಲ ಮತ್ತು ಧೂಮಕೇತು ಕಾಣಿಸಿಕೊಂಡ ವಿಶೇಷ ಸಂದರ್ಭಗಳಿಗೆ ಸ್ಪಂದಿಸಿರುವವಾಗಿದ್ದು, ದಾಸರಿಗಿದ್ದ ಸಾಮಾಜಿಕ ಕಳಕಳಿ ಇದರಿಂದ ವ್ಯಕ್ತವಾಗುತ್ತದೆ.

'ನೆಲವೆಲ್ಲ ದುರ್ಭಿಕ್ಷ ತಾಂಡವವಾಡಿ', 'ಕಳವು ಕೊಲೆಯು ದಂಗೆ ದಾರಿದರೋಡೆಗಳು' 'ಅಧಿಕವಾಗಿ ಬರಗಾಲ ಬಂದಿರುವಾಗ' 'ಒಂದೊಂಬೊತ್ತಾರ್ವೈದು ಹತ್ತು ಹನ್ನೊಂದರ ಮಧ್ಯೆ' (೧೯೬೫ರ ಅಕ್ಟೋಬರ್ ನವೆಂಬರ್) ಧೂಮಕೇತುವು ಬೆಳಗುವ ಪೂರ್ವದಲ್ಲಿ ವಿಶ್ವಾವಸು ಸಂವತ್ಸರದ ಆಶ್ವೀಜಕಾರ್ತೀಕದ ಮಧ್ಯೆ 'ಇಳೆಗಂಡ ಕಳೆ'ಯಾಗಿ ಕುತ್ತಿನ ಕತ್ತಿಯಂತೆ

ಕಾಣಿಸಿಕೊಂಡಿರುವುದನ್ನು, ಪಾಕಿಸ್ಥಾನ ಮತ್ತು ಚೀನಾದೊಂದಿಗೆ ಯುದ್ಧ ನಡೆಯುತ್ತಿದ್ದುದನ್ನು ದಾಖಲಿಸುತ್ತ

ಕನ್ನಡದನಾಡಿಗೆ ಹೊನ್ನಿನ ಬಿರುದಿದೆ
ಖಿನ್ನತೆಯ ತಾರದೆ ಉನ್ನತಿ ಕಾಪಾಡು

ಎಂದು ಮೊರೆಯಿಟ್ಟಿರುವ ದಾಸರ ನಾಡ ಬಗೆಗಿನ ಪ್ರೇಮ, ಅಭಿಮಾನ ಅಸಾಧಾರಣವಾಗಿ ಅಭಿವ್ಯಕ್ತವಾಗಿದೆ.

೪) ಕೀರ್ತನೆಗಳ ಆಕರ

ಶಾಮಶರ್ಮರ ಕೀರ್ತನೆಗಳಿಗೆ ಒಂದು ಅಪ್ರಕಟಿತ ಹಸ್ತ ಪ್ರತಿಯನ್ನು ಮುಖ್ಯ ಆಕರವಾಗಿ ಬಳಸಿಕೊಂಡಿದೆ. ದಾಸರ ವಂಶಸ್ಥರಲ್ಲಿದ್ದ ದಾಸರೇ ಮುದ್ರಣಕ್ಕೆ ಸಿದ್ಧಪಡಿಸಿದ್ದ ಶುದ್ಧ ಹಸ್ತಪ್ರತಿಯಿಂದ ನಕಲಾಗಿರುವ 'ಪ್ರಸ್ತುತ ಸಂಪಾದಕನ ಸ್ವಹಸ್ತಾಕ್ಷರ ಹಸ್ತಪ್ರತಿ, ಇದರ ಆಕರವಾಗಿದೆ, ಇದರಲ್ಲಿ ನಾಮಾವಳಿಗಳೂ ಸೇರಿ ೧೧೩ ಹಾಡುಗಳಿದ್ದು ಅವುಗಳನ್ನು ಹೊರತುಪಡಿಸಿ ೧೧೦ ಕೀರ್ತನೆಗಳನ್ನು ಈ ಸಂಪುಟಕ್ಕೆ ಸಿದ್ಧಪಡಿಸಿದೆ. ನಾಮಾವಳಿಗಳಲ್ಲಿ ಕೇಶವನಾಮ ರಸಾಯನ (೫೦೭) ವನ್ನು ಮಾದರಿಗಾಗಿ ಕೊಟ್ಟಿದೆ. ೨೪ ನುಡಿಗಳಲ್ಲಿರುವ ಈ ನಾಮಾವಳಿಯ ವೈಶಿಷ್ಟ ವಿಷ್ಣುವಿನ ದ್ವಾದಶ (೨೪) ನಾಮಗಳಿಗೊಂದೊಂದು ನುಡಿ ರೂಪಿಸಿರುವುದಾಗಿದೆ.

ಈ ಸಂಪಾದಕನ ಸ್ವಹಸ್ತಾಕ್ಷರ ಹಸ್ತಪ್ರತಿಯುನ್ನು ಆದರಿಸಿ ಸೂಕ್ತ ಟಿಪ್ಪಣಿಗಳೊಂದಿಗೆ ಸಂಪಾದಕನೇ ಪ್ರಕಟಿಸಿರುವ ಮೂವರು ಶ್ರೀವೈಷ್ಣವ ಹರಿದಾಸರ ಕೀರ್ತನೆಗಳು (ನಾರಾಯಣಶರ್ಮ ಸಂಸ್ಕೃತಿಕೇಂದ್ರ ೧೯೯೯) ಎಂಬ ಪುಸ್ತಕವನ್ನೂ ಇನ್ನೊಂದು ಆಕರವನ್ನಾಗಿ ಬಳಸಿಕೊಂಡಿದೆ. ಅಲ್ಲದೆ ದಾಸರ ಮಗಳು ವರವಣಿಯ ಕನಕಲಕ್ಷ್ಮೀ, ದಾಸರ ಬಂಧು ಹೆಬ್ಬಳಲಿನ ವೆಂಕಟರಂಗಯ್ಯಂಗಾರ್ ಮುಂತಾದವರು ಹಾಡಿದ ಹಾಡಿನ ಸಂಪ್ರದಾಯವನ್ನೂ ಇನ್ನೊಂದು ಆಕರವಾಗಿ ಬಳಸಿಕೊಳ್ಳಲಾಗಿದೆ.

೮. ಸಂಪತ್ತಯ್ಯಂಗಾರ್ಯರು

ಎಸ್. ಸಂಪತ್ತಯ್ಯಂಗಾರ್ ಅವರು ೨೦ನೇ ಶತಮಾನದ ಮಧ್ಯಭಾಗದಲ್ಲಿದ್ದ ಪ್ರಮುಖ ಸಂಸ್ಕೃತ ವಿದ್ವಾಂಸರು. ಸಂಸ್ಕೃತ ಕಾಲೇಜು ಪ್ರಾಚಾರ್ಯರಾಗಿ ವಿಶಿಷ್ಟಾದ್ವೈತ ತತ್ತ್ವಾನುಷ್ಠಾನಕಾರರಾಗಿ ಹಲವಾರು ಪಾಂಡಿತ್ಯಪೂರ್ಣ ಗ್ರಂಥಗಳನ್ನು ಬರೆದು ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದಿದ್ದರು. ಸಂಸ್ಕೃತ, ಕನ್ನಡ, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಪರಿಣತರಾಗಿದ್ದ ಇವರು ಇವೆಲ್ಲ ಭಾಷೆಗಳಲ್ಲೂ ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಆಧ್ಯಾತ್ಮ ಚಿಂತನ, ಅಧ್ಯಯನ, ದೈವಧ್ಯಾನ, ಅನುಸಂಧಾನ ಇತ್ಯಾದಿ ಧಾರ್ಮಿಕ ಸಾಧನೆಗಳಿಂದ ಪರಿಪಕ್ವಗೊಂಡ ಮನಸ್ಸಿನಿಂದ ಕೇವಲ ಎಂಟು–ಹತ್ತು ದೇವರ ನಾಮಗಳನ್ನು ರಚಿಸುವ ಮೂಲಕ ಹರಿದಾಸರಾಗಿಯೂ ಕಾಣಿಸಿಕೊಂಡಿದ್ದಾರೆ.

(೧) ಜೀವನ ವಿವರ

ಸಂಪತ್ತಯ್ಯಂಗಾರರ ಪೂರ್ವಜರು ತಮಿಳುನಾಡಿನ ಶ್ರೀರಂಗದ ಪಕ್ಕದ ಗ್ರಾಮದ ಶ್ರೀವೈಷ್ಣವ ಸಾತ್ವಿಕಬ್ರಾಹ್ಮಣರಾಗಿದ್ದ ಶತಮರ್ಷಣ ಗೋತ್ರೋದ್ಭವರಾದ ಕೃಷ್ಣಮಾಚಾರ್ಯರು. ಇವರ ಮಕ್ಕಳಾದ ಶ್ರೀನಿವಾಸ ಮತ್ತು ಶ್ರೀರಂಗ ಇಬ್ಬರೂ ಜೀವನೋಪಾಯಕ್ಕಾಗಿ ಮೈಸೂರಿಗೆ ಬಂದು ನೆಲೆಸಿದರು. ಶ್ರೀರಂಗಾಚಾರ್ಯ ಮಹಾರಾಜ ಕೃಷ್ಣರಾಜರಿಂದ ಮಾನಿತರಾಗಿ ರಾಜರ ಆಚಾರ್ಯರಾಗಿ ಭೂಮ್ಯಾದಿಗಳನ್ನು ಪಡೆದಿದ್ದರು. ಸಮೀಪದ ಸೋಸಲೆಯಲ್ಲಿ ನೆಲೆಸಿದ್ದ ಈ ಕುಟುಂಬ 'ಯಜಮಾನರ್' ಎಂದು ಪ್ರಸಿದ್ಧರಾಗಿದ್ದರು. ಸಂಪತ್ತಯ್ಯಂಗಾರ್ಯರು ಈ ಪ್ರಸಿದ್ಧ ಮನೆತನದಿಂದ ಬಂದವರು. ವೇದಾಧ್ಯಯನ, ಪ್ರಬಂಧಗಳ ಅನುಸಂಧಾನ, ಸಂಸ್ಕೃತ ಸಾಹಿತ್ಯಾಧ್ಯಯನ, ಧಾರ್ಮಿಕ ವಿಧಿ ವಿಧಾನಗಳ ಕಟ್ಟುನಿಟ್ಟಾದ ಆಚರಣೆಗಳ ಮೂಲಕ ಸುಸಂಸ್ಕೃತ ಕುಟುಂಬವೆನಿಸಿದ್ದ ಸೋಸಲೆಯ ಈ ಯಜಮಾನರ್ ವಂಶಸ್ಥರಲ್ಲಿ ಶ್ರೀನಿವಾಸಾಚಾರ್ಯರ ಪೀಳಿಗೆಯಲ್ಲಿ ನಾಲ್ಕನೇ ತಲೆಮಾರಿನವರಾಗಿ ಸಂಪತ್ತಯ್ಯಂಗಾರ್ಯರು ಕಾಣಿಸಿಕೊಳ್ಳುತ್ತಾರೆ.

ದಾಸರ ತಂದೆ ಶ್ರೀರಂಗಾಚಾರ್ಯರು ಸೋಸಲೆಯಲ್ಲಿಯೇ ಬಾಲ್ಯ ಕಳೆದು ಯೌವನದಲ್ಲಿ, ಕಾಶಿಯಲ್ಲಿ ಬ್ರಹ್ಮಚರ್ಯದಲ್ಲಿ ವೇದಾಭ್ಯಾಸ ಮುಗಿಸಿ ಸಮಾವರ್ತನೆ ಮಾಡಿಕೊಂಡು ಸೋಸಲೆಯ ಸಮೀಪದ ಕೃಷ್ಣಾಪುರಕ್ಕೆ ಬಂದು ಅಲ್ಲಿಯ ಕೌಶಿಕ ಗೋತ್ರದ ವೇದವಿದರಾಗಿದ್ದ ಶ್ರೀನಿವಾಸಯ್ಯಂಗಾರ್ಯರ ಮಗಳನ್ನು ವಿವಾಹವಾಗಿ ಮೈಸೂರಿನಲ್ಲಿ ವಾಸ್ತವ್ಯವನ್ನು ಗುರುತಿಸಿಕೊಂಡಿದ್ದರು. ಬಹಳ ಜ್ಞಾನಿಗಳಾಗಿದ್ದ ಶ್ರೀರಂಗಾಚಾರ್ಯರು ವಿಶಿಷ್ಟಾದ್ವೈತ ತತ್ವದ ನಿಷ್ಠಾವಂತ ಅನುಯಾಯಿಗಳಾಗಿ ಪ್ರಪತ್ತಿ ಧರ್ಮವನ್ನು ಸ್ವೀಕರಿಸಿ ಸದಾ ಭಗವಂತನ ನಾಮಸ್ಮರಣೆಮಾಡುತ್ತ 'ಹರಿಚರಣ' ಸೇರುವುದೊಂದನ್ನೇ ಗುರಿಯಾಗಿರಿಸಿಕೊಂಡು ಅಧ್ಯಯನ-ಧ್ಯಾನ-ಆರಾಧನೆಗಳಲ್ಲೇ ಮನಸ್ಸಿಟ್ಟಿದ್ದ ಮಹಾ ಸಾತ್ವಿಕರಾಗಿದ್ದರು. ಇವರ ಎರಡನೇ ಪುತ್ರರಾಗಿ ೧೭-೧೧-೧೯೦೦ರಲ್ಲಿ ಜನಿಸಿದರು ಸಂಪತ್ತಯ್ಯಂಗಾರರು. ಯದುಗಿರಿಯ ದೇವರಲ್ಲಿ ಬಹಳ ಭಕ್ತಿಯಿಟ್ಟಿದ್ದರಿಂದ ಮಗನಿಗೆ ಪೂರ್ವಿಕರ ಹೆಸರಿಡದೆ ಆರಾಧ್ಯದೈವದ ಹೆಸರಿಟ್ಟರು. ಬಾಲ್ಯ-ವಿದ್ಯಾಭ್ಯಾಸಗಳನ್ನೆಲ್ಲ ಮೈಸೂರಿನಲ್ಲೇ ಪೂರೈಸಿದ ಸಂಪತ್ತಯ್ಯಂಗಾರ್ಯರು ೧೬ನೇ ವರ್ಷದನಂತರ ಸಂಸ್ಕೃತ, ಇಂಗ್ಲಿಷ್‌ಗಳನ್ನು ಆಳವಾಗಿ ಅಧ್ಯಯನಮಾಡಿ ಬುದ್ಧಿವಂತರೆನಿಸಿಕೊಂಡರು. ಒಬ್ಬ ಅಣ್ಣ (ರಾಮಚಂದ್ರಾಚಾರ್) ಇಬ್ಬರು ತಮ್ಮಂದಿರು (ಕೃಷ್ಣಮಾಚಾರ್, ಶ್ರೀನಿವಾಸಾಚಾರ್) ಇವರೊಂದಿಗಿದ್ದ ಸಂಸಾರ ಸಂತೃಪ್ತವಾಗಿತ್ತು. ಸಂಪತ್ತಯ್ಯಂಗಾರ್ಯರು ವಿದ್ಯಾಭ್ಯಾಸದಲ್ಲಿ ನಿರತರಾಗಿದ್ದ ಕಾಲ, ಅಣ್ಣ ಚಿತ್ರದುರ್ಗದಲ್ಲಿದ್ದ ಸಮಯ, ತಮ್ಮ ೨೪ನೇ ವಯಸ್ಸಿನಲ್ಲಿ ಇವರು ತಂದೆಯವರನ್ನು ಕಳೆದುಕೊಂಡರು. ಅಣ್ಣನ ಇಬ್ಬರು ಮಕ್ಕಳು, ತಮ್ಮಂದಿರು, ತಾಯಿಯವರೊಂದಿಗೆ ಅಣ್ಣ ಮತ್ತು ಸೋದರಮಾವನ ಬೆಂಬಲದೊಂದಿಗೆ ಸಂಸಾರದ ಹೊಣೆಹೊತ್ತ ಸಂಪತ್ತಯ್ಯಂಗಾರ್ಯರು ಎದೆಗುಂದದೆ ವಿದ್ಯಾಭ್ಯಾಸ ಮುಂದುವರಿಸಿದ್ದಾಗಲೆ ಇವರ ಕುಟುಂಬಕ್ಕೆ ಆಸರೆಯಾಗಿ ಉಪಾಧ್ಯಾಯ ವೃತ್ತಿ ದೊರೆಯಿತು. ಅದೂ ಮೈಸೂರಿನಲ್ಲೇ.

ಆ ವೇಳೆಗೆ ಅಣ್ಣ ಬೆಂಗಳೂರಿನಲ್ಲಿದ್ದರು. ಸುಯೋಗವೆಂಬಂತೆ ತಮಗೂ ಮರು ವರ್ಷವೇ ಬೆಂಗಳೂರಿಗೆ ವರ್ಗವಾಯಿತು. ಅಣ್ಣನೊಡನೆ ಸೇರಿಕೊಂಡ ಸಂಪತ್ತಯ್ಯಂಗಾರ್ಯರು ನಿರಾಳರಾದರು. ಸಂಸ್ಕೃತದಲ್ಲಿ ಪಾರಂಪರಿಕ

ಪಾಂಡಿತ್ಯದೊಂದಿಗೆ ಶೈಕ್ಷಣಿಕವಾಗಿಯೂ ಎಂ.ಎ. ಮಾಡಿದ್ದ ಇವರಿಗೆ ಕಾಲೇಜು ಪ್ರಾಧ್ಯಾಪಕ ಹುದ್ದೆ ಅರಸಿ ಬಂತು. ಸರ್ಕಾರಿ ಸಂಸ್ಕೃತ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ಹೋದಲ್ಲೆಲ್ಲ ಜನಪ್ರಿಯತೆ ಪಡೆದರು. ಮೈಸೂರು, ಬೆಂಗಳೂರು, ತುಮಕೂರು ಹೀಗೆ ಹಲವು ಕಡೆ ಸೇವೆ ಸಲ್ಲಿಸಿದ ಸಂಪತ್ತಯ್ಯಂಗಾರ್ಯರು ಕೊನೆಯಲ್ಲಿ ೧೯೬೫ರ ವರೆಗೂ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಸೇವೆಸಲ್ಲಿಸಿನಿವೃತ್ತರಾದರು.

ಚಾಮರಾಜನಗರ ತಾಲೂಕಿನ ಸರಗೂರಿನ ರಂಗನಾಯಕಿಯವರ ಮಗಳು ಶೇಷಮ್ಮನವರ ಕೈಹಿಡಿದ ಸಂಪತಯ್ಯಂಗಾರ್ಯರು ಮೂವರು ಗಂಡುಮಕ್ಕಳು (ಎಸ್.ಶ್ರೀನಿವಾಸ್, ವರದರಾಜನ್ ಮತ್ತು ಅಕಾಲ ಮರಣಕ್ಕೆ ತುತ್ತಾದ ಇನ್ನೊಬ್ಬ) ಮತ್ತು ಮೂವರು ಹೆಣ್ಣು ಮಕ್ಕಳನ್ನು (ಪದ್ಮಾಸಿನಿ, ಕಮಲ, ತೇಜಸ್ವಿ) ಪಡೆದು ಅವರಿಗೆಲ್ಲ ವಿದ್ಯಾಭ್ಯಾಸ ಕೊಡಿಸಿ ಉತ್ತಮ ಸಂಬಂಧಗಳಲ್ಲಿ ನೆಲೆಗೊಳಿಸಿ ಜವಾಬ್ದಾರಿ ತಂದೆಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಸಹಧರ್ಮಿಣಿಯ ಪ್ರೋತ್ಸಾಹದಾಯಕ ಸಹಕಾರದೊಂದಿಗೆ ಸುಂದರ, ಸ್ಥಿತಿವಂತ ಸಂಸಾರ ನಡೆಸಿದ ಸಂಪತ್ತಯ್ಯಂಗಾರ್ಯರು ನಿವೃತ್ತಿಯ ಕಾಲಕ್ಕೆ ಸ್ಥಿರಜೀವನಕ್ಕಾಗಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಉಮಾಟಾಕೀಸಿನ ಹಿಂಬಾಗ ಸ್ವಂತ ಮನೆಯನ್ನೂ ಮಾಡಿದ್ದರು. ಈ ಲೌಕಿಕ ಜವಾಬ್ದಾರಿಗಳ ಜೊತೆಜೊತೆಗೇ ವೇದಾಧ್ಯಯನ, ಸಂಸ್ಕೃತ, ಇಂಗ್ಲಿಷ್, ಕನ್ನಡ, ತಮಿಳುಗಳ ಸಾಹಿತ್ಯ, ಸಂಸ್ಕೃತಿ, ಧಾರ್ಮಿಕ ಗ್ರಂಥಗಳ ಅಧ್ಯಯನವನ್ನೂ ಬಿಡದೆ; ಧರ್ಮದಲ್ಲಿ ನಿಷ್ಠೆಯುಳ್ಳವರಾಗಿ ತಂದೆಯವರಿಂದ, ಪೂರ್ವಜರಿಂದ ಬಂದಿದ್ದ ಸಂಸ್ಕಾರ ಫಲದಿಂದ ಧರ್ಮಭೀರುಗಳಾಗಿ ಬೆಳೆದು ನಿಂತರು. ವಿಶಿಷ್ಟಾದ್ವೈತ ತತ್ವಗಳನ್ನು ಭಕ್ತಿಯಿಂದ ಅನುಸಂಧಾನ ಮಾಡುತ್ತ ಜಪ-ತಪ, ಧ್ಯಾನ-ಆರಾಧನೆಗಳಲ್ಲೂ ಮನಸ್ಸಿಟ್ಟು ತಂದೆಯವರಂತೆಯೇ ಪ್ರಪತ್ತಿ ಧರ್ಮವನ್ನು ಅನುಸರಿಸಿ ಭಗವಂತನ ಚರಣ ಸೇವೆ ಮಾಡುತ್ತಿದ್ದ ಅಂತರಂಗ ಭಕ್ತರಾಗಿದ್ದರು.

ಸಂಪತ್ತಯ್ಯಂಗಾರ್ಯರಿಗೆ ಸೇವೆಯ ನಿವೃತ್ತಿ ಒಂದು ರೀತಿಯಲ್ಲಿ ಲೌಕಿಕ ಜೀವನದ ನಿವೃತ್ತಿಯೂ ಆಗಿ ಪ್ರಪತ್ತಿಯಲ್ಲೇ ಸಂಪೂರ್ಣ ಮನಸ್ಸಿಟ್ಟರು. ಆ

ವೇಳೆಗೇ ರಚಿಸಿದ್ದ ಸುಮಾರು ೨೫ಕ್ಕೂ ಅಧಿಕ ಗ್ರಂಥಗಳ, ಹಸ್ತಪ್ರತಿಗಳನ್ನೆಲ್ಲ ಪುನರ್ಮನನಮಾಡುತ್ತ ಅವುಗಳ ಪ್ರಕಟನೆಗೆ, ಪ್ರಚಾರಕ್ಕೆ, ಧರ್ಮ ಪ್ರಚಾರಕ್ಕೆ ಧಾರ್ಮಿಕ ವಿಧಿಗಳ ಆಚರಣೆಗೆ : ಆ ಮೂಲಕ ಸದಾ ಕಾಲವೂ ಭಗವಂತನ ಸ್ಮರಣೆಗೆ ಅವಕಾಶವಾಯಿತು. ಅದಕ್ಕೆ ಅನುಗುಣವಾಗಿ 'ಶ್ರೀ ವೈಷ್ಣವ ಸಿದ್ಧಾಂತ ಪ್ರಚಾರಿಣಿ ಸಭಾ' ಎಂಬ ಸಂಸ್ಥೆಯನ್ನು ಕಟ್ಟಿ ಅದರ ಅಧ್ಯಕ್ಷರಾಗಿ ಅದರ ಮುಖವಾಣಿಯಾಗಿ 'ಆನಂದ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಜೂನ್ ೧೯೬೮ರಿಂದ ೧೯೭೧ರ ವರೆಗೆ ಮೂರು ವರ್ಷ ಕಾಲ ತಂದರು. ಅದರಲ್ಲಿ ಪಾದುಕಾ ಸಾಹಸ ಮುಂತಾದ ತಮ್ಮದೇಕೃತಿಗಳನ್ನು ಪ್ರಕಟಿಸುತ್ತಾ ಹೋದರು. ಇದರೊಂದಿಗೆ ತಮ್ಮ ಸಿದ್ಧಿಸಂಕಲ್ಪದ, ಆಧ್ಯಾತ್ಮ ಸಾಧನೆಯ ಫಲವಾಗಿ ಹೊರಹೊಮ್ಮಿದ ಅನುಭಾವ ಗೀತೆಗಳಂತಹ ೮-೧೦ ಕೀರ್ತನೆಗಳನ್ನು ರಚಿಸಿ, ಈ ಆನಂದ ಪತ್ರಿಕೆಯಲ್ಲಿ ಸಂಚಿಕೆಗೊಂದರಂತೆ ತಮ್ಮ ಹೆಣ್ಣು ಮಕ್ಕಳ (ಸಂಗೀತ ವಿದುಷಿಯರು) ಮೂಲಕ ಸ್ವರ ಪ್ರಸ್ತಾರಗಳನ್ನು ಹಾಕಿಸಿ ಪ್ರಕಟಿಸಿದ್ದರು. ಅವಷ್ಟೇ ಇವರ ಹೆಸರಿನಲ್ಲಿರುವ ಕೀರ್ತನೆಗಳು.

ಸಂಪತ್ತಯ್ಯಂಗಾರ್ಯರು ೧೬.೫.೧೯೮೩ರಲ್ಲಿ ವೈಕುಂಠವಾಸಿಗಳಾಗುವ ಮೂಲಕ ೮೩ ವರ್ಷದ ತುಂಬು ಜೀವನ ನಡೆಸಿದ ಉದ್ದಾಮಪಂಡಿತರು. ಸೇವಾಕಾಲದಲ್ಲಿ ಸರ್ಕಾರಕ್ಕಾಗಿ 'ಸಂಸ್ಕೃತ ಸಾಹಿತ್ಯ ಚರಿತ್ರೆ'ಯನ್ನು ಕನ್ನಡದಲ್ಲಿ ಬರೆದುಕೊಟ್ಟ ಪ್ರಸಿದ್ಧ ವಿದ್ವಾಂಸರಾಗಿದ್ದರು. ೧೯೬೭ರಲ್ಲಿ 'ತಿರುಪ್ಪಾವೈಹೃದಯ' ಎಂಬ ಉತ್ಕೃಷ್ಟ ಧಾರ್ಮಿಕಗ್ರಂಥವನ್ನು ಬರೆದು ಪ್ರಕಟಿಸಿದ್ದರು. ಜೀವಿತಾವಧಿಯವರೆಗೂ ತನು-ಮನ-ಧನವನ್ನೆಲ್ಲ ಧರ್ಮಾಚರಣೆ, ಧರ್ಮಪ್ರಚಾರಕ್ಕೆ ಮೀಸಲಿಟ್ಟು ಸದಾಕಾಲ ಭಗವಂತನ ಧ್ಯಾನ ಮಾಡುತ್ತ ಶರಣಾಗತಿ ಧರ್ಮವನ್ನು ಅನುಸಂಧಾನ ಮಾಡಿದ್ದ ಪರಮ ವೈಷ್ಣವರಾಗಿದ್ದರು. ೧೯೬೪ರಲ್ಲಿ ಪ್ರಕಟಿಸಿರುವ ತಮ್ಮ ಆಧ್ಯಾತ್ಮಿಕ ಸಾಧನೆಯ ಹಿನ್ನೆಲೆಯನ್ನು ಹೇಳುವ 'ಮಮಜೀವಿತದೀರ್ಘಿಕಾ' ಎಂಬ ಸಂಸ್ಕೃತ ಪದ್ಯಕೃತಿಯಲ್ಲಿ ಸಂಸ್ಕೃತಲ್ಲಿ ೫ ಇಂಗ್ಲೀಷಿನಲ್ಲಿ ೧೪ ಗ್ರಂಥಗಳನ್ನು ಬರೆದು, ಅವು ಹಸ್ತಪ್ರತಿ ರೂಪದಲ್ಲಿದೆ ಎಂದೂ ಅವುಗಳಿರುವ ಪುಟಸಂಖ್ಯೆ-ಪದ್ಯ

ಸಂಖ್ಯೆಗಳೊಂದಿಗೆ ಪಟ್ಟಿ ನೀಡಿದ್ದಾರೆ. ಇವುಗಳೊಂದಿಗೆ ಸುಮಾರು ೧೦ ಕನ್ನಡ ಗ್ರಂಥಗಳ ಹಸ್ತ ಪ್ರತಿಗಳೂ ಇವೆ ಎಂದು ಅವರ ಹೆಣ್ಣು ಮಕ್ಕಳು ಹೇಳುತ್ತಿದ್ದಾರೆ. ಇವುಗಳಲ್ಲೆಲ್ಲಾ ಮುದ್ರಣ ಕಂಡಿರುವ ಕೃತಿಗಳು ಬಹಳ ಕಡಿಮೆ, ಅಪ್ರಕಟಿತವಾದವುಗಳೇ ಅಧಿಕ. ' ಇವುಗಳಲ್ಲಿ ಸಂಪತ್ತಯ್ಯಂಗಾರ್ಯರ ಪಾಂಡಿತ್ಯ, ಆಧ್ಯಾತ್ಮಜ್ಞಾನ, ಆಳವಾದ ಚಿಂತನೆ, ಆಧ್ಯಾತ್ಮಿಕ ಸಿದ್ಧಿ, ಸಾಧನೆಗಳು ದಾಖಲಾಗಿವೆ. ಅವುಗಳೆಲ್ಲ ಪ್ರಕಟವಾಗುವುದು ಅತ್ಯಗತ್ಯ.

(೨) ಇತರ ಗ್ರಂಥಗಳು

ಸಂಪತ್ತಯ್ಯಂಗಾರ್ಯರು ಮೂಲತಃ ಆಧ್ಯಾತ್ಮ ಚಿಂತಕರೂ ಧಾರ್ಮಿಕ ಗ್ರಂಥಗಳ ಕರ್ತರೂ ಆಗಿದ್ದಾರೆ. ಇವರು ಸುಮಾರು ಮೂವತ್ತು ಗ್ರಂಥಗಳನ್ನು ಬರೆದಿದ್ದರೂ ಅವುಗಳಲ್ಲಿ ಪ್ರಕಟವಾಗಿರುವುದು ಕೆಲವು ಮಾತ್ರ. ತಮ್ಮ ಒಂದು ಕೃತಿಯಲ್ಲಿ ಅವರೇ ಪಟ್ಟಿ ಮಾಡಿರುವ ಗ್ರಂಥಗಳ ಹಸ್ತಪ್ರತಿ ವಿವರ ಈ ರೀತಿ ಇದೆ

(ಅ) ಸಂಸ್ಕೃತ ಗ್ರಂಥಗಳು

೧.	ಯೋಗಸೂತ್ರ ನವೀನ ವ್ಯಾಖ್ಯಾಯ (ಗದ್ಯ)	೨೬೩ ಪುಟಗಳು
೨.	ಗೀತಾರ್ಥ ನಿರ್ಣಯ (ಗದ್ಯ)	೧೨೬ ಅಧ್ಯಾಯಗಳು
೩.	ರಾಮಾನುಜ ಸಾಹಸ್ರಿ (ಪದ್ಯ)	೧೦೦೮ ಪದ್ಯಗಳು
೪.	ರಕ್ಷಕದೈವಮ್ (ಪದ್ಯ)	೨೪೦ ನುಡಿಗಳು

(ಆ) ಇಂಗ್ಲಿಷ್ ಗ್ರಂಥಗಳು

೧.	In the Footsteps of the Geetha (Part 1)	347 p.
೨.	In the Footsteps of the Geetha (Part 2)	459 p.
೩.	The Last Query of Arjuna	192 p.

೪. The concept of Hypostasis in Vedanta 500 p.

೫. The Roots of Hiduism 500 p.

೬. Destiny and Freedom 231 p.

೭. Vedantic Philosophy and Religion 277 p.

೮. Isa Upanishat 138 p.

೯. Kena Upanishat 60 p.

೧೦. Katha UPanishat 322 p.

೧೧. Prashna Upanishat 190 p.

೧೨. Mundaka Upanishat 184 p.

ಇವು ಯಾವುವೂ ಪ್ರಕಟವಾಗದೆ ಇರುವುದರಿಂದ ಇವುಗಳ ವಿಚಾರವಾಗಿ ಏನನ್ನೂ ಹೇಳಲಾಗುವುದಿಲ್ಲ. ಆದರೂ ಇವು ಅತ್ಯಂತ ಉತ್ಕೃಷ್ಟವಾದ ಆಧ್ಯಾತ್ಮ ವಿಚಾರಗಳನ್ನೊಳಗೊಂಡು: ಆಳವಾದ ಅನುಭವ, ಜ್ಞಾನಗಳ ಸಾರ ಸಂಗ್ರಹವಾಗಿರುತ್ತವೆ ಎಂಬುದನ್ನಂತು ನಿಸ್ಸಂಕೋಚವಾಗಿ ಹೇಳಬಹುದು. ಈ ಗ್ರಂಥಗಳ ಹಸ್ತಪ್ರತಿ ವಿಚಾರಗಳು 'ಮಮ ಜೀವನದೀರ್ಘಿಕಾ' ಎಂಬ ತಮ್ಮ ಆತ್ಮಚರಿತ್ರೆಯಂತಿರುವ ಸಂಸ್ಕೃತ ಪದ್ಯಗ್ರಂಥದಲ್ಲಿ ಪ್ರಕಟನೆಯಾಗಿರುವುದರಿಂದ ಒಂದೆಡೆ ದಾಖಲೆಯಾದರೂ ಆಗಿದೆ. ಇದನ್ನು ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜಿನಲ್ಲಿ (ಸಿದ್ಧಗಂಗೆ) ಪ್ರಾಚಾರ್ಯರಾಗಿದ್ದಾಗ ೧೯೬೪ರಲ್ಲಿ ಲೇಖಕರೇ ಪ್ರಕಟಿಸಿದ್ದಾರೆ. ಇದರ ಮುನ್ನುಡಿಯಲ್ಲಿ ತಮ್ಮ ವೇದಾಂತಾಧ್ಯಯನದ ವಿಚಾರವನ್ನು ಹೀಗೆ ಹೇಳಿದ್ದಾರೆ. "This Booklet of Poems is Published for my Satisfaction as it Contains my Journey in Vedanta From 1925. Except the First 100 and odd verses which aim at giving the nursery of my philosophical thoughts, the Subsequent verses upto the last 108 verses reflect my religious affiliation. It is the last 108 verses that give the definite mould of my

Philosophy". ಇದರಂತೆ ಮೊದಲ ನೂರು ನುಡಿಗಳಲ್ಲಿ ತಮ್ಮ ಪೂರ್ವಜರ ಇತಿಹಾಸ ಮತ್ತು ತಮ್ಮ ಜೀವನದ ಕೆಲವು ಸಂಗತಿಗಳನ್ನು ಪಟ್ಟಿಮಾಡಿದ್ದು, ಪರಂಪರೆಯಿಂದ ಇವರಿಗೆ ಆಧ್ಯಾತ್ಮಿಕ ಚಿಂತನೆಯ ಸಂಸ್ಕಾರ ಇರುವುದು ವೇದ್ಯವಾಗುತ್ತದೆ. ಮತ್ತು ತಮ್ಮ ವೇದಾಂತ ಚಿಂತನೆಯ ಸ್ವರೂಪ, ಅದರ ಪೂರ್ವಸಿದ್ಧತೆ, ತಿಳುವಳಿಕೆಯ ವಿಸ್ತಾರ ಇತ್ಯಾದಿ ಅವರಿಗಿದ್ದ ಅಪಾರ ಜ್ಞಾನದ ಹಿನ್ನೆಲೆಯೂ ಮುಂದಿನ ನೂರು ನುಡಿಗಳಲ್ಲಿ ವ್ಯಕ್ತವಾಗಿದೆ.

ಕನ್ನಡದಲ್ಲಿ ೧೫ಕ್ಕೂ ಹೆಚ್ಚು ಗ್ರಂಥಗಳನ್ನು ಬರೆದಿದ್ದಾರೆಂದು ತಿಳಿದು ಬಂದಿದ್ದು ಅವು ಈ ರೀತಿ ಇವೆ.

೧. ಪ್ರೇಮದ ಸೊಬಗು (ಐತಿಹಾಸಿಕ ಕಾದಂಬರಿ)

೨. ಶ್ರೀವಿಷ್ಣು ಸಹಸ್ರನಾಮ ಸ್ತೋತ್ರ (ವ್ಯಾಖ್ಯಾನ ೧೯೭೨)

೩. ತಿರುಪ್ಪಾವೈಹೃದಯಂ (೧೯೬೭)

೪. ಪಾದುಕಾಸಹಸ್ರ (ವ್ಯಾಖ್ಯಾನ ೧೯೭೧)

೫. ಪಾದುಕಾದರ್ಶನ (ಸಹಸ್ರದ ಪ್ರಮಾಣ ಸೂಚಿ)

೬. ಪ್ರಾಣಾಯಾಮ (೧೯೮೨)

೭. ಕನ್ನಡದಲ್ಲಿ ಸಂಸ್ಕೃತ ಸಾಹಿತ್ಯ ಚರಿತ್ರೆ (ಸರ್ಕಾರಿಮುದ್ರಣ?)

೮. ಭೂ ತತ್ವನಿರ್ಣಯ

೯. ಗೋದಾಸ್ತುತಿ (ವ್ಯಾಖ್ಯಾನ)

೧೦. ಪಾತಂಜಲಿಯೋಗ ಸೂತ್ರ

೧೧. ಈಶ, ಕೇನ, ಕಠೋಪನಿಷತ್ತುಗಳು.

'ಇವುಗಳಲ್ಲಿ ಗೋದಾಸ್ತುತಿ ಮತ್ತು ಉಪನಿಷತ್ತುಗಳನ್ನು ಬಿಟ್ಟರೆ ಉಳಿದವೆಲ್ಲ ಪ್ರಕಟವಾಗಿವೆ. ಕಾದಂಬರಿ, ಭೂತತ್ವನಿರ್ಣಯಗಳು ಸೇವಾರಂಭದ ದಿನಗಳಲ್ಲಿ ಬರೆದದ್ದೆಂದು ಅಭಿಪ್ರಾಯವಿದ್ದು ಪ್ರತಿಗಳು ಲಭ್ಯವಾಗಿಲ್ಲ. ಸಂಸ್ಕೃತ ಸಾಹಿತ್ಯ

ಚರಿತ್ರೆ ಸಂಪತ್ತಯ್ಯಂಗಾರ್ಯರ ವಿದ್ವತ್ತು-ಪಾಂಡಿತ್ಯಕ್ಕೆ ಸಾಣೆ ಹಿಡಿದಿರುವ ಕೃತಿ. ಕನ್ನಡದಲ್ಲಿ ಬರೆದಿರುವುದರಿಂದ ಸಮಸ್ತ ಕನ್ನಡಿಗರಿಗೆ ಇಡೀ ಸಂಸ್ಕೃತ ಸಾಹಿತ್ಯದ ಒಂದು ವಿಹಂಗಮ ನೋಟವನ್ನು ಮಾಡಿಕೊಟ್ಟಿದೆ. ಸಂಸ್ಕೃತ ಸಾಹಿತ್ಯದ ಅರಿವನ್ನು ಸುಲಭ ಗ್ರಾಹ್ಯವಾಗಿಸಿದೆ. ಸಂಪತ್ತಯ್ಯಂಗಾರ್ಯರ ಬಹಳ ಮುಖ್ಯ ಸಾಹಿತ್ಯ ಸಾಧನೆ ಇದಾಗಿದೆ. ಇದನ್ನು ಕರ್ನಾಟಕ ಸರ್ಕಾರವೇ ಪ್ರಕಟಿಸಿದೆ. ಪ್ರಾಣಾಯಾಮ ಮತ್ತು ಪಾತಂಜಲಿ ಯೋಗಸೂತ್ರಗಳು ಯೋಗದ ಹಿನ್ನೆಲೆಯಲ್ಲಿ ಶ್ರೀವೈಷ್ಣವ ತತ್ವಗಳನ್ನು ನೋಡಿರುವ ಕೃತಿಗಳು. ಪಾತಂಜಲಿಯೋಗ ಸೂತ್ರಕ್ಕೆ ಅನೇಕ ಜನ ಅಭಿಮಾನಿಗಳೂ ಶಿಷ್ಯರೂ ಇದ್ದರೆಂದೂ ಪದೇ ಪದೇ ಬಂದು ದಾಸರಿಂದ ಮಾಹಿತಿ -ಸಲಹೆ ಪಡೆಯುತ್ತಿದ್ದರೆಂದೂ ಅಭಿಪ್ರಾಯವಿದೆ. ಇದು ನೇರವಾಗಿ ಯೋಗದ ಶಾಸ್ತ್ರ ನಿರೂಪಣೆಯಾದರೆ ಪ್ರಾಣಾಯಾಮ ಯೋಗತತ್ವದ ತಳಹದಿಯ ಮೇಲೆ ಈ ತತ್ವ ಹೇಗೆ ನಿಂತಿದೆ ಎಂಬುದನ್ನು ನಿರೂಪಿಸುವ ವ್ಯಾಖ್ಯಾನ ಗ್ರಂಥ. ಇದು ಪುಟ್ಟ ಕೃತಿಯಾದರೂ ಅಗಾಧವಾದ ಪಾಂಡಿತ್ಯವನ್ನು ಪರಿಚಯಿಸುವ ಮಹತ್ವದ ಗ್ರಂಥ. ತಿರುಪ್ಪಾವೈಹೃದಯ, ಪಾದುಕಾಸಹಸ್ರ ಮತ್ತು ವಿಷ್ಣುಸಹಸ್ರನಾಮಗಳು ನೇರವಾಗಿ ಶ್ರೀವೈಷ್ಣವ ಧರ್ಮಕ್ಕೆ ಸೇರಿದ ಧಾರ್ಮಿಕ ಕೃತಿಗಳಾಗಿವೆ. ಪಾದುಕಾಸಹಸ್ರವು ನಿಗಮಾಂತದೇಶಿಕರ ಇದೇ ಹೆಸರಿನ ಕೃತಿಯ ಶ್ಲೋಕಾರ್ಥ, ಭಾವಾರ್ಥ, ಪದಾರ್ಥಗಳನ್ನೊಳಗೊಂಡಿರುವ ಕೃತಿ. ವಿಷ್ಣು ಸಹಸ್ರಾನಾಮ ಸ್ತೋತ್ರವೂ ಸಹ ಇದೇ ಬಗೆಯ ವ್ಯಾಖ್ಯಾನ ಗ್ರಂಥ. ಇವುಗಳಲ್ಲಿ ಸಂಪತ್ತಯ್ಯಂಗಾರ್ಯರಿಗಿದ್ದ ವೇದ-ಉಪನಿಷತ್ತುಗಳ ಆಳವಾದ ಪ್ರವೇಶವನ್ನು ಗ್ರಹಿಸಬಹುದು.

'ತಿರುಪ್ಪಾವೈಹೃದಯಂ' ಶ್ರೀವೈಷ್ಣವ ಪುರಾತನ ಭಕ್ತ ಶ್ರೇಷ್ಠರಾದ ಹನ್ನೆರಡುಜನ ಆಳ್ವಾರರಲ್ಲಿ ಏಕೈಕ ಮಹಿಳಾ ಭಕ್ತೆಯಾಗಿರುವ ಆಂಡಾಳ್ ರಚನೆಯಾದ 'ತಿರುಪ್ಪಾವೈ' ಗ್ರಂಥದ ವ್ಯಾಖ್ಯಾನ. ಕೇವಲ ೩೦ ಪದ್ಯಗಳ ಈ ಪುಟ್ಟ ಕೃತಿಗೆ ಸು.೫೦೦ ಪುಟಗಳ ದೀರ್ಘ ವ್ಯಾಖ್ಯಾನವಿದೆ. ಶ್ರೀವೈಷ್ಣವ ಧರ್ಮೀಯರಲ್ಲಿ ಇದು ಅತ್ಯಂತ ಪವಿತ್ರವಾದ ಪದ್ಯಮಾಲಿಕೆ. ನಿತ್ಯಾನುಸಂಧಾನಕ್ಕೆ ದೇವತಾ ಅರ್ಚನೆಯ ಭಾಗವಾಗಿ ತಪ್ಪದೆ ಪಠಿಸುವ ಶ್ರೇಷ್ಠ ಪಾಶುರ(ಶ್ಲೋಕ)ಗಳಾಗಿವೆ. ಪ್ರತಿವರ್ಷದ ಮಾರ್ಗಶಿರ ಮಾಸದಲ್ಲಿ (ಸಂಕ್ರಾಂತಿಯವರೆಗೆ ಒಂದು ತಿಂಗಳು) ದಿನಕ್ಕೆ

ಒಂದರಂತೆ ಇದರ ಪಾಶುರಗಳನ್ನು ಬೆಳಗಿನ ಜಾವ ಎದ್ದು ಶುಚಿರ್ಭೂತರಾಗಿ ಅನುಸಂಧಾನ ಮಾಡುತ್ತ ದೇವತಾರ್ಚನೆ ಮಾಡುವ 'ಧನುರ್ಮಾಸವ್ರತ' ಈ 'ತಿರುಪ್ಪಾವೈ' ನಿಂದಲೇ ಆರಂಭವಾದದ್ದು. ಇಂದಿಗೂ ಇದನ್ನು ಶ್ರದ್ಧಾಭಕ್ತಿಗಳಿಂದ ಈ ಧರ್ಮೀಯರು ಆಚರಿಸಿದರೆ ಇದರ ಪ್ರಭಾವದಿಂದಾಗಿ ಕರ್ನಾಟಕದಾದ್ಯಂತ 'ಧನುರ್ಮಾಸದಭಜನೆ', ಬೆಳಗಿನಜಾವದ ಭಜನೆ, 'ಪೂಜೆ'ಗಳಾಗಿ ಶ್ರದ್ಧಾಪೂರ್ಣ ಧಾರ್ಮಿಕ ಆಚರಣೆಗಳು ಎಲ್ಲ ದೇವಾಲಯಗಳಲ್ಲೂ ನಡೆಯುವ ಒಂದು ಸಂಪ್ರದಾಯವೇ ಆಗಿ ಬೆಳೆದು ಬಂದಿದೆ.

ಈ ಗ್ರಂಥದಲ್ಲಿ ಇದಕ್ಕೆ ಈವರೆಗೆ ಬಂದಿರುವ ವ್ಯಾಖ್ಯಾನಗಳು (ತಮಿಳು, ಸಂಸ್ಕೃತಗಳಲ್ಲಿ), ಇದರ ಮಹತ್ವ ಇದರ ಮೂಲಕ ಚತುರ್ವೇದಗಳ, ರಾಮಾಯಣ, ಮಹಾಭಾರತ, ಭಾಗವತ ಮತ್ತು ಆಳ್ವಾರರ ಪ್ರಬಂಧಗಳಸಾರದ ಗ್ರಹಿಕೆ ಹೀಗೆ ತುಂಬ ಆಳವಾದ ಮತ್ತು ವಿಸ್ತಾರವಾದ ಪ್ರೌಢ ಆಧ್ಯಾತ್ಮಿಕ ಚಿಂತನೆಯು ಅಭಿವ್ಯಕ್ತವಾಗಿದೆ. ಇದರ ಪೀಠಿಕೆಯೇ ಸುಮಾರು ೪೦ ಪುಟಗಳಷ್ಟು ದೀರ್ಘವಾಗಿರುವುದನ್ನು ಗಮನಿಸಿದರೆ ಈ ಗ್ರಂಥದ ಮಹತ್ವದ ಅರಿವಾಗುತ್ತದೆ.

೩) ಕೀರ್ತನೆಗಳು

'ಶ್ರೀವೈಷ್ಣವ ಸಿದ್ಧಾಂತ ಪ್ರಚಾರಣಿ ಸಭಾ'ದ ಮೂಲಕ ತಾವೇ ಪ್ರಕಟಿಸುತ್ತಿದ್ದ 'ಆನಂದ' ಎಂಬ ತ್ರೈಮಾಸಿಕ ಪತ್ರಿಕೆಯ ಹತ್ತು ಸಂಚಿಕೆಗಳಲ್ಲಿ ಪ್ರಕಟಿಸಿದ್ದ ೧೦ ಕೀರ್ತನೆಗಳಷ್ಟೇ ಸಂಪತ್ತಯ್ಯಂಗಾರ್ಯರ ಕೀರ್ತನೆಗಳು. ಇವುಗಳಾಚೆಗೆ ಬೇರೆ ಕೀರ್ತನೆಗಳನ್ನು ಬರೆದಂತೆ ಕಂಡುಬರುವುದಿಲ್ಲ. ಇವುಗಳನ್ನೇ ಸೇರಿಸಿ ಒಂದು ಪುಸ್ತಕ ಮಾಡಿದ್ದು ಅದರ ಮುನ್ನುಡಿಯಲ್ಲಿ ಇವುಗಳ ಜೊತೆಗೆ ಒಂದು ರಾಮಾನುಜರ ಸ್ತುತಿ ಹಾಗೂ ಒಂದು ಮಂಗಳವನ್ನು ಸೇರಿಸಿದೆ ಎಂದು ಹಸ್ತಪ್ರತಿಯಲ್ಲಿ ವಿವರವಿದೆಯಾದರು ಮುದ್ರಿತ ಗ್ರಂಥ ಮತ್ತು ಹಾಡುಗಳು ಲಭ್ಯವಿಲ್ಲ. (ಪ್ರಾಯಶಃ ಪ್ರತ್ಯೇಕವಾಗಿ ಮುದ್ರಣವಾಗಿಲ್ಲ). ಆನಂದ ಪತ್ರಿಕೆ ೧೨ ಸಂಚಿಕೆಗಳನ್ನು ಮಾತ್ರ ಕಂಡು ನಿಂತುಹೋಗಿದೆ. ಪ್ರಾಯಶಃ ಇದು ಮುಂದುವರಿದಿದ್ದರೆ

ಕೀರ್ತನೆಗಳನ್ನೂ ಅದಕ್ಕಾಗಿಯೇ ಬರೆಯುತ್ತಿದ್ದುದರಿಂದ ಇನ್ನಷ್ಟು ಕಾಣಿಸಿ-ಕೊಳ್ಳುತ್ತಿದ್ದವೇನೋ.

ಇರುವ ಹತ್ತು ಕೀರ್ತನೆಗಳಲ್ಲೇ ಎರಡು ತಮಿಳು ಕೃತಿಗಳನ್ನು ಬಿಟ್ಟರೆ ಕನ್ನಡದಲ್ಲಿರುವುದು ಎಂಟು ಮಾತ್ರ. ಈ ಎಂಟೂ ಆತ್ಮನಿವೇದನಾ ಕೃತಿಗಳೇ ಆಗಿವೆ. ಇವರ ಆಧ್ಯಾತ್ಮದನುಭವದ ಸಾರವಾಗಿ ಭಟ್ಟಿ ಇಳಿದಿರುವ ಈ ಹಾಡುಗಳು ತಾತ್ವಿಕ ಕೃತಿಗಳೂ ಆಗಿ ನಿಲ್ಲುತ್ತವೆ. ಈ ಕೀರ್ತನೆಗಳಿಗೆ ತಾವು ಕಂಡ ತಾತ್ವಿಕ ದರ್ಶನಗಳನ್ನೂ ವಿವರಣೆಯ ರೂಪದಲ್ಲಿ ಕೊಡುತ್ತಾರೆ. 'ಶ್ರೀಹರಿಏಕನಿಷ್ಠೆ' ಎಲ್ಲ ಕೀರ್ತನೆಗಳಲ್ಲೂ ತಪ್ಪದೆ ಕಂಡುಬರುತ್ತದೆ. 'ಶೆಲ್ವ' 'ಶೆಲ್ವರಾಯ' ಇವರ ಅಂಕಿತ. ಆರಾಧ್ಯದೈವ ಮೇಲುಕೋಟೆಯ ಚೆಲುವರಾಯನ ತಮಿಳೀಕರಣ ಈ ಶೆಲ್ವ. ತಮ್ಮ ಈ ಆಧ್ಯಾತ್ಮಿಕ ಸಾಧನೆಗೆ, ದೈವಧ್ಯಾನ ನಿಷ್ಠೆಗೆ, 'ನಮ್ಮ ತಂದೆಯವರೇ ಗುರು, ಆಚಾರ್ಯ' ಎಂದು ಅಯ್ಯಂಗಾರರೇ ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ಆನಂದ ಪತ್ರಿಕೆ ೧೯೬೮–೧೯೭೧ರ ಅವಧಿಯಲ್ಲಿ ಪ್ರಕಟವಾಗಿರುವುದರಿಂದ ಈ ವೇಳೆಗೆ ಇಳಿ ವಯಸ್ಸಿನಲ್ಲಿದ್ದ ಸಂಪತ್ತಯ್ಯಂಗಾರ್ಯರು ದೇಹಸಹಜವಾದ ಮುಪ್ಪಿನ ನೋವಿನಲ್ಲಿದ್ದರು. ಅದನ್ನು

'ನೋಳ್ಪಲಾರದ ಕಣ್ಣು ನನ್ನದು
ನಡೆಯಲಾರದೆ ಕಾಲುಬಿದ್ದಿದೆ' ೪೪೫

ಎಂಬಲ್ಲಿ ತಮ್ಮ ಅಸಹಾಯಕ ಸ್ಥಿತಿಯನ್ನು ವ್ಯಕ್ತಪಡಿಸುವಂತಿದೆ.

'ಮೋಸಹೋಗದ ಮಾಸಿಹೋಗದ
ನೆನಪು ಕೊಟ್ಟಿಹೆ ರಂಗ' ೪೫೮

ಎಂಬಲ್ಲಿಯೂ ತಮಗಿರುವ ಅಸಾಧ್ಯವಾದ ನೆನಪಿನ ಶಕ್ತಿಯನ್ನೂ ಲೋಕವ್ಯವಹಾರ ಜ್ಞಾನವನ್ನೂ ಹೇಳಿಕೊಳ್ಳುವಂತಿದ್ದು ಇದರಲ್ಲಿ 'ಹಣ್ಣು' ಪದವನ್ನು ಸುಂದರ ಪ್ರತಿಮೆಯಗಿ ಬಳಸಿದ್ದಾರೆ. ಹಣ್ಣನ್ನು ದೇಹಕ್ಕೆ ಹೋಲಿಸಿರುವ ಪರಿ ಸುಂದರವಾಗಿದೆ.

ಗಿಣ್ಣು ಗಿಣ್ಣಲಿ ಕನಿತು ನಿಂತಿಹ ಹಣ್ಣನಿದನು ಕಾಣೆಯ'

ಎಂಬುದು ತಮ್ಮ ಪಕ್ವಗೊಂಡಿರುವ ದೇಹ ಮತ್ತು ಮನಸ್ಸುಗಳೇ ಆಗಿದೆ. ಇಲ್ಲೇ ಬರುವ 'ಭಾಷೆ ನಿನ್ನ ಮಾತ ನೀನು ತೆಗೆದುಕೋ ನಾನು ಅದರೊಳು ನಿಂತಿಹೆ' ಎಂಬುದು ಆಳವಾದ ಭಕ್ತಿಯಲ್ಲಿ ಮುಳುಗಿರುವ ಸಾಧಕನಲ್ಲಿ ಮಾತ್ರ ಬರುವ ಭಾವವಾಗಿದೆ. ಶ್ರೀವೈಷ್ಣವ ಧರ್ಮದ ಶರಣಾಗತಿಯನ್ನು ಶ್ರೀಹರಿಯೇ ಹೇಳಿದ್ದಾನೆಂದು ಅವನ 'ಸರ್ವಧರ್ಮಾನ್ ಪರಿತ್ಯಜ್ಯ........, ಇತ್ಯಾದಿ ಪದ್ಯಗಳನ್ನು ಅನುಸಂಧಾನ ಮಾಡುತ್ತಾ ಅದರ ದಾರಿಯಲ್ಲೇ ಮಾಗಿದ ಜೀವ ಅದು. ಅವನ ಭಾಷೆ. ಅದನ್ನು ನಾನು ಅನುಸರಿಸಿದ್ದೇನೆ ಭಾಷೆ ತಪ್ಪುವುದು ಅವನ ಧರ್ಮವಲ್ಲ ಎಂಬಂತಹ ದಿಟ್ಟ ಆತ್ಮವಿಶ್ವಾಸ ವ್ಯಕ್ತಪಡಿಸುವ ಅದ್ಭುತ ಅನುಭಾವದ ಪರಿ ಇದು.

'ಜವನು ನಿನ್ನ ಬೇಡವೆಂದರು ಒಯ್ಯುವನಯ್ಯ
ಅವನಪಾಲಿಗೆ ನೀನು ಅನ್ನವಾಗಿ ನಿಂತಿರುವೆ
ದೈವ ಕಮಲಾಕ್ಷನಿಗೆ ಅವನು ಉಪ್ಪಿನಕಾಯಿ' ೪೬೧

ಎಂಬುದೂ ಸಹ ಇದೇ ಬಗೆಯ ಆಧ್ಯಾತ್ಮಿಕ ಸಿದ್ಧಿಯ ದ್ಯೋತಕವಾಗಿದೆ. ಇಲ್ಲಿ ಬರುವ 'ಅನ್ನ', 'ಉಪ್ಪಿನಕಾಯಿ' ಪದಗಳಿಗೆ ವೇದ ಉಪನಿಷತ್ತುಗಳಲ್ಲಿ ಬರುವ ತಾತ್ವಿಕ ಪ್ರಯೋಗಗಳ ಹಿನ್ನೆಲೆಯನ್ನು ಹೇಳಲಾಗಿದೆ. ಇಲ್ಲಿಯ 'ನಂಬು ರಾಮನ ಮಾತನು ಕೃಷ್ಣ ಹಾಡಿದ ಹಾಡನು' ಎಂಬುದೂ ಶ್ರೀವೈಷ್ಣವ ಶರಣಾಗತಿಯ ಶ್ಲೋಕಗಳನ್ನು ನಿರ್ದೇಶಿಸುತ್ತವೆ.

ಇನ್ನೊಂದೆಡೆ ಮೋಕ್ಷಪ್ರಾಪ್ತಿಗೆ ಭಕ್ತನಿಗೆ ಶ್ರೀಹರಿಯ ಭಕ್ತರ ಸೇವೆಯೇ ಮೆಟ್ಟಿಲು ಎಂಬ ತತ್ವವನ್ನು ಪ್ರತಿಪಾದಿಸುತ್ತಾರೆ.

'ಕೂಡಿಬನ್ನಿರಯ್ಯ ನೀವು ಬಂದು ನೋಡಿರಯ್ಯ
ಓಡಿ ಬಂದು ಹಿಂದೆ ಮುಖಕೆ ಮಸಿಯ ಬಳಿದನಯ್ಯ' ೪೬೨

ಅತ್ಯಂತ ಸರಳವಾಗಿ ಇದರ ನಡೆ ಇದ್ದರೂ ಇದರ ಭಾವ ತುಂಬ ಗಹನವಾದದ್ದು. ಆಳ್ವಾರರು ಆಚಾರ್ಯರ ಸ್ತುತಿಯಿದೆಂದು ಟಿಪ್ಪಣಿಹೇಳುತ್ತದೆ. ಇಲ್ಲಿ ಬರುವ 'ಮಸಿ' ಕೂಡ ವಿಶೇಷಾರ್ಥದಲ್ಲಿ ಬಳಕೆಯಾಗುವ ತಾತ್ವಿಕ ಪದವಾಗಿದೆ.

ಹೀಗೆ ಆಧ್ಯಾತ್ಮ-ತತ್ವ-ದರ್ಶನಗಳಿಂದ ಸಮ್ಮಿಳನಗೊಂಡ ಇವರ ಕೀರ್ತನೆಗಳು ಸಂಖ್ಯೆಯಲ್ಲಿ ಕಡಿಮೆಯೇ ಆದರೂ ಮೌಲ್ಯದಲ್ಲಿ ಮಹತ್ವದ್ದಾಗಿವೆ.

ಅನುಬಂಧದಲ್ಲಿ ಇವರ ಎರಡು ತಮಿಳು ರಚನೆಗಳನ್ನೂ ಪರಿಚಯಕ್ಕಾಗಿ ನೀಡಲಾಗಿದೆ. ಒಂದರಲ್ಲಿ ಆಂಡಾಳ್-ಗೋದೆಯನ್ನು ದೈವೀಮನಸ್ಸೆಂದು ಭಕ್ತನೊಬ್ಬನಿಗೆ ಪರಿಚಯಿಸಿ ಕೊಡುವ ಸಂಭಾಷಣಾ ಶೈಲಿಯಿದ್ದರೆ ಇನ್ನೊಂದರಲ್ಲಿ ಪರಮಾತ್ಮನೊಂದಿಗಿನ ಸಖ್ಯದ ಅನುಭವವನ್ನು ಸಖಿಗೆ ಹೇಳುವ ಸತಿ-ಪತಿ ಭಾವವಿದೆ.

(ಇ) ಕೀರ್ತನೆಗಳ ಆಕರ

ಈ ಕೀರ್ತನೆಗಳಿಗೆ ಸಂಪತ್ತುಯ್ಯಂಗಾರ್ಯರ ಮಗಳು ವಿದುಷಿ ಕಮಲಗೋವಿಂದರಾಜನ್ ಅವರು ನೀಡಿದ ಹಸ್ತಪ್ರತಿಯನ್ನು ಬಳಸಿಕೊಳ್ಳಲಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗಿರುವ ಕೀರ್ತನೆಗಳಿಗೂ ಮಸ್ತಕ ರೂಪದಲ್ಲಿ ಪ್ರಕಟಿಸಲು ಸಿದ್ಧಪಡಿಸಿರುವ ಹಸ್ತಪ್ರತಿಯ ಕೀರ್ತನೆಗಳಿಗೂ ಅಲ್ಲಲ್ಲೆ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಪ್ರಕಟಿತ ಕೀರ್ತನೆಯಲ್ಲಿ ಅಷ್ಟಾಗಿ ಕಂಡುಬರದ ಪ್ರಾಸವನ್ನು ಹಸ್ತಪ್ರತಿಯಲ್ಲಿ ಕಾಣಿಸಿದ್ದಾರೆ. ಆ ಉದ್ದೇಶಕ್ಕಾಗಿ ಕೆಲವೆಡೆ ಪದಗಳು ಅದಲು ಬದಲಾಗಿವೆ. ಕೆಲವೆಡೆ ಹೊಸಪದಗಳು ಸೇರಿವೆ. ಅವುಗಳಲ್ಲೂ ಬಿಟ್ಟಿದ್ದ ಕೆಲವನ್ನು ಕೀರ್ತನಕಾರರ ಆಶಯಕ್ಕನುಗುಣವಾಗಿ ಸರಿಪಡಿಸಲಾಗಿದೆ.

೯. ನಾರಾಯಣಶರ್ಮರು

(೧) ಜೀವನ ವಿವರ

ನಾರಾಯಣಶರ್ಮರು ಬೆಂಗಳೂರು ಜಿಲ್ಲೆ ದೊಡ್ಡಹೆಜ್ಜಾಜಿಯಲ್ಲಿ ೨೦ನೇ ಶತಮಾನದಲ್ಲಿದ್ದ ಹರಿದಾಸರು. ಇವರು ಶ್ರೀವೈಷ್ಣವ ಧಾರ್ಮಿಕ ಗ್ರಂಥಗಳ ಲೇಖಕರೂ ಆಗಿ ಕಾಣಿಸಿಕೊಂಡಿದ್ದಾರೆ. ಇಪ್ಪತ್ತನೇ ಶತಮಾನದಲ್ಲೂ ಹರಿದಾಸ ಸಾಹಿತ್ಯದ ಪ್ರಚಾರಕರಾಗಿ ಮುಖ್ಯರೆನಿಸುತ್ತಾರೆ.

ಶ್ರೀವೈಷ್ಣವ ಬ್ರಾಹ್ಮಣರಾಗಿದ್ದ ಇವರು ತೇಂಗಲೆ ಸಂಪ್ರದಾಯದ ಉಡೈಯರ್ ರಾಮಾನುಜ ಮತ 'ಪರಂಪರೆಗೆ ಸೇರಿದವರಾಗಿದ್ದಾರೆ. ಕೌಂಡಿನ್ಯ ಗೋತ್ರೋದ್ಭವರಾದ ಶ್ರೀವೈಷ್ಣವ ಸಾತ್ವಿಕ ದಂಪತಿಗಳಾದ ವೆಂಕಟರಂಗನ್ ಮತ್ತು ತಾಯಮ್ಮಾಳ್ ಅವರಿಗೆ ಎರಡನೇ ಪುತ್ರರಾಗಿ ೨೨-೮-೧೯೧೨ ವೈಶಾಖ ಶುಕ್ಲ ಪಂಚಮಿ, (ರಾಮಾನುಜರ ತಿರುನಕ್ಷತ್ರದಂದು) ಮೇಷಮಾಸ ಆರಿದ್ರಾ ನಕ್ಷತ್ರ ದಲ್ಲಿ ದೊಡ್ಡಹೆಜ್ಜಾಜಿಯಲ್ಲಿ ಜನಿಸಿದರು. ಗ್ರಾಮದ ಪ್ರಮುಖ ದೇವತೆಯಾದ ಚನ್ನಕೇಶವಸ್ವಾಮಿಯ ಅರ್ಚನ ವೃತ್ತಿಯಲ್ಲಿ ಪರಂಪರೆಯಿಂದ ಬಂದಿರುವ ಈ ಮನೆತನದಲ್ಲಿ ಸಹಜವಾದ ಧಾರ್ಮಿಕ ಮತ್ತು ನೈತಿಕ ಮೌಲ್ಯಗಳು ಮನೆಮಾಡಿದ್ದವು. ಗ್ರಾಮದಲ್ಲೆ ಗೌರವಾನ್ವಿತ ಕುಟುಂಬವಾಗಿದ್ದ ಈ ಏಕೈಕ ವಿಶಿಷ್ಟಾದ್ವೈತ ವೈದಿಕ ಮನೆತನದಲ್ಲಿ ನಾರಾಯಣಶರ್ಮರ ತಂದೆ ಮತ್ತು ಚಿಕ್ಕಪ್ಪಂದಿರು ಭಾಗವತ ಭಕ್ತರಾಗಿ ಕೀರ್ತನಕಾರರಾಗಿದ್ದುದು ದಾಸರು ಈ ಕ್ಷೇತ್ರದಲ್ಲಿ ಬೆಳೆಯಲು ಸಹಕಾರಿಯಾಯಿತು. ಇವರ ತಂದೆ ವೆಂಕಟರಂಗನ್ ಅವರು ಅಷ್ಟೇನೂ ಹೇಳಿಕೊಳ್ಳುವಂತಹ ಶ್ರೀಮಂತಿಕೆಯಿಲ್ಲದೆ ಕೇವಲ ಅರ್ಚಕ ವೃತ್ತಿಯೊಂದನ್ನೇ ಅವಲಂಬಿಸಿದ್ದರಿಂದ ಜೀವನೋಪಾಯಕ್ಕಾಗಿ ಜ್ಯೋತಿಷ್ಯ-ಶಾಸ್ತ್ರ ಹೇಳುವ ಉಪವೃತ್ತಿಯನ್ನೂ ಹೊಂದಿದ್ದರು.

ನಾರಾಯಣಶರ್ಮರಿಗೆ ಒಬ್ಬ ಅಣ್ಣ (ರಂಗಸ್ವಾಮಿ) ಹಾಗೂ, ಒಬ್ಬ ತಮ್ಮ(ಕೃಷ್ಣಸ್ವಾಮಿ) ಮತ್ತು ಇಬ್ಬರು ತಂಗಿಯರು (ಸುಂದರಮ್ಮಾಳ್,

ರುಕ್ಮಿಣಿಯಮ್ಮಾಳ್) ಹಾಗೂ ಚಿಕ್ಕಪ್ಪ ಶಾಮಶರ್ಮರೂ ಇದ್ದರು. ಈ ದೊಡ್ಡ ಕುಟುಂಬವನ್ನು ಸಾಕುವ ಹೊಣೆ ವೆಂಕಟರಂಗನ್ ಅವರದಾಗಿತ್ತು. ತಮ್ಮನಿಗೆ ವಿದ್ಯಾಭ್ಯಾಸ ಮಾಡಿಸಿ ಉಪಾಧ್ಯಾಯ ವೃತ್ತಿಯಲ್ಲಿ ತೊಡಗಿಸಿದರು. ಮಕ್ಕಳಲ್ಲಿ ನಾರಾಯಣಶರ್ಮ ಮಾತ್ರ ಓದನ್ನು ಮುಂದುವರಿಸಿ ಎಲ್.ಎಸ್. ವರೆಗೆ ಓದಿ ಉಪಾಧ್ಯಾಯ ವೃತ್ತಿಯಲ್ಲಿ ನಿರತರಾದರು. ಉಳಿದಿಬ್ಬರು ಅರ್ಚಕ ವೃತ್ತಿಯನ್ನೇ ಅವಲಂಬಿಸಿದ್ದರು. ದಾಸರ ತಂದೆಯವರು ಈ ತುಂಬು ಕುಟುಂಬವನ್ನು ಸಾಕುವ ಲೌಕಿಕ ಸೆಳೆತದ ನಡುವೆಯೂ ದೈವಧ್ಯಾನ, ಪ್ರಬಂಧಗಳು ದೇವರನಾಮಗಳ ಅನುಸಂಧಾನವನ್ನು ತಪ್ಪದೆ ನಡೆಸುತ್ತಿದ್ದ ಭಾಗವತ ಭಕ್ತರಾಗಿದ್ದರು. ಪ್ರತಿವಾರ ಮತ್ತು ಮನಸ್ಸು ಬಂದಾಗೆಲ್ಲ ಊರ್ಧ್ವಪುಂಡ್ರಧಾರಿಗಳಾಗಿ ದಾಸವೇಷದಲ್ಲಿ ಬೆಳಗಿನ ಜಾವದ ಸಮಯ ಊರಿನ ಬೀದಿಗಳಲ್ಲಿ ತಂಬೂರಿ ಮೀಟುತ್ತಲೋ ಹಾರ್ಮೋನಿಯಂ ಬಾರಿಸುತ್ತಲೋ ದೇವರ ನಾಮಗಳನ್ನು ಸುಶ್ರಾವ್ಯವಾಗಿ ಹಾಡುತ್ತ ಹೋಗುತ್ತಿದ್ದರೆಂದೂ ಜನ ಭಯಭಕ್ತಿಯಿಂದ ಮೊರಗಟ್ಟಲೆ ದವಸ-ಧ್ಯಾನಗಳನ್ನು ತಂದು ಜೋಳಿಗೆಗೆ ತುಂಬಿ ನಮಸ್ಕರಿಸುತ್ತಿದ್ದರೆಂದೂ ಶಾಮಶರ್ಮರು ತಮ್ಮ ಆತ್ಮ ಚರಿತ್ರೆಯಲ್ಲಿ ದಾಖಲಿಸಿದ್ದಾರೆ. ದಾಸ ವೃತ್ತಿಯನ್ನು ಅತ್ಯಂತ ಶ್ರದ್ಧೆಯಿಂದ ಆಚರಿಸುತ್ತಿದ್ದ ಈ ವೆಂಕಟರಂಗದಾಸರು ಸ್ವತಃ ಕೀರ್ತನೆಗಳನ್ನು ರಚಿಸಿದ್ದರೇ ಎಂಬುದು ತಿಳಿದುಬಂದಿಲ್ಲ. ನಾರಾಯಣ ಶರ್ಮರ ಸಂಗ್ರಹದಲ್ಲಿರುವ ಕೆಲವು ಹಸ್ತಪ್ರತಿಗಳಲ್ಲಿ 'ತಂದೆಯವರು ಬರೆದುಕೊಂಡಿದ್ದ, ಹಾಡುತ್ತಿದ್ದ ದೇವರನಾಮಗಳು' ಎಂದಿರುವ ಹಾಡುಗಳಲ್ಲಿ ಪುರಂದರ-ಕನಕದಾಸರ ಹಾಡುಗಳೇ ಅಧಿಕವಾಗಿವೆ- ಯಾದರೂ ಅಲ್ಲೊಂದು ಇಲ್ಲೊಂದು 'ಹೆಜ್ಜಾಜಿ ಕೇಶವನ' ಅಂಕಿತ ಕೃತಿಗಳೂ ದೊರಕುತ್ತವೆ. ಇವು ಇವರವೋ ಅಥವ ಇವರ ಕಾಲದಲ್ಲೇ ಇವರ ಮನೆಯ ಮುಂದೆಯು ಇದ್ದ ಹರಿಕಥಾ ವಿದ್ವಾಂಸರಾಗಿದ್ದ ಸೀತಾರಾಮಶಾಸ್ತ್ರಿಗಳದ್ದೋ ಪರಿಶೀಲಿಸಬೇಕಾಗಿದೆ. (ಸೀತಾರಾಮಶಾಸ್ತ್ರಿಗಳು ಆಕಾಲಕ್ಕೆ ಸುತ್ತಲಿನ ಹಳ್ಳಿಗಳಲ್ಲಿ ಪ್ರಸಿದ್ಧರಾಗಿದ್ದ ಹರಿಕಥಾ ವಿದ್ವಾಂಸರಾಗಿದ್ದು ಹಲವು ದೇವರನಾಮಗಳನ್ನು ಸ್ವತಃ ರಚಿಸಿದ್ದರೆಂದೂ ಅವರ ಕುಟುಂಬದವರು ಹೇಳುತ್ತಿರುವುದಲ್ಲದೆ ಅವರ ಸಂಗ್ರಹದಲ್ಲಿರುವ ಹಸ್ತಪ್ರತಿಯಲ್ಲಿ ಈ ಅಂಕಿತದ ಕೆಲವು ಕೀರ್ತನೆಗಳೊಂದಿಗೆ ಸಂಪ್ರದಾಯದ ಹಾಡುಗಳೂ ದೊರೆಯುತ್ತವೆ).

ಚಿಕ್ಕಪ್ಪ ಶಾಮಶರ್ಮರೂ ಕೆಲವೊಮ್ಮೆ ತಂದೆಯವರೊಂದಿಗೆ ದೇವರನಾಮ ಹಾಡಲು ಹೋಗುತ್ತಿದ್ದರು. ಇವರೂ ಸ್ವತಃ ದೇವರ ನಾಮಗಳನ್ನು ಬರೆಯುತ್ತಿದ್ದರು. ಇವರ ಬಂಧುಗಳೇ ಆದ ರಂಗದಾಸರು ಈಗಾಗಲೆ ಹರಿದಾಸರಾಗಿ ಆಗಿಹೋಗಿದ್ದರು. ಇವರುಗಳ ದೇವರನಾಮಗಳನ್ನು ತಾವೂ ಅನುಸಂಧಾನ ಮಾಡುತ್ತಿದ್ದೆನೆಂದೂ ನಾರಾಯಣಶರ್ಮರು ಹೇಳಿಕೊಂಡಿದ್ದಾರೆ. ಈ ಧಾರ್ಮಿಕ ಮತ್ತು ಸಾಹಿತ್ಯಕ ವಾತಾವರಣ ನಾರಾಯಣಶರ್ಮರಲ್ಲಿ ಸುಪ್ತವಾಗಿದ್ದ ದಾಸತ್ವವನ್ನು ಜಾಗೃತಗೊಳಿಸಿರುವುದರಲ್ಲಿ ಆಶ್ಚರ್ಯವಿಲ್ಲ. ೧೯೩೭ರಲ್ಲಿ ದಾಸರು 'ಎಲ್.ಎಸ್ (ಲೋಯರ್ ಸೆಕೆಂಡರಿ–ಈಗಿನ ೮ನೇ ತರಗತಿಗೆ ಸಮ) ಪರೀಕ್ಷೆ ಬರೆಯಲು ಮೈಸೂರಿಗೆ ಹೋಗಲು ಹಣ ಇಲ್ಲದೆ ತಮ್ಮೂರಿನ ಶಾಲೆಯಲ್ಲೇ ಉಪಾಧ್ಯಾಯರಾಗಿದ್ದ ಚಿಕ್ಕಪ್ಪ ಶಾಮಶರ್ಮರನ್ನು ಕೇಳಿದರೂ ಅವರು ನಿರಾಕರಿಸಿದರೆಂದೂ ಕೊನೆಗೆ ತಂದೆಯವರೇ ಹೇಗೋ ಹೊಂದಿಸಿಕೊಟ್ಟರೆಂದೂ ಆ ವೇಳೆಗೆ ಚಿಕ್ಕಪ್ಪ ಅಣ್ಣನ ಮದುವೆಯ ಸಮಯದಲ್ಲಿ ಬೇರೆ ಹೋಗಿದ್ದರೆಂದೂ' ಹೇಳಿಕೊಂಡಿರುವುದನ್ನು ನೋಡಿದರೆ ದಾಸರ ಬಾಲ್ಯ ಅತ್ಯಂತ ಬಡತನದಲ್ಲಿ ಕಳೆದಿದೆಯೆಂಬುದು ಸ್ಪಷ್ಟವಾಗುತ್ತದೆ. ಕನ್ನಡ ಎಲ್.ಎಸ್. ತೇರ್ಗಡೆಯಾದರೂ ನಾಲ್ಕೈದು ವರ್ಷ ಕೆಲಸವಿಲ್ಲದೆ ಕೊನೆಗೆ ೧೦ರೂ ಲಂಚ ಕೊಟ್ಟು ೧೬–೧–೧೯೪೬ರಲ್ಲಿ ಉಪಾಧ್ಯಾಯ ವೃತ್ತಿ ಪಡೆದದ್ದೆಂದೂ, ಆವರೆಗೆ ಬೆಂಗಳೂರಿನಲ್ಲಿ ೧೯೪೦ರಲ್ಲಿ ಎ.ಆರ್.ಪಿ. ಸಂಸ್ಥೆಯಲ್ಲಿ ನೌಕರಿಯಲ್ಲಿದ್ದುದಾಗಿಯೂ ಅದು ಎರಡನೇ ಮಹಾಯುದ್ಧದ ಕಾಲವಾಗಿದ್ದು ಬಾಂಬುಗಳು ಬೀಳುವ ಭೀತಿಯಲ್ಲಿ ಜನರಿದ್ದುದರಿಂದ ಅವರನ್ನೆಚ್ಚರಿಸಿ ಮನೆಯೊಳಗೆ ಇರಲು ತಿಳಿಸುವ ಕಾರ್ಯವಾಗಿತ್ತೆಂದೂ ತಿಳಿದು ಬರುತ್ತದೆ. ದೊಡ್ಡಬಳ್ಳಾಪುರ ತಾಲೂಕಿನ ಸಕ್ಕರೆ ಗೊಲ್ಲಹಳ್ಳಿ, ರೋಜಿಪುರ, ಬ್ಯಾಡರಹಳ್ಳಿ, ಕೊಡಿಗೆಹಳ್ಳಿ, ಮತ್ತು ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ ತಾ॥ ಎಲೆತೋಟದಹಳ್ಳಿ ಮುಂತಾದ ಹಲವು ಊರುಗಳಲ್ಲಿ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿ ಕೊನೆಗೆ ಸ್ವ ಊರಿನಲ್ಲೆ ೧.೩.೧೯೭೪ರಲ್ಲಿ ನಿವೃತ್ತರಾಗಿದ್ದ ದಾಸರ ವೃತ್ತಿನಾಮ ಎಚ್.ವಿ.ನಾರಾಯಣಸ್ವಾಮಿ. ಇವರ ಸೇವೆಯ ಆರಂಭ ಸಂಬಳ ಕೇವಲ ಏಳು ರೂಪಾಯಿ ಮತ್ತು ಅಂತ್ಯದ ಸಂಬಳ ೧೯೦ರೂಗಳು ಆಗಿತ್ತು ಎಂಬುದು ವಿಶೇಷ ಸಂಗತಿ.

ದಾಸರ ಪತ್ನಿ ಲಕ್ಷ್ಮೀದೇವಮ್ಮಾಳ್ ತಮ್ಮ ೧೨ನೇ ವಯಸ್ಸಿನಲ್ಲೆ (೧೯೩೭ರಲ್ಲಿ) ನಾರಾಯಣಶರ್ಮರ ಕೈಹಿಡಿದು ಸತೀಧರ್ಮವನ್ನು ಶ್ರದ್ಧೆಯಿಂದ ಪಾಲಿಸಿದ ಸಹಧರ್ಮಿಣಿ. ನಾಲ್ಕು ಜನ ಹೆಣ್ಣುಮಕ್ಕಳನ್ನೂ (ಸುನಂದ, ಪದ್ಮ, ವೈದೇಹಿ ಮತ್ತು ಸುಲೋಚನ) ಇಬ್ಬರು ಗಂಡು ಮಕ್ಕಳನ್ನೂ (ರಂಗನಾಥಶರ್ಮ, ಗೀತಾಚಾರ್ಯ) ಪಡೆದು ಕಷ್ಟಸುಖದಲ್ಲಿ ಸಹಭಾಗಿಯಾಗಿ ಹಲವು ಊರುಗಳಲ್ಲಿ ಜೀವನ ನಡೆಸಿ ಅಂತಿಮವಾಗಿ ಸ್ವ ಊರಿನಲ್ಲೆ ನೆಲೆಯೂರಿದ ಈ ಕುಟುಂಬ ಸಾಮಾನ್ಯ ಸ್ತರದಲ್ಲೇ ಜೀವನ ಸಾಗಿಸಿರುವುದು ಕಂಡುಬರುತ್ತದೆ. ತಂದೆಯವರ ಕಾಲದಲ್ಲಿ ಒಂದೇ ಮನೆಯಾಗಿದ್ದ ಈ 'ಅರ್ಚಕರಮನೆ' ಚಿಕ್ಕಪ್ಪನವರಿಂದ ಎರಡಾಗಿ ತಾವು ಊರಿಗೆ ಬಂದು ಸೇರುವ ವೇಳೆಗೆ ತಮ್ಮ ಅಣ್ಣತಮ್ಮಂದಿರೂ ಬೇರೆಬೇರೆಯಾಗಿದ್ದುದು ದಾಸರ ವಿಶಾಲ ಹೃದಯದ ಮನಸ್ಸಿಗೆ ನೋವನ್ನುಂಟುಮಾಡಿದ್ದರೂ ಕಾಲಧರ್ಮಕ್ಕೆ ಹೊಂದಿಕೊಂಡಿದ್ದರು. ತಾವು ಗೊಲ್ಲಹಳ್ಳಿಯಲ್ಲಿದ್ದಾಗ ಅಣ್ಣ ತಮ್ಮಂದಿರು ಬೇರೆಬೇರೆಯಾಗುವ ಪ್ರಸ್ತಾಪ ತಂದಾಗ ಒಲ್ಲದ ಮನಸ್ಸಿನಿಂದ ಬಂದು ಇದ್ದ ಎಲ್ಲ ಸಾಮಾನುಗಳನ್ನು ಇಬ್ಬರಿಗೂ ಸಮನಾಗಿ ಹಂಚಿ ಮನೆಯಲ್ಲಿ ಮಾತ್ರ ತಾವು ಬಂದು ಇರಲು ಪಾಲು ಪಡೆದಿದ್ದರೆಂದೂ ತಮಗೆ ಹೇಗೂ ಕೆಲಸವಿದೆ ಅವರಿಗೆ ಏನೂ ಇಲ್ಲವೆಂದು ಹೇಳಿ ನನ್ನ ಸಮ್ಮತಿಯನ್ನೂ ಪಡೆದಿದ್ದರೆಂದೂ ಪತ್ನಿ ಲಕ್ಷ್ಮೀದೇವಮ್ಮಾಳ್ ನೆನಪಿಸಿಕೊಳ್ಳುತ್ತಾರೆ. ಆದರೂ ಅವರಿರುವವರೆಗೂ ನೆಮ್ಮದಿಯಾಗಿ ಬದುಕಲು ಬಿಡಲಿಲ್ಲವೆಂದೂ ಮರುಗುತ್ತಾರೆ.

ದಾಸರು ಶ್ರಮಜೀವಿಗಳಂತೆಯೇ ಛಲಜೀವಿಗಳೂ ಹೌದು. ಆದರೆ ಈ ಛಲ ಅವರ ಆತ್ಮೋನ್ನತಿಗೇ ವಿನಾ ಲೌಕಿಕ ಜೀವನಕ್ಕಲ್ಲ. ನಿವೃತ್ತಿಯವರೆಗೂ ರಾಮಾಯಣ, ಮಹಾಭಾರತ, ಭಾಗವತ, ಆಳ್ವಾರರ ಪ್ರಬಂಧಗಳು, ಆಚಾರ್ಯರ ಗ್ರಂಥಗಳ ಅಧ್ಯಯನದಲ್ಲೇ ಕಳೆದಿದ್ದ ಅವರು ಅದರ ಅನುಭವವನ್ನು ನಿವೃತ್ತಿಯ ನಂತರ ಕೃತಿಗಳ ಮೂಲಕ, ದೇವರನಾಮಗಳ ಮೂಲಕ ಅಭಿವ್ಯಕ್ತಪಡಿಸಿದ್ದಾರೆ. ದಿನದ ಬಹು ವೇಳೆಯನ್ನು ದೇವತಾರಾಧನೆಯಲ್ಲೇ ಕಳೆದು ದೈವ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಿದ್ದುದು ಕಂಡುಬರುತ್ತದೆ. ತಮ್ಮ ವಂಶಸ್ಥರಲ್ಲೇ ಹರಿದಾಸರಾಗಿದ್ದ

ರಂಗದಾಸರನ್ನೂ ಶಾಮಶರ್ಮರನ್ನೂ ಗುರುಸ್ಥಾನದಲ್ಲಿಟ್ಟುಕೊಂಡು ಅವರಿಂದ ಪ್ರಭಾವಿತರಾಗಿ ತಾವೂ ಹಲವು ದೇವರನಾಮಗಳನ್ನು ರಚಿಸುವ ಮೂಲಕ ಹರಿದಾಸರಾಗಿ ಕಾಣಿಸಿಕೊಂಡಿದ್ದಾರೆ. ಜಪ-ತಪ-ಧ್ಯಾನ-ಆರಾಧನೆಗಳಲ್ಲೆ, ಮನಸ್ಸಿಟ್ಟು ಆರಾಧ್ಯದೈವ ಹೆಜ್ಜಾಜಿಯ ಚೆನ್ನಕೇಶವನಲ್ಲಿ ಭರನ್ಯಾಸ (ಶರಣಾಗತಿ-ಪ್ರಪತ್ತಿ) ಕೈಗೊಂಡು ಅವನ ಅಂಕಿತದಲ್ಲಿ 'ಜಾಜಿಪುರವಾಸ' 'ಜಾಜಿಪುರೀಶ' 'ನಾರಾಯಣಶರ್ಮದಾಸ'ನ ಹೆಸರಿನಲ್ಲಿ ಕೃತಿಗಳ ರಚನೆಮಾಡಿದ್ದಾರೆ. ೩೦ಕ್ಕೂ ಅಧಿಕ ಕೀರ್ತನೆಗಳನ್ನೂ ೭ ಧಾರ್ಮಿಕ ಕೃತಿಗಳನ್ನು ರಚಿಸಿ ತಾವು ನಂಬಿದ್ದ 'ದೈವದರ್ಶನ'ವನ್ನು ಅನುಭವಿಸಿದ್ದಾರೆ.

ನೋಡುವವರಿಗೆ ಸಾಮಾನ್ಯರಂತೆ ಕಂಡುಬಂದರೂ ಅಂತರ್ಯದಲ್ಲಿ ಪರಮ ಭಾಗವತ ಭಕ್ತರಾಗಿ ಬೆಳೆಯುತ್ತಿದ್ದ ನಾರಾಯಣಶರ್ಮರು ಅತ್ಯಂತ ಮೆದುಸ್ವಭಾವದರಾಗಿದ್ದರು. ಸ್ವಲ್ಪ ಭಾವಾವೇಶದ ಪ್ರಸಂಗ – ಬದುಕಿನಲ್ಲಾಗಲಿ ಓದುವ ಗ್ರಂಥದಲ್ಲಾಗಲಿ-ಬಂದರೂ ಸಾಕು ಅತ್ತುಬಿಡುತ್ತಿದ್ದ ಮಗುಮನಸ್ಸು ಅವರದಾಗಿತ್ತು. ಕಷ್ಟಕ್ಕೆ ಮರುಗುತ್ತಿದ್ದರು. ತಾವು ಕಷ್ಟದಲ್ಲಿದ್ದರೂ ಇತರರ ಕಷ್ಟಕ್ಕೆ ಸಹಾಯಹಸ್ತ ಚಾಚುವ ಮನಸ್ಸಿತ್ತು. ಪ್ರಾಮಾಣಿಕತೆಗೆ ಇನ್ನೊಂದು ಹೆಸರಾಗಿದ್ದರು. ಸುಳ್ಳು-ತಟವಟ-ಮೋಸ ಒಂದೂ ಗೊತ್ತಿಲ್ಲದವರಾಗಿದ್ದರೂ ಇತರರಿಂದ ಅದಕ್ಕೊಳಗಾಗುತ್ತಿದ್ದರು. ಆದರೂ ಬೇಸರಿಸಿಕೊಳ್ಳದೆ ಅವರಿಗೆ ಸದ್ಬುದ್ಧಿಯನ್ನು ಕೊಡಲು ದೇವನಲ್ಲಿ ಪ್ರಾರ್ಥಿಸುತ್ತಿದ್ದರು. ಪಿತ್ರಾರ್ಜಿತ ಆಸ್ತಿ ಯಾವುದನ್ನೂ ಪಡೆಯದೆ ಅಸ್ತಿತ್ವಕ್ಕಾಗಿ ಮನೆಯಲ್ಲಿ ಮಾತ್ರ ಇದ್ದು, ಕಷ್ಟದಲ್ಲೇ ಜೀವನ ನಡೆಸಿ ಅಲ್ಪಸ್ವಲ್ಪ ಆಸ್ತಿಯನ್ನೂ ಸ್ವಯಾರ್ಜಿಸಿ ಮಕ್ಕಳಿಗೆಲ್ಲ ಮದುವೆ ಮಾಡಿ ಗಂಡುಮಕ್ಕಳನ್ನು ಓದಿಸಿ ಅವರ ಕಾಲಮೇಲೆ ಅವರು ನಿಲ್ಲುವಂತೆ ಮಾಡಿ ನಿರಾಳವಾಗಿದ್ದರು. ಆದರೆ ದಾಯಾದಿಗಳ ಕಿರುಕುಳದ ಮಾನಸಿಕ ಕ್ಷೋಭೆಯಿಂದ ನಿವೃತ್ತಿ ಆಗಲೇ ಇಲ್ಲ. ಕೊನೆಗೂ ದಾಯಾದಿಗಳ ಕುಮ್ಮಕ್ಕಿಗೆ ಕಿವಿಗೊಟ್ಟ ಊರಿನ ಕೆಲವು ದುಷ್ಟಮಂದಿಯ ಅಟ್ಟಹಾಸಕ್ಕೆ ಈ ದಾಸರ ಕುಟುಂಬ ಈಡಾಗಬೇಕಾಯಿತು. ಇದ್ದ ಮನೆಯ ಹಿತ್ತಲಿನ ಸ್ವಲ್ಪ ಜಮೀನಿನ ಸಂಬಂಧದಲ್ಲಿ ಮನಸ್ತಾಪವುಂಟಾಗಿ

೩.೪.೯೨ರಂದು ಯುಗಾದಿ ಹಬ್ಬದ ಹಿಂದಿನ ದಿನ ಹಿತ್ತಲಿನಲ್ಲಿದ್ದ ಹುಲ್ಲುಬಣವೆಗೆ ದುಷ್ಟಮಂದಿ ಬೆಂಕಿಹಾಕಿ ಗಿಡಮರಗಳನ್ನೆಲ್ಲ ಧ್ವಂಸ ಮಾಡಿ ದಾಂಧಲೆ ನಡೆಸಿದರು. ಇದರಿಂದ ಆಘಾತಗೊಂಡ ದಾಸರ ಮನಸ್ಸು ಚೇತರಿಸಿಕೊಳ್ಳಲೇ ಇಲ್ಲ. ತರುಣದಲ್ಲೇ (ಚೈತ್ರ, ಶುದ್ಧ ಪಂಚಮಿ) ೯.೪.೧೯೯೨ರಂದು ಈ ಭೂಮಿಯ ಸಂಬಂಧವನ್ನು ಕಳೆದುಕೊಂಡು ತಾವು ನಂಬಿದ್ದ ಮೋಕ್ಷ ಪಡೆದರು. ಸಾತ್ವಿಕ ಜೀವನದಲ್ಲಿ ಪಕ್ವಗೊಂಡಿದ್ದ ಭಕ್ತನೊಬ್ಬ ಲೌಕಿಕ ಜೀವನದ ಸಂಘರ್ಷದಿಂದ ನೊಂದಿದ್ದರೂ ಅದೆಲ್ಲವನ್ನೂ ದೈವನಿಯಾಮಕವೆಂದೇ ಸ್ವೀಕರಿಸಿ, ತಾನು ನಂಬಿದ್ದ ತತ್ವ 'ಶರಣಾಗತಿ'ಯುನ್ನು ಸಾಧಿಸಿದ ಸಾಧಕರಾದರು. 'ಇನ್ನು ಮುಂದೆ ಶ್ರೀಮನ್ನಾರಾಯಣನು ಸಾಧನಾರೂಪದಲ್ಲಿ ಜೀವಾವಧಿವರೆವಿಗೂ ಕರುಣಿಸಲಿ ಎಂದು ಸಮಸ್ತ ಭಾರವನ್ನೂ ಆತನ ಪಾದಮೂಲದಲ್ಲಿ ಸಮರ್ಪಿಸಿದ್ದೇನೆ. ಇದು ಸತ್ಯಂ, ಸತ್ಯಂ, ಪುನಃಸತ್ಯಂ, ಇದೇ ನನ್ನ ಶರಣಾಗತಿ, ಸುಲಭೋಪಾಯ, ಪ್ರಪತ್ತಿ ಮಾರ್ಗ, ಭರನ್ಯಾಸ' ಎಂದು ಮನಃಪೂರ್ವಕವಾಗಿ ಪ್ರತಿಜ್ಞೆ ಮಾಡಿ ಅದನ್ನೇ ಪರಿಪಾಲಿಸುವ ಮೂಲಕ ಈ ಆಧುನಿಕ ಸಂದರ್ಭದಲ್ಲೂ ಹರಿಭಕ್ತರಾಗಿ, ಕೀರ್ತನಕಾರರಾಗಿ ಬದುಕಲು ಸಾಧ್ಯ ಎಂಬುದನ್ನು ಸಾರಿಹೋಗಿದ್ದಾರೆ. ಈ ದಾಸರ ತಿರುನಕ್ಷತ್ರ ಮತ್ತು ತಿರುವಾರಾಧನೆಯನ್ನು, ಆಚರಿಸುವ ಸಂಪ್ರದಾಯವಿದೆ.

(೨) ಇತರ ಕೃತಿಗಳ ಪರಿಚಯ

ನಾರಾಯಣಶರ್ಮರು ಕೀರ್ತನೆಗಳ ಜೊತೆಗೆ ಏಳು ಧಾರ್ಮಿಕ ಕೃತಿಗಳನ್ನು ರಚಿಸಿದ್ದಾರೆಂದು ಪ್ರಸ್ತುತ ಸಂಪಾದಕರಿಂದ ಸಂಪಾದಿತವಾಗಿರುವ ಅವರ ಕೀರ್ತನೆಗಳ ಪ್ರಕಟಿತ ಗ್ರಂಥಗಳಲ್ಲಿ ಉಲ್ಲೇಖವಾಗಿದೆ. ಅವುಗಳೆಂದರೆ

೧. ಶ್ರೀವೈಷ್ಣವ ಮತ

೨. ಸಂಕ್ಷಿಪ್ತ ಭಗವದಾರಾಧನ ಕ್ರಮ

೩. ಯಜುರ್ವೇದ ಸಂಧ್ಯಾವಂದನ ವಿಧಾನ

೪. ಶ್ರೀಮದ್ರಹಸ್ಯತ್ರಯಸಾರ ಸಂಗ್ರಹ

೫. ಭಗವದ್ರಾಮಾನುಜ ಅಷ್ಟೋತ್ತರಶತನಾಮಾವಳಿ

೬. ಆಳವಂದಾರ್ ಸ್ತೋತ್ರರತ್ನ ಸಂಗ್ರಹ

೭. ಆತ್ಮ ಚರಿತ್ರೆ.

ಇವುಗಳೆಲ್ಲ ದಾಸರು ಅನುಸರಿಸುತ್ತಿದ್ದ ವಿಶಿಷ್ಟಾದ್ವೈತ ತತ್ವಕ್ಕೆ ಸಂಬಂಧಿಸಿದ ಧಾರ್ಮಿಕ ವಿಧಿ–ವಿಧಾನಗಳನ್ನು ಕುರಿತವೇ ಆಗಿವೆ. ಇವೆಲ್ಲ ಹಸ್ತಪ್ರತಿಗಳ ರೂಪದಲ್ಲೇ ಇವೆ. ಯಾವುವೂ ಪ್ರಕಟವಾಗಿಲ್ಲ. ಮೊದಲ ಮೂರು ಗ್ರಂಥಗಳಿರುವ ಹಸ್ತಪ್ರತಿಯಲ್ಲಿ ಈ ಮೂರೂ ಒಂದೇ ಗ್ರಂಥದ ಬೇರೆಬೇರೆ ಭಾಗಗಳಾಗಿರುವಂತೆ ಕಂಡುಬರುತ್ತವೆ. ಅದಕ್ಕೇ 'ಶ್ರೀವೈಷ್ಣವ ಮತ' ಎಂದು ಕರೆಯಲಾಗಿದೆ. ಇದು ಶ್ರೀವೈಷ್ಣವ ಧರ್ಮೀಯರು –ಪ್ರತಿದಿನ ಅನುಸರಿಸಬೇಕಾದ ಧಾರ್ಮಿಕ ಆಚರಣೆಗಳ ವಿವರಗಳಾಗಿದ್ದು, ತತ್ವದ ವಿಚಾರವನ್ನೂ ಹೇಳಲಾಗಿದೆ. 'ಪ್ರಪಂಚದಲ್ಲಿ ಈಗಿನ ಕಾಲದಲ್ಲಿ ಜನಗಳ ಮನಸ್ಸು ಅನೇಕ ಚಿಂತನೆಗಳಲ್ಲಿ ಮುಳುಗಿ ಏಕಾಗ್ರತೆಯಲ್ಲಿರಲು ಸಾಧ್ಯವಿಲ್ಲ. ಚಂಚಲ ಮನಸ್ಸನ್ನು ಉತ್ತಮ ಮಾರ್ಗಕ್ಕೆ ತಂದು ಶಾಂತರೀತಿಯಲ್ಲಿರುವಂತೆ ಮಾಡುವುದುತ್ತಮ. ಈ ಉದ್ದೇಶಕ್ಕಾಗಿ ಹಿಂದಿನ ಕಾಲದ ಋಷಿಗಳು, ಆಚಾರ್ಯರು ಹಾಕಿಕೊಟ್ಟಿರುವ ಧಾರ್ಮಿಕ ಚಟುವಟಿಕೆಗಳೂ ನಮ್ಮ ಸಂಸ್ಕೃತಿಯ ಪ್ರತೀಕಗಳಾದ ಭಗವದಾರಾಧನೆ, ಸಂಧ್ಯಾವಂದನೆ ಇತ್ಯಾದಿಗಳೂ ಬೇಕು' ಎಂದು ಹೇಳುವ ದಾಸರ ಆಧುನಿಕ ಚಿಂತನಾ ವಿಧಾನ ಮೆಚ್ಚುವಂತಹುದಾಗಿದೆ. 'ಶ್ರೀಮದ್ರಹಸ್ಯತ್ರಯಸಾರ ಸಂಗ್ರಹ' ಮತ್ತು 'ಆಳವಂದಾರ್ ಸ್ತೋತ್ರರತ್ನ ಸಂಗ್ರಹ' ಗಳು ವ್ಯಾಖ್ಯಾನ ಗ್ರಂಥಗಳಾಗಿವೆ. ವಿಜಯರಾಘವಾಚಾರ್ ಅವರು ಬರೆದಿರುವ ಇದೇ ಹೆಸರಿನ ಗ್ರಂಥಗಳನ್ನು ದಾಸರು ಸಂಗ್ರಹಗೊಳಿಸಿ ಜನಸಾಮಾನ್ಯರಿಗೆ ತಿಳಿಯುವಂತೆ ಸರಳವಾಗಿ ವಿವರಿಸಿದ್ದಾರೆ. 'ದೊಡ್ಡ ಹೆಜ್ಜಾಜಿಯ ಶ್ರೀಲಕ್ಷ್ಮೀಚನ್ನಕೇಶವ ಸನ್ನಿಧಿಯ ಪಾದಭಕ್ತ ನಾರಾಯಣಶರ್ಮದಾಸನು ಇದರ ಸಾರತಮವಾಗಿ ಸುಮಾರು ೫೦೦ ಪೇಜುಗಳ ವಿಶಾಲಗ್ರಂಥವನ್ನು ೧೦೦ ಪೇಜುಗೆ ಕಮ್ಮಿ ಇಳಿಸಿ ಕನ್ನಡಾಭಿಮಾನಿಗಳೆಲ್ಲರೂ ಕ್ಷಿಪ್ರಕಾಲದಲ್ಲಿ ಓದಿ ತಿಳಿದು ಅನುಸರಿಸಲಿ

ಎಂದು ಸಂಗ್ರಹಿಸಿದ್ದೇನೆ' ಎಂದು ಸ್ಪಷ್ಟವಾಗಿ ಹೇಳಿಕೊಂಡಿದ್ದಾರೆ. ರಹಸ್ಯಾತ್ರಯಸಾರ ರಾಮಾನುಜರ ಮೂಲ ಗ್ರಂಥವಾಗಿದ್ದು ಶ್ರೀವೈಷ್ಣವ ತತ್ವದಲ್ಲಿ ಬಹಳ ಮುಖ್ಯವಾದ ಮಂತ್ರ ರಹಸ್ಯಗಳನ್ನು ಕುರಿತು ವಿವರಿಸಿದರೆ ಸ್ತೋತ್ರರತ್ನವು ಈ ರಹಸ್ಯ ಮಂತ್ರಗಳಲ್ಲಿ ಎರಡನೆಯದಾದ ದ್ವಯಮಂತ್ರವೊಂದನ್ನೇ ವಿವರಿಸುತ್ತದೆ.

'ಭಗವದ್ರಾಮಾನುಜ ಅಷ್ಟೋತ್ತರ ಶತನಾಮಾವಳಿ' ಹೆಸರೇ ಹೇಳುವಂತೆ ನಾಮಾವಳಿ ರೂಪದಲ್ಲಿ ರಾಮಾನುಜರನ್ನು ಸ್ತುತಿಸಿರುವ ಕೃತಿ. ಇಂತಹ ಕೃತಿಗಳು ಈಗಾಗಲೇ ಬೇರೆಯವರಿಂದಲೂ ರಚನೆಯಾಗಿದ್ದು ನಾಮಾವಳಿಗಳಲ್ಲಿ ಪುನರಾವರ್ತನೆಯಾಗಿರುವುದು ಕಂಡುಬರುತ್ತದೆ.

'ಆತ್ಮಚರಿತ್ರೆ' ದಾಸರು ತಮ್ಮ ಜೀವನ ಸಂಗತಿಗಳನ್ನು ದಾಖಲಿಸಿರುವ ಕೃತಿ. ತಮ್ಮ ಬದುಕಿನ ಏಳು ಬೀಳುಗಳನ್ನು ತಾವು ನಡೆದು ಬಂದ ದಾರಿಗಳನ್ನು ತಮ್ಮ ಮೇಲೆ ಪ್ರಭಾವ ಬೀರಿದ ವ್ಯಕ್ತಿ-ಸಂಗತಿಗಳನ್ನು ಇದರಲ್ಲಿ ಪಟ್ಟಿಮಾಡಿದ್ದಾರೆ. ದಾಸರ ಜೀವನದ ಬಗ್ಗೆ ಅಧಿಕೃತ ಮಾಹಿತಿಗಳನ್ನು ನೀಡುವ ಏಕೈಕ ದಾಖಲೆಯಾಗಿ ಈ ಕೃತಿ ಮುಖ್ಯವೆನಿಸುತ್ತದೆ.

ಈ ಎಲ್ಲ ಹಸ್ತಪ್ರತಿಗಳೂ ಸಂಪಾದಕನ ಸಂಗ್ರಹದಲ್ಲಿದ್ದು, ಇವರ ಹೆಸರಿನಲ್ಲೆ ಸ್ಥಾಪನೆಯಾಗಿರುವ 'ನಾರಾಯಣಶರ್ಮ ಸಂಸ್ಕೃತಿ ಕೇಂದ್ರ'ದಿಂದ ಪ್ರಕಟಿಸುವ ಉದ್ದೇಶವಿದೆ.

(೩) ಕೀರ್ತನೆಗಳು

ನಾರಾಯಣಶರ್ಮರ ಮುಖ್ಯವಾಗಿ ಕೀರ್ತನಕಾರರಾಗಿ ಗುರುತಿಸಿಕೊಳ್ಳುತ್ತಾರೆ. ಇವರು ೩೦ಕ್ಕೂ ಅಧಿಕ ಕೀರ್ತನೆಗಳನ್ನು ರಚಿಸಿದ್ದು ಈವರೆಗೆ ೨೬ ಪ್ರಕಟವಾಗಿವೆ. ಈ ಸಂಪುಟದಲ್ಲಿ ಎರಡು ಅಪ್ರಕಟಿತ ಕೀರ್ತನೆಗಳೂ ಸೇರಿಕೊಂಡಿವೆ. ಕನ್ನಡ ಸಾಹಿತ್ಯದಲ್ಲಿ ಶ್ರೀವೈಷ್ಣವ ಕೀರ್ತನ ಸಾಹಿತ್ಯದ ಶೋಧಕ್ಕೆ ಇವರ ಕೀರ್ತನೆಗಳ

ಪ್ರಕಟನೆಯೇ ಮೂಲ ಪ್ರೇರಣೆಯಾಗಿರುವುದರಿಂದ ಈ ಅಧ್ಯಯನದ ಇತಿಹಾಸದಲ್ಲಿ ಇವುಗಳಿಗೆ ಮಹತ್ವವಿದೆ. ಶ್ರೀಹರಿಏಕನಿಷ್ಠೆ, ಶರಣಾಗತಿ, ಮಂತ್ರಮಹಿಮೆ, ಆಳ್ವಾರಾಚಾರ್ಯಸ್ತುತಿಗಳಂತಹ ಶ್ರೀವೈಷ್ಣವ ವಿಶಿಷ್ಟ ಲಕ್ಷಣಗಳ ಮೂಲಕ ಗಮನ ಸೆಳೆಯುವ ಈ ಕೀರ್ತನೆಗಳು ೨೦ನೇ ಶತಮಾನದಲ್ಲೂ ಈ ಪರಂಪರೆಯ ಮುಂದುವರಿಕೆಯ ದ್ಯೋತಕವಾಗಿವೆ. 'ಜಾಜಿಪುರೀಶ' ಹೆಜ್ಜಾಜಿಪುರವಾಸ' ಅಂಕಿತದಲ್ಲಿ ಆರಾಧ್ಯದೈವವನ್ನೇ ಗುರುಸ್ಥಾನದಲ್ಲಿ ಸ್ವೀಕರಿಸಿ ಕೀರ್ತನೆಗಳನ್ನು ರಚಿಸಿರುವ ನಾರಾಯಣಶರ್ಮರು ಶ್ರೀವೈಷ್ಣವ ಹರಿದಾಸ ಸಾಹಿತ್ಯಕ್ಕೆ, ಆ ಮೂಲಕ ಕನ್ನಡ ಹರಿದಾಸ ಸಾಹಿತ್ಯಕ್ಕೆ, ಉತ್ತಮ ಕೊಡುಗೆ-ಯಾಗಬಲ್ಲವರಾಗಿದ್ದಾರೆ.

ಶ್ರೀಹರಿಸ್ತುತಿ, ಆತ್ಮನಿವೇದನ, ಲೋಕನೀತಿ ಮತ್ತು ತಾತ್ವಿಕದೃಷ್ಟಿಯಲ್ಲಿ ಇವರ ಕೀರ್ತನೆಗಳು ವಿಭಾಗಗೊಳ್ಳುತ್ತವೆ. ಶ್ರೀಹರಿಸ್ತುತಿಯಲ್ಲಿ ಶ್ರೀಹರಿಏಕನಿಷ್ಠೆ ಎದ್ದು ಕಾಣುವ ಅಂಶ.

'ತಾಯಿಲಕುಮಿ ತಂದೆನಾರಾಯಣ ನಿ-
ಮ್ಮಯ ನೆಚ್ಚಿನ ಮಗನಾನಣ್ಣ'

ಎಂಬ ಕೃತಿಯಲ್ಲಿ ಶ್ರೀವೈಷ್ಣವ ತತ್ವವಾದ ಲಕ್ಷ್ಮೀಸಮೇತ ನಾರಾಯಣನ ಕಲ್ಪನೆ, ಲಕ್ಷ್ಮಿಯಮೂಲಕವೇ ಶ್ರೀಹರಿಯ ಕೃಪೆ ಎಂಬ ನಂಬಿಕೆ ಸ್ಪಷ್ಟವಾಗಿ ಪಡಿಮೂಡಿದೆ. ಈ ಕೀರ್ತನೆ ಶ್ಲೇಷಾರ್ಥದಲ್ಲಿ ವಿಶಿಷ್ಟತೆಯನ್ನು ಪಡೆಯುತ್ತದೆ. ಇಲ್ಲಿಯ ದೈವ ಸಂಬಂಧದ ಸೂಚನೆ ದಾಸರ ಲೌಕಿಕ ಸಂಬಂಧದ ಸೂಚನೆಯನ್ನು ನೀಡುವ ಮೂಲಕ ಲೋಕಜೀವನದಲ್ಲಿ ದಾಸರು ಸಂಕಷ್ಟಕ್ಕೊಳಗಾದ ಸಂದರ್ಭವೊಂದನ್ನು ಧ್ವನಿಸುವಂತಿದೆ.

ದಾಸರಿಗೆ ರಾಮ-ಕೃಷ್ಣ, ಚನ್ನಕೇಶವ, ನಾರಾಯಣ ಪ್ರಿಯವಾದ ಭಗವನ್ನಾಮಗಳು. 'ಓಂ ನಮೋನಾರಾಯಣ ಎನ್ನುವ ನಾಮದ ಬೀಜವನು

ರಾಮಾನುಜ ಬೆಳೆದ ಧರೆಯೊಳಗೆ' ಎಂಬ ಕವಿತೆಯಲ್ಲಿ ನಾಮ ಮಹಿಮೆಯನ್ನು ಸಾರುತ್ತಿದ್ದು ಪುರಂದರ ದಾಸರ ಇದೇ ಬಗೆಯ ಕೀರ್ತನೆಯ ಪ್ರಭಾವವಿರುವಂತಿದೆ. ತಮ್ಮ ಕೃತಿಯೊಂದರಲ್ಲಿ ಕುಮಾರವ್ಯಾಸ, ಕನಕ, ಪುರಂದರ,ಲಕ್ಷ್ಮೀಶರನ್ನೂ ಈ ದಾಸರು ಗುರು ಪರಂಪರೆಯಲ್ಲಿ ಸ್ತುತಿಸಿರುವುದು ವಿಶೇಷವೆನಿಸಿದೆ.

'ವಂದಿಪೆ ಶ್ರೀಮನ್ನಾರಾಯಣಗೆ
ವಂದೆಪೆ ಅಮ್ಮ ಲಕ್ಷ್ಮೀದೇವಿಗೆ
ವಂದಿಪೆ ವಿಶ್ವಕ್ಸೇನರಿಗೆ'

ಎಂಬುದರಲ್ಲಿ ಆಳ್ವಾರ್-ಆಚಾರ್ಯ ಪರಂಪರೆಯ ಸಂಪ್ರದಾಯದ ಕ್ರಮವನ್ನು ಅನುಸರಿಸಿದ್ದಾರೆ. ದಾಸರ ಸತ್ಯಪ್ರತಿಗಳನ್ನು ಮತ್ತೊಮ್ಮೆ ಪರಿಶೀಲಿಸುವಾಗ ಇತ್ತೀಚೆಗೆ ರಾಮಾನುಜರು ಮತ್ತು ಆಂಡಾಳನ್ನು ಸ್ತುತಿಸಿರುವ ಎರಡು ಕೀರ್ತನೆಗಳು ಲಭ್ಯವಾಗಿದ್ದು ಅದನ್ನು ಹೆಚ್ಚಿನ ಕೀರ್ತನೆಗಳಲ್ಲಿ ಕೊಟ್ಟಿದೆ.

'ಗುರುಸ್ತುತಿಯ ಮಾಡಬೇಕಯ್ಯ' (೫೦೮)

ಎಂಬುದು ಆಚಾರ್ಯ ರಾಮಾನುಜರನ್ನು ಕುರಿತದ್ದಾಗಿದ್ದೊ ಶ್ರೀವೈಷ್ಣವರಲ್ಲಿ ವಿಶಿಷ್ಟ ಸಂಪ್ರದಾಯವನ್ನು ರೂಢಿಸಿದ ಆಚಾರ್ಯರ ಜೀವನದ 'ಶ್ರೀಪಾದತೀರ್ಥ' ಪ್ರಸಂಗವನ್ನು ಇಲ್ಲಿ ವಿಶೇಷವಾಗಿ ಸ್ಮರಿಸಿದ್ದಾರೆ.

'ಆಂಡಾಳ್ ದೇವಿ ಶರಣೆಂಬೆ' (೫೦೯)

ಎಂಬುದು ಆಳ್ವಾರರಲ್ಲಿ ಬರುವ ಆಂಡಾಳ್ ಭಕ್ತಿಯ ಆಂಡಾಳ್ ಭಕ್ತಿಯ ಸುಂದರ ಸ್ತುತಿಯಾಗಿದೆ. ಇದೇ ರೀತಿ ಹಲವಾರು ಉತ್ತಮ ಕೃತಿಗಳ ಮೂಲಕ ಗಮನ ಸೆಳೆಯುವ ನಾರಾಯಣಶರ್ಮರು ಸಾಮಾಜಿಕವಾಗಿಯೂ ಮುಖ್ಯ ಹರಿದಾಸರೆನಿಸುತ್ತಾರೆ.

'ಈಗುಂಟೊ ಆಗುಂಟೋ ಈ ದೇಹ
ಏಗಬಲ್ಲರು ಯಾರು ಈಜಗದ ಗುಂಟ'

ಮುಂತಾದ ಹಲವು ಕೀರ್ತನೆಗಳಲ್ಲಿ ಸಾಮಾಜಿಕ ಸಂಗತಿಗಳನ್ನು ತಾತ್ವಿಕ ದೃಷ್ಟಿಯಿಂದ ನೋಡಿರುವುದನ್ನು ಕಾಣಬಹುದು. ಜನರ ಲೋಭತನ, ವಂಚನೆ, ಅಸಾತ್ವಿಕತೆ ಇತ್ಯಾದಿಗಳನ್ನು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಹೀಗೆ ವೈವಿಧ್ಯಮಯವಾದ ಕೀರ್ತನೆಗಳನ್ನು ನಾರಾಯಣಶರ್ಮರು ನೀಡಿ ೨೦ನೇ ಶತಮಾನದ ಅಂತ್ಯಭಾಗದವರೆಗೂ ದಾಸಸಾಹಿತ್ಯದ ಮುಂದುವರಿಕೆಗೆ ಸಾಕ್ಷಿಯಾಗಿದ್ದಾರೆ.

೪) ಕೀರ್ತನೆಗಳ ಆಕರ

ನಾರಾಯಣಶರ್ಮರ ಕೀರ್ತನೆಗಳಿಗೆ 'ನಾರಾಯಣಶರ್ಮರ ಕೀರ್ತನೆಗಳು' ಪುಸ್ತಕವನ್ನು ಮುಖ್ಯ ಆಕರವಾಗಿ ಬಳಸಿಕೊಂಡಿದ್ದರೂ 'ಮೂವರು ಶ್ರೀವೈಷ್ಣವ ಹರಿದಾಸರ ಕೀರ್ತನೆಗಳು' ಪುಸ್ತಕವನ್ನೂ ಪರಿಗಣಿಸಿದೆ. ಇದರೊಂದಿಗೆ ನಮ್ಮೊಂದಿಗಿರುವ ದಾಸರ ಶ್ರೀಮತಿಯವರಾದ ಲಕ್ಷ್ಮೀದೇವಿ ನಾರಾಯಣ-ಸ್ವಾಮಿಯವರ ಹಾಗೂ ಇತ್ತೀಚೆಗೆ ಅಗಲಿದ ದಾಸರ ಬಂಧು ವೆಂಕಟರಂಗನ್ ಅವರುಗಳ ನೆನಪುಗಳನ್ನೂ ಹಾಡಿನ ಸಂಪ್ರದಾಯವನ್ನೂ ಸ್ವೀಕರಿಸಿದೆ.

ಪ್ರೊ॥ ನಾ. ಗೀತಾಚಾರ್ಯ

ಕೀರ್ತನೆಗಳ ವಿಷಯಸೂಚಿ

ಕ್ರಮ ಸಂಖ್ಯೆ	ಕೀರ್ತನೆಯ ವಿಷಯ	ಕೀರ್ತನೆ ಸಂಖ್ಯೆ

೬. ಚನ್ನಪಟ್ಟಣದ ಅಹೋಬಲದಾಸರ ಕೀರ್ತನೆಗಳು

೭ ಶಾಮಶರ್ಮರ ಕೀರ್ತನೆಗಳು.

ಬೇಲೂರು ವೈಕುಂಠದಾಸರ
ಕೀರ್ತನೆಗಳು

ಅ. ಶ್ರೀಹರಿಸ್ತುತಿಗಳು

೧

ಉಯ್ಯಾಲೆಯ ನೀರಜೋದರನಾಡಿದಾ
ನಿಗಮಾಂತ ನಾರೀಜನರು ಪಾಡಲೂ ಪ

ಕರಪಾಣಿಪಲ್ಲವಗಳೂ ವದನ
ಸರಸಿರುಹ ನುಡಿ ಶುಕಪಿಕಗಳೂ
ಮೆರೆವ ಯೌವನದ ವಸಂತಾ ನಾದ ಶ್ರೀ
ಧರಣಿಯರ ಮಧ್ಯದಲ್ಲೀ ೧

ದೆಸೆದೆಸೆಗೆ ಪ್ರಜ್ವಲಿಸುವಾ ನವರತುನ
ವೆಸೆವ ಮಿಸುನಿಯ ಹಲಗೆಗೆ
ಮಿಸುನಿ ಸರಪಣಿ ತಳ್ವಕೇ ಫಣಿಪ ಶೋ
ಭಿಸುವೊಡಲ ನೀಡು ಮಾಡೀ ೨

ಉಯ್ಯಾಲೆಯುಲಹಿಗಳುಕೀ ಸತಿಯರುರೆ
ಮೈಯನುರದಾ ಲೊರಗಿಸೀ
ವೈಯಾರದಿಂದಲಿಪ್ಪೇ ಸುಖ ಪುಳಕ
ಕೈಯೊಡನೆ ತನುವ ತೀಡೇ ೩

ಎಡದ ಧರಣಿಯ ನೋಡಲೂ ಬಲದ ರಮೆ
ಕಡುಮುನಿಯೆ ಸಂತವಿಸುತಾ

ಒಡನೆ ಭೂದೇವಿ ಮುನಿಯೇ ಮನ್ನಿಸುವ
ಸಡಗರದಿ ಜಗವ ಮೋಹಿಸೀ ೪

ಎಡದ ಕೈಯಿಂದಿಂದಿರೇ ಧರಣಿ ತಾ
ಪಿಡಿದು ಬಲಗೈಯಿಂದಲೇ
ಬಿಡದೆ ತಮ್ಮತ್ತ ಸೆಳೆಯೇ ಸಮ್ಮದದ
ಕಡಲ ಮಧ್ಯದಿ ಮುಳುಗುತಾ ೫

ಅರಿ ಶಂಖ ಕೌಮೋದಕೀ ಸರಸಿರುಹ
ವರಕರ ಚತುಷ್ಟಯಗಳೂ
ಮಿರುಪ ಕುಂಡಲ ಕಿರೀಟಾ ನಗೆಮೊಗದ
ಸುರರತಾತನ ಜನಕನೂ ೬

ಅಂಬುಜಾಂಘ್ರಿಯ ತಡೆಯದಾ ಪೊಂಬಣ್ಣ
ದಂಬರದ ಸಿರಿಯ ನಡುವಿನಾ
ಇಂಬಾದುರದ ಪದಕದಾ ಮನಹಾರ
ಕಂಬುಕಂಠದ ಚೆನ್ನಿಗಾ ೭

ಹರಿಯ ಮೈಸೋಂಕಿನಿಂದಾ ಶರೀರಗಳ
ಮರೆದು ಶ್ರೀ ಭೂಸತಿಯರೂ
ಸುರತರುವ ಬಿಗಿದಪ್ಪಿದಾ ಕಲ್ಪಲತೆ
ಗೊರೆವನ್ನಲು ಪರಿಶೋಭಿಸೀ ೮

ಹೂತ ಹೊಂಬಳ್ಳಿಗಳನೇ ತೊಡಿಗೆಯಿಂ
ಜೋತೊರಗುತಿಕ್ಕೆಲದಲೀ
ಶ್ರೀತರುಣಿ ಧರಣಿ ಮೆರೆಯೇ ವೈಕುಂಠ
ಪ್ರೀತ ಚನ್ನನಾಡಿದನುಯ್ಯಲಾ ೯

೨

ಕಂಡೆನದ್ಭುತ ಮೂರ್ತಿಯನೂ
ಹಿಂಡು ದೈವದಗಂಡ ವೇಲಾಪುರಾಧೀಶನನು ಪ

ಪರಮಪದನಾಥ ಜಯ ಪರಮಪುರುಷನೆ ಜಯ
ಮರಮೇಷ್ಠಿಜನಕಜಯ ಪರಮಪಾವನನೆ ಜಯ
ಪರಮ ಸುಖವಾರ್ಧಿಜಯ ಪರಮಸುಜ್ಞಾನಿ ಜಯ
ಪರಮ ಶುಭಗಾತ್ರಜಯ ಪರಮಸಂತೋಷಿ ಜಯತು ೧

ಪರಮಸ್ವತಂತ್ರಜಯ ಪರಮ ಕಾರಣನೆಜಯ
ಪರಮತ್ರಿಗುಣಾತ್ಮಜಯ ಪರಮಪಂಡಿತನೆ ಜಯ
ಪರಮಗುರುವರ್ಯಜಯ ಪರಮಮುನಿವಂದ್ಯಜಯ
ಪರಮ ಭಾಗವತ ಪ್ರಿಯ ಜಯಜಯತು ೨

ಸರ್ವೋತ್ತಮನೆ ಜಯಜಯತು ಸ್ವಾಮಿ
ಕರಿರಾಜವರದ ಜಯಜಯತು ಹರಿಯೇ
ಅರವಿಂದನಾಭ ಜಯಜಯತು ಅಸುರ
ಶರಧಿ ಬಡಬಾನಲನೆ ಜಯಜಯತು ೩

ತರಳನ ಕಾಯ್ದವನೆ ಜಯಜಯತು ಶಿಶುವು
ಕರೆಯೆ ಬಂದವನೆ ಜಯಜಯತು ತಪವ
ಚರಿಸಿದನ ಕಾಯ್ದವನೆ ಜಯತು ನಿಜ
ಶರಣರಿಗೆ ಪದವನಿತ್ತವನೆ ಜಯಜಯತು ೪

೩

ಕಾಮಜನಕ ಸತ್ಯಕಾಮ ಜಯ ಸೌಶೀಲ್ಯ
ರಾಮನೆಯಖಿಲ ಜಗತ್ಸ್ವಾಮಿ [ಯೌ] ದಾರ್ಯ ಜಯತು ಪ

ಸಾಮಗಾನಪ್ರಿಯ ಕೋಮಲಶರೀರ ಜಯ
ತಾಮರಸನಯನ ಲಕ್ಷ್ಮೀ ಮನೋಹರನೆ ಜಯ

ಭೂಮೀಶ ಮಾಧವ ಮಹಾ ಮೂರ್ತಿ ಕೀರ್ತಿ ಜಯ
ನೇಮಿ ಜಗದಂತರ್ಯಾಮಿ ಚಾತುರ್ಯ ಜಯತು ೧

ರಾಮಕೃಷ್ಣ ಮುರಾರಿ ಜಯತು ಮೇಘ
ಶ್ಯಾಮ ಅಚ್ಯುತಾನಂತ ಜಯತು ನಿ–
ಸ್ಸೀಮ ಲೋಕಶರಣ್ಯ ಜಯತು ಸಾರ್ವ–
ಭೌಮ ವಿರಾಡ್ರೂಪ ಜಯ ಜಯತು ೨

ಶ್ರುತಿ ಸ್ತೋಮ ಸಂಸ್ತುತ ಜಯ ಜಯತು ವೈಕುಂ–
ಠೇತಿ ಸುಕ್ಷೇಮ ಲೋಕಾರಾಧ್ಯ ಜಯತು
ಸುತ್ರಾಮಾರ್ಚಿತಾಂಘ್ರಿಯುಗಳ ಜಯತು
ಜ್ಯೋತಿ ಪರಂಜ್ಯೋತಿ ನಿರಾಮಯ ವೇಲಾಪುರೀಶನೆ ಜಯತು ೩

೪

ಜಯತು ಜಗದೀಶ ಇಂದಿರೇಶ
ಜಯತು ವೈಕುಂಠರಮಣಾ ಉಪ್ಪವಡಿಸಾ ಪ

ಏಕಾರ್ಣವದಲಿ ವಟದೆಲೆಯಲಿ ಸಕಲಲೋಕ
ವಾಕಾರವಳಿಯೆ ಬಾಲಕತನವನಳವಡಿಸಿ
ಶ್ರೀಕರಾಂಬುಜದಿಂದ ಪಾದಾಂಗುಟವ ಪಿಡಿದ ತನುಜನಂದದೀ
ಏಕಮೇವಾದ್ವಿತೀಯನೆಂಬಾಗಮದ
ವಾಕ್ಕಿಂಗೆ ದೃಷ್ಟಾಂತವಾಗಿ ಪವಡಿಸಿಹ ಲ
ಕ್ಷ್ಮೀ ಕಾಂತ ಸಕಲ ಲೋಕದ ಭಕುತರನು ಸಲಹ
ಬೇಕು ನಲಿದುಪ್ಪವಡಿಸಾ ೧

ಫಣಿರಾಜನಂತರಂಗತಲ್ಪದ ಮೇಲೆ ತತ್ಫಣಾ
ಮಣಿಯ ಬೆಳಗಿನಲಿ ಸುರನಿಕರವೆಡಬಲದಿ ಸಂ

ದಣಿಸಿ ಬರಲು ನಾರದ ತುಂಬುರರು ಭವದೀಯ
ಗುಣಗಣಂಗಳ ಪಾಡಲೂ
ಗುಣನಿಧಿಗಳೆನಿಪ ಶ್ರೀದೇವಿ ಭೂದೇವಿಯರು
ಕ್ಷಣವಗಲಲರಿಯದೇ ಪಾದಾಂಬುಜವ ಮನ
ದಣಿಯಲೊತ್ತಲು ಸುಖದೊಳೊರಗಿಹ ದಿವಿಜ ಶಿಖಾ
ಮಣಿಯೆ ಟಿಲಿದುಪ್ಪವಡಿಸಾ ೨

ಖಗರಾಜ ನವರತ್ನಮಯದ ತೊಟ್ಟಿಲುಮಾಗೆ
ನಿಗಮನಾಲಕು ಕುಂದಣದ ಸರಪಣಿಗಳಾಗೆ
ಬಗಸಿಗಂಗಳ ಭಾವಕಿಯರಾಗಿ ಉಪನಿಷ
ತ್ತುಗಳು ನೆರೆದಾನಂದದೀ
ಮುಗುದರರಸಾ ಮುಕುಂದಾಯೆನಲು ನಲಿಯೆ
ಪಾಲ್ಗಡಲಲೊಡೆಯ ವೇಲಾಪುರದ ಚೆ
ನ್ನಿಗರಾಯ ವೈಕುಂಠರಮಣ ತವಶರಣ ಜನ
ರುಗಳ ಸಲಹುಪ್ಪವಡಿಸಾ ೩

೫

ಜೀವನಮಯ ಜೀವನಾ ಪ

ಜೀವನ ಮೂರುತಿ ಪಾವನ ಕೇಶವ ಅ.ಪ

ಕರ್ಮವಿಮೋಚನ ಕಂಜ ವಿಲೋಚನ
ನಿರ್ಮಲಚರಿತ್ರ ನಿಗಮ ಸ್ತೋತ್ರ ೧

ಕಾಮಿತದಾಯಕ ಕಮಲನಾಯಕ
ಕಾಮಜನಕ ಪಾದ ನಮಿತ ಚರಣ ೨

ವೇಲಾಪುರವಾಸ ವೈಕುಂಠ ಸರ್ವೇಶ
ಪಾಲಯಾಮ್ಯನವರತ ಪರಮಪುರುಷ ೩

೬

ಸುಳಾದಿ

ಧ್ರುವತಾಳ

ತಮಾನಕೊಂದು ವೇದಗಳನುದ್ಧರಿಸಿ
ಕಮಲಾಸನನ ಪ್ರತಿಷ್ಠಿಸಿದಾ
ಅಮೃತ ಮಥನವಂ ಮಾಡಿ ಸುರೇಶನ
ಅಮರಪದದಲಿ ಪ್ರತಿಷ್ಠಿಸಿದಾ
ಯಮ ನೈಋತಿ ವರುಣ ವಾಯು ಧನಾದ್ಯರ
ಕ್ರಮದಿಂದೇ ಪ್ರತಿಷ್ಠಿಸಿದಾ
ಹಿಮಧಾಮನ ಸೂರ್ಯನ ಗಗನದಲಂದೇ ಪ್ರತಿಷ್ಠಿಸಿದಾ
ಕಮಲಾಪತಿ ವೈಕುಂಠ ಕೇಶವನೇ
ಸುಮನಸ್ಸಂಪ್ರತಿಷ್ಠಾಚಾರ್ಯಯೆಂದರಿಯಾ ೧

ಮಟ್ಟತಾಳ

ಅಡಿಗಡಿಗಿದನೇ ಪೇಳುವೆ ಮಾನವ ಮುಕುಂದ
ಮೃಡನ ಪ್ರತಿಷ್ಠೆಯ ಮಾಡಿದನಂದು
ಬಿಡು ಮರುಳಾಟವ ಬಿಡು ಮರುಳಾಟವ
ಹನುಮಂತನ ರೋಮತಾನೇ
ಮೃಡಮೂರುತಿಯಾಗಿ ಪೂಜೆಗೊಂಡುದನೆಂದು
ವೊಡೆಯನುದಾರ ಹನುಮಂತಗೆ ವೇಲಾಪುರ
ದೊಡೆಯನು ಶ್ರೀ ವೈಕುಂಠಪತಿ ಕೇಳ್ದರಿಯಾ ೨

ರೂಪಕ ತಾಳ

ಮಾಡಿದನು ಪ್ರತಿಷ್ಠೆಯನಾ ಹನುಮನ ಬ್ರಹ್ಮತ್ವದಲೀ
ಮಾಡಿದನು ಪ್ರತಿಷ್ಠೆಯನಾ ವಿಭೀಷಣನ ಲಂಕೆಯಲಿ
ಮಾಡಿದನು ಪ್ರತಿಷ್ಠೆಯನಾ ಬಲಿಗೊಲಿದು ಪಾತಾಳದಲೀ
ಮಾಡಿದನು ಪ್ರತಿಷ್ಠೆಯನಾಧ್ರುವನಮುನ್ನತ ಲೋಕದಿ

ಮಾಡಿದನು ಪ್ರತಿಷ್ಠೆಯ ಮನುಮುನಿಗಳ ಶ್ರೀಕೇಶವ
ಮಾಡನೆ ಶಿವನ ಪ್ರತಿಷ್ಠೆಯ
ವೈಕುಂಠರಮಣನಯ್ಯನೇ ಮಾಡಿದನೂ ೩

ಝಂಪೆ ತಾಳ

ಇಳೆಯ ಪ್ರತಿಷ್ಠಿಸಿದ ಹೇಮಾಕ್ಷನಂ ಕೊಂದು
ಕಳದು ರಾವಣನಸುವ ಸುರರಲಜ್ಜಾವಧುವ
ನಳಿನಾಕ್ಷನೆ ಪ್ರತಿಷ್ಠಿಸಿದನರಿಯಾ ಲೋಕ
ದೊಳುಹಾಡು ಕಥೆಯಾದೇ ಕೋ ಕೆಳೆಯಾ
ಅಳವಹುದೇ ವೈಕುಂಠ ಕೇಶವನೇ ಲೋಕ
ದೊಳುವಾವನ ಚರಿತಚರಣಗೆ ೪

ತ್ರಿವಡೆ ತಾಳ

ಲೋಕವೆಲ್ಲ ವಿಷ್ಣುವಿನ ಮಾಯಾ ಕಲ್ಪಿತವಾಗಿ ವಿಧಿ ಭವ
ನಾಕಪತಿಗಳ ಪ್ರತಿಷ್ಠೆಯ ಮಾಡುವರೇ ಬೇರಾವ ಸಮರ್ಥನು
ಶ್ರೀಕಾಂತಗೊಲಿದವನೇ ದ್ರುಹಿಣ ಪಿನಾಕಿಯವನೆ ರವಿ ಸಸಿ
ಯಾ ಕಮಲಲೋಚನನುಳಿಯೆ ತಮ್ಮಿಂದ
ತಾವೇ ಪ್ರತಿಷ್ಠೆಯಹುದೇ
ಈ ಕಮಲ ಭವಾಂಡಗಳ ರಕ್ಷಿಸಿ ಶಿಕ್ಷಿಪನದಾವನು
ಶ್ರೀಕೇಶವ ನಮಿತಗುಣಾರ್ಣವ ವೈಕುಂಠದರಸನೊಬ್ಬನಲ್ಲದೇ ೫

ಅಟ್ಟ ತಾಳ

ಹದಿನಾಲ್ಕು ಲೋಕದರಸುತನ ಲಕ್ಷುಮಿಗೆ
ಪದುಮನಾಭನರಸಿ ಜಗನ್ಮಾತೆಗೆ
ವಿಧಿಗರಸ ದೇವ ದನುಜ ಮನುಜರಿಗೇ
ಇದು ವೇದ ಶಾಸ್ತ್ರ ಪುರಾಣಾಗಮಸಿದ್ಧ
ಅದುಭುತ ವೈಕುಂಠಕೇಶವನರಿಯಾ ೬

ಏಕತಾಳ

ಮಳಲುಗೂಡ ಮಾಡುವ ಮ
ಕ್ಕಳಾಟದವೋಲ್ ಹರಿಲೋಕಂನಳ
ಸುಳಿಸುವ ಮರಸುವ ಅಜಭವಾದಿಗಳ
ತಳದು ಬೇರೆ ಹರಿದರದ ಪ್ರತಿಷ್ಠಿಸುವ
ಸುಳಿಸುವ ಮರಸುವ ವೇಲಾಪುರದೊಡೆಯ
ನುಳರೆ ಸಮದೇವರು ಶ್ರೀವೈಕುಂಠಪತಿ ಕೇಳ್ದರಿಯಾ ೭

ಜತಿ

ಅದುಭುತ ವಿಕ್ರಮ ಅದುಭುತ ಮಹಿಮ
ಅದುಭುತ ವೈಕುಂಠ ಕೇಶವನರಿಯಾ

೭

ತೇನಮೋ ಜಗದೇಕನಾಥ ರಮಾ
ಮಾನಸಾಂಬುಜರಾಜಹಂಸಾಯ ವಿಷ್ಣವೇ ಪ

ಅಗಣಿತಾವತಾರ ಅಸುರಸಂಹಾರ
ಜಗದೇಕವೀರ ಜನನಾದಿ ದೂರಾ
ನಿಗಮಪ್ರಕಾರ ನಿರ್ಮಲಾಚಾರ
ಸುಗುಣ ವಿಸ್ತಾರ ಸುಖಮಯ ಶರೀರ ೧

ದಾನಗುಣಶೀಲ ಧರ್ಮಪರಿಪಾಲ
ಗಾನರಸಲೋಲ ಕನಕಮಯಚೇಲ
ದೀನಾರ್ತಿಹರಣ ತೀರ್ಥಮಯಚರಣ
ಆನತೋದ್ಧರಣ ಅಮೃತಾಬ್ಧಿಶಯನ ೨

ಚಂದ್ರಾರ್ಕನಯನ ಚಾರುತರ ಕಥನ
ಇಂದ್ರಾರಿ ಮಥನ ಇಭವೈರಿವದನ
ಇಂದ್ರ ಸಂಕ್ರಮಣ ವೇಲಾಪುರಿಸದನ
ವಂದ್ಯಾಖಿಲಜನ ವೈಕುಂಠ ರಮಣ ೩

೮

ದೇವಾನಾ ಮೂರು ಲೋಕಂಗಳನುನೆರೆ
ಕಾವಾನಾ ಶರಣಾಗತ ಸಂ
ಜೀವಾನ ರೂಪ ಕಂಡೆ ಕೈಯಡಿಯಾ ಪ

ಧಗಧಗಿಸುವ ಕೋಟಿ ದಿವಾಕರ ಕಿರಣಗಳ
ನುಗುಳುವ ಮಣಿಮಕುಟದಾ ಸಿರದಾ
ಧೃಗುಳುಗಳ ಕಾಂತಿಯ ಮೊಗೆದು ಚೆಲ್ಲುತ ಪಾ
ಲೊಗುವ ಕದಪಿಲಿ ಥಾಳಿಪ ಕುಂಡಲಂಗಳಾ ೧

ತಿಲಕದ ಕುಡಿವರಿದಿಹ ಪುರ್ಬುಗಳ ಮಂ
ಜುಳ ಹೇಮ ಚಂಪಕದ ನಾಸಿಕದಾ
ಜಲಜ ಕಸ್ತೂರಿ ಕಪ್ಪುರದ ಕಂಪಿನ
ಸುಲಿಪಲ್ಲಿನ ಬಾಯಿದೆರೆಯ ಚೆಲುವನುಳ್ಳಾ ೨

ತೋರಮಂದಾರ ತುಲಸೀ ವನಮಾಲೆ ಕೊರಳ
ಹಾರ ಪೇರುರದಾ ಶ್ರೀ ಚಂದನದಾ
ವಾರಿಜಪಾಣಿಯುಗದೆ ಶಂಖಚಕ್ರ ಸ–
ರೋರುಹ ಕರದಲಭಯವಿತ್ತು ಸಲಹುವಾ ೩

ಅಂದು ಜಘನದಿ ಕರವಿಟ್ಟು ಪೊಂಬಟ್ಟೆಯನುಟ್ಟು
ಪಾದದಿ ಮಣಿ ಬಿರುಡೆಯವಿಟ್ಟು ಸ
ನ್ಮುದದಿ ವೀರಮುದ್ರಿಕೆ ಮಂಡಿಕಾಗಳನಿವಿಟ್ಟು
ಮೃದುಪಾದನಖದಿ ಮೂಜಗವ ಬೆಳಗುತಿಹ ೪

ಸರೋರುಹ ಪಲ್ಲನ ಅರುಣಕಿರಣದಿ ಪಾವಕ
ವರಕಾಂತಿಯ ಗೆಲುವಾ ಜಾಜಿ ಸೇವಂತಿಗೆ
ಮೃದುವನು ಸೋಲಿಪಡಿಗಳಾ ಶ್ರೀ ವೆಲಾ
ಪುರದ ವೈಕುಂಠೇಶ ವೇಂಕಟಾದ್ರೀಶಾ ೫

೯

ಸುಳಾದಿ

ಧ್ರುವತಾಳ

ಲಕ್ಷುಮೀಯ ಮಸ್ತಕಕ್ಕೆ ಮಣಿಮೌಳಿಯಾದಾ
ಲಕ್ಷುಮೀಯ ಅಕ್ಷಿಮಧುಪ ಕರುಣಾಬ್ಜವಾದಾ
ಲಕ್ಷುಮೀಯ ಭುಜಗಳಿಗೆ ಭುಜಕೀರ್ತಿಯಾದಾ
ಲಕ್ಷುಮೀಯ ಕರಾಬ್ಜಕ್ಕೆ ರಾಜಹಂಸನಾದಾ
ಲಕ್ಷುಮೀಯ ಪೂಮಾಣಿಕ್ಯ ಪದಕವಾದಾ
ಲಕ್ಷುಮೀಯ ಮಹಾಹಾರ ಕೇಯೂರವಾದಾ
ಲಕ್ಷುಮೀಯಾನಂದಾಬ್ಧಿಗೆ ಪೂರ್ಣಚಂದ್ರನಾದಾ
ಲಕ್ಷುಮೀಪತಿಯೆ ನಿನ್ನ ಪಾದಸರಸಿಜವೆನ್ನ ಮ
ಸ್ತಕದಲೊಮ್ಮೆ ಅಲಂಕರಿಸು
ವೈಕುಂಠವಿಠ್ಠಲ ಅನಂತಮಹಿಮಾ ೧

ಮಟ್ಟತಾಳ

ಅಜನಿಗೊಲಿದು ದೇಹಾರವಾದಾ
ಭವನಿಗೊಲಿದು ಸಾಲಿಗ್ರಾಮದೇವರಾದಾ
ಯಜು ಸಾಮ ಮುಖ್ಯನಿಗಮ ಮೌಳಿಮಣಿಯಾದಾ
ಭಜಕ ದಿವಿಜನಿಕರಾಪಾರಬ್ರಹ್ಮವಾದಾ
ತ್ರಿಜಗವಂದಿತಪದ ವೈಕುಂಠವಿಠ್ಠಲ
ನಿಜಕರುಣದಿಂದೆನ್ನ ಮಸ್ತಕದ ಮೇಲೊಮ್ಮೆ ದಯಮಾಡೊ ೨

ರೂಪಕತಾಳ

ಮುನಿಹೃದಯನಿಕೇತನ ಜ್ಯೋತಿಯ
ತನು ಸೊಬಗಿನ ಪುಂಜನನುದಿನ
ಸನಕಾದಿಗಳಾಡುತ್ತ ಪಾಡುತ್ತ
ನೆನೆವ ಪರಮ ಕರುಣಮೂರ್ತಿಯ

ಘನಪಾದ ವೈಕುಂಠ ವಿಠ್ಠಲ
ತನುಸರಸಿಗೆ ಸರಸಿಜವಾಗಿಡೊ ೩

ಝಂಪೆತಾಳ

ದುರಿತ ತಿಮಿರವಡಗದು ಮನ
ಸರಸಿಜವರಳದೊ
ಹರಿ ನಿನ್ನ ಅರುಣಕಿರಣ ಭರಿತಚರಣ
ಸರಸಿಜ ಸಖನುದಯಿಸದಿರೇ
ಪರಮ ದಯಾನಿಧೆ
ಸಿರಿವೈಕುಂಠ ವಿಠ್ಠಲರೇಯ ಎನ್ನ ಬಿನ್ನಪವಿದು ೪

ತ್ರಿವಿಡಿತಾಳ

ಪಾದಾಂಬುಜ ಮಧುಕರ
ಪಾದಾಂಬುಜ ಭೂಮಿಯಂತೆ ಬಿಂದುವಂತೆ ವಾಮ
ಪಾದಕರ್ಣಿಕೆಯಾಕಾಶದಂತೆ ಶಿವ
ನಾದರದಿ ಧರಿಸಿದ ಗಂಗೆಯಂತೆ
ಆದಿದೇವ ಶ್ರೀ ವೈಕುಂಠವಿಠಲ ದಯಾನಿಧೆ ೫

ಅಟ್ಟತಾಳ

ಕಡಹದ ಮರನನಡರಿ ಕಾಳಿಂಗನ
ಮಡುವ ಧುಮುಕಿ ಕಾಳಿಂಗನ ಶಿರದಲ್ಲಿ
ಧಡುಮನೆ ವಿಷಜಾಲ ಧಡಿಗಳ
ವೊಡಿಗೆ ಸಪ್ಪುಳಿಗೆ ಕುಣಿದಾಡಿದೆ ಗಡಾ
ಕಡುಮೃದುಪಾದ ವೈಕುಂಠವಿಠ್ಠಲಾ
ಇಡು ಎನ್ನ ಕ್ರೋಧಾಹಿ ಮದವಳಿಯಲಿ ೬

ಆದಿತಾಳ

ಕಂಬು ಕೊಳಲು ತುತ್ತುರಿ ಮಾವುರಿಗಳು
ಸಂಭ್ರಮದಲಿ ಗೋಪಾಲರು ನೆರೆದು

ಭೊಂ ಭೊಂ ತುತ್ತುರುತ್ತುರೆನೆ ಸುರ
ರಂಬರದಲಿ ಪೂಮಳೆಗರೆಯೆ
ಕಂಬುಕಂಠ ವೈಕುಂಠವಿಠ್ಠಲ ಪಾದಾ
ಇಂಬಾಗಿ ಎನ್ನ ಹೃದಯ ಮಧ್ಯದಲಿಡು ೮

ಜತಿ

ದೇವ ದೇವ ಜಗಂಗಳ ಪೊರೆವಾ
ಶ್ರೀ ವೈಕುಂಠವಿಠ್ಠಲ ಸಲಿಸೋ ಬಿನ್ನಪನಾ ೯

೧೦

ಲೋಕತ್ರಯ ಪಾಲನೇ ಶುಕ ಮುನಿವಂದ್ಯ ಹರಿ
ಮುಖ ಪೀಠದಲಿ ಕುಳಿತೂ ಪ

ವಿಕಸಿತ ವಡೆದೊಲವನಿತ್ತು ಚನ್ನರಾಯ
ಸುಖದಿ ನೀ ಪವಡಿಸಯ್ಯಾ ಅ.ಪ

ಭವ ಬೊಮ್ಮ ಮೊದಲಾದ ದಿವಿಜ ಸನ್ಮುನಿಗಳೂ
ನವವಿಧ ಭಕುತಿಯಿಂದಾ
ಭವರೋಗ ವೈದ್ಯ ನಿಂ ನವಸರದೂಳಿಗ
ದ್ಧವಣರಿತೋಲೈಸುವ ವಿವರವ ಕಂಡು
ಸವೆಯದ ಸುಖವಿತ್ತು ತವ ಮುಖ್ಯರನು ಕಳುಹಿ
ಸವಿಯಾದ ತೂಲತಲ್ಪದಿ
ನವಸುಂದರ ನಿದ್ದೆ ಪೊ
ತ್ತವನೇ ನೀ ಪವಡಿಸಯ್ಯಾ ೧

ತುಂಬುರು ನಾರದನೆಂಬರು ವೀಣೆಯ
ಸಂಭ್ರಮದಿಂ ಮೇಳೈಸಿ
ಅಂಬುಜನಾಭ ನೀನೆಂಬ ಗೀತವ ಸವಿ
ದುಂಬಿ ಪಾಡಲು ಕೇಳುತಾ

ರಂಭೆಯೂರ್ವಸಿ ಹೊನ್ನ ಬೊಂಬೆ ತಿಲೋತ್ತಮೆ
ಯೆಂಬ ಮೇನಕೆ ಸಹಿತ
ಬೆಂಬಿಡದೆ ನಾಟ್ಯವಾಡಲು ನೋಡಿ ಭಕುತ ಕು
ಟುಂಬ ನೀ ಪವಡಿಸಯ್ಯಾ ೨

ಪೆಡೆದಲೆಗನ ಮೃದುವಡೆದ ಹಾಸಿನ ಮೇ
ಲಿಡಿಕಿರಿ ವಡಸಿಸುವಾ
ಕಡು ಸೊಗಸಿನ ಗಂಧವಡಿ ಪೂವು ಕಸ್ತೂರಿ
ಯಡಕೆಲೆ ಸಂಭ್ರಮಿಸೇ
ಪೊಡವಿಗಧಿಕ ಶೇಷಗಿರಿ ಗಡಣಕೆಣೆಯೆನೇ ವೇಲಾಪುರ
ದೊಡೆಯ ವೈಕುಂಠ ಚನ್ನಿಗರಾಯ ನಿನ್ನ
ಮಡದಿ ರನ್ನಳು ಸೌಮ್ಯನಾಯಕಿ
ಯೊಡನೈಗೂಡಿ ಮೃಡನುತನೆ ಪವಡಿಸಯ್ಯಾ ೩

೧೧

ಉಗಾಭೋಗ

ಶ್ರೀದೇವಿಗೆ ಯೌವನವರೆಯಹುದೆಂದು
ರವಿಶಶಿಗಳ ನೀಪಡದೇ
ಶ್ರೀದೇವಿಗೆ ಯೌವನವರೆಯಹುದೆಂದು
ಇಂದ್ರಾಗ್ನಿಗಳ ನೀನೇ ಪಡದೇ
ಶ್ರೀದೇವಿಗೆ ಯೌವನವರೆಯಹುದೆಂದು
ವಾಯು ವಿರಿಂಚಿ ಮೊದಲಾದವರ ಪಡದೇ
ಶ್ರೀದೇವಿಯನೆದೆಗೇರಿಸಿಕೊಂಡೇ
ಶ್ರೀದೇವಿಯ ಪೇರ ಧರಿಸಿಕೊಂಡೇ
ಶ್ರೀದೇವಿಗೆ ಮಾರುವೋದೇ ವೇಲಾಪುರವಾಸ
ವೈಕುಂಠರಮಣಾ ನಿನ್ನೊಲವತಿ ಪೊಸತ್ಯೆಯಾ

೧೨

ಶ್ರೀಕರಾಂಬುಜರಂಜಿತ ಪಾದಮೆಯಾ
ನಾಕಾಧಿಪ ಮುನಿಜನವರದಾಮೆಯಾ ಪ

ಲೋಕೇಶನುತ ಕಂಜಲೋಚನಾಮೆಯಾ
ಸಾಕಾರ ಭೋಗೀಶ್ವರ ಮಂಜುಳಚರಣಾ ಅ.ಪ

ಉದಧಿ ಗಂಭೀರ ಭೀರಹಿತ ಹಿತಚಾರಿತ್ರ
ಕದನ ಕರ್ಕಶ ಭೀಮ ರತಿಜಿತಹಿತಾ
ಮದಿತಕೌರವನಾತ್ತ ಚರಣವಿಖ್ಯಾತಾ
ಉದಿತ ಭಾಸ್ಕರಹಿತನಾಥನಾಧಾರೇ ೧

ಶರಣಾಗತಜನ ಶಾಂತಿದಾಂತಿಜೀಯಾ
ಗುರುಕಾಮದ ಸರ್ವಕೋವಿದಾಯೇಮಾ
ನರಕೇಸರಿ ರೂಪ ನಾರದ ವಂದ್ಯ ಶ್ರೀ
ವರವೇಲಾಪುರವಾಸ ವೈಕುಂಠ ಸರ್ವೇಶಾ ೨

೧೩

ಮೂರ್ತಿಧ್ಯಾನ

ರಮೆಯ ವಕ್ಷೋಜ ಕುಂಕುಮ ಪಂಕಾಂಕಿತವಹ
ಕಮಲಜ ಹೃತ್ಸರೋವರ ಕಂಜವೆಂಸಾ
ಮನುಮುನಿ ಮಾನಸಹಂಸ ತಾನಾಗಿಹ
ಮನುಜ ಹೃದ್ವ್ಯೋಮದಿ ಮಿಂಚಿನಂತೆಸೆವಾ
ಧ್ವಜವಜ್ರ ಪದುಮ ಪತಾಕಾಂಕುಶ ವಹ
ನಿಜಕಾಂತಿಯಲರುಣಾಬ್ಜದಂತೆಸೆವಾ
ಪದತಳದ ಮೇಲೆ ಥಳಥಳಿಸುತಲಿಹ
ಪದುಮಭವಾಂಡ ಭೇದನದಕ್ಷವೆನಿಸುವಾ
ಸುರವಾಹಿನಿಗೆ ತೌರುಮನೆ ತಾನಹ

ದುರುಳ ಶಕಟತನುಚೂರ್ಣೀಕೃತವಹ
ಪಾರ್ಥಶರೀರ ರಕ್ಷಣಕರ್ತೃತಾನಹ
ಗೌತಮಸತಿ ಪಾತಕ ಪರಿಹರವಹ
ಉಂಗುಟದಿಂ ಭುವನಗಳತಿಗಳ
ಹಿಂಗಿಪ ನಖಪಂಕ್ತಿಗಳ ಕಿರಣಗಳಾ
ವೀರಮುದ್ರಿಕೆಯ ಮಂಟಿಕೆಯಕಾಂತಿಗಳಾ
ವೋರಂತೆ ಪೆರ್ಚಿಹ ಪಾದಾಂಗುಲಿಗಳಾ
ತೊಳಪ ಕಡೆಯ ಪೆಂಡೆಯದ ತೊಡವು
ಗಳ ವೈಕುಂಠಗಿರಿ ವೇಂಕಟೇಶ ನಿನ್ನಾ ।
ಚರಣಸೇವೆಯನೇ ಕರುಣಿಸಯ್ಯಾ

೧೪

ಎಚ್ಚರಿಕೇ ಭುವನಪಾವನಕೀರುತೀ ಪಾದ
ವೆಚ್ಚರಿಕೇ ಚೆನ್ನಕೇಶವಮೂರುತೀ ಪ

ಸರಸಿಜಭವಾಂಡವನೊಡೆದಚರಣ ಯೆಚ್ಚರಿಕೇ
ಸುರನದಿಯ ಪಡೆದ ಪದ ಯೆಚ್ಚರಿಕೇ
ಧರಣಿಯನಳೆದ ಪದಾಂಭೋಜಾತ ಯೆಚ್ಚರಿಕೇ
ಪರಮ ಮಂಗಳ ಪಾದಪದ್ಮ ಯೆಚ್ಚರಿಕೇ ೧

ಕಿಸಲಯೋಪಮಚರಣ ಯೆಚ್ಚರಿಕೇ ಮೃದುತರದ
ಕುಸುಮಕೋಮಲಚರಣ ಯೆಚ್ಚರಿಕೇ
ಋಷಿವಧೂಶಾಪಹರಣ ಯೆಚ್ಚರಿಕೇ
ಶಶಿಸೂರ್ಯತೇಜದಮಲಾಂಘ್ರಿ ಯೆಚ್ಚರಿಕೇ ೨

ಶಕಟಪ್ರಕಟನೋದ್ಧೃತ ಚರಣ ಯೆಚ್ಚರಿಕೇ
ಶುಕವಂದ್ಯ ಶ್ರೀಚರಣ ಯೆಚ್ಚರಿಕೇ
ನಿಖಿಳ ಪ್ರಮೋದಕಾರಣ ಚರಣ ಯೆಚ್ಚರಿಕೇ
ಅಕಳಂಕ ವೈಕುಂಠನಾಥಪದ ಯೆಚ್ಚರಿಕೇ ೩

೧೫

ದೇವನ ನೆರೆನಂಬಿರೊ
ಶ್ರೀವರ ವೇಲಾಪುರಿಯ ಚೆನ್ನಿಗನ ಪ

ಕರೆಯರಿಗೊರಳಭವನ ಕೃಪೆಯಿಂದ ದಶಗ್ರೀವ
ನೆರೆಭಾಗ್ಯಪಡೆದು ಗರ್ವದೊಳಿರಲು
ಅರೆಯಟ್ಟಿ ಶಿರಗಳ ಕುಟ್ಟಿಹಾಕಿ ತನ್ನ
ಮೊರೆಹೊಕ್ಕ ವಿಭೀಷಣಗೆ ಪಟ್ಟಗಟ್ಟಿದ ೧

ಭಾಗೀರಥಿಯ ತಾಳ್ದ ಮಹೇಶನ ತಲೆ
ವಾಗಿಲ ಕಾಯಿಸಿಕೊಂಡಿಹ ಬಾಣನ
ತಾಗಿ ತೋಳಕಡಿದ ಸುರನ ಕುಮಾರತಿಗೆ
ಭೋಗಿಸುವಂತೆ ತಮ್ಮಗೆ ಕೈವರ್ತಿಸಿ ಕೊಟ್ಟ ೨

ಲೋಕದೊಳಜಭವಾದಿಗಳಿಂದ ಉಬ್ಬಿದ ಅ–
ನೇಕ ರಕ್ಕಸರನೊಟ್ಟಿಗೆ ತಾಹೆನು–
ತಾ ಕೊಟ್ಟ ವರವನೆ ಶಿರಮುಟ್ಟಿ ಕೊಂಡಾ ಕರು
ಣಾಕರ ವರ ವೇಲಾಪುರಿಯ ಚೆನ್ನಿಗನ ೩

೧೬

ಸುಳಾದಿ

ಧ್ರುವತಾಳ

ನೋಡೆಲೆ ಮನವೇ ಜಗದೇಕ ಲಾವಣ್ಯನಿಧಿಯನನುದಿನ
ಬೇಡು ಬೇಡಿದುದನೊಲಿದೀವ ದಾನಿಗಳರಸನ
ಕೂಡೆಲೆ ಮನವೇ ಸುಖನಿಧಿಯ ಅಜಭವೇಂದ್ರಾದಿ ಸುರೇಶರ

ಕೇಡಿಲ್ಲದನಿಜಪದವನೋಲುವರೆ ನೀನು
ಆಡಾತನ ದಾಸರೊಡನೆ ದುರಿತ ಕೋಟಿಗಳಾ
ರೂಢಿಶ್ರೀ ದಕ್ಷಿಣವಾರಣಾಸಿ ಎನಿಪ ವೇಲಾಪುರದಲಿ
ಬೇಡಿದನೀವೆನು ಭಕುತಜನರಿಗೆಂದು ಕರುಣದಲಿ
ಗಾಡಿಗಾರ ಚನ್ನಕೇಶವನಾಗಿ ಬಂದ್ಯೆದಾನೆ

ಮಟ್ಟತಾಳ

ಮೆರೆವ ಮಕುಟ ಮುತ್ತಿನಮೂಗುತಿ ಕರ್ಣದಲಿ
ಮಿರುಪ ರತುನದೋಲೆ ರಾಜಿಪ ವದನದ
ಕರಚತುಷ್ಟಯದಲೀ ಶಂಖ ಚಕ್ರ ಗದೆ ಪದುಮ
ಸರಸಿಜದಂಗಿ ಪೀತಾಂಬರದ ಕರದಾ
ಸಿರಿವೈಕುಂಠವಲ್ಲಭ ವೇಲಾಪುರಾಧಿಪ
ಕರುಣಾಕರ ಚನ್ನಕೆಶವ ನಿನ್ನ ಮೂರುತಿಗೆ ನಮೊ

ರೂಪಕತಾಳ

ಕಮಲಜನಾರಾಧಿಪಾಂಘ್ರಿಕಮಲವ
ಕಮಲಾಕುಚ ಕುಂಕುಮಾಂಕಿತ ಪಾದಾಂಭೋರುಹ
ಅಮರನದಿಯ ಪಡೆದ ಚರಣಕಂಜವ
ಅಮಿತಮಹಿಮಾ ಎನ್ನೆದೆಮನೆಯೊಳನುದಿನ ನಿಲಿಸಯ್ಯ
ದ್ಯುಮಣೀಶತಕೋಟಿತೇಜ ವೈಕುಂಠವಲ್ಲಭ
ನಮೋ ವೇಲಾಪುರೀಶ ಚನ್ನಕೇಶವ

ಝಂಪೆ ತಾಳ

ನಿನ್ನ ಕೀರುತಿ ಕಿವಿಗೆ ನಾಮಾ ನಾಲಿಗೆಗೆ
ಅಯ್ಯ ಚಾರುಲಾವಣ್ಯ
ವೆನ್ನ ಕಣ್ಣಿಗೆ ಅಧಾರವಯ್ಯ ವೇಲಾಪುರ
ಚನ್ನ ವೈಕುಂಠರಮಣ

ತ್ರಿಪುಟ ತಾಳ

ಸರಸಿಜೋದ್ಭವಶೂಲಿ ಸುರಪಮುಖ್ಯ ಸುರಾಸುರರು
ಶರನಿಧಿಮಥನದಲ್ಲಿ ನೆರೆದಿರಲು
ಪರಮಪುರುಷ ಪುರುಷೋತ್ತಮ ನಿನಗೆ
ಸಿರಿ ಸರಮಾಲೆಯಿರಿಸಿಹಳಾದರು
ಸಿರಿವೈಕುಂಠನಾಯಕ ನಿನಗೆ ಚೆನ್ನಿಗರಾಯನೆಂಬ ಪೆ
ಸರು ಸಲುವುದಯ್ಯ ಸಲುವುದಯ್ಯ ವೇಲಾಪುರಾಧೀಶಾ

ಅಟ್ಟತಾಳ

ಅಲ್ಪಮತಿಯು ತಾನೆತ್ತ ನಿನ್ನ ಮಹಿಮೆಗಳೆತ್ತ
ಶ್ರೀಪತಿಯೆ ಶ್ರುತಿತತಿಗಗೋಚರವಯ್ಯ ನಿನ್ನ ಘನತೆ
ಶ್ರೀಪತಿಯೆ ಉನ್ನತ ವೈಕುಂಠಕೇಶವ ಚೆನ್ನರಾಯ

ಏಕತಾಳ

ಶರಣಾಗತ ಪರಿಪಾಲಕನೆಂಬ
ಬಿರುದನು ಕೇಳಿ ನಿನ್ನಯ ಸಿರಿಚರಣವ
ಶರಣುಹೊಕ್ಕೆನು ಎನ್ನಲಿ ಗುಣವರಸದೆ ನಿನ್ನ
ಕರುಣವನೆ ಮೆರೆಯಿಸಯ್ಯ
ಸಿರಿವೈಕುಂಠರಮಣ ವೇಲಾಪುರ–
ದರಸ ಚೆನ್ನಕೇಶವರಾಯ ನಿನ್ನ

ಜತೆ

ಮೂಲೋಕ ಮೋಹನ ಮೂರುತಿ ನಮೋ
ವೇಲಾಪುರದ ಚನ್ನ ವೈಕುಂಠರಮಣ

೧೭

ಹಡಪ ಕಾಳಾಂಜಿ ಚಾಮರ ಛತ್ರ ವ್ಯಜನ ಪಾ
ವಡಗಾಡಿ ವಸಡುಗ ಪಾವುಗೆ ಸುವರ್ಣದರ್ಪಣವಾ ಪ

ಪಿಡಿದ ನಾರಿಯರು ಯಡಬಲದ ಕೈದೀವಿಗೆಯ
ಕೊಡುತ ಕೈಲಾಗಿನವರಡಿಗಳೆಚ್ಚರಿಕೇ ಅ.ಪ

ವೀಣೆ ದಂಡಿಗೆ ತಾಳ ಮೇಳ ಸನಕಾದಿ ಸುರ
ನಾರಿಯರು ಗೀತ ಪ್ರಬಂಧ ನರ್ತನದ ಪು
ರಾಣ ಕೋವಿದರು ಪಾಠಕನಿಕರ ಸಹಿತ ಗೀ
ರ್ವಾಣರ್ಯೆದಿರಲು ಅವಧಾನವೆಚ್ಚರಿಕೇ ೧

ಗಂಧ ಪರಿಮಳ ಪುಷ್ಪ ತಾಂಬೂಲ ಫಲಗಳನು
ತಂದು ಉಡುಗೊರೆಯ ಕಾಣಿಕೆಯಿಟ್ಟು ಜಯವೆನುತ
ನಂದ ಮುಕುಂದ ಗೋವಿಂದ ಕೇಶವಯೆನುತ
ವಂದನೆಗಳನೆ ಮಾಡಿ ನಿಂದರೆಚ್ಚರಿಕೇ ೨

ಭಾಗವತ ಜನರು ಬಿರುದಾವಳಿಯ ಪೊಗಳೆ ಮುನಿ
ಯೋಗಿಗಳು ತತ್ವ ಪ್ರಬಂಧದಧ್ಯಾಪಕರು
ಮೇಘವಾಹನ ಪೂಮಳೆಗರೆಯೆ ಸಕಲ ವಿನಿ
ಯೋಗದವರನು ಕಳುಹುವಾಗಲೆಚ್ಚರಿಕೇ ೩

ಸರಸಿಜೋದ್ಭವನು ದಿಕ್ಪಾಲನಾರದ ಧ್ರುವನು
ಗರುಡ ಗಂಧರ್ವ ವಿದ್ಯಾಧರರು ಅನಿಲಜನು
ಪರಮ ಭಕ್ತಿಯಲಿ ಊಳಿಗಕೆ ಬಂದೈದಾರೆ
ಧರೆಗಧಿಕ ವೈಕುಂಠ ಚನ್ನ ಕೇಶವ ಚಿತ್ತೈಸೋ ೪

೧೮

ಶೃಂಗಾರ ಬೇಕಾಯಿತೆ ಶ್ರೀಕಾಂತ ನಿನಗೆ
ಶೃಂಗಾರವಾರ್ಧಿ ವೇಲಾಪುರದ ಚೆನ್ನಾ ಪ

ಕರದಲ್ಲಿ ದಂಡ ಕೋಲು ಕಮಂಡಲನೀವ
ಪರಿ ಹೇಗೆ ದಾಸಾನುದಾಸನಲ್ಲ
ಇರಲಿಯಂತದುವೆ ಶ್ರೀಧರನೆಂಬ ಪೆಸರು ಬಿ
ಟ್ಟುರದ ಲಕ್ಷ್ಮಿಯನು ಕಡೆಗಿರಿಸು ನೋಡುವೆನೊಮ್ಮೆ ೧

ಎನ್ನ ಬಿನ್ನಪವೊಂದುಂಟು ಕೇಳೆಲೊ ಸ್ವಾಮಿ
ನಿನ್ನ ಬಾಲಬ್ರಹ್ಮಚಾರಿಯೆಂದು
ಸನ್ನುತಿಸುತಿದೆ ವೇದ ಶಾಸ್ತ್ರಾಗಮಗಳೆಲ್ಲ
ಇನ್ನದಕುಪಾಯವೇನಯ್ಯ ಚೆನ್ನಿಗರಾಯ ೨

ಶೃಂಗಾರಗಳನು ತತ್ವಂಗಳನು ಪೇಳುವಡೆ
ಗುಂಗುರುಹಿನೊಳಲ್ಪ ಮನುಜನಲ್ಲ
ಮಂಗಳಾತ್ಮಕನೆ ಆಡಿಸಿದೊಡಾಡುವೆ ಎನಗೆ
ಭಂಗವೇಕಯ್ಯ ವೈಕುಂಠ ಚೆನ್ನಿಗರಾಯ ೩

೧೯

ಸಫಲವಾಯಿತು ಜನುಮ ಸಫಲವಾಯಿತು
ಸಫಲವಾಯಿತೆನ್ನ ಜನುಮ ವಿಭು ಶ್ರೀ ವೈಕುಂಠೇಶನ ಕಂಡೇ ಪ

ಚತುರವೇದ ಸ್ಮೃತಿ ಪುರಾಣ
ತತಿಗಳೊಂದಾಗಿ ನೆರೆದು ತಮ್ಮ
ಮತಿಗಳಿಂದ ನುತಿಸಿ ಮಹಿಮೋ
ನ್ನತಿಯ ಕಾಣದ ಮಹಿಮನ ಕಂಡೇ ೧

ಶಂಖ ಚಕ್ರ ಗದೆ ಪದುಮಾ
ಲಂಕೃತವಾದ ಹಾರ ಕೇಯೂರ
ಕಂಕಣಾಂಗದ ಕಟಕ ಮುಕುಟಾ
ಲಂಕೃತನಾದ ಹರಿಯ ಕಂಡೇ ೨

ಒಂದು ಕರವ ಜಘನದ ಮೇಲೆ ಮ
ತ್ತೊಂದು ಕರವ ತಾನಿದ್ದಯಿರವೆ
ಸಂದೇಹವೇಕೆ ವೈಕುಂಠ
ವೆಂದು ಅಟ್ಟೈಸುವಂದದಿ ಹರಿಯ ಕಂಡೇ ೩

ಲಕುಮಿಗುಣಗಳೆಣಿಪನೆಂದು ಪಿಡಿದು
ಅಕಳಂಕದುಂಗುಟದುಗುರುರೆ ಧ್ಯಾನಿಸಿ
ಪ್ರಕಟಿತವಾದ ಗುಣಗಳನಂತ
ನಿಕರವ ತೋರಿದ ಹರಿಯ ಕಂಡೇ ೪

ತನ್ನ ನಂಬಿದವರನೆಂದು
ಮನ್ನಿಪೆನೆಂಬ ಬಿರಿದ ತೋರ್ಪ
ಚನ್ನ ಶ್ರೀ ರಂಗನಾಥ
ಘನ್ನ ವೈಕುಂಠೇಶನ ಕಂಡೇ ೫

(ಆ) ಮಹಾಲಕ್ಷ್ಮೀ ಸ್ತುತಿಗಳು

೨೦

ಅರಿತು ಸಿಂಗರಮಾಡಿ ಅರಿತು ಸಿಂಗರ ಮಾಡಿ ಪ

ಅರಿತು ಸಿಂಗರಮಾಡಿ ಈ ರಮೆಯ ನೋಡೀ
ಗರುವ ಚೆನ್ನಿಗರಾಯ ಬರುತಿಹನೆ ಬೇಗಾ ಅ.ಪ

ಅಳಿಕುಂತಳೆಗೆ ನೋಡಲಲರ್ದ ಸಂಪಿಗೆ ಯೇಕೆ
ಚೆಲುವ ಜಾಜಿಯ ಕಮ್ಮಲರ ತುರುಬಿರಮ್ಮಾ
ಹೊಳೆವ ಚಂದಿರಮುಖಿಗೆ ವಳಿನವೇತಕೆ ಕೈಗೆ
ಅಲರ್ದ ನೈದಿಲೆ ಕುಸುಮವನೆ ಕೊಡಿರೆಯಮ್ಮಾ ೧

ಕೀರವಾಣಿಗದೇಕೆ ಜವ್ವಾಜಿ ಪರಿಮಳವು
ಚಾರುಕತ್ತುರಿ ಹದನ ಮಾಡಿರಲು ಮುನ್ನಾ
ತೋರ ಕುಚಗಿರಿಗಳಿಗೆ ವಜ್ರಭೂಷಣವೇಕೆ
ಹಾರವಿದೆ ತಂದಿರಿಸಿ ಮಂಜುಳವಿದೆನಿಸೀ ೨

ಲಾವಣ್ಯನಿಧಿಯೀಕೆ ಬೇರೆ ಸಿಂಗರವೇಕೆ
ತೀವಿದಂಗದಕಾಂತಿ ನಯನ ವಿಶ್ರಾಂತೀ
ಶ್ರೀವೇಲಪುರದಲ್ಲಿ ನೆಲಸಿಹ ಕರುಣದಿಂದ
ದೇವ ವೈಕುಂಠಕೇಶವನರಸಿಯೀಕೇ ೩

೨೧*

ಗಾಡಿಯೆತ್ತಲಿಂದ ಬಂದುದೆ ಮಾತ
ನಾಡಲರಿಯದಿಪ್ಪ ಹೊಚ್ಚ ಹೊಸ ಹರೆಯದ ಮುಗುದೆಗೀ ಪ

ಬಳುಕೆ ಸಿಂಹಮಧ್ಯ ಬಟ್ಟಮೊಲೆಗಳು ಮರೆ ತೋರವಾದ
ಬಳವಿ ಮುಡಿಯೊಳಲರು ಹೊಯ್ಯನಿಳೆಯಲುದುರಲು
ಜಲಜಮುಖದಿ ಬೆಮರುದೋರೆ ವಲಯಹಾರ ಉರದಿ
ಘಲಿರು ಘಲಿರೆನೆ ಆವಕಡೆಯು ಕುಲುಕಿ ಕುಲುಕಿ ನಡೆವ ಈ ೧

ಮಿಸುಪ ಮಂದಹಾಸ ಮುಖದಿ ಮುಸಗಿದಂತ ಕಾಂತಲಜ್ಜೆ
ಮುಸುಕೆ ಮಿಸುಪ ಕದಪಿನಲ್ಲಿ ಎಸೆವ ಓಲೆ ಥಾಳಿಸಿ
ಸಸಿನೆ ತಿದ್ದಿ ಉರದಿ ಜರಿಯ ವಸನವನ್ನು ಸಂತವಿಸುತ
ಕುಸುರಿಲಂಗ ದಂದವನ್ನು ಎಸಸಿ ಬಿಡುವ ನಡೆವ ೨

---

* ಇದು ಲಕ್ಷ್ಮೀಶ ಕವಿಯ ಹೆಸರಿನಲ್ಲೂ ಇದೆ.

ಕರವನೊಯ್ಯಗೊಲಿದು ಉರಗಗಿರಿಯ ಮೇಲೆ ಬಾಲಚಂದ್ರ
ನಿರಲು ಸೆರಗ ಮರೆಯಮಾಡಿ ಮರಳಿ ಮರಳಿ ನೋಡುತಾ
ಸ್ಮರನತಾತ ಸುರನಗರದೆರೆಯ ವೈಕುಂಠಲಕ್ಷ್ಮಿಯರಸನೊಡನೆ
ನೆರೆದ ಪರಿಯ ಸಿರಿಯ ಗರುವ ಗಮನದಾ ೩

(ಇ) ಗುರುಸ್ತುತಿಗಳು

೨೨*

[ಅತಿಮಧುರವ]ದನ ಪಂಕೇಜ ದ್ವಿಜರಾಜ ಶ್ರೀ
ಪತಿ ಪದಾಂಬುಜ ಮಧುಕರವಾದಿ ವಾದಿರಾಜಾ ಪ

ಸಾರತರವಹ ವೇದಶಾಸ್ತ್ರದರ್ಥಗಳ [ನೆಲ್ಲ
ಸೋರಿ] ಕ್ಕಿ ತದರ್ಥವನೆಲ್ಲ ಕೆಡಿಸೀ
ಧಾರುಣಿಯ ಜನರಮತಿಗುಂದಿಸುವ ಖಳ ಮತ್ತ
ವಾರಣ ಮೃಗೇಂದ್ರ ಭಳಿರೇ ವಾದಿರಾಜಾ ೧

[ಚರಿತ]ವರ್ಣ ಧರ್ಮಾಶ್ರಯಗಳೆನಿಪ ಯೀ
ಪರಿ ತಾರತಮ್ಯವನೆಲ್ಲ ಕೆಡಿಸೀ
ಧರೆಯ ಸುಜನರ [ಮೋಹಿ]ಸುವ ಶೂನ್ಯ ಜನನಿಕರ
ನಿರು[ತಪಾಲಿಪ] ಭಾಪುರೇ ವಾದಿರಾಜಾ ೨

ಮೃಡಮುಖ್ಯ ಸುರನುತ ಪದಾಂಭೋಜ ನಿಖಿಳ ಜಗ
ದೊಡೆಯ ವೈಕುಂಠ ಲಕ್ಷ್ಮೀ[ಕೇಶವ]
ಉಡುಪಿಯಧಿಪತಿಕೃಷ್ಣನಂಘ್ರಿ ಪಂಕೇರುಹವ
ಪಿಡಿದೆ ದೃಢವಾಗಿ ಮಝರೇ ವಾದಿರಾಜಾ ೩

---

* ಇದು ವಾದಿರಾಜರನ್ನು ಸ್ತುತಿಸಿರುವ ಕೃತಿ.

೨೩*

ಕೊಂಡಾಡಬಹುದೆ ಯತೀಂದ್ರ ಎನ್ನಾ
ಪಾಂಡವಪ್ರಿಯನಾಭಜಕ ವಾದಿರಾಜಯತಿ ಪ

ನಾನಾ ಜನುಮದಾ ಯೋನಿಮುಖದಲಿ ಬಂದು
ಮಾನವಳಿದು ಜ್ಞಾನಶೂನ್ಯನಾಗಿಪ
ಶ್ವಾನಮನದ ಮೂಢಮನುಷ್ಯನಾಗಿ
ಹೀನ ಅಹಂಕಾರಪೂರಿತ ದೋಷಿಯ ೧

ಅರಿಷಡ್ವರ್ಗದೊಳು ಸಿಲುಕಿ ನರಗುರಿಯಾಗಿ
ಪರರವಾರ್ತೆಯ ಸವಿವ ಹಗಲು ಇರಳೂ
ದುರುಳ ದುಶ್ಚೇಷ್ಟಿಕನು ಬಹುದುರಾತ್ಮನು ನಾನು
ಗುರುಹಿರಿಯರಿಗೆ ಎರಗದ ಗೂಢಪಾಪಿಯನು ೨

ಒಡೆಯ ವೈಕುಂಠ ವಿಠಲನ ಭಜಿಸದೆ
ಪೊಡವಿಯೊಳು ಕ್ಷುದ್ರ ದೈವಗಳಿಗೆಲ್ಲ
ಪೊಡಮಡುತಿಹೆ ಸ್ವಾಮಿದ್ರೋಹಿ ಗರುವಿಯಾ
ಕಡುಪಾತಕನ್ನ ನಡತೆಯನು ನೀನರಿಯದಲೇ ೩

೨೪**

ಮಗುವು ಕಾಣಯ್ಯ ಮಾಯದ ಮಗುವು ಕಾಣಯ್ಯ
ಸುಗುಣಾ ವಾದಿರಾಜರೆ ಮೂಜಗವಾನುದರದೊಳಿಟ್ಟ ಪ

ಏಕಾರ್ಣವಾಗಿ ಸಕಲ ಲೋಕವಾಕಾರವಳಿಯಲೂ
ಏಕಮೇವಾದ್ವಿತೀಯವೆಂಬಾಗಮಕೆ ಸಮವಾಗೀ

---

* ಇದು ವಾದಿರಾಜರನ್ನು ಸ್ತುತಿಸಿರುವ ಕೃತಿ.

** ಇದೂ ವಾದಿರಾಜರನ್ನು ಸ್ತುತಿಸಿರುವ ಕೃತಿ. ಈ ಕೀರ್ತನೆಯನ್ನು ಕನಕದಾಸರ ಹೆಸರಿನಲ್ಲಿ ಅನಗತ್ಯವಾಗಿ ಗುರುತಿಸಲಾಗಿದೆ (ಇದರಲ್ಲಿ ಕನಕದಾಸರ ಅಂಕಿತವಿಲ್ಲದಿದ್ದರೂ ಕನಕದಾಸರ ಕೀರ್ತನೆಗಳು – ಕಸಂ ಇಲಾಖೆ). ಇದು ಸ್ಪಷ್ಟವಾಗಿ ವೈಕುಂಠದಾಸರದ್ದು.

ಶ್ರೀಕರಾಂಬುಜದಿಂ ಪಾದಾಂಗುಲಿಯ ಪಿಡಿದು ಬಾಯೊಳಿಟ್ಟು
ಶ್ರೀಕಾಂತ ವಟದೆಲೆಯ ಮೇಲ್ಮಲಗಿ ಬ್ರಹ್ಮನ ಪಡೆದಾ ೧

ಮಾಯಾಪೂತನೀಯ ಕೊಂದು ಕಾಯವ ಕೆಡಹಿ ಶಕಟನನು
ಸಾಯಬಡಿದು ವತ್ಸನ ಧೇನುಕನ ವೃಷಭನ
ನೊಯ್ಯನೊದ್ದು ಯಮಳಾರ್ಜುನರಿಗೆ ಸಾಯುಜ್ಯವನಿತ್ತು ತನ್ನ
ತಾಯಿಗೆ ತಾ ಮಣ್ಣುಮೆದ್ದು ಬಾಯಿ ಬಿಚ್ಚಿ ತೋರಿಸಿದಾ ೨

ಕಡಹದಾ ಮರವನೇರಿ ಸಂಗಡಿಗರೊಂದಿಗೆ ಕಾಳಂದಿಯ
ಮಡುವಲಿ ಧುಮುಕಿ ಕಲಕಿ ಜಲವಾ ಆ ಕಾಳಿಂಗನಾ
ಪೆಡೆಯ ತುಳಿದು ಜಡಿಯಲವನಾ ಮಡದಿಯರು ಬೇಡಿಕೊಳ್ಳೆ
ಕಡಲಿಗಟ್ಟಿ ಬಂದು ಎನ್ನ ತೊಡೆಯ ಮೇಲೆ ಮಂಡಿಸಿದ ೩

ಬಳ್ಳಿಗಟ್ಟದುಡಿಯಲ್ಲಿ ಗುಲ್ಲಿಯ ಚೀಲಾವ ಸಿಕ್ಕಿಸಿ
ಕಲ್ಲಿಗಟ್ಟ್ಯೊಗರ ಕಂಬಳಿಯ ಕೋಲು ತುದಿಯೊಳು
ನಿಲ್ಲಿಸಿ ಹೆಗಲೊಳು ಕೊಂಬು ಕೊಳಲನು ಪಿಡಿದೂದುತ್ತ
ಗೊಲ್ಲರೊಡಗೂಡಿ ಆಡುತೆಲ್ಲ ಗೋವುಗಳ ಕಾಯ್ದಾ ೪

ಶ್ರುತಿತತಿಗಗೋಚರನು ಚುತಿದೂರನಾದಿಮೂರ್ತಿ
ಚತುರ್ಮುಖಾದಿಶೇಷ ದೇವಾರಾಧ್ಯ ದೇವನು
ಕ್ಷಿತಿಗಧಿಕ ಬೇಲಾಪುರದ ಪತಿ ವೈಕುಂಠಕೇಶವನು
ಯತಿಯೆ ನೀ ನೋಡಲು ಶರಣಾಗತನ ತೊಡೆಯೊಳು ೫

೨೫*

ಕೊಡುವುದಿಲ್ಲದೆ ಪೋದ ಕಣ್ಣು ನಾಲಗೆಯಾ ಎ–
ನ್ನೊಡೆಯನಲ್ಲಾನು ಊಳಿಗನಲ್ಲವೆ ಚನ್ನಾ ಪ

ಒಂದೊಂದು ತಪ್ಪುಗಳ ಎಣಿಸಿಕೊಳ್ಳದಿರೋ ಯತಿಯ
ಕೊಂದು ಬಳಲಿಸುತಿರುವುದಿದು ಧರ್ಮವೇ

* ಅಚ್ಚುತದಾಸರನ್ನು ಕುರಿತು (ಅಚಲಾನಂದರ ಶಿಷ್ಯ?)

ಮುಂದೆ ನಂಬುವರಿಗೆ ಅದೃಢವಾಗದಿರು ದೇವ
ಕಂದರ್ಪಪಿತನೆ ಕಮನೀಯಮೂರುತಿಯೆ ೧

ನೋಡುವುದೆಂತೊ ಕಣ್ಣಿಲ್ಲದಿರೆ ನಿನ್ನ ತುತಿ
ಮಾಡುವುದೆಂತೊ ನಾಲಿಗೆಯುಡುಗಲು
ಬೇಡುವುದೆಂತೊ ಕೈವಲ್ಯಂಗನೆಯನು ದಯ
ಮಾಡೆನ್ನ ನಲ್ಲ ದಾಸರೊಳುತ್ತಮೊತ್ತಮ ನೇ ೨

ದಾಸರ ಹೃದಯ ಕಮಲ ಮಧ್ಯದೊಳಾವಾಗ
ವಾಸವಾಗಿಪ್ಪ ಸರ್ವೇಶ್ವರನೇ
ಘಾಸಿಬಡಿಸಲು ಅವರ ನೋವು ನಿನಗಲ್ಲವೇ
ಕೇಶವ ಮುರಾರಿ ಅಚ್ಚುತದಾಸನಿಗೆ ಬೇಗ ೩

ಕೇಳಿದನೆ ನಿನ್ನಿತರ ಹಲವು ಚಿಂತೆಯಲಿ
ತೊಳಲಿ ನೆಲೆಯರಿಯದಜ್ಞಾನಿಯಾಗಿ
ಬಳಲುವತಿಚಂಚಲಗೀ ಮಾರ್ಗವಿರಿಸಿದೇಕೋ
ನಳಿನಾಕ್ಷ ಭಕ್ತವತ್ಸಲ ಕೃಪಾಸಿಂಧೂ ೪

ಶರಣರಕ್ಷಕನೆಂಬ ಬಿರುದಾರದೆಲೆ ದೇವ
ಇರಿಸು ಎಂದಿನವೋಲಚ್ಚುತದಾಸನಾ
ಹರಿಯದಿದ್ದರೆನ್ನ ಕಣ್ಣು ನಾಲಿಗೆಯ ಕಿ
ತ್ತಿರಿಸುವೆನು ಮುಂದೆ ವೈಕುಂಠವಿಠಲ ಚನ್ನಿಗರಮಣ ೫

೨೬*

ಪಾಲಿಪುದು ನಯನಗಳ ನಾಲಿಗೆಯ ನೀನು
ಶ್ರೀಲೋಲ ಸಾರ್ವಭೌಮನೇ ಪ

ನೀಲಮೇಘಶ್ಯಾಮ ಬೇಲಾಪುರಾಧೀಶ
ಶೀಲ ಅಚ್ಚುತದಾಸಗೆ ಸ್ವಾಮಿ ಅ.ಪ

* ಅಚ್ಚುತದಾಸರನ್ನು ಕುರಿತು.

ಪರಮಪದನಾಥ ಇಂದಿರೆಯರಸ ಸಕಲ ನಿ
ರ್ಜರರು ಪೂಜಿಸುವಂಘ್ರಿಯಾ
ಶಿರಿಯನೀಕ್ಷಿಸಿ ಬದುಕಿ ಪದ ನಾಮಾ ಸುಳಾದಿ
[ವರ]ನೇಮದಿಂ ಪಾಡೀ ಆಡೀ
ಮೊರೆಯೊಕ್ಕು ಬದುಕಿ ಆವರಿಸಿಕೊಂಡಗಲದಿಹ
ದುರಿತಭವ ಶರಧಿಯಾ
ಪಿರಿದು ದಾಟುವೆನೆಂದು ಭರದೊಳೈದಿದವಗಾ
ಶ್ಚರ್ಯದಾಪತ್ತಡಸಿತ್ತೇ ಸ್ವಾಮಿ ೧

ಹಿಂದೆ ಮಾಡಿದ ಕರ್ಮವೆಂಬದಕೆ ಜನನವಾದು
ದಿಂದು ಊನನಲ್ಲಾ
ಪೊಂದಲೀ ನಗರವನು ಪೋಗಲಾಕ್ಷಣದಿ ವಾಗ್ಬಂಧವತ್ತವೆರೆಡು
ಮುಂದಕಡಿಯಿಡಲು ಇಂದಿನದೊಲಚ್ಚುತನ ದಾಸ
ನಂದವಳಿದುಬ್ಬಸದೊಳು
ಇಂದು ನೀ ಸಲಹಿದಡೆ ಪೂರ್ವಾರ್ಜಿತ ಕರ್ಮ
ವೃಂದಗಳು ನಿಂದಿರುವವೆ ಸ್ವಾಮಿ ೨

ಮನುಜ ಮಾಡಿದ ಪಾತಕಗಳನು ಎಣಿಸುವಡೆ
ಫಣಿರಾಜಗಳವಡುವುದೇ
ಗುಣ ತರಂಗಿಣಿಯೆ ದುರ್ಗುಣಗಳೆಣಿಸಲು ಶ
ರಣಜನರೊಳೇಂಪುರುಳಿರುವುದೇ
ಚಿನುಮಯನೆ ಭಕ್ತವತ್ಸಲನೆ ಅಚ್ಚುತದ
ಸನವಗುಣಗಳನೀ ಮರೆದು
ಗುಣನಿಧಿಯೆ ಚೈತನ್ಯವಿತ್ತುಳುಹೆ ಬೇಗ ನಾ
ಧನ್ಯನೆಲೊ ವೈಕುಂಠರಮಣಾ ೩

(ಈ) ಆತ್ಮನಿವೇದನಾ ಕೃತಿಗಳು

೨೭

ಅಕಟಕಟ ಬಹಳ ಬಡತನವಡಸಿದುದೆ ನಿನಗೆ
ಅಕಳಂಕ ಚರಿತ ಹರಿಯೆ ಪ

ಪ್ರಕಟತನದಿಂ ಗೋದಾನಕ್ಕೆ ಕೈನೀಡುವರೇ
ಸುಖಮಯ ಶರೀರ ಚನ್ನರಾಯಾ ಅ.ಪ

ಹಿಂದೆ ಯಜ್ಞದಲಿ ಬಲಿಯಿತ್ತ ಭೂದಾನಕ್ಕೆ
ದಂದಿಗೆ ಸಾಲದಾಯಿತೆ
ಅಂದು ಕರ್ಣನು ಕೊಟ್ಟ ದಾನವನು ನೀ ಪಿಡಿದು
ದಂದಿಗೆ ಸಾಲದಾಯಿತೆ
ಇಂದು ನಿನ್ನಯ ದಾಸಾನುದಾಸನು ಕೊಟ್ಟ ಗೋದಾನ
ದೊಂದೊಂದು ಗೋಗಳಿಗೆಛಂದದಲಿ
ಒಂದೊಂದು ಶ್ರೀವೈಷ್ಣವ ರೂಪ ನೀನಾಗಿ
ನಿಂದು ದಾನವ ಕೊಂಡೆಯಾ ಸ್ವಾಮಿ ೧

ಉರದೊಳಗೆ ಅನವರತ ವಾಸವಾಗಿರುತಿಪ್ಪ
ಶರಧಿಸುತೆ ಕೈಬಿಟ್ಟಳೇ
ಬೆರೆತು ಪೋದುದೇ ಪಾಲ್ಗಡಲು ಮುನಿಸಿಕೊಂಡು
ಬರಡಾಯಿತೇ ಕಾಮಧೇನೂ
ತಿರುಕ ಹಾರುವನಂತೆ ಪರಿಪರಿಯ ದಾನಕ್ಕೆ
ಭರದಿ ಕೈ ಒಡ್ಡುತಿಹರೆ
ಪುರುಷೋತ್ತಮನೆಂಬ ಅಭಿಮಾನವಿನಿತಿಲ್ಲದೇ
ದೂರಿಗೊಳಗಾಗಬಹುದೆ ಸ್ವಾಮಿ ೨

ಇತ್ತ ದಾನದ ಗೋವುಗಳನೆಲ್ಲ ಗುಡಿಯೊಳಗೆ
ಮೊತ್ತದಿಂ ಕೂಡಿಕೊಂಡೂ
ಒತ್ತಿ ಮುದ್ರೆಯನು ನಾಮವನಿಟ್ಟು ಬಾಲಗಳಿ
ಗೆತ್ತಿ ಘಂಟೆಗಳ ಕಟ್ಟೀ
ಅರ್ಥಿಯಿಂ ತೋರಿಸಿ ಯೆನ್ನ ಕುಲಕೋಟಿಗಳಿ
ಗಿತ್ತೆ ಸುರಪದವನು
ಕರ್ತೃ ವೈಕುಂಠ ವೇಲಾಪುರಾಧೀಶ್ವರನೇ
ಭೃತ್ಯನ್ನ ಕಾಯೊ ಸತತ ಸ್ವಾಮಿ ೩

೨೮

ಏನುಕಾರಣ ಯೆನಗೆ ತಿಳಿಯದಿದೇಕೋ
ನೀನುದ್ಧರಿಸುವುದಕೋ ಕೆಡಿಸುವುದಕೋ ಕೃಷ್ಣ ಪ

ಸುರರು ಹಬ್ಬವ ಕೆಡಿಸೆ ಸುರಪತಿಯು ಕೋಪದಲಿ
ಭರದಿಂದ ಕಲ್ಲು ಮಳೆಯನು ಕರೆಯಲಾಗ
ಕಿರುವೆರಳ ತುದಿಯಲ್ಲಿ ಗಿರಿಯ ನೀನಾಂತು ಹಗ
ಲಿರುಳೇಳು ದಿನ ಬೋವಿಗಳಂತೆ ಕೊಡೆವಿಡಿದ ೧

ದುರಿತ ಭವ ತಿಮಿರ ಶರಧಿಯದಾಂಟಿಸುವ ವೋಲು
ಸುರಿವ ಮಳೆಗತ್ತಲೆಗೆ ಬೋವಿಯಾಗಿ
ಕರದಲ್ಲಿ ಕೊಡೆ ದೀವಟಿಗೆಯ ಪಿಡಿದೆನ್ನ ಮನೆ
ಪರಿಯಂತ ಕಳುಹಿ ಕ್ಷುಧೆಯಾಯಿತೆಂಬುದೇನು ೨

ಕೊಟ್ಟ ಕಜ್ಜಾಯಂಗಳಿಗೆ ನೀ ಸೆರಗೊಡ್ಡಿ
ಕಟ್ಟಿ ಕೊಂಡೊಯ್ದು ಲಕ್ಷ್ಮಿಯ ಬಳಿಯೊಳು
ಇಟ್ಟರ್ಥವನು ಎನ್ನ ಸಂತತಿಗೆ ನೀಕರುಣಿಸಿದೆ
ಇಷ್ಟರೊಳಗೆ ವೈಕುಂಠಪತಿ ಚೆನ್ನಿಗರಾಯಾ ೩

೨೯

ಒಲವಿಲ್ಲವೆನ್ನಬಹುದೇ ನೀರೆ ನಿನ್ನಲ್ಲಿ
ಚೆಲುವ ವೇಲಾಪುರದ ಚೆನ್ನಿಗನಿರವ ನೋಡಿ ಪ

ತರಳೆ ನಿನ್ನಯ ಮೋಹ ವಿರಹದಿರವದ ಬಗೆಯ
ಸ್ಮರನರಳ ಸರಳುಗಳ ಉರವಣಿಯ ಘನವಾ
ಪರೆಯದಿಂ ಮೋದಕದಿ ಬಿಂದುಗಳು ಮೊಳಗೆ ಕ
ಸ್ತುರಿ ತಿಲಕ ಮಸುಳಿಸಲು ಬಂದ ಗುಣಮಣಿಯೇ ೧

ನೀಲಜೀಮೂತಸನ್ನಿಭದೋರೆದುರುಬಿನ
ಮೇಲೆ ಸುತ್ತಿದ ಬೆಂಮುರಿ ಜಾರೆಗುರುಳೂ
ಭಾಳದಿಂ ಪರೆಯೆ ಕಡುತವಕದಿಂದೆನ್ನ ನುಡಿ
ಗೇಳುತಲೆ ಬಂದನಿದೆ ನೋಡೆ ಗುಣಮಣಿಯೇ ೨

ಸೋಗೆ ಮುಡಿಯಳೆ ನಿನ್ನ ಕಾಂಬೆನೆಂದರ್ಥಿಯಲಿ
ರಾಗ ಮಿಗೆ ವೈಕುಂಠ ವಿಠಲನಾಥ ತಾನಾದ
ಆ ಗರುವ ವೇಲಾಪುರದ ಚೆನ್ನ ಬಂದನಿದೆ
ಬೇಗದಿಂ ನೆರೆದು ಸುಖಿಯಾಗು ಪೆಣ್ಮಣಿಯೆ ೩

೩೦

ಒಲ್ಲೆನೀ ಕವಚ ಕುಂಡಲಗಳನ್ನು
ಒಲ್ಲೆ ನಾನು ಕಿರೀಟ ಪಾದುಕೆಗಳನ್ನು ಪ

ಹಗಲು ಹಾದರಗಿತ್ತಿಯಂತಿಪ್ಪ ಮನುಜನಿಗೆ
ಸೊಗಸುವುದು ಸೊಗಸದೆಂಬರುಹಿಲ್ಲದೇ
ಜಗದುದರ ನಿನ್ನಿಂದ ಶೋಭಿಸುವನರ್ಘ್ಯದ ವ
ಸ್ತುಗಳ ಎನಗೀಯಲೇತಕೆ ಮೆಚ್ಚಿದೆಯೋ ದೇವ ೧

ನೋಡಲೆವೆ ಸೀವುದಿದನಿಟ್ಟು ಕೈಕೊಂಡ ಪ್ರಾಣ
ಗೂಡಿನೊಳಗಿಹುದೇ ಅಕಟಕಟ ಹರಿಯೇ
ಬೇಡವೀ ಮಾಯ ಕೃಪೆಯಿಂದ ಸದ್ಭಕುತಿಯ
ಜೋಡ ತೊಡಿಸಿದನೊಲ್ಲೆ ಕಾಡಬೇಡವೋ ದೇವ ೨

ಶಿರಕೆ ಕರ್ಣಕೆ ಚರಣಗಳಿಗೆ ಕಥೆಯನ್ನು ಪೇ
ಳ್ದಿರಗುವುದನೊಲಿದು ಕುಣಿದಾಡುವುದನು
ಕರುಣಿಪುದು ಕವಚ ಕುಂಡಲ ಕಿರೀಟಗಳನು
ವರ ಪಾದುಕೆಗಳ ನಾನೊಲ್ಲೆ ಹರಿಯೇ ೩

ನಿನ್ನ ದಾಸಾನುದಾಸ ದಾಸರ ಗುಣಾರ್ಣವದೊ
ಳೆನ್ನೊಳೆಳ್ಳನಿತುಂಟೆ ಅಕಟಕಟ ಹರಿಯೇ
ಬನ್ನಬಡಿಸಲು ಬೇಡ ದಕ್ಕದೀಯುಡುಗೊರೆಯು
ಚುನ್ನವಾಡುವರು ಧಾತ್ರಿಯ ಮನುಜರೆಲೆ ದೇವ ೪

ಇದನು ಕೊಡಬೇಕಾದಡೆಯು ಮುಕ್ತ್ಯಾಂಗನೆಯ
ಮದುವೆಯನು ಮಾಡಿ ಯಾಬಳಿಕನಿತ
ವೊದವಿಸುವುದುಚಿತ ಒಪ್ಪಂದವಾಗಿಹುದು
ಚದುರ ವೈಕುಂಠ ವೇಲಾಪುರಾಧೀಶ ೫

೩೧

ಒಲ್ಲೆ ಸಂಪದವನೆಲ್ಲವನು ತೆಗೆದುಕೊ
ಚೆಲ್ವ ವೇಲಾಪುರೀಶಾ ಸ್ವಾಮಿ ಪ

ಬಲ್ಲವರು ನಿನಗೆ ಸರಿಯಿಲ್ಲೆಂದು ಪೊಗಳುತಿಹ
ಸೊಲ್ಲ ನಾ ಕೇಳಲಾರೆ ಸ್ವಾಮಿ ಅ.ಪ

ಪೆತ್ತಯ್ಯ ತಿರುಮಲಾರ್ಯರು ವರ್ಣಕರ ಚಕ್ರ
ವರ್ತಿಯೆಂಬಾ ಬಿರುದನು
ಒತ್ತಿ ಪೊಗಳಿಸಿಕೊಂಡುದೇನಂದದಲಿ ತಿರು

ಗುತ್ತಿರ್ದಡೇನು ಭಾಗ್ಯಾ
ಮತ್ತದೇನಗಾರ್ಜಿತವೆ ಸತ್ತವರ ಸಂಪದವ–
ನತ್ತಲೇ ಕಳುಹಿಕೊಡದೆ
ಇತ್ತಪರೆ ನಿನ್ನ ದಾಸನುದಾಸರಿಗೆ ಸೇ
ವ್ಯೋತ್ತಮನೆ ಕೆಡಿಸಬೇಡಾ ಸ್ವಾಮಿ ೧

ಹರಿಯೆ ನೀ ಒಲಿದೂಳಿಗವನು ಮಾಡಲು ಬಳಿಕ
ಕಿರುನುಡಿಯ ಮೀರದಿರಲು
ಕರುಣದಿಂದಾಗಾಗ್ಯೆ ಕರೆದುಡುಗೊರೆಯ ಕೊಡಲು
ಬಿರುದುಗಳು ಮೆರೆಯುತಿರಲೂ
ಸ್ಥಿರವಿಲ್ಲದಷ್ಟ ಮಹದೈಶ್ವರ್ಯವಿರುತಿರಲು
ಪಿರಿಯರೆಲ್ಲರು ಪೊಗಳಲೂ
ಮೆರೆಯನೇ ಮಿಗೆ ಅಹಂಕರಿಸನೇ ಬೆರೆಯನೇ
ನರಕಕಿಳಿಯನೇ ಮರಳಿ ಜನಿಸನೇ ಸ್ವಾಮಿ ೨

ಸುಖವಿಲ್ಲ ಸುಖವಿಲ್ಲ ಸುಖವಿಲ್ಲ ಭಾಗ್ಯದಾ
ಸಕರೆಯನು ನಾನೊಲ್ಲೆನೂ
ಭಕತವತ್ಸಲನೆ ಭಾಗವತಲೋಲುಪನೆ ದುಃ
ಖಕೆ ಕಾರಣವಿಲ್ಲವೆ
ಅಕಳಂಕ ಚರಿತನೆ ಆದಿನಾರಾಯಣನೆ
ಮಕರಧ್ವಜನ ತಾತನೆ
ಸುಖವೀಯೊ ವೈಕುಂಠ ವೇಲಾಪುರಾಧೀಶ
ಭಕುತಿಯನು ಕೊಟ್ಟು ಸಲಹೊ ಸ್ವಾಮಿ ೩

೩೨

ಕಂಡೆನಯ್ಯ ಚನ್ನಕೇಶವರಾಯನ ವೇಲಾಪುರದರಸನ
ಕಂಡೆ ನಾ ಮಾಡಿದ ಸುಕೃತ ಫಲದಿಂದ ಪ

ಹೇಯ ವಿಷಯದಿ ರಂಗನಾಕನ ಮರೆದ ಪಶುವಾನು
ಹೇಯನಲ್ಲದೆ ನರಕದಲಿ ಬೀಳ್ವವನು ೧

ಕಂಡೆ ಶಂಖ ಚಕ್ರ ಪದುಮಧರನ ಕಿರೀಟ
ಕುಂಡಲಧರನ ಪೀತಾಂಬರಧರನ ೨

ಸುರಸಿಂಧು ಜನನ ಕಾರಣ ಚರಣಕಮಲ ವಿಕಾಸ
ಧರನ ಕರುಣಾಪವರಧರನ ರಂಗನಾಯಕನ ೩

೩೩

ಕಂತುಪಿತ ಕರುಣಾಕರ ನಿನ್ನ
ಚಿಂತೆಯೊಳಗಿರಿಸಿ ಸಲಹಯ್ಯಾ ಜನಾರ್ದನಾ ಪ

ಮಣ್ಣು ಮರ ಕಲ್ಲಿಂದಲಾದಡಂ ವಿರಚಿಸಿದ
ಹೆಣ್ಣು ರೂಪನೆ ಕಂಡು ಮರುಳುಗೊಂಡೂ
ಉಣ್ಣದುರಿಯುವಮನವ ನಿನ್ನಡಿದಳಿರನೆಳಲ
ತಣ್ಣಸದಲಿರಿಸಿ ಸಲಹಯ್ಯ ಜನಾರ್ದನಾ ೧

ಗೋ ವಿಪ್ರ ವಧೆಯಿಂದಲಾದಡಂ ವಿರಚಿಸಿದ
ಲಾವಿಕವೆಂದದನೆ ಬಯಸಿ ಬಯಸೀ
ದೇವ ಮನಕನವರತ ನಿನ್ನ ಪದ ತೀರ್ಥದಾ
ಜೀವನವನಿತ್ತು ಸಲಹಯ್ಯಾ ೨

ಭೂಮಿಯದು ಬುಧದಾನ ಸುರದಾನವಾದಡಂ
ಆ ಮಹಿಯ ತನ್ನತ್ತ ಸೆಳೆವೆನೆಂದೂ
ಕಾಮಿಸುವ ಮನಕೆ ನಿನ್ನಮಲಪಾದಾಂಬುಜವ
ಸೀಮೆಯೊಳಗಿರಿಸು ವೈಕುಂಠ ಜನಾರ್ದನಾ ೩

೩೪

ಸುಳಾದಿ

ಧ್ರುವತಾಳ

ಚತುರಾನನನೇ ಪಂಚವದನನೇ ಭೃಗುವೇ
ಪಿತಭೀಷ್ಮನೇ ಸಹದೇವನೇ ಚರಣಾರಾಧನೆಗೆ ಸ
ನ್ಮತಿಗೈವರೆ ನಿನಗೆ ಬೇಡಿದುದ
ಸಮರ್ಪಿಸುವಡೆತನು ಅಶುಚಿ ನಾನಲ್ಲ
ಮತಿ ಚಂಚಲನು ಅಕಿಂಚನನಬಲನಾ
ನತಿಯಾ[ದ] ವಕ್ರನೂ ವೇಲಾಪುರವರಾಧಿ
ಪತಿ ಚನ್ನರಾಯ ವೈಕುಂಠರಮಣ ೧

ಮಠ್ಯತಾಳ

ಸ್ಮರಿಸಿದಾಗ ಬಂದಾನತನಾಗಿ ವಿಶ್ವೋ
ದರ ನಿನ್ನನು ಕಂಧರದಲಿಧರಿಸೀ
ಹರಿಯೆ ನಿನ್ನಿಂಗಿತದಿರವನರಿತು ಲೋಕಾಂ
ತರದಲಿ ಚರಿಸುವಗರುಡನ ವೋಲ್ ಸೇವಕನೇ
ಸಿರಿ ವೈಕುಂಠಚೆನ್ನರಾಯ ನಿನ್ನ
ಕರುಣವೇ ಯೆನ್ನಹರಣ ದಯಾಪರ ೨

ರೂಪಕತಾಳ

ನಿರುಪಾಧಿಕ ಸೇವಕ ಮರುತಂಜುವೋಲ್
ಧುರದೊಳು ತ್ರೇತಾಯುಗದಲಿ
ವಾರೂಢವಾದಂತೆ ಹರಿಯೇ ನಿನ್ನ [ದಿವ್ಯಾಸ್ತ್ರವನುಬಿ]ಟ್ಟು
ಹರಿಹರಿದಸುರರ ತುಳಿತುಳಿದೊರಸಿದ ವೊಲು ನಾ ಧನ್ಯನೇ
ಪರಮದಯಾಪರ ವೈಕುಂಠರಮಣ ಚೆನ್ನಿಗ ೩

ಝಂಪೆತಾಳ

ರಣರಂಗಭೀಮ ನಿಸ್ಸೀಮ ಮಾರುತಿಯಂತೆ
ಮಣಿಯದವನೇ ಹಲವು ದೈವಂಗಳಿಗೆ ನಾ

ಮಣಿದವನೇ ಹಲವುದೈವಂಗಳಿಗೆ ಒಂದು
ಕ್ಷಣಮಾತ್ರ ನಿನ್ನ ಘನತೆಯ ನೆನದು ಸುಖಿಸದವ
ಗುಣವಂತ ವೈಕುಂಠಚನ್ನಕೇಶವ ನಾನು ೪

ತ್ರಿವಡೆತಾಳ

ಪತಿಯಾಸುತರನು ಮನೆಯ ಮನವಾ
ರತೆಯ ನಾನಾ ಬಂಧು ವರ್ಗವ
ವಿತ್ತಗಳ ನಾನಾಧಾನ್ಯಗಳ ಪಶುಸಂತತಿ
ಯತೃಣವೆಂದೇ ವಿವರ್ಜಿಸಿ
ಗತಿನೀನೇ ಹರಿಯೆಂದು
ಅತಿನಂಬಿದ ಗೋಪಿಯರ ವೋಲು ನಾ ಕೃತಾರ್ಥನೇ
ಮತಿಗೆಡಿಸುವೀಕ್ಷಣ ಪ್ರಯಾಸವ
ಮಾಣಿಸ್ಯೆ ವೈಕುಂಠಚೆನ್ನಿಗಾ ೫

ಅಟ್ಟತಾಳ

ಅತ್ಯುನ್ನತದಲಿಹ ಸಾಕಾರಫಲವ
ನತಿ ಬಯಸಿ ಬಾಯಾರಿದರೆ ನಿಲುಕಲರಿಯದಯ್ಯಾ
[ಮತ್ತದು] ಹೆಳವಂಗೆ ಕೈಗಳ ನೀಡಿ ಬೊಬ್ಬಿಟ್ಟಡೆಯೂ ನೀ
ಶ್ರುತಿತತಿಗಗೋಚರನೇ ನಿನ್ನಾ
ನತಬೇಡುವೆನಗೇಗೈಸಿ ಶರಣಾ
ಗತನ ಸಲಹು ವೈಕುಂಠಕೇಶವ ೬

ಏಕತಾಳ

ಕಪಿ ತನ್ನ ಸತ್ವವನರಿಯದೆ ನಭ
ಕುಪ್ಪರಿಸುವೆನೆಂದುದ್ಯೋಗಿಸುವೊಲು
ವೊಪ್ಪವಲ್ಲವೆ ನಿನ್ನುಡಿಗಳಿಂದ (?)
ಅಪ್ರತಿಮ ಕೈವಾರಿಸಬಗೆಯೇನು ವೊ

ತಪ್ಪಿ[?]ಹೊಂದು ಸಾಸಿರ ಕೋಟಿಯ ಮೇಲೆ
ಸರ್ಪಶಯನ ವೈಕುಂಠಚೆನ್ನಿಗಾ ೭

ಜತೆ

ಶರಣು ಶರಣು ವೇಲಾಪುರಾವಾಸ
ಶರಣು ಶರಣು ವೈಕುಂಠನಿವಾಸಾ ಶರ

೨೫

ಸುಳಾದಿ

ಧ್ರುವತಾಳ

ಜನನರಹಿತ ಹರಿಶರಣೆನ್ನೆ ಭವಬಂ
ಧನ ಹರಿವನಚ್ಚರಿಯದಲ್ಲವೇ
ಅನುಪಮ ಮುಕುಂದ ಶರಣೆನ್ನೆ ಸದ್ಗತಿ
ಯನು ಕೊಡುತಿಹನಚ್ಚರಿಯದಲ್ಲವೇ
ಅನಂತ ಶ್ರೀಪತಿ ಶರಣೆನ್ನೆ ಸಂಪದ
ವನು ಕೊಡುತಿಹನಚ್ಚರಿಯದಲ್ಲವೇ
ನೆನೆದ ಮಾತ್ರದಿ ಕಾಮಿತ ಫಲವಾ
ಅನಿಮಿಷರೊಳಗದಾವನೀವ
ಸನಕಾಧಿಪನುತ ಶ್ರೀ ಚೆನ್ನಕೇಶವ
ಘನ ಮಹಿಮ ವೈಕುಂಠ [ಚೆನ್ನಿಗಾ] ೧

ಮಠ್ಯತಾಳ

ಘನವಾತಾತಪ ವರ್ಷಾನೇಕವನಾಶ್ರಯನೆಂ
ದೆನಿಪ ಈ ದೇಹವ ದಂಡಿಸಿ ನೆರೆ ಭಜಿಸಲು ಬಂದು
ಕ್ಷಣಮಾತ್ರದಿ ಕೊಡುವರಲ್ಲದೇ ಅಮರರು
ಅನಂತವಾದ ಸುಖವನೀವ ಸಮರ್ಥರೇ

ನೆನೆದ ಮಾತ್ರದಿ ಪರಮಪದವಿಯನೇ ಕರುಣಿಪ
ಅನುಪಮದಾನಿ ವೈಕುಂಠಚನ್ನಿಗಾ ೨

ರೂಪಕತಾಳ

ಒಮ್ಮೆ ನೆನೆದನಜಮಿಳ ಒಮ್ಮೆ ನೆನೆದ ಕರಿವರ
ಸತುಕರ್ಮವನೇಂಗೈದರು ತಪವ ಹೇಳು
ತಮ್ಮ ಸಂಕಟಕೆ ಕರೆಯಲು
ಸ್ವಾಮಿ ನಮ್ಮವರೆಂದುದ್ಧರಿಸಿದ
ಸುಮ್ಮನೆ ಪರಮದಯಾಪರ ಅನಾಥಬಾಂಧವ ಕೃಷ್ಣನ
ಒಮ್ಮೆ ಚನ್ನಕೇಶವ ವೈಕುಂಠರಮಣ ಪರ
ಬೊಮ್ಮ ಎಂದರೆ ಸಾಲದೆ ಮುಕುತಿಗೆ ೩

ಝುಂಪೆತಾಳ

ತಾನೊಂದ ಬಯಸಿ ಸಲಹುವನಲ್ಲ ಜೀವರಿಗೆ
ಏನನೀಯಲಿಯದೇ ಸುಖವಕೊಲುವವನಲ್ಲ
ಶ್ರೀನಾಥ ನಿತ್ಯಪರಮಾನಂದರೂಪ ಸು
ಜ್ಞಾನನಿಧಿ ಕೃಷ್ಣನಚ್ಯುತನನಘಚರಿತ್ರ
ಜ್ಞಾನ ಭಕುತಿಯನೆರಡನೋಡುವನು ಜಗದೇಕ
ದಾನಿ ವೈಕುಂಠಚೆನ್ನಿಗ ನೋಡ ಬೇರೊಂದ ೪

ತ್ರಿವಡೆತಾಳ

ಮನುಜಮಾಡುವ ಪಾತಕಂಗಳನೆಣಿಸುವಡೇ ಫಣಿರಾಜನಳವೇ
ಮನವವಂಚಿಪೆಯೇಕೆ ಪ್ರಾಯಶ್ಚಿತ್ತಕೆ ಹೇಮಾದ್ರಿ ತಾನಾಗಿ
ಇನನಾಗಿ ದುರಿತಾಂಧಕಾರಕೆ ವಿನತೆಯಾತ್ಮಜನಾಗಿ ಪಾತಕ
ವೆನಿಪ ಸರ್ಪಕೆ ಕೃಷ್ಣನಿರಲಾತನ ಚರಣಗಳನೆ ಭಜಿಸಿರೋ
ಅನಧಿಕಾರಿಗಳನು ಮೋಹಿಸಿ ಮನುಜನೆಂದೆನಿಸಿ ತೋರಿಸಿ
ನೆನೆಯಲೀಯನು ಶ್ರೀಪಾದವನಜಗಳನು ವೈಕುಂಠಚೆನ್ನಿಗ ೫

ಅಟ್ಟತಾಳ

ದೇವರಂಗದಲಿ ವೇದಂಗಳುಸುರಲಿ ತೀ
ರ್ಥಾವಳಿ ಹರಿಪಾದಕಮಲದೊಳಡಗಿಹವು ಅ
ದಾವಂಗೀ ಮಹಿಮೆಯುಂಟು
ದಿವಿಜಾವಳಿ ಹರಿನೀನೆ ಗತಿ ಶರಣೆನುತಿಹುದಾ
ಶ್ರೀವೈಕುಂಠರಮಣ ಕೇಶವ ಸರ್ವ
ದೇವತಾರಾಧ್ಯನೆಂಬುದ ಜಗವರಿಯದೇ
ಆವಂಗೀ ಮಹಿಮೆಯುಂಟೂ ೬

ಏಕತಾಳ

ಭೂವ್ಯೋಮಗಳಂಘ್ರಿಗಳೊಳಗಿರ್ದೆಂದು (?)
ದೇವರು ಮನುಮುನಿಗಳಸುರಾಸು
ರಾವಳಿಯಡಗಿದರ್ಕೈ ರಾ
ಜೀವನಯನ ಪದಕಮಲದೊಳಲ್ಲದೆಯೂ
ಶ್ರೀವೈಕುಂಠಕೇಶವ ಭುವ
ನಾವಳಿಯು[ದ]ಯ ಸ್ಥಿತಿ ಲಯಕಾರಣ ೭

ಜತೆ

ವೇಲಾಪುರಪತಿ ಕೇಶವನೇ ಸುರ
ಪಾಲಕ ವೈಕುಂಠರಮಣನೆಂದೆಯಾ

೩೬

ನೀನೇ ದಯಾಸಂಪನ್ನ ಭಕ್ತ ಪ್ರಸನ್ನಾ ಪ

ಕಂದನಿನ್ನಯ ದಿವ್ಯಾನಂದ ಮೂರುತಿಯ ನಾ
ಕುಂದದೇ ಭಜಿಸಲು ಮರುಗಿ ಬೇಗಾ
ಇಂದಿರೇ ಅಜಭವರೆಂದೂ ಕಾಣದ ನಿಜ
ವೆಂದೆಂಬೋ ರಾಜ್ಯದೊಳಿದ್ದ ಕಾರಣದಿಂದ ೧

ಹರಿಸರ್ವೋತ್ತಮನೆಂದು ಪಿತನಾಜ್ಞೆಯ ಮೀರಲು
ಹರಿರೂಪತಾಳ್ದು ದೈತ್ಯನ ಶಿರವಾ
ಹರಿದು ಬಾಲನನೆತ್ತಿ ಸಲಹಿದ ಬಗೆಯಿಂದ
ಕರುಣಾಕರನೆಂದು ಶ್ರುತಿಯು ಪೇಳುತ್ತಿರಲೂ ೨

ಪಾತಕದಿಂದ ಗೌತಮಸತಿ ಶಿಲೆಯಾಗೆ
ಭೂತಳದೊಳು ಪರಬೊಮ್ಮನೆಂಬೋ
ಸೀತಾರಾಮಾವತಾರರಿಂದ ಸೌಂದರ್ಯ
ನೂತನಪದ ಸೋಕಲು ನಿಜಸತಿಯಾದಳೋ ೩

ಗುರುತನೂಜನ ಮಂತ್ರಶಕ್ತಿ ವೇದನೆ ತಡೆದೆ
ಹರಿಯೆಂದು ಕರೆದ ಉತ್ತರೆಗೆ ಬೇಗಾ
ವರಚಕ್ರವನು ಮರೆಮಾಡಿ ಪರೀಕ್ಷಿತನ
ಪೊರೆಯೆ ತ್ರಿಜಗದೊಳು ಕೀರ್ತಿಯಾಹುದರಿಂದ ೪

ಹರನಿಂದ ಉರಿಯ ಹಸ್ತವ ಪಡೆದು ಭಸ್ಮಾ
ಸುರನು ಫಾಲಕ್ಷನ ಖತಿಗೊಳಿಸೆ
ಸಿರಿವೇಲಾಪುರ ಚನ್ನಕೇಶವನಾವೇಶದಿಂ
ಪರಿದಸುರನ ಕೊಂದು ಸ್ಥಿರವಾದಕಾರಣ ೫

೩೭

ನೀನೇ ಶ್ರಾದ್ಧದನ್ನವನುಂಡವಾ
ನಾನರಿಯದಂತೆ ಯೆನ್ನ ಗೃಹದೊಳು ಶ್ರೀವೈಷ್ಣವನಾಗಿ ಪ

ಬಾಣಸಿಗಾದವರು ನೀನೋ ನಾರಾಯಣಿಯೋ
ಕ್ಷೋಣಿಯೊ ರವಿಯೋ ಜಾಹ್ನವಿಯೊ ರತಿಯೋ
ವಾಣಿಯೋ ಸುರಧೇನುವೋ ಬಂದಾತಧನಂಜಯನೂ
ತಾನೆ ಎನ್ನ ಆದ್ದಾಗಾಯ ತೆಲೆದೇವಾ ೧

ತಿಳಿದೆ ನಾನೀಗ ನಿನ್ನನು ಕೂಡೆ ಬಂದಿರ್ದ್ದ
ಬಿಳಿಯ ಚುಟ್ಟಿನ ಯೆಣ್ಣೆಗೆಂಪಿನವನೂ
ಕುಳಿತವನು ಕೈಯಪುಸ್ತುಕದವನು ಕಂಕುಳೊಳ
ಗಿಳಿದ ಮಡಿಗಡೆಯವರಾರು ಪೇಳೆಲೆ ದೇವಾ ೨

ಆವಾವ ಸ್ಥಾನಕಾರಾರ ನೇಮಿಸಿದೆ ನೀ
ನಾವಸ್ಥಾನಕೆ ಪೂಜ್ಯನಾದ
ದೇವಾ ಉಪಾಧ್ಯರಾರಭಿಶ್ರವಣವನು ಪೇಳ್ದ
ಕೋವಿದರಾರು ಶ್ರೀವೈಷ್ಣವರಾರೆಲೆದೇವ ೩

ಜನನ ಸ್ಥಿತಿಲಯಕೆ ಕಾರಣಭೂತನೋರ್ವ ನೀ
ನೆನುತ ವೇದಾಂತಗಳು ಪೊಗಳುತಿರಲೂ
ಇನಿತಕ್ಕೆ ಯೆಂದನ್ನದಗಳು ಕುಡಿತೇಪಾಲ್ಗೇ
ಮನವ ಸೋತುದ ಬಿಡುವೆಯಾ ನಿತ್ಯತೃಪ್ತಾ ೪

ಗುರುಗಳಂದದಲಿ ಶ್ರೀವೈಷ್ಣವ ನೀನಾಗಿ
ಶರಣನಾ ಪಿತೃಗಳಿಗೇ ಶ್ರಾದ್ಧವನುಂಡುದದೂ
ಪಿರಿಯದಾಯ್ತು ಎನ್ನ ನೂರೊಂದು ಕುಲಕೆಲ್ಲಾ
ಪರಮಪದವಾಯ್ತು ವೈಕುಂಠಚೆನ್ನಿಗರಾಯಾ ೫

೩೮

ನೊಂದೆ ನಾನಾವಿಧದಲೀ ಬಂದ ಜನ್ಮಾವಧಿಯಲಿ
ತಂದೆ ತಾಯಿ ಬಂಧು ಬಳಗ ಎಲ್ಲರೂ ನೀನೇ ಪ

ಮಂದರಧರನೇ ಬೇಲೂರ ಚೆನ್ನಿಗರಾಯ
ಹಿಂದಿಟ್ಟುಕೊ ಮುರಹರ ಸ್ವಾಮೀ ಅ.ಪ

ಕುಕ್ಷಿಯೊಳೀರೇಳು ಲೋಕವನು ತಾಳ್ದನೇ
ಪಕ್ಷಿವಾಹನಮೂರ್ತಿ ಮತ್ಸ್ಯಾವತಾರನೇ
ಅಕ್ಷಯಾಗೆಂದು ದ್ರೌಪದಿಯ ಅಭಿಮಾನವನು
ರಕ್ಷಿಸಿದ ಕೃಷ್ಣ ನೀನೆ ಸ್ವಾಮಿ ೧

ಚಿಕ್ಕಂದು ಮೊದಲು ನಿನ್ನನು ನೆನೆವ ಬಾಲಕನಾ
ಕಕ್ಕಸದ ಬಾಧೆಯಲಿ ಮೂದಲಿಪ ಹಿರಣ್ಯಕನಾ
ಸೊಕ್ಕುಗಳ ಮುರಿದವನ ಕರುಳ ಮಾಲೆಯನಿಟ್ಟ
ಬಕ್ತವತ್ಸಲನು ನೀನೇ ಸ್ವಾಮಿ ೨

ಕರಿಕಂಠ ಹರನು ದಾನವನ ತಪಸಿಗೆ ಮೆಚ್ಚಿ
ಅರಿತು ಅರಿಯದ ತೆರದಿ ಉರಿಹಸ್ತವನು ಕೊಡಲು
ತರುಣಿ ರೂಪಿಲಿ ಪರಿಹರಿಸಿ ಭಸ್ಮಾಸುರನಾ
[ಉರಿಸಿ]ಗೆಲಿದ ದೇವರದೇವಾ ಸ್ವಾಮಿ ೩

ಅಂದು ಮರೆಹೊಕ್ಕ ವಿಭೀಷಣಗೆ ರಾಜ್ಯವನು
ಸಂದೇಹವಿಲ್ಲದಂದದಲಿ ಪಾಲಿಸಿ ನರನಾ
ಮುಂದೆ ಸಾರಥಿಯಾಗಿ ರಥವ ನಡಸಿದ ಗೋ
ವಿಂದ ಸಲಹಯ್ಯ ಯೆನ್ನನೂ [ಸ್ವಾಮಿ] ೪

ದೇಶದೇಶದೊಳತ್ಯಧಿಕ ಕಾಶಿಗಿಂ ಮಿಗಿಲು
ಭೂಸ್ವರ್ಗವೆನಿಪ ವೇಲಾಪುರವಾಸಾ
ಕೇಶವ ಶ್ರೀವೈಕುಂಠ ಚೆನ್ನಿಗರಾಯಾ
ಶೇಷಶಯನನೇ ಕರುಣಿಸೈ ಸ್ವಾಮೀ ೫

೩೯*

ಪಾಪಾತ್ಮನಾನಲ್ಲ ಪಾಪವೆನಗಿನಿತಿಲ್ಲ
ಶ್ರೀಪತಿಯೆ ನಿನಗೆ ನೀನೇ ಮಾಡಿಕೊಂಡೆ ಪ

ಅಂದು ಭೃಗುಮುನಿಯೆದೆಯಲೊದೆಯಲವನಿಗೆ ಪಾಪ
ಬಂದುದೇ ಮೂದಲಿಸಿ ಬೈದವನಿಗಾ ದೋಷವು
ನಿಂದುದೇ ಹಣೆಯೊಡೆಯಲೆಸೆದ ಭೀಷ್ಮಂಗಘವು
ಹೊಂದೀತೆ ಪಾಂಡವರ್ಗೆ ಕುಂದು ಬಂದೀತೆ ದೇವಾ ೧

* ಈ ಕೃತಿ ಕನಕದಾಸರ ಅಂಕಿತದಲ್ಲೂ ದೊರೆಯುತ್ತದೆಯಾದರೂ ಇದು ವೈಕುಂಠದಾಸರದ್ದೇ. ಇಲ್ಲಿಯೂ ಕನಕದಾಸರ ಅಂಕಿತ ಸ್ಪಷ್ಟವಾಗಿಲ್ಲ.

ವರದನಾಕಾರದೊಳಗುಷ್ಣಜಲ ಮೃತ್ತಿಕೆಯ
ತರಲು ಕೈಸುಡಲು ಹಣೆಯನು ಟೊಣದು ಬೈದೇ
ಮರಳಿ ನಾಚಿಕೆಯಿಲ್ಲದೆ ಚರಣಕ್ಕೆ ಪಾವುಗೆಯ
ನಿರಿಸಿದಪರಾಧ ನಿನ್ನದೋ ಯೆನ್ನದೋ ದೇವಾ ೨

ಕುರುಡನಿಗೆ ದಾರಿಯನು ತೋರುವಾಪ್ತನು ಮುಳಿದು
ಜರಿದು ನೂಕಿದೊಡಾತನೇನ ಮಾಡುವನೂ
ಗುರಿಯನಿಡುವವನು ತಪ್ಪೆಸೆಯೆ ಸರಳಿನದೇನು
ಅರಸಾಳಕೊಂದಡವನೇನು ಮಾಡುವನೂ ೩

ಕುಣಿಸಿದಂತಾಡುವುದು ಬೊಂಬೆಯು ಸ್ವತಂತ್ರವದ
ಕಿನಿತುಂಟೆ ಕಪಟನಾಟಕ ಸೂತ್ರಧಾರೀ
ಎನಿತಾಡಿಸಿದೊಡಾಡುವೆನು ಪಾಪಪುಣ್ಯವೆಂ
ಬೆಣಿಕೆಗಾನಲ್ಲ ನೀನಲ್ಲದೆಲೆ ದೇವಾ ೪

ತಂದೆ ತಾಯ್ಗಳು ತಮ್ಮ ಕಂದನನು ಸರ್ಪಮುಖ
ದಿಂದ ಕಚ್ಚಿಸಲು ತರಳನಲಿ ತಪ್ಪೇನೂ
ಮುಂದರಿಯದಜ್ಞಾನಿಯೆಂದು ನೀಕ್ಷಮಿಸಿಕೋ
ತಂದೆ ವೈಕುಂಠ ವೇಲಾಪುರಾಧೀಶಾ ೫

೪೦

ಪೆಂಡಿರಿಬ್ಬರನಾಳ್ವಗುಂಟೆ ಸುಖ ಕರುಣಿಸೈ
ಪುಂಡರೀಕಾಕ್ಷ ತವ ಭಕ್ತಿವಧು ಒಬ್ಬಳನೆ ಪ

ನರ ಬಾ ನೀ ಯೆಂದೆಳೆವಳಾಸೆ ಹೃದಯೇಶನಂ
ಬರಸೆಳೆವಳಾ ಲಜ್ಜೆ ತನ್ನ ಕಡೆಗೆ
ಹರಿಹರಿ ಡೋಲಾಯಮಾನವಾದುದು ಚಿತ್ತ
ಸ್ಥಿರವ ಕರುಣಿಸು ಲಕ್ಷ್ಮಿಯರಸ ಶ್ರೀಕೃಷ್ಣಾ ೧

ನಾಲಿಗೆಗೆ ದೈನ್ಯಮಂ ತಹಳಾಶೆ ಆ ಲಜ್ಜೆ
ತಾಳಿಗೆಯನೊಣಗಿಸೀ ನುಡಿಯಲೀಯಳೋ
ಪೇಳಲೇನುಭಯಸಂಕಟ ಸೀಗೆಯೊಳಗಿರ್ದ
ಬಾಳೆಯಾದುದು ಚಿತ್ತ ಪರಿಹರಿಸು ಕೃಷ್ಣಾ ೨

ಆಶೆಯಾ ಸವತಿಯಂ ಕೆಡಿಸಬಗೆವಳು ಲಜ್ಜೆ
ಆ ಸವತಿಯಂ ಕೆಡಿಸಬಗೆವಳೆಂತೊ
ಗಾಸಿಯಾದುದು ಚಿತ್ತವಿಬ್ಬರಿಂ ವೈಕುಂಠ
ಕೇಶವಾ ಮನದ ಸಂಸಾರವಂ ಬಿಡಿಸಯ್ಯ ೩

೪೧

ಪ್ರಾಯಶ್ಚಿತ್ತವೇನುಂಟದಂ ಮಾಡು ಯೆನಗೇ ಶೇಷ
ಶಾಯಿಯೆ ನಾ ಕಾಣದೇ ಮಾಡಿದ ದುಷ್ಕರ್ಮಂಗಳಿಗೆ ಪ

ತಿರುಮಲೆಯಂತೆ ನಾ ಮಂಚದುರುಗನಿಂಬುಗೊಂಡು ಕ
ರ್ಪೂರದ ವೀಳಯದ ಮಡುಪುಗಳನೇ ಕೊಟ್ಟು
ಮರಳಿ ನಿದ್ರೆಯ ಮಾಡುವಾ ಪರಿಯಂತ ಕಾಲನೊತ್ತುತ
ಲಿರುತಿರ್ದು ಪರಿದು ಎನ್ನ ನೆರೆಪಾತಕನಾಗಿ ಮಾಡಿದುದಕೇ ೧

ಕಡಲಶಯನ[ನ]ನೇಕ ಕೋಟಿ ಕಮಲಭವಾಂಡ
ಕೊಡೆಯನೆ ಕಾಮಪಿತನೇ ಸರ್ವೋತ್ತಮನೇ ನಾ
ಕುಡಿದು ಮಿಕ್ಕ ಹಾಲ ನೀ ಕುಡಿದು ಯೆನ್ನಾ ಪಾಪದೊಳು
ಕೆಡಹಿ ಬಹಳ ಯಾತನೆ ಬಡಿಸೀ ಕೆಡಿಸಿದುದಕೇ ೨

ಗುರುಶಿಷ್ಯರುಗಳು ಸ್ವಾಮಿ ಭೃತ್ಯರುಗಳು ದಂಪತಿಗಳೆಂಬೀ
ಪರಿಯ ತಾರತಮ್ಯಂಗಳೊಂದಿಲ್ಲವೇ ಹರೀ
ಶರಣವತ್ಸಲನೇ ವೇಲಾಪುರದ ವೈಕುಂಠಕೇಶವ
ನರನ ಪಾಮರನ ದುರಿತಶರಧಿಯ ದಾಂಟಿಸುವುದಕೇ ೩

೪೨*

ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ
ಕೂಗಿಡುವ ಧ್ವನಿಯು ಕೇಳುವುದಿಲ್ಲವೇ ನಿನಗೆ ಪ

ಪರಮಪದದೊಳಗೆ ವಿಷಧರನ ತಲ್ಪದೊಳು ಇಂ
ದಿರೆಯರಸಿ ಹರುಷವಾರಿಧಿಯೊಳಿರಲೂ
ಕರಿ ಗುಪ್ತಕಂಠಧ್ವನಿಯಿಂದಾದಿಮೂಲವೆಂದೊದರೆ ಆಕ್ಷಣ
ಕರಿಯ ಕಾಯ್ದೆ ಜಗವರಿಯೆ ೧

ಕಡುಮುನಿಸಿನಿಂ ಖಳನು ಖಡ್ಗವನು ಪಿಡಿದು ನಿ
ನ್ನೊಡೆಯರಾರೆಂದು ತೋರೆನುತ ಬಡಿಯೆ
ದೃಢಭಕುತ ಶಿಶುವು ಕಂಗೆಡದೆ ನಿನ್ನನು ಕರೆಯೆ
ಘುಡಿಘುಡಿಸಿಕಂಬದಿಂದೊಡೆದು ಮೂಡಿದೆ ಹರಿಯೆ ೨

ಯಮಸುತನರಾಣಿಗಕ್ಷಯ ವಸ್ತ್ರವನಿತ್ತು
ಕ್ರಮದಿಂದ ಅಜಮಿಳನ ಪೊರದೆ ಅಂದೂ
ಸಮಯಾಸಮಯ ಉಂಟೆ ಭಕುತವತ್ಸಲ ನಿನಗೆ
ಕಮಲಾಕ್ಷ ವೈಕುಂಠಚನ್ನಕೇಶವ ಬೇಗ ೩

೪೩

ಮದಕರಿಯ ಕವಳವಾದೆನೆಲೆ ದೇವ
ಮದನಪಿತನುಳುಹದಿರೆ ಗತಿ ಯಾರು ಎನಗೆ ಪ

ಉತ್ತಮಸುಧನ್ವ ಧ್ರುವ ವಿಭೀಷಣನು ಮೊದಲಾಗಿ
ಪೃಥ್ವಿಯೊಳು ನೀ ಸಲಹಿದವರನನವರತ
ಮತ್ತೆ ನಾನಿಂದು ಗಜದೊಡನೆ ಕಂಗೆಡುತಿರೆ ವಿ
ಪತ್ತಕಡೆಗಾಣಿಸಲಶಕ್ಯವೇನಯ್ಯಾ ೧

* ಕನಕದಾಸರ ಹೆಸರಿನಲ್ಲೂ ಈ ಕೃತಿಯಿದೆ.

ದುರುಳಖಳ ಪ್ರಹ್ಲಾದನನಲೆಬಡಿಸುತಿರಲದನು
ಪರಿಹರಿಸಲೆಲ್ಲಿಂದ ಬಂದೊದಗಿದೆ
ಮೊರೆ ಇಡಲು ಕರಿಯ ಧ್ವನಿ ನಿನಗೆಂತು ಕೇಳಿತು
ಶರಣಜನಬಂಧುವೇ ಬಂಧನವ ಪರಿಹರಿಸೋ ೨

ಆದೊಡೇನಾಯ್ತು ನಿನ್ನಂಘ್ರಿನಂಬಿರಲು
ನೀದಯದಿ ನಿನ್ನೊಳಿಂಬಿಡುವ ನೆವದೀ
ಮಾಧವನೆ ಗಜವಾಗಿ ಬಂದೊದಗಿದೆಯೋ
ನಾಧನ್ಯ ವೈಕುಂಠಪತಿ ಚೆನ್ನರಾಯ ೩

೪೪

ಮರೆದೆಯೇನೋ ಚನ್ನರಾಯಾ ಒಮ್ಮೆ
ಅರಿ ನೀನೆ ವೇಲಾಪುರಿ ಶ್ರೀ ಚನ್ನರಾಯಾ ಪ

ಪೊಳೆವ ನಂದನವನದಲಲರ್ದ ಮಾವಿನ ನೆಳಲ
ಲಲರುವಾ ಸಿರಿತೋಳ ತಲೆಗಿಂಬನೊರಗೀ
ಅಳಿಯ ಮೃದುಗಾನಕ್ಕೆ ತಲೆದೂಗುತಲೆ ನುಡಿದ
ವಿಲಸಿತದ ಸರಸ ವಚನವ ಚೆನ್ನರಾಯಾ ೧

ಬೆಳದಿಂಗಳೆರಕದಂದದ ಸಾರದ್ವಂದರದಿ
ಪೊಳೆವಿಂದುಕಾಂತದ ಜಗುಲಿಯೊಳೆನ್ನ
ತಲೆಯ ಮಗ್ಗಲನೊರಗಿ ಸುಳಿವೆಲರಗಾಳಿಗಂಜಿಸುತ
ಕಲೆಯರಿತು ಮೈಮರಸಿದುದ ಚನ್ನರಾಯಾ ೨

ತನುಮಿಸುಕೆ ಬಹುವಿಧದಿ ಧ್ವನಿಗೈವ ಶಕುನಿ ಪೆಸ–
ರಿನ ಮಂಚದಲಿ ಹಂಸತೂಲ ತಲ್ಪದಲಿ
ಮನಸಿಜಾಗಮವರಿತು ಮನವ ಮೆಚ್ಚಿಸಿದೆ ಎ–
ನ್ನಿನಿಯ ಶ್ರೀ ವೈಕುಂಠಪತಿ ಚೆನ್ನರಾಯಾ ೩

೪೫

ವರದ ನಿನ್ನ ರೂಪ ಶ್ರೀ ನಿರುತ ನೋಡುವರೆ ಶ್ರೀ
ಸರಸಿಜಭವ ಸಕಲ ಪ

ಸುರರು ಮನುಗಳು ಮುನೀಶ್ವರರು ಶ್ರುತಿತತಿ
ಯರು ದಿಗ್ವರರು ತಾರ್ಕ್ಷ್ಯಕನ ಮತ[ದವರು] ಅ.ಪ

ಪರಭಕ್ತರಿಗೆ ದುಸ್ತರವಾದೊಡೆಯು ಕಾಡುವರಿಷಡ್ವರ್ಗವನೂ
ತೊರೆದು ಹೃದಯದಿ ತೀರ್ಥ ಚರಣಾರವಿಂದಗಳಿಂ
ದರಿವೆವೆಂದಡೆ ಅಗೋಚರನಾಗಿ ಸಿಲುಕದಿಹ ವಿಶ್ವರೂಪವ
ನಿರಿಸಿ ಪೂಜಾತಪವನುರೆ ಚರಿಸಿ ವ್ರತಗಳಿಂ ೧

ಧರೆಯನಳೆದಂಗವೇನಯ್ಯ ಅಂದು
ನರನಿಂಗೆ ತೋರಿದುದೆ ಜೀಯಾ
ಶರಣರುಗಳೊದೆಯುವ ಕಾಯಾ ನಿನ್ನ
ನಿರುಗೆಯನು ತೋರಿಸಲು ಒಡೆಯ ಕಾಣ ೨

ಅರಿಯಬರುವುದಿಲ್ಲೀ ಚಿತ್ರಮಯ ಅಲ್ಪ
ನರನರಿತರಿಯದವನು ನೆಲೆಯಾ ನೋಡ
ಲರಿಯೆ ಭಯವಾಗುತಿದೆ ಮಾಯಾ ವೇಲಾ
ಪುರಿವಾಸ ವೈಕುಂಠ ಚೆನ್ನಕೇಶವರಾಯಾ ३

೪೬

ಶ್ರೀರಂಗ ಯಾತ್ರೆಯನು ಮಾಡಿಬಾರೆಂದೆನ್ನ
ಈ ರೀತಿಯನುವ ಮಾಡಿದೆಯ ಸ್ವಾಮಿ ಪ

ಕಾರುಣ್ಯನಿಧಿಯೆ ವೇಲಾಪುರಾಧೀಶ್ವರನೆ
ಆರುಣ್ಯದೊಳು ಕೆಡಹಿದೆಯ ಸ್ವಾಮಿ ಅ.ಪ

ದಾರಿಯನು ತೋರಲ್ಕೆತಂದ ಶ್ರೀವೈಷ್ಣವನು
ಸೇರಿಸಿದ ನೀಯಡವಿಯಸ್ವಾಮಿ
ಕಾರುಗತ್ತಲೆ ಸುರಿವ ಮಳೆಯ ಸಿಡಿಲಿನ್ನೆಲ್ಲಿ
ಸೇರುವೆನು ಈ ಗಿರಿಯೊಳೂ ಸ್ವಾಮಿ ೧

ನಾರಿ ಮಕ್ಕಳು ಭೃತ್ಯರೆಲ್ಲಿ ಪೋದರೋ ಯೇನು
ಕಾರಣಬಂದೆನಯ್ಯ ಸ್ವಾಮಿ
ಭೂರಮಣ ತ್ರಿಭುವನಾಧಾರ ನೀ ನಲ್ಲದಿ
ನ್ನಾರು ಕಾವರೆನ್ನನು ಸ್ವಾಮಿ ೨

ಘುಡಿಘುಡಿಸುತಲಿವೆ ಪುಲಿ ಕರಡಿ ಸುತ್ತಲು ಭೋ
ರಿಡುತಲಿವೆ ಭಕ್ಷಿಸುವಡೇ ಸ್ವಾಮಿ
ಬಿಡದೆ ಕರಿಗಳು ಕೂಗಿ ಕಂಗೆಡಿಸುತಲಿವೆ ಇದೇ
ಕಡೆಗಾಲವಾಯಿತೆಲ್ಲೋ ಸ್ವಾಮಿ ೩

ನಡೆವರೆಡೆಗಾಣೆ ಇಲ್ಲಿರುವುದಾಗ ದಾಗದು ಕಷ್ಟ
ಬಡುವುದಕೆ ಗುರಿಯಾದೆನೇ ಸ್ವಾಮಿ
ಎಡಬಲಕ್ಕೊಲೆಯೆ ಕಪ್ಪು ಕಲ್ಲು ಮುಳ್ಳುಗಳಿದೆಕೋ
ಒಡೆಯ ಕೈವಿಡದೆ ಸಲಹು ಸಲಹೋ ಸ್ವಾಮಿ ೪

ಒಂದೆಸಗಲೇಳಡಸಿತೆಂದು ಪೇಳುವ ನುಡಿಗೆ
ಸಂದು ಬಸವಳಿದೆನೆಲೋ ಸ್ವಾಮಿ
ಇಂದು ಸಂಧ್ಯಾ ಗಾಯತ್ರಿ ಕರ್ಮವುಳಿದುದರ
ವಿಂದಾಕ್ಷ ಸುಮ್ಮನಿಹರೇ ಸ್ವಾಮೀ ೫

ಎಂದೆಂದು ಮಾತನಾಡುವನಾಥರಕ್ಷಕನೆ
ಬಂದುದೀಗೇನು ಸಿರಿಯು ನಿನಗೇ
ಬಂಧನವ ಬಿಡಿಸು ದುರ್ಮರಣದಲಿ ಕೊಲ್ಲದಿರು
ತಂದೆ ವೈಕುಂಠ ರಮಣಾ ಸ್ವಾಮೀ ೬

೪೭*

ಸುಳಾದಿ

ಧ್ರುವತಾಳ

ಸುರನದಿಯ ಪಡೆದ ಚರಣಾಂಬುರುಹ ದಾನ
ವರೇನು ಬಲ್ಲಿರಾ ಎರಡು ಪದದ
ಬಿರುದಿನ ಖಡ್ಡೆಯವ ಮಿರುಪಿನ ಪೆಂಡೆಯದ ಚೆಲುವ
ಸುರಚಿರ ಕದಪಿನ ಭವಪರಿಭವಿತ ಉರದ ಪೀತಾಂ
ಬರದಿಂದೆಸೆವ ಊರುನಿತಂಬಗಳ
ಸಿರಿಯ ಪೇರುರದ ಹಾರ ತ್ರಿಸರದಿಂದೊಪ್ಪುವ ಕಂಧರದ
ಸರಸಿಜ ನಯನಂಗಳು ದಿನಕರ ಕಿರಣವು ಸುಳಿವ
[ವರ] ಮಕುಟವನಿಂದಿರಿಸಿದಾ [ವೇಲಾಪುರದರಸ]
ಕರುಣಾಕರ ವೈಕುಂಠ ವೆಂಕಟಗಿರಿರಮಣ ೧

ಮಟ್ಟತಾಳ

ನಿನ್ನ ನಾಮಧಾರಿಯಾಗಿ ನಿನ್ನ ಚಿನ್ಹೆಯನು ಧರಿಸಿ
ನಿನ್ನ ಹೊನ್ನ ಹರಿವಾಣದ ಪ್ರಸಾದವನುಂಡು ದಾಸನಾದೆ ನಾ
ಇನ್ನುದಾಸೀನ ಮಾಡಸಲ್ಲ ರಾಘವ ವೈಕುಂಠ ವೆಂಕಟೇಶ ೨

ರೂಪಕ ತಾಳ

ನಿನ್ನ ಬೆಳ್ನುಡಿ ಬಾಯಿದಂಬುಲದ ಕಾಳಾಂಜಿ ಎನ್ನದು
ಎನ್ನನು ನಿನ್ನ ಸಿರಿಮುಡಿಗೆ ಮುಡಿಸಿದ
ಘನ್ನ ಚಂಪಕ ಜಾಜಿ ಕುಸುಮ ಪ್ರಸಾದವು
ಎನ್ನದು ಎನ್ನದು ಘನ್ನ ವೈಕುಂಠಗಿರಿರಮಣಾ ೩

ಅಟ್ಟತಾಳ

ಒಡೆಯ ನಿನ್ನಡಿಗೆ ಹೊನ್ನಹಾವುಗೆಯ ತಂದಿಡುವ ಸೇವೆ ಎನ್ನದು
ಒಡೆಯ ನೀನಡೆದಡೆ ಪಾದಪರಾಕು ಸ್ವಾಮೀ ಜೀಯಯೆಂದು

---

* ಎರಡು ನುಡಿಗಳಿಲ್ಲ, ಅಪೂರ್ಣ.

ಘಡಿಸುವ ಊಳಿಗ ಮುನ್ನವೆ ಎನ್ನದು ಎನ್ನದು
ಒಡೆಯ ಬಿಡೆನು ವೈಕುಂಠ ವೆಂಕಟಾಚಲ ಒಡೆಯದೇವೇಶ ಮೆ-
ಲ್ಲಡಿದಾವರೆ ಮೆಟ್ಟುವ ನಡೆಮುಡಿ ಎನ್ನದು ಎನ್ನುದು ೪

ಏಕತಾಳ

ಮನಕೆ ನಿನ್ನಯ ನೆನೆವುದೆ ಜೀವನ
ತನುವಿಗೆ ನಿನ್ನಡಿಗೆರಗಿ ಪುಳಕಿತವ ಸಂಧಿಸುವುದೆ ಜೀವನ
ಇನಿತು ಭುವನದಲ್ಲಿ ಧನ್ಯನ ನಾನರಿಯೆನು
[ಘನ]ವೈಕುಂಠ ವೆಂಕಟಗಿರಿರಮಣ ೫

ಜತೆ

ಕರುಣಿಸಯ್ಯ ಎನಗಿನಿತನೆ ವೈಕುಂಠ ವೆಂಕಟೇಶ
ಕರುಣಾಕರ ನಿನ್ನ ಚರಣದ ಸೇವೆಯನು ೬

(ಈ) (೧) ಕೃಷ್ಣಲೀಲಾ ಕೃತಿಗಳು

೪೮

ಸುಳಾದಿ

ಧ್ರುವತಾಳ

ಉರಗದುರುಬಿನಲಿ ಮಲ್ಲೆಮಲ್ಲಿಗೆ
ಮರುಗ ಜಾಜಿ ಸಂಪಿಗೆಯ
ತುರುಬಿ ಮತ್ತಾಳೆಪೂ ಸಿರಿಯ ಶಿರದಲ್ಲಿ ಧರಿಸಿ
ವರನೊಸಲಲೆಸೆವೆ ಕಸ್ತೂರಿ ತಿಲಕವಿಟ್ಟು
ಸ್ಮರನ ಶಿಂಗಾಡಿ ಸೋಲಿಸುವ ಪುರ್ಬುವಿಲ್ಲಿಂದ ಸರಸಿಜನಯನ
ನಿರುಪಮ ಮುತ್ತಿನ ಮುಕುತಿಯನಿಟ್ಟು ಜಗಮೋಹಿಸುತ

ಸುರಚಿರ ವೇಣು ಅಧರದ ಮೇಲೆ ನಾನಾವಿಧ ಸುಧಾಂಬುಧಿಯಾ
[ವರಝೋಂಕಾ]ರನಾದಂಗಳು ಗಾಳಿಯಲಿ ತುಳಕಿ
ನೆರೆಲೋಕವ ಭ್ರಮಿಸುತ್ತ ನಿಂದಿರುತಿಹ ವೈಕುಂಠ ವಿಠ–
ಲರಾಯಗೆ ಮನಸೋತೆನೆಲೆಯವ್ವ ೧

ಮಟ್ಟತಾಳ

ಅಂಗಜನಯ್ಯನ ವೇಣುನಾದಕೆ ಮೈಮರೆದು ಗಜಗಳು
ಶಿಂಗಗಳು ಉರಗವಿಹಂಗಗಳು
ಇಂಗಿತ ಮಯೂರಂಗಳು ಸಂಘವ ಗೂಡಿರೆ
ಅಂಗವ ಮರೆದವು ನಲಿದು ವೈಕುಂಠವಿಠಲನ
ಮಂಗಳ ವೇಣುನಾದಕ್ಕೆ ಸುರಾಸುರರು ಮೈಮರೆದರು ೨

ರೂಪಕತಾಳ

ಹರಿಯ ವೇಣುನಾದವಮೃತಸಿಂಧುವಿನಲ್ಲಿ ಮುಳುಗಿತುಮನ
ಸ್ಮರನ ಜನಕನ ಅಂಗಕಾಂತಿ ಸುಧಾಂಬುಧಿಯಲಿ ಬೆರಸಾದುದೂ
ಸಿರಿ ವೈಕುಂಠವಿಠಲನಲೇನಾದುದೋ ೩

ಝಂಪೆತಾಳ

ಪುಳಕವುದೆಗೆದು ಶಿರಬಿಗಿದು ಮನಮುಳುಗಿ
ಕೊಳಲನೂದುತ ಮುದ್ದುಮುಖದ ವೈಕುಂಠವಿಠಲನುಬರಲು
ತಲೆಬಾಗಿ ಕರಗಳ ಮುಗಿದು ಜಯಜಯವೆನ್ನುತಿರೆ ಕಂ
ಕಂಗಳಲಿ ಒಲಿದಾನಂದವಾರಿಯಲಿ ತನುಮರೆದೆ ೪

ತ್ರಿವುಡೆ ತಾಳ

ಸುರರದಳ ಮಳೆಗರೆಯಲು ಮುನಿ
ವರರ ಜಯ ಜಯ ಜಯಕಾರದಿ ತಾ ಸರ್ವದೇವರದೇವ

ತುರುಗಳನೆ ಪಾಲಿಸಿದ ಬಹುಸಿರಿಸಂಪದರಾಗಿ
ನೆರೆದ ಗೋಪಾಲಕರ ಮಧ್ಯದಿ
ಪರಿಪರಿಯ ರಾಗಗಳನೂದುತ್ತ ಎಸೆವ ದೇವರದೇವ
ವರಮೂರ್ತಿ ವೈಕುಂಠವಿಠಲನ
ಚರಣಕಮಲಕೆ ನಮೋ ಎಂಬೆ ೫

ಅಟ್ಟತಾಳ

ನಳಿನಕ್ಕೆರಗುವ ಅಳಿಗಳಂದದಿ
ಸುಳಿಗುರುಳು ಮುಖಕಮಲದಿ ಹೊಳೆಯೆ
ಹೊಳೆವ ಕಂಗಳಿಂ ತ[ವಸಿಗಳಿಂದು]ಪಚರಿಸುತ
ಕೆಳದಿ ಕೇಳಮ್ಮ ವೈಕುಂಠವಿಠಲ ಬಂದ ೬

ಆದಿತಾಳ

ಗೋವರ್ಧನ ಧರ ಗೋಕುಲಪಾಲಕ
[ಗೋವಿಂದ] ಗೋಪಜನಮನೋರಂಜಕ
ಶ್ರೀ ವೈಕುಂಠವಿಠಲ ಸಂಜೀವನರೂಪ ೭

ಜತಿ

ಗೋಕುಲಾನಂದ ವೈಕುಂಠವಿಠಲನು ವೇಣುನಾದಾಮೃತದಿ
ಗೋಕುಲದ ಅಂಗನೆಯರಿಗೆ ಆನಂದವನಿತ್ತ

೪೯

ಸುಳಾದಿ

ಧ್ರುವತಾಳ

ಎಲ್ಲಿಹ ಮಧುರಾಪುರ ಇನ್ನೆಲ್ಲಿಹ ಕಂಸಾಸುರನೆ
ಎಲ್ಲಿಂದ ಬಂದುದೆ ಬಿಲ್ಲುಹಬ್ಬ ತಾನು

ಎಲ್ಲಿಹನಕ್ರೂರನಿವ ತಾನೆಲ್ಲಿಂದ ಬಂದನೆ
ಎಲ್ಲಿ ನಮ್ಮ ಗೋವಿಂದನೊಡಗೊಂಡನೊಯ್ದನೆ
ಎಲ್ಲಿಯ ಮನೆ ನಮಗಿನ್ನೆಲ್ಲಿಯ ಮನೆವಾರತೆ
ಎಲ್ಲಿ ನಮ್ಮ ವೈಕುಂಠವಿಠ್ಠಲ
ಎಲ್ಲಿಗ್ಹೋದಡಲ್ಲಿಗೆ ಹೋಹ ನೋಡೆ ಕೆಳದಿ ೧

ಮಟ್ಟತಾಳ

ಈತಗೆಲ್ಲಿ ದೊರಕಿತೆ ಮಾತಿನ ಅಕ್ರೂರತನ ನೋಡೇ ಕೆಳದಿ
ಭೂತಳಕೆ ಪೆಸರಾದಕ್ರೂರಗೆ ಮಾತಿನ ಕ್ರೂರತನ ನೋಡೆ ಕೆಳದಿ
ಯಾತಕೆ ವೈಕುಂಠವಿಠ್ಠಲನನಗಲಿಸುವಗೆ
ಮಾತಿನ ಕ್ರೂರತನ ನೋಡೆ ಕೆಳದಿ ೨

ರೂಪಕ ತಾಳ

ಬಿಲ್ಲುಹಬ್ಬ ಮಧುರಾಪುರ ದಲ್ಲಿ ನಿನಗೆ ಕೃಷ್ಣಯ್ಯಾ ನಿನ್ನ
ಬಿಲ್ಲುಹಬ್ಬ ಸ್ಮರಣೆಯನೊಪ್ಪಿಸಿತು ನಿನ್ನ
ಬಿಲ್ಲು ವಲ್ಲಭ ವೈಕುಂಠವಿಠ್ಠಲ ನಿನ್ನ ೩

ಝಂಪೆತಾಳ

ಚರಣಸರಸಿಜವ ನಮ್ಮ ಶಿರದ ಮೇಲಿಡು ಕೃಷ್ಣ
ಮರಳಿ ನಮ್ಮ ಗೋಕುಲಕ್ಕೆ ಬಾಹುದೆಂತು
ಪರಮಪುರುಷ ಪುರುಷೋತ್ತಮ
ಮರಳಿ ನಮ್ಮ ಗೋಕುಲಕೆ ಬಾಹುದೆಂತು
ಸಿರಿರಮಣ ವೈಕುಂಠವಿಠ್ಠಲ ೪

ತ್ರಿವಿಡಿ ತಾಳ

ಮೂರುತಿ ಮನದಲ್ಲಿ ಕೀರುತಿ ಕಿವಿಯಲ್ಲಿ ಇರಿಸು ರ
ಮಾರಮಣನೆ ಅನ್ಯ ವಿಚಾರ ನಮಗ್ಯಾತಕಯ್ಯಾ
ವಾರಿಜಾಕ್ಷ ವೈಕುಂಠವಿಠ್ಠಲ ಕರುಣಾಕರ ೫

ಅಟ್ಟತಾಳ

ಹರಿಕರುಣಾಮೃತಾಂಬುಧಿಯಲೋಲಾಡಿ
ಮರಳಿ ವಿಯೋಗ ದು:ಖದಿ ಮುಳುಗಾಡಿ
ಹರಿವಿರಹದಿ ಕಳ್ಳರಾಗಿ ತಿರುಗಿದವರ ಪೊರೆದಂತೆ
ಸಿರಿರಮಣ ವೈಕುಂಠವಿಠ್ಠಲರೇಯಾ
ಪೊರೆಯಬೇಕು ನಿನ್ನ ನೆರೆ ನಂಬಿದವರ ೬

ಆದಿತಾಳ

ಹರಿವಿರಹದಿ ಬೆಚ್ಚಂತರಂಗದಿ
ಸ್ಮರನರಳಂಬಿಗೊಡ್ಡಿ ಬಹಿರಂಗದಿ
ತರುಣಿಯ ಜನರತ್ತ ಹರಿದವರ ಕಳ್ಳರಾಗಿಸಿಂ
ತಿರುಗಿಸಿದಂತೆತರಣಿಯ ಜನರನ್ನ
ಸಿರಿರಮಣ ವೈಕುಂಠವಿಠಲರೇಯಾ
ಪೊರೆಯಬೇಕು ನಿನ್ನ ನೆರೆ ನಂಬಿದವರನ್ನ ೭

ಜತಿ

ಗೋಕುಲದ ಗೋಪಾಂಗನೆಯರುಗಳು
ಲೋಕೇಶ ವೈಕುಂಠವಿಠ್ಠಲನ್ನ ನೆನೆದರು ಗೋಕುಲದಿ ೮

೫೦

ಉಗಾಭೋಗ

ಗೋವಾಳಿ ಗೋಲಿಗುಳ್ಳೆಯ ಚೀಲವ ಬಳ್ಳಿಗಟ್ಟಿದುಡೆಯಲ್ಲಿಸಿಕ್ಕಿ
ಕಲ್ಲಿ ಕಂಬಳಿ ಕೋಲ ಹೆಗಲಲ್ಲಿ ಧರಿಸಿ ತುರುಕರುವನಮ್ಮೀ
ಗೊಲ್ಲರ ಬಾಲಕರ ಮಧ್ಯದಲ್ಲಿ ಪೊಂಗೊಳಲ ಪಿಡಿದೂ
ಅ[ಲ್ಲಲೆ] ತುತ್ತುರುತುರೆನುತ ಶ್ರೀವಲ್ಲಭನು ವೇಣುನಾದವ ಮಾಡೆ

ಜಗವೆಲ್ಲ ವೇಣುಮಯವಾದುದು ಚೆಲ್ವ ಪಿಳ್ಳೆರಾಯ ಮನ್ಮನೋ
ವಲ್ಲಭ ವೈಕುಂಠವಿಠಲ [ರಾಯನ]

೨೧

ಮುಟ್ಟದಿರಿ ಗೋಪವನಿತೆಯರು ಗಲಭೆಯದೇನು ತೊಲಗಿರೇ
ತೊಟ್ಟಿಲಂ ತೂಗದಿರಿ ಕೃಷ್ಣನೆದ್ದರೆ ಕಾಡದಿರನೆನ್ನಾ ಪ

ಮಿಸುನಿದೊಟ್ಟಿಲೊಳಂತೆ ದುಪ್ಪದುಪ್ಪಳಿನ ಹಾಸಿನಲಿ ಮಂದಾರ
ಕುಸುಮಗಳ ಜಾಜಿ ಮಲ್ಲಿಗೆ ಸೇವಂತಿಗೆ ಪಂಕೇರುಹದಾ
ಎಸಳುಗಳ ಪಸರಿಸಿಯೆ ಮಲಗಿಸಿದೆ ಪಾಲೆರದು ಮೊಲೆಯೂಡಿ
ಪೀತಾಂಬರವನೆ ಹೊದ್ದಿಸೀ ।
ಹಸುಳೆಯನಮಲ ಕೋಮಲಾಂಗನನಂಗಕೋಟಿಗಳ ನಾ
ಚಿಸಿ ಚಿತ್ತಿನ ಪುತ್ಥಳಿಯ ಸಚ್ಚಿದಾನಂದ ಮೂರುತಿಯಾ
ಬಿಸಜಾಕ್ಷನಂ ಕೃಷ್ಣನಂ ಬಲದೇವಸಹಜಾತನಂ
ಕುಸುಮನಾಭನಂ ಜಲದನೀಲನಂ ದಿವಿಜಪಾಲನಂ ೧

ಬಿಡದೆತ್ತಿ ಮುಂಡಾಡಿ ಮುದ್ದಿಟ್ಟು ತಕ್ಕೈಸಿ ಕುಚಂಗಳೋಳ್
ಬಿಡದೊತ್ತಿಯಪ್ಪಿ ಪರಮಾನಂದ ಜಲಧಿಯೊಳಗೋಲಾಡಿ
ವೊಡನೊಡನೆ ಸಿರಿಮೊಗವ ನೋಡಿ ನೋಡಿಯುನಿಮ್ಮ ಚಿತ್ತಕ್ಕೆ
ಸಂತುಷ್ಟಿಯಿಲ್ಲವಲ್ಲಾ
ಒಡೆಯನೋ [ಇವ]ಯೆಮ್ಮೊಡನೆ ಪೊಡವಿಗೆ ಜೀವಂಗಳಿಗೆ
ಒಡೆಯನೆಂಬಿರಿ ಪರಲೋಕದಾನಂದಕ್ಕೆ
ಒಡೆಯನೇ ನಿಮಗೆನ್ನ ಕಂದ ಮುದ್ದು ಭಾಗ್ಯದ ಬೆಳಸು
ಮಡಗಿ ತೊಟ್ಟಿಲೊಳಚ್ಯುತನನಂತನಂ. ಮುಕುಂದನಂ ೨

ನೋಡಲಿಹೆವೆಂತು ಲಾವಣ್ಯಸಿಂಧುವನೊಲಿದು ಸರವೆತ್ತಿ
ಪಾಡದಿಹೆವೆಂತು ಶ್ರುತಿಕೋಟಿಧನ್ಯಾತೀತಲೋಲನಂ

ಬೇಡದಿಹೆವೆಂತು ಕರಚರಣಮಂ ಪಡೆದ

ಚಿಂತಾಮಣಿಯೆಂದು ಬಾಕುಳಿಯಾದಿರೀ

ನಾಡ ಹೆಂಗಳ ದೃಷ್ಟಿದೋಷದಿಂ ಪಾಲ್ಗುಡಿದು ನಲವಿಂದ
ಲಾಡಲೊಲ್ಲನು ವಸುಂಧರೆಯ ತೊಟ್ಟಿಲಶಿಶುಗಳಂದದಿ ಮೊಲೆಯ
ನೂಡಿದರೆ ಬಾಯ್ದೆರೆಯಲೊಲ್ಲ ಮಂತ್ರದಿಯಂತ್ರದಿಂದೊಮ್ಮೆ
ಯೂಡಿ ಮಲಗಿಸಿದೆ ವಿಶ್ವನಂ ತ್ರೈಜಗಪ್ರಾಜ್ಞಮೂರುತಿಯಂ ೩

ರವಿಯಹುದು ಬಿಸಿಗದಿರದೆಲ್ಲಿ ಚಂದಿರನಹುದು ಹಿಮವೆಲ್ಲಿ
ಸವಿಲ್ಲದೆಲ್ಲಿ ಮನ್ಮಥನಹುದು ಸರಸಿಜನಹುದು ಕಮಲಾಸ
ನವದೆಲ್ಲಿ ಇಂದುಧರನಹುದು ಫಣೆಗಣ್ಣೆಲ್ಲಿಯೆಂದು ಬರಿದೇಕೆ ಮರುಳಾಗುವಿರಿ
ಅವಿರಳನದ್ವಯನನಾದಿಮಧ್ಯಾಂತರಹಿತನ ಧರ್ಮಸ್ಥಾಪನಾಚಾರ್ಯ
ನ[ವಂ] ಮಹೀಭಾರವ ತವಿಸಲೆಂದವತರಿಸೆ ಜನನವಂ ಪಡೆದ ತಂದೆಯಂ
ಭುವನಪಾವನ ಸುಪ್ರಗಧಾಮೂರ್ತಿಯಂ ಶ್ರವಣಮಂಗಳಸತ್ಕೀರ್ತಿಯಂ ೪

ನಿಗಮವೀ ಹರಿಯ ಮಹಿಮಾ ಸಮುದ್ರದ ತಡಿಯ ತೆರೆಗಳಲಿ
ಮಿಗೆ ಸಿಲುಕಿ ಮುಳುಗಲರಿಯದೆ ಬೀಳುತೇಳುತಾಳುತಲಿವೇಕೋ
ಮೊಗನಾಲ್ಕನಯ್ಯನ ಸಾಸಿರದೈವವಂ ಪಡೆದ ತಂದೆಯಂಅದೆಂತಲೆಂದಾರರಿವರೂ
ಸುಗುಣ ಸರ್ವಜ್ಞನಂ ಸರ್ವಭೂತರಾತ್ಮಕನಂ
ಜಗದೊಳ್ ಹೊರಗೆ ಪೂರ್ಣನಾಗಿ ಭುವನವ ಜಠರದೊಳಗಿಟ್ಟ
ಅಗಣಿತನ ವೈಕುಂಠ ಪತಿಯ ಘನತೆಯನರಿತು ಪೊಗಳುವರೇ
ಮುಗುದೆಯರು ನೀವೆತ್ತ ಮಾಯೆಯ ಕುಣಿಸಿ ನಗುವ ಹರಿಯೆತ್ತಾ ೫

(ಉ) ಲೋಕನೀತಿ ಕುರಿತ ಕೀರ್ತನೆಗಳು

೫೨

ಏಳಿಸು ನಂಜನನೂ ಬೇಗದೊಳೇಳಿಸು ನಂಜನನೂ
ಬಾಳುವ ಮಗನನು ಕೋಳುವಿಡಿದುದು ಯಮನ
ನಾಳಿದೊಡೆಯ ವೇಲಾಪುರದರಸಾ ಪ

ಪತಿಯನು ನೀಗಿದ ಸತಿಮಾದಮ್ಮನು
ಸುತನಿಂ ಬದುಕುವೆನೆಂದೀ ಊರೊಳು
ಅತಿ ತಿರಿತಂದೋವುತಲಿದ್ದಳು ಸುತ
ಮೃತನಾದನು ಅಚ್ಯುತ ಸಲಹಯ್ಯಾ ೧

ಉರಿಯೊಳು ಬಿದ್ದಂತೊರಲಿ ಪೊರಲಿ ವೋ
ಹರಿ ಹರಿ ಹರಿ ಯೆಂದುರುಳಿ ಬಡಿದುಕೊಳ್ಳೇ
ದುರಿಯಶ ವೊಡೆಯಗೆ ಬರುವುದೆಂದು ನರ
ಹರಿ ರಕ್ಷಿಪನೆಂದೊರೆದೆನು ಹರಿಯೆ ೨

ಸತ್ತಮಗನ ನೀ ತಂದಿತ್ತುದಿಲ್ಲವೇ ಹೇ
ಕರ್ತೃವೆ ಸಾಂದೀಪೋತ್ತಮನಿಗೆ ಅಂದು
ಉತ್ತರೆಯೊಡಲೊಳು ಅತ್ತು ಶಿಶುವು ಸಾ
ವುತ್ತಿರಲುಳುಹಿದೆ ಚಿತ್ತಜನಯ್ಯಾ ೩

ಇರಿದಪಮೃತ್ಯು ಪೊತ್ತಿರಿದಪವಾದವು
ಉರುಳಿದೆ ನೋಡುತ್ತಿರುವರೆ ಸುಮ್ಮನೆ
ಅರಿಯದಂತಿರ್ದಡೆ ಪರಿಪಾಲಿಪರಾರು
ವರಮೃತ್ಯುಂಜಯ ಕರುಣಾಕರನೇ ೪

ಮರಣವನ್ನೈದಿದ ತರಳ ನಂಜುಂಡನ
ಕರುಣಿಸದಿರ್ದಡೆ ಶಿರವನರಿದು ನಾ
ಚರಣದೊಳಿಡುವೆನು ದುರಿತಬಾಹುದು ನಿನ
ಗರಿಯದೆ ವೈಕುಂಠವಿಠಲ ಚೆನ್ನಿಗನೇ ೫

೫೩

ಕಟಕಟಾ ಕಂಡೆವಲ್ಲಾ
ಕುಟಿಲವರ್ತನ ಕೆಲಕೆಲವು ಈ ಕಲಿಯುಗದೀ ಪ

ಮಳೆಯಿಲ್ಲ ಬಂದರಿಳೆ ಬೆಳೆಯದು ಬೆಳೆಯೆ ಧರಣಿ
ಹುಲಿಸಿಲ್ಲ ಹುಲಿಸಾದರಿಲ್ಲಾ ಪ್ರಜೆಗೇ
ಸಲುವಕೋರಲ್ಪವನು ಬಿಡರು ರಾಜರುಗಳ ಹಾ
ವಳಿಯಲುಳುಹಿಲ್ಲ ಇನ್ನೆಂತು ಕೃಷಿಕರಿಗೇ ೧

ಧನವಗಳಿಸಿಯೆ ಪಡುವುದನ್ಯಾಯವೇ ಮೊದಲು
ಮನವರಿತು ಪಾತಕಂಗಳ ಮಾಡುತಿಹರೂ
ಇನಿತು ಗಳಿಸಿದ ಕೃತ್ಯದರ್ಥಕ್ಕೆ ಚೋರರು
ಜನಪರೊಡೆಯರು ಬಯಲಮಮತೆಗಳ ಬಿಡರೂ ೨

ಹುಸಿ ನುಸುಳು ಕಳವು ಕಕ್ಕುಲತೆ ಪರನಿಂದೆ ರಾ
ಕ್ಷಸಕೃತ್ಯ ಹಿಂಸೆ ಮತ್ಸರ ಅನಾಚಾರಾ
ಪಿಸುಣಿತೆ ಕುಹಕ ಕುಟಿಲ ಕುಮದ ಸ್ವಾಮಿದ್ರೋಹ
ವಸುಮತಿಯ ಸುರರ ವಧೆ ಘನವಾಯಿತಲ್ಲಾ ೩

ತೊಡುವೊಡವೆಗಳ ಬೇಡಲೊಡನೆರಡು ಕಂಗಳಲಿ
ಕಿಡಿಸೂಸಿ ಬಾಯಿ ನೊರೆಸುತ್ತಿ ಘರ್ಜಿಸುತಾ
ಜಡಿವ ಕೋಪದಿ ಮಧುಪರಂತೆ ಜರೆವೀ ಬಾಯಿ
ಬಡುಕರೇ ಮೇದಿನಿಗೆ ಹೊರೆಯಾದರಲ್ಲಾ ೪

ರಸನಬಿಡುವರು ಕಸವಪಿಡಿವರೊರೆಯನು ಪಿಡಿದು
ಬಿಸುಡುವರಲಗ ಪರುಸವನು ಬಿಟ್ಟು ಕಲ್ಲಾ
ಒಸೆದು ಬಿಡುವರು ಶ್ರೀ ವೈಕುಂಠಕೇಶವನಿರಲು
ನುಸಿ ದೈವಗಳ ಭಜಿಸಿ ಹಸಗೆಡುತಲಿಹರೂ ೫

೫೪

ಕಡೆಯಿಲ್ಲದೀ ಭವಾಂಬುಧಿಯ ದಾಂಟುವೊಡೆ ಜಗ
ದೊಡೆಯ ಶ್ರೀಕೃಷ್ಣನೊಬ್ಬನ ನಂಬು ಮರುಳೆ ಪ

ನೆಲೆಯಾದುದಿಲ್ಲ ತಾಯುದರ ಬಾಲತ್ವವಿದು
ನೆಲೆಯಾದುದಿಲ್ಲ ಜವ್ವನವೆಂಬುದೂ
ನೆಲೆಯಾದುದಿಲ್ಲ ಜರೆಯು ಚಕ್ಷುರಾಜಿಗಳು
ನೆಲೆಯಾಗಬಲ್ಲದೆ ಒಡಲು ನಿನಗೆ ಮರುಳೆ ೧

ಹುಟ್ಟಿದನಳಿದನೇಕೆ ಜೀವ ನಿಜ ಜನನಿಯಲಿ
ಹೊಟ್ಟೆಯಲಿ ಹೊತ್ತು ಹೆತ್ತುದಕ್ಕೆಸಲೆ
ಕೊಟ್ಟುಕೊಂಡುದಕೆ ಪಡೆದಿತ್ತು ಸುತರೆಂದೆನಿಸಿ
ನೆಟ್ಟನೈದುವರು ನಿನಗೇನಹರು ಮರುಳೆ ೨

ನೀನಳಿದ ಬಳಿದ ಸತಿಸುತರಿಗೇನ್ಹೇಳುವೆ
ಏನಹರು ನಿನಗವರು ಮೃತವಾದ ಬಳಿಕಾ
ದೀನನಹೆ ಬಯಲಮಮತೆಗಳೆಂದು ತಿಳಿದುಕೊ
ನೀನೆತ್ತಲವರೆತ್ತಲಿಹರವರು ಮರುಳೆ ೩

ಮಗನಾವ ತಂದೆಯಾವನು ಜೀವ ಜೀವರಿಗೆ
ಮಗನು ತಂದೆಯು ಕರ್ಮವಾಸನೆಗಳಾ
ಬಗೆಯಿಂದಲೀಶ್ವರನು ಜೀವಕೋಟಿಗಳ ಸೃಜಿಸೆ
ಜಗದೊಳಾಡುವರು ನಿನಗೇನಹರು ಮರುಳೆ ೪

ಅತಿಭಕ್ತನೆಂದು ವೈಕುಂಠ ವೇಲಾಪುರದ
ಪತಿ ಅರ್ಜುನಗೆ ನಿರೂಪಿಸಿದರ್ಥವ
ಮತಿಗೆಟ್ಟು ಬಿಟ್ಟು ನಾನಾ ದೈವದಡಿಗಳಿಗಾ
ನತನಾಗಿ ಸಂಸಾರಿಯ[ಹೆ] ಇದೇಕೆ ಮರುಳೆ ೫

೫೫*

ಕೇಶವನೊಲುಮೆಯು ಆಗುವತನಕ ಹರಿ
ದಾಸರೊಳಿರು ಮನವೆ
ಆಶೆಪಾಶಂಗಳು ಬಿಟ್ಟು ವಿಲಾಸದಿ
ದಾಸರ ಸ್ತುತಿಯನು ಪೊಗಳುತ ಮನದೊಳು ಪ

ಮೋಸದಿ ಪ್ರಾಣಿಹಿಂಸೆಯನು ಮಾಡಿದ ಫಲ
ಕಾಶಿಗೆ ಪೋದರೆ ಪೋದೀತೆ
ದಾಸರು ಕರೆದು ಕಾಸುಕೊಟ್ಟ ಫಲ
ಲೇಸಾಗದೆ ಸುಮ್ಮನಿದ್ದೀತೆ
ಆಸೆಕೊಟ್ಟು ನಿರಾಸೆ ಮಾಡಿದ ಫಲ
ಮೋಸವ ಮಾಡದೆ ಬಿಟ್ಟೀತೆ
ದಶಶಿರನನುಜನು ಹರಿಯ ಒಲಿಸಿಕೊಂಡದ್ದು
ನಿಜವಲ್ಲದೆ ಪುಸಿಯಾದೀತೆ ೧

ಕನಕದ ಪಾತ್ರೆ ಘನಪ್ರಭೆಯೊಳಿರೆ
ಸೊಣಕನ ಮನಸಿಗೆ ಸೊಗಸೀತೆ
ಹೀನ ಮನುಜಗೆ ಜ್ಞಾನವ ಬೋಧಿಸೆ
ಹೀನ ವಿಷಯಗಳು ಬಿಟ್ಟೀತೆ
ಮಾನಿನಿ ಮನಸು ನಿಧಾನವಿಲ್ಲದಿರೆ
ಮಾನಾಭಿಮಾನವು ಉಳಿದೀತೆ
ಭಾನುಕೋಟಿ ಪ್ರಕಾಶನ ಭಜಿಸದ
ದೀನಗೆ ಮುಕ್ತಿಯು ದೊರಕೀತೆ ೨

---

* ಇದು ಕನಕದಾಸರ ಅಂಕಿತದಲ್ಲೂ ಇದೆ. (ಪಾಠಗಳಲ್ಲಿ ಅನೇಕ ವ್ಯತ್ಯಾಸಗಳಿವೆ).

ಶ್ರುತ್ಯಾರ್ಥಗಳು ನಿತ್ಯದಿ ಪೇಳಲು
ಕತ್ತೆಯ ಮನಸಿಗೆ ಬಂದೀತೆ
ಸ್ಮೃತ್ಯಾರ್ಥಂಗಳು ನಿತ್ಯದಿ ಬೋಧಿಸೆ
ತೊತ್ತಿನ ಮನಸಿಗೆ ಬಂದೀತೆ
ಕಸ್ತುರಿ ಫಣೆಯಲಿ ಬತ್ತಿ ತಿಲಕವಿಡೆ
ಅರ್ಥ ತೊರೆಯದೇ ಬಿಟ್ಟೀತೆ
ಚಿತ್ರದಿ ಬೊಂಬೆ ವಿಚಿತ್ರದಿ ಬರೆದಿತ್ತ
ಮುತ್ತು ಕೊಟ್ಟರೆ ಮಾತಾಡೀತೆ ೩

ನ್ಯಾಯವ ಬಿಟ್ಟು ಅನ್ಯಾಯವ ಪೇಳ್ದವ
ನಾಯಾಗಿ ಹುಟ್ಟೋದು ಬಿಟ್ಟೀತೆ
ತಾಯಿ ತಂದೆಯ ನೋಯಿಸಿದ
ಮಾಯಾವಾದಿಗೆ ಮುಕುತಿಯು ದೊರಕೀತೆ
ಬಾಯಿಬೊಬ್ಬಿಲಿ ಬೊಗಳುವ ಮನುಜಗೆ
ಘಾಯವಾಗದೆ ಬಿಟ್ಟೀತೆ
ಛಾಯಮಾಯವಾ ಕಲಿತಾ ಮನುಜಗೆ
ಕಾಯಕ ಕಷ್ಟ ಬಿಡದಿದ್ದೀತೆ ೪

ಸಾಧು ಸಜ್ಜನರ ನಿಂದಿಸಿದ ದು
ರ್ವಾದಿಗೆ ಮುಕುತಿಯು ದೊರಕೀತೆ
[ಶುದ್ಧರಾಗಿ]ಭಜಿಸಿ ಬರುವರನನರ್ಥವ
ಗೈದವಗೆ ವ್ಯಾಧಿ ಕಾಡದೆ ಬಿಟ್ಟೀತೆ
ಕ್ಷುಧ್ರಮನುಜ ಬಹು ಕ್ಷುಧ್ರವ ನುಡಿಯಲು
ಬುದ್ಧಿಹೀನನೆಂಬೋದು ಬಿಟ್ಟೀತೆ
ಕದ್ದು ಒಡಲಹೊರುವ ಮನುಜಗೆ
ಇದ್ದದ್ದೋಗದೆ ಉಳಿದೀತೆ ೫

ಅಂಗವಿಷಯಗಳು ಹಿಂಗಿದ ಮನುಜಗೆ
ಅಂಗನೆಯರ ಬಯಸೀತೆ
ಸಂಗಸುಖಗಳು ಹಿಂಗದ ಮನುಜಗೆ
ಶೃಂಗಾರದ ಬಗೆ ತೋರೀತೆ

ಮಂಗಳ ಮಹಿಮನ ಪದಾಂಘ್ರಿಯ ಭಜಿಸದ
ಭೃಂಗಗೆ ಮುಕ್ತಿಯು ದೊರಕೀತೆ ೬

ಕರುಣಾನನಾಭರಣ ಧರಿಸಿದ ಪರಮಗೆ ಸರಳೆದುರಾದೀತೆ
ಕರುಣಾನನ ಸ್ಮರಣೆವುಳ್ಳರಿಗೆ ಪರಮ ಪದವಿ ಆಗದಿದ್ದೀತೆ
ವರದ ವೇಲಾಪುರಿ ವೈಕುಂಠ ಕೇಶವನ
ಚರಣ ಸೇವಕನಾಗಿ ಇರು ಕಂಡ್ಯ ಮನವೆ ೭

೫೬

ಬದುಕು ಬದುಕು ನಂಜುಂಡಾ ಮ
ತ್ತೊದಗಿ ನೀ ನೂರುವರುಷ ಪರಿಯಂತ ಪ

ಜನನಿಯ ಮಾತನು ಮೀರದೆ ಪರ
ವನಿತೆಯರಿಗೆ ಮನಸೋಲದೆ
ಬಿನುಗು ದೈವಂಗಳಿಗೆರಗದೆ ದು
ರ್ಜನರ ಸಂಗಗಳ ನೀ ಮಾಡದೆ ನಂಜಾ ೧

ತಪ್ಪುದಾರಿಯಲಿ ನೀ ಪೋಗದೆ ಆರು
ಒಪ್ಪದ ಕರ್ಮವ ಮಾಡದೇ
ತಪ್ಪು ಕಥೆಗಳನು ಕೇಳದೆ ಬಲು
ಸಪ್ಪೆ ವಾಕ್ಯಂಗಳನಾಡದೆ ನಂಜಾ ೨

ಹರಿಗೆರಗುತ ಹರಿಶರಣರ್ಗೆ ನಮಿಸುತ
ಹರಿಯ ಕಥೆಗಳನ್ನು ಕೇಳುತಾ
ಹರಿಯೆ ಸರ್ವೋತ್ತಮನೆಂದು ನೀನಿರುಕಂಡ್ಯ
ಸಿರಿ ವೈಕುಂಠಕೇಶವ ರಕ್ಷಿಪ ನಂಜಾ ೩

೫೭

ಬೆರಗಾದೆನಯ್ಯ ಎನ್ನೆರೆಯ ಕೇಶವನ
ಬಿಟ್ಟನ್ಯಭಜನೆಯ ಕಂಡು ಪ

ಹೊಚ್ಚಿ ಸುಳಿದಟ್ಟಿ ಸುಡುವ ಅಡವಿಗಿಚ್ಚಿನ ಭಯಕೆ
ಬೆಚ್ಚಿ ಅರಗಿನ ಮನೆಯ ಹೊಗುವವನಂತೆ
ಅಚ್ಚರಿಯೆನಿಸೆ ದಹಿಪ ತಾಪತ್ರಯಕ್ಕಳುಕಿ
ತುಚ್ಛ ದೈವಗಳ ಮರೆಯೊಗುವ ಮನುಜರಕಂಡು ೧

ಉರಿಯ ಮಳೆಗರೆಯುತಿರೆ ತೃಣಗೇಹವನು ಹೊಕ್ಕು
ಹರಣವನುಳುಹಿಕೊಂಬೆನೆಂಬಂತೇ
ಉರುಬೆ ನಾನಾ ರೋಗಗಳುಳುಹಲು ಹಲವು ದೈವಗಳಿ
ಗೆರಗಿ ಜೀವನಕೆ ಕಳಕಳಿಪ ಮನುಜರ ಕಂಡೂ ೨

ಮುಗಿಲಗಲ ಧರೆ ಜರಿಯುತಿರೆ ಹುಲ್ಲಿನಣಬೆಯೊಡ್ಡಿ
ಮಿಗೆ ಬಾಳ್ವೆನೆಂಬ ಮರುಳನಂದದೀ
ಉಗಿದಸಿಯ ಮೃತ್ಯುವಿನ ಭಯಕೆ ನಾನಾದೇವ
ತೆಗಳಮರೆಯೊಗುವ ಮನುಜರ ಕಂಡು ೩

ಘುಡು ಘುಡಿಸಿ ಸಿಡಿಲೆರಗುತಿರೆ ತನ್ನ ಕೈ
ವಿಡಿದ ಕೊಡೆಯ ಮರೆಗೊಂಡುಳಿವೆನೆಂಬಂತೇ
ಮುಡಿವಿಡಿದೆಳೆವ ಕಾಲನ ಭಯಕೆ ನಾನಾದೈವ
ದಡಿವಿಡಿದೆರಗಿ ಹಲು ಬಿಡುವ ಮನುಜರ ಕಂಡು ೪

ಯಾತಮುಳಿದರೆ ಜಗದಲುಳಿದವರಾರು ಮ
ತ್ತೀತನುಳುಹಿದನನು ಕೊಂದವನಾವ ಇ
ದೇತಕರಿಯರೋ ನರರು ಅಕಟಕಟ ವೈಕುಂಠ
ನಾಥ ಪರಿಪೂತನ ಪದಕಮಲವ ಭಜಿಸರೆಂದು ೫

ನೀರಡಿಸಿ ಜಾಹ್ನವಿಯ ತೀರದಲಿ ಭಾವಿಯಾ
ನೀರ ಕುಡಿವ ಮಾನವನ ತೆರದೀ ಹರಿಯ ಚರಣವಿರಲು
ಭೂರಿದೈವಂಗಳಿನ್ನೇಕೆ ಭಜಿಸುವೆ ಮನುಜ ಹರಿ
ಕಾರುಣ್ಯನಿಧಿ ವೈಕುಂಠವಲ್ಲಭ ಬೇಲೂರ ಚೆನ್ನಿಗರಾಯ
ಕೃಪಾನಿಧಿಯಿರಲು ೬

೫೮

ಮಾಡು ದಾನಧರ್ಮ ಪರ ಉಪಕಾರ
ಮರೆಯದಿರೆಚ್ಚರಿಕೆ ನೀ
ಕೇಡ ನೆನೆಸಬೇಡ ನಂಬಿದಠಾವಿಲ್ಲ
ಕೆಡುವಿ ನೀ ಎಚ್ಚರಿಕೆ ಪ

ಮೂಢರೊಡನೆ ಕೂಡಿ ಮುಂದೆ ನೀ ಕೆಡಬೇಡ
ಮೋಸಹೋಗದಿರೆಚ್ಚರಿಕೆ
ನಾಡೊಳು ಸುಜನರ ನೋಡಿ ನಡೆಯೋ ಕಂಡ್ಯಾ
ನಟನೆ ಬ್ಯಾಡೆಚ್ಚರಿಕೆ ೧

ಚೆನ್ನಾಗಿ ಗಳಿಸಿದೆ ನಾ ಬದುಕಿದೆನೆಂಬೊ
ಚೇಷ್ಟೆ ಬ್ಯಾಡೆಚ್ಚರಿಕೆ
ಮುನ್ನ ಮಾಡಿದ ಪುಣ್ಯಫಲದಿಂದ ಬಂದದ್ದು
ಮುಂದೆ ನೋಡೆಚ್ಚರಿಕೆ ೨

ಕಾಲದೂತರು ಬಂದು ಕಾಯವ ಎಳೆವರೊ
ಕಾಣಬಾರದೆಚ್ಚರಿಕೆ ನಮ್ಮ
ವೇಲಾಪುರವಾಸ ಚನ್ನಕೇಶವನ
ಮರೆಯದಿರೆಚ್ಚರಿಕೆ ೩

೫೯

ಯೇನು ನೆಲೆ ಯೆನುತಿಹೆ ಮನುಜಾ ನಿ
ಧಾನಿಸು ಗತಿಯಚ್ಯುತನಲ್ಲದುಂಟೇ ಪ

ಹುಲ್ಲುಹನಿಯು ಗಾಳಿಗಿಟ್ಟ ಸೊಡರು ನೀರ
ಗುಳ್ಳೆಗಳದು ತಾ ಸ್ಥಿರವೆನಿಪಾ
ಜಳ್ಳು ಜವ್ವನವ ನಿಶ್ಚಯವೆಂದು ಕಾಲನ
ಭಲ್ಲೆಯಕೆದೆಯನೊಡ್ಡುವೆಯಾತಕೆ ನೀ ೧

ಮಿಂಚಿನ ಬಲೆಯ ರಕ್ಷೆಯ ಮನ ಸುದತಿಯಾ
ಚಂಚಲತೆಯ ಜೀವರ ಗೆಲಿದೂ ಪ್ರ
ಪಂಚಿನ ಸಿರಿಯ ನಿಶ್ಚಯವೆಂದು ಬಗೆದು ನೀ
ಮುಂಚುವೆಯೇಕೆ ನರಕಪತಿ ಕರೆಗೇ ೨

ಸುರಚಾಪವೋಲೀ ದೇಹದ ಸಂ
ಗರದಿ ಸೋಲುವ ಶರೀರವ ನಂಬೀ
ನರಕಕೂಪಕ್ಕಿಳಿಯದೇ ವೇಲಾಪುರ
ದರಸ ವೈಕುಂಠ [ಕೇಶವ] ಶರಣೆನ್ನೇ ೩

೬೦

ಸುಳಾದಿ

ಧ್ರುವತಾಳ

ಸತ್ಯಂವದ ಧರ್ಮಂಚರ ಯೆಂಬಾ
ಶ್ರುತಿವಾಕ್ಯವದೇನಲಂಘ್ಯವಲ್ಲಾ
ಮಿಥ್ಯಾವಾದಿಯಾದೆಯಲ್ಲಾ ಮನುಜಾ
ಚತುರಮುಖಾ ಪಂಚಮುಖಾ ಸುರ
ತತಿಯಲಾ ಪುರುಷರಹುದಲ್ಲಾ ಪುರು

ಷೋತ್ತಮನೆನಿಸಿಕೊಂಬನಾವನ್ನೆ ಲೋಕ
ಮಾತೆಯಾರಾರು ಸತಿಯರೊಳಗೇ ಆ ಲಕುಮಿಗೆ
ಪತಿಯಾರೆಂಬುದನರಿಯೆಯಲ್ಲಾ
ಪಿತೃ ಮಾತೃ ದ್ರೋಹವಿದಲ್ಲವೇ ಮನುಜಾ
ಶ್ರುತಿ ಮೂಲೋಕಜಗತ್ತರಿಯೆಯಲ್ಲಾ ನಿಗಮ
ತತಿಯನುದ್ಧರಿಸಿದನಾವನಯ್ಯಾ
ಕ್ರತುಭುಜಾದಿಗೆ ಮುನಿಗಳಿಗೆ ಭೂಸುರರಿಗೇ
ಹಿತವಾವದೆಂಬುದನರಿಯೆಯಲ್ಲಾ । ಅ
ಪ್ರತಿಮ ವೈಕುಂಠಕೇಶವನೆಂದರಿಯೆಯಾ ೧

ಮಠ್ಯತಾಳ

ಅಕಟ ಮನುಜ ನಾನಾದೇವತೆಗಳ ಭಜಿಸೇ
ಮುಕುತಿಯನೆಂತೀವರ್ತಮಗಿಲ್ಲದ ವಸ್ತುವ
ಸಕಲಸುರಾಸುರರು ತಮಗೊಳ್ಳಿದನೀವುದು ಸೋಜಿಗ
ಮುಕುಂದನೆಂದಾಡುವರ್ಥವೇನೆಂದರಿಯೆಯಲಾ
ವೈಕುಂಠಕೇಶವಗಾ ಪೆಸರೆಂಬುದನರಿಯೆಯಲಾ ೨

ರೂಪಕತಾಳ

ಯಾವಜ್ಜೀವನ ಮನುಜ ಬಹು ದೈವಂಗಳನ್ನೆ ಭಜಿಸಿ
ದಾವಳೀ ಹರಿಗತಿಯೆಂದೆನೆ । ಕಾವನೆ ಹರಿ ಯೆಲೆ ಮರುಳೇ
ಯಾವಜ್ಜೀವನ' ಕಾವಪರಿಯಂತ ಪರೋಕ್ಷವಾಗಿ
ಸಾವಲ್ಲಿ ಪತಿಗತಿಯೆಂದೆನೆ ಯಾವಜ್ಜೀವನಾ
ಆ ವಧೂ ಪತಿವ್ರತೆಯಹಳೇ ಯಾ ವೈಕುಂಠರಮಣನೇ ಪರ
ದೈವವೆನ್ನದೆ ನರಕಕ್ಕಿಳಿವನ್ನ ನಿನ್ನಾ ಯೆಲೆ ಮರುಳೇ ೩

ಝಂಪೆತಾಳ

ಪದವನೀಡಿದನೊಬ್ಬ ತಳೆದನೊಬ್ಬನು ಶಿರದಿ
ಮುದದಿ ಧರಿಸಿಯೆ ಪರಮ ಪಾವನನಾದನು ಒಬ್ಬ
ಉದಧಿಶಯನ ವಿರಿಂಚಿ ಗೌರೀಶರೆಂಬುವರೊ

ಳಧಿಕನಾವನು ಬರಿದೆ ಗಲಭೆಯಾತಕೆ ಮರುಳೆ
ಮೊದಲಾವುದಿದಕೆ ಕಡೆಯಾವುದು ಹರಿಯ ಮಹಿಮೆ
ಅದುಭುತ ಚರಿತ್ರ ವೈಕುಂಠ ಕೇಶವರಾಯಾ ೪

ತ್ರಿವುಡೆತಾಳ

ಬಸುರೊಳಗೆ ಬ್ರಹ್ಮಾಂಡವನು ತೋರಿಸಿದನಾವನು ತೋ
ರಿಸಿದನಾವನು ಚಕ್ರಧರ ತೋ
ರಿಸುವವೊಲು ಗೋಪಿಗೆಯದಾವನ
ಬಿಸಜಸಂಭವ ಭವ ಸುರಾಧಿಪ
ವಸುನಿಕರ ಗರುಡ ಗಂಧರ್ವರು
ಸಸಿ ರವಿಗಳಿರೆ ಕಂಡನಚ್ಯುತನಂಗದಲಿ ಕಿರೀಟಿಯರಿಯಾ
ಬಿಸುಡಸೂಯೆಯ ಮನುಜ ವೈಕುಂಠ ಕೇಶವನ್ನೊಳಹೊರಗೆ ಪರಿಣ
ಮಿಸುವುದೀ ಲೋಕಗಳೆಶೋದೆಗೆ ಸಾಕ್ಷಿಯಲ್ಲವೆ ಯಾ ಧನಂಜಗೆ ೫

ಅಟ್ಟತಾಳ

ಪರಿ ಪರಿ ಭಜನಕಂಟಕರ ದಾರಿಯಲಿ
ಸ್ಮರನೆಂಬ ಚೋರಬಾಧಕನ ದಾರಿಯಲಿ
ಹರಿಶರಣ ಸಹಾಯವಿರುತಿರಬೇಕಲ್ಲಿ ಶ್ರೀ
ಹರಿ ಪರದೈವವೆಂಬ ಜ್ಞಾನ ಪಥೆಯಲಿ
ಹರಿಶರಣ ಸಹಾಯವಿರುತಿರಬೇಕಲ್ಲಿ
ಪರಮಪದ ದಾರಿ ಸುಲಭವೇ ನಿನಗೆ
ನಿರುಪಮ ವೈಕುಂಠ ಕೇಶವ ಸುಲಭವೇ ೬

ಏಕತಾಳ

ಸುರಪುರ ಹರಗಿರಿಯಂತೆಲೆ ಮನುಜ
ಪರಿದೈದುವಡೆ ಪರಮಪದ ನಿನಗೆ
ಜರಿಯಬೇಕು ಕಾಮದಿರುವುಗಳನು

ತೊರೆಯಬೇಕು ಖಳಜನ ಸಹವಾಸವ
ಎರಗದಿರಬೇಕಿತರ ದೈವಂಗಳಿಗೆ
ಸಿರಿಗೆ ಮೆಚ್ಚುವನೆ ವೇಲಾಪುರ
ದರಸ ವೈಕುಂಠ ಚನ್ನಕೇಶವ ೭

ಜತಿ

ಮರೆಯೆ ತನುಮನ ಧನವ ಸೂರೆಯು
ಪರಮಪದಾ ವೈಕುಂಠ ಚನ್ನಕೇಶವನೆ

(ಊ) ಕ್ಷೇತ್ರ ವರ್ಣನೆ

೬೧*

೧. ಬೇಲೂರು

ಚನ್ನಕೇಶವರಾಯ ಚೆಲುವ ಚೆನ್ನಿಗರಾಯಾ
ನಿನ್ನ ಕಾಣದೇ ನಿಲ್ಲಲಾರೆ ಬೇಲೂರ ಪ

ಧ್ವಜ ವಜ್ರ ಪದುಮ ಪತಾಕಾಂಕುಶಗಳು
ನಿಜಸತಿ ಲಕುಮಿದೇವಿಯರಾ
ಭುಜ ಕುಚ ಕುಂಕುಮಾಂಕಿತ ಧರಾಂಕಿತ
ಭಜಕರ ಭಾಗ್ಯೋದಯ ಪಾದಯುಗಳದಾ ೧

ಸುರ ವೈರಿಗಳೆದೆ ಥಲ್ಲಣವೆನಿಸುವಾ
ಬಿರುದಿನ ಖಡ್ಗೆಯಪ್ಪ ಚರಣಂಗಳಾ
ಗರುಡನ ಹೆಗಲೇರಿ ಉದರದಿ ವಿರಿಂಚಿಯು
ಉದುಭವಿಸಿದ ವರನಾಭಿಯ ಚೆಲುವಿನಾ ೨

ಪೊಂಬಟ್ಟೆಯಿಂದೆಸೆವ ಪೀತಾಂಬರ
ಚೆಂಬೊನ್ನದ ಕಾಂಚಿಯದಾಮದಾ

---

* ಇದಕ್ಕೆ 'ಪುರಂದರವಿಠಲ' ಎಂದು ಅಂಕಿತ ಸೂಚಿಸುವ ಪಾಠಾಂತರವಿದೆ. ಆದರೆ ಅವರ ಕೃತಿಗಳ ಅಧಿಕೃತ ಸಂಪುಟದಲ್ಲಿ (ಪುರಂದರ ಸಾಹಿತ್ಯದರ್ಶನ, ಕನ್ನಡ ಸಂಸ್ಕೃತಿ ಇಲಾಖೆ, ಎಸ್.ಕೆ. ರಾಮಚಂದ್ರರಾವ್, ಇತರರು, ಬೆಂ) ಈ ಕೃತಿ ಕಂಡುಬರುವುದಿಲ್ಲ.

ಅಂಬುಜ ಕೌಮೋದಕಿ ಸುದರುಶನ
ಕಂಬುವ ಧರಿಸಿಹ ಚತುರುಭುಜಂಗಳಾ ೩

ಶ್ರೀಯಾಲಿಂಗಿಸಿ ಸುಖವ ಕಾಮಿನಿಯರ
ಶ್ರೀಯೋಗವ ತೋರಿಸೆನಗೊಮ್ಮೆ
ಹಾಯೆಂದು ಬಿಗಿದಪ್ಪಿ ನಂಬಿಸಿ ಚುಂಬಿಸಿ
ಬಾಯ ತಂಬುಲವಿತ್ತು ಬಂದೆನ್ನ ನೆರೆಯಾ ೪

ಕರೆವೆನ್ನ ಮನದಲ್ಲಿ ಕರೆವ ನಾಲಿಗೆಯಲ್ಲಿ
ಕರೆವೆನ್ನ ಕಣ್ಣುಸನ್ನೆಯಲೀ
ಕರೆವೆ ನೆರೆವೆ ನಿನ್ನ ಚರಣಕೆರಗುವೆ ನಾ
ವರವೈಕುಂಠಕೇಶವ ಬೇಲೂರ ೫

೬೨

ನೋಡಲುಬೇಕೇ ಎನ್ನೊಡೆಯನನೂ
ನೋಡಿದಿರೇ ತಾಳಪಾಕಂ ಚೆಣ್ಣೈಯಾ ಪ

ದಿಕ್ಕುಗಳನು ಬೆಳಗುವ ಸುಕೀರಿಟವ
ನಿಕ್ಕಿಹ ಮಾಣಿಕದೋಲೆಯನೂ
ಚೊಕ್ಕಟ ಮೂಗುತಿಯಿಂದೊಪ್ಪುವನ್ನ ಜ
ಗಕ್ಕೆ ಪತಿಯೆನ್ನೆರೆಯ ಚೆನ್ನಿಗನಾ ೧

ಕಂಬು ಚಕ್ರಗದೆ ಪದುಮವ ಪಿಡಿದು ಪೀ
ತಾಂಬರದಂಗಿಯ ಧರಿಸಿಕೊಂಡೂ
ತುಂಬಿದ ವಕ್ಷದಿ ರಮೆ ಕೌಸ್ತುಭದಿಂ
ಗಂಭೀರಾರ್ಣವನಾದ ಚೆನ್ನಿಗನ ೨

ಸುರರೆಲ್ಲರು ಪೂಜಿಸುವ ಚರಣದೊಳು
ಕಿರುಗೆಜ್ಜೆ ಪೆಂಡೆಯವಿಟ್ಟವನಾ
ವರವೈಕುಂಠ ವೇಲಾಪುರದರಸನ
ಶರಣ ವತ್ಸಲನಾದ ಕರುಣಾಂಬುಧಿಯಾ ೩

೬೩

ಪೊಗಳಲರಿಯೆನೆ ಲೋಕಮಾತೇ ನಿನ್ನ
ಸೊಗಸಾದ ರೂಪುರೇಖೆಯ ಸಿಂಧುಜಾತೇ ನಿಗಮವಿಖ್ಯಾತೇ ಪ

ಅಳಕ ನಿಚಯವು ಇಂದ್ರನೀಲಗಳು ತುಂಬಿಗಳು
ತಳಪುಗಳು ಯೆಸೆವ ನಳಿನಗಳು ಬಾಳೆಗಳು
ಚೆಲುವಹಿ ಸುನಾಸಿಕವು ಅಲಕೆ ಸುಮವು ಚಂಪಕವು
ಅಲರ್ವಿಲ್ಲಿನ ಧನುವೋ ಪುರ್ಬುಗಳೋ
ಪೊಳೆವ ರದನದ ಸಾಲುಗಳು ಕಳಸಗಳೋ ಕುಂಡಲಗಳೋ
ವಿಲಸದಧರವು ಬಿಂಬಫಲವೋ ನವವಿದ್ರುಮವೋ
ಅಳವಟ್ಟ ಸವಿನುಡಿಯು ಗಿಣಿಯ ಸೋಲಿಪ ಪರಿಯೋ
ಕಳೆ ಪೆರ್ಚಿದಾನನವೋ ಶಶಿಯೋ
ಭಳಿರೆ ಮಳಯಜಗಂಧಿನಿ ಮಹೇಶರಿಪು ಜನನೀ ೧

ಗಳವು ಶಂಖವು ಮೆರೆವ ಕದಪುಗಳು ಮುಖರಗಳು
ಬಳೆವ ಮೊಲೆಗಳು ಕನಕ ಕಲಸಗಳು ಶಿಖರಗಳು
ನಳಿದೋಳುಗಳು ಕುಸುಮ ಮಾಲೆಗಳು
ಸುಲಲಿತವಯವವೋ ಲತಾವಳಿಗಳ ತರಂಗವೋ
ತಳಿವ ಪೂಜಡೆಯೋ ಸುಲಿಪಲ್ಲವವೋ
ಬಳುಕುತಿಹ ನಡುವೋ ಅಂಬರದ ಸೂತ್ರದಲಣುವೋ
ಕಳಸವೊ ಕುಂಭವೊ ಗಿರಿಯೋ
ತೊಳಗುವ ತೊಡೆಯೆನಲೋ
ಸಲಿಲಜಾಗಾರೇ ಸಮ್ಮೋಹನಾಕಾರೇ ಸೌಂದರ್ಯಭರಿತೆ ೨

ವರಜಂಘೆಗಳು ಪಂಚಶರನ ಶರಧಿಗಳೋ
ಸರಸೀರುಹ ಕೆಂದಳಿರೋ ಚರಣಗಳು ನಖಗಳು
ಸರಸೇಂದು ಮಂಡಲದ ಸಾಲುಗಳೋ
ಸ್ಫುರುಚಿರಾಂಬಕೀ ದಯಾಕಾರೇ ಶುಭಚರಿತೆ ವಿಖ್ಯಾತೆ

ಪುರಹರ ಸುರೇಶ್ವರ ಸುಪೂಜಿತಾಂಘ್ರಿಸರೋಜೇ ಭಕ್ತ ಮಂದಾರೇ
ವರವೇಲಾನಗರವಾಸಿ ವೈಕುಂಠ ಚನ್ನಿಗರಾಯನರಸಿ ಗುಣರಾಸಿ
ದುರಿತಾಸಿ ನಮೋ ಪರಮಪದದಾಯಕಿಯೆ ಸೌಮ್ಯನಾಯಕಿಯೆ ೩

೬೪

೨. ನಂಜನಗೂಡು

ದೇವತಾಮಯನಾಗಿ ಸಕಲ ಪ್ರಾಣಿಗಳ ನಾ–
ನಾ ವಿಧದ ಪೂಜೆಗಳ ಕೈಗೊಂಬದೇವ ಪ

ಕಪಟಮಾತಾರೂಪವಳವಡಿಸಿ ಕೊಲಲೆಂದು
ಚಪಲಗತಿಯಿಂ ಬಂದ ಪೂತನಿಯನು
ಉಪಮೆಯಿಂದಸುವರೆಸಿ ಘನಕುಚಂಗಳನೂಡೆ
ಅಪರಿಮಿತವಾದ ನಂಜುಂಡ ಮಹದೇವ ೧

ಕಡಹದ ಮರದ ಕೊನೆಯನಡರಿ ಕಾಳಿಂದಿಯ
ಮಡುವಿನಲಿ ಧುಮುಕಿ ಪಣಿಪೆಡೆಯ ತುಳಿದು
ಮೃಡ ಮುಖ್ಯಸುರರುಘೇಯೆನೆ ಕೋಪಶಿಖಿಯಿಂದ
ಮಡುವಿಲುರುತರದ ನಂಜುಂಡ ಮಹದೇವ ೨

ರುದ್ರಾಂತರಾತ್ಮ ವೈಕುಂಠಸಂಕರ್ಷಣ ಸ–
ಮುದ್ರ ಮಥನದ ಕಡೆಯಲುದಿಸಿ ಜಗವ
ರೌದ್ರವತಾರದಿಂದುರಿಯುರುಪುತಿರೆ ಕಂತು
ಸದ್ಯಢಮನದಿ ನಂಜುಂಡ ಮಹದೇವ ೩

೬೫

೩. ತಿರುವಂಗೂರು

ಭೇರಿ ನಿಸ್ಸಾಳ ತಮ್ಮಟೆಗಳೆ ಗಿಡಿಮಡಿಯ
ಘೋರೆಂಬ ವಾದ್ಯರವದಿ ಪ

ಶ್ರೀರಮಣ ಚಿತ್ತಾವಧಾನ ಪರಾಕು ಕೈ
ವಾರಿಸುವ ಪಾಠಕರ ಮೇಳದಿಂ ರಾಮನೂ ಅ.ಪ

ಮುತ್ತು ನವರತ್ನ ಕೆತ್ತಿಸಿ ಬಿಗಿದಚಲ್ಲಣದ
ಇತ್ತರದ ಸಮಕಟ್ಟಿನಾ ಝಲ್ಲಿಯಾ
ಸುತ್ತ ಮುಖದಲಿ ಮಿನುಗುವರಳೆಲೆಯ ಢಾಳದಿಂ
ದೊತ್ತಿಸಿದ ಕಡಿವಾಣದಾ ಮುಖಾರಂಬದಾ
ಕತ್ತಿ ಸಿಂಗಾಡಿ ಕೆಡೆಯ ಬತ್ತಳಿಕೆ ಬಿಗಿ
ದೊತ್ತಿ ಕುಣಿಕುಣಿದು ಬರುವಾ ತೇಜಿಯಾ
ಅರ್ತಿಯಿಂ ರಾಮರಾವುತನೇರಿ
ದೈತ್ಯವಿಪಿನಕ್ಕೆ ಪೊರಮಟ್ಟೈದಿದಾ ರಾಮನೂ ೧

ಸುರರು ಫೌಜಾಗಿ ತೋರಲು ಸೋಮಸೂರಿಯರು
ವರಛತ್ರವನುವಾಗಿ ಪಿಡಿದು ನಿಲಲೂ
ಸರಸಿಜೋದ್ಭವನು ಸಾರಥಿಯಾಗಿ ನಡೆಸುತಿರೆ
ವರರಥವ ಸಿಂಗರಸಿ ಹರಿ ಸ್ಮರಿಸಿ ತನ್ನಾ
ವರವಾಹನವನೇರಿ ಚರಿಸುತುತ್ಸಾಹದಿಂ
ತ್ವರದಿಂದ ನಡೆಯುತಿರಲೂ
ಖರದೂಷಣ ತ್ರಿಶಿರ ಮಾರೀಚ ಮೃಗಕುಲವ
ತರಿದು ಬೇಟೆಯನಾಡಿದಾ ರಾಮನೂ ೨

ದುರುಳ ದಶಶಿರ ಕುಂಭಕರ್ಣ ಮೊದಲಾಗಿದ್ದ ಖ
ಳರ ಖಂಡಿಸಿ ಕದನದಲ್ಲಿ ಗೆಲಿದೂ
ಮರೆಹೊಕ್ಕ ವೀರವೈಷ್ಣವ ವಿಭೀಷಣನೆಂಬ

ಶರಣನನು ಪರಿಪಾಲಿಸಿ ಜಗದೊಳೂ
ಪರಿವೃತಿಹ ಕಾವೇರಿ ಉತ್ತರದ ಭಾಗದಲಿ
ಮೆರೆವ ತಿರುವಂಗೂರಿನಲೀ ಸುಖದಲೀ
ಸ್ಮರರೂಪ ವೈಕುಂಠರಾಮ ಬೇಟೆಯನಾಡಿ
ಪರಮ ಹರುಷದಿ ಬಂದು ನಿಂದ ಸಂಭ್ರಮದಿ ೩

೬೬

೪. ಗೊರೂರು

ಹೇಮಾವತೀ ತೀರ ನಿಲಯಾ ನಮೋ
ಶ್ರೀಮನೃಸಿಂಹ ಶರಣೆನ್ನು ಬಿಡದೆ ಮನವೇ ಪ

ಅರಸು ಮುನಿವಾಗ ಆತ್ಮರು ಮೊಗವ ತೆಗೆವಾಗ
ದುರುಳ ಮಾನವರಿಟ್ಟೆಡೆಯಲಿರುವೆಂಬಾಗ
ತರುಣಿಯರೊಲವು ಪೈಸರಿಸುವಾಗ ಸುರರು ಮ
ತ್ಸರಿಪಾಗ ನರಸಿಂಹ ಶರಣೆನ್ನು ಮನವೇ ೧

ಮುಗಿಲಗಲದಾಪತ್ತು ಕವಿವಾಗ ಕ್ರೂರಗೃಹ
ಪಗೆಗಳಿಟ್ಟುಣಿಪಾಗ ಅನಲ ಜಲಭಯದಿ
ಮಿಗೆ ಮುಳುಗುವಾಗ ರೋಗಗಳು ಪೀಡಿಸುವಾಗ
ಮೃಗರಾಜವದನ ಶರಣೆನ್ನು ಬಿಡದೆ ಮನವೇ ೨

ಸುಖವ ಪಡುವಾಗ ದು:ಖಕ್ಕೆ ಮನವ ತೆಗೆವಾಗ
ಅಖಿಲ ಪಾತಕದ ನೆರೆಕಾಲಲೊದೆವಾಗ
ಮಖಮಥನ ಕಮಲಭವಮುಖ ದಿವಿಜವಂದ್ಯಪದ
ನಖನೆ ಶ್ರೀ ವೈಕುಂಠಪತಿ ಚನ್ನರಾಯ[ನೆನುಮನವೆ] ೩

ಕವಿ ಲಕ್ಷ್ಮೀಶನ ಕೀರ್ತನೆಗಳು

(ಅ) ಶ್ರೀಹರಿಸ್ತುತಿಗಳು

೬೭

ಏಳಯ್ಯ ಕಾರುಣ್ಯನಿಧಿ ಕಮಲದಳ ನೇತ್ರ
ಏಳಯ್ಯ ಪರಮ ಪಾವನ ಮುನಿಜನ ಸ್ತೋತ್ರ ಪ

ಏಳಯ್ಯ ಕರಿರಾಜವರದ ವಿಜಯಮಿತ್ರ
ಏಳು ದೇವಕಿಯ ಪುತ್ರ ಅ.ಪ

ಏಳು ಹರಿರಥ ಶತಕೋಟಿ ಪ್ರಕಾಶನೇ
ಏಳೆರಡು ಲೋಕಗಳು ಉದರದಲಿ ಧರಿಸಿದನೇ
ಏಳು ಗೂಳಿಯಕಟ್ಟಿ ಕಾಂತೆಯನು ವರಿಸಿದನೇ
ಏಳು ಮುನಿನುತ ವಂದ್ಯನೇ ಸ್ವಾಮಿ ೧

ಏಳು...(?)ಗಳೊಳು ಗಂಗೆಯನು ಪಾದದಲಿ ಪಡೆದೇ
ಏಳು ಪೆಡೆಯವನ ಮಡುಹಿನಲಿ ದೊತ್ತಳದುಳಿದೇ
ಏಳುತ್ತ ನಿಮ್ಮ ನಾಮವನೊಮ್ಮಗೆ ನಡದೇ
ಏಳು ಜನ್ಮದ ಭವಹರಾ ಸ್ವಾಮಿ ೨

ಏಳು ಜಿಹ್ವೆಯನುಳ್ಳವನ ಮುಖವಾದೆ ಮ
ತ್ತೇಳ್ಮೂರು ಸೂಳಿನಲಿ ಕ್ಷತ್ರಿಯರ ಮರ್ದಿಸಿದೇ
ಏಳು ತಾಳೆಗಳನೊಂದಂಬಿನಲಿ ಛೇದಿಸಿದೇ
ಏಳು ಸಮರನ ಕೊಲಿಸಿದೇ ಸ್ವಾಮಿ ೩

ಏಳು ಶರಧಿಯಲಿ ಪಾಲ್ಗಡಲಲ್ಲಿ ಪವಡಿಸಿದೆ
ಏಳು ವ್ಯೂಹದಲಿ ಪಾರ್ಥನ ನುಡಿಯ ಪಾಲಿಸಿದೆ
ಏಳು ದಿಕ್ಪಾಲಕರು ನಿನ್ನ ಪೊಗಳುತಲಿಹರೇ
ಏಳು ದ್ವೀಪಕ್ಕೊಡೆಯನೇ ಸ್ವಾಮಿ ೪

ಏಳು ಶಕ್ತಿದೇವತೆಯರೊಳಿಗವ ಕೇಳಿ ಹರಿ
ದೇಳೆರಡು ಲೋಕ ಹರಿ ತಾನಲ್ಲದಿಲ್ಲೆಂಬ
ಏಳಿಗೆಯ ಹಮ್ಮಿನೊಳಿದ್ದ ದಶಕಂಧರನ
ಏಳಿಸಿದೆ ಸುರಲೋಕಕೇ ಸ್ವಾಮಿ ೫

ಏಳು ಸ್ವರ ಮುಟ್ಟಿ ತುಂಬುರುನಾರದರು ಬಳಿ
ಕೇಳು ತಾಳಂಗಳಲಿ ನಿನ್ನ ಪೊಗಳುತಲಿಹರೇ
ಏಳುನಗರಕ್ಕಧಿಪವೆನಿಪ ಸುರಪುರವಾಸ
ಏಳು ಲಕ್ಷ್ಮೀನಿವಾಸ ಸ್ವಾಮಿ ೬

೬೮

ಏಳಯ್ಯ ರಾಕ್ಷಸಾಂತಕ ದನುಜಸಂಹಾರ ಪ

ಏಳಯ್ಯ ರಾಜೀವನಯನ ನವನೀತಚೋರ
ಏಳು ಲಕ್ಷ್ಮೀಮನೋಹರ ಹರಿಯೆ ಅ.ಪ

ದಿನಪನುದಯಂಗೆಯ್ಯೆ ದಿಕ್ಪಾಲಕರ್ನೆರೆಯೆ
ಕನಕಭೂಷಣದ ಕಾಂತೆಯರು ಆರತಿಪಿಡಿಯೆ
ಅನುಪಮಗೆ ಜಯವೆಂದು ಬಂದು ನಿಂದೈದಾರೆ
ಇನಕುಲನೆ ನಲಿದುಪ್ಪವಡಿಸು ಶ್ರೀಹರಿಯೇ ೧

ಪ್ರಹ್ಲಾದ ನಾರದರು ವಾಸಿಷ್ಠ ವಿಶ್ವಾಮಿತ್ರರು
ಮಹಮುನಿಗಳತ್ರಿ ಭಾರದ್ವಾಜ ಜಮದಗ್ನಿ ಗೌತಮರು
ಬಹುವಿಧದಿ ಕಶ್ಯಪರು ಹನುಮಂತ ತುಂಬುರರು
ಹರುಷದಿ ಪಾಡುತ್ತಲೈದಾರೆ ಇನಕುಲನೆ ನಲಿದು ೨

ದೇವಗಂಗೆಯಕೊಂಡು ದೇವರ್ಕಳೈದಿದರು
ದೇವತಾವಳಿ ಬಂದು ದೇವ ಜಯವೆನುತಿಹರು
ದೇವಪುರದಲಿ ನಿಂದ ದೇವಕಿಯ ವರಕಂದ
ದೇವ ಲಕ್ಷ್ಮೀಪತಿಯ ದೇವ ನೀನೇಳೈ ಹರಿಯೇ ೩

೬೯

ಐಸಿರಿಯನೇನೆಂದು ಪಾಡಲಿ ಶ್ರೀಹರಿಯ
ಮೈಸಿರಿಯ ಪಾದಾದಿ ಕೇಶ ಪರ್ಯಂತ ಪ

ಸಿರಿಯ ಕರಾಬ್ಜ ಪರಾಗದಿಂ ರಂಜಿಪ
ಸರಸಿಜ ಕುಂಕುಮರಜ ರಮ್ಯವೆಂದೆನಿಪ
ನಿರುತ ಯೋಗೀಂದ್ರ ಹೃತ್ಕಮಲವನರಳಿಪ
ತರುಣಾತಪದ ಕಾಂತಿಯೆನೆ ಕಂಗೊಳಿಪ
ವರಶ್ರುತಿ ಸೀಮಂತ ಸಿಂಧೂರವೆನೆ ತೋರ್ಪ
ಉರುಗಾಳಿಯ ಫಣಿ ರತುನಾರತಿಯೆನಿಪ
ಸುರುಚಿರ ಶೋಣ ಪ್ರವಾಳವ ಸೋಲಿಪ
ಅರುಣಾಂಬುರುಹದಂದದಿ ಥಳಥಳಿಪ ೧

ಚರಣತಳಂಗಳೊಪ್ಪುವ ತನಿ ಕೆಂಪಿನ
ಶರಣ ಚಿಂತಾಮಣಿಯ ನಸುಗೆಂಪಿನ
ಧರಣಿಯನೀರಡಿ ಮಾಡಿದ ಪೆಂಪಿನ
ಕರುಣದಿ ಕಲ್ಲ ಪೆಣ್ಮಾಡಿದ ಸೊಂಪಿನ
ಕರ ಶಂಖ ಪದ್ಮ ರೇಖಾಂಕಿತದಿಂಪಿನ
ಕುರುನೃಪಗರ್ವ ನಿರ್ವಾಹಾಪಗುಂಪಿನ
ಸುರಮಣೀಮಕುಟ ನಾಯಕದ ಸೊಂಪಿನ
ಪರಮಪಾವನ ಪಾದದುಂಗುಟದಲಂಪಿನ ೨

ಕಂಜಭವಾಂಡ ಸೋಂಕದ ಮುನ್ನ ಬೆಳಗುವ
ಸಂಜನಿಸಿಹ ಗಂಗೆ ಮುದದಲ್ಲಿ ಮುಳುಗುವ
ಭುಂಜಿಸಿತಮಸ ಜಗಂಗಳ ಬೆಳಗುವ
ಮಂಜೀರ ಕಡಗ ಭಾಪುರಿಗಳಿಂ ಮೊಳಗುವ
ಮಂಜುಳಾಂಗದಿ ನಖಪಂಕ್ತಿಗಳ್ ತೊಳಗುವ

ರಂಜನೆಯಿಂ ಶ್ರೀಮದಂಘ್ರಿಗಳೆಸೆವ
ವಂಚಿತ ಸೌಮ್ಯ ಜಂಘೆಗಳಿಂ ಸೊಗಯಿಸುವ
ಕುಂಜರ ರುಚಿಯ ಪೂರ್ಣೇಂದು ರಂಜಿಸುವ ೩

ಅಳವಟ್ಟ ಪೀತಾಂಬರದ ಸುಮಧ್ಯದ
ಕಳಕಾಂಚಿದಾಮದುನ್ನತ ಕಟಿತಟದ
ನಳಿನಾಲವೋದಿತ ನಾಭಿಪಂಕರುಹದ
ಇಳೆಯ ಜನಂಗಳಿಗೆನಿಸುವ ವುದರದ
ವಿಳಸದಲಂಕೃತ ಬಾಹು ಚತುಷ್ಟದ –
ಮಳ ಶಂಕಚಕ್ರ ಸದಬ್ಜ ಸಂಭೃತದ
ಪೊಳೆವ ಕೌಸ್ತುಭಮಣಿ ಶ್ರೀವತ್ಸೋದರದ
ತುಳಸಿ ಮಂದಾರ ಮಾಲೆಗಳ ಕಂಧರದ ೪

ಘನ ಸೌಭಗ ಗಂಡಮಂಡಲಯುಗ್ಮದ
ಮನೋಹರ ಮಕರಕುಂಡಲ ಕರ್ಣಯುಗ್ಮದ
ವನಜ ನೇತ್ರಂಗಳ ಕರುಣಾಕಟಾಕ್ಷದ
ವಿನುತ ಮೌಕ್ತಿಕದಿಂದ ಮೆರೆವ ನಾಸಿಕದ
ನಸು ಮೋಹನದಿ ಸಮನಿಪ ಚುಬುಕಾಗ್ರದ
ತನಿರಸ ತುಳುಕುವ ಚೆಲುವಿನಧರದ
(?)ಲಲಿತ ವದನದ ವರದಂತಪಂಙ್ತಯ
ಇನಿಗೆದರುವೆಳನಗೆಯ ಸಿರಿಮೊಗದ ೫

ಸಿಂಗಾಡಿಯಿಂ ಮಿರುಗುವ ಪುರ್ಬುಗಳ ಸ –
ಧ್ಬಂಗಾಳ ಕಂಗಳ ಮಿರುಪ ನಾಸಿಕ ಬೆಳ
ದಿಂಗಳ ಪೊಂಗಿನ ಕಸ್ತೂರಿ ತಿಲಕ ರ
ತ್ನಾಂಗದ ರಂಗಿನ ಮಕುಟ ಮಸ್ತಕದ ನೀ
ಲಾಂಗದಳಾಂಗನೆಯರು ಸುರಪುರ ಮಧ್ಯ
ರಂಗದೊಳಂಗನೆಯರು ಕೂಡಿ ನಿಖಿಳ ಜ
ಗಂಗಳ ಹಿಂಗದೆ ಪೊರೆವ ಶ್ರೀ ಲಕ್ಷ್ಮೀಶ
ಮಂಗಳೋತ್ತುಂಗ ಮೂರುತಿಗೆ ನಮೋ ನಮೋ ೬

೭೦

ಕಮಲಕಮಲಾಧರನೆ ಕಮಲಭವ ವಂದಿತನೆ
ಕಮಲ (?) ನುತನೇ ಕಮಲಶತ ಹಿತಕರನೆ ಪ

ಕಮಲಬಾಣನ ಪಿತನೇ ಕಮಲದಳ ಲೋಚನನೇ
ಕಮನೀಯನುಪ್ಪವಡಿಸಾ ಹರಿಯೇ ಅ.ಪ

ಸಲಹಲೀ ಲೋಕಗಳ ಬಹುವೆನಿಪ ದಾನವರ
ಗೆಲಿದು ಪಾಲ್ಗಡಲ ನಡುವಲದ ನೆಲೆವನೆಯ
ತಲೆವಣಿಯ ಕಾಂತಿಗಳ ಮಿಗೆ ಜ್ವಲಿಪ ಬೆಳಗುಗಳಿಂದ
ನಲಿದು ಫಣಿಮಂಚದೊಳಗೆ
ಮಲಗುವಾಸುಗಳ ಮೇಲೊಲಿದು ಕಾಂತೆಯರೊಡನೆ
ಲಲಿತ ಸಂಕುಳದಿಂ ಕಲಿತ ಮೋಹವ ಮೆರೆಯೆ
ಫಲಿತ ಪುಳಕಗಳು ಮಿಗೆ ಬಲಿದ ನಿದ್ರೆಗಳ ಶ್ರೀಲಲನೇಶನುಪ್ಪವಡಿಸ ೧

ಪರಿಯುತಿದೆ ತಂಬೆಲರು ಹರವುತಿದೆ ತಮರಾಸಿ
ಸರಿಯುತಿದೆ ಉರುಗಣಂ ಬಿರಿಯುತಿದೆ ಅರೆಮುಗುಳು
ಪೊರೆಯುತಿದೆ ಲತೆಯ ಸಿರಿ ಮುರಿಯುತಿದೆ ಶರಧಿಯೇಳ್ಗೇ ಉದಯಕೆ
ಕರೆಯುತಿದೆ ಗಿಳಿವಿಂಡು ಕೊರುಗುತಿವೆ ಕೋಕಗ
ಳ್ಮೊರೆಯುತಿದೆ ದಿವಿಜಹರೆ ಸುರಿಯುತಿದೆ ಅರಳ ಮಳೆ
ಗರೆಯುತಿದೆ ಕೋರಕಂ ವೋಲಗಕೆ ಕರುಣಾಳು ಉಪ್ಪವಡಿಸಾ ೨

ತೋರುತಿದೆ ಇನಬಿಂಬ ದೂರುತಿದೆ ಕುಮುದ ಸೊಂ
ಪೇರುತಿದೆ ವನರುಹಂ ಬೀರುತಿದೆ ಕಡು ಚೆಲ್ವ
ಸೋರುತಿದೆ ಮಕರಂದ ತೋರುತಿದೆ ತನಿಗಂಪ ಪಾರುತಿವೆ ಭ್ರಮರಂಗಳೂ
ಸಾರುತಿದೆ ತಾಮ್ರಶಿಖಿ ಜಾರುತಿದೆ ಶಶಿನಭದಿ
ಕಾರುತಿವೆ ಹಿಮಶಿಲೆಗಳಾರುತಿದೆಯ್ಯೆಕಿಲುರು
ಚೀರುತಿವೆ ಪಕ್ಷಿಗಳು ಮೀರುತಿವೆ ಜನರವಂ ಪೂರ್ಣಧನು ಉಪ್ಪವಡಿಸಾ ೩

ಆಡುವರೆ ನರ್ತನವ ಪಾಡುವರೆ ಗಾನಗಳ
ನೀಡುವರೆ ಪನ್ನೀರ ತೀಡುವರೆ ಸುರಭಿಗಳ
ಮಾಡುವರೆ ಸಿಂಗರವ ಪೂಡುವರೆ ಹಾರಗಳನೂ
ಕೋಡುವರೆ ಕಾಣಿಕೆಯ ಬೇಡುವರೆ ಸಂಪದವ
ಸೂಡುವರೆ ಕುಸುಮಗಳ ನೋಡುವರೆ ಸಮಯಗಳ
ಓಡುವರೆ ಊಳಿಗಕೆ ಕೂಡಿಹರು ಬಾಗಿಲೊಳು
ಗಾಡಿಮಿಗಲುಪ್ಪವಡಿಸಾ ೪

ದೇವ ಸಂಸ್ತುತಲೀಲ ದೇವ ಮುನಿನುತ ಶೀಲ
ದೇವತತಿಗನುಕೂಲ ದೇವರಿಪುವನಜಾಲ
ದೇವ ಪತಿಸುತಪಾಲ ದೇವಕೀವರ ಬಾಲ ದೇವಕುಸುಮಗಳ ಮೂಲ
ದೇವನದಿಜಾಪಾಲ ದೇವ ನಿಗಮದ ಮೂಲ
ದೇವ ತನುರುಚಿಲೀಲ ದೇವ ರವಿಸಮ ಚೇಲ
ದೇವ ಗುಣಗಣಜಾಲ ದೇವಪುರಿ ಶ್ರೀಲೋಲ ದೇವ ನಲಿದುಪ್ಪವಡಿಸಾ ೫

೭೧

ನಾಗವೇಣಿಯೆ ಕರೆದು ತಾರೆ ನಾಗಶಯನನಾ ಪ

ನಗಧರ ಪ್ರಿಯನೆನಿಪ ನಾಗವರದನಾ ಅ.ಪ

ಜಲವಪೊಕ್ಕು ತಮ ನಲಿದ ಜಲರುಹಾಕ್ಷನಾ
ಜಲಧಿ ಮಥನವನ್ನು ಗೈದ ಚೆಲುವರರಸನಾ ೧

ಧರಣಿಪೊಯ್ದು ಖಳನ ಸೀಳ್ದ ನಳಿನನಾಭನಾ
ಭರದಿ ಹೊಳೆವ ಕಂಬದಲ್ಲಿ ತರಳಗೊಲಿದನಾ ೨

ಧರಣಿ ಈರಡಿಯ ಮಾಡಿ ಸುರರ ಪೊರೆದನಾ
ಧರಣಿಪಾಲಕುಲವ ತರಿದ ಪರಶುರಾಮನಾ ೩

ಧರಣಿಸುತೆಯನೊಯ್ದ ಖಳನ ಶಿರವನರಿದನಾ
ತರಳತನದಿ ವೊರಳನೆಳೆದ ತರಳ ಕೃಷ್ಣನಾ ೪

ತರುಣಿಯರ ವ್ರತವನಳಿದು ಪುರವಗೆಲಿದನಾ
ಹರುಷದಿಂದ ತುರಗವೇರಿ ನಲಿವ ಸುಗುಣನಾ ೫

ಸುರಪುರದಿ ನಲಿವಿನಿಂದ ನೆರೆದು ನಿಂದನಾ
ಶರಣರಕ್ಷ ಲಕ್ಷ್ಮಿಯರಸ ಪರಮಪುರುಷನಾ ೬

೭೨

ಭಜಿಸಿರೋ ಮನದಣಿಯ ಸುಜನಾಬ್ಜ ದಿನಮಣಿಯ
ಭುಜಗಾರಿಗಮನ ತಿಂಥಿಣಿಯ ಸತ್ಕಣಿಯ ಪ

ರಜನೀಕರ ಗುಣಶ್ರೇಣಿ ಅಜಭವ ಸುರಾಗ್ರಣಿಯ
ತ್ರಿಜಗಮೋಹನ ಮಣಿಯ ಸೊಬಗಿನ ಕಣಿಯ ಅ.ಪ

ಪೊಳೆವ ಮಕುಟದ ಫಣಿಯ ತಿಲಕದಲಿ ರಂಜಿಸುವ
ಪ್ರಣವ ಗೋಚರ ಸುಧಾಮಯದ ಕದಪಿನಲಿ
ತೊಳಪ ಕುಂಡಲದ ನಾಸಿಕದ ಮೂಗುತಿಯೆಸೆಯೆ
ಸುಲಿಪಲ್ಲ ನಗೆಮೊಗದ ಸುಲಭಸೌಂದರನ ೧

ಪದಕ ಮಣಿಮಯ ಮೌಕ್ತಿಕದ ಹಾರ ತ್ರಿಸರ ಕಂ
ಧರ ವೈಜಯಂತಿಯೊಲವಿನ ಬಾವುಲಿ
ಮುದದ ಕಂಕಣ ಕರದ ಮುದ್ರೆಯೆಸೆವಾ ಬೆರಳ
ಗದೆ ಸುದರ್ಶನ ಕಂಬು ಮದನಶರಧನು ೨

ಉರದ ಪೊಂಬಣ್ಣದಂಬರ ತರಣಿ ಶತಕೋಟಿ
ಕಿರಣತತಿ ಕುಮುದ ವರ್ಣದ ತನುರುಚಿಯಾ
ಹರಸುರೇಶ್ವರ ವಿರಿಂಚ್ಯಾದಿ ವಂದಿತಚರಣ
ಸರಸಿರುಹ ವರದೇವಪುರದ ಸಿರಿವರನ ೩

೭೩

ಶರಣಾಗು ಸಂಪೂರ್ಣ ಶರಣಾಗು ಜಿತಾರ್ಣ
ಕರುಣಾಮೃತಾಕೀರ್ಣ ಕರ ನೀಲವರ್ಣ ಪ

ಅತಸೀ ಕುಸುಮಗಾತ್ರ ಅರವಿಂದ ನೇತ್ರ
ಚತುರಾಸ್ಯನುತ ಚಿತ್ರ ಚಾರು ಚರಿತ್ರ
ಧೃತ ಗೋವರ್ಧನ ಗೋತ್ರ ದಿವಿಜೇಂದ್ರ ಸ್ತೋತ್ರ
ಶತಯಾಗಸುತಮಿತ್ರ ಸೌಪರ್ಣಯಾತ್ರ ೧

ಸ್ಮರಕೋಟಿ ಲಾವಣ್ಯ ಪುರಜಿದ್ವರೇಣ್ಯ
ಪುರುಹೂತಾದಿ ಶರಣ್ಯ ಪುರುಷಾಗ್ರಗಣ್ಯ
ದುರಿತಾಪಹರೇಣ್ಯ ದಾನ ಸಾದ್ಗುಣ್ಯ
ಪರಿಣತ ಲಾವಣ್ಯ ಪರಮಕಾರುಣ್ಯ ೨

ಕಮಲರಮ್ಯವಿಲಾಸ ಕೌಸ್ತುಭೋದ್ಭಾಸ
ಕಮನೀಯ ಸುವಿಭೂಪ ಕರಪೀತವಾಸ
ಅಮಿತೇಂದು ರುಚಿಹಾಸ ಆದಿಶೇಷೋಲ್ಲಾಸ
ಸುಮನಸಪುರವಾಸ ಪಾಹಿ ಲಕ್ಷ್ಮೀಶಾ ೩

೭೪

ಶ್ರೀಕಾಮಕೋಟಿ ಲಾವಣ್ಯಮೋಹನ ರೂಪಿನ
ಶ್ರೀಕಾಂತ ಮಂಗಳ ಮೂರುತಿ ವರದೇವಾ ಪ

ಶ್ರೀಮಣಿಮೌಳಿ ಮಸ್ತಕದ ಕಸ್ತುರಿಯ ಲ
ಲಾಮವೆಸೆವ ವರ ಫಣಿಯಾ
ಭ್ರೂಮಧ್ಯದೊಳೆಳೆವರೆಯಂತೊಪ್ಪುವ
ನಾಮದ ಪಿರಿನೊಸಲಾ ೧

ತಾಮರಸಾಯತನೇತ್ರದಾನತಸು
ಕ್ಷೇಮಾಂಕುರದ ನೋಟದ
ಚಾಮೀಕರ ಕುಟ್ಮಲ ನಾಸಿಕದಭಿ
ರಾಮ ಸುಮೌಕ್ತಿಕದಾ ೨

ಮಾ ಮನೋಹರ ಚುಬುಕಾಗ್ರದ ನವಪಲ್ಲ
ವಾ ಮಿಳಿತಾಧರದ
ಸೋಮವದನದೆಳನಗೆಯೂ ಪೊಳೆವಟ್ಟ
ಕೌಮುದಿಯಾ ಸೊಗಸಿನಾ ೩

ರಾಮಣೀಯಕವದನ ಮಕರಕುಂಡಲದ ಸು
ರಾಮಯದ ಕದಪಿನ
ಕಾಮನೀಯ ಕಂಬುಕಂಠದ ಸಿರಿತುಳ
ಸೀ ಮಂದಾರಮಾಲೆಯ ೪

ಜೀಮೂತ ಸವಿಯನೆ ರಂಜಿಪ ಸು
ಶ್ಯಾಮಲ ರುಚಿರಾಂಗದ
ಕೌಮೋದಕಿ ಖಡ್ಗ ಕಮಲ ಕಂಬು ನಿ
ಸ್ಸೀಮ ಚಕ್ರಾಯುಧಂಗಳಾ ೫

ಶ್ರೀಮೆರೆವುರದ ಶ್ರೀವತ್ಸಕೌಸ್ತುಭ ದಿ
ವ್ಯಾಮೋದ ಗಂಧ ಲೇಪದ
ಸೌಮಾನಜಂ ತಾಳ್ದುಪವೀತದ ಮಣಿ
ಸ್ತೋಮಾಭರಣಂಗಳಾ ೬

ಸಾಮಾಜಿಕರ ಸನ್ನಿಭ ರಂಜನದು
ದ್ದಾಮ ಸುಬಾಹುಗಳಾ
ನೇಮಿತಾಂಗದ ತೋಳಬಂದಿ ಕಂಕಣಮುಂ
ಗೈಮುರಾರಿ ಮುದ್ರೆಯಾ ೭

ಐಮೊಗದಹಿಯ ತೆರದ ಕರಕಮಲದ
ಸೈಮಿರುಪಂಗುಲಿಗಳಾ
ರೋಮಾವಳಿಯ ಪೊಳೆವ ಪೊಡೆವಲರ ಪಿ
ತಾಮಹಮುದಿತ ನಾಭಿಯಾ ೮

ಹೇಮಾಂಬರದಸಿಮಧ್ಯದ ಕಾಂಚೀ
ಧಾಮದ ಕಟಿತಟದ
ಪ್ರೇಮಿತ ಊರುಗಳ ಸಜಾನುಗಳ ಮುದದಿಂ ತಾಳ್ದ
ವಾಮಜಂಘೆಯ ತೊಡರಿನ ಪೊಂಗೆಜ್ಜೆಗಳ ೯

ಭೂಮಿ ಪಾವನ ಗಂಗೆಯುದಿಸಿದುಂಗುಟದ ಯ
ಶೋ ಮಹಿಮೆಯ ಚೆಲ್ವಿನಾ
ಪ್ರೇಮದೊಳಾನತರಂ ಸಲಹುವ ಸುರಮುರ ಮ –
ಹಾಮಾತೆ ಲಕ್ಷ್ಮೀಪತಿ ಪಾದಪದ್ಮದ ೧೦

೭೫

ಸಚ್ಚಿದಾನಂದಮಯಗೆಚ್ಚರಿಕೆ ಪ

ನಿಶ್ಚಯದ ನಿರುಪಮಂಗೆಚ್ಚರಿಕೆ
ಅಚ್ಚರಿಯ ಸಚ್ಚಿತ್ರಂಗೆಚ್ಚರಿಕೆ ಅ.ಪ

ಕಾಂತೆಯರ ಮನೆಗೆ ಶ್ರೀಕಾಂತ ಪೊರಮಡುತಿಹನು
ಕಾಂತೆಯರು ಕಟ್ಟುಮೆಟ್ಟದವೊಲೆಚ್ಚರಿಕೆ ೧

ಸಂಚಿತಾಭರಣಗಳ ಮಿಂಚುಗುರುಚರಣಗಳ
ಕುಂಚ ಕಾಳಂಜಿಯವರೆಲ್ಲವೆಚ್ಚರಿಕೆ ೨

ನೀಡೆಸೆವ ಸೆಳ್ಳುಗುರು ಮೂಡುತಿಹ ಮೊಲೆಹೊಗರು
ಆಡಿಸುವ ಹಡಪದವರೀಗ ಎಚ್ಚರಿಕೆ ೩

ಬಿಂಬಾಧರಂ ಪೊಳೆಯೆ ಕಂಬುಕಂಠವು ಹೊಳೆಯೆ
ಪೊಂಬಾಳ ದೀವಿಗೆಯ ಜನರು ಎಚ್ಚರಿಕೆ ೪

ಚೆನ್ನಸಿರಿಯರಮನೆಯ ಚಿನ್ನವಾಗಿಲ ಕೊನೆಯ
ರನ್ನದೋರಣ ತಡಿಯವರೆಚ್ಚರಿಕೆ ೫

ಇಂದಿರಾದೇವಿಯರ ಮಂದಿರದ ಬೀದಿಯೊಳು
ಸಂದಣಿಯಲತಿ ಜತನವಿರಲಿ ಯೆಚ್ಚರಿಕೆ ೬

ದೇವಿಯರ ಮನೆಗೆ ವಿವಾಹ ತಾಬೇಡಿ ಬಂದ
ದೇವಪುರ ಲಕ್ಷ್ಮೀಶಗೆಚ್ಚರಿಕೆ ೭

೭೬

ನಮೋ ನಮೋ ನಾರದವಂದ್ಯ
ನಮೋ ನಮೋ ನಿಗಮನಿಕರವೇದ್ಯ ಪ

ನಮೋ ವರದಾಧಿಪ ಸುರಪುರ ಲಕ್ಷ್ಮೀಶ
ಭವಭಯರೋಗವೈದ್ಯ ಅ.ಪ

ಹರಿಚರನಾಗಿ ವೇದವ ತಂದೆ ಹರಿಪತಿಯನು ಮೇಲಾಂತು ನಿಂದೆ
ಹರಿನಯನನ ಕೊಂದೆ ಹರಿಯ ರೂಪಾದೆ ನೀ ಹರಿಪದಕಡಿಯನಿಟ್ಟೆ
ಹರಿವಂಶಜರನೆಲ್ಲರ ತರಿದೆ ಹರಿವಾಹಿನಿಯ ನೀನಾಳ್ದೆ
ಹರಿಸುತಗೊಲಿದು ಹೆಂಗಳ ವ್ರತಕೆಡಿಸಿದೆ ಹರಿವಾಹನ ಜಯತು ೧

ಶಿವವಾಹನ ಧ್ವಜರೂಪ ಶಿವಧರನೆನಿಪ ಯುಗ ಪ್ರತಾಪ
ಶಿವಭಕ್ತನ ಕೊಂದೆ ಶಿವನ ರೂಪಾದೆ ನೀಂ ಪದಕಡಿಯನಿಟ್ಟೆ
ಶಿವವೈರಿಯ ರಿಪುವೆನಿಸಿದೆ ಶಿವನ ಬಿಲ್ಲನು ಬಾಗಿಸಿ ಮುರಿದೆ
ಶಿವನ ತುಳಿದೆ ನೀ ಶಿವನಿಗೆ ಸಖನಾದೆ ಶಿವವಾಹನ ಜಯತು ೨

ಸುರಜ್ಯೇಷ್ಠನಿಗೆ ಶ್ರುತಿಯನಿತ್ತೆ ಸುರರಿಗೆ ಸುಧೆಯನು ಕರೆದೆರೆದೆ
ಸುರನಗವರ್ಣ ಹಿರಣ್ಯಾಕ್ಷನ ಕೊಂದೆ ಸುರಸಿಂಧುವ ಪಡೆದೆ
ಸುರಭಿಯ ನೆವದಿ ಭೂಪರನೆಲ್ಲ ತರಿದೆ ಸುರರಿಪು ದಶವದನನ ತರಿದೆ
ಸುರನಗವರ್ಣ ಸರ್ವಜ್ಞ ಹಯಾರೂಢ ಸುರಪುರ ಲಕ್ಷ್ಮೀಶ ೩

೭೭

ಶರಣುಹೊಕ್ಕೆನು ಕರುಣಾಂಬುಧಿಯೇ ಕಾಯೊ ಪ

ಸುರಪುರ ನಿಲಯ ಲಕ್ಷ್ಮೀಪತಿಯೇ ಅ.ಪ

ಪುಂಡುದಾನವರ ಶಿರವನೆ ಛೇದಿಸಿ ಮುಂ
ಕೊಂಡಸುರ ದಶಾನನನಾ
ದಿಂಡುದರಿದು ರಕ್ಕಸರ ಸಂಹರಿಸಿ
ಖಂಡ ವಿಭೀಷಣಗುದ್ದಂಡಪದವಿಯ ಇತ್ತನೆಂದು ೧

ಸುರಪನ ವರ ತನುಜನ ರಥದೊಳು ನಿಂದು
ಕರುಣದಿಂದಲೆ ತುರಗವ ಪೊಡೆಯೆ
ಕುರುಕುಲ ಚತುರ್ಬಲವ ಸಂಹರಿಸಿಯೆ
ಉರಗಶರವು ಬರೆ ನರನ ಕಾಯ್ದನೆಂದು ೨

ನರಮೃಗರೂಪಿನಲಿ ಹಿರಣ್ಯಕಶಿಪುವಿನ
ಉರವ ಬಗೆದು ಶರಣನ ಪೊರೆಯೆ
ಸುರಪುರವಾಸನೆ ಶ್ರೀಲಕ್ಷ್ಮೀ ಅರಸನೆ
ದುರುಳ ನೆಗಳ ಕೊಂದು ಕರಿಯ ಕಾಯ್ದನೆಂದು ೩

೭೮

ಆವಪರಿಯಿಂದಲಾದರೂ ರಾಮನಾಮವನು
ಆವ ಪರಿಯಲಿ ನೆನೆದು ಸುಖಿಯಾಗು ಮನವೆ ಪ

ಪಿತನಾಜ್ಞೆ ಲಕ್ಷಿಸದೆ ದೃಢದಿ ಪ್ರಹ್ಲಾದನು
ಅತಿಶಯದಿ ಹರಿಯ ಧ್ಯಾನವ ಮರೆಯದೆ
ಮತಿಗೇಡಿಯಾದ ಮಗನೆನುತ ಕುಲಗೆಡಿಸೆ ಶ್ರೀ
ಪತಿಯು ತಾ ಬಂದು ಕಾಯ್ದುದೇ ಸಾಕ್ಷಿ ೧

ದೋಷಹಿತನಾದ ದಶಶಿರನ ಒಡಹುಟ್ಟಿ
ಕೇಶವನ ಧ್ಯಾನವನು ಮರೆಯದಿರಲು
ಸಾಸಿರ ರಾಮಕಥೆಯುಳ್ಳನಕಾ ವಿ–
ಭೀಷಣಗೆ ಸಾಮ್ರಾಜ್ಯವಿತ್ತುದೇ ಸಾಕ್ಷಿ ೨

ಗಂಡರೈವರು ಸುತ್ತ ಕೆಲದಲಿರಲಾ ಸತಿಯ
ಲಂಡ ದುಶ್ಯಾಸನ ಹಿಡಿದೆಳೆಯುತಿರಲು
ಪುಂಡರೀಕಾಂಬಕನೆ ಸಲಹೆನಲು ಕರೆಯಲು
ದ್ದಂಡನಾಭನೆ ಬಂದು ಕಾಯ್ದುದೇ ಸಾಕ್ಷಿ ೩

ಯುದ್ಧಕೆ ನಡೆದಾಗ ಹಂಸಧ್ವಜಸುತನು ತನ್ನ ಬೇ
ಕಾದ ಸತಿಯ ಆಜ್ಞೆಯ ನಡೆಸಲು ಪಿತನು
ಕಾದೆಣ್ಣೆ ಕೊಪ್ಪರಿಗೆಯೊಳಗೆ ಸುಧನ್ವನ ಹಾಕೆ ಹರಿ
ಕಾಯ್ದನೆಂಬುದ ಲೋಕವರಿದುದೆ ಸಾಕ್ಷಿ ೪

ಉರ್ವಿಯೊಳು ವಿಪ್ರಜನ್ಮದಿ ಜನಿಸಿದಜಮಿಳಗೆ
ಪೂರ್ವಸಂಚಿತ ಪಾಪಶೇಷವಿರಲು
ಓರ್ವ ಸತಿಗಾಗಿ ಚಂಡಾಲತಿಯೊಳಗಾಗಿರೆ
ಗೀರ್ವಾಣಪುರಿ ಲಕ್ಷ್ಮೀಶನೊಲಿದುದೇ ಸಾಕ್ಷಿ ೫

೭೯

ದೇವ ನೀನಹುದೋ ದೇವರದೇವ ನೀನಹುದೋ ಪ

ದೇವ ರಿಪುವನದಾವ ದುರಿತಾಖ್ಯನಾವ ನಮಿತರ
ಕಾವ ಕರುಣಸಂಜೀವ ಜಿತಪೂರ್ಣಕಾಮ ಅ.ಪ

ದೇವಕಿಯಲ್ಲವತರಿಸಿ ಗೋಕುಲವನ್ನು
ಪಾವನವನ್ನು ಮಾಡಿ ಮಡುಹಿ ಮಾವನ ಮಧು–
ರಾವನಿಯನುಗ್ರಸೇನಗಿತ್ತು ದೈತ್ಯಾಳಿಯ ಸವರಿ
ಜೀವ ಸಖನಾಗಿ ಪಾಂಡವರಿಗೆ, ಪಾರ್ಥ
ಸೇವೆಯಲಿ ಸಂದು ಕೀಲಿಸಿ ಕೌರವರನ್ನು
ಭೂವರನ ಹಯಮೇಧಕೊಲಿದು ಬಂದಾ ೧

ಧರ್ಮರಾಜನ ಯಜ್ಞತುರಗ ರಕ್ಷೆಗೆ ಕೃತ–
ವರ್ಮಜರು ಕೂಡಿ ನಡಸಿ ನೀಲಾಂಕನ
ಮರ್ಮವರಿತು ಸೋಲಿಸಿ ಹಂಸಧ್ವಜರನ್ನು ಮಾಮಳಿದಡರಿ
ಕರ್ಮವಶದಿಂದ ಬಭ್ರುವಾಹನನ ಕೈಯ
ದುರ್ಮರಣವಾದ ವಿಜಯ ಕರ್ಣರನು
ಪೆರ್ಮೆಯಿಂದಸುವಿತ್ತು ಹೊರೆದ ನಿತ್ಯ ನಿರ್ಮಳಿಕನಹುದೊ ೨

ಮುಂತೆ ನಡೆದರ್ಜುನಿಯ ಗೂಡಿ ತಾಮ್ರಧ್ವ
ಜಂ ತುಡುಕಿ ಬರೆ ದ್ವಿಜನಾಗಿ ಶಿಖಿ
ಕೇತುವನು ಬೇಡಿ ವೀರವರ್ಮನ ಗೆಲಿದು ಕುಳೀಂದ್ರಗೊಲಿದು
ದಂತಿಪುರಕೆ ಬಂದರಸನ ಹಯಮೇಧ–
ಮಂ ಪಾಲಿಸಿ ತ್ರಿಜಗವನು ಪಾಂಡವರಿ–
ಗಿತ್ತೊಲಿದು ಸುರಪುರವ ಪೊರೆವ ಲಕ್ಷ್ಮೀಕಾಂತ ನೀನಹುದೋ ೩

(ಆ) ಶ್ರೀ ಲಕ್ಷ್ಮೀಸ್ತುತಿಗಳು

೮೦

ಅಂಗನೆ ನಿನ್ನ ಮುಖದಿರುವಿಂತು ನೆರೆ
ದಿಂಗಳ ಸೋಲಿಸುವಂತೆ ತೋರುತಿದೆ ಪ

ಮಿಸುಪ ಕೆಂಪಿನೊಳಸಿತಗಳೇನೇ ಯೀ
ಎಸೆವಚ್ಚಬಿಳಿದರೊಳು ರಾಗವೇಕೇ
ಮಿಸುನಿವೋಲೆಯ ಮೇಲೆ ಮುಸುಳಿತೇ ಯೀಗ
ಪೊಸತಾವರೆಯ ಮೇಲೆ ಮಳೆ ಸೂಸಿತೇ ೧

ಅಂಬರ ಅಳಿದಿಹುದೇನೆ ಮರಿ
ದುಂಬಿಯ ಹಂಬಲು ಪೊಸತಾಗಿದೆ
ತಂಬೆಲರಳತೆಗೆ ಪೇರ್ಚಿದೆಯೇನು
ಪೊಂಬಟ್ಟೆ ಸೋಂಕಲು ಮುನ್ನ ಕಿರಿದಾದುದೇ ೨

ಬಾಲೆ ನೀಕರೆಯ ಹೋಗಿ ನೆರದೆಯೇ ಈಗ
ಮೂಲೋಕ ಮೋಹನ ಸುರಪುರವ
ಪಾಲಿಸುವ ಮಹಾಲಕ್ಷ್ಮೀಪತಿ ಬಂದು ಯೆನ್ನ
ಮೇಲಿಕ್ಕಿ ನೆರದುದಾ ಯೇನೆಂಬೆನೇ ೩

೮೧*

ಗಾಡಿಯೆತ್ತಲಿಂದ ಬಂದುದೇ ಮಾತ
ನಾಡಲರಿಯದಿಪ್ಪ ಹೊಚ್ಚಹೊಸ ಹರೆಯದ ಮುಗುದೆಗೀ ಪ

ಬಳುಕೆ ಸಿಂಹಮಧ್ಯ ಬಟ್ಟ ಮೊಲೆಗಳದುರೆ ತೋರವಾದ
ಬಳಲುಮುಡಿಯೊಳಲರು ಒಯ್ಯನಿಳೆಯೊಳುದುರಲೂ
ಜಲಜಮುಖದಿ ಬೆವರುದೋರೆ ವಲಯತೋರಹಾರ ಉರದಿ
ಘಲಿರು ಘಲಿರನುಲಿವ ಕುಲುಕಿ ಕುಲಕಿ ನಡೆವ ಯೀ ೧

ಮಿಸುಪ ಮಂದಹಾಸ ಮುಖದಿ ಮಸಗಿದಂತ ಕಾಂತಿ ಲಜ್ಜೆ
ಮುಸುಕೆ ಮಿಸುಪ ಕದಪಿನಲ್ಲಿ ಎಸೆವ ಓಲೆ ಥಾಳಿಸೆ

* ಇದು ಬೇಲೂರು ವೈಕುಂಠದಾಸರ ಅಂಕಿತದಲ್ಲೂ ಇದೆ.

ಸಸಿನೆ ತಿದ್ದಿ ಉರದಿ ಜರಿವ ವಸನವನ್ನು ಸಂತವಿಸುತ
ಉಸುರಿಲಿಂದ ಗಂಧವನ್ನು ಎಸಸಿಬಿಡುವ ನಡೆವ ಯೀ ೨

ಕರವನೊಯ್ಯನೊಲಿದು ರೋಜಗಿರಿಯ ಮೇಲೆ ಬಾಲಚಂದ್ರ
ನಿರಲು ಸೆರಗ ಮರೆಯ ಮಾಡಿ ಮರಳಿ ಮರಳಿ ನೋಡುತಾ
ಸ್ಮರನತಾತ ಸುರನಗರ ದೆರೆಯ ಲಕ್ಷ್ಮಿಯರಸನೊಡನೆ
ನೆರೆದಪರಿಯ ಸಿರಿಯ ಗರುವಗಮನದಾ ಯೀ ೩

೮೨

ಜಯ ಜಯ ಕೃಪಾಂಬುಧಿಯೆ ಜಯ ಸುಗುಣ ಶರನಿಧಿಯೆ
ಜಯತು ಸಂಶ್ರುತನಿಧಿಯೆ ವಿಮಳ ಸುಧಿಯೇ ಪ

ಜಯ ಸಮಸ್ತೋಪಧಿಯೆ ಜಯ ಸರ್ವಧೀಮತೆಯೇ
ಜಯ ಜಯತು ಸಲಹೆನ್ನ ಸೌಭಾಗ್ಯ ನಿಧಿಯೆ ಅ.ಪ

ಶ್ರುತಿ ನುತಿ ಪ್ರಖ್ಯಾತೆ ನತ ನಿರ್ಜಿತ ವ್ರಾತೆ
ಸತತ ಸತ್ಸಮಿತೆ ವರಸೌಖ್ಯಪ್ರದಾತೇ
ರತಿಪತಿಪಿತ ಪ್ರೀತೆ ರತುನಕರ ಸಂಜಾತೆ
ನುತಿಸಲೆನ್ನಳವೆ ನಿನ್ನನು ಲೋಕಮಾತೆ ೧

ವಿಗಡವಿಶ್ರುತ ಮಾಯೆ ತ್ರಿಗುಣಾನ್ವಿತ ವಿದಾಯೆ
ನಿಗಮ ನಿರುತೋಪಾಯೆ ನಿತ್ಯೆ ನಿರಪಾಯೆ
ಜಗನ್ಮೋಹನೆ ಕಾಯೆ ಅಗಣಿತೋಪಮದಾಯೆ
ಪೊಗಳಲೆನ್ನಳವೆ ನಿನ್ನನು ಲೋಕಮಾತೆ ೨

ಪರಮ ಶಕ್ತಿಗುಣಾಢ್ಯೆ ನಿರುತಾಗಮಾವೇದ್ಯೆ
ಸ್ಮರನ ಪೆತ್ತತಿ ಚೋದ್ಯೆ ಸೌಖ್ಯ ಪ್ರದಾದ್ಯೆ
ಸುರನಗರದಧಿನಾಥ ವರಲಕ್ಷ್ಮೀಕಾಂತನಾ
ಅರಸಿ ಸಿರಿಮಾಲಕ್ಷ್ಮಿ ಭವರೋಗ ವೈದ್ಯೇ ೩

೮೩

ಎಂತವಗೊಲಿದು ನೆರೆದೆ ಎಲೆ ಬಾಲೆ ನೀ ಬರಿದೆ ಪ

ಕಾಂತೆಯುದರದಲಿ ತಾಳ್ದ ಕಮನಿಯೊಳ್ ಬಾಳ್ದ ಅ.ಪ

ಮೈಮೊಗ ಬೇರಾದವಗೆ ಮಾತೃಘಾತಕನಿಗೆ
ಬೈಯಲು ಭಾವನಕೊರಳ ಭಾವಿಸದರಿದವಗೆ
ಕೈವಿಡಿದ ಕಾಂತೆಯನು ಕಾಡಿಗಟ್ಟಿದವಗೆ
ತಮ್ಮಯ್ಯನರ್ಧಾಂಗಿಯನು ಅಣ್ಣನ ನೆರೆಸಿದವಗೆ ೧

ಹದ್ದನೇರಿದವಗೆ ಹಾವಿನಮೇಲೊರಗಿದವಗೆ
ಶುದ್ಧ ಕರಡಿಯಮಗಳ ಸರಿ ಎಂದು ಆಳ್ದವಗೆ
ಮುದ್ದಾಡಿ ಮೊಲೆಯೂಡಿದವಳಸುವನೆ ಕಳೆದವಗೆ
ಕದ್ದು ಬೆಣ್ಣೆಯ ಮೆದ್ದ ಕರಿಮೈಯವಗೆ ೨

ಸುರನಿಶಾಚರ ಮಧ್ಯೆ ಅರಿಯೆ ಪೆಣ್ಣಾದವಗೆ
ಸುರಪನಂದನ ಶಕಟನ ನೆರೆ ಹೊಡೆದವಗೆ
ಸುರಪುರದರಸು ಶ್ರಿ ಲಕ್ಷ್ಮೀರಮಣಗೆ ೩

(ಇ) ಆತ್ಮನೀವೇದನೆಯ ಕೃತಿಗಳು

೮೪

ಆಕಾರವಿಲ್ಲದ ಅನಾದಿಯೊಳು ಪಂತ
ಸಾಕಾರನಾಗಿಹನು ಶ್ರೀ ಲಕ್ಷ್ಮೀಕಾಂತ ಪ

ಕುಸುಮಶರನೆ ಪೂವು ಅದರೊಳಗಿಲ್ಲ
ಎಸೆಯೆ ಕೋದಂಡ ಕಬ್ಬೆಸೆ ಧನುವಲ್ಲ

ಹೊಸ ಬಗೆಯಾಗಿ ನಾಂಟದ ಸರಳಲ್ಲ
ವಿಷಮ ವಿಗ್ರಹಕಿನ್ನು ಕೇಳ್ ಪ್ರಾಣವಿಲ್ಲ ೧

ಮುಂದುವರೆವರೆ ಮೋಹರದೊಳು ತನ್ನ
ಚಂದದಿಂದೊಪ್ಪುವಂಗವ ಕಾಣೆ ಮುನ್ನ
ಕುಂದದಕೇದಗೆಯೆಸಳಿವೆ ನೋಡು ತನ್ನ
ಸಂಧಿಸಿತೇನೊ ಚಿದ್ರೂಪ ಗುಣರನ್ನ ೨

ಸರಿಯಲ್ಲದವರೊಳು ಸಮರವ ಮಾಡಿ
ಧುರದೊಳು ಮಿಗೆ ನೊಂದೆನಯ್ಯ ಮೈ ಬಾಡಿ
ಪರಿಹರಿಸೆಲವೊ ಸುರಸತಿಯರ ಮಧ್ಯೆಕೂಡಿ
ಸುರಪುರಪತಿ ದುರಿತವಿರದೊಂದುಗೂಡಿ ೩

೮೫

ಶ್ರೀರಮೆಯನಾಥ ನಿನ್ನಂಘ್ರಿಗಳ ಸೇರಿದನ
ದೂರ ಮಾಡಿರುವುದುಚಿತವೆ ಪ

ವಾರಿಜಾಂಬಕ ಎನ್ನ ಕ್ರೂರಚಿಂತೆಯ ಹರಿಸಿ
ಬೇಡಿದುಪ್ಪವನೀವುದೂ ಅ.ಪ

ವ್ರತಶೀಲನಾಗಿ ಭೂಪತಿ ಅಂಬರೀಷನ
ಅತಿಶಯದಿ ಪೊಗಳುತಿರಲೂ
ಯತಿರಾಜ ದೂರ್ವಾಸನಡೆತಂದು ದ್ವಾದಶಿಯ
ತಿಥಿಯೊಳನ್ನವ ಬೇಡಲು
ಪೃಥಿವೀಶ ಕೊಟ್ಟನೆನೆ ದ್ವಾದಶಿಯ ಪಾರಣೆಯ
ಮಿತಿ ಮೀರಿ ಪೋಗುತಿರಲೂ
ಕಥನದಿಂ ಶ್ರೀತುಳಸಿಯನು ಭುಂಜಿಸಲು ಕೋಪಿಸಲಾಗ
ನತಜನಾಶ್ರಯ ನೀನು ಪೊರೆದೆ ಅಹುದು ೧

ಮುಂದನರಿಯದೆ ಯಮನಂದನಂ ದ್ಯೂತಮಂ
ಅಂದು ಕೌರವನೊಳಾಡೆ
ಮಂದಮತಿಯಾಗಿ ಸೋಲಲು ನಾರಿಯನು ಆ ಸಭೆಗೆ
ತಂದು ಮಾನಭಂಗವನೆ ಮಾಡೆ
ಇಂದುಮುಖಿಯುಟ್ಟ ಸೀರೆ ಅಕ್ಷಯ
ವೆಂದು ನಂದಕುಮಾರ ಸಲಹೇ ೨

ಎನ್ನಳವೆ ನಿನ್ನಯ ಮಹಿಮೆಯನು ಪೊಗಳುವಡೆ ಯ
ಪರ್ಣವಾಹನರೊಡನೇ
ಮನ್ಮಥನ ಶತಕೋಟಿ ಲಾವಣ್ಯ ಯದುಕುಲಾಮ
ರಾರ್ಣವಕೆ ಚಂದ್ರ ನೀನೇ
ಸನ್ನುತನಾದೆ ಸುರಪುರದ ಲಕ್ಷ್ಮೀವರನೆ
ಮನ್ನಿಪುದು ಶರಣಪ್ರಿಯನೆ
ಭಿನ್ನವಿಲ್ಲದೆ ನೀಂ ದಾಸಾನುದಾಸರನು ಪ್ರ
ಸನ್ನನಾಗಿಯೆ ಸಲಹು ಇಂದು ಬಂದು ೩

೮೬

ಶ್ರೀದೇವಿ ಬಲಗಡೆಯೊಳು ಮಂಡಿಸಿದ ಭೂದೇವಿ ಎಡಗಡೆಯೊಳು
ಶ್ರೀದೇವಿಯಂ ಭಕ್ತರೊಡನೆ ಶುಭಕಾಯವೊಲಿದು ಆಡಿದನುಯ್ಯಾಲ ಪ

ನೀಲಿಮಾಣಿಕದ ಮಂಟಪವ ಕಟ್ಟಿ ಮುತ್ತಿನ ಸರಪಣಿಗಳನೆ ಬಿಗಿಸಿ
ಮೇಲುಕಟ್ಟುಗಳ ಹಾಸಿ ಮಲ್ಲಿಗೆಮಾಲೆಗಳ ಶೃಂಗರಿಸಿ ೧

ಪಟಹ ನಿಸ್ಸಾಳ ಭೇರಿ ಕೊಳಲು ತಮಟವಾದ್ಯ ಮೊಳಗುತಿರಲು
ಕುಟಿಲಕುಂತಲೆಯರೊಡನೆ ಆದಿಪತಿ ವಿಠಲನಾಡಿದ ೨

ಚಂದ್ರಮನ ಪೋಲ್ವ ಮುಖದಿ ಫಣಿಯೊಳು ಶೌನಕಾದಿಗಳು ಸೇರಿ
[ಅಂದದಿ] ಸ್ತುತಿಸೆ ಕ್ಷೀರಾಬ್ಧಿಶಯನನಾಡಿದ ೩

ಭೇರಿ ಶಂಖಗಳ ಧ್ವನಿಯ ದುಂದುಭಿಯ ಭೋರಿಡುವ ಜಯರವಗಳ
ನಾರಿಯರು ಶೋಭನಗಳ ಪಾಡುತ್ತಿರೆ ಧೀರನಾಡಿದ ೪

ವೇದಚೋರನ ತರಿದು ಆದಿಮೂರುತಿ ವರದನ ವಿ–
ನೋದದಿ ತೂಗಿದರು ರವಿಸೌಂದರಿಯನಾಡಿದ ೫

ಬಾಲಕನ ಕಾಯ್ದುಬಳಿಕ ಧರೆಯನಳವ ಕಾಲಿನೊಳಳೆದ ದೇವ
ನೀಲವೇಣಿಯರು ಪಾಡುತ ತೂಗಿದರು ಗೋಪಾಲನಾಡಿದ ೬

ಪರಶುಧರನೆನಿಸಿ ಹರನ ಶ್ರೀರಾಮಚಂದ್ರ ಕರುಣಾ
ವಾರಿಧಿ ಕೃಷ್ಣನ ತೂಗಿದರು ವರಸತಿಯರು ೭

ಚೋಜಿಗದ ಮತ್ತುರದ ಸತಿಯರನು ವ್ರೋಜಿಗಲಿಸಿದ ಬೌದ್ಧನಾ
ತೇಜಿವಾಹನಕಲ್ಕ್ಯನಾ ತೂಗಿದರು ರಾಜೀವನೇತ್ರೆಯರು ಪಾಡುತ ೮

ಚಿತ್ತಜೌಘ ಮನಮನದ ಚದುರೆಯರು ಮುತ್ತು ಸರಗಳನೆ ಧರಿಸಿ
ದತ್ಯಂತ ಮೋಹದಿಂದ ತೂಗಿದರು ಹಸ್ತಿನೀಕಾಮಿನಿಯರು ೯

ಮತ್ತೆ ಸಾರಂಗವೆನಲು ನಡೆಯುತಲಿ ವಿಸ್ತರಿಸಿ ಕುಚಯುಗಳದಿ
ಕಸ್ತೂರಿಯ ಗಂಧವೆಸೆಯೆ ತೂಗಿದರು ಚಿತ್ತಿನೀಜಾತದವರು ೧೦

ಕುಂಕುಮಾಂಕಿತ ಚದುರೆಯರಲಂಕರಿಸಿ ಭೂಷಣಗಳ
ಶಂಕರನಸಖನ ಪಾಡಿ ತೂಗಿದರು ಶಂಖಿನೀಕಾಮಿನಿಯರು ೧೧

ಕದಪುಗಳ ಕಾಂತಿಹೊಳೆಯೆ ಮೊಗಸಿರಿಯಪದುಮವನು ಪೋಲ್ವಂದ
ಯದುವೀರನನು ಪಾಡುತತೂಗಿದರು ಕುಮುದಿನೀಕಾಮಿನಿಯರು ೧೨

ಅಂಗನಮಣಿ ಪಾರ್ವತಿ ಸರಸ್ವತಿಯರು ರಂಗುಮಾಣಿಕರತ್ನದ
ಮಂಗಳಾರತಿಯನೆತ್ತಿ ತೂಗಿದರು ಗಂಗೆಯನು ಪಡೆದಯ್ಯನ ೧೩

ಚಿಂತಿತಾರ್ಥವ ಸಲಿಸುವ ಮುದ್ದುವೆಂಕಟೇಶನು ತಾನೆನಿಸುವ
ಪಿತ ದೇವಪುರದ ಶ್ರೀಲಕ್ಷ್ಮೀಕಾಂತನಾಡಿದನುಯ್ಯಾಲಾ ೧೪

ತುಳಸಿರಾಮದಾಸರ ಕೀರ್ತನೆಗಳು

(ಅ) ಶ್ರೀಹರಿಸ್ತುತಿ

೮೭

ಎಷ್ಟು ಆನಂದವೊ ಶ್ರೀಹರಿಯ ಭಜನೆ ಪ

ದುಷ್ಟತರ ದೋಷಗಳು ಬಳಲುವ
ಕಷ್ಟಗಳ ಪರಿಹರಿಸಿ ಸರ್ವೋ
ತ್ಕೃಷ್ಟ ಪದವಿಯ ಕೊಡುವ ಲಕ್ಷ್ಮೀ
ಇಷ್ಟನಾರಾಯಣನ ಭಜನೆ ೧

ಪದ್ಮದಳನಯನ ಪ್ರತಿಷ್ಠೆಯ
ಪದ್ಮಶಾಲಿಯ ಭಕ್ತರೆಲ್ಲರು
ಪದ್ಮನಾಭನ ಪ್ರೀತಿಮಾಡಿ ಸು
ಭದ್ರಸಂಪದ್ಯುಕ್ತರಾದರು ೨

ಮಂದಿರವು ಕಟ್ಟಿಸಿಯು ಪರಮಾ
ನಂದದಿಂ ಉತ್ಸವವು ನಡಿಸಿದ
ರೆಂದು ಕೇಳಿದ ಭಾಗ್ಯಶಾಲಿಗಳು
ಇಂದಿರೇಶನ ಕೃಪೆಯ ಪಡೆದರು ೩

ಅಂಬುಜೋದರದಾಸರೆಲ್ಲರು
ತಂಬುರೆಯು ಕರತಾಳವಾದ್ಯವಿ
ಜೃಂಭಿಸಿ ಹರಿಸ್ಮರಣೆಯ ಮಾಡುತ
ಸಂಭ್ರಮದಿ ಬಂದವರು ನೋಡಲು ೪

ವಾಸುಕೀನಗರೇಶ ದಾಸರ
ದಾಸರಾಗಿಯು ತುಲಸಿರಾಮ
ದಾಸ ಪರಮೋಲ್ಲಾಸದಿಂ ಶ್ರೀ
ವಾಸುದೇವನ ಚರಣನಂಬಿದೆ ೫

೮೮

ಜಯ ಶ್ರೀಧರಾರಮಣ ಜಯ ಕೌಸ್ತುಭಾಭರಣ ಪ

ಜಯ ದುರಿತನಿಧಿತರಣ
ಜಯ ಪದ್ಮಚರಣಾ ಜಯಜಯಾ ಅ.ಪ

ಜಯ ಪುಂಡರೀಕಾಕ್ಷ ಜಯ ತ್ರಿಭುವನಾಧ್ಯಕ್ಷ
ಜಯ ಪಾಂಡುಸುತ ಪಕ್ಷ ಜಯ ಜಗದ್ರಕ್ಷಾ ಜಯಜಯಾ ೧

ಜಯ ಲೋಕಭಯನಾಶ ಜಯ ದಳಿತಭವಪಾಶ
ಜಯ ವೇಂಕಟಾದ್ರೀಶ ಜಯಸುಪ್ರಕಾಶ ಜಯಜಯಾ ೨

ಜಯ ತುಲಸೀದಳ ದಾಮ ಜಯ ಶೇಷಗಿರಿಧಾಮ
ಜಯ ದೈತ್ಯರಿಪುಭೀಮ ಜಯ ಕೃಷ್ಣರಾಮಾ ಜಯಜಯಾ ೩

ಜಯ ಕೋಟಿರವಿಭಾಸ ಜಯ ಸಾತ್ವಿಕೋಲ್ಲಾಸ
ಜಯ ಜಯ ಭವದ್ದಾಸ ಜಯ ಶ್ರೀನಿವಾಸಾ ಜಯ ಜಯಾ ೪

೮೯

ಮಾಧವ ಭವಂತು ತೇ ಮಂಗಳಂ
ಮಧು ಮುರಹರ ತೇ ಮಂಗಳಂ ಪ.

ದಶರಥನಂದನ ತಾಟಕಿ ಭಂಜನ
ದಾನವ ಸಂಹಾರ ದಯಾನಿಧೇ

ಆದಿದೇವ ಸಕಲಾಗಮ ಪೂಜಿತ
ಯಾದವ ಕುಲಮೋಹನರೂಪಾ
ವೇದೋದ್ಧರ ತಿರುವೇಂಕಟನಾಯಕ
ನಾದಪ್ರಿಯ ನಾರಾಯಣತೇ ನಮೋ ನಮೋ ೧

ಗೋವಿಂದ ರಾಮಕೃಷ್ಣ ನಮೋ ನಮೋ
ಗೋವಿಂದ ಸೀತಾರಾಮ ನಮೋ
ಗೋವಿಂದ ಮಾಧವ ಗೋಪಾಲ ಕೇಶವ
ಗೋವಿಂದ ನಾರಸಿಂಹಾಚ್ಯುತ ನಮೋ ೨

ರಾಮಾಗೋವಿಂದ ರಾಮ ರಾಘವಾ
ರಾಮಾ ರಾಜೀವಲೋಚನ
ಕಾಮಿತ ಫಲದಾಯಕ ಕರಿವರದಾ
ರಾಮಕೃಷ್ಣ ತುಳಸಿವರದಗೋವಿಂದ

೯೦

ಶ್ರೀಮಾಧವ ದಾಮೋದರ ನಾಮಾರ್ಚಿತಕಾಮಾ
ಸೋಮಾನನದಾಮಾ ರಿಪುಭೀಮಾ ಎಚ್ಚರಿಕೆ ಪ

ಬೃಂದಾರಕ ಬೃಂದಾರ್ಚಿತ ವಂದಿತ ಮುಚುಕುಂದ
ಸುಂದರ ರಥ ವಂದಿತ ನವಕುಂದಾ ಎಚ್ಚರಿಕೆ ೧

ಗಂಗಾಪದರಂಗೇಶ ಭುಜಂಗಾರಿ ತುರಂಗ
ಶೃಂಗಾರ ಶುಭಾಂಗ ಭವಭಂಗ ಎಚ್ಚರಿಕೆ ೨

ಮಾರಾರಿ ಸಮಾಧಿತ ವಾರಾಸಿ ಗಭೀರ
ಸೂರ ಸುಕುಮಾರಾ ರಣಧೀರಾ ಎಚ್ಚರಿಕೆ ೩

ಶೇಷಾಚಲ ಭೂಷಾಹತದೋಷಾ ಮೃದುಭಾಷಾ
ಭಾಷಾಪತಿಪೋಷಾ ದಶವೇಶಾ ಎಚ್ಚರಿಕೆ ೪

ಶ್ರೀಮದಖಿಲಾಂಡಕೋಟಿ ಬ್ರಹ್ಮಾಂಡ ನಾಯಕ
ಆದಿಮಧ್ಯಾಂತರಹಿತ ಘನಸಾರವಿಲಸನ್ ಭ್ರೂಮಧ್ಯ

ಕಸ್ತೂರಿ ತಿಲಕೋಜ್ವಲಾ ದಿವ್ಯ ಪೀತಾಂಬರಧಾರೀ
ಶ್ರೀಯಲಮೇಲ್‌ಮಂಗಾ ಮನೋಹರ
ಶ್ರೀಭಾರ್ಗವಾಸರ ಭಜನೋಲ್ಲಾಸಾ
ಶ್ರೀಚಾಮರಾಟ್ಪಾಲಿತ ಸತ್ಸಂಪ್ರದಾಯ ಸುಜ್ಞಾನ
ಬೋಧಿನೀ ಸಮಾಜೋದ್ಧಾರಕಾ ಎಚ್ಚರಿಕೆ ೫

೬೧

ದಾಸೋಹಂ ತವ ದಾಸೋಹಂ ಶ್ರೀ
ದಶರಥನಂದನ ದಾಸೋಹಂ ಪ

ವಾಸುಕಿ ಕುಧರ ನಿವಾಸ ಲಕ್ಷ್ಮೀಪತೇ
ವಾಸುದೇವ ಶ್ರೀನಿವಾಸ ದಯಾಕರ ೧

ರಾಮ ರಘೋತ್ತಮ ರಾವಣಮದಹರ
ಸೋಮ ಸೂರ್ಯನೇತ್ರಾ ಸುಂದರಗಾತ್ರಾ ೨

ವಾಸುಕಿ ಶಯನೇತಿ ಸತ್ಯಂ ಸತ್ಯಂ
ವಾಮನ ಪುನರಪಿ ಸತ್ಯಂ ಸತ್ಯಂ ೩

ದಾಸಾಭೀಷ್ಟ ಸುದಾನೀ ತುಲಸೀ
ದಾಸವರದ ಲೋಕೋದ್ಧಾರ ಯದುವೀರಾ ೪

೬೨

ವಸುದೇವ ಸುತಂ ಸನಾತನಂ ವಂದೇ ಕೃಷ್ಣಂ ಜಗದ್ಗುರುಂ ಪ

ನಾರದ ಗಜಪರಿಪಾಲನಂ
ನೀರದ ಸನ್ನಿಭ ದೇಹಿನಂ ೧

ಶೇಷ ಕೃಭೃತ್ಶಿಖರಾಲಯಂ
ದೋಷಸಹಿತ ಕುಜನಾಲಯಂ ೨

ಶಂಖ ಚಕ್ರ ಕರಧಾರಿಣಂ
ಕಿಂಕರಜನ ಭವಹಾರಿಣಂ ೩

ಅಜಹರ ಸನ್ನುತ ಶ್ರೀಧರಂ
ತ್ರಿಜಗದ್ವಂದಿತ ಭೂಧರಂ ೪

ತುಲಸೀದಾಮ ದಳ ಶೋಭಿತಂ । ಶ್ರೀ
ತುಲಸೀರಾಮ ಭವಿ ಸೇವಿತಂ ೫

೯೩

ಶ್ರೀಕರ ಯದುಕುಲಶೇಖರ ದೇಹಿ
ಲೋಕನಾಥ ದಾಸಲೋಲ ಮಾಂ ಪಾಹಿ ಪ

ಶ್ರೀ ಮುರಳೀಧರ ಸಿಂಧು ಗಂಭೀರ
ಶ್ಯಾಮಸುಂದರ ಗೋಪೀಜಾರ ಯದುವೀರ ೧

ರುಕ್ಮಾಂಬರಧರ ರುಕ್ಮಗಿರೀಶಾ
ರುಕ್ಮಿಣೀಧವ ಭವರೋಗ ವಿನಾಶಾ ೨

ಮಣಿಮಯ ಭೂಷಣ ಮಷಕಪುರೀಶಾ
ಗುಣನಿಧಿ ಶ್ರೀವೇಣುಗೋಪಾಲ ಶ್ರೀಶಾ ೩

ಮಾರಜನಕ ಸುಕುಮಾರ ದಶವೇಷಾ
ಧಾರುಣಿ ಶ್ರೀ ತುಲಸೀದಾಸ ಸುಪೋಷ ೪

೯೪

ಕಮಲನಾಭ ವೆಂಕಟೇಶ ಭಕ್ತ ಕಲ್ಪಭೂರುಹ ಶ್ರೀ
ಕಮಲ ಪ್ರಾಣೇಶಾ ಪ

ವಿಮಲ ವೈಕುಂಠಪುರೀಶಾ ಶಿವ
ಕಮಲಸಂಭವನುತ ಕರ್ಬುರನಾಶಾ ಅ.ಪ

ನಿರುಪಮ ಸುಂದರ ಗಾತ್ರಾ ನಿತ್ಯ
ಪರಿಪೂರ್ಣ ವೈಭವ ಪರಮ ಪವಿತ್ರಾ
ಶರನಿಧಿ ತನಯ ಕಳತ್ರಾ ಶೇಷ
ಪರಿಜನಕೃತ ಘೋರ ಪಾಪಾಂಧ ಮಿತ್ರಾ ೧

ಸನಕ ಸನಂದನ ವಿನುತಾ ಶಶಿ
ದಿನಕರ ಶತಕೋಟಿ ದಿವ್ಯ ಸುಚರಿತಾ
ಜನನ ಮರಣ ಕ್ಲೇಶರಹಿತ ಶ್ರೀ
ವನಜ ಸುದರ್ಶನ ವನಮಾಲ ಧರಿತ ೨

ಜಲಜಮಿತ್ರ ವಂಶ ಭೂಷಾ ಕ್ಷಾರ
ಜಲಧಿ ಬಂಧನ ಪುಣ್ಯಜನ ಪ್ರಾಣ ಶೋಷಾ
ತುಲಸೀ ರಾಮದಾಸ ಪೋಷಾ ಶ್ರೀ
ತುಲಸೀ ಕಾನನಹಿತ ತುಂಬುರ ತೋಷಾ ೩

(ಆ) ಲಕ್ಷ್ಮೀಸ್ತುತಿಗಳು

೯೫

ಅಮ್ಮಾಯಮ್ಮಾ ಲಕ್ಷ್ಮೀ ನನಗೆ ಅಭಯವ ಕೊಡು ಸೀತಮ್ಮಾ ಪ

ಬೊಮ್ಮನ ಜಗಂಗಳ ಪೆತ್ತ ಸುತಾಯೆ
ಸುಮ್ಮನೆ ಕಾಲವ ಕಳೆಯದೆ ಬೇಗನೆ ೧

ನಂಬಿದೆ ನಿನ್ನ ಚರಣಾಂಬುಜಯುಗಳವ
ಕಂಬುಕಂಧರನ ಕಾಂತೆಸುಶಾಂತೆ ೨

ಧರ್ಮನಿಲಯ ದಾರಿದ್ರ್ಯನಿವಾರಿಣಿ
ಧರ್ಮವಲ್ಲ ತವದಾಸನುಪೇಕ್ಷೆಯು ೩

ಹೇಮ ಮಹೀಧರ ಸ್ವಾಮಿನಿ ತುಲಸೀ
ರಾಮದಾಸನ ಪ್ರೇಮದಿ ಪಾಲಿಸು ೪

೯೬

ನಮೋ ನಮೋ ಭವಗತಿ ಶ್ರೀ ನಾರಾಯಣಿ ಜಗದೀಶ್ವರೀ ಪ

ಸುಮಶರಜನನೀ ಸೋಮ ಸಹೋದರಿ
ಕಮಲವಾಸಿನೀ ಸುಂದರೀ ಲಕ್ಷ್ಮೀ ಅ.ಪ

ವಿಮಲಾ ವಿಶ್ವಕುಟುಂಬಿನೀ ವೆಂಕಟಶೈಲ ನಿವಾಸಿನೀ
ಅಮರೇಂದ್ರಾರ್ಚಿತ ಪಾದ ಸರಸಿಜ
ಅಘವಿನಾಶಿನಿ ಅಖಿಲಾಪದಹರ ೧

ಅಮೋಘ ಸಂಪತ್ಪ್ರದಾಯನೀ ಆರ್ತರಕ್ಷ ದೀಕ್ಷಾಮಣೀ
ಪ್ರಮೋದಯಾ ಶ್ರೀರಮಾಭಾರ್ಗವೀ
ಮಮಾಪಚಾರ ಕ್ಷಮಸ್ವಶಾರ್ಙಿಣೀ ೨

ಹೇಮಕುಧರ ಧಾಮೇಶ್ವರಿ
ತುಲಸಿರಾಮದಾಸನುತ ರಾಜೀವಾಕ್ಷಾ
ಹಿಮಾಂಶು ಮುಖಿ ಹರಿಹಿತಪ್ರಿಯ
ನಿಸ್ಸೀಮಾನದಾನಿನಿ ಸಜ್ಜನ ಪೋಷಿಣಿ ೩

೯೭

ಪಾಲಯಮಾಂ ಶ್ರೀ ಭಾರ್ಗವಿ ಲಕ್ಷ್ಮೀ
ಭಕ್ತವಾತ್ಸಲ್ಯನಿಧಿ ಹೇ ಜನನಿ ಪ

ಫಾಲಲೋಚನ ಬ್ರಹ್ಮಾದ್ಯಮರಪೂಜಿತ ಪಾದ
ಪದ್ಮಯುಗಳ ಸೌಭಾಗ್ಯ ಪ್ರದಾಯನಿ ಅ.ಪ

ಚಂದ್ರ ರೂಪಿಣಿ ಚಂದ್ರಾಭರಣಾಲಂಕೃತ
ಸೌಂದರ್ಯ ಚಂದ್ರಮುಖಿ
ಇಂದ್ರವರಜ ಹೃನ್ಮಂದಿರ ವಾಸಿನಿ
ವಿಶ್ವಕುಟುಂಬಿ ಇಂದಿರೆ ಸತತಂ ೧

ಧಾತ್ರಿ ತುಲಸಿರಾಮದಾಸಾವನ ಶೀಲ
ದಾರಿದ್ರ್ಯಾಪಹಾರಿಣೀ
ಅತ್ರೀಮಹಾಋಷ್ಯಾಪತ್ಯ ಸಹೋದರಿ
ಅಹಿಗಿರಿ ಶಿಖರಾನಂದನಿಲಯ ನಿತ್ಯ ೨

೯೮

ಬಂದಳು ಸಿರಿಲಕುಮಿಯು ನಮ್ಮ ಮನೆಗೆ
ತಂದಳೈಶ್ವರ್ಯಂಗಳ ಪ

ಇಂದಿರೆ ಹರಿಯುರ ಮಂದಿರ ನಿತ್ಯಾ
ನಂದ ನಿಲಯ ಭವಬಂಧ ವಿಮೋಚನಿ ಅ.ಪ

ಸುಂದರಾಂಗಿ ಸುಗುಣಾ ಸಿಂಧು ಜಗಜ್ಜನನೀ
ಇಂದುಸೋದರಿ ಪೂರ್ಣೇಂದು ಬಿಂಬಾನನೆ ೧

ಯೆಂದಿಗೆ ಸಂಪದ ಕುಂದ ಬರವ ಹಾಂಗೆ
ನಿಂದು ಪಾಲಿಸುವನೆಂದು ದೀಕ್ಷೆಯು ಮಾಡಿ ೨

ಬೃಂದಾರಕ ಸಂಕ್ರಂದನ ವಂದಿತೆ
ಮಂದಹಾಸದಿ ರಘು ನಂದನ ಸುಪ್ರಿಯೆ ೩

ಕಂದ ತುಲಸಿದಾಸನೆಂದು ಸಂಭ್ರಮದಿ ಮುಚು
ಕುಂದವರದ ಪಾದದ್ವಂದ್ವ ಭಕ್ತಿಯು ಕೊಡಲು ೪

೯೯

ಬಾರದೇತಕೋ ತವದಯ ಭಗವತಿ ಭಾರ್ಗವಿ ದೇವೀ ಪ

ಘೋರ ದುರಿತ ಪರಿಹಾರಿಣಿ ಭಕ್ತೋ
ದ್ಧಾರಿಣಿ ಭಾಗ್ಯ ವಿಹಾರಿಣಿ ಜನನೀ ೧

ವಂದಿಪೆ ಪಾದದ್ವಂಧ್ವ ಸರೋಜವ
ಇಂದಿರೆ ಹರಿಯುರಮಂದಿರ ವಾಸಿನಿ ೨

ನಾರಿಶಿರೋಮಣಿ ನಂಬಿದೆ ನಿನ್ನನು
ನಾರಾಯಣೀ ಭವನಾಶಿನಿ ಶಾರ್ಙಣಿ ೩

ದಾರಿದ್ರ್ಯಾಪಹ ಧನಧಾನ್ಯಪ್ರದ
ಕ್ಷೀರಾರ್ಣವ ಸುತೇ ಶ್ರೀಮಹಾಲಕ್ಷ್ಮೀ ೪

ಹೇಮಗಿರೀಶ್ವರಿ ಭಾಮಾ । ತುಲಸೀ
ರಾಮದಾಸನುತ ಸುಕ್ಷೇಮವು ನಿನ್ನದು ೫

೧೦೦

ಬಾರಮ್ಮ ಶೇಷಾದ್ರಿ ಭಾರ್ಗವಿದೇವಿ ಪ

ತೋರಮ್ಮ ಮೃದುಪದ ತೋಯಜಕೇಳೆ ಜನನಿ ಅ.ಪ

ದುಷ್ಟನು ನಿನ್ನ ಕ ನಿಷ್ಟ ಕುಮಾರನೂ
ಕಷ್ಟವ ಪರಿಹರಿಸು ಇಷ್ಟು ಸಂಪದ ಕೊಡು ೧

ಕಾರುಣ್ಯ ರೂಪಿಣಿ । ಕಾಮಿತ ದಾಯಿನೀ
ಸಾರಸದಳ ನೇತ್ರಿ । ಸೌಂದರ್ಯ ಗಾತ್ರೀ ೨

ವಾಸವ ದುಃಖ ನಿವಾರಿಣಿ ಶ್ರೀತುಲಸೀ
ದಾಸ ಹೃತ್ಸರಸಿಜ । ವಾಸಿನಿ ರುಕ್ಮಿಣಿ ೩

೧೦೧

ಯಾತಕೆ ಕೃಪೆಮಾಡದೆ ಯಿರುತಿಹೆ ಸಿರಿಯೇ
ಪೀತಾಂಬರಧರ ತರುಣಿಯೆ ಪ

ಪಾತಕಹಾರಿಣಿ ಭಾವಜನನೀ
ಭಕ್ತ ಕುಟುಂಬಿನಿಭವಭಯ ನಾಶಿನಿ ೧

ದಾರಿದ್ರ್ಯಾಂಬುಧಿ ತರುಣೋಪಾಯವು
ತೋರಿಸು ರಘುಕುಲದೊರೆ ಸುಪ್ರಿಯಳೆ ೨

ರತ್ನಾಭರಣಯುಕ್ತ ಸುಗಾತ್ರೇ
ರತ್ನಾಕರಸುತೇ ರಾಜೀವಾಲಯೇ ೩

ಹೇಮಭೂಧರ ಸ್ವಾಮಿನಿ ತುಲಸೀ
ರಾಮದಾಸ ಸುಕ್ಷೇಮವು ನಿನ್ನದು ೪

೧೦೨

ವನಜಾಲಯ ಮಾಂಪಾಲಯ ಶ್ರೀ
ವನಜಾಲಯ ಮಾಂಪಾಲಯ ವಾಸುದೇವ ಸುಪ್ರಿಯ ಪ

ವಸುಮತಿ ತನಯೆ ವರದಾಭಯಕರೆ
ಕುಸುಮಶರಾಬ್ಜಜ ಕುಶ ಲವ ಮಾತೇ ೧

ಮಣಿಮಯಾಲಂಕೃತೆ ಮಂಜುಳ ಭಾಷೇ
ಅಣಿಮಾ ಮಹಿಮಾದ್ಯಷ್ಟಭಾಗ್ಯಾನ್ವಿತೇ ೨

ಜಲರುಹ ನಯನೇ ಚಂದ್ರಗೀರಿಶ್ವರೆ
ತುಲಸೀರಾಮದಾಸ ದುರಿತನಿವಾರಣೆ ೩

೧೦೩

ಮಾನಾಭಿಮಾನವಿಲ್ಲವೇ । ಮಹಲಕ್ಷ್ಮೀ ನಿನಗೆ ಪ

ಹೀನ ಜನಂಗಳ ಬೇಡುತ ನಿರುತವು
ಹೀನ ವೃತ್ತಿಯಿಂದೋಡುತ ತಿರುಗುವೆ ೧

ದೀನಾವನ ಬಿರುದೇನಾಯಿತೋ ಶ್ರೀ
ದಾನಿ ನಿನ ನಂಬಿದ ದಾಸನ ವಿಷಯದಿ ೨

ಜಾನಕಿ ಶ್ರೀ ರಘುನಾಯಕಿ ತವಪದ
ಧ್ಯಾನವು ನನಗೆ ನಿಧಾನವು ಲಕುಮೀ ೩

ಹೇಮಕುಧರ ಧಾಮೇಶ್ವರಿ ತುಲಸಿ
ರಾಮದಾಸನ ಸಂರಕ್ಷಣೆ ಮಾಡುವ ೪

೧೦೪

ಶ್ರೀ ರುಕ್ಮಿಣೀಮಣಿ ಶ್ರೀಕೃಷ್ಣ ಪ್ರಿಯತರುಣಿ ಪ

ಶ್ರೀ ರುಕ್ಮದಾಯಿನೀ ಶ್ರೀಯಂ ದೇಹಿ ದೇಹೀ ಅ.ಪ

ಕ್ಷೀರವಾರಿಧಿ ಪುತ್ರಿ ಶಾರದೋತ್ಪಲ ನೇತ್ರಿ
ಮಾರಸತಿ ಜಿತಗಾತ್ರಿ ಮಾಂಪಾಹಿಪಾಹಿ ೧

ಘೋರ ಕಲುಷವಿದಾರಿ ದಾರಿದ್ರ್ಯ ಪರಿಹಾರಿ
ದ್ವಾರಕಾಪುರ ವಿಹಾರಿ ತ್ವಂ ತ್ರಾಹಿ ತ್ರಾಹಿ ೨

ದಾಸ ತುಲಸೀರಾಮ ದಾಸನುತ ಹಿತ ಪ್ರೇಮ
ವಾಸವಾರ್ಚಿತ ನಾಮ ವರಂ ದೇಹಿ ದೇಹೀ ೩

(೩) ಆಳ್ವಾರಾಚಾರ್ಯ ಸ್ತುತಿಗಳು

(೧) ಆಂಜನೇಯ ಸ್ತುತಿ

೧೦೫

ಶ್ರೀಮದ್ರಾಮನೃಪಾಲ ಸೇವಕ ಕಾಮಿತ ಫಲದಾಯಕ ಪ

ಭೂಮಿ ಶೋಕ ವಿನಾಶಕ ಕಪಿಕುಲ
ಸೋಮ ಸದ್ಗುಣ ಸ್ತೋಮ ದಯಾಳೋ ೧

ಆಂಜನೇಯ ಸುರಂಜನ ರಿಪುಕುಲ
ಭಂಜನ ಮಣಿಮಯ ಮಂಜುಳ ಭಾಷಣ ೨

ರಾಮಾನುಜಮುನಿ ಪ್ರಾಣೋದ್ಧಾರಕ
ರಾಮಕಾರ್ಯವರ ಪ್ರೇಮಸಾಗರ ೩

ವಾತಾತ್ಮಜ ಭವಪಾತಕದೂರ
ಸೀತಾನುಗ್ರಹ ಸೇವಧಿಯುಕ್ತ ೪

ವಾಸುಕೀಶಯನ ನಿವಾಸ ಭಕ್ತಾ
ಗ್ರೇಸರ ತುಲಸೀದಾಸಾನವ ಹರಿ ೫

೧೦೬

(೨) ರಾಮಾನುಜ ಸ್ತುತಿಗಳು

ಭಜರೇ ಗುರುಚರಣಂ । ದುಸ್ತರ
ಭವಸಾಗರತರಣಂ ಪ

ಸುಜನ ರಾಮಾನುಜ ಗುರುಪತಿ ಸ್ಮರಣಂ
ನಿಜಸೇವಕಜನ ಸಂಕಟ ಹರಣಂ ೧

ವರ ರಾಮಾನುಜ ಗುರುಪತಿ ಬೋಧಂ
ಪರಮ ಭಕ್ತಜನ ಕಲುಷ ವಿಚ್ಛೇದಂ ೨

ಧರ ರಾಮಾನುಜ ಗುರುಪತಿ ರೂಪಂ
ನಿರತಮು ದಾಸುಲನಿಜ ನಿಕ್ಷೇಪಂ ೩

ಅಲಶ್ರೀ ಪೆರಂಬುದೂರು ನಿವಾಸುಲು
ತುಲಸಿ ರಾಮದಾಸ ಹೃದಯ ನಿವೇಶುಲು ೪

೧೦೭

ಶ್ರೀಮತೇ ಶ್ರೀರಾಮಸೋದರಾ ಶ್ರಿತಜನಮಂದಾರ ಪ

ಪಾಮರ ಪಾಪೌಘ ಪತಿತ ಬದ್ಧ
ಜೀವೋದ್ಧಾರ ಶುಭಕರ
ನಾಮ ನಿತ್ಯ ವಿಭೂತಿದಾಯಕ
ಪ್ರೇಮನಿಧಿ ಭವಭೀತಿ ಪರಿಹರ ೧

ದಿವ್ಯ ಕಾಷಾಯಾಂಬರಾನ್ವಿತ
ದೇವರಾಜ ಸುವಾಕ್ಯ ಮಾತು
ಸವ್ಯಸಾಚಿ ಸೂತ ನಿರ್ಮಿತ ಶಾಸ್ತ್ರ
ಭಾಷ್ಯ ಪ್ರೋಕ್ತ ಯತಿವರ ೨

ದಂಡಿತಾಖಿಲ ಖಂಡಿತಾ ಪರಿ
ಮಂಡಲ ತ್ರಿದಂಡ ಕರಗಳ
ಮಂಡಿತಾ ವನಮಾಲ ತುಲಸೀ
ಮೂಲದಾಸಯುತ ಶ್ರೀ ಭಾಷ್ಯಕಾರ ೩

(ಈ) ಲೋಕನೀತಿ ಮತ್ತು ಕ್ಷೇತ್ರ ಸ್ತುತಿಗಳು

೧೦೮

(೧) ತಿರುಪತಿ

ಶರಣು ವಕುಳಾಭರಣ ಪೋಷಿತ
ಶರಣು ಯಾಮುನ ಪೂಜಿತ ಪ

ಶರಣು ಯತಿಪತಿ ನಿತ್ಯವಂದಿತ
ಶರಣು ಕ್ಷಮಾಭರಿತಾ ಅ.ಪ

ಶರಣು ದೇಶಿಕ ಹೃದಯ ಸದನಾ
ಶರಣು ಪರಿಪೂರ್ಣೇಂದು ವದನ
ಶರಣು ಸುಂದರ ಕೋಟಿ ಮದನಾ
ಶರಣು ಹಯವದನಾ ೧

ಶರಣು ಭಕ್ತಫಲಪ್ರದಾಯಕ ಶರಣು ತಿರುಮಲನಾಯಕಾ
ಶರಣು ಅಸ್ಮತ್ಪರಮದೇಶಿಕ ಶರಣು ಅಸ್ಮಾದ್ದೇಶಿಕಾ ೨

೧೦೯

(ಲೋಕನೀತಿ)

ವೃಥಾಮಾಡಬೇಡ ಈ ಜನ್ಮವು ಸದಾಬರದು ಮೂಢಾ ಪ

ಅಧೋಕ್ಷಜನ ಮೃದು ಪಾದಾರವಿಂದಗಳ
ಯಥಾರ್ಥದಿಂ ಭಜಿಸಿ ಕೃತಾರ್ಥನಾಗದೆ ೧

ಸುಧಾರದನ ಗೃಹ ಪದಾರ್ಥದಾಶದಿಂ
ಮದಾಂಧದಿಂ ಗುರು ಬುಧಾಳಿ ಸೇರದೆ ೨

ಪಿತಾ ಮಾತಾ ಹಿತ ಸುತಾದಿ ಬಂಧುಗಳ್
ಹಿತಾರ್ಥರೆಂದು ಪರಗತೀ ನೀ ಕಾಣದೆ ೩

ಹರೆ ದುರಿತ ಪರಿಹರೆ ತುಲಸಿರಾಮ
ಧೊರೆಯೆಂದು ನೀ ಮೊರೆಹೊಕ್ಕಡೆ ೪

೧೧೦

ಶೇಷಾ ಭೂಧರನಿವಾಸಾ ಶ್ರೀ ಶ್ರೀನಿವಾಸಾ ಪ

ಶೇಷಶಯನ ಭವದೋಷರಹಿತ ಭಕ್ತಪೋಷಣ
ಕೌಸ್ತುಭ ಭೂಷಾ ಅಶೇಷಾತ್ಮ ಶೇಷಾ ೧

ಅರಿದರಕರ ಕನಕಾಂಬರಧರ ಶ್ರೀ ಯ
ಲಮೇಲ್‌ಮಂಗಾ ವಿಹಾರ ಉದಾರೀ ವಿಧೀರಾ ೨

ವಿಷಚರಯುಗಮೃಗವೇಷಾ ದ್ವಿನೃಷಚ
ವೇಷಾಪುರಿ ಕುಲದೂಷಾ ಮಾ ವಿಷಯ ಸಂತೋಷಾ ೩

ಕಾಮಜನಕ ತುಲಸೀರಾಮದಾಸ ಹಿತ
ಕಾಮಿತಾರ್ಥವನೀವ ಓ ಶ್ರೀನಿವಾಸ ೪

೧೧೧

(೨) ದರಿಶಕುಪ್ಪ (ಶ್ರೀರಂಗಪಟ್ಟಣದ ಸಮೀಪ)

ದರಿಶಕುಪ್ಪ ಶ್ರೀ ಅಂಜನಿ ತನಯ
ದರುಶನ ಕೊಡು ಬೇಗ ದಯದಿಂದಾ ಪ

ಸಿರಿ ರಘುಕುಲವರ ಸೇವಾನುಕೂಲ
ಸ್ಮರಿಸುವೆ ನಿಮ್ಮ ಪಾದಸರಸಿಜಯುಗಳ ೧

ಹರಿಹರ ಬ್ರಹ್ಮಾದ್ಯಮರ ಸುಪೂಜ
ಧರಣಿಜಾ ಪ್ರಾಣೋದ್ಧಾರ ಸುತೇಜ ೨

ಘೋರದುರಿತ ಪರಿಹಾರ ಕಪೀಶಾ
ಪಾರಿಜಾತ ತರು ಪ್ರಾಂತ್ಯನಿವೇಶಾ ೩

ಲವಣ ಜಲಧಿ ಪದಲಂಘನ ತುಂಗ
ಪವನಾತ್ಮಜ ರಿಪುಭಂಗ ಶುಭಾಂಗ ೪

ರಾಮಾನುಜ ಪ್ರಾಣರಕ್ಷಣ ದೀಕ್ಷಾ
ಕಾಮಾದ್ಯವಗುಣ ಖಂಡನಾಧ್ಯಕ್ಷ ೫

ಮರಕತ ಮಣಿಮಯ ಮಂಜುಳ ಭೂಷಾ
ಧರೆಯೊಳ್ ತುಲಸೀದಾಸ ಸುಪೋಷಾ ೬

ರಂಗದಾಸರ ಕೀರ್ತನೆಗಳು

(ಅ) ಶ್ರೀಹರಿಸ್ತುತಿಗಳು

೧೧೨

ಬೋಧರೂಪನೆ ವೇದವೇದ್ಯನೆ ಬೇಗ ಮೋಕ್ಷವನೀವನೇ
ವೇದತಸ್ಕರನಂ ವಿಭಂಜಿಸಿ ವೇದಮಂತ್ರವ ತಂದನೇ ಪ

ಮೋದದಿಂದಗವನ್ನು ಬೆನ್ನಲಿ ಮಂತ್ರಪೊತ್ತ ದೇವನೆ ಪೋಷಿಸ್ಯೆ
ಸಾದರಂಮಿಗೆ ರಂಗನಾಥನೆಸಂತತಂ ನುತಿಗೈದಪೆಂ ಅ.ಪ

ಮಂಗಳಾಂಗ ವಿಹಂಗ ರಾಜತುರಂಗ ಸನ್ಮುನಿ ಸಂಗಮಾ
ತಂಗ ರಕ್ಷ ಹಿರಣ್ಯ ಲೋಚನದರ್ಪಶಿಕ್ಷಲ ಸತ್ಕೃಪಾ
ಪಾಂಗ ದೈತ್ಯತನೂಭವೇಷ್ಟದ ತುಂಗ ಶೌರ್ಯ ವಿಶಿಷ್ಟ ಶ್ರೀ
ರಂಗನಾಥನೆ ರಕ್ಷಿಸ್ಯೆ ಭವದಂಘ್ರಿಸೇವೆಯೊಳಾವಗಂ ೧

ಸುಂದರಾಂಗನೆ ಸೂರಿವಂದ್ಯನೆ ಕುಂದಕುಟ್ಮಲದಂತನೇ
ಮಂದಹಾಸದೊಳೊಂದಿ ಬಾಲಕನಂದದಿಂದಲಿ ಬಂದು ಸಾ
ನಂದದಿಂ ಬಲಿಯಿಂದ ಭೂಮಿಯನಂದು ದಾನವಕೊಂಡ ಗೋ
ವಿಂದ ಪೋಷಿಸು ರಂಗನಾಥ ಮುಕುಂದ ನೀಂ ಪರಿತೋಷದಿಂ ೨

ರಾಮ ತಾಮರಸೋದ್ಭವಸ್ತುತನಾಮ ಸದ್ಗುಣಧಾಮ ಶ್ರೀ
ರಾಮಕೃಷ್ಣ ದಿನೇಶಮಂಡಲಧಾಮದೀನಶರಣ್ಯ ನಿ
ಷ್ಕಾಮ ಸಂಗರಭೀಮ ದೈತ್ಯವಿರಾಮ ಸುಂದರಕಾಮ ಸು
ತ್ರಾಮವಂದ್ಯನೆ ರಂಗನಾಥನೆ ರಕ್ಷಿಸೆನ್ನನು ಮೋದದಿಂ ೩

ಧೀರಬುದ್ಧನೆ ಕಲ್ಕಿರೂಪನೆ ಧೀರಸಂಕುಲದಿವ್ಯಮಂ
ದಾರ ನಿನ್ನನೆ ಬೇಡಿಕೊಂಬೆನು ಘೋರಸಂಸ್ಕೃತಿಬಂಧದಿಂ
ಗಾರುಮಾಡಿಸದಿನ್ನು ಮಾತೆಯಗರ್ಭಕೆಂದಿಗುತಾರದೆ
ಪಾರಗಾಣಿಸಿ ರಂಗನಾಥನೆ ಪಾಲಿಸೈ ಬಿಡದಳ್ಕರಿಂ ೪

(ಆ) ಆಳ್ವಾರಾಚಾರ್ಯ ಸ್ತುತಿಗಳು

೧೧೩

(೧) ಆಂಜನೇಯ

ನೋಡಿರೈ ಕಣ್ದಣಿಯಾ ಸಜ್ಜನರೆಲ್ಲ
ಪಾಡಿರೈ ಮನದಣಿಯಾ ಪ

ಗಾಢಭಕುತಿಯನಾಂತು ಭಜನೆಯ
ಮಾಡುವರ ದುರಿತಗಳನೋಡಿಸಿ
ಕೂಡೆನಿರ್ಮಲರೆನಿಸಿ ಪೊರೆವಾ
ರೂಢನಹ ಮಾರುತಿಯ ಮೂರ್ತಿಯ ಅ.ಪ

ಉಡಿಯೊಳ್ ಘಂಟೆಗಳೆಸೆಯೆ ಚರಣದೊಳುಳ್ಳ
ತೊಡರುಗಗ್ಗರಮುಲಿಯೆ
ಪಿಡಿದಪಂಕಜ ಮೆರೆಯೆಕುಂಡಲಿಗಳಿ
ರ್ಕಡೆಯ ಕರ್ಣದಿ ಪೊಳೆಯೆ
ಕಡಗ ಮಣಿಮಕುಟಗಳ ಪೇರುರ
ದೆಡೆಯ ವಜ್ರದಪದಕ ಮೊದಲಹ
ತೊಡಿಗೆಗಳ ಸಡಗರದೊಳೊಪ್ಪುವ
ದೃಢತರದ ಮಾರುತಿಯ ಮೂರ್ತಿಯ ೧

ಭರದಿಂದ ಶರನಿಧಿಯಾ ಲಂಘಿಸಿ ಪೊಕ್ಕಾ
ನಿರುಪಮತರ ಲಂಕೆಯ
ಗುರಿಗೊಂಡರಸಿ ಸೀತೆಯಾ ಕಂಡಾರಘು
ವರನುರುಮುದ್ರಿಕೆಯ

ಕರದೊಳಿತ್ತಾರಮಣಿಯಿಂ ವಿ
ಸ್ಫುರಿಪ ಚೂಡಾಮಣಿಯ ಕೈಕೊಂ
ಡಿರದೆ ಬಂದೊಡೆಯಂಗೆ ಸಲಿಸಿದ
ಪರಮಬಲಯುತನಮಳಮೂರ್ತಿಯ ೨

ವಾದವಿದೂರನನು ಪಾವನ ಮೃದು
ಪಾದಾರವಿಂದನನು
ವೇದಾಂತವೇದ್ಯನನು–ಸನ್ನುತಪರ
ನಾದಾನುಮೋದನನು
ಸಾದರದೊಳೈತಂದು ಪ್ರಾರ್ಥಿಪ
ಸಾಧುಸಂತತಿಗೊಲಿದು ಪರಮಾ
ಮೋದದಿಂ ಪರಮಾರ್ಥವಿಷಯವ
ಬೋಧಿಸುವ ಮಾರುತಿಯ ಮೂರ್ತಿಯ ೩

ರಂಗನಾಥನದೂತನ ಸತ್ಕರುಣಾಂತ
ರಂಗನಾರ್ತಪ್ರೀತನ
ಕಂಗೊಳಿಸುವ ನೂತನಪುರವರದೊಳು
ಹಿಂಗದೊಪ್ಪಿರುವಾತನ
ಮಂಗಳಾತ್ಮನ ಮೋಹದೂರನ
ಸಂಗರಹಿತನ ಸತ್ಯಚರಿತನ
ರಂಗದಾಸಪ್ರಣೀತಮಹಿಮೋ
ತ್ತುಂಗ ಶ್ರೀ ಮಾರುತಿಯ ಮೂರ್ತಿಯ ೪

೧೧೪

(೨) ರಾಮಾನುಜರು

ಬೇಡಿಕೊಂಬುವೆನು ನಿಮ್ಮ ರಾಮಾನುಜರೆ
ಬೇಡಿಕೊಂಬುವೆನು ನಿಮ್ಮಾ ಪ

ಬೇಡಿಕೊಂಬುವೆ ನಿಮ್ಮ ಚರಿತೆಯ
ಪಾಡಿ ಹಿಗ್ಗುವ ಸುಖವ ಸಂತತ

ಕೂಡಿ ಹೃದಯದ ಕಮಲ ಮಧ್ಯದೊ
ಳಾಡುತೆನ್ನನು ರಕ್ಷಿಸೆನುತಲಿ ಅ.ಪ

ಚರಮ ಶ್ಲೋಕವ ಬೋಧಿಸಿ ಅಷ್ಟಾಕ್ಷರಿಯೊ
ಳಿರುವ ಗೋಪ್ಯವ ತೋರಿಸಿ
ಮೆರೆವದ್ವಯವರ ಪಂಚಸಂಸ್ಕಾರವನು
ಗೈವುತ ಪ್ರಣವ ಶಬ್ದದಿ
ಬೆರಸಿ ನಿನ್ನನೆ ಭಜಿಸಿ ಸ್ಮರಿಸುತ
ಪರಮನಾಗುವ ಮತಿಯ ತ್ವರಿತದಿ ೧

ಅಷ್ಟಮದಗಳು ಎನ್ನನೂ ಬಂಧಿಸಿ ಮಾಯಾ
ಅಷ್ಟಪಾಶದಿ ನೊಂದೆನೊ
ದುಷ್ಟಕಾಮಾದಿಗಳ ಭ್ರಾಂತಿಯು
ಕಟ್ಟ ನರಕದಿ ಕೆಡಹಿ ಸುಡುತಿದೆ
ಭ್ರಷ್ಟಗುಣಗಳ ದೂರಸೇರಿಸಿ
ಶ್ರೇಷ್ಠಮುಕ್ತಿಯ ಪಡೆವ ವಿರತಿಯ ೨

ಜ್ಯೋತಿ ಜ್ಯೋತಿಯ ನಿಲ್ಲಿಸಿ ಹೂಬಳ್ಳಿಯೊಳ್
ಜ್ಯೋತಿನೋಡು ಪೂಜಿಸಿ
ಮಾತೆ ಮಾತುಳ ಪಾಲಕಾನುಜ–
ತಾತ ಸತಿ ಸುತ ಬಂಧು ಮಿತ್ರ
ವ್ರಾತ ಸಂಗಡಬಂಧಬಿಟ್ಟು ಪು
ನೀತನಾಗಲಿಬೇಕು ಎನುತಲಿ ೩

ಯಾದವಾದ್ರಿಯ ವಾಸನೆ ಭಕ್ತರನೆಲ್ಲ–
ಮೋದದಿಂದಲಿಯಾಳ್ವನೇ
ಮೇದಿನೀಮಹದೇವಪುರವರ
ನಾದಶ್ರೀಗುರುರಂಗ ನಿನ್ನ ಸು–

ಪಾದನಂಬಿದ ರಂಗದಾಸನ
ಪರಮಯೋಗಿಯು ಎನ್ನಿಸೆನುತಲಿ ೪

ಅಷ್ಟಾಕ್ಷರದ್ವಯದರ್ಥದಿ
ನಿಷ್ಠಾಪರನಾಗಿ ಮನದಿ ನಿರುತಂ ಜಪಿಸಲ್
ಇಷ್ಟಾರ್ಥವು ಸಿದ್ಧಿಸುತಂ
ಅಷ್ಟಮನೋಳ್ಬೆರದುನಿಲ್ವನಿದು ಸಿದ್ಧಾಂತಂ ಕಂದ

(ಇ) ಆತ್ಮನಿವೇದನೆ

೧೧೫

ಎಷ್ಟು ಪ್ರೇಮಿಯೋ ಗುರುವು ಎಷ್ಟು ಪ್ರೇಮಿಯೋ ಪ

ಎಷ್ಟು ಪ್ರೇಮಿ ಎನ್ನ ಬಿಡದೆ । ಸೃಷ್ಟಿಯಲ್ಲಿ ಕೈಯಪಿಡಿದ ಅ.ಪ

ಭಾನುಕೋಟಿ ತೇಜ ವರದ ಸಾನುರಾಗದಿಂದ ಕರೆದು
ಜ್ಞಾನ ಶಾಸ್ತ್ರ ಬೋಧಿಸುತ್ತ ಹೀನ ವೃತ್ತಿ ದೂರಿ ಪೊರೆದ ೧

ನೀಲವರ್ಣ ಕಂಜನಯನ ನೀಲಕಂಠಮಿತ್ರ ಭಕ್ತ
ಪಾಲ ಭೂರಿದುಃಖಭವವ ಧೂಳಿಮಾಡಿ ಬಾಲಗೊಲಿದ ೨

ಶ್ರೇಷ್ಠ ಸುಮಹದೇವಪುರದೊಳಿಷ್ಟರಂಗನಾಥ ಭರದಿ
ಮುಟ್ಟಿ ಮುಕ್ತಿಯಿತ್ತು ಪುನಃ ಹುಟ್ಟು ಸಾವುಗಳನು ಕಳದ ೩

೧೧೬

ಕನಸನು ಕಂಡೆನು ಕೇಳೌ
ಘನ ಶ್ರೀ ಗುರು ಬಂದು ಶಾಸ್ತ್ರ ತತ್ವವ ಪೇಳ್ದಂ
ಮನಸಿನ ಸಂಶಯವಳಿಯಿಸಿ
ತನಯಗೆ ರಾತ್ರಿಯೊಳು ತೋರಿದಂ ಸತ್ಪಥಮಂ ಕಂದ

ಕನಸನು ಕಂಡೆನು ಕೇಳೌ ಶ್ರೀಗುರುಭರದಿಂ ತಾ ಬಂದೂ ಪ

ತನಯನ ಸಂಶಯವಳಿಯಿಸಿ ಪರತರ
ಗತಿಯನು ತಾ ಕೊಡುವ ಅ.ಪ

ಶ್ರೀಹರಿ ಪೂಜೆಯು ಸ್ತೋತ್ರವು ಚಿಂತನೆ–ಶ್ರೀಹರಿಮಂತ್ರವನೂ
ಶ್ರೀಹರಿ ಲಾಂಛನ ಧರಿಸುತ ಸಂತತ ವಿಠಲನ ಭಜಿಸೆಂದು ೧

ಬಂಧುರದೇಗುಲ ವರಕ್ಷೇತ್ರದೊಳಾನಂದವನೋಡುತಲೀ
ನಿಂದಿಹ ಪರಿಪರಿ ಸಾಧುವೈಷ್ಣವರಿಗೊಂದನೆಮಾಡೆಂದ ೨

ಸತ್ಯಪ್ರಬಂಧವು ಅಷ್ಟಾಕ್ಷರಿಜಪತತ್ವ ಸುದ್ವಯಮಂತ್ರ
ನಿತ್ಯಹೃದಯದೊಳು ಸೋಹಂಭಾವದಿ ಭಕ್ತಿಯೊಳ್ಬೆರೆಯೆಂದ ३

ವರಮಹದೇವನ ಪುರಶ್ರೀರಂಗನಚರಣವ ಗುರಿಮಾಡೀ
ಮರೆಯದೆ ಧ್ಯಾನಿಸು ನಾನೇ ನಿನ್ನನು ಪೊರೆಯುವೆನೆಂತೆಂದ ೪

೧೧೭

ತಂದೆ ನೀನೆ ದಯದಿ ಪಾಲಿಸೆಂದು ಬಂದೆನೋ ಪ

ಹಿಂದುಮುಂದು ಗತಿಯದಾರುಯಿಲ್ಲವೆಂಬೆನೊ ಅ.ಪ

ಕುಕ್ಷಿಯೊಳಗೆ ಜಗವನಿಟ್ಟುಕೊಂಡು ಪೊರೆವನೆ
ಪಕ್ಷಿಗಮನ ನಿಮ್ಮ ನೆನೆವೆ ಭಜಕಗೊಲಿವನೆ ೧

ಕ್ಷೀರವಾರ್ಧಿಶಯನ ಗೋಪಿ–ಜಾರ ಪಾಲಿಸೊ
ಮಾರಜನಕ ಮುದದೊಳೆನ್ನ ದೂರಲಾಲಿಸೊ ೨

ಸುಮಹದೇವಪುರದ ನಿಲಯ–ಸುಜನರಕ್ಷನೆ
ಕ್ರಮದೊಳೆನ್ನ ರಕ್ಷಿಸಯ್ಯ–ಕಮಲೆಯಾಣ್ಮನೆ ३

೧೧೮

ನರಸಿಂಹಗುರುವೆ ನೋಡ್ಯೆ ಬಾಲನ
ಈಗ ಕರವ ಪಿಡಿದು ರಕ್ಷಿಸ್ಯೆ ಪ

ತರುಣಿದ್ರೌಪದಿ ಶಬರಿಯಜಮಿಳ ತರಳಧ್ರುವಬಲಿ ನಾಗಭಕ್ತರ
ಮೊರೆಯಲಾಲಿಸಿ ತಕ್ಷಣದಿ ಬಂದ ಹರುಷದಿ ಸಲಹಿದಾ ಸಿರಿ ಅ.ಪ

ಬರಬಾರದು ನಾಬಂದು ಸಂಸ್ಕೃತಿಯೆಂಬೊ
ಉರಿವಕಿಚ್ಚಿನೊಳುನಿಂದು
ಸ್ಮರಿಸಬಾರದ ಕೆಟ್ಟಪಾಪದಿ
ಬೆರತು ಸತಿಸುತ ಬಂಧು ಮೋಹದಿ
ಚರಿಸಿ ದೇಶದಿ ನಿನ್ನ ಧ್ಯಾನವ
ಮರತು ವಿಷಯದಿ ಮುಳುಗಿಪೋದೆನು ೧

ಗತಿಯಾರು ತೋರೋ ಇಂದು ಮುಂದೆನಗಿನ್ನು
ನತಪಾಲ ನೀನೆ ಎಂದು
ನುತಿಸಿ ಬೇಡುವೆ ಕರವಜೋಡಿಸಿ
ಮತಿವಿಹೀನರಸಂಗಜಾರಿಸಿ
ಹಿತದಿ ನಿನ್ನಡಿ ನೋಡಿ ಯಜಿಸುವ
ಮತಿಯ ನೀನೆನಗಿತ್ತು ಬೇಗದಿ ೨

ಮರೆಹೊಕ್ಕೆ ನಿನ್ನಡಿಯ ಮರ್ತ್ಯರ
ಬಾಧೆ ಘನವಾಗಿ ಇರುವದಯ್ಯ
ಹೊರಗೆ ಒಳಗೊಂದೊಂದು ಯೋಚನೆ
ಹರಡಿ ವೈಷ್ಣವರನ್ನು ದುಃಖದೊ
ಳಿರಿಸಿ ತೋಷಪಡುವ ಪಾಪಾತ್ಮರು
ನಿರಂತರ ವ್ಯಾಪಿಸಿರ್ಪುದ ೩

ಶ್ರೀಶ ನೀ ಕೋಪಬಿಟ್ಟು ಸಂತತ ರಂಗ
ದಾಸನೋಳ್ಮನವನಿಟ್ಟೊ
ಭಾಸುರಾತ್ಮನೆ ಬಂದ ವ್ಯಥೆಗಳ
ನಾಶಮಾಡದೆ ಬಿಟ್ಟರಿಳೆಯೊಳು
ದೋಷತಪ್ಪದು ನಿನಗೆ ಭಕ್ತನು
ಪೋಷ ಯದುಗಿರಿವಾಸಪರಮನೆ ೪

೧೧೯

ಬಾರೊ ಬಾರೊ ರಂಗ–ಬಾರೊ ನಮ್ಮನೆಗೆ ಪ

ಬೋರನ್ಹಾಕುವೆ ನಡೆಮುಡಿಯ ನಿಮ್ಮಡಿಗೆ ಅ.ಪ

ಪರಿಮಳಾಂಬುವಿನಿಂದ–ಪದವ ತೊಳೆಯುವೆನೊ
ವರಗಂಧಾಕ್ಷತೆಯನು–ಭರದಿ ಧರಿಸುವೆನೋ ೧

ಹೊಸಪಟ್ಟೆಯನು ತಂದು–ಹೊಂದಿಸಿ ರಾಜಿಸುವೆ
ಕುಸುಮದಿಂದರ್ಚಿಸಿ ಕೂಡೆ ಸಂತಸವ ೨

ಕುಂಕುಮಾಗಿಲು ದಿವ್ಯ ಗುಗ್ಗುಲಹೊಗೆಯ
ಬಿಂಕದಿಂದರ್ಪಿಸುವೆನು ಭೋಗಿಸಯ್ಯಾ ೩

ಮೇಲೆ ಸದ್ಭಕ್ಷ್ಯ ತಾಂಬೂಲವರ್ಪಿಸುವೆ
ಲಾಲಿತ ಮಹಮಂಗಳಾರತಿಯೀವೆ ೪

ಬಿಡದೆ ಸಾಷ್ಟಾಂಗವ ನಿಡುವೆ ರಮೇಶ
ಪೊಡವಿಯೊಳ್ ಮಹದೇವಪುರದ ಶ್ರೀಹರಿಯೆ ೫

೧೨೦

ಸೃಷ್ಟೀಶ ಕೃಪೆದೋರಿದ ಬಾಲನಮಾನನಷ್ಟವ ಜಾರಿಸಿದ ಪ

ಶ್ರೇಷ್ಠರೆಲ್ಲರು ಕೂಡಿ ಯದುಗಿರಿಯಲ್ಲಿ
ನ್ಯಾಯಕೆ ಪೋಪಕಾಲದಿ
ಪುಟ್ಟಯಾಖ್ಯನ ಸ್ವಪ್ನದಲಿ ತಾಂ-
ಬಿಟ್ಟು ಬನ್ನಿರಿಯೆನುತಪೇಳ್ದಾ ಅ.ಪ

ಎಲ್ಲಾರ ನಿನ್ನೊಳಗೆ ಸೇರಿಸಿ ಮುಂದೆ-
ಉಲ್ಲಾಸಕೊಡುವೆ ನಿನಗೆ
ಕಲ್ಲಿನಂದದಿ ಮೌನಧರಿಸುತ-
ಖುಲ್ಲಮನುಜರ ಸಂಗವರ್ಜಿಸಿ
ಎಲ್ಲಿಪೋದರು ಅಲ್ಲಿ ನನ್ನಡಿಯಲ್ಲಿ
ನಿಲ್ಲಿಸು ಮನವನೆನುತಲಿ ೧

ಗುರುಸೇವಾವಿರಹಿತರಿಗೆ ವೈಷ್ಣವರನ್ನ
ಗುರುತು ಕಾಣುವದೆಂದಿಗೆ
ಪರಮ ತಿರುಮಂತ್ರಾರ್ಥ ಅಷ್ಟಾ-
ಕ್ಷರಿಯ ಜಪತಪಧ್ಯಾನಮಾಡುವ
ಹಿರಿಯರಿಲ್ಲದ ಸಭೆಗೆ ಪೋಗಲು
ದೊರಯದೆಂದಿಗು ಕೀರ್ತಿ ಎನುತಲಿ ೨

ಮತಧರ್ಮಜ್ಞಾನಿಗಳು ಪೇಳಿರುವಂತ
ಮತಶಾಸ್ತ್ರವೀಕ್ಷಿಸದೆ
ಸತತದೂಷಣೆಗೈದು ಸುಜನರ -
ಕ್ಷಿತಿಯ ಭೋಗವನಂಬಿ ಗರ್ವದಿ
ಗತಿಯಮರತಿರುವಂತ ಮರ್ತ್ಯರ
ಹಿತವತಪ್ಪಿಸಿ ಕರವಪಿಡಿಯುತ ೩

ಸ್ಥಿರವಲ್ಲಕಾಯವೆಂದು ಸಾತ್ವಿಕಶೃತಿಯೊ–
ಳಿರುವ ಸತ್ಯ ನೋಡೆಂದು
ಪರಿಪರಿಯವೇದಾಂತತತ್ವವ
ನಿರುತಬೋಧಿಸಿ ಜನನಮರಣವ
ತರಿದು ಎನ್ನನೆ ಯಜಿಸು ಯೆನುತಲಿ–
ಹರಸಿ ಮೋಕ್ಷವನಿತ್ತ ಆರ್ಯನು ೨

ಬಿಟ್ಟು ಸತಿಸುತರೆಲ್ಲರ ಎನ್ನೊಳುಮನವ
ನಿಟ್ಟುನಂಬಿದಭಕ್ತರ
ಬಿಟ್ಟುಕೊಡೆನಾನೆಂದು ಹೃದಯಾ–
ಧಿಷ್ಟಿತನು ತಾನಾಗಿ ಅಭಯವ
ಕೊಟ್ಟನೀ ಮಹದೇವಪುರವರ
ಇಷ್ಟಶ್ರೀಗುರುರಂಗನೀಕ್ಷಿಸಿ ೫

(ಈ) ಲೋಕನೀತಿ–ತಾತ್ವಿಕ ಕೃತಿಗಳು

೧೨೧

ಕರ್ಮತ್ಯಾಜ್ಯವ ಮಾಡಿರೊ ಸನ್ಮಾರ್ಗದೋಳ್
ಕರ್ಮತ್ಯಾಜ್ಯವ ಮಾಡಿರೊ ಪ

ಕರ್ಮತ್ಯಾಜ್ಯ ಮಾಡಿ ಧರ್ಮಮಾರ್ಗವ ನೋಡಿ
ನಿರ್ಮಲ ಮನಮೂಡಿ ಮರ್ಮಜ್ಯೋತಿಯ ಕೂಡಿ ಅ.ಪ

ಕಾಮಕ್ರೋಧಗಳ ಸುಟ್ಟು ಸಂಸ್ಕೃತಿಯಳಿದು
ತಾಮಸಮತಿಯ ಬಿಟ್ಟು ಹೇಮದಾಸೆಗೆಮನ
ಪ್ರೇಮಮಾಡದೆ ಭಿನ್ನ ನಾಮರೂಪವ ನೂಂಕಿ
ರಾಮನೊಳ್ಮನ ನೆಟ್ಟು ೧

ಪರಮಪಾವನಮಾದ ಶ್ರೀಹರಿಯಲ್ಲಿ
ಬೆರೆಯುತಾನಂದದಿಂದ
ಅರಿಗಳಾರರಸಂಗ ಕರಿಗಳೆಂಟರ ಭಂಗ
ಕಿರಿದುಎಂಟರ ಅಂಗ ಭರದಿ ತರಿದು ಈಗ ೨

ಧರೆಯೊಳ್ದುಷ್ಟರ ಮರದು ಮಹನೀಯರ
ಚರಣಸೇವೆಯೊಳ್ಬೆರದು
ವರಮಹದೇವನಪುರದ ಶ್ರೀರಂಗನ
ನಿರುತ ನಂಬಿಯೆ ಸದ್ಗುರುವ ಸೇವಿಸಿ ದುಷ್ಟ ೩

೧೨೨

ತಂದೆಯೆ ನೀನೆನಗಹುದೈ
ಬಂಧುರ ದುರಿತಾರಿ ನಿನ್ನ ಬಾಲನು ನಾನಾ
ನಂದದಿ ಪೇಳ್ವೆನು ಕರುಣಾ
ಸಿಂಧುವೆ ಪೊರೆಯೆನ್ನನಿಂದು ಶ್ರೀಮದ್ಗುರುವೇ ಕಂದ ೧

ಸನ್ನುತಗುರುವರ ನಿಮ್ಮಯ
ಚನ್ನಡಿದಾವರೆಯ ನಂಬಿ ಸಲೆ ಸೇವಿಸುವಂ
ಗಿನ್ನಿತರ ಕ್ಷೇತ್ರಭ್ರಮೆ
ಯೆನ್ನುವುದೇನುಂಟು ನೋಡಲಿಳೆಯೊಳಗನಿಶಂ ೨

ತಂದೆಯಹುದು ನೀನೆ ಶ್ರೀಗುರು ತಂದೆಯಹುದು ನೀನೆ ಪ

ಅಂದದಿ ಸಂಸೃತಿಸಂಗವ ಜಾರಿಸಿ
ಬಂಧುರ ತತ್ವವನರುಹಿದ ಪರಮನೆ ಅ.ಪ

ಎಷ್ಟುಕರುಣಿ ಎನ್ನ ಪಾಪವಸುಟ್ಟು ಭ್ರಾಂತಿವಿಷಯ
ಕೃಷ್ಣನಪಾದವಮುಟ್ಟಿ ಯಜಿಸಿ ಮನ
ನೆಟ್ಟುಯೋಗದಲಿ ವಿಮಲನಮಾಡಿದ ೧

ನಾಮ ರೂಪ ಮರೆಸಿ ಸೋಹಂ–ಭಾವಮುದ್ರೆ ಧರಿಸಿ
ತಾಮಸ ಬುದ್ಧಿಯ–ತರಿದೀಡಾಡಿಸಿ
ನೇಮದಿ ಜಗದೊಳು–ಚರಿಸೆಂದರಸಿದ ೨

ಭೇದವಾದ ತೊರಸಿ ಚಿತ್ಕಳೆ–ನಾದಕವಚ ತೊಡಿಸಿ
ಸಾಧಿಸಿ ವಿರತಿಯ–ವರವೈರಾಗ್ಯವ
ಬೋಧಿಸುತಲಿ ತನ್ನಂತೆಯೆಮಾಡಿದ ೩

ಚರಮ ಶ್ಲೋಕವನ್ನು ಅಷ್ಟಾಕ್ಷರಯುಗಮಂತ್ರವನ್ನು
ತಿರುಮಂತ್ರಾರ್ಥವ ತೀರ್ಥಪ್ರಸಾದವ
ತರಳನಿಗಿಯುತ ಮರವೆಯ ನೂಕಿದ ೪

ಬಂದ ಕಷ್ಟಗಳನು ಬೇಗದಿಭಂಗಮಾಡಿ ತಾನು
ಬಂದು ಹೃದಯ ವರಮಂದಿರದೊಳುತಾ
ನಿಂದು ಮೋಕ್ಷವನು ಸಂಧಿಸಿ ಸಲಹಿದ ೫

ಶರಣು ಪೊಕ್ಕ ನರನ ಸಂತತಕರವ ಪಿಡಿದು ಮುನ್ನ
ವರಮಹದೇವನ ಪುರ ಶ್ರೀರಂಗನೆ
ಹರುಷದೊಳೆನ್ನನು ಪರದೊಳ್ಬೆರಸಿದ ೬

೧೨೩

ಧ್ಯಾನಿಸಿ ಆತ್ಮನ ಧ್ಯಾನಿಸಿ ಬ್ರಹ್ಮನ
ಧ್ಯಾನಿಸಿ ಸಂತತ ಗುರುವರ್‍ಯನ ಪ

ದುರಿತ ಮೋಹ ದುಃಖ ದೂರ ನೂಂಕಿ ಕಾಯ್ವ
ಪರಮ ಪಾವನಮೂರ್ತಿಯ ೧

ಕಾಮಿತಾರ್ಥಗಳನು ಪ್ರೇಮದಿಕೊಡುವನ
ಭೀಮಮಿತ್ರನ ನೀವು ೨

ಪಾಪಪುಣ್ಯವೆಲ್ಲ ಶ್ರೀಪತಿಗರ್ಪಿಸಿ
ಗೋಪತಿಯನು ನಂಬಿ ಧ್ಯಾನಿಸಿ ೩

ಧರೆಯೊಳು ಮಹದೇವಪುರದ ಶ್ರೀರಂಗನ
ಮರೆಯದೆ ಭಾವ[ಶುದ್ಧ]ದೊಳ್ ೪

೧೨೪

ನೋಡಲೆ ಮಾನವ ಶ್ರೀಗುರುಚರಣವ
ಮಾಡುತ ಪೂಜೆಯ ತೋಷದಲಿ ಪ

ಬೇಡುತ ನಿಜಸುಖ ಆಜ್ಞಾಚಕ್ರದೊ
ಳಾಡುತ ಪರಮನೆ ನೀನಾಗಿ ಅ.ಪ

ಸತ್ತು ಹುಟ್ಟಿ ಈ ಪೋಗುವದೇಹವ
ನಿತ್ಯವು ಎನ್ನುತ ಪೋಷಿಸದೆ
ಸತ್ಯಪ್ರಬಂಧವ ಶ್ರೀಹರಿಪಾದವ
ನೆತ್ತಿಲಿ ಪೊತ್ತರ ಮಗನಾಗಿ ೧

ಚಿತ್ತವ ಚಲಿಸದೆಸಿದ್ಧಾಪುರದೊಳ
ಗಿತ್ತರೆ ಬಂಧುರಸಿದ್ಧಿಗಳೂ
ಅರ್ಥಿಯಿಂದ ಬಂದೊದಗುವ ಫಲಗಳ
ವ್ಯರ್ಥವ ಮಾಡದೆ ಶೀಘ್ರದಲಿ ೨

ಹರಿಯಜ ರುದ್ರರು ಈಶ ಸದಾಶಿವ
ಪರತರಮೂರ್ತಿಯ ಧ್ಯಾನಿಸುತ
ಗುರುವನೆ ಯಜಿಸುತ ಭಜಿಸುತ ಸರ್ವರು
ಗುರುವೇಯಾಗಿಹ ತೆರದಲ್ಲಿ ೩

ತತ್ವಮಸಿಯ ಬೋಧಾಮೃತ ಸೇವಿಸಿ
ಮೃತ್ಯುವ ಜೇಸುತ ಧೈರ್ಯದಲಿ

ಪೃಥ್ವಿಯೊಳೀಮಹದೇವನಪುರದೊಳು
ಭಕ್ತರ ಪೊರೆಯುವ ದೊರೆಯನ್ನೆ ೪

೧೨೫

ವರಪುಣ್ಯಬೇಡುವೆನಾಂ
ಗುರುವರ್ಯನ ಚರಣ ಪಿಡಿದು ಮುಕ್ತಿಯಪಥದೊಳ್
ಪರಿಕಿಸಿ ಶೀಘ್ರದಿಘನತರ
ಪರತತ್ವಪಡೆದು ಮರಣ ಜನನವ ತೊರೆವೇಂ ಕಂದ

ಸನ್ನುತಗುರುವರತತ್ವ ಬೋಧಿಸಿ–
ಮಂಗಳಾಶಾಸನಗೈಯುತಲೀ ಪ

ಎನ್ನನೆ ಯಜಿಸುತ ಸುಮ್ಮನೆಯಿದ್ದರೆ–
ಬೇಡಿದವರಗಳ ಕೊಡುವೆನುತ ಅ.ಪ

ಕೊಟ್ಟರು ದ್ರವ್ಯವ ನಿನ್ನಪರಾಧವ
ಕೊಡದಿದ್ದರು ನಾ ಮನ್ನಿಸುವೆ
ನಿಷ್ಠೆಯೊಳ್ವರಮನ ಸನಿಯದೊಳಿದ್ದರೆ
ಬಿಟ್ಟೆನೆಯೆಂದಿಗು ನಂಬೆನುತ ೧

ಸಾಧಿಸಿ ವಿರತಿಯ ಸಂಶಯಗೈಯದೆ–
ಭೇದವ ಭೇದಿಸಿ ನಿರ್ಮಲದಿ
ನಾದವ ಕೇಳುತ ಚಿತ್ಕಳೆ ನೋಡುತ
ಮೋದದಿ ಶ್ರೀಹರಿ ನೀನೆನುತ ೨

ತಿರುಪಣ್ಣಾಳ್ವಾರ್ವಿಪ್ರರು ಕಲ್ಲಿನೊಳ್ಚೀರಲು
ಮೌನವ ಧರಿಸಿರಲು
ಕರೆದು ಲೋಕಸಾರಂಗಮುನಿಗಳಂ–
ಕಳುಹಿಸಿಕರುಣದಿ ಪೊರೆದಂತ ೩

ವೇಶ್ಯೆಯ ವಚನಕೆ ಮೆಚ್ಚುತ ವರಗಳ
ಬೇಡಿಕೊ ಎನ್ನಲು ನಿನ್ನಂತ

ಕೂಸನು ಕೋರಿದ ಮಾತ್ರಕೆ ಆಕೆಯ
ಕುಕ್ಷಿಯೊಳ್ಪುಟ್ಟಿದೆ ಮನ್ನಿಸುತ ೪

ಭ್ರಷ್ಟನು ದ್ರೌಪದಿ ಸೆರಗನು ಪಿಡಿಯಲು
ಅಂತರಂಗದಿಂ ಧ್ಯಾನಿಸಲು
ಸೃಷ್ಟಿಯ ಭಾರವ ಹರಿಸಿದ ಧೀರನೆ
ಇಷ್ಟದಿ ಸೀರೆಯ ಕೊಟ್ಟಂತ ೫

ಸತ್ಯವಾಗಿ ತಾ ಭಕ್ತರ ಹೃದಯದಿ
ನಿತ್ಯವು ಕೃಪೆಯನು ತೋರುತಲಿ
ಪೃಥ್ವಿಲಿ ಈ ಮಹದೇವನ ಪುರದೊಳು
ಅರ್ಥಿಲಿ ರಂಗನ ಪಿಡಿದಂತ ೬

(ಉ) ಕ್ಷೇತ್ರವರ್ಣನೆ

೧೨೬

(೧) ಮೇಲುಕೋಟೆ

ಹರಿಯೇ ದೈವಶಿಖಾಮಣಿ
ಹರಿಯೇ ಸದ್ಭಕ್ತ ಬಂಧು ಹರಿಯೇ ಪೂಜ್ಯಂ
ಹರಿಪೂಜೆಯೆ ಪಾಪಕ್ಷಯ
ಹರಿಪೂಜೆಯೆ ಪರಮಪುಣ್ಯದಾಲಯಮದರಿಂ ಕಂದ

ತಿರುನಾರಾಯಣಸ್ವಾಮಿಯೆ ನಿಮ್ಮಡಿಯೀಕ್ಷಿಸಿ
ಹೃದಯದೊಳರ್ಚಿಸುವೆ ಪ

ಪರಮಸುಗತಿಯನು ಬೇಡುವೆಸಂತತ–
ಮರೆಯದೆ ಪಾಲಿಸು ವರಗಳನು ಅ.ಪ

ತಿರುಮಂತ್ರದ್ವಯದರ್ಥವ ಬೋಧಿಸಿ
ಹರುಷದಿ ಪರಮನೆ ನೀನೆಂದು
ಮರಣ ಜನನದಾಯಾಸವ ತಪ್ಪಿಸಿ
ಉರುತರ ಸೌಖ್ಯಗಳನು ಕೊಡುವ ೧

ಮನ್ನಿಸಿ ಭಕ್ತರ ಪೊರೆಯುವ ಧೀರನೆ
ಅನ್ಯರ ಕಾಣೆನು ನಾನಿನ್ನು
ನಿನ್ನನೆ ನಂಬಿದೆ ನರಹರಿಮೂರ್ತಿಯೆ
ಇಂದೀ ಸಂಸೃತಿ ಜಾರಿಸುವ ೨

ಲೋಕದ ವಾಸನೆ ಶಾಸ್ತ್ರದವಾಸನೆ–
ಸಾಕೈದೇಹದ ವಾಸನೆಯ
ಶ್ರೀ ಕಮಲೇಶನೆ ನಿನ್ನನು ಸ್ಮರಿಸುವ
ಈ ಕಡುವಾಸನೆ ಹೆಚ್ಚಿಸುತ ३

ಮಂಗಳ ಯದುಗಿರಿವಾಸ ಪರಮಗುರು
ರಂಗನೆ ನಿಜಕೃಪೆದೋರುತಲಿ
ಮಂಗಳಶಾಸನ ಗೈವುತ ಸಜ್ಜನ
ಸಂಗದೊಳೆನ್ನನು ಸೇರಿಸುವ ४

೧೨೭

ವಂದನೆಯ ಮಾಡುವೆ ಶ್ರೀಗುರುವಿಗೆ–
ವಂದನೆಯ ಮಾಡುವೆ ಪ

ವಂದನೆ ಮಾಡುವೆನಿಂದು ಯದುಶೈಲದೋಳ್
ಚಂದದೊಳಿರುತಿಹ ತಂದೆ ನಾರಾಯಣಗೆ ಅ.ಪ

ಹರುಷದಿಂದಲಿ ಇನ್ನು ಹರಸಿ ಸಜ್ಜನರಿಗೆ
ವರಗಳ ಕೊಡುತಿಹ ವರಲಕ್ಷ್ಮಿ ತಾಯಿಗೆ ೧

ಹಿರಿದಾದ ದೈತ್ಯನ ಸೀಳಿ ಸಂತೋಷದಿ
ಮೊರೆಹೊಕ್ಕ ಕಂದನ ಪೊರೆದ ನರಸಿಂಹಗೆ ೨

ಪಾವನತರಮಾದ ದೇವಸಮೂಹವ
ಕಾವ ಕೃಪಾನಿಧಿ ಕಲ್ಯಾಣಮ್ಮಗೆ ३

ವಿಸ್ಫುರಿತದಲ್ಲಿರ್ಪ ವೈಮುಡಿ ತಿರುಮಣ್ಣು
ಸರ್ಪಶಯನಗರ್ಪಿಸಿದಂತ ಗರುಡಗೆ ೪

ಶ್ರೀಲೋಲನಡಿಗಳ ಲೀಲಾಮೃತಗಳ
ಶೀಲರಾಗಿ ಕುಡಿದ ಶ್ರೇಷ್ಠ ಆಳ್ವಾರ್ರಿಗೆ ೫

ವರದವಿಠಲನ ಒಲಿದು ತಾ ಬಂದಿನ್ನು
ಗಿರಿಯೊಳು ನೆಲೆಸಿದ ವರ ಗುರುಪೀಠಕೆ ೬

ಪಂಕಜಾಕ್ಷನಪಾದಪಂಕಜ ನಂಬಿಹ
ವೆಂಕಟಪುರದೊಳಗಿರುವ ವೈಷ್ಣವರಿಗೆ ೭

ವಿಷ್ಣುವಿನಂಶದಿ ಪುಟ್ಟಿ ಸಂತೋಷದಿ
ಸೃಷ್ಟಿಯನಾಳ್ವ ಶ್ರೀ ಕೃಷ್ಣಭೂಪಾಲಗೆ ೮

ಮರೆಯದೆ ಭಕ್ತರ ಕರುಣದಿಂದಲಿ ಕಾಯ್ವ
ವರಮಹದೇವನ ಪುರದಶ್ರೀರಂಗಗೆ ೯

೧೨೮

(೨) ಮಾದಗೊಂಡನಹಳ್ಳಿ (ಮಹದೇವಪುರ)

ಜಯ ಮಂಗಳ ಶ್ರೀಕರ ಹಂಸನಿಗೆ ಪ

ಜಯಮಂಗಳ ಸಾಮಜಪೋಷಕಗೆ ಅ.ಪ

ಜಯಮಂಗಳ ಫಲ್ಗುಣಪಾಲನಿಗೆ
ಜಯಮಂಗಳ ಶ್ರೀಗುರುರಂಗನಿಗೆ ೧

ಪರತರಗತಿಯಂಪೊಂದುವ
ಭರದಿಂ ಶ್ರೀರಂಗದಾಸವರ್ಯನು ಪೇಳ್ದಾ
ವರಕವಿತೆಯ ಜರಿಯದೆ ಸ
ದ್ಧರಿಭಕ್ತರು ತಪ್ಪ ತಿದ್ದಿ ಮನ್ನಿಸಿ ಮುದದಿಂ ಕಂದ

ವೆಂಕಟವರದಾರ್ಯರ ಕೀರ್ತನೆಗಳು

(ಅ) ಶ್ರೀಹರಿಸ್ತುತಿಗಳು

೧೨೯

ಕಣ್ಣಾರೆ ಕಂಡೆನವ್ಯಯನ ಕೃತಪುಣ್ಯರ
ಮಾನಸಗಣ್ಯ ಚಿನ್ಮಯನ ಪ

ನೀಲಮೇಘಶ್ಯಾಮಲನ ಮಣಿಜಾಲರಂಜಿತ
ವನಮಾಲಿಕಾಗಳನ
ಫಾಲದಿ ತಿಲಕವೊಪ್ಪಿಹನ ಹೇಮಚೇಲದಿ
ಮಿಂಚನು ಸೋಲಿಸುತಿಹನ ೧

ಪಂಕಜಪತ್ರಲೋಚನನ ನಿಜಕಿಂಕರ
ಹೃದಯಾತಂಕಮೋಚನನ
ಶಂಖ ರಥಾಂಗಾಚಿತನ ಮಕರಾಂಕ
ಜನನೀ ಕುಚಕುಂಕುಮಾಂಕಿತನ ೨

ಬೃಂದಾರಕ ಪರಿವೃತನ ಶ್ರಿತಮಂದಾರನ
ಗುಣವೃಂದಪೂರಿತನ
ಇಂದಿರಾ ಹೃದಯಮಂದಿರನ ಮುನಿವೃಂದ
ಚಕೋರಾನಂದ ಚಂದಿರನ ೩

ಮಕರಕುಂಡಲ ಮಂಡಿತನ ಮಣಿಮಕುಟಾದಿ
ಭೂಷಣನಿಕರ ಭೂಷಿತನ
ಪ್ರಕಟಿತ ನಿಜಮಾಯಕನ ಸೇವಕರಿಗೆ
ನಿತ್ಯದಿ ಸುಖದಾಯಕನ ೪

ಕರುಣದಖನಿಯೆನಿಸುವನ ನಿಜ ಚರಣವೆ
ಶರಣೆಂದು ಕರದಿ ತೋರುವನ
ಧರಣೀನೀಳೆಯರಿಹ ಕೆಲನ ಪುಲಿಗಿರಿಯೊಳು
ನೆಲಸಿಹ ವರದವಿಠಲನ ೫

೧೩೦

ಕರುಣದಿ ಕಾಯೋ ಕರುಣಾಲವಾಲ ಪ

ಸಿರಿಯರಸನೆ ನಿನ್ನ ಚರಣವ ನಂಬಿದೆ
ಸುರಗಣ ಸೇವಿತ ಸುರರಾಜಪಾಲ ಅ.ಪ

ಇಂದ್ರನಕೂಡಿ ಮುನೀಂದ್ರನ ಸತಿಶಾಪ
ದಿಂದರೆಯಾಗಿರಲಂದು ನೀ ದಯದಿ
ಸುಂದರ ಚರಣಾರವಿಂದಗಳಿತ್ತ ಧೂಳಿ
ಯಿಂದ ಪಾವನಗೈದ ಇಂದಿರೇಶನೆ ನೀ ೧

ನಕ್ರಮುಖದಲ್ಲಿ ಸಿಕ್ಕಿದ ಕರಿಕುಲ
ಚಕ್ರವರ್ತಿಯು ಮರೆಹೊಕ್ಕರೆ ನುತಿಸಿ
ಚಕ್ರದಿ ಮಕರಿಯನಿಕ್ಕಿ ಗಜೇಂದ್ರನ
ರಕ್ಷಿಸಿದಾಪರಿಯಕ್ಕರೆ ತೋರಿಸಿ ೨

ತರಣಿತನಯ ಫಣಿವರ ಶರವನು ನರವರ
ಶಿರಸರಿಸಕ್ಕೆ ಗುರಿಯಿಡಲು
ಚರಣದುಂಗುಟದಿಂದ ಧರಣಿಯನೂರಿ
ನರನ ಶಿರವುಳುಹಿದ ಸಿರಿವರದವಿಠಲ ಹರಿ ೩

೧೩೧

ಕಲಯೇಹಂ ಶ್ರೀ ಕನಕಾದ್ರೀಶಂ ಜಲದೋಪಮ ಭಾಸಂ ಪ

ಸುಲಲಿತ ಕರಧೃತ ಧರರಥಚರಣಂ
ಕಲಿಕಲಹಾಪಹ ಕಮನೀಯ ಚರಣಂ ಅ.ಪ

ಮಸ್ತಕ ನಿಹಿತ ಮಹಾರ್ಹ ಕಿರೀಟಂ
ಕಸ್ತೂರೀ ತಿಲಕಿತ ದಿವ್ಯಲಲಾಟಂ
ನಿಸ್ತುಲ ಮದಮಾಂಚಿತ ಜೂಟಂ
ಕೌಸ್ತುಭ ಶೋಭಿತ ಮಣಿಸರ ಕೂಟಂ ೧

ಸುಮಶರಕೋಟಿ ಮನೋಹರ ವೇಷಂ
ಕಮಲಾಸಖ ಭಾ ಭರಣ ವಿಭೂಷಂ
ಸುಮಹಿತಭಣಿತ ಸದೃಶ ಮಂಜುಭಾಷಂ
ವಿಮಲಹೃದಯ ಸೇವಕ ಪೋಷಂ ೨

ಶ್ರೀರಮಣೀಪರಿಶೋಭಿತಗಾತ್ರಂ
ವಾರಿಜಭವಕೃತ ವಿವಿಧ ಸ್ತೋತ್ರಂ
ಸಾರಸದಳ ವಿಸ್ತಾರ ಸುನೇತ್ರಂ
ನಾರದಮುನಿಕೃತ ಪೂಜಾಪಾತ್ರಂ ೩

ಶರದಿಂದುಮಂಡಲ ಸುಂದರವದನಂ
ವರಕುಂದಕುಟ್ಮಲ ಸನ್ನಿಭ ರದನಂ
ಕರಸಂದರ್ಶಿತ ವೈಕುಂಠಸದನಂ
ತರುಣ ತರಣಿ ಘೃಣಿ ರುಚಿದಂತ ಹಸನಂ ೪

ತುರುಣ ಶ್ರೀತುಳಸೀ ಶೋಭಿತಮಾಲಂ
ಸರಸಿಜಗರ್ಭರುಚಿರ ದಿವ್ಯಚೇಲಂ
ವರವ್ಯಾಘ್ರಭೂಧರ ವಿಹರಣಶೀಲಂ
ವರವಿಠಲಮಖಿಲಾಗಮ ಪಾಲಂ ೫

೧೩೨

ಚಿಂತಿಸು ಮನವೆ ಶ್ರೀಹರಿಯ ನಿ–
ಶ್ಚಿಂತೆಯೊಳಗೆ ಪುಲಿಗಿರಿದೊರೆಯ ಪ

ಶ್ರೀರಮಣೀ ನಿಜವಲ್ಲಭನ
ಮಾರ ಚತುರ್ಮುಖರಿಗೆ ಪಿತನ
ನಾರದ ಶರ್ವ ಪಿತಾಮಹನ ಮದ
ವಾರಣಮುಖ ಪ್ರಪಿತಾಮಹನ ೧

ಉರದಲ್ಲಿ ಸಿರಿಯನ್ನು ಧರಿಸಿಹನ
ನಿಜಶಿರದಿ ಕೀರಿಟವನಿರಿಸಿಹನ
ಕರದಲ್ಲಿ ಚಕ್ರವ ಪಿಡಿದಿಹನಾ
ನಿಜಕರುಣದಿ ಭಕ್ತರಿಗೊಲಿದಿಹನ ೨

ನೀಲಜಲದಸಮ ವಿಗ್ರಹನ ವನ
ಮಾಲೆಯ ಕೊರಳೊಳು ಪೊತ್ತಿಹನ
ಬಾಲಕ ಸುಕೃತಾನುಗ್ರಹನ ನಿಜ
ಲೀಲೆಯೊಳಾಸುರ ನಿಗ್ರಹನ ೩

ಅಂಗಜನಿಭ ಸುಂದರನ ಸುರ
ಗಂಗೆಯ ಪಡೆದ ಪಾದಾಂಬುಜನ
ತುಂಗ ವಿಹಂಗಮ ರಂಗಮನ ಶುಭ
ಮಂಗಳ ಗುಣಗಣ ಸಂಗತನ ೪

ಸರಸಜಸನ್ನಿಭಲೋಚನನ ನಿಜ
ಶರಣರ ಭವಭಯ ಮೋಚನನ
ವರವ್ಯಾಘ್ರಾಚಲ ನಾಯಕನ ನಮ್ಮ
ವರದ ವಿಠಲ ವರದಾಯಕನ ೫

೧೩೩

ನಮೋಸ್ತುತೇ ಕಮಲಾಪತೇ ಪ

ನಮೋಸ್ತುತೇ ಶತಧೃತಿ ಶಂಕರ ಮುಖ
ವಿಮಾನಚರಗಣ ವಂದಿತ ಚರಣ ಅ.ಪ

ವಾರಣಭೀತಿನಿವಾರಣ ಭವಜಲ
ತಾರಣ ದೈತ್ಯವಿದಾರಣ ಶುಭಗುಣ ೧

ಪಂಕಜಲೋಚನ ಪಂಕವಿಮೋಚನ
ಪಂಕಜಾಲಯಾಲಂಕೃತಗಾತ್ರ ೨

ಶರಣಾಗತಜನ ಭರಣಾಧೃತರಥ
ಚರಣಾ ಫಣಿಗಿರಿ ವರದವಿಠಲ ೩

೧೩೪

ಪಾಲಿಸೋಯನ್ನ ಪರಾತ್ಪರಾ – ಹರಿ ಪ

ಪಾಲಿಸೊ ಬುಧಹಿತ ಫಾಲನಯನನುತ
ಲೀಲಾನಟನ ಫಣಿಶೈಲ ನಿಲಯ–ಹರಿ ಅ.ಪ

ಜಲಜಭವನ ನಿಜಕುಕ್ಷಿಯೊಳಿದ್ದ
ಸುಲಲಿತ ವೇದಾಪಹಾರಿಯ ಕಂಡು
ಜಲಜರೂಪಿನಿಂದಾ ಖಳ ಸಂಹರ ಗೈದು
ಜಲಜಸಂಭವನಿಗೆ ಒಲಿದ ಮತ್ಸ್ಯಾವತಾರ ೧

ಅಂದು ದೂರ್ವಾಸನ ಶಾಪದಿ ಜಗವು
ಇಂದಿರೆ ಕರುಣಾವಿಹೀನದಿ ಬಲು
ನೊಂದು ಕಂಗೆಡುತಲಿರೆ ಸಿಂಧುಮಥನಗೈದು
ಇಂದಿರೆಯನುತಂದ ಮಂದರಧರ ಕೂರ್ಮ ೨

ದುರುಳ ಹಿರಣ್ಯಾಕ್ಷನೆಂಬುವ ದೈತ್ಯ
ಧರಣಿಯನಪಹಾರಗೈಯ್ಯಲು ಬೇಗ
ಪರಮೇಷ್ಠಿಗೊಲಿದು ಸೂಕರ ರೂಪವ ತಾಳಿ
ಧರಣೀಚೋರನ ಕೊಂದ ಸರಸೀರುಹಾಂಬಕ ೩

ಸರಸಿಜಜನ ವರದರ್ಪದಿ ಜಗವನುರುಹಿ
ತರಳನ ಬಾಧೆಗೈಸಿದ ಬಲು
ದುರುಳ ಹಿರಣ್ಯಕನುರವ ನಖದಿಂದ ಸೀಳಿ
ಕರುಳಮಾಲೆಯನಿಟ್ಟ ಧುರಧೀರ ನರಹರಿ ೪

ಬಲಿಯ ಮೂರಡಿಭೂಮಿ ದಾನವ ಬೇಡಿ
ಅಳೆದು ಈರಡಿಮಾಡಿ ಲೋಕವ ಮತ್ತೆ
ಉಳಿದೊಂದು ಪಾದದಿ ಬಲಿಯ ತಲೆಯನು ಮೆಟ್ಟಿ
ನಲಿದು ಗಂಗೆಯ ಪೆತ್ತ ಚೆಲುವ ವಾಮನರೂಪ ೫

ಚಕ್ರಾಂಶನಾದ ಕಾರ್ತಿವೀರ್ಯನ ಭುಜ
ಚಕ್ರದೊಡನೆ ದುಷ್ಟ ಭೂಪರ ಅತಿ
ಅಕ್ರಮವನು ಕಂಡು ವಿಕ್ರಮಾನ್ವಿತ ನೃಪ
ಚಕ್ರವ ಮುರಿದ ಮುನಿಚಕ್ರರಕ್ಷಕ ರಾಮ ೬

ಕ್ರೂರ ರಾವಣ ಕುಂಭಕರ್ಣರ ಬಲು
ಘೋರತನಕೆ ತ್ರಿವೇಶರ ದೊಡ್ಡ
ದೂರ ಕೇಳುತ ಮನುಜಾಕಾರವ ಧರಿಸಿ ದೈತ್ಯ
ವೀರರ ಮಡುಹಿದ ಶ್ರೀರಾಮ ಮೂರುತಿ ೭

ಬಲಭದ್ರನೆಂಬುವ ನಾಮದಿ ಧುರದಿ
ಹಲ ನೇಗಿಲುಗಳನು ಹಸ್ತದಿ ಪಿಡಿದು
ಬಲವಂತರಾದ ದೈತ್ಯಕುಲವ ತರಿದು ದಿವಿಜ
ಕುಲವ ಸಂರಕ್ಷಿಸಿದ ಜಲಧರನಿಭಚೇಲ ೮

ದುಷ್ಟಕ್ಷತ್ರಿಯರ ಭಾರ ತಾಳದೆ ಧರಣೀ
ಸೃಷ್ಟೀಶನಲ್ಲಿ ದೂರಿಡೆ ಬಲು
ಭ್ರಷ್ಟ ಕೌರವ ಯುಧಿಷ್ಠಿರಗೆ ವೈರ
ಪುಟ್ಟಿಸಿ ಭೂಭಾರ ಮಟ್ಟುಮಾಡಿದ ಕೃಷ್ಣ ೯

ಕಲಿಯಿಂದ ಕಿಡೆ ನಿಜಧರ್ಮವು ಬಹು
ಖಳರಿಂದ ವ್ಯಾಪಿಸೆ ಲೋಕವು ಆಗ
ಲಲಿತ ತೇಜಿಯನೇರಿ ಕಲುಷಾತ್ಮಕರ ಕೊಂದು
ವಿಲಸಿತ ಧರ್ಮವನು ಸಲಹಿದ ಕಲ್ಕಿರೂಪ ೧೦

ಗಿರಿಜಾವಿವಾಹದಿ ತ್ವಷ್ಟನ ಶಾಪ
ಶರಧಿಯೀಂಟಿದ ಮುನಿಗೈದಲು ಬೇಗ
ವರವ್ಯಾಘ್ರ ಗಿರೀಶನೆ ಶರಣೆಂದ ಮುನಿಪಗೆ
ವರವಿತ್ತು ಸಲಹಿದ ವರದವಿಠಲಹರಿ ೧೧

೧೩೫

ಫಾಲನಯನ ನುತ ಪಾಲಿಸು ಸತತ
ಪಾಲಿಸು ಸುರನರ ಜಾಲಸುಚರಿತ ಪ

ಲೀಲಾನಟನ ಫಣಿಶೈಲನಿಳಯ ಭಕ್ತ
ಪಾಲವಿಧೃತ ವನಮಾಲ ಶ್ರೀಲೋಲ ೧

ಬಾಲತನದಿ ನಿಜ ಲೀಲಾ ಚರಿತಗುಣ
ಜಾಲವಿಮೋಹಿತ ಬಾಲಾನುಕೂಲ ೨

ಧಾರಾಧರಾಭ ಶರೀರ ತಿರಸ್ಕೃತ
ಮಾರ ವಿಹಗಸಂಚಾರ ಉದಾರ ೩

ಘೋರದನುಜ ಸಂಹಾರ ಸುಜನ ಪರಿ
ವಾರ ನಿಗಮ ವಿಚಾರ ವಿಹಾರ ೪

ಕರುಣಾವರಣ ನಿಜಶರಣಾಭರಣ ಭಯ
ಹರಣ ಸಕಲ ಸುಖಕರಣ ಶ್ರೀರಮಣ ೫

ಶೇಷಶಯನ ಕಲಿದೋಷದಮನ ಮೃದು
ಭಾಷ ಮನೋಹರಭೂಷ ಸುವೇಷ ೬

ಹರಿದಾಸರನು ಬಲು ಹಿರಿದಾಗಿ ಮೆರೆಸುವ
ದ್ವಿರದ ವರದ ಶ್ರೀವರದವಿಠಲ ೭

೧೩೬

ಬಾರೋ ಬಾರೋ ಭವನುತಚರಣನೆ
ಸಾರಸುಗುಣ ಪರಿಪೂರಿತ ಕರುಣನೆ ಪ

ಚರಣಕಮಲಗಳಿಗೆರಗುವೆ ಭಕ್ತಿಯಲಿ
ಭರದಲಿ ಎನ್ನನು ಪೊರೆಯಲು ಮುದದಲಿ ೧

ಅರಿದರ ವರಗಳ ಕರದಲಿ ಪಿಡಿಯುತ
ಕರಿಯನು ಪೊರೆಯುವ ತ್ವರೆಯಲಿ ಬಹವೋಲ್ ೨

ಪರಮಪುರುಷ ಫಣಿಗಿರಿಶಿಖರಾಲಯ
ವರದವಿಠಲ ಸುಖಕರ ಕಮಲಾಲಯ ೩

೧೩೭

ಭಜತಿ ಭುಜಗಶಯನಂ ಸದಾಹೃದಿ ಪ

ಸಜಲಜಲದಶಾರೀರಮಕುಂಠಿತ
ಭುಜಗಶೈಲ ಶಿಖರಾಲಯಮನಿಶಂ ಅ.ಪ

ಶೇಷ ಪವನ ಸಂವಾದವದೇನ ವಿ
ಶೇಷ ಕರುಣಾಯಾತ್ರಾಗಮೀಶಂ ೧

ರಾಮ ಲಕ್ಷ್ಮಣಾರಾಧಿತಮಜಭವ
ಪುಂಡರೀಕ ದಿವ್ಯಾದ್ರಿವಿಹಾರಂ ೨

ಪಾಂಡುತನಯ ಮಾಂಡವ್ಯಾರಾಧಿತ
ಪುಂಡರೀಕ ದಿವ್ಯಾದ್ರಿವಿಹಾರಂ ೩

ಚಂಡಕಿರಣ ರಥಮಂಡನಾಂಗಮಜಮಂಡಜಾತಾ
ವರ ವಾಹನಗಮನಂ ೪

ಪರಮಪುರುಷಮಖಿಳಾಗಮವೇದ್ಯಂ
ವರದವಿತಲ ಮಮಚಿಂತಯದಾದ್ಯಂ ೫

೧೩೮

ಭಾವಯೆ ಭವಭಾವಿತಚರಣಂ ಭವಭಯಾಪರಿಹರಣಂ ಪ

ಭಾವನೋಜಿತ ಭಾಗ್ಯವಿತರಣ
ಕೋವಿದಂ ನಿಜ ಭಾವದಂ ಹೃದಿ ಅ.ಪ

ವ್ಯಾಘ್ರಭೂಮಿಧರಾಗ್ರವಿಹರಣಮಗ್ರಜನ ಶರಣ್ಯಂ
ಶೀಘ್ರ ಫಲದಮುದಗ್ರಪೌರುಷವಿಗ್ರಹಂ ಸುರಾಗ್ರಗಣ್ಯಂ ೧

ಕುಂಡಲೀಫಣಮಂಡಲಾಕೃತಮಂಡಜಾತಗಮನಂ
ಪುಂಡರೀಕಸುಮಮಂಡಿತಹಾರಮಖಂಡಿತ
ಹಿಮಕರಮಂಡಲವದನಂ ೨

ರಾಮಮಿನಕುಲಸೋಮಮಾಶ್ರಿತ ಪ್ರೇಮಮಾಜಿಭೀಮಂ
ಶ್ಯಾಮಜಲಧರಕೋಮಲಂ ಗುಣಧಾಮಮೀಶ ಪ್ರೇಮನಾಮಂ ೩

ನಂದನಂದನಮಿಂದಿರಾ ಹೃದಳಿಂದ ಲೋಲಮಿಳಿಂದಂ
ಕುಂದರದನಮಮಂದಕರುಣಾನಂದಿತಾಖಿಲಲೋಕವೃಂದಂ ೪

ಸಾರನಿಗಮವಿಹಾರ ಕುಶಲಮುದಾರ ವರದವಿಠಲಂ
ಭೂರಮಾಕುಚಕೋರಕಾಂಚಿತ ಚಾರುಮುಕ್ತಾಹಾರ ಪಟಲಂ ೫

೧೩೯

ಮರೆತಿರಲಾರೆ ಮನಸಾರೇ ಹರೇ ಪ

ಮರೆತಿರಲಾರೆ ನಾ ಮಹಿತಚಾರಿತ್ರನ
ಸರಸಿಜಪತ್ರ ನೇತ್ರನ ಅ.ಪ

ಬಗೆಬಗೆ ರತಿಯಲಿ ಜಗವನು ಮೋಹಿಪ
ಸುಗುಣನ ಜಗತ್ತ್ರಾಣನ ೧

ಚೇತನರಿಗೆ ಸುಖದಾತನ ದುಃಖ ವಿ
ಘಾತನ ಲಕ್ಷ್ಮೀನಾರಾಯಣನ ೨

ದಾಸರ ಹೃದಯನಿವಾಸನ
ದೋಷನಿರಾಸನ ಶ್ರೀನಿವಾಸನ ೩

ವೆಂಕಟರಮಣನ ಕಿಂಕರಶರಣನ
ಸಂಕಟಹರ ನಿಷ್ಕಳಂಕನ ೪

ಮಾನಿನಿಯ ಅಭಿಮಾನವ ಕಾಯ್ದನ
ದೀನರ ಹರ್ಷನಿಧಾನನ ೫

ರಾಮನ ದೈತ್ಯವಿರಾಮನ ಪಾವನ
ನಾಮನ ಹೃದಯಾರಾಮನ ೬

ಧರೆಯೊಳುತ್ತಮಪುಲಿಗಿರಿಯೊಳು ನೆಲಸಿಹ
ವರದ ವಿಠಲವರದನ ದೇವನ ೭

೧೪೦

ಮಾಮವದೇವ ಮಹಾನುಭಾವ ಶ್ರೀಮನೋಹರ ನಿ
ರಾಮಯ ಚಿನ್ಮಯರಾಮ ರಮ್ಯಗುಣಧಾಮ ತಾವಕಂ ಪ

ಪಂಕಜನೇತ್ರ ಪರಮಪವಿತ್ರ ಶಂಖಚಕ್ರಧರ
ಕಿಂಕರಾರ್ತಿಹರ ಪಂಕಜಾಲಯಾಲಂಕೃತಗಾತ್ರ ೧

ನೀಲಾಂಬುದಾಭ ನೀರಜನಾಭ ಬಾಲಭಕ್ತ ಪರಿ
ಪಾಲ ಹೇಮಮಯಚೇಲ ನವ್ಯ ವನಮಾಲ ಸುಶೋಭ ೨

ಕರುಣಾಲವಾಲ ಖಳಕುಲಕಾಲ ಹರಿಣಹರಣ ಧರ
ವರಶಿಖರಾಲಯ ವರದವಿಠಲ ಸುಖಕರಕಮಲಾಲಯ ೩

೧೪೧

ಮಾಮವ ಮೃಗರಿಪು ಗಿರಿರಮಣ ಮಹಿತಗುಣಾಭರಣ ಪ

ಕಾಮಕಲುಷಭವಭೀಮ ಜಲಧಿಗತ
ತಾಮಸಾತ್ಮಕಂ ದುರಿತಮಹಿ ಅ.ಪ.

ನಿಟಿಲನಯನ ಮಕುಟಲಸಿತವದನ ನೀರಾಪೂರಾ
ನೀಲಜಲದ ಮದಹೇಳನ ಸುಭಗಶರೀರ
ಕುಟಿಲ ದನುಜಕುಲಶಿಖರಿ ಕುಲಿಶಧರ
ಕುಂದಕುಟ್ಮಲ ಸಮಾನ ಶುಭರದನ ೧

ವದನವಿಜಿತ ಶರದಮೃತಕಿರಣ ಸುಕುಮಾರಾಕಾರಾ
ವತ್ಸಲಸಿತ ಶುಭಲಕ್ಷಣ ಲಕ್ಷ್ಮೀಧಾರಾ
ಸದಯ ಹೃದಯ ಪರಿತೋಷಿತ ನತಜನ
ಸಾಮಗಾರತ ಸತತಶುಭ ಚರಿತ ೨

ಸಕಲದಿವಿಜನತ ಚರಣಕಮಲ ನಿರಪಾಯಾಮೇಯ
ಸಂತತಾರ್ತಾದರಚಕ್ರ ವಿಬುಧಗೇಯ
ಪ್ರಕಟಮಹಿಮ ಮಾಂಡವ್ಯ ಮನೋರಥ
ಪಾರಿಜಾತ ದುರಿತಾರಿ ವರದನುತ ೩

೧೪೨

ಸುರಾಸುರಾರ್ಚಿತ ಸರೋಜಲೋಚನ ಸರಾಗದಿಂದೆನ್ನನೀಕ್ಷಿಸೈ
ಪರಾಪರೇಶನೆ ಪರಾತ್ಪರನೆ ನೀ ಪರಾಕುಮಾಡದೆ ಪಾಲಿಸೈ ಪ

ವಿರಾಜಮಾನ ಸುವಿರಾಜವಾಹನ ವಿರಾಟ್ಪುರುಷ ವಿಶ್ವಂಧರ
ಕರಾರವಿಂದದಿ ಕರಾದಿಗಳ ಪಿಡಿ ಧರಾತಿಮರ್ದನ ಧುರಂಧರ ೧

ಧರಾಧರಣಿಪಟು ಧರಾಧರಾಧಿಪ ಧುರಾವಹನ ದುರ್ಧರ್ಷಣ
ಧರಾಮರರ ಬಹುಪರಾಭವವ ಬಲು ಸರಾಗದಲಿ ನಿರ್ವಾಪಣ ೨

ಜರಾಮರಣಗಳ ನಿರಾಕರಿಸಿ ವಸುಂಧರಾಭರಣ ಗುಣಭೂಷಣ
ಸುರಾರಿಮರ್ದನ ಶರಾಸನಾಂಚಿತ ಕರಾನಿಹಿತ ಮಣಿಕಂಕಣ ೩

ಶಿರೀಷ ಕುಸುಮದ ಸರಿಸುಕೋಮಲಶರೀರ ನಿನ್ನದು ಈ ಪರಿ
ಸಿರಿಯುದರದೊಳೇ ಸಿರಿಯಧರಿಸಿದ ಪರಿಯದೆಂತುಟೋ ಕೇಳ್ ಹರಿ ೪

ಪಯೋಧಿತನಯಾ ವಯೋಸುರೂಪನೆ ದಯಾನಿಧೇ ಧರ್ಮಾತ್ಮನೆ
ದಯಾರಸದಿ ಹೃತ್ಪಯೋಜಮಧ್ಯದಿ ನಿಯಾಮಿಸುವ ನಿರ್ಮಾಯನೆ ೫

ವರೇಣ್ಯ ಸಜ್ಜನ ಶರಣ್ಯ ಪುಲಿಗಿರಿಯರಣ್ಯ ಮಧ್ಯವಿರಾಜಿತ
ಹಿರಣ್ಮಯಾಂಬರ ಹಿರಣ್ಯಕಾಂತಕ ಹಿರಣ್ಯಗರ್ಭಸುಪೂಜಿತ ೬

ವ್ಯಾಘ್ರನೆಂಬುವತ್ಯುಗ್ರ ದೈತ್ಯನಂ ನಿಗ್ರಹಗೈದ ಮಹಾತ್ಮನೆ
ಶೀಘ್ರದಿ ಭಕ್ತಾನುಗ್ರಹಮಾಳ್ಪ ಸುರಾಗ್ರಗಣ್ಯ ಪುಣ್ಯಾತ್ಮನೆ ೭

ಸುರರು ನರರು ನಿನ್ನರಿಮೆಯನರಿಯದೆ ನಿರುತವು ಸನ್ನುತಿಗೈವರೆ
ಪರಮಪುರುಷ ಸುಖಕರ ನೀನೆನ್ನುತ ಪರಿಪರಿ ನಿನ್ನನೆ ಪೊಗಳ್ವರೆ ೮

ಮೂಜಗ ಮಾಡುವ ಪೂಜೆಯಿಂದ ನೀನೀ ಜಗದಲಿ ಒಲಿದಿರ್ಪೆಯ
ಮೂಜಗ ಪೂಜಿಪ ವ್ಯಾಜದಿಂದ ನಿಜಪೂಜೆಯ ನೀ ಕೈಗೊಂಬೆಯ ೯

ನಿಜಪದದೊಳು ನೀನಜಭವ ಮುಖಸುರವ್ರಜಗೋಚರನಾಗಿಲ್ಲವೈ
ಸುಜನರ ಪೊರೆಯವ ನಿಜಮತಿಯಿಂದಲಿ ತ್ರಿಜಗಕ್ಕೆ ಗೋಚರನಾಗಿಹೈ ೧೦

ನಿತ್ಯತೃಪ್ತ ನೀನತ್ಯುತ್ತಮ ನಿಜಭೃತ್ಯನಮರ್ತ್ಯನು ಮೋದದಿ
ನಿತ್ಯದಿ ನಿನ್ನತ್ಯುತ್ತಮ ಪದದೊಳು ಭಕ್ತಿಯ ಪಾಲಿಸು ನೇಮದಿ ೧೧

ಧರಣಿಯೊಳುರುತರ ಮೆರೆಯುವ ಫಣಿಭೂ
ಧರದೊಳು ನಿರುತವು ಭಕ್ತರ
ಕರುಣದಿ ಪೊರೆಯುವ ದೊರೆ
ಸಿರಿವಲ್ಲಭ ವರದ ವಿಠಲ ಕರುಣಾಕರ ೧೨

೧೪೩

ಸೇವೇ ಶ್ರೀರಮಣಂ ಸದಾ ಸೇವಕಾರ್ತಿಹರಣಂ ಪ

ಪಾವಕಶತರುಚಿ ರುಚಿರಾಭರಣಂ
ಪಾವನ ವಾಘ್ರಾಚಲವಿಹರಣಂ ಅ.ಪ

ಪುಂಡರೀಕಾಯತ ನೇತ್ರಂ ಮಂಡಿತ ಖಗಪತಿಪತ್ರಂ
ಖಂಡಪರಶುಕೃತಸನ್ನುತಿಪಾತ್ರಂ ಚಂಡಕಿರಣಶತಸನ್ನಿಭಗಾತ್ರಂ೭ ೧

ಕುಲಿಶಧರಾತ್ಮಜ ಮಿತ್ರಂ ಸುಲಲಿತ ಕರಧೃತ ಗೋತ್ರಂ
ಕಲಿತರಥಾಂಗಧರಾಸಿತನುತ್ರಂ ಕಲಿಮಲಖಂಡನ ನಿಜಚಾರಿತ್ರಂ ೨

ಭಾವಿತಜನ ಮಂದಾರಂ ಭಾವಜಜನಕಮುದಾರಂ
ಸೇವಕರಕ್ಷಣ ಧೃತಶರೀರಂ ದೇವಸಮೂಹಾಕಲಿತ ವಿಹಾರಂ ೩

ಶಂಕರಹೃದಯಧ್ಯೇಯಂ ಕಿಂಕರಜನ ಸಮುದಾಯಂ
ಪಂಕಜನಿಲಯಾಲಂಗಿತಕಾಯಂ ಸಂಕಟಮೋಚಕ
ನಿಜನಾಮಧೇಯ ೪

ಪರಮಪುರುಷಮನವಂದ್ಯಂ ಸರಸಗುಣಾಕರಮಾದ್ಯಂ
ವರಯೋಗೀಜನಹೃದಯಾರಾಧ್ಯಂ
ವರದವಿಠಲಮಖಿಲಾಗಮಬೋಧ್ಯಂ ೫

೧೪೪

ಹರಿ ನೀಲಸದೃಶ ನೀಲ ಕನಕಚೇಲ ಲೀಲಯಾ ಪ

ಪುಲಿಶೈಲರಚಿತಲೀಲಾ ರಮಾಲೋಲ ಪಾಲಯಾ ಅ.ಪ

ಶರದಿಂದುವದನ ಕುಂದರದನ ನಂದನಂದನಾ
ಅರವಿಂದನಯನ ಸಿಂಧುಶಯನ ವಂದಿ ಚಂದನಾ ೧

ಯದುರಾಜ ಕಲ್ಪಭೂಜದೇವರಾಜಪೂಜಿತ
ಕರಿರಾಜರಾಜರಾಜ ಸಮವಿರಾಜ ರಾಜಿತ ೨

ಘನದುರಿತ ಪಟುಲಹರಣ ಚಟುಲಚರಣಪಾಟಲಾ
ಕರಿವರದ ವಿಮಲಚರಿತ ವಿಪುಲವರದವಿಠಲ ೩

೧೪೫

ಹರಿಯೆ ಎನ್ನ ದೊರೆಯೆ ನಿನ್ನಯ ಮರೆಯಹೊಕ್ಕೆನೊ ಪ

ಮರೆಯದೆನ್ನ ಪೊರೆಯೊ
ವ್ಯಾಘ್ರಗಿರಿಯೊಳಿರುವ ಸಿರಿನಾರಾಯಣ ಅ.ಪ

ಸಕಲ ಲೋಕಗಳನು ನೀನೇ ಸೃಜಿಸುವಾತನು
ಸುಖದಿ ಪ್ರಾಣಿಗಳನು ನೀನೇ ಸಲಹುವಾತನು
ಪ್ರಕಟವಾದ ಜಗವ ನೀನೆ ಪ್ರಳಯಗೈವನು
ನಿಖಿಲ ಜೀವಸಾಕ್ಷಿಯಾಗಿ ನಿತ್ಯ ನೀನೆ ನಿಯಮಿಸುವನು ೧

ಸ್ಥೂಲ ಸೂಕ್ಷ್ಮರೂಪ ನೀನೆ ಮೂಲ ಪುರುಷನು
ಲೀಲೆಯನ್ನು ಪ್ರಕಟಗೈವ ಕಾಲರೂಪನು
ನೀಲಲೋಹಿತಾದಿ ವಿಬುಧಜಾಲವಂದ್ಯನು
ಪಾಲಿತಾಖಿಲಾಂಡ ರಮಾಲೋಲ ಸುಗುಣಜಾಲ ಶ್ರೀ ೨

ಪರಮಪುರುಷ ಪಂಕಜಾಕ್ಷ ಪತಿತಪಾವನ
ಶರಧಿ ಶಯನ ಸಕಲಲೋಕ ಸಂವಿಭಾವನ
ವರಗುಣಾಢ್ಯ ವಿಗತಮಾಯ ವಿಶ್ವಮೋಹನ
ದುರಿತಗಜ ಮೃಗಾಧಿರಾಜ ವರದವಿಠಲ ವಿಹಗಯಾನ ೩

೧೪೬

ಎಂತುನುತಿಪೆ ನಾನು ಈ ಜಗದಂತರ್ಯಾಮಿಯನು ಪ

ಅಂತರಹಿತನನು ಚಿಂತಿಸಿ ಪದನಖದಂತೆ
ಪರಿಯವು ಸಂತತ ವಾಙ್ಮನ ಅ.ಪ

ಸಾಸಿರಮುಖದವನ ಅವಯವಸಾಸಿರವುಳ್ಳವನ
ಸಾಸಿರ ಪೆಸರವನ ರೂಪಸಾಸಿರವಾಗಿಹನ
ಮೀಸಲಳಿಯದಂತೀ ಸಚರಾಚರ
ವಾಸಿಯಾದ ಶ್ರೀ ವಾಸುದೇವನನು ೧

ಜಗವನು ನಿರ್ಮಿಸುವ ಬೊಮ್ಮನು ಮಗನೆಂದೆನಿಸಿರುವ
ಬಗೆಯುವಡೀ ಜಗವ ಜಠರದಿ ನುಸುಳಿಕೊಂಡಿರುವ
ಮಗುಳಿದನಳಿಯುವನಗಜಾಪರ
ಮ್ಮೊಗನೆಂಬುವರೀಯಗಣಿತ ಮಹಿಮನ ೨

ನಿಗಮವ ಪೆತ್ತವನ ಬೊಮ್ಮಗೆ ನಿಗಮವನಿತ್ತವನ
ನಿಗಮೋದ್ಧಾರಕನ ನಿತ್ಯದಿ ನಿಗಮಗೋಚರನ
ಬಗೆ ಬಗೆಯೋಗಿಗಳ ಧ್ಯಾನಕೆ ನುಗುಳಿದ
[ಸುಗುಣ]ಶ್ರೀಪದಯುಗಳಾಂಬುಜನನು ೩

ಮಾಯಾಧೀಶ್ವರನ ದೇವನಿಕಾಯಾರಾಧಿತನ
ಕಾಯಜ ಸುಂದರನಾ ಜೀವನಿಕಾಯಕೆ ಮಂದಿರನಾ
ಮಾಯಕಾರನಿವನಾಯವನರಿಯದೆ
ದಾಯಗೆಟ್ಟರನ್ಯಾಯದಿ ಮುನಿಗಳು ೪

ಪರಮಪದದೊಳಿಹನಾ ಪುನರಪಿ ತರಣಿಯೊಳಿರುತಿಹನ
ಶರನಿಧಿ ಮಂದಿರನಾ ಶ್ರೀಪುಲಿಗಿರಿಯೊಳು ನಿಂದಿಹನಾ
ನಿರುತವು ತನ್ನಯ ಚರಣವನಂಬಿದ ಶರಣರ
ಪೊರೆಯುವ ವರದವಿಠಲನ ನಾ ೫

೧೪೭

ಪರಮಪುರುಷ ಪರೇಶ ಪಾವನ ಪರಮಮುನಿಜನ ಪಾಲನ
ಶರಧಿಶಯನ ವಿಹಂಗವಾಹನ ಶಾರದಾಂಬುಜಲೋಚನ ೧

ವಾಸುದೇವ ವಿರಂಚಿವಂದಿತ ವಾಸವಾದಿ ಸುರಾರ್ಚಿತ
ವಾಸುಕಿಪ್ರಿಯ ಭೂಷಭಾವಿತ ವಾಸರೇಶಕುಲೋದಿತ ೨

ಶರಣಜನರಘಹರಣ ಸೌಖ್ಯವಿತರಣ ಶುಭಸಾಗರ
ವರದ ಪುಲಿಗಿರಿವಾಸ ವೆಂಕಟವಿಠಲ ದಯಾಕರ ೩

೧೪೮

ಬಾರೋ ಮನೆಗೆ ಶ್ರೀಧರನೆ ನಿಜಪರಿ
ವಾರದೊಡನೆ ಗುಣವಾರಿಧಿಯೆ ಪ

ಮಾರಜನಕ ಸುಕುಮಾರಾಂಗ ಪರಮೋ
ದಾರಾಕೃತಿಯ ನೀ ತೋರಿಸೆನಗೆ ೧

ಎಷ್ಟು ಜನ್ಮದ ತಪ ಒಟ್ಟಾಗಿ ಸೇರಲು
ದೃಷ್ಟಿಸುವೆನೊ ಶ್ರೀ ಕೃಷ್ಣ ನಿನ್ನನು ೨

ಚಿನ್ನದ ಪೀಠದಿ ರನ್ನದ ಕಲಶದಿ
ಚನ್ನಾಗಿ ತೊಳೆಯವೆ ನಿನ್ನಡಿಗಳ ೩

ಗಂಧವ ಹಚ್ಚಿ ಸುಗಂಧ ತುಳಸೀದಳ
ದಿಂದಾಲಂಕರಿಸುವೆ ಸುಂದರಾಂಗನೆ ೪

ಜಾಜಿಯು ಮೊದಲಾದ ಹೂಜಾತಿಗಳ ತಂದು
ಮೂಜಗದೊಡೆಯನನು ಪೂಜಿಸುವೆನೊ ೫

ಲೋಪವಿಲ್ಲದೆ ದಿವ್ಯ ಧೂಪವನರ್ಪಿಸಿ
ದೀಪಂಗಳನು ಬಹು ದೀಪಿಸುವೆನು ೬

ಪಾಲು ಸಕ್ಕರೆ ಘೃತ ಮೇಲಾದ ಭೋಜ್ಯವ
ಮೇಳೈಸುವೆನು ಶ್ರೀಲೋಲನಿಗೆ ೭

ಕರ್ಪೂರವೀಳ್ಯವನರ್ಪಿಸಿ ಮೋದದಿ
ಕರ್ಪೂರದಾರತಿಗಳರ್ಪಿಸುವೆನು ೮

ಮಣಿದು ನಿನ್ನಂಘ್ರಿಗೆ ಹಣೆಯ ಚಾಚುತ ಮನ
ದಣಿಯುವಂದದಿ ನಾ ಕುಣಿದಾಡುವೆ ೯

ಸದಯ ನಿನ್ನಂಘ್ರಿಯ ಹೃದಯಾರವಿಂದದ
ಸದನದೊಳಿಂಬಿಟ್ಟು ಮುದಮೊಂದುವೆ ೧೦

ಶರಣಾಗತರನೆಲ್ಲ ಕರುಣದಿ ಸಲಹುವ
ವರದವಿಠಲ ಪುಲಿಗಿರಿಧಾಮನೆ ೧೧

೧೪೯

ಶೌರಿನಂದನ ಪರಿವಾರನಂದನ ಸರಿಯಾರೋ ಪ

ನಿನಗೆ ಸರಿಯಾರೋ ಶ್ರೀಧರನೆ ಅ.ಪ

ನೋಟ ಮಾತ್ರದಿ ಜಗತ್‌ಕೋಟಿ ನಿರ್ಮಿಸಿ ಸರಿ
ಸಾಟಿಯಿಲ್ಲದ ಸೂತ್ರ ನಾಟಕಧಾರಿ ೧

ಬಗೆ ಬಗೆ ರತಿಯಲಿ ಜಗವನು ಮೋಹಿಪ
ನಿಗಮಾಂಕ ಗೋಚರ ನಗಧರ ಹರಿ ೨

ಸುರವರಪೂಜೆಯನರಕೆಮಾಡದೆ ಬಂದ
ಸಿರಿಯ ಮೋಹಿಸುತಿರ್ಪ ವರದವಿಠಲ ೩

೧೫೦

ಶ್ರೀವಾಸಾನತಮಾಕಲಯಾಚ್ಯುತ
ಶ್ರೀವಾಸುಕಿಶಯಮಾಮನಿಶಂಹೃದಾ ಪ

ಪುಂಡರೀಕ ನಯನಾಂಡಜವಾಹನ
ಕುಂಡಲಶಯ ಮಾಂಡವ್ಯಸೇವ್ಯಪದ ೧

ಪುಂಡರೀಕ ಸುಮಂಡಿತಾಂಗಪದ
ಪುಂಡರೀಕಶ್ರಿತ ಪಾಂಡುತನಯ ಭೋ ೨

ನಂದಗೋಪವರ ನಂದಸುಮನೋ
ನಂದನಮುನಿಜನ ವಂದಿತಪದಯುಗ ೩

ಧರ್ಮತನಯ ಸಹಧರ್ಮಚಾರಿಣಿ
ವರ್ಮಪಾಲ ಸದ್ಧರ್ಮ ಶ್ರೀಲಹರಿ ೪

ವ್ಯಾಘ್ರನಾಮ ದೈತ್ಯಾಗ್ರನಿಗ್ರಹ-
ಣೋಗ್ರಸೇನ ತನಯಾಗ್ರವಿದಾರಣ ೫

ಬಾಲಭಕ್ತ ಪರಿಪಾಲ ಹೇಮಮಯ
ಚೇಲ ವಿಧೃತ ವನಮಾಲ ನರಹರೆ ೬

ಮಾರಜನಕ ಸುರವಾರವಂದ್ಯ ಮಂ
ದಾರ ಹಾರ ಸುಕುಮಾರಶರೀರ ೭

ಮಂದರಧರ ಪೂರ್ಣೇಂದು ವದನ ಗೋ
ವಿಂದ ಮುಕುಂದ ಸನಂದವಂದಿತ ೮

ಖಂಡಪರಶು ಕೋದಂಡ ವೇ
ತಂಡ ಹಸ್ತಭುಜದಂಡ ರಘೂದ್ವಹ ೯

ಅಂಬರೀಷ ವರದಂಬುಜಾಸನಾ
ಲಂಬಮಾನ ಚರಣಾಂಬುಜ ಕೇಶವ ೧೦

ಸಾರವಸ್ತು ಪರಿಪೂರ ವ್ಯಾಘ್ರನಗ
ಪಾರಿಜಾತ ವರದಾರ್ಯವಿಠಲ ಶ್ರೀ ೧೧

೧೫೧

ಮನವೇ ಚಿಂತಿಸು ಹರಿ ಮುರಾರಿಯ ಪ

ಮನವೇ ಚಿಂತಿಸು ಮಾಯಾ ಮನುಜಾಕಾರವ ತಾಳ್ದ
ಸನಕಾದಿ ಸನ್ಮುನಿವಿನುತಪದ ವನಜಾತಯುಗಳನನು ಅ.ಪ

ಸ್ಮರವಿರಿಂಚಿಯ ಪಿತನ ಗೌರೀವರ
ಪುರುಹೂತರಿಗೆ ತಾತನ ರತಿದೇವಿ
ಸರಸತಿಯರ ಮಾವನ ಶ್ರೀರಮಣನ
ಸರಸಿಜಾಸನನಿಗೆ ಕರುಣಿಸಿವೇದವ
ಗಿರಿಯನೆಗಹಿ ವಿಶ್ವಂಭರೆಯ ದಾಡೆಯೊಳೆತ್ತಿ
ತರಳಗಭಯವನಿತ್ತು
ಧರೆಯ ಮೂರಡಿ ಬೇಡುತ
ತರಿದು ನೃಪರನು ದುರುಳರಾವಣ
ಹರಣ ನೀಲಾಂಬರ ಯದುವರ ತುರಗವಾಹನ ೧

ನಿಗಮಾಂತಗೋಚರನ ನಿತ್ಯಾನಂದ
ಸುಗುಣ ಗಣಾರ್ಣವನ ಸಜ್ಜನರಿಗೆ
ಸುಗತಿಯ ಪಾಲಿಪನ ಸುರಪಾಲನ
ನಿಗಮಚೋರನ ಕೊಂದು
ನಗವ ಬೆನ್ನೊಳು ಪೊತ್ತು ಜಗವನುದ್ಧರಿಸಿ
ಮೃಗನರವ ರೂಪವ ತಾಳಿ
ಜಗವನಳೆದನ ಭೃಗುಜ ಶಾಖಾ
ಮೃಗವ ವಧಿಸಿ ಹಲನೇಗಿಲನು ಪಿಡಿ

ದುಗುರುಕೊನೆಯಿಂ ನಗವನೆಗಹಿದ
ನಿಗಮನುತ ಕಲಿಯುಗದ ವೈರಿಯ ೨

ಪುಲಿಯ ಸಂಹರಿಸಿದನ ಮಾಂಡವ್ಯಗೆ
ಒಲಿದು ಪೂಜೆಯ ಕೊಂಬನ ಕುಂಭಜಶಾಪ
ಕಲುಷವ ಕಳೆದವನ ವ್ಯಾಘ್ರಾಚಲದಲಿ ನಿಂತು ಭಕ್ತರ
ಸಲಹುವ ಕಾರುಣ್ಯನಿಲಯ ಸಜ್ಜನಮನೋ
ನಿಲಯ ಶ್ರೀನಿವಾಸನ
ಜಲಜ ಬಾಂಧವಕುಲಪವಿತ್ರನ
ಜಲಜನೇತ್ರನ ಜಲಜಗಾತ್ರನ
ವಿಲಸಿತಾಂಬುಜ ಮಾಲ ಭಕ್ತರಿ
ಗೊಲಿವ ಶ್ರೀ ವರದಾರ್ಯವಿಠಲನ ೩

೧೫೨

ತವದಾಸೋಹಂ ತವದಾಸೋಹಂ
ತವದಾಸೋಹಂ ದಾಶರಥೆ ಪ

ದಶರಥಪುತ್ರಾ ಪಶುಪತಿ ಮಿತ್ರ
ಶಶಿರವಿನೇತ್ರಾ ದಾಶರಥೆ ೧

ವಿಧೃತಕೋದಂಡ ವಿಪುಲದೋರ್ದಂಡ
ಕದನಪ್ರಚಂಡ ದಾಶರಥೆ ೨

ತಾಟಕಾಹನನ ತಾಡಿತ ಕುಜನ
ಹಾಟಕವಸನಾ ದಾಶರಥೆ ೩

ಮನಸಿಜ ವೇಷ ಮಂಜುಳ ಭಾಷ
ಮನುಜವಿಶೇಷ ದಾಶರಥೆ ೪

ಶರದಾಭಗಾತ್ರ ಶರನಿಧಿಯಾತ್ರಾ
ಕರಧೃತಗೋತ್ರ ದಾಶರಥೆ ೫

ರಾವಣಹರಣ ಪಾವನಚರಣ
ಶ್ರೀವಧೂರಮಣ ದಾಶರಥೆ ೬

ರಕ್ಷಿತಲೋಕ ರಚಿತಸುಶ್ಲೋಕ
ಶಿಕ್ಷಿತಕಾಕ ದಾಶರಥೆ ೭

ವ್ಯಾಘ್ರಾಘಶಮನ ವ್ಯಾಘ್ರಾರಿಗಮನ
ವ್ಯಾಘ್ರಾದ್ರಿಸದನ ದಾಶರಥೆ ೮

ಪರಿಹೃತಕುಟಿಲ ಸರಸಿಜನಿಟಿಲ
ವರದಾರ್ಯವಿಠಲ ದಾಶರಥೆ ೯

೧೫೩

(ಆ) ಶ್ರೀರಾಮಸ್ತುತಿಗಳು

ರಾಮನ ನೆನೆ ಮನವೆ ಹೃದಯಾರಾಮನ ನೆನೆ ಮನವೆ ಪ

ರಾಮ ಜಗದಭಿರಾಮನ ಮೇಘಶ್ಯಾಮನ
ಸದ್ಗುಣಧಾಮನ ಸೀತಾ ಅ.ಪ

ದಶರಥ ನಂದನನಾ ಧರಣಿಯೊಳಸುರರ ಕೊಂದವನ
ಪಶುಪತಿಚಾಪವ ಖಂಡಿಸಿ ಮುದದಿಂ
ವಸುಮತೀಸುತೆಯಂ ಒಲಿದೊಡಗೂಡಿ ೧

ತಂದೆಯ ಮಾತಲಿ ವನಕೈತಂದು ಸರಾಗದಲಿ ಬಂದ ವಿರಾಧನ
ಕೊಂದು ನಿಶಾಚರಿಯಂದವಳಿದು ಖಳವೃಂದವ ಸವರಿದ ೨

ಸೀತೆಯನರಸುತಲಿ ಕಬಂಧನ ಮಾತನನುಸರಿಸುತ
ಲಾತನಮಗನೊಳು ಪ್ರೀತಿಯಿಟ್ಟು ಪುರಹೂತನ
ಸುತನ ಘಾತಿಸಿ ದಾತನ ೩

ತರಣಿತನಯನಿಂದ ಕಪಿಗಳಕರಸಿ
ವಿಲಾಸದಿಂದ ತರುಣಿಯನರಸಲು
ಮರುತನ ಮಗನಿಗೆ ಬೆರಳುಂಗುರವನು ಗುರುತಾಗಿತ್ತನ ೪

ಧರಣಿಜೆಯನು ಕಂಡು ವನವನು ಮುರಿದು ಗುರುತುಗೊಂಡು
ಅರಿಪುರವನು ಸುಟ್ಟುರುಹಿದ ವಾನರವರನಿಗೆ
ಸೃಷ್ಟಿಪ ಪದವಿತ್ತಾತನ ೫

ಶರನಿಧಿಯನು ಕಟ್ಟಿ ಶತ್ರುಕರವನು ಹುಡಿಗುಟ್ಟಿ
ಶರಣನ ಲಂಕೆಗೆ
ದೊರೆಯನು ಮಾಡಿ ಸಿರಿಯನಯೋಧ್ಯೆಗೆ ಕರೆತಂದಾತನ ೬

ಧರಣಿಯ ಪಾಲಿಸುತ ಧರ್ಮದ ಸರಣಿಯ ಲಾಲಿಸುತ
ಶರಣಾಭರಣ ಪುಲಿಗಿರಿಯೊಳು ನೆಲಸಿದ
ವರದವಿಠಲದೊರೆ ಪರಮೋದಾರನ ೭

೧೫೪

ರಾಮಭಜೇ ತೇ ಪದಯುಗಳಂ ಸೀತಾ ಪ

ರಾಮಭಜೇ ತೇ ಪದಯುಗಳಂ
ರಾಮ ಸುಂದರ ಘನಶ್ಯಾಮ ರಘೂದ್ವಹ ಅ.ಪ

ದಶರಥ ಹೃದಯಾನಂದಕರಂ ತ್ರಿ
ದಶಗಣ ಚಿತ್ತಾಮೋದಕರಂ ೧

ಪೂರಿತ ಕೌಶಿಕಜನಂ ಸಂ
ತಾರಿತ ಗೌತಮ ಲಲನಾಂ ೨

ಖಂಡಿತ ಶಂಕರಚಾಪಂ ಪರಿ–
ದಂಡಿತ ಭಾರ್ಗವ ಕೋಪಂ ೩

ಸ್ವೀಕೃತ ಜಾನಕೀಹೃದಯಂ ದೂ
ರೀಕೃತ ಪಾತಕನಿಚಯಂ ೪

ಪಾಲಿತ ಮಾತಾಪಿತೃ ವಚನಂ ಸಂ
ಲಾಲಿತ ಮುನಿಜನ ಸ್ತುತಿರಚನಂ ೫

ಭರತ ಸಮರ್ಪಿತ ನಿಜರಾಜ್ಯಂ ಮುನಿ
ವರಭಾರದ್ವಾಜಾರ್ಪಿತ ಭೋಜ್ಯಂ ೬

ದಂಡಕಾರಣ್ಯಂ ಪಾವನಚರಣಂ ಉ–
ದ್ದಂಡ ವಿರಾಧಾ ಪಾತಕಹರಣಂ ೭

ಕುಂಭಜಾರ್ಪಿತ ಶರಕೋದಂಡ ಸಂ
ರಂಭ ನಿರ್ಜಿತ ರಾಕ್ಷಸದಂಡಂ ೮

ಪಂಚವಟೀತಟ ಕೃತವಾಸಂ ದೃ
ಗಂಚಲ ಧೃತಗಜದುಲ್ಲಾಸಂ ೯

ಶೂರ್ಪನಖೀ ವಚನಾಲೋಲಂ ಸಹ
ಜಾರ್ಪಿತ ವಿವಿಧಾಯುಧ ಜಾಲಂ ೧೦

ರೂಪನಿರ್ಜಿತ ಸುಮಬಾಣಾಂಗಂ ವಿ
ರೂಪಿತ ದುಷ್ಟ ಶೂರ್ಪನಖಾಂಗಂ ೧೧

ಖರತರ ಖರದೂಷಣಕಾಲಂ ಸುರ
ನರವರ ಮುನಿಗಣ ಪರಿಪಾಲಂ ೧೨

ಮಾಯಾಮೃಗಾರ್ಪಿತ ಬಾಣವರಂ ಜ–
ಟಾಯು ಸಂಪಾದಿತ ಲೋಕವರಂ ೧೩

ರಾವಣಹೃತ ನಿಜಪತ್ನೀಕಂ ಲೋ–
ಕಾವನಗತ ಕೋಪೋದ್ರೇಕಂ ೧೪

ಸಾಧಿತ ಶಬರೀ ಮೋಕ್ಷಕರಂ ಕ–
ಬಂಧ ಬಂಧನ ಮೋಚನ ಚತುರಂ ೧೫

ವಾತ ತನೂಭವ ಕೃತಸ್ತೋತ್ರಂ ಪಂ
ಪಾತಟ ನಿರ್ಮಿತ ಸುಕ್ಷೇತ್ರಂ ೧೬

ಶಿಕ್ಷಿತ ಸಂಕ್ರಂದನ ತನುಜಂ ಸಂ–
ರಕ್ಷಿತ ಚಂಡಕಿರಣ ತನುಜಂ ೧೭

ಸೀತಾಲೋಕನ ಕೃತಕಾಮಂ ನಿಜ
ದೂತಾಮೋದನ ಸುಪ್ರೇಮಂ ೧೮

ನಿಜಕರ ಭೂಷಣ ದಾತಾರಂ ಧುರ
ವಿಜಯ ವನಾಲಯ ಪರಿವಾರಂ ೧೯

ಧೂತಾಹೃತ ಶುಭದೃಷ್ಟಾಂತಂ ವಿ–
ಜ್ಞಾತ ನಿಜಸ್ತ್ರೀ ವೃತ್ತಾಂತಂ ೨೦

ಭೀಷಣ ಜಲನಿಧಿ ಬಂಧಕರಂ ವಿ
ಭೀಷಣ ಸಂರಕ್ಷಣ ಚತುರಂ ೨೧

ಶೋಷಿತ ರಾವಣ ಜಲಧಿಂ ಸಂ–
ತೋಷಿತ ದೈವತಪರಿಧಿಂ ೨೨

ಸೀತಾ ಸಮಾಶ್ರಿತ ವಾಮಾಂಕಂ ಪರಿ–
ಭೂತ ಪಾತಕ ನಿಜನಾಮಾಂಕಂ ೨೩

ಸ್ವೀಕೃತ ಸಾಕೇತಾವಾಸಂ ಅಂ–
ಗೀಕೃತ ಮಾನುಷವಿಲಾಸಂ ೨೪

ವರವ್ಯಾಘ್ರ ಪ್ರಭೂಧರ ಕಲ್ಪತರುಂ ಶ್ರೀ
ವರದವಿಠಲಮತಿಶಯ ರುಚಿರಂ ೨೫

೧೫೫

(ಇ) ಶ್ರೀಕೃಷ್ಣಸ್ತುತಿಗಳು

ಜಯಕೃಷ್ಣ ಜಗದೀಶ ಜಯ ಶಶಿಕುಲಾಧೀಶ
ಜಯ ವಿನುತ ವಾಣೀಶ ಜಯಣೇಶ ಜಯ ಜಯ ಪ

ಕಮಲಭವನುತಿಪಾತ್ರ ಕಮಲಸಖನಿಭಗಾತ್ರ
ಕಮಲರಿಪುಸಮವಕ್ತ್ರ ಕಮಲದಳನೇತ್ರ
ಕಮಲಕರಧೃತಗೋತ್ರ ಕಮನೀಯ ಸುಚರಿತ್ರ
ಕಮಲಾರಿಧರಮಿತ್ರ ಕಮಲಾಕಲತ್ರ ೧

ನಂದಗೋಪಕುಮಾರ ನವನೀತದಧಿಚೋರ
ಸುಂದರೀ ಕುಲಜಾರ ಸ್ಮರಸಮರ ಶೂರ
ಕಂದರ್ಪಸಹಕಾರ ಕಾಮಿನೀವಾರ
ಬೃಂದಾವನವಿಹಾರ ಭಕ್ತ ಮಂದಾರ ೨

ಧರಣೀಧರಾಸ್ಫಾಲ ಮನಕರ ನಿಜಲೀಲ
ನರಪೌತ್ರ ಪರಿಪಾಲ ನವ್ಯವನಮಾಲಾ
ಮುರನರಕ ಶಿಶುಪಾಲ ಮುಖದನುಜ ಕುಲಕಾಲ
ವರವ್ಯಾಘ್ರಗಿರಿಲೋಲ ವರದಾರ್ಯವಿಠಲ ೩

೧೫೬

ಪರಮಪುರುಷ ಬಾರೋ ಪಾವನ
ಚರಣಯುಗವ ತೋರೋ ಪ

ಶರಣರ ಪೊರೆಯುವ ಕರುಣಿಗಳರಸನೆ
ನಿರುತವು ನಿನ್ನನೆ ನೆರೆನಂಬಿದೆ ಹರಿ ಅ.ಪ

ದಿಕ್ಕು ನೀನೆ ಎಂದು ನಂಬಿದೆನಕ್ಕರಿಂದ ಬಂದು
ಟಕ್ಕಿನಿಂದ ನೀನಕ್ಕಜಮಾಡಲು
ತಕ್ಕುದೇನು ಘನ ರಕ್ಕಸವೈರಿಯೆ ೧

ಇಷ್ಟದೇವನಾರೋ ಮನಸಾಭೀಷ್ಟವ ಕೊಡುಬಾರೋ
ಅಷ್ಟರೊಳಗೂ ಬಹಳಿಷ್ಟದೆ ನೆಲಸಿದ
ಕೃಷ್ಣಮೂರ್ತಿ ನೀಂ ದೃಷ್ಟಿಸು ನಮ್ಮನು ೨

ಕೇಣವ್ಯಾಕೋ ಹರಿಯೆ ಕಣ್ಣಲಿ ಕಾಣು ಬಾರೋ ದೊರೆಯೇ
ಪ್ರಾಣದೊಡೆಯ ನೀ ಕಾಣಿಸು ಹರ್ಷವ
ಕಾಣೆನಿನಗೆ ಸರಿ ಜಾಣತನದಿ ಹರಿ ೩

ವಾರಿಧಿಕೃತಶಯನ ವಿಕಸಿತ ವಾರಿಜದಳನಯನ
ಕ್ಷೀರದೊಳದ್ದುನೀ ನೀರೊಳಗದ್ದು ಕಂ
ಸಾರಿ ನಿನ್ನನೆ ಸಾರಿದೆ ನರಹರಿ ೪

ಧರೆಯೊಳಧಿಕವಾದ ಶ್ರೀ ಪುಲಿಗಿರಿಯೊಳು ನೆಲೆಯಾದ
ಶರಣಾಭರಣ ನಿಜ ಕರುಣವ ತೋರಿಸು
ವರದವಿಠಲ ದೊರೆ ದಯಾನಿಧೆ ೫

೧೫೭

ಪೀತಾಂಬರಧರ ನಮೋನಮೋ ವನ
ಜಾತಾಂಬಕ ತೇ ನಮೋ ನಮೋ ಪ

ಖ್ಯಾತ ಚರಿತ್ರ ವಿಧಾತೃಜನಕ ಪುರು –
ಹೂತ ಸಹೋದರ ನಮೋ ನಮೋ ಅ.ಪ

ಜಾತರಹಿತ ಜಲಜಾತಭವಾರ್ಚಿತ
ಪಾಥೋನಿಧಿಶಯ ನಮೋ ನಮೋ
ಪೀತದನುಜ ಭವಭೀತಧರಾನತ
ಶ್ರೀ ತರುಣೀಪ್ರಿಯ ನಮೋ ನಮೋ ೧

ಶ್ಯಾಮಳನೀರದ ಕೋಮಳದೇಹ ನಿ
ರಾಮಯ ನಿರ್ಮಲ ನಮೋ ನಮೋ

ಕಾಮಜನಕ ಬಲರಾಮ ಸಹಜ ಸಂ
ಗ್ರಾಮಮುಜ್ವಲ ನಮೋ ನಮೋ ೨

ನಂದಗೋಪ ವರನಂದನ ಲಲನಾನಂದನ
ಸುಂದರ ನಮೋ ನಮೋ
ಕುಂದರದನ ಶರದಿಂದುವದನ ಗೋ
ವಿಂದ ಜನಾರ್ಧನ ನಮೋನಮೋ ೩

ಹಂಸ ಡಿಂಬಕ ಬಕ ಕಂಸ ಪ್ರಮುಖ ನೃ
ಶಂಸ ವಿಹಿಂಸಕ ನಮೋ ನಮೋ
ಸಂಸ್ಸರದಘ ವಿಧ್ವಂಸಕ ಪರಮ
ಹಂಸೋತ್ತಂಸಕ ನಮೋ ನಮೋ ೪

ಶರಣಜನಾವನ ಶಶಿಕುಲಪಾವನ
ಗರುಡಗಮನ ತೇ ನಮೋ ನಮೋ
ತರುಣಗಣ ಸಂಕುಲ ವರವ್ಯಾಘ್ರಾಚಲ
ವರದವಿಠಲ ತೇ ನಮೋ ನಮೋ ೫

೧೫೮

ಬೃಂದಾವನವೇರಿ ಬಹುನಲವಿಂದ ಬಂದ ಶೌರಿ ಪ

ಬೃಂದಾರಕವರದಿಂದ ಶೌರಿಯಾ
ನಂದವ ಸೇವಕ ಬೃಂದ ತೋರಿ ಅ.ಪ

ಕುಂದಮುಕುಳದಿಂದಾ ಕುಮುದ ಸುಗಂಧಿಯಗಳಿನಿಂದಾ
ಕೆಂದಾವರೆ ಶ್ಯಾವಂತಿಗೆ ಜಾಜಿಯಿಂದ ರಚಿಸಿ ಸೊಗ
ಸಿಂದಲಿ ಮೆರೆಯುವ ೧

ಸುತ್ತಿರೆ ಹಸ್ತಿಗಳೂ ಕೂರ್ಮನು ಪೊತ್ತಿರೆ ಮಧ್ಯದೊಳು
ಮತ್ತೆ ಫಣೀಂದ್ರನ ಮಸ್ತಕದಲ್ಲಿರೆ
ಸ್ವಸ್ತಿಕಾದಿ ಬಹು ಚಿತ್ರದಿ ಶೋಭಿಪ ೨

ಪಂಕಜ ಚಿಹ್ನೆಗಳಾ ಸೂರ್ಯ ಶಶಾಂಕ ಸುರೇಖೆಗಳಾ
ಶಂಖ ಚಕ್ರ ಬಿರುದಾಂಕಿತ ದಿವ್ಯ ವಿಟಂಕದಿಂದ ಬಲು
ಬಿಂಕದೊಳೆಸೆಯುವ ೩

ಕೋಟೆಯತೆನೆಗಳಲಿ ದಿವ್ಯವಧೂಟಿಯರೊಲವಿನಲಿ
ನಾಟಕ ರಚನೆಯ ಪಾಠಕರಂದದಿ ನೋಟಕರಿಗೆ ಬಹು
ದೀಟಿಯಲಿ ತೋರುವ ೪

ಶಾರದಾಭ್ರನೀಲ ಶರೀರದಿ ಹೈರಣ್ಮಯ ಚೇಲಾ
ಹಾರಮಕುಟ ಕೇಯೂರ ಕಟಕಮಂ
ಜೀರಭೂಷಣೋದಾರ ವಿಹಾರ ೫

ಮಂಗಳರವದೊಳಗೆ ಶಂಖ ಮೃದಂಗ ಧ್ವನಿಯೊಳಗೆ
ಸಂಗತ ಸುರವಾರಾಂಗನೆಯರು ಗಾನಂಗಳಿಂದ ನಾ
ಟ್ಯಂಗಳ ರಚಿಸಲು ೬

ವರವಿಪ್ರರು ಪೊಗಳೆ ಛತ್ರಚಾಮರಗಳ ನೆಳಲೊಳಗೆ
ಪರಿಪರಿ ಜ್ಯೋತಿಗಳೆಸೆಯಲು ಪುಲಿಗಿರಿನ
ವರದವಿಠಲನು ವರಗಳ ಬೀರುತ ೭

೧೫೯

ಮಂದರಧರ ಗೋವಿಂದ ಮುಕುಂದ ಸ
ನಂದವಂದ್ಯನೆ ಲಾಲಿಸೋ ಪ

ಕುಂದರದನ ಶರದಿಂದುವದನ ಮುಚು
ಕುಂದ ವರದನೆ ಪಾಲಿಸೋ ಅ.ಪ

ಸಾರಸಭವನುತ ಸಾರಚರಿತ ಸಂ
ಸಾರಪಯೋನಿಧಿ ಪಾರದನೆ
ವಾರಿಧಿ ಮದಹರ ವಾರಿಧಿ ನಿಭ
ಶಾರೀರ ವಿಹಾರ ವಿಶಾರದನೆ ೧

ಶ್ರೀಶ ನಿಖಿಲಲೋಕೇಶ ಜನಕಭವ
ಪಾಶ ವಿಮೋಚನ ಪಟುಚರಿತ
ಈಶ ವಿನುತ ಸರ್ವೇಶ ಪರಾತ್ಪರ
ಕೇಶವ ಸದ್ಗುಣ ಗಣಭರಿತ ೨

ಧರೆಯೊಳು ಶ್ರೀ ಪುಲಿಗಿರಿಯೊಳು ನೆಲೆಸಿಹ
ಶರಣರ ಸಲಹುವ ಶ್ರೀಧರನೆ
ವರದವಿಠಲ ಸುಖಕರಣ ಕುಶಲ
ಕರಿವರದ ಚಕ್ರಧರ ವರನೆ ೩

೧೬೦

ವಂದೇಹಂ ಕಮಲಾದ್ರಿ ನಿವಾಸಂ ಪಲ್ಲವೀಶಂ
ಇಂದೀವರಭಾಸಂ ಪ

ಬೃಂದಾವನ ಪರಿಶೀಲನಮನುಗತ
ಬೃಂದಾರಕ ಗಣಾನಂದ ವಿಲಾಸಂ ಅ.ಪ

ಅಷ್ಟತೀರ್ಥಲಸದಷ್ಟ ಶೈಲಪರಿ
ಶಿಷ್ಟ ಶಿಖರಿ ವಿಹಾರಂ
ಅಷ್ಟಮೂರ್ತಿ ಪರಮೇಷ್ಠಿ ಸಮರ್ಚಿತ
ಮಷ್ಟ ಸಿದ್ಧಿದಾತಾರ ಮುದಾರಂ ೧

ಅಂಬುಜಭವಪಿತಮಂಬುಜ ಪತ್ರ ವಿ
ಡಂಬಿ ನಯನಯುಗಳಂ
ಜಂಭನಿಸೂದನ ಡಂಭರಹಿತ ಘಟ
ಸಂಭವನುತ ಚರಣಾಂಬುಜ ಯುಗಳಂ ೨

ನಂದಗೋಕುಲಾನಂದ ಕಾರಣ
ನಂದೋಪವರ ಕರುಣಂ
ಮಂದಹಾಸ ವಿಜಿತೇಂದು ಕಿರಣಮತಿ
ಸುಂದರಾಂಗಮಾನಂದ ವಿತರಣಂ ೩

ಕಲಮಧುರಸ್ವನಚಲಿತ ಹೃದಯ ಗೋ
ಕುಲ ಮೋಹನ ವೇಣುನಿನಾದಂ
ಚಲವಲಯಕ್ಷಣ ವಿಲಸಿತ ಪಲ್ಲವ
ಲಲನಾಜನ ಸಂಮಿಳಿತ ವಿನೋದಂ ೪

ಧರಣೀಭರ ಪರಿಹರಣೋಚಿತ ವರ
ಕರುಣಾಯತ ನಿಜವೇಷಂ
ಹರಿಣಾರಿ ಮಹೀಧರಣಾಲಯ ಶ್ರೀ
ವರದಾನತಪದಶರಣ ಸುಪೋಷಂ ೫

೧೬೧

(ಈ) ಶ್ರೀನಿವಾಸಸ್ತುತಿಗಳು

ಕಲಯಾಮಿ ಶ್ರೀನಿವಾಸಂ ಕಲಭಾಷಮಿಂದುಹಾಸಂ ಪ

ಕಮನೀಯ ಹೇಮಚೇಲಂ ಕಮಲಾಲಯಾನುಕೂಲಂ
ಕಮಲಾಭಿರಾಮ ಮಾಲಂ ೧

ಸುಮಬಾಣ ಸುಂದರಾಂಗಂ ಸುಮನಾರ್ಪಿತಾಂತರಂಗಂ
ನಮದಾರ್ತಿಸಂಗಭಂಗಂ ೨

ಜಲಜಾಪ್ತಪತ್ರ ನೇತ್ರಂ ಜಲದೋಪಮಾನಗಾತ್ರಂ
ಜಲಜಾಪ್ತಪುತ್ರಮಿತ್ರಂ ೩

ಕುಂದೋಪಮಾನರದನಂ ಚಂದ್ರೋಪಮಾನವದನಂ
ಬೃಂದಾರಕಾರಿದಮನಂ ೪

ಅಜವಂದ್ಯ ಚರಣಕಮಲಂ ನಿಜಸೌಖ್ಯ ಕರಣಕುಶಲಂ
ಭಜನೀಯ ವರದವಿಠಲಂ ೫

೧೬೨

ಶ್ರೀನಿವಾಸ ತವಚರಣಸರೋರುಹಮಾನತೋಸ್ಮಿ ಸತತಂ
ಸಾನುರಾಗ ಮನಸಾ ವಚಸಾ ಶಿರ
ಸಾನುಕೂಲಫಲದಂ ಶುಭಚರಿತಂ ಪ

ವಾಸವಸನ್ನುತ ವಾಸುಕಿಶಯನ
ಶ್ರೀಶವಾಸ ಹಿರಣ್ಮಯ ವಾಸ ಸಮಸ್ತಾವಾಸ ತರಣಿಶತ
ಭಾಸ ಸುಮನೋಲ್ಲಾಸ ವಿಜಿತರೋಷ
ವಾಸರೇಶ ಶತಭಾಸುರ ಭೂಷಣ
ಭೂಷಿತಾಂಗ ವಿಶೇಷ ಕರುಣ ಮೃದು
ಭಾಷಣ ಸಜ್ಜನ ಪೋಷಣ ನಿರ್ಜಿತ
ದೂಷಣ ಭವಜಲ ಶೋಷಣ ಪೂಷಣ ೧

ಪುಂಡರೀಕಾಸನ ಖಂಡಪರಶು ಅ
ಖಂಡಲ ಮುಖ ಸುರಮಂಡಲ ಸೇವಿತ
ಚಂಡ ನಿಶಾಚರಮಂಡಲ ಖಂಡನ
ಪಂಡಿತ ರಣಶೌಂಡ ಪುಂಡರೀಕನಯ–
ನಾಂಡಜವಾಹನ ಖಂಡಿತಕೇಶ ಕೋ
ದಂಡ ಕೃತಾರ್ಚನ ಪುಂಡರೀಕಗಿರಿ ಮಂಡನ ಹಿಮಕರ
ಮಂಡಲ ಸನ್ನಿಭಕುಂಡಲಾಭರಣ ೨

ವಾರಿದನೀಲಶರೀರ ಧರಾರ
ಧೀರ ಸುಮಂದರಧಾರಣ ಚತುರ ಕರಾಗ್ರವಿ
ದಾರಿತ ಶೂರ ಹಿರಣ್ಯಕವೀರ ನರಮೃಗೇಂದ್ರಾ
ವಾರಿಜನಿಲಯಾವರ ಕರುಣಾಕರ
ಮಾರಜನಕ ಸುರವಾರ ವಂದ್ಯಪದ
ಸಾರಸುಗುಣ ಪರಿ ಜಲಧಿಗಂಭೀರ
ವ್ಯಾಘ್ರಗಿರಿ ವರದವಿಠಲ ಹರಿ ೩

೧೬೩

ಶ್ರೀನಿವಾಸನಮಲನಾಮವ ಸೊಗಸಿನಿಂದ
ಗಾನಮಾಳ್ಪ ಧೀರನಾವನೋ ಪ

ತಾಳ ತಂಬೂರಿಗಳನು ಮೇಳವಿಸಿ ಸರಾಗದಿಂದ ೧

ಹಿಂಗದೆ ಮೃದಂಗದಿಂದ ಸಂಗಡಿಸಿ ಸುಲಲಿತವಾಗಿ ೨

ಗುಂಬವಾದ್ಯವನು ಪರಮಸಂಭ್ರಮದಲ್ಲಿ ಬಾರಿಸುತ್ತ ೩

ಜೊತೆಗೆ ಸೇರಿದವರ ಕೂಡಿ ಶ್ರುತಿಲಯಗಳಿಂದ ಪಾಡಿ ೪

ಪರಮಪುರುಷ ವ್ಯಾಘ್ರಗಿರಿಯ ವರದವಿಠಲನೆಂದು ಮುದದಿ ೫

೧೬೪

ಶ್ರೀನಿವಾಸ ನಿನ್ನ ನಂಬಿದ ದಾಸನ
ಎನ್ನನು ಕಾಯೋ ಶ್ರೀವಾಸುಕಿಶಯನ ಪ

ರೂಪರಹಿತ ಬಹುರೂಪ ಧರಿಸಿಹ
ಶ್ರೀಪತಿ ಎನ್ನನು ನೀಪರಿಪಾಲಿಸು ೧

ಕಾಲರೂಪ ಬಹುಲೀಲೆಯ ತೋರುವ
ಮೂಲಪುರುಷ ಸುರಪಾಲಕ ಶ್ರೀಹರಿ ೨

ಶಕ್ತಿಗಳನು ಅವ್ಯಕ್ತದೊಳಿರಿಸಿ ಸ
ಮಸ್ತ ವಸ್ತುವ ಸುವ್ಯಕ್ತ ಪಡಿಸಿದ ೩

ಕಲ್ಪಕೋಟಿ ನಿನಗಲ್ಪಕಾಲ ಪರಿ
ಕಲ್ಪಿತ ಸುರನರ ಕಲ್ಪಭೋಜ ಹರಿ ೪

ಖಂಡಪರಶು ಅಖಂಡಲಾದಿ ಸುರ
ಮಂಡಲ ಸೇವಿತ ಪುಂಡರೀಕ ಪದ ೫

ಮಂದರಧರ ಗೋವಿಂದ ಮುಕುಂದ ಸ
ನಂದನಾದಿ ಮುನಿಬೃಂದ ಸುವಂದಿತ ೬

ಸಾರಸುಗುಣ ಪರಿವಾರ ಸಜ್ಜನಾಧಾರ
ಧೀರವರದವಿಠಲ ಹರಿ ೭

೧೬೫

ಶ್ರೀನಿವಾಸ ಪಾಹಿಮಾಂ ಶ್ರೀಯಮನ್ಮನೋರಮಾಂ ಪ

ದೀನಲೋಲ ಕಾವನ ಧೀರ ಮುನಿ ವಿಭಾವನ ೧

ಪೂರ್ಣಚಂದ್ರಾನನ ಪುಣ್ಯವೃಕ್ಷಾನನ ೨

ಸೇವಕಾನಂದನ ದೇವಕೀನಂದನ ೩

ಶಂಕಚಕ್ರ ರಂಜನ ಕಿಂಕರಾರ್ಥಿ ಭಂಜನ ೪

ಮಾರಕೋಟಿಸುಂದರ ಶ್ರೀರಮಾ ಮನೋಹರ ೫

ದೂರಿತಾಘ ಸಂಕುಲ ದುಷ್ಟಕುಲಾನಲ ೬

ಪುಂಡರೀಕ ಲೋಚನ ಚಂಡಪಾಪ ಮೋಚನ ೭

ಭವ ಭಯೋತ್ತಾರಣ ಭವ್ಯ ಸುಗುಣ ಪೂರಣ ೮

ವ್ಯಾಘ್ರಾದ್ರಿನಾಯಕ ವ್ಯಕ್ತ ಸೌಖ್ಯದಾಯಕ ೯

ತವಪದಾಂಭೋರುಹಂ ಭವತು ಹೃತ್ಸುಖಾವಹಂ ೧೦

ವರದವಿಠಲ ಶ್ರೀಧರ ಶರಣಜನ ದಯಾಕರ ೧೧

೧೬೬

ಶ್ರೀನಿವಾಸ ಪಾಹಿಮಾಂ ಸದಾ ಶ್ರಿತಜನಾಮೋದ
ಮೌನಿಜನ ಚಾತಕಾಂಭೋದ ಪ

ಸಾನುರಾಗ ಯುಗಮುನಿ ಮಾನಿತಾವರಾರವಿಂದ
ಭಾನುಕೋಟಿ ತೇಜ ಸಾಮಗಾನಲೋಲ ಶ್ರೀಮುಕುಂದ ಅ.ಪ

ವಾರಿಜಾಸನಾರ್ಚಿತ ಪ್ರಭೋ ವಂ
ದಾರುಜನ ಪಾರಿಜಾತ ಧೃತಕೌಸ್ತುಭ
ಶಾರದೇಂದೀವರನೇತ್ರ ಶ್ಯಾಮಳನೀರದ ಗಾತ್ರ
ಸಾರ ಸನ್ಮಣಿ ಕೇಯೂರ ಹಾರ ಭೂಷಾ ಸುಪವಿತ್ರ ೧

ಸರ್ವಲೋಕಪಾಲಕೇಶ್ವರ ಸೇವಿತ ಸುಪರ್ವಗಣ ಸದ್ಗುಣಾಕಾರ
ಶರ್ವ ಸುರಪತಿ ಮುಖ್ಯ ಸರ್ವದೇವವರವರ್ಯ
ಗರ್ವಿತ ದೈತ್ಯಾಂಧಃ ಸೂರ್ಯ ಪರ್ವತಾಧಿರಾಜ ಧೈರ್ಯ ೨

ಸೃಷ್ಟಿ ರಕ್ಷಣಾಂತಕಾರಕ ಸರ್ವಾತ್ಮಕ ಶಿಷ್ಟದೇವ ದ್ವಿಜರಕ್ಷಕ
ಅಷ್ಟಸಿದ್ಧಿಪ್ರದಾ ಸರ್ವೋತ್ಕೃಷ್ಟ ಕಷ್ಟನಿವಾರಣ
ಅಷ್ಟಮೂರ್ತಿ ಪ್ರಿಯ ಸರ್ವಾಭೀಷ್ಟದ ಗೋಪಾಲಕೃಷ್ಣ ೩

ಶ್ರೀಕರ ಶೃಂಗಾರಶೇಖರ ಶ್ರೀಕರಗೃಹ ಶ್ರೀಕರಧಾರಿತ ಮಂದರ
ಪಾಕವೈರಿ ಮಣಿನೀಲ ಪಾವನ ಸುಗುಣಶೀಲ
ಶೋಕ ಮೋಹ ಸುವಿವೇಕ ನಿತ್ಯೋದಾರ ಶೂರ ೪

ಮಾರಜನಕ ಮಂಗಳಾಕಾರ ಮಾರಶತಕೋಟಿ ಸುಂದರ
ಸಾರವಸ್ತುಚಯಪರಿಪೂರ ವ್ಯಾಘ್ರಾದ್ರಿವಿಹಾರ
ಧೀರ ವರದವಿಠಲ ಸುರಾಸುರಾರ್ಚಿತಾಂಘ್ರಿಕಮಲ ೫

೧೬೭

ಶ್ರೀನಿವಾಸ ಮುನಿಮಾನಸಹಂಸ ಮಹಾನುಭಾವ ದೇವ ಪ

ಗಾನಲೋಲ ಶರಣಾನುಕೂಲ ಖಗಯಾನ ವಾಸುದೇವ ಅ.ಪ

ಸೃಷ್ಟಿಕೃರ್ತ ಸಂತುಷ್ಟಹೃದಯ ಪರಮೇಷ್ಠಿ ಜನ್ಮಮಾಲಾ
ಅಷ್ಟಭೂತಿವರ ಕಷ್ಟಹರಣ ವಿಬುಧೇಷ್ಟ ದಿವ್ಯಲೀಲಾ ೧

ದೇವದೇವ ಭೂದೇವ ವಂದ್ಯ ವಸುದೇವ ಜಲಧಿಸೋಮ
ದೇವವೈರಿವನದಾವ ಸುಂದರೀ ಭಾವಜನಿತ ಕಾಮ ೨

ರಾಮರಾಮ ಕರುಣಾಮಹೋದಧೆ ಶ್ರೀ ಮನೋಭಿರಾಮ
ರಾಮಣೀಯ ಸುಗುಣಧಾಮ ಪುಣ್ಯತಮನಾಮ ಪೂರ್ಣಕಾಮ ೩

ಕಿಂಕರಜನಗತ ಸಂಕಟಹರ ಧೃತ ಶಂಖಚಕ್ರಪದ್ಮ
ಪಂಕಜಲೋಚನ ಪಂಕವಿಮೋಚನ ಪಂಕಜಹಿತ ಸದ್ಮಾ ೪

ದಿವ್ಯ ರೂಪ ಸುರಸೇವ್ಯ ಚರಣ ಮುನಿ ಭಾವ್ಯ ಮಾನಚರಿತ
ಅವ್ಯಯಾತ್ಮ ಬಹು ಭವ್ಯ ಸುಗುಣ ಮಾಂಡವ್ಯ ಪುಣ್ಯಭರಿತ ೫

ಪಾಹಿಮಾಮನಘದೇಹಿ ಭಕ್ತಿಮಪಿ ಮೇ ಹಿತೋಸಿ ನಿತ್ಯಂ
ಕಾಹಿಮೇಗತಿರ್ಮೋಹಿತಸ್ಯತಾಂಬ್ರೂಹಿ ದೇವ ಸತ್ಯಂ ೬

ಚರಣಯುಗಳಮಿಹ ಚರಣಮೇಹಿ ಭವತರಣಿದಿಷಣಯಾಹಂ
ಕರುಣಯಾವ ಶ್ರೀವರದವಿಠಲ ಸುಖಕರಣ ವಿಗತಮೋಹಂ ೭

೧೬೮

ಶ್ರೀನಿವಾಸ ಶ್ರೀಮನೋಲ್ಲಾಸ ಶ್ರೀನಿವಾಸ ಪ

ಶ್ರೀನಿವಾಸ ಶುಭಮಾಮವ ಗಾನಲೋಲಿತ ಸನ್ಮಾನಿತಲೀಲಾ ಅ.ಪ

ದೀಪಿತಭವದಾವ ವಸುದೇವತನಯ ದೇವ ದೇವ
ಭೂದೇವನಿವಹ ಸಂಭಾವಿತ ಭಾವ ೧

ರಾಮರಾಮ ರಘುವಂಶ ಲಲಾಮ ರಾಮ ರಾಮ
ರಮ್ಯಗುಣಧಾಮ ಮುನಿಜನಪ್ರೇಮ ದನುಜಸಂಗ್ರಾಮಭೀಮ ೨

ಕಂಜನಾಭ ಕಾಲಾಂಬುಧಾಭಾ ಕಂಜನಾಭ ರಿಪು
ಭಂಜನಾತ್ತವರ ಕಂಜಚಕ್ರವಿಧು ಮಂಜುಳ ವಕ್ತ್ರ ೩

ಸುಂದರಾಂಗ ಸುಕೃತಾಂತರಂಗ ಸುರಸುಂದರೀನಿಚಯ
ನಂದಗೋಕುಲಾನಂದ ಮುಕುಂದ ೪

ಭವ್ಯರೂಪ ಭಕ್ತಾಲಯ ದೀಪ ಭವ್ಯರೂಪ ಧೃತ
ದಿವ್ಯಚಾಪ ಸುರಭಾವ್ಯಮಹಿಮ ಮಾಂಡವ್ಯಸುಸೇವ್ಯ ೫

ವ್ಯಾಘ್ರಶೈಲಾವಾಸ ಸುಶೀಲಾಶೈಲಶಿಖ–
ರಾಗ್ರಲೋಲ ದೇವಾಗ್ರಗಣ್ಯ ಭಕ್ತಾಗ್ರ ಶರಣ್ಯ ೬

ದುರಿತದೂರಾ ದುಃಖಾಭ್ರಸಮೀರಾ
ದುರಿತದೂರ ಫಣಿಗಿರಿವಿಹಾರ ಶ್ರೀವರದವಿಠಲಾ ೭

೧೬೯

ಶ್ರೀನಿವಾಸ ಸುಗುಣೈಕನಿಧೆ ಶ್ರೀ
ಮಾನಸಹಂಸ ದಯಾಜಲಧೇ ಪ

ತೋಯಸನ್ನಿಭಕಾಯ ಮನೋಜ ನಿ
ಕಾಯ ಮಾಪಮಧುರಾಲಾಪ
ತೋಯಜಾಕ್ಷ ಪೃಥುಳಾಯತಪಕ್ಷ ನಿ
ಧಾಯ ಹೃದಿಧ್ಯಾಯಾಮಿ ಹರೆ ೧

ವಿಗ್ರಹಮಖಿಳಶುಭಗ್ರಹಣಂ ಮದ
ನುಗ್ರಹಾರ್ಥಮದಿತಿಷ್ಠವಿಭೋ
ಉಗ್ರಮುಖ ವಿಬುಧಾಗ್ರ್ಯಪೂಜಿತ ಸ
ಮಗ್ರ ಸಮರ್ಥ್ಯಾಂ ಸ್ವೀಕುರುಭೋ ೨

ಪಾದಾರ್ಘ್ಯಾಚಮನಾದ್ಯಮಖಿಳಜಗ
ದಾದ್ಯ ಕಲ್ಪಿತಂ ಭವದರ್ಥಂ
ಹೃದ್ಯಸುರಭಿ ಸಂಪದ್ಯುತಮುತ್ತಮ
ಸದ್ಯಂಬುನಿಮೇಜ್ಯ ಸುಖೋಷ್ಣಮಿದಂ ೩

ನಿಸ್ತುಲ ಕಾಂಚನ ವಸ್ತ್ರಮಲಂಕುರು
ಕಸ್ತೂರಿತಿಲಕಂ ಸುಮುಖೋ
ಕೌಸ್ತುಭರತ್ನಮಜಸ್ತುತಮಂಡನ
ಮಸ್ತುತನೌಗುಣ ಭೂಷಣತೇ ೪

ಕುಂದಬಕುಳ ಕುರುವಿಂದ ಮಹೋತ್ಪಲ
ಮಂದಾರಕಾ ಮಾಲ್ಯಾಕಲಿತಂ ಗದ
ಬಂಧುರ ಸುಗಂಧಿ ತುಳಸಿಕಾ
ಬೃಂದಮಲಂಕುರು ಸನ್ನಿಹಿತಂ ೫

ಗಂಧರ್ವಾಮರ ವಂದಿತ ಮಲಯಾ
ಗಂಧಲೇಪನಮಾಕಲಯಾ
ಗಂಧವಾಹನುತ ಗಂದವತೀ ಗುಣ
ಬಂಧುರ ದೂಪಂ ಜಿಘ್ರಹರೇ ೬

ತಾಪತ್ರಯ ಪರಿತಾಪ ನಿವಾರಣಂ
ತಾಪಸ ಮಾನಸ ದೀಪಹರೇ
ಸೋಪಚಾರ ಘೃತದೀಪಮತೀಂದ್ರಿಯ
ರೂಪಾಲೋಕಯ ಶ್ರೀನೃಹರೇ ೭

ಮಂತ್ರರೂಪಸನ್ಮಂತ್ರವಿದಾಂವರ
ಮಂತ್ರ ತಂತ್ರ ಯಂತ್ರಣಮೂರ್ತೇ
ಮಂತ್ರಪೂತಮುಖ ಯಾತ್ರಾಧಾರ ಸು
ಮಂತ್ರಪುಷ್ಪಂ ಸ್ವೀಕುರುಹೇ ೮

ಛತ್ರಮಿದಂ ಭುವನತ್ರಯನಾಥಸ ವಿ
ಚಿತ್ರದಂತ ಚಾಮರಯುಗಳಂ
ಶೋತ್ರಮಿತ್ರ ತೋರ್ಯತ್ರಿಕಮಾಲಕಲ
ಯಾತ್ರ ಭೋಗಾ ಮದಿರಾಜಕಳಂ ೯

ಮಧುಪರ್ಕಾರ್ಹಣಮಧರೀಕೃತ
ಮಧುಮಧುರಿಮ ಪಾಯಸಮತಿಹೃದ್ಯಂ
ಅಧಿಕಪಯೋಘೃತ ದಧಿಸೂಪಾನ್ವಿತ
ಮಧುನಾಸ್ವೀಕುರು ನೈವೇದ್ಯಂ ೧೦

ಬಿಂಬಾಧರಮಿಂದುಬಿಂಬವದನ ಶಿಶಿ
ರಾಂಬುಪಿಬಾಮಲಘನಸಾರಂ
ತಾಂಬೂಲಂ ಜಗದಂಬಾಕರ ಕಲಿ
ತಂಬಹುಮನ್ವಸ ಕರ್ಪೂರಂ ೧೧

ತಾರಾಧಿಪ ಕುಮುದಾರಿ ನಿಭಾಲಂ
ಕಾರ ನಿಭೃತ ಪರಿವಾರ ವಿಭೋ
ನೀರಾಜನಮತಿತಾರಾಯಿತ ಕ
ರ್ಪೂರಾರ್ತಿಕಮಂಗೀಕುರು ಭೋ ೧೨

ಕುಕ್ಷಿಭುವನ ಸಂರಕ್ಷಿತ ಸೇವಕ
ಪಕ್ಷ ಪ್ರದಕ್ಷಿಣಮನುವಾರಂ
ಪಕ್ಷಿಗಮನ ನಿಜ ವಕ್ಷೋಧೃತ ಶುಭ
ಲಕ್ಷಕರೋಮ ನಮಸ್ಕಾರಂ ೧೩

ಸಾಗರತನಯಾ ಯಾಗವಿಹಿತ ಭೂ
ಭಾಗಧೇಯ ನೀಳಾಸಹಿತಂ
ಭೋಗಿಶಯನಮನುರಾಗ ಪರಿಷ್ಕೃತ
ಮಾಗಮಗೋಚರ ಕುರುಲಸಿತಂ ೧೪

ಆರಾಧನಮಪಜಾಯತಮುಪ
ಚಾರಮಿಷೇಣ ಮಯಾಚರಿತಂ
ನಾರಾಯಣ ಚರಣಾರಾಧನಮಿತಿ
ಕಾರುಣ್ಯೇನ ಕ್ಷಮಸ್ವೇದಂ ೧೫

ಶರಣಾಗತಜನ ಭರಣಾಲಂಕೃತ
ಹರಿಣಾರ್ಯದ್ರಿ ನಿಕೇತನ ತೇ
ಚರಣಾರಾಧನ ಕರಣಾಂಚಿತಮಿತಿ
ವರದವಿಠಲಗೀತಂ ನುತೇ ೧೬

೧೭೦

ವೆಂಕಟಾಚಲವಾಸ ಪಂಕಜಪ್ರಿಯಭಾಸ ಶಂಕರಾರ್ಚಿತ ಚರಣ
ಪಂಕಜಾಸನ ಪಿತ ಪಂಕಜಲೋಚನ ಕಿಂಕರಜನ ಶರಣ ಪ

ಪರಮಾತ್ಮ ನಿನ್ನ ಶ್ರೀಪದಸೇವಕನಾಗಿ ಪರರನನುಸರಿಸುವೆನೆ
ಸಿರಿರಮಣನೆ ನಿನ್ನ ಕರುಣೆಯುಳ್ಳೆ ಪರಸಿರಿಯ ಬಯಸುವೆನೆ ೧

ಧರಣಿಯನಾಳುವ ದೊರೆಯ ಕುಮಾರನು ತಿರಿಕೆಯ ಬೇಡುವನೆ
ಸುರತರುವಿನ ತಂಪುನೆರಳೊಳು ಕುಳಿತು ತಾ ಗರಿಕೆಯನರಸುವನೆ ೨

ಸಾರನಿಗಮ ವಿಚಾರವುಳ್ಳವ ನಿಸ್ಸಾರದಿ ಬೆರೆಯುವನೆ
ವಾರಿಧಿ ಲಂಘಿಪ ಧೀರನು ಕೊಳಚೆಯ ನೀರಿಗೆ ಜರಿಯುವನೆ ೩

ಕ್ಷೀರಾಬ್ಧಿ ಮಥಿಸಿದ ಶೂರನಿನ್ನವನಿಗೆ ನೀರು ಮಜ್ಜಿಗೆ ಗಣನೆ
ನಾರಸಿಂಹನ ಪದ ಸಾರಿದರವನು ಮದವಾರಣಕ್ಕಂಜುವನೆ ೪

ಗರುಡಗಮನ ನಿನ್ನ ಶರಣಾದವನಿಗೆ ತರಳನ ಹಾವಳಿಯೆ
ನರಕಾಂತಕ ನಿನ್ನ ಸ್ಮರಿಸುವ ನರನಿಗೆ ದುರಿತಂಗಳಟ್ಟುಳಿಯೆ ೫

ಹೊಳೆಯೊಳು ನೆನೆಯದ ಬಲುಗಟ್ಟಿಕಲ್ಲು ತಾ ಮಳೆಯೊಳು ನೆನೆಯುವದೆ
ಇಳೆಯೊಳು ಪುಲಿಗಿರಿನಿಲಯನ ದಾಸರ ಬಲುಹು ಕುಂದಕವಹುದೆ ೬

ಇಷ್ಟದಿ ಮನೆಯೊಳು ಮೃಷ್ಟಾನ್ನವುಂಡವ ಪಿಷ್ಟವ ಬಯಸುವನೆ
ಸೃಷ್ಟೀಶ ನಿನ್ನೊಳಗಿಟ್ಟು ದುರ್ದೈವದ ದೃಷ್ಟಿಯನರಸುವನೆ ೭

ನಿಗಮಗೋಚರ ಕೇಳು ಜಗವ ತೂಗುವನಿಗೆ ಮಗುವತಿ ಘನವಹುದೆ
ಜಗದಘಹರಣ ಎನ್ನಘವ ನೀಗಲು ನಿನ್ನ ಬಗೆಗೆ ದುರ್ಘಟವಹುದೆ ೮

ಪರಮಾತ್ಮ ಪರಿಪೂರ್ಣ ಪರವಸ್ತು ನೀನೆಂದು ಮರೆಹೊಕ್ಕೆ ಕಾಯೊ ಎನ್ನ
ವರಸುಗುಣಾಕರ ವರದವಿಠಲ ಪುಲಿಗಿರಿದೊರೆ ಸುಪ್ರಸನ್ನಾ ೯

೧೭೧

ಶ್ರೀವೆಂಕಟೇಶ ಪಾಹಿ ತಾವಕ ಭಕ್ತಿಂ ದೇಹಿ ಪ

ವಾರಿಜನೇತ್ರಾ ವಾರಿದಗಾತ್ರಾ
ನಾರದಸನ್ನುತಪಾತ್ರ ನರಮಿತ್ರ ಸುಚರಿತ್ರ ೧

ಅಂಡಜಯಾನ ಕುಂಡಲಿಶಯನ
ಖಂಡಪರಶು ಪರಿಪಾಲನ ಮುನಿಲಾಲನ ಸುರಖೇಲನ ೨

ವೆಂಕಟರಮಣ ಪಂಕಜ ಚರಣ
ಸಂಕಟಮೋಚನ ಕಾರಣ ಭವತಾರಣ ಗುಣಪೂರಣ ೩

ದಶರಥಬಾಲಾ ದಶಮುಖಕಾಲ
ದಶಶತಲೋಚನಪಾಲಾ ಭೂಪಾಲಾ ಸುರಮುನಿಲೋಲ ೪

ನಂದಕುಮಾರ ನವನೀತ ಚೋರ
ಬೃಂದಾವನವಿಹಾರ ಬಹುದಾರಾ ಧುರಧೀರ ೫

ಅಜನುತಪಾದ ಅಪಹೃತ ಖೇದ
ಸುಜನ ಕಲುಷ ನಿರ್ಭೇದ ನುತವೇದ ಸುರಮೋದ ೬

ವರವ್ಯಾಘ್ರಾಚಲ ವಿಹರಣ ಶೀಲ
ವರದವಿಠಲ ಗೋಪಾಲ ಶ್ರೀಲೋಲ ಬಹುಲೀಲಾ ೭

(ಆ) ಲಕ್ಷ್ಮೀಸ್ತುತಿಗಳು

೧೭೨

ನಂಬಿದೆ ನಿನ್ನ ಪಾದಾಂಬುಜಯುಗಳವ
ಶಂಬರಾರಿ ಜನನಿ ಪ

ಬೆಂಬಿಡದೆನ್ನ ಹೃದಂಬುಜದೊಳಗವ
ಲಂಬಿಸಿ ಸಲಹು ಮದಂಬೆ ಸನಾತನಿ ಅ.ಪ

ಅಂಬುಜಮುಖಿ ಚಿಕುರೆ ಶರ
ದಂಬುಜದಳ ನಯನೆ
ಕಂಬುಕಂಠಿ ಕನಕಾಂಬರೆ ಮದಕರಿ
ಕುಂಭಪಯೋಧರೆ ಬಿಂಬಫಲಾಧರೆ ೧

ಕರ್ಣದೊಳೆಸೆವ ಸುವರ್ಣವಿಡಿದ ಪೊಸ
ರನ್ನದೊಡವೆಗಳ ಮನ್ನಿಸುವಂತಿದೆ
ಪೂರ್ಣಕಟಾಕ್ಷವು ಕನ್ನಡಿ ಕದಪಿನ
ರನ್ನೆ ಗುಣಾರ್ಣವೆ ೨

ಮಾಲತಿ ಮಲ್ಲಿಗೆ ಮಾಲೆಯಿಂದೊಪ್ಪುವ
ನೀಲಭುಜಗವೇಣಿ
ಲೀಲೆಯಿಂದ ಶಾರ್ದೂಲ ಮಹೀಂದ್ರದೊ
ಳಾಲಯಗೈದಲಮೇಲಮಂಗಾಮಣಿ ೩

೧೭೩

ಪಾಲಿಸೆನ್ನ ಪಾಲನಶೀಲೆ
ಪಾಲಿತ ಸುರನರಜಾಲ ಸುಶೀಲೆ ಪ

ಕ್ಷೀರಶರಧಿ ಸುಕುಮಾರಿಣಿ ಲಕ್ಷ್ಮೀ
ವಾರಿಜಮುಖಿ ಸಿತವಾರಿರುಹಾಕ್ಷಿ ೧

ಅಂಬೆ ಭುವನಕುಟುಂಬೆ ರಮಾಂಬೆ
ನಂಬಿ ಭಜಿಸುವದು ಡಾಂಬಿಕಮೆಂಬೆ ೨

ಯುಕ್ತಿಯು ಶಕ್ತಿ ವಿರಕ್ತಿಗಳಿಲ್ಲ
ಉಕ್ತಿ ಮಾತ್ರದಿಂದ ಭಕ್ತಿಕೊಡೆಲ್ಲ ೩

ಜಯಕರುಣಾಲಯೆ ಜಯಮಣಿವಲಯೆ
ಜಯನಿಸ್ತುಲಯೆ ಜಡಮತಿಗೊಲಿಯೆ ೪

ಧರೆಯೊಳುತ್ತಮ ಪುಲಿಗಿರಿಯೊಳಿರುವನೆ
ಶರಣರ ಪೊರೆಯುವ ವರದವಿಠಲನ [ರಾಣಿಯೆ] ೫

೧೭೪

ಸಾರಸದಳನಯನೆ ಸಲಹೆಮ್ಮನು
ತೋರುವ ಜಗದಯನೆ ಪ

ಕ್ಷೀರಶರಧಿ ಸುಕುಮಾರಿಣಿ ಹರಿಸಹ
ಚಾರಿಣಿ ಭುವನ ವಿದಾರಿಣಿ ರುಕ್ಮಿಣಿ ಅ.ಪ

ಮಂದಹಾಸ ವಿಜಿತೇಂದುಕಿರಣೆ ಗಜ
ಮಂದಗಮನೆ ಸಂಕ್ರಂದನ ವಂದಿತೆ ೧

ನೀರಜಸಮಪಾಣಿ ನೀ ಲಾಲಿಸು
ಕೀರ ಮಧುರವಾಣಿ ತಾರಹಾರ ಶೃಂಗಾರ ತರಂಗಿಣಿ
ಮಾರಜನನಿ ಕಂಸಾರಿಯ ರಾಣಿ ೨

ನೀಲಭುಜಗ ವೇಣಿ ನೀನೆ ಗತಿ
ಪಾಲಿಸು ಕಲ್ಯಾಣಿ ಲೀಲೆಯಿಂದ ವನಮಾಲಿಯುರದಿ ನಿ
ತ್ಯಾಲಯಗೈದಿಹ ಬಾಲೆ ವರದನುತೆ ೩

೧೭೫

ಶ್ರೀಕರಮಾಗಿಹ ಗೋಕುಲದಲಿ ಕರು
ಣಾಕರ ಕೃಷ್ಣನು ನೆಲೆಸಿರಲು
ನಾಕದ ಸಿರಿಯ ನಿರಾಕರಿಸುವ ಸಿರಿ
ತಾ [ಕರೆಯುವ] ಹರ್ಷದೊಳು ೧

ರಾವಣನನುಜೆಯು ರಾಘವದೇವನ
ಲಾವಣ್ಯಕೆ ಮೋಹಿಸಿ ಮನದಿ
ಭಾವಜನಸ್ತ್ರದ ಬಾಧೆಯಿಂದ ಪತಿ
ಭಾವದಿ ನೋಡುತ ಭರದಿ ೨

ಕಾಮಿಸಿ ಕಾಡಲು ಕಾಕುತ್ಸ್ಥನು ಬಲ
ರಾಮ ಸಹಜನವತಾರದಲಿ
ಕಾಮಿತವಹದೆನೆ ಕಾಮಿನಿ ರಾಧಾ
ನಾಮದಿ ಜನಿಸಿರೆ ಗೋಕುಲದಿ ೩

ಒಂದಾನೊಂದಿನ ನಂದಾದಿಗಳಾ
ನಂದಾನ್ವಿತಮತಿ ವೃತ್ತಿಯಲಿ
ಒಂದಾಗಿ ಧರಾವೃಂದಾರಕರನು
ವಿಂದಾರಾಧಿಪ ಭಕ್ತಿಯಲಿ ೪

ಬಂದರು ವರ ಕಾಳಿಂದಿಯ ತೀರದಿ
ನಂದನದಂತಿಹ ವನದೆಡೆಗೆ
ಬಂಧುಗಳೊಂದಿಗೆ ಬಂಡಿಯನೇರಿ ಮು
ಕುಂದನ ಧ್ಯಾನಿಸುತಡಿಗಡಿಗೆ ೫

ಅಲ್ಲಿಗೆ ಭೂಸುರರೆಲ್ಲ ಬರಲು ಮಿತಿ
ಯಿಲ್ಲದೆ ಗೋಧನ ದಾನದಲಿ
ಬಲ್ಲಿದ ಭೋಜನದಲ್ಲಿ ದಣಿಸಿ ಸುಖ
ದಲ್ಲಿರುತಿರಲಾ ಸಮಯದಲಿ ೬

ಅಸ್ತಮಹೀಧರ ಮಸ್ತಕವನು ಸುಜ
ನಸ್ತುತ ದಿನಕರನೈದಿರಲು
ನಿಸ್ತುಲಮದಿ ಸಮಸ್ತರ ದೃಷ್ಟಿಗಳ
ಸ್ತಗೊಳಿಸೆ ಜನ ಭಯಗೊಳಲು ೭

ನಂದನು ತನ್ನಯ ನಂದನನಂಜುವ
ನೆಂದು ರಾಧೆಯ ತಾ ನೋಡಿ
ಕಂದನ ನೀನೇ ಮಂದಿರಕ್ಕೈದಿಸು
ಎಂದರೆ ಬಂದಳು ನಗೆಗೂಡಿ ೮

ಕಂದ ಬಾರೋ ಗೋವಿಂದ ಬಾ ಯದು
ನಂದನ ಬಾ ಕಮಲಾಸನನ
ತಂದೆ ಬಾರೋ ನಿಜ ಮಂದಿರದೊಳಗಾ
ನಂದವ ತೋರುವೆ ಶಶಿವದನಾ ೯

ಆಡಿಸುವೆನು ನೀನಾಡುವಾಟಗಳ
ನೋಡಿಸುವೆನು ನೀನೊಲಿದುದನು
ಬೇಡಿದುದೆಲ್ಲವ ನೀಡುವೆ ಸಂಶಯ
ಬೇಡ ನಿನ್ನನೆ ಕೂಡಿಹೆನು ೧೦

ರಾಧೆಯ ನುಡಿಗಳನಾದರಿಸುತ ಮಧು
ಸೂದನ ತನ್ನಯ ಮನದೊಳಗೆ
ಮೋದಪಡಿಸಲನುವಾದನು ಭಕ್ತ
ಮೋದಚರಿತ್ರನು ಕಾಮಿನಿಗೆ ೧೧

ಮುತ್ತನಿತ್ತು ಬಲು ಮುದ್ದಿಸಿ ಬಾಲಕ
ನೆತ್ತಿಕೊಂಡು ಬಲು ಸಡಗರದಿ
ವೃತ್ತಕುಚಗಳಿಂದೊತ್ತಿ ಮನೋಭವ
ನರ್ಥಿಗೆ ಸೊಕ್ಕುವ ಕಾತರದಿ ೧೨

ವರಪುಲಿಗೆರೆದೊರೆ ವರದವಿಠಲನು
ಕರುಣನಾದೊಡೀಗಲೆ ಬೆರೆದು
ಸ್ಮರಶರದಾರ್ತಿಯ ಪರಿಹರಿಸುವೆನೆಂದು
ಹರುಷದಿ ಬರುತಿರ್ದಳು ನಲಿದು ೧೩

(ಇ) ಆತ್ಮನಿವೇದನೆಯ ಕೃತಿಗಳು

೧೭೬

ಇದನಾದರು ಕೊಡದಿದ್ದರೆ ನಿನ್ನ
ಪದಸೇವೆಗೆ ಜನರೊದಗುವರೆ ಪ

ದೊರೆತನವಾಗಬೇಕೆನಲಿಲ್ಲ ಬಲು
ಸಿರಿತನವನು ವಾಂಛಿಸಲಿಲ್ಲ
ಪರಿಭೋಗದ ಸ್ಪೃಹೆ ಎನಗಿಲ್ಲ ನಿನ್ನ
ಸ್ಮರಣೆಯೊಂದಿತ್ತರೆ ಸಾಕಲ್ಲ ೧

ಅನ್ನವಸ್ತ್ರವ ಕೇಳುವದಿಲ್ಲ ಒಳ್ಳೆ
ಚಿನ್ನ ಬಣ್ಣವ ಕೊಡು ಎನಲಿಲ್ಲ
ಹೆಣ್ಣು ಮಣ್ಣಿನೊಳಗಾಸೆ ಎನಗಿಲ್ಲ ಪರಿ
ಪೂರ್ಣ ನೀನೊಲಿದರೆ ಸಾಕಲ್ಲ ೨

ಸುರರ ಭೋಗದಿ ಮನವೆನಗಿಲ್ಲ ಪುಲಿ
ಗಿರಿದೊರೆ ಬಲ್ಲೆ ನೀನಿದನೆಲ್ಲ ೩

೧೭೭

ಕನಸಿನಲಿ ಕಂಡೆನಾ ಶ್ರೀನಿವಾಸನ ಧ್ಯಾನಗೈವಮುನಿ
ಮಾನಸದಲಿ ನಿಧಾನಿಸಿ ನೋಡಲು ಕಾಣದಾತನ ಪ

ಶರದಾಭಗಾತ್ರನ ಶಂಪಾಭೋಜ್ವಲ
ಕರಪೀತವಸ್ತ್ರನ ಸಾರಸಾಕ್ಷನ
ಶರದಿಂದುವಕ್ತ್ರನ ಸಿರಿಯನುರದಿ ತಾನಿರಿಸಿ
ಕರಗಳಿಂ [ಶಂಖ] ಚಕ್ರಗಳನು ಧರಿಸಿರ್ಪಾತನ ೧

ಕಾಮನಂ ಪೆತ್ತನ ಕಾಕುತ್ಸ್ಥನಿಗೆ
ಕಾಮಿತವಿತ್ತನ ಕೌಸ್ತುಭಮಣಿ ಪೊತ್ತನ
ಹೇಮಸೂತ್ರಮಣಿಧಾಮಭೂಷಣ
ಸ್ತೋಮ ದಿವ್ಯಗುಣರಾಮಣೀಯನ ೨

ಸುರವೃಂದಾನಂದದಿ ಸ್ತುತಿಸುತ್ತ ತೂರ್ಯಾರವದಿ
ಬರುತಿರೆ ಸಿತ ಛತ್ರಾದ್ಯುರುತರ ರಾಜಚಿಹ್ನದಿ
ಗರುಡನೇರಿ ನಿಜ ಶರಣರ ಪೊರೆಯುವ
ವರದಪುಲಿಗಿರಿ ವರದವಿಠಲನ ೩

೧೭೮

ಕರುಣದಿ ಕಾಯೋ ಎನ್ನ ಕಾರುಣ್ಯನಿಧಿ
ಕರುಣದಿ ಕಾಯೋ ಎನ್ನ ಪ

ಚರಣಸೇವಕಭಯಹರಣ ಶ್ರೀ ಕೌಸ್ತುಭಾಭರಣ ಸೌಖ್ಯವಿ
ತರಣ ನಿನ್ನಯ ಚರಣಯುಗಳವ ಶರಣುಹೊಕ್ಕೆನು ಅ.ಪ

ಕರ್ಮತಂತ್ರವನುಳಿದು ಕಾಮಿಸಿ ಮನವ
ನಿರ್ಮಲತ್ವವ ತೊರೆದು
ಹಮ್ಮಿನಿಂದಲೆ ಭಕ್ತಿಯುಮ್ಮಳಿಸದೆ ಕಾಮವು
ಹೊಮ್ಮುತಿದೆ ಪರಬೊಮ್ಮ ಮೂರುತಿ ೧

ಸ್ನಾನ ಮೌನವ ತೊರೆದು ಸಂಧ್ಯಾದ್ಯನುಷ್ಠಾನ ನೇಮವ ಮರೆದು
ಮಾನಸಪೂಜಾ ವಿಧಾನವನರಿಯದೆ
ದೀನಜನಸುರಧೇನು ಭಕ್ತರಮಾನನಿಧಿಯಹ ಶ್ರೀನಿವಾಸನೆ ೨

ಶರಣಜನಾವನನೆ ಶಕ್ರಾದಿ ನಿರ್ಜರಕುಲಪಾಲಕನೆ
ಸರಸಿಜ ಸಂಭವ ಪುರಹರ ಸನ್ನುತ ಚರಿತಪೂರಿತ
ದುರಿತ ಸದ್ಗುಣ ಭರಿತ ಪುಲಿಗಿರಿ ವರದ ವಿಠಲ ೩

೧೭೯

ಕರುಣದಿ ಕಾಯೊ ಕರುಣದಿ ಕಾಯೊ ಕಮಲನಯನ ಎನ್ನ ಪ

ಪರಮಪುರುಷ ಹರೆ ಸರಸಿಜನಾಭನೆ ಅ.ಪ

ನೀನೆ ತಂದೆಯು ಎಂದು ಜ್ಞಾನದಿಂದಲಿ ಬಂದು
ಧ್ಯಾನಿಸುವೆನು ಈಗ ೧

ತಾಯಿ ನೀನೇಯೆಂದು ಬಾಯಿಗೆ ಬಂದಂತೆ
ಜೀಯ ನಿನ್ನನು ನೆನೆವೆ ೨

ಜಗದೊಳಗೆಲ್ಲ ನೀನೆ ಸುಗುಣ ಶೀಲನು ಎಂದು
ಮುಗಿಲು ಮುಟ್ಟುತಲಿದೆ ೩

ಸಂಗತಶ್ರಮವನು ಭಂಗವಗೈದ ಭು-
ಜಂಗ ಗಿರಿಯ ವಾಸ ೪

ಲೀಲೆಯಿಂದಲಿ ವ್ಯಾಘ್ರಶೈಲದಲಿರುವ ಶ್ರೀ
ಲೋಲ ವರದವಿಠಲ ೫

೧೮೦

ಕರುಣದಿ ರಕ್ಷಿಸು ಎನ್ನನು ಪುಲಿ
ಗಿರಿಲೋಲ ನಂಬಿದೆ ನಿನ್ನನು ಪ

ಕರುಣದಿ ರಕ್ಷಿಸು ಚರಣಸೇವಕಭಯ
ಹರಣ ಸೌಖ್ಯ ವಿತರಣ ನಿನ್ನಯ
ಚರಣಯುಗಳದಿ ಶರಣು ಹೊಕ್ಕೆನು ಅ.ಪ

ಯತಿಗಣ ನೇಮವನರಿಯದ ಸ್ವರ
ಗತಿ ತಾಳ ಲಯ ಬಂಧ ತಿಳಿಯದ

ಶ್ರುತಿನುತ ನಿಮ್ಮನು ಪೊಗಳದ ನಿಮ್ಮ
ಶ್ರುತಿಗಳ ಮಹಿಮೆಯ ಕೇಳದ
ಮತಿಹೀನನಾದೆನ್ನ ಮತಿಗೆ ಗೋಚರನಾಗಿ
ಶ್ರುತಿಗೋಚರ ನಿಮ್ಮ ಸ್ತುತಿಯ ಅನುಭವವಿತ್ತು
ಪತಿತಪಾವನ ಪುಲಿಗಿರೀಶನೆ ಪತಿತನುದ್ಧರಿಪಂತೆ
ಗತಿವಿಹೀನಗೆ ಪಥವ ತೋರಿಸಿ ಸದ್ಗತಿಯ ಪಾಲಿಸುವಂತೆ
ಗತಿಮತಿಗಳೇನೇನು ಅರಿಯದ
ಪತಿತನೆನ್ನನು ಭವಜಲಧಿ ಮಧ್ಯದಿ ೧

ಕುರುರಾಯ ಕೌರವ ಸಭೆಯಲಿ ಭೀಷ್ಮ
ಗುರುದ್ರೋಣ ಕೃಪರ ಮುಂದಡೆಯಲ್ಲಿ
ಧುರಧೀರ ಪಾಂಡವರಿದಿರಲ್ಲಿ ಬಲು
ದುರುಳ ದುಶ್ಯಾಸನನ ಕೈಯಲ್ಲಿ
ತರುಣಿ ಪಾಂಚಾಲಿಯ ಕರೆಸಿ ಸೀರೆಯ ಸೆಳೆದು
ಕರೆಕರೆ ಪಡಿಸಲೆಂದೆನುತಲುಜ್ಜುಗಿಸಲು
ಪರಮಾತ್ಮ ಪರಿಪೂರ್ಣ ಕರುಣಾಳು ನಿನ್ನನೇ
ಮರೆಹೊಕ್ಕೆ ಪೊರೆಯೆಂದು ಮೊರೆಯಿಡಲಾಕ್ಷಣ
ತರುಣಿಗಕ್ಷಯವಸನವಿತ್ತಾ
ಶರಣಜನ ಸಂಸಾರ ಶ್ರೀಹರಿ ೨

ಕರಿರಾಜ ನಕ್ರನ ಬಾಯೊಳು ಸಿಲುಕಿ
ನರಳಿ ಸಾವಿರವರುಷ ಜಲದೊಳು
ಶರಣರ ಕಾಣದೆ ಜಗದೊಳು ನಿನ್ನ
ಸ್ಮರಣೆ ಮಾಡುತ ದೃಢಮನದೊಳು
ಪರಮಪುರುಷ ಪುರುಷೋತ್ತಮ ನಿರುಪಮ
ಪರಮೇಶವಂದ್ಯ ಪರಾತ್ಪರ ಪುಲಿಗಿರಿ
ದೊರೆಯೆ ಕರುಣಿಸೆನ್ನುತ ಕರಿ ಮೊರೆಯಿಡಲಾ

ಕರುಣದಿಂ ಮೊರೆ ಕೇಳಿ ಗರುಡನ ಪೆಗಲೇರಿ ಸಾರಿ
ಕರದಚಕ್ರದಿ ಸೀಳಿ ನಕ್ರನ
ಕರಿಯಪೊರೆದಾ ವರದವಿಠಲ ೩

೧೮೧

ಕೊಡುಕೊಡು ವರವನು ತಡವು ಮಾಡದೆ ಎ
ನ್ನೊಡೆಯ ಶ್ರೀಹರಿ ಕೃಪೆ ಮಾಡಯ್ಯ ಪ

ಬಿಡದಿರೆನ್ನನು ಜಗದೊಡತಿಯಾಣೆ ನಿ
ನ್ನಡಿಗಳನೆಂದಿಗೂ ಬಿಡೆನಯ್ಯಾ ಅ.ಪ

ಕ್ಷಿತಿಯೊಳಗತಿಶಯ ಪತಿತ ಪಾವನ ಶ್ರೀ
ಪತಿ ನೀಗತಿ ಎನುತಿಹೆನಯ್ಯ
ರತಿಪತಿಪಿತನೆ ಸುಮತಿಯನು ಪಾಲಿಸಿ
ಗತಿಯನು ತೋರಿಪುದೆನಗಯ್ಯ ೧

ನಿನ್ನ ಪದವ ನಂಬಿ ನಿನ್ನವನೆನಿಸಿದ
ಎನ್ನನುಪೇಕ್ಷಿಪರೇನಯ್ಯ
ಸನ್ನುತ ನಿನ್ನನು ಮನ್ನಿಸಿ ಕೇಳುವ
ಬಿನ್ನಪವಿನಿತೆ ಕೇಳಯ್ಯ ೨

ಎಲ್ಲರ ಹೃದಯದೊಳಲ್ಲಿ ನೆಲೆಸಿರುವ
ಫುಲ್ಲನಯನ ನೀ ಪೇಳಯ್ಯ
ಕಲ್ಲುಮನದಿ ನೀನೊಲ್ಲದೊಡೀ ಜಗ
ದಲ್ಲಿ ಪೋಪುದಿನ್ನೆಲ್ಲಯ್ಯ ೩

ಪತಿಯಗಲಿದ ಪತಿವ್ರತೆಗೆ ಇತರರಲಿ
ರತಿ ಸಂಜನಿಸುವದೇನಯ್ಯ
ಗತಿಪತಿಯೆಲ್ಲರಪತಿ ನೀನೆನ್ನುತ
ಶ್ರುತಿನುತಿಪುದು ಪುಸಿಯೇನಯ್ಯ ೪

ಜಗದೊಳು ನಿನ್ನನೆ ಸುಗುಣೆಯು ಎನ್ನುತ
ನಿಗಮವು ಪೊಗಳುತಲಿಹುದಯ್ಯ
ಖಗಪತಿಗಮನನೆ ಬಗೆ ಬಗೆಯಲಿ ರತಿ
ಸೊಗಯಿಸು ನಿನ್ನೊಳು ಎನಗಯ್ಯ ೫

ಸೃಷ್ಟಿನಾಥಪದ ವಿಷ್ಟರ ಭಕ್ತಿಯ
ಕೊಟ್ಟರಭೀಷ್ಟವು ಎನಗಯ್ಯ
ಇಷ್ಟರ ಮೇಲಿನ್ನು ಲಕ್ಷ ಕೊಟ್ಟರೂ ಎನ
ಗಿಷ್ಟವಲ್ಲ ಶ್ರೀ ಕೃಷ್ಣಯ್ಯ ೬

ಚರಣಕಮಲದೊಳಗೆರಗುವೆ ಪುಲಿಗಿರಿ
ವರದವಿಠಲ ದಯೆಯಿರಿಸಯ್ಯ
ಚರಣಶರಣನಿಗೆ ಕರುಣಿಸದಿದ್ದರೆ
ಕರುಣಿಗಳರಸರಿನ್ನಾರಯ್ಯ ೭

೧೮೨

ಕ್ಷಮಿಸೆನ್ನ ದೋಷಗಳ ಕ್ಷಿಪ್ರದಿ ಹರಿ ಪ

ಕ್ಷಮೆಯನ್ನು ಧರಿಸಿದ ಕಮಲಾನಿವಾಸನೆ ಅ.ಪ

ಕರಣತ್ರಯದಿಕಾಲಹರಣವಿಲ್ಲದೆ ಪಾಪಾ
ಚರಣೆಯಿಂ ದೋಷದ ಭರಣಿಯಾದೆನು ಹರಿ ೧

ಮಾಡಬಾರದ ಪಾಪ ಮಾಡುವೆನನುದಿನಸ
ಮೂಢನ ಸುಕೃತವನಾಡಿ ತೋರಿಸಲೇಕೆ ೨

ಹರಿಗುರುಹಿರಿಯರ ಜರಿದು ಸಜ್ಜನರನು
ತೊರೆದು ದುರ್ಜನರೊಳು ಬೆರೆದು ಪಾಮರನಾದೆ ೩

ಸರ್ವಸಹಾಧಿಪ ಸರ್ವಚೇತನದೀಪ
ಸರ್ವಾಪರಾಧವ ನಿರ್ವಹಿಸುವ ಭೂಪ ೪

ದುರಿತವೈರಿಯೆ ನಿನ್ನ ಮರೆಹೊಕ್ಕ ಮನುಜಗೆ
ದುರಿತ ದುಃಖಗಳುಂಟೆ ವರದವಿಠಲರಾಯ ೫

೧೮೩

ತನುವೆನ್ನದು ಚೇತನವೆನ್ನದು ಎಂದು
ಅನುದಿನ ಪೋಷಣೆಯನು ಮಾಡಿದೆ ಹರಿ ಪ

ಚಿನುಮಯ ನಿನ್ನನು ನೆನೆವೆನೆಂದರೆ ಮನ
ತನುಮಧ್ಯೆಯರ ತನುವಿನೊಳಿರುತಿಹುದು
ಅನಘ ನಿನ್ನನು ನೋಡುವೆ ನಾನೆನ್ನಲು ದೃಷ್ಟಿ
ಕನಕಾಂಗಿಯರ ಕುಂಭಸ್ತನದ ಮೇಲಿಹುದಯ್ಯ ೧

ಚರಣದ ಪೂಜೆಯೊಳಿರುವೆನೆಂದರೆ
ಕರವರೆಡು ಕೋಮಲೆಯರನರಸುವುವು
ಹರಿಕಥಾಶ್ರವಣದೊಳಿರೆ ಈ ಕಿವಿಗಳು
ಹರಿಣಾಕ್ಷಿಯರ ಕಂಠಸ್ವರಕೆ ಮೋಹಿಪವಯ್ಯ ೨

ದುರಿತದೂರನ ನಾಮ ಸ್ಮರಿಸದು ನಾಲಿಗೆ
ಸರಸಿಜಾಕ್ಷಿಯರೊಳು ಸರಸೋಕ್ತಿ ಪಡೆದು
ಚರಣಶ್ರೀತುಳಸಿಯನರಿಯದೆ ನಾಸಿಕ
ತರುಣಿಯ ಮೈಗಂಪನರಸಿ ಹಿಗ್ಗುವದಯ್ಯ ೩

ನಿನ್ನಂಘ್ರಿಗೆರಗದೆ ಕುನ್ನಿಶರೀರವಿ
ದುನ್ನುತಸ್ತನವುಳ್ಳ ಕನ್ನೆಯರೊಳ್
ತನ್ನ ಸುರತಸುಖವನೆ ಚಿಂತಿಸುವದು
ಎನ್ನಾಧೀನದೊಳಿಲ್ಲ ನೀನೆ ಬಲ್ಲೆ ೪

ಎರವಿನ ಸಿರಿಯಂತೆ ಕರಣಕಳೇವರ
ಬರಿದೆ ನನ್ನದು ಎಂದು ಮೆರೆದೆ ನಾನು
ಹರಿ ನಿನ್ನದೇ ಸರಿ ದುರಿತಸುಕೃತಕೆನ್ನ
ಗುರಿಮಾಡದೆ ಕಾಯೋ ವರದವಿಠಲ ಕೃಷ್ಣ ೫

೧೮೪

ನಾರಾಯಣ ನಿನ್ನ ಪಾರಾಯಣಗೈವ
ಧೀರತನವ ಪಾಲಿಸೋ ಪ

ಪಾರವಿಲ್ಲದ ಭವಪಾರಾವಾರದೊಳೊಂದು
ತೀರಕೆನ್ನನು ಸೇರಿಸೋ ಅ.ಪ

ನಿನ್ನ ಕಿಂಕರಭಾವವನ್ನು ಮರೆತು ನಾನಾ
ಜನ್ಮದಿ ತೊಳಲುತ ಖಿನ್ನನಾಗಿ
ನಿನ್ನ ದಯದಿ ನರಜನ್ಮದಿ ಜನಿಸಿದೆ
ವರ್ಣಶ್ರೇಷ್ಠಕುಲದಿ ಬಹುಪುಣ್ಯದಿ
ಇನ್ನು ಪುನರಪಿ ಜನ್ಮವಿಲ್ಲ
ನಿನ್ನ ಕಿಂಕರನನ್ನು ಸೇರಿಸಿ
ಘನ್ನ ಮಹಿಮನೆ ನಿನ್ನ ಸೇವೆಯೊ
ಳುನ್ನತದ ರತಿಯನ್ನು ಪಾಲಿಸಿ ೧

ಅಷ್ಟಯೋನಿಗಳಲ್ಲಿ ಹುಟ್ಟಿ ಸಾಯುತ ಬಲು
ಕೆಟ್ಟಕರ್ಮವ ಮಾಡಿ ಕಷ್ಟಪಟ್ಟು
ಎಷ್ಟು ನಿನಗೆ ಮೊರೆಯಿಟ್ಟು ಬೇಡಲು ಎಳ್ಳಿ
ನಷ್ಟು ಕಾರುಣ್ಯವು ಪುಟ್ಟದೇನೋ
ಸೃಷ್ಟಿಗೈಯ್ಯುವೆ ಪುಷ್ಟಿಗೈಯ್ಯುವೆ
ಕಟ್ಟಕಡೆಯೊಳು ನಷ್ಟಪಡಿಸುವೆ
ಸೃಷ್ಟಿಯೊಳು ಜೊತೆಗಟ್ಟಿ ನೋಡುವ
ದಿಟ್ಟರಾರೈ ಇಷ್ಟ ಮೂರುತಿ ೨

ಧರೆಯ ರಾಜ್ಯವನೊಲ್ಲೆ ಸಿರಿಯ ಸಂಪದವೊಲ್ಲೆ
ಸುರರು ಭೋಗಿಪ ಸುರಪುರವಾನೊಲ್ಲೆ
ಪರಮೇಷ್ಟಿ ಪುರದೊಳಗಿರಲಾನೊಲ್ಲೆನು ನಿನ್ನ
ಹೊರತಾದ ಕೈವಲ್ಯಸ್ಥಿರವೊಲ್ಲೆನು
ನಿರುತ ನಿನ್ನಯ ಚರಿತೆಯಲಿ ಮನ
ವಿರಲಿ ನಾನಾತೆರದ ಭಕ್ತಿಯೊಳು
ಇರಲಿ ಎನ್ನಯ ಕರಣವೃತ್ತಿಯು
ಪರಮ ಪುಲಿಗಿರಿ ವರದವಿಠಲ ೩

೧೮೫

ನಾರಾಯಣ ರಕ್ಷಿಸೋ ನಮ್ಮನು ಲಕ್ಷ್ಮೀ
ನಾರಾಯಣ ರಕ್ಷಿಸೋ ಪ

ಪಾರರಹಿತ ಭವಪಾರಾವಾರದಿ ಬಲು ಘೋರತಾಪವು
ಮೀರಿತೋ ಭವದೂರ ನಿತ್ಯೋದಾರ ಕರುಣದಿ ಅ.ಪ

ಶ್ರೀಶ ನಿನ್ನರ್ಚಿಸದೆ ಶ್ರೇಯಸ್ಸುಖ
ದಾಶೆಯನೇ ತೊರೆದೆ ಕೋಶ ಕಳತ್ರ ನಿವೇಶ ತನುಜ ಮಾಯಾ
ಪಾಶದೊಳಗೆ ಶಿಲ್ಕಿ ಗಾಸಿಯಾದೆನು ಜಗದೀಶ ನಿಖಿಲಸು
ರೇಶ ಕಮಲಫಲಾಶನಯನ ದಿ
ನೇಶಶತ ಸಂಕಾಶ ವ್ಯಾಘ್ರಗಿರೀಶ ಭವಭಯ
ಪಾಶ ಹರಪರಮೇಶ ವಂದಿತ ೧

ದೇಹಾಭಿಮಾನದಲ್ಲಿ ತೀವಿದ ಭೂತ
ದ್ರೋಹವನಾಚರಿಸುತಲಿ
ಸೋಹಮೆಂಬುವ ಬಲು ಮೋಹದಿ ಸಿಲುಕಿ ದಾ
ಸೋಹಮೆನ್ನದೆ ದೈವ ದ್ರೋಹಿಯಾದೆನು ವಿದೇಹಜಾವರಿ
ಗೂಹ ನೋಚಿತದೇಹ ವಿಜಿತ ವಿ
ದೇಹ ಖಗವರವಾರಶುಭಪರಿವಾಹ ನಿಖಿಲ ನಿ
ರೀಹ ಲೋಕವಿಮೋಹನಾಚ್ಯುತ ೨

ಗುರುಹಿರಿಯರ ಮರೆದು ಗರ್ವದಿ ಧರ್ಮಾವ
ಚರಣೆಯ ನೆರೆತೊರೆದು
ದುರುಳರ ಸಂಗದಿ ಜರಿದು ಸಜ್ಜನರನು
ಜರಿದು ದುರ್ಗತಿಗೆ ನಾ
ಗುರಿಯಾದೆನು ಹರಿ ಪರಮಪುರುಷ ಪಾವನ
ಚರಣ ಸುಗುಣಾ ಭರಣ ದೀನೋ
ದ್ಧರಣ ಭವ ಸಂಹರಣವಿಶ್ವಂ
ಭರಣ ಪುಲಿಗಿರಿ ವರದವಿಠಲ ೩

೧೮೬

ನಿನ್ನ ದಾಸರದಾಸ ನಾನಯ್ಯ ಹರಿ ಎನ್ನನುಪೇಕ್ಷಿಪರೇನಯ್ಯ ಪ

ಕಾಮಕ್ರೋಧಗಳಿನ್ನೂ ಬಿಡಲಿಲ್ಲ ನಿನ್ನ
ಪ್ರೇಮವೆನ್ನೊಳು ಕಾಲಿಡಲಿಲ್ಲ
ನೇಮ ನಿಷ್ಠೆಗಳನು ಕೊಡಲಿಲ್ಲ ಭವ
ತಾಮಸ ಬೀಜವ ಸುಡಲಿಲ್ಲ ೧
ಆಚಾರದಲಿ ಕಾಲಗತಿಯಿಲ್ಲ ಬಲು
ನೀಚರ ಸಂಗಕೆ ಮಿತಿಯಿಲ್ಲ
ಪ್ರಾಚೀನಕರ್ಮಕೆ ಚ್ಯುತಿಯಿಲ್ಲ ಇದ
ಗೋಚರಪಡಿಸುವ ಮತಿಯಿಲ್ಲ ೨

ದೇಹದಿ ಬಲವಿಲ್ಲವಾದರೂ ವ್ಯಾ
ಮೋಹವು ಬಿಡದಲ್ಲವಾದರೂ
ಗೇಹದಿ ಸುಖವಿಲ್ಲದಿದ್ದರು ಈ
ಸೋಹಮೆಂಬುದಕಿಲ್ಲ ಬೇಸರು ೩

ದಾಸರ ಸಂಗದೊಳಾಡಿಸು ಹರಿ
ವಾಸರವ್ರತದೊಳು ಕೂಡಿಸು
ವಾಸುದೇವ ನಿನ್ನ ಪಾಡಿಸು ಸಿರಿ
ವಾಸನಾಮದ ಸವಿಯೂಡಿಸು ೪

ಶರಣವತ್ಸಲನಹುದಾದರೆ ಘನ
ಕರುಣಾರಸನಿನಗುಳ್ಳರೆ
ಕರುಣಿಸು ಪುಲಿಗಿರಿವಾಸ ಹರೆ
ಸಿರಿವರದವಿಠಲ ನೀನೆ ನಮ್ಮ ದೊರೆ ೫

೧೮೭

ನೀನುಳಿಯೆ ರಕ್ಷಕರ ಕಾಣೆನೀ ಜಗದೊಳಗೆ
ಶ್ರೀನಿವಾಸ ಜಗನ್ನಿವಾಸ ಪ

ದೀನರಕ್ಷಕ ನಿಖಿಲ ಮಾನವರ ಮಾನಾಭಿ
ಮಾನದೊಡೆಯನು ನೀನೆಯಲ್ಲದಿಲ್ಲಾ ಅ.ಪ

ನಕ್ರಮುಖದಲ್ಲಿ ಸಿಕ್ಕಿ ದುಃಖಿಸುವ ಕರಿರಾಜ
ಚಕ್ರವರ್ತಿಯು ಶರಣುಹೊಕ್ಕೆನೆನಲು
ಚಕ್ರವನು ಪಿಡಿದು ನೀನಕ್ಕರೆಯೊಳೈತಂದು
ನಕ್ರವದನವ ಸೀಳಿ ರಕ್ಷಿಸಿದೆ ಗಜವಾ ದೇವಾ ೧

ಹಿಂದೆ ನಾನಾ ನಗರಿಯಿಂದ ಬಹದಾರಿಯೊಳು
ಸಂದುಗಳೀಚಲು ಭಂಡಿ ಸಂಜೆಯೊಳಗೆ
ಮುಂದಾಗ ಜೊತೆಯೊಳಗೆ ಬಂಧುಜನದಲ್ಲಿ ನೀ
ಬಂದು ಬೆಳಕನು ತೋರಿ ಮುಂದೆಗೂಡಿದೆ ಕೃಷ್ಣಾ ೨

ಇಂದು ನಿಜಸತಿಯು ನೊಂದಳುಬ್ಬಸರೋಗ
ದಿಂದ ಗಾಳಿಯದೀಪದಂದಮಾಗಿ
ನಂದಿ ಪೋಗದ ಮುನ್ನ ಬಂದು ನೀಮರೆಯಾಗು
ಎಂದು ಮೊರೆಯಿಡಲಾಗ ಬಂದು ಸಲಹಿದೆ ತಂದೆ ೩

ಗುರುಸುತನ ಸಂಯಮದೀ ಪುರದಿಂದ ತಂದಿತ್ತೆ
ತುರುಗಾಯ್ದರಸುಗಳನು ಮರಳಿ ಪಡೆದೆ

ನರಪೌತ್ರನ ಬಾಣದುರಿಯಿಂದ ರಕ್ಷಿಸಿದೆ
ಸರಿಯಾರು ನಿನಗೆ ಸುರನರಭುಜಂಗರಲ್ಲಿ ೪

ತರಳಧ್ರುವ ಪ್ರಹ್ಲಾದ ತರುಣಿ ಪಾಂಚಾಲಿ
ಕರು ವರವಿಭೀಷಣ ತಾಪಸರನು ಪೊರೆದೆ
ಶರಣರನು ಪಾಲಿಸುವ ಬಿರುದು ಧರಿಸಿಹ ವ್ಯಾಘ್ರ
ಗಿರಿಯೊಳಗೆ ನೆಲೆಸಿರುವ ವರದವಿಠಲರಾಯ ೫

೧೮೮

ನೀನೆಗತಿ ಎನಗೆ ನೀರಜ ನೇತ್ರ
ನಿನ್ನ ಪಾದಂಗಳ ನಂಬಿದೆ ಕೊನೆಗೆ ಪ

ಶ್ರುತಿಹಿತ ಧರ್ಮವಿಶ್ರುತ ನಾನಲ್ಲ
ಸತತವು ಜ್ಞಾನಿಯ ಜೊತೆ ಸೇರಲಿಲ್ಲ ೧

ಭಕ್ತಿಪಥದಿ ಮನವರ್ತಿಸಲಿಲ್ಲ
ಯುಕ್ತಿಯಿಂ ವಿಷಯ ವಿರಕ್ತನಾನಲ್ಲ ೨

ಗುರುಕುಲವಾಸದ ಗುರುತೆನಗಿಲ್ಲ
ಪರಮ ಭಾಗವತರ ಪರಿಚರ್ಯವಿಲ್ಲ ೩

ಮಂತ್ರಾರ್ಥದ ಬೋಧೆ ಮನದೊಳಗಿಲ್ಲ
ತಂತ್ರದೊಳಗೆ ಜಾಣ್ಮೆ ಎನಗಿನಿತಿಲ್ಲ ೪

ಸಜ್ಜನ ಸಹವಾಸದುಜ್ಜುಗವಿಲ್ಲ
ದುರ್ಜನರ ಸಂಗತಿ ವರ್ಜಿಸಲಿಲ್ಲ ೫

ಹರಿಕಥೆ ಮಾಡುವ ಪ್ರಜ್ಞೆನನಗಿಲ್ಲ
ದುರುಳ ಕಾಮುಕಸಂಗ ಕಿರಿದಾಗಿಲ್ಲ ೬

ಪರಿಪರಿ ಕಷ್ಟವ ಪರಿಹರಿಸುವನೆ
ಪರಮಶ್ರೀಪುಲಿಗಿರಿ ವರದವಿಠಲನೆ ೭

೧೮೯

ಪಾದಸೇವೆಯ ಪಾಲಿಸೋ ಪಂಕಜನಾಭ ಪ

ಪಾದಸೇವೆಯ ತೋರೋ ವೇದಗೋಚರ ವ್ಯಾಘ್ರ
ಭೂಧರ ವಿಹರಣ ಶ್ರೀಧರ ಹರಿ ನಿನ್ನ ಅ.ಪ

ಶೇಷವಾಯುಗಳತಿದೋಷವರ್ಜಿಸಿ ತನು
ಶೋಷಿಸಿ ತಪನ ವಿಶೇಷವಾಚರಿಸೆ
ದೋಷರಹಿತ ಗುಣಭೂಷಾ ಶೇಷನಿಗೊಲಿದು
ಶೇಷಪರ್ವತ ಶಿರೋಭೂಷಣನೆನಿಸಿದ ೧

ಬಲಿಚಕ್ರವರ್ತಿಯು ಬಲವೈರಿಯನು ಬಲು
ಬಳಲಿಸಿ ರಾಜ್ಯವ ಛಲದಿಂದಾಕ್ರಮಿಸೆ
ನಲಿದು ವಾಮನನಾಗಿ ಬಲಿಯ ದಾನವ ಬೇಡಿ
ನೆಲನ ಈರಡಿ ಮಾಡಿ ಬಲಿಯ ಮೆಟ್ಟಿದ ಧೀರ ೨

ಪಲಕಾಲ ಶಾಪದಿ ಶಿಲೆಯಾಗಿದ್ದ ಗೌತಮ
ಕುಲಸತಿಗೊಲಿದು ನಿರ್ಮಲ ತಪೋವನಕೆ ಸುಳಿದು ಆ
ಲಲನೆಯ ಕಲುಷವ ಖಂಡಿಸಿ
ಲಲನಾರೂಪವನಿತ್ತು ಸಲಹಿದ ಪಾವನ ೩

ತರಣಿತನಯನೆಚ್ಚ ಗರಳಶರವು ಬೇಗ
ನರನುತ್ತಮಾಂಗಕೆ ಗುರಿಯಾಗಿ ಬರಲು
ಚರಣದುಂಗುಟದಿಂದ ಧರಣೀತಳವನೂರಿ
ನರನ ಶಿರವ ಕಾಯ್ದ ನರನಾರಾಯಣ ನಿನ್ನ ೪

ಪುಲಿನಾಮದಸುರನು ಛಲದಿ ಮಾಂಡವ್ಯನ
ಗಳವಪಿಡಿದು ಬಾಧೆಗೊಳಿಸೆ ವೇಗದಲಿ
ಪುಲಿಗೆ ಮೋಕ್ಷವನಿತ್ತು ಪುಲಿಗಿರಿಯಲಿ ಮುನಿ
ಕುಲಜ ಮಾಂಡವ್ಯಗೆ ಒಲಿದ ವರದವಿಠಲ ನಾರಾಯಣ ೫

೧೯೦

ಪಾಲಿಸೆನ್ನ ಶ್ರೀಲೋಲ ಕೃಪಾಳು ಪ

ಬಾಲಕನುಕ್ತಿಯ ಲಾಲಿಸಿ ಕೇಳೀ ಅ.ಪ

ಕಾರಾಗಾರ ಶರೀರದಾಯಗಳ
ದಾರಾ[ಧಿ]ಪತ್ಯದ ದಾರಿಯನಿ[ತು]ಗಳ ೧

ಆರುಮಂದಿ ಬಲುಶೂರರು ಖಳರು
ಚೋರರು ಚಿತ್ತವ ಹಾರಿಸುತಿಹರು ೨

ತನುಸಂಬಂಧದ ಜನರರ್ಥಿಯಲಿ
ಕೊನೆವರು ದುರ್ಮೃಗವನು ಪೋಲುತಲಿ ೩

ತಾಪತ್ರಯ ಪರಿತಾಪದ ಬೇಗೆ
ಈ ಪರಿಮೋಚನ ಶ್ರೀಪತಿ ಹೇಗೆ ೪

ಕರುಣದಿ ಶ್ರೀಪುಲಗಿರಿಯೊಳಿರುವನೆ
ಶರಣರಪೊರೆಯುವ ವರದ ವಿಠಲನೆ ೫

೧೯೧

ಬಂದೆ ಗೋವಿಂದ ನಿನ್ನ ಸನ್ನಿಧಿಗೆ ಮುದ
ದಿಂದ ಕಾಣಿಕೆಯನು ತಂದೆ ನಿನ್ನಡಿಗೆ ಪ

ನಾರಾಯಣನೆಂಬ ಚೋರ ದುಷ್ಕೃತಂಗಳ
ಹಾರಿಸಿಕೊಳ್ಳುವ ಶೂರನೆಂದು
ದೂರ ಕೇಳುತ ಬಹುಬಾರಿಪಾಪಂಗಳ ಸೇರಿಸಿ
ತಂದೆ ಮುರಾರಿ ವಿಚಾರಿಸಿ ೧

ಇಲ್ಲದ ವಸ್ತುವಿಗಲ್ಲದೆ ಲೋಕದೊ
ಳೆಲ್ಲರ ಮಾನಸರುಲ್ಲಾಸವೂ
ಫುಲ್ಲನಾಭನೆ ನಿನ್ನೊಳಿಲ್ಲ ದೋಷಗಳೆಂದು
ನಿಲ್ಲದೆ ದುರಿತಗಳೆಲ್ಲ ಸೇರಿಸಿಕೊಂಡು ೨

ಪರಮಪುರುಷ ನಿನ್ನ ಚರಣದ ಸೇವೆಗೆ
ಬರಿಕೈಯೊಳೆಂದಿಗು ಬರಲಾಗದೆಂದು
ಪರಿಪೂರ್ಣ ನಿನ್ನೊಳಗಿರದ ವಸ್ತುಗಳನ್ನು
ಪರಿಕಿಸಿ ತಂದೆನ್ನೈ ವರದವಿಠಲ ಹರಿ ೩

೧೯೨

ಬಾರೋ ಮನೆಗೆ ಭಾಗವತರ ಭಾಗದೇಯನೆ
ಚಾರುವದನ ತಾಮರಸವ ತೋರು ಪ್ರೀಯನೆ ಪ

ಹಗಲು ಇರುಳು ನೆನಹು ಬಿಡದು ಸುಗುಣ ಸುಂದರ
ಬಗೆಯೊಳಿನ್ನ ಮರೆಯಬಹುದೆ ನಿಗಮಗೋಚರ ೧

ಕಣ್ಣಿನಿಂದ ನಿನ್ನ ನೋಡಿ ಧನ್ಯನಾಗುವೆ
ನಿನ್ನ ಚರಣಕೆನ್ನ ಶಿರದಿ ಮುನ್ನಬಾಗುವೆ ೨

ನಿತ್ಯತೃಪ್ತನಿನಗೆ ನಾನೇ ಭೃತ್ಯನಾಗುವೆ
ನೃತ್ಯಗೈದು ಪಾಡಿ ಕೃತಕೃತ್ಯನಾಗುವೆ ೩

ಶ್ರೀನಿವಾಸ ನಿನ್ನ ದಾಸ ನಾನೇನಲ್ಲವೆ
ಮಾನಪ್ರಾಣಗಳಿಗೆ ದೊರೆಯು ನೀನೆಯಲ್ಲವೆ ೪

ಶರಣ ಜನರ ಭರಣಗೈವ ಕರುಣಿಯಾರೆಲಾ
ಹರಣ ಹರಧರದೊಳಿರುವ ವರದ ವಿಠಲಾ ೫

೧೯೩

ಬಿಡಲಾರೇ ಬಿಡಲಾರೇ ಪ

ಕಡಲೊಳು ಪವಡಿಪ ಮೃಡನುತನಾಮನ ಅ.ಪ

ಕಾಶಿಯೊಳಗೆ ವಿಶ್ವೇಶನು ಬೋಧಿಪ
ದಾಶರಥಿಯ ವರ ಸಾಸಿರ ನಾಮವ ೧

ಗೌರವದಿಂದಲಿ ಗೌರಿಯು ಜಪಿಸುವ
ಗೌರನೆನಿಪದುರಿತಾರಿಯ ನಾಮವ ೨

ಭಕ್ತರು ಸಕಲ ವಿರಕ್ತರು ನಿತ್ಯದಿ
ರಕ್ತಿಪಡುವ ಗುಣಯುಕ್ತನ ನಾಮನ ೩

ಇಷ್ಟದಿ ನೆನೆವರ ಕಷ್ಟವಳಿದು ಮನ
ದಿಷ್ಟ ಕೊಡುವ ಪರಮೇಷ್ಠಿಯ ನಾಮವ ೪

ಚರಣವ ನಂಬಿದ ಶರಣರ ಪೊರೆಯುವ
ವರದವಿಠಲ ದೊರೆ ವರದನ ನಾಮವ ೫

೧೯೪

ಮನೆಗೆ ಬಾರೋ ರಂಗ ಮನಸಿಜಯ್ಯನೆ
ನೆನವು ಬಿಡದು ಎನ್ನ ಕಣ್ಣಿನೊಳಗೂ ನಿನ್ನ ಪ

ಮನಗೆ ಬಾರೋ ರಂಗ ಮನೆಗೆ ಬಾರೋ ಕೃಷ್ಣ
ಮನಗೆ ಬಾರೋ ರಾಮ ಅ.ಪ

ಮನಗೆ ಬಂದರೆ ನಿನ್ನ ಮಹಿಮೆಯ ಪಾಡುತ
ಮನ ದಣಿವಂದದಿ ಕುಣಿದೇನೊ ರಂಗಯ್ಯ ೧

ಮನೆಯು ನಿನ್ನದು ಎನ್ನ ತನುವು ನಿನ್ನದು ಮುನ್ನ
ಧನವು ನಿನ್ನದು ಎನ್ನ ಘನವು ನಿನ್ನದು ರನ್ನ ೨

ದರಹಸಿತಾನನ ಸರಸಿಜನಯನ
ವರದವಿಠಲ ಪುಲಿಗಿರಿ ವರಸದನ ೩

೧೯೫

ಯಾಕೆ ಕಳವಳವೋ–ಮಾನಸ ನಿನಗ್ಯಾಕೋ ಕಳವಳವೋ ಪ

ಶ್ರೀಕಲತ್ರನು ಜಗದೇಕನಾಯಕನಿರಲ್ಯಾಕೆ ಅ.ಪ

ಹೊಟ್ಟೆಯೊಳಿರನ್ನವಿಟ್ಟು ಕಾಪಾಡಿದ
ಸೃಷ್ಟಿ ಪಾಲಕ ಪರಮಷ್ಠಿ ಜನಕನಿರಲು ೧

ಬಾಲನಾಗಿರೆ ಮೊಲೆಪಾಲ ನಿರ್ಮಿಸಿ ಪರಿ
ಪಾಲಿಸಿದವ ಸಿರಿಲೋಲನಲ್ಲವೆ ೨

ಲೋಪವಿಲ್ಲದೆ ಕಾಯ್ವ ಶ್ರೀಪತಿ ಪುಲಿಗಿರಿ
ಭೂಪ ವರದವಿಠಲಾಪದ್ರಕ್ಷಕನಿರಲು ೩

೧೯೬

ಯಾಕೆ ಕೃಪೆ ಬಾರದೋ ನಿನಗ್ಯಾಕೆ ದಯಬಾರದೊ ಪ

ಲೋಕರಕ್ಷಕ ದುಷ್ಟಕಾಲಶಿಕ್ಷಕ ನಿನಗ್ಯಾಕೆ ಅ.ಪ

ಪಕ್ಷಿವಾಹನನೆನಿಸಿ ಲಕ್ಷಿಸದಿರಲು ಲೋಕದಿ
ಲಕ್ಷಣವೆಲ್ಲವು ಶುಭಲಕ್ಷಣ ಮೂರುತಿ ನಿನಗ್ಯಾಕೇ ೧

ಕುಕ್ಷಿಯೊಳೀ ಜಗವನಿಟ್ಟು ರಕ್ಷಿಸುವ ಲಕ್ಷ್ಮೀಪತಿ
ದಕ್ಷಿಣ ಶೇಷಾದ್ರಿವಾಸ ರಕ್ಷಿಸು ನಿನಗ್ಯಾಕೇ ಕೃಪೆ ೨

ವಾಸವಸನ್ನುತ ಶ್ರೀನಿವಾಸ ನಿನ್ನದಾಸನೊಳು
ದೋಷವನೆಣಿಸದೆ ಕಾಯೊ ದೋಷರಹಿತನೆ ನಿನಗ್ಯಾಕೆ ೩

ಸೃಷ್ಟೀಶ ನಿನ್ನ ಶುಭ ದೃಷ್ಟಿಯಿಂದ ನೋಡಿ ಎನ್ನ
ಕಷ್ಟವ ಬಿಡಿಸಿ ಮನದಿಷ್ಟವ ಪಾಲಿಸು ೪

ವಾರಣವರದಭವ ತಾರಣ ಚರಣ ಗುಣ ಪು
ರಾಣ ವರದವಿಠಲ ಕಾರುಣಿಕರರಸ ನಿನಗ್ಯಾಕೇ ೫

೧೯೭

ಶ್ರೀನಿವಾಸ ನಿನ್ನ ಪಾದಧ್ಯಾನವ ಪಾಲಿಸಿ ಎನ್ನ
ಮಾನಸಾನಂದಿಸೋ ಶತಭಾನುತೇಜನೆ ಪ

ಸಾನುರಾಗದಿಂದ ನಿನ್ನ ಧ್ಯಾನಿಪಜನರ ಭವ
ಕಾನನಾದಹನ ಚಿತ್ರಭಾನು ದನುಜಾರಿಹರಿ ಅ.ಪ

ಇಂದಿರಾರಮಣ ನಿನ್ನ ಸುಂದರ ಚರಣಕೆ ನಾಂ
ವಂದನೆಯ ಮಾಡುವೆನಯ್ಯಾ ಇಂದುವದನಾ
ಇಂದುಧರ ನುತ ಮುಚುಕುಂದವರದನೆ ಗುಣ
ಬಂಧುರಾ ಶ್ರೀ ಪುಲಿಗಿರಿ ಮಂದಿರ ಮಂದರಧರ ೧

ಇಷ್ಟುದಿನ ನಿನ್ನ ಮನಮುಟ್ಟಿ ಭಜಿಸದೆ ಬಲು
ದುಷ್ಟಮನುಜರ ಕೂಡಿ ಭ್ರಷ್ಟನಾದೆನು
ಇಷ್ಟ ಫಲದಾಯಕ ತ್ರಿವಿಷ್ಣಪಾದಿಪಾನುಬವ್ಯ
ಅಷ್ಟಸಿದ್ಧಿಪ್ರದ ನಿನ್ನ ಗಟ್ಟಿಯಾಗಿ ನಂಬಿದೆನು ೨

ಲೋಕಪತಿ ಪಿನಾಕೆಯನ್ನು ವೃಕನೆಂಬ
ಭೀಕರಾಸುರನು ಉರಿಹಸ್ತ ಬೇಡಲು
ಆಕಪಾಲಿಯಿತ್ತು ಅವಿವೇಕದಿಂದ ಲೋಡುತಿರೆ
ಲೋಕ ಮೋಹಿನಿಯ ರೂಪ ಸ್ವೀಕರಿಸಿ ಶಿವನಕಾಯ್ದೆ ೩

ಆಡಿಸೋ ನಿನ್ನವರೊಳು ಪಾಡಿಸೋ ನಿನ್ನಯ ಕೀರ್ತಿ
ನೋಡಿಸೋ ನಿನ್ನಯ ಮೂರ್ತಿ ಬೇಡಿಸದಿರು
ಆಡಿಸದೆ ಭವವೆಂಬ ಕಾಡಿನೋಳ್ಕಟಾಕ್ಷದಿಂದ
ನೋಡಿ ನಿನ್ನ ನಾಡಿನೊಳಗಾಡಿಸೋ ಮುರಾರಿಹರಿ ೪

ವಾಸುಕಿಶಯನ ಪೀತವಸನ ದಿವ್ಯಭೂಷಣ ವಿ
ಭೂಷಿತ ಲಲಿತಶುಭ ವೇಷವಿಮಲ
ಭಾಸಮಾನ ವ್ಯಾಘ್ರಶೈಲಾವಾಸ ಶ್ರೀನಿವಾಸ ಭಕ್ತ
ಪೋಷಣ ದುರಿತಗಣ ಶೋಷಣ ಶ್ರೀ ವರದವಿಠಲ ೫

೧೯೮

ಶ್ರೀನಿವಾಸ ಸಲಹೋ ನಮ್ಮ ಶ್ರೀನಿಧಾನ ಚರಣನೆ ಪ

ಧ್ಯಾನ ನಿರತ ಮೌನಿ ಜನರ ಮಾನಸಾಬ್ಜಹಂಸನೆ ಅ.ಪ

ನಕ್ರಮುಖದಿ ಸಿಕ್ಕಿದಿಭನನಕ್ಕರಿಂದ ಪೊರೆದನೆ
ಚಕ್ರಧರ ತ್ರಿವಿಕ್ರಮಾದಿ ಚಕ್ರಭೋಗಿ ಶಯನನೆ ೧

ಬಿಟ್ಟು ನಿನ್ನ ಭ್ರಷ್ಟನಾಗಿ ಕೆಟ್ಟೆ ಜನ್ಮ ಜನ್ಮದೆ
ಹುಟ್ಟಿ ಹುಟ್ಟಿ ಕಷ್ಟಪಟ್ಟೆ ಕೃಷ್ಣ ನಿನ್ನ ನಂಬಿದೆ ೨

ಶರಣಜನರ ಪೊರೆವನೆಂಬ ಬಿರುದು ಧರಿಪನಲ್ಲೆಲಾ
ಹರಿಣ ಹರಣಧರದೊಳಿರುವ ಕರುಣಿ ವರದ ವಿಠಲ ೩

೧೯೯

ಶ್ರೀವಾಸ ಶ್ರೀವಾಸ ಭಜಿಸಿದೆ ನಿನ್ನನು ಪ

ತ್ಯಜಿಸಿದಿರೆನ್ನನು ಭವತಾಮರತರು ಕುಜನವಿದೂರ ಅ.ಪ

ತಂದೆತಾಯಿ ನಿಜ ಬಂಧು ಸಹೋದರ
ನಂದನಾಪ್ತ ನೀನೆಂದು ನಂಬಿದೆ ೧

ನಿನ್ನ ಮರೆತು ಬಹು ಜನ್ಮ ಜನ್ಮದೊಳು
ಖಿನ್ನವಾಗಿ ನಿಜವನ್ನೆ ಕಾಣದೆ ೨

ಕರುಣದಿಂದ ನಿಜ ಚರಣ ಸೇವಕರ
ಪೊರೆವ ವ್ಯಾಘ್ರಗಿರಿವರದ ವಿಠಲ ೩

೨೦೦

ಸಲಹೋ ಶ್ರೀನಿವಾಸ ಸದ್ಗುಣನಿಲಯ ವೆಂಕಟೇಶ ಪ

ಒಲಿದು ಸಕಲ ಗೋಕುಲವನು ಸಲಹಿದ
ಜಲಜಾಂಬ ನೀನಲಸದೆ ಎನ್ನನು ಅ.ಪ

ವಾತವು ಮಿತಿಮೀರಿ ಪಿತ್ತವ್ರಾತದೊಡನೆ ಸೇರಿ
ಧಾತುಗಳೆಲ್ಲ ವೀಘಾತಿಸಿ ಕಫಸಂ
ಘಾತವು ಹೆಚ್ಚಿದ ಸೇರುವ ನೋಡಿ ೧

ಶ್ವಾಸ ನಿರೋಧದಲಿ ಸೇರಿದ ಕಾಸುಗಳುದರದಲಿ
ಕೇಶರಂಧ್ರವಕಾಶದೊಳೂರ್ಧ್ವ ಬಲು
ಶ್ವಾಸ ಹೆಚ್ಚಿ ಘಾಸಿಪಡಿಸುತಿದೆ ೨

ಕಾಯದಬಲವೆಲ್ಲಾ ಕದಲುತ ಮಾಯವಾದವಲ್ಲ
ದಾಯತಪ್ಪಿ ದುರ್ವಾಯುವಿಂದ ತಲೆ
ನೋಯುತ ದೇಹದೊಳಾಯಾಸ ಹೆಚ್ಚಿತು ೩

ನಿದ್ರೆಬಾರದಯ್ಯ ನಿಶೆಯೊಳಗೆದ್ದಿರಬೇಕಯ್ಯಾ
ಮದ್ದು ತಿಂದವನು ಬುದ್ಧಿಯಿಂತೆ ಮೈ
ಗುದ್ದಿಕೊಂಡು ಬಿದ್ದೊದ್ದಾಡಿಸುತಿದೆ ೪

ಅನ್ನವರೋಚಕವು ಅಪ್ತರೊಳನ್ಯತೆಗೋಚರವು
ಮುನ್ನ ವೈದ್ಯಗಳನ್ನು ಕಾಣೆ ನೀ
ಕಣ್ಣತೆರೆದು ನೋಡೆನ್ನ ಕಟಾಕ್ಷದಿ ೫

ರೋಗವು ಘನವಯ್ಯಾರೋದನೆಯಾಗಿಹುದೆನಗಯ್ಯಾ
ನೀಗಲಾಡು ಈ ರೋಗವನ್ನು ಭವ
ರೋಗ ವೈದ್ಯ ನೀನೇಗತಿಯೆಂದಿಗು ೬

ಪರಮಪುರುಷ ನಿನ್ನ ಚರಣವ ಮೆರೆಹೊಕ್ಕಿಹೆ ಮುನ್ನ
ಶರಣಾಭರಣ ಪುಲಿಗಿರಿಯೊಳು ನೆಲಸಿಹ
ವರದವಿಠಲದೊರೆ ವರದದಯಾನಿಧೆ ೭

(೧) ನಿಂದಾಸ್ತುತಿಗಳು

೨೦೧

ಏನುಂಟು ನಿನ್ನೊಳಗೆ ನಾ ಬೇಡಲು
ಏನು ಕೊಡುವೆ ಎನಗೆ ಪ

ಶ್ರೀನಿವಾಸನೇ ಬಲು ದೀನನೊಳವಲಕ್ಕಿ
ಯೆನೇಂದು ಬೇಡಿದೆ ಮಾನವ ನೋಡದೆ ಅ.ಪ

ತಿರುಕನಾಗಿ ತಂದೆ ಧರೆಯ ಕಶ್ಯಪನೆಂಬ
ತಿರುಕ ಹಾರುವನಿಗೆ ಗುರಿಮಾಡಿದೆ
ಸಿರಿಯನು ರಜಕನ ಪರಿವಾರದಿ ಬಿಟ್ಟು
ಗರಳ ಹಾಸಿನೊಳೊರಗಿದೆ ಕೃಷ್ಣ ೧

ಧನಕನಕಂಗಳು ನಿನಗಿರೆ ಸತ್ರಾಜಿ
ತನ ಮಣಿಯನು ನೀಗಣಿಸುವೆಯಾ

ಅನುವಾದ ಮನೆಯಿರೆ ಮುನಿಮನವೇತಕೆ
ಮನೆವಾರ್ತೆಯುಳ್ಳರೆ ವನವಾಸಬೇಕೆ ೨

ಕಾಮಧೇನುವು ಕಲ್ಪನಾಮಕ ತರುವು ಚಿಂ
ತಾಮಣಿಗಳನು ಸುತ್ರಾಮಗಿತ್ತು
ಗೋಮಯರಸಗಳ ಕಾಮಿಸಿ ಕದ್ದು ನೀ
ದಾಮೋದರನಾದೆ ತಾಮರಸಾಕ್ಷ ೩

ಖ್ಯಾತಿ ನೋಡದೆ ರಣ ಭೀತಿಯೊಳೋಡಿದೆ
ಜಾತಿ ನೋಡದೆ ಜಾಂಬವತಿಗೂಡಿದೆ
ನೀತಿಯ ನೋಡದೆ ಕೋತಿಯೊಳಾಡಿದೆ
ಮಾತು ನೋಡದೆ ಬರಿ ಮಾಯೆಯ ಪಿಡಿದೆ ೪

ಗತಿಹೀನರಿಗೆ ವರ ಗತಿಯ ತೋರಿಪನಾಮ
ಸ್ಮೃತಿಯೊಂದಿತ್ತರೆ ಸಾಕೆನಗೆ
ಅತಿಶಯವಿದು ಎನ್ನ ಮತಿಯೊಳು ನಿನ್ನಯ
ರತಿಯನ್ನು ಪಾಲಿಸು ವರದವಿಠಲರಾಮ ೫

೨೦೨

ಮುಟ್ಟು ದೋರಿತು ನಿನ್ನ ಗುಟ್ಟು ಹಾರಿತು ಪ

ಸಿಟ್ಟುಗೊಳ್ಳಬೇಡವೆನ್ನ ದೃಷ್ಟಿಯಿಂದ ನೋಡಿ ಕಂಡೆ
ಅಷ್ಟಸಿದ್ಧಿಗಳಿದ್ದರೂ ಒಂದಿಷ್ಟು ಕೊರತೆ ಕೃಷ್ಣನೆಂಬ ಅ.ಪ

ಹೇಯಗುಣವಿಲ್ಲ ಮುನಿಗೇಯ ನಿನ್ನೊಳೆಂಬ ಜನರ
ಬಾಯ ಮುಚ್ಚಿಸುವೆನೆಂದತ್ಯಾಯಸಪಡುವನೆಂಬ ೧

ಸತ್ಯಕಾಮನಹುದು ನೀನು ಸತ್ಯಸಂಕಲ್ಪನು ನಿನಗೆ
ಮಿಥ್ಯಾವಚನಿಲ್ಲವೆಂಬೊಂದಿತ್ಯಧಿಕ ಕೊರತೆಯೆಂಬ ೨

ಜ್ಞಾನವಂತನೆಯ ಬಹುಮಾನವಂತನಾದರೂ ಅ
ಜ್ಞಾನಶೂನ್ಯನೆಂಬ ದೊಡ್ಡ ಹಾನಿಯೊಂದಿರುವುದೆಂಬ ३

ಎಲ್ಲ ವಸ್ತುಗಳುಂಟು ನಿನಗೆ ಪುಲ್ಲನಾಭ ನಿನ್ನ ಬಳಿಯೋ
ಳಿಲ್ಲವೆಂಬ ಶಬ್ದಮಾತ್ರವಿಲ್ಲವೆಂಬ ಮಾತು ಬಂದಿಹ ೪

ಪಾಪವೆಂಬ ಕತ್ತಲೆಗೆ ದೀಪನಾಗಿದ್ದರು ಜನರ
ಪಾಪಗಳನಪಹರಿಪ ದೀಪನಾ ಬಿಡದು ಎಂಬ ೫

ಜ್ಯೋತಿಗಳಿಗೆಲ್ಲ ಪರಂಜ್ಯೋತಿಯಾಗಿರಿವ ನಿನಗೆ ಆ
ಜ್ಯೋತಿಗಳೆತ್ತಿದಾರತೀ ಪ್ರೀತಿಯೆಂದು ಜನರು ಪೇಳ್ವ ೬

ಹಾನಿವೃದ್ಧಿ ಶೋಕಮೋಹ ಜ್ಞಾನ ನಿನ್ನೊಳಿಲ್ಲವೆಂಬ
ಹೀನವಾಕ್ಯವ ಪೇಳ್ವರೆಲ್ಲ ಮಾನನಿಧಿಗಳೆಂತೆಂಬ ೭

ನಿತ್ಯತೃಪ್ತನಾದರೂ ನಿಜ ಭೃತ್ಯರನು ಪಾಲಿಸುವ
ನಿತ್ಯ ಕರ್ಮದಲ್ಲಿ ಕೃತಕೃತ್ಯನುನೀನಲ್ಲವೆಂಬ ೮

ಕಷ್ಟಪಡಬೇಡವೆನ್ನೊಳೆಷ್ಟು ದುರ್ಗುಣಂಗಳಿಹ
ವಷ್ಟನು ಒಪ್ಪಿಸಿ ನಿನಗಿಷ್ಟ ನಾಗಬೇಕೆಂಬ ೯

ಕ್ಷೀರದಧಿನವನೀತ ಚೋರನಾಗಿರಲಿ ಗೋಪೀ
ಜಾರನಾಗಿರಲಿ ಸಂಸಾರವೈರಿಯು ನೀನೆಂಬ ೧೦

ಕೊರತೆಯೆಂಬಾ ಜನರಿಗೆಲ್ಲಾ ವರವನಿತ್ತು ಪೊರೆವೆನೆಂಬ
ಸ್ಥಿರವಾಗಿ ಶ್ರೀ ವ್ಯಾಘ್ರಗಿರಿಯೊಳಿರುವ ವರದ ವಿಠಲನೆಂಬ ೧೧

೨೦೩

ಯಾಕೆ ಕಷ್ಟ ಪಡುವೆ ಲೋಕನಾಯಕ
ಸಾಕು ನಿನ್ನ ಮಾಯಾ ಜೋಕೆಯಿಂದ ಸಲಹು ನಮ್ಮ ಪ

ಸಿರಿಯೆ ಪಟ್ಟದರಸಿ ನಿನಗೆ ಕಿರಿಯ ಮಡದಿ ಧರಣಿಯಾಗೆ
ಹಿರಿಯ ಮಗನು ಸರ್ವಜನರೊಳಿರುತ ಕಾಮಿಸುವನು ಜಗವ ೧

ಮಗನು ಜಗವ ನಿರ್ಮಿಸುವನು ಮಗುಳೆಲಯವಗ್ಗೈವ ಮೊ–
ಮ್ಮಗನು ನಿನ್ನ ದಾಸಿ ಈ ಜಗವ ಮೋಹಿಸುತ್ತಲಿರವಳು ೨

ನೀರೊಳಿರುತ ಮೋರೆ ಮುಚ್ಚಿ ಕೋರೆ ಮಸೆದು ಕಂಬದಿಂದ
ಹಾರಿಯೆಳೆದು ಧಾರಿಣಿಯ ಧೀರ ನೃಪರನ್ನೆಲ್ಲ ಕೊಂದು ೩

ಊರುಬಿಟ್ಟು ಹಾರಿ ವನವ ಜಾರನಾಗಿ ಭಂಗಪಡಿಸಿ
ನಾರಿಯರನು ದಾರ ತೇಜಿಯೇರಿ ಮೆರೆದು ಬಾರಿ ಬಾರಿ ೪

ಪರಮಪದವನಗಲಿ ಚಂಡ ಕರಣರಥವ ನುಳಿದು ಕ್ಷೀರ
ಶರಧಿಯನ್ನು ಬಿಟ್ಟು ವ್ಯಾಘ್ರಗಿರಿಯೊಳಿರುವ ವರದವಿಠಲ ೫

(ಈ) ಲೋಕನೀತಿಯನ್ನು ಕುರಿತ ಕೃತಿಗಳು

೨೦೪

ಏನಯ್ಯ ದೊರೆಯೆ ನಿನಗಾನಂದವೆ ದೊರೆಯೆ ಪ

ಮಾನಿತ ಜನರವಮಾನವ ನೋಡದೆ
ಹೀನ ಜನರ ನುಡಿ ನೀನಿಲಿದಾಲಿಪುದು ಅ.ಪ

ಜಾತಿಧರ್ಮವಿಲ್ಲಾ ಶಾಸ್ತ್ರದ ರೀತಿ ನಡತೆಯಿಲ್ಲ
ಮಾತಿದು ಪುಸಿಯಲ್ಲಾ ಮಾನದ ಭೀತಿಯು ಮೊದಲಿಲ್ಲಾ
ನೀತಿಯನರಿಯದ ಕೋತಿಗಳಂದದ
ಜಾತಿಯ ಜನರೊಳು ಮಾತಿನವಾಶಿಯಿಲ್ಲ ೧

ದುರ್ಜನರು ಬೆರೆದು ದೋಷ ವಿವರ್ಜಿತರನ್ನು ಜರಿದು
ಲಜ್ಜೆಯ ನೆರೆತೊರೆದು ಗರ್ವದಿ ಗರ್ಜಿಸಿ ಮೊರೆದು

ಈ ಜಗದೊಳಗಿಹ ಸಜ್ಜನರಗಿವ ಕುಲ
ಕಜ್ಜಳರವಮತಿಗುಜ್ಜುಗಿಸುತ್ತಿಹ ೨

ಗಂಡಬಿಟ್ಟಿಹರು ಗರತಿಯ ಕಂಡು ನಗುತಿಹರು
ಮಿಂಡರ ಬೆರೆದಿಹರು ಮೇಲತಿ ದಿಂಡೆಯರಾಗಿಹರು
ಭಂಡತನದಿ ಪರಗಂಡಸರೊಳು ಸಮ-
ದಂಡೆಯೆನಿಸಿ ಬಲು ಚಂಡಿಸುತಿರ್ಪರೋ ೩

ಕೇಳು ಹಂದೆಯಾಳು ಕ್ಲೇಶವ ಪೇಳಲು ಮತಿತಾಳು
ಕೀಳುಜನರ ಬಾಳು ಕಿವಿಯಲ್ಲಿ ಕೇಳಬಹುದೆ ಪೇಳು
ಕಾಳಮೂಳಿಯರ ಮೇಳದಿ ಹಿಗ್ಗುವ
ಬಾಳುಗೇಡಿ ಜನರೊಳಿಗ ಬಲುಘನ ೪

ಧರೆಯೊಳಧಿಕವಾದ ಶ್ರೀಪುಲಿಗಿರಿಯೊಳು ನೆಲೆಯಾದ
ಸಿರಿವರ ನಿಜಪಾದ ಸೇವೆಯ ಕರುಣಿಸು ಬಹುಮೋದ
ಶರಣಾಭರಣ ನಿಜಕರುಣವ ತೋರಿಸು
ವರದವಿಠಲ ದೊರೆ ವರದದಯಾನಿಧೆ ೫

೨೦೫

ತಿಗಣೆಯ ಕಾಟವೆ ಕಾಟ ಚೆಲ್ವ
ಸುಗುಣೆಯ ಕೂಟವೆ ಕೂಟ ಪ

ಹಗಲಿರುಳೆನ್ನದೆ ಬಗೆ ಬಗೆ ರತಿಯೊಳು
ಸೊಗಯಿಸಿ ದೇಹ ಧಾತುಗಳನು ಕೆಡಿಸುವ ಅ.ಪ

ಮನೆಯೊಳು ತಿಗಣೆಯು ಹೆಚ್ಚಿತು
ಮನಸಿಜ ವಸ್ತ್ರಕೆ ಮನಸೋತ ಕಾಮುಕ ಜನದಂತೆ ನಿಶಿಯೊಳ
ಗನುದಿನ ಬಾಧಿಪ ೧

ಗೋಡೆ ಕಂಬಗಳ ಸಂದುಗಳಲಿ ಮನೆ
ಮಾಡಿ ಹಾಸಿಗೆ ಮಂಚಾದಿಗಳಲಿ
ರೂಢಿಸಿ ಕಾಮಿನಿ ಕೂಡುವ ತೆರದೊಳೋ
ಲಾಡಿ ಶರೀರದ ನಾಡಿಯ ನಿಲ್ಲಿಸುವ ೨

ಸದ್ದಡಗಲು ಜತೆಗೂಡುತ ಸುಖ
ನಿದ್ರೆಯ ಸಮಯವ ನೋಡುತ
ಹೊದ್ದಿ ಸಮೀಪದ ಮುಗ್ದೆಯರಂದದಿ
ಮುದ್ದಾಡುತ ನಮ್ಮ ನೊದ್ದಾಡಿಸುತಿಹ ೩

ಹೆಗಲಿನ ಮೂಲದೊಳೇರಿ ನಮ್ಮ
ಬಗಲಿನ ಸಂಧಿಗೆ ಸೇರಿ
ತೊಗಲಿನ ನರಕ್ಕೆ ತಗಲೆ ನಿದ್ರೆಯ
ನಗಲಿಸಿ ಬೇಗದಿನುಸುಳಿ ಕದ್ದೋಡುವ ೪

ಚಿಗಟದ ಹಿಂದೊಡಗೂಡಿ ನಮ್ಮ
ತೊಗಟೆ ರಕ್ತದ ಸುವಿನೋಡಿ
ತೆಗಟೆಯ ಸಂಧಿಸಿ ಚಿಗಟದ ಪರಿಯಲಿ
ಬುಗುಟೆದ್ದ ಗಾಯವ ವಿಗಟವ ಮಾಡುವ ೫

ನೋಟಕ ನೀನಾಗಬಹುದೆ ಕಪಟ
ನಾಟಕಧಾರನೆ ಬರಿದೆ
ಕಾಟಕರ್ಮದ ನಿಸರ್ಗದಲ್ಲಿನ ಬಲು
ಕೋಟಲೆಯುಂಬೆ ನಿನ್ನ ಕೂಟದ ಜನರಿಗೆ ೬

ದುರಿತ ಕೋಲಾಹಲನೆಂದೆ ನಿನ್ನ
ಬಿರುದನು ಪೊಗಳುತ ನಿಂದೆ
ಧರೆಯೊಳುತ್ತಮ ಪುಲಿಗಿರಿಯೊಳು ನೆಲೆಸಿಹ
ವರದವಿಠಲ ನಿನ್ನ ಶರಣರಾದವರಿಗೆ ೭

೨೦೬

ದಿನವೇ ಸುದಿನವು ಧ್ಯಾನಮಾಳ್ಪ ಜನವೇ ಸುಜನವು ಪ

ಘನತರ ಹರಷದಿ ಮನದಣವಂದದಿ
ಮನಸಿಜನಯ್ಯನ ಮಹಿಮೆಯ ಪಾಡುತ ಅಪ

ಯುಕ್ತದಿ ಕೂಡಿ ಅಯುಕ್ತ ವಿರಕ್ತಿಯ ಮಾಡಿ
ಭುಕ್ತಿಗಾಗಲಿ ಭವಮುಕ್ತಿಗಾಲಿ ಹರಿ
ಭಕ್ತರ ನೋಡಗೂಡಿ ರಕ್ತಿಲ್ಲಿ ಪಾಡುವ ೧

ತಾಳ ತಂಬೂರಿಯ ತಪ್ಪದೆ ತಂದು ಮೈಳೈಸಿಶ್ರುತಿಯ
ಹಾಳು ಹರಟೆಯಿಂದ ಕಾಲವ ಕಳೆಯದೆ
ಶ್ರೀಲಾಲಮನ ಕಥೆ ಪೇಳುವ ಕೇಳುವ ೨

ಅರ್ಥಾಪೇಕ್ಷೆಯಲಿ ಕಾಲಗಳನು ವ್ಯರ್ಥಮಾಡದಲೆ
ಅರ್ಥಿಪರಿಗೆ ಪರಮಾರ್ಥವನೀಯುವ
ಪಾರ್ಥಸಾರಥಿಯನ್ನು ಪ್ರಾರ್ಥನೆ ಮಾಡುವ ೩

ಕಾಮಕ್ರೋಧಗಳ ಕಳೆವ ರಘು ರಾಮ ನಾಮಗಳ
ಪ್ರೇಮದಿಂ ಪಾಡುತ್ತ ರೋಮಾಂಚದೊಡಗೂಡಿ
ನೇಮದಿಂದಲಿ ಭವ ತಾಮಸ ಕಳೆಯುವ ೪

ಹರಿವಾಸರವನು ಸಾಧಿಸಿ ಮುರಹರ ನಾಮಗಳು
ಹರಿದಾಸರೊಡಗೂಡಿ ಹರಷದಿಂದೆಚ್ಚತ್ತು
ವರದ ವಿಠಲ ನರಹರಿಯೆಂದು ಪಾಡುವ ೫

೨೦೭

ದೀನನ ಸೇರಿದರೇನು ಫಲ ರಾಮ ಗುಣ
ಹೀನನ ಸೇರಿದರೇನು ಫಲ ಪ

ಅಕ್ಕರೆಯಿಲ್ಲದ ರಕ್ಕಸಿಯುದರದಿ
ಮಕ್ಕಳು ಜನಿಸದರೇನು ಫಲ
ದುಃಖಿಪ ಜನರನು ಲೆಕ್ಕಿಸದಾತನ
ಒಕ್ಕಲುತನದಿಂದೇನು ಫಲ ೧

ಜನಿಸಿದ ಮಕ್ಕಳು ಜೀವಿಸದಿದ್ದರೆ
ಜನನೀ ಜನಕರಿಗೇನು ಫಲ
ಕನಸಲಿ ಕಾಣುವ ಧನಕಂಗಳ ನಂಬಿದ
ಮನುಜರಿಗೇನು ಫಲ ೨

ಕರೆಯದ ಪಶುವನು ನೆರೆಯದ ಸೊಸೆಯನು
ಅರಿಯದೆ ಕೊಂಡವಗೇನು ಫಲ
ಹಿರಿಯರ ನಡತೆಯ ನಡೆಯಿಸದಾತನು
ಹರಿಯವನಾಗಿರಲೇನು ಫಲ ೩

ಗಂಡನ ದೂರುತ ಮಿಂಡನ ಸೇರುವ
ಹೆಂಡತಿಯಿರಲೇನು ಫಲ
ಹೆಂಡಿರ ಮಕ್ಕಳ ದಂಡಿಸದಾತನ
ಗಂಡಸುತದಿಂದೇನು ಫಲ ೪

ವರನಿಲ್ಲದವರ ತರುಣಿಯು ನಾನಾ
ತೆರದಲಿ ಸಿಂಗರಸಿದರೇನು ಫಲ
ವರದವಿಠಲ ಪುಲಿಗಿರಿಪತಿಗಲ್ಲದ
ಪರಿಪರಿ ಪುಣ್ಯದಿಂದೇನು ಫಲ ೫

(ಉ) ತಾತ್ತ್ವಿಕ ಕೃತಿಗಳು

೨೦೮

ನಾರಾಯಣಯೆಂಬ ನಾಮವ ನೇಮದಿ
ಪಾರಾಯಣ ಮಾಡಿರೋ
ಪಾರವಿಲ್ಲದ ಭವ ಪಾರಾವಾರದೊಳು
ತಾರ ಕವಿದು ನೋಡಿರೋ ಪ

ನೀರ ಬೊಬ್ಬುಳಿಕೆಯು ತೋರುವ ರೀತಿ ಶ
ರೀರ ನಚ್ಚಿರಬೇಡಿರೋ
ಸಾರುವ ಮೃತ್ಯುವದಾರಿಗೆ ಗೋಚರ
ಧಾರಣಿಯಲಿ ಪೇಳಿರೋ ೧

ದೇಹಕೆ ನೆಲೆಯಿಲ್ಲ ಮೋಹಕೆ ಕೊನೆಯಿಲ್ಲ
ಸಾಹಸ ಪಡಬೇಡಿರೋ
ದೇಹಗೇಹಂಗಳನೂಹಿಸಿ ಸಂಗಡ
ಬಾಹವೆಂದಿರ ಬೇಡಿರೋ ೨

ದೇಹರಕ್ಷಣೆಗೆಂದು ಗೇಹವ ನಿರ್ಮಿಸಿ
ನೇಹದಿ ನಾರಿಯೊಳು
ಗೇಹಿನಿಯೆಂದತಿ ಮೋಹದಿ ಕೆಡುವನು
ದೇಹಿ ಸಂಸಾರದೊಳು ೩

ನಾರಿಯು ಮೋಹನಾಕಾರಿಯು ಲೋಕಕೆ
ಮಾರಿಯಲ್ಲವೆ ಕೇಳಿರೋ
ನಾರಿಯಾರಿಗೆ ಮಕ್ಕಳಾರಿಗೆ ಜೀವಿತ
ದಾರಿಯೆಲ್ಲಿಗೆ ಪೇಳಿರೋ ೪

ಮಿಂಚಬಾರದು ತನ್ನ ಮಡದಿಯ ಬಾಲರ
ಕಂಚು ಕನ್ನಡಿ ಭಾರದೀ
ಸಂಚಿತ ದ್ರವ್ಯದಿ ಕೊಂಚವು ಬಾರುದು ಉಗಿ
ಸಂಚಿಗೆ ದೇಹವಿದ ೫

ಹಲವು ಸಾಹಸದಿಂದ ಗಳಿಸಿದರ್ಥಗಳೆಲ್ಲ
ಬಳಸಿನ ಬಾಂಧವರು ನಿಳಯದೊಳುಂಡುಟ್ಟು
ನಲಿದು ನಂಟರು ಎಂದು
ಒಲಿದು ಕೊಂಡಾಡುವರು ೬

ಅರ್ಥವಿದ್ದವನ ಸಮರ್ಥನೀತನ ಜನ್ಮ
ಸಾರ್ಥಕವೆಂಬುವರು
ಅರ್ಥವ ಕಳಕೊಂಡು ಸಾರ್ಥನಾಗಲು ಜನ್ಮಸು
ವ್ಯರ್ಥವೆಂದುಸುರುವರು ೭

ರೊಕ್ಕವಿದ್ದರೆ ಕೈಲಿ ಸಿಕ್ಕರೆ ಮಾತಿನೊಳಕ್ಕರೆ ಪಡಿಸುವರು
ರೊಕ್ಕವಿಲ್ಲದವನ ಮಕ್ಕಳು ಮಡದಿಯರು ಲೆಕ್ಕಿಸದಿರುತಿಹರು ೮

ಧರಣಿಗೋಸುಗ ತಮ್ಮ ಹರಣವ ಕಳಕೊಂಡು
ಮರಣ ಪೊಂದುವರು
ಮರುಳುರು ಜಗಳಕೆ ತರಳರ ಚಾಚುತೆ
ಕೊರಳನು ಕೊಯ್ಯುವರೋ ೯

ತಂದೆಯ ಬಿಡುವರು ಕಂದನ್ನ ಬಿಡುವರು
ಬಂಧುಗಳನು ಕೊಲ್ವರು
ಒಂದಿಗೆ ಜನಿಸಿದರೆಂದು ನೋಡರು ನಿಜ
ದಂದುಗಕ್ಕೊಳಗಹರು ೧೦

ನಂಟರು ನಮಗಿವರುಂಟೆಂದು ಮೋಹದ
ಗಂಟು ಕಟ್ಟಿರೆ ಮನದಿ
ಕಂಟಕ ಯಮ ಬಂದು
ಗಂಟಲ ಬಿಗಿವಾಗ ನಂಟರಿಲ್ಲವು ಜಗದಿ ೧೧

ಆಪತ್ತು ಬಂದಾಗ ಪಾಪಿಯು ಮನದಲನು
ತಾಪದಿ ನೆನೆಯುತಿರೆ
ಕಾಪಾಡುವನಾಗ ಶ್ರೀಪತಿ ಪುಲಿಗಿರಿ
ಭೂಪನು ನಮ್ಮ ದೊರೆ ೧೨

೨೦೯

ಧರೆಯೊಳು ಪುಲಿಗಿರಿಯೊಳು ನೆಲಸಿದ
ವರದವಿಠಲ ದೇವನ
ಸಿರಿನಾಮವೆ ತಾ ಮರೆಯದೆನೆನೆಯಲು
ಪೊರೆಯವುದಾನರನ ಪ

ನೊಂದ ಗಜೇಂದ್ರನ ನೊಂದ ಪ್ರಹ್ಲಾದನ
ಬಂದ ವಿಭೀಷಣನ
ಚಂದಿರಮುಖಿ ನೃಪನಂದನ ಧ್ರುವರನು
ಚಂದದಿ ಸಲಹಿದನು ೧

ಅಜಮಿಳಗೊಲಿದನ ಕುಜನರ ತರಿದನ
ಸುಜನರನಾಳಿದನ
ಭಜಕರದಾತನ ತ್ರಿಜಗಕ್ಕೆ ನಾಥನ
ವಿಜಯನ ರಥಸೂತನ ೨

ಅಂಗಜಜನಕನ ಮಂಗಳ ಮಹಿಮನ
ಗಂಗೆಯ ಪಡೆದವನ
ರಂಗನ ಸುಗುಣ ತರಂಗನ ಶಂಖ
ರಥಾಂಗವ ಪಿಡಿದವನ ೩

ಗೌತಮಭಾರ್ಯೆಯ ಪೂತೆಯ ಮಾಡಿದ
ಖ್ಯಾತ ಪಾದಾಂಬುಜನ
ವಾತನ ಮಗನೊಳು ಪ್ರೀತಿಯ ಬೆಳಸಿದ
ಸೇತುವಿಧಾತನ ೪

ರಾಮನ ಜಗದಭಿರಾಮನ ದೈತ್ಯ ವಿ
ರಾಮನ ಭಜಕನಾ
ರಾಮನ ದಶರಥ ರಾಮನ ಸೀತಾ
ರಾಮನ ಗುಣಧಾಮನ ೫

ಪಂಕಜನೇತ್ರನ ಪರಮ ಪವಿತ್ರನ ಶಂಕರ ನುತಿ ಪಾತ್ರನ
ವೆಂಕಟರಮಣನ ಕಿಂಕರ ಶರಣನ ಸಂಕಟಹರ ನಾಮನ ೬

೨೧೦

ಈತನೀತನೆ ರಮಾನಿವಾಸನು ಕೇಳಿ ಜನರು
ಈತನೀಗ ಚಿದ್ವಿಲಾಸನು ಪ

ಈತನೀಗ ಸರ್ವಭೂತ ಜಾತಚೇತನರ್ಗೆ ಸೌಖ್ಯ
ದಾತವೇದಶಾಸ್ತ್ರ ವಿಖ್ಯಾತ ಲೋಕೈಕನಾಥ ಅ.ಪ

ಬ್ರಹ್ಮರೂಪನಿಂದ ಜಗವ ನಿರ್ಮಿಸುತ್ತತಾನೆ ಸರ್ವ
ಕರ್ಮಫಲಗಳನ್ನೆಕೊಟ್ಟು ಶಮನಪಡಿಸುವ
ಚರ್ಮವಸ್ತ್ರವುಟ್ಟು ರೌದ್ರ ಕರ್ಮಿಯಾಗಿ ಕಡೆಗೆ ಕಾಲ
ಧರ್ಮವನ್ನು ತೋರಿ ಜಲದೊಳೊಮ್ಮೆ ಮಲಗಿತೇಲುತಿರುವ ೧

ರಮೆಯನಾಳ್ವ ಭಾಗ್ಯವಂತ ಕ್ಷಮೆಯನಾಳ್ವ ರಾಜ್ಯ ಕರ್ತ
ಕಮಲಭವನ ಪಡೆದ ಹಿರಿಯನಮರರೊಡೆಯ
ಸುಮಶರನ ಪೆತ್ತ ಚೆಲುವನಮಲ ಗಂಗೆಯಿತ್ತು ನಲಿವ
ನಮರ ವೈರಿಗಳನು ಕೊಲುವ ಕಮಲನಾಭ ವಾಸುದೇವ ೨

ಉರಗಶಯನ ಗರುಡಗಮನ ಪರಮಪದನುಳದು ಶೇಷ
ಗಿರಿಯೊಳಿರ್ದು ಬಂದ ವ್ಯಾಘ್ರಗಿರಿಯ ಶಿಖರಕೆ
ಭರದಿನಿತ್ಯಮುಕ್ತರೊಡನೆ ಕರದಿ ಶಂಕ ಚಕ್ರ ಪಿಡಿದು
ಕರುಣದಿಂದ ಚರಣ ಸೇವಕರನು ಪೊರೆವ ವರದ ವಿಠಲ ೩

೨೧೧

ಎಂತೋ ಪೂಜಿಪುದಂತರ್ಯಾಮಿಯನನಂತಾದಿರಹಿತನ
ಚಿಂತಾದೂರನ ಚಿನುಮಯರೂಪನನೆಂತೋ ಧ್ಯಾನಿಪುದು ಪ

ಈಶ ವೀಸ ವಾಹನಗೀಸನ ಚರಾಚರ ಮೀಸಲಿಗಳವಲ್ಲಾ
ಆಸನಿತ್ತರೆ ವಾಸುಕಿ ಭೋಗ ನಿವಾಸಿಗೆ ತರವಲ್ಲಾ ೧

ಚರಣದಿ ಗಂಗೆಯ ಧರಿಸಿತುವಾತನ ಚರಣವ ತೊಳೆಯುವರೇ
ತರಣಿಗೆ ತೇಜದ ಭರಣಿಗೆ ದೀಪದ ಸರಣಿಯ ತೋರುವರೆ ೨

ವಿಗ್ರಹರಹಿತನಿಗರ್ಘ್ಯದ ಪೂಜೆಯು ದುರ್ಘಟ ಕಾರ್ಯವಲೆ
ಭರ್ಗಾದ್ಯಮರರ ವರ್ಗವು ತಮ್ಮ ನಿಸರ್ಗದಿ ಕಾಣದಲೆ ೩

ಕಲಶಾಂಬುಧಿಯೊಳು ನೆಲೆಸಿಹ ಮೂರ್ತಿಗೆ ಸಲಿಲ ಸ್ಪರ್ಶನವೆ
ಜಲರುಹ ನೇತ್ರಗೆ ಜಲರುಹಗಾತ್ರಗೆ ಜಲದಲಿ ಮಜ್ಜನವೆ ೪

ಸ್ವರ್ಣಾಂಬರಗಳ ಬಣ್ಣಿಸುತುಡುವಗೆ ಬಣ್ಣದ ವಸ್ತ್ರಗಳೆ
ಉನ್ನತ ಕೌಸ್ತುಭ ರನ್ನದ ತೊಡವಿಗೆ ಬಿನ್ನಣದೊಡವೆಗಳೆ ೫

ಬಿಸಜನಾಭನಿಗೆ ಕುಸುಮಾಸ್ತ್ರನ ಮಾನಸದಿಂ ಪಡೆದವಗೆ
ಮಿಸುಪ ತುಲಸಿಯಿಂದೆಸೆವಗೆ ಪೂಗಳ ವಿಸರ ಮನೋಹರವೇ ೬

ಗಂಧವಾಹನ ಸುಪಿಂದ ಅಸೃಜಿಸಿದ ಗಂಧವತೀತನಿಗೆ
ಗಂಧಧೂಪಗಳು ಬಂಧುರಂಗಳೆ ಗಂಧರ್ವಾತನಿಗೆ ೭

ವೇದಗೋಚರಿಸುವೇದಾತ್ಮಕನು ವೇದೋದ್ಧಾರಕನು
ವೇದವೇಶದಿಂ ಮೋದಿಸುವನೋ ಸಮ್ಮೋದ ಪರಾತ್ಮಕನೇ ೮

ಕುಕ್ಷಿಗೆನೆನೆಯದ ವಸ್ತು ಪರಾತ್ಪರ ಪೊಕ್ಕರೆ ಜಲವನ್ನ
ನಿತ್ಯ ತೃಪ್ತನಂ ಚಿತ್ರಾನ್ನಗಳಿಂ ತೃಪ್ತಿಪುದೆಂತು ಜನಾ ೯

ಮಂತ್ರ ಮೂರುತಿಗೆ ಮಂತ್ರಜ್ಞನಿಗೆ ಸ್ವತಂತ್ರವಿಹಾರನಿಗೆ
ಮಂತ್ರಯಂತ್ರಗಳ ತಂತ್ರವದೆಂತೊ ಮಂತ್ರಾಧಾರನಿಗೆ ೧೦

ಅಂತರ್ಬಹಿಯೊಳಗಂತರ ವಿಲ್ಲದನಂತರ ಗುಣಾತ್ಮಕನ
ಎಂತು ಪ್ರದಕ್ಷಿಣೆಯಾಂತು ನಮಿಪೆ ಜಗದಂತರೀಕನ ೧೧

ಸರ್ವಾಧಾರನ ಸರ್ವಶರೀರನ ಸರ್ವವ್ಯಾಪಕ ನಾ
ಸರ್ವನ ನಮಿಸುವ ಗರ್ವವೆಂತುಟೊ ಶಕ್ರ ಸಮಸ್ಕೃತನಾ ೧೨

ಧರೆಯೊಳು ಪುಲಿಗಿರಿವರದ ವಿಠಲನ ಚರಣವ ಭಜಿಸುವರ
ನಿರುತದಿ ಪೂಜಿಪ ಹರುಷವು ಸಾಲದೆ ಹರಿ ಸರ್ವೋತ್ತಮ ೧೩

೨೧೨

ಎನಗೆ ನಾನೇ ಸರಿ ನಿನಗೆ ನೀನೆ ಹರಿ
ಎಣೆಗಾಣೆನೀರ್ವರ್ಗೆ ವನಜನಯನ ಪ

ಧರೆಯನಾಳುವ ಸಿರಿಯರಸ ನೀನು ಈ
ಧರೆಯೊಳು ನಿರ್ಭಾಗ್ಯರೆರೆಯನಾನು ೧

ಪರಮೇಷ್ಠಿಯನು ಪಡೆದ ಪರಮ ನೀನು ಬಲು
ದುರಿತಂಗಳಪ್ಪಿದ ದುರುಳನು ನಾನು ೨

ಪುಣ್ಯವಂತರ ಹೃದಯ ಗಣ್ಯನೀಯ ಕೃತ–
ಪುಣ್ಯಹೀನಗರಿಗ್ರಗಣ್ಯ ನಾನು ೩

ಪತಿತಪಾವನ ನೀನು ಪತಿತ ನಾನು
[ನುತ]ದಾತ ನೀನು ನಿರ್ಗತಿಕ ನಾನು ೪

ವರ ವ್ಯಾಘ್ರಗಿರಿಯ ವರದ ವಿಠಲ ನೀನು ನಿಜ–
ಶರಣರ ಚರಣ ಧೂಳಿಪಟಲ ನಾನು ೫

೨೧೩

ನೀರಜಾಕ್ಷ ನಿನ್ನೂರಿಗೆ ಪೋಗುವ ದಾರಿಯ ತೋರಯ್ಯ ಪ

ಘೋರವಾದ ಸಂಸಾರವೆಂಬ ಕಾಂತಾರದಿ ತೊಳುಲುವೆ
ದಾರಿಯ ಕಾಣದೆ ಅ.ಪ

ಜನ್ಮಾಂತರ ಕೃತ ಕರ್ಮಗಳೆಂಬುವ ಹೆಮ್ಮರಗಳು ಬೆಳೆದು
ಧರ್ಮನಿರೋಧ ವಿಕರ್ಮದ ಬಳ್ಳಿಯು ಬಿಮ್ಮನೆ ಬಿಗಿವಡೆದು

ಹಮ್ಮಿನ ಗುಂಡಿಯು ಹೆಮ್ಮೆಯ ಕಂಟಕ
ವೆಮ್ಮನು ಕಾಲಿಡಲಮ್ಮಗೊಡವು ಹರಿ ೧

ನಾರಿಯ ಮೋಹದ ಭಾರಿಯದುರ್ಗವು
ದಾರಿಯೊಳಡಸಿಹುದು
ಮೀರಿಬರಲು ಘನ ಚೋರರು ಕಾದಿಹ
ರಾರು ಮಂದಿ ಮುಳಿದು
ಮೂರು ತೆರದೊಳಿಹ ಘೋರ ತಾಪಗಳು
ಸಾರಿ ಸಾರಿ ಬಾಯಾರಿಸುತಿರ್ಪವು ೨

ಮನೆ ಮನೆ ವಾರ್ತೆಗಳೆನಿಪ ಮಹಾನದಿ
ಯನು ದಾಂಟುವೊಡರಿದು
ಧನಕನಕಾದಿಗಳೆನಿಪ ಪಿಶಾಚಗಳನವರತವು ಬಿಡವು
ತನು ಸಂಬಂಧದ ಜನಗಳು ದುರ್ಮೃಗ
ವನು ಪೋಲುತ ನಮ್ಮನು ಬಾಧಿಸುತಿರುವರು ೩

ಕ್ಷುದ್ರ ವಿಷಯಗಳು ಛಿದ್ರವ ಹುಡುಕುವ
ವಧುವ ದೇಹದೊಳು
ಕದ್ರುಸುತರವೊಲುಪದ್ರವ ಗೈವ
ಭದ್ರದ ಭೀತಿಗಳೂ
ನಿದ್ರೆಯೊಳೆಮ್ಮನು ಮುದ್ರಿಸಿಗೈವಳು
ಪದ್ರವ ಜರೆಯೆಂಬುದ್ರಿಕ್ತಾಂಗನೆ ೪

ಸುರನರವರರೊಳು ಶರಣೋಪಾಯವರ
ನರಿಸದೆ ಮನವಿರಿಸಿ ನರಿಗಳ ಪರಿಯಲಿ ನರುಳುವರೆಲ್ಲರು
ನರಕಗಳನುಭವಿಸಿ ಶರಣಾಗತರನು ಪೊರೆಯುವ ಪುಲಿಗಿರಿ
ವರದವಿಠಲ ನಿಜ ಚರಣವ ನಂಬಿದೆ ೫

೨೧೪

ನೀ ವೆಂಕಟೇಶ ಪರಿಪಾಲಯ ಸುಗುಣಾಲಯ ಪ

ದೇವ ದೇವ ಶಿಖಾಮಣಿ ಸೇವಕ ಸುಚಿಂತಾಮಣಿ ಅ.ಪ

ಕಮಲಲೋಚನ ಭಕ್ತ ಕಮಲಲೋಚನ ಶಕ್ತ
ವಿಮಲ ಚರಿತಪೂರ ಕಮನೀಯ ಶರೀರ ೧

ಧೀರ ದಶರಥ ಕುಮಾರ ಬುಧ ಜನವಿಹಾರ
ವೀರ ಹಂ ಪರಿವಾರ ಕ್ರೂರಸುರ ವಿಹಾರ ೨

ಸರಸಿಜಾಸನನುತ ಸುರಮುನಿಸೇವಿತ
ಹರಿಣಾರಿಧಾರಾಗಾರ ವರದ ವಿಠಲಾಕಾರ ೩

೨೧೫

ಪಚ್ಚೆಯ ಬಂದೀಗ ಶ್ರೀ ಪುಲಿಗಿರಿ
ಪಚ್ಚೆಯ ನೋಡಿ ಬೇಗ ಪ

ಸಚ್ಚಿದಾನಂದರೂಪಚ್ಚರಿಯಾದಂಥ
ಮುಚ್ಚುಮರೆಯಿಲ್ಲದಚ್ಯುತನೆಂಬುವ ಅ.ಪ

ಕೈಗೆ ಸಿಕ್ಕುವುದಲ್ಲವೈ ತಕ್ಕಡಿಯಲ್ಲಿ
ತೂಗಿ ನೋಡುವುದುಲ್ಲ ವೈ
ಆಗಮಾಂತಗಳಲ್ಲಿ ಯೋಗಿ ಹೃದಯದಲ್ಲಿ
ಭಾಗವತರೊಳನುರಾಗದಿ ಮೆರೆಯುವ ೧

ಬೆಲೆಯ ಕಟ್ಟುವದಲ್ಲವೈ ಈ ಪಚ್ಚೆಯ
ನೆಲೆಯ ಕಂಡವರಿಲ್ಲವೈ

ನಲಿದು ಧ್ಯಾನಿಪರಿಗೆ ಒಲಿದು ತೋರುವ ದಿವ್ಯ
ಜಲಧರವರ್ಣದ ಜಲಜಾಕ್ಷನೆಂಬುವ ೨

ಧರೆಯೊಳುತ್ತಮವಾಗಿಹ ಶ್ರೀ ಪುಲಿಗಿರಿಯೆಂಬ
ಗಿರಿಯೊಳು ನೆಲೆಯಾಗಿಹ
ಚರಣವ ನಂಬಿದ ಶರಣರ ಪೊರೆಯುವ
ವರದವಿಠಲ ದೊರೆ ವರದನೆಂದೆಸರಾದ ೩

೨೧೬

ಭಜನೆಯ ಮಾಡಬಾರದೆ ಭಕ್ತ ಮೀರದೆ ಪ

ಭುಜಗಶಯನ ಗೋದ್ವಿಜ ಕುಲದೇವನ ಅ.ಪ

ಅಜಭವಮುಖ ಸುರವ್ರಜ ವಂದ್ಯನಪದ
ಭಜಕ ಸುಜನರಿಗೆ ನಿಜಸುಖದಾತನ ೧

ಪಂಕಜನೇತ್ರನ ಪರಮಪವಿತ್ರನ
ಶಂಕರನುತ ನಿಷ್ಕಂಲಕನ ೨

ಚರಣವ ನಂಬಿದ ಶರಣರ ಪೊರೆಯುವ
ವರದವಿಠಲ ದೊರೆ ವರದನ ೩

೨೧೭

ಮುತ್ತು ಬಂತಿದೆ ದಿವ್ಯ ಮುತ್ತು ಕೊಳ್ಳಿರೋ ಪ

ಮುತ್ತು ಬಂದಿಹುದೀಗ ನೀವೇತ್ತಿಕೊಳ್ಳಿರೆಲ್ಲ ಬಂದು
ಉತ್ತಮ ವ್ಯಾಘ್ರಾದ್ರಿ ಪುರುಷೋತ್ತಮನೆಂಬುವ ದಿವ್ಯ ೧

ಲೆಕ್ಕವಿಲ್ಲದ ಹಣವಿತ್ತರು ಸಿಕ್ಕದ ದುರ್ಲಭ ಮುತ್ತು
ರೊಕ್ಕವಿಲ್ಲದೆ ಭಕ್ತರಿಗೆ ಪುಕ್ಕಟೆಯಲಿ ಸಿಕ್ಕುವಂಥ ೨

ಧನವಂತರಿಗೆ ದೊರಕುವದಲ್ಲ ಜನರ ಕೈಗೆ ಸಿಕ್ಕುವದ್ಲ
ಮನದಲ್ಲಿ ಧ್ಯಾನಮಳ್ಳ ಮುನಿಗಳ ಸ್ವಾಧೀನವಾದ ೩

ಕ್ಷೀರಪಾರಾವಾರದಲ್ಲಿ ತೋರಿ ಮೆರೆವ ಮುತ್ತು
ಶ್ರೀರಮಾ ಮನೋಹರನುದಾರ ವರದ ವಿಠಲನೆಂಬ ೪

೨೧೮

ಶ್ರೀನಿವಾಸನಂಘ್ರಿಕಮಲ ಧ್ಯಾನ ಮಾಡಿರೋ
ಅನುಮಾನ ಬೇಡಿರೋ ಪ

ಹಮ್ಮನುಳಿದು ಬೊಮ್ಮಪಿತನ ನೆಮ್ಮಿ ಬಜಿಸಿರೊ
ದುಷ್ಕರ್ಮ ತ್ಯಜಿಸಿರೋ ೧

ಹೆಣ್ಣು ಮಣ್ಣು ಹೊನ್ನು ಸ್ಥಿರವಿದೆನ್ನ ಬೇಡಿರೋ
ನಿಜವನ್ನು ನೋಡಿರೋ ೨

ಈತ ಜಗನ್ನಾಥ ಸೌಖ್ಯದಾತ ಕಾಣಿರೋ ಪ್ರಖ್ಯಾತ ಕೇಳಿರೋ ೩

ಕಾಟಕರ್ಮಲೂಟಿಗೈವ ತೋಟಿಗಾರನ ಈ ಸಾಟಿ ಕಾಣೆ ನಾ ೪

ಶಿಲೆಗೆ ದಿವ್ಯ ಲಲನಾರೂಪವೊಲಿದು ಕೊಟ್ಟನ
ಶಾಪವಳಿಸಿ ಬಿಟ್ಟನ ೫

ಮಾನಿನಿಯಾ ಮಾನ ಜೋಪಾನಗೈದನ ಸ್ವಾಧೀನನಾದನ ೬

ಪಿಡಿದ ಮುನಿಯ ಬಿಡಿಸಿ ಪುಲಿಯ ಬಡಿದ ಧೀರನ
ಕೈಪಿಡಿಗೆ ಬಾರನ ೭

ಮರ್ತ್ಯರಿವನ ಭಕ್ತಿಯಲ್ಲಿ ರಕ್ತಿಪಡುವರು
ಭುಕ್ತಿ ಮುಕ್ತಿಪಡೆವರು ೮

ಶರಣಜನರ ಪೊರೆವ ದೊರೆಯು ವರದವಿಠಲನೆ
ಶ್ರೀಧರನೆ ಜಟಿಲನೆ ೯

೨೧೯

ಶ್ರೀನಿಳಯನನು ಕೊಂಡಾಡು
ಮಾನಸ ಶುಭ ಸಂಧಾನ ನೋಡು ಪ

ಸಾರವಿಲ್ಲದಿಪ ಸಂಸಾರದಿ ಬಲು
ಘೋರ ತಾಪಗಳು ತೋರಿದಾಗ
ಭೂರಿ ಸೌಖ್ಯಗಳ ಭೀರುತಿರ್ಪ
ಕಾರುಣಿಕನ್ನ ವಿಚಾರಮಾಡು ೧

ಸೋಹಮೆಂಬ ಘನ ಮೋಹಾಂಧತೆಯಲ್ಲಿ
ದೇಹಿಗಳ್ಗೆ ಕಡುದ್ರೋಹವಗ್ಗೈವ
ಬಾಹಿರಂಗ ಯಮ ಭಾದೆಯಲ್ಲಿ ತ್ರಾಹಿ
ತ್ರಾಹಿಯನೆ ತಾಳ್ವರೇನು ೨

ಸಾಪರಾಧಿಗಳ ಕಾಪಾಡುವ ದೊರೆ
ಶ್ರೀ ಪುಲಿಬೆಟ್ಟದ ಭೂಪನೇ ಸರಿ
ಆ ಪ್ರದರ್ಶಕನ ಶ್ರೀ ಪಾದಗಳನು
ಜ್ಞಾಪಕಗೊಂಡನು ತಾಪಗೂಡಿ ३

೨೨೦

ಸರ್ವಾಂತರ್ಯಾಮಿ ನೀನೆ ಸರಿ ಸರ್ವಜ್ಞನು ಸ್ವಾಮಿ ಪ

ಸರ್ವಕಾರಣ ಸರ್ವಾಧಾರನು
ಸರ್ವಶರೀರಕ ಸರ್ವನಿಯಾಮಕ ಅ.ಪ

ಹರಿತನಯನಿಗಂದೂ ಸ್ವಶಕ್ತಿಯ
ಹರಿ ಕೊಡುವನು ಬಂದು
ಹರಿತನುಜನಿಗದು ಹರಿಯದು ಎನ್ನುತ
ಹರಿಸುತನನು ಗುರಿಮಾಡಿದೆ ೧

ದ್ರೋಣಸನುತ ಬಂದು ನಿಶಿಯೊಳು
ಮನೆ ಕಾಣಿಸುವನು ಎಂದೂ
ಪ್ರಾಣಪದಕರನು ಕಾಣದಂತೆ ಬಲು
ಜಾಣತನದಿ ಸಪ್ರಾಣರ ಮಾಡಿದೆ ೨

ಮರುತನ ಸುತನೆಂದು ಧೃತರಾಷ್ಟ್ರನು
ಕರದಪ್ಪುವನೆಂದು
ಭರದಿಂ ಲೋಹದೊಳೆರಕದ ಭೀಮನ ವಿರಚಿಸಿ
ಶರಣರ ಹರಣವನುಳುಹಿದೆ ೩

ಶೈಲದ ಗುಹೆಯೊಳಗೆ ಮಲಗಿದ್ದ ನೃ
ಪಾಲನ ಖತಿಯೊಳಗೆ
ಕಾಲಯಮನಂ ಕಾಲನ ಕಾಣಿಸಿ
ಮೇಲೆ ಶರಧಿಯೊಳಾಲಯ ಮಾಡಿದೆ ೪

ಪರಮಋಷಿಯನಂದು ತಾ ಪಿಡಿಯಲು
ದುರುಳ ಪುಲಿಯು ಬಂದು
ಕರದ ಖಡುಗದಿಂ ಹರಿಯನು ಖಂಡಿಸಿ
ಶರಣನ ಸಲಹಿದ ವರದವಿಠಲಹರಿ ೫

೨೨೧

ಹಣ್ಣು ಬಂದಿದೆ ಜನರು ಹಣ್ಣುಕೊಳ್ಳಿರೋ
ಗಣ್ಯವಾಗಿ ಬಣ್ಣಿಸುತ್ತ ಪುಣ್ಯವಂತರುಣ್ಣುತಿರುವ ಪ

ಬೀಜವಿಲ್ಲದೆ ಬೆಳೆದ ಭೂಜವಿಲ್ಲದ ಬೀಜ
ಭೂಜಗಳಿಗೆ ತಾನೆ ಬೀಜವಾಗಿ ಮೆರೆಯುತಿರುವ ೧

ಹುಟ್ಟಿ ಬೆಳೆಯದಾ ಜನರು ಮುಟ್ಟಿ ತೊಳೆಯುದಾ
ಎಷ್ಟು ದಿವಸವಿಟ್ಟಿರಲು ಕೊಳೆತು ಕೆಟ್ಟು ಹೋಗದಾ ೨

ಬೆಲೆಗೆ ಬಾರದಾ ತನ್ನ ನೆಲೆಯ ತೋರದ
ಒಲಿದವರಿಗೆ ಸುಲಭವಾಗಿ ಹಲವು ವಿಧದಿ ಹೊಳೆಯುತಿರುವ ೩

ಅರಿಯದವರಿಗೆ ರುಚಿಯನರಿತ ಜನರಿಗೆ ಅರಿತ ಮೇಲೆ
ನಿರುತವಿರುತ ಸರಸ ಮಧುರ ಭರಿತ ಬರಿತ ೪

ಸಿರಿ ಮನೋಹರ ವ್ಯಾಘ್ರಗಿರಿಯ ಮಂದಿರ
ಶರಣ ಜನರ ಪೊರೆವ ನಮ್ಮ ವರದ ವಿಠಲನೆಂಬದಿವ್ಯ ೫

೨೨೨

ಹರಿಕೃಪೆಯಿಂದಲಿ ದೊರೆತಿತು ಎನಗೀ ಸಿರಿ ತಂಬೂರಿ ಪ

ನರಹರಿ ನಾಮಸ್ಮರಣೆಯಗೈಯುವ ನರರಿಗೆ ಸಹಕಾರಿ ಅ.ಪ

ತಾಪತ್ರಯವನು ಲೋಪಗೈವ ಸುಖರೂಪಿನ ತಂಬೂರಿ
ಶ್ರೀಪತಿ ಭಕ್ತಿನಿರೂಪಣದಿಂದಖಿಲಾಪತ್ಪರಿಹಾರಿ ೧

ವಾಸುದೇವ ನಿಜದಾಸರು ಪಿಡಿಯುವ ಭಾಸುರ ತಂಬೂರಿ
ವಾಸುಕಿಶಯನ ವಿಲಾಸದ ಕೀರ್ತಿ ವಿಕಾಸದ ಜಯಭೇರಿ ೨

ಅಂಬುಜಭವನ ಕುಟುಂಬಿನೆಯ ಕರಾಲಂಬನ ತಂಬೂರಿ
ತುಂಬುರು ನಾರದರಂಬುರುಹಾಕ್ಷನ ಹಂಬಲಿಗನು ಸಾರಿ ೩

ಗಂಧರ್ವರ ಕರಪೊಂದಿ ಮೆರೆವ ಬಲು ಸುಂದರ ತಂಬೂರಿ
ಸುಂದರಿಯರು ನಲವಿಂದಲಿ ನುಡಿಸುವಾನಂದ ಸುಗುಣಧಾರಿ ೪

ಶ್ರುತಿಯುತಮಾಗಲು ಮತಿಯುತರಿಗೆ ಸಮ್ಮತವಹ ತಂಬೂರಿ
ಶ್ರುತಿ ಹೀನತೆಯಿಂದತಿಶಯಮಾಗದು ಕೃತಿ ಶತವದು ಸಾರಿ ೫

ಲೋಕದ ಜನರಿಗನೇಕ ಸುಕೃತ ಪರಿಪಾಕದ ತಂಬೂರಿ
ಈಕಲಿದೋಷ ನಿರಾಕರಣೆಗೆ ಬಹು ಭೀಕರ ಮುಖದಾರಿ ೬

ಧರೆಯೊಳು ಪುಲಿಗಿರಿ ವರದ ವಿಠಲನ ಬಿರಿದಿನ ತಂಬೂರಿ
ದುರಿತವೆಂಬ ಮದಕರಿಯನು ಸೀಳುವ ಹರ್‍ಯಕಾರಿ ೭

(ಊ) ಕ್ಷೇತ್ರವರ್ಣನೆ

೨೨೩

ಹುಲಿಗನಮೊರಡಿ

ಶೇಷಾದ್ರಿಯನು ನೋಡಿರೋ ಸೇವಕಪರಿ
ತೋಷಾದ್ರಿಯನು ಕಾಣಿರೊ ಪ

ಶೇಷಾದ್ರಿಯನು ನೋಡಿ ದೋಷಾದ್ರಿ ಹುಡಿಮಾಡಿ
ಶೇಷಾದ್ರೀಶನ ಪರಿತೋಷದಿಂ ಪಾಡಿ ಅ.ಪ

ಚಿನ್ನದಗಿರಿಯಂದದಿ ರಂಜಿಸುವುದು
ಬಣ್ಣದೊಳತಿ ದೂರದಿ
ಸಣ್ಣದಾಸರು ಗಿರಿ ರನ್ನಮೋಲು
ವರ್ಣಹ ಶಯನನ ಕಣ್ಣಲಿ ಕಾಣಿಪ ೧

ಬಗೆ ಬಗೆ ವೃಕ್ಷಗಳು ಬನಂಗಳು
ಬಗೆ ಬಗೆ ಪಕ್ಷಿಗಳು
ಬಗೆ ಬಗೆ ಮೃಗಗಳು ಸೊಗಸಿನೊಳಿರೆ ಬಹು
ಬಗೆ ಬಗೆ ಧಾತುಗಳಿಗೆ ನೆಲೆಯಾಗಿಹ ೨

ಯುಗಗಳ ಸಂಖ್ಯೆಯೊಳು ನಾಮಂಗಳು
ಯಗಳದ್ವಯ ಮೆನಲು
ಯುಗಮೊದಲೊಳಗೆ ಪನ್ನಗಗಿರಿಯನೆ ತ್ರೇತಾ
ಯುಗದಲ್ಲಿ ಹೇಮದ ನಗವೆಂಬ ಪೆಸರಿನ ೩

ದ್ವಾಪರಯುಗದೊಳಗೆ ವೆಂಕಟನಾಮ
ವೀ ಪರ್ವತತಕ್ಕೊದಗೆ
ಶ್ರೀಪುಲಗಿರಿಮುಖ ರೂಪನೀಯುಗದೊಳು
ಶ್ರೀಪತಿಯುತ್ತ ನಿರೂಪದೊಳೊಪ್ಪುವ ೪

ದೂರದಿ ಶೋಭಿಸುವ ದುರ್ಜನರಿಗೆ
ದೂರವೆ ಮಂದಿರವು
ಚಾರುವಿಮಾನ ಪ್ರಾಕಾರವ ತೋರಿಪ
ವಾರಿಜಾಸನ ಪಿತ ವರದ ವಿಠಲನಿಹ ೫

೨೨೪

ಶ್ರೀನಿವಾಸನ ಸೇವೆಗೈಯ್ಯುವ ಜಾಣರೆಲ್ಲರು ಬನ್ನಿರೈ
ಧ್ಯಾನಲಭ್ಯನ ಕಾಣಲಿಚ್ಛಿಪ ಮಾನಿಸರ ಕರತನ್ನಿರೈ ಪ

ಪರಮಪದದೊಳಗಿರದೆ ವೆಂಕಟಗಿರಿಯೊಳಿರ್ದನು ಪೂರ್ವದಿ
ಭರದಿವಿಪ್ರಗೆ ವರವನಿತ್ತಿಗಿರಿಗೆ ಬಂದನು ಪ್ರೇಮದಿ ೧

ದೂರವಲ್ಲ ವಿಚಾರಿಸಲು ಹರಿದಾಂ ಭೂಧರಮಿಲ್ಲಿಗೆ
ಚಾರುಮೂರ್ತಿಯ ಚರಣಸೇವೆಗೆ ಸಾರುವೆವು ನಾವಲ್ಲಿಗೆ ೨

ಚರಣಸೇವಕರನ್ನು ಮರೆಯದೆ ಪೊರೆಯುವನು ಮೋದದಿ
ಪರಮಪುಲಿಗಿರಿವಸವೆಂಕಟ ವರದ ವಿಠಲನೆ ಲೋಕದಿ ೩

೨೨೫

ಶ್ರೀ ವ್ಯಾಘ್ರಗಿರಿವಾಸ ಶ್ರೀ ಶ್ರೀನಿವಾಸ
ದಿವ್ಯಸೂರಿ ಸಮಾಜ ಸೇವ್ಯ ಪಾದಾಬ್ಜ ಪ

ಕಮಲಸಂಭವಜನಕ ಕಮಲಾಪ್ತ ಕುಲತಿಲಕ
ಕಮಲ ಸನ್ನಿಭಚರಣ ಕಲುಷಗಣಹರಣ
ಕಮನೀಯ ಗುಣಹಾರ ಕಲ್ಯಾಣಗುಣ ಪೂರ
ಕಮಲಾ ಮನೋಹರ ಕಲಿತ ಶೃಂಗಾರ ೧

ಲೋಕಮೋಹನರೂಪ ಲೋಕರಕ್ಷಣ ಚಾಪ
ಶೋಕ ಮೋಹವಿದೂರ ಸುಕೃತಿ ಪರಿವಾರ
ನಾಕನಿಲಯ ಸಮಾಜ ನಮಿತ ಪಾದಾಂ ಭೋಜ
ಪಾಕರಿಪು ಮಣಿನೀಲ ಪದ್ಮಾನುಕೂಲ ೨

ಮಾಂಡವ್ಯ ಮುನಿಸೇವ್ಯ ಮಾನಸಾಂಬುಜಭವ್ಯ
ಪಾಂಡುಸುತ ಪರಿಪಾಲ ಪಾವನ ಸುಶೀಲ
ಭಾಂಡ ಜಾರ್ತಿಚ್ಛೇದ ಭಾಗವತ ಸನ್ಮೋದ
ಗಾಂಡೀವಿ ಸುಶ್ಯಾಲ ಗಾನರಸಲೋಲ ೩

ತವಚರಣ ಪಂಕಜಂ ತೃಪ್ತಜನ ಸುರಕುಜಂ
ಭವಜಲಧಿಕಾರಣಂ ಭವತು ಮಮ ಶರಣಂ
ತವನಾಮಕೀರ್ತನಂ ತಾಪಪರಿಮೋಚನಂ
ಶ್ರವಣಯೋರ್ದೇಹಿಮಮ ಶಮಿತಾಘಮಹಿಮಾ ೪

ಸಕಲಲೋಕ ಶರಣ್ಯ ಸರ್ವದೇವವರೇಣ್ಯ
ನಿಖಿಲಭೂತವಾದ ನಿರ್ಮಲ ಸುವೇಷ
ಅಕಲಂಕ ಚರಿತ ನಿತ್ಯಾನಂದ ಗುಣಭರಿತ
ಶಿಖಿರಿಷ ವಿಹರಣ ಕುಶಲ ಶ್ರೀವರದ ವಿಠಲ ೫

೨೨೬

ವಂದೇಹಂ ವ್ಯಾಘ್ರಾದಿನಿವಾಸಂ ವೆಂಕಟೇಶಂ
ನಿರ್ಮಲವಿಧಹಾಸಂ ಪ

ವೃಂದಾರಕ ಗಣವಂದಿತ ಪದಮರವಿಂದನಯನ
ಮಾನಂದ ವಿಲಾಸಂ ಅ.ಪ

ಶ್ರೀವೇದಪುಷ್ಕರಿಣೀ ತಟ ಶ್ರೀ ಕರೋದ್ಯಾನ ವಿಹಾರಂ
ಪಾವನವೃದ್ಧಿ ವಿಮಾನಾಂತರ ಪದ್ಮಾಸನಕೃತ ನಿಜಪಾರಿಚಾರಂ ೧

ಸಕಲಲೋಕ ಸಂರಕ್ಷಣಶೀಲನ ಸಂಪದ ಮಾಶ್ರಿತ ಸುರಭೂಜಂ
ಅಕುಟಿಲ ಭಕ್ತಿ ಮಾಂಡವ್ಯ ಮುನೀಂದ್ರ ಆಕಲಿತ
ನಿಜ ಸಂಸ್ತುತಿ ಭಾಜಂ ೨

ಸಾರಸಭವ ಸಂಕ್ರಂದನ ಮುಖತ್ರಿದಶಾಧಿಪ ಜನ ಪರಿವಾರಂ
ವಾರಿಜನಿಲಯಾ ವಾಸಮಕುಂಠಿತ ವರದವಿಠಲ
ಮುಕ್ತಿಸುಗುಣ ಮುದಾರಂ ೩

೨೨೭

ಶ್ರೀಶ್ರೀನಿವಾಸ ಶ್ರೀಭೂವಿಲಾಸ ಶ್ರಿತಜನ
ಪೋಷ ಪಾಹಿ ಸುವೇಷ ಪ

ಅಚ್ಯುತಮಾನಮದಚ್ಯುತದಿ
ಪಚ್ಛಿನ್ನಮನೋರಥ ನಿಶ್ಚಿತ ಪಾಹಿ ೧

ಅಂತರಹಿತ ನಿತ್ಯಾನಂತ ಮಹಿಮ ದು
ರಂತ ವಿಕ್ರಮ ದನುಜಾಂತಕ ಪಾಹಿ ೨

ಗೋವಿಂದ ನತಸುಮನೋವೃಂದ ದಳಿತತ
ಮೋವೃಂದ ಪೋಷಿತ ಗೋಬೃಂದ ೩

ಕೇಶವ ಸಕಲ ಲೋಕೇಶ ಗೌರೀಶ ವಾ
ಗೀಶಸನ್ನುತ ಕೋಶ ಮಾಂ ಪಾಹಿ ೪

ನಾರಾಯಣ ಭಕ್ತಪರಾಯಣ ಪರಿವಾರಾಯಿತ
ಸುರವಾರ ಮಾಂಪಾಹಿ ೫

ಮಂದರಧರ ಮುಚುಕುಂದ ವರದ ಆ
ನಂದ ಸದನ ಗೋವಿಂದ ಮಾಂಪಾಹಿ ೬

ವಿಷ್ಣೋಸುಜನವರ್ಧಿಷ್ಣೋ ಸಂತೋಷಿತ
ಜಿಷ್ಣು ಸುರುಜಿಷ್ಣೋ ಮಾಂ ಪಾಹಿ ೭

ಮಧುಸೂಧನ ದುರ್ಮದ ಬೇಧನ ಬಹು
ವಿಧ ಬೇಧನ ನುತಬುಧಜನ ಪಾಹಿ ೮

ಅಕ್ರಮನುಪಿತ ನಿಜಕ್ರಮ ಜಿತವಿಶ್ವ
ಶಕ್ರಸಹಜ ತ್ರಿವಿಕ್ರಂ ಪಾಹಿ ೯

ಪಾವನ ದೈತ್ಯ ವಿರಾಮನಮಿತ ಸುರ
ಕಾವನ ಮುನಿಜನರ ಪ್ರೇಮ ಮಾಂಪಾಹಿ ೧೦

ಶ್ರೀಧರ ಕರಧೃತ ಭೂಧರ ಚಕ್ರಗ
ದಾಧರ ಕೌಸ್ತುಭ ಕಂಧರ ಪಾಹಿ ೧೧

ನಾಕೇಶವಂದ್ಯ ಹೃಷಿಕೇಶ ಮುನಿಹೃದ
ಯಾಕಾಶ ಗೋಚರಾಕೇಂದು ಪಾಹಿ ೧೨

ಪದ್ಮನಾಭ ನತಪದ್ಮಜ ಮಾನಸ
ಪದ್ಮಗೋಚರ ಪದಪದ್ಮಮಾಂಪಾಹಿ ೧೩

ದಾಮೋದರ ಸುಜನಾಮೋದನ ಧೃತ
ಕಾಮೋದಕ ಜಿತಕಾಮ ಮಾಂಪಾಹಿ ೧೪

ದೋಷರಹಿತಗುಣ ಭೂಷಣ ಸತಜನ
ಪೋಷ ಸಂತೋಷಿತ ಶೇಷಮಾಂ ಪಾಹಿ ೧೫

ವಾಸುಕಿಶಯನ ವಿಕಾಶ ಕಮಲನಯ
ನಾಸುರಮದನ ಶರಾಸನ ಪಾಹಿ ೧೬

ದುಷ್ಟಮರ್ಧನ ಜಗದಿಷ್ಟುವರ್ಧನ ಸುರ
ಕಷ್ಟ ಕೃಂತನ ಪರಿತುಷ್ಟ ಮಾಂ ಪಾಹಿ ೧೭

ವರದವಿಠಲ ವ್ಯಾಘ್ರ ಧರಣೀಧರಾಗ್ರ ವಿ
ಹರಣ ಸಕಲ ಗುಣಾಭರಣ ಮಾಂ ಪಾಹಿ ೧೮

(ಖ) ವಿಶೇಷಸಂದರ್ಭದ ಹಾಡುಗಳು

೨೨೮

ಬರಗಾಲವನ್ನು ಕುರಿತ ಹಾಡುಗಳು

ನಿನಗಿದು ಘನವೆ ನಿತ್ಯಾತ್ಮಕ
ವನಜಭವಾದಿಗಳನು ಪಾಲಿಪ ದೇವ ಪ

ಸದಯ ನೀನಾದರೆ ಬದುಕಿಸಿ ಪಶುಗಳ
ಮುದವನು ತೋರಿಸು ಮಧುಸೂಧನ ಈಗ ೧

ಇದಿರಿಗೆ ನೋಡಲಾರದೆ ನಿನ್ನ ದೂರಿದೆ
ಇದು ಒಂದು ತಪ್ಪು ಎನ್ನದು ಎಂದು ಮನ್ನಿಸು ೨

ವಿಷದ ನೀರನು ಕುಡಿದಸುವನ್ನು ಕಳಕೊಂಡು
ಪಶುಪಾಲರಿಗೆ ನೀನಸುವಿತ್ತು ಪೊರೆದೆ ೩

ಹೊಟ್ಟೆಯೊಳಗೆ ಸತ್ತು ಹುಟ್ಟಿದ ಶಿಶುವನು
ಮುಟ್ಟಿ ಜೀವವನಿತ್ತೆ ಕೃಷ್ಣಾಕೃಪಾಕರ ೪

ಗುರುಸುತನನು ಯಮಪುರದಿಂದ ಕರೆತಂದ
ಪರಮ ಶ್ರೀ ಪುಲಿಗಿರಿ ವರದ ವಿಠಲರಾಯ ೫

೨೨೯

ಬದುಕಿಸೀ ಪಶುಗಳನ್ನು ಭಗವಂತ ನೀನು ಪ

ಬದುಕಿಸೀ ಪಶುಗಳ ಭವರೋಗ ವೈದ್ಯನೆ
ಕದಲಿಸೀ ರೋಗವ ಕರುಣಿಗಳರಸನೆ ಅ.ಪ

ಗೋವುಗಳೆಲ್ಲಾ ಹೊಟ್ಟೆ ನೋವಿಂ ಕಂಗೆಟ್ಟು
ಮೇವನು ಬಿಟ್ಟವಿದಾವ ರೋಗವೋ ಕಾಣೆ ೧

ಹೊಟ್ಟೆ ಕಳೆದು ಕೆಂಗೆಟ್ಟಧಾತುಗಳೆಲ್ಲಾ
ಕೆಟ್ಟು ಜೀವಂಗಳ ಬಿಟ್ಟ ಬಿಡದ ಮುನ್ನ ೨

ನಾಲಿಗೆ ನೀಡವು ಕಾಲು ಕೆಟ್ಟವು ಕಂ
ಣ್ಣಾಲಿ ಕೆಂಪಾದವು ಮೂಲವೆ ತಿಳಿಯದು ೩

ಗೋವುಗಳಿಗೆ ಭೂದೇವರುಗಳಿಗೆಲ್ಲ
ದೇವ ನೀನಲ್ಲವೆ ದೇವಕೀ ತನಯನೆ ೪

ಸತ್ತವರಿಗೆ ಜೀವವಿತ್ತ ಬದುಕಿಸಿದೆ
ಮೃತ್ಯು ದೇವತೆ ನಿನ್ನ ತೊತ್ತಹಳಲ್ಲವೆ ೫

ದಾಸನು ನಾನೆಂಬ ವಾಸಿಯುಳ್ಳರೆ ಬೇಗ
ವಾಸಿಯ ಮಾಡಯ್ಯ ನೀ ಮೋಸವ ಮಾಡದೆ ೬

ಇಷ್ಟದಿ ನೆನೆವರ ಕಷ್ಟವ ಕಳೆವ ಮಲಿ
ಬೆಟ್ಟದೊಳಿಹ ವರದ ವಿಠಲ ಕೃಷ್ಣನೀ ೭

೨೩೦

ಮಳೆಯ ಪಾಲಿಸಯ್ಯ ಮಂಗಳ–
ನಿಳಯ ಪಾಲಿಸಮ್ಮ ಪ

ಬಿನೆಯೊಳು ಮಳೆಯನು ತಳೆಯದೆ ತೃಣಗಳು
ಬೆಳೆಯದ ಗೋವುಗಳಳವುವಯ್ಯ ಅ.ಪ

ಗೋವಿಪುರ ಕುಲವ ಕಾಯುವ
ದೇವನು ನೀನಲ್ಲವೇ
ಮೇವುಗಳಿಲ್ಲದೆ ಗೋವುಗಳೆಲ್ಲವು
ಸಾವುವು ನಿನ್ನೊಳಿದಾವನು ಕಾವನು ೧

ಕರೆಯೊಳು ನೀರಿಲ್ಲ ಬಾವಿಗ–
ಳೊರತೆಯ ಸೋರಿಲ್ಲ
ತುರುಗಳು ಜೀವನದಿರವನು ಕಾಣದೆ
ಹರಣವ ಬಿಡವುವು ಕರುಣದಿ ಬೇಗನೆ ೨

ಬಲರಿಪುಖತಿಯಲಿ ಬಾಧಿಪೆ
ಜಲಮಯ ರೀತಿಯಲಿ
ಚಲಿಸದೆ ಕೊಡೆವಿಡಿದಳುಹಿದೆ ಕರದೊಳು
ಚಲವನು ಗೋವ್ಗಳ ಬಳಗವನೀಗಳು ೩

ಜಲನಿಧಿ ಕೃತ ಶಯನ ಶಾರದ
ಜಲರುಹದಳನಯನ
ಜಲಧೀಪತಿ ಜಲಜರ ಮೂರುತಿ
ಜಲಜಕರಗಳು ಜಲದಾಗರದಿಂ ೪

ದಾರಿಯ ಜನರೆಲ್ಲ ಬಹು ಬಾ–
ಯಾರಿ ಬರುವರಲ್ಲ
ದೂರಗಿಂ ತಂದಿಹ ನೀರನು ಲೋಭದಿ
ನಾರಿಯರೆಲ್ಲ ವಿಚಾರಿಸುತಿರ್ಪರು ೫

ಬೆಳೆದಿಹ ಸಸ್ಯಗಳು ಬಿಸಿಲಿನ
ಜಳದಲಿ ಬಾಡಿಹವು
ನಡಿನ ನಯನ ನಿನ್ನೊಲುಮೆಯ ತೋರಿಸಿ
ಫಳಲನೆ ಪೈರುಗಳಳಿಯುತ ತೆರದೊಳು ೬

ಕರುಣಾನಿಧಿಯೆಂದು ನಿನ್ನನು
ಶರಖಹೊಕ್ಕೆನಿಂದು
ಶರಣಭರಣ ಪುಲಿಗಿರಿಯೊಳು ನೆಲೆಸಿಹ
ವರದ ವಿಠಲ ದೊರೆ ವರದ ದಯಾನಿಧೆ ೭

ಚನ್ನಪಟ್ಟಣದ ಅಹೋಬಲದಾಸರ ಕೀರ್ತನೆಗಳು

(ಅ) ಶ್ರೀಹರಿ ಸ್ತುತಿಗಳು

೨೩೧

ಕ್ಷೀರ ಪುರಾಧೀಶನೆ ಸರೋಜದಳ ಮುಖ
ನಾರಿಯರೂಪನು ತಾಳ್ದನೇದೇವಾ ಪ

ಅಗಣಿತಾವತಾರಾ ಆದಿಸುಧೀರಾ
ಮತ್ಸುಗುಣಾಂಕನೆ ವೈಷ್ಣವಕುಲ ಶೇಖರಾ
ಬಗೆ ಬಗೆ ಯಾದೀಪರಿ ಹಗರಣವೇನೂ
ನಗೆ ಮುಖ ಮಾಗಿಹ ನಾರಾಯಣದೇವಾ ೧

ತತ್ವವಿದೆಂಬೊ ತಾವನುಗಾಣೆ
ತತ್ವವಿದೆಂದೆನಗೆ ನೀಂಕೃಪೆಮಾಡ್ಯೆ
ತತ್ವ ವಿಚಾರದೊಳು ತಾಮಸ ಹೋಗಿ
ಸತ್ವಗುಣಾಧಿಕನೆಂದೆನಿಸೆನ್ನಾ ೨

ಆಶ್ರಿತ ಪಾಲಾ ಅಂತಕ ಶೂಲಾ
ದಾಸಜನಾರ್ಚಿತ ದೇವಸುಶೀಲಾ
ದಾಸರು ವಂದಿಪೆ ದಾಹವ ನಿಂಗಿಸೋ
ದೇಶಿಕ ತುಲಶೀರಾಮದಾಸನೆ ದೇವಾ ೩

೨೩೨

ದೇವಾ ನೀ ಪಾಲಿಪುದೂ ಓ ಹರಿಯೆ ಹರಿಯೆ ಪ

ಮಾವಕಂಸನಕೊಂದ ಮದನ ಜನಕ ರಂಗಾ
ಪಾವನಾಂಗನೆ ನಿಜಸೇವೆಯೊಳಿರಿಸೆಂದೂ ೧

ದಾರುಧಿ ಭೀಕರನ್ಯಾರೊ ವೈಷ್ಣವೋತ್ತಮ ಬಾರೊ
ಸಾಧುಶಿಖರನಾರೊ ಸತ್ವರೂಪನು ತೋರೊ ೨

ಧರಣೀನಾಗನಗರಿ ಕರುಣವಾರುಧಿಯಾದಾ
ಗುರುವೆ ತುಳಶೀರಾಮ ಪರಮಾತ್ಮನೆ ನೀ ಬಾರೊ ೩

೨೩೩

ನಾರಾಯಣ ಯತಿವರ
ವಾರುಧಿಶಯನ ಪಾರಮಹಿಮ ವೋ ನಾರಾಯಣ ಪ

ಮಾರಜನಕ ಮರೆತೋರಣ
ದಾರಿಗಾಣೆ ಧವಳನಯನಾ
ಮೀರಿಬರುವ ದುರಿತಗಳನು
ದೂರಿದ ಮಾರಿದೆ ಯಾರದು ಕೇಳವೋ ೧

ಪರಮಪದ ನಿವಾಸನ್ಯಾರೊ
ಸುರಮುನೀಂದ್ರ ಸುಖವ ಬೀಳೊ
ತರವಹುದೆ ನೋಡಿಲ್ಲಾಡಿರಲು
ಬರದೆ ಬರದೆ ಬಿರುದೆ ವರದ ೨

ವಾಸವಾದಿ ವಿನುತಹರಿಯೆ
ದಾಸ ತುಲಶಿರಾಮನಾದೆ
ಈಶ ರೂಪ ಮಂಗಳಪುರಿಯ
ವಾಸನೆ ನಾನಿನದಾಸನು ಪೋಷಿಸೋ ೩

೨೩೪

ಪರಮಾತ್ಮನೇ ಪಾಲಿಸೊ ಬೇಗ ನೀ ಪ

ಕರಸುದರ್ಶನನೆ ನೀರಜಾರಿಪ್ರಿಯ
ನಾರಸಿಂಹನ್ಯಾರೊ ನಾಗಶಯನ ಬಾರೊ ೧

ಅಂತರಾತ್ಮನ್ಯಾರೋ ಇಂತು ಬೇಗ ಬಾರೊ
ಕಂತುಜನಕನ್ಯಾರೋ ಕಾಮನಯ್ಯ ಬಾರೊ ೨

ಆದಿರೂಪನ್ಯಾರೊ ಅಚ್ಚುತ ನೀ ಬಾರೊ
ವಾದಿಭೀಕರನಾದಾ ವೆಂಕಟೇಶನೆಂಬೊ ೩

ವಾಸವ ವಿನುತಾ ಹಾಸನದೊಳಿಪ್ಪ
ದೇಶಿಕಾ ನೀ ತುಲಶೀರಾಮದಾಸನಾದ ೪

೨೩೫

ಬಾರೊ ಬಾರೊ ಭಜಕರ ಪೋಷನೆ ಪ

ವಾರಿಶಯನ ಮಮ ಘೋರ ದುರಿತಹರ
ನಾರಾಯಣ ನಿನ್ನ ನಂಬಿದೆ ನೀ ಬೇಗಾ ೧

ಭಜಕರ ಪೋಷನೆ ಭಜನ ವಿಲಾಸನೆ
ನಿಜಮಣಿಯಾದ ನಮ್ಮ ವಿಜಯಸಾರಥಿಯೆ ನೀ ೨

ಸಾಧುಜನರ ನುತಾ ಸರ್ವಶರಣ್ಯನೆ
ಮಾಧವನೆ ನೀ ಬಾರೋ ಮದನಜನಕ ೩

ವಾಸವನುತ ಹರಿ ಹಾನಸದೊಡೆಯನೆ
ದೇಶಿಕ ತುಲಸಿ ನಿನ್ನ ದಾಸಾನು ನಾನಾದೆ ೪

೨೩೬

ಭಕ್ತ ಜನೋದ್ಧಾರನ್ಯಾರೋ ದೇವನ್ಯಾರೋ ಪ

ನಿಜಮುಕ್ತಿ ದಾಯಕನೆ ಕೇಶವ ಪಾದತೋರೋ ಅ.ಪ

ಭಕ್ತಿ ಜ್ಞಾನ ವಿಚಾರಕೆನ್ನನು
ಹೊಕ್ತಿಗೊಳಿಸೆಂತೆಂದು ಬೇಡುವೆ

ಶಕ್ತಿರೂಪನು ತಾಳಿ ತಿರುಗಿ ವಿ
ರಕ್ತನಾದಾಂತ ಪರಾತ್ಮನೆ ೧

ಬಾಲಕೃಷ್ಣನೆ ಬಾರೊ ಭಕ್ತನು
ಶೀಲ ಗೋಕುಲಪಾಲ ಶ್ರೀಹರಿ
ಆಲಿಸೆನ್ನಯ ಬಿನ್ನಪದ ನಿಜ
ನೀಲಮೇಘಶ್ಯಾಮ ರಂಗಾ ೨

ಧರಣಿ ಚೆನ್ನಪುರೀಶ ನಿಮ್ಮಯ
ಚರಣ[ಧೂಳಿಯ]ಕುರುಹು ತೋರಿದ
ಗುರುವು ತುಲಶೀರಾಮನೆ ನಿಜ
ಪರಮತತ್ವವಿಲಾಸ ದೇವ ೩

೨೩೭

ಮಾಧವ ಮಧುಸೂದನೆನಿಪ ಪಾದ ಭಜನೆಯ ಮಾಡುವೇ
ಸಾಧು ಶಿಖರನೆ ಸರ್ವತಂತ್ರನೇ ಬೋಧಿಸೆನುತಾ ಬೇಡುವೇ ಪ

ವಾರಿಧಿಶಯನ ಪಾರಮಹಿಮ ಪರಾತ್ಪರ ಪಾಪವಿದೂರನೇ ಅ.ಪ

ಆತೊಡರ್ಚಿತುವೋತಡಂತಿಸೂ ಭೂತಪಕ್ಷದಯಾನಿಧೆ
ಭೀತಿಗೊಳಿಸದಿರೆನ್ನ ನೀನೆ ಅನಾಥರಕ್ಷ ಕೃಪಾನಿಧೇ ೧

ನೀನೆ ಕಲುಷವಿಖಂಡ ನಿಶ್ಚಲ ನೀನೆ ವೇದಾಂತಾರ್ಯನೂ
ಶ್ರೀನಿವಾಸದಯಾನಿಧೆ ಜಗದಾನುಭವತತ್ತ್ವಾರ್ಯನೂ ೨

ದೇಶಿಕನೆ ತ್ವದ್ದಾಸನಾಡೆಯ ಆಶೆಯಳಿದೀಗೆರಿನನೂ
ಪಾಶರಹಿತನ ಮಾಡೊಯೆನುತಲಿ ಪಾಡುವೆನಾ ನಿನಗೆನ್ನನೂ ೩

ನಿತ್ಯಪೂರ್ಣನೆ ಸತ್ವಗುಣಮಣಿ ಚಿತ್ಸುಖಾಂಶ ಚಿದಂಬರಾ
ತತ್ವಮೆನಗೆ ಪ್ರಸಾದಿಸಿದ ಶ್ರೀತುಲಶಿರಾಮ ದಿಗಂಬರಾ ೪

೨೩೮

ವೇದಾಂತಸಾರಂ ಸುಧೀರಂ ಪ

ಮಾಧವ ರೂಪನೆ ಮಂಗಳ ಜಯ ಹರಿ ಅ.ಪ

ಪಾವನ ಪಾದಂ ದೇವಾ ಸಭಾವಂ
ಗೋವರ್ಧನಗಿರಿಧರ ಯತಿ [ಜನವಾ]ರಿಜಭೋಜಂ ೧

ಚಂದ್ರಪುರೀಶಂ ಚಕ್ರಧರೇಶಂ
ಇಂದ್ರಸುರಾರ್ಚಿತ ಪದವಿನೋದಂ ನಾದಂ ೨

ವರದರಾಜಾ ಅಭಯ ವೈಷ್ಣವರೂಪಂ
ಪರಮಗುರುವು ತುಲಶೀಮಣಿದೀಪ ಭೂಪಂ ೩

೨೩೯

ನಾರಾಯಣ ನರಹರಿ ಪರಮಾತ್ಮ ನೀ ಪಾಲಿಸೋ ಪ

ಆರು ಮೂರಾರೊಳೆನ್ನ ಬಿಡಿಸೊ ಪಾರುಗಾಣಿಸೋ ಮುನ್ನಾ
ಕೋರಿದೆನು ಪರ ತೋರೋ ನಿಜ ನರಹರಿ ೧

ಬಾಲಪ್ರಹ್ಲಾದನಾರ್ತನಾಗಿ ಶ್ರೀಲೋಲನೆಂದು
ಕರೆಯೆ ಕಂಬದಿ ಬೇಗಾ
ನೀಲಮೇಘಶ್ಯಾಮನೆನಿಸಿದ ನರಹರಿ ೨

ಧರಣಿಗಧಿಪ ಮದ್ಗುರುವು ತುಲಸೀರಾಮದಾಸನೆನ್ನುತ ಬಂದೆ
[ವರದ] ಪಾರಾ ಮಹಿಮ ಪರಾತ್ಪರ ನರಹರಿ ೩

೨೪೦

ಪಾಲಿಸೆನ್ನನೂ ರಾಮ ಪಂಥವ್ಯಾತಕೋ ಪ

ಕಾಲವೈರಿ ಕಪಟನಾಟಕ । ಆಲಿಸೆನ್ನ ಬಿನ್ನಪವಂ
ಪಾಲನೆ ಶ್ರೀಲೋಲನೇ ನೀಂ ಅ.ಪ

ರಕ್ಷಕಾಮಣಿ ಸಾಧುಜನ ರಕ್ಷಾಮಣಿ
ಅಕ್ಷಯ ಸುಜನರಾಶ್ರಿತ ನಿನ್ನ
ಭಿಕ್ಷವನಾಂಬೇಡುವೆನೈ
ಪಕ್ಷಿವಾಹನ ಜಗದಧ್ಯಕ್ಷನೇ ಸೀತಾರಾಮ ೧

ಪಂಡಿತಾಮಣಿ ಜ್ಞಾನಕುಂಡಲಿನಗರೀಶ ನೀ
ನಂಡಜ ವಾಹನನಹುದೊ
ಪಂಡರಿಪುರನಾಯಕ ಪಾ
ಮುಂಡಿ ವರದಾಯಕ ನೀಂ [ಶ್ರೀರಾಮ] ೨

ದಾಸರಕ್ಷಕ ಶ್ರೀಹರಿ ಆಶ್ರಿತಜನಪೋಷಾ
ಶಾಶ್ವತ ಜನಭಾಷಾ
ಭಾಸ್ಕರಕೋಟಿ ತೇಜಾ
ಈಶ್ವರ ಮತ್‌ಗುರು ತುಲಶೀರಾಮಾ ೩

೨೪೧

ರಾಮರಾಮ ರಾಮರಾಮ ರಘುಕುಲಾಬ್ಧಿಸೋಮ ಪ

ಪರವಾದಿಭೀಕರ ವೈಷ್ಣವಾಸ್ತ್ರಧಾರಿಯಸುರಧೂಮಾ ಅ.ಪ

ಕಾರ್ಯಕಾರಣಕಿಂತು ತ್ರಿಗುಣಧರಿಸಿಕೊಂಡದೇವಾ
ಆರ್ಯನಾಗಿ ಬಂದಿರುವೆಯೊ ನೀನೆ ಮಹಾನುಭಾವ ರಘುರಾಮ ೧

ಪ್ರಣವರೂಪ ಪಕ್ಷಿಗಮನ ತ್ರಿಣೆಯ ಸಖನದ್ವಾರೊ
ಫಣಿವಿಯಾಸನೆ ನೀನೆನ್ನ ಹೃದಯದಲ್ಲಿ ಕಂಡುಬಾರೊ ೨

ವೀರರಾಜನಗರದೊಡೆಯ ಹರಿಯೆ ನಿನ್ನ ನೋಡುವೆ
ದಾರಿಗೈಸಿದ ಶ್ರೀಗುರುವು ತುಳಶಿಭಜನೆಯ ಮಾಡುವೆ ೩

೨೪೨

ಇಂದಿರಾಪತಿ ನಿನ್ನ ಸುಂದರ ಚರಣವ ನಾ
ನೆಂದೆಗೆ ಕಾಣುವೆನೋ ಶ್ರೀಮಂದರೋದ್ಧರನೇ ಪ

ಹಿಂದೆ ಸುಜನರೂ ಪದವಿಹೊಂದಲಿಲ್ಲವೇ ಇದ
ಕ್ಕೊಂದುಪಾಯವೇನೊ ನಿನ್ನ ಕಂದನಲ್ಲವೇ ೧

ಬಂದು ಈ ಪರಿ ನಾನೊಂದಿಪೆನೆಲೊ ನೀ
ಬಂದು ಮುಖವ ತೋರಲು ಎನಗೊಂದೆ ಸಾಕೆಲೊ ೨

ಸುಜನರೊಡನೆಯೇ ಕೂಡಿಭಜನೆ ಮಾಡಿದೇ ನೀ
ನಿಜ ಕಲ್ಯಾಣಪುರದ ಒಡೆಯನೆಂದು ಬೇಡಿದೇ ೩

ದಾಸದಾಸನು ಶೇಷಾದ್ರಿವಾಸನೇ ನನ್ನ
ದೋಷರಹಿತಗುರುವು ತುಲಸೀರಾಮದಾಸನೇ ೪

೨೪೩

ಪರಮಾತ್ಮನೆ ನೀ ಪಾಲಿಸೊ
ನರರೂಪ ಮುರವೈರಿ ಪ

ಸುಂದರನಾಥನೆ ಸುಜನ ಸಂಪ್ರೀತನೆ
ಕಂದನ ಕಾಯೊ ಮಮ ಸಿಂಧುಶಯನನೆ ೧

ಸಿರಿಧರನ್ಯಾರೆಲೊ ದುರಿತವದೋರೆಲೊ
ನರಹರಿಯಾದ ನಮ್ಮ ನಾರಾಯಣ ಬಾರೊ ೨

ಫಣಿಯನ್ಯಾರೆಲೊ ಯೆಣಸಲು ನೀನೆಲೊ
ಪ್ರಣವರೂಪನೆ ನಿಜ ಗುಣಮಣಿಯಾರೆಲೊ ೩

ಈಶನದಾರೆಲೊ ಹಾಸನದೊಡೆಯನೇ
ದೇಶಿಕ ತುಲಶಿ ನಿನ್ನದಾಸನು ನಾನಾದೇ ೪

೨೪೪

ಅಮ್ಮನಿಮ್ಮ ಮನೆಗಳಲ್ಲಿ ನಮ್ಮ ಕಂದನ ಕಾಣರೇನೆ ಪ

ಸುಮ್ಮನೆ ಮಲಗಿರುಯೆಂದು ಗಮ್ಮನೆ ನಾ ನೀರಿಗೋದೆ
ಈಮಹೀಪಾಲ ಶ್ರೀರಂಗಾ ಗಮ್ಯವಾಗಿ ಹೋದ ಕಣೇ ೧

ನಿದ್ರೆಯ ಮಾಡುತ್ತಲಿದ್ದೂ ಕದ್ದು ಪೋದಾ ನಮ್ಮ ರಂಗಾ
ಇದ್ದ ಮಾತಂತಿರಲಿ ಎನ್ನ ಮುದ್ದು ಕಂದಾ ಪೋದಾಕಾಣೆ ೨

ಕದ್ದು ಬೆಣ್ಣೆ ಮೆದ್ದನೆಂದು ಸುದ್ದಿಯತಂದಾನು ಗುರುವೂ
ಗೆದ್ದು ತುಲಶಿರಾಮಾದಾಸಾರಿದ್ದು ಪೋದಾರಂತೆ ಕಣೇ ೩

೨೪೫

ಓಡಿಬಾರೊ ರಂಗನಾಥ ಪ್ರಿಯಾ ಪ

ನೋಡೀ ಕೂಡೀ ಆಡೀ ಪಾಡುವೆ ಅ.ಪ

ಮಾಡಬಾರದೆಲ್ಲ ಮಾಡಿ ಬಂದೆ ಬಂದೆ
[ಓಡಿಬಂದು] ನಿಂದೆ ಕಂದಾ ತಂದೆಯೆ ೧

ಏತಕೆನ್ನ ಮೇಲೆ ಇಷ್ಟು ಕೋಪ ಕೋಪಾ
[ಆರ್ತರ] ಪಾಲಿಸ ಭೂಪಾ ಶ್ರೀಶನೆ ೨

ಗುರುವು ತುಲಸಿರಾಮ ದಾಸಪ್ರೇಮಾ ಪ್ರೇಮಾ
[ವರ] ಕಾಮೀ ನಾಮ ಶ್ಯಾಮನೆ ೩

೨೪೬

ಪಾಲಿಸೋ ರಂಗಾ ಲೋಲಕೃಪಾಂಗ ಪ

ಬಾಲನ ಮೊರೆಯನು ಕೇಳೊ ಶುಭಾಂಗಾ ಅ.ಪ

ಮಾಡಿದಪಾಪ ಓಡಿಸೊ ಭೂಪಾ
ಬೇಡಿಕೆ ನಿನ್ನಯ ಪಾದವ [ತೋರೋ]ಶ್ರೀಶಾ ೧

ಕೇಶವನ್ಯಾರೊ ಪೋಷಕಧೀರಾ
ದಾಸನು ವಂದಿಪೆ ಶ್ರೀಶನು ಬಾರೊ ೨

ಕಾಮಿತನಾಮಾ ಶ್ಯಾಮಾ ಸುಧಾಮಾ
ಕೋಮಲರೂಪನೆ ನೀನಿಡು ಪ್ರೇಮಾ ೩

ಪೋಷಿಸು ಮುನ್ನ ದೇವ ಎನ್ನ
ದೋಷರಹಿತಗುರು [ತುಲಸಿ]ದಾಸ ಪ್ರಸನ್ನ ೪

೨೪೭

ಭರತಪುರೀಶನೆ ಭಾಗ್ಯ ಸುಭಾಷನೇ ಪ

ದುರಿತವಿನಾಶನೆ ದು:ಖರ ಪೋಷನೆ
ಪರಮ ವಿಲಾಸನೇ ಅ.ಪ

ಪಾಮರನಾನೂ ಶ್ಯಾಮಲ ನೀನೂ
ಕಾಮಿತ ಫಲವರ ಕೋಮಲರೂಪನೆ
ಸಾಮಜಾವರ ರಂಗಾ ೧

ಧರಣಿಜನನಾಥ ದಾತಾ ವಿದೂತಾ
ಗುರುವರ ಶರಣರ ಪರಮಾಧಿಕಾರಿ
ಕರುಣಬಾರದೇಕೊ ಭರತಮರೀಶನೆ ೨

(ಆ) ಲಕ್ಷ್ಮೀಸ್ತುತಿಗಳು

೨೪೮

ನಾರಿಮಣಿಯೆ ನಿನ್ನಾಣೆ ನಾಕಾಣೆ ಕರತಂದು
ತೊರೆ ಚೆಲ್ವ ರಂಗನಾ ಪ

ಕರತಂದು ತೋರೆ ಮುದ್ದು ರಂಗನಾ
ಕರತಂದು ತೋರೆ ಮಧ್ಯರಂಗನಾ ಅ.ಪ

ಪಾರವಾರನೆಂಬ ಧೀರ ಭವದೂರನೊ
ಬಾರದ ಮನಸೆನ್ನ ಸೂರೆಗೊಳ್ಳುತಿದೇ ೧

ಮೀರಿದ ಹದ್ದಿಗೆ ಹಾರಿಬಂದಾ ಗಿಣಿಯು
ದಾರಿಯ ತಪ್ಪಿ ಹಿಂತಿರುಗಿದಂತೆ
ಮಾರನಯ್ಯನ ಪಾದತೋರಿ ಪೋಗಿಯು ತಾ
ತೇರಮೇಲೇರಿದ ಸಾರುವ ಬಾರೆ ೨

ಉರಗೇಂದ್ರಶಯನನೆ ಸರಿಗಾಣೆ ರಮಣಿ ಶ್ರೀ
ಗುರುವು ತುಲಶೀರಾಮದಾಸರೆಂದು
ನರಗೆ ಸಾರಥಿಯಾಗಿ ಮೆರೆವ ಶ್ರೀ ಪರಮಾತ್ಮ
ನಿರುತಿಹ ನೀನೋಗಿ ಕರತಾರೆ ಕಾಮಿನೀ ೩

೨೪೯

ಬಂದು ಪಾಲಿಸೆನ್ನ ರಮಾಸಿಂಧುಜೆ ಶ್ರೀರಾಮ
ಚಂದ್ರ ಸಖೀಮಣಿಯೆ ಇಂದು ಭಜಿಪೆ ನಿಮ್ಮ ಪ

ಕಂದನೆಂದು ಮನಕೆ ತಾರದಿರಲು
ಅಂದವೆ ನಿರ್ಬಂಧವೆ ಸಾಕು
ಚಂದಾಯ್ತು ನನ್ನ ಮನಸು
ನೊಂದೋಯ್ತು ನೀ ಬೇಗ ೧

ಕಾಮಿನಿಯೇ ನೀ ಕಾಮಜನನೀ
ಆ ಮಹಾ ಪ್ರಸಿದ್ಧರಾಧೆ
ಸ್ವಾಮಿಭಕ್ತಪ್ರೇಮಿ
ಧೀಮಣಿ ಭಕ್ತಚಿಂತಾಮಣಿ ನೀ ಬೇಗ ೨

ನಿಮ್ಮ ಕಂದನಾಶ್ರಯಿಸಲು
ಸುಮ್ಮನಿರುವದೇನುಚಿತವೇ
ಅಮ್ಮ [ತುಳಸಿ] ಗುರು ಸಮ್ಮುಖ
ನೀ ಮೊಖ [ತೋರಿ] ಬೇಗ ೩

೨೫೦

ಜನನಿ ಜಾನಕೀ ನೀದಯಮಾಡೇ
ಜಗದೀಶ್ವರ ನಾಯಕೀ ಪ

ಫಣಿವಿಲಾಸನ ಪ್ರೀಯೆ ಭಜಕರ
ಮನವಿಗಳ ನೀಕಾಯೆ ತಾಯಳೇ
ಪ್ರಣವರೂಪಳೆ ಪ್ರಣಮಿಸುವೆ
ತ್ರಿಣಯಸಖನಾರಾಣಿ ಸುಂದರೀ ೧

ಸರ್ವತಂತ್ರಳೆ ಸಾಕ್ಷರೂಪಿಣಿ
ದುರ್ಮದಾಂತಕಿ ದುಃಖದೂರಳೆ
ನಿರ್ವಿಕಲೆ ಗೀರ್ವಾಣೆ ಶುಭಕರಿ
ಉರ್ವಿಪಾಲಿಕಳಾದ ಸೀತೆಯ ೨

ಆದಿಶಕ್ತಿ ಅನಂತರೂಪಳೆ
ವೇದಮಾನಿನಿ ವಾದಿಭೀಕರಿ
ಪಾದಸೇವ ಕನಿಷ್ಟಮೊದಗಿಸೆ
ಭೂಧರಗೆ ನಿಜರಾಣಿ ವೈಭವೆ ೩

ರಂಗನಾಯಕಿ ರಾಧೆ ಶ್ರೀ ಜಯ
ಮಂಗಳಾಂಗಿ ಸಮೋದೆ ನಿಜ್ಜಲೆ
ಜಂಗಮಾರ್ಚಿತ ಗುರುವು ತುಳಸೀ
ಬೆಂಗಳೂರೊಳಗಿರುವ ಕಾರಣ ೪

(ಇ) ಆಳ್ವಾರಾಚಾರ್ಯ ಸ್ತುತಿಗಳು

೨೫೧

(೧) ರಾಮಾನುಜರು

ಬೋಧಾಚಾರ್ಯನೆ ದಯಮಾಡೊ ಒಳ್ಳೆ
ನಾದ ಮೂರರೊಳೆನ್ನೊಳು ನೀ ಕಂಡುಬಾರೊ ಪ

ಆದಿ ಅನಾದಿಯ ಭೇದವೇನದು ತೋರಿ
ನಾದಬಿಂದು ಕಳೆಯೊಳ್ ನೀ ಕಂಡುಬಾರೊ ೧

ಮಂತ್ರಜ್ಞಾನ ರಹಸ್ಯದಂತರಸ್ಥಿತಿಯನ್ನು
ಪಂತಗೊಳಿಸಿ ಕೊಟ್ಟ ಪರಮದೇಶಿಕನೆ ೨

ಮೂಲ ಪ್ರಣವ ಬ್ರಹ್ಮ ಬಾಲ ಬ್ರಹ್ಮಚಾರೀ
ಕೋಲೂಪ್ಯಾಟಕಾ ಮಾಂ ಪಾಲ ತುಲಶಿರಾಮಾ ೩

೨೫೨

ಮರತಿರಲಾರೆ ನಿಮ್ಮನೂ ಹರಿಯೇ ಧೊರೆಯೆ ಪ

ಸುರಮುನಿವರನುತ ಕರಿವರ ಸುಚರಿತ
ಕರುಣಿಸಿ ಕಾಯೊ ಮಮದುರಿತಹರಣ ವೆಂಕಟ್ರಾಮಾನುಜ ೧

ಅಸುರವೈರಿಯೊ ಹರಿ ಕುಸುಮ ಶರೀರ ಭಾವಾ
ಪಶುಪತಿಪ್ರಿಯಸೇವೆ ತೃಷೆಯ ನೀಗಿಸೊ ವೆಂಕಟ್ರಾಮಾನುಜ ೨

ಭರತಪುರೀಶನ್ಯಾರೊ ನಿಜ ಸುರತವ ತೋರೋ
ಗುರುವು ತುಲಶಿರಾಮ ದೊರೆಯೆ ಸರಿಯೊ ವೆಂಕಟ್ರಾಮಾನುಜಾ ೩

೨೫೩

ಶ್ರೀಮತೇ ಶ್ರೀ ಭಾಷ್ಯಕರಾಯನೇ
[ಮಾಮವ] ದೇವಾ ಕರುಣಿಸು ಮಹರಾಯನೇ ಪ

ಮಂತ್ರ ರಹಸ್ಯದಿ ಜ್ಞಾನ ತ್ರಯಂಗಳ
ನಿಂತು ನೀ ಕೃಪೆ ಮಾಡಿದೇ ಅ.ಪ

ಪರಿತೋಷದಿಂ ಬಂದು ಸಕಲಾನು ಭವನಾಗಿ
[ವರ]ತತ್ವದುಯ್ಯಾಲನಾಡಿದೆ
ಭರಗೈದು ಬಂದಿಲ್ಲಿ
ಪರತತ್ವವನು ಗೂಡಿದೇ ೧

ಸಿರಿಮಾತೇ [ಮೂಲಕ]
ಹರಿಯಾಜ್ಞೆಯನುಗೊಂಡು
ಪರಮಭಕ್ತರಿಗೆಲ್ಲಾ ಪ್ರತ್ಯಕ್ಷವಾದಂಥಾ
ಪರಮಪದವಿ ಮಾಡಿದೇ ೨

ಯದುಶೈಲವಾಸದೊಳಧಮರಾದವರಿಗೆ
ಸುಧೆಯ ಸುರಿದು ತೋರಿದೆ
ಸದುಪಾಯದಿಂ ಬಂದು ಸರ್ವಸ್ವತಂತ್ರದೊ
ಳಿದು ನೋಡೆನುತ ಸಾರಿದೆ ೩

ಪರಕಾಲಗುರು ಸರ್ವತಿರುಮಳಿಶಯ್ಯಾಳ್ವಾರೆಂ
ಬೆರುಮಾನರಡಿಯಾದೆನ್ನೈ
ಗುರುಕುಲದೊಳಗೆನ್ನ ಕರೆದಿತ್ತ ಹರಿನಾಮ
ನುಡಿಯದೆ ನಾ ಹೋದೆನ್ನೈ ೪

ಅದ್ವೈತ ಕುಲವನ್ನು ಪರಿಶೋಧಿಸಿ ಬಿಟ್ಟು ಶ್ರೀ
ಮದ್ರಾಮಾನುಜಾಚಾರ್ಯನೇ
ಮದ್ಗುರುವಾದ ಶ್ರೀತುಲಶೀರಾಮದಾಸ
[ರೈ ದಾಸಕುಲತೂರ್ಯರೈ] ೬

೨೫೪

ಯತಿಸಾರ್ವಭೌಮಾ ಸದ್ಗುರು ಸ್ವಾಮಿ ಪ

ಮತಿಗೆ ಮಂಗಳವಾದ ಗೋಪ್ಯ
ಸ್ಥಿತಿಯು ನಿನಗರುಹುಲದರಿಂ
ನುತಿಪೆನಾನಿಮ್ಮಡಿಗಳನು ಕೇಳ್
ಪ್ರತಿವಾದಿಭಯಂಕರನೆ ಶ್ರೀ ೧

ಅಂತರಾಪುರಿಯೊಳಗೆ ತಾನೆ ಅ
ನಂತ ರೂಪಗಳನ್ನು ತೋರಲೂ
ನಿಂತು ನೋಡಿದೆನಹುದೊ ಮುಕ್ತಿ
ಕಾಂತೆಯೆಂಬೊ ರಮಾಂಶಳನು ಶ್ರೀ ೨

ಉಭಯ ವೇದಾಂತಾರ್ಯನಾಗಿಯು
ಅಭಯ ದಾನವನಿತ್ತ ಸೋಹಂ
ಪ್ರಭುವೆ ತಾನಾಗಿರುವಾ ನಿಜಕಳೆ
ವಿಭುವೆ ಜಯ ಜಯ ಶುಭಕರನೆ ಶ್ರೀ ೩

೨೫೫

(೨) ವೇದಾಂತದೇಶಿಕರು

ವೇದಾಂತ ಗುರು ಸಾರ್ವಭೌಮ ಜ್ಞಾನ
ಬೋಧಾನುಕೂಲ ನಿಸ್ಸೀಮ ಪ

ಆದಿನೋಡು ಅನಾದಿಯೆನ್ನುತ
ಬೋಧೆಗೊಳಿಸುಪದೇಶ ಮಾಡಿದ

ಸಾಧುಶಿಖರನೆ ಸರ್ವತಂತ್ರನೆ
ವಾದಭೀಕರ ವೈಷ್ಣವೋ ನಿಜ ೧

ದ್ವಿದಳ ದಾಸನ ಕೈದಸಿದ ನಿಜ
ಪದವಿನೋಡೆಂದೆನುತ ಮನಸನು
ಕದಿವ ಕಳ್ಳರ ಕೊಂದು ಹಿಡಿಯೆಂ
ದೊದಗಿತ್ತನು ಮೊದಲಿನಕ್ಷರಾ ೨

ಮೂರು ಬಿಡು ನೀ ಮೂರು ಹಿಡಿ ಕೇ
ಳಾರು ಚಕ್ರವ ದಾಂಟಿ ತ್ರಿಕುಟಿಯ
ಸೇರಿ ಸಂಪದವಾರಿಯೊಳಗದ್ದು
ತೋರಿದ ಪರಮಾತ್ಮ ಪರತರ ೩

ಎಂಟು ಹಾರಿಸಿ ಎಂಟುಲಿಪಿಯನು
ಗಂಟು ಮಾಡೆಂದೆನುತ ನನ್ನೊಳ
ಗುಂಟುಮಾಡಿಯು ತೋರಿದ ವೈ
ಕುಂಠನಾಥನ ನನ್ನೊಳಗ ನಿಜ ೪

ಶುದ್ಧ ಹಂಸನ ಮಾಡಿ ನನಗಾ
ಚಿದ್ವಿವೇಕದ ಕವಚ ತೊಡಿಸಿದ
ಸತ್ಸ್ವರೂಪಾಚಾರ್ಯನಹುದೆಲೊ
ಮದ್ಗುರುವೆ ಶ್ರೀ ತುಲಶೀರಾಮಾ ೫

೨೫೬

(೩) ತುಳಸಿರಾಮದಾಸರು

ದಯಮಾಡಬಾರದೇಕೊ ದಾಸನೊಳೆ ನೀ ಪ

ಭಯ ವೇನಿಹುದೊ ನಿನ್ನ ಭಜಕನಾದ ಮ್ಯಾಲೆ
ದಯ ಸಾಕ್ಷಿಯೊಳು ಜಗತ್ರಯ ಪೂಜ್ಯವಂತ ೧

ಸಾಧು ಶಿಖರನೆ ಬಾರೊ ಸಕಲಾಂತರವತೋರೊ
ಪಾದ ಸೇವಕನು ನಾನಾದಮೇಲೆ ನಿಂತು ನೀ ೨

ನಿತ್ಯೋತ್ಸವನೇ ದೇವಾ ನೀನೆ ಮಹಾನುಭಾವಾ
ಪ್ರತ್ಯಕ್ಷಮಾದ ಮದ್ಗುರುವೇ ತುಲಸೀರಾಮಾ ೩

೨೫೭

ಧೀರ ಭವದೂರಾ ಸುಕುಮಾರಾ ಮುಖತೋರೋ ಜೀಯಾ ಪ

ನಾರಾಯಣ ಕೇಶವ ಹರೀ ರಂಗ ನರರೂಪನೆ ಕರುಣಾಕರ ಅ.ಪ

ಶರಣಾಗತ ಪರಿಪಾಲಿತ ಶರಣೆಂದೆನೊ ಸುರಮುನಿಹಿತ
ಉರಗಾಸನ ಓಂಕಾರನೆ ನರಸಿಂಹನೆ ಪರಬ್ರಹ್ಮನೆ ೧

ಕಾಮಾದಿಗಳ ಸಮರ ಸಹಿ ಪ್ರೇಮಾತಿಶಯ ಕೃಪಾಳೊ
ನಾಮಾಮೃತ ಮಾಲಪಾಲನೆ ಮಹರಾಯನೆ ಮದವಾರಣ ೨

ಅಂಗಜಹತನಾಶಿವನುತ ಮಂಗಳ ಜಯ ತುಲಶೀರಾಮಾ
ತಿಂಗಳಧರ ವಿನತಾಗುರಿ ಮಂಗಳಪುರಿ ಜಂಗಮವರ ೩

೨೫೮

ನಮಃ ಓನ್ನಮಃ ಮಮದೇಶಿಕ ತಿರುವಡಿಗಳೆ ಶರಣಂ ಪ

ಅಪರಂಪರವನ್ನು ತೋರೆಲೊ
ಶ್ರೀ ಪರಾತ್ಪರನೆ ಭಾಪದನಿಸರಿ
ಕೋಪವ್ವಾತಕೆ ಸಲಹೊ ಮುನಿಕುಲ
ದೀಪ ನೀನಹುದಯ್ಯ ಅಡಿಯೇನ್ನಮಃ ೧

ಮಾನವಗುಣ ಮಕುಟಮಹುದೈ
ಓನ್ನಮೊ ನಾರಾಯಣನೆ
ಸಾನಿಧಾಪ ಮದಾಪದದಿ ಸರಿ
ಶ್ರೀನಿವಾಸ ದಯಾಳೊ ಅಡಿಯೇನ್ ನಮಃ ೨

ವಾಸವಾರ್ಚಿತ ಶ್ರೀಗುರು ಹರಿ
ದಾಸ ತುಲಶಿರಾಮ ನನ್ನಯ
ದೋಷಗಳೆದೀಗೆನ್ನ ಆ ನಿಜ
ಶೇಷಭೂತನ ಮಾಡೊ ಅಡಿಯೇನ್ ನಮಃ ೩

೨೫೯

ಬಂದರ್‍ನೋಡೀ ಸುಂದರ್‍ತುಲಶೀರಾಮದಾಸರ್‍ಬಂದರು ಪ

ಅಂದದೆಮ್ಮಾಕಂದರ್‍ಪಾಲಿಸೆಂದರ್ ತಾವೇ ಚಂದಾದಿಂದಾ
ಇಂದ್ರರ್‍ಪದವಿಗಾಗಿ ಬೇಗಾ ಅ.ಪ

ಭಕ್ತಿ ಮುಕ್ತಿ ಯೆರಡಕ್ಕೊಂದೆಯುಕ್ತಿ ತೋರಿ ಮತ್ತೆ ತಾನ್
ಭಕ್ತಿಜ್ಞಾನ ಯೇತನ್ಮಧ್ಯೆ ಹೊಕ್ಕಿ ಶಕ್ತರಾಗಿ ಬೇಗಾ ೧

ಆಟಾಪಟಾವೆಂಬಳ ಕಳ್ಳ ಬೂಟಕಂಗಳನ್ನು ಬಿಡಿಸಿ
ಸಾಟಿಯಾಗದ ತ್ರಿಕೂಟಮೆಂಬಟರಾರ್ಭಟಾ ತೋರಲ್ ಬೇಗಾ ೨

ಪಕ್ಷೇಂದ್ರನೇರಿ ಬಂದ ಯಕ್ಷರಕ್ಷನಾಗಿ ನಿಂದಾ
ಸಾಕ್ಷಿ ಕೇಳುವಂತಾ ಅಡಿಯರ್ಗಾಕ್ಷಣವೆ ಮೋಕ್ಷ ತೋರಲ್ ೩

ಆಶಪಾಶವೆಂಬೊದನ್ನು ನಾಶಮಾಡೊ ಈಶನಾಮಾ
ದಾಸನಾದವರ್ಗೆ ಸಾಶಿರಾಂಗಾವಾಗಿ ಬೇಗಾ ೪

೨೬೦

ಬಾರೋ ಭವದೂರಾ ರಂಗಾ ನಾರಾಯಣ ಪ

ಆ ರಾವಣ ಭೀಕರ ಜಯ ಸರೋಜದಳಾಂಗ ಅ.ಪ

ಚರಣಶ್ರಿತ ಪರಿಪಾಲಿತ ಮರಳೀಧರ ದೇವ
ಪರಮಾತ್ಮನೆ ಪಾಂಡವಮಣಿ ತರವೇ ನಿರುತರಕೇಂದ್ರ ೧

ಉಭಯ ವೇದಾಂತಾರ್ಯನೆ ಅಭಯಾಕರ ಶೌರೀ
ಅಭಿಮಾನಯೇನದು ಕಾರಣ ಶುಭದಾಯಕನಾಗಿ ಬೇಗಾ ೨

ಪರತಂತ್ರನೆ ಪಾಪಾಂತಕ ನರವೇಷ ಭಾಷೆ
ಸುರನಾಯಕವಿನುತನಾಗುರು ಭರತಾಗ್ರಜ ತುಲಶೀರಾಮಾ ೩

(ಈ) ಸರ್ವದೇವತಾ ಸ್ತುತಿಗಳು

೧. ವಿನಾಯಕ

೨೬೧

ಗಜಮುಖನೇ ಮಾಂಪಾಲಯ ಗೌರೀತನಯಾ ಪ

ಭುಜಗಾಪವೀತನೆ ದ್ವಿಜಗಣನಾಥನೆ
ಅಜಿಮಹಾರಾಜನೆಂದು ಭಜಿಸುವೆನೆಲ್ಲೋ ದೇವ ೧

ತ್ರಿಗುಣಾ ವಿರಾಜಿತ ತ್ರಿಶರ ವಿನೋದಿತಾ
ಜಗದೊಡೆಯನೇ ಬಾರೊ ಮೃಗವದನದವನ್ಯಾರೊ ೨

ಕೋಲೂಪುರೀಶನೆ ಬಾಲಗಣೇಶನೇ
ಕಾಲವೈರಿಯೆ ಬಾರೊ ತುಲಶೀರಾಮ ತಾನ್ಯಾರೋ ೩

೨೬೨

ಗಜವದನಾ ಸುಂದರವದನನೆ ವೋ ಪ

ಭುಜಗಬಂಧನಪಾದಾ ಭಜಿಪೆನಹುದೊ ರಾಜಾ ಅ.ಪ

ಗೌರೀನಂದನ ಸರ್ವಸಿದ್ಧಿ ಪ್ರದಾಯಕ
ಶೌರೀ ಮೂಷಕವಾಹನ ಕುಶಲ ಅಂತಕದೇವ ೧

ದೇವಿಜನಿತ ಪುತ್ರಾಭಾವ ಲಂಬೋದರನೇ
ಪಾವನಂಘ್ರಿಯ ತೋರೋ ಪಾಶ ಅಂಕುಶ ಹಸ್ತಾ ೨

ಅಸುರಸಿಂಧುಕನರಿದೂ ವಸುಧೆ ಬಾಧಿಸುತಿರೆ
ನಶಿದು ಹೋಗಲಿಯೆಂದ ನಾರಾಯಣನೆ ದೇವಾ ೩

ಬಾಲನಾಗಿರೆ ಚೆಲ್ವ ಬಾಲೆಯೀಶ್ವರಿಯೊಳೊ
ಲಾಲಿಯಿಂದನು ಕಂಡು ಫಾಲಲೋಚನ ಶಂಭೋ ೪

ನಮಿಸುವ ಪ್ರಮಧಾರಿಗಮಿತ ಫಲವನೀವಾ
ಕಮಲಜಪಿತನಾದದಾ ಕಾಣುವರಿಗೆ ಬ್ರಹ್ಮ ೫

ತತ್ವ ವಿದ್ಯ ವಿನೋದಾ ನಿತ್ಯ ಮಂಗಳನಾಮ
ಪ್ರತ್ಯಕ್ಷಮಾದಾ ಮದ್ಗುರುವೇ ತುಲಸೀರಾಮಾ ೬

೨೬೩

ಗಣಪಾ ನೀ ಪಾಲಿಸೊ ಗಜಮುಖನೆ ವೋ ಪ

ತ್ರಿಣಿಯಸತಿ ಗಿರಿಜಾಸುತನೆ ಕೇಳ್
ಮನುಮುನಿ ಸನಕಾದಿ ವಂದಿತ
ಅಣಿದು ನೀ ರಕ್ಷಿಸಲು ನಿನಗಿ
ನ್ನೆಣೆಯುಗಾಣೆನು ಸರ್ವಸಿದ್ಧಿ ವೋ ೧

ವೇದಶಾಸ್ತ್ರ ಪುರಾಣ ವಿದ್ವ
ಕ್ಕಾದಿ ರೂಪನೆ ದಿವ್ಯಪ್ರಣನಾ
ನಾದರೂಪನೆ ಸರ್ವಮಂಗಳ
ಸಾಧು ಶಿಖರನೆ ಸರ್ವಸಿದ್ಧಿ ವೋ ೨

ಏಕದಂತನೆ ಷಣ್ಮುಖಾಗ್ರಜ
ವಾಕ್ಕು ಶುದ್ಧಿಯೊಳಾಡಿಸೆನ್ನನೂ
ಬೇಕು ನಿನ್ನಯ ಕರುಣಯಿತರವು ೩

ವಾಸವಾರ್ಚಿತ ಶ್ರೀಗುರು ಹಿರಿ
ದಾಸ ತುಲಸೀರಾಮ ನಿನ್ನಯ
ದೋಷ ಅಂತಕನಾಮ ಯತಿಗಣ
ಪ್ರಾಸು ಹೊಂದಿಸೊ ಯೀಶಪುತ್ರನೇ ೪

೨೬೪

೨. ಈಶ್ವರ

ಗಂಗಾಧರ ನಂಜುಂಡನೆ ಲಿಂಗಾ ಭವ ಭಂಗ
ಗಂಗೋತ್ತಮಾಂಗಾ ಸಶುಭಾಂಗಾ ಎಚ್ಚರಿಕೆ ಪ

ಶಂಕರ ಶಿವ ಮಹದೇವನೆ ಕಿಂಕರ ಜನಪಾಲಾ
ವೆಂಕಟರಮಣಾಸಖ ನಿಜಾಂಕುಶ ನಿಜಲೋಲಾ ೧

ವೇದನುತಪಾದಾ ಪರವಾದಿ ನಿಜಬೋಧ
ಸಾಧುಮಣಿ ಕರುಣಿಸೊ ನಿನ್ನ ಸೇವಕನು ನಾನಾದೆ ೨

ಫಣಿಭೂಷನೆ ಪರಿಪಾಲಿಸೋ ತ್ರಿಣೆಯಾ ಕರಶೂಲಾ
ಗಣಪತಿಪಿತ ಅಣುದ್ಯೆ ನೀತ್ರಿಗತ್ವರಿಪಾಲಾ ೩

ಇಂಕೀ ಪರಿನಿಂತಾ ಪರಚಿಂತೆಯೊಳಿರುವಂತೆ
ಸಂತೋಷವಗೈಸಿದ ಶಿವಗುರು ತುಲಶೀನೀನಂತೆ ೪

೨೬೫

ಗಿರಿಜಾಪತಿ ಮಾಂ ಪರಿಪಾಲನೆ ವೋ ಪ

ಧರೆಜನರೊಳು ಬಂದ ದುರತಾಂತಕನೆ ಶಂಭೋ ಅ.ಪ

ಭವದೂರನೆ ಓಂ ಶಿವ ಶಂಕರನೆ
ತವಪಾದನ ತೋರೋ ಭುವನೇಶ್ವರಗೌರೀಶ ೧

ಮದನಾರಿಯೊ ನೀಂ ಮಧುಸೂದನನೇ
ಬುಧಜನವಿನುತಾ ತತ್ವದ ಭಜನೆಯೊಳಗಿರಿಸೊ ೨

ಪರಮಾರ್ಯನೆ ಶ್ರೀ ತುಲಸಿರಾಮಾ
ಗುರುವೇನ್ನಮಃ ಪರಮೋಪಾಯಾ ೩

೨೬೬

ಶಿವನೆ ನಿಮ್ಮ ಚರಣವನ್ನು ಭುವನದೊಳಗೆ ತೋರಿ ನನ್ನ
ಭವಗಳನು ಖಂಡಿಸೆಂದು ಬಂದು ಬೇಡಿದೆ ಪ

ಅರುಹಿನೊಳಗೆ ಇರಿಸಿಯೆನ್ನ ಮರವೆಯನ್ನು ಅಳಿಸೊಮುನ್ನಾ
ಪರಮ ನೀನೆಯಾಗಿಯಾ ನಿಜದರುಹ ತೋರಿಸೈ ೧

ಅಣುವಿನೊಳಗೆ ಅಣುವೆಯಾದ ಪ್ರಣವ ಜ್ಯೋತಿಯನ್ನು ತೋರೊ
ತ್ರಿಣೆಯ ನೀನೆಯಾದಡೆ ನಾಂ ಪ್ರಣಿತನಾಗುವೇ ೨

ಮೂರು ಐದರಿವುಗಳನ್ನು ಮೀರಿಹೋಗುವಂಥ ಮನವಾ
ನಾರಿಕೈಯೊಳ್ ಕೋಟ್ಯಾತಕಿಂತು ನಟಿಸುತಿರುವಿಯೋ ೩

ಪಾರುಗಾಣಿಸಯ್ಯ ನೀ ಸಂಸಾರ ಶರಧಿಯನ್ನು ಶಂಭು
ಕೋರಿಕೆ ಈಡೇರಿಸಯ್ಯ ಅಪಾರಲಿಂಗವೇ ೪

ಪರಮ ತತ್ವೋಕ್ತಾಧಿಕಾರಿ ಸುರಮುನೀಂದ್ರಾಕಾಶಪತಿ
ಗುರುವು ತುಲಶಿರಾಮನೆ ತ್ವಚ್ಚರಣ ಶರಣಯ್ಯ ೫

೨೬೭

೩. ಪಾರ್ವತಿ

ರಾಜರಾಜೇಶ್ವರಿ ವೀರಮಹೇಶ್ವರಿ
ಭೈರವಿ ದುರ್ಗಾಂಬಿಕೆ ಪ

ಅಜಸುರ ಮುನಿಜನ ಭಜ ಭೋಜಾರ್ಚಿತೆ
ಕುಜನ ಹಾರಿಣೆ ಕೇಳು ಭಜನೆ ಮಾಡುವೆ ೧

ಶ್ರೀ ಸರ್ವೇಶ್ವರಿ ಶಂಕರಿ ನುತಜನ
ಭೂಷಿತೆ ನಿಜವರ ಭಾಷಿತೆ ಕೇಳು ೨

ಧಾರುಣಿ ಗೌರಿ ರಮಾ ಸಿಂಹಾಸಿನಿ
ಕಾರಣ ದೇಶಿಕ ತುಳಶಿಮಣಿ ೩

(ಉ) ಆತ್ಮನಿವೇದನಾ ಕೃತಿಗಳು

೨೬೮

ಎಂದಿಗೊ ಕಂದನ ಪಾಲಿಸುವದು ಇನ್ನೆಂದಿಗೊ ಪ

ಅಂದಿನಿಂದಲಿ ನಿನ್ನ ಸುಂದರ ಸೇವೆಗೆ
ಬಂದು ಬೇಡುವೇನೋ ಮುಕುಂದ ಮಾಧವಾ ೧

ಸಾಧು ಸಜ್ಜನರೊಳು ಭೇದವಳಿದು ನಿಜ
ಪಾದವ ಕಾಣುವ ಬೋಧೆ ಆನಂದ ೨

ವಾರವಾರ್ಚಿತ ಹರಿ ದಾಸ ತುಲಸಿರಾಮಾ
ದೇಸಿಕ ನಿನ್ನ ನಿಜ ದಾಸನಾಗುವುದು ೩

೨೬೯

ಏನು ಬರೆದೆಯೊ ಬ್ರಹ್ಮನೆ
ನನ್ನಣೆಯಲರಿಯದು ಸುಮ್ಮನೇ ಪ

ನೋನವನು ಹೋಗಾಡಿ ಜನರೊಳು
ಹೀನವಾಗುವ ಹಾಂಗೆ ಹಣೆಯೊಳು ಅ.ಪ

ಹಿಂದೆ ಮಾಡಿದ ಕರ್ಮವು ಯಿದ
ಕ್ಕೊಂದು ಪಾಯದ ಮರ್ಮವೂ
ತಂದೆ ನೀನೆನಗಿಂದು ತೋರಲು
ನಿಂದು ಭಜಿಸುವೆ ಮಂದರೋದ್ಧರ ೧

ಪಾಪಗಳ ಹರನ್ಯಾರೆಲೊ
ಭೂಪದಶ ಅವತರಾನೇ
ಕೋಪಮಾಡದೆ ದಾಸಮಾಡಿದ ।
ಪಾಪಗಳ ಪರಹರಿಸೊ ಬೇಗದಿ ೨

ಸಾಕುಮಾಡೆಲೊ ಶ್ರೀಹರಿ
ಲೋಕನಾಯಕ ಭವಹಾರೀ
ಕಾಕು ಬುದ್ಧಿಗಳನ್ನು ಬಿಡಿಸಲು
ಏಕ ಮನದೊಳು ನೆನೆವೆ ನಿಮ್ಮನೂ ೩

ಗುರುವು ತುಲಸೀರಾಮನೇ ಪರನು
ಗುರುವೆ ತ್ರಾಹಿತ ಪ್ರೇಮನೆ
ಧರೆಯೊಳಧಿಕ ಚೆನ್ನಪುರಿಯಾ
ದೊರೆಯ ಲಕ್ಷ್ಮೀನಾರಾಯಣಾ ೪

೨೭೦

ಕರುಣ ಬರುವದೆಂದಿಗೂ ಶ್ರೀರಾಮಚಂದ್ರಾ ಪ

ದುರಿತ ಶರಧಿಯೊನೊತ್ತರಿಸಿ ನಿನ್ನಯಾ ದಿವ್ಯ
ಚರಣ ಸೇವೆಯೊಳಿರಿಸಿ ಪಾಲಿಸೋ ದೇವ ೧

ಈಷಣತ್ರಯವೆನ್ನಾ ಆಶೆಪಡಿಸುತಿದೆ
ಮೋಸಗೊಳಿಸದಿರೊ ಶ್ರೀಶ ಶ್ರೀನಿವಾಸಾ ೨

ಪರಮ ತತ್ವಾಧಿಕಾರಿ ಸುರಮುನಿಸುತಾ ಶೌರಿ
ಗುರುವು ತುಲಶಿರಾಮಾ
ದೊರೆಯ ನಂಬಿದೆನೆಲ್ಲೋ ಕರುಣ ೩

೨೭೧

ಕರುಣೆ ಬಾರದೇಕೊ ಕಂಜಜನಯ್ಯಾ ಪ

ಶರಣು ಮಾಡುವೆ ತರುಣೀವರದನೇ ಅ.ಪ

ಅರುಹೆಗೆ ಬಾರಾದಾ ದುರಿತಾಶರದಲಿರುವೆ
ಕರವನೆ ನೀಡೆಲೊ ರಂಗಾ ನಿನಗಿದು ತರವೆ ನೋಡೆಲೊ ೧

ದಾಸವಾರ್ಚಿತಾ ಮಮದೇಶ್ವಿಕ್ಕ ತುಲಶೀರಾಮಾ
ದಾಸನಾದೆನೊ ಪೋಷಿಸೊ ಪರದೇವಾ ದಾಸನಾದೆನೊ ೨

೨೭೨

ಕರುಣಿ ಬಾರದೇಕೋ ನಿನ್ನ ಕಂದನ ಮ್ಯಾಲೆ ಪ

ಶರಣು ನಿನ್ನ ಚರಣ ಸೇವೆಯೊಳಿರಿಸೊಯೆನ್ನನೂ ಅ.ಪ

ಅರುಹುಯೆಂಬೋದೆನ್ನಾ ಮನದೊಳ್ ಇರಿಸಿ ಪಾಲಿಸೈ ೧

ತರವೆ ನಿನ್ನ ಕರದೊಳಿಂದು ಬಿರುದು ಹೋಲಿಸೈ ೨

ಪರಮಗುರುವು ತುಲಶಿರಾಮ ಧೊರೆಯೊಳಿರುವೆನೈ ೩

ಇರಿಸಿ ಪಾಲಿಸೆಂದು ಬಂದು ಮೊರೆಯ ನಿಟ್ಟನೈ ೪

೨೭೩

ಕಾಯಬೇಕೋ ಶಂಕರೇಶ್ವರ ನೀನೆನ್ನನೂ ದೇವಾ ಪ

ಮಾಯಧಾರಿಪ್ರೀಯನಹುದೋ ಕಾಯಜಾಂತಕನೇ
ಆಯತಾರ್ಥವನ್ನು ತೋರೋ ಪಾರ್ವತೀಶನೆ ದೇವನೆ ೧

ಇಂತುದಿನವು ಗಳಿಸಿಯಿರುವ ಅಂತು ದು:ಖಕ್ಕೆ
ಪಂತವ್ಯಾಕೊ ಪಾಲಿಸೆನ್ನೊಳಂತರಂಗಮಂ ಶಂಭೂ ೨

ದಾಸ ತುಲಸಿರಾಮ ನಿನ್ನ ದಾಸನಾದೆನೂ
ದೋಷ ರಹಿತನ ಮಾಡೆನ್ನ ಮೋಸಹೋದೆನೂ–ಗುರುವೇ ೩

೨೭೪

ದೇವ ನೀ ದಯಮಾಡಿ ಕರುಣಿಪುದೂ ಪ

ಮಮದುರಿತಹರಣ ಜೀಯ ಅ.ಪ

ಮಾವ ಕಂಸ ಕಾಲ ಪಾವಕಾಸನನೇ
ದೇವ ಪ್ರತ್ಯಂಗನದ್ಯಾರೊ ತೋರೋ
ಸಾವಧಾನ ಸರ್ವಾತ್ಮಕ ತ್ರಿಗುಣನೆಬಾರೊ
ಬಾವ ಜಾರಿ ಸಖ ಭಜಕ ಜನ ವಿಹತ
ಸರ್ವಜನರಿಗಾದರದಿ ಸಂಪದವು
ನೀವ ಸುಂದರನೆ ನಿಜಪರ ಬ್ರಹ್ಮನೆ ೧

ಪ್ರಣವನಾದ ಪಂಡಿತಜನ ಶಿಖರನೆ
ಫಣಿಪಾಸನ ಹರಿಯೆ ಧೊರೆಯೆ
ಅಣಿದು ಬರುವ ದುರ್ನಡೆಗಳ ಕಡಿಯದೆ
ಯೆಣಿಪುದು ನಿನಗಿದು ಸರಿಯೇ
ತ್ರಿಣೆಯೆಸಖನೆ ತ್ರಿಗುಣೇಶನೆ ಕೇಶವ
ಅಣಿದು ಬಾರೊ ದಯಕೋರೆಲೊ ಮಹಾ ೨

ಭುಜಗಶಯನ ನಿಜಗಜವರನೆ
ದ್ವಿಜಗಣ ಮಣಿಯಹುದೋ
ಅಜ ಮಹರಾಜನೆ ದು:ಖವ ನೀ
ತ್ಯಜಿಸಬೇಕಹುದಹುದೋ
ವಿಜಯಸಾರಥಿಯೆ ನಿಜ ಭಗವಂತನೆ
ಸುಜನರೊಡನೆ ಸುಖಿಸುವದೆನಗದು ಕೊಡೊ ೩

ನಿಗಮವಿನುತ ನಿಖಿಲಾಂಡಕೋಟಿ ಬ್ರಹ್ಮಾಂಡ
ಜಗದಾದಿ ನಾಯಕ ಕನ್ಯಾರೊ ಬಾರೊ
ಸುಗುಣರೂಪ ಸಾಕ್ಷಾತ್ ಪರಮಪದ ತೋರೋ
ಅಗಣ ಸಹಜ ಮತ್ಕುಗುಣ ಕಾಲನೆ ಕಲಿ
ಯುಗ ನಾಯಕ ನಮ್ಮ ತುಲಶಿರಾಮ
ನೆಗುರು ಮಂಗಳಪುರಿಧಾಮಾ ೪

೨೭೫

ನಂದಿವಾಹನ ಸಖನೆ ಯೆಂದಿಗೆ ನೋಡುವೆ ನಿನ್ನಾ ಪ

ಅರಿಗೆ ನಿನ್ನಾಚಾರ್ಯರಪ್ಪಣೆ ಹೊಂದಿ ಸುಖಿಸುತಿರುವೆನೊ ನಂದಿ ಅ.ಪ

ರಂಗನಾಯಕನೆ ಬಾರೊ ರಾಕ್ಷಸಾಂತಕನಲ್ಲವೆ
ಮಂಗಳಾಂಗ ಮಾತನಾಡೊ ಮಾಯಧಾರಿ ಕೇಶವ ೧

ಸಾಟಿಯೇನಹುದೊ ಹರಿ ಸಾಧು ಶಿಖರನಲ್ಲವೆ
ಆಟವಾಡುವ ಬಾಲನನ್ನು ಕರುಣದಿ ಕಾಯಲಿಲ್ಲವೆ ೨

ಕೋಲುಪ್ಯಾಟಿಯೊಳು ನಿನ್ನ ಕೋರಿ ಕೊಸರಿ ಕೂಗುವೆ
ಮೂಲಗುರುವು ತುಲಶಿರಾಮಾ ದಾಸರ ಸೇವಕನಾಗುವೆ
ಹರಿದಾಸರ ಸೇವಕನಾಗುವೇ ೩

೨೭೬

ನರಹರಿಯೆನಬಾರದೇ ನಾಲಿಗೆಯೊಳೂ ಪ

ಕರ ಶಂಕು ಚಕ್ರ ಶ್ರೀಧರ ನಾರಾಯಣನೊಳ
ಗಿರಲಿಕ್ಕೇನು ದೊರಕಾದೆ ನಾಲಿಗೆಯೊಳು ೧

ದಶರಥ ಸುತನಾಗಿ ವಸುಧೆ ಪಾಲಕನಾದಾ
ಅಸಮೆನಂದೆನ ಭಾರದೆ ನಾಲಿಗೆಯೊಳೂ ೨

ಕಾಮಜನಕ ರಂಗಾ ಪ್ರೇಮದಿಂದಲಿ ಕಾಯ್ವೊ
ಸ್ವಾಮಿಯೆಂದೆನೆಬಾರದೆ ನಾಲಿಗೆಯೊಳು ೩

ಭರತ ಪುರೀಶ ಮತ್ವರ ಮಾರ್ಗ್ಯನೊಳು ಬಂದೂ
ಬೆರೆಯಲೆನ್ನುತ ಸಾರಿದೆ ನಾಲಿಗೆಯೊಳು ೪

೨೭೭

ನರಹರಿಯೆ ಪಾಲಿಸೈ ಪ

ನರಹರಿಯೆ ಪಾಲಿಸೈ ಕರಿವರದನೆ ಕಲುಷಾಂತಕವರ ಅ.ಪ

ಕರಚರಣಗಳೆರಡರ ಪರಮೊದಗಿರೆ
ಹರಿಹರಿ ನಿನಗಿದ ನೊರೆವೆಹುದೊ ೧

ಭಜಿಪ ಭಜಕ ನಿಜದ್ವಿಜಗುಣಮಣಿ ಹಯಧ
ಭುಜಗ ಶಯನ ರಂಗ ವಿಜಯ ಸಾರಥಿ ೨

ಸಿರಿಧರ ಮುರಹರ ಮುನಿಜನ ಭಯ ಹರ
ಕರುಣ ತುಲಸೀರಾಮಾ ಗುರುವೆ ತಾನಾದ ೩

೨೭೮

ನನ್ನ ಕರ್ಮವು ಬಂದು ಇನ್ನು ಬಾಧಿಸುತಿರೆ
ಅನ್ಯರೇನ ಮಾಡುವರೈ ಪ

ಕನ್ನೆ ಶಿರೋಮಣಿ ದ್ರೌಪತಿ ವರದನೆ
ಎನ್ನ ಪಾಲಿಸೊವೋ ಪ್ರಸನ್ನ ರಂಗನಾಥ ಅ.ಪ

ಭಿಕ್ಷಕ್ಕೆ ಬಂದಾಗ ಲಕ್ಷ್ಯವಿಡದೆ ಹೋಗಿ
ಸಾಕ್ಷಿಯ ನಾಕಂಡೆನೈ
ಪಕ್ಷಿ ವಾಹನನೆ ನೀರಕ್ಷಿಸಬೇಕಯ್ಯ
ಸಾಕ್ಷಾತನೆಂತೆಂಬೊ ಮೋಕ್ಷಾಧಿಕಾರಿಯೆ ೧

ದಾಸದಾಸರನ್ನು ಮೋಸಗೊಳಿಸಿ ನಾಂ
ದೋಷಕ್ಕೆ ಗುರಿಯಾದೆನೈ
ಆಶೆಯ ಬಿಡಿಸಯ್ಯಾ ಶ್ರೀ ವೆಂಕಟರಮಣ
ದೋಷರಹಿತ ಗುರುವು ದಾಸ ತುಲಸೀರಾಮ ೨

೨೭೯

ನನ್ನ ಗುರು ಯೆಂತಪ್ಪ ದೊಡ್ಡವನೋ
[ಘನ್ನ] ಸೀತಾಮನೋಹರ ಪ

ನಿನ್ನೆಯೆನಗೊದಗಿದ ದು:ಖದಿ
ಬನ್ನಬಡಿಸುವದಾಗಿ ಅಳುತಿರೆ
ಚನ್ನಕೇಶವನಾಗಿ ತಾನೆ ಪ್ರ
ಸನ್ನನಾದ ಮಹಾತ್ಮ ಜಯಜಯ ೧

ಭಗವದಾಜ್ಞೆಯನನುಗೊಳಿಸದಲೆ
ಕುಗುಣ ಕುಚಿತದೊಳಿರಲು ಬಂದದ
ಸಿಗಿದು ಹೊಡೆದು ಬಿಸಾಡಿದಾ ನಮ್ಮ
ಸಗುಣ ಸಾಕ್ಷಾತ್ಕಾರ ನಿರ್ಗುಣ ೨

ದುರ್ಗುಣವು ದುಸ್ಸಂಗ ದುರ್ವ್ಯಾಪಾರದೊಳು
ದುರ್ಗತಿಕುಮತಿ ನಾನಧಿಕನಾಗಿರೆ
ಸ್ವರ್ಗನಾಯಕ ಬಂದುಮೆನ್ನುಪ
ಸರ್ಗಮಳಿದ ಮಹಾನುಭಾವಾ ೩

ಅರಿಯದರಿಲಿಕೆ ಅರಿಗಳಾರನೂ
ಹರಿಯೆ ತಾನಾಗೈದು ತೋರಿದ
ಪರಮಗುರು ಶ್ರೀ ತುಲಸಿರಾಮನ
ಚರಣ ಸೇವಕನಾದೆನಹುದೆಲೊ ೪

೨೮೦

ನಾ ನಿಮ್ಮ ದಾಸನಯ್ಯಾ ಸೀತಾರಾಮಾ ಪ

ನಾನು ನಿಮ್ಮಯದಾಸನಹುದೊ
ನೀನು ಯೀಜಗದೀಶನಹುದೊ

ಭಾನು ಕೋಟಿ ಪ್ರಕಾಶನೇ ಸಂಗೀತ
ಗಾನ ವಿನೋದರಂಗಾ ೧

ಮತಿಹೀನ ನಾನಾದೆನ್ನೈ ಶಾಶ್ವತನಾ ಸ
ದ್ಗತಿಯ ನೋಡದೆ ಹೋದೆನ್ನೈ
ಹಿತವ ಪಾಲಿಸಬೇಕೊ ವೋ ಶ್ರೀ
ಪತಿತಪಾವನ ರಂಗನಾಯಕ
ಸತಿ ಶಿರೋಮಣಿ ಪರಮಸೀತಾ
ಪತಿಯೆ ನಾನಿನ್ನ ಸುತನು ಕಾಣ್ಯೆ ೨

ಕಂದಯ್ಯಗಾರುಗತಿ ನಿನ್ನಯ ಚಲ್ವ
ಚಂದಗಾದವೆ ಶೃತೀ
ಹಿಂದೆ ಮಾಡಿದ ಕೊಲೆಗಳಂ ಬೆನ್ನ
ಮುಂದೆ ಬಾರದಂತದ ಹರಿಯೋ
ಇಂದಿರೇಶ ಮುಕುಂದ ಪರಮಾ
ನಂದ ತುಲಸೀರಾಮ ದೇಶಿಕಾ ೩

೨೮೧

ನಾರದನು ನಮರರಶಿಕರ ನಂದನಂದನೆ
ಕೋರಿದೆನು ನಾ ಸುಗುಣ ಭಜನ ಗೋಪಿ ಕಂದನೇ ಪ

ಬಾರದೆನಾ ಮನಸು ದುಷ್ಕೃತ ಮೀರಲಾಪುದೇ
ತೋರಿಸೆನ್ನ ಸ್ಮರಣೆ ಸುಕೃತ ದೋರಲಾಪುದೇ
ದಾಸ ತುಲಶಿರಾಮ ನಿನ್ನ ದಾಸನಾದೆನೋ
ದೋಷರಹಿತನ ಮಾಡೆನ್ನ ಮೋಸಹೋದೆನೋ ೧

೨೮೨

ನೀ ಕೈಯ ಬಿಟ್ಟರಿನ್ಯಾತಕೆನಗೀ ಸುಖ
ಗೋಕುಲಗಣನಾಯಕ ಪ

ಲೋಕೈಕ ನಾಥನೆಂದಾ ರೈಉಸುರಿದ ಮುನಿಯ
ಯಾಕೀ ಪರಿಯೊಳೆನ್ನ ಕಾಕುಮಾಡುವೆರಂಗಾ
ಸಾಕು ಸರ್ವಧರ್ಮದಿ ಸ್ನೇಹವ
ನೂಕಿ ನಿಮ್ಮಾಶ್ರಯವ ಮಾಡ್ಯೆ ಎಂದಿಹ
ವ್ಯಾಕುಲಾಂತ ಪರಾತ್ಮ ಸತ್ಯ ಸ
ಲೊಕ ಸರ್ವಸಯೇಕ ಭೀಮಾ ೧

ಸಮಾಜದೀ ಭೀತಿಯಿಂದ ಮಿತ ದು:ಖವನುಂಡೆ
ನಮಿಸುವೆನೋ ಶ್ರೀ ಹರಿ
ಸುಮನ ಸತ್ಯ ಸಮಾಜ ಭೌಮನೆ
ಭ್ರಮರ ಕೀಟನ್ಯಾಯ ಸಹಜನೆ
ಅಮರಗುಣ ಕಟಕಾಮಣಿಯೆ ಸ
ದ್ವಿಮಲ ಚರಿತ ವಿಶಾಲ ಭೂಪಾ ೨

ಕಿಂತು ಭವದ್ದರ್ಶನೇನ ಆಹಂಬೆಲ್ಲ
ಕಥಯಾಮಿಕಾಲಾಂತಕೋ
ಅಂತರಂಗವಿಚಾರ ಅಗುಣದೂರ
ಚಕ್ರಸುಧಾರ ತ್ವರಿತದಿ
ಕಂತು ಜನಕನೆ ಪಾಲಿಸೆನ್ನು
ಪಂಥವೇತಕೊ ಪರಮಜೀಯಾ ೩

ಅಷ್ಟ ಪ್ರಣವಗಳೂ ಪ್ರತಿಷ್ಠಿಸಿ ಪರತತ್ವ
ದೃಷ್ಟಿ ಗೋಚರನಾಗಲ
ಕಷ್ಟವಳಿ ಕಪಟಾಂತಕನೆ
ಭ್ರಷ್ಟಸಂಗವ ಬಿಡಿಸಿ ಪಾಲಿಸೊ ವಿ
ಶಿಷ್ಟಾದ್ವೈತನೆ ಕೃಷ್ಣನಾಮನೆ
ಸೃಷ್ಟಿ ಶ್ರೀಗುರು[ತುಳಸಿ]ಕುಲ ಶ್ರೀರಾಮಾ ೪

೨೮೩

ಪಶುಗಳ ಒಡನಾಡಿ ಪಾಮರನು ನಾನಾದೆ
ಪಶುಪತಿಯೆ ನೀ ಬೇಗ ಬಾರೈ ಪ

ಎಸೆವ ಆ ಸಮಯನುಣ್ಣಲೋಸುವನೊ ನಾನಿನ್ನು
ಶಿಶು ಹಾದು ನಿಜ ಸುಖವು ತೋರೈ ಅ.ಪ

ಕಚ್ಚಿ ಕೈಬಾಯಿ ನಿಮ್ಮಿಚ್ಚೆಯಾಗಿರುತಿಹುದೂ
ಸಚ್ಚಿದಾನಂದಾತ್ಮ ನೋಡೈ
ಉಚ್ಚರಿಸುವಾದಿ ವ್ಯಾಸಚ್ಚರಿತ ನಾಮವನೂ
ಅಚ್ಚಳಿಯದಿರದಂತೆ ನೋಡೈ ೧

ತೃಷೆಯ ನೀಗಿಸಲಿಂತಾ ಹೊಸಪರಿಯ ಬಿನ್ನಹುವು
ಹಸುವಿಗಾಧಾರವನು ತೋರೈ
ಪುಸಿಯದಿರು ನೀನಿದಕೆ ಬಿಸನಾಡದಿರುಯೆನ್ನಾ
ನೊಸಲ ತಿಲಕವೆ ವೋಡಿಬಾರೈ ೨

೨೮೭

ಬಾ ಬಾರೊ ನೀಬಾರೊ ರಂಗಯ್ಯ ಓಡಿ ಪ

ಬಾರೊ ರಂಗಯ್ಯ ಓಡಿ ತೋರೊ ಕೃಪೆಯ ಮಾಡಿ
ದಾರಿಯ ಕಾಣೆ ಭವದೂರ ಧೀರ ಬೇಗ ೧

ತನಯನು ಅಗಲಿರೆ ಮನಕೆ ನೀ ತೆರೆದರೆ
ಅನುಚಿತವಲ್ಲ ವೇನೊ ಇನಕುಲಚಂದ್ರ ಬೇಗ ೨

ಸುರುಪತಿ ವಿನುತನೆ ಧರಸತಿಗೆ ನತನೆ
ಗುರುವು ತುಲಶೀರಾಮಾ ಧೊರೆಯೆ ಸರಿಯೆ ಬೇಗ ೩

೨೮೫

ರಾಧೆಯ ರದನ್ಯಾರೆಲೊ ರಾಜೀವಲೋಚನ ಪ

ಪಾದಸೇವೆಯೊಳಿರಿಸಿ ಸಲಹೊ ವೇದಸೂಚನಾ ಅ.ಪ

ಕರಣನಾಲ್ಕರಿರಹು ನೋಡೆಂದರುಹಬೇಕಲ್ಲೈ
ಹರುಣಕೋರಿ ಕಳೆಯೊಳಿರಿಸಲೆನಗೆ ಸಾಕಲ್ಲೈ ೧

ಪಾರಮಾರ್ಥದೊಳೆನ್ನಿರಿಸೊ ಪಂಡಿತಾಮಣಿ
ದಾರಿಗುರುವು ತುಲಶಿರಾಮ ನೀನೆಮ್ಮ ಧಣಿ ೨

೨೮೬

ರಾಮ ರಾವಣಧೂಮ ನಿಸ್ಸೀಮಾ ವೊ ಪ

ಸ್ವಾಮಿ ನಿಮ್ಮ ಪದಾಬ್ಜ ಸೇವೆಗೆ
ತಾಮಸವೃತ್ತೇನು ಕರುಣಿಸೋ
ಕಾಮಿತಾರ್ಥಗಳೀವಸಗುಣ
ನಾಮ ಸರ್ವಸಭೀಮಾ ಸೀತಾರಾಮಾ ೧

ನಿನ್ನ ಧ್ಯಾನದೊಳಿರುವ ಸಂಭ್ರಮ
ಮೆನ್ನ ಮನಕದು ಫಲಿಸುಲೋಸುಗ
ಚೆನ್ನಕೇಶವನೆಂದು ಭಜಿಸುವೆ
ಪನ್ನಗಾಧಿಪಶಾಯಿ ಸೀತಾ ೨

ನಿತರ ಚಿಂತೆಯ ನಳಿಸಿದಾ ನಿಜ
ಯತಿ ಜನೋದ್ಧಾರ ಯಕ್ಷರಕ್ಷಕ
ಪತಿತಪಾವನಾದ ಮದ್ಗುರು
ಸತಿ ಶಿರೋಮಣಿಯಾದ ಸೀತಾ ೩

೨೮೭

ವೆಂಕಟರಮಣನೆ ಸಂಕಟಹರಣನೆ
ಶಂಖ ಚಕ್ರ ಪೀತಾಂಬರನೆ ಪ

ಪಂಕಜನಾಭನೆ ಪರಮಗೋವಿಂದನೆ
ಲಂಕೆ ವಿಭೀಷಣ ನಿಗಿತ್ತವನೇ ಅ.ಪ

ಹಿಂದನ ಕರ್ಮದಿನೊಂದೆನು ನಿನ್ನಯ
ಕಂದನವೊರೆಯನು ಲಾಲಿಪುದೂ
ಬಂದಿಸಿ ಭವಗಳ ಹೊಂದಿಸೊ ನಿಜಪುರ
ಚಂದದೆ ಕ್ಷಿತಿಯೊಳ್ ಪಾಲಿಪುದೂ ೧

ಘಾಸಿ ಬಿಡಿಸಿ ನಿಜದಾಸನ ಮಾಡೆಲೊ
ಈಶನೆ ಕೇಶವ ಮೂರಿತಯೇ
ಆಸೆಯ ತೀರಿಸಬೇಕೈಯಾ ಭವ
ನಾಶನೆ ಪಾರ್ಥವ ಸಾರಥಿಯೆ ೨

ಪರಿಪರಿ ಭವಗಳ ಹರಿಯುವನೆನ್ನುತಾ
ಕರದೊಳು ಕಂಕಣ ಕಟ್ಟಿರುವೇ
ಮೊರೆ ಬಿದ್ದೆನು ಶ್ರೀ ತುಲಸೀರಾಮನ
ಸ್ಮರಣೆಯ ಹೃದಯದೊಳಿಟ್ಟಿರುವೆ ೩

೨೮೮

ಶರಣೆಂಬೆನೋ ಪರಮಾತ್ಮನೆ ನೀ ಕರುಣಿಸೆನ್ನನು ಪ

ಶರಣಾಶ್ರಯ ಹಿತಾಯ ಸತ್ಯ ಸುಗುಣಿಯನಿನ್ನು ಅ.ಪ

ಪರಮಾನಿನಿಯರ ಸಂಗದೊಳಗೆ ಯಿರಿಪುವುದೂ ಮನ
ನರಸಿಂಹನಾಮ ಖಡ್ಗವೀಯೊ ಬೇಡ್ವೆ ನಾನದನಾ ೧

ಸಕಲಾರ್ಥಮೆನಗೆ ಅರುಹಿ ಕಾಯೊ ಸರ್ವಾರ್ಥ ಫಲಪ್ರದಂ
ಸುಕೃತಾರ್ಯ ಸೇವೆಯೊಳಿರಿಸಿ ಸಲಹೊಸರ್ವಸ್ವಾತ್ವರಂ ೨

೨೮೯

ಸಾಕೆಲೊ ಶ್ರೀರಂಗನಾಥ ಲೋಕದಾಟವೂ ಪ

ಬೇಕು ನಿನ್ನಪಾದ ಭಜನೆಯೇಕದಾಟವೂ ಅ.ಪ

ಕಾಕು ಮನುಜರೊಡನೆಯೆನ್ನಾ ನೂಕಲ್ಯಾತಕೋ ನೀ
ನೇಕನಾಥನೆಂಬೊ ಬಿರುದು ಬೇಕು ಮಾಡಿಕೊಳ್ಳೊ ೧

ಅಂಧಕಾರವಾಧೀತಲ್ಲೋ ಚೆಂದವೇನೆಲೊ ನಾ
ನೊಂದೆನಲ್ಲೋ ಬಂದು ಕಾಯೊ ಇಂದಿರಾಪತಿ ೨

ಆರುಗಿರಿಯ ದಳದ ತುದಿಯೊಳಿರುವೊ ಶ್ರೀಗುರು
ದಾರಿ ತೋರೋ ತುಲಶೀರಾಮ ದಾಸದಾಸನೂ ೩

೨೯೦

ಸೀತಾಪತೇ ರಘುನಾಥ ದಯಾಳೋ ಪ

ಆ ತೆರ ಚರನೂಕ್ಕೈ ಪ್ರೀತಿಯೊಳಿರಿಸೈ
ಮಾತಾಪಿತ ಸರ್ವ ಭೂತಾನಿ ಅರಸೈ ೧

ಪಾಮರ ಹೊಕ್ಕಿಹ ಮಾಯಾ ನೀ ನೋಡೈ
ಕಾಮಜನಕ ರಂಗಾ ಬೇಗೆನ್ನ ಕೂಡೈ ೨

ದಾಸ ತುಲಶೀರಾಮಾ ದೇಶಿಕ ತುಮಜೀ
ನೇಷಾ ಪ್ರಸಾದೇ ತದ್ವಾಶೀಯಾಹಮ ಜೀ ೩

೨೯೧

ಹಿಡಿಹಿಡಿಕೈಯ್ಯ ಬಿಡಲೇತಕೆ ಕೇಳೊ ಜೀಯಾ ಪ

ಒಡೆಯನಲ್ಲವೆ ನಿನ್ನ ಅಡಿಗಳೆರಡಕ್ಕೆನ್ನ
ಮುಡಿಯನಿಡುವೆನೆಲ್ಲೊ ಸುಡಲಿ ಜನ್ಮವು ಬಿಡದೆ ೧

ಆದಿರೂಪನೆ ಬಾರೊ ಅಚ್ಚುತಾದಿಯ ತೋರೋ
ಶ್ರೀಧರ ನಾರಾಯಣನೆ ಬೋಧಿಸಬೇಕೋ ಬಿಡದೆ ೨

ವಾಸವಾನುತ ಹರಿದಾಸ ತುಲಸಿರಾಮ
ದೇಶಿಕನಾದ ಪರಮಾತ್ಮನೆನಾ ಕೈ ಬಿಡದೆ ೩

(೧) ಸತಿ–ಪತಿ ಭಾವದ ಸ್ತುತಿಗಳು (ಜಾವಡಿಗಳು)

೨೯೨

ಎಂದಿಗೆ ತೀರಿದೆ ಸುಂದರನಾಯಕಿ
ಅಂಗಜ ಬಾಣದ ಅತುರವನ್ನೂ ಪ

ಚಂದ್ರಮುಖಿಯೇ ನೀ ನಾದಿನ ಹೇಳಲ್
ಬಂದೆನುನಾನಹುದೇ ಭಾವಕರನ್ನೇ
ಕುಂದುಗಳನೀಪರಿ ಉಸುರುವೆ ಉಚಿತವೆ
ಸಂದಣಿಯಾಗೆನ್ನೊಳಿಂದಿನ ಕಾಲಯೆಂದಿಗೆ ೧

ಬಲ್ಲೆನು ನಿನ್ನಂ ಭಾವದ ಸೊಲ್ಲಂ
ಬೆಲ್ಲದ ಮಾತನಾಡಿ ಕಳುಹಿಪೆನೇಂ
ಬೊಲ್ಲಿದಿಗೆ ಸಾಕುಬಿಡು ಇಂಪಿನ ಕವಚತೊಡು
ಸಲ್ಲಿದೆ ಸುಂಕವ ಸಮ್ಮತಿಯಿಂದಾ ೨

ಮಾರನು ಬಂದೂ ಮನದೊಳು ನಿಂದೂ
ದಾರಿಯನು ತಪ್ಪಿಸಿ ಧಣಿಸುವ ಕಾಣೆ
ಓರದೆ ಕೋರಿದ ಕಾರ‍್ಯವ
ತೀರಿಸೆ ಕಾಂಕಳು ನೀನಾಗಿ ಕಾಮಶಾಸ್ತ್ರವಂ ೩

ಈ ಸುಖಸಂಪದ ಈಶ್ವರ ಬಲ್ಲಂ
ಆಸೆಯ ತೋರಿ ನೀ ಮೋಸವಗೆಯ್ವೆ
ದಾಸನು ವಂದಿಪ ಸುಖತೋರಿದೆ
ದೇಶಿಕನಲೆ ತುಲಸಿರಾಮಾ ೪

೨೯೩

ಕನಸು ಕಂಡೆನು ಕೇಳೇ ಪ್ರಾಣ ಸಖೀ ಒಳ್ಳೆ ಪ

ಕನಸು ಕಂಡೆನು ಕೇಳು ಘನತರ ಸುಖದೊಳೂ
ಮನದೊಳಗನುದಿನ ನೆನೆಸೇ ಸಖಿ ಅ.ಪ

ಎಳೆಯ ಚಂದ್ರನ ಚೆಲ್ವ ಪೋಳೆವ ಬೆಳಕಿನೊಳು
ಝಳಿಪಾ ಚೆಂದುಟಿಯಂ ತಿಳಿವೇ ಸಖಿ ೧

ವಾಸವಾರ್ಚಿತ ಹರಿದಾಸ ತುಲಸಿರಾಮಾ
ದೇಶಿಕನಾದಾನು ತಾನಹುದೇ ಸಖಿ ಅಸ್ಮದ್ದೇಶಿಕನಾದಾನು ೨

ಯಾತರ ಸುಖ ಬರಿ ಮಾತಿನೊಳಿಗೆ ಜಾಣೆ
ಪ್ರಿತಿಯಿಲ್ಲದೇಲೇ ತಾಮಾತರಮಳಿವುದೇನೇ ೩

ಬರಿಯ ಮಾತಿನೊಳೆನ್ನಾ ಬೆರಗು ಮಾಡಲಿಬೇಡಾ
ಸುರತಕೇಳಿಗೆ ಬಂದೂ ಸರಸವನಾಡೆಲೆ ೪

ವಾಸವನುತ ಹರಿ ದಾಸತುಲಸಿರಾಮಾ
ಆಸೆಯ ತೋರಿಯೀಪರಿಯೋಳ್ ಮೋಸಗೈವುದು ಸರಿಯೆ ೫

೨೯೪

ನಿನಗಿದುಸರಿಯೆ ನನ್ನ ದೊರೆಯೆ ಪ

ದಯಮಾಡೋ ದಾನವಾಂತಕನೆ ಅ.ಪ

ಮಾಯಾಧಾರಿಯೇ ನಿನ್ನಂ ಬಲ್ಲೆನೇಳೆಲೋ ಜಾಣಾ
ಪ್ರೀಯರಿಲ್ಲದೆ ನನ್ನ ಪ್ರಾಣಮಳಿವೋದು ೧

ಬರಿಯ ಮಾತಿನೊಳೆನ್ನಂ ಬೆರಗುಮಾಡಲಿ ಬೇಡಾ
ಸುರತಕೇಳಿಗಾಗಿ ಬರಮಾಡಿದೆನು ನಿನ್ನ ೨

ವಾಸವಾರ್ಚಿತ ಹರಿ ದಾಸಾ ತುಲಶೀರಾಮಾ
ಆಶೆಯ ತೋರಿ ನೀ ಮೋಸಗೈದುದು ೩

೨೯೫

ನೀರನಾ ಕರತಾರೆ ನಾರಿಮಣಿಯೇ ಪ

ಸೂರೆ ಹೋಗ್ತಾನೆ ಜೀವಾ ಆರಿಗುಸುರಲಿ ಬೇಗಾ ಅ.ಪ

ಬರುವೆನೆಂದು ಪೋಗಿ ಬಾರನೇತಕೆ ಸಖಾ
ಕರತಾರೆ ಕಾಮಿಸಿ ಸುರತಾವನಾಡುವಾ. ೧

ಮಾರನಯ್ಯನಾಣೆ ತೀರಿತೆನ್ನ ಪ್ರೀತಿ
ದೂರಕ್ಕೋದನೂ ಗಂಡಾ ಬಾರದೇಕೆ ಪೋದನೆ ೨

೨೯೬

ಬಲ್ಲೆನೇಳೊ ನಲ್ಲ ನಿನ್ನ ಬೆಲ್ಲಮಾತುಗಳನ್ನಾ ಪ

ಅಲ್ಲ ಆಡಿದುದ್ದ ಆದೋದಮ್ಮಾ
ಲೆಲ್ಲಿದು ಬರಿ ಸೊಲ್ಲದು ಬಿಡು ಅ.ಪ

ಭಾಷೆನಿತ್ತೆ ಬರಸೆಂದೂ ಮೋಸಗಯ್ವಯ್ಯೋ ರಂಗಾ
ಆಶೆಯಂ ತೀರಿಸೆನ್ನಯ ನಿಜ ಭೂಸುರಗಣ ಭಾಸುರಮಣಿ ೧

ಸುರತಕೇಳಿ ಸುಖದೊಳೆನ್ನಂ ಮರೆತು ಪೋದೆಯೊರಾಮಾ
ಅರಿತೆನೇಳೊ ಚರಿತವನ್ನಾ ನಿರುತದಿ ಬರೆ ಗುರುತದು ಸರಿ ೨

ಬೆರಗು ಮಾಡಿದಿರೆನ್ನ ಸ್ವಾಮಿ ಸೆರಗೊಡ್ಡಿದೆನೊ ದೇವಾ
ಸುರಗಿರೀವರ ತುಲಶಿರಾಮ ನೀ ಸರಗೂರಿನ ಗುರುಕಾರನೆ ೩

೨೯೭

ಮಾತನಾಡೆ ಜಾಣೆ ಮಾಯೆ ನೀ ಪ್ರವೀಣೆ ಪ

ಯಾತಕೆಂಬುದೇನೇ ಯೆನ್ನೊಳ್ ಸಾಮಜನಯನೆ ಅ.ಪ

ಮಾನಿನೀಯಳಲ್ಲೆ ಮನೆಸನಿದ್ಯಾಕದೊಲ್ಲೆ
ಜಾಣೆ ನಿನ್ನ ಬಲ್ಲೆ ಬಾಣ ತಾಕೀತಲ್ಲೆ ೧

ನಾಯಕೀಯಳ್ಯಾರೆ ನನ್ನೊಳ್ ನೀ ವೈಯಾರೇ
ಮಾಯಧಾರಿ ತುಲಸಿ ಕಾಯಜಾರಿ ಸಖನೊಳ್ ೨

(ಊ) ಲೋಕನೀತಿ ತತ್ವ ಕೃತಿಗಳು

೨೯೮

ಅನುಭವವಿಲ್ಲದೇ ಅರಸಿದಡಾಹುದೇ ಆ ಹರಿದರುಶನವೂ ಪ

ಮನುಮುನಿಯಾಗಲೀ ಮಾನ್ನವರಾಗಲೀ
ಸನಮುಖರಾಗಲೀ ಸಾಧುಗಳಾಗಲೀ ೧

ಅರಸು ತಾನಾಗಲೀ ಆಣಯತನಾಗಲಿ
ಸುರಮಣಿ ಸೋಲಿಪ ಸುಂದರನಾಗಲಿ ೨

ಪಂಡಿತನಾಗಲೀ ಪಾಮರನಾಗಲೀ
ಅಂಡಜಗಮನನಾಗಲೀ ಶ್ರೀಗುರುವೆ ತುಲಶೀರಾಮಾ ೩

೨೯೯

ಅರಿತರೆ ಮನುಜ ನೀನಹುದಣ್ಣಾ ನಿಜ
ದರಿವುಯಿಲ್ಲದೆ ಹ್ಯಾಂಗಹುದಣ್ಣಾ ಪ

ಪರಮನಪ್ಪಣೆ ಹಿಂಗಿಹುದಣ್ಣಾ ಇದ
ನರಿಯದೆ ಕೆಡುವೆ ನೀನಹುದಣ್ಣಾ ಅ.ಪ

ಸಪ್ತ ಸಮುದ್ರವ ನಡೆಯಣ್ಣಾ ನಿನ
ಶಕ್ತಿಗೆ ಬಂದರೆ ಹೊಡೆಯಣ್ಣಾ
ಗುಪ್ತದೆ ನಾಮವ ನುಡಿಯಣ್ಣಾ ಪ್ರಾ
ಣಾಪ್ತನ ಕಂಡು ನೀ ಹಿಡಿಯಣ್ಣಾ ೧

ಅಂಗಪುರೀಯೆನಬಹುದಣ್ಣಾ ಜಯ
ಮಂಗಳ ನಾಯಕನಹುದಣ್ಣಾ
ಜಂಗಮಗುರು ಹರಿತುಲಶಿರಾಮ ನಿಜ
ಲಿಂಗನೆ ತಾನಹುದಹುದಣ್ಣ ೨

೩೦೦

ಇಂತಾ ಸಾಟಿಗಳೆಷ್ಟೊ ಜಗದೊಳಗಿಂತಾ ಸಪ್ಪಳೆಷ್ಟೊ ಪ

ಅಂತರವರಿಯದೆ ಅಧಮನು ತಾನಾ
ಗಿಂತಿದರೊಳು ಬೊಗಳುವ ಕಂತೆ ಅ.ಪ

ಕುಂತರೆ ನಿಂತರೆ ಸುಜನರ ದೂಷಿಸೆ
ಅಂತಕನಿಗೆ ಸಿಲ್ಕುವೆಯಹುದೊ
ಪಂಥವಿಲ್ಲ ಪರೀಕ್ಷಿಸಿ ನೋಡೆಲೊ
ಸಂತೆಯೊಳಗೆ ನೀಮಾಡುವ ಡಂಬದ ೧

ಮಸ್ತಿಯೊಳಾಡಲು ಮಥನಿಪುದಹುದೆಲೊ
ದುಸ್ತರವೆಲೊ ದುರಿತಾಂಬುಧಿಯು
ನಿಸ್ತರಂಗನಿಗೆ ನಿಜಸುಖವೆನ್ನುತ
ಶಿಸ್ತೊಡೆಯುವನಂಥಡಿಯನು ಅರಿಯದ ೨

ಆಗದು ಅನುಭವ ನೀಗದು ಕತ್ತಲೆ
ಹ್ಯಾಗೆಂಬುವ ಸಂಶಯ ನಿನಗೇ
ನಾಗರೀಯೆ ನಿಜ ತುಲಸೀ ರಾಮ
ಮದ್ಗುರುವಿ ನಪ್ಪಣೆಯ ಬಿಟ್ಟರೆ ಬೊಗಳುವ ೩

೩೦೧

ಎಂತಾ ಗರತೀಯ ಕಂಡೆ ಇ
ನ್ನಿಂತಾವಳೀ ಜಗದೊಳುಂಟೇನೆ ರಮಣೀ ಪ

ಪಂಥವು ಮಾಡಲು ಪರರು ಕಾಣದ ಹಾಗೆ
ನಿಂತಾಗೆ ನುಂಗಿದಳು ಕಂತೆ ಕಬ್ಬಾ ಅ.ಪ

ಗರತಿಯು ತಾನಲ್ಲ ಗೌಡಿಯ ತಾನಲ್ಲ
ಗುರುತೇಳುತದೆ ನೀವೆದ್ದರೆ ಕೇಳಿರೈ
ಸರಿತಾಯಿ ಪರಿಯುತ್ತೆ ವರಗಂಡನಿಗೆ ಮೋಸ
ಕರಿಯುತ್ತಳಿಹ ಪ್ರಖ್ಯಾತ ನಳ್ಳಿಯೊಳು ೧

ಆದಿಲಿ ಹೊಗ ಪರಬೀದಿಯೊಳು ತಾನೆಂತೂ
ವಾದಿಸಿ ಅವರೊಳು ಭೇದವಿಡಿದೆ
ಕಾದಿರುವೆ ನಿನಗಾಗಿ ಕಾಮನಯ್ಯನೆ ಬಾರೊ
ವೇದಗೋಚರ ಗುರು ಶ್ರೀತುಲಸೀರಾಮಾ ೨

೩೦೨

ಏಕಾದಶಿದಿವಸ ನಮ್ಮ
ಶ್ರೀಕೇಶವ ನಾಮವ ಭಜಿಸುವವರಿಗೆ ಪ

ಬೇಕಾದವರೀ ವ್ರತವನಾಚರಿಸೆ
ಆ ಕಾಲಾಂತಗೆ ಅಗಣಿತವಾಗಿಹುದು ೧

ಭಕ್ತನು ರುಕ್ಮಾಂಗದ ಮಹರಾಯನೂ
ಮುಕ್ತಿಗೆ ಮಾಡಿದ ಶುಭಕರದಿನವಿದು ೨

ಸುಜನರ ಗೋಷ್ಠಿಯೊಳ್ ರಾತ್ರಿಯೊಳಾ
ಭುಜಗ ಶಯನನಂ ಭಜಿಸಲ್ಕೂಡಿದ ೩

ಕಲಿಯೋಳು ಕಾಣುವ ಅಸ್ಮದ್ದೇಶಿಕ
ರೊಲುಮೆಯ ತುಳಶೀ ರಾಮನು ತೋರಿದ ೪

೩೦೩

ಏನೆ ನಾರಿ ಕನಸುತೋರಿ ಹಾರಿತಲ್ಲೆ ಪ

ಮಾರನಯ್ಯನಿಲ್ಲಿ ಬಂದೂ ನನ್ನ
ಘೋರ ಪಾತಕವ ಕೊಂದೂ ಒಳ್ಳೆ
ನಾರಿಸೂರೆ ಆಟ ತೋರಿ ಪೋದಕಾಣೆ
ತಾರೆಬೆಳಕಿನ ಚಂದಾ ಅ.ಪ

ಇಂದಿರಾಪತಿ ತಾ ಮಂದಹಾಸದೊಳು
ಕುಂದರದನೆಯ ಕೂಡಿ ನನ್ನ
ನಿಂದೆ ತಂದ ಸರಿಮಾಡಿ ಕಳ್ಳ
ಬಂದು ಪೋದ ಕರತಂದು ತೋರೆಮತ್ತೆ
ನಿಂದು ಭಜನೆಯ ಮಾಡಿ ೧

ಬಾರೊ ಧೀರ ಅಂದ್ರೆ ನೀರ ಆಟದೊಳು
ತೋರಿ ಮಾಡಿದನು ಮೋಸಾ ಭವ
ದೂರನಾದ ವೆಂಕಟೇಶಾ ರಂಗ
ದಾರಿಕಾಣೆ ಕಂಡು ತೋರೋ ನಿನ್ನ ಪಾದ
ಗುರುವು ತುಲಸಿ ರಾಮದಾಸ ೨

೩೦೪

ಏನೋ ಒಂದಿಹುದೂ ಕೋರಿಬಾಳುವ ನುಂಗಿಹುದೂ ಪ

ದೀನನಾಗಿ ಗುರುಧ್ಯಾನಮಾಡಿ ಆಸೆಯೋಳಿ ಬಹು
ಮಾನದಿ ಕಾಣುವದೇನೋ ಅ.ಪ

ನಮ್ಮೊಳಿರುತಿಹುದು ಅದು
ನಮ್ಮಯ ನಮ್ಮೊಳಿರುತಿಹುದೂ
ಹಮ್ಮುಗಳೆಂಬುವ ಹೆಮ್ಮೆಯನಳಿಯಲು
ಸುಮ್ಮನೆಗಮ್ಮನೆ ಕಾಣಬರುತ್ತಿಹುದೇನೊ ೧

ಅದಕಿನ್ನೆಣೆಯಿಲ್ಲಾ
ಅದನು ಗುರುಸೇವಕ ಬಲ್ಲಾ
ಮದನಜನಕ ಶ್ರೀ ತುಲಸೀರಾಮನ
ಪದ ಭಜನೆಯೊಳು ಉದಯಿಸಿ ತಾನೇ ೨

೩೦೫

ಓ ದಯಾನಿಧೇ ನೀ ದಯಮಾಡೋ
ಓಂಕಾರ ಪ್ರಣವ ಮೊದಲೋ ಪ

ಬೀದಿ ಪದಗಳ ಪೂಜ್ಯಮಾಗಲಿ
ಸಾಧು ಜನ ಹೃದಯಾಂತರಸ್ಥಿತಿ ೧

ರಾಧೆಯರಸ ಪರಾತ್ಪರನೆ ಜಾಯ
ವೇದನಿಜ ವೇದಾಂತರಸ್ಥಿತಿ ೨

ಕೋಲುಪೇಟೆ ಪುರೀಶ ತುಲಸಿ
ಮೂಲವಿಗ್ರಹದ ನಾದ ಕಾರಣ ೩

೩೦೬

ಓದಲೇಕೋ ಬರಿದೆ ಓದಲ್ಯಾಕೋ ಪ

ಆದಿ ಮಧ್ಯ ಅಂತ್ಯವೆಂಬೊ
ನಾದಬಿಂದು ಕಳೆಯನು ಅರಿಯದೆ ಅ.ಪ

ಏಳಬೇಕೋ ನಾರಿಯಾಳಬೇಕೋ
ಏಳು ಎಂಟು ಆತ್ಮವಿಚಾರ
ತಾಳಿ ತತ್ವ ಜ್ಞಾನವನ್ನು
ನೀಲಜ್ಯೋತಿಯನ್ನು ಕಾಣದೆ
ಜಾಲಾಮಾನಿನಿಯರೊಳು ಬೆರೆದೂ ೧

ಓದಬೇಕೋ ಓದದ್ದೋದಬೇಕೊ
ಓದಿತಾವೊಂದಕ್ಷರವನ್ನು
ಪಾದಸೇವೆಯನ್ನು ಕೊಟ್ಟಾ
ಭೋಧಾಚಾರ್ಯನೆಂಬೊ ತುಲಸೀ
ಆದಿಪ್ರಣವವನ್ನು ಬಿಟ್ಟುವೋದಲೇಕೊ ೨

೩೦೭

ಕನ್ನೆ ಪ್ರಾಯದ ಹೆಣ್ಣು ಕಾಣಿರೊ [ಅ
ದನ್ನ] ಕಂಡು ಪರಲೋಕ ಸೂರೆಯ ಮಾಡಿರೊ ಪ

ಸನ್ನೆಯು ತೋರುವ ಗುರುಗಳಿಗೆರಗೂ ಪ್ರ
ಸನ್ನಳಾಗುತ್ತಿಹ ಕಡುಚೆಲ್ವೆಯಿೀನಮ್ಮಾ ಅ.ಪ

ಬ್ರಹ್ಮನ ಮಗನಾಗಿ ಹೇತ್ತಳು ಪರ
ಬ್ರಹ್ಮವೆ ತಾನಾಗಿ ನಿಂತಳು
ಸಂಹಾರ ಉತ್ಪತ್ತಿ ಪೋಷಕತ್ವದೊಳೊಳ್ಳೆ
ಸಿಂಹಾಸನದೊಳಗಿರುತಾಳೆ ೧

ಕಾಮಾದಿಗಳನೆಲ್ಲ ನೀಗಿಯೂ ಗುರು
ನೇಮದೊಳು ತಲೆ ಬಾಗಿಯೂ
ಆ ಮಹಾ ಜ್ಯೋತಿ ಬೆಳಕಿನೊಳಿರುವಾ
ಈ ಮಹ ಮೋಕ್ಷಕಾಮಿನಿಯೆಂಬುವ ಕನ್ನೆ ೨

ವನಗೂಡುವಂದಾವ ಕಾಣಿರೋ ನಿಮ್ಮ
ಮನದೊಳು ನಿಚ್ಚಯ ಮಾಡಿರೋ
ಘನಗುರು ತುಲಸೀರಾಮದಾಸನೂ
ಅನುಮತಿಕೊಂಡಿಹ ಕಡುಚೇಲ್ವೆ ಯೀನಮ್ಮಾ ೩

೩೦೮

ಕಲಿಧರ್ಮಮಾಡುತಿದ್ದ ಜಂಗಮಲಿಂಗಾ
ಶಿವಪೂಜೆ ಮಾಡುತಿದ್ದ ಪ

ಅಲ್ಲಿಗಲ್ಲಿಗೆ ಜಾಣ ಬಲ್ಲೆನೈವರಕೂಟ
ಎಲ್ಲೆಲ್ಲಿ ನೋಡಲಿ ಕುಳ್ಳಯೆಂಬೆರುಮಾನೇರು

ನಿಲ್ಲಾರು ನಿಜದಿಂದ ಬಲ್ಲವರದು ಕೇಳಿ
ಕಳ್ಳಾರು ಕದಿವರಲ್ಲ ಜಂಗಮಲಿಂಗ ಸುಳ್ಳು ಹೇಳುವದಿಲ್ಲವೂ ೧

ಯೆದುಶ್ಯೆಲದೊಳು ಹೋಗಿ ಯಾಚಿಸೆಲ್ಲರ ಕಂಡೂ
ಹದಿನೇಳು ತತ್ವಂಗಳಂಗಮಾಯಿತು ಯೆಂದು
ಸುದಿಗಿರಿಭ್ರುಕುಟಿಗೆ ಜೀವತನುವ ತಂದೂ
ಮದನಜನಕನೇಳಿದಾ ೨

ನಾದಬಿಂದುವಿದೆಂಬೊ ನಾಡಿಕೊನೆಯೊಳು ನಿಂದೂ
ವಾದಿಭೀಕರ ಮಾದ ವಜ್ರದುಂಗುರವೆಂದು
ಬೋಧಾಯನದೊಳಿಹುದಾದಿ ತತ್ವವಿದೆಂದೂ
ಸಾಧನೆಯನು ಮಾಡಿದಾ ಜಂಗಮಲಿಂಗಾ ವೇದಾವದನಮಾದುದ ೩

ಅಂಡಪಿಂಡವಿದೆ ಬ್ರಹ್ಮಾಂಡವಾಗಿಹುದೆಂದೂ
ಕಂಡ ಪುಸ್ತಕವೆಲ್ಲಾ ಕಾಣಿಕೆಯನು ಮಾಡಿ
ಕುಂಡಲಪುರದೊಳಿದ್ದ ಜಂಗಮಲಿಂಗಾ
ಶಿವಪೂಜೆ ಮಾಡುತಿದ್ದಾ ೪

ಕನಕಾಪುರೀಶ ತನುಮನಕಗೋಚರವಾದಾ–
ಗಣಿತಾವೇಶನುಯೆಂದು ಗುಣಿಸುತಿರಲು ವೇದ
ಅಣಿದು ಬರಲು ಗುರುವು ತುಲಸಿರಾಮನೆಯಾದ
ಫಣಿಶಾಯಿ ಪರತತ್ವವು ಜಂಗಮಲಿಂಗ ೫

೩೦೯

ಕಾಲಮಹಿಮೆ ಕೇಳಿ ಜಗದಾಲೋಚನೆ ತಾಳೀ ಪ

ಕೀಳು ಖೂಳರಿಗೆ ಮೇಲು ಹಾಸಿಗೆ ಮಂಚ
ಬಾಲಾಜಿ ಭಜನೆ ಜನಕೆ ಜೋಳಿಗೆ ಯೀ ಪ್ರಪಂಚಾ ೧

ಉತ್ತಮಪುರುಷರಿಗೆಲ್ಲ ತುತ್ತಿಗೆ ಮಾನಹೋಗಿ
ಹೆತ್ತವ್ವೆ ಹೋಗೆ ಕಳ್ಳ ಚಿತ್ತರ್ಗೆ ಮಂಚಾ ತೂಗೆ ೨

ಡಂಬಾಚಾರಿಗಳಿಗೆಲ್ಲಾ ಕೊಂಬು ಕುದುರೆಯಗಾಡಿ
ಶಂಬೂನುತರೂ ಪಾಪಿಗಾಡಿಗಳ ಹಿಂದೆ ವೋಡೆ ೩

ನಿಚ್ಚಾ ಮುತ್ತೈದೆರ್ಗೆಲ್ಲಾ ಲಂಜಿಕೆ ಅರುಶನವಿಲ್ಲಾ
ಬಿಚ್ಚಾಲೆಯಿಲ್ಲದ ರಂಡೇರ್ಗೆಚ್ಚಿ ಹೀಗಾಯಿತಲ್ಲ ೪

ದೋಷರಹಿತ ಹರಿದಾಸ ತುಲಸೀರಾಮಾ
ದೇಶಿಕಾ ತನ್ನ ನಿಜದಾಸಾನ ಮಾಡಿಕೊಂಡಾ ೫

೩೧೦

ಕೇಳಿದಾಗಲೇ ಹೇಳಬಹುದೇನೋ ಬ್ರಹ್ಮಾನುಭವಮಿದು ಪ

ಹಾಳುವಾದವಲಾ ವಿಚಾರಿಸಲೇಳು ವ್ಯಸನಕೆ ಸಿಲ್ಕಿ ಕುಣಿಯುವ ಅ.ಪ

ಖೂಳ ಕಪಟರಿಗೆಂತು ಅನುಭವಶಾಲಿಗಾಗಿಹ ಪರತರಾನ್ವಯ
ಸುಳ್ಳಮಳ್ಳರಿಗಾಗದಹುದಣ್ಣ ವೇದಾಂತಸಾರಸ
ಮೂಲ ಪ್ರಣವ ವಿಚಾರಕಹುದಣ್ಣ ಯಾರಾದಡಾಗಲೀ
ತಾಳಿನೋಡಿದಡಾಗಬಹುದಣ್ಣ
ನೀಲಜ್ಯೋತಿಯ ಕಾಣದೆ ಬರಿ ಶೂಲ ಶೀಲಕೆ ಸಿಲ್ಕಿ ಕುಣಿಯುತ
ಆಲಿಸೆಂದು ನಮಸ್ಕರಿಸುತಿಹ ಜಾವಿದ್ಯದ ಪೋಲಿ ಜನಗಳು ೧

ಪಾರಮಾರ್ಥ ವಿಚಾರ ಕಾಣಣ್ಣ
ಪಂಡಿತರಿಗೇನದು
ಕಂಡು ತಿಳಿಯಣ್ಣ ದೂರವಿಲ್ಲವು
ಅಂಡದೊಳಗಿಹ ಪಿಂಡವೇ ಬ್ರಹ್ಮಾಂಡ ವೇದಾಂತಾರ್ಥ ಸಮ್ಮತಿ

ಭಂಡರಿಗೆ ಬಹುಭಾಷೆಗಹುದೇನ
ಕುಂಡಲೀಪುರ ತತ್ವಯಾಣವು ೨

ಓದಿ ವಿಕ್ರಯವನ್ನು ಮಾಡ್ಯಾರು ಓಂಕಾರ ಬೀಜದ
ಹಾದಿಯನು ತಾವು ಕಾಣದೋಡ್ಯಾರೊ ರಾ
ಜಾಧಿರಾಜರೂ ಕಾವಿ ಜಗಳವ ಕುಂತು ನೋಡ್ಯಾರು
ವೇದಾಂತಿಗಳೂ ನಿಜ ಜ್ಞಾನಮುತ್ಥಳಿಯನ್ನು ಕಂಡ್ಯಾರು
ಆದಿಮಧ್ಯಾಂತಗಳರಿಯದ ವಾದಿಗಳಿಗೆಂತಕ್ಕು ತತ್ವದ
ಶೋಧಿಸಿದು ನೋಡಲ್ಕೆ ನಿಜಗುರು
ಬೋಧೆಯೊಳಗಿಹುದು ಆದಿತತ್ವವು ೩

ಕವಿಗಳೆಷ್ಟೋ ಕಷ್ಟಪಟ್ಯಾರು ಅವಸಾನಕರಂ
ಭವದ ಬಲೆಯೊಳು ಕಟ್ಟಿಕುಟ್ಯಾರು ಆಗಲ್ಲಿ ಸುಜನರು ಜ್ಞಾ
ನವೈರಾಗ್ಯವನು ಕೊಟ್ಯಾರು
ಶಿವನು ತಾನೆಂತೆಂಬ ಅದ್ವೈತವನು ಆಡಲ್ಕಡಕಲಹುದೇ
ಭುವನದೊಳು ಪಂಚಾಕ್ಷರೋ ನಿಜತ್ರಿಣೆಯಸತಿ ಮೋಕ್ಷೆಚ್ಚೆ ಕವಚಂ ೪

ನಾಗನಗರಿಪುರೀಶ ಕಾಣಣ್ಣ ಆಧ್ಯಾತ್ಮದನುಭವ
ಕಾಗಿ ನಿನ್ನೊಳ ಹುಡುಕಬೇಕಣ್ಣ ಹಂಸಾಶ್ರಯದಿ ನಿನ್ನೊ
ಳಗಿದೆಲ್ಲವು ಹುಡುಕಿ ನೋಡಣ್ಣ
ಆಗ ಭೋಗವನಳಿದ ಮದ್ಗುರು
ಭೋಗಿಶಯನ ಶ್ರೀ ತುಲಸೀರಾಮನ
ರಾಗವಿರಹಿತನಾಗಿ ಭಜಿಸಿದಡಾಗ ನಿನ್ನೊಳಗಂಕುರಿಪುದ ೫

೩೧೧

ಜನನ ಮರಣ ಎರಡು ಇಲ್ಲವೊ ತಾ ತಿಳಿದ ಮೇಲೆ ಪ

ಮನದೊಳಿರುವ ಮಮತೆ ಅಳಿದು ಘನವಿವೇಕವಾಗಿ ಕಾಣುವ
ಇನಕುಲೇಶನನ್ನು ಬಿಡದೆಲನುರಾಗದೊಳು ಭಜಿಸಿದವಗೆ ಅ.ಪ

ಆರುಮೂರು ಮೀರಿ ನೋಡೆಲೈ ಅಲ್ಲಿರುವ
ತಾರಕದಾರಿ ಪ್ರಣವ ಸಾರುತಿದೆ ನೋಡೈ
ಘೋರ ಕತ್ತಲೆಯನರಿದು ಮಾರಜನಕನನ್ನು ನೆನೆದು
ಏರಿ ಶಿಖರದೊಳಗೆಯಿರುವ ತೇರು ಕಂಡುಬಂದಬಳಿಕ ೧

ದಾನವಾರಿಯನ್ನು ಕಾಣೆಲೊ ಶ್ರೀಪರಮ ಚರಿತ
ಗಾನಲೋಲನನ್ನು ಕಾಣೆಲೈ
ಭಾನುಕೋಟಿರೂಪನಹುದು ಗುರುವು ತುಲಸಿರಾಮದಾಸ
ದೀನರಕ್ಷಕನೆಂದು ಭಜನೆ ಮಾಡಿಕೊಂಡು ಬಂದಬಳಿಕ ೨

೩೧೨

ತಿಳಿದು ಕೊಳ್ಳಿರಿ ಜಾಣರೆಲ್ಲಾ ಅಹಂ
ಅಳಿದು ನಿಂತಿರುವಂತ ಸತ್ಯಾತ್ಮ ಬಲ್ಲಾ ಪ

ಆದ್ಯಂತ ವಿಸ್ತಾರಮೆಲ್ಲಾ ಇದನು ಕೇ
ಳೀದರ್ಜುನಗೇಳಿದ ಕಳ್ಳಗೊಲ್ಲ ಅ.ಪ

ಎಂಟಾರುಗಳ ನೀನು ಕಂಡೂ ಅಲ್ಲಿ
ಟಂಟಣಿಸುವದೇನನುಭವದಿ ನೀನುಂಡೂ
ತುಂಟರೈವರಕಡೆಗೊಂಡು ಜ್ಞಾನ
ಮಂಟಪದೊಳಗೆ ಆಡುವ ಬಾರೊ ಚೆಂಡೂ ೧

ನಾರದಾದಿಗಳೆಲ್ಲ ಬಂದೂ ಆಹ
ಮೀರಿದ ಶ್ರೀರಂಗಧಾಮನೊಳು ನಿಂದೂ
ಸಾರಿದರು ನಿಜನಾಮವೆಂದೂ ಇದನು
ಯಾರಾದರು ಭಜಿಸಿ ಗೋಪ್ಯದೊಳಗೆಂದು ೨

ಪರದೊಳಗೆ ನೀ ಬೆರೆದಾಡೊ ಸತ್ಯ
ಶರಣರಿಗೊಲಿವ ಹರಿಯಹುದಿದು ನೋಡೋ
ನರಹರಿ ಭಜನೆಯ ಮಾಡು ನನ್ನ
ಗುರುವೆ ತುಲಸಿ ನಿನ್ನೊಳಿಹುದ್ಯೆನೆ ನೋಡೋ ೩

೩೧೩

ತಿಳಿಯೊ ನಿನ್ನ ಕರ್ಮದ ಕಂತೆಯ
ನಳಿಯೊ ವೊ ಮಾಯಾ ಜೀವಾ ಪ

ಕಳವಳಿಸುತ ನಿನ ಕುಲಹಂಕಾರವ
ನಳಿದಿರೆ ಯಾಗುವುದಲ್ಲದೆಯಹುದೇ ಅ.ಪ

ಮಾನಾ ಅವಮಾನ ಶವಸಮಾನಾ
ಈ ನರಕುರಿಗಳು ನಿನಗೇನು ಹೊರಿಕಾರ ಪರಬೊಮ್ಮ
ದಾನವಾರಿಯನು ಧ್ಯಾನಿಸತಿರೇ ಸು
ಜ್ಞಾನದೊಳಗೆ ತಾನಿಲ್ಲದೆ ಘನವಾ ೧

ನೋಡಿ ಹೋದೆಲ್ಲೋ ಮರೆತಂತಾಡಿ ಓ ಮಾಯ ಜೀವಾ
ಮೂಢ ಬುದ್ಧಿಗಳೇ ನೀ ಸಮನಾಡೀ
ಆಡಬಾರದಂತಾಟಗಳಾಡುವೆ
ಈಡಾಗಿಹುದಿದು ಮುಂದಿನ ಜನ್ಮಕೆ ೨

ಯಾಕೋ ಸದ್ಗುರುವಿನ ವರಕೃಪೆ ಬೇಕೋ ಓ ಮಾಯಾ ಜೀವ
ನೂಕೋ ಎಂಟಾರರೊಳಗೆ ನೀ ಜೋಕೆ
ತಾಕೂರನು ಶ್ರೀ ತುಲಸಿರಾಮನು
ಏಕಾನಂದನಕಂದನೊಳಿಹಪರ ೩

೩೧೪

ದುಗ್ಗಾಣಿಯು ದೊಡ್ಡದಲ್ಲಾ ನಿನ್ನ
ಪೆಗ್ಗೆಗೆ ಯಮನಾಳು ಹೊರಿಸ್ಯಾರು ಕಲ್ಲಾ ಪ

ಬಗ್ಗಿಸಿ ಆರೆಂಟು ನುಗ್ಗಿ ನೋಡಿ ಬರುವ
ಪೆಗ್ಗೆಯನಳಿದವರ ಅಗ್ಗದಿಂದಾಡಿದರು ಅ.ಪ

ಒಂದೆರಡು ಮೂರೆಂಬ ಅಂದವು ಗುರುವಿನೊಳು
ಚಂದದಿಂ ಕೇಳಿಕೊಳ್ಳೆಲೊ ಮಂಕುಜೀವಿ
ಮುಂದೀಗ ಬರುವಂಥ ದುಂದುಗಾರರ ಕಂಡು
ಕೊಂದುಹಾಕಲು ಚಂದ್ರಾಯುಧವ ಹಿಡಿದವಗೆ ೧

ಒಂಬತ್ತು ಗೇಟಿನಾ ಮೋಟದೊಳು ನೋಡಯ್ಯ
ಅಂಬಿಹರುಳುವಂತ ದುಂಬಿಗಳ ಕಾಟಾ
ಅಂಬಾರಿಯೇರಲು ನಂಬೀಗೆ ಕೊಟ್ಟಿರ್ಪ
ಶಂಭುನುತ ಶ್ರೀ ತುಲಸಿ ಕಂಬವ ಹಿಡಿದವಗೆ ೨

೩೧೫

ದೂರಿಗೊಳಗಹುದೇನೆಲೊ ಬರಿ
ದೂರಿಗೊಳಗಹುದೇನೆಲೊ ಹರಿಧ್ಯಾನವನು ನೀ ಮಾಡದೇ ಪ

ಅಪರೂಪ ಜನ್ಮವು ಬಂದಿದೆ
ಕಪಿಚೇಷ್ಟೆಗಳು ನಿನ್ನ ಹೊಂದಿದೆ
ವಿಪರೀತಕಹುದೆ ಸುದರ್ಶನ
ಜಪ ಶಾಸ್ತ್ರದೊಳು ಹೀಗೆಂದಿದೆ ೧

ಕಟಪತನಗಳದ್ಯಾತಕೋ ಯಿದು
ತ್ರಿಪುಟಿಯೊಳಗದು ನೀತಿಕೋರ
ನ ಪರನಾಗಲಿದ್ಯಾಕೊ ನೋಡದ
ಗುಪಿತದಿಂದಲಿ ಭಜಿಸದೆ ೨

ನಾನು ನನ್ನದು ಎಂಬುವೇ ಅಲ್ಲಿ
ಗೇನು ಬಂದರು ತಿಂಬುವೇ

ಹಾನಿಗೊಳಗಾಗಿ ನಮ್ಮಯ
ಶ್ರೀನಿವಾಸನ ಭಜಿಸದೆ ೩

ಎಂಟುಗೇಣಿನ ದೇಹವು ಅದು
[ಕುಂಟು]ಸೋಹಮಸ್ಮಿಯ ಭಾವವು
ಕಂಟಕಾಂತಕ ತಲಸಿಮದ್ಗುರು
ವುಂಟು ನಿನ್ನೊಳಗರಿಯದೆ ೪

೩೧೬

ನಂಬಿಗೆಯೆ ಕಾರಣವು ತಿಳಿಯೊ ಇದ
ನುಂಬದೇ ಹಸಿವಲ್ಲೊ ಚೀ ಮಂಕುಮರುಳೇ ಪ

ಕಂಬದೊಳು ಬಂದವನ ಬೆಂಬಿಡದವನಿಗಿತ್ತು
ಜಂಭವನರಡಿದ ವಿಶ್ವಂಭರನು ಮೂಢಾ ೧

ಅಲ್ಲವೆಂದೆನಿಸದೆ ನಿಲ್ಲು ಗುರುಪಾದ
ಬಲ್ಲ ಬೆಡಗಿನ ಬೆಳಕು ಅಲ್ಲಿ ಕಾಣುವೆ ೨

ಅರಮನೆಯೊಳಿರುತಿಹ ವುರುಗನನು ತೋರಿದಾ
ಪರಮಗುರು ಶ್ರೀ ತುಳಶಿರಾಮದಾಸನನು ಯೀತ ೩

೩೧೭

ನಿನ್ನೊಳಗಿರಿಸೆನ್ನ ಚಿತ್ತ ಚೆಲ್ವ
ಪನ್ನಗಶಯನ ಶ್ರೀ ಆದಿರಂಗಯ್ಯ ಪ

ಪರನನ್ನೊಳಗೆ ನಾ ಕಂಡು ನಿನ್ನೊಳಗೆ ನಾನೈಕ್ಯ
ಇನ್ನೆಂದಿಗಾಗುವುದೊ ಇನಕುಲದ ಮಣಿಯೆ ೧

ಎಂಟಾರರೊಳಗೆನ್ನ ಅಂಟಲೆಸಗೊಡಬೇಡ
ಭಂಟನಾಗಿರು ವೈಕುಂಠನಾಯಕನೆ ೨

ಕಾಕುಲದ ಕತ್ತಲೆಗೆ ನೂಕದಿರು ನೀಯೆನ್ನ
ಏಕನಾಯಕನೆ ಕೇಳಿದು ಸತ್ಯಸಿದ್ಧಂ ೩

ದೇಶಿಕಾಯೇನಮಃ ದಾಸನಗಿರುತಿರುವೆ
ದೋಷರಹಿತಾಗುರುವು ಶ್ರೀತುಲಶಿರಾಮಾ ೪

೩೧೮

ನುಡಿಯು ನುಡಿದಾ ನೆಡೆಯು ಬಾರದೂ
ಜಗದೊಳಗೆ ತತ್ವದ ಪ

ನುಡಿಯು ನಡಿದಾ ನೆಡೆಯು ಬಂದರೆ
ಗುಡಿಗಳಿಗೆ ತಾನೋಗಲ್ಯಾತಕೆ
ಪೊಡವಿಗೀಶನು ಶಿವನು ತನ್ನೊಳ
ಗಡಗಿಯಿರಲಿದನರಿಯದವರಿಗೆ ೧

ಎದ್ದು ಹೋಗಲು ದಾರಿಯೊಳಗೊಂದು ತಾ ಹಿಂದೆ ಮಾಡಿದ
ಬುದ್ಧಿ ಕರ್ಮದಂತೆ ಮತ್ತೊಂದು
ಉದ್ದವಾಗಲು ಕಡೆಗೆ ಜಗದೊಳು ಹದ್ದು ಕಾಗೆಯ ಜನ್ಮವಲ್ಲದೆ
ಮುದ್ದೆಮಾತೇನಯ್ಯ ಸ್ತ್ರೀಪರಸಿದ್ಧಸಾಧ್ಯರಿಗಾದ ಈ ನಿಜ ೨

ಆದ ಬೆಳೆಯನ್ನಳತೆ ಮಾಡೆಲೊ ಯೀ ದೇಹತತ್ವದ
ಶೋಧನೆಯೊಳು ಕುಳಿತು ನೋಡೆಲೈ
ವೇದಗೋಚರನಾದ ಜಗದೇಕಾದಿಗುರುವು ತುಲಸಿರಾಮನ
ಪಾದ ಭಜನೆಯೊಳಿರಲು ಕಾಣುವ ಬೋಧೆಯಾತ್ಮರಿಗಾದ ಈ ನಿಜ ೩

೩೧೯

ಪತಿಯಿಂದಲೆ ಸದ್ಗತಿಯೆಂಬುವಳು
ಅತಿಮತಿಯೆನ್ನುವಳು ನಮ್ಮ ಶ್ರೀದೇವಿ ಪ

ಕ್ಷಿತಿಯೊಳು ತನ್ನಯ ಪತಿಯೊಳು ಸಲ್ಲದೆ
ಇತರವನೆಣಿಪಳೆ ಮೂದೇವಿ ಅ.ಪ

ಗಂಡನು ಮುಂಡನು ಕುರುಡನು ಕುಂಟನು
ಕಂಡಿರುವಳಲಾ ಶ್ರೀದೇವಿ
ಮಿಂಡರಿಗೊಲಿಯುವ
ಭಂಡಾಂಗನೆಯಂ ಕಲಹಿಪಳೆ ಮೂದೇವಿ ೧

ಅತ್ತೆಮಾವನ ಹೇಳಿಕೆಗೆ ಪ್ರ
ತ್ಯುತ್ತರಳಲ್ಲ ಶ್ರೀದೇವಿ
ಕತ್ತೆಯಂತೆ ತಾ ಬಗಳುವ ಕಳ್ಳ
ಚಿತ್ತಿನಿ ಹವುದೆಲೊ ಮೂದೇವಿ ೨

ಅರಿಸಿನ ಕುಂಕುಮ ಹಣೆಯೊಳಗಿಡುವಳು ಅಡಿಯಾ
ಗಿರುವಳು ಶ್ರೀದೇವಿ ಅನು–
ಕರಿಸಲು ಬಾರದೆ ಕಳವಳಗೊಳುವಳು
ಕರಠೆಕಮಾನಳು ಮೂದೇವೀ ೩

ಶಿರಬಾಗಿ ತನ್ನರಸನ ಸೇವೆಯ
ಹರುಷದೊಳಿರುಪವಳೆ ಶ್ರೀದೇವೀ
ಕರಸಲು ಬಾರದೆ ಕಳವಳಗೊಳುವಳು
ಕರಟಕ ತನುವಳು ಮೂದೇವೀ ೪

ಇರುವ ಅತಿಥಿ ಅಭ್ಯಾಗತಗಳಿಗುಪ
ಚರಿಸುವಳೆ ನಮ್ಮ ಶ್ರೀದೇವಿ
ಗುರುವು ತುಲಶಿರಾಮಯೆಂದೆನ್ನುತ ಭಜಿಸದೆ
ಯಿರುವಳೆ ಮೂದೇವೀ ೫

೩೨೦

ಪಾವನಪಾದವ ಭಜಿಸೆಲೊ ಮನುಜ ನೀ ಪ

ದೇವರದೇವಾ ನಿನ್ನ ಸೇವೆಯೊಳಿರಿಸೆಂದು ಅ.ಪ

ಶ್ರುತಿಪಥವನುಗೂಡಿ ಸುಖದು:ಖ ದೂರಮಾಡಿ
ಮತಿಗೆ ಮಂಗಳವೂ ಸದ್ಗತಿಗೆ ಕಾರಣಮಾದ ೧

ಧರೆಯೊಳು ರಾಜಿಪ ಗುರುವೆ ಗಿರೀಶನೆಂದು
ಧರಣಿ ತುಲಸೀರಾಮ ಗುರುವೆ ತಾನಾದ ೨

೩೨೧

ಪ್ರಥಮಾಕ್ಷರನೆ ದೇವಾ ಮಹಾನುಭಾವಾ ಪ

ಶ್ರುತಿವದನದೊಳ್ ಗೀತ ಪದವೆ
ಸದ್ಗತಿಗೆ ಕಾರಣ ಸಿದ್ಧ ಮೆನ್ನುತ
ಪಥವ ಗೈದು ಪರಂಪರವ ತಾ
ಸ್ವತಹನಾಗಿಯು ಪ್ರಜ್ವಲಿಸುತಿಪ ೧

ಆದಿರೂಪ ಅನಾದಿಕಾರಣ
ವೇದವೇದಾಂತತಿ ಪರತರ
ಪಾದಸೇವೆಯ ಕೊಟ್ಟು ನನಗೆ ನೀ
ಬೋಧಿಸೆಂದೆಂತೆನು ಪ್ರಣವಾ ೨

ಸಾಕ್ಷಿರೂಪದ ತಾಳ ಸರ್ವ
ಶಿಕ್ಷೆ ರಕ್ಷೆಗೆ ಅಕ್ಷಗೊಳಿಸಿದ
ಮೋಕ್ಷದಾಯಕನೆಂದು ಭಜಿಸಲು
ಸೂಕ್ಷ್ಮದ್ವಾರದಿ ಹೊಳೆವ ನಿಜಪದ ೩

ನಂದಿಯನು ಮುಂದ್ಯೆಸಿ ಪ್ರಮಥ
ವೃಂದ ಮಧ್ಯದೊಳೆಸೆವ ಶುಭಕರ
ಚಂದಪಾದವ ತೋರಿ ಕರುಣಿಸೊ
ಚಂದ್ರಧರ ಚಾಂಪೇಯವದನನೆ ೪

ಅಂಗವಿಲ್ಲದೆ ಪೆಸುಸರುತಾಳಿ ನೀ
ಲಿಂಗಮುಖವಾಗಿರುವ ಸೊಬಗನೂ
ಮಂಗಳಾತ್ಮಕ ತೋರೊ ಕಲುಷ ಪ
ತಂಗ ವೋಂಕಾರೇಶ್ವರನೇ ವೋಂ ೫

ಕೊಡಗನಾಳಿದ ನಿಲಯದ ಮುಂ
ಗುಡಿಯೊಳಿಹ ನಿಷ್ಕಲ ನಿರಂಜನ
ಒಡೆಯ ಮದ್ಗುರು ತುಲಶಿರಾಮನ
ಅಡಿಗಳಿಗಡಿಯಾದೆನೀಗಾ ೬

೩.೨೨

ಭವ ಭಯಾದಿಗಳ ಮದ್ದು ನಮ್ಮ ಗುರು ತಂದರು ತಾವೆದ್ದು ಪ

ಫಲವೇನು ನೀನಿದ್ದು ನಮ್ಮ ಜನ್ಮಗಳಿಲ್ಲಿಗೆ ರದ್ದು ಅ.ಪ

ಪಥ್ಯವನಿಟ್ಟು ನೋಡೋ ಈ
ಸತ್ಯ ಮಾರ್ಗದೊಳನಾಡೋ ನಮ್ಮಾ
ಹತ್ತವತಾರನಗೂಡೋ ನಿನ್ನ
ಪಿತ್ತದ ರೋಗೀಡಾಡೋ ೧

ಮಾತ್ರೆಯ ಕೊಟ್ಟನು ವೈದ್ಯಾ ಸ
ತ್ಪಾತ್ರರಿಗೆಯಿದು ಸಾಧ್ಯ ಗುರು ತುಲ
ಶೀರಾಮನೆ ಚೋದ್ಯಾ ಅಲ್ಲಿ
ದೊರಕಿತು ಮನಸಿನ ಭಾಗ್ಯ ೨

३.೨३

ಭುವನದೊಳಗೆ ಒಬ್ಬ ಶಿವಯೋಗಿನಾ ಕಂಡೆ
ಅವತರಿಸಿರುವನದ್ಯಾರಮ್ಮಾ ಪ

ನವದಾರಿಯನು ತುಂಬಿ ನಡುನಾಡಿಯೊಳಗಾಡೊ
ಪವನರೂಪನ ಬೇಗ ತೋರಮ್ಮಾ ಅ.ಪ

ಉಪಜೀವಿಯನು ಕಂಡು ಉಷ್ಣಶೀತವನಳಿದು
ತಪಸು ಮಾಡುವನ್ಯಾರದೇಳಮ್ಮಾ
ಅಪಮೃತ್ಯುವನು ಕಂಡು ಆನಂದವನು ಬಿಟ್ಟಾ
ವಿಪರೀತವೇನಿದು ಹೇಳಮ್ಮಾ ೧

ಬುದ್ಧಿ ಮನಸು ಚಿತ್ತ ಅದ್ವಯವನು ಮಾಡಿ
ಇದ್ದನಹುದು ಆತಾ ಕಾಣಮ್ಮಾ
ಮದ್ಗುರುವಾದ ಶ್ರೀ ತುಲಶಿರಾಮದಾಸ
ಬುದ್ಧಿಯ ಪರೀಕ್ಷಿತ ಕಾಣಮ್ಮಾ ೨

३.೨೪

ಮಾಡಬೇಕೆಲೋ ಭಜನೆ ಮಾಡಬೇಕೆಲೊ ಪ

ಮಾಡಬೇಕು ಭಜನೆ ಮನದಿ
ಕೂಡಬೇಕು ಪ್ರಣವ ಘನದೀ
ಈಡ ಪಿಂಗಳ ಯಿದರೊಳಗಿರುವ
ನಾಡಿ ಭೇದಗಳನು ತಿಳಿದೂ ೧

ಆರು ಮೂರುಯೆಂಬೊ ದಾರಿ
ಮೀರಿನೋಡುಯಿರುವ ಶಿಖರ
ತೋರಿಯಾಡುವಂಥಾ ಘಂಟೆ
ಭೇರಿನಾದಗಳನು ತಿಳಿದೂ ೨

ವರದ ರಂಗನಿರುವನರಿಯೊ
ಧರಣಿ ಕನಕಪುರಿಯ ಕೋಟೆ
ಗುರುವು ತುಲಶೀರಾಮದಾಸ
ರರಿತುಯಿತ್ತ ಚರಣ ಭಜನೆ ೩

೩.೨೫

ಯಾಕಣ್ಣಾ ಏನು ಬೇಕಣ್ಣಾ ಬಿಡು
ಝೋಕಣ್ಣಾ ಜಗ ಸಾಕಣ್ಣಾ ಪ

ಆಕಣ್ಣಿನೊಳಗೇನು ಠೀಕಣ್ಣಾ ಇದು
ಪಾರ್ವತಿಗುಸುರಿದ ಮೂಕಣ್ಣಾ ಅ.ಪ

ಅಂತವನುತ್ತು ಎಡೆಯಾಡು ನಿ
ಶ್ಚಿಂತೆಯೊಳಿಹ ಸತ್ಯಗುರಿನೋಡು
ಪಂಥವು ಮಾಡುವ ಯೆಂಟಾರುಮಂದಿಗ
ಳಂತೆ ನೀ ಹೊಗದೆ ಚಿಂತಾಮಣಿಯಾಗೂ ೧

ಮಂಗಳಪುರಿವಾಸನಾಗುವೆ ನಿಜ
ರಂಗಮಂಟಪಕೆ ನೀಹೋಗುವೆ
ಜಂಗಮ ಗುರುಜಾಣಾಲಿಂಗ ತುಲಶೀರಾಮಾ
ಮಂಗಳಮೂರುತಿ ಹಿಮಗಿರಿವರನಿಹ ೨

೩.೨೬

ಯಾತಕೊ ಭಯ ಭೀತಿ ಚಪಲತೆಯು ನಿನ
ಗ್ಯಾತಕೊ ಮೂಢಮಾನವ ಪ

ಪಾತಕವಳಿ ಗುರುನಾಥನ ಕೃಪೆಯೊಳು
ಭೂತಳದತಿಶಯದಾತನು ಕಾಣುವಾ ಅ.ಪ

ಈತರದಿ ನೀ ಬಾರದಿರುವಿಯಲ ಮೂಢಮಾನವ
ರಾತ್ರಿ ಬೆಳಕಿನೊಳೇಕವಾಗೋ ಭಲಾಸಿ
ಶೀತೆಯ ಕೊಂಡೊಯ್ದಾತನ ತಮ್ಮಗೆ
ಪ್ರೀತಿಲಿ ಸ್ಥಿರಪದವಿತ್ತನು ಚೀ ಚೀ ನಿನಗ್ಯಾತಕೋ ೧

ಯಾತ್ರೆ ಮಾಡೆಲೊ ಕ್ಷೇತ್ರವನ್ನರಿತು ಮೂಢಮಾನವ
ಸೂತ್ರ ಪಿಡಿದಲ್ಲಿ ಪಾತ್ರನಾಗೆಲೊ
ಧಾತ್ರಿಯೊಳು ತುಲಶೀರಾಮನು ಮಾತ್ರ ತಾ ನಿಜ
ಧೋತ್ರವ ತೊಡಿಸುವ ಯಾತಕೊ ೨

೩.೨೭

ರಾಮನಾಮವ ಪಾಡೆಲೊ ಮನುಜಾ ಪ

ರಾಮನಾಮವ ಪಾಡಿ ಈ ಸಭೆಯೆಲ್ಲಾ ನೋಡಿ
ಕಾಮಾಕಲಭಿಮಾನನು ಕಾಮಿನಿಗೇಳಿದ ಸೀತಾ ೧

ಸಾಧಿಸಿದಾರೊಳು ನೀ ಸಂಭ್ರಮವಾಗೊ ಯೆಲೊ
ಶೋಧಿಸಿ ನಿನ್ನೊಳು ನಿಜಸಾಧನ ಕೇಳುವ ಸೀತಾ ೨

ಇಂತೀ ಪರಿಯೊಳು ಮಹದಂತರವಿಹುದಿದಾ
ಹಂತವರ ಕಂಡು ನೀ ವೇದಾಂತದೊಳು ನಿಂದು ೩

ಭರತಪುರೀಶನನ್ನು ಮರೆತರಾಗುವುದುಂಟೆ
ಅರಿತು ನೋಡಿಕೊಂಡು ನೀ ಪರಮತತ್ವವಿದೆಂದು ೪

೩.೨೮

ಶುಕ್ರವಾರ ಕೇಶವನ ಭಜನೆ ಮಾಡಬೇಕೊ ನಮ್ಮ
ಚಕ್ರಧಾರಿಯನ್ನು ಬಿಡದೆ ನೋಡಬೇಕೊ ಪ

ಚಕ್ರಧಾರಿಯಾಗಿ ಸಕಲ ಚಕ್ರವರ್ತಿಗಳನು ಗೆದ್ದ ಆ
ಕ್ರುರಗೆ ತಾ ವರನಿತ್ತು ನಿತ್ಯಾನಂದ ತ್ರಿವಿಕ್ರಮನನ್ನು ಅ.ಪ

ಅಪ್ರಾಕೃತಮಾದ ವೈಕುಂಠನಾಥ ರಂಗಾ ಜಯ ಜಯ
ಕ್ಷಿಪ್ರದಿಂದಾ ಭಕ್ತರಿಗೊಲಿಯುವಡೋಪಪತ್ರಂಗಾ
ಅಪ್ರಮೇಯ ಅಚಲನಾನು ಆರೂಢರಿಗಾಧೀನವಿದಹುದೊ
ನಿತ್ಯಾನಂದನೆ ಮುರಳೀಧರ ಗೋಪಾಲ ಜನಾರ್ದನ ಸತ್ಯಬ್ರಹ್ಮವೋ ೧

ದಾಸದಾಸರಿಗೆ ದಾಸನಾಗಬೇಕೊ ಕೆಟ್ಟ
ವೇಷ ಭಾಷೆ ದುರ್ದೋಷಗಳು ವೋಗಬೇಕೊ
ಬ್ಯಾಸರಾಂತಕಮಾದ ಶ್ರೀಮದ್ದೇಶಿಕಾ ಶ್ರೀತುಲಸಿರಾಮಾ
ನಾಸಿಕಾಗ್ರನಿವಾಸನೆಂದು ನಂಬಿ ನಾರಾಯಣನಂ ಬಿಡದೆ ೨

೩.೨೯

ಸತ್ಸಂಗದೊಳಗಿರಿಸೋ ಮಮದೇವ ಆಹ
ಮತ್ಸರ್ವವ್ಯಾಪೀಶ ತ್ರಿಗುಣಪ್ರಭಾವಾ ಪ

ನಿಸ್ಸಂಗ ನಿರ್ಮೋಹ ನಿಶ್ಚಲಾತ್ಮಕ ಪಾದ
ತತ್ಸೇವೆಯೊಳಗಿರಿಸೊ ಕರುಣ ಪ್ರಭಾವಾ ೧

ಅಧಮರಾಶ್ರಯದೊಳಗೆ ಅಧಿಕನಾಗಿರುತಿರುವೆ
ಇದು ಬಿಡಿಸಿಯೆ ಪರಮಪದದೊಳಗೆ ಯಿರುವಾ ೨

ನಿಜಪದಾಶ್ರಯನ ಮಾಡೊ ಭುಜಗಾಸನನೆ ರಂಗಾ
ಭಜನೆಯೊಳಗಿರುತಿರಿಸು ಶ್ರೀ ತುಲಶಿರಾಮಾ ೩

೩೩೦

ಸಮಾಧಿಯೊಳು ನೋಡೊ ನಮ್ಮವ
ರಮಾಪತಿ ನಿನ್ನೊಳಗಿರುತಿಹನೂ ಪ

ನಮಾಮಿ ನಾರಾಯಣಂ ಬಿಡದೆ
ಮಮೇಕ ಶರಣಂಬೆನ್ನುತಲೀ
ಉಮಾಪತಿ ಗುಣ ನೀನಹುದೆನುತ ೧

ಪರಂಧಾಮನೊಳು ಬೆರೆದಿರು ಕಂಡ್ಯಾ
ನಿರಂತರಮಭ್ಯಾಸದೊಳೂ
ಗುರುಂದೇಹಿಯೆಂದೆನ್ನುತ ಅನುದಿನ ೨

ವಾಣಿಯ ಪತಿ ಗುಣಹಾರಾ ತ್ರಿ
ಗುಣಾಕಾರಾ ಅಸ್ಮದ್ದೇಶಿಕನೂ
ಕಾಣಿರಿ ತುಲಸೀರಾಮನೆ ನಿರ್ಗುಣ ೩

೩೩೧

ಸಾಧು ನೀನಾಗೆಲೊ ಸ್ವಾಮಿ ತಾ ಕಾಣುವಾ ಪ

ನಾದಬಿಂದುಕಳೆ ಶೋಧಿಸಿ ಮೇದಿನಿ ಅ.ಪ

ಎಂದಿಗೆ ನಂದಿ ನಾನೊಂದುವೆನೆಂದು ನೀ
ಸಂದೇಹ ಸಂವರಿಪನೊಲಿದು ತಾ ೧

ತಾನಾದರೆ ತನ್ನದೇನು ಜಾಣ ತಾ ನೋಡುತಂ
ಪ್ರಾಣನಾಥ ನೀನೆಂದಾಡುತಂ ಪಾಡುತ ೨

ವಿಶ್ವದೊಳು ರಾಜಿಪ ಸಸ್ವರೂಪಾ ಗುರು
ಅಸ್ಮದಾರ್ಯ ತುಲಸಿರಾಮದಾಸನಿತ್ತ ೩

೩೩೨

ಸ್ಮರಣೆ ಮಾತ್ರದಿ ಸ್ವತಂತ್ರ ದೊರಕುವುದು
ಜಗದೊಳಗೆ ಶ್ರೀಹರಿ ಸ್ಮರಣೆ ಪ

ಸ್ಮರಣೆ ಮಾತ್ರ ಸ್ವತಂತ್ರವೆಂದರೆ
ಪರಮ ಭಗವದ್ಗೀತೆ ಅಪ್ಪಣೆ
ಕರುಣಾಸಾಗರ ದಧಿಯಚೋರನೂ
ಶರಣುಪಾರ್ಥಗೆ ಅರುಹು ಮಾಡಿಹ ೧

ಸುಲಭದಿಂದಲಿ ಶ್ರವಣಮನನಾಗೀ ಜಗದೊಳಗೆ ನಿನಗೆ
ಫಲಿತವಾಗೊ ನಿಧಿ ಧ್ಯಾನಾಗೀ
ಕೊಲುಮೆತಿತ್ತಿಯನೂದಲಾಗುವ
ಫಲವು ಕಂಡು ಕಾಣದಿರುವೆಯೊ ಕಲೆಯ ತೊಟ್ಟನು ನೀ
ಗಲಾ ಪರಸುಳುಹಿನೊಳಗೆ ಹೊಕ್ಕಿ ಮಾಡೊ ೨

ಬೆಂಗಳೂರಿಗೆ ಪೋಗಿ ನಿಂದಲ್ಲಿ ವೋ ಮಾಯಜೀವಾ
ಮಂಗಳಾಂಗ ಶುಭಾಂಗಣದಲ್ಲಿ
ತಂಗಿ ತಾನೆ ನಿಮಿಷ ನಿಮಿಷಕೆ
ಸಂಗಮೇಶ್ವರನಾಗಿ ನಿಜದಾ
ಬಂಗೆಲೆಯೊಳಗಿರುವ ತುಲಶೀರಾಮತಾ ನಿಜಲೀಗನೇಳಿದ ೩

೩೩೩

ಹರಿಹರ ಬ್ರಹ್ಮನೆ ನಾನಾಂತಿ ನಿಜದಲು
ಹೊಂದಿಲ್ಲದೆ ನೀ ಕುಂತೀ ಪ

ಪರಮನು ಕೇಳಿದರೇನಂತೀ ಕೆಟ್ಟ
ನರಕದೊಳಗೆ ಯಮಬಾದಂತೀ ಅ.ಪ

ಅಜನನು ಬೆರೆಯಲು ಬೇಕಂತೀ ಆದು
ಭಜನೆಗೆ ಬಾರದು ಯಾಕಂತೀ
ನಿಜವೊಂದಿಲ್ಲದೆ ನೀಕುಂತೀ ಆದ
ಭಜಿಸಿ ನೋಡದೆ ಸುಮ್ಮನ್ಯಾಕ್ಕುಂತೀ ೧

ಸಾಧನೆ ಮಾಡುವೆ ಹೀಗಂತೀ ನಿಜ
ಬೋಧೆಯಿಲ್ಲದೆ ಯಾಕೀ ಭ್ರಾಂತೀ
ಭೇದಿಸುವನು ಸೂರ್ಯನಕಾಂತಿ ನಿಜ
[ದಿಂದ]ತುಲಸಿರಾಮನೆ ಗುರು ವೇದಾಂತಿ ೨

(ಋ) ಕ್ಷೇತ್ರವರ್ಣನೆ

೩೩೪

(೧) ಮೇಲುಕೋಟೆ

ಯತಿರಾಜ ಸಂಪತ್ಕುಮಾರಾ ಸ
ತ್ಕೃತದೊಳಗಿರಿಸೆನ್ನ ಧೀರಾ ಪ

ಸತತ ಶ್ರೀಮದ್ವೈಷ್ಣವರನಾ
ನುತಿಸುವಾನಂದ ದೊಳಗಿರಿಸೈ
ಪತಿತಪಾವನ ಕಂಕಣಾಧ್ರುತ
ಕ್ಷಿತಿಯ ಪಾಲ ಮಹಾನುಭಾವನೆ ೧

ನೋಡಲಿಚ್ಛೈಸಿ ನಾಂ ಬಂದೆ ನನ್ನ
ಮೂಢಾಕೃತದೊಳು ನಿಂದೆ
ಕೇಡುಗಳು ಬಂದೆನ್ನ ವಿಧ ವಿಧ ಬಾಧೆ
ಪಡಿಸುತ್ತಿರುವದಿದೆಕೊ
ನೋಡಿ ಸುಜನರ ಕೂಡಿ ಭಜನೆಯ
ಮಾಡುವೆನು ಶ್ರೀಮಾಧವಾಗ್ರಣಿ ೨

ತುಲಶಿಮಣಿಹಾರ ಲೀಲಾ ಸ
ತ್ಫಲತಂತ್ರ ದಾಸಾನುಕೂಲಾ
ಕಾಲಕಲನಹುದೊ ಶ್ರೀಮನ್
ಬಾಲಬ್ರಹ್ಮಚಾರಿ ಮದ್ಗುರು
ಮೇಲುಕೋಟೆಯೊಳಿರುವೊ ನಿಜವರ
ಲೀಲಾಮಾನುಷವಿಗ್ರಹನೆ ನಿಜ
ಯತಿರಾಜ ಸಂಪತ್ಕುಮಾರಾ ೩

೩೩೫

ಜಯ ಮಂಗಳ ನಿತ್ಯ ಶುಭಮಂಗಳ ಪ

ಶ್ರೀರಂಗನಾಥನಿಗೆ ಮೂರಂಗವೇಷನಿಗೆ
ಮಾರಾರಿಸಖನೆಂಬ ಮದನಪಿತಗೆ
ನೂರೆಂಟುತಿರುಪತಿಗೆ ಕಾರಣನು ನಿಜದಿವ್ಯ
ವೀರವೈಷ್ಣವನೆಂಬೊ ಮಹಾರಾಜಗೆ ೧

ನೀಲಕಂಠನಪ್ರಿಯಗೆ ಮೇಲುಕೋಟೆಯ ಧೊರೆಗೆ
ಏಳುಸುತ್ತಿನ ಕೋಟೆಯೊಳಗಿರುವಗೇ
ಕಾಳೆಕೊಂಬುಧ್ವನಿಯ ಕೇಳುವಾನಂದನಿಗೆ
ವಾಲಿಯನು ಕೊಂದಂತ ವೋಂಕಾರಗೆ ೨

ಶಂಕರಪ್ರಿಯನಿಗೆ ಶ್ರೀಪಂಕಜಾಕ್ಷನಿಗೆ
ಕುಂಕುಮಾಂಕಿತ ಪಕ್ಷಿವಾಹನನಿಗೆ
ಕಂಕಣವು ಕರದೊಳಗೆ ಕಟ್ಟಿ ವೊ ಶ್ರೀಗುರು
[ವಂಕ]ತುಲಸಿರಾಮದಾಸ ಪೋಷಿತನಿಗೆ ೩

೩೩೬

(೨) ಸರಗೂರು

ರಂಗನಾಥನೇ ವೋ ರಂಗನಾಥನೇ ಪ

ಅಂಗಜಕೋಟೀರನೆ ತಿಂಗಳಧರ
ಜಂಗಮಂದಿರ ಮಂಗಳ ಹರಿ ಮಾಧವನೇ ೧

ದೇವರದೇವಾ ನೀನಹುದೊ ಭೂವರನಹ
ಶ್ರೀವರ ದಾಮೋದರ ನಿಜದೇವ ರಂಗನಾಥ ೨

ಶರಣರನ್ನು ಪೊರೆಯುವ ತರುಣೀಮಣಿ
ಕರುಣಾಕರ ಶರಣೆಂದೆನು ಸರಗೂರಿನ ರಂಗಾ ೩

ವಂದಿಪೆ ಶ್ರೀ ತುಲಶಿರಾಮಾ ಸುಂದರಗಿರಿ
ಯೆಂದಿಗೊ ನೀ ಬಾರೆಂದಿಪುದು ಮಂದರಧರ ೪

೩೩೭

(೩) ನದಿಗಳು

ಯಾತ್ರೆ ಮಾಡಿಕೊಂಡೈದೆ ಜಾಹ್ನವಿಗೆ ಹೋಗಿ ತೀರ್ಥ ಪ

ಸೂತ್ರಧಾರಿ ತಾನಿಹ ದಿವ್ಯ ಕ್ಷೇತ್ರೋದ್ಭವೆ ಶ್ರೀ ಕಾವೇರಿ
ಧಾತ್ರಿಪಾವನೆ ಜಯ ಮಂಗಳೆ ನೇತ್ರೋಂ ಮಧ್ಯಾ ಭಾಗೀರಥಿ ೧

ಹರಿಪಾದ ರಜೋರಿ ಝೋಂಕಾರಿ ತರಂಗಧಾರಿ
ಗಿರಿಜಾರ ಗುಹಾವಿಹಾರಿತರುಣಿ ಜಯ ಭಾಗಮಂಡಲೆ ೨

ಗಂಗೆ ಮತ್ಕಲುಷಾಭಂಗ ಸ್ವರ್ಗಸೋಪಾನಸಂಗ
ಮಂಗಳಾಂಗಿಯೆ ತರಳತರಂಗೆ ಯೆನ್ನುತಾ ಕಂಚೀ ೩

ಲಲನೆ ನಿನ್ನಯ ಸುದರುಶನ ಫಲಿಸಿದಾಕ್ಷಣವೆ ದು:ಖ
ಮಳಿದುಹೋಗುವ ಚಂದಾ ಕಲಿತು ಗುರುಮುಖದಿಂ ಕಾಶೀ ೪

ಮದನಾರಿಮೌಳಿಯ ತಂ ಘೃತಂಪೂರ್ಣ ಅಸ್ಮಾದಯನೀ
ಮದಾಚಾರ್ಯನೆ ಶ್ರೀ ತುಲಶೀಮಧುರಾಮೃತ ಸುರಿಯುವ ದ್ವಾರಕಾ ೫

(ಎ) ಸಂಪ್ರದಾಯದ ಹಾಡುಗಳು

೩೩೮

ನಕ್ಷತ್ರದಾರತಿ ಬೆಳಗೀರೇ ಜಗ
ದ್ರಕ್ಷ ಕೃಪಾನಿಧೇ ಪಕ್ಷಿವಾಹನಗೆ ಪ

ಅಕ್ಷಿಗಳೆರಡರ ಮಧ್ಯದಿ ತಾ ನಿಜ
ಪಕ್ಷಿಯು ತಾನಾಗಿ ಪ್ರಜ್ವಲಿಪಾ
ಯಕ್ಷರಕ್ಷಕ ಸರ್ವಶಿಕ್ಷಾ ದಯಾಕರ
ಲಕ್ಷ್ಮೀಪತಿಯಾದ ಮೋಕ್ಷದಾಯಕಗೇ ೧

ಆದಿರೂಪನಿಗೆ ಆಧ್ಯಾತ್ಮನಾದವನಿಗೆ
ವೇದರೂಪನಿಗೆ ವೇದಾಂತನಿಗೆ
ಸಾಧುಶಿಖರನಾದ ಸರ್ವಸ್ವತಂತ್ರಗೆ
ನಾದಬಿಂದು ಕಳೆಯೊಳಾಡುತಿರುವವಗೆ ೨

ಅಖಿಳಾಂಡಕೋಟಿ ಬ್ರಹ್ಮಾಂಡನಾಯಕನಿಗೆ
ಪ್ರಕಟಿತಮಾಗಿಹ ಪರತತ್ವಗೆ

ಚಿಕಟಾಯಿಸಿದ ನಮ್ಮ ಗುರುವು ತುಲಸಿರಾಯಾ
ಸಖನಾದ ಶಿವಗೆ ಶಂಕರಗೆ ಶ್ರೀಹರಿಗೆ ೩

೩೩೯

ಬಾಲಚಂದ್ರನ ರೂಪಾ ಭಯನಿವಾರಣ ನೋಡೋ
ಬಾಲೆಯರೆಲ್ಲರು ಬಂದು ಕಾದಿರುವಾ
ಲೊಲಾನವನ್ನು ಕಂಡು ಹೇಳಲು ನಾ ಬಂದೆ
ಆಲಯಕ್ಕೆ ನೀ ಬಾ ಹಸೆಗೇಳೋ ಸೋಬಾನೆ ೧

ಪನ್ನಂಗಶಯನ ಬಾರೊ ಚನ್ನಕೇಶವನಲ್ಲ
ದಿನ್ನು ಬೇಕಾದ ಹೆಸರನ್ನು ಪಡೆದಿರುವೆ
ಕನ್ನೆ ಸೀತೆಗೆ ಕೊಟ್ಟ ಹೊನ್ನವುಂಗರ ಕೊಡುವೆ
ಬಿನ್ನಾಣದಿಂದ ಹಸೆಗೇಳೋ ಸೋಬಾನೆ ೨

ಸುದತಿಯರೈವರು ಕದಳಿಹುವ್ವಿನ ಪೀಠ
ಹದಮಾಡಿ ಕುಂತಿರುವರದೆ ಹೇಳಬಂದೆ
ಮದನ ಜನಕ ಹಸೆಗೊದಗಿ ಅಲ್ಲಿನ ದಿವ್ಯ
ಚದುರತನವನೋಡೊ ಹಸೆಗೇಳೋ ಸೋಬಾನೆ ೩

ಋಷಿಗಳೆಲ್ಲರು ಜ್ಞಾನದೋಯ ಹಾಸನದೊಳೂ
ದಶರೂಪನೆ ಬಾರೆಂದು ಭಾವಿಸುತಿರುವಾ
ಬಿಸಜಾಕ್ಷಿವರದನೆ ಗುರುವು ತುಲಸಿರಾಮಾ
ಪಶುಪತಿಯಾದೆಯಾ ಹಸೆಗೇಳೋ ಸೋಬಾನೆ ೪

೩೪೦

ಮಂಗಳಾರತಿ ನಮ್ಮ ರಂಗನಾಥನಿಗೆ
ಜಂಗಮಾರ್ಚಿತಪಾದ ಕಲುಷವಿಭಂಗರಂಗನಿಗೆ ಪ

ಜಾಜಿಯ ಪುಷ್ಪಂಗಳಿಂ ದಿವ್ಯ ಸ
ಭಾಜ ಭಜಂತ್ರಿಗಳಿಂ

ಮೂಜಗದೊಯನೆ ಮುಕ್ತಿಕೃಪಾಕರ
ಶ್ರೀಜಯವೆನ್ನುತಲಿ ೧

ವಾರುಧಿ ಶಯನನಿಗೆ ದಿವ್ಯ ಸು
ಚಾರುಸನಯನಗೆ ನಮ್ಮ
ನಾರಿಯರೆಲ್ಲರು ನಮಿಸುವ ಲಕ್ಷ್ಮೀ
ನಾರಾಯಣನಿಗೆ ೨

ಸುರಗಣಮಣಿ ನುತಗೆ
ರಾಧಾರುಕ್ಮಿಣಿ ಜಯಪತಿಗೆ ಸಂತೆ
ಸರಗೂರೊಳಗಿಹ ನಮ್ಮಯ ಶ್ರೀ
ಗುರು ತುಳಸೀರಾಮನಿಗೆ ೩

೩೪೧

ಮಂಗಳಾರತಿಯು ನಮ್ಮ ಲಿಂಗವಿನುತಗೇ ನಮ್ಮ ಪ

ಅಂಗನೆಯರೆಲ್ಲ ಕೂಡಿ ಅಚ್ಯುತಾಯ್ಯೆ ನಮಃ ಎನ್ನಿ ಅ.ಪ

ವೇದಕಾದಿ ಪ್ರಣವವೆಂದು ಬೋಧಿಸಿದನು ಶಿವನು ಉಮೆಗೆ
ನಾದಬಿಂದುಕಳೆಯಗೂಡಿನ ನಾರಾಯಣನಿಗೆ ಮಂಗಳಂ ೧

ಸುರರೂ ನರರೂ ಮುಖ್ಯಮಾದಾ ಗರುಡ ವಿಶ್ವಕ್ಸೇನರೆಲ್ಲ
ಪರಮತತ್ವಮಹುದಿದೆಂದು ಯಿರುವ್ರೋತದ್ವಿಷಾದಗಳಿಗೆ ೨

ನಿರ್ವಿಕಲ್ಪ ನಿಶ್ಚಲಾತ್ಮ ಸರ್ವಲೋಕಸಾಕ್ಷಿಭೂತ
ಗರ್ವಕಲನುಯೆಂಬೊ ನಾಮ ಉರ್ವಿಯೊಳಗೆ ವಹಿಸಿರುವಗೆ ೩

ನಿತ್ಯಪೂರ್ಣ ಬ್ರಹ್ಮತಾನೆ ಸತ್ಯರೂಪ ಸಗುಣದೀಪ
ತತ್ವಗುರುವು ತುಲಶಿರಾಮ ಚಿತ್ಸುಖಾಂಶ ಶಿವಪ್ರಿಯನಿಗೆ ೪

(ಏ) ವಿಶೇಷ ಸಂದರ್ಭದ ಹಾಡುಗಳು

೩೪೨

(೧) ಶ್ರೀ ಶೃಂಗೇರಿ ಸ್ವಾಮಿಗಳ ಜಯತಿಯ ಮೆರವಣಿಗೆ

ಗುರುವೆ ಪೂಜಿಪೆ ನಿಮ್ಮಯ ಚರಣಗಳನೂ ಪ

ಪರಮತತ್ವ ವಿಚಾರ ಪಾವನ ಸತ್ಯ ಸಹಜಾನಂದ ನಿಜಪದ
ದರುಹಿನೊಳಗೆನ್ನನಿರಿಸಿ ಪಾಲಿಸೊ ದುರಿತದೂತವಿಚಾರ ಶ್ರೀಮದ್ಗುರು ಅ.ಪ

ಶ್ರೀಸರಸ್ವತಿಸುಪ್ರಸನ್ನ ವಿಶೇಷ ದಿವ್ಯಪಾದಾಬ್ಜ ಕುಶಲನೆ
ಬೇಸರಾಂತಕಮಾದ ಶಾಸ್ತ್ರಾಭ್ಯಾಸ ನಿಜಸನ್ಯಾಸಿ ಕಾರಣ ೧

ವೇದನಾಲ್ಕು ಪ್ರಣವ ಪ್ರಸಾದ ವಿದ್ಯ ಸಬೋಧದಾಯಕ
ಆದಿಗುರು ಶೃಂಗೇರಿ ಮಠವೆಂದೋದಿ ಹೇಳುವುದಾದ ಕಾರಣ ೨

ರಾಜಪೂಜ್ಯನೆ ಸಹಜನಿಜಯತಿ
ರಾಜಸೋಮಿ ಜಗದ್ಗುರು ಜಯ ಆದಿ
ಬೀಜಸಪೂಜ ದೈವಸಮಾಜ ಸತ್ಯಸಭೋಜ ಕಾರಣ ೩

ರಾಜ ರಾಜ ಸಮಾಜದೊಳು ದುರ್ಬೀಜ ವಸ್ತುಗಳಿಡಲು ನಿಜಯತಿ
ರಾಜಧಾನಿಗೆ ರಮ್ಯವಾದ ಸುವಸ್ತು ಪುಷ್ಪಗಳಾದಕಾರಣ ೪

ಕುಂಪಿಣೀಧೊರೆಯ ನೀನೆ ಪರಮಪದನೆಂದೊಗಳಿ
ಇಂಪಾದ ಸವಾರಿಯೆದುರಿಗೆ ದಂಪತಿಗಳಡಿಯಾದ ಕಾರಣ ೫

ಎಲ್ಲ ದೇಶದ ರಾಜರೆಲ್ಲರು ಬಲ್ಲ ಗುರು ನೀನೆಂದು ನಿಮಗತಿ
ಬಿಲ್ಲು ಬಾಣಗಳಿತ್ತು ಗುರುತುಗಳುಳ, ಸತ್ಯಸಮಾಜಭೋಜನೆ ೬

ಆನೆ ಕುದುರೆಗಳೆತ್ತಲೆತ್ತಲು ಮತ್ತೆ ಮುತ್ತಿನ ತೊಂಪೆ ವೈಭವ
ಏನು ಸಂಭ್ರಮದಿಂದ ಬಂದೆಯೊ ಭಾನುಕೋಟಿಪ್ರಕಾಶ ಕಾರಣ ೭

ವೀರಶೈಯ್ಯಾಚಾರ ರತ್ನ ತಿರಿವುಮುತ್ತಿನಹಾರ ನಿರ್ಗುಣ
ಧೀರ ತತ್ವವಿಚಾರ ಕಲ್ಮಷದೂರ ಅದ್ವಯಸಾರ ಕಾರಣ ೮

ಗೌರ್ನಮೆಂಟಿನೊಳಿತ್ತ ಸತ್ಯಾ ಮುಖ್ಯ ಜನರಲ್ ಬಾವುಟಗಳೂ
ಶೌರಿ ತಮ್ಮ ಸವಾರಿಯೊಳಗದು ಫಾರಮೆಂಟಿನನೊಳಿರುವ ಕಾರಣ ೯

ಪಾದಸೇವೆಗೆ ಬರುವ ಭಕ್ತರ ಪಾಪಅಂತಕ ಪರಮಹಂಸನೆ
ದೀಪವಿಲ್ಲದ ಬೆಳಕು ತಮ್ಮೊಳಗಾ ಪಯೋನಿಧಿ ಕಂಡ ಕಾರಣ ೧೦

ದಿಕ್ಕು ದೇಶದಿ ನಿಬಿಡಮಾಗಿದೆ ನಿಮ್ಮ ನಾಮಜಯಂತಿಯುತ್ಸವ
ಮುಕ್ತಿಯಂಬೆನಗೀವ ನಿಜಪದ ಮೋಕ್ಷದಾಯಕನಾದ ಕಾರಣ ೧೧

ಎಲ್ಲಿಗೋದಡೆ ಅಲ್ಲೆ ಶ್ರೀ ಕೈವಲ್ಯ ಪರಶಿವನೆಂಬೊ ನಿಶ್ಚಯ
ಬಲ್ಲೆನೆಂಬುವ ಭಾಗ್ಯವಂ ಜನಕಿಲ್ಲಿ ಕೊಟ್ಟಕಾರಣ ೧೨

ವಿಜಯನಗರಕ್ಕೈದ ಸಂಪದ ಅಜನು ಪೊಗಳಲ್ ತೋರಿಸಾಕ್ಷಾತ್
ದ್ವಿಜಪ್ರಜಾವತಿ ನಿಮ್ಮಭಜಿಸುವೆ ನಿಜಗುರು ನೀನಾದ ಕಾರಣ ೧೩

ಸೀಮೆ ಭೂಮಿಯ ಜನಗಳೆಲ್ಲರು ಕಾಮಿತಾರ್ಥವ ಬೇಡುತಿರ್ಪರು
ಸ್ವಾಮಿಯಹುದೋ ಜಗದ್ಗುರು ಶೃಂಗೇರಿಮಠದೊಳಗಿರುವಕಾರಣ ೧೪

ವೀರಕಂಕಣ ಧೀರ ತತ್ವವಿಚಾರ ಶುಭಕರ ಧೀರನಹುದೆಲೊ
ದಾರಿತೋರಿದ ಗುರುವು ತುಲಸೀಹಾರ ಕಂಟಕದೂರ ೧೫

೩೪೩

(೨) ತುಳಸಿರಾಮದಾಸರ ಅಂತಿಮ ಯಾತ್ರೆ

ಬೆಂಗಳೂರಿಗೆ ಹೋಗಿ ಬಂದರೂ ಮೈಸೂರಿಂದಾ ಪ

ಬೆಂಗಳೂರಿಗೆ ಹೋಗಿಬಂದ ಜಂಗಮನು ತಾನಾಗಿ ನಿಂದಾ
ಕಂಗಳೆರಡರ ಮಧ್ಯ ತಾ ನಿಜ ಲಿಂಗನಾಗಿ ಕಾಣಬಂದಾ ಅ.ಪ

ಬಿದಿಗೆ ಪಾಡ್ಯವ ಮಾಡಿ ನೋಡೆಂದಾ ಬಂದಾಗ ಬರದಾ
ವಿಧಿಯ ಬರಹವ ತೊಡೆದುಕೊಂಡೆಂದ
ಕದಿವ ಕಳ್ಳರ ಕಂಡುಹಿಡಿದು ಮದನಪಿತನಾ
ಯುಧದಿ ಹೊಡೆದೂ ನದಿಯ ಸ್ನಾನವ ಮಾಡಿ ನಿಜ
ಪದವಿ ತೋರಿದ ನಮ್ಮ ದೇಶಿಕ ೧

ಸೃಷ್ಟಿ ತದಿಗೆಯೊಳಿರಲು ಬೇಡೆಂದಾ ಅಲ್ಲಾಗ ತನ್ನ
ಇಷ್ಟದೈವದ ಪೂಜೆ ಮಾಡೆಂದಾ
ದೃಷ್ಟಿಗೋಚರಮಾದ ಗುರುವು
ಸೃಷ್ಟಿಗಧಿಕಾ ತುಲಶಿರಾಮನ
ಇಷ್ಟದಿಂದಲಿ ಭಜಿಸಿನೋಡಲು ಸ್ಪಷ್ಟನಾಗಿ ಕಾಣುತ್ತೈತೆ ೨

೩೪೪

(೩) ರೇವಣ್ಣ ಸಿದ್ದೇಶ್ವರ ಯತಿಗಳು ಬೆಂಗಳೂರು ಭೇಟಿ

ಯೋಗಿಶೇಖರನಾಗಿ ಬೆಳಗುವ ಜಗದೊಳಗೆ ತಾ ನಿಜ ಪ

ನಾಗಭೂಷಣನಡಿಗಳಂ ಪಿಡಿದಾಗ ಹೊಂದಿದನದ್ವಯಂ ಪದ
ಜೋಗಿ ಜಂಗಮದೊಡೆಯ ನಮ್ಮಯ ರೇವಣಾಶಿದ್ಧೇಶ್ವರನೆ ೧

ಕಾನನಾಲಯದೊಳಗೆ ವಿಕಸಿಪ ಜ್ಞಾನಿ
ತಾನಿಹ ಶೈವಗಿರಿಯೊಳು
ಭಾನುಕೋಟಿ ಪ್ರಕಾಶ ಸತ್ಯ ಸು
ದೀನಜನಮಂದಾರ ಮುನಿಮಹ ೨

ಅಂತರಾತ್ಮನೊಳಿಂತು ಹೊಂದಿಪ
ರೆಂತು ಲೋಕೋಪಕಾರ ರಾಗಿಯು
ಅಂತು ದಯಮಾಡಿರುವ ನೋಡಿ ಅ
ನಂತ ಮಹಿಮನೆ ರುದ್ರಮುನಿ ೩

ವತ್ಸರಕೆ ಬಂದುತ್ಸವದೊಳೀ
ತತ್ತ್ವರೂಪನು ತೋರಿ ಭುವನಕೆ
ಸತ್ಸಹಾಯಕನಾದ ನಮ್ಮಯ
ಮತ್ಸ್ಯಮೂರುತಿ ಪ್ರಿಯನೆ ಮುನಿಮಹಾ ೪

ವರ್ಗಮೂರನು ಭರ್ಗಗರ್ಪಿಸಿ
ತಿರ್ಗಿ ಲೋಕಕೆ ಬಾರದಂದದಿ
ಅರ್ಘ್ಯಮಾದನುಭವದಿ ನೋಡಲು
ಸ್ವರ್ಗಲೋಕದೊಳಿರುವ ಮುನಿಮಹಾ ೫

ಭವದಿ ವಿಪಿನವು ಭಸ್ಮಗೊಳಿಸಲು
ಭುವನದೊಳಗವತರಿಸಿಯಿರುತಿಹ
ಸುಮನ ಸತ್ಯಸಮಾಜ ಭೋಜನೆ ತಾ
ನಿವನೆನೆ ಹೊಳೆವ ಮುನಿಮಹಾ ೬

ಬರುವ ಭಕ್ತರಿಗಾಗಿ ತನ್ನೊಳ
ಗಿರುವ ಪರತತ್ವವನು ಭಕ್ತರ
ಕರದುಕೊಡುವುದು ಕಂಡುಕೊಳ್ಳಿರೊ
ತರುಣಿಮಣಿಯನು ಧರಸಿ ಧರೆಯೊಳು ೭

ಪಂಚಲಿಂಗಕನಾದಿಯಾಗಿಹ
ಪ್ರಣವಲಿಂಗದೊಳ್ಳೈಕ್ಯಮಾಗುವ
ಸಂಚು ತೋರಿದ ಗುರುವು ತುಲಸೀ
ಕಂಚಿವರದನ ಪ್ರೀಯನಾಗಿಯು ೮

ಶಾಮಶರ್ಮರ ಕೀರ್ತನೆಗಳು

(ಅ) ಶ್ರೀಹತಿಸ್ತುತಿಗಳು

೩೪೫

ಜಗದುದರನು ಹರಿ ಸೂತ್ರಧಾರಂ
ನಗಿಸುವ ಅಳಿಸುವ ಕಾರಕನಿವ ತಾಂ ಪ

ಪರಿಪರಿ ಸೃಷ್ಟಿಸುತಾ ಸಲಹುವನು
ಅರಿವಿಂದವುಗಳ ಲಯಗೈಸುವನು
ಭರಿತನು ಸಕಲ ಚರಾಚರಂಗಳಲಿ
ನಿರುತವೆಲ್ಲ ತರತಮದಿಂದಾರಿಸಿ
ಇರುವನು ಪರಮಾತ್ಮನು ಸರ್ವೇಶಂ ೧

ನಿತ್ಯನಿರ್ಮಲನು ಸತ್ಯಸನಾತನು
ಅತ್ಯಂತನು ಗುರುವನಂತನು
ಮೃತ್ಯುನಿಯಾಮಕ ಮುಕ್ತಿಪ್ರದನು
ಭೃತ್ಯವರ್ಗ ಸಂರಕ್ಷ ಶಕ್ತನು
ಮತ್ತೊಂದಕು ಸಹ ಮೂಲನು ೨

ಅಣೋರಣೀವನು ಮಹತೋಮಹೀಮನು
ಗುಣಗಣಭರಿತನಗಣ್ಯನು
ಕ್ಷಣಮಾದಲನು ಕಂಟಕನು ಕಾಲನು
ತೃಣಮೊದಲು ಬ್ರಹ್ಮಾಂಡನು ಧೀರನು
ಘನಮಹಿಮನು ಶ್ರೀ ಜಾಜೀಶಂ ೩

೩೪೬

ನಿನ್ನ ಸೊಬಗಿದೇನೊ ಶ್ರೀಹರಿ
ಉನ್ನತ ವಿಭವ ಚನ್ನಕೇಶವಾ ಪ

ಸತಿ ಸಿರಿದೇವಿಯು ಅತಿ ಚಂಚಲೆಯು
ಸುತಮದನ ತಾನನಂಗನೂ
ಸುತೆ ಬಾಗೀರಥಿ ವಕ್ರಮಾರ್ಗಳೋ
ಅತಿಶಯ ಮೈದುನ ಕ್ಷಯರೋಗಿ ೧

ಇರುವ ಮಂದಿರವು ಸಾಗರ ಮಧ್ಯವು
ಉರಗನ ಮೇಲೆ ಪವಡಿಸಿಹೆ
ಗರುಡನೇರಿ ಗಗನದಿ ತಿರುಗಾಡುವೆ
ನೆರೆ ತುಲಸಿಯ ಮಾಲೆಯ ಹಾಕಿರುವೆ ೨

ದಾನಕೊಟ್ಟವನ ಭೂಮಿಗೆ ತುಳಿದೆ
ಧ್ಯಾನ ಗೈದವನ ಶಿರವರಿದೆ
ಮಾನಿನಿ ಕೊಟ್ಟ ಸವಿಫಲಭಂಜಿಸಿ
ಮೀನ ಕೂರ್ಮ ವರಹನು ನೀನಾದೆ ೩

ಹೀಗಿದ್ದರೂ ಸತ್ಸತಿಸುತ ಬಾಂಧವ
ಭೋಗ ಭವನ ಭಾಗ್ಯಗಳಿತ್ತು
ರಾಗದಿ ರಕ್ಷಿಪೆ ಶರಣರ ನಿರುತವು
ಭಾಗವತಪ್ರಿಯ ಜಾಜಿಕೇಶವಾ ೪

೩೪೭

ಪತಿತಪಾವನ ಕರಿವದನ ನಾರಾಯಣ
ಮತಿಗೆಮಂಗಳವೀಯೋ ಮುನಿಜನಾಭರಣ ಪ

ಇತರವ್ಯಾಕುಲಗಳ ಮಥನವು ಮನದೆ ಬಹಳ
ವ್ಯಥೆಯ ತೋರುತ್ತಲಿದೆ ಗತಿಯಾವುದೊ ಹರಿಯೆ

ಸತತ ನಿನ್ನ ಗುಣಕಥನ ಮಾಡುವ
ಅತಿಶಯ ಮಾರ್ಗದಿ ಕ್ಷತಿಯೊಳು ಪೊರೆಯೈ ೧

ಧ್ರುವ ಪ್ರಹ್ಲಾದ ನರ ದ್ರೌಪದಿ ಅಂಬರೀಷ
ಇವರ ಕಷ್ಟಗಳಿಂದ ಪಾರುಗಾಣಿಸಿದೆ
ಅವನೀಭಾರವನಿಳುಹುವ ದೊರೆಯೇ
ಕುವಲಯನೇತ್ರ ಕುಮಾರನ ಕೈಪಿಡಿ ೨

ಶ್ರೀರಮಣೀವರ ಸಾರಗುಣಾಕರ
ಮಾರಜನಕ ಸಿರಿ ಜಾಜೀಶ್ವರ
ಕೋರುತಿರುವೆಮಗೆ ತೋರಿಸು ತವಪದ
ನಾರದ ಮುನಿನುತ ಸಾರುತೆ ನಮಿಪೆ ೩

೩೪೮

ಪರಮಪುರುಷ ಪಾಲಿಪುದೈ, ಸರಸಿಜಾಕ್ಷ ಸರ್ವರಕ್ಷ ಪ

ಮಗುವಾದ ಧ್ರುವನು ಅಗಣಿತಗುಣ ನಿನ್ನನು
ಹಗಲಿರುಳೂ ಮೃದುಪದವಂ ಬಿಗಿದಪ್ಪುತ ಧ್ಯಾನಿಸೆ ೧

ಯೋಗಿಜನಾನಂದಕನೆ ಬೇಗದಿ ಮೈದೋರುತಲಿ
ಭಾಗವತಪ್ರಿಯಪದವಂ ರಾಗದಿತ್ತೆ ಜಾಜೀಶ ೨

೩೪೯

ಪಾದಗಳಂ ನಂಬಿದೆನಾಂ ಶ್ರೀಧರಾಚ್ಯುತಗೋವಿಂದ ಪ

ಸಾಧುಜನರ ಹೃದಯ
ಮಧ್ಯದೊಳಾದರದಿ ಕುಣಿಯುತಿರುವ ಅ.ಪ

ಅಳೆದು ಮೂರಡಿಯಿಂದ ಜಗವ ಬಲಿಯ ಪಾತಾಳಕ್ಕೆ ತುಳಿದು
ಲಲನೆಗಂಗೆಯ ಪೆತ್ತು ಮಂಗಳಗಳನು ಭಕ್ತರಿಗೀವ ಶುಭದಾ ೧

ಶಿಲೆಯ ಸತಿಯ ಗೈದು ನಲಿದು ಬಲಿದ
ಧನುವ ಮೆಟ್ಟಿಮುರಿದು
ಕಲಿಯ ಮಲವ ಕಳೆಯ ಗಯೆ
ಮೊಳಲಸದಾನಂದದೊಳಿರುವ ೨

ಗರಡುದೇವ ನಿತ್ಯಪೊತ್ತ ಸಿರಿಯು ಸದಾ ಒತ್ತುತಿರುವ
ಪರಮಪಾವನ ಹೆಜಾ ಜಿಯ ವರದನೆನುತ ನಾರದನೆನೆವ ೩

೩೫೦

ಮೂಜಗ ಪೂಜಿತ ಮಾಧವ ನಮ್ಮ ಹೆ
ಜ್ಜಾಜಿಯ ಚೆನ್ನಕೇಶವಾ ಪ

ಸಾಜದಿ ಶರಣರಿಗೊಲಿವಾ ಸುರ
ಭೂಜನು ಪರವಾಸುದೇವಾ ಅ.ಪ

ಮರೆತವರಿಗೆ ಮತ್ತೂ ದೂರನು ಇವ
ಮರೆಹೊಕ್ಕವರ ಮುಂದಿರುವನು
ದುರಿತಗಳಡಗಿಸಿ ದಾಸರ ಪೊರೆವಾ
ಪರಮದಯಾಳುವು ಪ್ರಭು ಶ್ರೀನಿಭವ ೧

ನಿರ್ಜರ ಮುನಿಗಣ ಲೋಲಾ ಶೀಲಾ
ಅರ್ಜುನ ಸಾರಥಿ ಲೀಲಾ
ಪರ್ಜನ್ಯ ಪ್ರಭುಪರಿಪಾಲ ನೀಲಾ
ದುರ್ಜನ ವಂಶಕ್ಕೆ ಕಾಲಾ ೨

ನಿತ್ಯತಂದೆಯು ತಾಯಿಯು ಶ್ರೀರಂಗಾ
ಸತ್ಯಸಹೋದರನು ವೆಂಕಟರಂಗಾ

ಸ್ತುತ್ಯ ಬಂಧುವು ತಾನೆ ನರಸಿಂಗಾ ಇವ
ಪ್ರತ್ಯಕ್ಷನೊ ಅಂತರಂಗ ೩

ವೆಂಕಟವರದನೆ ಸದಯಾ ಗುರು
ಸಂಕಟಹರ ಬಹುವಿನಯಾ ರಂಗ
ಶಂಖಚಕ್ರಧರ ಅಭಯಾ ನಿನಗೆ
ಪಂಕಜಸಂಭವ ತನಯಾ ೪

ಯಾದವ ಯದುಶೈಲಶೃಂಗಾ ಸಾಂಗ
ಶ್ರೀಧರ ಮಣಿ ಉತ್ತಮಾಂಗ [ವೇದ]
ವೇದ್ಯನೆ ಗರುಡತುರಂಗಾ ಗಂಗಾ
ಬಾದರಾಯಣ ಗೀತೋತ್ತುಂಗ ೫

ಸಂಪಿಗೆ ಕಂಪಿನ ಸುಂದರ ಸಂಪೂರ್ಣ
ಸಂಪತ್ಕುಮಾರ ಶ್ರೀ ಭೂನೀಳ ರಮಣ
ತಂಪಿನ ಹೃದಯದ ಪ್ರಾಣಸೂತ್ರಾದಿ
ಪೆಂಪಿನಗುರು ಶ್ರೀನಿವಾಸ ಕಲ್ಯಾಣ ೬

ರಾಘವಜಯ ಸೀತಾರಾಮಾ ಸ್ವಾಮಿ ರವಿಕುಲ ಸುಂದರಸೋಮ
ಯೋಗಿ ಜನಾನಂದ ಧಾಮಾ ಪ್ರೇಮಪ್ರಿಯ ಶ್ರೀಶ್ಯಾಮ
ಭಾಗವತಾನಂದಪ್ರಿಯ ಪುಣ್ಯನಾಮಾ ಚತು
ಸಾಗರಾಂತ ಸಾರ್ವಭೌಮ ೭

ಭಕ್ತಮಂಡಲಿ ಕಾಮಧೇನು ಜೇನು ವಿ
ರಕ್ತ ಜನರ ಹೃದಯಭಾನು
ಮುಕ್ತಿ ಬಯಸಿ ಬಂದೆ ನಾನು ಪ್ರೇಮಾ
ಸಕ್ತಿ ಸಿದ್ಧಿಯ ನೀಡು ನೀನು ೮

ಸಕಲದೇವರೊಳೆಲ್ಲ ನೀನೇ ಹೆಚ್ಚು
ಅಕಳಂಕ ಸಾಧುಗಳ ಸವಿಬೆಲ್ಲದಚ್ಚು
ನಿಖಿಳಜೀವರೊಳೆಲ್ಲ ಪರಮಾತ್ಮನಚ್ಚು
ಸುಕರದಿ ನೆನೆಯುವ ನನಗೆ ನಿನ್ನಯ ಹುಚ್ಚು ೯

ಪರಿಪರಿ ಭವಸಂಸಾರಾ ಸಾರಾ
ಹೊರಲಾಲೆ ದೂಡುವೆ ದೂರಾ
ಪರಮಾತ್ಮಾ ಪದಗಳ ಸೇರಾ ಸಾರಿ
ಕರೆಯಲು ಕರಗಳ ತೋರಾ ೧೦

ರಾಜ ಜನಾರ್ಧನ ದಿವ್ಯಂ ದಿವ್ಯಂ
ಜಾಜಿ ತುಲಸೀ ಮಾಲ ಭವ್ಯಂ
ಯಾಜಿ ಕಮಂಡಲ ದ್ರವ್ಯಂ ಸ್ತವ್ಯಂ
ಜನಗಾನ ಶ್ರೋತವ್ಯಂ ೧೧

ಸರ್ವಲೋಕ ಶರಣ್ಯಾ ಗಣ್ಯಾ
ಉರ್ವಿ ದೇವ ವರೇಣ್ಯಾ
ಗರ್ವಮರ್ಧಿತ ಹಿರಣ್ಯಾ ಸ್ವರ್ಣ
ವಿರ್ವತ ದರಶ್ಯಾಮ ಪುಣ್ಯಾ ೧೨

೩೫೧

ಶ್ರೀಕರನೇ ಕರುಣಾಕರನೇ ಶ್ರೀಕಾಂತಾ ಹರಿ ಗಿರಿಧರ ಶೌರಿ ಪ

ಸಾಕೇತಾಪುರಿಗೀಶನು ಪೂಜ್ಯ ಸಾಮ್ರಾಜ್ಯ ಭಾಸ್ಕರ ಶತತೇಜ ಅ.ಪ

ಸುರತರು ಧೇನು ಚಿಂತಾಮಣಿ ಸಿರಿಯನು
ಸುಖಕರ ಸುಧಾಂಬುಧೀ
ದುರಿತಘ ನಾಶನ ಸಂಪನ್ನ ಪರಮಾತ್ಮಾ
ನಿತ್ಯಪರಿಪೂರ್ಣ ಹಿರಣ್ಯವರ್ಣನೆ ೧

ಶರಣರ ಹೃದಯದಿ ವಾಸಿಸುತಾ ಮರೆಯದೆ
ಮಮತೆಯ ತೋರಿಸುತ
ಪರಿಪರಿರೂಪವ ದರ್ಶಿಸುತಾ ತನ್ನವರೆನ್ನುತ
ಪೊರೆವಾತ ಜಾಜೀನಾಥ ೨

೩೫೨

ಶ್ರೀಮನ್ಮಾಧವ ನಮಿಸುವೆನಾಂ
ನಮಿಸುವೆನಾಂ ಪಾಲಿಸು ನಾಥನೆ ಪ

ಸಾರಸಭವತಾತ ನಾರದ ಮೌನಿನುತ
ಮೂರ ಕೋಟಿ ಸುಂದರಾಂಗ ಮುರಹರ ಗೋವಿಂದ ೧

ಶಂಖಚಕ್ರ ಗಧಾ ಪಂಕಧಾರಿ ಸದಾ
ಕಿಂಕರಗಣ ಪಾವನಘನ ವೆಂಕಟರಮಣ ೨

ಶ್ರೀಜನಾರ್ಧನ ರಾಜಸತನಾ
ಮೂಜಗಭರಿತ ಪರಾತ್ಪರ ಜಾಜಿಶ್ವರಾ ೩

೩೫೩

ಶ್ರೀಮಾಧವ ಪಾದವ ಸಂತತ ಮನದಿ
ನೇಮದಿ ಧ್ಯಾನಿಸು ನೀ ಪ

ಪ್ರೇಮಮೂರ್ತಿಯನೆನೆವರಾರಾದರೇನಯ್ಯ
ಸ್ವಾಮಿತಾನವರನು ಸರ್ವತ್ರ ಸಲಹುವನು ಅ.ಪ

ಮದಗಜವನುಸರದಿ ಮೊಸಲೆಯನು ತಾನು
ಅಧಿಕ ಕಷ್ಟವ ಗೊಳಸೆ
ಪದುಮನಾಭ ನೀನೆ ಪೊರೆಯಬೇಕೆನ್ನಲು
ಮುದದಿಂದಲೊದಗುತ್ತ ಸೌಖ್ಯವ ತೋರಿದೆ ೧

ತರಳನಾದ ಧ್ರುವನು ಪ್ರಹ್ಲಾದನು
ಶರಣೆಂದು ಮೊರೆವೋಗಲು
ಸರಸಿಜಾಕ್ಷ ಶ್ರೀಶ ತ್ವರಿತದಿಂದಲಿ ಬಂದು
ಕರುಣದಿ ಕರೆದೆತ್ತಿಕೊಂಡು ಮುದ್ದಾಡಿದ ೨

ಮಾನಿನಿ ದ್ರೌಪದಿಯು ತನ್ನಯ ಘನ
ಮಾನಭಂಗದ ಕಾಲದಿ
ದೀನರಕ್ಷಕ ಕೃಷ್ಣ ದಾನವಾ೦ಯೆನೆ
ಸಾನುರಾಗದಿಂದಲಕ್ಷಯ ವರವಿತ್ತ ೩

ಅಜಮಿಳ ಬಹುಪಾಪದಿ ಮೆರೆಯುತಲಿದ್ದು
ನಿಜಸುಖ ಮರೆತಂತ್ಯ ಕಾಲದಿ
ಬಜಬಜಿಸುತಮಗನನು ಹೆಸರೆತ್ತಲು
ಭಜನೆಯಾಯ್ತು ನಾರಾಯಣ ನಾಮವು ೪

ವಿದುರನುದ್ಧವನರ್ಜುನ ಕುಚೇಲನು
ಮೊದಲಾದ ಭಕ್ತರೆಲ್ಲ
ಹೃದಯದಿ ಬಚ್ಚಿಟ್ಟು ನಿರುತ ಪೂಜೆಯ ಮಾಡೆ
ಪದವಿಯಿತ್ತು ಕಾಯ್ದ ಜಾಜಿಯೀಶನ ೫

೩೫೪

ಶ್ರೀಶ ಶ್ರೀ ಕೇಶವನೆ ಬಾ ಪರುಮ ಪುರುಷ
ಶೇಷಶಾಯನ ಮುಕುಂದ ಶರಣರಾನಂದ ಪ

ಭೂಸುರರು ನಡೆಮುಡಿದು ಪೂರ್ಣಕುಂಭವು ವೇದ
ಘೋಷಿಸುವ ಓಲಗ ಛತ್ರ ಚಾಮರ ದಿಮಿಗೆ ಅ.ಪ

ಸುತ್ತಿಬರುತಿಹ ದನುಜ ವೃಂದವೆಲ್ಲವ ತರಿದು
ಮುತ್ತಿನಂಥಾ ತನುವು ಧೂಳಾಗಿರುವುದೋ

ಒತ್ತುತೆಣ್ಣೆಯ ನಿನಗೆ ಮತ್ತೆಬಿಸಿನೀರೆರೆದು
ಕತ್ತುರಿಯ ಹಣೆಗಿಟ್ಟು ನುಡಿಯನುಡಿಸುವೆನೋ ೧

ಸರಸಿ ಪೀತಾಂಬರ ಶಿರಕೆ ಮಣಿಯಳವಡಿಸಿ
ಕೊರಳಿನೊಳುಹಾಕಿ ತುಳಸೀಮಾಲೆಯ
ಕರಕೆ ಕಂಕಣ ಶಂಖ ಚಕ್ರಗಧೆಯಾ ಕಮಲ
ದೊರೆನಡುವಿಗೊಡ್ಯಾಣ ಸಿರಿಪದಕೆ ಕಡಗ ೨

ಅಂಗಕ್ಕೆ ಶ್ರೀಗಂಧ ಅಗರುಚಂದನ ಧೂಪ
ಮಂಗಳದ ದೀಪವೂ ಮಂತ್ರಪುಷ್ಪ
ಶೃಂಗಾರ ಮೂರ್ತಿಗೆ ಕನ್ನಡಿಯು ಬೀಸಣಿಗೆ
ಸಂಗೀತ ನರ್ತನವು ಸ್ತುತಿಸೇವೆಯೂ ೩

ವಸುಮತೀಪಾಲನೆಯ ಸತತ ನೀಗೈಯುತ್ತ
ಹಸಿದು ಬಳಲುತ್ತಿರುವೆ ಕೃಷ್ಣಪರಮಾತ್ಮ
ಬಿಸಿಯಹೋಳಿಗೆ ತುಪ್ಪ ಹಸುನಿನಾ ಬಿಸಿಹಾಲು
ಮೊಸರು ಶಾಲ್ಯನ್ನ ಫಲಪಾನಕದ ಸುಖಹೀರಿ ೪

ಶ್ರೀದೇವಿ ಭೂನೀಳ ಇವರೊಡನೆ ತೃಪ್ತಿಯಂ
ಶ್ರೀಧರ ಮೂರುತಿ ಹೃದಯ ಕಮಲದಲಿ ಕೂಡೋ
ಸಾದರದಿ ಕರ್ಪೂರ ತಾಂಬೂಲವನು ಸದಿಯೋ
ಮೋದದಿಂದಾರತಿಯ ಬೆಳಗುವೆನೋ ರಂಗಾ ೫

ಜಯತು ಜಗದಾಧಾರ ಪುಷ್ಪಾಂಜಲಿಯೊಧೀರ
ಜಯ ಸಾಧು ಹೃದ್ಭಾಸ ಹೆಜ್ಜಾ ಜಿವಾಸ
ಜಯತು ಮಂಗಳ ನಾಮ ಶ್ಯಾಮಂಗೆ ಪ್ರಣಾಮ
ಜಯತು ಕರುಣಾಸಿಂಧು ಜಯಭಕ್ತ ಬಂಧು ೬

೩೫೫

ಸೌಭಾಗ್ಯ ಸಂಪನ್ನ ಸಂಪೂರ್ಣ
ಶ್ರೀ ಭೂನೀಳಾ ರಮಣ ಕಲ್ಯಾಣ ಪ

ಆಧಾರದೇವ ಭೇದ ರಹಿತ ಭಾವ
ಮೋದಕರಾ ಶ್ರೀವಾಸುದೇವ ೧

ಯಶೋದೆಯ ಸಂಗದ ಮರಿಯೆ
ದಶಾವತಾರಿ ಶೇಷಶಾಯಿಯೆ ೨

ಗರುಡವಾಹನ ಗಜವರದ ಗಮನ
ದುರಿತನಾಶನ ಜಾಜೀಜನಾರ್ಧನ ೩

೩೫೬

ಹರಿಯೇ ನಿನ್ನಯ ಸಿರಿಯನು ಬಣ್ಣಿಸೆ
ನರನಾದೆನಗಳವೇ ಪ

ಕರುಣಾಳುವೆ ನಾಂ ಕರಗಳ ಮುಗಿವೆ
ಪರವಾಸುದೇವ ಪರಮಾತ್ಮಾ ಅ.ಪ

ಸತಿಶ್ರೀದೇವಿಯು ನುತಚತುರಾನನ
ಪತಿತೋದ್ಧರೆ ಗಂಗೆಯು ಮಗಳು
ಸ್ತುತಿಗೈಯುವವೇದ ತತಿಯಿಂ ನಿತ್ಯ
ಭೃತ್ಯರು ಸುರಗಣ ಸರ್ವೇಶಾ ೧

ಸಾಗರ ಮಧ್ಯದಿ ಭೋಗಿಯನೊರಗಿ
ಯೋಗೀಜನರ ಹೃದಯದಿ ನೆಲಸಿ
ಆಗಮ ಪೂಜೆಯ ರಾಗದಿ ಪಡೆವ ೨

ಶಂಖಸುದರ್ಶನ ಪಂಕಜಧರಶ್ರೀ
ವೆಂಕಟವರದ ಶ್ರೀರಂಗ
ಸಂಕಟಹರನೇ ತಿರುನಾರಾಯಣ
ಕಿಂಕರ ಪಾಲಕ ಜಾಜೀಶಾ ೩

೩೫೭

(೧) ದಶಾವತಾರ

ಶ್ರೀಹರ ನಿನ್ನ ಲೀಲೆ ಏನು ಹೇಳಲಯ್ಯ ನಾನು ಪ

ಮೋಹಗೊಳಿಸಿ ಲೋಕವನ್ನು ಪಾಲಿಸುತ್ತಿಹೆ ಅ.ಪ

ಮತ್ಸ್ಯನಾಗಿ ವೇದ ತಂದೆ ಆಮೆಯಾಗಿ ಅಮೃತ
ವಿತ್ತೆ ವರಹನಾಗಿ ನೀನು ಧರಣಿ ಹೊತ್ತೆಯ್ಯೆ ೧

ನರಹರಿ ತರಳರಕ್ಷ ಬ್ರಹ್ಮಚಾರಿ ಇಂದ್ರಪಾಲ ದಾ
ಶರಥಿಯೆ ನೀನು ಧರ್ಮ ತೋರ್ದೆಯ್ಯೆ ೨

ಬಾಲಕೃಷ್ಣ ಲಾಲಿಲೀಲೆ ಪರುಶುಧಾರಿ ಪಿತೃಭಕ್ತ
ಬಲ್ಲರಾಮನಾಗಿ ನೀನು ಬುದ್ಧಿ ಪೇಳ್ದೆಯ್ಯೆ ೩

ಕಲ್ಕಿಯಾಗಿ ಕೆಸರ ತೊಳೆವೆ ವಿಷ್ಣು ಜಾಜಿಶ್ಯಾಮವನ್ನು
ಶುಲ್ಕವಿಲ್ಲದಂತೆ ನಿನ್ನಲ್ಲಿಗೊಯ್ವುದ್ಯೆ ೪

೩೫೮೫

(೨) ಶ್ರೀರಾಮ

ಕಂಡುಕೊಂಡೆನೊ ಕೋದಂಡಧಾರಿಯ ಪ

ಮಂಡರಾದಿ ರಾಗಾದಿ ದೈತ್ಯರನ್ನು
ತುಂಡುಗೈದ ವಿಭೀಷಣ ವರದನ್ನ ಅ.ಪ

ಸೀತಾ ಸೌಮಿತ್ರಿ ಭರತರನ್ನು ಕೂಡಿ
ವಾತಾತ್ಮಜಾತ ಪಾದಪಿಡಿಯುತ
ಖ್ಯಾತರಾದ ಸುಗ್ರೀವ ಜಾಂಬುವರಿಂ
ಸ್ತೋತ್ರಗೊಳ್ಳುತ್ತಿಹ ಜಾಜೀಶನನ್ನು ೧

೩೫೯

ನೀನೇ ಸಕಲವೆನಗೆ ಶ್ರೀರಾಮಚಂದ್ರ
ನೀನೇ ದೊರೆಯರಸನೊ ಪ

ಶ್ರೀನಿಧಿಯೆ ನಿನ್ನವರುಸತತ ಸಾನುರಾಗದ ಬಳಗವಹುದೈ
ದೀನಜನಮಂದಾರ ನೇಹಂ ಶ್ರೀನಿಕೇತನ ಸತ್ಯಸಾರ ಅ.ಪ

ರಾಮ ನೀಯೆನ್ನಾತ್ಮನು ಈ ಮಹಾಸೀತಾದೇವಿಯೆ
ತಾಮತಿಯು ಶ್ರೀ ಮನೋಹರ ಸಹಜರೆಲ್ಲ ಪ್ರೇಮ ಪಂಚ
ಪ್ರಾಣಗಳು ನಿಧಿ ಭೀಮಬಲ ಮಾರುತಿಯ ಮನಸಿಗೆ
ರಾಮರೂಪವ ತೋರ್ಪನಾಡಿಯು ೧

ಧನ್ಯ ಶರೀರವು ಮಾನ್ಯಗೆ ತಾಮಸದ ಸರ್ಪಹವೂ
ಪುಣ್ಯಮೂರತಿ ಪೂಜೆ ಭೊಗ್ಯವು
ಕಣ್ಣನಿದ್ರೆಯು ಯೋಗಮುದ್ರೆಯು
ಚಿಣ್ಣನ ಸಂಚರಂಗಳು ಸ್ವಾಮಿ ನಿನಗೆ ಪ್ರದಕ್ಷಿಣೆ ೨

ಬಾಲನ ಮಾತುಗಳು ವೇದೊಕ್ತ ಸಶೀಲನ ಸ್ತೋತ್ರಗಳು
ಕಾಲಂಕಾಲಗಳಲ್ಲಿ ಗೈಯುವ ಕಾರ್ಯಗಳು ಪರಮಾತ್ಮ ಸೇವೆಯು
ಶ್ರೀಲತಾಂಗಿಯ ಲೋಲ ಧ್ಯಾನಿಪೆ ಪಾಲಿಸೈ ಜಾಜೀಶ ಕೇಶವ ೩

೩೬೦

ರಾಘವದೇವ ಬಿಡಬೇಡ ಕೈಬಿಡಬೇಡ ಪ

ಆಗಮಾರ್ಚಿತ ಪಾದಪದ್ಮಪಿಡಿದೆ
ಬಿಡಬೇಡ ಕೈಬಿಡಬೇಡ ಅ.ಪ

ಸೀತಾಕಾಂತನೆ ನಿನ್ನ ಭ್ರಾತಲಕ್ಷ್ಮಣನಂತೆ
ಪ್ರೀತಿಸುತೆನ್ನ ಸನಾಥನೆನಿಸು ೧

ನಂಬಿಬಂದ ವಿಭೀಷಣನನು ಬಲು
ಸಂಭ್ರಮದೊಳು ಲಂಕಾರಾಜನ ಗೈದ ೨

ಹನುಮನಂದದಿ ಸೇವೆಮಾಡಿ ಮೆಚ್ಚಿಸಲಾರೆ
ಕನಿಕರದೆನ್ನೊಳು ಘನಮನ ಮಾಡು ೩

ದುಷ್ಟಜನಕೆ ಭಯ ಶಿಷ್ಟಜನಕೆ ಜಯ
ಕೊಟ್ಟು ಭಕ್ತರಕಾವ ದಿಟ್ಟಹೆಜ್ಜಾಜೀಶ ೪

೩೬೧

ರಾಮಚಂದ್ರನು ಶೋಭಿಪನಿಂದು ಸದ್ಭಕ್ತಬಂಧು ಪ

ಸಾರಸಾಕ್ಷನು ಸಾಮಜವರದನು
ಭೂರಿಫಲಪ್ರದ ಭೂಮಿಜೆಯುತನು ಅ.ಪ

ಧರೆಯಭಾರವ ತಾಕಳೆಯಬಂದು ಕಾರುಣ್ಯಸಿಂಧು
ನರರೂಪವ ಧರಿಸುತ್ತ ನಿಂದು ಕೋದಂಡವ ಪಿಡಿದು
ದುರುಳ ದೈತ್ಯರ ಶಿರವನೆ ತರಿದು
ಪರಿಪರಿ ವಿಧದಲಿ ಶರಣರಿಗೊಲಿಯುತ
ದುರಿತ ಸಂಕುಲವ ಪರಿಹರಿಸಿ ಪೊರೆವ ಶ್ರೀ ೧

ಸೂರ್ಯಸುತನ ಸೈನ್ಯದವರ ಸುಮನಸರ
ಧೈರ್ಯದಿಂ ಸಮರಗೈದವರ ವೀರಾಧಿವೀರರ
ಕಾರ್ಯವ ಸಾಧಿಸಿದಾ ವಾನರರ
ಪಾರವಶ್ಯರನು ಪರಮೇಷ್ಠಿಯಿಂದ
ಧಾರೆಯನೆರೆದಮೃತದಿ ಬದುಕಿಸಿದ ಶ್ರೀ ೨

ಘನವಂತ ವಿಭೀಷಣಂಗೆ ಅನುವನು ತೋರಿ ಸಾರಿ
ಅನುಜಾತ ಭಕುತಂಗೆ ಅನುಗ್ರಹಬೀರಿ ಆನಂದವೇರಿ
ಜನನಿಯರಾಶೀರ್ವಚನವ ಪಡೆದು
ಸನುಮತದಿಂ ಪುರಜನರೊಲುಮೆಯೊಳು
ದಿನಕರಪ್ರಕಾಶ ಜಾನಕಿನಂದ ಜಾಜೀಶ್ರೀಶ ಶ್ರೀ ೩

೩೬೨

(೩) ಶ್ರೀಕೃಷ್ಣ

ಶ್ರೀಪಾರ್ಥಸಾರಥಿ ನಿರುಪಮಗುಣ ನಿತ್ಯಕಲ್ಯಾಣ ಪ

ಆಪದದೂರ ಮುನಿಜನಮಂದಾರ ದಾನವಭಯಂಕರ ಅ.ಪ

ಮಂಗಳಕರಮೂರ್ತಿ ಸುಗುಣಾಭರಣ ಕವಿಜನವರ್ಣನ
ಶೃಂಗಾರಸಾಗರ ಗೋವರ್ಧನೋದ್ಧಾರ ಆನತಹಿತಂಕರ ೧

ಸಾಧುಹೃದಯವಾಸ ಓ ಶ್ರೀನಿವಾಸ ತವದಾಸಾನುದಾಸ ಶ್ರೀ
ಆದಂಸನ್ನಂಹಿತ ಆದ್ಯಂತರಹಿತ ಸಾಮಗಾನ ಸನ್ನುತ ೨

ರಾಜಾಧಿರಾಜ ಭಾಜಕರ ಸುರಭೂತ ರವಿಕೋಟಿತೇಜ
ಜಾಜೀಶ ಕೇಶವ ಜಯಜಯವಿಭವ ಶ್ರೀ ಭೂನೀಳಾಧವ ೩

೩೬೩

ಶ್ರೀಯದುಕುಲತಿಲಕ ದೇವ ಕಾಯಬೇಕು ನೀ ಕರುಣಾವಾಲ ಪ

ಶ್ರೀಯಶೋಧೆಯಮಾಯೆಯತನಯ ರಾಯನೆ ದಯೆದೋರು ಅ.ಪ

ದೇವಕೀವಸುದೇವ ಜಾತ ನೀ ವಿನೋದದೆ ನಂದನೊಳಿರುತ
ಆವ ಪೂತನಿ ಶಕಟರಸುವ ದೇವ ಹರಿಸಿದೆ ಭಕ್ತಭಯಹರ ಶ್ರೀ
ಗೋವಕಾಯ್ದ ಗೋವಿಂದ ವಿಧಿಪುರಂದರಾದಿವಂದ್ಯ
ಪಾವನ ಯಮನಾನಂದ ಫಣಿತರ ಫಣಿಯೊಳುನಿಂದ ೧

ನಳಿನನಾಭಗೋಪಾಲ ಪುಳಿನ ಕ್ರೀಡೆಯಾಡಿಬಾಲ
ರೊಳಗೆ ಮೇಲೆನಿಪ ಸುಶೀಲ ತುಳಿದೆ
ಬಕ ಅಘಪ್ರಲಂಬಾದಿ ದೈತ್ಯಜಾಲ
ಕಳವಳಗೊಳ್ಳುತ ಸೆರೆಯೊಳ್ ಬಳಲುವ ವನಿತಾಜನದೊಳ್
ಒಲಿಯುತ್ತಲಿ ನರಕಾಸುರ ಶಿರವರದಿನೆ ದುರಿತಶಯನ ೨

ಬೃಂದಾವನ ಸಂಚಾರ ಬೆಳ್ದಿಂಗಳೊಳು ಗೋಪಿಯರ
ಬಂಧುರ ವೇಣುಗಾನತೋರಿ ಹೊಂದುತಾನಂದ ನಿಧಿ
ತೋರಿದ ಪರಾತ್ಪರ
ತಂದೆ ತಾಯ್ಗಳ ಪೊರೆಯುತ ನಿಂದು ಕಂಸನಕೊಂದು
ಅಂದುಪಾಪವ ಕಳೆದಾ ಅಪ್ರಮೇಯ ಜಾಜೀಶ್ವರ ೩

೩೬೪

ಅಮ್ಮನ ತೊಡೆಯ ಮೇಲೆ ನಮ್ಮ ಕೃಷ್ಣ
ಸುಮ್ಮನೆ ಮಲಗಿಹನು ಪ

ಸುಮ್ಮೊನದಿ ಸುಖದಿಂ ನಲಿದಾಡುತ ಅ.ಪ

ಮಣ್ಣ ಮೆದ್ದುದ ಕಂಡು ಗೋಪಿದೇವಿ ಚಿಣ್ಣನ ಬಾಯಿನೋಡೆ
ಕಣ್ಣಿಗೆ ಬ್ರಹ್ಮಾಂಡ ತೋರಿಸಿದಂಥ ಪರಬ್ರಹ್ಮ ೧

ತರಳ ತರಲೆ ಮಾಡೆ ತಾಯಿಯು ಹೊರಳೆಗೆ ಕಟ್ಟಲಾಗಿ
ಸುರತರುಗಳ ಮುರಿದು ನಿಜತರವ ಗೈದ ನಿತ್ಯಾತ್ಮ ೨

ಪೂತನಿಯಸುವನೀಗಿ ಶಕಟಾಸುರನ
ಕಾಲಲೊದೆದು ಕೊಂದು
ಧಾತಾ ದೇವೇಂದ್ರರ ಶಿರಬಾಗಿಸಿದ ಪೂತಗುಣ ೩

ಹಾಲುಕೊಡೆನೆ ಬಾಲ ಸಂಜೆಗೆ ಹಸುವ ಕರೆವೆನೆನಲು
ಲೀಲೆಯಿಂ ಕಣ್ಣ ಮುಚ್ಚಿ ಕತ್ತಲೆ ಕವಿಸಿದ ದೈವ ೪

ಗೋಪೀಜನಗಳೊಡನೆ ಗೋಪಾಲನು ಸ್ತ್ರೀಲೋಲನಾಗಿ ಕುಣಿದು
ನಾನಾಸ್ವರಗಳ ನುಡಿಸಿ ಕೊಳಲನ್ನೂದಿದ ರಥಾಂಗಪಾಣಿ ೫

ನವನೀತ ಚೌರ್ಯಮಾಡಿದ ನಾರೀಜನರ ವಸ್ತ್ರಾಪಹರ ಗೈದ
ಅವನೀಭಾರವ ಕಳೆದ ಮಾಯಾಮೂರ್ತಿ ದೇವಶಿಖಾಮಣಿ ೬

ಕಂಸ ಶಿಶುಪಾಲ ದೈತ್ಯರ ಧ್ವಂಸವಮಾಡಿ
ಭೂಮಿಪಾಲನೆ ಮಾಡಿದ
ಹಿಂಸಕರ ವಂಶವಳಿಪ ಹಂಸಲೋಲ ಜಾಜಿಶ್ರೀಶ ೭

೩೬೫

ರಂಗ ಬಾರ ಕುರಂಗನಯನೆ ಮಂಗಳಾಂಗನ ಕರೆದುತಾರೆ ಪ

ಅಂಗ ಸಂಗ ಸುಖವನಿತ್ತು ತಂಗೀ ಮನವ ಸೆಳೆದುಕೊಂಡ ಅ.ಪ

ಸಂಚಿನಿಂದ ಒಳಗೆಬಂದು ಮಂಚಕೆನ್ನ ಗಂಡನ ಕಟ್ಟಿ
ಹೊಂಚಿಯೆನ್ನನು ಕೂಡಿ ಬಿಗಿದು
ಮಿಂಚಿನಂತೆ ತೋರಿಪೋದ ೧

ಕಂಚುಕದೊಳಿರುವ ಪಣ್ಗಳ ವಂಚಿಸದೆ ಕೊಡುಯೆಂದೆಂಬ
ಸಂಚಿತಾರ್ಥದ ಪುಣ್ಯವೆಂದು ವಿರಿಂಚಿಪಿತನು ರೋಜಪಿಡಿದ ೨

ಲಲ್ಲೆವಾಕುಗಳಾಡಿ ಯೆನ್ನ ಗಲ್ಲಕೆ ಮುದ್ದಿಟ್ಟು ತಾನು
ಉಲ್ಲಸದೊಳಗಾಲಿಂಗಿಸುತ ಫುಲ್ಲಲೋಚನ ಪರವಶಗೈದ ೩

ಮುನಿದುನಾನು ನಿಂದಿರಲು ಕನಿಕರದಿಂದ ಕುಣಿದು ಹಾಡಿ
ಮನವನುಬ್ಬಿಸಿ ತನುವಮರೆಯಿಸಿ ಇವನತೆರದೊಳೆನ್ನನಾಳ್ದ ೪

ಮೊಸರ ಕಡೆದು ಬೆಣ್ಣೆತೆಗೆಯೆ ಮೆಲ್ಲನೆ ಬೆನ್ನಹಿಂದೆ ಬಂದು
ಅಸಮರೂಪ ತೋರುತಾಗ ಒಸೆಯುತದನು ಕದ್ದು ಮೆದ್ದ ೫

ನೀರದಾರಿಯೊಳಗೆ ನಿಂದು ಮಾರಕೇಳಿಗೆ ಬಾರೆಂದೆನುತ
ಹೋರಿಯೆನ್ನೊಡೆ ದಾರಿಬಿಡದೆ ಓರಿಗೆಯರ ಕಂಡು ಜಾರಿದ ೬

ಬಳಲಿಮನೆಯ ಕೆಲಸದಲ್ಲಿ ಕಳವಳಿಸುತ ಮಲಗಿರಲು
ಕೊಳಲನೂದಿ ಒಳಗೆ ಬಂದು ಲಲನೆಯೇಳೆ ಎಂದವನ ೭

ನೀರಮುಳಗಿ ಭಾರಹೊತ್ತು ಕೋರೆ ಮಸೆದ ನಾರಸಿಂಹ
ಧೀರವಾಮನ ಪರುಶುಧಾರಿ ರಾಮಕೃಷ್ಣ ಬುದ್ಧ ಕಲ್ಕಿ ೮

ಪಕ್ಷಿವಾಹನ ಹೆಜ್ಜಾಜಿ ಯಧ್ಯಕ್ಷ ಚನ್ನಕೇಶವದೊರೆಯೆ
ರಕ್ಷಿಸೆಂದು ನಂಬಿದವರ ಪಕ್ಷನಾಗಿ ಪಾಲನೆಗೈವ ೯

೩೬೬

ಮಂಗಳಾಂಗ ಶ್ರೀರಂಗ ಪಾಲಿಮುದ್ದೈ
ರಮಾವಧು ಮನೋಹರ ಪ

ಅಂಗಜಪಿತ ಪುಂಗವಾ ವಿಹಂಗಗಮನ ರಂಗಧಾಮ ಅ.ಪ

ವಂದಿಸುವೆ ಚಂದದೊಳು ಮುಕುಂದ ಹರಿ ಮಾಧವ ಸುರ-
ಬೃಂದನುತಾ ಪದಾಬ್ಜ ಮಂದಹಾಸದಿಂದ ಬಂದು ೧

ಕೋರಿಕೆಗಳನು ನಡೆಸು ನಾರಿರುಹಲೋಚ ಹರಿ ಸುಕು
ಮಾರ ಶರೀರೋತ್ತಮ ವರ ಧೀರಶೂರ ನಾರಸಿಂಹ ೨

ಮಾವರನೆ ನಿನ್ನಡಿಯ ಸೇವಿಸುತ್ತ ಭಾವಿಸುವೆ
ಕಾವುದು ರಾಜೀವನೇತ್ರ ದೇವದೇವ ಜಾಜಿಶ್ರೀಶ ೩

೩೬೭

(೪) ಚನ್ನಾಕೇಶವ

ಶರಣು ಶರಣು ಚೆನ್ನಕೇಶವರಾಯ
ಚರಣಗಳೇ ಗತಿ ನಂಬಿದೆ ಜೀಯಾ ಪ

ತರಳಧ್ರುವನಿಗಿತ್ತೆಯೊ ಬಹುಶ್ರೇಯ
ವರದ ವೇಂಕಟ ಶ್ರೀರಂಗ ಚೆಲ್ವರಾಯಾ
ಶರಣ ಶ್ರಿತನಭಯಾ ಆನಂದನಿಲಯಾ ಅ.ಪ

ಅಂದುಗೆ ಗೆಜ್ಜೆಯ ಘಲುಘಲು
ತುಂದಿಲನಗೆಮೊಸ ಪೀತಾಂಬರದಿಂ
ಧಿಂದಿಮಿಕಿಟ ಕುಣಿಗೋವಿಂದಾ
ನಂದನಕಂದ ನಿತ್ಯ ಮುಕುಂದ ೧

ಕವಿಕುಲಸ್ತುತ್ಯನೆ ದೇವವರೇಣ್ಯ
ಭವಸಾಗರ ತಾರಣ ಪ್ರಾವೀಣ್ಯ
ಭುವನಗಳೆಲ್ಲಕು ನೀನೇ ಗಣ್ಯ
ಪವಿತ್ರಯೋಗಿಯ ಧ್ಯಾನ ಹಿರಣ್ಯ
ಪಾವನ ಪುಣ್ಯ ಶ್ರುತಿ ಪ್ರಾಮಾಣ್ಯ ೨

ವಿದುರೋದ್ಭವ ಅಕ್ರೂರ ತ್ರಾತ
ಮಧುರ ಬಾಂಧವ ಬದರೀನಾಥ
ವಿಧಿ ಪಿತನರನಾರಾಯಣ ಪೂತ

ಮಧುಕೈಟಭಾರಿ ಬಹುಪ್ರಖ್ಯಾತ
ಬುಧಪ್ರೀತ ಭಾಗ್ಯದಾತ ೩

ಒಂದೇ ಅಳತೆಗೆ ಜಗವು ಮೂರಡಿ
ಚಂದಿರ ಮುಖಿಮಣಿ ಕೊಟ್ಟನು ಕರಡಿ
ನಿಂದೆಯಾ ಕಾಳಿಂಗನ ಮೇಲ್ಗಾರುಡಿ
ತಂದೆ ಕರೆದನ ಕರುಣದಿ ಕರಪಿಡಿ
ಇಂದೆ ಕಡೆಜನ್ಮಮಾಡಿ ಇಡು ನಿನ್ನಪದದಡಿ ೪

ಹೆಜ್ಜಾಜೀಶ್ವರ ಶಿವ ಶಂಕರನೆ
ಸಜ್ಜನ ಮುನಿಗಣ ಹೃದ್ಭಾಸ್ಕರನೆ
ದುರ್ಜನಶಿರಹರ ಶಂಖಚಕ್ರಧರ
ವಜ್ರಿ ಅಜಹರಗಾಧಾರ ಧೀರ
ಸುಜಯ ಭೂವ್ಯೋದ್ಧಾರಿ ಜಯಿ ಶ್ರೀಕರ ೫

೩೬೮

(೫) ಶ್ರೀನಿವಾಸ

ಅಪ್ರತಿಮ ಹೇದೈವ ಶ್ರೀ ಶ್ರೀನಿವಾಸಾ
ವಿಪ್ರವಂದಿತ ಪಾಪಕೋಟಿ ಕುಲನಾಶಾ ಶ್ರೀವೆಂಕಟೇಶಾ ಪ

ನಿಜನುಡಿಯ ಭೃಗುನುಡಿಯೆ ಮುನಿಮಂಡಲಿಯ ನಡೆಯೆ
ತ್ರಿಜಗಾಗ್ರಪೂಜಿತ ಪರಬ್ರಹ್ಮ ನೀನೇ ೧

ಪಶುವತ್ಸಗೋಪಾಲ ಸರ್ವವೂ ನೀನಾಗೆ
ಬಿಸಜಭವ ಬೆದರುತ್ತ ಪದಕೆರಗಿದ ೨

ಮೋಹಿನಿಯವೇಶದಿಂ ರಕ್ಕಸನ ಭಸ್ಮಿಸಿ
ಪಾಹಿಮೆನಲಾ ದಕ್ಷ ವೈರಿಯ ರಕ್ಷಿಸಿದೆ ೩

ಗಿರಯನೇ ಕೊಡೆವಿಡಿದು ಗೋಕುಲವನೆ ಕಾಯ್ದೆ
ಸುರರಾಜ ಗರಿಮುದುರಿ ಶರಣೆಂದು ಬಂದ ೪

ವಿಧವರದಿ ಬೆರೆದ ಹಿರಣ್ಯಕಶಿಪುವ ಬಗೆದು
ಸದೆದೆ ಶಿವಕಾವಲಿನ ಬಾಣನಂ ಬಿಡವೇ ೫

ಸಾಸಿರಗಳರವತ್ತು ಸಗರಸುತರನು ಸುಟ್ಟು
ಘಾಸಿಹರಿಸಿದೆ ಜಗದೆ ಜೀವ ಜಂತುಳಿಗೆ ೬

ಘಾತಕಿಯ ಪೂತನಿಯ ಕಂಸಶಿಶುಪಾಲರಿಂ
ಪಾತಕಿಯ ರಾವಣನು ಕಾರವರ ಕೊಂದೇ ೭

ಶಿಲೆಯ ಸತಿಯಳಗೈದು ಯಮಳತರುಗಳ ಮುರಿದು
ಬಲಿದ ಶಾಪವ ಕಳೆದು ಕಾಯ್ವ ಬಂಧೂ ೮

ಸಾವುಂಡ ಶಿಶುವನು ಗುರುವಿಗೆ ನೀ ತಂದಿತ್ತೆ
ನೋವುಂಡ ಇಂದ್ರಂಗೆ ಲೋಕಗಳನಳೆದೆ ೯

ಅಜಕಪಾಲವ ಬಿಡಿಸಿ ಮೃತ್ಯುಂಜಯನ ಹರಸಿ
ಅಜಮಿಳನ ನೀ ಮುಕ್ತಿಸ್ಥಾನಕ್ಕೆ ತಂದೆ ೧೦

ಸರ್ವಕಾಲಗಳಲ್ಲು ಅಪರಾಧಿ ನಾನಯ್ಯ
ಗರ್ವಿಯೆನಿಸದೆ ತಪ್ಪು ಕ್ಷಮಿಸಯ್ಯ ತಂದೆ ೧೧

ಆನೆ ಅಳುವುದು ಕೇಳಿ ಮೊಸಳೆಬಾಯನು ಸೀಳ್ದೆ
ನೀನೆ ಆಪದ್ಬಂದು ಕಾರುಣ್ಯಸಿಂಧು ೧೨

ಅರಗಿನ ಮನೆಯಲ್ಲಿ ಭರದಿಂದ ಬಾಂಧವರಿಗೆ
ಉರಿಭಯವ ತಪ್ಪಿಸಿ ಪೊರೆದ ಪ್ರಭುವೇ ೧೩

ದ್ರುಪದ ಪುತ್ರಿಗೆ ಮಾನ ಸಂರಕ್ಷಣೆಯನು ಮಾಡಿ
ಕೃಪೆತೋರಿಪಾರ್ಥಂಗೆ ಸಾರಥಿಯು ಆದೆ ೧೪

ಕಾಲನೇಮಿಯ ಕಾಲ ವಾಲಿಪ್ರಾಣಕೆ ಶೂಲ
ಲೀಲೆಯಿಂ ಭಕ್ತರಂ ಪಾಲಿಸುವೆ ೧೫

ಪಾವನದ ಪಾದಗಳನಿಂತು ಮುಡಿಯಮೇಲೆ
ಭಾವಿಸುವೆ ಭವಕಳೆಯೆ ನಾತಾಳೆ ನಾಳೆ ೧೬

ತಾಪಗಳು ಮೂರನುಂ ಹರಿಪ ಸಂಕಟದೂರ
ಕಾಪಾಡು ಶ್ರೀಹರಿ ಬಂಧುಬೇರಿಲ್ಲ ಭಕ್ತಸತ್ರಾ ೧೭

ಶರಣಸಂರಕ್ಷಣ ಬಿರುದು ಧರಸಿಹೆ ನಿತ್ಯ
ಭರದಿ ಶಾಂತಿನೀಡೋ ಚರಣಕ್ಕೆ ಶರಣು ೧೮

ಕ್ಷಾಮಡಾಮರ ಕಳೆಯೆ ಸುವೃಷ್ಟಿಯ ಕರೆವೆ
ಕಾಮಿತಾರ್ಥದ ಕಾಮಧೇನು ಸ್ವಾಮಿ ತಾಯಿತಂದೆ ೧೯

ನಿಜದಿ ಪಾದವ ಪಿಡದೆ ಚಕ್ರಧರ ಚಕ್ರಧರ
ಭಜಿಪ ಭಕ್ತರ ಪಾಲ ನರಸಿಂಹ ನರಸಿಂಹ ೨೦

ಕ್ಷೇಮಕರಗರುಡನೇ ಧ್ವಜನು ವಾಹನನು
ಭೀಮ ಹನುಮ ಪ್ರೇಮ ಹೆಜ್ಜಾಜಿಶ್ಯಾಮ ಸ್ವಾಮಿ ೨೧

೩೬೯

ಪರಮಾತ್ಮನೆ ಪರಿಪೂರ್ಣನೆ ವರವೇಂಕಟರಮಣನೆ ರಾಮ ಪ

ಪೊರೆಯೋ ಸದಾ ಭಕ್ತ ಸುಪ್ರೇಮ ಅ.ಪ

ನಿತ್ಯತೃಪ್ತ ನಿರ್ಮಲಾತ್ಮ ಸತ್ಯಮೂರ್ತಿ ಷಡ್ಗುಣಭರಿತ
ಭೃತ್ಯವರ್ಗ ಸಂರಕ್ಷಣ ಶಕ್ತ ಪ್ರತ್ಯಕ್ಷ ಪಾವನ ಚರಿತ ೧

ನಿನ್ನ ಮಹಿಮೆಯನ್ನು ಪೊಗಳೆ ಪನ್ನಗೇಶನಿಂದಲಸದಳ
ಇನ್ನು ನಾನು ಪೊಗಳಲಪ್ಪನೆ ಸನ್ನುತಾಂಗ ಸದಯರಂಗ ೨

ಮುನಿಗಳಿಂದ ಪೂಜೆಗೊಂಬ ಘನಗುಣಾತ್ಮ ನಿನ್ನ ಯಾಜಿಪೆ
ಅಣುಗನಿಂದಲಾಗಲಹುದೆ ತನುಮನ ಪೊರೆ ಆನಂದ ೩

ಉಣ್ಣಲಿಡಲಿದೆಲ್ಲ ನಿನ್ನದೊ ಇನ್ನದೇನ ತಂದು ಕೊಡಲೊ
ಮನ್ನಿಸುವುದೊ ಹೆಜ್ಜಾಜಿಯ ಚನ್ನಕೇಶವ ೪

(ಆ) ಲಕ್ಷ್ಮೀ ಸ್ತುತಿಗಳು

೩೭೦

ಅಮ್ಮಾ ನೀನೆಮ್ಮ ಮನೆಯಲಿಹುದಮ್ಮಾ
ನಮ್ಮಮ್ಮ ಶ್ರೀಲಕ್ಷ್ಮೀದೇವಮ್ಮ ನಿತ್ಯ ಪ

ನಮ್ಮಯ್ಯನೊಡನೆ ಸುಭಾಷಿಸುತಲಿ
ಸಮ್ಮಾನದಿ ಮುಖದಿಂ ನಲಿದಾಡುತಾ ಅ.ಪ

ಮಕ್ಕಳೆಂದೆಮ್ಮ ನಲಿಸುತ ಒಲಿಸುತ
ಸಕ್ಕರೆ ಸಮಿಗುಂಮಿಗಲಹ ಮಾತುಗ
ಳಕ್ಕರದಾಡುತ ಶುಭಸಂಪದಗಳ
ನಕ್ರೂರಾರ್ಚಿತೆ ಕೊಡುತ ಮೋದದಿಂ ೧

ನೀನಿರುವ ಮನೆಯು ಶೋಭಿಸುತಿಹುದು
ತಾನೇತಾ ಮಂಗಳ ನೆಲೆಸಿಹುದು
ಸಾನುರಾಗದಿಂ ಸರ್ವರ ಜನನಿಯೆ
ನಾನಿನ್ನಾದರದ ಪ್ರೇಮಸುಪುತ್ರನು ೨

ನಿತ್ಯಾರಾಧನೆಗನುಕೂಲಗಳಂ
ಸತ್ಯಧರ್ಮಗಳ ಬಿಡದಾಚರಿಪುದ
ಸ್ತುತ್ಯತದಿ ಸಮಾರಾಧನ ವೆಸಗುನವ
ಅತ್ಯಾನಂದದ ಸೌಭಾಗ್ಯವಿತ್ತು ೩

ಸವಿ ಸವಿಭಕ್ಷ್ಯಗಳನುಗೊಳಿಸುತ್ತ
ಸುವಿಮಲ ಮಂಗಲ ದ್ರವ್ಯಸುಪುಷ್ಪವ
ಸುವಾಸಿನಿಯರಿಗೂ ಸದಭಕ್ತರಿಗುಂ
ಸುವರ್ಣಭಾಜನದೀಯುವುದಿತ್ತು ೪

ಹಾಲು ಹಣ್ಣು ಮಧು ಮಧುರದ ಮನೆಯಂ
ಶ್ರೀಯೋಗಗಾನ ಧ್ಯಾನದ ನೆಲೆಯ
ಬಾಲರ ಲೀಲೆಯ ಲಾಲನ ಪಾಲನ
ಕಾಲವೆಲ್ಲ ಸೊಗನಗೆ ಮೊಗನೆರೆಯಲಿ ೫

ಭೃಗುಸುತೆ ಕ್ಷೀರಸಾಗರಜಾತೆ
ಭಗವತಿ ಭಾಗ್ಯದಾತೆ ಅಮೃತ
ಮಂಗಳಸುಂದರಿ ಚಂದ್ರಸಹೋದರಿ
ಅಗಲದೆ ಹರಿವಕ್ಷಸ್ಥಲಸ್ಥಿತೇ ೬

ಸುವರ್ಣವರ್ಣೆ ಕಮಲಸುಚರಣೆ
ಭುವಿಸುರ ಪೂಜಿತೆ ಕಲ್ಪಲತೆ
ಭವ ಭವಹಾರಿಣೆ ಭಕ್ತೋದ್ಧಾರಿಣೆ
ದಿವಿರಾಜವರದೆ ೭

ಶ್ರೀಕರ ಸಾತ್ವಿಕ ಸುಲಲಿತರಿಂದ
ನಾಕಿಗರೆಂಬೊ ಬಂಧುಗಳೊಡನೆ
ಜೋಕೆಯ ಮಕ್ಕಳ ವಿವಾಹಗೈದು
ಸಾಕಾರ ಸಂಸಾರ ಸುಖನಿಧಿ ಎನಿಸು ೮

ಚಪ್ಪರ ತೋರಣ ಮೇಲ್ಕಟ್ಟುಗಳಿಂ
ದೊಪ್ಪುವ ಬಗೆಬಗೆ ರಂಗವಲಿಗಳಿಂ
ದಿಪ್ಪಾಸಾಗರ ಮಂಗಳ ವಾದ್ಯಂಗ
ಳಪ್ಪ ಸದ್ಗೃಹವ ಮಾಡುತ ಮಮತೆಯಿಂ ೯

ಅಪ್ರತಿಮ ರತ್ನಪೀಠವನಿಟ್ಟು
ತುಪ್ಪದ ನಂದಾದೀವಿಗೆ ಹಚ್ಚಿ
ಅಪ್ರಮೇಯನೋಡನಿಪ್ಪ ನಿನ್ನ
ಸುಪ್ರೀತಿಯೊಳಾಂ ಪೂಜಿಪುದೀಯತ ೧೦

ಪರಿಮಳ ತೈಲದಭ್ಯಂಜನದಿಂ
ಸುರಭೀತೊಯ ಸ್ನಾವನಗೈದು
ಹರಿದ್ರಾಕುಂಕುಮ ರತ್ನ ಕಿರೀಟವು
ಸರಪೀತಾಂಬರ ಕಮಲವ ಧರಿಸಿ ೧೧

ನರುಗುಂಪಿನ ಶ್ರೀಗಂಧದ ಲೇಪ
ಪರಿಪರಿ ಘಮ ಘಮ ಸುಗಂಧ ಧೂಪ
ಪರಮ ಪ್ರಕಾಶದ ಮಂಗಳ ದೀಪ
ಸಿರಿಹರಿ ನಿಮ್ಮಯ ದಿವ್ಯ ಸ್ವರೂಪ ೧೨

ಬಗೆ ಬಗೆ ಭಕ್ಷ್ಯವು ಕ್ಷೀರಾಜ್ಯಗಳಂ
ಹಗಲಿರುಳುಂ ಫಲತಾಂಬೂಲಗಳಂ
ನಿಗಮ ಸ್ತುತಿಕೈಗೊಳ್ಳುತ ಪಿಯೆ ನೀ
ನಗಲದೆ ಸವಿಯುತ ಸಂತೋಷದಿಂದ ೧೩

ಜಯ ಜಯ ಕರ್ಪೂರಾರತಿಮಾತೆ
ನಯದಿಂ ಕುಸುಮಾಂಜಲಿಯಖ್ಯಾತೆ
ದಯೆಯಿಂ ಭಾವಭಯ ಹರಿಸಾಪೂತೆ
ಜಯ ಜಯ ಶ್ರೀಕೇಶವ ಸಂಪ್ರೀತೆ ೧೪

ವಿಧಿರಮಾತೇ ಶ್ರೋಣಿತ ಚರಿತೆ
ಬುಧಜನಪಾಲೆ ಕೃಪಾಲಪಾಲೆ
ಮುದದಿಂ ಪಾಲಿಸು ಬಾಳಿನಲಿಡುತೆ
ಹೃದಯನ್ನುತೆ ಜಾಜೀಶ ಸಹಿತೆ ೧೫

ಅಗಣಿತ ಸುಗುಣೆ ಕರುಣಾಭರಣೆ
ಜಗದೋದ್ಧಾರೆ ಜಯಜಯತಾರೆ
ಯುಗಪದಕೀಗಲೆ ಮುಡಿಯಿಟ್ಟಿರುವೆ
ಮಗುವಾದೆನ್ನಂ ಮಡಿಲೊಳಗಿಡು ನೀಂ ೧೬

೩೭೧

ಪಾಲಿಸೆನ್ನ ಪದುಮಾ ರಮಾಮಣಿದೇವಿ ಪ

ಕ್ಷೀರಸಾಗರಾತ್ಮಜಾತೆ ಸುಪ್ರಖ್ಯಾತೆ
ನಾರದನುತಗೀತೆ ಸಮಿಜಗನ್ಮಾತೆ ಅ.ಪ

ಅಂಬುಜವಾಸಿನಿ ಅಂಬುಜೋದರ ರಾಣಿ
ಅಂಬುಜಾಸನ ಜನನಿ ಸಂಭ್ರಮದ ಕಣಿ ೧

ಅಕಳಂಕ ಮಾತೆ ಸಕಲ ಪ್ರತಾಪೆ
ನಿಖಿಲಾತ್ಮಭರಿತೆ ಜಾಜೀ ಪಟ್ಟಣವಾಸೇ ೨

ಇ. ಆಏಳ್ವರಾಚಾರ್ಯ ಸ್ತುತಿಗಳು

೩೭೨

೧. ವಿಶ್ವಕ್ಸೇನ ಪ್ರಾರ್ಥನೆ

ಶ್ರೀನಾಥಜ್ಞಾಪ್ರಕಾರ ನಡೆಯುವ ಸೂತ್ರವತೀರಮಣ
ಮಾನಿತ ಪ್ರದಾನ ಮಂತ್ರೀ ಪೂಜಿಪೆ ವಿಘ್ನೇಶಾ ನಮಿಪೆ ಪ

ಬಿಳಿಯುಡೆ ತುಂಬಿದ ತಿಂಗಳ ಬೆಳಗಾ
ತೊಳಗುವ ನಾಲಕು ತೋಳುಗಳ
ಒಲಿದಿಹ ನಗೆಮೋಗ ವಿಷ್ಣು ನೆನೆವೆ
ಸುಲಭದಿ ಕಾರ್ಯವ ಗೈಸುವನೆ ೧

ದ್ವಿರದವಕ್ತ್ರತಾ ಮೊದಲಾಗಿರುವ
ಪರಿಜನ ಸೂರ್ವರಿಂದೊಪ್ಪಿರುವೇ
ಪರಿಪರಿ ತಡೆಗಳ ತರಿದೋಡಿಸುತ
ಪೊರೆ ವಿಶ್ವಕ್ಸೇನಾಶ್ರಿತ ನಾನು ೨

ಬಿಡುಗಣ್ಣರ ಬೆಡಗಿನ ಒಡಲುಳ್ಳ
ಕುಡಿನೋಟದ ತಾವರೆಗಣ್ಣ
ಪಿಡಿದಹ ಶಂಖ ಚಕ್ರ ಗದಾಯುಧ
ಒಡೆಯ ಮುಕುಂದ ದ್ವಾರನಿಲಯನೇ ೩

ಬಯಕೆಯ ಪಡೆಯಲು ಬೊಮ್ಮ ಭವಸುರರು
ನಯದಿಂ ಮೊದಲಾರಾಧಿಪರು
ಭಯ ನಿವಾರಕ ಶುಭ ಫಲದಾಯಕ
ಜಯಜಾಜೀಶ್ವರ ಸೇನಾಪತಿಯೇ

೩೭೩

೨. ನಮ್ಮಾಳ್ವಾರ್

ವಕುಳಾಭರಣನೆ ಶರಣೆಂಬೆ
ಸಕಲ ಬಂಧು ನೀ ಸಲಹೆಂಬ ಪ

ನಿಖಿಲ ಲೋಕಿಗರ ಶಿಶುನಡೆನೂಕಿದೆ
ಅಕಳಂಕನೆ ಶಠಗೋಪ ನೀನಾದೆ ಅ.ಪ

ನಾಥನಾಯಕಿಯೆ ಕಾರಿಕುಮಾರ
ಪೂತನೆ ಸೇನಾಪತಿಯವತಾರ
ಪಾತಕಹರ ತಾಮ್ರಪರ್ಣಿತೀರ
ಕೀರ್ತಿ ಪಡೆದ ಸುರಪೂಜ್ಯನುದಾರ ೧

ಪದುಮ ಪವಿತ್ರನಂದದ ಪ್ರಭೆನೋಡಿ
ಮಧುರಕವಿಯು ಬರೆ ಮುದಗೂಡಿ
ಅದುಭುತ ಮಂತ್ರವನೊರೆದೆ ಹರಿಯಪಾಡಿ
ಸದಮಲ ಸೇವಕನಲಿ ಮನೆಮಾಡಿ ೨

ಹದಿನಾರು ವರುಷಾಹಾರವಿಲ್ಲದೆ
ಬದಿರಾಂಧ ಮೂಕನಾದ ಮುನಿ
ವಿಧಿ ಪಿತನದುಭುತಧ್ಯಾನ ಮೈಗೂಡಿ
ಸುಧೀಂದ್ರ ಶುಭದ ಅಮೃತಪದ ೩

ನಾಥಗೊಲಿದು ತಿರುವಾಯ್ಮೊಳಿಯನು
ಪ್ರೀತಿಯೊಳುಪದೇಶವ ಗೈದು
ಪಾತಕ ಹರಿಸುತ ಪರಿಸರ ಪೊರೆಯುತ
ದಾತಾರಂ ಸುಖದಾತಾರಂ ೪

ಮಧುರಾಪೀಠವು ನೀರೊಳು ಮುಳುಗಲು
ವಿಧಿಯಿಲ್ಲದೆ ಪಂಡಿತರೊರಲಿ
ಅಧಿಕರಿಸುತ ತವ ಪದಗಳಿಗೆರಗೆ
ಮಧುರವಾಣಿಯಿಂ ಹಾಡಿದ ೫

ಹತ್ತಾಳ್ವಾರರ ಶರೀರವಾಗಿ
ಪೆತ್ತಿಹ ಪರಮೌದಾರ ಮುನಿ
ಎತ್ತಲು ಹರಿಗುರು ಸರ್ವೋತ್ತಮರೆನು
ತುತ್ತುಮಪದವಿಯ ಮಾರ್ಗವತೋರಿದ ೬

ಆದಿವೈಷ್ಣವ ದೀಕ್ಷಾಚಾರ್ಯ
ವೇದವ ದ್ರಾವಿಡದೊಳು ಪೇಳ್ದೆ
ಶ್ರೀಧರಸನ್ನಿಧಿಯೊಳಗಿದ ಪಠಿಸಲು
ಸಾದರದೊಲಿವಂ ಜಾಜೀಶಂ ೭

೩೭೪

೩. ಎಲ್ಲ ಆಳ್ವಾರರು

ಆಳ್ವಾರ್ ತಿರುವಡಿಗಳೆ ಶರಣೆನ್ನುತ
ಬಾಳ್ವರು ಭಜಿಪುದು ಬಕುತಿಯಲಿ ಪ

ಕೇಳ್ವರು ಕಥೆಗಳ ಮಮತೆಯಿಂದಲಿ
ಮಾಳ್ವರು ಮನೆ ವೈಕುಂಠದಲಿ ಅ.ಪ

ಮೊದಲಿನ ಮೂವರು ಮಾಧವನೆನುತ್ತ
ಪದುಮನಾಭನೊಡನಾಡಿದರು
ಅದುಭುತ ಮಹಿಮಾ ತಿರುಮೊಳಿಶಯ್ಯರ
ಮುದದಿಂ ಶಿವ ಕೊಂಡಾಡಿದನು ೧

ಮಧುರಕವಿಗಳು ನಮ್ಮಾಳ್ವಾರರ
ಪದಗಳ ಪೂಜಿಸಿ ಹಾಡಿದರು
ತದುಪರಿ ತಿರುವಾಯ್ಮೊಳಿಯನು ಅವರಿಂ
ದಧಿಕರಿಸುತ ಹಿತವೆಸಗಿದರು ೨

ಪೆರಿಯಾಳ್ವಾರರು ಹರಿಯನು ಪಾಡುತ
ವರವೇದಕೆ ತಾವ್ ಮೊದಲಿಗರು
ಪರಮಪಾವನೆ ಗೋದಾದೇವಿಯು
ದೊರೆ ಶ್ರೀರಂಗನ ಕೈವಿಡಿದಳ್ ೩

ಪೆರಿಯ ತಿರುಮೊಳಿಯ ತಿರುಮಂಗೈಯ್ಯರು
ತಿರುಪ್ಪಾಣ ವಿಪ್ರನಾರಾಯಣ
ತಿರುವನಂತಪುರದ ಕುಲಶೇಖರರು
ಸಿರಿಯರಸನ ತೇರ ಮಾಡಿದರು ೪

ಪರಮಾತ್ಮನ ಸನ್ನಿಧಿಯಿಂದಲ್ಲಿಗೆ
ತೆರಳುತ ಮಹಿಮೆಯ ತೋರಿದರು

ನಿರುತ ದೇವರೆಡೆ ಪೂಜೆಗೊಂಬರು
ವರಜಾಜೀಶನ ಸೇವಕರು ೫

೩೭೫

೪. ಆಂಡಾಳ್

ಶ್ರೀಗೋದಾದೇವಿ ಶ್ರೀಭೂ ನೀಳಾ ಅಂಡಾಳ್ ದೇವಿ
ಭೋಗಿಶಯನನ ಭಾಗ್ಯದ ರಾಣಿ ಪ

ಸರಿತುಳಸಿಯ ಮೂಲದಳುದಿಸಿದಳೆ
ಪೆರಿಯಾಳ್ವಾರರ ಪ್ರೇಮಕುಮಾರಿ
ಪರಮಾತ್ಮಗೆ ಹೂ ಮುಡಿದು ಮುಡಿಸಿದೆ
ಕರಣತ್ರಯದೊಳಗವನೊಳು ಬೆರೆದೆ ೧

ಧನುರ್ಮಾಸದವ ವ್ರತಾಚರಿಸಿದೆ
ಅನುಮತಿಸಿದ ಗೆಳತಿಯರೊಡಗೂಡಿ
ವಿನಯದಿಂದ ತಿರುಪ್ಪಾವೈ ಪಾಡುತ
ಕನಸೊಳು ಶ್ರೀರಂಗನೊಳು ಕೂಡಿದೆ ೨

ಕಡುತ್ವರೆಯಿಂ ತಿರುಮೊಳಿಯಿಂ ತುತಿಸಿ
ಸಡಗರದಿಂದವನಂ ಕೈವಿಡಿದೇ
ಒಡೆಯನೊಡಲೊಳಗೆ ಎಡೆಯಂ ಪಡೆದೆ
ಪೊಡವೀಶ ಜಾಜಿಕೇಶವನ ಮಡದಿ ೩

೩೭೬

೧. ರಾಮಾನುಜರು

ಆಚಾರ್ಯ ಪ್ರಾಚಾರ್ಯ ಪರಮಾಚಾರ್ಯಾ
ನೀಚತೆ ನೀಗಿಸಿ ನಿನ್ನಂತೆ ಗೈದೇ ಪ

ಸರ್ವಗುರುವೇ ನಮಿಪೆ ಧ್ಯಾನಿಪೆ ಶ್ರೀನಿವಾಸಾ ಅ.ಪ

ಪಾದೋದಕದಿಂ ಪಾವನಗೈದೇ
ಸಾಧು ಸಂಗತಿಗಳ ಸಂತಸದಿ ಪೇಳ್ದೇ ೧

ಭೇದವ ತೊರೆದೇ ವೇದಗಳೊರೆದೇ
ಸಾದರದಿಂ ಸದ್ಬಂಧು ನೀನಾದೇ ೨

ಪಾಪವ ಕಳೆದೇ ಗೋಪ್ಯಗಳುಸುರಿದೆ
ಶ್ರೀಪತಿಮೂರ್ತಿಯ. ಹೃದಯದಿ ತೋರ್ದೆ ೩

ಕೃಪೆಯನ್ನು ತೋರ್ದೆ ಅಪಾರ ಮಹಿಮ
ಉಪಕರಿಸುತ ಎನ್ನ ಉನ್ನತಿಗೆ ತಂದೆ ೪

ಸಂಸಾರಾಂಬುಧಿ ಹಿಂಸೆ ದಾಂಟಿಸಿದೆ
ಹಂಸನೆ ಸಿಂಹ ಕಿಶೋರ ನ್ಯಾಯದಿ ೫

ವಿಪರೀತಮತಿಯನ್ನ ಪರಿಹರಿಸಿದೆ ನೀಂ
ಸುಪಥದಿ ಸುಖದಾನಂದನಿಧಿಯಿತ್ತೇ ೬

ಜಾಜೀಶನಿಗೆ ಪ್ರೇಮಪುತ್ರನು ನೀಂ
ಪೂಜಿಪೆ ಪದಯುಗ ಶರಣನೆ ಕರುಣಿಸು ೭

೩೭೭

ರಾಮಾನುಜಾಚಾರ್ಯ ಮೌನಿವರ್ಯ
ನೇಮದಿಂದಲಿ ಗೈದೆ ನೀಂ ಸ್ವಾಮಿ ಕಾರ್ಯ ಪ

ಆದಿಯೊಳು ನೀನಾದಿಶೇಷನು ಹರಿಶಯ್ಯೆ
ಮೋದಕರ ಪ್ರಹ್ಲಾದ ಎಂದೆನಿಸಿದೆ
ಸೋದರದಿ ಸೌಮಿತ್ರಿ ಸಂಕರ್ಷಣನು ಆದೆ
ನಾಥ ಯಾಮಾನ ಪಥದಿ ಅರಿಗಳನು ಗೆಲ್ದೆ ೧

ಗೀತ ಸೂತ್ರಕೆ ಭಾಷ್ಯಕಾರ ನೀನಾಗಿರುವೆ
ಖ್ಯಾತಿಸಿದೆ ವ್ಯಾಸ ಪರಾಶರರ ಹೆಸರ
ಪೂತ ಆಳುವಾರುಗಳ ಶ್ರೀಸೂಕ್ತಿ ಪ್ರಕಟಿಸಿದೆ
ಮಾತೆವೊಲು ಉಭಯವೇದಗಳ ಪೊರೆದೆ ೨

ನೂರೆಂಟು ತಿರುಪತಿಯ ಯಾತ್ರೆಗಳ ಮಾಡುತ್ತ
ದಾರಿತೋರಿದೆ ಹರಿಯ ಸೇವಿಸುವ ಪರಿಯ
ಪರಮಾರ್ಥಿಕರಾಗಿ ಪರಮವೈಷ್ಣವರಿರಲು
ಸಾರಸುಖ ಪದತೋರ್ದೆ ಯತಿಸಾರ್ವಭೌಮ ೩

ಎಂದೆಂದು ಮರೆಯದ ಕೂರೇಶರಾ ಸಖ್ಯ
ಅಂದು ಬೋಧೆಯ ಕೊಟ್ಟ ಪೂರ್ಣಾರ್ಯರ
ನೊಂದಕಾಲವ ನೆನೆದು ಕಣ್ಣೀರ ಕರೆಯುವೆನು
ತಂದೆ ಗುರುವಿನ ಗುರುವೆ ದೇವಮಾನ್ಯ ೪

ಯಾದವನ ಚೋಳನ ಕೃತ್ರಿಮದ ಕೋಟೆಗಳು
ಮಾಧವನ ಡೆಲ್ಲಿಯಿಂ ಕರೆತಂದುದು
ಬಾಧಿಸದೆ ಬ್ರಹ್ಮಪೀಡೆಗಳು ಓಡಿದುದು
ಈ ಧರೆಯ ಕೀರ್ತಿಗೆ ಮೊದಲಾದವು ೫

ರಾಮಚಂದ್ರನ ಕಾಡವಾಸವಂ ನೆನಪೀವ
ಸ್ವಾಮಿಯರು ಗಿರಿಸೇರ್ದ ಗುರಿ ಎಲ್ಲವೂ
ತಾಮಸರು ಸಾವಿರರ ಒಂದೆ ವಾರದಿ ಗೆಲ್ದ
ಮಾಮೈಮೆ ಯಾರಿಗಿದೆ ಭೋಗಿರಾಜಾ ೬

ಸಿರಿರಂಗ ತಿರುಪತಿ ಕಂಚಿ ಯದುಶೈಲಗಳ
ಪರಮಪದಕೂ ಮಿಗಿಲು ವೈಭವವ ಗೈದೆ
ನಿರುತ ತಮ್ಮವರಿಂಗೆ ಸಕಲ ಪಾಪವ ಸುಟ್ಟು
ಹರಿಯ ಭರವಸೆ ಪಡೆದೆ ಮೋಕ್ಷ ಕೊಡುವಂತೆ ೭

ನಿನ್ನಂತೆ ನಡೆವ ಪ್ರಪನ್ನರೇ ಧನ್ಯರು
ಮನ್ನಣೆಯ ಪಡೆದಿರವ ಶ್ರೀಮಂತರು
ಎನ್ನ ಬಿನ್ನಪ ಕೇಳಿ ನಿನ್ನವನ ಮಾಡಿಕೋ
ಉನ್ನತೋನ್ನತ ಮೂರ್ತಿ ಜಾಜೀಶ ಕೀರ್ತಿ ೮

(ಈ) ಸರ್ವದೇವತಾಸ್ತುತಿಗಳು

೩೭೮

೧. ಶಂಕರ

ಭಾಗವತಾಗ್ರೇಸರಾ ಶಿವಶಂಕರ
ಭೋಗಿಭೂಪ ಭಾಗವತ ಪ್ರಿಯಂಕರ ಪ

ಯೋಗಿ ಹೃತ್ಪದ್ಮಸ್ಥಿತ ಆಗಮನುತ ವಿಶ್ವನಾಥ
ಶ್ರೀಗಣಪತಿ ಷಣ್ಮುಖ ಪಿತ ಭಾಗ್ಯದಾತ ಪ್ರಖ್ಯಾತ ಅ.ಪ

ಬಾಲಚಂದ್ರಶೇಖರ ಹರ ಭವಹರ
ಕಾಲಕಾಲ ಕಲ್ಮಷಹರ ಕರುಣಾಕರ
ಶೂಲಪಾಣಿ ಡಮರುಗಾಕರ ಬಾಲಗೊಲಿದ ಭಸ್ಮಧರ
ಶ್ರೀಲಲಿತಾ ಮನೋಹರ ನೀಲಕಂಠ ಮಹೇಶ್ವರ ೧

ರಾಮನಾಮ ಬೋಧಕ ಭಕ್ತಪ್ರೇರಕ
ಪ್ರೇಮರೂಪ ತ್ರ್ಯಂಬಕ ತ್ರಿಪುರಾಂತಕ
ವಾಮದೇವ ವರಗಿರೀಶ ಕಾಮವೈರಿ ಕೃತ್ತಿವಾಸ
ಶ್ರೀಮಜ್ಜಾಜಿಕೇಶವ ಸ್ವಾಮಿ ಭಜನದಾಯಕವರ ೨

೩೭೯

೨. ಶಾರದೆ

ಸರಸ್ವತಿ ಭಾರತಿ ಭಗವತಿ ಪ

ಸಿರಿಸೊಸೆ ಪಾವನೆ ಸುರನುತ ಚರಣೆ ಅ.ಪ

ಮಧುರ ಸಂಭಾಷಿಣಿ ವಿಧಿವರರಾಣಿ
ಬುಧಜನ ತೋಷಿಣಿ ವಿಧುಮುಖಿಜನನಿ ೧

ಧವಳಸುಗಾತ್ರೆ ಕಮಲನೇತ್ರೆ
ಕವಿಜನ ಸ್ತೋತ್ರೆ ದಿವಿಜೆ ಪವಿತ್ರ ೨

ರಾಜರಾಜಾರ್ಚಿತೆ ರಾಜಿಪಸುಚರಿತೆ
ಮೂಜಗಭರಿತೆ ಜಾಜಿ ಪಟ್ಟಣವಾಸೆ ೩

೩೮೦

೩. ನವಗ್ರಹ

ಸಕಲಗ್ರಹಬಲವು ನೀನೆ ಶ್ರೀನಿವಾಸ
ಸುಖದಾಯಕನೇ ಅಖಿಲೇಶ್ವರ ಪ

ಆರ್ತರ ಸಲಹುವ ಮಾರ್ತಂಡ ಬಲವು
ಕೀರ್ತಿಯನೀಯುವ ಚಂದ್ರನ ಬಲವು
ಪಾರ್ಥಿವರಗೈವ ಭೂ ಪುತ್ರ ಬಲವು ೧

ವಿದ್ಯಾದಾಯಕನಾದ ಬುಧನ ಬಲ
ಅದ್ಭುತ ಭಯಹರ ಶ್ರೀಗುರುವೊಲವು
ಶುದ್ಧ ಸತ್ವದ ಶುಕ್ರನ ನಲಿವು ೨

ಅನವರತವು ಶುಭದಾಯಕ ಶನಿಫಲ
ಅನಿಷ್ಟಹಾರಕ ರಾಹುಕೇತು ಬಲ
ಅನುದಿನ ಧ್ಯಾನಿಪೆ ಜಾಜೀಕೇಶವ ೩

೩೮೧

೪. ಧನ್ವಂತರಿ

ಶ್ರೀಪತಿಯೆ ಧನ್ವಂತರಿಯ ರೂಪವಾಂತೆ
ತಾಪತ್ರಯವ ಹರಿಸೆ ಭಕ್ತರ್ಗೆ ನೋಂತೆ ಪ

ಸುರರು ದಾನವರೆಲ್ಲ ಕ್ಷೀರ ಸಾಗರವನ್ನು
ವರಗಿರಿ ಮಂದರವ ಕಡೆಗೋಲ ಮಾಡಿ
ಧರಣಿಧರ ವಾಸುಕಿಯ ಹಗ್ಗಗೈಯುತ ಮಥಿಸೆ
ಸಿರಿರತ್ನ ಧೇನು ತರು ಲಕ್ಷ್ಮಿಯರು ಬರಲು ೧

ಶ್ರೀರಮಣಿ ಕೌಸ್ತುಭಗಳನ್ನು ನೀಧರಿಸುತ್ತ
ಕಾರುಣ್ಯದಿಂ ಕಾಮಧೇನುವಂ ಮುನಿಗಳಿಗೆ
ಪಾರಿಜಾತಸ್ವರ್ಗ ಸಂಪಾದವಗೈಯುತ್ತ
ಸಾರಸೌಖ್ಯದ ಸುಧಾರಕನಾಗಿ ತೋರ್ದೆ ೨

ಅಮರರಿಗೆ ನೀನೊಲಿಯತಮೃತವನು ಕರೆದಿತ್ತು
ಕಮಲ ಸರಸಲಿಹೆ ಆಯುರ್ವೇದವನ್ನೊರೆದೆ
ಕಮಲಲೋಚನ ಕೃಪೆಯೊಳಾರೋಗ್ಯಗಳ
ನಮಗೀಯುತಾಬಾಲವೃದ್ಧರಂ ಸಲಹೊ ೩

ದೇವ ನೂತನಪುರಿಯ ದೇವ ಶ್ರೀಮೂರುತಿಯ
ಭಾವದಿಂ ಸನ್ನಿಧಿಯೊಳಾನಿನ್ನನುತಿಸೀ
ಕಾವುದೆನುತಲಿ ಸತತ ಶ್ರೀದ ನಮಿಸುವೆ ಮಹಿತ
ಜೀವ ಜೀವರಿಗೆಲ್ಲ ಸಿರಿಯೀವನಲ್ಲ ೪

ಜಯಮಕ್ಕೆ ಜಾಜೀಶ ಚನ್ನಕೇಶವನಡಿಗೆ
ಜಯಮಕ್ಕೆ ವೈದ್ಯೇಶನಾಮಾಯಕೆ
ಜಯವುತಾನಾಗಲೀ ಓಷಧೀಲತೆಗಳಿಗೆ
ಜಯ ಜಯವು ಗೋಗಳಿಗೆ ವೈದ್ಯವೃಂದಕ್ಕೆ ೫

(ಉ) ಆತ್ಮನಿವೇದನಾ ಕೃತಿಗಳು

೩೮೨

ಅಭಯ ಪ್ರದಾಯಕ ಶ್ರೀರಮೇಶ
ಉಭಯವೇದ ಪೂಜಿತ ಪಾದಪದ್ಮ ಪ

ಅನುಮಾನಿಸದಿರೊ ಶಿಶುವಾದೆನ್ನೊಳು
ಏನತಿ ಕೋಪವೂ ಅಪ್ರಮೇಯದೇವ ಅ.ಪ

ಅನ್ನ ವಸ್ತ್ರಗಳನೀವುದೆನಗೆ ಯೆಂದು
ಅನುನಯದಿ ಬಂದು ಬೇಡಿಕೊಂಡೆನ್ನೈ
ಯನ್ನ ತಂದೆ ಜಾಜೀಶನೆಂದು ಬಂದೆನಲ್ಲದೆ ೧

ಇನ್ನು ಕಾಯ್ವರಾರಿರುವರಯ್ಯಾ
ಮನ್ನಿಸುತ್ತಾ ನೀ ನಿನ್ನಕಂದನಾ
ಬಿನ್ನಪವನು ಕೇಳು ಚೆನ್ನಕೇಶವಾ ೨

೩೮೩

ಇಂದು ದಯದಿ ಸಂದರ್ಶನವಿತ್ತೆಯಾ
ಇಂದಿರಾಧವಾ ದೇವಾ ಪ

ಸುಂದರಾಂಗ ರಂಗ ಮುಂದೆ
ಬಂದುನಿಂದೆ ಬೆಳಕಿನೊಳ್ ನಭದೆ ಅ.ಪ

ವಿಭವದಿರ ರಥದಿ ಹಿತದಿ
ಶುಭದ ಶ್ರೀಭೂನೀಳಾಸಹಿತ
ಅಭಯವ ನೀಯುತಾ ನಾಥಾ ೧

ಭಕ್ತ ಬೃಂದ ಗೈವ ಸೇವೆಯಾ
ಸಕ್ತಿಯಂ ಪಡೆದು ದೃಢದಿ
ನಿತ್ಯಗಾರುಡ ಸೂರ‍್ಯಮಂಡಲ ಡೋಲೋತ್ಸವದಿ ೨

ಮುದಗೆರೆರಂಗ ವೊರಿದಗೆನಗೆ
ಮಹಿಮೆತೋರುತಾ ನಿರುತ
ಪೊರೆವುದು ಜಾಜೀನಾಥ ೩

೩೮೩ ಅ

ಎನ್ನ ತಂದೆ ಕಾಯೋ ಚನ್ನಕೇಶವ ಪ

ನಿನ್ನ ಮೆಚ್ಚಿಸುವುದೆನ್ನಿಂದಾಗದೊ ಸಂ
ಪನ್ನರಾರ್ತಿಹರ ಮಾಮಾನೋಹರ ಅ.ಪ

ಶ್ರವಣ ಕೀರ್ತನಾ ಸ್ಮರಣ ಸೇವೆಯ
ಸುವಂದನಾರ್ಚನೆ ದಾಸ್ಯ ಸಖ್ಯಗಳು
ಕುವಲಯಾಕ್ಷಗಾತ್ಮಾರ್ಪಣೆಗೈ–
ವಿವನು ಕಾಣೆನ್ನೈ ಜಾಜೀಶ ಶ್ರೀಶ ೧

೩೮೪

ಏಕೆ ದಯ ಬಾರದೋ ಶ್ರೀಕಾಂತ ನಿನಗೆ
ಲೋಕನಾಯಕ ಎಷ್ಟು ಬೇಡಲೋ ಪ

ಜೋಕೆಯಿಂ ಸಾಕುವರದಾರೋ ಅ.ಪ

ನಿನ್ನ ಮನವಿನ್ನೆಷ್ಟು ಕಠಿಣವೋ
ಮುನ್ನ ಮಾರುತಿಯೊಡನೆ ಮಸಗಿದೆ
ಎನ್ನೊಳಗೆ ನಿರ್ದಯೆಯೊಳಿರುವುದು
ಚೆನ್ನವಲ್ಲವೊ ಇನ್ನು ಚೆನ್ನಿಗ ೧

ಕಾಣೆನೇ ಸುಧನ್ವನಂ ಕೊಲೆ
ಜಾಣ ತನವನು ತೋರ್ದನಿನ್ನನು
ಬಾಣ ತ್ರಾಣವನಣುಗನೆನ್ನೊಳು
ಮಾಣು ಶಿವಧನುಭಂಗನಿಪುಣ ೨

ಮಕ್ಕಳನು ಹಡೆದವರು ಒಮ್ಮನ
ದಕ್ಕರೆಯ ಬೀರುತ್ತ ಸಲಹರೆ
ಮಕ್ಕಳಾಟಿಕೆ ಮಾಡುವೊಡೆ ನೀ
ದಕ್ಕುವರೆ ನಿನ್ನಡಿಯ ದಾಸರು ೩

ಸರ್ವಶಕ್ತನು ಆದರೇಂ ಫಲ
ಸರ್ವದಾ ಭಕ್ತರಿಗೆ ಕಷ್ಟವೆ
ನಿರ್ವಿಕಲ್ಪನೆ ಮರ್ಮವೇತಕೆ
ಧರ್ಮವ್ರತ ಪೊರೆ ಜಾಜಿಕೇಶವ ೪

೩೮೫

ಏನು ಧನ್ಯನೋ ನಾನೇನು ಮಾನ್ಯನೋ ಪ

ದೀನಪಾಲಗಿರಿಯ ಪರಮಕರುಣಾನಿಧಿಯ ಕನಸೊಳ ಕಂಡೆನು ಅ.ಪ

ಬಾಲನಾಗಿ ಮುದ್ದುಮುಖದೆ ಶ್ರೀಲತಾಂಗಿಯೊಡನೆಬಂದು
ಲೋಲತೆಯಿಂ ಮುಗುಳುನಗೆಯ ಲೀಲೆಯನ್ನು ತೋರಿಸಿದನ ೧

ನಿನ್ನ ತಂದೆ ತಾಯ್ಗಳಾರು ಎನ್ನಲಾಗ ನೀನುಪಿತನು
ಎನ್ನ ತಾಯಿಜಗನ್ಮಾತೆ ಸನ್ನುತಕೇಳ್ ಪ್ರವರವೆಂದೆ ೨

ದುರಿತದೂರ ಶ್ರೀನಿವಾಸ ಶರಣಜನರ ಪೊರೆವ ತ್ರಾಣ
ನಿರುಪಮಗುಣ ಜಾಜೀಶನಿಗೆ ಕರವ ಮುಗಿದು ಧ್ಯಾನಿಸಿದೆನು ೩

೩೮೬

ಕಂತುಜನಕ ನರಪಂತವೇನಿದು ಪ

ಮಂದರೋದ್ಧರ ವಂದಿಸುವೇ ಧೀರ
ಸುಂದರಾಂಗ ಗೋವಿಂದ ಪಾಲಿಸಯ್ಯ ೧

ಮಾರಸುಂದರ ಘೋರ ದುರಿತದೂರ
ಸಾರನುಗುಣಪೂರ ಪೂಜಿಪೆ ಕೇಶವ ೨

ಈ ಜಗದೊಳು ರಾಜಿಸುತ್ತಿರುವ
ಜಾಜೀಶ್ವರ ದೇವ ಮಾಜದೆನ್ನ ಪೊರೆ ೩

೩೮೭

ಕಷ್ಟಪಡಲಾರೆನೋ ಸೃಷ್ಟೀಶ ಶ್ರೀಶಾ
ದುಷ್ಟದಮನ ದೀನವತ್ಸಲ ನಾರಾಯಣ ಪ

ಮಡದಿ ಮಕ್ಕಳುಮನೆ ಒಡಲು ಕ್ಷಣಗಳು
ಬಿಡದೆ ಬಾಧಿಸೆ ನಿನ್ನ ಅಡಿಯಕಾಣಿಸದಿವೆ
ಕೆಡಿಪ ದುರಾಶೆಯ ಸುಡುತಲಿ ನೂಕು
ದುಡುಕುವ ಮನವಂ ಸಡಲಿಸಬೇಕು
ಕಡುಮುದದಿಂದಲಿ ಕಾಯುತ ಸಾಕು
ಒಡೆಯ ಪರಾತ್ಪರ ಪರಮ ಪರಾಕು ೧

ಲೋಕಿಗರೊಳು ನಾನನೇಕದುಶ್ಚರ್ಯೆಯ ವಿ–
ವೇಕವಿಲ್ಲದೆ ಮಾಡಿ ಕಾಕುಮನುಜನಾದೆ
ಘೂಕದ ಪರಿಯೀ ಭವಸಂಸಾರ
ನಾಕವಾದರೂ ಬಹು ನಿಸ್ಸಾರ
ಜೋಕೆಯೊಳಿದಬಿಟ್ಟು ಒಟ್ಟು ಬಂದನೆ ತೋರಾ
ಶೋಕಸಾಗರವಾ ಶೋಷಿಪಶೂರ ೨

ಇಷ್ಟ ಮೂರುತಿ ನಿನ್ನ ನಿಷ್ಠೆಯಿಂ ಕಾಣುವೆ
ಎಷ್ಟು ಮೊರೆಯಿಟ್ಟರೂ ದೃಷ್ಟಿಸದಿರುವೇ
ಅಷ್ಟಮದಗಳನಿತಿಷ್ಟೂ ನಿಲ್ಲವೋ
ಭ್ರಷ್ಟಗುಣಗಳ ನಿಷ್ಠುರಗೈವುದೋ
ವಿಷ್ಣು ಶ್ರೇಷ್ಠಪದ ಕೊಟ್ಟು ಕರುಣಿಸೋ
ಕೃಷ್ಣ ಕೃಪಾಳು ಹೆಜ್ಜಾಜೀಶಾ ೩

೩೮೮

ಕಾಮದೇವ ನೀನೆಂದು ನಂಬಿದೆ
ಆವಾವುದೆನಗಾಗಬೇಕೊ ಕಾಣೆ ಪ

ಈವುದೆಲ್ಲವಿತ್ತು ಪದವಿ ಪಾಲಿಸಯ್ಯ ಅ.ಪ

ಶರಣೆನ್ನುವರ ದುರಿತಹರನೆ
ಹರಿಯೆ ಹಸ್ತ ನೀಡಿ ಕಾಪಾಡುವ್ವೆ
ಪರಮ ಕೃಪಾಳುವು ನೀನಲ್ಲವೆ
ನರರ ಜಾಜಿಪಟ್ಟಣವಾಸ ಶ್ರೀನಿವಾಸ ೧

೩೮೯

ಕೈಬಿಡದೆ ಕಾಪಾಡು ಕರುಣಾಳು ಹರಿಯೇ
ನಾಬಿಡದೆ ನಿನ್ನಡಿಯ ಮೊರೆಹೊಕ್ಕೆ ದೊರೆಯೇ ಪ

ಎಲ್ಲಿನೋಡಿದರಲ್ಲಿ ನಿನ್ನ ಮೂರ್ತಿಯ ತೋರಿ
ಎಲ್ಲಕಾಲಗಳೊಳಗು ಭಜನೆ ಬಲಿಸಿ
ಉಲ್ಲಸದಿ ಕಾರ್ಯಗಳೊಳೆಲ್ಲ ಸೇವೆಯಗೈಸಿ
ನಿಲ್ಲದೆಯ ನೀನಂತ್ಯಕೊದಗು ಸಂತೈಸಿ ೧

ಧನ್ಯ ಭಕ್ತರೊಳಾಡಿ ಚನ್ನಚರಿತೆಯ ಪಾಡಿ
ಉನ್ನತೋತ್ಸವಗಳನು ನೋಡಿ ನೋಡಿ
ಯನ್ನ ಮನಕಿನ್ನೊಂದ ತೋರಿಸದೆಯೆ ಸಂ
ಪನ್ನ ಪದಯುಗಪೂಜೆ ಕೊಡು ಮುನ್ನ ೨

ಘನಜಾಜಿ ಪಟ್ಟಣವಾಸ ಇನಕರ ಪ್ರಭುಶ್ರೀಶ
ವನಜಸಂಭವನಯ್ಯ ವರದ ಜೀಯ
ಅನುನಯದಿ ಬೇಡುವೆನು ನಾನಂಬೆನನ್ಯರನು
ತನಯನೊಳು ಕನಿಕರಿಸು ನಿನ್ನಡಿಯೊಳಿರಿಸು ೩

೩೯೦

ಕೈಮುಗಿದು ಕೇಳಿಕೊಂಬೆ ಕರುಣಾಸಾಗರ ಶ್ರೀಕರ ಪ

ಶ್ರೀಮನೋಹರ ಭಾವಿಸುತ್ತ ಭಕ್ತಿಯೀವುದೈ ಶುಭಕರ ಅ.ಪ

ನಿನ್ನ ಸುಂದರ ಮೂರ್ತಿಯ ತೋರೋ
ಕಣ್ಣ ತುಂಬ ನೋಡುವೆ
ಚನ್ನ ಪಾದಯುಗಳ ನೀನಿಡು ನಾ
ನನ್ನಿಯಿಂ ನಮಿಪೆ ನಾರಾಯಣ ೧

ಎನ್ನೊಳೆರಡು ಮಾತನಾಡು ಮೃದುನುಡಿ ಕೇಳುವೆ ಸಂ
ಪನ್ನ ಕೃಪಾದೃಷ್ಟಿಯ ನೀಡು ಧನ್ಯನಾಗುವೆ ದೀನಬಂಧು ೨

ಬಾಲಗೋಪಾಲ ಲೀಲೆ ತೋರೋ ನಲಿಯುವೆ ಶ್ರೀಲೋಲ
ಜಾಲ ಮಾಡದೆನ್ನೊಳಾಡೊ ಎತ್ತಿ
ಮುದ್ದಾಡುವೆ ಮುದ್ದು ಕೃಷ್ಣ ೩

ಎನ್ನ ಬಿನ್ನಪವ ಕೇಳು ಜನ್ಮ ಸಾರ್ಥಕವ ಮಾಡು
ಇನ್ನು ಸಾವಕಾಶವೇಕೊ ಜಾಜೀಕೇಶವ ಸುವೈಭವ ೪

೩೯೧

ಕೈಯ ಬಿಡದಿರೋ ನಾರಾಯಣ
ಜೀಯಾ ಕಾಯೆಂದು ಶರಣುಬಂದೆನ್ನ ಪ

ಲೋಕದಂತೆ ನಡೆಯಲೆನುತ
ಬೇಕಾದುದಿಲ್ಲವೆಂದು ತೊಳಲಿ
ಶೋಕಸಾಗರದೊಳಗೆ ಮುಳುಗಿ
ಶ್ರೀಕಾಂತ ನಿನ್ನ ಕಾಣಬೇಕೆಂಬೆನ್ನ ೧

ಹೊಟ್ಟೆ ಬಟ್ಟೆಗಳಿಗೆ ದುಡಿಯ
ಲೆಷ್ಟೆ ಕಷ್ಟಪಟ್ಟು ಬಳಲಿ
ಸೃಷ್ಟಿಪಾಲಕ ಬಾಯಬಿಡುತ
ಇಷ್ಟದೈವವ ಸೇರಬೇಕೆಂಬೆನ್ನ ೨

ಆಶೆಯೆಂಬ ಪಾಶವೆನ್ನ
ಮೋಸದಿಂದ ಬಂಧಿಸಿಹುದು
ಲೇಸಕಾಣೆನು ಜಾಜೀಕೇಶವ
ಪೋಷಿಸೆಂದು ಮರೆಯಹೊಕ್ಕೆನ್ನ ೩

೩೯೨

ಚನ್ನಕೇಶವ ಪನ್ನಗಶಯನ ಪ

ಚನ್ನಪಾದಪೂಜೆಯನ್ನು ಕರುಣಿಸಯ್ಯ ಅ.ಪ

ಸಾಕಲಾರದೆ ನೂಕುತಿರುವೆಯಾ ವಿ
ವೇತಕವೇ ಇದು ಸಾಕು ಸುತನ ಸಲಹು ೧

ದೂರನುಯೋಚಿಸು ದಾರಿಯಬಿಡದೆ
ಸಾರಿಸ್ಮರಿಸುವ ಪಾರುಗಾಣಿಸಯ್ಯ ೨

ಶ್ರೀದೇವಿಯ ಸಾಧುವೇನೊ ಕೇಳು
ಆಧಾರಿಯೇ ಭೇದ ಸರಿಯೆ ಹೇಳು ೩

ತಪ್ಪುಮಾಡದೆ ಇಪ್ಪರಾರೊ ಹರಿ
ಅಪ್ಪುತೆಮ್ಮ ಬಂದು ಒಪ್ಪಿ ಪೊರೆಯೊ ಬಂಧು ೪

ಅಮ್ಮನಾನುಡಿ ಆಲಿಸಂತೆ ನಡಿ
ನೆಮ್ಮದಿಯೊಳಡಿಯಿಟ್ಟು ಯೆನ್ನ ಕೈಪಿಡಿ ೫

ಸುಮನಸಗುಣಾ ಕಮಲಾಕ್ಷದಾ
ಅಮರವಾಣಿಪೇಳು ಅಮಿತಸುಖದ ಬಾಳು ೬

ಆಗಲ್ಯೆಮಗು ಭೋಗ ಭಾಗ್ಯಹೊಗು
ತ್ಯಾಗಮಾಡಿ ಬಾಗಿ ಪಾದಪಿಡಿಯೊ ಯೋಗಿ ೭

ನಂಬಿನಡೆವೆ ಸಂಭ್ರಮದ ಕಣಿ
ಅಂಬುಜೋದರಾನಂದಸಾಗರಾ ನಾಂ ೮

ಜಯ ಜಯ ಜಯ ಮಂಗಳಮಯ
ಭಯನಿವಾರಣ ಭಕ್ತ ಸಂರಕ್ಷಣಾ ೯

ಇದ ಪಾಡುವಾ ಮುದ ಪಡೆಯುವಾ
ಅಧಿನಾಥನೆಡೆ ಸುಧೆಸವಿಯಾವಾ ೧೦

ವಿಧಿಪಿತನ ಸೇವೆ ನಿಧಿಯೆಂದರಿತು
ಬುಧಮಂಡಲಿಯೊಳಧಿಕರಿಸುವಾಂ ೧೧

ಜಾಜೀಶ್ವರಾ ಶ್ಯಾಮಸುಂದರಾ
ರಾಜರಾಜಪೂಜ್ಯ ಸ್ವಾರಾಜ್ಯ ಸಾಮ್ರಾಜ್ಯ ಚನ್ನಕೇಶವಾ ೧೨

೩೯೩

ಜನುಮ ಸಾರ್ಥಕವ ಮಾಡಿಸು ತಂದೇ
ನೆನೆವರ ಕಾವನು ನೀನೆಂದು ಬಂದೇ ಪ

ನಾನಿರುವುದು ಲೌಕಿಕರ ಸಮೂಹ
ಏನ ಗೈವುದೋ ಪ್ರಪಂಚದ ಮೋಹ ೧

ಅಜ್ಞನು ನಾ ನನ್ನದೆಂಬುದ ಬಿಡಿಸು
ಸುಜ್ಞಾನದೀಪ ಕೊಟ್ಟು ಪ್ರಜ್ವಲಿಸು ೨

ಅಜ್ಞನಾ ಯೆನ್ನಪರಾಧಾವ ಕ್ಷಮಿಸು
ವಿಜ್ಞಾಪಿಸಿಕೊಂಬೇ ನೀ ಮನಸ್ಕರಿಸು ೩

ಹಗಲಿರಳು ಯನ್ನ ಹೆಗಲೊಳು ಕುಳಿತು
ಮಿಗಿಲಾಗಿಸು ದಿನ್ನ ಸೇವೆಗಳನಿತು ೪

ನಾಲಗೆ ಮಧ್ಯದಿ ನೀ ನಲಿದಾಡಿ
ಬಾಳುವೆಯೆಲ್ಲವು ಭಜಿಪುದ ಮಾಡಿ ೫

ಕಣ್ಣೆಲ್ಲಿ ಸುಳಿದರೆ ಅಲ್ಲಿನೀ ಕಂಡು
ಉನ್ನತವೈಭವ ತೋರು ಮನಗೊಂಡು ೬

ಜಾಜೀಕೇಶವ ಜಯ ಪದವಿತ್ತು
ರಾಜೀವಾಂಬಕ ಪೊರೆ ಭಾರಪೊತ್ತು ೭

೩೯೪

ಜನ್ಮತಾಳಲಾರೆ ರಾಘವಾ
ಮನ್ಮನೋಜ್ಞಾ ಮನ್ನಿಸಿಲ್ಲಿಗೇ ಪ

ಕಷ್ಟ ಪರಂಪರೆ ಕಳೆಯುವಾ
ಇಷ್ಟಮೂರ್ತಿ ನಿನ್ನ ನೋಡದಾ ೧

ಸಾಧುಗಳು ಸಾಧಿಸುತ್ತಿಹಾ
ವೇದವೇದ್ಯ ಧನ್ಯನಾಗದಾ ೨

ಪ್ರೇಮ ರೂಪಾ ಜಾಜೀಕೇಶವಾ
ಸ್ವಾಮಿನಿನ್ನ ಪಾದಸೇರದಾ ೩

೩೯೫

ತಂದೇ ತೋರದೆಲ್ಲಿರುವ್ಯೆ ಸುಂದರಶ್ರೀ ಮಂದರಧರ
ಹಿಂದು ಮುಂದು ತೋರದೆನಗೆ
ಇಂದೆ ಕುಂದುಗಳನು ಹರಿಸು ಪ

ಕಂದನಮುಂದಕೆ ಬರುತಲಿ ಚಂದವಾದ ನಿನ್ನಯ ಮುಖ
ಚಂದ್ರಮನಂ ತೋರಿ ನೇತ್ರೇಂದ್ರಿಯಕಾನಂದ ಬೀರ್‍ಯೆ ಅ.ಪ

ಶ್ರೀವರ ನಿನ್ನ ಭಕ್ತರ ಭಾವಿಸುತ್ತ ತಪ್ಪ ಕ್ಷಮಿಸಿ
ನೋವಕೊಡದೆ ರಕ್ಷಿಸುವ ಕೃಪಾಳುವು ನೀನ್ಯೆ
ದೇವಕಿನಂದನ ನಿನ್ನಯ ಪಾವನತರ ಪದಪದ್ಮಕೆ
ನಾ ವಿನಯದಿ ನಮಿಸಿ ತಳಿವೆ ಹೆಜ್ಜಾಜಿಕೇಶವಾ
ಓ ವಿಭೀಷಣಹಿತಕರ ಸಾವಕಾಶ ಮಾಡದೆ ನೀ
ಕಾವುದೆನ್ನ ಸಮಯವರಿತು ಸಾಮಗಾನಸನ್ನುತ ೧

ಚಿಟ್ಟೆಸ್ವರಕ್ಕೆ

ಸಿರಿಶ್ರೀರಂಗ ಶೋಭಾಂಗ ಭಜಿಪರ ಭವ ಭಯ ಭಂಗ
ವರಭಕ್ತೇಷ್ಟ ದಾತಾರ ದೈತ್ಯಾರಿ ವೈಕುಂಠ
ಪುರಹರನುತ ಶುಭಗುಣಯುತ
ಪರಮಚರಿತ ನಿರುಪಮಪದ ಕು
ವರ ಧ್ರುವನಿಗೊಲಿದ ದ್ವಿಜನ ಪೊರೆದ ಕರುಣಾ
ಧರಣೀ ಭರಹರಣಾ ಪಾವನಚರಣ ಜಾಜಿಕೇಳುವ ೨

೩೯೬

ದೊರೆಯೆನ್ನನು ಕಾಯ್ಯೆ ಶ್ರೀಚಕ್ರಪಾಣಿ ಪ

ನಿರುತವು ಶರಣೆಂದೆನ್ನುತ ಕೋರುವೆ
ಪರಿಯೊಳುಸೇರೇ ಬಂದಿಹೆ ಕರಪಿಡಿ ಅ.ಪ

ಆಯುರಾರೋಗ್ಯ ಸುಖಸಂಪದಕೊಡುವ ಸೌಭಾಗ್ಯ ಕರ್ತೃವು
ಶ್ರೇಯದ ವಿದ್ಯೆಯ ಕರುಣಿಸ ಪ್ರಭೆಯೊಳು ಸನ್ಮಾನವೀವಾ
ಧ್ಯೇಯನೇ ಭತ್ತಿ ಜ್ಞಾನ ವೈರಾಗ್ಯವನಿತ್ತು ವಿಮುಕ್ತಿ ಕೊಡುವ ಅ
ನ್ಯಾಯದೆ ನಡೆವರ ವ್ಯರ್ಥರಗೈವನು ನೀನ್ಯೆ ಶ್ರೀಶ್ಯಾಮಸುಂದರ ೧

ಮನ್ನರೋಗಕ್ಕೆ ನಿನ್ನ ಪಾದತೀರ್ಥ ಔಷಧವು ಬೇಡ
ಉನ್ನತ ಭಯಕ್ಕೆ ಸುದರ್ಶನ ಸ್ಮರಣೆ ಮಂತ್ರವೇತಕ್ಕೆ
ಇನ್ನಿತರ ಕಷ್ಟಗಳಿಗೆಲ್ಲ ನಿನ್ನ ನಾಮಮಂತ್ರ ಭಜನ
ಚೆನ್ನಪಾದಕೃಪೆ ಇನ್ನೊಂದಗಿಹುದ್ಯೆ ನಾಂ ನಿತ್ಯಸಂತೊಷಿ ೨

ನಿರಾಯಾಸದಿಂ ದಾಸಗಂತ್ಯದಲಿ ಪ್ರಶಾಂತನಾಗಿ
ಹರಿನಾರಾಯಣ ನಾರಾಯಣಯೆಂದು ಕರೆವಂತೆ ಮಾಡಿ
ಹರುಷದಿ ನೋಹರಾಕಾರವ ತೋರಿ ವೈಕುಂಠಕೆನ್ನನು
ಕರುಣದಿ ಕರೆದೊಯ್ ಅಜಪೂಜಿತ ಹೆಜ್ಜಾಜಿಕೇಶವ ೩

೩೯೭

ದ್ವಂದ್ವಾತೀತನ ಮಾಡೋ ನಿರ್ದ್ವಂದ್ವನೆ ಪ

ಸರ್ವಕಾಲದಿ ನೀನೆ ಸರ್ವಸ್ವವೆನ್ನುತ
ಉರ್ವಿಯೊಳಾನಿರ್ಪ ಪರಿತೋರು ದೇವಾ ೧

ಸರ್ವೇಶ ಕರ್ಮಗಳೆಲ್ಲವ ನಿನಗಿತ್ತು
ಗರ್ವವರ್ಜಿತನಾಗಿಹುದನ್ನು ನೀಡೈ ೨

ಈಶ ನೀನೆನ್ನೊಳು ವಾಸಿಸುವವನಾಗಿ
ಭಾಸಿಪುದನು ತೋರು ಜಾಜೀಶಾಶಾ ೩

೩೯೮

ನಾ ಕಣ್ಣ ತುಂಬ ನೋಡಿ ನಲಿವೆನು
ಲೋಕೇಶ ಶ್ರೀ ವೈಕುಂಠನನ್ನು ಪ

ಶರಧಿ ಮಧ್ಯದಲ್ಲಿ ಉರಗಶಯನನಾಗಿ
ನಿರುತ ಲಕ್ಷ್ಮೀತಾ ಚರಣ ಪೊತ್ತುತಿರುವವನ್ನ ೧

ಸಾರಸೋದ್ಭವನಪಾರಲೀಲೆ ನೋಡಿ
ನಾರದ ತುಂಬುರರ ಸಾರಗಾವ ಕೇಳ್ವವನ್ನ ೨

ಗರುಡ ಆಂಜನೇಯರು ಮುಂಗಡೆ
ಕರವ ಮುಗಿದು ತಾ ಸೇವೆ ಗೈಸುವವನ ೩

ಬಿಡದೆ ಭಕ್ತರ ಎಡರುಗಳನು ಹರಿಸಿ
ಒಡನೆ ಕಾಯ್ದಿಹ ಒಡೆಯ ಜಾಜೀಹರಿಯ ೪

೩೯೯

ನಾನೆಂತರಿವೆನೈ ನಿನ್ನಂತರಂಗವ
ಸಾನಂದಗೋವಿಂದ ನೀನಿಂದು ದಯೆದೋರು ಪ

ಆದಿ ಮೂರುತಿಯೆ ನಾನೀದೀನ ನರ
ಭೇದರಹಿತನೇ ಅದರ ಹಾದಿಯರಿಯೆನೊ
ವೇದ ವಂದ್ಯನು ನೀನು ಓದನರಿಯದ ನಾನು
ಸಾಧುರಕ್ಷಕ ಸ್ವಾಮಿ ಭೇದವ ತಿಳಿಸೊ ೧

ಜ್ಞಾನಪ್ರಕಾಶ ನಾ ಮಾನಾಭಿಮಾನಿ
ಮೌನಿರಕ್ಷಕನೇ ಆಂ ಹೀನನಡೆಯವ
ದಾನಿಪರಮಾತ್ಮನು ದೀನ ತಾಪತ್ರಿಯೆನು
ನೀನಮೃತದವನ್ನೆ ನಾನು ಮರ್ತ್ಯನು ೨

ಸರುವಲೋಕೇಶಾ ನಾಪರದೇಶಿಯಹುದೋ
ಸಿರಿದೇವಿಯರಸಾ ದಾಸ ತಿರಿದುಂಬೊತಿರುಕ
ಶರಣಸುಧಾರಕ ಬಿರುದಿನಿಂ ಮೆರೆಯುವ
ವರದ ಜಾಜೀಶ ಪೊರೆ ಶ್ರೀನಿವಾಸ ೩

೪೦೦

ನಾ ಬೇಡುವೆನೋ ನಿನ್ನ ಸೌಭಾಗ್ಯಸಾಗರ
ಶ್ರೀ ಭೂ ನೀಳಾವರ ಭಾಗವತೋದ್ಧಾರ ಪ

ಯಾವಾಗಲು ನಿನ್ನ ಬಳಿಯೊಳು ನಾನಿದ್ದು
ಭಾವಿಸಿ ಕುಶಲದ ಮಾತನಾಡೀ
ದೇವ ನಿನ್ನಯ ಪಾದಯುಗಳವನೊತ್ತುತೆ
ಸೇವಿಸಿ ಸುಖಿಪಂತೆ ಕರುಣಿಸು ಮುರಹರ ೧

ಮುಂಗಡೆ ಕುಣಿ ಕುಣಿದಾಡಿ ಸ್ತೋತ್ರವ ಮಾಡಿ
ಕಂಗಳೊಳಾನಂದಭಾಷ್ಪಗೂಡೀ
ಅಂಗವ ಮರೆತೆನ್ನ ಕಂಠಗದ್ಗದವಪ್ಪ
ಮಂಗಳಕರ ಭಕ್ತಿ ಕೃಪೆ ಮಾಡು ಶ್ರೀರಂಗ ೨

ಹೆಜ್ಜಾಜಿಯ ಚೆನ್ನಕೇಶವ ಮಾಧವ
ಹೆಜ್ಜೆ ಹೆಜ್ಜೆಗೆ ನಿನ್ನ ಸ್ಮರಣೆಯಿತ್ತು
ಸಜ್ಜುಗೊಳಿಸಿ ಎನ್ನ ಹೃದಯಪೀಠದಿ ಕೂಡೊ
ಅರ್ಜುನಸಾರಥಿ ಶ್ರೀಕೃಷ್ಣ ಪರಮಾತ್ಮ ೩

೪೦೧

ನಾರಾಯಣ ನಿನ್ನ ಚರಣ ಸೇವೆಯ ಬಿಟ್ಟು
ಸಾರಸಾಕ್ಷನೆ ಪ್ರಾಣದಿರಲಾರೆ ಕ್ಷಣವೂ ಪ

ದಾರಿಯೆನಗಿದೊಂದೇ ತೋರ್ಪದು ಸುಖನಿಧಿ
ಬಾರಿಬಾರಿಗೂ ಹರಿ ಧ್ಯಾನಾನಂದದೊಳಿಗೆ ಅ.ಪ

ಅನ್ನವಸ್ತ್ರಂಗಳಿಗಾಗಿ ದುಡಿವದೊಂದು
ಚೆನ್ನ ಪುತ್ರರ ರಕ್ಷಣೆಯೊಂದೆಡೆ
ತನ್ನ ಮರ್ಯಾದೆ ಕುಂದುಗಳೆಂಬೊ ವ್ಯಸನದಿ
ಭಿನ್ನಿಸಿ ತಾಪತ್ರಯ ಪಡುತಿರುವಿಲ್ಲಿ ೧

ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ
ಪ್ರೇಮ ಬಾಂಧವರಾಗೆನ್ನನಪ್ಪಿಹರೋ
ಸ್ವಾಮಿ ನೀಯೆನ್ನನವರ ಧಾಳಿಗಿಡದಂತೆ
ಸಾಮಜವರದ ಸಲಹೆಂದು ಸಂತೋಷದಿ ೨

ಭಾಗೀರತಿಪಿತ ಭಾಗವತಪ್ರೀತ
ಯೋಗಿಜನಂಗಳೊಳತಿ ಹಿತನೇ
ಸಾಗರಶಯನನೆ ಭೋಗಿಗಳ ಪುಣ್ಯನೆ
ಬಾಗುವ ಶರಣರ ಬಹುಭಾಗ್ಯನೇ ೩

ನಾನಿಲ್ಲಿಗೆ ಬಂದ ಕಾರಣ ಕಾಣೆನೋ
ದೀನಪಾಲಕ ಕಾರ್ಯಮಾಡಿಸೋಯನ್ನಿಂ
ಏನಾದರು ಮಾಡು ತಪ್ಪಹೊರಿಸಬೇಡ
ಶ್ರೀನಿಧಿ ಹೆಜ್ಜಾಜಿಕೇಶವ ಪಾಲಿಸು ೪

೪೦೨

ನಿಜದಿ ಸುಖಪದ ಕೊಡುವೆಯೋ
ಭಜಕರಿಗೆ ಶುಭದಾಯಿಯೋ ಪ

ತ್ರಿಜನ ಪೂಜೆಯಗೊಂಬೆಯೋ ಅಂ-
ಗಜಜನಕ ಗೋಕಾಯ್ದೆಯೋ ಅ.ಪ

ಸುತನಕೊಂದೇ ಸತಿಯ ತೊರೆದೇ
ಅತಿಯ ದುಃಖವ ನಟಿಸಿದೇ
ಸತತ ಸರ್ವವ್ಯಾಪಿಯೆಂಬರು
ಹಿತನೆ ಕಾಣಿಸೆಯೆಲ್ಲಿಹೇ ೧

ನಾರಿಯರ ಸೆರೆ ನೀಗಿಸೀ ಹದಿ
ನಾರು ಸಾವಿರ ಸೇರ್ದೆಯೋ
ಚೋರನೆನ್ನಿಸಿ ಸೀರೆಕದ್ದು
ಮಾರಕನೆ ತಾಮಮೃತನೇ ೨

ಮತ್ಸ್ಯ ಕೂರ್ಮ ವರಾಹನೇ ನರ
ಕೇಸರೀ ವಾಮನನು ನೀ
ಹಸ್ತಪರಶು ಶ್ರೀ ರಾಮಕೃಷ್ಣನೆ
ವಿಶ್ವ ಬುದ್ಧನೆ ಕಲ್ಕಿಯೇ ೩

ಘೋರ ದೈತ್ಯ ವಿದಾರಿಯೋ ಹರಿ
ಸಾರಿ ಹಲವವತಾರದಿಂ
ತೋರಿದವ ನೀನಾದರೂ ಜಾ
ಜಾಜೀಶ ಮಾಧವ ನಂಬಿದೇ ೪

೪೦೩

ನಿನ್ನ ಭಕ್ತರು ಬಹಳ ಬಲವಂತರಹುದೈ
ಜನ್ಮಜನ್ಮಕೂ ಚರಣಶರಣನ್ನ ಮಾಡೈ ಪ

ಹಾರಿದನು ಹನುಮಂತ ಕಡಲ ಕಾಲುವೆಯಂತೆ
ಸಾರಿ ಸೇತುವೆಯ ಕಟ್ಟಿ ನೀ ದಾಟಿದೇ
ಮಾರುತಿಯು ಬಲ್ಲಿದನು ಎಂದು ನಾಂಪೇಳಲೇ
ಸಾರಸಾಕ್ಷನೆ ಸಾಕ್ಷಿ ಯೇತಕ್ಕೈ ಬೇರೆ ೧

ಭೀಷ್ಮನನು ಬೆದರಿಸಲು ತೋರಚಾಪವ ತೊಟ್ಟ
ಸೂಕ್ಷ್ಮದಿಂಹಾರಿಸಿದ ಸಂಗರದಲವನು
ತೀಕ್ಷ್ಣಸಾಹಸಿಯಾತನೆಂದು ನೀಂತಿಳಿಯತ್ತೈ
ಶ್ರೇಷ್ಠ ಮಾರುತಿಕ್ಕೈಯ ಪರಶುವಂ ಕೇಳು ೨

ಶಬರ ಶಂಕರನೊಡನೆ ಕಾದಿ ಕಡೆಯಲಿ ಗೆಲ್ದು
ಪ್ರಬಲನೆನ್ನಿಸಿ ಪಾಶುಪತವನ್ನೆ ಪಡೆದಾ
ಪ್ರಭುವೆ ನಿನ್ನು ಪದೇಶ ಪಡೆದ ಪಾರ್ಥನ ಕೇಳು
ಸುಬಲರ್ಕೈ ಜಾಜೀಶ ದಾಸರೀ ಜಗದಿ ೩

೪೦೪

ನೆನೆಮನವೇ ನಾರಾಯಣ ನಾಮವ
ಅನುದಿನ ಧ್ಯಾನಿಸು ಗುರಮುಖದಂತೆ ಪ

ಅನುಸಂಧಿಸುತಲಿ ಅವನಡಿ ಪಿಡಿಯುತ
ಕನಿಕರದಿಂ ಕಾಯುವ ಕೈ ಹಿಡಿದು ಅ.ಪ

ಅಡಿಗಡಿಗೊಂದೊಂದು ಯೋಚನೆ ಗೈವೆವೇ
ಎಡಹಿ ಮುಗ್ಗರಿಸುವೆ ಸುಡುಗಾಡೊಳಗೆ
ಕಡಿದೋಡಿಸುತಲಿ ಪಾಪದ ಪಡೆಯಂ
ಕಡೆಹಾಯಿಸುವನು ಕಷ್ಟದ ಕಡಲಿಂ ೧

ತಮವೇ ತಾನು ಎಂಬ ಮೋಹದಿ
ಕನವರಿಸುತ ಬಹು ಸಾಹಸ ತೋರ್ವೈ
ಮನದೊಡೆ ಜೀವನು ಶರೀರವನು ಬಿಡೆ
ಅನುಮತಿಸುತ್ತಲದ ಸುಟ್ಟು ಬಿಡುವರು ೨

ದಿನದಿನ ಹಸಿವು ತೃಷೆ ಜ್ವರ ರೋಗಗಳೊಳು
ತಣಿವಂ ಕಾಣದೆ ತೊಳಲುತ್ತಿರುವೈ
ಘನತರದಾಯುವು ಗತಿಸದ ಮೊದಲೆ
ರಿನಕರನೊಳಗಿಹ ಶ್ರೀಶನ ನೋಡ್ಶೈ ೩

ಅನುಮಾನನ್ಯ ಆಶ್ರಯ ಬಿಡುಬಿಡು
ತನುಮನ ತೊರೆಯನು ಆಪದ್ಧಂದು
ಕೊನೆಗಳಿಗೆಯೊಳು ಕಡೆ ನುಡಿನುಡಿದು
ಸನುಮತದಿಂ ಸಿರಿಯರಸನ ಪದವುಗು ೪

ಸುಣ್ಣವ ತಿಂದ ತಿಮ್ಮಣನ ತೆರದಿ
ನಿನ್ನ ಸ್ಥಿತಿಯ ಅನ್ಯಾಯವು ಸಹಜ
ಮುನ್ನ ಸವಿದ ಕರ್ಮ ಬೆನ್ನನು ಬಿಡದಿದೆ
ಇನ್ನು ಹೆಜ್ಜಾಜಿ ಶ್ರೀಶನ ಮರೆಹೊಗು ೫

೪೦೫

ಬಂದು ಹೃದಯಮಂದಿರದೊಳಗೆ ಕೂಡೋ ಕೇಶವ ಮಾಧವ ಪ

ತಂದೆಯೆನಾಂ ವಂದಿಪೆನೋ ಕಂದನ ಕುಂದನೆಣಿಸದೆ ಅ.ಪ

ನಾನು ನಿನ್ನವನಾಗಬಯಸುವೆ ಭ್ರಮರ ಕೀಟನ್ಯಾಯದಿ ಬೇಗದಿ
ತಾನೆ ತಾ ತನ್ಮಯತೇ ದಿವ್ಯಮಂಗಳ ವಿಗ್ರಹನೇ ೧

ನಾಲಗೆಯ ನಡೆಮುಡಿ ಹಾಸುವೆ ಪಾಲ ಸುಮೃದುಪದಾ ಶುಭದ
ಬಾಲನು ನಾಂ ಬೇಡುವೆನು ಅನುರಾಗದಿ
ನೀನೊಲಿಯುತೆ ನಲಿದು ೨

ಅಂಗುಷ್ಟ ಮಾತ್ರ ಭೃಂಗಾರು ಗಾತ್ರ
ಶೃಂಗಾರ ಮೂರ್ತಿ ಶ್ರೀಕರ
ತಂಗದಿರಾ ಬೆಂಗದಿರಾ ಶಂಕಚಕ್ರ ಚತುರ್ಭುಜ ೩

ಪಂಚೇಂದ್ರಿಯಂಗಳು ವಂಚಿಪುವೋ
ಸಂಚಿತವೆಂತೋ ಸ್ವಾಮಿ
ಮಿಂಚುವ ಮೋಹಕ ಮುದದಿಂ ಹಂಚಿ
ನಿನ್ನ ಸೇವೆಯ ಗೈಸುತ ೪

ಮುನಿಜನಗಳ ಪೊರೆವುದು ಹೆಚ್ಚೇ ಚಿನುಮಯಾತ್ಮನೇ ಚೆನ್ನಿಗ
ಅಣುಗನು ನಾನಜ್ಞಾನಿ ಕನಿಕರದೆನ್ನ ಕಾಯ್ದರೆ ಕೀರ್ತಿ ೫

ಮಾಯಮುಚ್ಚಿ ಕಾಯನೆಚ್ಚಿ ನೋಯುತ್ತಿಹೆನೋ ನರಹರಿ
ಜೀಯ ಜಾಜೀಶಹರಿ ರಾಮ ರಕ್ಷಿಸು ಶ್ರೇಯ ಕೊಟ್ಟು ೬

೪೦೬

ಬಡತನವೆನ್ನನು ಬಾಧಿಪುದೈ ಹರಿ
ನುಡಿಯಲೆನಗೆ ನಾಲಗೆ ಬರದೀಪರಿ ಪ

ಅಡಿಯೊಳು ಕೆಡೆದಿಹೆ ತಡಿಗಾಣದೆಯೆ
ಕಡಲಣುಗಿಗೊರೆದು ಕಡೆಹಾಯಿಸೊ ದೊರೆ ಅ.ಪ

ಮನುಜರು ಯೆನ್ನನು ಮಾನಿಸದಿರುವರು
ಮನೆಯೊಳು ಮಕ್ಕಳು ಮಾತನಾಲಿಸರು
ಅನುನಯದಿಂ ಸವಿ ವಚನವನುಸುರಲು
ವನಿತೆಯುತಾಂ ಕೇಳದೆ ಕೋಪಿಪಳು ೧

ಬಂದ ಭಾಗವತರ ಪೂಜೆಯ ಮಾಡಲು
ಒಂದಾದರು ಸವಿ ವಸ್ತುವಿಲ್ಲವೈ

ಸಂದಣಿ ಸೇರಲು ಮನಸು ಬಾರದು
ಕುಂದಹರಿಸು ಮನಕಂಕೆಯ ತಂದು ೨

ದಾನವ ಮಾಡಲು ದೀನತೆ ಬಿಡದು
ಕಾನನದಿರುತಿಹ ಕುರುಡನಂತಿಹೆನೆ
ಏನು ಮಾಡಲೊ ಯೆನ್ನ ಮನದೊಲುಮೆಯ ಬಲ್ಲ
ಮಾನ ಕುಚೇಲಪಾಲಕ ಸಿರಿನಲ್ಲ ೩

ಸಾಲದವರು ಗಂಟಲೊಳು ಕೋಲಿಡುವರೊ
ಶ್ರೀಲೊಲನೆ ನಾಂ ಮಾಡುವುದೇನು
ಲಾಲಿಸಿ ಹೆಜ್ಜಾಜಿಕೇಶವ ಪಾಲಿಸು
ಲೀಲೆಯಿಂ ಬಿನ್ನೈಸಿ ಯನ್ನೊಲಿಸು ೪

೪೦೭

(ನಿಂದಾಸ್ತುತಿ)

ಬಹುಲೋಭಿಯೋ ನೀನು ಮುರಹರ ಪ

ವರವೇನನೀವೆಯೆನಗೆ ವಿಹಿತದಿ ಪೊರೆ ಮಂದಾರ ಅ.ಪ

ಹಾಸಿಕೊಳ್ಳ ವಾಸುಕಿಯ ಬೀಸಿ ಬರುವ ಗಾಳಿ ಕುಡಿವ
ವಾಸುದೇವನೆ ವಾಹನನ ಪನ್ನಗಾಸನನಾಗಿರುವನಲ್ಲವೆ ೧

ಹೆಂಡತಿಯಾಗಿರುವ ಸಿರಿಯಂ ಕಂಡಕಂಡರ ಮನೆಗೆ ಕಳುಹಿ
ಮಂಡಿಸುತ್ತ ಭಕ್ತರ ಗೃಹದೊಳುಂಡುಂಡು ತಣಿಯುತಿರುವೆ ೨

ವ್ಯಯ ಮಾಡದೆ ಕೈಯಕಾಸ ನಯದಿಂದಲೆ ನಡೆದುಕೊಂಡು
ಜಯ ಜಯ ಧಾರಾಳಿಯೆನಿಪ ಜೀಯ ಜನಾರ್ಧನ ಜಾಜಿಕೇಶವ ೩

೪೦೮

ಬಿಡಬೇಡ ರಂಗಯ್ಯ ಬಡವನೂ ಪಿಡಿಕಯ್ಯ
ಒಡೆಯ ನಿನ್ನಡಿ ಪಿಡಿದೆ ದಯೆಮಾಡೊ ಜೀಯ ಪ

ಕಡಲಣುಗಿಯಣ್ಮನೇ ಕಡೆಹಾಯ್ಸೊ ಕಷ್ಟದಿಂ
ಕಡುಮುದದಿ ಕೊಂಡಾಡಿ ಬೇಡುವೆನೊ ದೊರೆಯೆ ಅ.ಪ

ಸಪ್ತ ಋಷಿಗಳು ಸತತ ಗುಪ್ತದಿಂ ಧ್ಯಾನಿಸುತ
ತೃಪ್ತರಪ್ಪರು ಅಪ್ತ ನಿನ್ನ ನುತಿಸಿ
ಅಪ್ಪ ನೀನವರಿಂದೆ ವಿಪ್ರತ್ವವಂ ತೋರಿ
ಅಪ್ರತಿಮ ತಾರಕ ಬ್ರಹ್ಮ ಬೋಧಿಸಿದೆ ೧

ಉತ್ತರೆಯ ಬಸುರೊಳಗೆ ಬ್ರಹ್ಮಾಸ್ತ್ರ ಬಾಧಿಸಲು
ಅತ್ಯಗತ್ಯದಿ ಪ್ರಭುವೆ ಚಕ್ರ ಪಿಡಿದು
ಸುತ್ತೆತ್ತಲಾಶಿಶುವ ಸಂರಕ್ಷಣೆಯಗೈದೆ
ಉತ್ತಮೋತ್ತಮ ದೈವ ನೀನೆ ಜಗದಯ್ಯ ೨

ಅಂಬರೀಷನ ಮೇಲೆ ಜಂಭದಿಂ ಮುನಿ ಮುನಿಯೆ
ಕಂಬುಧಾರಿಯೆನೀಂ ಸುನಾಭ ಕಳುಹಿ
ಬೆಂಬಿಡದೆ ಸುತ್ತಿಸಲು ಇಂಬಿನಿಂ ಪದಪಡಿಯೆ
ಸಂಭ್ರಮದಿ ಕಾಯ್ದಂಥ ಸದ್ಭಕ್ತ ಬಂಧು ೩

ಗಜರಾಜನಂ ಸರದಿ ಮೊಸಳೆ ಪೀಡಿಸುತಿರಲು
ನಿಜರಥಾಂಗವ ಕಳುಹಿ ನಕ್ರನಂ ಸೀಳಿ
ಅಜಪಿತನೆ ನೀನವರ ವಕ್ರ ಹರಿಸುತ ಕಾಯ್ದೆ
ತ್ರಿಜಗಾದಿ ನಾಥನೇ ಭಕ್ತಪಾಲ ೪

ಶರಣ ರಕ್ಷಣೆಗಾಗಿ ನೀಂ ಸುದರ್ಶನ ಪಿಡಿದೆ
ವರದ ವೇಂಕಟರಮಣ ವೈಷ್ಣವೋದ್ಧರಣ
ಕರುಣಿ ನನ್ನಪರಾಧವಪರಿಮಿತವಿದೆ ಕ್ಷಮಿಸು
ತರಳನಂ ಕಾಪಾಡು ಜಾಜೀಶ ನೋಡು ೫

೪೦೯

ಭಾಗವತರ ನೋಡುವಾ ಭಾಗ್ಯಸ್ವರೂಪಾ ಪ

ಯೋಗಜನಗಳನು ರಾಗದಿ ಧ್ಯಾನಿಪ
ಭೋಗಿಶಯನ ಸಂಪನ್ನ ಸದ್ಗುಣಪೂರ್ಣ
ಭಾರ್ಗವೀಸತಿ ಬಿಡದೆ ವರಿಸಿರುವಾ
ಆಗಮದೊಳರ್ಚನೆಯಂ ಪಡೆಯುತಿಹ
ತಾಂಝುಂ ತಂಝುಂತ ತಂತಕನಾ
ತಧಿಂಗಿಣತೋಂ ತಧಿಂಗೀಣತೋಂ ತಧಿಂಗಿಣತೋಂ ೧

ನಿನ್ನಮುಖಕೇ ಸರಿಬಾರದೆ ಚಂದ್ರಮನು
ಉನ್ನತ ಕಳಂಕಿಯಾಗಿರುತಿಹನೋ
ಕಣ್ಣು ಸಾಹಸ್ರಕ್ಕೂ ಸರಿಬರದೆ
ಬಿನ್ನಣದ ಕಮ್ಮಲರು ನೀರೊಳಿದೇ
ತಾಂಝುಂ ತಂಝುಂತ ೨,ತಂಝುಂ...ತಂತ ೨

ಹೊಳೆವ ನಿನ್ನಯ ಕೊರಳಿಗೆ ಪಡಿಯಾಗದೆ
ನಲಿದು ನಾರಾಯಣ ಎನ್ನುತ್ತಿದೆ ಶಂಖವು
ನಳಿನಶರ ರೂಪಕ್ಕೆ ಸರಿಬರವೆ
ಒಲಿಸಲ್ಕೆ ಮಮತೆಯೊಳು ಮಗನಾದ
ತಾಝುಂ ತಝುಂತ ೨,ತಝುಂ...(ತ್ವಂತ) ೩

ಭಕ್ತರು ಪಡೆವತಿ ಸೌಖ್ಯಕ್ಕೆ ಹೋಲದ
ನಿತ್ಯವಾದ ಲೌಕಿದದಾಶೆ ಬಿಡಿಸಯ್ಯ
ಮುಕ್ತಿಕೊಡುತೆನ್ನನ್ನು ನಿನ್ನಡಿಯ
ಒತ್ತುವನಂ ಮಾಡಿಕೋ ಜಾಜೀಶ ಶ್ರೀಶಾ
ತಾಝುಂ ತಂಝುಂತ ತಂತಕನಾ
ತಧಿಗಿಣತೋಂ ತಧಿಗಿಣತೋಂ ತಧಿಗಿಣತೋಂ ೪

೪೧೦

ಮರೆವರೇನಯ್ಯಾ ಮಧವ ಮಮತೆ ತೋರಯ್ಯ ಪ

ತೊರೆವರೆನೋ ಕರುಣಿ ನೀನು
ನಿರುತ ಶರಣರ ಹೃದಯ ಭಾನು
ಪೊರೆಯುವ ಬಿರುದನೆ ಅಪಯಶ ಪಡೆವರೆ ೧

ಧ್ರುವನಂದದಿ ನಾ ತಪವಾಚರಿಸವೆ
ಭವಸಾಗರ ದಾಟುವ ಪರಿಯರಿಯದೆ
ಸುವಿಮಲ ಮಾನಸದೊಲುಮೆ ಕೊಡೆಂಬನ ೨

ಪ್ರಹ್ಲಾದನ ವೊಲು ನಿನ್ನಿರವರಿಯದೆ
ಆಹ್ಲಾದವ ನಿತ್ಯನುವಿಂ ಕೊಳ್ಳದೆ
ಈ ಕ್ಲೇಶದಿ ತೊಳಲುತ ಹರಿಸೆಂಬನ ೩

ಬಲಿಯಂದದಿ ದಾನವ ಕೊಡಲಾರದೆ
ಛಲದಿಂ ನಿನ್ನಯ ಪದಯುಗ ಪಿಡಿಯದೆ
ಒಲಿಯುತ ತರಳನ ಸಲಹೆಂದೆಂಬನ ೪

ಎಲ್ಲವ ಪಡೆಯಲು ಪುಣ್ಯವ ಗಳಿಸಿರೆ
ಬಲ್ಲಿದ ನಿನ್ನಯ ಹಂಗಿರಲಿಲ್ಲವು
ಎಲ್ಲರ ಬಂಧು ಜಾಜೀಶಾ ಎಂಬನ ೫

೪೧೧

ಮಾರಕೋಟಿ ರೂಪ ಮೈದೋರು ನೀಂ ಪ

ಸೇರಿ ಸುಖಿಸಲೆಂದು ಕೋರಿ ಭಜಿಸುತಿಪರ
ಪಾರಕಾಂಕ್ಷಿಯಾದೆನ್ನ ಪಾರಗಾಣಿಸೆ ಅ.ಪ

ಮುನ್ನ ಭಕ್ತಬಾಲ ಧ್ರುವನು ಕಷ್ಟದೊಳಗೆ
ಯನ್ನ ಕಾಯೊಯೆಂದು ಬಿನ್ನಹಂಗೈಯಲ್
ಚನ್ನರೂಪತೋರಿದೆನ್ನತಾತ ನೀ
ನಿನ್ನೂ ಏಕೆ ಬಾರದಿರ್ಪೆ ಜಾಜಿಶ್ರೀಶಾ ೧

೪೧೨

ಮುಂದೆನಗೆ ಗತಿಯೇನೋ ಇಂದಿರೇಶಾ
ತಂದೆ ನೀನೆಂದೆನುತ ತಪ್ಪನೊಪ್ಪಿಸುವೇ ಪ

ಶ್ರೀಕಾಂತನೇ ನಿನಗೆ ಅಭಿಷೇಕ ಮಾಡದೆಯೆ
ನಾ ಕಂಠಪರಿಯಂತ ಕುಡಿದೆನೊ ಹಾಲ
ಬೇಕೆಂದು ಪರಿವಾಸರಂಗಳಾಚರಿಸದೆಯೆ
ಸಾಕೆಂಬವೊಲು ಸುಖವ ಸೂರೆಗೊಂಡೇ ೧

ಅತಿಶಯದಿ ನಾನಿನ್ನ ಪೂಜೆಯನು ಮಾಡದೆಯೆ
ಸತಿಸುತರೆ ಸರ್ವಸ್ವವೆಂದಿರ್ದನೋ
ಹಿತಮಿತ್ರ ಬಾಂಧವರೊಳತಿ ವಂಚನೆಯಮಾಡಿ
ಮತಿವಿಕಳನಾದೆನೋ ಪತಿತಪಾವನನೇ ೨

ಕಲ್ಯಾಣ ಸಮಯದಲಿ ಕಲಹಗಳ ಹೂಡುತ್ತ
ಉಲ್ಲಪದಿ ನಾಕುಳಿತು ನೋಡುತಿದ್ದೆ
ಸಲ್ಲಲಿತ ವಾಕ್ಯಗಳನಾಡದೆಯೆ ಸರ್ವತ್ರ
ಖುಲ್ಲುಮಾತುಗಳಾಡಿ ನೋಯಿಸಿದೆ ನರರ ೩

ತಾರೆಂಬುದಕೆನಾನು ತೌರುಮನೆಯಾಗಿರುವೆ
ಪಾರಮಾರ್ಥಕವಾಗಿ ಕೊಡುವುದರಿಯೆ
ವೀರವೈಷ್ಣವರಲ್ಲಿ ವಂದಿಸದೆ ದೂಷಿಸುತ
ಘೋರಪಾತಕಿಯಾಗಿ ಇರುವೆಯೀ ಜಗದಿ ೪

ನರ್ಮದಾನದಿ ಸ್ನಾನ ನಿರ್ಮಲೋದಕಪಾನ
ಧರ್ಮ ಮರ್ಮಗಳರಿತು ಮಾಡುವುದು ದಾನ

ಪೆರ್ಮೆಯಂಶ್ರೀಹರಿಯ ಧ್ಯಾನ ನಿದಾನ
ನೆಮ್ಮದಿಯ ಮಾರ್ಗದಿಂ ಪೊರೆ ನಾನು ದೀನ ೫

ಬೇಡದೆಯೆ ನಾ ನಿತ್ಯ ಜೀವಿಸುವುದನ್ನು
ಕಾಡದೆಯೆ ಕಡೆಯಲ್ಲಿ ಉಸಿರುಬಿಡುವುದನು
ನೋಡುತ್ತ ಗುರುತರದ ಶ್ರೀಪತಿಯ ಪದಯುಗಕೆ
ಗಾಢದಿಂ ಮುಡಿಯಿಕ್ಕಿ ಪಿಡಿವಂತೆ ಮಾಡು ೬

ನೀನು ಒಲಿಯುವ ಪರಿಯದಾವುದನು ಮಾಡಿಲ್ಲ
ಏನು ಮಾಡಲು ಎನಗೆ ಮನಸು ಬರದು
ದೀನ ಪಾಲಕ ನಮ್ಮ ಹೆಜ್ಜಾಜಿ ಕೇಶವನೆ
ಸಾನುರಾಗದಿ ನಿನ್ನ ಧ್ಯಾನಿಪುದ ನೀಡೈ ೭

೪೧೩

ಮುಖತೋರು ನೀ ಶ್ರೀಕೇಶವಾ ಪ

ಸುಖತೋರೆ ಯೇಕೈ ಅಕಳಂಕರೂಪ
ಸಕಲಾತ್ಮನೆ ಸತ್ಯಸಾರ ನಿಧಿ[ಯೆ] ಅ.ಪ

ಎಲ್ಲದರೊಳು ಹುಡುಕಿ ಎಲ್ಲವು ನೀನೆಂದು
ಬಲ್ಲನಾದೆನಯ್ಯ ಬಲವಂತ ನೀನೇ
ನಿಲ್ಲದೆನ್ನ ಮನವ ನಿಲಿಸುನಿನ್ನೊಳ್ ಶ್ರೀ
ವಲ್ಲಭಾ ಜಾಜೀಶಾ ಫುಲ್ಲಲೋಚನಾ ೧

೪೧೪

ಶ್ರೀನಾಯಕಾ ನೀ ಕೋಪಬಿಡು ಪ

ದೀನ ಬಂಧುವೇ ನಂಬಿರುವೆನ್ನೈ ಅ.ಪ

ನಾನೇನ ಮಾಡಿದೆನಯ್ಯ ತಪ್ಪ
ನೀನು ಕಾಣದಿರುವೆಯಾ ಮನ್ನಿಸೈ ೧

ತಾಯಿ ತಂದೆ ಪ್ರೇಮಾತುರದಿ ಪುತ್ರರ್ಗೆ
ಶ್ರೇಯವೀಯದಿಹುದು ಅನ್ಯಾಯವೈ ೨

ಕಾಯಬೇಕು ನೀ ಜಾಜೀಶ ಶ್ರೀಶ
ದಾಯಕಾಣದೈ ಬಿನ್ನೈಸಿದೇ ೩

೪೧೫

ಶ್ರೀಮನೋಹರ ನಿನ್ನ ನಾಮವೇ ಯೆನ್ನುಸಿರು
ಕ್ಷೇಮ ನಾಡಿಗಳಲ್ಲಿ ತಿರುಗುತಿರಲಿ ಪ

ಕಾಮಾದಿ ಷಡ್ವರ್ಗವ್ಯಾಪನೆಯನೋಡಿಸುತ
ಪ್ರೇಮದಿಂ ಹೃತ್ಪದ್ಮದಲಿ ತೋರು ಸತತ ಅ.ಪ

ಪ್ರಾಪಂಚಿಕರ ಮನವು ವಿಷಯಗಳಿಗೆಳೆವಂತೆ
ಪಾಪಹರ ನಿನ್ನೊಳಗೆ ಯನ್ನ ಮನವಿರಲಿ
ತಾಪತ್ರಯಂಗಳಿಗೆ ತನಯನನು ಸಿಲುಕಿಸದೆ
ಕಾಪಾಡಿಕೋ ಸ್ವಾಮಿ ದಾಸಾನುದಾಸನಂ ೧

ಕನಸು ಎಚ್ಚರ ನಿದ್ದೆ ಎಂಬವಸ್ಥೆಗಳಲ್ಲಿ
ದಿನಕರಪ್ರಭು ಮೂರ್ತಿಯವತಾರ ತೋರಿ
ಅನುನಯದಿ ಪದಯುಗವ ಶರಣು ಹೊಂದುವ ಪರಿಯ
ಕನಿಕರದಿ ಕರುಣಿಸೈ ಕಮಲನಯನ ೨

ಕಫವಾತ ಪಿತ್ಥಗಳ ವಿಕೃತಿಗಳು ಬಾರದಲೆ
ಅಪರಿಮಿತ ಸುಂದರಾನಂದ ನೀಡಿ

ಸಫಲಮಂತ್ರವ ನುಡಿಸಿ ಕೃಪೆಯಿಂದ ಕೈಪಿಡಿದು
ಸುಪಥದಿಂ ನದಿದಾಟಿ ಸೇರಿಸಿಕೊ ಅಡಿಗೆ ೩

ಹರಿಹರೀ ಹರಿಯೆಂಬೆ ತಾಯಿ ತಂದೆಯೆ ಗುರುವೆ
ದೊರೆಯೆನೀ ಸೋದರನು ಸಖನು ಬಂಧೂ
ಧರಣೀಧರ ಸರ್ವತ್ರ ಬೆಂಬಿಡದೆ ಸಹಕರಿಸಿ
ಪೊರೆವುದೈ ಭವನಾಶ ಹೆಜ್ಜಾಜಿ ಶ್ರೀಶಾ ೪

೪೧೬

ಶ್ರೀರಮಾರಮಣ ಶರಣಾರ್ತಿನಿವಾರಣಾ ಪ

ಸಾರಸಾಕ್ಷ ಕರುಣಾರಸಪೂರ್ಣ
ಭೂರಿ ಸುವೈಭವ ಭುವನರಕ್ಷಣ ಅ.ಪ

ನಾನು ನಿನ್ನೊಳು ಮೊರೆಯಿಡುತಿರುವೆನೊ
ನೀನೆನ್ನೊಳು ದಯೆದೋರು ಹರಿಯೆ
ದೀನಪಾಲನಾಪರ ನೀನೆನ್ನುತ
ಲಾನು ಬಂದೆನೊ ಶ್ರೀನಿಕೇತನ ೧

ಹಿಂದೆಯನೇಕರ ಕಾಪಾಡಿರುವೆ
ಮುಂದೆಯು ಭಕ್ತರ ಬೆಂಬಿಡದಿರುವೈ
ತಂದೆ ಬಂದು ಗಜರಾಜನ ಸಲಹಿದೆ
ಯೆಂದು ನಂಬಿದೇ ಮಂದರಾದ್ರಿಧರ ೨

ಸುಧಾಮ ಅಜಮಿಳ ಅಂಬರೀಷ ದ್ರೌ
ಪದಿಯರ ಸಮಯದಿ ಕಾಯ್ದವನೇ
ವಿಧಿಪಿತ ನೀನದುಭುತಮಹಿಮನಯ್ಯ
ಸುಧಾ[ಮ] ನ ಬಂಧುವೆ ಜಾಜೀಶಾ ೩

೪೧೭

ಶ್ರೀರಾಮೇಶ ಪೊರೆವುದೆನ್ನ
ನೀರವ ಮುನಿವಿನುತ ಚೆನ್ನ ಪ

ಧ್ಯಾನ ಜಪತಪಗಳನರಿಯೆ
ಹೀನ ಮನುಜ ನಾನು ಹರಿಯೆ
ಧೀನಬಂಧುವಾದ ನಿನ್ನ
ನಾನು ನೋಡೆ ತೋರೊ ಮುನ್ನ ೧

ಸುಲಭನಾದ ನಿನ್ನ ಮರೆತು
ಕಲಿಯ ದೋಷದೊಳಗೆ ಬೆರೆದೆ
ಕಲುಷಹರಣ ಭಕ್ತಪ್ರಾಣ
ನಿಲುಕಿಸೆನಗೆ ನಿನ್ನ ಚರಣ ೨

ಜಾಜೀಶನೆ ನಿನ್ನಯಪದ
ರಾಜೀವದ ದಾಸನೆನಿಸಿ
ಪೂಜೆಮಾಡಿ ನಲಿಯುವಂತೆ
ರಾಜಿಪ ಪದವೀಯೋ ಶಾಂತ ೩

೪೧೮

ಶ್ರೀಹರಿ ನಿನ್ನನ್ನೆ ಪಡೆವುದು ಭಾಗ್ಯ
ಬಾಹಿರನೆನಿಸದೆ ಸೇರಿಸು ಯೋಗ್ಯ ಪ

ಹೃದಯಾರವಿಂದದೆ ದೇವಿಯರುಸಹಿತ
ಸದಯ ಸನ್ನಿಧಿ ಮಾಡು ಅದು ನನಗೆ ವಿಹಿತ ೧

ಭಾಗವತ ಕೈಂಕರ್ಯ ಹಗಲಿರುಳು ಇರಲಿ
ಭೋಗಿಶಯನನ ಪೂಜೆ ನಿತ್ಯ ಸಿದ್ಧಿಸಲಿ ೨

ಇಡುದೇವ ಪದಕಮಲ ನನ್ನ ತಲೆಮೇಲೆ
ಕೊಡುಸ್ವಾಮಿ ಅತಿಭಕ್ತಿ ಅನುದಿನ ಲೀಲೆ ೩

ಕೊನೆಗಾಲದಲಿ ಬಂದು ನೆನೆವಂತೆ ನೀಡ್ಯೆ
ಮನಕೆ ಮಂಗಳರೂಪ ಧ್ಯಾನ ದಯಮಾಡ್ಯೆ ೪

ಅವತಾರಫಲಗಳ ಸ್ಮರಣೆ ಬರುತಿರಲಿ
ಭವವೆಲ್ಲ ಕರಣಗಳು ನಿನ್ನ ಸೇವಿಸಲಿ ೫

ದಾಸನ್ನ ಚರಣಾಂಬುಜದಡಿಯಿರಿಸು
ಶ್ರೀಶನೆ ಪ್ರೇಮದ ಸವಿಯನುಣಬಡಿಸು ೬

ಎಲ್ಲವು ನಿನ್ನದೆ ನನ್ನದೇನಿಲ್ಲ
ಬಲ್ಲವನೆ ನೀನಾಗಿ ಮುಕ್ತಿಕೊಡು ನಲ್ಲ ೭

ಹಿಂದೇಳು ಮುಂದೇಳು ತಲೆಮಾರಿನವರು
ತಂದೆ ನಿನ್ನಂಘ್ರಿ ಶೇಷಾಂಕಮುದ್ರಿತರು ೮

ಕುಲಧನವೆ ನೀನಮ್ಮಕುಲಕೋಟಿಯನ್ನ
ಒಲಿದು ಕಾಪಾಡಯ್ಯ ಕರುಣಿ ಪ್ರಸನ್ನ ೯

ಹೆಜ್ಜಾಜಿ ಕೇಶವ ಇದು ನಮ್ಮ ಮೋಕ್ಷ
ಅರ್ಜುನಸಾರಥಿ ಕಾಣು ಪ್ರತ್ಯಕ್ಷ ೧೦

೪೧೯

ಶ್ರೀ ಹರಿ ಪಾಲಿಪುದ್ಯೆ ದಾಸನಾಗಿ ಸೇವೆಗೈವುದ ಪ

ನೀನು ಕೂಡುವ ಪೀಠವಾಗಿ ಮಲಗಲು ಹಾಸಿಗೆಯಾಗಿ
ನಾನು ಎದುರ ಕನ್ನಡಿಯಾಗುತ ಮಂಗಳದೀಪ ಪಿಡಿವೆನ್ನೈ ೧

ನಿನ್ನ ಮೇಲಿನ ಛತ್ರಿಯಾಗಿ ಚಾಮರಹಿಡಿದು ಬೀಸುವೆನ್ನೈ
ಚನ್ನವೈಜಯಂತಿಮಾಲೆ ಧನ್ಯ ಮುದ್ರಿಕೆಯನ್ನು ಮಾಡಿಕೊ 	೨

ಭೋಜನಪಾತ್ರ ತಾಂಬೂಲಭರಣಿ ರಾಜಿಪ ಫಲತಟ್ಟೆಯು
ಶ್ರೀಜಯ ಪಾದುಕೆ ನಡೆಮುಡಿಯು
ಆಗಿ ವಿಜಯಧ್ವಜವನಾಗಿಸೈ 	೩

ಬರೆದು ಓದುವ ಪತ್ರವಾಗಿ ಕೈಯ ಲೀಲಾಶುಕವಾಗೀ
ಕೊರಳ ಕೌಸ್ತುಭಮಣಿಯಮಾಡಿ ಶಂಖಚಕ್ರಗಳನು ಹೊರಿಸು 	೪

ಜಾಜಿಕೇಶವ ದಿವ್ಯಸನ್ನಿಧಿ ಸಾಹ್ಯವಸ್ತುಗಳಾಗಿಸೈ
ರಾಜಾಧಿರಾಜಪೂಜ್ಯ ಮಾಜದೆ ನಾಂ ಮಣಿವೆ ಬೇಡಿ 	೫

೪೨೦

ಸೀತಾಪತಿ ಪಾಹಿಮಾಂ ಪೂತಾತ್ಮರ
ಘನನಂದನ ರಾಮಚಂದ್ರ 	ಪ

ತಂದೆ ತಾಯಿ ಬಂಧು ನೀನು ಸಂದ ಯೆನ್ನ ಮಿತ್ರನೀನು
ಕಂದನಿಗಾನಂದ ಬೀರಿ ಅಂದವಾದ ಪಾದತೋರು 	೧

ಸ್ವಾಮಿ ನಿನ್ನ ನಾಮವನ್ನು ನೇಮದಿಂದ ಧ್ಯಾನಿಪೆನ್ನ
ಪ್ರೇಮದಿಂದ ಕ್ಷೇಮ ಕೊಟ್ಟು ಸಾಮಗಾನಗೈಸು ವಿಷ್ಣು 	೨

ಅಗ್ರಹಾರಪಾಲಾಧೀಶ ಅಗ್ರಪೂಜೆಗೊಂಬ ಶ್ರೀಶ
ಸುಗ್ರೀವನ್ನ ಪೊರೆದ ಉಗ್ರದೈತ್ಯನಾಶ ಹೆಜ್ಜಾಜೀಶ 	೩

೪೨೧

ಸ್ವಾಮಿ ನೀ ದಯಾಳುವಹುದೋ ವರಭಕ್ತೋದ್ಧಾರಕೃಷ್ಣ ಪ

ಪ್ರೇಮಾಸ್ಪದವಾದ ಕೊಳಲಗಾನದಿ ಗೋಪಿಯರಿಗೊಲಿದ ಅ.ಪ

ಸುರತರುವಿನ ಬಳಿಗೈದು ಬರಿಯ ಕೈಲಿಹೋಗುವರೆ
ಹರಿಯ ಬೆರೆದು ಭೋಗಿಪಂತೆ ವರಿಸುಜಾಜಿಕೇಶವ ೧

೪೨೨

ಹರಿನಿನ್ನಾಶ್ರಯ ಮಾಡಿ ಬಂದಿರುವೆನೋ
ಕರುಣದೆನ್ನ ಕರಪಿಡಿ ಕಾಯೋ ಪ

ಪರಿಪರಿ ಪೂಜಿಸಿ ಮೆಚ್ಚಿಸಲಾರೆನೊ
ಸಿರಿನಾರಾಯಣ ಶರಣೆಂಬೆ ಅ.ಪ

ವಾಲ್ಮೀಕಿ ಪರಾಶರ ವ್ಯಾಸ ಶುಕರು
ಮೇಲ್ ಮೇಲ್ ಗುಣಗಾನವ ಮಾಡೆ
ಬಾಲ್ಯಮೊದಲು ಮುದಿತನ ದೊಳಗುಂ ಸೌ
ಶೀಲ್ಯ ಸ್ತುತಿಪೆ ಶುಕನುಡಿಯಂತೆ ೧

ದಶರೂಪಗಳಂ ಧರಿಸುತ ಮರೆಸಲು
ವಿಶ್ವವ್ಯಾಪಕಗುರು ತರವೇ
ನುಸುಳುತ ಕ್ಷೀರಾಬ್ಧಿಯ ಸೇರಿದರೂ
ಕೃಷ್ಣನಾಮನಾವೆಯೊಳು ಬಹೇ ೨

ಪನ್ನಗಶಯನ ನೀನಾದರೆ ಭಯವೇಂ
ವೈನತೇಯನನೊಡಗೊಂಡು ಬಹೆ
ಉನ್ನತ ಮಾರ್ಗದಿ ಖಗವೇರಿ ಹೊರಡೆ
ನಿನ್ನ ಸೆರಗ ಪಿಡಿಯುತ ಬರುವೆ ೩

ಯಮನಾಳುಗಳಿಗೆ ಸಿಕ್ಕಿಸಬೇಡೈ
ಸುಮನಸ ಪೂಜಿತ ನಮಿಸುವೆ ನಾಂ
ಭ್ರಮೆಗಳ ಬಿಡಿಸುತ ಭವಭಯ ಹರಸು
ಕಮಲನಯನ ಹೆಜ್ಜಾಜೀಶ ೪

೪೨೩

ಹರಿಯೆನೀನು ಒಲಿದಮೇಲೆ ಪರರ ಭಯವುಂಟೇ ಪ

ಪರುಷವೇದಿ ಸೋಂಕಿದ ಕಬ್ಬಿಣ ಹೊನ್ನಲ್ಲವೇ
ಸುರನದಿ ಭಾಗೀರಥಿಯೊಳು ಮಿಂದೂ ಪಾಪಿಯೇ ೧

ಗರುಡದೇವನಿದಿರೊಳು ಉರಗಬಾಧೆಯಿರುವುದೇ
ಧರೆಯೊಳ್ ರವಿಯು ಉದಯನಾಗೆ ರಾತ್ರಿ ನಿಲ್ವುದೇ ೨

ಗುರುವಿನ ದಯೆಯಿರುವರೇ ಕುಲದವರೇಂ ಗಯ್ಯುವರು
ಉರಿವ ಕಿಚ್ಚಿನಿದಿರೊಳಗೆ ಚಳಿಯ ಭೀತಿಯೇ ೩

ಸಂಜೀವನ ಪಿಡಿದವಂ ಮರಣಕೆ ತಾನಂಜುವನೇ
ಕಂಜನಯನ ಕಾಯ್ವನಿರಲು ಶನಿಯು ಹಿಂಸಿಪನೇ ೪

ರಾಜತನ್ನವನಾಗಿರಲ್ ವಿರಾಜಿಸುತ್ತಲಿರುವನ್ನೆ
ಜಾಜೀಶ ಕೇಶವನೇ ನಾನು ನಿನ್ನವನ್ನೆ ೫

(ಊ) ಲೋಕನೀತಿಯ ಕೃತಿಗಳು

೪೨೪

ಕೆಟ್ಟಗುಣಗಳು ನರನ ಅಟ್ಟಿಕೆಡಹುತಲಿಹುವು
ಭ್ರಷ್ಟನೆನಿಸದೆ ಬಿಡವು ಇವನ ಪ

ಸೃಷ್ಟಿಯೊಳಗಿವುಗಳಿಂದೆಷ್ಟುಜನ ಕೆಟ್ಟಿಹರೋ
ಕಟ್ಟುತ್ತ ಮುಸಲದಿಂ ಕುಟ್ಟುತಿಹುವೂ ಅ.ಪ

ಸರಿಧರೆಯ ಸ್ತ್ರೀಯರಂ ಕಾಯಿಸಲು ನರತಾನು
ಹರಿಯಿಂದ ಹತನಾಗಿ ಹೋದಾ
ವರವಿಪ್ರನಲಿ ಕ್ರೋಧಮಾಡಿದ ಬಕಾಸುರನ
ತರಿದನಲ್ಲವೆ ಭೀಮ ತಾನು ೧

ದಾಯವನು ಲೋಭದಿಂ ಕೌರವನು ಪಾಂಡವರಿ
ಗೀಯದುದಕವನೇನು ಪಡೆದಾ
ರಾಯದಶರಥ ತನ್ನ ಸತಿಸುತರ ಮೋಹವಿರೆ
ಆಯುವಿಂ ಗತನಾಗಿ ಹೋದಾ ೨

ಜಮದಗ್ನಿಯ ಹೋಮಧೇನುವಂ ಮದದಿಂದೆ
ಕಾರ್ತಿವೀರ್ಯಾರ್ಜುನನು ಕೊಳಲು
ಅಮಿತಬಲನಾಪರಶುಧಾರಿಯು ತಾನು
ಸಮರದೊಳೆ ಸವರುತ್ತ ಅವನ ಕಳೆದ ೩

ಕೃಷ್ಣನನು ಮತ್ಸರದಿ ಶಿಶುಪಾಲ ಬಯ್ಯಲು
ವಿಷ್ಣುಚಕ್ರವು ಕೊಂದಿತವನ
ಬಾಣ ತಾನೀರ್ಷೆಯಿಂ ಭವಗವಂತನಿದಿರೇಳೆ
ಪ್ರಾಣವುಳಿಯುತ ನಾಲ್ಕು ತೋಳ್ಗಳಾಯ್ತು ೪

ವಾಸುದೇವನ ಮೇಲಸೂಯೆಯಿಂ ಪೌಂಡ್ರಕ
ವಾಸುದೇವನೊಳು ಅಳಿದ ಕಂಡ್ಯಾ
ದೂಷಣೆಯು ಡಂಬಗಳು ನಾಶನವ ಗೈಯುವುವು
ಈಶ ಸುಜನರಿಗಾಗಿ ಭಾವಿಸುವ ಜಗದೀ ೫

ದರ್ಪದಿಂ ದಶಶಿರನು ಮರೆಯುತ್ತಲಿರಲಾಗಿ
ಅಪಹಾರಗೈದ ಶ್ರೀರಾಮ ತಲೆಯಾ
ರಿಪುಗಳಾ ಮಧು ಕೈಟಭರ ಮಮತೆಯನು
ಉಪಮೆಯಲ್ಲಿದು ಮಾಯಿ ಮುರಿದ ನೋಡಾ ೬

ನಿರ್ವಿಕಾರನ ನೆನೆದು ಗರ್ವವರ್ಜಿತರಾಗಿ
ಸರ್ವವೂ ಹೆಜ್ಜಾಜಿ ಕೇಶವಾ ಯೆಂದು
ಪರ್ವತೋದ್ಧರನಲ್ಲಿ ಕರ್ಮಾರ್ಪಣೆಯ ಮಾಡಿ
ಒರ್ವನೇ ಜಗದೀಶನೆಂದು ನಮಿಸೀ ೭

೪೨೫

ಗತಿಯಾರೋ ಈ ಜಗದಿ ಮತಿಗೆಟ್ಟ ಮನುಜ
ಕ್ಷಿತಿನಾಥ ಹೆಜ್ಜಾಜಿ ಕೇಶವನ ಹೊರತು ಪ

ಸತಿಯ ಪರದೊಳು ನೋಡೆ ಪುಣ್ಯವರ್ಧಕೆ ಕತೆಗೆ
ಸುತರಿರುವರೆಂದೆನಲು ಋಣಮುಗಿವೊವರೆಗೇ
ಅತಿಶಯದ ಬಾಂಧವರು ಮಿತ್ರಮಂಡಲಿಯೆಲ್ಲ
ಸ್ತುತಿಯುಕ್ತ ಮರ್ಯಾದೆ ಪಡೆಕೊಳ್ಳುವನಕ ೧

ತಂದೆ ತಾಯಿಗಳೆಲ್ಲ ಮುಂದಳಿದು ಹೋಗುವರು
ಬಂದ ತನ್ನಧಿಕಾರ ಬಲುಮೆಯಿರುವಾಗ
ಬಂದಿದ್ದ ಧನಧಾನ್ಯಗಳು ನಿಲ್ಲದೋಡುವುವು
ಬಂಧನದ ಕಾಲದೊಳಗೊಬ್ಬರೂ ಬರರೂ ೨

ಕರಿ ಧ್ರುವನು ಪಾಂಚಾಲಿ ಪ್ರಹ್ಲಾದ ಪ್ರಭೃತಿಗಳ
ಪರಮಪಾವನರೆನಿಸಿ ಪೊರೆದಂಥ ಹರಿಯ
ಉರುತರದ ನೋಟದೊಳು ನಿರುತ ನೆನೆಯಲು ನಿನ್ನ
ಕರಪಿಡಿದು ಕಾಯುವನು ಸುಂದರಶ್ಯಾಮ ೩

೪೨೬

ಭಕ್ತನಾಗೋ ಹರಿಗೆ ಓ ಮನುಜ ಪ

ನಾಲಗೆಯಲಿ ಶ್ರೀಲೋಲನ ನಿಜಗುಣ
ಜಾಲವ ಕೊಂಡಾಡೋ ಓ ಮನುಜ ೧

ಮಾನಸದಲಿ ಸದಾ ಜಾನಕಿ ರಮಣನ
ಧ್ಯಾನವ ಮಾಡುತಿರೋ ಓ ಮನುಜ ೨

ಕರಯುಗಳಗಳಿಂ ವರಗೋಪಾಲನ
ಚರಣ ಪೂಜೆಮಾಡೋ ಓ ಮನುಜ ೩

ರವಿಕುಲ ತಿಲಕನ ಸುವಿಮಲ ಚರಿತೆಯ
ಕಿವಿಯಲಿ ಕೇಳುತಿರೋ ಓ ಮನುಜ ೪

ಶ್ರೀಹರಿಯ ಜಗನ್ಮೋಹನ ಮೂರ್ತಿಯ
ಊಹಿಸಿ ನೋಡುತಿರೋ ಓ ಮನುಜ ೫

ಶಾಸ್ತ್ರ ಸಿದ್ಧವಹ ಕ್ಷೇತ್ರತೀರ್ಥಗಳ
ಯಾತ್ರೆಯ ನೀಮಾಡೋ ಓ ಮನುಜ ೬

ಶ್ರೀಶಗರ್ಚಿಸಿದ ಸುವಾಸಿತ ತುಲಸಿಯ
ನಾಸಿಕದಲಿ ಮೂಸೊ ಓ ಮನುಜ ೭

ಸಾಧುಜನಗಳಿಗೆ ಮೋದವೀವ ಶ್ರೀ
ಪಾದಗಳಿಗೆ ನಮಿಸೋ ಓ ಮನುಜ ೮

ಭೋಗಿಶಯನಗನುರಾಗದಿಂದ ಶಿರ
ಬಾಗಿ ಸತತ ನಡೆಯೋ ಓ ಮನುಜ ೯

ಈಜಗದಲಿ ತಾ ಜಾಜಿ ಶ್ರೀಶನು
ರಾಜಿಪುದನು ಕಾಣೋ ಓ ಮನುಜ ೧೦

೪೨೭

ಭಕ್ತರ ಭಾಗ್ಯಕೆ ಯೆಣೆಯಂ ನಾ ಕಾಣೆನೀಜಗದಿ
ಅತ್ಯಾನಂದದಿ ನಿತ್ಯ ವರ್ತಿಸುವ
ಸ್ತುತ್ಯದ ಮಾರ್ಗವತಿವೈಚಿತ್ರ್ಯವು ಪ

ಪ್ರಾತಸ್ನಾನವಗೈದು ನಿತ್ಯ ಕರ್ಮವನಡಸಿ
ಪ್ರೀತಿಸಿ ಪರಮಾತ್ಮನ ಪೂಜಿಸುತ
ಗೀತಾಪಾರಾಯಣ ಮಾಡುತ್ತಿಹ ೧

ಸುಂದರ ಶ್ಯಾಮನ ಕಂಡಾನಂದದಿ ಮಹಿಮೆಯ ಕೊಂಡಾಡಿ
ಮಂದಹಾಸದಿಂದಂತರ್ದೃಷ್ಟಿಯೊಳಿಂದಿರೆಯರಸನ
ಹೃದಯದಿ ನೋಡುವ ೨

ನಡೆವಾಗ ನುಡಿವಾಗ ಮಡದಿ ಮಕ್ಕಳ ಕೂಡಿ
ಕಡು ಮುದದಿಂದಿರುವಾಗಲು ತಾನಡಿಗಡಿಗುಂ
ತಮ್ಮೊಡೆಯನ ನೆನೆಯುವ ೩

ಹರಿಕಥೆಯಂ ಕೇಳುವರು ಶರಣರ ಕಂಡು ನಮಿಸುವರು
ಪರಿ ಪರಿ ಜೀವಿಗಳೊಳಗೆಲ್ಲವು
ಸಿರಿಯರಸನಿರುವನೆಂದರಿತ ಮಹಾತ್ಮರ ೪

ನಗಧರಲೀಲೆಗೆ ನಗುತ ಹಗರಣಹರ ಎಲ್ಲೆಂದಳುತ
ಮಿಗೆ ಯೋಚಿಸಿ ಮೂಕಾಂಧ ಬಧಿರರೋಲ್
ಒಗೆದಾಮೋದದಿ ಕುಣಿದಾಡುತ್ತಿಹ ೫

ಹೆಜ್ಜಾಜೀಶನು ಕೃಪೆಯಿಂ ಸಜ್ಜನರಂ ಪಾಲಿಸಿದ
ಬಿಜ್ಜೆಯ ಪುರಾಣಪುಣ್ಯತೀರ್ಥದೊಳ್
ಮಜ್ಜನಗೈಯುವ ಪುಣ್ಯ ಚರಿತ್ರರ ೬

೪೨೮

ಮನವೇ ನೀನೆಚ್ಚರಿಕೆ ಬಿಡದಿರು
ಅನುದಿನವು ಹರಿಧ್ಯಾನದೊಳಗಿರು ಪ

ವನಿತೆ ಧನಧಾರಿಣಿಯ ನೆಚ್ಚಿ
ತನುವೆ ತಾನೆಂಬುದನುಚಿತವು ಅ.ಪ

ಬರಿಯಕೈಯಲಿ ಭೂಮಿಗಳಿಸಿದೆ
ದುರಿತಭಾರವ ಧರಿಸಿರ್ಪೆ
ನರರೆ ಹರಿಸುವರಾರೋ ಕಾಣಿರ
ಅರಿತುಕೊಂಡಿರೆ ತಿಳಿಸಿರೈ ೧

ಕಾಯವಸ್ಥಿರ ಹೇಮಸಂಸ್ಕೃತಿ
ಮಾಯಾಪಾಶದ ಬಲೆಗೆ ಸಿಲ್ಕಿ
ನಾಯಿನರಿಯಂದದಲಿ ತೊಳಲಿ
ಸಾಯವರ ಕಂಡಳುವದೇಕೋ ೨

ಜಾತಿಧನವಧಿಕಾರ ಖ್ಯಾತಿಗೆ
ಆತುರದೊಳಭಿಮಾನ ಪಡುವೇ
ಪಾತಕರೆ ಹಿಂಜರಿಯದಂತೇ
ಪ್ರೀತಿಯಿಂ ಪರಪೀಡೆಗೈವೇ ೩

ಪೊಡವಿಯೊಳ್ ಪೆಣ್ ಬಾಲ ವೃದ್ಧರು
ಬಡವರಾರ್ತರು ಕುಂಟಕುರುಡರು
ಎಡೆಯ ಜೀವಿಗಳನ್ನು ಕರುಣದಿ
ಕಾಣೆಲೋ ಕಡುಜಾಣನೇ ೪

ಸತ್ತಮೇಲೇನೆಂದು ಯೋಚಿಸು
ಮುತ್ತಿ ಕತ್ತಿಯೊಳಿರಿವರ್‍ೈ
[ಮ]ತ್ತಕ್ಷಣದ ಫಲಕಾಶೆಪಡದಿರು
ಸತ್ಯವಂ ಪಿಡಿ ನಿತ್ಯವೂ ೫

ಯಮುನೆ ಹೊಕ್ಕರು ಯಮನು ಬಿಡನೂ
ಅಮಮ ನರಕದೊಳಿಳಿಪರ್‍ೈ
ರಮಾರಮಣನ ಒಲುಮೆಗಾಗಿ
ಶ್ರಮಿಸಿ ಪರರುಪಕಾರಿಯಾಗೋ ೬

ಪತಿತಪಾವನ ಜಾಜಿಕೇಶವ
ನತಿಶಯದಿ ತಾ ಜಗವ ಪಾಲಿಪ
ಚತುರ್ವೇದ ಶ್ರುತಿ ಪ್ರಮಾಣವ
ಮತಿಯುತರು ಮೀರುವರೆ ಮರುಳೇ ೭

(೩ಖ) ತಾತ್ತ್ವಿಕ ಕೃತಿಗಳು

೪೨೯

ಜಗವ ಪೆತ್ತಿಹ ಪ್ರಭು ನೀನಯ್ಯ ಶ್ರೀರಂಗದ ವಿಜಯ ಪ

ಸಾಸಿರ ಶೀರ್ಷನೆ ಸಾಸಿರನೇತ್ರನೆ
ಭಾಸಿಸುವಾನಂತ ಪಾದನೆ ಹಸ್ತನೆ ೧

ಆದಿಮಧ್ಯಾಂತರಹಿತ ಅಸಂಖ್ಯನಾಮನೆ
ಆಧಾರಮೂರುತಿ ಸಾಧುಸಂರಕ್ಷಕ ೨

ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕನೆ
ಸಕಲಚರಾಚರ ಕರ್ತೃವು ನೀನೆ ೩

ಚರಂಗಳೆಲ್ಲ ಯೀ ಭೂಮಿತಳವೋ
ಪರಮನಾಭಿಯೆ ಆಕಾಶವಯ್ಯ ೪

ಶಿರವೇ ವೈಕುಂಠ ಕವಿಗಳೆ ದಶದಿಕ್ಕು
ಉರುತರ ಮನಸೇ ಮನ್ಮಥನಹುದು ೫

ಹರಿಯ ಪಾರ್ಶ್ವಂಗಳೆ ಹಗಲು ರಾತ್ರಿಗಳು
ಪರಮವೇದಂಗಳು ಸಕಲಶರೀರವು ೬

ಮುಖ ಭುಜ ತೊಡೆ ಪಾದಗಳಲಿ ವರ್ಣಂಗಳ
ಸುಕರದಿ ಪಡೆದ ಭೂಸೂತ್ರಧಾರಿಯು ನೀಂ ೭

ಇಂದ್ರ ಮೊದಲಾದ ದೇವರೆಲ್ಲ ನಿನ್ನಯ ಮುಖ
ಚಂದ್ರಸೂರ್ಯರ ಕಣ್ಣಿನಿಂದ ಪಡೆದಾತನೆ ೮

ಮಗುವಾದೆನ್ನ ಪಿಡಿ ಮೂಜಗದೊಡೆಯ
ಹಗರಣ ಹರಿಯೊ ಜಾಜಿಕೇಶವ ೯

೪೩೦

ತಿರುಮಣಿ ಧರಿಸಿದ ತೀರ್ಥರ ಕಂಡರೆ
ತಿರುವಡಿಗಳಿಗೇ ಮಣಿಯುವುದು ಪ

ಗುರುತರ ಶ್ರೀಪಾದತೀರ್ಥಸೇವನ
ದುರಿತ ಹರವು ತಾ ಪಾವನವು ಅ.ಪ

ದೇವರ ಕಡೆಯವರಿವರೆಂದೆನ್ನುತ
ಕಾವನ ಕತೆಗಳ ಕೇಳುವುದು
ಭಾವಿಸಿ ಭಾಗವತರ ಸಹವಾಸವು
ಶ್ರೀವರನೊಲಿಯುವ ಕಾರಣವು ೧

ಇವರ ದರ್ಶನವು ಪುಣ್ಯಪ್ರದವು
ಪವಿತ್ರರಿರುವೆಡೆ ವೈಕುಂಠ
ಭುವಿಸುರಪೂಜನ ಹರಿಗಾನಂದವು
ಸುವಿಮಲ ಚರಿತರು ಶುಭಕರರು ೨

ಶಂಖ ಚಕ್ರಗಳ ಭುಜದಲಿ ಧರಿಸಿ
ಪಂಕಜ ತುಳಸೀಮಣಿ ಕೊರಳೊಳ್
ವೇಂಕಟ ಶ್ರೀರಂಗ ವರದ ನಾರಾಯಣ
ಕಿಂಕರರ್ಗೆ ಜಾಜೀಶನಿಗೆ ೩

೪೩೧

ಮೂಲಮಂತ್ರವ ಜಪಿಸು ಅರ್ಹತೆಯಿರುವಂತೆ ನೀನು ಪ

ಮೂಲ ಪ್ರಣವ ಮಧ್ಯೆ
ನಮೋನಾರಾಯಣಾಯ ಕಡೆಯಲುಳ್ಳ ಅ.ಪ

ವೇದ ಪಾಂಚರಾತ್ರಾಗಮ ಪೌರಾಣಗಳ ನಿರುತ ನುತಿಪ
ವೇದದೆ ಶ್ರೀವೈಷ್ಣವರಿಗೆ ತಾರಕಬ್ರಹ್ಮವಾದ
ಆದಿಯೊಳಾಚಾರ್ಯರಿಂದ ಪಂಚಸಂಸ್ಕಾರ ಹೊಂದಿ
ಬೋಧೆ ಪಡೆದ ಮಹಾಮಂತ್ರರಾಜವೆನಿಸಿ ಮುಕ್ತಿ ಕೊಡುವ ೧

ಅಷ್ಟಾಕ್ಷರಿಯಾದ ಮಂತ್ರ ಇಷ್ಟಸಿದ್ಧಿಮಾಳ್ಪ ಮಂತ್ರ
ನಿಷ್ಠೆಯಿಂದ ಜಪಿಸುವರಿಗನಿಷ್ಟಹಾರಿಯಾದ ಮಂತ್ರ
ಇಷ್ಟುಮಾತ್ರ ಪಠಿಸುವರಿಗೂ ಮೋಕ್ಷವನ್ನೆ ಕೊಡುವ ಮಂತ್ರ
ಸೃಷ್ಟೀಶ ಹೆಜ್ಜಾಜಿಯ ಕೇಶವನನ್ನೊಲಿಪ ಮಂತ್ರ ೨

೪೩೨

ರಾಮಕೋಟಿ ನಾಮಭಜನಾ ನೇಮದಿಂದ ಮಾಳ್ಪನು ಧನ್ಯ ಪ

ಪ್ರೇಮಪಾಶದಿಂದ ಬಿಗಿದು ಸ್ವಾಮಿಯನ್ನ ಹೃದಯದಿ ನೆನೆದು ಅ.ಪ

ಶಂಭು ತನ್ನ ಮನದಿನಿತ್ಯ ಇಂಬಿನಿಂದ ಧ್ಯಾನಿಸುತ್ತ
ಅಂಬಿಕೆಗನುಮೋದಿಸುತ್ತ ಸಂಭ್ರಮದಿಂದೊರೆದ ಸತ್ಯ ೧

ರಾಮ ರಾಮ ಶ್ರೀರಾಮಯೆಂದು
ನೇಮದಿ ಕಾರ‍್ಯವನು ಬಗೆದು
ಆ ಮಹಾಸಾಗರವ ನೆಗೆದು
ಭೂಮಿಜಾತೆಯ ಕಂಡವಗೊಲಿದ ೨

ಶರಣುರಾಘವ ಶರಣುಯೆಂದು
ಕರುಣಾಮೂರುತಿಯೊಲುಮೆವಡೆದು
ಹರುಷದಿ ಲಂಕೆಯನು ಪಡೆದ
ಪರಮಪುಣ್ಯ ವಿಭೀಷಣ ಒರದ ೩

ಭರತಭೂಮಿಯೊಳಗೆ ಜನಿಸಿ ಹರಿಯ ಭಕ್ತ ಗಣ್ಯರೆನಿಸಿ
ವರ ಪುರಂದರ ಕನಕದಾಸರು ಕರುಣದೊರೆದ ಭವತಾರಕವಾ ೪

ಸಾಸಿರನಾಮವ ಪಠಿಸಿ ವಾಸುದೇವನಿಗೆ ವಂದಿಸಿ
ಭೂಸುರರಾನಂದಿಸುವ ಕೇಶವ ಜಾಜೀಶನ ತೋರ್ಪ ೫

೪೩೩

ಶ್ರೀಪತಿ ಹಾಕಿದ ಶ್ರೀವೈಷ್ಣವ ಸುರ ಭೂಜವು ನಿತ್ಯ ಶ್ರೀಕರವು ಪ

ಭೂಪತಿಯಂದದಿ ಭೂಮಿಯಾಳುವುದು
ಕಾಪಾಡುತಿಹುದು ಲೋಕಿಗರ ಅ.ಪ

ಆಳುವಾರುಗಳು ಆಚಾರ‍್ಯರುಗಳು
ಪೇಳಿದರಿದರಾಂತರ‍್ಯವನು
ಕೇಳುತ ಬಾಳಿದ ಬಹು ಭಾಗವತರ
ಪಾಳಯವದು ತಾಂ ಪರಮಪದ ೧

ಅಭಿಮತದಿಂದಲಿ ಮುನಿಗಳು ಮೂವರು
ವಿಭವದಿಂದಲದ ಸಲಹಿದರು

ಉಭಯ ವೇದಗಳ ಅಮೃತವರ್ಷದಿಂ ಸು
ರಭಿತ ಕುಸುಮಗಳರಳಿದವು ೨

ಶಂಖ ಸುದರ್ಶನ ಲಾಂಛನ ಭುಜಗಳಲ
ಲಂಕಾರದ ಹನ್ನೆರೆಡು ನಾಮಗಳು
ಪಂಕಜ ತುಳಸೀಮಣಿ ಪವಿತ್ರಗಳು
ನಿಶ್ಶಂಕೆಯ ಮೂರು ಮಂತ್ರವೆ ಕಾಯ್ಗಳು ೩

ಶಾಸ್ತ್ರ ಸಿದ್ಧವಾದರ್ಚಾಮೂರ್ತಿಯ
ಕ್ಷೇತ್ರ ತೀರ್ಥಗಳು ಪಕ್ವಫಲ
ಶ್ರೋತೃಗಳಿಗೆ ಮಧುರಾದತಿಮಧುರವು
ಖ್ಯಾತಿಯ ವಿಜಯರಾಘವ ಕೃತಿ–ಪ್ರ–
ಖ್ಯಾತಿಯ ಅಣ್ಣಂಗಾರ್ಯ ಕೃತಿ ೪

ನಿತ್ಯ ನೈಮಿತ್ತಿಕ ತಿರುವಾರಾಧದಿ
ನವ್ಯ ತದೀಯದ ಕೈಂಕರ್ಯ
ಸ್ತುತ್ಯಪ್ರಬಂಧ ಗೀತಾ ಶ್ರೀಭಾಷ್ಯ
[ದರ್ಥಿ]ಪಾರಾಯಣ ಪರಮಾನಂದ ೫

ಶ್ರೀರಂಗ ವೆಂಕಟ ವರದ ನಾರಾಯಣ
[ರಾ ಶ್ರೀ] ಪದಯುಗ ಪೂಜನ ಪ್ರಾಪ್ತಿ ಫಲ
ಓರಂತನುದಿನ ಧ್ಯಾನ ಗಾನಗಳು
[ಬೀರುವವು] ತೃಪ್ತಿಕರ ಸುಧಾನಿಧಿ ೬

ಜಾಜೀ ಕೇಶವ ಜಗವ ಪಾಲಿಸಲು
ಮಾಜದೆ ಮಾಡಿದ ಉಪಕೃತಿಯು
ರಾಜಿಪ ಚರಣಗಳಾಶ್ರಿತರಿಗೆ ಸವಿ
ಭೋಜನವೀವುದು ಹರಿಯೆಡೆಯೊಳ್ ೭

४३४

ಶ್ರೀವರ ಕೀರ್ತಿಯಂ ಅರ್ಥಿಯಿಂದಾಲಿಸ್ಯೆ ಚಿತ್ತಶುದ್ಧಿಯಿಂ ಪ

ಭಾವಿಸಿವಾರ್ತೆಯ ವ್ಯಾಸ ವಾಲ್ಮೀಕಿಯು
[ಆವರ]ಶುಕ ಮನುಶ್ರೇಷ್ಠರೆಲ್ಲ ನಿತ್ಯಪಠಿಪರೋ ಅ.ಪ

ಕೌರವರಿಂ ಪಾಂಡವರು ಸೋಲುತ
ಘೋರಾರಣ್ಯದಿ ತಿರುಗುತ್ತ
ಶೌರ್ಯದಿ ಗೋಗ್ರಹಣವನು ಸಾಧಿಸುತಲಿ
ಮೀರಿ ಸಂಧಿಕೇಳದ ದುರ್ಯೋಧನರ ಹತಗೈದ ೧

ರಾಮನು ಕಾಡೊಳು ಮೃಗವನು ಮರ್ದಿಸಿ
ಭೂಮಿಜೆಯಂ ತರೆ ರವಿಜನಿಂ
ಆ ಮಹಾಸಾಗರವನು ಬಂಧಿಸಿ ಲಂಕಾ
ಪ್ರೇಮಿಯನ್ನು ಕೊಂದು ಬಂದ ರಾಮಚರಿತಮಂ ೨

ದೇವಕಿಸುತ ಗೋಪೀಗೃಹವರ್ಧನ
ಗೋವರ್ಧನಗಿರಿಯೆತ್ತಿದ
ಮಾವಕಂಸಾದಿ ದುರ್ವೃತ್ತರ ಖಂಡಿಸಿ
ಸೇವಿಸುವ ಸಿಂಧುಗಳ ಸಲಹುವ ಜಾಜೀಶನು ೩

४३೫

ಹಸಿದು ನಾ ಬಳಲಲೇಕೋ ಈಸಮಯದಲ್ಲಿ
ಬಿಸಿಯೂಟ ಮಾಡುವೆನು ಪ

ಹಸನಾದ ಶೇಷಶಯನ ನಾಮದಡುಗೆಯು
ವಸುಮತೀಧವ ನಾಮರಸಾಯನವಿರೆ ಅ.ಪ

ಹರಿ ಹರಿ ಪರಮಾನ್ನವು ದುರಿತಾರಿ ಶೌರಿ
ಕರಿಗಡುಬು ಗರುಗೊಬ್ಬಟ್ಟು
ನರಸಿಂಹ ವಾಮನ ಅಂಬೊಡೆ ಹೂರಿಗೆಗಳು
ಕರಿವರದ ರವೆಯುಂಡೆ ಸಜ್ಜಿಗೆಯಿರಲು ೧

ದುಷ್ಟಮರ್ದನನೆನ್ನುವ ಇಷ್ಟವಾದ
ಹುಳಿಸಾರು ಮೊಸರುಗಳು
ಕೃಷ್ಣ ವಾಸುದೇವ ಸಣ್ಣಕ್ಕಿಯನ್ನವು
ವಿಷ್ಣು ಮಾಧವ ಬೆಣ್ಣೆಕಾಯ್ಸಿದ ತುಪ್ಪವಿದೆ ೨

ನಾರಾಯಣನೆನ್ನುವ ಸಾರವಾದ
ಹುಳಿಯನ್ನ ಮೊಸರನ್ನವು
ಸಾರಸಾಕ್ಷ ಶ್ರೀಶ ಕ್ಷೀರ ಸಕ್ಕರೆಯಿದ್ದು
ಮಾರಜನಕನೆಂಬ ಹಪ್ಪಳುಪ್ಪಿನಕಾಯಿರೆ ೩

ಪರಿಪರಿಯನ್ನಗಳು ಸರಿಯಾಗಿ ಭಕ್ಷ್ಯ
ಕರಿದೆಡೆ ಮಾಡಿರಲು
ಅರಿತು ಸವಿಯನೋಡಿ ಮರೆಯದೆ ಭುಂಜಿಸಿ
ನಿರುತ ನಿಜಾನಂದ ಪಡೆಯದೆ ಬರಿದೆ ೪

ಗೋಪಾಲನೆಂದೆಂಬೊ ಸೀಪಿನ ಎಳನೀರು
ಸೀ ಪಾನಕವಿಹುವು
ತಾಪತ್ರಯಹರ ಹೆಜ್ಜಾಜಿಕೇಶವ
ಆಪದುದ್ಧಾರಕನೆಂಬಮೃತವುಣದೆ ೫

(೩೦) ಕ್ಷೇತ್ರ ವರ್ಣನೆ

೪೩೬

(೧) ಶ್ರೀರಂಗ, ತಿರುಪತಿ, ಕಂಚಿ, ಮೇಲುಕೋಟೆ, ಹೆಜ್ಜಾಜಿ

ಮಂಗಳವು ಶ್ರೀರಂಗ
ಅಂಗನೆ ಮಣಿದೇವಿಗೆ ಪ

ಅಂಗಿಯಾದ ಆದಿಶೇಷ ಉ-
ತ್ತುಂಗ ವರ ವಿಭೀಷಣನಿಗೆ ಅ.ಪ

ಸಪ್ತಗಿರಿ ಶ್ರೀನಿವಾಸ
ಅಪ್ಪೀರ ಅಲರ್‌ಮೇಲಮ್ಮಗೆ
ಗುಪ್ತವಾಗಿ ಉಭಯ ರಕ್ಷ
ಸುಪ್ತ ಗೋವಿಂದರಾಜಗೆ ೧

ಕಂಚಿ ವರದರಾಜನಿಗೆ
ಮಂಚದ ಪೆರುನ್ದೇವಿಗೇ
ಹೊಂಚಿ ಬ್ರಹ್ಮಯಜ್ಞದಲ್ಲಿ
ಮಿಂಚುವ ದೇವರಾಜಗೇ ೨

ಯದುಶೈಲ ಚೆಲ್ವರಾಯ
ಮುದದಿ ಯದುಗಿರಿಯಮ್ಮಗೆ
ಪದುಮ ಪಾದ ಸಂಪತ್ತೆ
ಅದುಭುತರು ಯತಿರಾಜಗೆ ೩

ಹೆಜ್ಜಾಜಿ ಕೇಶವನ ಪೀಠ
ಅಜ್ಜ ಶ್ಯಾಮನ ವಿರಜೆಯಲ್ಲಿ
ಮಜ್ಜನಗೈಸಿ ಸೇವೆಗಾಗಿ
ಸಜ್ಜುಗೈದ ವೈಕುಂಠಕೆ ೪

೪೩೭

(೨) ಉಡುಪಿ ಕೃಷ್ಣ

ಕಂಡೇ ಕಡೆಗೋಲ ಪಿಡಿದನ ಉಡುರಾಜ ವದನನ
ಮಂಡೆಯೊಳ್ ಮಯೂರ ಪಿಂಛವನಿಟ್ಟನ ಪ

ಪಡುಗಡಲೆಡೆ ಉಡುಪಿಯೊಳಗಿಹ ಕಡಲಣುಗಿಯ
ಒಡೆಯಕೃಷ್ಣನ ಕಂಡೇ ಅ.ಪ

ಪ್ರಮೋದಾ ಶ್ರಾವಣ ಕೃಷ್ಣ ಪ್ರಪಂಚಗುರುವ
ಸುಮಶರಪಿತ ಸುಮನೋಹರ ಶ್ಯಾಮಸುಂದರನ ಸ್ವಪ್ನದಿ ೧

ಸತ್ಯವಂತರ್ಗಾಂ ಸತ್ಯಂ ಮುಕ್ತಿನಾಥಂ
ಉತ್ತಮತರಚಿತ್ತರಾದ ಭಕ್ತರ ಕಾಯವೆನೆಂದನ ೨

ಸುಳ್ಳು ಸುಳ್ಳೆಂದು ಪೇಳುವ ಪೊಳ್ಳನ ಪಾಪಿಯ
ತಳ್ಳುವೆ ಸುಖವಿಲ್ಲದಿರುವ ಖುಲ್ಲರ ಜತೆಯೊಳಗೆಂದನ ೩

ಹರಿಶ್ಚಂದ್ರ ನಳರೊಲು ಕೀರ್ತಿಯನು ಪರ್ಬಿಸಿ
ಶರಣರ ಸುಖಸರಣಿಯಲ್ಲಿ ಕರುಣದಿಂದ ಕಾವೆನೆಂದನಾ ೪

ಕನಸುಮನಸಿನಲ್ಲಿಯೂ ಅನವರತ ತನ್ನಯ
ಘನಪದಯುಗವನಜ ತೋರಿ ಅನುವನೀವ ಜಾಜೀಶನ ೫

೪೩೮

(೩) ರಂಗನಬೆಟ್ಟ(ಸೋಲೂರು ಸಮೀಪ)ರಂಗನಾಥ

ತಟ್ಟೇಕೆರೆಯಾ ರಂಗಾ ಜಯ ಮಂಗಳಾಂಗ ಪ

ಸೃಷ್ಟೀಶ ಪಾದ ನಂಬಿದೆ ಬಿಡಿಸೆನ್ನ ಭಂಗ ಅ.ಪ

ಲಕ್ಷ್ಮೀನಾಯಕ ಭಕ್ತವೃಂದ ರಕ್ಷಕ ಶಕ್ತ
ರಕ್ಷಿಸು ಕಮಲಾಕ್ಷ ಕರುಣಾಕಟಾಕ್ಷ ೧

ಪತಿತ ಪಾವನ ಪುಣ್ಯಧಾಮ ಮಹಿತಮಾನ್ಯ
ಶ್ರುತಿನುತ ಗುಣಭೂಷಾ ಭವನಾಶಾ ೨

ಗಾಂಗೇಯನುತನಾಮ ಹಿಂಗದೆನ್ನಲಿ ಪ್ರೇಮ
ಸಾಂಗವೇದಸ್ತೋಮ ಸುತ್ರಾಮಾ ೩

ಸುರಮುನಿವಂದ್ಯ ಭಾಗವತರ ವೃಂದ
ಕರಿರಾಜ ಪರಿಪೋಷಾ ಹೆಜ್ಜಾಜೀಶ ೪

೪೩೯

(೪) ಕೆಂಗಲ್ಲು ಆಂಜನೇಯ

ಕೆಂಗಲ್ಲ ಹನುಮಂತರಾಯ ನಮ್ಮ
ರಂಗನಾಥಗೆ ಬಹು ಪ್ರಿಯ ಪ

ಮಂಗಳಕರ ವಜ್ರಕಾಯ ಉ
ತ್ತುಂಗ ವಿಕ್ರಮ ಪೊರೆ ಜೀಯ ಅ.ಪ

ಶ್ರಾವಣ ಕಡೆ ಶನಿವಾರ ಬರೆ
ಭಾವಿಸಿ ಭಕ್ತರು ಸೇರೆ
ಆವಾವೆಡೆ ಜನ ಮೀರೆ ನಿನ್ನ
ತೀವಿದ ಮನದಿ ಪಾಡುವರೊ ದೊರೆ ೧

ಬಹುಭಜಕರು ಕುಣಿದಾಡಿ ಗುಣ
ಸಾಹಸ್ರಗಳ ಕೊಂಡಾಡೀ
ಶ್ರೀಹರಿ ವೈಭವ ನೋಡೀ
ಮಹದಾನಂದದೊಳಗೋಲಾಡಿ ೨

ಪರಿ ಪರಿ ವ್ಯಾದಗಳಿಂದ ಸಿರಿ
ವರನುತ್ಸವ ಬಹುಚಂದ
ತಿರುಪತಿ ಯಾತ್ರಿಕರಿಂದ
ನೆರೆದೆಸೆವ ಕಲ್ಯಾಣ ಬೃಂದ ೩

ತಾಳ ತಂಬೂರಿ ಮದ್ದಳೆಯ
ಮೇಳ ತಮ್ಮಟೆಗಳ ಬಹು ಘೋಷ
ಭೂಲೋಕದಿಂ ಸ್ವರ್ಗಕೈದಿ ಶ್ರೀ
ಲೀಲೆಯ ತೋರ್ಪುದು ನಿಜದಿ ೪

ವರಜಾಜಿ ಕೇಶವನ ನಾಮವನು
ನಿರುತ ನೆನೆವ ಶರಣ ಪ್ರೇಮ
ಕರುಣದಿ ಪೊರೆ ಪುಣ್ಯಧಾಮ
ಸಿರಿ ಜಯಚಾಮನೃಪಸ್ತುತ್ಯ ಭೀಮ ೫

೪೪೦

(೫) ದೇವರಹೊಸಹಳ್ಳಿ ಆಂಜನೇಯ (ಕೆಂಗಲ್ಲು ಸಮೀಪ)

ಪರಿಪಾಹಿ ಸಂಜೀವರಾಯ ಜೀಯ
ಕರವ ಮುಗಿವೆ ವಜ್ರಕಾಯ ಪ

ವರ ಜಾಜಿ ಕೇಶವ ಪ್ರೇಮ
ವರ ದೇವರಹೊಸಹಳ್ಳಿ ಧಾಮ ಅ.ಪ

ರಾಮಾವತಾರದಿ ಹರಿಗೇ ನೀನು
ನೇಮ ಸೇವಕನಾದೆ ಭರದೇ
ಆ ಮಹೀಜಾತೆಗೆ ಮುದ್ರೆ
ಸ್ವಾಮಿ ಪೇಳ್ದಂತೆ ನೀನು ಯಿತ್ತೆ ೧

ಅಂಜನದೇವಿಕುಮಾರ ಶ್ರೀಮ
ದಾಂಜನೇಯ ಗಂಭೀರ

ಸಂಜೀವನಾದ್ರಿಯ ತಂದೆ ಪ್ರ
ಭಂಜನ ಸೌಮಿತ್ರಿಗಂದೇ ೨

ರಾಮನಾಮ ಧ್ಯಾನನಿರತ ಸುಖ
ಶ್ಯಾಮನ ಕ್ಷೇಮ ಸುವಾರ್ತೆ
ವ್ಯೋಮದಿ ಭಕುತಗೆ ಪೇಳ್ದೆ ಸುಪಿ
ತಾಮಹ ಪದವಿಯ ಪಡೆದೆ ೩

ವ್ಯಾಸಯತೀಂದ್ರ ಕರಪೂಜ್ಯಾ ನಿತ್ಯ
ದಾಸರಪೊರೆವ ಸಾಮ್ರಾಜ್ಯ
ದೋಷ ಶೋಷಣ ಪ್ರಭಾವ ಗುಣ
ಭೂಷಣ ಸಜ್ಜನ ಜೀವ ೪

ಭೂತ ಪ್ರೇತ ಬ್ರಹ್ಮ ಪಿಶಾಚಂಗ
ಳಾತುರದಿಂ ಬಾಧಿತರು
ಖ್ಯಾತಿಯ ಮಾರುತಿ ನಾಮಾಮೃತವ
ಪ್ರೀತಿಯಿಂ ಸವಿವರೋ ಭೀಮಾ ೪

ಹಿಂದಣ ಜನ್ಮದ ಪಾಪದಿಂದ
ನೊಂದರು ಪ್ರಾರ್ಥಿಸಿ ತಂದೆ
ಭಾವದುರಿತಂಗಳನಂದು ನಿ
ರ್ಬಂಧಿಸಿ ಕಳೆಯುವೆ ಬಂಧು ೫

೪೪೧

(೬) ವೀರನಗೆರೆ (ಮೈಸೂರು) ಮೂರುತಿ

ಮಾರುತಿರಾಯನೆ ಸಾರಗುಣಾನ್ವಿತ
ಶ್ರೀರಘುರಾಮನ ಪ್ರಿಯ ಭಕ್ತ ಪ

ಅಂಜನ ಸಂಭವ ಭಂಜನ ಖಿಲಭವ
ರಂಜಿಪ ಮಾರುತಿ ಪೊರೆಯೆನ್ನ ೧

ಹರಿಪದ ಕಮಲವ ನಿರುತವು ಪೂಜಿಪ
ಉರುತರ ಪದವಿಯ ಕೊಡು ನನಗೆ ೨

ವೀರನಗೆರೆ ಗುರು ಮಹಾಶೂರದೊರೆ
ಸಾರುತ ಮಣಿವೆನು ಮರೆಯದಿರೈ ೩

ಜಾಜೀಕೇಶವ ಸನ್ನಿಧಿ ಸೇವಕ
ಮೂಜಗದೊಡೆಯಾ ಪೊರೆಯಯ್ಯಾ ೪

(ಏ) ಸಂಪ್ರದಾಯದ ಹಾಡುಗಳು

೪೪೨

ಆರತಿ ಬೆಳಗುವೆ ನಿನಗೆ ಶ್ರೀರಾಮ
ಸಾರಸಾಕ್ಷ ಹರಿ ಮೇಘಶ್ಯಾಮ ಪ

ಪೀತಾಂಬರಧರ ತುಲಸೀಮಾಲ
ಪಾತಕ ವಿದಳನ ಸೀತಾಲೋಲ ೧

ಕಿರೀಟ ಕುಂಡಲ ಮೃಗಮದತಿಲಕ
ನಿರುಪಮ ಸುಂದರ ಮನ್ಮಥ ಜನಕ ೨

ಭರತ ಶತ್ರುಘ್ನರ ಚಾಮರ ಸೇವ
ಹರುಷದಿ ತೋರುವ ಪರಮಪ್ರಭಾವ ೩

ಸೋದರ ಲಕ್ಷ್ಮಣ ಹನುಮ ಸಮೇತ
ಮೋದದಿ ಮಾತೆಯರನು ಪೊರೆದಾತ ೪

ನಾರದ ಶುಕ ಮುನಿನುತ ಶುಭನಾಮ
ವಾರಿಜಭವ ಪತಿ ಪೂರ್ಣಸುಕಾಮ ೫

ಶರಣಾಗತ ಪರಿಪಾಲಕ ಶೌರಿ
ಕರುಣಾಕರ ಕಲಿವೈರಿ ಮುರಾರಿ ೬

ಜಾಜೀಶ ಚನ್ನಕೇಶವ ಮೂರ್ತಿ
ರಾಜಿಸುತಿದೆ ನಿನ್ನ ಅಗಣಿತ ಕೀರ್ತಿ ೭

೪೪೩

ಆರತಿ ಬೆಳಗುವೆ ಶ್ಯಾಮಸುಂದರ ಶ್ರೀ
ಮಾರಜನಕನಿಗೆ ಮುದದಿಂದ ಪ

ಸಾರಸಾಕ್ಷ ಶ್ರೀ ಭೂ ನೀಳಾ ಸುಪಾವನ
ಮೂರುತಿ ಪರಮನಿಗೆ ಅ.ಪ

ಮಾರೀಚ ಭವ ಭಯಬಂಧವ ಹರಿಸಲು
ಶರಣರಿಗೊಲಿಯುವ ಶಾಂತನಿಗೆ
ತೋರಮಾಂಗಾಯ್ ಕಿರೀಟಕುಂಡಲ
ಮೃಗಮದತಿಲಕದ ಮುಖದವಗೇ ೧

ಬಲಮುರಿ ಶಂಖದ ಕೊರಳೊಳು
ಒಲೆವ ಮುತ್ತು ರತ್ನದ ಮಾಲೆಗಳ
ಒಲಿದುಧರಿಸಿಹ ವೈಜಯಂತಿಯಲಿಲ
ನಲಿಯುವ ಪಂಕಜನಾಭನಿಗೆ ೨

ಕರದೊಳು ಶಂಖಚಕ್ರವು ಗದೆಯು
ಪರತರ ಪದ್ಮವ ಪಿಡಿದಿರುವ
ಸುರಪೀತಾಂಬರವಂ ಧರಿಸಿ
ಕಿರು ನಡುಗೊಡ್ಯಾಣವ ನಿಟ್ಟಿಹಗೇ ೩

ನೋಂತುಸತತ ಸದ್ಭಕ್ತ ಆ ಮಣಿವರ
ಶಿರಮಣಿ ಪಚ್ಚೆಯ ಪದಗಳಿಗೆ

ಭ್ರಾಂತಿಯತೊಲಗಿಸಿ ಶರಣರ ಪೊರೆವಾನಂತ
ಜಾಜೀಶ ಕೇಶವಗೆ ೪

೪೪೪

ತಾಂಬೂಲ ಕೊಡುವೆನೀಗ ಕೈಕೊಳ್ಳೈ ಪ್ರಿಯ
ನಾಂ ಬಲು ವಿಲಾಸದಿಂದ ಬೆಳ್ಳಿತಟ್ಟೆಯೊಳ್ ನಿಮಗೆ ಪ

ಮೈಸೂರುವೀಳೆಯದೆಲೆ ಬೀರೂರುಅಡಕೆ
ವಾಸನಾಯುಕ್ತ ಚನ್ನಪಟ್ಟಣಸುಣ್ಣವು ಸಹಿತ ೧

ಏಲಾಲವಂಗ ಜಾಯಿಕಾಯಿ ಪತ್ರೆಯ ಒಳ್ಳೆ
ಬಾಲಮೆಣಸು ಪಚ್ಚಕರ್ಪೂರ ಕೇಸರಿ ಬೆರೆದ ೨

ಖಂಡಸಕ್ಕರೆ ಕೊಬರಿ ಸೇರಿಸಿರುವೆನ್ನೈ ಅ
ಖಂಡಾದಿ ದೇವಸೇವ್ಯ ಜಾಜಿಕೇಶವಾ ಸವಿಯ ೩

೪೪೫

ಬಾಲಗೋಪಾಲ ಹಸೆಗೆ ಲೀಲೆಯಿಂದ ಬರ್ಪುದೈ ಪ

ನೀಲಮೇಘನಿಭ ಸುರೂಪ ಕಾಲಕಾಲವಂದ್ಯ ಬೇಗ ಅ.ಪ

ಸಾರಸಾಕ್ಷ ಸರ್ವರಕ್ಷ ಘೋರದೈತ್ಯಸಂಹಾರ
ನಾರದಾದಿವಂದ್ಯ ನಮಿಸಿ ನೀರೆಯರು ಕರೆಯುವರು ೧

ಸಾಮಜ ಧ್ರುವ ಭಕ್ತ ವರದ ಸಾಮಗಾನ ಲೋಲನೇ
ಕಾಮಜನಕ ಕರುಣಪೂರ ಸ್ವಾಮಿಪ್ರೇಮ ತೋರುತ ೨

ಅಜಸುಪೂಜ್ಯ ತ್ರಿಜನರಾಜ್ಯ ಭಜಕಜನ ಮನೋಹರ
ರಜತಹೇಮಪೀಠಕೀಗ [ಬೇಗ] ಜಾಜಿ ಕೇಶವನೇ ೩

೪೪೬

ಬಾರೆ ದೇವಿ ಭಾಗ್ಯವಂತೆ ಬೇಡಿಕೊಂಬೆ ಬೇಗ ಹಸೆಗೆ ಪ

ಸುತ್ತನಾಲ್ಕು ದೀಪಗಳಿಟ್ಟು ಎತ್ತಲೂ ಪ್ರಜ್ವಲಿಸುತಿರ್ಪ
ಮುತ್ತುರತ್ನ ಕೆತ್ತಿಸಿರುವ ಉತ್ತಮ ಮಣಿಪೀಠಕೆ ೧

ಜಡೆಯಬಂಗಾರವನು ಹಾಕಿ ಬಿಡದೆ ಕಮಲಮಾಲೆಧರಿಸಿ
ಮುಡಿದು ಮಲ್ಲಿಗೆ ಸಂಪಗೆಯ ಒಡನೆ ಪೀತಾಂಬರವನುಟ್ಟು ೨

ಜಾಜಿಪಟ್ಟಣನರಸಿಯೆ ನೀಂ ರಾಜಿಸು ತನುರಾಗದಿಂ
ದೀನ ಜನರಂ ಹರುಷಗೊಳಿಸು ಮಾಜದೇ ನೀ ಮಂಗಳಾಂಗಿ ೩

೪೪೭

ಭರ್ತೃ ಭವನದಿ ಮಗಳೆ ಚಿರಕಾಲ ಸುಖಿಸೌ
ಕರ್ತ ಶ್ರೀಹರಿ ಪದವನರ್ಥಿಯಿಂ ಭಜಿಸೌ ಪ

ಪತಿಯೆ ಸಿರಿವರನೆಂದು ಅತಿಶಯದಿ ಭಾವಿಸುತ
ಸತತ ಸೇವೆಯ ಮಾಡಿ ಗತಿಯೆ ನೀನೆನುತ
ಸತಿಶಿರೋಮಣಿಯಾಗಿ ಮಿಗಿಲು ಮೋದವ ಪಡೆದು
ಕ್ಷಿತಿಯೊಳಗೆ ನೀ ಬಾಳು ಮತಿವಂತೆಯಾಗಿ ೧

ಅತ್ತೆಮಾವಂದಿರನು ತಾಯಿತಂದೆಗಳಂತೆ
ಅತ್ತಿಗೆ ನಾದಿನಿಯ ಅಕ್ಕತಂಗಿಯರೋಲ್
ಉತ್ತಮಳೆ ಭಾವನಂ ಮೈದುನನ ಸಹಜರೆಂ
ದರ್ಥಿಯಿಂದರಿಯುತ್ತ ಉಪಚರಿಸುತಿರು ನೀಂ ೨

ಬಂಧುಗಳ ನೀ ಬಹಳ ಪ್ರೇಮದಿಂ ಕಾಣುತ್ತ
ವಂದಿಸುವುದೌ ಪರಮಭಾಗವತರಡಿಗೇ

ಇಂದಿರಾದೇವಿಯೆಂದ್ಯೆದೆಯ ಪೂಜಿಸೌ
ಸುಂದರ ವಿದ್ವರ ಸುತರಕೂಡ ೩

ಸರ್ವತ್ರದಲಿನೀನು ಹಿತವಚನ ಮಾಡುತ್ತ
ಸುವ್ರತದ ಶುಭಫಲವ ನಿತ್ಯ ಪಡೆಯುತ್ತ
ಗರ್ವವರ್ಜಿತೆಯಾಗಿ ಗುಣಮುಖಿಯು ಎಂದೆನಿಸಿ
ಸರ್ವಕಾಲವು ಗೌರವ ಕೀರ್ತಿಯನು ಬೀರೌ ४

ಜಾಜಿಕೇಶವ ನಿನ್ನ ಸೌಭಾಗ್ಯವತಿಯಾಗಿ
ಸಾಜದಿಂ ಸಲಹುವನು ಸುಜನವಂದಿತನು
ಪೂಜಿಪರ ಮರೆಯದಿಹ ಶ್ರೀಹರಿಯ ಕರುಣದಿಂ
ಈ ಜಗದಿ ರಾಜಿಸೌ ಪರಮಮಂಗಳೆಯೇ ೫

೪೪೮

ಮಂಗಳವಾಗಲಿ ಶ್ರೀಮಾಧವನಿಗೆ
ಅಂಗಜಪಿತ ಗೋವಿಂದನಿಗೆ ಪ

ಗಂಗಾ ಜನಕಗೆ ರಂಗನಾಥನಿಗೆ ಶೃಂಗಾರಮೂರ್ತಿ ಕೇಶವಗೆ ಅ.ಪ

ಸೋಮಕ ಮದನಗೆ ಆಮೆಯಾದವಗೆ
ಭೂಮಿಯನುದ್ಧರಿಸಿದವಂಗೆ
ಆ ಮಗು ಪ್ರಹ್ಲಾದನ ಕಾಯ್ದಂಥ ಸ
ವಾಮನಮೂರ್ತಿ ಉಪೇಂದ್ರಗೆ ೧

ಪರಶುರಾಮನಿಗೆ ಸೀತಾರಾಮಗೆ ವರವೇಣುಗಾನಲೋಲನಿಗೆ
ದೊರೆ ಶುದ್ಧೋದನಸುತಗೌತಮನಿಗೆ
ಧರಣೀಭಾರ ನಿಳುಹುವಗೆ ೨

ಪಾಪನಿವಾರಿಸಿ ಶಿವನಂ ಕಾಯ್ದಾ ಶ್ರೀಪತಿ ಪಾವನಮೂರುತಿಗೆ
ತಾಪತ್ರಯಹರ ತುಲಸೀಮಾಲಿಗೆ ತಾಪಸನುತ ಜಾಜೀಶನಿಗೆ ೩

೪೪೯

ಮಡಿಲು ತುಂಬಿದರಮ್ಮ ಮುತ್ತೈದೆಯರೆಲ್ಲ
ಕಡಲಕುಮಾರಿಗೆ ಸಡಗರದಿಂದ ಪ

ಅರಿಶಿನ ಕುಂಕುಮ ಸುಗಂಧಸೇವಂತಿಗೆ
ಪರಿಮಳ ಪಾದರಿ ಮಲ್ಲಿಗೆ ಮುಡಿಸಿ ೧

ರಸಬಾಳೆ ಖರ್ಜೂರ ಖರ್ಬೂಜ ದಾಳಿಂಬೆಯ
ಕಸಿಮಾವು ಸೇವು ಅಂಜೂರ ದ್ರಾಕ್ಷಿ ೨

ಕೊಡಗಿನ ಕಿತ್ತಳೆ ದೃಢತರ ಸಿಹಿನಿಂಬೆ
ಕಡುಸವಿ ಗಂಗಪಾಣಿ ಕಪಿತ್ಥಗಳನು ೩

ಅಡಿಕೆ ಬೆಳ್ಳೆಲೆ ದ್ರಾಕ್ಷಿ ಗೋಡಂಬಿ ಸಕ್ಕರೆ
ಒಡನೆ ಕೊಬರಿ ನಾರಿಕೇಳ ಬೆಲ್ಲದಚ್ಚು ೪

ಮುತ್ತುರತ್ನ ಮಾಣಿಕ್ಯ ಅಪರಂಜಿಯ ಸ್ವರ್ಣ
ವಿತ್ತ ಮುದ್ರೆಯ ಹಣ ಬಾದಾಮಿಬೆರಸಿ ೫

ಬೆಳ್ಳಿ ತಟ್ಟೇಲಿ ಪಂಚವಾಳ ಪನ್ನೀರುದಾನಿ
ಒಳ್ಳೆ ಗಂಧವು ಮಂಗಳ ದ್ರವ್ಯವಿಟ್ಟು ೬

ಜರತಾರಿ ಸೀರೆ ಕಾಮಕುಪ್ಪಸ ಕೊಟ್ಟು
ಹರುಷದಿ ಹರಸುತ್ತ ಅಕ್ಷತೆ ಸೂಸಿ ೭

ಜಾಜಿಕೇಶವ ಸಹ ಮೂಜಗವಾಳೆ
ರಾಜಿಪ ಮಕ್ಕಳೊಡೆ ನಿತ್ಯಸುಖಿಯಾಗು ೮

೪೫೦

ಮಾಲೆಯ ಹಾಕುವೆ ಲೀಲೆಯಿಂ ತಳೆವುದು
ಶ್ರೀಲಲನಾವರ ಪಾಲಿಸು ಕಂಠವ ಪ

ಸಂಪಿಗೆ ಮಲ್ಲಿಗೆ ಮೊಲ್ಲೆಗುಲಾಬಿಯು
ಸೊಂಪಿನ ಪಚ್ಚೆಯ ಇಂಪಿನಿಂ ಕಟ್ಟಿದ ೧

ಮರುಗ ಸೇವಂತಿಗೆ ಪಾದರಿ ಹೂವಿನ
ಮೆರೆವ ಮಂದಾರದ ಪಾರಿಜಾತದ ಸುರ ೨

ಸುರಗಿ ಸುಗಂಧರಾಜ ಸುರಹೊನ್ನೆ ದವನವು
ಪರಮಗುಣಾಕರ ವರದಹೆಜ್ಜಾಜಿಯ ೩

೪೫೧

ಲಾಲಿ ಲಾಲಿ ನಮ್ಮ ಹರಿಯೆ ಲಾಲಿ ಪ

ಶ್ರೀಲತಾಂಗಿಯೊಡನೆ ಮೆರೆವದೊರೆಯೆ ಲಾಲಿ ಅ.ಪ

ನಂದಲಾಲಿ ಗೋವಿಂದ ಲಾಲಿ
ಕಂದನಾಗಿ ಲೋಕ ತಂದೆ ಲಾಲಿ ೧

ಬಾಲಲಾಲಿ ತುಲಸಿಮಾಲ ಲಾಲಿ
ಕಾಲಕಾಲವಂದ್ಯ ಗೋಪೀಲೀಲ ಲಾಲಿ ೨

ದೇವಲಾಲಿ ವಾಸುದೇವ ಲಾಲಿ
ದೇವಕೀತನಯ ಸದ್ಭಾವಲಾಲಿ ೩

ರಂಗಲಾಲಿ ಮಂಗಳಾಂಗಲಾಲಿ
ಗಂಗಾತಾತ ಲೋಕೋತ್ತುಂಗ ಲಾಲಿ ೪

ರಾಮಲಾಲೀ ಭಕ್ತಪ್ರೇಮ ಲಾಲಿ
ಶ್ಯಾಮಸುಂದರಾಂಗ ನಮ್ಮ ಸ್ವಾಮಿ ಲಾಲಿ ೫

ಸತ್ಯ ಲಾಲಿ ಮೌನಿಸ್ತುತ್ಯ ಲಾಲಿ
ನಿತ್ಯ ನಿಗಮವೇದ್ಯ ಅನ್ನುಕ್ತಲಾಲಿ ೬

ರಾಜಲಾಲಿ ರತ್ನತೇಜ ಲಾಲಿ
ರಾಜರಾಜಪೂಜ್ಯ ಜಾಜಿಶ್ರೀಶ ಲಾಲಿ ೭

೪೫೨

ಹೂವಿನ ಚೆಂಡನಾಡುವ ಕಾಂತ ಭಾವಿಪರಿರುವರು ನೋಡುತ್ತ ಪ

ಈ ವಿನೋದಕೆ ಐದೆಯರಿತ್ತರೋ
ಆಹ ದುಂಡುಮಲ್ಲಿಗೆ ಸಂಪಿಗೆ ಅ.ಪ

ಅಂಬರದೊಳು ವರರಂಭೋರ್ವಶಿಯರು
ಸಂಭ್ರಮದಿಂ ಪೂಮಳೆಗರೆವರ್
ಅಂಬುಜವಾಸಿನಿ ಕೇಶವರೆಂಬೊಲು
ಕಂಬುಕಂದರಮೊಲ್ಲೆ ಹೂವಿನ ಚೆಂಡ ೧

ತಾಳಮದ್ದಳೆ ವೀಣೆಯ ನುಡಿಸಿ
ಗಾನವಗೈವರು ಗಂಧರ್ವರು
ನೀನೀಗ ಜಾಲವಮಾಡದೆ ಜಾಜಿ ಶ್ರೀಶನ
ಧ್ಯಾನಿಸಿ ಆಡು ಜಾಜಿಯ ಹೂವಿನಚೆಂಡ ೨

(ಏ) ವಿಶೇಷ ಸಂದರ್ಭದ ಹಾಡುಗಳು

೪೫೩

ಬರಗಾಲ ಮತ್ತು ಯುದ್ಧವನ್ನು ಕುರಿತು

ನಿರ್ದಯನಾಗಬೇಡವೋ ಭಗವಂತ
ದುರ್ದಿನ ದೂರಮಾಡೋ ದೇಶಕ್ಕೆ ಪ್ರಶಾಂತ ಪ

ಮಳೆಗಾಲ ಮರೆತುಹೋಗಿ ಬೇಸಗೆ ಬೆಳೆದು ಬಂದು
ನೆಲವೆಲ್ಲ ದುರ್ಭಿಕ್ಷ ತಾಂಡವವಾಡುತಿದೇ ೧

ಕೆರೆಕಟ್ಟೆತೊರೆಭಾವಿ ಹೊಳೆಯಲ್ಲಿ ನೀರಿಲ್ಲ
ಧರೆಯಲ್ಲಿ ತೃಣವಿಲ್ಲ ಬರಿಗಾಡಾಯ್ತೋ ೨

ಹೊಲಗದ್ದೆ ತೋಟಗಳ ಬೆಳೆಯೆಲ್ಲ ಒಣಗಿತು
ಫಲವಿಲ್ಲ ಜನವೆಲ್ಲ ಗೋಳಾಡುತಿಹರೋ ೩

ಅನ್ನಾಹಾರಗಳಿಲ್ಲ ಗೋಗಳಿಗೆ ಗ್ರಾಸವಿಲ್ಲ
ಚಿನ್ನದಂಥ ಮಕ್ಕಳೆಲ್ಲ ಉಣಿಸಿಲ್ಲದಿಹರೋ ೪

ಧನಿಕರ್ಗೆ ಧನದಾಸೆ ಬಡವರ್ಗೆ ಕೂಳಿಲ್ಲ
ದಿನಕಳೆವುದು ಕಷ್ಟವಾಗಿ ಬರಗಾಲ ಬಂತೋ ೫

ಕಳವು ಕೊಲೆಯು ದಂಗೆ ದಾರಿದರೋಡೆಯು
ಉಳಿಗಾಲ ಬರಲಿಲ್ಲ ಯುದ್ಧದ ಭಯವು ೬

ಒಂದೊಂಬತ್ತಾರೈದು ಹತ್ತು ಹನ್ನೊಂದರ ಮಧ್ಯೆ
ಬಂದು ಜಗದ ಕುತ್ತು ಕತ್ತಿಯಂತೆ ಕಂಡಿತು ೭

ಬೆಳಗುಪೂರ್ವ ಆಶ್ವಿಜ ಕಾರ್ತಿಕದೆ ಧೂಮಕೇತು
ಇಳೆಗಂಡಕಳೆ ಯಮದ್ವಾರವ ಮುಚ್ಚಿ ೮

ಅವಿಶ್ವಾಸದ ವಿಶ್ವವಸುವ ಪರಾಭವದಿಂ ಪ್ರೀತಿತೋರಿ
ಭುವನವೆಲ್ಲ ತಣಿಯುವಂತೆ ಭವದ ಭಂಗ ಹರಿಸೋ ೯

ಪಾಕಿ–ಚೀನಾ ಪತನಗೈದು ಜೋಕೆಯಿಂ ಭಾರತವ ರಕ್ಷಿಸಿ
ಲೋಕಕ್ಕೆ ಕ್ಷಾಮಹರಿಸಿ ಕ್ಷೇಮಕೊಟ್ಟು ಪೊರೆಯೋ ೧೦

ನಗೆಯಿಲ್ಲ ಸಂತೋಷ ಸುದ್ಧಿ ಕೇಳುತಲಿಲ್ಲ
ಮಿಗಿಲಾಗಿ ಜನರೆಲ್ಲ ಸೊರಗಿ ಸುತ್ತುವರೋ ೧೧

ಕನ್ನಡದ ನಾಡಿಗೆ ಹೊನ್ನಿನ ಬಿರುದಿದೆ
ಖಿನ್ನತೆ ತಾರದೆ ಉನ್ನತಿ ಕಾಪಾಡು ೧೨

ಮುಂದೆಮಗೆ ಗತಿಯೇನು ಬಾಳುವಬಗೆಯೆಂತು
ಬಂಧು ನೀನಿದ್ದುಕೊಂಡು ಅನ್ಯಾಯವಾಗಿದೆ ೧೩

ತಂದೆ ತಾಯಿಯು ನೀನು ಹೊಂದಿದ ಬಳಗ ನೀನು
ಕುಂದಿಲ್ಲದೆಮ್ಮನ್ನು ಕಾವ ಪ್ರಭು ನೀನು ೧೪

ಸುವೃಷ್ಟಿ ಸಸ್ಯವೃದ್ಧಿ ಜೀವನ ಸಮೃದ್ಧಿಯು
ಸುವೃತ್ತಿ ಕರುಣಿಸಿ ಪೊರೆ ಜಾಜಿಶ್ರೀಶ ೧೫

೪೫೪

ನಾರಾಯಣ ಕೃಷ್ಣ ಬೆಳಗಾಯಿತೇಳಯ್ಯ
ಮೂರು ಲೋಕಂಗಳಿಗೆ ಮಂಗಳವ ಬೀರಯ್ಯ ಪ

ಹರಿಹರಿ ಶ್ರೀನಿಲಯ ಪರವಾಸುದೇವ ಅ.ಪ

ಬಂದಿರುವರ್ರೈ ಬ್ರಹ್ಮ ರುದ್ರೇಂದ್ರರು ತಂದೆ
ತಂದಿರುವರ್ರೈ ಮಹನಿಧಿ ಕನಡಿ ಧೇನುಗಳ
ನಿಂದು ಗಾನವಮಾಡುತಿರುವರಾನಂದದಿ
ಗಂಧರ್ವರಪ್ಸರೆಯರಿಂದು ಕುಣಿದಾಡಿ ಕೂಡಿ ೧

ದಾಸರೊಡೆ ತುಂಬುರರು ನಾರದರು ಜಯಜಯ
ಶ್ರೀಶನೇ ಕೇಶವ ಗಜವರದ ಎಂದು

ಆಶ್ರಯಿಸಿ ಚರಣಕ್ಕೆ ಶರಣೆಂದು ಮಣಿಯವರು
ದೋಷನಾಶನ ಲೋಕಕಲ್ಯಾಣ ತ್ರಾಣ ೨

ಪತಿವ್ರತಾ ಸ್ತ್ರೀಯರುಗಳತಿಶಯ ಮಡಿಯುಟ್ಟು
ಹಿತವಾದ ಹುಗ್ಗಿ ಸಜ್ಜಿಗೆಯ ಗೈದು
ಪತಿತಪಾವನ ನಿನಗೆ ದಧ್ಯನ್ನ ನೀಡುವರೊ
ಕ್ಷಿತಿನಾಥ ನೀನವನು ತೋಷದಿಂ ಭುಜಿಸೊ ೩

ರೋಗರುಜಿನಗಳಳಿದು ಆಯುವೃದ್ಧಿಯದಾಗಿ
ಭಾಗವತ ಸಕುಟುಂಬ ಸಂತೋಷಗೂಡಿ
ಭಾಗವತ ಭಾರತ ರಾಮಾಯಣಗಳ ಹಾಡಿ
ಆಗಲ್ಯೆ ಆಗಮಾರ್ಚನೆ ಆಲಯಗಳೊಳಗೆ ೪

ಕಮಲಲೋಚನ ಕೆಟ್ಟ ಸ್ವಪ್ನ ಫಲವಳಿಸಿ
ಯಮಕಂಟವಂ ಕಳೆದು ಭ್ರಮೆಗಳನು ನೀಗಿ
ಸುಮನಸರ ಕೂಡಿ ಶ್ರೀಹರಿಯ ಗುಣಗಾನ ಮಾಡಿ
ಅಮರರಾಗಿಸಿ ಅಮಿತ ಅಮೃತವುಣಿಸ್ಯೆ ೫

ಕ್ಷುಧ್ರಪಾಕೀ–ಚೀನ ಕೊಬ್ಬಿ ಛಿದ್ರಿಸುತು
ಭದ್ರತೆಯನಾಡೊಳಗಸ್ಥಿರತೆಗೈಯುತ್ತ
ಆದ್ರಿಅಂಬುಧಿ ಮಧ್ಯೆ ಭಾರತಿಯ ನಲಿಸುತ್ತ
ಮುದ್ರೆಯುಂ ಧ್ವಜವನುಂ ನಿನ್ನವಾಗಿರಿಸ್ಯೆ ೬

ಕಾಲಕಾಲಗಳಲ್ಲಿ ಮಳೆಬಿಡದೆ ಸುರಿದು
ಶಾಲಿಸಂತರ ಧಾನ್ಯ ಎಲ್ಲೆಲ್ಲು ಬೆಳೆದು
ಪಾಲೀವ ಗೋ ಮಹಿಷಿ ಊರ್ತುಂಬ ನೆರೆದು
ಶ್ರೀಲೋಲ ಕರುಣಿಸ್ಯೆ ಕನಕವೃಷ್ಟಿಯನು ೭

ಎದುರು ನೋಡುತ ನದಿಯು ಹರಿವುದು ಸಾಗರಕೆ
ಮುದದಿಂದ ತಾವರೆಯು ಸೂರ್ಯನನ್ನು
ವಿಧಿವಶದಿ ಪಾಪಿಗಳು ಯಮಲೋಕವನ್ನು
ಸುಧೆಸವಿಯೆ ಭಕ್ತರು ಪರಮಪದವನ್ನು ೮

ಮಕ್ಕಳಿಲ್ಲದ ಜನರು ಮಕ್ಕಳನು ಹಡೆದು
ಲಕ್ಷ್ಮಿಯೊಲವನು ಹಾಡಿ ಜನರೆಲ್ಲ ದುಡಿದು
ಭಕ್ತರಾಗುತ ಸರ್ವ ವಣಿಗೆಗಳು ನಡೆದು
ಮುಕ್ತರಪ್ಪಂತೆಲ್ಲರ ಮಾಡು ಜಾಜೀಶ ೯

ಸಂಪತ್ತಯ್ಯಂಗಾರ್ಯರ ಕೀರ್ತನೆಗಳು

(ಅ) ಆತ್ಮನಿವೇದನಾ ಕೃತಿಗಳು

೪೫೫

ಏನು ಹೇಳಲಯ್ಯ ರಂಗ ಎಲ್ಲಿ ಹೋಗಲಯ್ಯ
ನನ್ನಮನಸು ಮಂಗವಾಗಿ ದೂರ ತಳ್ಳಿಹುದಯ್ಯ ಪ

ಎಲ್ಲೆಯಿಲ್ಲದ ಎನ್ನವನು ನೀ ಎಂತುನಿಂತಿಹೆ ಸುಮ್ಮನೆ
ಎಲ್ಲವಾಗಿ ಕೂಡಿಕೊಂಡಿಹೆ ನಿನ್ನ ಚರಣ ಭರಿಸು ಮಾಪತೇ ಕ–
ಮಲಾಪತಿ ನೀ ಕರುಣದಿಂದಲಿ ನಡೆಸಲಾರೆಯಾ ನನ್ನನು ಅ.ಪ

ನೋಡಲಾರದ ಕಣ್ಣು ನನ್ನದು
ನಡೆಯಲಾರದೆ ಕಾಲುಬಿದ್ದಿದೆ
ಕೋಪಗೊಳ್ಳದೆ ಬಂದು ನನ್ನಲಿ ನಿಂತು ಸಲಹೈ ದೇವನೇ
ಅಪ್ಪಶೆಲ್ವನೆ ನಿನ್ನ ಬಿಟ್ಟರೆ ಕಾದು ಕುಳಿತಿಹರಾರಯ್ಯ ೧

೪೫೬

ಕೃಷ್ಣ ಕದ್ದು ಬಂದೆನಯ್ಯ ರಂಗ ಮದ್ದು ಕಾಣೆನಯ್ಯ
ಕಣ್ಣು ಕೊಟ್ಟು ಇಟ್ಟೆ ಇಲ್ಲಿ ನಿನ್ನ ನೋಡಲೆಂದು ಪ

ನಾನು ನನ್ನದೆಂದು ಭ್ರಾಂತಿ ತಂದುಕೊಂಡೆನಯ್ಯ
ನಿನ್ನದೆನ್ನದೆಂದೆ ನಾನು ನನ್ನ ಬಿಟ್ಟು ನೀನು ನಿಂತೆ ಅ.ಪ

ಎಲ್ಲಿ ಇಲ್ಲ ನೀನು ದೇವ ಕುಂದು ಕೊರತೆಯುಂಟೆ ನಿನಗೆ
ಖುಲ್ಲಮೋಹವೆಂಬ ಮೋಡ ನಿನ್ನ ಬೆಳಕು ಮುಚ್ಚಿತಯ್ಯ
ಕಾಲಕಳೆದು ಕಲಿತೆ ನಿನ್ನ ಕಾಲುಬಿಟ್ಟರಿಲ್ಲ
ಕೂಲ ಸೇರಿಸಯ್ಯ ಬೇರೆ ದಾರಿಯಿಲ್ಲವಯ್ಯ ೧

ಅರಿತು ಪೇಳ್ವೆನಯ್ಯ ಕೃಷ್ಣ ನೀನು ಹೇಳಿ ಕೊಟ್ಟೆ ಆಗ
ಬರಿದೆ ಕೆಟ್ಟು ಹೋದೆ ದೇವ ಒಳಿತು ಮಾಡವಯ್ಯ ಈಗ
ಮರೆತು ನಿಲ್ಲಲಾರೆ ನಿನ್ನ ಕಲೆತುಬಂದು ನಿಲ್ಲೊ ನೀನು
[ವರ]ಶೆಲ್ವ ಭಾಗ್ಯವಯ್ಯ ನೀನು ಭೋಗಮೋಕ್ಷವಯ್ಯ ದೇವ ೨

೪೫೭

ಕಾಡದಿರು ಕಾಡದಿರು ಕಾಂತ ಕೃಷ್ಣಯ್ಯ
ಬೇಡಿಕೊಂಬೆನು ನಿನ್ನ ಮನಬಿಚ್ಚಿ ತೋರಿಸುವೆ ಪ

ಪಶುವಾದ ಎನ್ನ ಮನಸು ಪಿಸುಮಾತು ಹೇಳುತಿಹುದು
ತುಸುಗುಣವಿಲ್ಲ ನಿನಗಂತೆ ಬಕುತಿಯೇಕಯ್ಯ ನಿನಗೆ ಅ.ಪ

ಬದುಕು ತಪ್ಪಿಸಿ ನಿಲ್ಲು ನೀನಾಗಿ ಎನ್ನುತಿದೆ
ಕದಿಮೋಸ ಮನವನು ನಂಬಿ ಬಾಳುವೆನೆಂತು
ಬುದ್ಧಿ ಕಲಿಸಯ್ಯ ಮನಕೆ ಬೆಳಕು ತೋರಿಸು ನಿನ್ನ
ಬದ್ಧಗೆಳೆಯನಾಗಿಸು ಅದನು ಬದುಕಿ ಬಾಳುವೆನಯ್ಯ ೧

ಹಿಡಿಯಾಸೆ ಎನಗುಂಟು ಗಂಟುಕಟ್ಟಿ ನಿನ್ನೊಡನೆ
ನಡೆವೆ ದಿಟ್ಟತನದಲಿ ಕಮಲಾಕ್ಷ ಲಾಲಿಸಯ್ಯ
ಬಿಡಲಾರೆ ನಿನ್ನನೀಗ ಬೆಳಕು ಕಂಡಿತು ಎನಗೆ
ಒಡೆಯ ಶೆಲ್ವರಾಯ ನನಸು ಕನಸಾಗಿ ಮಾಡದಿರು ೨

೪೫೮

ಬಣ್ಣ ಬಣ್ಣದ ಬುಗುರಿಯಾಟವ ಅಡುತಿಯರುವೆಯಾ ರಂಗ
ಗಿಣ್ಣು ಗಿಣ್ಣಲಿ ಕನಿತುನಿಂತಿಹ ಹಣ್ಣನಿದನು ಕಾಣೆಯಾ ಪ

ನೀನು ಬೆಳೆಸಿದ ಹಣ್ಣು ಎನ್ನುವ
ಮಮತೆ ಇಲ್ಲವೆ ಹೇದೇವ
ನನ್ನ ಕೈ ನೀ ಬಿಡುವೆಯಾ ಪುಸಿಯ
ಮಾತಿಗೆ ಮರುಳುಹೋಗಿ ಅ.ಪ

ನಿನ್ನ ಊರಲಿ ನೀನು ಕುಳಿತರೆ ಭಾಗ್ಯವೆನಗದು ಆಯಿತೆ
ನನ್ನ ಇಳಿಯಿಸಿ ಅರಿವು ಕೊಟ್ಟು ನಡೆಯ ಕಲಿಸಿದೆ ಏತಕೆ
ಸನ್ನಡೆಯು ಬಂದಿತು ನುಡಿಯು ಬಂದಿತು
ಇನ್ನು ಬರದೇ ಇರುವೆಯಾ
ನನ್ನಲ್ಲಿ ಸಹನೆ ಇಲ್ಲವೆಂದು ಅರಿಯಲಾರೆಯಾ ದೇವನೇ ೧

ಮೋಸ ಹೋಗದೆ ಮಾಸಿಹೋಗದ
ನೆನಪು ಕೊಟ್ಟಿಹೆ ರಂಗ
ಆಸೆ ಮತಿಯು ದಾರಿ ನೋಡಿದೆ ದೂರ ದಡವನು ದಾಟಿಸ್ಯೆ
ಭಾಷೆ ನಿನ್ನ ಮಾತ ನೀನು ತೆಗೆದುಕೊ
ನಾನು ಅದರೊಳು ನಿಂತಿಹೆ
ಓ ಶೆಲ್ವರಾಯನೆ ಮಾಧವ ಮತ್ತೆಯಾರನು ಕೇಳಲಿ ೨

೪೫೯

ಬರಿದು ಬಂದಿಹೆನೀಗ ಹಿರಿಮೆಯನು ಕಂಡರಿತು
ಹರಸು ಸಂಗವ ಕೊಟ್ಟು ದಡಹಾಯ್ದು ಬಂದಿಹೆನು ಪ

ಹುಟ್ಟು ಸಾವಿನ ಗಂಟು ಕಡುಪಾಪಿಯಾಗಿಸಿದೆ
ಮುಟ್ಟಿ ನಿನ್ನನು ನಾನು ಎಂತು ಕಾಣುವೆನಯ್ಯ ಅ.ಪ

ದಣಿದು ಬಂದಿಹೆ ದೇವ ಗತಿಯ ಕಾಣದೆ ಮುಂದೆ
ತಣಿದಬಾಳಿನ ನನ್ನ ಜೀವವ ಚಂದವಾಗಿಸು ರಂಗ
ಕುಣಿದು ಬರುವನು ನೀನು ಸರಿದುಹೋಗುವೆ ನಾನು
ಮಣಿಸಿ ಬಂಧವ ಬಂದು ತಡೆದು ಕಾಪಿಡೊ ರಂಗ ೧

ಕಣ್ಣು ಹೋಗಿಸು ನಿನ್ನಲಿ ಮಣ್ಣು ಬಯಕೆಯ ತಪ್ಪಿಸು ಕಾ –
ಮನ್ನ ಸೇರಿಸು ನಿನ್ನಲಿ ನಲಿದು ಹಾಡಿಸು ನನ್ನನು ಕಾ –
ರುಣ್ಯ ತೋರ್‍ಯೆ ನನ್ನಲಿ ಮನವು ನನ್ನದು ಆಗಲಿ
ಅಣ್ಣ ಶೆಲ್ವದೇವ ನೀ ನನಗಾಗಿ ತೋರಿಸಿಕೋ ೨

೪೬೦

ಮೋಸ ಹೋದೆನಯ್ಯ ಕೃಷ್ಣ ಮೋಸ ಹೋದೆನಯ್ಯಾ ಪ

ಈಸು ಸುಲಭನೆಂದು ಪೇಳಿ ದೂರ ಸರಿವೆಯೇಕಯ್ಯ
ಇಷ್ಟವಿಲ್ಲವೇ ನಾನು ನಿನಗೆ ಬೇಡವಾದೆನೇ ಅ.ಪ

ಉಡಲು ನಿನ್ನವೆಲ್ಲಾವೆಂದು ಸುಳ್ಳು ಹೇಳಿತೇ ವೇದ
ಕಡಲು ದಾಟಲು ಬೇರೆ ದಾರಿಯಿಲ್ಲವಯ್ಯ
ಒಡಲು ನನ್ನದಾಗಿ ನೊಂದ ನನ್ನ ಕೂಡಯ್ಯ
ಒಡೆಯಶೆಲ್ವರಾಯ ಕೂಡಿಕೊಳ್ಳೊ ಅಯ್ಯ ೧

೪೬೧

(ಅ) ಲೋಕನೀತಿ

ಇಲ್ಲಿಗೇತಕೆ ಬಂದೆಯೋ ಮಾನವ
ಇಲ್ಲಿರಲು ಶಾಶ್ವತ ಸಾಧ್ಯವೇ ಹೇಳೋ ಪ

ಬರಲಿಲ್ಲ ಕೇಳಿ ನೀನು ಹೇಳಿ ಹೋಗುವನಲ್ಲ
ಇರಲು ಇಲ್ಲಿ ನಿನಗೇಕೆ ಚಿಂತೆ ಕಾಡುತಿಹುದಯ್ಯ ಅ.ಪ

ಜವನು ನಿನ್ನ ಬೇಡವೆಂದರೂ ಒಯ್ಯುವನಯ್ಯ
ಅವನ ಪಾಲಿಗೆ ನೀನು ಅನ್ನವಾಗಿ ನಿಂತಿರುವೆ
ದೈವ ಕಮಲಾಕ್ಷನಿಗೆ ಅವನು ಉಪ್ಪಿನಕಾಯಿ
ಅವನ ಚರಣ ಪಿಡಿದು ಬರುವುದೇನಿದೆ ನೋಡೋ ೧

ನಂಬು ರಾಮನ ಮಾತನು ಕೃಷ್ಣ ಹಾಡಿದ ಹಾಡನು
ನಂಬಿ ಬಾಳಯ್ಯ ನೀನು ಪದುಮನಾಭನ ಚರಣ
ತಂಬಿ ಕೇಳೋ ಧರಣಿನಾಥನೆ ಕರುಣೆ ಸಾಗರನಯ್ಯ
ನಂಬು ಶೆಲ್ವರಾಯನೆ ದೇವ ಮುಕುತಿದಾತನು ಅವನೆ ೨

೪೬೨

ಕೂಡಿ ಬನ್ನಿರಯ್ಯ ನೀವು ಬಂದು ನೋಡಿರಯ್ಯ
ಓಡಿ ಬಂದು ಹಿಂದೆ ಮುಖಕೆ ಮಸಿಯ ಬಳಿದನಯ್ಯಾ ಪ

ಆಟವಾಯಿತವಗೆ ನೋಡಿ ಪಾಪವಾಯಿತೆನಗೆ ಇಲ್ಲಿ
ಬಿಟ್ಟರೆಮಗೆ ನೀವು ಸಾಕ್ಷಿ ಪೇಳ್ವರಾರು ಹೇಳಿರಯ್ಯ ಅ.ಪ

ಇದ್ದುದನ್ನು ಹೇಳಿ ನೀವು ಮರೆಯಬೇಡಿರಯ್ಯ
ಪೇಳ್ದೆನಯ್ಯ ತಪ್ಪು ನಾನು ಕೆನ್ನೆ ಬಡಿಯಿರಯ್ಯ ೧

ಮಸಿಯ ಕೊಟ್ಟು ಮುಂದೆ ಅವನು ಮುಗುಳಿನಕ್ಕಿ ಹೋದ
ಹುಸಿಯಲಾರದೆನ್ನ ಮುಖಕೆ ಹಚ್ಚಿಕೊಂಡೆನಯ್ಯ ೨

ಅಣ್ಣನ ಬೈಯ್ಯಬೇಡಿರಯ್ಯ ತಪ್ಪು ನನ್ನದಯ್ಯ
ಕಣ್ಣು ಕಪ್ಪು ಹಚ್ಚಿ ತನ್ನ ನೋಡು ಎಂದ ಅವನು ೩

ಮುಚ್ಚಿ ಕೊಟ್ಟನಯ್ಯ ಕಣ್ಣು ಬಿಚ್ಚಿ ಕೊಳ್ಳಲಿಲ್ಲ ನಾನು
ಪೆಚ್ಚು ಹೋದೆ ಶೆಲ್ವ ಶರಣು ತಿಳಿಸಿ ಸಲಹಿರಯ್ಯ ನೀವು ೪

ನಾರಾಯಣ ಶರ್ಮರ ಕೀರ್ತನೆಗಳು

(ಅ) ಶ್ರೀಹರಿ ಸ್ತುತಿಗಳು

೪೬೩

ಆನಂದ ಆನಂದ ಆನಂದ ಪ

ಆನಂದ ನಿನ್ನ ನೋಡಿದವರಿಗೆ ಅ.ಪ

ಆ ಮುಖ ಆ ಕಂಠವಾನಂದ
ಆ ಮಹಾಭುಜಕೀರ್ತಿ ಆನಂದ
ಸಾಮಜ ಶಂಖಚಕ್ರಗಳಾನಂದ
ಹೊಮ್ಮುವ ಗದೆ ಹಸ್ತ ಜಗದಾನಂದ ೧

ಸುರಾಸುರರು ದೇವಾನುದೇವರು ತಂ-
ಬುರ ನಾರದ ಮೊದಲಾದವರು
ವರುಣಿಸಲಾರರು ನಿನ್ನಳವನ್ನು
ಅರಿಯಲು ಪೊಗಳಲು ಆನಂದವನ್ನು ೨

ಸಂಖ್ಯೆಗೆ ಎಟುಕದ ಆನಂದವಯ್ಯ
ಅಂಕೆಗೆ ನಿಲುಕದ ಆನಂದವಯ್ಯ
ಅಂಕುಡೊಂಕಿಲ್ಲದ ಆನಂದವಯ್ಯ
ಬಿಂಕವ ಬಿಟ್ಟು ಪಾಡಿರೋ ಅಯ್ಯ ೩

ಕಮಲವದನದ ಚೆಲುವಾನಂದ
ಕಮಲಲೋಚನದ ಸುಂದರ ಅಂದ
ಕಮಲೋದ್ಭವನಿಹ ವಕ್ಷವಾನಂದ
ಕಮಲಯುಗಳ ಶ್ರೀಪಾದವಾನಂದ ೪

ಎಣೆಯಿಲ್ಲಾನಂದಕೆ ಎಣೆಯಿಲ್ಲವಯ್ಯ
ಕಣಕಣವು ನೋಡಲು ತಣಿಯದವಯ್ಯ
ಅಣಿಗೊಂಡ ಜಾಜಿಪುರೀಶನವ್ವಯ್ಯ
ವರ್ಣಿಸಲಾನು ಪಾಮರನಯ್ಯ ೫

೪೬೪

ನಮೋ ನಮೋ ನಾರಾಯಣನೇ ಓಂ ನಮೋ ಚನ್ನಕೇಶವನೆ ಪ

ಹಲನಾಮದಿ ಅರ್ಚಿಸುವೆ ಅಚ್ಯುತ ಪಾದದಿ ಸೇರಿಸೊ ಅನಂತ ಅ.ಪ

ನಮೋ ನಮೋ ವೆಂಕಟರಮಣನೆ
ಸಂಕಟಹರಿಸೋ ಶ್ರೀವರನೆ ೧

ನಮೋ ನಮೋ ವರದರಾಜನೆ
ವರವ ನೀಡೋ ಪುರುಷೋತ್ತಮನೆ ೨

ನಮೋ ನಮೋ ಶ್ರೀರಂಗನಾಥನೆ
ಸುರಕ್ಷೆಯ ಕೊಡೊ ಭಕ್ತವತ್ಸಲನೆ ೩

ನಮೋ ನಮೋ ಸಂಪತ್ಕುಮಾರನೆ
ಸಂಪತ್ತನು ಹರಿಸೋ ಶ್ರೀಹರಿಯೆ ೪

ನಮೋ ನಮೋ ಮುದಿಗೆರೆ ರಂಗನೆ
ಮುದದಿ ಕಾಪಾಡೋ ಮಾಧವನೆ ೫

ನಮೋ ನಮೋ ಯದುಗಿರಿ ಚಲುವನೆ
ಸದಯದಿ ಸಲಹೋ ದಾಮೋದರನೆ ೬

ನಮೋ ನಮೋ ಜಾಜಿಪುರೀಶನೆ
ನೀ ಜೋಪಾನಮಾಡೆನ್ನ ಪರಮಪಾವನನೆ ೭

೪೬೫*

ವಂದಿಪೆ ಶ್ರೀಮನ್ನಾರಾಯಣಗೆ
ವಂದಿಪೆ ಅಮ್ಮ ಲಕ್ಷ್ಮೀದೇವಿಗೆ ಪ

ವಂದಿಪೆ ವಿಶ್ವಕ್ಸೇನರಿಗೆ
ಕುಂದದಿರಲಿ ಎನ್ನ ಸನ್ಮತಿ ಎಂದು ಅ.ಪ

ವಂದಿಪೆ ನಾ ಮೊದಲಾಳ್ವಾರರಿಗೆ
ಅಂದದಿ ಹರಿಯ ತೋರಿಕೊಟ್ಟರಿಗೆ
ಕಂದಮಿಳಲಿ ಸೊಲ್ಲ ನುಡಿಗಳಿಗೆ ಪ್ರ-
ಬಂಧದಿವ್ಯಗಳ ಬೆಳಗಿಸಿದವರಿಗೆ ೧

ವಂದಿಪೆ ವಂದಿಪೆ ಆಚಾರ್ಯರಿಗೆ
ಚಂದದಾ ಯತಿತ್ರಯರುಗಳಿಗೆ
ಸುಂದರ ಶ್ರೀವೈಷ್ಣವ ತತ್ವಗಳನು
ಹೊಂದಿಸಿ ಬಂಧಿಸಿ ಸ್ಥಾಪಿಸಿದವರಿಗೆ ೨

ಇನ್ನು ವಂದಿಪೆ ಗುರುಪೀಠಕ್ಕೆ
ಚೆನ್ನ ತಿರುನಾರಾಯಣಪುರಕೆ
ಉನ್ನತ ರಂಗದಾಸಯತಿವರ್ಯಗೆ
ಸನ್ನುತ ಪಿತಾನುಜ ಶಾಮದಾಸರಿಗೆ ೩

ಸಾಜದಲೆನ್ನಲಿ ಅರಿವನು ಮೂಡಿಸಿ
ಓಜನನಾಗಿಸೆ ಕೇಶವ ನಾಮದಿ
ಆರ್ಜಿಸಿ ಉಪಾದಾನದಿ ಬಳಲಿದ
ಪೂಜ್ಯಪಿತ ವೆಂಕಟರಂಗಾರ್ಯರಿಗೆ ೪

---

* ರಂಗದಾಸರು ಮತ್ತು ಶಾಮಶರ್ಮರನ್ನು ಸ್ತುತಿಸಿರುವ ಕೀರ್ತನೆ ಆಳ್ವಾನಾಚಾರ್ರ ಸ್ತುತಿಯೂ ಹೌದು.

ವಂದಿಪೆ ಕೊನೆ ಮೊದಲಿಲ್ಲದೆ ವಂದಿ–
ಪೆಂ ದಾಸನ ಮಾಡಿದ ದೇವನಿಗೆ
ತಂದೆ ಜಾಜಿಪುರಾಧೀಶನಿಗೆ ಮುದ–
ದಿಂದ ಶ್ರೀ ಚೆನ್ನಕೇಶವಗೆ ೫

೪೬೬

ರಾಮನ ನಾಮವೆ ನಾನಾಕಾರ ಈ
ನಾಮವನುಳಿದರೆ ಶೂನ್ಯಾಕಾರ ಪ

ಕಾಮಿಸಿ ಭಜಿಸಿರೆ ಆನಂದಕರ
ರಾಮಾ ರಾಮಾ ಜೈ ಜೈ ರಾಮ ಅ.ಪ

ಹಾಡುವ ಭಕ್ತರ ಅನುಮತದಲ್ಲು
ಬೀಡಲಿ ಮೊರೆವ ಶೀಲೆಯರಲ್ಲು
ಸೂಡಿದೆ ನಿನ್ನಯ ರಾಮಾಕಾರ
ರಾಮಾ ರಾಮಾ ಜೈ ಜೈ ರಾಮ ೧

ಹೂ ಗಿಡ ಬಳ್ಳಿಗಳಲ್ಲೂ ರಾಮ
ಖಗಮಿಗಗಳ ದನಿ ರಾಮನ ನಾಮ
ರಾಗದಿ ನೋಡಿದರೆಲ್ಲೂ ರಾಮ
ರಾಮಾ ರಾಮಾ ಜೈ ಜೈ ರಾಮ ೨

ಪೂಜೆಯ ಹೂವಲು ರಾಮ ರಾಮ
ತೇಜದ ಗಂಧದ ಪರಿಮಳ ರಾಮ
ರಾಜಿಪ ದೇಗುಲವೆಲ್ಲ ರಾಮ
ರಾಮಾ ರಾಮಾ ಜೈ ಜೈ ರಾಮ ೩

ಜಾಜಿಪುರೀಶನ ಪಾವನ ನಾಮ
ಸಾಜದಿ ನುತಿಸಿರೊ ರಾಮ ರಾಮ ೪

೪೬೭

ವಂದಿಸುವೆನು ನಾ ನರನಾರಯಣ ಭಕ್ತ ಪ–
ರಾಧೀನ ನಾನಾರೂಪಿಯೆ ಪ

ಈ ಜಗವನೆ ಎತ್ತಿದೆ ವರಾಹನಾಗಿ
ಮೂಜಗವನೆ ಅಳೆದ ವಾಮನಮೂರ್ತಿ
ಯಾಜಿಪರನು ಕಾಯೋ ಪ್ರಹ್ಲಾದ ಧ್ರುವರೊಲು
ಹೇ ಜಗದೋದ್ಧಾರ ಭಕ್ತವತ್ಸಲ ೧

ದೇವ ಶ್ರೀಪತಿಯಾಗಿ ಅಸುರರ ಕೊಂದೆ
ದೇವಕಿಸುತನಾಗಿ ಕಂಸನ ವಧಿಸಿದೆ
ದೇವಜರ ಮೈದುನನಾಗಿ ದೌರ್ಜನ್ಯ ಮುರಿದೆ
ದೇವ ಜಾಜಿಪುರೀಶ ದಾಸೋತ್ತಮನೇ ೨

೪೬೮

ರಾಮನ ನೆನೆಬೇಕು ಶ್ರೀರಾಮನ ನೆನೆಬೇಕು ಪ

ಪಾಮರರೆಲ್ಲರೂ ಏಕಚಿತ್ತದಿ ರಾಮನ ನೆನೆಬೇಕು ಅ.ಪ.

ಕೋಲನು ಹಿಡಿದು ಕೂರುವ ಮುನ್ನ
ಎಲ್ಲಾ ಕೂದಲು ನರೆಯುವ ಮುನ್ನ
ಆಲಿಗಳೆರಡೂ ಕಾಣದ ಮುನ್ನ
ಕಾಲು ಕೈಗಳು ಮಾತು ಕೇಳದ ಮುನ್ನ ೧

ಅಲ್ಪಾನಂದದಿ ಸುಖದುಃಖವನು ಮರೆಯುತಲಿರಬೇಕು
ಅಲ್ಪರಲೂ ತಾ ಭ್ರಾತೃಪ್ರೇಮವ ಹೊಂದುತಲಿರಬೇಕು
ಸಲ್ಲುವೆಯಾದರೆ ಮಾರುತಿಯಂತುಲಿಬೇಕು
ಕಲ್ಪಿತ ಶ್ರೀಜಾಜಿಪುರೀಶನ ಧ್ಯಾನದಲಿರಬೇಕು ೨

೬೬೯

ಕಂಡೆ ನಾಕಂಡೆ ನಾಕಂಡೆ ಕಾಳಿಂಗನ
ಮಂಡೆಯಮೇಲೆ ಕುಣಿವ ಕೃಷ್ಣನ್ನ ಪ

ತಕ ತಕ ಧಿಮಿ ಧಿಮ್ಮಿ ಧಿಮ್ಮಿ ಧಿ–
ಮ್ಮಿಕೆಂದು ಕುಣಿವ ಕೃಷ್ಣನ್ನ ನಾಕಂಡೆ ಅ.ಪ

ಹೆಡೆಯ ಮೇಲೆ ತಾ ಎಡಗಾಲಿರಿಸಿ
ಎಡಗೈಯಲಿ ಬಾಲ ಹಿಡಿದವನ
ಬಿಡದೆ ಅಭಯಹಸ್ತವ ತೋರೊ
ಒಡೆಯ ಕೃಷ್ಣಮೂರುತಿಯ ನಾಕಂಡೆ
ಸ್ವಪ್ನದಲಿ ನಾಕಂಡೆ ಕಂಡೇನೊ
ಸಂಪನ್ನಮೂರ್ತಿಯ ಕಂಡೇನೊ ೧

ಗೋವಲರ ಮನೆಯ ಪಾಲುಂಡವನ
ಗೋವುಗಳ ಕಾಯ್ದ ಗೋಪಾಲನ್ನ
ಗೋವಿಂದನೆಂಬ ದೇವರದೇವನ್ನ
ಓವಂತೆ ನಾನು ಕಂಡೇನು ಕಂಡೇನು
ಕುಣಿಯುತ ಬಂದ ಕೃಷ್ಣನ್ನ
ತಣಿಯುವ ಹಾಗೆ ನೋಡಿದೆನು ೨

ಗೋವಿಂದನಾಗಿ ತಲೆಕಾಯ್ವವನ
ಗೋವರ್ಧನವನೆ ಕೊಡೆಯಾದವನ
ಗೋವನಿತೆಯರ ಮಾಮಾಯನನ್ನ
ಅವ್ವಯ್ಯ ಚೆನ್ನಾಗಿ ಕಣ್ತುಂಬ ಕಂಡೆ
ಆ ಮುದ್ದು ಬಾಲಕೃಷ್ಣನ್ನ ಕಂಡೆ
ಸಾಮುದ್ರಿಕಾ ಸಿರಿಯನ್ನಕಂಡೆ ೩

ಅಸುರ ಕಂಸನ ಅಸುವನ್ನು ನೀಗಿದನ
ಬೆಸೆದ ಕುಬ್ಜೆಯ ಡೊಂಕ ತಿದ್ದಿದವನ
ಅಸುತೆಗೆಯ ಬಂದವಳ ಅಸುವನೆ ಹೀರಿದನ
ಮಿಸುಕದಂತೆ ಕಂಡೆ ನಾಕಂಡೆ ನಾಕಂಡೆ
ಜಾಜಿಪುರೀಶನ ಕಂಡು ಧನ್ಯನಾದೆ
ಸಾಜದಿ ದಾಸಾನುದಾಸನಾದೆ ೪

ಪಾಪಿನಾ ಕರುಣೆಯ ತೋರಿ ಸಲಹೊ
ಭಾಪುರೆ ಗಟ್ಟಿಸುವ ಪುಟ್ಟಪಾದವಿಟ್ಟು
ಮೋಪಾಗಿ ಮೆರೆವ ದುಷ್ಟರ ಮೆಟ್ಟೊ
ಪುಂಡರ ಪುಂಡರಿಗೆ ಪುಂಡನಾದವನೆ
ಪುಂಡರೀಕಾಕ್ಷ ಚನ್ನಕೇಶವನೆ ೫

೪೭೦

ಶುಭವೆನ್ನಿರೆ ಎಲ್ಲ ಶುಭವೆನ್ನಿರೆ ಪ

ಅಭಯ ಹಸ್ತದಿ ಉಭಯಕುಶಲ ಕಾಯುವ ಹರಿಗೆ ಅ.ಪ

ಆಲದೆಲೆಯ ಮೇಲೆ ಪವಡಿಸಿ ಬಂದ
ಹಾಲುತನದ ಬದುಕ ಭೂಮಿಗೆ ತಂದ
ಹಾಲುಗಲ್ಲದ ಮುದ್ದು ಕೃಷ್ಣನು ಬರುತಿಹ
ಶುಭವೆನ್ನಿರೆ ಎಲ್ಲ ಶುಭವೆನ್ನಿರೆ ೧

ನಟ್ಟನಡುರಾತ್ರಿಯಲಿ ದಿಟ್ಟ ಕಾವಲಿನಲ್ಲಿ
ದಟ್ಟ ಕತ್ತಲನೆಲ್ಲ ಜಗದಿಂದ ಜಾಡಿಸುತ
ಬಟ್ಟ ಬೆಳಕನು ಬೀರಿ ಮೂಡುತಿಹ ಕೃಷ್ಣಂಗೆ
ಶುಭವೆನ್ನಿರೆ ಎಲ್ಲ ಶುಭವೆನ್ನಿರೆ ೨

ಅಷ್ಟಮಿಯ ದಿನದಂದು ರಂಗವಲ್ಲಿಯ ಮೇಲೆ
ಇಷ್ಟತಿಂಡಿಗಳನಿಷ್ಟಿಷ್ಟೆ ಮೆಲ್ಲಲು
ಪುಟ್ಟ ಹೆಜ್ಜೆಯನಿಟ್ಟು ಬರುತಿರುವ ಕೃಷ್ಣಂಗೆ
ಶುಭವೆನ್ನಿರೆ ಎಲ್ಲ ಶುಭವೆನ್ನಿರೆ ೩

ರುಕುಮಾಂಗದನ ತಂತ್ರ ಫಲಿಸದಂತಳಿಸಿ
ರುಕುಮಿಣಿಯ ಮನಗೆದ್ದು ರಥದ ಮೇಲಿರಿಸಿ
ಅಕ! ಅಲ್ಲಿ ಬರುತಿಹ ಮದುವಣಿಗ ಕೃಷ್ಣಂಗೆ
ಶುಭವೆನ್ನಿರೆ ಎಲ್ಲ ಶುಭವೆನ್ನಿರೆ ೪

ಚೆಲುವ ಚೆನ್ನಿಗ ನಮ್ಮ ಜಾಜೀಪುರೀಶಂಗೆ
ಶುಭವೆನ್ನಿರೆ ಎಲ್ಲ ಶುಭವೆನ್ನಿರೆ ೫

೪೭೧

ಉಣಲೊಲ್ಲೆ ಯಾಕೋ ಅಣ್ಣಯ್ಯ
ಉಣದೆ ಹೀಗೇಕೆ ಹಟ ಮಾಡುವಯ್ಯ ಪ

ಉಣದಿರೆ ನನ್ನೆದೆ ತಳಮಳಗೊಳುವುದು
ತಣಿಸೋ ಮನವನು ಉಂಡು ಕಂದಯ್ಯ ಅ.ಪ

ನೀನನುದಿನವೂ ಉಣದಿದ್ದರೂ ಹೀಗೆ
ಏನೂ ಹಸಿವಿಲ್ಲದೆ ಆಟವಾಡುವೆ ಹೇಗೆ
ಏನಿದರ ಗುಟ್ಟು ಎಲ್ಲೂಟ ಮಾಡುವೆ
ನಾನೇನ ಮಾಡಿಹೆನು ಉಣದಿರಲು ಹೀಗೆ ೧

ಗೋಪಾಲಿಕೆಯರಲಿ ಆಕಳ ಹಾಲುಂಡು
ಗೋಪಾಲಕರ ಕೂಡೆ ಬೆಣ್ಣೆಯ ಕದ್ದುಂಡು
ಪಾಪಿಷ್ಠ ಬಲನೊಡನೆ ಮಣ್ಣನಾದರು ತಿಂದು
ಅಪಾಟಿ ಹೊಟ್ಟೆಯ ತುಂಬಿಕೊಂಡಿಹೆಯೇನೊ ೨

ಪೂತನಿಯ ಮೊಲೆಯುಂಡು ಜಡಗಟ್ಟಿತೊ
ಪ್ರೀತಿಯಲಿ ಆ ಗೋಪಿಯರ ದಿಟ್ಟಿ ತಾಕಿತೊ
ಆತುಕೊಂಡಾವ ಗೋಪಿಯು ಕೊಟ್ಟಳೆದೆಹಾಲ
ಸೋತು ಹೋದೆನಯ್ಯ ನಿನಗುಣಿಸಲಾಗದೆ ೩

ಅಣ್ಣಯ್ಯ ಕುಚೇಲ ನೀಡಿದ ಅವಲಕ್ಕಿಯುಂಡು
ಕೃಷ್ಣೆ ಕೊಟ್ಟುಳಿದ ಅಗುಳನ್ನವುಂಡು
ಚಿಣ್ಣ ಕಡುಭಕ್ತ ವಿದುರನ ಮನೆಯಲಿ ಹಾಲುಂಡು
ಸಣ್ಣ ಹೊಟ್ಟೆ ತುಂಬಿತೆ ಕಂದ ಉಣಲೊಲ್ಲೆ ಯಾಕೊ ೪

ವಸುಧೆಯೊಳಗೆ ದಾಸರು ನಿನ್ನ ಪೂಜಿಸೆ
ಏಸು ಪರಿಯಲಿ ನೈವೇದ್ಯ ನೀಡುವರೊ
ಬಿಸಿಬಿಸಿ ಪರಮಾನ್ನ ಸಣ್ಣಕ್ಕಿಯೋಗರವು
ಹಸಿದ ನಿನಗೆ ಬಲು ಇಷ್ಟವಾಯಿತೆ ಕೃಷ್ಣ ೫

ವರಮಹಾಋುಷಿಗಳ ವೇದ ಮಂತ್ರಗಳ
ಪರಮ ಭಾಗವತರ ಪಲ್ಲಾಂಡುಗಳು
ವರಜಾಜಿಪುರಿವಾಸ ನಿನ್ನ ಸೇವಿಸುತಿರಲು
ನಿರುತ ಸಂತುಷ್ಟ ನೀ ಚೆನ್ನಕೇಶವನೆ ೬

೪೭೨

ಬಾಯತೋರೋ ರಂಗ ಬಾಯತೋರೋ ಮುದ್ದು
ಬಾಯಲಿ ತುತ್ತು ಅನ್ನವನಿಡುವೆ ಬಾಯತೋರೋ ಪ

ಕತ್ತಲಿನಂತಿರುವ ತುಟಿಗಳ ತೆರೆಯುತ ಬಾಯತೋರೋ ಜ-
ಗತ್ತಿನ ಬೆಳಕನು ನೋಡುವೆ ಒಮ್ಮೆ ಬಾಯತೋರೋ
ಒತ್ತೊತ್ತಿನ ತುತ್ತನಿಡಲು ಬಂದಿರುವೆ ಬಾಯತೋರೋ
ತುತ್ತೇ ತುತ್ತನು ತಿನ್ನುವೆ ಜಾಣ ಬಾಯತೋರೋ ೧

ಭಂಜಿಸಿ ಬಲಿಯ ದಾನವ ಬೇಡಿದ ಬಾಯತೋರೋ
ಅಂಜಿದ ನರನಿಗೆ ಗೀತೆ ಬೋಧಿಸಿದ ಬಾಯತೋರೋ
ಗಂಜಿಯಕುಚೇಲಗವಲಕ್ಕಿ ಬೇಡಿದ ಬಾಯತೋರೋ
ಅಂಜದ ಕರ್ಣಗೆ ಗುಟ್ಟು ಹೇಳಂಜಿಸಿದ ಬಾಯತೋರೋ ೨

ಅಮ್ಮ ಯಶೋದೆಯ ಮೊಲೆಹಾಲನುಂಡ ಬಾಯತೋರೋ
ಗುಮ್ಮ ಪೂತನಿಯ ಅಸುಮೊಲೆ ಜಗಿದ ಬಾಯತೋರೋ
ಸುಮ್ಮಸುಮ್ಮನೆ ಅಂಗನೆಗೆ ಮುತ್ತನಿಟ್ಟ ಬಾಯತೋರೋ
ಗಮ್ಮನೆ ಅಪ್ಪಿ ಗೋಪಿಯರ ಪೀಡಿಸಿದ ಬಾಯತೋರೋ ೩

ಮೋಹನ ಮುರಳಿಯ ಮೋದದಿ ನುಡಿಸಿದ ಬಾಯತೋರೋ
ಮೋಹನಾಂಗನೆಯರ ಮಾಟದಿ ಮಿಡಿಸಿದ ಬಾಯತೋರೋ
ಮೋಹನ ರಾಗದಿ ಗೋವುಗಳ ಕರೆದ ಬಾಯತೋರೋ
ಮೋಹಿಪ ರಾಧೆಯ ಮೈಯುಲಿಯೆ
ಪಾಡಿದ ಬಾಯತೋರೋ ೪

ಬಳಕುವ ಗೋಪಿಯರ ಚೇಡಿಸಿದಾ ತುಂಟ ಬಾಯತೋರೋ
ಬಲರಾಮನನ್ನು ಗೋಳಾಡಿಸಿದ ಆ ಬಾಯತೋರೋ
ಬುಳುಬುಳು ಮಣ್ಣನೆ ಮೆಲ್ಲುವಾ ಪುಟ್ಟ ಬಾಯತೋರೋ
ಭಲರೆ ಅಮ್ಮನಿಗೆ ಬ್ರಹ್ಮಾಂಡ ತೋರಿದ ಬಾಯತೋರೋ ೫

ಆ ಕನಕ ಪುರಂದರ ಬಾಯಾಗಿ ಹಾಡಿದ ಬಾಯತೋರೋ
ಸೂ ಕುಮಾರ ಲಕ್ಷ್ಮೀಶರಲಿ ಬರೆದಾಡಿದ ಬಾಯತೋರೋ
ಶ್ರೀಕಾಂತ ನಮ್ಮ ಜಾಜಿಪುರೀಶನೆ ಬಾಯತೋರೋ
ಸಾಕಾಯಿತೋ ಭವದ ಬವಣೆನೀಗಲು ಬಾಯತೋರೋ ೬

(ಆ) ಆತ್ಮನಿವೇದನಾ ಕೃತಿಗಳು

೪೭೩

ಕರುಣಿಸು ಬಾ ನರಹರಿ ಕಾಯಬೇಡ ಈ ಪರಿ ಪ

ನೊಂದಮನವ ನೋಯಿಸದೆ ಹರಸು ಬೇಗ ಶ್ರೀಹರಿ ಅ.ಪ

ನನ್ನ ಹೃದಯ ವೀಣೆಯೇಕೊ ಇನ್ನೂ ನಿನಗೆ ಕೆಳಿಸದೆ
ಸನ್ನುತ ವೀಣೆ ನುಡಿಸಿ ನುಡಿಸಿ ಸೋತೆ ನಿನ್ನ ಕಾಣದೆ ೧

ನೋಡೆ ಇರದ ನಿನ್ನ ರೂಪ ಮನದಲೇಗೊ ನಿಂತಿದೆ
ಹಾಡಿ ಹಾಡಿ ಮಧುರಗೀತೆ ಆ ನೆನಪಿನಲ್ಲೆ ದಣಿದಿಹೆ ೨

ನಿನ್ನೊಡನಾಡಿದ ಗಾಂಡೀವಿಗೆ
ನೀ ಕರುಣಿಸಿದೆ ವಿಶ್ವರೂಪವನು
ನಿನ್ನ ಮುದ್ದು ಬಾಯಲಿ
ಕಂಡಳಾ ಯಶೋದೆ ಬ್ರಹ್ಮಾಂಡವನು ೩

ನಂಬಿ ನಿನ್ನನೆ ಭಜಿಸುತಲಿದ್ದ ಭಕ್ತ ಸುಧಾಮನ ರಕ್ಷಿಸಿದಾತನೆ
ನಂಬಿ ಕಾಯುತಿಹ ನನ್ನನು
ಸಲಹು ಜಾಜಿಪುರೀಶ ಚೆನ್ನಕೇಶವನೆ ೪

೪೭೪

ಕಾದಿರುವೆನೋ ಕೃಷ್ಣ ಕಾದಿರುವೆನೋ ಪ

ಮೋದಕ ನಿನ್ನ ನೆನಪಿನ ದೇಗುಲದಲ್ಲಿ
ಆದಿನ ಕಾದಿದ್ದ ರಾಧೆ ಶಬರಿಯೊಲು ಅ.ಪ

ಹಗಲಿರುಳೂ ನಿನ್ನ ಸ್ಮರಣೆಯ ಮಾಡುತ
ಬಗೆಬಗೆಯಲು ನಿನ್ನ ಬಾಹ್ಯದಲೂ ನಿನ್ನ

ನಗಧರ ಕಾಣಲು ಕಾದಿಹೆನೋ ಚ-
ನ್ನಿಗ ನಿನ್ನ ನೆನೆನೆನೆದು ಹಾಡುವೆನೋ ೧

ನನ್ನೀ ಸ್ಮರಣೆಯ ನುಡಿ ನುಡಿಯಲ್ಲೂ
ಚಿನ್ಮಯ ನೀ ಕುಣಿದಾಡುತಿಹೆ
ನನ್ನಯ ಪೂಜೆಯ ಆಡಿ ಅಡಿಯಲ್ಲೂ
ಎನ್ನಯ್ಯ ಸಾಮೀಪ್ಯವಾಗಿರುವೆ ೨

ಜಾಜಿಪುರಿಯ ಚೆನ್ನಕೇಶವ ನಿನ್ನ
ಮೋಜಿನ ಚಿತ್ರವ ಚಿತ್ತದಿ ನಿಲಿಸಿಹೆ
ಈಜಿಸಬೇಡಯ್ಯ ಸಾಕು ಸಂಸಾರ
ಸೂಜಿ ಮೊನೆಯ ಪಾದ ತೋರೊ ಪವಡಿಸುವೆ ೩

೬೭೫

ಕೃಪೆ ಮಾಡೋ ಕೃಷ್ಣ ಕೃಪೆಮಾಡೋ
ತಪ್ಪದೆ ಪ್ರಾತಃ ಸಂಜೆ ನಿನ್ನ ಸ್ತುತಿ ಮಾಡುವಂತೆ ಪ

ಚಂದ್ರಹಾಸನಂತೆ ವ್ರತ ಮಾಡಲರಿಯೆ
ಅಂದಿನ ಧ್ರುವನಂತೆ ತಪಗೈಯಲಾರೆ
ಕಂದ ಪ್ರಹ್ಲಾದನಂತೆ ಬಿಡದೆ ನುತಿಸಲಾರೆ
ಸಂದ ನಚಿಕೇತನಂತೆ ಮೃತ್ಯುಗೆಲ್ಲಲರಿಯೆ ೧

ಕರಿರಾಜನಂತೆ ಕೂಗಲರಿಯೆನೋ
ಗರುಡನಂತೆ ಸದಾ ಹೊತ್ತು ತಿರುಗಲಾರೆ
ಮರುತಜನಂತೆ ಭಂಟನಾಗಲರಿಯೆ
ಉರಗರಾಜನಂತೆ ಶಯನಕಾಗಲಾರೆ ೨

ದ್ರೌಪದಿಯಂತೆ ಅತ್ತು ಮೊರೆಯಿಡಲಾರೆ
ರೂಪೆ ಭಾಮೆಯಂತೆ ಬಲು ಮೋಹಿಸಲಾರೆ
ಆಪಾಟಿ ಸಖನಾಗರಿಯೆನು ಮಕರಂದನೊಲು
ವಿಪ್ರನಾರಾಯಣನಂತೆ ಭಕ್ತಿಯರಿಯೆನೊ ಹರಿಯೆ ೩

ಜಾಜಿಪುರೀಶ ನಿನ್ನ ಚರಣ ಸೇವೆಯ ಕೊಡೊ
ಸಾಜದಿ ಮಾಡುವೆ ತಿಳಿದಂತೆ ಪಾಮರನು ೪

(ಇ) ಲೋಕನೀತಿ

೪೭೬

ಕೇಶವ ಮಾಧವ ಎನಬಾರದೆ ಜೀವ
ಆಶೆಯ ಬಿಟ್ಟು ಕಿಂಚಿತ್ತು ಕಾಲ ಪ

ಆಚಿಂತೆ ಈ ಚಿಂತೆ ಎಲ್ಲಾ ಚಿಂತೆಯನು
ಕಿಂಚಿತ್ತು ಹೊತ್ತು ಬಂತೆಯಾದೆ ನಾನು ಅ.ಪ

ಪತಿಯ ಚಿಂತೆ ಪರಸತಿಯ ಚಿಂತೆ
ಅತಿಯಾದ ಮೋಹದ ಮಕ್ಕಳ ಚಿಂತೆ
ಪ್ರತಿದಿನ ತುತ್ತಿನ ಚೀಲದ ಚಿಂತೆ
ಮತ್ತೇನು ಅದಕಾಗಿ ಆಸ್ತಿಯ ಚಿಂತೆ ೧

ಆಸ್ತಿಮಾಡಿದರೆ ಕಾಯುವ ಚಿಂತೆ
ಜಾಸ್ತಿ ಸೇರಿದರೆ ಕನಲುವ ಚಿಂತೆ
ಸುಸ್ತಿ ಬಡ್ಡಿಯಲಿ ಬೇಯುವ ಚಿಂತೆ
ಸುಸ್ತಾಗಿ ಸೊರಗುವ ನೋವಿನ ಚಿಂತೆ ೨

ಬದುಕಿದರೂ ಚಿಂತೆ ಬಾಳಿದರೂ ಚಿಂತೆ
ಬದುಕ ಸಹಿಸದ ಮೂಢರಿಂದ ಚಿಂತೆ
ಮುದದಿ ಕಾಯುವ ಮಾಧವನ ಚಿಂತೆ
ಬಾಧಿಸದಲ್ಲೋ ಕೊಂಚವು ತಂದೆ ೩

ಆ ಚಿಂತೆ ಈ ಚಿಂತೆ ಯಾಚಿಂತೆಯೊಳಗಿಂದ
ಆಚೆಗೆ ಎಳೆತಂದು ಮತಿಯನು ನೀಡೋ
ಅಚಿಂತ್ಯ ನಿನ್ನನೆ ಚಿಂತಿಸುವಂತೆನ್ನ
ನಿಶ್ಚಿಂತನಾಗಿಸೊ ಜಾಜಿಪುರೀಶ ೪

೪೭೭

ತಾಯಿ ಲಕುಮಿ ತಂದೆ ನಾರಾಯಣ ನಿ-
ಮ್ಮ ನೆಚ್ಚಿನ ಮಗನಾನಣ್ಣ ಪ

ಪಕ್ಕ ದಾಯಿಗರು ಎನಗೆ ಇಬ್ಬರಿಹರು
ರಕ್ಕಸರು ಇಹರು ನಾಲ್ಕು ಮಂದಿ
ಮಿಕ್ಕವರ ಬಲವುಂಟು ಬಹು ಮಂದಿ ಯಾ-
ತಕ್ಕೆ ಇರುವನೆನಗೊಬ್ಬನೆ ಮಾರುತಿ ೧

ಮಾರುತಿಯ ನಂಬಿದರೆ ಮಹಾಬಲವುಂಟಣ್ಣ
ಊರ ಹರಿಭಕ್ತರಿಗೆ ಸರಿ-ಸಾಟಿಯಾರಣ್ಣ
ಆರಿಹ-ಪರಗಳಲ್ಲೂ ವಿರೋಧಿಗಳಿರರಣ್ಣ
ಶ್ರೀರಾಮಸಖ ಭಾಗ್ಯ ಇಂತಿದೆ ನೋಡಣ್ಣ ೨

ನಿನ್ನನೆ ಹಾಡುವೆ ನಿನ್ನನೆ ಹೊಗಳುವೆ
ನಿನ್ನನೆ ಬೇಡಿ ಕಾಡಿಸುವೆನಯ್ಯ
ನಿನ್ನ ಪಾದದಲಿ ತಲೆ ಇಡುವೆ ರಂಗಯ್ಯ
ನಿನ್ನ ಬಲವೊಂದಿರೆ ಅಂಜೆನು ಅಳುಕೆನಯ್ಯ ೩

ನಿನ್ನಂತೆ ಸಾಕುವರ ನಂಬಿದರೆ ಕಾಪಾಡುವರ
ನಿನ್ನಾಣೆ ನಾಕಾಣೆ ಜಾಜಿಪುರೀಶ ವಿಠಲರಾಯ ೪

೪೭೮

ನನ್ನ ಆತ್ಮನಿನ್ನದಯ್ಯ ನಿನ್ನ ಪಾದ ನನ್ನದಯ್ಯಾ ಚನ್ನಕೇಶವ ಪ

ಲಕ್ಷ್ಮೀಕಾಂತ ಜಾಜಿಪುರೀಶ ನೀನೆ ಕಾಯಬೇಕಯ್ಯಾ ಅ.ಪ

ಮನೆಯಾಸೆ ಬಲು ಬಾಧಿಸುತಿದೆ
ತನು ಮಡದಿಮಕ್ಕಳ ಮೋಹವೆಂದಿದೆ
ಮನದ ಚಪಲತೆ ಸಾಧಿಸು ತಂದೆ
ಇನಿತಾಸೆ ಬಿಡಿಸು ಬುದ್ಧನಂತೆ ೧

ನಿನ್ನನೆ ನೆನೆವಂತೆ ಮಾಡು ಕೇಶವನೆ
ಜನ್ಮವಿದು ಸಾಕು ಕರೆಯೋ ಮಾಧವನೆ
ನಿನ್ನ ಪಾದದಲಿಟ್ಟು ಪಾಲಿಸು ಮಧುಸೂದ
ನನೆ ಜಾಜಿಪುರಿಯ ಕೇಶವ ಶೆಲ್ವಪಿಳ್ಳೆ ೨

೪೭೯

ಸತಿಯಿಲ್ಲಸುತರಿಲ್ಲ ಬಂದು ಬಾಂಧವರಿಲ್ಲ
ನುತ ಕೇಶವನಲ್ಲದೆ ಸದ್ಗತಿ ಎನಗಿಲ್ಲ ಪ

ಹೆರರನಾಶ್ರಯಿಸಿ ಬದುಕಬೇಕಲ್ಲ
ನರರನನುಸರಿಸಿ ಬಡವಾದೆನಲ್ಲ
ಇರುವ ನಾಲ್ಕು ದಿನದ ಬರಿದೆ ಸುಖಕ್ಕಾಗಿ
ನರನಿಗೆ ನೀಚನಿಗೆ ಈ ಸ್ಥಿತಿ ಒದಗಿತಲ್ಲ ೧

ಹರಿನಿನ್ನ ಭಜಿಸದೆ ಬಲು ಬಾಧೆಯಾಗಿದೆ
ಪರಿಪರಿಯ ನೋವನ್ನು ನೀಗುವವರಾರಿಲ್ಲ
ಸಿರಿಸಂಪತ್ತಿರುವರೆಗೆ ಸತಿಸುತರೆಲ್ಲ
ಕರೆದರೂ ಬರರಲ್ಲ ಬಾಂಧವರು ಸ್ನೇಹಿತರು ೨

ಸುಖದಲಿರುವಾಗ ಮನ್ನಿಪರೋ ಎಲ್ಲ
ಅಖಿಲಗೋತ್ರಜರು ನೆರೆಹೊರೆಯವರು
ಸಖರು ಯಾರಿಲ್ಲ ಸಾವು ಬಂದೆಳೆವಾಗ
ಅಖಂಡ ಒಡೆಯ ಜಾಜಿಪುರೀಶ ಕಾಯಬೇಕಯ್ಯ ೩

೪೮೦

ಈಗುಂಟೋ ಆಗುಂಟೋ ಈ ದೇಹ
ಏಗಬಲ್ಲರು ಯಾರು ಈ ಜಗದ ಗುಂಟ ಪ

ನಾಲ್ಕು ದಿನ ಇರುವಾಗ ಚೆನ್ನಾಗಿ ಇರಬೇಕು
ನಾಲ್ಕಾರು ಜನರಿಗೆ ಉಪಕಾರ ಮಾಡಬೇಕು
ಬಾಲೆ ಸರಸತಿಗೆ ಪರಧನಕೆ ವಸ್ತುವಿಗೆ ಏಕೆ
ಹಾಳು ಮನವನು ನಿಲಿಸಿ ಕೆಡಿಸಬೇಕು ೧

ಹಾರುವ ಮನವನ್ನು ಕಟ್ಟಿ ಹಾಕಬೇಕು
ಹಾರುವನ ಕಂಡರೆ ತಡೆಯಬೇಕು
ಹಾರಲೇಕೆ ಪರರ ಒಡವೆ ಕಂಡೊಡನೆಯೆ
ಬಾರಿಬಾರಿಗೆ ಬರಿದೆ ಕೆಣಕಲೇಕೆ ೨

ವಿಚಾರಿಸಿಕೋ ದೇವ ಶಿಷ್ಟರ ಭಂಟ ಊರೊಳಗೆ
ಉಚಾಯಿಸುತಿದ್ದಾರೆ ಐದಾರು ಮಂದಿ
ಎಚ್ಚರಿಕೆ ಹಾಕುತ್ತ ಇದ್ದಾರೆ ದುಷ್ಟ ಮಂದಿ
ಎಚ್ಚರಿಸೊ ಉದ್ಧರಿಸೊ ನೆಂಟ ಜಾಜಿಪುರೀಶ ೩

೪೮೧

ಮನದೊಳಗೆ ಮಸಣವನು ತುಂಬಿಕೊಂಡಿರಲು
ಮನೆಯ ಚಂದದಿ ಮಾಡಿದರೇನಯ್ಯ ಪ

ಮನೆಯೊಡೆಯ ತಾನು ಸನ್ನಡತೆಯಲ್ಲಿರದೆ
ಮನೆಮಂದಿಯನು ದಂಡಿಸಲಾಗದಯ್ಯ
ಮನೆತುಂಬ ಮನತುಂಬ ಜಾಜಿಪುರಿವಾಸನನು
ಅನುದಿನವು ನುತಿಸಲು ಸುಖವುಂಟು ಕೇಳಯ್ಯ ೧

ದೇವರು ಧರ್ಮವನು ದಾರಿಯಾಚೆಗೆ ಅಟ್ಟಿ
ದೇವಾಲಯವ ಮನೆಯೊಳಗೆ ಮಾಡಲೇನು
ಅವರಿವರ ನೋಟಕ್ಕೆ ಒಪ್ಪವಾದೀತಷ್ಟೆ
ಯಾವ ಪುರುಷಾರ್ಥವದರಿಂದ ಹೇಳು ೨

ಅವ್ವ ಕಷ್ಟವು ಬರಲು ಅವರಿವರು ಬಾರರು
ಆ ವಾಸುದೇವನಲ್ಲದೆ ಮತ್ತೊಬ್ಬರಾಗರು
ಭಾವ ಮೈದುನ ಗಂಡ ಹೆಂಡತಿ ಮಕ್ಕಳು
ಇವರೆಲ್ಲ ದೇವ ಜಾಜಿಪುರೀಶನೊಕ್ಕಲು ೩

(ಈ) ತಾತ್ವಿಕ ಕೃತಿಗಳು

೬೮೨

ಓಂ ನಮೋ ನಾರಾಯಣ ಓಂ ನಮೋ ನಾರಾಯಣ ಪ

ಎನ್ನುವ ನಾಮದ ಬೀಜವನು
ರಾಮಾನುಜ ಬೆಳೆದ ಧರೆಯೊಳಗೆ ಅ.ಪ

ನಾರದ ಬಿತ್ತಿದ ನಾರಾಯಣ ಬೀಜಕೆ
ಧೀರಾಂಬರೀಷನು ಗೊಬ್ಬರವಾದ ಕು-
ಮಾರ ಪ್ರಹ್ಲಾದನು ನೀರಾಗೆರೆದ
ಆ ರುಕುಮಾಂಗದ ಗಾಳಿಯಾದ ೧

ನಾರಾಯಣನೆಂಬ ಬೀಜಮಂತ್ರವು ಕು-
ವರ ಧ್ರುವನ ಕಾವಲಿನಲ್ಲಿ

ಸರಸರ ಬೆಳೆಯಿತು ಆಳುವಾರರು ಭೂ
ಸುರ ಭಾಗವತರುಗಳಲಿ ೨

ರಮಾನುಜನಿದರ ಒಕ್ಕಣೆಮಾಡಿ
ಸಮಾನತೆಯಿಂದ ಹಂಚಿದನು
ಶ್ರೀಮಣಿಯಲ್ಲಿ ತುಂಬಿದನು
ಸಮಾನ ವೇದವೆನಿಸಿದನು ೩

ಹಬ್ಬಿತು ಹರಡಿತು ಧರೆಯೆಲ್ಲ
ಉಬ್ಬಿತು ಉಲಿಯಿತು ಗಿರಿಯೆಲ್ಲ
ಅಬ್ಬಬ್ಬ ಜಾಜಿಪುರೀಶ ಕೇಶವನಾಮವು
ಹಬ್ಬವಾಯಿತು ನಮಗೆಲ್ಲ ೪

೪೮೩

ಪೂರ್ಣ ಪರಿಪೂರ್ಣ ಸಂ–
ಪೂರ್ಣ ಜಾಜಿಪುರೀಶ ಮಹಾಪೂರ್ಣ ಪ

ಸರ್ವಾಂಗ ಪರಿಪೂರ್ಣ
ಸರ್ವದೇಶ ಪರಿಪೂರ್ಣ
ಸರ್ವಜನ ಪರಿಪೂರ್ಣ
ಸರ್ವಕಾಲ ಪರಿಪೂರ್ಣ ೧

ವಿಶ್ವವನೆಲ್ಲ ಉದರದಲಿಟ್ಟಿಹ
ವಿಶ್ವವನೆಲ್ಲ ಬಾಯಲಿ ತುಂಬಿಹ
ವಿಶ್ವವನೆಲ್ಲ ರಣಭೂಮಿಲಿ ತೋರಿಹ
ವಿಶ್ವಾತ್ಮನು ತಾ ಪರಿಪೂರ್ಣ ೨

ಆವಾದೇಶ ಕಾಲ ಜೀವರಲ್ಲಿ
ಭೂವಲ್ಲಭ ಸಕಲ ಲೋಕರಲ್ಲಿ
ಭಾವಿಪ ಕೋಟೆ–ಪೇಟೆ ಚನ್ನಿಗರಾಯ
ಯಾವೆಲ್ಲರಲ್ಲು ಸಂಪೂರ್ಣ ೩

೪೮೪

ವಿಶಿಷ್ಟಾದ್ವೈತ ಮತವೇ ಮತವು ಪ

ವಿಷ್ಣು ಪದವೇ ಶಾಶ್ವತ ಪದವು ಅ.ಪ

ವಸಿಷ್ಠ ನಾರದ ಸನಕಾದಿ ವಂದ್ಯರ
ವಿಶಿಷ್ಟ ಪರಿಗ್ರಹ ವೇದಾಂತ ಸಾರದ ೧

ಅಸೇತುಹಿಮಾಚಲ ವಿಶೇಷದ
ವಿಶೇಷ ಪ್ರಮಾಣ ಚತುಷ್ಟಯದ ೨

ಚಿತ್ತು ಅಚಿತ್ತೀಶ್ವರ ತತ್ತ್ವವನು
ಪ್ರತ್ಯೇಕವಾಗಿಯೇ ಬೋಧಿಸಿಹ ೩

ಪರ ವ್ಯೂಹ ವಿಭವಾಂತರ ಅರ್ಚಾ
ಪರಿಪರಿರೂಪದ ಶ್ರೀಹರಿ ಪೂಜನ ೪

ರಹಸ್ಯತ್ರಯ ಮಂತ್ರ ವಿಶಿಷ್ಟದ
ಸಹಮತ ಸುಲಭೋಪಾಯವಿಧಾನದ ೫

ಹರ ಅಜ ಸುರರೆಲ್ಲರು ಹರಿಮತ
ಹರಿಯೊಬ್ಬನ ಪಾದವೆ ಮೋಕ್ಷಪಥ ೬

ಪ್ರಪತ್ತಿಮಾರ್ಗದ ಪ್ರಧಾನ ಧರ್ಮದ
ಉಪವೃತ್ತಿಯ ಬೇಡದ ಶರಣಾಗತಿಯ ೭

ಸತತವು ಹೆಜ್ಜಾಜಿಕೇಶವನಾಮ
ನುತಿಸಿದವನ ಭವಬಂಧನ ಬಿಡಿಸುವ ೮

೪೮೫

ಅಚ್ಯುತ ಅನಂತ ಗೋವಿಂದಾಯ
ಮೆಚ್ಚುತ ಮಾಡೋ ಕಾಯ ಪೂಜಾ ಪ

ದ್ವಾದಶನಾಮದ ನಾರಾಯಣಾರ್ಚನೆ
ದ್ವಾದಶಬಾಧೆಯ ಕಳೆಯುವ ಕೀರ್ತನೆ ಅ.ಪ

ಕೇಶವಾಯ ನಮಃ ಓಂ ಕೇಶವಾಯ ನಮಃ
ಕ್ಲೇಶವು ಕರಗಿ ಈಶನು ಮನದಲಿ ನಿಲ್ಲುವನು ೧

ಮಾಧವಾಯನಮಃ ಓಂ ಮಾಧವನೆನೆ
ಕ್ರೋಧವು ಅಳಿದು ಮೋದದಿ ಮನ ಮಿಡಿಯುವುದು ೨

ವಿಷ್ಣುವೇನ್ನಮಃ ಓಂ ವಿಷ್ಣುವೆನ್ನಿರಿ ಸ–
ಹಿಷ್ಣುವಾಗುವುದು ಕಾಯ ಕರ್ಮನಿಷ್ಠೆಯಲಿ ೩

ಮಧುಸೂದನಾಯನಮಃ ಓಂ ಮಧುಸೂಧನಾಯ
ಮದಗಳೆಂದೂ ಮಥಿಸೋಡುವವು ತಿಳಿಯ ೪

ತ್ರಿವಿಕ್ರಮಾಯನಮಃ ಓಂ ತ್ರಿವಿಕ್ರಮನೆನಲು
ಭವಿಯುಕಾಮಮೋಹತೊಲಗಿ ಕೋಮಲನಾಗುವನು ೫

ಶ್ರೀಧರಾಯನಮಃ ಓಂ ಶ್ರೀಧರಾಯವೆನ್ನಿ
ಸೋದರತ್ವಮೂಡಿ ಮತ್ಸರ ಮರೆಯುವುದು ೬

ಹೃಷಿಕೇಶಾಯನಮಃ ಓಂ ಹೃಷಿಕೇಶನೆನು
ಹುಸಿಯನಾಡದ ಲೋಭರಹಿತ ತನುವೀಯುವನು ೭

ಪದ್ಮನಾಭಾಯನಮಃ ಓಂ ಪದ್ಮನಾಭನೆನಲು
ಛದ್ಮವೇಶನ ದ್ವಾದಶಾಪೇಕ್ಷೆಗಳೀಡಾಡುವವು ೮

ದಾಮೋದರಾಯ ನಮ: ಓಂ ದಾಮೋದರೆಂದರೆ
ಆಮೋದದಿ ಮನ ಶ್ರೀಹರಿಪದಕೆರಗುವುದು ೯

ವಾಮನಾಯನಮ: ಓಂ ವಾಮನನೆಂದರೆ
ಅಮಮ! ನಿಲ್ಲುವ ಕಣ್ಮುಂದೆ ನೆಲಮುಗಿಲೊಂದಾಗಿ ೧೦

ಆಳ್ವಾರಾಚಾರ್ಯರಾದಿ ಗುರುಗಳು ಪೇಳಿದ ಈ ಮಂತ್ರ
ಬಾಳ್ವರ ಪಾಲಿಗೆ ಪಾವನ ಸೂತ್ರ ೧೧

ಅನುದಿನ ಬಿಡದೆ ಮನದಲಂದರು ಸಾಕು
ಸನುಮತದಲಿ ಕಾಯ್ವ ನಮ್ಮ ಜಾಜಿಕೇಶವ ೧೨

(ಉ) ವಿಶೇಷ ಸಂದರ್ಭದ ಹಾಡುಗಳು

೪೮೬

(೧) ಹೆಜ್ಜಾಜಿಕೇಶವಸುಪ್ರಭಾತ

ಏಳಯ್ಯ ಜಾಜಿಪುರೀಶ ಕೇಶವರಾಯ
ಬೆಳಗಾಯಿತೇಳಯ್ಯ ಎದ್ದುರುಳಯ್ಯ ಪ

ಕೋಟೆ ಚನ್ನಿಗನೆಂದು ಹೆಸರಾದವನೆ
ಪೇಟೆ ಚನ್ನಿಗನಾಗಿ ನೆಲೆಸಿರುವವನೆ
ಏಳಯ್ಯ ಬೆಳಗಾಯಿತು ೧

ಗರುಡ ವಾಹನನಾಗಿ ಕಣ್ಗಾವಲಾಗಿಹನೆ ಕು-
ದುರೆ ವಾಹನನಾಗಿ ಊರೆಲ್ಲ ಕಾಯುವನೆ
ಏಳಯ್ಯ ಬೆಳಗಾಯಿತು ೨

ಶ್ರೀದೇವಿ ಭೂದೇವಿಯರ ನಡುವೆ ಅರಸಾಗಿ
ಬಾಧೆಹೊತ್ತಾಜನರ ಹಾರೈಸುತಿರುವನೆ
ಏಳಯ್ಯ ಬೆಳಗಾಯಿತು ೩

ನಾರದರು ತುಂಬುರರು ದೇವತೆಗಳೆಲ್ಲ ಎ-
ದುರಲಿ ನಿಂದು ವಂದಿಸುತಿಹರಲ್ಲ
ಏಳಯ್ಯ ಬೆಳಗಾಯಿತು ೪

ವಂದಿ ಮಾಗಧರು ಜಯಘೋಷ ಮಾಡುತ್ತ
ಮಂದಿ ಮಂದಿಯೆ ನಿಂತು ನುತಿಸುತ್ತಿಹರು
ಏಳಯ್ಯ ಬೆಳಗಾಯಿತು ೫

ಭಂಟರು ಬಂದು ಮಂಗಳರವದಿಂದ
ಗಂಟೆ ಜಾಗಟೆಗಳ ನುಡಿಸುತಲಿಹರು
ಏಳಯ್ಯ ಬೆಳಗಾಯಿತು ೬

ಮುನ್ನಿನ ರವಿಯು ಉದಯಿಸುತಿರುವನು
ಹೊನ್ನಿನ ಕಿರಣಗಳ ಪಸರಿಸುತಿರಿವನು
ಏಳಯ್ಯ ಬೆಳಗಾಯಿತು ೭

ಬೀದಿಯ ಜನರೆಲ್ಲ ಬೇಗ ಬೇಗನೆ ಎದ್ದು
ಹಾದಿಯ ಸಿಂಗರಿಸಿ ಕಾಯುತಲಿರುವರು
ಏಳಯ್ಯ ಬೆಳಗಾಯಿತು ೮

ಪೇಟೆ ಚೆನ್ನಿಗನ ಕಡೆಯಿಂದ ದಂಡೊಂದು ಭ
ರಾಟೆ ವಾದ್ಯಗಳ ನುಡಿಸುತ್ತ ಬರುತಿಹುದು
ಏಳಯ್ಯ ಬೆಳಗಾಯಿತು ೯

ಕೊಂಬು ಕಹಳೆಗಳ ಊದುವರು ಕೆಲವರು
ತುಂಬು ಮಂತ್ರಗಳ ಹೇಳುವರು ವೈಷ್ಣವರು
ಏಳಯ್ಯ ಬೆಳಗಾಯಿತು ೧೦

ಸುಮಂಗಲೆಯರು ಕಳಸ ಹೊತ್ತಿಹರು
ಸುಮ್ಮಾನದಿ ಭಕುತರು ಕುಣಿಯುತಲಿಹರು
ಏಳಯ್ಯ ಬೆಳಗಾಯಿತು ೧೧

ಅಭಯ ಹಸ್ತನೆ ಏಳ ಕಮಲವದನನೆ ಏಳು
ಉಭಯ ಜನರುಗಳೆಲ್ಲ ದರುಶನಕೆ ಕಾದಿಹರು
ಏಳಯ್ಯ ಬೆಳಗಾಯಿತು ೧೨

ನಿನ್ನ ಭಕ್ತರು ನಿಂತು ಧ್ಯಾನ ಮಾಡುತಲಿಹರು
ಎನ್ನರಸ ಜಾಜಿಪುರ ವರದ ಕೇಶವರಾಯ
ಏಳಯ್ಯ ಬೆಳಗಾಯಿತು ೧೩

೪೮೭

(೩) ಶ್ರೀಕೃಷ್ಣ ಲಾಲಿ

ಜೋ ಜೋ ಶ್ರೀಕೃಷ್ಣ ಗೋಪಾಲಕನೆ
ಜೋ ಜೋ ಗೋಪಿಯ ಕುಮಾರನೆ ಪ

ಪಾಡಿತೂಗುವೆನಯ್ಯ ಜೋಜೋಜೋ ಅ.ಪ

ಹಾಲಿನ ಹೊಳೆಯಲಿ ಹರಿದು ಬಂದವನೆ
ಆಲದೆಲೆಯ ಮೇಲೆ ಮಲಗಿ ಬಂದವನೆ
ಕಾಲಿನ ಹೆಬ್ಬೆರಳ ಬಾಯಲಿಟ್ಟವನೆ
ಹಾಲುಗಲ್ಲದ ಶಿಶುವೆನಿಸಿಕೊಂಡವನೆ
ಪಾಡಿತೂಗುವೆನಯ್ಯ ಜೋಜೋಜೋ ೧

ಕೆತ್ತಿದ ಚಿನ್ನದ ತೊಟ್ಟಿಲು ಇಲ್ಲ
ಮುತ್ತಿನ ಮಣಿಗಳ ಸರಗಳು ಇಲ್ಲ
ಮೆತ್ತನೆ ಹಾಸಿದ ಬಟ್ಟೆಯ ಮೇಲೆ
ಹೊತ್ತು ಮೀರಿದೆ ಮಲಗೋ ಕಂದ
ಪಾಡಿತೂಗುವೆನಯ್ಯ ಜೋಜೋಜೋ ೨

ಚೆನ್ನಯ್ಯ ನೀನು ಮುದ್ದುರಂಗಯ್ಯ
ಅಣ್ಣಯ್ಯ ಕಾಣೋ ತುಂಟ ಕೃಷ್ಣಯ್ಯ
ಸುಮ್ಮನೆ ಮಲಗಯ್ಯ ರಂಪಾಟ ಮಾಡದೆ
ಕಣ್ಮುಚ್ಚಿ ಪವಡಿಸೋ ಪರಮಾನಂದನೆ
ಪಾಡಿತೂಗುವೆನಯ್ಯ ಜೋಜೋಜೋ ೩

ಅಂಗೈಯಲ್ಲೆ ಅದ್ಭುತ ಮಾಡುವೆ
ಅಂಗಾಂಗದಲ್ಲಿ ಬ್ರಹ್ಮಾಂಡ ತೋರುವೆ
ಸಂಗಡಿಗರ ಭಂಗ ಪಾಂಡುರಂಗ
ಚಂಗನೇಳದೆ ಮಲಗೊ ಜಾಜಿಪುರಿರಂಗ
ಪಾಡಿತೂಗುವೆನಯ್ಯ ಜೋಜೋಜೋ ೪

೪೮೮

(೪) ದಶಾವತರ ಮಂಗಳ

ಮಂಗಳಂ ಜಯ ಮಂಗಳಂ
ಜಾಜಿಪುರಿವಾಸ ಶ್ರೀ ಚೆನ್ನಕೇಶವಗೆ ಪ

ವೇದಮಾರ್ಗವ ಹೊತ್ತು ಮದಿಸಿದ್ದ ದುರುಳನನು
ಮೋದದಲೆ ಸಂಹರಿಸಿ ಪೊರೆದ ಮತ್ಸ್ಯನಿಗೆ ೧

ಪಾತಾಳಕಿಳಿದಿದ್ದ ಈ ಪೃಥ್ವಿಯನು ಹೊತ್ತು
ದೈತ್ಯನಿಂ ರಕ್ಷಿಸಿದ ಕೂರ್ಮಾವತಾರನಿಗೆ ೨

ಹಿರಣ್ಯಾಕ್ಷನ ವಶದಿ ನಲುಗಿದ್ದ ವಸುಧೆಯನು
ಹರಿಯಂತೆ ಮುನ್ನುಗ್ಗಿ ಸಾವರಿಸಿದ ವರಾಹಗೆ ೩

ವರ ಪ್ರಹ್ಲಾದನ ವಿಧವಿಧದ ಬಾಧೆಯನು
ಹರಿ ಎಂಬ ಮಂತ್ರದಿಂ ಹರಿಸಿದ ನರಹರಿಗೆ ೪

ಬಲಿಯಿಂದ ಬೇಡಿದ ಭೂಮಿಯನು ಪಡೆದು
ಒಲಿದವನ ಮನೆ ಬಾಗಿಲನೆ ಕಾಯ್ದ ವಾಮನಗೆ ೫

ಕಾರ್ತೀವೀರ್ಯಾದಿ ಪೂರ್ತಿ ದುಷ್ಟರ ಹೀರಿ
ಆರ್ತರನು ರಕ್ಷಿಸಿದ ಕೀರ್ತಿವಂತ ಭಾರ್ಗವಗೆ ೬

ದಶರಥನ ಮಗನಾಗಿ ದಶಶಿರನ ಮುಂಡಾಡಿ
ಋಷಿಜನರು ಜಾನಕಿಯ ರಕ್ಷಿಸಿದ ರಾಮನಿಗೆ ೭

ಗೀತಾಚಾರ್ಯನೆನಿಸಿ ಅರ್ಜುನಸಾರಥಿಯಾಗಿ
ಸತ್ಯಕ್ಕೆ ಜಯವೆಂದ ನಿತ್ಯಪುರುಷ ಶ್ರೀಕೃಷ್ಣನಿಗೆ ೮

ನೇಗಿಲ ಯೋಗಿಯಾಗಿ ಇಳೆಯಲ್ಲಿ ಬೆಳೆತಂದು
ರಾಗದಿ ಬದುಕನ್ನು ಕಲಿಸಿದ ಬಲರಾಮಂಗೆ ೯

ಕಲಿಯುಗವ ಕಾಯುತ ಕುದರೆಯನೇರಿ
ಕಲಿ ಕಲಿ ಕಲಿರೆಂದು ಬರುತಿಹ ಕಲ್ಕಿಗೆ ೧೦

ಮಂಗಳಂ ಜಯ ಮಂಗಳಂ
ಅಂಗಾಂಗ ಚೆಲುವ ಶ್ರೀರಂಗನಾಥಗೆ
ಮಂಗಳಾತ್ಮಕ ಶ್ರೀ ಜಾಜಿಪುರೀಶಂಗೆ
ಮಂಗಳಂ ಜಯ ಮಂಗಳಂ ೧೧

ವಿಶೇಷ ಕೃತಿಗಳು

ಅ.ದಾಸರ ಇತರ ಕೃತಿಗಳು

೧. ಬೇಲೂರು ವೈಕುಂಠದಾಸರು

೧. ಗಜೇಂದ್ರಮೋಕ್ಷ

೪೮೯*

ನಾರಾಯಣ ಎನ್ನಿರೊ ನಾರಾಯಣ ಎನ್ನಿ
ನಾರದಾದ್ಯಖಿಳ ಮುನಿವಿನುತಾಯ ಪಾಹಿಮಾಂ
ಕಾರುಣ್ಯಲೋಚನಾಯ ನಾಗೇಂದ್ರಶಯನಾಯ
ಘೋರ ಭವದುಃಖ ಸಂಹಾರಾಯ ಪ

ಪಾಂಡುದೇಶದೊಳು ಇಂದ್ರದ್ಯುಮ್ನನೆಂಬ ಭೂ
ಮಂಡಲಾಧಿಪನು ವೈರಾಗ್ಯದಲಿ ಹರಿಪಾದ
ಪುಂಡರೀಕ ಧ್ಯಾನಪರನಾಗಿ ತಪಸಿಲಿರೆ ಚಂಡತಾಪಸನಗಸ್ತ್ಯ
ಹಿಂಡು ಶಿಷ್ಯರ ಬೆರೆಸಿ ಬರಲು ಸತ್ಕರಿಸದಿರೆ
ಕಂಡು ಗಜಯೋನಿಯೊಳು ಜನಿಸು ಪೋಗೆಂದು ಉ-
ದ್ದಂಡ ಶಾಪವನಿತ್ತು ಮುನಿ ಪೋಗಲಿತ್ತ
ತಾ ಶುಂಡಾಲನಾದನರಸ ೧

ಕ್ಷೀರಸಾಗರ ತಡದೊಳೈವತ್ತು ಯೋಜನ ವಿ-
ಸ್ತಾರದಿಂದಿರುವ ತ್ರಿಕೂಟಾದ್ರಿ ಶೃಂಗತ್ರಯದಿ
ರಾರಾಜಿತ ತಾಮ್ರರಚಿತ ಕಾಂಚನದಿಂದ ಮೇರುಸಮ ಗಂಭೀರದಿ
ಪಾರಿಜಾತಾಂಭೋಜ ತುಳಸಿ ಮಲ್ಲಿಗೆ ಜಾಜಿ

* ಈ ಕೃತಿ ಪುರಂದರದಾಸರು ಮತ್ತು ಲಕ್ಷ್ಮೀಶರ ಅಂಕಿತದಲ್ಲೂ ಇದೆ.

ಸೌರಭಗಳಶ್ವತ್ಥ ಚೂತ ಪುನ್ನಾಗ ಜಂ
ಬೀರಾದಿ ತರುಗುಲ್ಮ ಖಗಮೃಗಗಳೆಸೆವಲ್ಲಿ
ವಾರಣೇಂದ್ರನು ಮೆರೆದನು ೨

ಆನೆ ಹೆಣ್ಣಾನೆ ಮರಿಯಾನೆಗಳ ಸಹಿತಲಾ
ಕಾನನವು ತೊಳಲುತ್ತ ಬೇಸಿಗೆಯ ಬಿಸಲಿನಲಿ
ತಾ ನೀರಡಿಸಿ ಬಂದೊಂದು ಸರೋವರವ
ಕಂಡಿತು ಪಾನಾಭಿಲಾಷೆಯಿಂದ
ನಾನಾ ಪ್ರಕಾರದಿಂ ಜಲಕ್ರೀಡೆಯಾಡುತಿರೆ
ಏನಿದೆತ್ತಣ ರಭಸವೆಂದುಗ್ರಕೋಪದಿಂ
ದಾ ನೆಗಳು ಬಾಯ್ತೆರೆದು ನುಂಗಿತೊಂದಫ್ರಿಯನು
ಏನೆಂಬೆನಾಕ್ಷಣದೊಳು ೩

ಒತ್ತಿ ಹಿಡಿದೆಳೆವುತಿರೆ ಇದೆತ್ತಣಯದೆನುತ
ಮತ್ತೆ ಇಭರಾಜನೌಡೆತ್ತಿ ಘೀಳಿಡುತ ಎಳೆ
ದೊತ್ತಿ ತಂದನು ಕಡೆಗೆ ಮತ್ತೆ ನಡುಮಡುವಿನೊಳಗೆ
ಸೆಳೆದುದು ಬಿಡದೆ ನೆಗಳವು
ಇತ್ತಂಡವಿತ್ತು ಕಾದಿತ್ತು ಸಾವಿರ ವರುಷ
ಪೊತ್ತರಿಸಿತ್ತೇನೆಂಬೆ ಮತ್ತಾ ಗಜೇಂದ್ರಂಗೆ
ಶಕ್ತಿ ತಗ್ಗಿತು ತನ್ನ ಮನದೊಳಗೆ
ಚಿಂತಿಸುತ ಮತ್ತ್ಯಾರು ತನಗೆನುತಲಿ ೪

ಬಂದುದಾ ಸಮಯದಲಿ ಹಿಂದೆ ಮಾಡಿದ ಪುಣ್ಯ
ದಿಂ ದಿವ್ಯಜ್ಞಾನದಿಂ ಕಣ್ತೆರೆದು ಕೈಮುಗಿದು
ವಂದಿಸುತ ಮನದೊಳರವಿಂದನಾಭಾಚ್ಯುತ
ಮುಕುಂದ ಮುನಿವೃಂದವಂದ್ಯಾ
ಇಂದಿರಾರಮಣ ಗೋವಿಂದ ಕೃಷ್ಣ ಭಕ್ತರ
ಬಂಧು ಕರುಣಾಸಿಂಧು ತಂದೆ ಸಲಹೆನ್ನ ನಾ
ನಿಂದು ಬಹುಸಿಲುಕಿದೆನು ದಂದುಗದ
ಮಾಯಾಪ್ರಬಂಧದಿ ನೆಗಳಿನಿಂ ೫

ಪರಮಾತ್ಮ ಪರಮೇಶ ಪರಿಪೂರ್ಣ ಪರಾತ್ಪರ
ಉರುತರ ಪರಂಜ್ಯೋತಿ ಪರಮಪಾವನ ಮೂರ್ತಿ
ಪರತತ್ವ ಪರಬ್ರಹ್ಮ ಪರಮಾನಂದಾ
ಪರಮೇಷ್ಠಿ ಪರಮಪುರುಷಾ
ನಿರುಪಮ ನಿಜಾನಂದ ನಿರ್ಭಯ ನಿರಾವರಣ
ನಿರವಧಿಕ ನಿರ್ಗುಣ ನಿರಂಜನ ನಿರಾಧಾರ
ನಿರವೇದ್ಯ ನಿಶ್ಯಂಕ ನಿತ್ಯನೈಮಿತ್ಯಕಾ ನೀ ಸಲಹೆನ್ನನೆಂದಾನೆ ೬

ಇಂತೆನುತ ಮೂರ್ಛೆಯಲಿ ಗುಪಿತ ಕಂಠಧ್ವನಿಯೊ
ಳಂತರಾತ್ಮಕನ ನೆನೆವುತ್ತಳುತ್ತಿರಲಿತ್ತ
ನಂತ ಮಹಿಮನು ಕೇಳಿ
ಕರುಣದಿಂದಾಕ್ಷಣದೊಳನಂತಶಯನದೊಳೆದ್ದನು
ಸಂತವಿಸಿ ಸಿರಿಮುಡಿಯ ಗರುಡವಾಹನನಾಗಿ
ಚಿಂತೆಬೇಡವೆನುತ ಅಭಯ ಹಸ್ತ ಕೊಡುತ ಶ್ರೀ
ಕಾಂತ ಭಕ್ತನ ಬಳಿಗೆ ಬಂದೆರಡುಗೈಯಿಂ
ದಂತಿವದನನ ನೆಗಹಿದಾ ೭

ನೆಗಳ ಬಾಯನು ಚಕ್ರದಲಿ ಸೀಳಿ ಕರಿವರನ
ಉಗುವ ಕರುಣದಿಂ ಮೈದಡಹಲ್ಕೆ ಗಜಜನ್ಮ
ತೆಗೆದುದಾಕ್ಷಣವೆ ಮಣಿಮುಕುಟ
ಕುಂಡಲದಿಂದ ಮಿಗೆ ಶೋಭಿಸುತಲೆಸೆದನು
ವಿಗಡ ದೇವಲ ಋಷಿಯ ಶಾಪದಲಿ ಬದ್ದಿಳೆಗೆ
ಮಿಗೆನಕ್ರನಾಗಿ ಹೂಹೂ ಎಂಬ ಗಂಧರ್ವ
ನಘಹರನ ಕಂಡು ನಿಜಗತಿಗೈದು
ಅಮರರೊಲುಮೆಗೆ ನೆರೆದನೋಲೈಸುತ ೮

ಮಣಿಮಯ ಕಿರೀಟಕುಂಡಲ ಹಾರ ಪದಕ ಕಂ
ಕಣ ಕೌಸ್ತುಭೋಜ್ವಲ ಸುಗಂಧ ಭೂಷಣ ಹಸ್ತ
ಪಾಣಿಯಾ ಶಂಖಚಕ್ರಾಬ್ಜಧ್ವಜ ಕಸ್ತೂರಿ ತಿಲಕ ಪ್ರಣವ ತಾಕಿದನು
[ಝಣ ಝಣಿತನೂ]ಪುರ[ದ] ದಂತ ಪಂಕ್ತಿಯ ಕೃಪೆ

ಕ್ಷಣದ ಸಿರಿ ಮೊಗದ ಪೀತಾಂಬರದಾಲಂಕೃತದ
[ಗಣಿತನು] ಜಯ ಜಯವೆಂದು
ಸುರಸಿದ್ಧ ಸಾಧ್ಯ ಸಂದಣಿಯೊಳಗೆ ಮೆರೆದನು ೯

ಹರಿಯನುತಿಗೈದಂಘ್ರಿಗೆರಗಲಾಕ್ಷಣದಲಿ
ಭರದಿಂದಲೆತ್ತಿ ಕೇಳ್ಮಗನೆನ್ನನೀ ಶರಧಿ
ಗಿರಿಶೃಂಗತ್ರಯ ಸಪ್ತದ್ವೀಪದಲಿ [ಧರಣಿದೇವಿ] ವರಲಕ್ಷ್ಮಿಯೊಳು
ಗರುಡ ಶೇಷ ನಾರದ ಪ್ರಹ್ಲಾದ ಧ್ರುವ ರೊಲು
ವಿಪ್ರಋಷಿದೇಶಿಗರನಾಚಂದ್ರಾರ್ಕ ವಾಗಿ
ಸಿರಿವತ್ಸ ಶಂಖ ಚಕ್ರಾವತಾರದಲಿ ಸ್ಮರಿಸುವವರ ಕಾಯ್ವೆನೆಂದಾ ೧೦

ಆವನಿದನುದಯ ಕಾಲದೊಳೆದ್ದು ಭಕ್ತಿಯಿಂ
ಭಾವಶುದ್ಧಿಯಲಿ ಭಜನೆಯ ಮಾಳ್ಪ ಜನರಿಗ
ಘಾವಳಿಯ ಪರಿಹರಿಸಿ ನರಜನ್ಮವನು ಕಳೆದು ಪರಿಶುದ್ಧರಾದಹರೆಂ–
ದಾ ವಾಸುದೇವನಾಜ್ಞಾಪಿಸಿದ ಗಜೇಂದ್ರ ಸಹಿ
ತಾ ವಿಹಂಗಾಧಿಪನನೇರಿ ಬಿಜಯಂಗೈದ
ಆ ವೈಕುಂಠಪತಿಯ ನಂಬಿದ ಸೇವಕರಿಗೇನಿದು ಚೋದ್ಯವೇ ೧೧

೨. ಶನೀಶ್ವರ ದಂಡಕ

೪೯೦

ಶ್ರೀಮನ್ಮಹಾ ಮಾರ್ತಾಂಡ ಪುತ್ರ ಮುನೀಂದ್ರಾದಿಸ್ತೋತ್ರ ಪವಿತ್ರ ವಿಚಿತ್ರಚರಿತ್ರ ಕಾಶ್ಯಪಾವತ್ಸ ಗೋತ್ರ ನಮೋ ಮಾರ್ಗ ಸಂಚಾರಿ ನೀನಾಗಿ ನಾನಾಗ್ರಹ ಸ್ಥಾನಕಂ ಬಂದು ನೀನೊಂದು ರಾಶಿಯೊಳ್ ಪೊಂದಿನಿಂದಾಕ್ಷಣಂ ಮಾಸ ಮೂವತ್ತು ಪರಿಯಂತರಂ ಸಂಧಿಸಲ್ ಜನ್ಮಾಷ್ಟ ದ್ವಾದಶ ಪಂಚಮ ಸ್ಥಾನದಿಂ ವಕ್ರಮಂ ಮಾಳ್ಪ ವೈಖರ್ಯವೇನೆಂಬೆ ಬ್ರಹ್ಮ ರುದ್ರಾದಿ ಯಕ್ಷ ಗಂಧರ್ವ ಮೌನೀಂದ್ರ ವಿದ್ಯಾಧರಾನೇಕ ಯೋ[ಗೀಂದ್ರ]ರಂ [ಪೊದ್ದು] ನಿಂದಲ್ಲಿ ನಿಲಲೀಯದೆ ದೇಶಾಂತ [ರ ಚರಿ] ಸಲಾಹಾರಮಂ ಕಾಣದೆ ತಾಪಶ್ಶಾ [ತ್ತಾಪ] ಮೋಪಾಸನಾ ಭಾಸತ್ವವೆ ಹೊಂದಿ

ಮೌನತ್ವದಿಂದಷ್ಟ ಕಷ್ಟೋಪ ಕಷ್ಟಂಗಳಂ ಬಿಟ್ಟು ಈ ರೀತಿಯನು ಮಾಳ್ಪುದೆ ನಿನ್ನಯ ಚೇಷ್ಟೆ ವಿಲಾಸವೇನೆಂಬೆ ನಾ [ನೆಂ] ದೆಸೆ ಗುಂದು [ವರು] ಮಹಾಮೌನಿ ರುಂದ್ರ [ರು] ಸದಾ ಭೀತಿಯಿಂದ ಮಹಾರಾಯ ಚಕ್ರೇಶ್ವರಾನೇಕ ವೀರಾಧಿವೀರ ಗಣೇಶ್ವರರಂ ಅಹೋ ನಿನ್ನ ಕ್ರೂರಾನು ದೃಷ್ಟಿವುಂಟಾದ ಮಾರ್ಗಕ್ಕೆ ಮಹೀಪಾಲನೋ ಯೋಗಿ[ಯೋ] ಭ್ರಷ್ಟತ್ವವ ಹೊಂದಿ ಸಹಾಯಂಗಳಂ ಮಾಡದೆ ಗುಹಾರಣ್ಯ ವಾಸಸ್ತರಾಗಿ ಅಹೋರಾತ್ರಿಯೊಳ್ಮನಸ್ತಾಪಂಗಗಳಂಬಟ್ಟು ಮಾನಿನಿ ಮಕ್ಕಳಂ ಕಾಣದೆ ಮೈಮರತು ಚಂಡಾಲ ದೇಹತ್ವವ ಹೊಂದರೆ, ಶಂಭು, ಚಂಡಾಲ [ನನೋ]ಲೈಸನೆ, ಹರಿಶ್ಚಂದ್ರ ನಳನುಂ ಕಾಲಮಂ ಕಳೆಯರೆ ಭೂನಾಥರನಿಕಾರಾನಿ–ಕಾರತ್ವವ ಹೊಂದರೆ ಆ ಪಾಂಡುನಂದನರು, ನಿನ್ನದೊಂದಾಟೋಪಕಂ ಅಂಜದೆಯಿರುವರಾರಯ್ಯ ಮೂರ್ಲೋಕದೊಳ್ ಮಹಾಸ್ಥೂಲಕಾಯ ಅಹೋ ಕಷ್ಟಂಗೈಯ್ವ ಕಲಿಯುಗದ ಜನ [ತೆಗೆ] ಇನ್ನಾದ ಪಾಡೇನೆಂಬೆ ಇದ್ದವೂರೆಲ್ಲ ಕ್ಷುದ್ರ ಮಾಡಿ ಉಪದ್ರದಿಂ [ಸುಖ] ಮಂ ಹೋಗಿ ನಿಜಾನಂದವಾದಂಗಳಿಂ ತಿರುಗಿ ಗ್ರಾಸವಾಸಕ್ಕಿಲ್ಲದೆ ಸಾಲಮಂ ತೆಗೆದು ಕೊಡುವದಕ್ಕಿಲ್ಲದೆ ಕಡು ನಿಷ್ಠೂರವಂ ಪೇಳ್ದು ಚಿಂತಾದ್ರಿಯೊಳ್ಮುಳುಗಿ ನಿಜಾಶ್ರಯಮಂ ಮಾಡಿ ನಿಂದತ್ವವೆ ಹೊಂದಿ ಬಂಧುತ್ವದಿಂ ಭಜನೆಯಂಗೆಟ್ಟು ದಾರಿದ್ರವಂ ಬಿಡದೆ [ಬನ್ನಗೆಡು] ಎಂದಾರೈಸುವಿಯಲ್ಲೊ ಇದು ನಿನ್ನದಲ್ಲೊ ಸದಾನತ್ವವಲ್ಲೊ ಬೆನ್ನಟ್ಟಿ ನೀ ಬಿಡದೆ ಬಚ್ಚಿಟ್ಟ ದ್ರವ್ಯಮಂ ಕಣ್ಣಾರ ಕಾಣಿಸಿದ [ಂತೆ] ಕಳೆ ಕಳೆಸಿ ದುರ್ಬುದ್ಧಿಯೊಳ್ ಅಣ್ಣಗಂ ತಮ್ಮಗಂ ಮಗಂ[ಗಂ] ಅತಿವೈರತ್ವವಂ ಬೆಳೆಸಿ ಪುತ್ರ ಮಿತ್ರಾದಿಗಳ ಶತ್ರುತ್ವವೆನಿಸಿ ಅತಿಹೀನರಂ ಮಾಡಿ ಅನ್ಯಾಯಮಂ ಹೊರಿಸಿ ವ್ಯರ್ಥದೇಹಿಗಳೆನಿಸಿ ಊರೆಲ್ಲವೂ ಕರೆಸಿ ಸಜ್ಜನಭಯ ಚೋರ ಭಯ ರಾಷ್ಟಭಯವುಂಟಾಗಿ ವಾಜಿಯಿಂ ಕೆಟ್ಟು ಕಟ್ಟಾಳುತನ ಮಾತು ಕಟ್ಟದೆ ಸಭೆಯಲಿ [ಶಿಕ್ಷೆಕೊಂ]ಬವರು ಕೊಡುವ ಮನಸಿಲ್ಲ [ವೆಂದು] ಕೆಲವರನು ಹದಗೆಡಿಸಿ ಉಟ್ಟ [ಬಟ್ಟೆಯು]ಮಂ ಕಳೆದು ಹಿಟ್ಟಿಗು ಕಷ್ಟವಾಗಿ ಅಟ್ಟುಕೊಂಬುವ ಪಾತ್ರೆಗವಕಾಶ ತಪ್ಪಿಸಿ ಪರರ ಮನೆಯನು ಸೇರಿ ಪರಿಪಾಟು ಬಿದ್ದಲ್ಲಿ ಮಡದಿ ಸುತರೊಂದು ದೆಸೆ ತಾನೊಂದು ದೆಸೆಯಲ್ಲಿ ಒಡಲು ಹೊರೆಯುತ್ತಿರಲು ಕಡು ಮಹಾ [ಪಾ]ಪನಿಂದ್ಯ ಕ್ಕೊಡಂಬಟ್ಟು ನಡುನಡುಗಿ ಮಿಡುಕಿದುರ್ಮತಿಯೆ ಘನವಾಗಿ ಕುತ್ಸಿತರ ಬಾಗಿಲಲಿ ಸಮಯವನು ಅನುಸರಿಸಿ ಅಲ್ಪರಿಗೆ ಪಲ್ತೆರೆದು ನಮೋ ನಮೋ ಎಂದು ನಿಂದು ಲಜ್ಜೆಯಂ ತೊರೆದು ಮಾನಮಂ ಕಾಣದೆ ಹೀನ ದುಶ್ಚಿಂತೆಯಲಿ ಹಿತಗೆಟ್ಟು ಐಶ್ವರ್ಯಮಂ ಬಿಟ್ಟು ಬಟ್ಟ

ಬಯಲೆ ಆಗಿ ವಿಠಲನ ಕೃಪೆಯಿಂದ ಅಟ್ಟದೊಳಿಹ ಮೂಡೆ ಕಟ್ಟಿದ್ದ ಗೋ ಹಿಂಡು ನೆಟ್ಟನೆ ಹಗೇವದಲ್ಲಿದ್ದ ನಿಜಧಾನ್ಯ ಪಟ್ಟೆಂದು ಚಲಿಪುದು ಪರಿಪರಿಯ ವಸನಗಳು ಇಟ್ಟಲ್ಲಿ ನೆಲೆಸಿಹವಾಗಿ ಕಾಣಿಸದು ಅಟ್ಟೀವ ಹುಲಿ ಕರಡಿ ಉರಿಬಿಸಿಲು ಘನವಾಗಿ ಮಟ್ಟ ಮಧ್ಯಾಹ್ನದಲಿ ನೀರಡಿಸಿ ಕುಳಿತಿರಲು ಆರಿ[ಹ] ರೈ [ಕಾ]ವರಿಲ್ಲೆಂದು ಸಾರಸಂ [ಬಡುತ] ಕಾಡಿ [ವೊರೆ]ಯಿಡೆ ನಿನ್ನ ವೋಡಿ [ಮೆರೆವುದು] ಜರ್ಝರಿ ಭೂತ [ಂಗಳೆಲ್ಲಂ] ಬಿಟ್ಟು ಈ ದಂಡಕಂ ಹನ್ನೊಂದು ಬಾರಿ ಶನಿವಾರವೈದರಲಿ ಪಠಿಪರ್ಗೆ ಹನ್ನೊಂದನೆ ರಾಶಿಯೊಳಿರ್ದ ಫಲವನಿತ್ತು ಚೆಲುವ ವೇಲಾಪುರದ ವೈಕುಂಠ ವಿಠಲನ ಭಕ್ತನೆಂದೆನಿಸಿ ನಿನ್ನ ಪೆತ್ತ ಮಾತೆಯ ಪೆಸರನೆನಿತ ಧನ್ಯರಂ ಮಾಡಿಸದೆ ಅನ್ಯಾಯ[ಹಂ] ಕಾರಗಳಿಗಂಜಿ ನೀ ಬಿಡದೆ ನಿನ್ನ ಮನಬಂದ ರೀತಿಯಲಿ ಬಾಧಿಸದ್ಯೆಯಾ ಸನ್ಮುನಿವಂದ್ಯ ಸರ್ವೇಶ್ವರಾನಂದ ಸಂಚಾರಿರವಿಸೂನು ಯಮ ಸಹೋದರ ವೀರಧರ್ಮ ಪರಿಪಾಲನೆ ಶನ್ಯೈಶ್ವರ ಮಹಾರಾಯನೆ ತ್ರಾಹಿ ತ್ರಾಹಿ ನಮಸ್ತೆ ನಮಸ್ತೆ ನಮಃ

ಶ್ರೀ ಕೃಷ್ಣಾರ್ಪಣಮಸ್ತುಃ

೨. ಕವಿ ಲಕ್ಷ್ಮೀಶನ ವಸಂತ ವರ್ಣನೆಯ ಹಾಡುಗಳು

೪೯೧

ಇಂದು ಮುಖಿಯರು ಬಂದು ನೆರದು
ಕಂದರ್ಪನಯ್ಯಗೋವಿಂದ ಮುಕುಂದನೊಳು
ದ್ವಂದ್ವದಿಂದೊಲಿದು ವಸಂತವಾಡಿದರೂ ಪ

ನವರತ್ನ ಖಚಿತ ಮೋಹನದ ಮಂಟಪದಲ್ಲಿ
ನವಕುಸುಮ ಫಲಗಳನು ಕಟ್ಟಿದರು ನಲವಿನಲಿ
ನವಮೋಹನಾಂಗಿಯರು ನವರಸ ಪ್ರೌಢೆಯರು
ನವನೀತ ಚೋರನನು ನಿಲಿಸಿ
ತವ ತವಕದಿಂದ ತರುಣಿಯರೆಲ್ಲ ವೊಲವಿನಲಿ

ಕವಕವಿಸಿ ಪೊಳೆವ ಪೊನ್ನಂದುಗೆ ಘಲಿರೆನಲು
ಭವ ಭವಕೆ ಕಾಣೆ ಯೆಂದತಿ ಮನೋಪ್ರೀತಿಯಲಿ
ಪವಣರಿತು ಕುಂಕುಮವ ತಳಿದರು ಶ್ರೀಹರಿಗೆ ೧

ಕಳಹಂಸ ಗಮನೆಯರು ತಳಿರಡಿಯ ನೀರೆಯರು
ಸೆಳೆನಡುವಿನಬಲೆಯರು ಪೊಳೆವ ನಳಿದೋಳವನು
ಥಳಥಳಿಪ ಕುಚದ ಕಾಂತೆಯರು ನಳನಳಿಪ ವದನೆಯರು
ಎಳೆನಗೆಯ ಭಾವೆಯರು ಸುಳಿಗುರುಳ ನಾರಿಯರು
ಅಳವಟ್ಟ ಚಲುವೆಯರು
ನಳಿನನೇತ್ರನಿಗೆ ಕಮ್ಮಲರ ಸೂಸಿದರೂ ೨

ಪುಣುಗು ಜವ್ವಾಜಿ ಪಚ್ಚೆ ಪರಿಮಳವನೆ ತೆಯಿದು
ಫಣಿರಾಜಶಯನ ಬಾಬಾಯೆಂದು ಪ್ರೇಮದಿ
ಕುಣಿವ ಸೋಗೆಗಳ ಮುಡಿಯಂದದಬಲೆ ಬಲೆಯರೆಯಡಿ
ಗುಣನಿಧಿಯ ಪಿಡಿಯ ಬೇಕೆನುತಾ ಕ್ಷಣ ಬೇಗದಲಿ ಹಾಯ್ದು
ಗಿಣಿವಾಕಿನಲಿ ನುಡಿದು ಕ್ಷಣ ಬೇಗದಲಿ ಹಾಯಿದು
ಗಿಣಿವಾಕಿನಲಿ ನುಡಿದು ಯೆಣೆಯಿಲ್ಲ ನಿನಗೆಂದು
ಏಣಾಕ್ಷಿಯರು ತಡೆದು
ಪ್ರಣವಗೋಚರಗೆ ಚಂದನವ ಮಾಡಿದರೂ ೩

ಮುತ್ತಿನ್ಹಾರವ ತೊಟ್ಟು ರತ್ನಾಭರಣ ವಿಟ್ಟು
ಮತ್ತಗಜಗಾಮಿನಿಯರೊತ್ತಾಗಿ ಒಡಂಬಟ್ಟು
ಪತ್ತಬಿಗಿದಂಬರವನುಟ್ಟೂ ಒತ್ತರಿಸಿ ಸು
ತ್ತುವರಿಯುತ್ತ ಹಾಹಾಯೆಂದು
ಚಿತ್ತಿನಿ ಪದ್ಮಿನಿ ಶಂಖಿನಿಯರೊಂದಾಗಿ
ಚಿತ್ತಜನ ಪಿತಗೆ ಕಸ್ತುರಿಯ ರಚಿಸಿದರೂ ೪

ಅಂಬುಜಾಕ್ಷಿಯರೆಲ್ಲ ಹರುಷದಿಂದನೆರದು
ಚೆಂಬೊನ್ನ[ಕಳಸ]ಗಳ ಪಿಡಿದು ಪುಳಕವ ಜಡಿದು

ಜಂಭಾರಿ ಸುರರು ಪೂಮಳೆಗರೆದು ಹಾಯೆಂದು
ಕಂಬುಧರ ನಿಲ್ಲು ನಿಲ್ಲೆಸುತಾ ಕುಂಭಿನಿಯೊಳಧಿಕ
ಸುರಪುರದ ಲಕ್ಷ್ಮೀಪತಿಯ ಬೆಂಬಿಡದೆ
ಪೊಂಬಟ್ಟೆಯಂ ಪಿಡಿದು ಸರಸದಿ
ಕುಂಭಕುಚದಿಂದಪ್ಪಿ ತಕ್ಕೈಸಿ ಮನ ಬಂದು
ಸಂಭ್ರಮದಲೋಕುಳಿಯನಾಡಿದರು ೫

೪೯೨

ದಂತಿಗಮನೆಯರು ಹರುಷದಲಿ ನೀಲಕುಂತಳೆಯ ರತಿರೂಪ
ವಂತೆಯರು ಸೊಬಗು ಶ್ರೀ ಕುಂಕುಮವ ಸಂತವಾಡಿದರೂ ಪ

ಕಳಹಂಸ ಗಿಳಿವಿಂಡುಗಳ ತಂಡ ಮಧುರದಿಂ
ಕೆಲವ ಕೋಗಿಲೆಯ ವಿಹಗಾಳಿಗಳ್
ಪೊಳೆವ ಚೆಂದಳಿರ ವನದೊಳು ಮಂಟಪವ ರಚಿಸಿ
ಲಲನೆಯರು ಚೆಲುವಿನಲಿ ಕೊಳವ ಸಿಂಗರಿಸಿ
ಜಲಜ ನೈದಿಲೆಯ ಪೂವಲಿಯದೊಳ್ಪೇಂಕರಿಪ
ಬಳಸಿನಲಿ ಕೊಳಗುತಿಪ್ಪಳಿಗಳಿಂ ಶೋಭಿಸುವ
ಸಲಿಲದೊಳು ಮಲಯಜ ಸುಲಲಿತ ಕುಂಕುಮವೆರಸಿ
ಸಲೆ ಪ್ರಹುಡೆ ಕೆಳನಲಿದು ಸಂತಸದೀ ೧

ಮಂದಗಮನೆಯರು ಪೂರ್ಣೇಂದುವದನೆಯರು ಶುಭ್ರ
ಕುಂದರದನೆಯರು ಅರವಿಂದ ನೇತ್ರೆಯರು ಗೋ
ವಿಂದನೈತರಲು ಪೊನ್ನಂದಣದಲಿದಿರುಗೊಳ್ಳೆ
ದುಂದುಭಿಗಳುಲಿಯೆ ಸುರವೃಂದ[ವಾದ]ರದಿ
ಕುಂದಣದ ರತ್ನಗಳಲಿ । ಬಂದಿಸಲು ದಂಡೆಗಳ
ಚೆಂದದಿಂ ಪಿಡಿದು ಮಕರಂದಮಂ ಪೂರಯಿಸಿ
ಕಂದರ್ಪಜನಕನನು ಸಂದಣಿಸಿ ತಮತಮಗೆ
ಮುಂದುವರಿದು ಲೋವಿಡಿದು ಆನಂದದಿ ಸೂಸಿದರೂ ೨

ಪದುಮಗಂಧಿಯರು ಸನ್ಮೃದು ಕೀರವಾಣಿಯರು
ಚದುರೆಯತೊಂಡೆವಣ್ಣಧರೆಯರು ಪೇರ್ಮೈಯ
ಮದದ ಮದ್ದಾನೆಯರು ಸುದತಿಯರು ಸೌಂದರ್ಯ
ಪದಪು ಗಾತಿಯರು ಬಂದೊದಗಿ ಮೂದಲಿಸಿ
ಮಧುಸೂದನನ ಬಿಡದಿದಕೋ ಪಿಡಿಪಿ ಮೋಹ
ನದ ಬಲೆಯನು ಬೀಸೆನುತ ಯುವತಿಯರುಗಳು
ಮುದದಿಂದ ಬೆಂಗೊತ್ತಿ ಪ್ರಣಯ ಕದನದಿಂ ಸೋಲಿಸುತ
ಎದೆಗೆಡಿಸಿ ನವಪರಿಮಳದಿ ಮುಸುಕಿದರೂ ೩

ಅಡಿಗಡಿಗೆ ಬಟ್ಟ ಪೊಂಗೊಡ ಮೊಲೆಗಳಲುಗುತ್ತ ಕಾ
ರಡಿಗಳಂ ಪೋಲ್ವ ಪೇರ್ಮುಡಿ ಸಡಿಲೆ ಹಾರಗಳ
ಜಡೆಯಲೊಯ್ಯನೆ ಸಣ್ಣ ನಡು ಬಳುಕೆ ಲಾವಣ್ಯ
ವೆಡೆಬಿಡದೆ ಕೋಮಲೆಯರೊಡನೆ ತವದಕಲೀ
ಸಡಗರದಿ ಕುಸುಮಗಳ ಎಡೆಬಿಡದೆ ಬೀರೆ ಸೊಂ
ಪಡರ್ದಂಗಲತೆಗಳಿಗೆ ತೊಡದ ಮನ್ಮಥಶರವ ಪಿಡಿ
ವಿಡಿದು ಮಡದಿಯರು ಅಲರ್ದೊಡೆಯದೊಡಿಸಿದರೂ ೪

ತೊರೆದು ಮುಂಬರಿಯೆ ಯೌವನದ ಪೀತಾಂ
ಬರದ ನೆರಿಗಳೋಸರಿಸೆ ಮುಂಜೆರಗನೆಳೆವುತ ವಾಮ
ಕರದಂಗುಳಿಗಳಿಂದ ಕುರುಳ ನೇವರಿಸುತಾ
ತುರದ ತರುಣಿಯರು ಶ್ರೀಹರಿಯ ತರುಬಿದರೂ
ಸರಸಿ ಜಾಂಬಕನ ಪೇರುರವ ಕುಚಗಳ ಕೊನೆಯ
ಲಿರಿದು ನಿಲ್ಲಿಸಿ ನಿಲ್ಲು ಹೋಗಬೇಡೆನುತ ಯುವತಿಯರು
ಧರೆಯೊಳತ್ಯಧಿಕ ಸುರಪುರದ ಲಕ್ಷ್ಮೀಪತಿಯ
ಸರಸನೆ ವವಿಡಿದು ಮೇಲ್ವರಿಯೆ ವೊಲಿಸಿದರೂ ೫

೪೯೩

ನೆರೆ ಪ್ರಚಂಡ ಬರತಕದ
ನಿರಗೊಡದ ಮನ್ಮಥನ ಪರಿಯನೆಲ್ಲ ಕೇಳು ಕೆಳದಿ
ಸುರಪುರದ ಕರಿವರದ
ಗರುಹಿದಡೆ ಮುತ್ತಿನ ಸರದ ಹಾರವ ನೀವೆ ಕೆಳದೀ ಪ

ಸಸಿ ಬಿಂಬ ದೆಸೆ ತುಂಬಿ
ಪಸರಿಸಿತೆಂಬುದನು ಪಿಕ ಕುಸುಮಾಂಬರಗೆ ಪೇಳೆ ಕೆಳದೀ
ಮಸರೆಳೆಯದಸು ಬಿಳಿ
ಯೆಸಳು ಕೇದಗೆಯಲರ ಹಸಮಾಡಿದನು ನಲಿದು ಕೇಳದಿ ೧

ಅಸಿನನೆಯ ಹೊಸಮನೆಯ
ಬಿಸುಗಣೆಯೆಂದಳೆಸೆಯೆ ಮಣಿಸಲು ತರಹರಿಸುವುದು ಕೆಳದಿ
ಬಿಸಜಾಕ್ಷನ
ನುಶಿಕ್ಷಣದಿ ತನು ಉಜ್ಜಿಕಡುಸುಡುತಲಿದೆ ನೀ ಸಾಕ್ಷಿ ಕೆಳದೀ ೨

ತಂಬೆಲರ ಮುಂಬೆಲರ
ಪಂಬೆಲರನುಳಿದು ಮರಿ–
ದುಂಬಿಗಳ ಸಂಭ್ರಮದಿ ಕೇಳದ ಕೆಳದೀ
ಬೆಂಬಿಡದೆ ಇಂಬುಗೊಂಡಂಬುಜಾಸ್ತ್ರವ ತುಡುಕಿ ೩

ಪೊಂಬಲಕೆ ಕೊಳಗಾದೆ ಕೆಳದೀ
ಶಂಭು ಪಣೆ ಯೆಂಬುವಗೆ
ಕುಂಬಿನಿಯೊಳೇ ಮಣಿಹ–
ದೆಂಬುದನು ಕೊಡಬಹುದೆ ಕೆಳದೀ ೪

ನಂಬಿದಳು ಕಂಬನಿಯ ತುಂಬಿರಲು ಸಖಿಯರೊಳು
ಗಾಂಭೀರ್ಯತನವಹುದೇ ಕೆಳದಿ
ಕಂತುಶರವಂತಿರದೆಂತೊರೆಯಬಹುದೆನಗೆ
ಚಿಂತೆ ತಲ್ಲಣ ಕೆಳದೀ ೫

ದಂತಿ ನಡೆಯಂತೆ ಬೆಡಗಿಂತವಳ ಕಾಣೆ ಗುಣ
ವಂತೆ ವಿಧಾನ್ಯಾಯದಲಿ
ಸಂತೈಸಿ ಯೆನ್ನ ನೆರೆವಂತೆ ಸುರಪುರದ ಲಕ್ಷ್ಮೀ
ಕಾಂತನಿಗೆ ಬಿನ್ನಯಿಸು ಕೆಳದೀ ೬

೪೯೪

ಪಂಥವ್ಯಾಕೋ ಗುಣವಂತ ಸಖಿಯೊಳಿನ್ನು ಮಷ್ಟಾವ-
ಸಂತ ಆಡಿದೊರೆಯೆ ಶ್ರೀಮಂತ ದೇವನೂರಲಿ
ನಿಂತ ಲಕ್ಷ್ಮೀಯ ಕಾಂತ ಪ

ರೂಢಿಯೊಳಗೆ ನೀನಾಡಿ ಪೆಣ್ಣಲ್ಲವೆಂದು
ನೋಡಿ ಸವಿಮಾತನಾಡಿ ಗಾಡಿಕಾರೆಯರ ಒಡ-
ಗೂಡಿ ಬಲ್ಮೊಲೆಗೆ ಕೈಯನೀಡಿ ಸುರತದೊಳು
ಕೂಡಿ ಮೋಹವ ಮಾಡಿ ||೧||
ಎಲ್ಲರಂತೆ ನಾ ತರುಣಿಯಲ್ಲ ಬಣ್ಣನೆ ಮಾತು
ಒಲ್ಲ ಅವಳು ಮೊದಲೆ ಅಲ್ಲಿ
ಇಲ್ಲದೆ ಪೂವಿಲ್ಲ ಇನ್ನಷ್ಟು ದಯವಿಲ್ಲ ಶ್ರೀ
ವಲ್ಲಭ ನಿನಗೀ ನಿತ್ತವಲ್ಲ ೨

ಜಾರವಿದ್ಯದಿ ನೇಮಗಾರ ಯೆನ್ನಯ ಮಾತ
ಮೀರದೆ ಕೃಪೆ ಬಂದು ಸರಸಗುಣ ವಿ-
ಚಾರವರಿತು ವ್ಯೆಯಾರ ಪೊರೆದೆಯೇ ದೇವ-
ನೂರ ವಿಹಾರ ಲಕ್ಷ್ಮೀಮನೋಹರ ಮೋಹನಾಕಾರ ೩

೪೯೫

ಬಾರಯ್ಯ ಬೇಗ ಭಾವಜನಯ್ಯ ನಿನಗೊಲಿದ
ನಾರಿಯರುಗಳ ಲಾಲಿಸೋ ಪ

ಇಂದೀವರಾಯತಾಕ್ಷಿಯೊಳು ತಾ ಮುನಿದಿರಲು
ಕಂದರ್ಪಣೆರಾಯ ಕೇಳಿ ತನ್ನ

ಚಂದಿರನು ದಳಪತಿಗೆ ನೇಮವನು ಕೊಟ್ಟು ನಲ–
ವಿಂದ ಗಿಳಿತೇರನೇರಿ ಬರಲೂ
ಮುಂದೆ ಉಗ್ಘಡದ ಕೋಗಿಲೆ ಪಾಡಿ ರಭಸ–
ದಿಂದ ವಾದ್ಯಗಳು ಮೊಳಗೇ
ಸಂಭ್ರಣೆಸಿ ಝೇಂಕಾರಗೈದ ಭ್ರಮರಾಳಿಗಳ
ವೃಂದದವರನೆಂತು ಬಣ್ಣಿಸುವರೆನ್ನಳವಲ್ಲ ೧

ಅಗ್ಗದ ವಸಂತ ಮಾರುತರು
ಒಗ್ಗಿ ನಲಿದಾಡುತ್ತ ಬರಲು
ವೆಗ್ಗಳ ಸುಗಂಧ ಪರಿಮಳದ ಪೂವಲರುಗಳ
ಒಗ್ಗಿನಲಿ ಕೂಡೆ ಬರಲೂ ತನ್ನ
ಕಗ್ಗೊಲೆಗೆ ದಾಳಿಯಿಟ್ಟುದು ಕಾಮ ಪುಸಿಯಲ್ಲ
ದಗ್ಗಡೆಯ ಮಾಡುವುದುಚಿತವೆ ನಿನ್ನ ಸಖಿಯಳನೂ ೨

ಈ ತೆರದೊಳಿಹ ಪ ಕೊಳುವಳ್ ಕಳ
ರಳ್ತೆ ಸಂಜೆ ಭಟರೊಗ್ಗಿನಲಿ ಭಾರಿಯಾಗಿ ನಿಲಲೂ
ಮತ್ತೆ ಕೆಂದಳಿರ ಸಂಪಗೆಯ ಕಿಡಿಯಲರುಗಳು
ಒತ್ತಿ ಸೂಸುತ್ತ ಬರಲೂ ತನ್ನ
ಬತ್ತಳಿಕೆಯೊಳಗೊಂದು ಕೂರಲಗ ತೆಗೆ
ದಿತ್ತು ಅವಳ ಕುಸುಮಾಂಗಕೆ ಎಸೆಯಲು ಕಂಡು
ವೃತ್ತ ಕುಚದಬಲೆಯಳ ಮನ್ನಿಸದೆ ಸುರಪುರದ
ಸುತ ಲಕ್ಷ್ಮೀಶನಹುದೆ ಭಳಿರೇ ೩

೬೯೬

ಮೃಗಮೋಹಿನಿಯೊಡನೇಕೋ ಪಂಥ ಪ

ಕಾಂತ ಸಿರಿಕಾಂತ ಸುರನಗರಾಧಿಪ ಅ–
ನಂತ ಗುಣವಂತ ದೇವಾ ಎನ್ನ ಸಲಹೊ ಅ.ಪ

ಸುಲಲಿತ ಲತಾಂಗಿ ನಿನ್ನೊಲುಮೆಯಲ್ಲಿ ನೆರೆಹೊಂಗಿ–
ಸಲೆ ಮನವ ಮಾಡಿ। ನಿನ್ನಗಲಿ ಬಾಯಾರಿ

ಬಲು ವಿರಹದಾಸರಿನ ಬೇಸರಿನಲ್ಲಿ ಯಿಂ_
ತಳಿದವಳ ಕಾಯೊ ಸಿರಿಧಾಮ ಗುಣಧಾಮ ೧

ಕಳಕಳಿಪ ನೋಟ ಕಾತರಿಪ ವಿರಹದ ಹೂಟ
ಅಳಲು ಮನ ಅಳಿನಿದ್ರೆ ನಿನಗಾಲಯ ಮುದ್ರೆ
ಅಳಿದುಳಿಸು ಲಜ್ಜೆಗೇಡುಗಳ ಪಾಡುಗಳ ಇಂ-
ತುಳಿದವಳ ಕಾಯೊ ಸಿರಿಧಾಮ ಗುಣಧಾಮ ೨

ಮೂರಾರವಸ್ಥೆಗಳ ನೀರಿಕಡೆಯನವಸ್ಥೆ
ಮಾತಿರುವಳೆ ಬಾಲೆ ನಿನಗೆದ್ದ ಮೇಲೆ
ನಾರಿಯೆಡೆಗೈದರಲೆಗಲಿಪ್ಪಿ ಬಿಗಿದಪ್ಪಿ ಸೊಗಸೇ
ತೋರಿಸಿದನಮರ ಪುರಿಪಾಲ ಸಿರಿಲೋಲ ೩

೪೯೭

ಸುವ್ವಲಾಲೆ ಸುವ್ವಿ ಸುವ್ವಲಾಲೆ
ಸುವ್ವಿ ಕಮಲ ಭವನ ಪಿತನೆ ಸುವ್ವಿ ಅಮರಸುತನ ಸಖನೆ ಪ

ಸುವ್ವಿ ಉಮೆಯ ಪತಿಯಸಖನೆ
ಸುವ್ವಿರಮೆಯ ಪತಿಯಚ್ಯುತನೆ ಅ.ಪ

ಚಂದ್ರಕಾಂತದೊರಳ ಕಡೆದು
ಇಂದ್ರನೀಲ ಹೊನಿಗೆ ವಿಡಿದು
ಸಾಂದ್ರ ಕುಂತಳೆಯರು ನೆರದು ಸರಸಮಿಗೆ
ಯಿಂದ ನಲಿದು ಸುವ್ವಿಲಾಲೆ ೧

ಸೇರಿಸಿದ್ದ ಸೆರಗು ಜಾರೆ
ವೋರೆದುರುಬ ಹೊಗರು ಮೀರೆ
ಸಾರೆ ಕಸ್ತೂರಿ ಪರಿಮಳವಿರೆ
ಸರಸಗುಣದಿಂದ ಮಿತ್ರೆ ೨

ಹರಿಣಲೋಚನೆಯರು ಕೂಡಿ
ಹರುಷಮಿಗೆ ನಲಿದಾಡಿ
ಧರೆಯೊಳಮರ ಪುರಿಯ ನೋಡಿ
ಧೊರೆಯು ಲಕ್ಷ್ಮೀಪತಿಯ ಪಾಡಿ ೩

೩. ತುಳಸಿರಾಮದಾಸರ ತೆಲಗುಮಿಶ್ರಿತ ಕೀರ್ತನೆಗಳು

೪೯೮

ನೀಪಾದ ಭಜನಚೇ ನಾಪಾಪಮತಮಾಯೆನ್
ಗೋಪಾಲ ಶ್ರೀ ರಂಗನಾಥಾ ಪ

ರಾಪು ಜೇಯುಟ ನೇಲನಾಪದಲನು ದೀರ್ಚು
ಗೋಪ ವೇಷಖುಡೈನ ಶ್ರೀಪತಿಯೆನುಟಾಯೆ ಅ.ಪ

ಪಿಚ್ಚಿವಾಡನ್ನೈ ನೇನೊಚ್ಚಿ ವೇಡಿತಿನಯ್ಯಾ
ಅಚ್ಚುತಾನಂತ ರೂಪ
ಹೆಚ್ಚೈನ ಮೀಧ್ಯಾನಂಬಿಚ್ಚಾಯಂಚಿನಾನೂ
ವೊಚ್ಚಿ ದಾಸುಡು ವೇಡಿಯಿಚ್ಚಿ ಬ್ರೋವರ ತಂಡ್ರಿ ೧

ಪಂಕಜಾಕ್ಷ ನಾಪೈ ಪಂತಮೇಲರ ಸಾಮಿ
ಕಿಂಕರುನಿಗನೇಲುಮಾ
ಶಂಕರವಿನುತ ನಾ ಸಂಕಟ ಮುಲು ದೀರ್ಚು
ಲಂಕಾಧಿಪತಿ ವೈರಿಗುರುಡೆ ತುಲಶಿರಾಮಾ ೨

೪೯೯

ರಾಮನ ಮಹಿಮೆ ರಾಮನೆ ಬಲ್ಲ
ಪಾಮರಜನಲುಕು ತೆಲಿಯುಟತಲ್ಲ ಪ

ಸುಗುಣ ನಿರ್ಗುಣವೆಂದು ನಿಗಮಗಳ್ಳೊಗು
ಅಗಣಿತ ಕಲ್ಯಾಣ ಗುಣ ಮುಲುಬಾಗು ೧

ನಿರತಜನನಸ್ಥಿತಿ ಲಯಗಳ ಕರ್ತ
ಸಿರಯುರಮುನಗಲ ಧರಣಿಜ ಭರ್ತ ೨

ಒಳಗೆ ಹೊರಗೆ ವ್ಯಾಪೀ ಪರಿಪೂರ್ಣ ಮೂರ್ತಿ
ಸುರಮುನಿವರುಲಕು ಧೋರಯನು ಕೀರ್ತಿ ೩

ಮೂರುನು ಬಿಡಿಸಿ ಮೂರನು ಕೆಡಿಸಿ
ಜೇರುನುನಮ್ಮಿ ಸವಾರಿನಿಕಲಸಿ ೪

ಸಿರಿಗಿರಿ ಶಿಖರದೊಳ್ ಇರುತಿಹದೇವ
ಧರನು ತುಲಸಿರಾಮದಾಸುನಿ ಬ್ರೋವಾ ೫

೫೦೦*

ಪರಮದೇಶಿಕ ಮಾವಿನೋದಾ ದಿವ್ಯ
ಪರಮಾರ್ಥಮುನು ವೇಗಾ–ಬೋಧಿಂಚರಾದಾ ಪ

ಸುರಮುನೀಂದ್ರ ವಿಚಾರ–ಸೋಹಮಸ್ಮಿಧಿಯೇರಾ
ವರಮುಲಡಗಿತಿನಿಚ್ಚಿ–ದಾರಿದೇರ್ಚುಕೋರಾ ೧

ನೀದು ಶೇವಕುಡ್ಯೆತಿ–ನಿಜ್ಜಯಿಂಚಿನ ಚಾಲೂ
ವಾದಿ ಭೀಕರು ಡೈನ–ವೈಷ್ಣವಾಗ್ರಜುಡೇ ೨

ಆಳ್ವಾರೆಂಬೇರುಮಾನಾರ್ ಜೀಯರ್ ಸ್ವಾಮುಲೆ ಗಾದಾ
ತಾಳ್ವೋಯ ಚೂಡಿದಿ ಯನುಚು ಪಾಲಿಂಚಲೇದಾ ೩

ಮಂತ್ರಜ್ಞಾನ ರಹಸ್ಯಮಂತ್ಯಮಾದಿಗ ಜೂಪೆ
ಅಂತರಂಗುಡೆ ಸ್ವತಂತ್ರಸ್ಯ ತಂತ್ರ ೪

ಯೇಲೆ ವಾಡನಿ ವಚ್ಚಿ–ಅಲಗಿಂಚಿನದಿಚ್ಚೆ
ಕೋಲುಪೇಟೇಶ ಮಾಂಪಾ ಅತುಲ ಶ್ರೀರಾಮಾ ೫

---

* ಆಚಾರ್ಯ ವೇದಾಂತ ದೇಶಿಕರನ್ನು ಕುರಿತ ಸ್ತುತಿ.

೪. ವೆಂಕಟವರದಾರ್ಯರ ಹಿಂದಿಮಿಶ್ರಿತ ಕೃತಿ

೫೦೧

ಶ್ರೀನಿವಾಸ ಪದ ಧ್ಯಾನಕರೋರೆ
ಸಾನುರಾಗಯುತ ಮಾನಸ ಮೇರೆ ಪ

ಮದಪರಿಪೂರಿತ ಹೃದಯ ಸುನೋರೆ
ಸದಯ ಹೃದಯ ಪರಿಪದಮಿಳನಾರೆ ೧

ಕಾಮಕ್ರೋಧ ಉಪರಾಮ ಕರೋರೆ
ರಾಮಾನಾಮ ಜಪಕಾಮು ಕರೋರೆ ೨

ದೇಹಗೇಹಧನ ಮೋಹನಲೇರೆ
ಶ್ರೀಹರಿಚರಣ ಕಾಂಹಿ ಚಲೇರೆ ೩

ಪುತ್ರ ಮಿತ್ರ ಬಹು ಶತ್ರು ಕು ಮಾರೆ
ವೃತ್ರ ವೈರೀಸುತ ಮಿತ್ರನಗಾರೆ ೪

ಭಂಗ ಜನ ಸಂಗ ನ ಕರೋರೆ
ಮಂಗಳಾಂಗ ನರಸಿಂಹ ಭಜೋರೆ ೫

ಸೂಕ್ಷ್ಮಬುದ್ಧಿ ನಿರಪೇಕ್ಷ ಭಲಾರೆ
ಮೋಕ್ಷದಾತ ಕಮಲಾಕ್ಷಕು ಲಾರೆ ೬

ದಾಸ ಲೋಕ ಸಹವಾಸ ಕರೋರೆ
ವಾಸುದೇವ ನಿಜದಾಸಕು ಹೋರೆ ೭

ಶ್ರೀಪುಲಿಗಿರಿವರ ಭೂಪ ಮುರಾರೆ
ಶ್ರೀಪತಿಘನ ಚಿದ್ರೂಪಕ ಹೋರೆ ೮

ಪರಮಪುರುಷ ನರಹರಿ ಕರುಣೀರೆ
ವರದವಿಠಲ ಕರಿವರ ಧಣೀರೆ ೯

೫. ಅಹೋಬಲದಾಸರ ತೆಲುಗು-ಹಿಂದಿಮಿಶ್ರಿತ ಕೃತಿಗಳು

೫೦೨

ಇದು ಕೇಳಿ ಭಕತಜನ ಭಗವಂತನು
ತಾನು ಹೇಳಿದನರ್ಜುನಗೇ ಪ

ಅದು ಭೂಲಗಯೋ ಮಾ ಕಾಲಕಠಿನ
ಷಡ್ವೈರಿ ವಿಸರ್ಜನೆಗೆ ಅ.ಪ

ಅಪದಾರ್ಥವನ್ನಡಿಯೆನೊಂದಿಪೆ-
ಕೋಪಮು ವಿಡಿಚಿತಿಳಿ ಸಮಜ ತಾ
ವೊಯಾಪರ್‌ವರ್ದಿಗಾರನೆ ಬಲುಕುಟಿ
ನಾಪನ್‌ವಳಿಯೊ ಭಲಾ ೧

ಸತ್ವರಜೋಗುಣ ತಾಮಸರೂಪಿದು
ಮತ್ವರಿತದಿ ನೋಡೊ ಯೀ
ತತ್ವದ ಅರ್ಥವಳಿದವನಿಪ್ಪಡುಗು
ಭಜನೆಯ ಮಾಡೋ ೨

ವಿಜಯಪುರೀವರ ಅಜಪಿತನಹುದಲೊ
ಭುಜಗಾಸನೆಧೀರಾ ಸಮಜತಾಕೇ
ಳಜ ಮಹರಾಜನೆ ನಿಡಿಜಗುರು ತುಲಸಿ-
ದ್ವಿಜ ಮಣಿ ಆಧಾರಾ ೩

೫೦೩

ಏರ ರಂಗಕಿಷನ್ ದಾರಿ ಚೂಪರಾ
ವೇರ ದಿಕ್ಕುಗಾನ ಮೇರೇ ಮಾರ ಸುಂದರ ಪ

ಮೊರೆ ಗಾಣರೆ ವಶವೊ ಮಾರಜನಕನೇ ಅ
ಘೋರ ಪಾತಕವನು ಕಳೆಯೊ ಸುಜನ ಭಜಕನೆ ೧

ರಾರಯನುಚು ಮೇರೆ ಮೂಮೆ–
ಕರಿಯಲೇದೆರಾ ಕೋರ ಅನುಚು
ತೇರೆ ಚರಣ–ಲೇದು ಕಾದುರಾ ೨

ಓಡಿಬನ್ನಿ ಸುಜನರೆಲ್ಲ ಭಜನೆ
ಮಾಡುವಾ ಈ ತ್ರಿಜಗ ಪೂಜಿತನೆಂಬೊ
ಅಜನಪಿತನಗೂಡುವಾ ೩

ಧರೆಯೊಳಧಿಕ ಮಧುರ ನಗರ
ಪುರಿಯವಾಸನೇ ಯನ್ನ ಭವವಿನಾಶನೇ
ಕೋಟಿ ರವಿಪ್ರಕಾಶನೆ ನಿನ್ನ ಚರಣ
ಗುರುವು ತುಲಶಿರಾಮದಾಸನೇ ೪

೫೦೪

ಕರುಣಾಕರ ದೇವಾ ಶೀತಾ ಚರನೋಕೆ ಕೇಶವಾ ಪ

ಪಾತಕಾರಿ ವೋಂ ಪ್ರಸನ್ನಹನುಮನೆ ಪ್ರೀತಿಯೊಳಿರಿಸೆನ್ನಂ
ಆತುರದಿಂದಾ ರಾಮಣನರಿಯದೆ
ನುತಿಸುವನಾ ನಿನ್ನಂ ಶರಣಂ ೧

ಲಂಕಾಪುರದೀ ಕಿಂಕಿಣಿಧಾರಿ ಲಂಕಿಣಿಕೆ ಸಂಹಾರಿ
ಕುಂಕುಮಾಂಕಿತ ವಾಹನ ಬೋಲೆ
ಹೌರ ಬ್ರಹ್ಮಚಾರಿ ಶರಣ ಕರು ೨

ಪರಾಂಧಮ ತುಮ ಪ್ರಹ್ಲಾದಾರ್ಚಿತ ಪರಂದೇಹಿ ಸನ್ಯಾಸಿ
ಗುರುಂದೇಹಿ ಶ್ರೀನಿರ್ಗುಣ ತುಲಸಿ ।
ಗೀರ್ವಾಣಭಾಷಿ । ಶರಣಂ ೩

೫೦೫

ಗೋವಿಂದ ಗೋವಿಂದಾ ನಾವಾಡನಿ ನಮ್ಮಿತಿ ನೇನು ಪ

ನೀಪಾ ನೀಯಪಕೃತುಲಕು
ನೀವೇಮಿ ಬ್ರೋವುನನ್ನು ಗೋವಿಂದ ಅ.ಪ

ಧರಿಜೂಪಘೊರ ನೀವನಿ ಸ್ಮರಿಯಿಂಚಿನಾಮನಮುನ
ಕರಿರಾಜವರದಾ ನಾ ದುರಿತಮು
ದ್ರುಂಚಿ ಬ್ರೋವು ಗೋವಿಂದ ೧

ಕರುಣಿಂಚು ಗುರುರಂಗ ಪರಲೋಕತರವುಗಾನ
ಮರುಗ್ಯೆನ ಕಾಮಿಂಚಿತಿ ತರಮೇರಕಾವಕುನ್ನ ೨

ಪಾಟಿಂಚ ನೀ ನಾಟಿವ್ವರು ಯೆಕೋಟವುನ ತುಲಸಿರಾಮಾ
ಪೀತಂಬುವ ಗರ್ಜನಗುರು ಆಟಂಕಮುನಿಲ್ಪಿಬ್ರೋವು ೩

೫೦೬

ಕಲಿಯುಗ ನಿಜ ಆದತಾರೊ ಭಯೊ
ಶ್ರೀವೆಂಕಟರಮಣ ಬಿರಾಚೆ ಹೊ ಪ

ಫಲಮಿಚ್ಚುಟತಾ–ನಡಗಿನ ವರಮುನು–
ಕರಕಂಕಣಸೆ ಬತಾವೆ ಹೋಕಲಿ ಅ.ಪ

ರಾಧಕುಹೇವಿಪರೀತಕಹೇಕ್ಯ ನುಪಯೋಗಿಂಚುಟನಾತರಮಾ
ಇಪುಡೀ ಪೊರವಿನಿ ವುಪಕಾರಿಂಚುಟು–
ನೆಪಮಾತ್ರಮುಯಿದಿನೀವರಮಾ ೧

ದಾಸನುಜಂದಿನ ಪಾಶಭವಂಬುಲ ।
ನಾಶನಜೇಯುಟಕು ಮಹೋಜೀ
ಘಾಸಿಚುಡಾವೋ ಗುರು
ತುಲಸಿದಾಸಪ್ರಸಾದೇ ಹಮಹೋಜೀ ೨

೬. ಶಾಮಶರ್ಮರ ಕೇಶವನಾಮ ರಸಾಯನ

೫೦೭

ಶ್ರೀಕೇಶವ ಸುರಸೇವ್ಯ ನಮೋ
ಶ್ರೀಕರ ಜಾಜೀಶ ನಮೋ ಪ

ನಾರಾಯಣಶ್ರೀನಾಥ ನಮೋ
ನಾರದಾದಿಮುನಿವಂದ್ಯ ನಮೋ ೧

ಮಾಧವ ಮಂಗಳನಾಮ ನಮೋ
ಭೂದೇವಿ ಭಯನಾಶನಮೋ ೨

ಭೋಗಿಶಯನ ಗೋವಿಂದ ನಮೋ
ಭಾಗವತಪ್ರಿಯ ಭೋಗ ನಮೋ ೩

ಜಗ ಪರಿಪಾಲಕ ವಿಷ್ಣುನಮೋ
ಖಗವಾಹನ ಗುಣಪೂರ್ಣ ನಮೋ ೪

ಮಧುಸೂದನ ಮತ್ಪ್ರಾಣ ನಮೋ
ವಿಧಿಶಿವ ಋಷಿಗಣ ಸ್ತುತ್ಯನಮೋ ೫

ವಾಮನ ಮೂರುತಿ ಸ್ವಾಮಿನಮೋ
ಭೀಮಾನುಜಪ್ರಿಯ ನಿಗಮನಮೋ ೬

ತ್ರಿವಿಕ್ರಮಶ್ರೀವಕ್ಷನಮೋ
ಪವಿತ್ರ ಫಲದ ಶ್ಯಾಮ ನಮೋ ೭

ಶ್ರೀಧರ ದೇವಾನುತ ನಮೋ
ಆಧಾರಮೂರುತಿ ಅಮಿತನಮೋ ೮

ಹೃಷಿಕೇಶ ಹೃದ್ವಾಸಿ ನಮೋ
ಪಶುಪತಿ ಪಾವನ ಪುಣ್ಯನಮೋ ೯

ಪದ್ಮನಾಭ ಪರಮಾತ್ಮನಮೋ
ಶುದ್ಧ ಸತ್ವರುಚಿರೂಪನಮೊ ೧೦

ದಾಮೋದರ ದೈತ್ಯಾರಿನಮೋ
ಕಾಮಜನಕ ಕರಿವರದ ನಮೋ ೧೧

ಸಂಕರ್ಷಣ ಶೇಷಾಂಶ ನಮೋ
ಶಂಖ ಚಕ್ರಗದಾಪಾಣಿ ನಮೋ ೧೨

ವಾಸುದೇವ ವೈಕುಂಠನಮೋ
ಭೂಸುರ ಪೂಜಿತ ಪಾದನಮೋ ೧೩

ಪರಮಪುರುಷ ಪ್ರದ್ಯುಮ್ನ ನಮೋ
ಶರಣಾಗತ ಜನ ತೋಷ ನಮೋ ೧೪

ಅಖಿಲೇಶಾನಿರುದ್ಧ ನಮೋ
ಸುಖದಾತಾ ಪರಬ್ರಹ್ಮನಮೋ ೧೫

ಪುರುಷೋತ್ತಮ ಪದ್ಮಾಕ್ಷ ನಮೋ
ಸರಸಿಜಭವಪಿತ ಸತ್ಯ ನಮೋ ೧೬

ಅಧೋಕ್ಷಜನತ ರಕ್ಷನಮೋ
ಅದ್ಭುತ ಮಹಿಮಾಧಿಕ್ಯ ನಮೋ ೧೭

ಶ್ರೀಲಕ್ಷ್ಮೀನರಸಿಂಹ ನಮೋ
ಬಾಲಕ ಭಕ್ತ ಪ್ರೀತ ನಮೋ ೧೮

ಅಚ್ಯುತ ಸಚ್ಚಾರಿತ್ರ ನಮೋ
ನಿಶ್ಚಲ ನಿರ್ಮಲ ಚಿತ್ತ ನಮೋ ೧೯

ಜನಾರ್ಧನ ಜಗದೀಶ ನಮೋ
ದಿನೇಶಕೋಟಿ ಪ್ರಕಾಶನಮೋ ೨೦

ಉಪೇಂದ್ರ ವಿಶ್ವವ್ಯಾಪ್ತನಮೋ
ಉಪಮಾರಹಿತ ಉದಾರಿನಮೋ ೨೧

ಶ್ರೀಹರಿಸಕಲ ಸ್ವರೂಪನಮೋ
ಸಾಹಸರಹಿತ ಸುಕಾರ್ಯ ನಮೋ ೨೨

ಶ್ರೀಕೃಷ್ಣ ಪರಂಧಾಮ ನಮೋ
ಸಾಕಾರ ಮೋಕ್ಷ ಪ್ರದಾತ ನಮೋ ೨೩

ಜಯಮಂಗಳಂ ಶ್ರೀರಂಗನಮೋ
ಜಯಮಂಗಳಂ ಭವಭಂಗನಮೋ ೨೪

೭. ನಾರಾಯಣಶರ್ಮರ ಹೆಚ್ಚಿನ ಕೃತಿಗಳು

೫೦೮

(೧) ರಾಮನುಜ ಸ್ತುತಿ

ಗುರುಸ್ತುತಿಯ ಮಾಡಬೇಕಯ್ಯ
ಗುರುವೆ ಗಮ್ಯ ತೋರುವನಯ್ಯ ಪ

ಗುರುವಿಂದ ಹರಿಪಾದ ಸುಲಭವಯ್ಯ
ಗುರುವಿಲ್ಲದೆ ಮೋಕ್ಷವಿಲ್ಲ ನೋಡಯ್ಯ ಅ.ಪ

ಗುರುನಮ್ಮಯತಿರಾಜ ರಾಮಾನುಜ
ಗುರುನಮ್ಮ ಕ್ಷಿತಿಪೂಜ್ಯ ಗೋದಾನುಜ
ಗುರುವೆ ಸರ್ವಸ್ವ ಹರಿಸ್ವರೂಪ
ಗುರುಪಾದ ದರ್ಶನವೇ ಸಾಯುಜ್ಯವೆನಿಪ ೧

ದಾಸದಾಸರದಾಸರಾಳ್ವಾರರ ಪೋಷ
ದೋಷರಹಿತ ದಾಸೋತ್ತಮ ಧನು
ರ್ದಾಸನ ಶ್ರೀಪಾದತೀರ್ಥವ ಸೇವಿಸಿ
ದಾಸಸೇವೆಯೆ ಈಶ ಸೇವೆಯೆನಿಸಿದ ೨

ಚೆನ್ನ ತಮಿಳಿನ ಶ್ರೀರಂಗದಿಂ ಬಂದು
ಚೆನ್ನಚೆಲುವಿನ ಮೇಲುಕೋಟೆಯಲಿ ನಿಂದು
ಹನ್ನೆರಡು ವರುಷದ ಮೇಲ್ಪಟ್ಟು ಸಂದು
ಇನ್ನಿಂದು ಜಾಜಿಪುರೀಶನಾದ ನಮ್ಮ ೩

೫೦೯

(೨) ಆಂಡಾಳ್ ಸ್ತುತಿ

ಆಂಡಾಳ್ ದೇವಿ ಶರಣೆಂಬೆ
ಶ್ರೀಗೋದಾದೇವಿ ಪೊರೆಯೆಂಬೆ ಪ

ಮುಡಿದು ಕೊಟ್ಟ ನಾಯಕಿ ತಾಯೆ
ರಂಗನಾಥನ ಪರಮಪ್ರಿಯೆ
ಮುಡಿಪುಹೊತ್ತು ಸೇವಿಪೆವಮ್ಮ
ಶರಣಾಗತಿಯನ್ನ ಅ.ಪ

ಅಂದುಗೋಪಿಯರು ಕೃಷ್ಣನ ಸೇರಲು
ಚಂದದಿಮಾಡಿದ ಕಾತ್ಯಾಯನಿವ್ರತವ
ತಂದೆಯಮತದಿ ಹೊಂದಿಸೇವಿಸಿದೆ
ಒಂದು ತಿಂಗಳ ತಿರುಪ್ಪಾವೈಯಲಿ ೧

ದಿನಕೊಂದು ಪಾಶುರ ಕಟ್ಟಿಪಾಡುತ
ದಿನದಿನ ಸಖಿಯರೊಳು ಮಾರ್ಗಳಿಯಲಿ
ದಿನ ಮೂಡುವಮೊದಲೆ ತಣ್ಣೀರ್ಮಿಂಯುತ
ದಿನಪ ಕೃಷ್ಣನ ಕಲೆತ ಕನ್ಯಾಮಣಿಯೆ ೨

ಧನುರ್ಮಾಸವನು ಧರಿಸಿ ಭಜಿಸುವೆವು
ಧನಂಜಯನ ತೋರೆ ಸಿರಿಬಾಯ್ನುಡಿಯೆ
ಧನಕನಕಚಂದನೂ ಬಲ್ಲೆವು ತಾಯೆ
ತನು ಕರಗಿಸು ಜಾಜಿಪುರೀಶನಡಿಯಲ್ಲಿ ೩

ಆ. ದಾಸರನ್ನು ಕುರಿತ ಕೃತಿಗಳು

೧. ವೈಕುಂಠದಾಸರನ್ನು ಕುರಿತ ಕೃತಿಗಳು

೫೧೦*

ದಾಸೋತ್ತಮನೆ ಕೇಳೊ ಶ್ರೀವೈಕುಂಠ
ದಾಸೋತ್ತಮನೆ ಕೇಳೋ
ಏಸು ಮಾತಿಗು ಎನ್ನಾಶೆ ಪೂರ್ತಿಸಿ ನಿತ್ಯ
ಪೋಷಿಸು ವೈಕುಂಠ ಪ

ಮಕ್ಕಳುಗಳಿಗೆ ಮೊಮ್ಮಕ್ಕಳುಗಳಿಗೆ ದೇ
ವರ್ಕಳುಗಳಿಗೆ ಸುಮುನಿಗಳಿಗೇ
ಸಿಕ್ಕದ ಪರಬೊಮ್ಮನ ಕೂಸು ಮಾಡಿಕೊಂ
ಡಿಕ್ಕಿ ತೊಡೆಯ ಮೇಲೆ ಮುದ್ದುನಾಡಿಸುತಿಹ ೧

ವೇದ ಪುರಾಣಾದಿಗಳಿಗೆ ಮೈದೋರದ
ಆದಿ ಪುರುಷನ ನೀನೊಲಿಸಿಕೊಂಡ್ಯೊ
ಈ ಧರೆಯ ಜನರ ಪಾವನವ ಮಾಡುತಲಿಪ್ಪ
ಸಾಧುವರ್ಯ ವೈರಾಗ್ಯಾದಿಗುಣಾಂಬುಧೇ ೨

ದುರಿತ ಕಾಂತಾರಾಗ್ನಿ ಹಯವದನ ಬೇಲಾ
ಪುರದರಸಿನ ಪ್ರತಿಬಿಂಬ ನಿನ್ನಾ
ದರುಶನಗೋಸುಗ ಬರಲು ಅನಾಯಾಸ
ಹರಿಯ ತೋರಿಸಿ ಬಹುಧನ್ಯನ ಮಾಡಿದಿ ೩

೫೧೧

ಆನಂದಮಯಗೆ ಚಿನ್ಮಯಗೆ ಆದಿನಾರಾಯಣಗಾರತಿ ಎತ್ತಿರೇ ಪ

* ೫೧೦–೫೧೩ರವರೆಗೆ ವಾದಿರಾಜರಿಂದ

ವೇದವತಂದು ಬೆಟ್ಟವ ಪೊತ್ತು ಭೂಮಿಯ
ಸಾಧಿಸಿ ಕಂಬದಲೊಡೆದವಗೇ
ಭೂದಾನವ ಬೇಡಿ ನೃಪರ ಸಂಹರಿಸಿದ
ಆದಿಮೂರುತಿಗಾರತಿಯೆತ್ತಿರೇ ೧

ಇಂದುವದನೆ ಸಹಿತ ಪುಣ್ಯದೊಳಗಾಡಿ
ನಂದಗೋಕುಲದಲ್ಲಿ ಬೆಳೆದವಗೆ
ಮಂದಗಮನೆಯರ ಮುಂದೆ ನಿರ್ವಾಣದಿ
ನಿಂದ ಮೂರುತಿಗಾರತಿಯೆತ್ತಿರೇ ೨

ತುರಗವನೇರಿ ದುಷ್ಟರ ಸೀಳಿ ಭಕ್ತರ
ಪೊರೆವ ಮೂರುತಿ ಹಯವದನನಿಗೆ
ವರದ ವೇಲಾಪುರಿ ಚೆನ್ನಿಗರಾಯನ
ಚರಣ ಕಮಲಗಾರತಿಯೆತ್ತಿರೇ ೩

೫೧೨

ಎಂಜಲೆನ್ನಲಿ ಬಹುದೆ ಮನುಜರಿದನಾ ಆಘವನ ಧ
ಸಂಜಯದ ವೈಕುಂಠದಾಸರ ವದನದ ಕಣಾ ಪ

ವದನವೆಂಬಾಕಾಶದಲಿ ಭಕುತಿ ಜೀಮೂತಾ
ಪದುಮನಾಭನ ನಾಮಾಮೃತದ ಕಡಲಾ
ಮುದದಿಂದ ತಕ್ಕೊಂಡು ಎನ್ನಂಗದೇಹದಲಿ
ಹದನರಿತು ಸುರಿದು ಮುಕ್ತಿಫಲವ ಬೆಳಸಿದನಾ ೧

ಹೃದಯ ಕಾರಾಗೃಹದಿ ಶ್ರೀಹರಿಯನಾವಾಗ
ಹುದಗಿ ಅಗಲಿಸಿದ ಕಾರಣದಂಗುಟದೀ
ಉದಸಿ ಗಂಗೆಯು, ಪೋಪ ಕಡೆಯಿಲ್ಲದಿರೆ ಇವರ
ವದನದಲಿ ಪೊರಟೆನ್ನ ಮೇಲೆ ಪರಿದುದನೂ ೨

ಪರಸನ್ನ ಹಯವದನ । ಚರಣ ಸರಸಿಜ ಮಧು
ಕರಸು ವೈಕುಂಠ ದಾಸೋತ್ತುಮನ್ನಾ
ವರ ವದನದಲಿ ವೇದಶಾಸ್ತ್ರಾಗಮದತಾ
ತ್ವರಿಯ ಬಿಂದುಗಳೆನ್ನ ಮೇಲೆ ಪರಿದುದನೂ ೩

೫೧೩

ಬೇಗ ಬಾರೊ ಬೇಗ ಬಾರೊ ನೀಲಮೇಘವರ್ಣ
ಬೇಗ ಬಾರೊ ಬೇಗ ಬಾರೊ ವೇಲಾಪುರದ ಚೆನ್ನ ಪ

ಇಂದಿರೆ ರಮಣ ಗೋವಿಂದ ಬೇಗ ಬಾರೊ
ನಂದನ ಕಂದ ಮುಕುಂದ ಬೇಗ ಬಾರೊ ೧

ಧೀರಾ ಉದಾರಾ ಗಂಭೀರ ಬೇಗ ಬಾರೊ
ಹಾರಾಲಂಕೃತ ಪರಿವಾರ ಬೇಗ ಬಾರೊ ೨

ರಂಗಾ ಉತ್ತುಂಗಾ ನರಸಿಂಗ ಬೇಗ ಬಾರೊ
ಕಂಗಾಳಿಗೆ ಸದಾ ಮಂಗಳಾಂಗ ಬೇಗ ಬಾರೊ ೩

ಖುದ್ಧಾ ಅನಿರುದ್ಧಾ ಸಂವರುದ್ಧಾ ಬೇಗ ಬಾರೊ
ಹದ್ದಾನೇರಿದ ಪ್ರಸಿದ್ಧ ಬೇಗ ಬಾರೊ ೪

ಅಯ್ಯಾ ವಿಜಯಾ ಸಾಹಯ್ಯಾ ಬೇಗ ಬಾರೊ ಉ
ದಯಾದ್ರಿವಾಸಾ ಹಯವದನಾ [ಬೇಗ ಬಾರೊ] ೫

೫೧೪*

ಅಳುವುದ್ಯಾತಕೊ ರಂಗ ಅತ್ತ ರಂಜಿಪಗುಮ್ಮ ಪ

---

* ಪುರಂದರದಾಸರಿಂದ

** ೫೧೫, ೧೬ ಕನಕದಾಸರಿಂದ

ಪುಟ್ಟಿದೇಳು ದಿವಸದಲಿ ದುಷ್ಟ ಪೂತನಿಯ ಕೊಂದೆ
ಮುಟ್ಟಿವಿಷದ ಮೊಲೆಯುಂಡ ಕಾರಣ
ದೃಷ್ಟಿತಾಕಿತೆ ನಿನಗೆ ರಂಗಯ್ಯ ೧

ಬಾಲಕತನದಿ ಗೋಪಾಲರೊಡಗೂಡಿ
ಕಾಳಿಂದಿ ಮಡುವನು ಕಲಕಿದ ಕಾರಣ
ಕಾಲು ಉಳುಕಿತೆ ನಿನಗೆ ರಂಗಯ್ಯ ೨

ತರುವ ಕಾಯಲುಪೋಗೆ ಭರದಿ ಇಂದ್ರ ಮಳೆಗರೆಯ
ಬೆರಳಲಿ ಬೆಟ್ಟವನೆತ್ತಿದ ಕಾರಣ
ಬೆರಳು ಉಳುಕಿತೆ ನಿನಗೆ ರಂಗಯ್ಯ ೩

ವಸುದೇವಸುತನಾಗಿ ಅಸುರರೆಲ್ಲರ ಮಡುಹಿ
ಹೆಸರಿನ ಮಲ್ಲರ ಮಡುಹಿದ ಕಾರಣ
ಕೆಸರು ತಾಕಿತೆನಿನಗೆ ರಂಗಯ್ಯ ೪

ಶರಣು ವೇಲಾಪುರದ ಚೆಲುವ ಚೆನ್ನಿಗರಾಯ
ಪರಿಪರಿವಿಧದಿಂದ ಶರಣರ ಪೊರೆಯುವ
ವರದ ಪುರಂದರವಿಠಲರಾಯ ೫

೫೧೫**

ಬಂಟನಾಗಿ ಬಾಗಿಲ ಕಾಯುವೆ ಹರಿಯಾ ವೈ –
ಕುಂಠದಾಸೋತ್ತಮರ ದಾಸರ ಮನೆಯ ಪ

ಹೊರಸುತ್ತ ಪ್ರಾಕಾರ ಸುತ್ತಿ ನಾ ಬರುವೆ
ಬರುವ ಹೋಗುವರ ವಿಚಾರಿಸಿ ಬಿಡುವೆ
ಕರದ ಕಂಬಿಯ ಪೊತ್ತು ಅಲ್ಲಿ ಬೊಬ್ಬಿಡುವೆ ಶ್ರೀ
ಹರಿಯ ಓಲಗದಾಸ ಮುಖಾರದಲ್ಲಿರುವೆ ೧

ವೇಳೆವೇಳೆಗೆ ಊಳಿಗವ ಮಾಡುವೆ
ಆಲವಟ್ಟಿಗೆ ಚಾಮರವ ಬೀಸುವೆ

ಕಾಳಿಂದಿ ಅಡಪವ ಹೊತ್ತು ನಿಂದಿರುವೆ
ಸಾಲು ಮುತ್ತಿನ ಸತ್ತಿಗೆಯ ಪಿಡಿವೆ ೨

ಎಂಜಲ ಹರಿವಾಣವ ಬೆಳಗುವೆ
ಕಂಜನಾಭನ ಪಾದಕಮಲವ ತೊಳೆವೆ
ರಂಜುಳ್ಳ ಕುಸುಮದ ಮಾಲೆ ತಂದಿಡುವೆ
ಸಂಜೆಗೆ ಪಂಜಿನ ದಾಸನಾಗಿರುವೆ ೩

ತೊತ್ತು ತೊಂಡನಾಗಿ ಬಾಗಿಲ ಕಾಯುವೆ
ಚಿತ್ರದ ಚಾವಡಿ ರಜವ ಬಳಿವೆ
ಮುತ್ತಿನ ರಂಗವಲ್ಲಿಯನಿಟ್ಟು ಬರುವೆ
ರತ್ನಕಂಬಳಿಯ ಹೊತ್ತು ಹಾಸುವೆ ೪

ಮೀಸಲು ಊಳಿಗವನು ಮಾಡುವೆ
ಶೇಷ ಬ್ರಹ್ಮಾದ್ಯರಿಗೆ ತೋಷಿಸುವೆ
ಶೇಷಗಿರಿ ಆದಿಕೇಶವ ರಾಯರ
ದಾಸಸ್ಯ ದಾಸರ ಮನೆಯ ೫

೫೧೬

ಹರಿ ನಿಮ್ಮ ಪದಕಮಲ ನಿರುತ ಧ್ಯಾನದಿ ಎನಗೆ
ದೊರಕಿತೀ ಗುರುಸೇವೆ ಹರಿಯೇ ಪ

ಗುರುಮಂತ್ರ ಮೂಲ ಸದ್ಗುರು ಮೂರ್ತಿ ನೀನಾಗಿ
ಕರೆಯ ಸೇರಿಸಿದೆ ಶ್ರೀಹರಿಯೆ ಅ.ಪ

ಮೊದಲು ನಿಮ್ಮುಪದೇಶ ನದುರು ಮಾಡದೆ ಇರಲು
ಅದನ್ನೆಲ್ಲ ಮನ್ನಿಸಿದೆ ಹರಿಯೆ
ಮುದದಿಂದ ನೀ ಬಂದು ಭವ ಬಂಧನವ ಬಿಡಿಸಿ
ಹದನಕ್ಕೆ ನಿಲ್ಲಿಸದೆ ಹರಿಯೆ ೧

ದೊರೆತನವ ಬಿಡಿಸಿ ಸುಸ್ಥಿರ ಮಾರ್ಗ ತೋರಿಸಿದೆ
ನರಮಾತ್ರದವನೆನದೆ ಹರಿಯೆ
ಗರುವದೊಳಗಿಹನೆಂದು ಅರಿತು ತವದಾಸರಿಗೆ
ಇರದೆ ಅಡಿಯಾಗಿಸಿದೆ ಹರಿಯೆ ೨

ಕನಕ ದಳದಲಿ ಬಂದು ಕಲಿತನೆಂದರೆ ಫೌಜು
ಕನುಕುಮನುಕಾಗುವುದು ಹರಿಯೇ
ಮೊನೆಗಾರತನವೆಂಬ ಶನಿ ಬಿಡಿಸಿ ತವಪಾದ
ವನಜವನು ಸೇರಿಸಿದೆ ಹರಿಯೇ ೩

ಮನದೊಳಗೆ ಎರಡಿಲ್ಲ ಮನದಾಸೆ ಮೇಲ್ಕಡಿವ
ಮನವ ಹಿಮ್ಮೆಟ್ಟಿಸಿದೆ ಹರಿಯೆ
ಘನವು ತಾಮಸಾಹಂಕಾರ ದುರ್ಮತಿ ದುರಿತ
ಕನಜವನು ಕಿತ್ತೆಸೆದೆ ಹರಿಯೆ ೪

ಮದರೂಪು ಬಿಡಿಸಿ ಸನ್ಮುದ ರೂಪು ಧರಿಸೆಂದು
ಹೃದಯದೊಳು ನೀ ನಿಂತೆ ಹರಿಯೆ
ಇದು ರಹಸ್ಯವು ಎಂದು ಹಿತವ ಬೋಧಿಸಿ ಎನಗೆ
ಬದುಕಿಸಿದೆ ಬದುಕಿದೆನು ಹರಿಯೆ ೫

ದುರದಲ್ಲಿ ನಾಲ್ಕು ದಿಕ್ಕಲಿ ಹೊಕ್ಕು ಹೊಳೆವಂಥ
ಬಿರುದು ಬಿಂಕವ ಕಳೆದೆ ಹರಿಯೆ
ಪರಬಲವ ಕಂಡರೆ ಉರಿದು ಬೆಂಕಿಯಹ ಮನವ
ಸೆರೆ ಹಾಕಿ ನಿಲ್ಲಿಸಿದೆ ಹರಿಯೆ ೬

ಪರಮ ಮೂರ್ಖನು ನಾನು ವರ ವೀರವೈಷ್ಣವರ
ಚರಣವನು ಸೇರಿಸಿದೆ ಹರಿಯೆ
ಕರೆಕಳಿಸಿ ಎನ್ನಲ್ಲಿ ಅಳವಿಲ್ಲದಿಹ ನಾಮ
ಸ್ಮರಣೆ ಜಿಹ್ವೆಗೆ ಬರೆದೆ ಹರಿಯೆ ೭

ಸ್ವಾರಿ ಹೊರಡಲು ಛತ್ರ ಭೇರಿ ನಿಸ್ಸಾಳಗಳು
ಭೋರೆಂಬ ಭೋಂಕಾಳೆ ಹರಿಯೆ
ಧೀರ ರಾಹುತರಾಣ್ಯ ಭಾರಿ ಪರಿವಾರದಹಂ
ಕಾರ ಭಾರವ ತೊರೆದೆ ಹರಿಯೆ ೮

ನೀರ ಸಂಗವ ಬಿಟ್ಟು ಆಣಿ ಮುತ್ತಾದಂತೆ
ಸೇರಿಸಿದೆ ತವ ಪಾದ ಹರಿಯೆ
ಆರಿಗಂಜೆನು ನಾನು ಅಧಿಕಪುರಿ ಕಾಗಿನೆಲೆ
ಸಿರಿಯಾದಿಕೇಶವ ದೊರೆಯೆ ೯

೫೧೭*

ಅರಿಯದಪರಾಧಕ್ಕೊಡ್ಡಿದೆನೊಡಲನು ಮ
ತ್ಸರಿಸಿ ನಿನ್ನೊಡನೆ ವೈಕುಂಠದಾಸೋತ್ತಮನೆ ಪ

ನಿನ್ನ ವಾರ್ತೆಯ ಕೇಳಿವಾದಮುಖದಲಿ ಜೈಸಿ
ಉನ್ನತದ ಬಿರುದುಗಳ ಸೆಳೆವೆನೆಂದೂ
ನನ್ನಿಯಿಂ ಬಂದೆ ಈ ಬನ್ನಕೊಳಗಾದೆ ಎನ
ಗಿನ್ನು ಗತಿಯೇನು ವ್ಯತ್ಪನ್ನ ದ್ರಾವಿಡನೆ ೧

ಮೃಗರಾಜನೊಳು ಸೆಣಸಿ ಪೋದ ಮದಕರಿಯಂತೆ
ಖಗಪತಿಯ ಕಚ್ಚಪೋದಹಿಯಂದದಿ
ನೆಗಹಿನದಿ ಯಾಮದೆ ಹರಿಗೋಲ ಮುಳುಗಿಪೆನೆಂಬ
ಬಗೆಯಾಯಿತೆನ್ನ ಕುಮತಿಯು ದಾಸರರಸಾ ೨

ಗುರುವಿಕೆಗೆ ತಕ್ಕ ಪ್ರಾಯಶ್ಚಿತ್ತ ವಿಕ್ಕಿದನು
ಹರಿಯು ಸೈರಿಪನೆ ನಿಮಗೆರಡೆಣಿಸಲು

* ೫೧೭–೫೧೯ ಅಚ್ಯುತ ದಾಸರಿಂದ. (?) (ಈ ಹೆಸರಿನ ದಾಸರು ಈವರೆಗೆ ಪ್ರಕಟವಾಗಿಲ್ಲ. ಇವರ 'ಅಚ್ಯುತವಿಠಲ' ಅಂಕಿತದ ಕೀರ್ತನೆಗಳೂ ಕೆಲವಿವೆ.)

ದುರಿತಾಂಬುಧಿಯ ರಾಶಿಯೊಳಗೆ ಬಿದ್ದೆನು ವೃಥಾ
ದುರಿಯಶಕೆ ಗುರಿಯಾದೆ ನಿನ್ನ ಮಾನುಷನೆಂದು ಬಗೆದು ೩

ಅಂದು ಸುರಪನ ಸುತನಿಗೊಲಿದುದನು ಕಂಡುದ
ಲ್ಲಿಂದ ನಿನ್ನೊಡನಾಡುವುದನು ಕಂಡೆ
ಹಿಂದಣಘ ರಾಶಿಗಳು ಬೆಂದು ಪೋದುದು ಎನಗೆ
ಮುಂದೆ ಸದ್ಗತಿಯು ದೊರಕಿದುದು ಸುಜ್ಞಾನೀ ೪

ಅಚ್ಯುತ ವಿಠಲ ಚೆನ್ನಿಗರಾಯ ಎಲ್ಲರೊಳು
ಮೆಚ್ಚಿ ಮಾತನಾಡದೆ ಬಗೆಹೊಳು
ನಿಚ್ಚಳದಿ ನಿನ್ನ ಸೃಷ್ಟಿಸಿ ವಚನ ಪಾಡಿಸುವು
ದಚ್ಚರಿಯೆ ವೈಕುಂಠದಾಸ ದಾಸೇಶ ೫

೫೧೮

ತಪ್ಪನೀನೊಪ್ಪಿಕೊಳಬೇಕು ಎನ್ನ
ಲಿಪ್ಪ ಚೆನ್ನಪ್ಪ ವೇಲಾಪುರಾಧೀಶ ಪ

ನೀನೊಲಿದವನಿಗೆರಡನೆಣಿಸೆ ಸ್ವೈರಿಸುತಿರ್ಪೆಯಾ
ಮಾನಾವಮಾನವಾರದು ದಾಸರ
ಹೀನನಾದೆನು ಮುಂದನರಿಯದಜ್ಞಾನದೊಳು
ದಾನವಾಂತಕ ನಿನ್ನ ಗುಣಗಳನು ಮರೆದು ೧

ಎನ್ನಹಂಕಾರಕ್ಕೆ ತಕ್ಕ ಪ್ರಾಯಶ್ಚಿತ್ತ
ವನ್ನು ಮಾಡಿಸಿದೆ ಎಲೆ ಮುರವೈರಿಯೆ
ಕಣ್ಣು ನಾಲಗೆಯನುಡುಗಿಸಿ ಇತ್ತು ಸತ್ಕೀರ್ತಿ
ಯನು ಪಡೆದೆಯೊ ಅಪ್ಪನಂತೆ ಎನ್ನಯ್ಯ ೨

ಅಂತರಾತ್ಮಕನೆ ನೀನೆಂತೆಂತು ಮನವನಿ
ತ್ತಂತಾಡಿದೆನೊ ಸ್ವಾತಂತ್ರ್ಯವೇನೊ

---

* ಅಚ್ಯುತದಾಸರಿಂದ

ಚಿಂತಾಯಕನೆ ಜೀವಾನಂದರೂಪನೆ ಅ
ನಂತ ಶಯನನೆ ಅಪರಿಮಿತ ಮಹಿಮ ಕೃಷ್ಣಾ ೩

ನಿನ್ನ ಮಹಿಮೆಯನರಿತರಿಯದನುಭವಿಸಿದೆ ಈ
ಬನ್ನವನು ಬಂಟರಿಗೆ ಬಿಡಿಸಿ ಕೃಷ್ಣಾ
ಮುನ್ನಂತೆ ಕೃಪೆಯ ಮಾಡಿನ್ನು ಪೊತ್ತುಗಳ ಕಳೆ
ಚೆನ್ನ ಕೇಶವಸ್ವಾಮಿ ನಿಜದಾಸನಾಣೆ ೪

ಬಳಿದೆನಾನೀ ತೆರದಿ ಹಲವು ಚಿಂತೆಯಲಿ
ತೊಳಲಿ ನೆಲೆಗೆಟ್ಟು ಪಾಪ ರೂಪಕನಾಗಿ
ಬಳಲುವತಿ ಚಂಚಲನ ಸನ್ಮಾರ್ಗವಿರಿಸಿದಿಕೊ
ನಳಿನಾಕ್ಷ ಭಕ್ತವತ್ಸಲ ಕೃಪಾಸಿಂಧೋ ೫

ಮರಳಿ ಭವದೊಳಗಿಕ್ಕದಿರು ಮುಕ್ತಿ ಇತ್ತು ಕಿಂ
ಕರನ ಮಾಡಿಕೊ ಎನ್ನ ವೈಕುಂಠದೊಳಗೆ
ಹರಚತುರ್ಮುಖರ ವಂದಿತನೆ ಅಚ್ಯುತವಿಠಲ
ಕರುಣಾಕರ ವೇಲಾಪುರದ ಚೆನ್ನಿಗರಾಯಾ ೬

೫೧೯

ನಿನಗೆಲ್ಲ ದಾರಿಗಳಳವಡುವುದಯ್ಯ
ಘನ ಬಿರುದುಗಳು ಮಹಿಮೆಗಳು ದಾಸರರಸಾ ಪ

ಕೆತ್ತನೆಯ ಪಲ್ಲಕ್ಕಿ ರತ್ನದ ಮಕರಿ ಮುಖವು
ಎತ್ತರದಿ ತೋರ್ಪುಭಯ ಚಾಮರಗಳು
ಸತ್ತಿಗೆಯ ಶಂಖಚಕ್ರದ ಪಕ್ಕೆಗಳ ಪಿಡಿದ
ಮೊತ್ತವು ಹಗಲು ದೀವಟಿಯು ಗರುಡಧ್ವಜವು ೧

ಎಡಬಲದಿ ಹಿಡಿದೇಜಿಗಳು ಭಾಗವತ ಜನರು
ಬಿಡದೆ ಪಾಡುವುದು ಕುಣಿದಾಡುತಿಪುದೂ

ಪಡೆಯಲ್ಲ ವರ್ಣಕಾರರು ಚಕ್ರವರ್ತಿಯಂಗ
ಡೊಡದು ಬಿರುದನೆಪೊಗಳ್ವ ಪಾಠಕರುಗಳ ಗಡಣ ೨

ಕರಿಯ ಮೇಲಣ ಭೇರಿಯನು ಹೊಡೆದು ಬರುತಿಹುದು
ನೆರೆ ಧವಳ ಶಂಖ ಪೂರೈಸುತಿಹುದು
ವರಪಂಚ ಮಹವಾದ್ಯ ಭೋರಿಡುತಲಿರುವುದೀ
ಬಿರುದುಗಳು ಹರಿದಾಸರರಸಗಲ್ಲದೆ ಸ್ವಾಮಿ ೩

ಹರಿಯಿಂದ ಕವಚಕುಂಡಲ ಕಿರೀಟಗಳ ಪಡೆದು
ಧರಿಸಿ ಚರಿಸುವೆ ನಿನ್ನ ಸುಕೃತವೆಂತೊ
ಧರೆಯೊಳಾರುಂಟೀ ಯುಗದೊಳು ನರನಲ್ಲದೆ
ನರತೊಂಡನಹುದು ಅತಿರೂಪೆಂದು ತೋರುತಿಹೆ ೪

ಸತ್ತವರನೆಬ್ಬಿಸುವುದಕ್ಷಿರಸನಗಳ ಬಳಿ
ಕಿತ್ತು ಉಳುಹುವುದು ದೇವರ ಕೈಯಲೀ
ಪತ್ತು ಸಾವಿರ ಪೊನ್ನು ವಿಪ್ರಂಗೆ ಕೊಡಿಸಿದುದು
ಪ್ರತ್ಯಕ್ಷವಾಗಿ ಹರಿಯನು ತೋರಿಸಿದುದೂ ೫

ಹರಿ ವಿಶ್ವರೂಪ ತೋರಿದುದಂತರದೊಳಗೊಂ
ದೆರಡುದಿನ ಪರಿಯಂತ ಗಂಗೆಯೊಳಗದ್ದಿದುದು
ಪರಿಚಾರಕನೊಲೂಳಿಗವನು ಮಾಡಿದುದು ೬

ರಾಮಾನುಜಾಚಾರ್ಯರ ಮತೋದ್ಧಾರಕನೆ ಎನ್ನ
ಪ್ರೇಮದಿಂದುಳುಹಿ ಕೀರ್ತಿಯನು ಪಡೆದೇ
ಸ್ವಾಮಿ ಅಚ್ಯುತವಿಠಲ ಕೇಶವನ ಶ್ರೀಪಾದ
ತಾಮರಸಭೃಂಗ ವೈಕುಂಠದಾಸೋತ್ತಮನೆ ೭

೫೨೦*

ಚೂಪರಾ ನಾಕು ಚೂಪರಾ ಬೇ
ಲಾಪುರಿ ಚೆನ್ನುನಿ ವೈಕುಂಠದಾಸುಡಾ ಪ

ನಿನ್ನು ಚೂಡಕಾ ನೀತೋ ಮಾಟಾಡಕಾ
ನಿನ್ನೊವೆಂಬಡಿ ತೋಡಕ ಪೋಕನೂ
ಚನ್ನುಡು ಕನಿಪಿಂಚಿ ಸೇವಾಲುಯಿಚ್ಚುನಾ
ಮನ್ನಿಂಚುವರೆ ಅಜ್ಞಾನಿನೈತಿ ಸ್ವಾಮಿ ೧

ಸ್ವಾಮಿ ಕೋಪಮು ಚೇನು ಸ್ವಪ್ನಂಬುನಾ
ಪೋಮನೆ ನೀದಗ್ಗಿರಿಕ್ಕಿಪುಡು
ಪ್ರೇಮತೊ ನಾದೊಷವೆಂಚಕಾ ವೆಂಚೇಸಿ
ನಾ ಮನೋಹರು ನೀಕನುಪಿಂಚವಯ್ಯಾ ೨

ಗುರುಲ್ಯಾಕ ತ್ರೈಜಗ ಗುರುವು ನೀ ಗಾನಿನ
ವರಶಿಷ್ಯುಲುಗಲುಗರಾ ಲೋಕಮು ನಾ
ಮರಿತಾಳಪಾಕಿ ಚೆನ್ನಯ್ಯಾಕು ಚಿನ್ನುನಿ
ದರುಶನ ಮಿಟ್ಟಿಂಚ ದಾಸಾಜ ಮುದಮುತೊ ೩

೫೨೧

ಯಾಲಕಾನಕ ಪೋಯೇವು ವೋಚನ್ನುಡ
ಯಾಲಕಾನಕ ಪೋಯೇವು ಬೇಲಾಪುರಿ ಚೆನ್ನಸೇವಿಂಪವಸ್ತೆ ಪ

ವೆಂಕಟರಮಣ ನೀ ವಿಡಿಚಿ ಯಕ್ಕಡಿಕ್ಯಾಂ
ಮಂಕುಡವಸ್ತಿವಿಯೆನ ಕೋಪಮಾ
ವೆಂಕಟನಾಯಕಂಡಪ್ಪ ನಿಚ್ಚುನಾಡು
ಶಂಕರ ಪೂಜ್ಯುಡ ಸರ್ವೇಶ್ವರುಡಾ ೧

ಅಂದರಿಕಿಪ್ಪುಡು ನೀ ಅಂದಮೈ ಶ್ರೀಪಾದ
ದ್ವಂದ್ವ ದರುಶನಮುಯಿಚ್ಚಿಂದಿಲೇದಾ
ಮಂದಭಾಗ್ಯುಡು ನೇನು ಮರಿ ಪಾಪಾತ್ಮುಡು
ಕುಂದರಧರ ನೀಕು ಕೊಡುಕುನೇ ಕಾದಾ ೨

* ೫೨೦,೨೧ ತೆಲುಗು ದಾಸ ತಾಳಪಾಕಂ ಚನ್ನಯ್ಯನಿಂದ (ಅನ್ನಮಾಚಾರ್ಯರ ಮೊಮ್ಮಗ)

ತಿರುಮಲಗಿರಿನುಂಚಿ ತ್ವರಿತಮುಗಾ ವಚ್ಚಿ
ತಿರುಸೇವಾ ನಾಕು ದೊರಕನ ಪೋಯಿನಾ
ದುರಿತ ತಿಮಿರಮಡ್ಡಮಾಯೆ ನಾ ವೆಂಕಟ
ಗಿರಿನಾಥ ಬೇಲಾಪುರಿ ಚನ್ನರಾಯುಡಾ ೩

೨. ತುಳಸಿರಾಮದಾಸರನ್ನು ಕುರಿತ ಕೃತಿಗಳು

೫೨೨*

ಮಂಗಳಂ ಶ್ರೀ ನೃಹರಯೇ ಶ್ರೀನಿವಾಸಾಯ ಮಂಗಳಂ
ಮಂಗಳಂ ರಘುನಾಥಾಯ ಶ್ರೀಕೃಷ್ಣಾಯಾಸ್ತು ಮಂಗಳಂ ೧

ಶ್ರೀಶಾಯ----ವಾಸಿನ್ಯೈ ಚಮೂಭರ್ತ್ರೇ ಶಠಾರಿಣೇ
ನಾಥಾಯ ಪದ್ಮನೇತ್ರಾಯ ಶ್ರೀರಾಮಾಯಾಸ್ತು ಮಂಗಳಂ ೨

ಯಾಮುನಾರ್ಯಾಯಚ ಮಹಾ ಪೂರ್ಣಾಯ ಗುಣಸಿಂಧವೇ
ಶ್ರೀರಾಮಾನುಜ ಯೋಗೀಂದ್ರ ಗುರವೇ ನಿತ್ಯ ಮಂಗಳಂ ೩

ವಾದಿಹಂಸಾಂಬುವಾಹಾಯ ವೇದಾಂತಾಚಾರ್ಯ ತಾವತೇ
ಶ್ರೀಮತೇ ವೇಂಕಟೇಶಾಯ ಘಂಟಾರೂಪಾಯ ಮಂಗಳಂ ೪

ಅಹೋಬಿಲ ಶ್ರೀನೃಸಿಂಹ ಕೃಪಾಪಾತ್ರಾಯ ಧೀಮತೇ
ಆದಿವಣ್ ಶಠಕೋಪಾಖ್ಯ ಯತೀಂದ್ರಾ ಯಾಸ್ತು ಮಂಗಳಂ ೫

ಕನ್ಯಾ ವಿಶಾಖ ತಾರಾಯಾ ಮ------ರ್ಣಾಯ ಯೋಗಿನೇ

ಶ್ರೀನಿವಾಸ ಪದಾಂಭೋಜ ನ್ಯಸ್ತ ಚಿತ್ತಾಯಧೀಮತೇ
ತುಳಸೀ ವಂಶ ಭೂಷಾಯ ರಾಮದಾಸಾಯ ಮಂಗಳಂ ೬

---

* ತೂಪ್ಪಲ್ ವೆಂಕಟಾಚಾರ್ಯರ ಕೃತಿ

ಪ್ಲವಂಗಾಷಾಢ ಬಹುಳ ದಶಮೀ ಭೃಗುವಾಸರೇ
ಇಂದು ತಾರಾಪತೀರ್ಣಾಯ ರಾಮದಾಸಾಯ ಮಂಗಳಂ ೧೦

ಧೀಶಮಾದಿ ವಿಭೂಷಾಯ ಭಗವದ್ಭಕ್ತಿಸಿಂಧವೇ
ಆಶ್ರಿತ ತ್ರಾಣದೀಕ್ಷಾಯ ರಾಮದಾಸಾಯ ಮಂಗಳಂ ೧೧

ಅಹೋಬಿಲ ಶ್ರೀ ಶಠಾರಿ ದೇಶಿಕೇಂದ್ರ ಕಟಾಕ್ಷತಃ
ಆತ್ತಚಕ್ರಾದಿ ದೀಕ್ಷಾಯ ರಾಮದಾಸಾಯ ಮಂಗಳಂ ೧೨

ಶ್ರೀ ನೃಸಿಂಹ ಸಪರ್ಯಾರ್ಥಂ ತುಲಸ್ಯಾಹರಣಾದಿವಾ
ಯದ್ವಂಶ್ಯಾ ಲೋಕವಿಖ್ಯಾತಾ
ಸ್ತಸ್ಮೈ ಭೂಯಾತ್ಸು ಮಂಗಳಂ ೧೩

ಯಸ್ಯಶ್ರೀ ರಂಗನಾಥಾರ್ಯ ಪರಕಾಲಗುರೂತ್ತಮಾಃ
ದತ್ತವಂತೋ ಹರಿಕಥಾ ಕಿರೀಟಂ ತಸ್ಯ ಮಂಗಳಂ ೧೪

ಸ್ವಾನಿಷ್ಠಿತ ರಘೂತ್ತಂಸ ಯದುನಾಥ ಮಹೋತ್ಸವೈಃ
ನವ ಸಪ್ತಾಹ ಸರ್ವರ್ತ್ವೈ ರ್ನಿತ್ಯ ತೃಪ್ತಾಯ ಮಂಗಳಂ ೧೫

ಪ್ರಹ್ಲಾದೋವಾ ನಾರದೋವಾ ಪುಂಡರೀಕೋಽಥಕೌಶಿಕಃ
ಇತ್ಯೇವಂ ವಿಭುಧೈಸ್ಸರ್ವೈರ್ಣ್ಯಹ ದ್ವಿತರ್ಕ್ಯಾಯಾಸ್ತು ಮಂಗಳಂ ೧೬

ಯವತ್ಯೋ ಯಸ್ಯ ಕುಣಪಂ ಭುಜಂಗೀಯಸ್ಯವಾಸಭಾ
ಅನಿಷ್ಟ ಮಿಂದ್ರಾದಿ ಪದಂ ತಸ್ಮೈ ಭೂಯಾತ್ಸು ಮಂಗಳಂ ೧೭

ಶ್ರೀರಾಮಾನುಜಯೋಗೀಂದ್ರ ಸಿದ್ಧಾಂತೋದಿತಿವರ್ತ್ಮನಿ
ಸ್ವಾಶ್ರಿತಾನ್ ಚಾರಯಿತ್ತೇ ಸ್ವಾ ದ್ರಾಮದಾಸಾಯ ಮಂಗಳಂ ೧೮

ತತ್ವತ್ರಯಾರ್ಥ ವಿಶದೀ ಕರಣೇನಾಶ್ರಿತಾನ್ ಮುದಾ
ಶಿಕ್ಷಯಿತ್ವಾ ಕೃತಾರ್ಥಾಯ ರಾಮದಾಸಾಯ ಮಂಗಳಂ ೧೯

ಸ್ವಾರಾಧ್ಯ ಜಾನಕೀನಾಥಂ ----------------
------------------ ಮುಖಾಯಸ್ಯಾತ್ಸುಮಂಗಳಂ ೨೦*

ಶೋಭಕೃನ್ಮಾಘ ಬಹುಳ ದ್ವಿತೀಯಾ ಬುಧವಾಸರೇ
ಶ್ರೀಶಾ -----ಪದ್ಮಮಾಸಾದ್ಯ ನಿತ್ಯ ತುಷ್ಟಾಯ ಮಂಗಳಂ ೨೪

ಮಂಗಳಂ ತುಲಸೀರಾಮದಾಸವರ್ಯ ಕೃಪಾನಿಧೇ
ಮಂಗಳಂ ರಾಮಭದ್ರಾಂಘ್ರಿ ಪದ್ಮ ಭೃಂಗ ಮಹಾಮತೇ ೨೫

ಏಧತಾಂ ತುಲಸೀರಾಮ ವಾಕ್ಸುಧಾ ಲಹರೀ ಮುಹುಃ
ಏಧತ ತಾಂ ಕಸ್ಯರುಚಿರ ರಾಮಕೃಷ್ಣ ಮಹೋತ್ಸವಾಃ ೨೬

ಮಂಗಳಾಚರಣಂ

ಶ್ಲೋ॥ ಮಂಗಳಂ ತುಲಸೀರಾಮ ಮಂಗಳಂ ವಿಜಿತೇಂದ್ರಿಯ
ಮಂಗಳಂ ತ್ರಿಗುಣಾತೀತ ಮಂಗಳಂಚ ಭವಂತುತೇ
ಮಂಗಳಂ ಚೇತನೋದ್ಧಾರ ಕಲ್ಯಾಣ ವಪುಷೇಸದಾ
ಬುಧಾರಾಧನ ವಿಖ್ಯಾತ ಸಂತತಂ ತವ ಮಂಗಳಂ

೫೨೩**

ಶ್ರೀವಾಣೀವಿಭವ ಪ್ರಭಾವ ವಿಲಸತ್ಸಮ್ರಾಟ್ಕಿರೀಟೋಲ್ಲ
ಸನ್ನಾನಾರತ್ನ ಮರೀಚಿ ದೀಪ ಕಲಿಕಾ ನೀರಾಜಿತಾಂಘ್ರಿ ದ್ವಯಃ
ಸೀತಾನಾಥ ಪದಾಬ್ಜ ಲೀನವಿ
ಮಲಸ್ವಸ್ವಾಂತ ಪುಷ್ಪಂಧಯೋ
ಜೀಯಾತ್ಸಧೃದಯೈಕ ತುಲಸೀರಾಮಾ ಖ್ಯ ಯೋಗೀಶ್ವರ ಃ ೧

ಸುಗ್ರೀವಾಂಗದ ಶೋಭಿತಃ ಕಲು ಸುಮಿತ್ರಾನಂದದೋ ದೂಷಣ
ಧ್ವಂಸೀ ಸದ್ವಿ ಬುಧಾನುಗೀತ ಚರಿತಸ್ಸಲ್ಲಕ್ಷ್ಮಣೋದ್ಭಾಸಿತಃ

---

* ೨೧–೨೩ ರವರೆಗೆ ಲಭ್ಯವಿಲ್ಲ

** ವೇದಾಂತ ಶಿವರಾಮಶಾಸ್ತ್ರಿಗಳ ಕೃತಿ

ಯಸ್ಮಾತ್ವಂ ಹರಿವಂಶ ವರ್ಧನ ಕರಸ್ತ್ವನ್ವರ್ಥನಾಮಾ ಭವ ।
ತ್ತಸ್ಮಾತ್ತತ್ತವರಾಮನಾಮ ತುಲಸೀ ರಾಮಾಖ್ಯ ಯೋಗೀಶ್ವರಃ ೨

ವಿನ್ಯಾಸಾತ್ತವ ಪಾದಯೋರ್ವಸುಮತೀ ಯಸ್ಮಾತ್ಪವಿತ್ರಾ ಭವ
ದೈನ್ಯಂಸೂನ್ಯಮ ಭೂನ್ನಿತಾಂತ
ಮನಯೋಸ್ಸಂದರ್ಶನಾ ದ್ದೇಹಿನಾಂ
ತ್ವತ್ಪೂಜಾ ನಿರತಸ್ತು ದೂತ
ದುರಿತಾಃ ಪ್ರಾಪ್ತಾಃ ಪುರೀಂ ವೈಷ್ಣವೀಂ
ದುರ್ಲಭ್ಯಾ ದುರಿತಾತ್ಮನಾಂಹಿ
ತುಲಸೀರಾಮತ್ವದೀಯಾರ್ಹಣಾ ೩

ಸೋಹಂಸದ್ಯುತಿ ಭಂಜಿತೋನ
ತಮಸಾಕ್ರಾಂತೋನದೋಷಾಕರೋ
ಲಕ್ಷ್ಮೀವಾಸವಿಭಂಗ ಕೃನ್ನಚತತಾಕ್ಷೀಣೋ ನದರ್ಶಾಗಮೇ
ನಿಶ್ಶಂಕಂ ಭುವನ ತ್ರಯೇಪಿ ತುಲಸೀರಾಮಾರ್ಯ ಸರ್ವಪಿಯೋ
ಜಾತೋ ಭಾತಿ ಭವದ್ವಿಶಾಲಮ ಹೀಮಾಂಬೋಧಾ ಯಶಶ್ಚಂದ್ರಮಾ ೪

ಸಂವ್ಯೋವ್ರಸ್ತ್ಯುಪವಾಸ ಶೌಚಮಭವದ್ದಾಸ ವ್ರತಾಗಿ ಕ್ರಿಯಾ
ಚಾದೇವಾರ್ಚಾಧ್ಯಯನಾದಿ ಕರ್ಮರಚನಾದ್ಯತ್ಪುಣ್ಯಮುತ್ಪದ್ಯತೇ
ತತ್ಪುಣ್ಯಂಲಭತೇನರೋಹಾರಿ ಕಥಾಕಾಲೋಲ್ಲಸತ್ವಹಾ
ಮೂರ್ತೇರ್ದರ್ಶನ ಮಾತ್ರತೋಹಿ ತುಲಸೀರಾಮಾರ್ಯ ಭಕ್ತಿಶ್ರಿತಃ ೫

ಛನ್ನಂ ಸಂಯಮಿ ನೀ ಕವಾಟ ನಿಚಯಂ
ಸ್ವಸ್ವಾದಿಕಾರಾಚ್ಚ್ಯುತಾ
ನ್ತದ್ಭೂತಾಸ್ಸ್ಯುರಹರ್ನಿಶು ಪಿತೃಪತಿಶ್ಚಿಂತಾ ಕುಲೋವರ್ತತೇ
ರತ್ನೋತ್ಕೀರ್ಣ ಸುವರ್ಣ ಮಂದಿರ ಚಯೈರ್ವಿಸ್ತಾರಿತಂ ಶ್ರೀಪುರಂ
ಜಾತೇಪೂತಪ ದಾಂಬುಜಾತ ತುಲಸೀರಾಮೇ ಮಹೀಮಂಡಲೇ ೬

೫೨೪*

ಸಕಲ ಭೂಮೀಶ್ವರ ಶಿರೋಧೃತ
ಮಕುಟ ತಟಿಸಂಘಟಿತ ರತ್ನ
ಪ್ರಕರ ದೀಧಿತಿಪುಂಜ ರಂಜಿತ ಮಂಜುಳಾಂಘ್ರಿಯುಗ
ಸುಕವಿಜನ ವಕ್ತ್ರಾಂಬುಜಾತ
ಪ್ರಕಟಿತೋತ್ತಮ ಚರಿತ ನತಪಾ
ತಕಹರಣ ಪಾಲಿಪುದು ತುಲಸೀರಾಮದಾಸಾರ್ಯಾ ೧

ಇಳೆಯೊಳಗೆ ಸುಕ್ಷೇತ್ರ ಪುಣ್ಯ
ಸ್ಥಳಗಳೊಳಗಿಹ ಸಕಲ ಶಕ್ತಿಯು
ನೆಲೆಸಿಹುದು ನಿಮ್ಮಮಲಚರಣಾಂಬುಜದ ಸ್ಮರಣೆಯಲೀ
ತಿಳಿಯದೀ ಮರ್ಮವನು ಬಾಹ್ಯದಿ
ಬಳಲಿದೊಡೆ ಫಲವೇನು ನೀಕೃಪೆ
ತಳೆದು ಪಾಲಿಪುದೆಮ್ಮ ತುಲಸೀರಾಮದಾಸಾರ್ಯಾ ೨

ಯನ್ನ ಭಕ್ತರ ಚರಣ ಕಮಲಗ
ಳನ್ನು ಪೂಜಿಪ ಸುಕೃತಿಗಳ ಕುಲ
ವನ್ನು ಬಿಡದುದ್ಧರಿಸುವೆನು ಯೆಂದಿಂತು ಮುರಹರನೂ
ಮುನ್ನ ತಾ ಪೇಳಿರಲು ನಿನಗಿಂ
ತನ್ಯ ದೈವಗಳುಂಟೆ ಜಗದೊಳ
ಗಿನ್ನು ನೀನೇ ದೈವ ತುಲಸೀರಾಮದಾಸಾರ್ಯಾ ೩

ಹನುಮ ವಿಧಿ ಪದಕಾಗಿ ಸುಗ್ರೀ
ವನ ಸಹೋದರ ವಧೆಗು ಬಳಿಕ
ರ್ಜುನ ಸುಧಾಮರು ಭುಕ್ತಿಕೋಸ್ಕರ ಭಜಿಸಿದರು ಹರಿಯು

* ವೇದಾಂತ ಶಿವರಾಮಶಾಸ್ತ್ರಿಗಳ ಕೃತಿ – ಷಟ್ಪದಿ

ಅನಘ ನೀ ನಿರ್ವ್ಯಾಜ ಭಕ್ತಾಗ್ರಣಿ
ಕಣಾ ಯಿದು ಜಗತಿಕಾಣದ
ಮನುಜರುಂಟೇ ಪೇಳು ತುಲಸೀರಾಮದಾಸಾರ್ಯಾ ೪

ಯಾಕೆ ಜಪತಪಯಾಗ ಯೋಗ
ಗಳ್ಯಾಕೆ ಯಾತಾ ಯಾತಾ ಯಾತ್ರೆಗ
ಳ್ಯಾಕೆ ವ್ರತ ನಿತ್ಯೋಪವಾಸವು ಬರಿದೆ ದುಃಖವಿದೂ
ಲೋಕಪಾವನ ಮೂರ್ತಿ ನೀ ಪರ
ಲೋಕಬಾಂಧವನಿರಲು ಮುಕ್ತಿಗೆ
ಸಾಕು ನಿಮ್ಮ ಕಟಾಕ್ಷ ತುಲಸೀರಾಮದಾಸಾರ್ಯಾ ೫

ಮಡದಿ ಮಕ್ಕಳು ಬಂಧು ಬಳಗದ
ತೊಡಕಿನೊಳು ಸಿಲುಕದೆ ವಿರಾಗ ತಾ
ಪಡದು ನಾನಾ ತೀರ್ಥಯಾತ್ರೆಯ ಗೈದು ಮಾನವರೂ
ಹುಡಿಕಿ ಕಾಣದೆ ಪರಮ ಪದನಿ
ಮ್ಮಡಿಯೊಳಗೆ ನಿಮುಷಾರ್ಧ ಚಿತ್ತವ
ನಿಡಲು ಕೈಗೂಡುವುದು ತುಲಸೀರಾಮದಾಸಾರ್ಯಾ ೬

ಪಿಡಿದು ಕೆಲಬರು ನಿಮ್ಮ ಚರಣವ
ನುಡಿದು ಕೆಲಬರು ನಿಮ್ಮ ನಾಮವ
ಬಿಡದೆ ಕೆಲಬರು ಸವಿದು ನಿಮ್ಮ ಲಸತ್ಕಥಾಮೃತವಾ
ಪೊಡವಿಯೊಳು ಜನಿಸಿ ಮರಣ ದುಃಖದ
ಕಡಲನುತ್ತರಿಸಿದರು ನಿಮ್ಮೊಳ್
ಗಡಗಿಹುದು ಕೈವಲ್ಯ ತುಲಸೀರಾಮದಾಸಾರ್ಯಾ ೭

ಶಿಷ್ಟರರ್ಥವ ನಿಮ್ಮ ಚರಣಕೆ
ಕೊಟ್ಟರೆಂಬುವದಧಿಕವಲ್ಲದ
ನಷ್ಟು ಸೃಷ್ಟೀಶನಲಿ ಮನನೆಟ್ಟವರ ಹೊಟ್ಟೆಯಲಿ

ಇಟ್ಟು ನೀನದ ಕೊಟ್ಟ ಭಕ್ತರ
ಕಷ್ಟಗಳ ಪರಿಹರಿಸಿವರ ಪರಮೇಷ್ಠಿ
ಪಟ್ಟವಗೊಟ್ಟೆ ತುಲಸೀರಾಮದಾಸಾರ್ರ್ಯಾ ೮

ತತ್ವದೊಳು ವಾಚ್ಯಾರ್ಥ ಜನಿತಾ
ನಿತ್ಯ ಸರ್ವಾಲ್ಪಜ್ಞತಾ ಶ
ಕ್ತಿತ್ವ ಮುಖ್ಯ ವಿರೋಧ ಭಾಗ ನಿರೋಧದಿಂದುಳಿವ
ಸತ್ಯವಹ ಲಕ್ಷ್ಯಾರ್ಥಲಕ್ಷಿತ
ವಸ್ತುವನು ನಿಮ್ಮಡಿಗೆ ದೇಹವ
ನೊತ್ತಿಯಿಟ್ಟವ ಬಲ್ಲ ತುಲಸೀರಾಮದಾಸಾರ್ರ್ಯಾ ೯

ದಹರ ಮಾರ್ಗದಿ ಕೆಲರು ಮರುತ
ಪ್ರಹರ ಬಂಧನದಿಂದ ಕೆಲಬರು
ಬಹಿರುಪಾಸನದಿಂದ ಕೆಲಬರು ಕೆಲರು ವ್ರತದಿಂದಾ
ಅಹರಹರದೊಳಗರಸಿ ಕಾಣದ
ಮಿಹಿರ ಭಾಸಕ ವಸ್ತುವನು ಹೃ
ತ್ಕುಹರದಲಿ ತೋರಿಸಿದೆ ತುಲಸೀರಾಮದಾಸಾರ್ರ್ಯಾ ೧೦

ವಸ್ತು ವಿಷಯ ವಿಭಾಸಕಾದಿಮ
ವಸ್ಥೆಯುಂಕನಸೆನಸಿತೋರ್ವವಿ
ಶಸ್ತ ವಸ್ತುಸ್ತೋಮಮುಂ ಸೌಷುಪ್ತಿಕಾವಸ್ಥೆಯುಂ
ವ್ಯಸ್ಥ ಬಾಧಿತಮಾಗಲಭಿಲಾ
ವಸ್ಥೆಗಳೊಳೆಡೆಬಿಡದೆ ತುಂಬಿಹ
ವಸ್ತು ನೀನಾಗಿರುವೆ ತುಲಸೀರಾಮದಾಸಾರ್ರ್ಯಾ ೧೧

ನಿನ್ನ ವಿಮಲ ಕಟಾಕ್ಷವೆಂಬ ಮ
ಹೋನ್ನತಾನಂದಾಬ್ಧಿಯೊಳಗು
ತ್ಪನ್ನನಾದ ಸುಬೋಧನೆಂಬ ಸುಧಾಂಶುವನು ಪಿಡಿದು
ಚಿನ್ಮಯಾಂತಃಪುರದ ಸುಖಿಸುವ

ಧನ್ಯರಿಗೆ ಕಾಣುವದೆ ಪುನರಪಿ
ಜನ್ಮತಿಮಿರದ ಭೀತಿ ತುಲಸೀರಾಮದಾಸಾರ್ಯಾ ೧೨

ವ್ಯಷ್ಟಿ ಜೀವೋಪಾಧಿಯೊಳಗು ಸ
ಮಷ್ಟಿ ದೇವೋಪಾಧಿಯೊಳಗುಂ
ದೃಷ್ಟಿಯನು ನೆಟ್ಟಿರಲು ಬಂದುದು ಭವ ಮಹಾಬಂಧಾ
ಇಷ್ಟದಾತನೀನುಪಾಧಿಯ
ದೃಷ್ಟಿಯನು ನೆರೆಗಳದು ಪುನರಪಿ
ಪುಟ್ಟದಂದದಿ ಮಾಡು ತುಲಸೀರಾಮದಾಸಾರ್ಯಾ ೧೩

ಆ ಮಹಾರಘುಪತಿಯೆ ಭಕ್ತರ
ಕಾಮಿತಾರ್ಥವ ಕೊಡಲು ತುಲಸೀ
ದಾಮಸಹಿತವತರಿಸಿ ನಿಜ ಚರಿತೆಯನು ಪಸರಿಸುತ
ನಾಮದಿಂದಾರಾಮ ತುಲಸೀ
ರಾಮನೆನಿಸುವ ಜಗ ದೊಳಾತನ
ಪ್ರೇಮ ದಾಸರ ಪೆಸರು ತುಲಸೀರಾಮದಾಸಾರ್ಯಾ ೧೪

ಸಾರಧರ್ಮೋದ್ಧಾರ ಗುಣಮಣಿ
ಹಾರ ಕರುಣಾಪೂರ ನತ ಮಂ
ದಾರ ನಿಗಮ ವಿಹಾರ ದುರಿತವಿದೂರ ಹತಮಾರಾ
ಧೀರ ದೀನಾಧಾರ ಸತ್ಯಾ
ಚಾರ ಪುಣ್ಯಾಕಾರ ಘನಗಂ
ಭೀರ ನೀನೆ ಜಗದಿ ತುಲಸೀರಾಮದಾಸಾರ್ಯಾ ೧೫

ಸಾರಿ ಸಾರಿ ಪ್ರಿಯರ ಬಂಧಿಸಿ
ಮಾರುತಾತ್ಮನೊಳಿಟ್ಟು ಭುಜಗಿಯ
ಸೇರಿ ಸುಖಿಸುವ ಯೋಗಿಯಾದರು ಸುಕೃತಲಯಮಾಗೆ
ಧಾರುಣಿಗೆ ಮರಳುವನು ಜನ್ಮಕೆ
ಬಾರದಿಹಕೈವಲ್ಯ ನೀ ಕೃಪೆ
ತೋರಿದಲ್ಲದವಿಲ್ಲ ತುಲಸೀರಾಮದಾಸಾರ್ಯಾ ೧೬

ದೇಸಿಕೋತ್ತಮ ವಿಪುಲ ಮಾಯಾ
ಪಾಶವರ್ಜಿತ ನಿಮ್ಮ ಪದ ವಿ
ನ್ಯಾಸ ಶೋಭಿತ ಮಾಗಿ ದಕ್ಷಿಣ ಭಾಗಿ ಜನಪದವೂ
ಕಾಸಿಗಿಂ ಮಿಗಿಲಾಯ್ತು ತತ್ಪುರ
ವಾಸಿಗಳು ಜಗದೀಶರಾದರು
ನಾಶವಾಯ್ತೆಮಪಾಶ ತುಲಸೀರಾಮದಾಸಾರ್ಯಾ ೧೭

ಕಡುಸುಖಕೆ ಯೆಡೆಗೊಡದೆ ದುಃಖದ
ಕಡಲ ನಡುಮಡುವಿನೊಳು
ಕೆಡೆಯುವ ಜಡವಡಲು ನಾನೆಂಬ ಕೆಡುನುಡಿಯಿಂದಾ ಎಡಬಿಡದೆ
ತೊಡಗಿತ್ತೈ ಜನನ ಮರಣ ದುಃಖದ
ತೊಡಕು ಸುಕೃತ ವಿಶೇಷದಿಂ ನಿ
ಮ್ಮಡಿಯೊಳಡಗಿತದೀಗ ತುಲಸೀರಾಮದಾಸಾರ್ಯಾ ೧೮

ದುರಿತದುಃಖ ಮಹಾಂಧಕಾರೋ
ತ್ಕರದಿವಾಕರನೆನಸಿತನ್ನಂ
ಸ್ಮರಿಸುತಿಪ ಸುಕೃತಿಗಳ ಜನ್ಮವ್ಯಾಧಿಯನು ಕಳೆದೂ
ಹರುಷದಿಂ ಶೃತಿ ಕುಹರ ಮಧ್ಯದಿ
ಧರಿಸುವರನುದ್ಧರಿಸಿ ಮೆರದುದು
ಪರಮ ತುಲಸೀರಾಮದಾಸರನಾಮ ಜಗದೊಳಗೆ ೧೯

ರಾಮಬೇರಿನ್ನಲ್ಲ ತುಲಸೀ
ರಾಮನೇ ಶ್ರೀರಾಮನೆಂದಭಿ
ರಾಮ ಮಾನಸರಾಗಿ ಬಳಿಕೀ ರಾಮಸೇವೆಯೊಳೂ
ಪ್ರೇಮ ಪಿಡಿದವರೆಲ್ಲ ರಾತ್ಮಾ
ರಾಮರಾದುದ ತಿಳಿದು ಯೀ ಸಿವ
ರಾಮ ಬಂದನು ಮೊರೆಯೊ ತುಲಸೀರಾಮದಾಸಾರ್ಯಾ ೨೦

೫೨೫*

ಗುರುವೆ ತುಲಸೀರಾಮ ಕರುಣಿಸು ನೀ ಯನ್ನ
ಚರಣ ಸೇವೆಯ ತೋರೋ ರಾಂ ರಾಂ ರಾಂ ಪ

ಅಣ್ಣನೇ ರಾಮಣ್ಣನೇ ಕಣ್ಣಾರ ಕಂಡು ನಿಮ್ಮ
ಕಾಣಾದಂತಿರುವೆವು ಜಾಣಾ
ತುಲಸೀರಾಮ ರಾಂ ರಾಂ ರಾಂ ೧

ಅಯ್ಯನೇ ರಾಮಯ್ಯನೇ ಕಯ್ಯಾ ಮುಗಿಯುವೇನು
ಕಾಯ್ದು ಕೊಂಡಿರುವೇನು
ಪ್ರಿಯ್ಯಾರಂಗಸಾಮಿ ದಾಸು ರಾಂ ರಾಂ ರಾಂ ೨

ರಾಮನೇ ಸಾರ್ವಭೌಮನೇ ಯೀ ಮಹಾತ್ಮರು
ಪ್ರೇಮಾದಿ ಪೊಗಳುವರು
ಕಾಮಾದಿ ಹರನೆಂದು ರಾಂ ರಾಂ ರಾಂ ೩

ರಾಮನೇ ತುಲಸೀ ದಾಮನೇ
ಪಾಮರನಾದೆನು ನಾಮಾವ ಧ್ಯಾನಿಸದೆ
ಶ್ಯಾಮಾ ಸುಂದರ ತುಲಸೀ ರಾಂ ರಾಂ ರಾಂ ೪

ಮೋಸ ಹೋದೆನೋ ದಾಸನಾಗದೆ
ಯೀಶಾ ತುಲಸೀರಾಮಾ ವಾಸಾ
ದರಿಶ ಕುಪ್ಪೆ ದಾಸಾನ ಪೋಷಿಸು ರಾಂ ರಾಂ ರಾಂ ೫

೫೨೬

ಜಯ ಜಯ ತುಲಸೀರಾಮಾ ಜಯ ಮಂಗಳಂ ನಿಸ್ಸೀಮಾ ಪ

ಪ್ರಿಯರಂಗಸಾಮೀ ಸತ್ಯಂ ಬಯಸುವೆ ಮಂಗಳ ನಿತ್ಯಂ ಅ.ಪ

---

* ೫೨೫–೫೨೮ರವರೆಗು ದರಿಶಕುಪ್ಪ ವೆಂಕಟದಾಸರ ಕೃತಿಗಳು

ಅವರಿಂದ ಕಂಡಿರುವೆ ಭಾವ ಭಕ್ತಿಯೊಳಿರುವೆ
ಯಾವಾಗಲು ಧ್ಯಾನಿಸುವೆ ದೇವ ಮಂಗಳ ಪಾಡುವೆ ೧

ದರಿಶಕುಪ್ಪೆಯೊಳ್ ನಿಂದು ದರಿಶನ ಕೊಟ್ಟು ಬಂದು
ಅರುಹನುಗ್ರಹವೆಂದು ಗುರುವೆ ಮಂಗಳ ಯೆಂದು ೨

ಯೀಶ ತುಲಸೀರಾಮಪ್ಪಾ ಮೋಸಹೋದೆ ಶ್ರೀರಾಮಪ್ಪಾ
ದೋಶಬಿಡುಸೋಯನ್ನಪ್ಪಾ ದಾಸ ಮಂಗಳಂ ಪಾಡಿಪಾ ೩

೫೨೭

ಮೋಸಹೋದೆ ತುಲಸೀರಾಮಾ
ಮೋಸಹೋದೆ ಸುಗುಣಧಾಮ ಪ

ದೋಶದೊಳಗೆ ಸಿಲುಕಿರಾಮ
ದಾಸನಾಗದೆ ಹೋದೆ ನಿಸ್ಸೀಮಾ ಅ.ಪ

ಆವತರದಲಿರುವೆ ದೇವಾ ಆವ ವಿಧವ ನಾವು ತಿಳಿವಾ
ಆವನೀಯೊಳ್ ಕಾಣಲರಿವ
ಆವ ವಿಧದಿ ಬಂದು ಪೊರೆವಾ ೧

ಭಕ್ತಿಕೊಡು ಪೂಜಿಸುವೆನು
ಯುಕ್ತಿಕೊಡು ಧ್ಯಾನಿಸುವೆನು
ಶಕ್ತಿಕೊಡು ನಮಿಸುವೆನು
ಮುಕ್ತಿಹೊಂದಿಸು ಪಾದಪಿಡಿವೆನು ೨

ಮಾಯರೂಪ ಬಿಟ್ಟುಬಂದು ಮಾಯಪಾಶ ಹರಿಸುಯಿಂದು
ಮಾಯ ರಹಿತ ಗುರುವೆ ಯೆಂದು
ಮಾಯದಿಂದ ಕಾಣಿಸೆಂದು ೩

ದರಿಶ ಕುಪ್ಪನಗರಿಧಾಮಾ ದರಿಶನ ಕೊಡು ಶ್ರೀರಾಮಾ
ಅರುಹಿಬೇಡುವೆ ಸುಗುಣ ಪ್ರೇಮ
ಗುರುವೆ ಶ್ರೀತುಲಸೀರಾಮ ೪

ಮಂಗಳ ಕರ ಗುರುಳೆಂದೂ
ಮಹಿಮೆಯಿಂದ ತಿಳಿಸಬೇಕೆಂದೂ
ರಂಗಸಾಮಿದಾಸರು ಬಂದು ರಮ್ಯವಾಗಿ ಬೋಧಿಸಿದರಿಂದು ೫

೫೨೮

ಗುರುವರ ತುಲಸೀರಾಮ ದೇಶಿಕ ಸಾರ್ವಭೌಮ ಪ

ಗುರುರಾಯ ನೀಪದಕಂಜಮುಲ್
ನೆರನಮ್ಮಿತೀ ನನು ಬ್ರೋವರಾ ಅ.ಪ

ಶರಣಾಗತ ಜನರಕ್ಷಣ ಬಿರುದುಗಲ ಸರ್ವೋತ್ತಮಾ
ಸರ್ವವಿಧ ಭಾರಕರ್ತ ನಿರ್ವಾಹಕ ದಾಸಪಾಲ ೧

ಹರಿಕಥ ಸಲ್ಲಾಪಮು ದಾರಕೃಷ್ಣ ರಾಮೋತ್ಸವ
ಸೂರಿಜನ ಸಂಶೋಭಿತ ಪಾರಾವಾರ ಧೀರಾ ಯಶ ೨

ಅಷ್ಟಾಕ್ಷರೀಮಂತ್ರಾ ನಿಷ್ಟ ಇಷ್ಟಾರ್ಥಮುಲಿಚ್ಚೂನನಿ
ಶ್ರಿಷ್ಟಿಲೋನ ಶಿಷ್ಯೂಲಕು ಶ್ರೇಷ್ಟಾಮನಿ ಬೋಧಿಂಚಿನ ೩

೫೨೯*

ಶ್ರೀ ಶಠಕೋಪದಯಾಪಾತ್ರಂ
ಶ್ರೀ ಮದ್ಗುರು ತುಲಸೀರಾಮಾರ್ಯಂ
ಶ್ರೀಶೈಲವರ ಪರಾವತಾರಂ
ಶ್ರೀ ಶುಕವಾಗ್ಗುರಿ ಶ್ರೀ ಶುಭ ಚರಿತಂ ೧

---

* ಮಳಿಗೆ ರಂಗಸ್ವಾಮಿದಾಸರ ಕೃತಿ

ಧರವೆಂಕಟಲಕ್ಷ್ಮಾಂಬ ಸುತನಯಂ
ವರ ವೈಷ್ಣವಕುಲ ಶರಧಿ ಶಶಾಂಕಂ ೨

ಭಕ್ತಿಜ್ಞಾನ ವೈರಾಗ್ಯ ಸುಬೋಧಂ
ಭಕ್ತ ಪ್ರಿಯ ನಿಜದಾಸ ಶ್ರೇಷ್ಠಂ ೩

ನಿರತಾಗಮ ರಹಸ್ಯಾರ್ಥ ಪ್ರಸಂಗಂ
ಶರಸ್ಮರಮರ್ದನ ದುರ್ಮತ ಭಂಗಂ ೪

ಕರುಣಾರಸ ಪರಿಪೂರಿತ ಹೃದಯಂ
ಭರತ ಪುರಾಧಿಪ ಭವ ಭಯ ಹರಣಂ ೫

ಮಂಗಳ ಕರಗಳತುಲಸೀಹಾರಂ
ರಂಗಸಾಮಿ ದಾಸಹೃದಯ ನಿವೇಶಂ ೬

೫೩೦*

ಓಡಿತೆನ್ನಯ ಭವಗಳೆಲ್ಲವು ಕಂಡೆನಾ ನಿಜಗಂಡನಾ
ಮಾಡಿದಪರಾಧಗಳನು ಕ್ಷಮಿಸಿದ ಸತ್ಯಕರಕೋದಂಡನಾ ಪ

ಬೇಡಿದಿಷ್ಟಾರ್ಥಗಳ ಕೊಡುವ ಜಗಧೀಶ ತಾ ಅಖಂಡನಾ
ವೊಡಿಸಿದನು ಪರಂಪರವ ಸದ್ಬೋಧ ಪಾಣಿ ತ್ರಿದಂಡನಾ ೧

ಸರ್ವರೂಪವನು ಬಿಟ್ಟು ಅವತರಿಸಿರ್ಪ ಸತ್ಯಸ್ವರೂಪನಾ
ಕರ್ಪುರದ ಆರತಿಯು ಬೆಳಗಿರೆ ತತ್ವಜನ ಸದ್ದೀಪನಾ ೨

ದೇಶಿಕೋತ್ತಮನಾದ ನಿಜಗುರುದಾಸ ತುಲಸೀರಾಮನಾ
ಶೇಷಗಿರಿಯಿಂದೈದಿಬಂದಿಹ ಸರ್ವತಂತ್ರ ಸ್ವತಂತ್ರನಾ ೩

* ೫೩೦ ರಿಂದ ೫೩೨ರವರೆಗೆ ಚನ್ನಪಟ್ಟಣದ ಅಹೋಬಲದಾಸರ ಕೃತಿ. (ದಾಸರನ್ನು ಕುರಿತು ಇವರು ಸ್ತುತಿಸಿರುವ ಇನ್ನು ಕೆಲವು ಕೃತಿಗಳ ಕ್ರಮಸಂಖ್ಯೆ : ೨೫೬ ರಿಂದ ೨೬೦, ೨೭೬, ೩೧೭, ೩೨೦, ೩೨೩ ಮತ್ತು ೩೪೩.)

೫೩೧

ಕರವೆತ್ತಿ ಮುಗಿಯುವೆನು ಗುರುನಾರಸಿಂಹಗೆ
ಕರವೆತ್ತಿ ಮುಗಿಯುವೆನು ಕರವೆತ್ತಿ ಮುಗಿಯುವೇ ಪ

ಚರಣವೇ ಗತಿಯೆಂದು ಕರವ ಶಿರದೊಳಗಿರಿಸೆ ಭವಗಳು
ಬರಗೊಡದ ಪರಿ ಮಾಡ್ದ ಮಹಿಮಗೆ ಅ.ಪ

ಯಿೀಮಹೀ ಪರಕಾಲ ಶಠಕೋಪ ದೇಶಿಕ
ಸ್ವಾಮಿಗಳೆಲ್ಲರು ಪ್ರೇಮಗೋಳ್ಳುತಲೀ
ರಾಮಕೃಷ್ಣಯಂಬೋ ನಾಮ ವುಚ್ಚರಿಸೆಂದು
ಭೂಮಿಯೊಳು ಬೋಧಿಸುವ ಮಹಾ ನಿ
ಸ್ಸೀಮನಾದ ಮಹಾನುಭಾವಗೆ ಹರಿದೇವಗೆ
ವರಮೀವಗೆ ನಿಜಸೇವಕರ ಸತ್ಕೃಪಾ ಕಟಾಕ್ಷಗೆ ೧

ಭೀತಿಖಂಡಿಸಿದ ಪ್ರಖ್ಯಾತಿ ಪುರುಷನೆಂದು
ನಾಥ ಮುನಿಗಳು ನಂಬಿಗೆ ಮಾಡಿರೆ
ಕಾತುರದೊಳು ಬಂದು ಕಡಿದ ಕರ್ಮವನೆಲ್ಲ
ಪ್ರಾತಸಂಧ್ಯಾಚಮನರಿಯದ
ಕೋತಿ ಜನ ದುರ್ಗುಣ ವಿದೂರಗೆ ಮಹಾವೀರಗೆ
ಬಹು ಶೂರಗೆ ಸಹಸರ್ವತಂತ್ರ ಸ್ವತಂತ್ರಭೌಮಗೆ ೨

ಕಾರಣ ಕೃಪೆಯೊಳು ಘೋರ ಪಾತಕವೆಲ್ಲ
ದೂರ ಮಾಡುವ ಸತ್ವಾಧಾಮನೆನ್ನುತಲೀ
ಸೇರಿಬರುವ ಭಕ್ತೋದ್ಧಾರ ಶ್ರೀಪರಮಾತ್ಮ
ಕೋರಿದಿಷ್ಟಾರ್ಥಗಳ ಕೊಡುವ ಉದಾರ
ಧೀರ ಪುರಾಣಕೋಶಗೆ ಜಗಧೀಶಗೆ
ಭವನಾಶಗೆ ಮಮಪೋಷ ಶ್ರೀ ಪರವಾಸುದೇವಗೆ ೩

ಭೇದವಾದಿಗಳೀಗ ನಾದಬ್ರಹ್ಮವೇ ಸತ್ಯ
ವೇದ ಶಾಸ್ತ್ರಗಳೆಲ್ಲ ವಡನೆ ಶೋಧಿಸುತಾ
ನಾದ ಬ್ರಂಹನೆಯಾಗಿ ನಟಿಸುತ್ತಿರುವ ನಿತ್ಯ
ಪಾದವೆನ್ನಿರೊ ಗುರುವು ತುಲಸೀರಾಮ ರಾಗಿಯು
ಬಂದ ಸ್ವಾಮಿಗೆ ಸುರಧಾಮಗೆ ಸರಿಧೂಮಗೆ
ಕರಚಕ್ರಧರ ಪರವಾದಿ ಚಂದ್ರಗೆ ೬

೫೩೨

ಧ್ಯಾನಧಾರಣ ನಾಗಬೇಕಂತೆ ಪ್ರಪಂಚದೊಳಗೆ
ದೀನ ನಾನಾದೊಡೆ ಮುಖ್ಯ ಸಾಕಂತೆ ಪ

ಪ್ರಾಣ ಪಾನ ಸಮಾನ ವ್ಯಾನವು
ದಾನ ಹೀಗೆಂದೆಂಬೊ ಪಂಚಕ
ನೀನೆ ನಿನ್ನೊಳು ಹುಡುಕಿ ದಿವ್ಯ
ಜ್ಞಾನಗುರುಗಳು ತೋರಿಸಿದು ನಿಜ ೧

ಆಗ ನೀನದು ಕಾಣಬಹುದಂತೇ ಆಧ್ಯಾತ್ಮ ಸತ್ಯವು
ಯೋಗವೆ ನಿಜ ತಾಳಿಯಹುದಂತೆ
ಭಾಗವತಗಿದು ಮುಖ್ಯವೆನ್ನುತ
ಬಾಗಿ ನಡೆವ ಅವಿಜ್ಞನಿಗೆ ಅದು
ಭೋಗಿ ಭೂಷಣ ಸರ್ವಸಾಕ್ಷಿಸರಾಗ
ಮುದ್ರೆ ಸಮಾಧಿಹೊಂದುವ ೨

ಸ್ಮರಣೆ ನಿಂತೊಡೆ ಧ್ಯಾನಸಾಕಂತೇ ಅಭಯ ಪ್ರಸಿದ್ಧವು
ಕರಣ ನಿಗ್ರಹ ನಿನಗೆ ಬಹುದಂತೇ
ಧರಣಿ ಮದ್ಗುರು ತುಲಸಿರಾಮರ
ದಾಸರಪ್ಪಣೆ ಗುಳುಹಲಾತನ
ಚರಣ ಸೇವೆಯೊಳಿರುತಿಹುದೆ ನಿಜ
ಪರಮ ಪದವಿದು ಸತ್ಯನಿತ್ಯವು ೩

೫೩೩*

ಚರಣ ಸೇವೆಯ ಬೇಡುವೆ ಗುರು ತುಲಸೀರಾಮನ ಪ

ಚರಣ ಸೇವೆಯ ನಿರುತವು ಬೇಡುವೆ
ದುರಿತಶರಧಿಲಿ ಮುಳುಗಿಸದೆ
ಕರಪಿಡಿದು ಸೆಳೆಯುವ ಕರುಣಾನಿಧಿಯನು ಅ.ಪ

ರಾಮಾನುಜಾಚಾರ್ಯ ಪರಕಾಲ ಯತಿವರ
ಸ್ವಾಮಿಗಳೆಲ್ಲರು ಪ್ರೇಮಗೊಳ್ಳುತಲಿ
ರಾಮಕೃಷ್ಣ ಗೋವಿಂದನ ನಾಮವ
ಈ ಮಹಿಯೊಳು ಬೋಧಿಸುತ ಚರಿಸುವ
ಕಾಮರಹಿತ ಯತಿವರ ಶಿಖಾಮಣಿಯಾ ಬಹು ಪ್ರೇಮಿಯಾ
ನಮ್ಮ ಸ್ವಾಮಿಯಾ ಮಾಯಪಾಶ ಕಲುಷ ವಿನಾಶ ಮೂರ್ತಿಯ ೧

ವೇದಶಾಸ್ತ್ರಗಳನ್ನು ಶೋಧಿಸಿ ದುರ್ಮತ
ವಾದಿಗಳನೆಲ್ಲ ಖಂಡ್ರಿಸೀ ಜಗದಿ
ಆದಿಮೂಲವೆಸರ ಹರಿಯೆಂದು ತೋರಿಸಿ
ಭೇದ ಭೇದವ ತಿಳಿಸಿ ತನ್ನಾಧೀನ ಮ್ಹಾಡಿದ
ದಯಾ ಸಮುದ್ರನಾ ಮನುಜೇಂದ್ರನಾ
ಮಧುಸೂದನಾ ಪ್ರಿಯನಾದ ಸ್ವಾಮಿಯ ೨

ಮೀನಾದಿ ತುರಗನವತಾರಾನಂದದಿ ಸು
ಜ್ಞಾನಿಗಳ ಮಾನ ಧ್ಯಾನದೊಳಿರುವ
ದೀನಜನ ಮನೋಹರಾ ಶುಭಾಕಾರ
ಸಾನುರಾಗದಿ ಮೆರೆವ ಶ್ರೀಮತ್ಪರಮಪಾವನ ಮೂರ್ತಿಯಾ
ಧನಿರಾಸಿಯಾ ಘನಸೇಷಿಯಾ
ಅನುದಿನದಿ ಶ್ರೀಹರಿ ಧ್ಯಾನಶೀಲನ ೩

ಈ ಮಹಿಯೊಳು ಜನಸ್ತೋಮದಿಂ ಹರಿಕಥ
ಧರ್ಮಶಾಸ್ತ್ರದ ಮರ್ಮಗಳನೆಲ್ಲ ಬೋಧಿಸಿ
ನಿರ್ಮಲದಿಂ ರಾಮಕೃಷ್ಣಾ ಮಹೋತ್ಸವ
ನೇಮದಿಂದನ್ನದಾನ ವಸ್ತ್ರವ

ಭೂಮಿಸುರರಿಗರ್ಪಿಸುವ ಸ್ವಾಮಿಯಾ ಸುಕ್ಷೇಮಿಯಾ ನಿ
ಷ್ಕಾಮಿಯಾ ನಿಸ್ಸೀಮ ಪುರುಷ ಮಹಾನುಭಾವನ ೬

ಕರಿಗಿರಿವರದನ ಕರುಣಾಕಟಾಕ್ಷದಿಂ
ದರಿಶಕುಪ್ಪೆಯೊಳು ನಿವಾಸವಾಗಿರುವ
ಗುರುವು ತುಲಸೀ ರಾಮದಾಸರ ಚರಣವ
ನಿರುತ ನಂಬಿದ ಕೃಷ್ಣದಾಸನ
ಕರುಣದಿಂದಲಿ ಕಾಯ್ವನಾ ಬಹುಧೀರನಾ ಗಂ
ಭೀರನಾ ಶುಕ್ರವಾರ ಭಜನಾನಂದ ಸ್ವಾಮಿಯ ೫

೫೭೪*

ಶ್ರೀತುಲಸೀರಾಮಾರ್ಯ ನಮೋಸ್ತುತೇ
ನಿತ್ಯ ತೃಪ್ತನಿರ್ಲಿಪ್ತ ನಮೋಸ್ತುತೇ
ಪಾತಕ ದೂರ ನಿರ್ಮಲ ನಮೋಸ್ತುತೇ ಪಂಡಿತೋತ್ತಮಾ ೧

ಸಕಲಶಾಸ್ತ್ರ ಸದ್ಬೋಧ ನಮೋಸ್ತುತೇ
ನಿಖಿಲಾಗಮ ಪರಿಶೀಲ ನಮೋಸ್ತುತೇ
ಸಕಲಯೋಗ ಸಾಧನ ನಮೋಸ್ತುತೇ ಸತ್ಯಭಾಷಣಾ ೨

ಸದಾಚಾರ ಸಂಪನ್ನ ನಮೋಸ್ತುತೇ
ಉದಾರ ಸುಗುಣೋನ್ನತ ನಮೋಸ್ತುತೇ
ಸದಾನ್ನದಾನ ವಿನೋದ ನಮೋಸ್ತುತೇ ಭೇದರಹಿತಾ ೩

ವಿದ್ವಜ್ಜನ ಪರಿಪಾಲ ನಮೋಸ್ತುತೇ
ವಿದ್ಯಾಸಾಗರ ವಿಮಲ ನಮೋಸ್ತುತೇ
ಶುದ್ಧ ವೈಷ್ಣವಾಚಾರ ನಮೋಸ್ತುತೇ ಮುದ್ರಾಸಾಧಕಾ ೪

---

* ಮುಳಬಾಗಿಲು ವಿಠಲಂ ಮುನಿಸ್ವಾಮಾಚಾರ್ಯರ ಕೃತಿ.

ಅನೇಕ ಭಜನಾಗಾರ ನಮೋಸ್ತುತೇ
ಅನೇಕ ಜನ ಸನ್ಮಾನ ನಮೋಸ್ತುತೇ
ಅನೇಕ ದೇಶಾಟನ ನಮೋಸ್ತುತೇ ಗಾಸಾಮೋದಕಾ ೫

ರಾಜಾಸ್ಥಾನ ಸುಪೂಜ್ಯ ನಮೋಸ್ತುತೇ
ಆಜಪ ಮಂತ್ರಯ ರೂಢ ನಮೋಸ್ತುತೇ
ಕೂಜನಸೂಜನ ಪ್ರಣುತ ನಮೋಸ್ತುತೇ ಭಜನಾನಂದಕಾ ೬

ಪ್ರಥಮಾಶ್ರಮವ್ರತ ಪುಣ್ಯ ನಮೋಸ್ತುತೇ
ನಿತ್ಯರಾಮ ಜಪ ನಿಷ್ಠ ನಮೋಸ್ತುತೇ
ಶತ್ರು ಮಿತ್ರ ಸಮದರ್ಶ ನಮೋಸ್ತುತೇ ಸಾತ್ವಿಕೋತ್ತಮಾ ೭

ಪರಹಿತ ಚಿಂತಾಸಕ್ತ ನಮೋಸ್ತುತೇ
ನಿರುಪಮಾನ ನಿರ್ಮಲಾ ನಮೋಸ್ತುತೇ
ಹರಿಚರಣಾಂಬುಜ ಭ್ರಮರ ನಮೋಸ್ತುತೇ ಹರಿದಾಸಾಗ್ರೇಸರಾ ೮

ಚಾಮರಾಟ್ಪಾಲ ಸಮಾಜ ನಮೋಸ್ತುತೇ
ರಾಮ ಶತಕ ನಿರ್ಮಾಣ ನಮೋಸ್ತುತೇ
ಕಾಮರಹಿತ ನಿಷ್ಕಾಮ ನಮೋಸ್ತುತೇ ನಾಮಧಾರಣಾ ೯

ಶತಕವಾಟಪುರಿವಾಸ ನಮೋಸ್ತುತೇ
ಪತಿತಪಾಲನ ಚೈತನ್ಯ ನಮೋಸ್ತುತೇ
ಚಿತ್ತಜಪಿತ ಸೇವಾಖ್ಯ ನಮೋಸ್ತುತೇ ಶ್ರೇಯೋದಾಯಕಾ ೧೦

ಅನುಬಂಧಗಳು

ಅನುಬಂಧ-೧

ಕಠಿಣ ಶಬ್ದಗಳ ಅರ್ಥ

ಅಂಬರ - ಆಕಾಶ, ವಸ್ತ್ರ
ಅಂಘ್ರಿ = ಪಾದ
ಅಕುಂಠಿತ = ಕುಂದಿಲ್ಲದ
ಅಘ = ಪಾಪ
ಅಣಿಮ = ಚೆನ್ನಾಗಿ, (ಅಣಿಮೆ ಎಂಬ ಅಷ್ಟಸಿದ್ಧಿಗಳಲ್ಲಿ ಒಂದು?)
ಅದೃಢ = ಅಪನಂಬಿಕೆ
ಅಧರ = ತುಟಿ
ಅಪ್ಪೀರ = ಮುದ್ದಾದ, ಸುಂದರವಾದ, ಒಪ್ಪುವ
ಅಭ್ಯಂಗನ = ಸ್ನಾನ, ಅಭಿಷೇಕ
ಅಮರನದಿ = ಗಂಗೆ, ಭಾಗೀರಥಿ
ಅಮಳ = ನಿರ್ಮಲವಾದ
ಅಮ್ಮಗೊಡು = ಸಹಕರಿಸು, ಒಪ್ಪು
ಅಮಿತೇಂದು
ರುಚಿಹಾಸ = ಚಂದ್ರಮುಖಿ
ಅರತು = ಬೇಡವೆಂದು
ಅರಸದೆ = ಹುಡುಕದೆ
ಅರಳಂಬು = ಹೂಮಳೆ
ಅರಿದು = ಅಸಾಧ್ಯ, ಕಷ್ಟ
ಅರುಣಾಂಬುರುಹ = ಅರಳಿದ ಕಮಲದ ಹೂ;
ಅರೆ = ಕೊರೆ, ಕಡಮೆ
ಅರೋಚಕ = ಅಜೀರ್ಣ
ಅಲ = (ಅವ್ಯಯ)ಸಮರ್ಥ
ಅಲಗು = ಕತ್ತಿ
ಅಲರು = ಹೂವು
ಅವಗಡೆ = ತೊಂದರೆ, ಸಾಹಸ
ಅಸಿತ = ಕಪ್ಪು, ಕಲೆ
ಅಸಿಮಧ್ಯ = ಸಣ್ಣನಡು
ಅಸೇದು = ಉಸಿರಾಟದ ತೊಂದರೆ
ಅಹರು = ಆಗುವರು
ಅಳಿದ = ಸತ್ತ
ಆಕೀರ್ಣ = ಹರಡಿದ
ಆರ್ಜಿತ = ಗಳಿಗೆ, ಸಂಪಾದನೆ
ಆಜ್ಞಾಚಕ್ರ = ಮೋಕ್ಷದತ್ತ ಹೋಗುವ ಶ್ರೀವೈಷ್ಣವಾನುಷ್ಠಾನದ ಭಕ್ತನೊಬ್ಬನಿಗೆ ಸಂತೋಷದಾಯಕ ಜೀವನಮಾರ್ಗ
ಆರ್ಣವ = ಸಮುದ್ರ
ಆತಪ = ಬಿಸಿಲು
ಆನತ = ಓರೆನೋಟದ

ಆವಾಗ = ಯಾವಾಗಲೂ, ನಿರಂತರ
ಇನಕುಲ = ಸೂರ್ಯವಂಶ
ಇನಿಗೆದರುವ = ಪ್ರೀತಿ, ಭಕ್ತಿಗೆ ಹೆದರುವ, ಸೋಲುವ
ಇಳೆ = ಭೂಮಿ
ಈಶ್ವರ = ಸೃಷ್ಟಿಕರ್ತ
ಉಗಿ = ಹೊರದೂಡು
ಉಡುಗಣ = ನಕ್ಷತ್ರಗಳು
ಉಡುಗು = ಅಡಗು
ಉಡೆ = ಸೊಂಟ, ವಸ್ತ್ರ, ಮಡಿಲು
ಉದರ = ಹೊಟ್ಟೆ
ಉದಿತ = ಉದಯಿಸಿದ, ಹುಟ್ಟಿದ
ಉಪ್ಪವಡಿಸು = ಎಚ್ಚರಗೊಳ್ಳು
ಉರ = ಎದೆ
ಉರಗ = ಹಾವು, ಸರ್ಪ
ಉರುಗಾಳಿಯ ಫಣಿ = ಹಾವುಗಳ ಹೆಡೆ
ಉರುಬು = ಮುಡಿ, ಕೂದಲು
ಉರುಳು = ಕುಣಿಕೆ, ನೇಣು
ಉರೆ = ಅತಿಶಯವಾಗಿ, ವಿಶೇಷವಾಗಿ
ಊಡು = ಉಣಿಸು, ಕುಡಿಸು
ಊರು = ತೊಡೆ
ಊರ್ಧ್ವಶ್ವಾಸ = ಉಬ್ಬಸರೋಗ
ಊಳಿಗ = ಸೇವಕ, ಶರಣಾಗತ
ಎರೆ = ಕೊಡು, ನೀಡು
ಎರೆಯ = ಒಡೆಯ, ದೇವರು
ಎವೆ = ಕಣ್ಣ ರೆಪ್ಪೆ, ಕಣ್ಣು, ದೃಷ್ಟಿ
ಎಸಸು = ಚಿಮ್ಮು
ಎಳವೆರೆ = ಆಕರ್ಷಣೆ, ಚೆನ್ನಾಗಿ, ದಾರದ ಗೆರೆಯಂತೆ
ಎಳ್ಳನಿತು = ಎಳ್ಳಿನಷ್ಟು
ಏಕಾರ್ಣ = ಪೂರ್ಣತೆ
ಐಕಿಲುರು = ಮಂಜು ಹನಿ:
ಐದುವರು = ಹೋಗುವಮ್ಮ ಹೊಂದುವರು
ಒರೆ = ಪರೀಕ್ಷೆ, ಮೆರಗು, ಗುಣ, ಕತ್ತಿಯನ್ನು ಇಡುವ ಸಾಧನ
ಓಲು = ಬಾಗು, ಈಡು
ಕಂಜ = ತಾವರೆ
ಕಂದರ್ಪಪಿತ = ಮನ್ಮಥನ ತಂದೆ, ವಿಷ್ಣು
ಕಂಧರ = ಕೊರಳು
ಕಂಬು = ಶಂಖ
ಕಂಬುಕಂಧರ = ಶಂಖದೋಪಾದಿ ಯಲ್ಲಿರುವ ಕೊರಳು
ಕಜ್ಜಳ = ಕಪ್ಪು, ದೋಷ, ಕೇಡು
ಕಟಾಕಟಾ = ಅಕಟಕಟ, ಅಯ್ಯೋ
ಕಟಿತಟ = ಸೊಂಟ
ಕದಪು = ಕೆನ್ನೆ
ಕರ್ಬುರ = ಬೂದು,ಚಿನ್ನ, ರಾಕ್ಷಸ
ಕಮನೀಯ = ಮನೋಹರ
ಕಮಲಜ = ಬ್ರಹ್ಮ
ಕರಪೀತವಾಸ = ವಿಶೇಷವಾದ ಪೀತಾಂಬರ ದಲ್ಲಿರುವವನು

ಕಸ್ತೂರಿ ತಿಲಕ = ನಾಮದೋಪಾದಿ ಯಲ್ಲಿ ಇಡುವ ಒಂದು ಬಗೆಯ ವಿಶಿಷ್ಟ ತಿಲಕ
ಕಳಕಾಂಬೆ = ಡಾಬು
ಕಳತ್ರ = ಹೆಂಡತಿ
ಕಾಂಚೀಧಾಮ = ಡಾಬು
ಕಾಂತಲಜ್ಜೆ = ನಾಚಿಕೆ
ಕಾಮಜನಕ = ಮನ್ಮಥನ ತಂದೆ, ವಿಷ್ಣು
ಕಾಮಧೇನು = ಕೇಳಿದ್ದನ್ನು ಕೊಡುವ ಹಸು
ಕಾಯ = ದೇಹ, ಶರೀರ
ಕಾಸ = ಕೆಮ್ಮು
ಕಾಳಂಜಿ = ಪನ್ನೀರು
ಕಿರುನುಡಿ = ಸಣ್ಣಮಾತು, ನಿಂದೆಮಾತು, ಅಸಮಾಧಾನದ ಮಾತು
ಕಿಸಲಯ = ಚಿಗುರು
ಕುಂಚ = ಚಾಮರ
ಕಂಜಭವಾಂಡ = ಬ್ರಹ್ಮಾಂಡ
ಕುಂಜರ = ಆನೆ
ಕುಂಜ = ಲತಾಗೃಹ
ಕುಂದಕೇದಗೆ = ಕುಂದದ ಸುವಾಸನೆಯ ಕೇದಗೆ ಹೂ
ಕಕ್ಕುಲತೆ = ಅಸೂಯೆ, ದ್ವೇಷ, ಹೊಟ್ಟೆಕಿಚ್ಚು
ಕುಟಿಲವರ್ತನ = ಮೋಸ, ವಂಚನೆ
ಕುಟ್ಮಲ = ಅರೆಬಿರಿದ ಮೊಗ್ಗು
ಕುಮದ(ತ) = ಕೆಟ್ಟಭಿಪ್ರಾಯ

ಕ್ಷುಧೆ = ಹಸಿವು
ಕೃಷಿಕ = ವ್ಯವಸಾಯಗಾರ
ಕೇಣ = ಕೋಪ
ಕೈವಲ್ಯ = ಮೋಕ್ಷ, ಸ್ವರ್ಗ
ಕೈವಾರಿಸು = ಹೊಗಳು
ಕೋಕ = ಚಕ್ರವಾಕ
ಕೋಟೀರ = ಕಿರೀಟ
ಕೋಠಿ = ತುಂಬಿದ, ಸಮೃದ್ಧ
ಕೋಡು = ಕೀರ್ತಿ, ಹೆಸರು
ಕೋರೆ = ಕೋರಿಕೊಳ್ಳಲು, ಕೇಳಿಕೊಳ್ಳಲು
ಕೋರಕ = ಚಕೋರ
ಕೋಳು = ಹಾವು ,ಹೊಡೆತ, ಕೈಸೆರೆ
ಕೋಣಿ = ಭೂಮಿ, ಲೋಕದಜನ
ಕೌಮುದಿ = ಬೆಳದಿಂಗಳು
ಕೌಮೋದಕಿ = ವಿಷ್ಣುವಿನ ಗದೆ
ಖಡ್ಡೆ = ಕಾಲಿಗೆ ತೊಡುವ ಒಂದು ಬಗೆಯ ಒಡವೆ (ಬಿರುದುಗಳ ಸಂಬಂಧದಲ್ಲಿ)
ಗಂಡಮಂಡಲ ಯುಗ್ಮ = ಕಪೋಲ(ಕೆನ್ನೆ)ಗಳು.
ಗರಳ = ವಿಷ
ಗಮ್ಯ = ಗೂಢ
ಗಮ್ಮನೆ = ಕೂಡಲೆ
ಗಾಡಿ = ಸೌಂದರ್ಯ
ಗಾಡಿಕಾರ = ಸುಂದರ ಮೂರ್ತಿ
ಗಾಳೆ = ಒಂದು ಬಗೆಯ ವಾದ್ಯ (ಕಹಳೆ?)

ಗಿಡಿಮಡಿ = ಒಂದು ಬಗೆಯ ವಾದ್ಯ
ಗುಣಾರ್ಣವ = ಗುಣಸಮೂಹ
ಗುಪಿತ = ರಹಸ್ಯ
ಗೂಡು = ದೇಹ
ಗೂಢ ಪಾಪಿ = ಗುಪ್ತಪಾಪಿ (ಇತರರಿಗೆ ತಿಳಿಯದೆ ಪಾಪ ಕಾರ್ಯಮಾಡುವವ)
ಗೂಹನ = ಗೋಪ್ಯ
ಗೇಹ = ಮನೆ
ಘಾಸಿ = ಕಷ್ಟ, ಯಾತನೆ
ಘೃಣಿ = ಕಿರಣ
ಚಕ್ಷುರಾಜಿ = ಕಣ್ಣುಗಳು
ಚಟುಲ = ಸುಂದರವಾದ
ಚತುರಾಸ್ಯನುತ = ಕೊಂಡಾಡಿದ
ಚತುಷ್ಕ = ನಾಲ್ಕು
ಚರಣಾರವಿಂದ = ಪಾದ ಕಮಲಗಳು
ಚರಿಸಿ = ಆಚರಿಸಿ
ಚಾಂಪೇಯ = ಚಾಪ(ಬಿಲ್ಲು)ದಂತಹ = ಸುಂದರವಾದ
ಚಾಮೀಕರ = ಚಿನ್ನ
ಚಾರು = ಸುಂದರ
ಚಿಕಟಾಯಿಸು = ಚುಡಾಯಿಸು, ಕೀಟಲೆ ಮಾಡು, ಕೆಣಕು
ಚಿಕುರೆ = ಚಂಚಲೆ, ಸುಂದರಕೂದಲೆಳೆ
ಚಿಣ್ಣ = ಸಣ್ಣ, ಸುಂದರ
ಚಿತ್ರಭಾನು = ಸಂವತ್ಸರದ ಹೆಸರು
ಚುನ್ನ = ಅಪಹಾಸ್ಯ, ಕೊಂಕು
ಚುಬುಕಾಗ್ರ = ಗಲ್ಲ
ಚೇಲ = ವಸ್ತ್ರ, ಬಟ್ಟೆ
ಛಿದ್ರ = ಹುಳುಕು, ದೌರ್ಬಲ್ಯ
ಜಂಘೆ = ಕಾಲು (ಮಂಡಿವರೆಗಿನ ಭಾಗ)
ಜತನ = ಜೋಪಾನ
ಜರ = ಮುಪ್ಪು
ಜವ್ವನ = ಯೌವನ
ಜಿತಾರ್ಣ = ಧೀರ
ಜೀಮೂತಶಾಲೆ = ಮೋಡಗಳ ಮನೆ
ಟೆಂಟಣಿಸು = ಮುತ್ತು, ಅವರಿಸು
ಠಾಕೂರ = ಒಡೆಯ
ಢಾಳಿಸು = ಪ್ರಕಾಶಿಸು
ತಂಬೆಲರ = ತಂಪಾದ ಗಾಳಿ
ತಣ್ಣಸ = ತಂಪು
ತತ್ = (ಅವ್ಯಯ) ಅದು, ಅದರ
ತತಿ = ಸಮೂಹ,
ತಮಸ್ಸು = ಕತ್ತಲು, ಅಜ್ಞಾನ
ತರಣಿ = ಸೂರ್ಯ
ತರುಣಾತಪ = ಬಾಲಸೂರ್ಯ (ಆತಪ–ಸೂರ್ಯ)
ತಾರ್ಕ್ಷ್ಯಕ = ವೈನತೇಯ, ಗರುಡ
ತೇಜಿ = ಕುದುರೆ
ತೋರ = ದಪ್ಪ, ಸುಂದರ
ತೋಷ = ಆನಂದ, ತೃಪ್ತಿ
ತಾರಹಾರ = ದೊಡ್ಡಮುತ್ತಿನ ಸರ
ತಾಮರಸ = ತಾವರೆ
ತಾಮ್ರಶಿಖಿ = ಕೋಳಿ
ತುತಿ = ನುತಿ, ಸ್ತುತಿ

ತಿಂಗಳು = ಚಂದ್ರ
ತಿಂತಿಣಿ = ಗುಂಪು
ತರು = ಮರ
ತಿರಿಕೆ = ತಿರುಪೆ, ಭಿಕ್ಷೆ
ತುರುಗೆವೆ = ಒತ್ತಾದಕೂದಲಿನ ರೆಪ್ಪೆ
ತೂರ್ಯ = ವಾದ್ಯಮೇಳ, ಧ್ವನಿ
ತೇಜಿ = ಕುದುರೆ
ತೋರಣ
ತಡಿಯವರು = ದ್ವಾರಪಾಲಕರು
ತ್ವತ್ = ನಿನ್ನ
ತ್ವಷ್ಟ = ವಿಶ್ವಕರ್ಮ (ದೇವಲೋಕದ ಶಿಲ್ಪಿ)
ದಂದುಗ = ಕಷ್ಟಕೋಟಲೆ
ದಧಿ = ಮೊಸರು
ದರಹಸಿತ = ಮಂದಹಾಸ
ದಕ್ಷಿಣವಾರಣಾಸಿ = ಶಿವಗಂಗೆ, ನಂಜನಗೂಡು, ಬೇಲೂರು
ದನುಜವೃಂದ = ಶತ್ರುಗಳು
ದಾಯ = ಸಮಯ ವ್ಯರ್ಥ ಮಾಡಿದರು, ಅರಿಯದಾದರು
ದಾರ = ದ್ವಾರ
ದಾರಾಪತ್ಯ = ?
ದಾವ = ಬೆಂಕಿ
ದಿಂಗಳು = ಕಾಂತಿ, ಕಷ್ಟಪಟ್ಟರು
ದಿಂಡುದರಿ = ಸಂಹರಿಸು
ದಿಗ್ವರರು = ದಿಗ್ದೇವತೆಗಳು
ದಿನಮಣಿ = ಸೂರ್ಯ
ದಿಗಂಬರ = ಭಕ್ತಶ್ರೇಷ್ಠ
ದುಗ್ಗಾಣಿ = ಎರಡುಕಾಸು, ಹಣ
ದುರಿತ = ಕಷ್ಟ
ದೃಗು = ಕಣ್ಣು
ದ್ಯುಮಣಿ = ಸೂರ್ಯ
ದೇಶಿಕ = ಗುರು
ದೊತ್ತಳದುಳಿ (ತೊತ್ತಳದುಳಿ) = ನಜ್ಜುಗುಜ್ಜಾಗುವಂತೆ ತುಳಿ
ದೋಷಾದ್ರಿ = ಪಾಪಗಳ ಬೆಟ್ಟ
ದೌತ್ರಿ = ಭೂಮಿ
ಧರ = ಧರಿಸು
ನಂದದ = ಅರದ, ಪ್ರಜ್ವಲಿಸುವ
ನಂಬಿ = ಭಕ್ತ, ನಂಬಿಕಸ್ತ, ಸ್ನೇಹಿತ
ನಕ್ರ = ಮೊಸಳೆ
ನಗ = ಬೆಟ್ಟ
ನತ = ಶರಣಾಗತರಾದ, ಬಾಗಿದ
ನರಗುರಿ = ನುಜ್ಜುಗುಜ್ಜು
ನಳಿನ = ಬಳ್ಳಿ
ನಾಕಿಗರು = ದೇವತೆಗಳು
ನಾಕೇಶ = ವಿಷ್ಣು
ನಾಸಿಕ = ಮೂಗು
ನಿಗಮ = ವೇದ ಆಗಮಗಳು
ನಿಜಪದ = ಮೋಕ್ಷ, ಸ್ಥಾನ, ಸ್ಥಿತಿ
ನಿರ್ಜಿತ = ಸೋತ
ನಿತರ = ಅನಿತರ, ಎಲ್ಲ
ನಿಭ = ಬೆಳಕು, ಪ್ರಭೆ
ನಿರುಗೆ = ಸತ್ಯ, ದಿಟ
ನಿರುಪಮ = ಸಾಟಿಯಿಲ್ಲದ, ಅತಿಶಯವಾದ

ನಿರುತ = ಧರ್ಮಶ್ರದ್ಧೆ, ಸತ್ಯ
ನಿವೇಶ = ಮನೆ, ಆಸ್ತಿ
ನಿಸ್ಸಾಳ = ಒಂದು ಬಗೆಯ ಚರ್ಮವಾದ್ಯ
ನೀಡೆಸೆ = ನಿಡಿದಾಗಿ ಬೆಳೆದು ಶೋಭಿಸಿರುವ
ನೀಳ್ದೆರಗು = ನಿಡಿದಾಗಿ ಬೀಳು, ಸದಾಕಾಲ ಕೇಳು
ನುಗುಳು = ಸಿಲುಕದಿರು, ನುಣುಚು
ನುಸಿ = ಹುಡಿ, ಪುಡಿ, ಸಣ್ಣಪುಟ್ಟ
ನೆಗಳ್ = ಮೊಸಳೆ
ನೆರೆ = ಸೇರು, ಒಂದಾಗು
ಪಂಕರುಹ = ತಾವರೆ
ಪಂತ = ಒಡೆಯ (ಮರಾಠಿ)
ಪಂತೋಜ = ಉಪಾಧ್ಯಾಯ
ಪರ್ಜನ್ಯ = ಮಳೆ, ಮೋಡ
ಪದ = ಮೋಕ್ಷ, ಪಾದ, ಶರಣಾಗತಿ
ಪರ್ಬು = ಹಬ್ಬು
ಪರ = ಮುಕ್ತಿ
ಪರಶು = ಕೊಡಲಿ
ಪರುಸ = ಸ್ಪರ್ಷಮಣಿ
ಪಾಂಡವಪ್ರಿಯ = ಕೃಷ್ಣ
ಪಾಟಲ = ಎಳೆಗೆಂಪುಬಣ್ಣ, ಪಾದರಿ ಹೂ
ಪಾರ = ಅಂತ್ಯ, ತೀರ, ಅಧಿಕ
ಪಾರಾವಾರ = ಸಮುದ್ರ
ಪಾವಕ = ಬೆಂಕಿ
ಪಿತಾಮಹ = ಬ್ರಹ್ಮ
ಪಿಶುನತೆ = ಪಿಸುಣತೆ; ಚಾಡಿ, ದೂರು
ಪುಂಡರೀಕ = ಶ್ರೀಹರಿ
ಪುರಜಿದ್ವರೇಣ್ಯ = ಶಿವ (ತ್ರಿಪುರದಹನಕಾರ) ವಿಷ್ಣು
ಪುರುಳು = ಸತ್ವ, ಅರ್ಥ
ಪುರುಹೂತ = ಇಂದ್ರ
ಫುಲ್ಲ = ಹೂವು, ಕಮಲ
ಪೂರ್ಣೇಂದು = ಹುಣ್ಣಿಮೆಚಂದ್ರ
ಪೂತನೆ = ಉದಯಿಸಿದವನೆ
ಪೂತೆ = ಪವಿತ್ರ
ಪೆಂಡೆಯ = ಕಾಲಿನ ಆಭರಣ, ಅಂದುಗೆ
ಪೆಗ್ಗೆ = ಕೊರಳು
ಪೇರು = ಹೆಸರು (ಮೂಲ: ತಮಿಳು)
ಪೇರ್ಚು = ಅಧಿಕವಾಗು
ಪ್ರೈಸರಿಸು = (ಪ್ರೇರಿಸು?) ಪ್ರೋತ್ಸಾಹಿಸು
ಪೊಂಬಟ್ಟೆ = ಪೀತಾಂಬರ
ಪೊಡಮಡು = ನಮಸ್ಕರಿಸು, ಶರಣಾಗು
ಪೊಡೆ = ಹೊಡೆ (ಅರಳಲು ಸಿದ್ಧವಾಗಿರುವ ಮೊಗ್ಗಿನ ರೂಪದ ತೆನೆ) ತುಂಬಿದ, ಉಬ್ಬಿದ
ಪ್ರಣಿತ = ಶರಣಾಗತ
ಪ್ರತಿಪಾಲಕ = ರಕ್ಷಕ

ಪ್ರೋಕ್ತ = ಹೇಳಲ್ಪಟ್ಟ
ಬಟ್ಟ = ದುಂಡಾದ , ಸುಂದರವಾದ
ಬಡಿಸು = ಅವರಿಸು
ಬನ್ನ = ಕಷ್ಟ
ಬಯಲು ಮಮತೆ= ನಿಮಿತ್ತ ಪ್ರೀತಿ, ಹುಸಿ ವಿಶ್ವಾಸ (?)
ಬಳವಿ = ಬೆಳವಣಿಗೆ
ಬಾಕುಳಿ = ಹೆಬ್ಬಯಕೆ
ಬಾಟ = ಕೂಲಿ, ಸಂಬಳ
ಬಾಣಸು = ಅಡಿಗೆ
ಬಾಯಬಡಿಕರು = ಬಡಾಯಿ ಕೊಚ್ಚುವವರು
ಬಾವಲಿ = ಒಂದು ಬಗೆಯ ಕರ್ಣಾಭರಣ
ಬಿಸನಾಡು = ಬಿಸಾಡು, ನಿರಾಕರಿಸು
ಬಿಸಿಗದಿರ್ = ರಶ್ಮಿ, ಕಿರಣ
ಬುಧಾಳಿ = ವಿದ್ವಜ್ಜನ ಸಮೂಹ, ಪಂಡಿತಮಂಡಲಿ
ಬೆಮರು = ಬೆವರು
ಬೆಳದಿಂಗಳ ಪೊಂಗಿನ = ಬೆಳದಿಂಗಳಂತೆ ತಂಪಾಗಿ, ಸುಂದರವಾಗಿ ಕಾಣುವ
ಬೆಳ್ನುಡಿ = ಸವಿನುಡಿ
ಬೋವಿಗ = ಸೇವಕ
ಭಂಜಿಸು = ಸಂಹರಿಸು, ನಿವಾರಿಸು
ಭರ್ಗ = ಶಿವ
ಭರಣ = ಪೋಷಣೆ
ಭವರೋಗ = ಸಾಂಸಾರಿಕ ದುಃಖ (ಶರಣಾಗತಿಗೆ ಅಡ್ಡಿಯಾಗುವ ಲೌಕಿಕ ಸುಖಾಸಕ್ತಿಯೆಂಬ ರೋಗ)
ಭವಾಂಬುಧಿ = ಬದುಕೆಂಬ ಸಾಗರ
ಭವಿ = ಭಕ್ತ
ಭಾಂಡಜ = ಪಾತ್ರೆಯಿಂದ ಹುಟ್ಟಿದವನು, ದ್ರೋಣ
ಭಾಗಧೇಯ = ಅದೃಷ್ಟ, ಪಾಲು
ಭಾಗ್ಯದಾ ಸಕರೆ = ಕಲ್ಲುಸಕ್ಕರೆ (?) ಶ್ರೀಮಂತಿಕೆ
ಭಾಪುರಿ = ತೋಳಿಗೆ ಧರಿಸುವ ಆಭರಣ
ಭಾವಜ = ಮನ್ಮಥ
ಭಾಸುರ = ಸುಂದರ
ಭೃಂಗಾಳಕ = ಕಳಸ
ಭೃಗುಜ = ಪರಶುರಾಮ
ಭೃತ್ಯ = ಸೇವಕ
ಭುಜಗ = ನಾಗರಹಾವು
ಭುವಿಸುರ = ಬ್ರಾಹ್ಮಣ
ಭೂಜ = ಮರ
ಭ್ರೂಮಧ್ಯ = ಹುಬ್ಬಿನ ನಡುವೆ
ಭೇರಿ = ಒಂದು ಬಗೆಯ ಚರ್ಮವಾದ್ಯ
ಭೋಗ = ಹಾವಿನಹೆಡೆ
ಮಂಜೀರ = ಕೆಂಪುಹರಳಿನ ಒಂದು ಬಗೆಯ ಆಭರಣ

ಮಂದಾರ = ಪಾರಿಜಾತ
ಮಕರಕುಂಡಲ = ಕಿವಿಯಭರಣ
ಮಕರಿ = ಮೊಸಳೆ
ಮಗುಳು = ಮತ್ತು
ಮಜ್ಜನಗೈಸಿ = ಪರಿಪೂರ್ಣತೆ ಸಾಧಿಸಿ
ಮಧುಪರ್ಕ = ನೈವೇದ್ಯ ಭಕ್ಷ್ಯ, ಫಲ ಅಭಿಷೇಕ ಸಾಮಗ್ರಿ
ಮದವಾರಣ = ಮದಕರಿ
ಮಸಗು = ಹರಡು
ಮಸ್ತಕ = ತಲೆ
ಮಹಿ = ಭೂಮಿ
ಮಾಣಿಸು = ನಿಲ್ಲಿಸು
ಮಾತುಳ = ಮಾವ
ಮಾಮಳಿದಡರು = ಹುಟ್ಟಡಗಿಸು. ದಯನೀಯವಾಗಿ ಸೋಲಿಸು
ಮಾರಮಣ = ನಮ್ಮ ಒಡೆಯ
ಮಾರಳದ = ಮರಳದ, ಶಾಶ್ವತವಾದ
ಮಿಗೆ = ಮತ್ತು
ಮಿಸುನಿ = ಚಿನ್ನ
ಮಿಸುಪ = ಹೊಳೆಯುವ, ಲಾವಣ್ಯ
ಮುಂಚು = ಮುಂದಾಗು (?)
ಮುಕುಟ = ಮಕುಟ, ಕಿರೀಟ
ಮೇದಿನಿ = ಭೂಮಿ
ಮಾಕ್ತಿಕ = ಮುತ್ತಿನ ಮೂಗುತಿ
ಯುಗ್ಮ = ಜೋಡಿ, ಜೊತೆ
ರಕ್ತಿ = ಆಸೆ
ರಜಕ = ಅಗಸ
ರಜನೀಕರ = ಚಂದ್ರ

ರದನ = ಹಲ್ಲು
ರಮೆ = ಲಕ್ಷ್ಮೀ
ರಸನ = ರುಚಿ, ಒಳ್ಳೆಯದು
ರಮಣೀಯಕ = ಸುಂದರ
ರಾಗ = ಕೆಂಪು, ಚೆಲುವು
ಲಂಡ = ದುರುಳ, ದುಷ್ಟ, ವರಟ
ಲಾವಿಕ = ಒಂದುಬಗೆಯ ಹಕ್ಕಿ (?)
ವಕ್ಷ = ವಕ್ಷಸ್ಥಳ, ಎದೆ
ವಟದೆಲೆ = ಆಲದೆಲೆ
ವಡಬಾನಲ = ಸಮುದ್ರದೊಳಗಿನ ಬೆಂಕಿ
ವರ್ಣಕರ = ವಣಿಕರ, ವ್ಯಾಪಾರಿಗಳ
ವಧೂಟಿ = ವಧು
ವನಜ = ಕಮಲ
ವರದಾಮ = ಸೊಗಸಿನದೇಹದ
ವಲಯ = ವರ್ತುಲಾಕಾರವಾದ, ಸುಂದರವಾದ
ವಸುಮತಿ = ಭೂಮಿ
ವಾಂಛೆ = ಬಯಕೆ
ವಾತ = ಮಾರುತ
ವಾರ್ತಿ = ವಾರ್ತೆ, ಸುದ್ಧಿ
ವಾರ್ಧಿ = ಸಮುದ್ರ
ವಾರ = ಮೀಸಲು
ವಾರಣ = ಆನೆ
ವಾರಿಜಾಕ್ಷ = ಕಮಲಾಕ್ಷ, ವಿಷ್ಣು
ವಾಸವ = ಇಂದ್ರ
ವಿಗಟ = ದೊಡ್ಡ
ವಿಗಡ = ಶೌರ್ಯ
ವಿಜಿತ = ಜಯಶಾಲಿ (?) ಗೆದ್ದ

ವಿಟಂಕ = ಅಗ್ರಭಾಗ, ತುದಿ
ವಿದೇಹಜ = ದೇವತೆಗಳು (?)
ವಿದ್ರುಮ = ಹವಳ
ವಿನುತ = ಹೊಗಳಲ್ಪಟ್ಟ
ವಿಮಾನ = ಗೋಪುರ
ವಿರಂಚಿ = ಬ್ರಹ್ಮ, ವಿಷ್ಣು, ಶಿವ
ವಿರಕ್ತ = ತ್ಯಜಿಸಿರುವವ
ವಿರಜೆ = ಪರಿಶುದ್ಧತೆ, ದೋಷರಹಿತತೆ
ವಿಶ್ವಂಭರೆ = ಲಕ್ಷ್ಮೀ
ವಿಶ್ರುತ = ಪ್ರಸಿದ್ಧ
ವಿಹಿತ = ಯೋಗ್ಯ
ವ್ಯಾಮೋದ = ಮೋಹಕ
ವ್ರಾತ = ಸಮೂಹ, ಹೊಂದಿದ
ಶಕ್ರ = ಇಂದ್ರ
ಶರಧಿಸುತೆ = ಲಕ್ಷ್ಮೀ
ಶರನಿಧಿ = ಸಮುದ್ರ
ಶಲಲಿತ = ಸುಂದರ
ಶವನ = ಶಿವ
ಶಶಾಂಕ = ಚಂದ್ರ
ಶಾರ್ದೂಲ = ಹುಲಿ, ವ್ಯಾಘ್ರ
ಶಿರೀಶ = ಬಾಗೆಹೂವು (ಒಂದು ಜಾತಿಯ ಹೂ)
ಶಿವ = ಈಶ್ವರ ಮಂಗಳ, ವಿಷ್ಣು ಮಂಗಳ, ಭದ್ರ, ಸಂತೋಷ, ಸರ್ಪ, ನೆಲ್ಲಿಗಿಡ, ಆಲ, ನೀರು, ಬಿಳುಪು (ಇತ್ಯಾದಿ ೨೪ ಅರ್ಥಗಳಿವೆ).
ಶಿಶುನಡೆ = ಅಲ್ಪತನ, ಸಣ್ಣತನ

ಶೂಲಿ = ಶಿವ
ಶೋಣಪ್ರವಾಳ = ಕೆಂಪುಹವಳ
ಶ್ರಿತ = ಆಶ್ರಯಿಸಿದ
ಶ್ರೀಮೆರೆ = ಮನೋಹರವಾಗಿ ಶೋಭಿಸು
ಶ್ರುತಿ = ವೇದ (ಹಯಗ್ರೀವಾ ವತಾರ)
ಶ್ರುತಿ ತತಿ = ವೇದಗಳು
ಸಂಕ್ರಂದನ = (ಇಂದ್ರ)
ಸಂದಣಿ = ಗುಂಪು
ಸಂಧಡಿ = ಸಂಚು, ಮೋಸ
ಸತ್ಯಮಿತೆ = ?
ಸರಸಿಜ ಭವಾಂಡ = ಬ್ರಹ್ಮಾಂಡ
ಸರಸಿಜೋದ್ಭವ = ಬ್ರಹ್ಮ
ಸಲುವುದು = ಸಲ್ಲುವುದು, ಹೊಂದುವುದು
ಸರ್ವಧೀ = ಎಲ್ಲ, ಗುಣ, ಬುದ್ಧಿಶಕ್ತಿ
ಸಸಿನೆ = ನೇರ, ಸರಿ
ಸಾಂದೀಪೋತ್ತಮ = ಅರ್ಜುನ,ಋಷಿ
ಸಾಧುಹೃದ್ಭಾಸ = ಸಾಧುಜನರ ಹೃದಯದಲ್ಲಿ ಭಾಸವಾಗುವವನು
ಸಾಲಾಯಿತೆ = ಸಾಲದಾಯಿತೆ
ಸಿಂಗಾಡಿ = ಬಿಲ್ಲು
ಸಿಂಹಮಧ್ಯ = ಸೊಂಟ, ಕಟಿ
ಸಿತ = ಶ್ವೇತ, ಬಿಳಿ
ಸುಖಾಮ = ಸೌಂದರ್ಯ
ಸುಜನಾಬ್ಜ = ಭಕ್ತಜನಸಾಗರ
ಸುದರ್ಶನ = ಚಕ್ರ
ಸುದಾರೆ = ಸುಂದರಸ್ತ್ರೀ

ಸುರಜ್ಯೇಷ್ಠ = ಬ್ರಹ್ಮ
ಸುರಪ್ರಮುಖ = ದೇವೇಂದ್ರ
ಸುರಭಿ = ಕಾಮಧೇನು (ಪರಶುರಾಮ ನವತಾರ)
ಸುರಭೀತೋಯ = ಕ್ಷೀರಸ್ಥಾನ
ಸುರಸಿಂಧು = ಗಂಗಾನದಿ
ಸುರಾಸುರರು = ದೇವತೆಗಳು
ಸೂಕರ = ವರಾಹ, ಹಂದಿ
ಸೂಡು = ಮುಡಿ, ಧರಿಸು
ಸೆಳ್ಳುಗುರು = ಚೂಪಾದ ಉಗುರು
ಸೇದು = ಗಸೆ, ಉಸಿರಾಟ ಕ್ರಿಯೆಯಲ್ಲಿ ಕಾಣಿಸಿಕೊಳ್ಳುವ ದಣಿವು
ಸೇವ್ಯೋತ್ತಮ = ಸೇವೆ ಮಾಡಿಸಿ ಕೊಳ್ಳುವುದರಲ್ಲಿ ಶ್ರೇಷ್ಠನಾದವನು, ಶರಣಾಗತಪ್ರಿಯ, ವಿಷ್ಣು
ಸೌಮಾನ = ಸುಮನಾ, ಸುಂದರ, ಒಪ್ಪಿತ
ಸ್ಮರ = ಮನ್ಮಥ
ಸ್ಪೃಹೆ = ಆಸೆ
ಹಡಪ = ಎಲೆಅಡಿಕೆ ಚೀಲ
ಹಯದ = ಹಯವದನ (?) ಹಯಮುಖ
ಹರಿ = ಪರಿಹಾರ, ಬಿಡುಗಡೆ, ಸಿಂಹ, ವಿಷ್ಣು, ಕೃಷ್ಣ, ಶಿವ, ಬ್ರಹ್ಮ, ಯಮ, ವಾಯು, ಅಗ್ನಿ, ಇಂದ್ರ, ಸೂರ್ಯ, ಚಂದ್ರ, ಕಿರಣ, ನೀರು, ಚಿನ್ನ, ಕುದುರೆ, ಗಿಳಿ, ನವಿಲು, ಬೆಕ್ಕು, ದಿಕ್ಕು, ಬಿಳಿ (ಇತ್ಯಾದಿ ೩೨ ಅರ್ಥಗಳಿವೆ)
ಹರಿಣಿ = ಜಿಂಕೆ
ಹರಿವಂಶ = ಸೂರ್ಯವಂಶ, ಕೃಷ್ಣನ ಕುಲ
ಹರಿವಾಹನ = ವಿಷ್ಣು, ಕುದುರೆವಾಹನ
ಹರಿವಾಹಿನಿ = ವಿಶ್ವ, ಜಗತ್ತು ?
ಹರಿಸುತ = ಮನ್ಮಥ
ಹಸಗೆಡು = ವಿಕಾರವಾಗು, ಅಂದಗೆಡು
ಹಸ್ತಿ = ಆನೆ
ಹಾಟಕ = ಚಿನ್ನ
ಹಾಟಕವಸನ = ಚಿನ್ನದಬಣ್ಣದಬಟ್ಟೆ, ಪೀತಾಂಬರ
ಹಾರುವ = ಬ್ರಾಹ್ಮಣ
ಹಾವುಗೆ = ಪಾದುಕೆ
ಹುಲಿಹುಲಿಸು = ಸಮೃದ್ಧತೆ, ವಿಪುಲತೆ
ಹೇಮ = ಚಿನ್ನ, ಕನಕ
ಹೇಮಚೇಲ = ಪೀತಾಂಬರ
ಹೇಯ = ಒಲ್ಲದ, ನಿಕೃಷ್ಟ, ಅಸಹ್ಯ
ಹೊಗರು = ಕಾಂತಿ

ಅನುಬಂಧ-೨

ಟಿಪ್ಪಣಿಗಳು

(ಕೀರ್ತನೆಗಳ ಸಂಖ್ಯಾನುಕ್ರಮಣಿಕೆಯಲ್ಲಿ)

೧೧

ಇದು ವೈಕುಂಠದಾಸರು ರಚಿಸಿರುವ ಉಗಾಭೋಗ. ಶ್ರೀವೈಷ್ಣವ ತತ್ವದ ಮುಖ್ಯ ಅಂಶವಾದ ಲಕ್ಷ್ಮೀಸಮೇತ ವಿಷ್ಣುವಿನ ಕಲ್ಪನೆಯನ್ನು ಇದು ಅತ್ಯಂತ ಸುಂದರವಾಗಿ ನಿರೂಪಿಸುತ್ತದೆ. ಶ್ರೀದೇವಿಯ ಯೌವನಕ್ಕೆ ಕೊರತೆ ಬರುತ್ತದೆಂಬ ಕಾರಣದಿಂದ ಅವಳ ಎಲ್ಲ ಶಕ್ತಿಗಳನ್ನೂ ಶ್ರೀಹರಿಯೇ ಪಡೆದಿದ್ದಾನೆಂಬ ಭಾವ ತುಂಬ ವಿಶಿಷ್ಟವಾಗಿದೆ. ವಿಷ್ಣುವಿನ ಎದೆಯೊಳಗೇ ಲಕ್ಷ್ಮಿಯನ್ನು ಹೊಂದಿರುವ ಲಕ್ಷ್ಮೀಸಮೇತವಾಗಿ ವಿಷ್ಣುವಿನ ಹೆಸರು ಇರುವ ಶ್ರೀವೈಷ್ಣವ ಚಿಂತನೆಯನ್ನು ಇಲ್ಲಿಯ ಸಾಲುಗಳು ಹೇಳುತ್ತವೆ.

ಇಲ್ಲಿ 'ಪೇರ ' ಎಂಬ ಪದ 'ಹೆಸರು ' ಎಂಬ ಅರ್ಥದ ತಮಿಳಿನಲ್ಲಿ ಬಳಕೆಯಿರುವ ಪದ (ಮೂಲಕನ್ನಡದಲ್ಲೂ ಇದೆ) ಶ್ರೀವೈಷ್ಣವ ಧರ್ಮೀಯರು ತಮಿಳನ್ನು ಧಾರ್ಮಿಕ ಪರಿಭಾಷೆಯಾಗಿ ಬಳಸುತ್ತಿರುವುದರಿಂದ ಮತ್ತು ಬಹುಮಟ್ಟಿಗೆ ತಮಿಳು ಭಾಷೆಯನ್ನು ಬಲ್ಲವರಾದ್ದರಿಂದ ಇವರ ಕೀರ್ತನೆಗಳಲ್ಲಿ ತಮಿಳು ಪದಗಳು ನುಸುಳುವುದರಲ್ಲಿ ಸಹಜತೆಯಿದೆ.

೧೮

ದಾಸರ ಭಕ್ತಿಯ ಶಕ್ತಿಯನ್ನು ಇದರಲ್ಲಿ ಕಾಣಬಹುದು. ಭಕ್ತನೊಬ್ಬ ತನ್ನ ಭಕ್ತಿಯನ್ನೇ ಶಕ್ತಿಯನ್ನಾಗಿ ರೂಪಿಸಿಕೊಳ್ಳುವ ಸ್ಥಿತಿ ಉತ್ಕೃಷ್ಟವಾದ ಸಾಧನೆಯ ಸ್ಥಿತಿ. ಈ ಸ್ಥಿತಿಯಲ್ಲಿ ದೈವ-ಭಕ್ತರ ಅಂತರ ದೂರವಾಗಿ ಅತ್ಯಂತ ಸಮೀಪವರ್ತಿಯಾಗುತ್ತದೆ. ದೈವದಲ್ಲಿರುವ ಹುಳುಕುಗಳನ್ನು (ಗುಣವಿಶೇಷಗಳನ್ನೇ ಹುಳುಕುಗಳನ್ನಾಗಿಸಿಕೊಂಡು) ಅತ್ಯಂತ ಸಲಿಗೆಯಿಂದ ಜರಿಯುವ, ಸಂಭಾಷಣೆಯ ರೂಪದಲ್ಲಿ ಜಗ್ಗಿಸಿ ಕೇಳುವ ಸ್ಥಿತಿಯನ್ನು ಪಡೆಯುತ್ತದೆ. ಇದನ್ನೇ ನಿಂದಾಸ್ತುತಿ ಎಂದೂ ಗುರುತಿಸುತ್ತಾರೆ. ಇಂತಹ ಒಂದು ನಿಂದಾಸ್ತುತಿ ಇದಾಗಿದೆ.

ಶ್ರೀ ಹರಿಯ ಶೃಂಗಾರವನ್ನೇ ಇಲ್ಲಿ ಅವಗುಣವಾಗಿಸಿ ಜಗ್ಗಿಸುವ ಪರಿ ವಿಶೇಷವಾಗಿದೆ. 'ಬಾಲಬ್ರಹ್ಮಚಾರಿ ' ನುಡಿಗಟ್ಟನ್ನು ಅಣಕಿಸುವ ಪರಿಭಾಷೆಯಲ್ಲಿ ಬಳಸಲಾಗಿದೆ.

(ಸ್ವಾಮಿ ಕಾಣಿಸಿಕೊಂಡು ಕೋಲು, ಕಮಂಡಲ ಕೊಡೆಂದು ಪಡೆದುದನ್ನೇ ನೋಡುತ್ತಿದ್ದ ದಾಸರಿಗೆ ಸ್ವಾಮಿಯೇ ಬರೀ ತತ್ತ್ವಪದಗಳು ಸಾಕು ಶೃಂಗಾರವನ್ನು ಹೇಳು ಎಂದು ಕೇಳಿದಾಗ ಹೊರಟ ಕೃತಿ ಎಂದು ಸಂಪ್ರದಾಯದ ಪುಸ್ತಕದಲ್ಲಿ ಇದಕ್ಕೆ ಟಿಪ್ಪಣಿಯಿದೆ)

೨೨

ವೈಕುಂಠದಾಸರಲ್ಲಿ – ಶ್ರೀವೈಷ್ಣವ ಹರಿದಾಸರಲ್ಲಿ ವಿಶಿಷ್ಟವಾದ –ಆಳ್ವಾರಾಚಾರ್ಯರ ಸ್ತುತಿಗಳು ಕಂಡುಬರುವುದಿಲ್ಲ. ಬದಲಿಗೆ ಗುರು ಸ್ತುತಿ ರೂಪದಲ್ಲಿ ವಾದಿರಾಜ ರನ್ನು ಕುರಿತ ಮೂರು ಕೃತಿಗಳೂ (೨೨.೨೩.೨೪) ಅಚ್ಯುತದಾಸರನ್ನು ಕುರಿತ ಎರಡು ಕೃತಿಗಳೂ ಕಂಡುಬರುತ್ತವೆ. (೨೫,೨೬)

ವಾದಿರಾಜರಿಂದ ತುಂಬ ಪ್ರಭಾವಿತರಾಗಿರುವಂತೆ ಕಂಡುಬರುವ ವೈಕುಂಠದಾಸರು, ಅವರನ್ನು ಗುರುಸ್ಥಾನದಲ್ಲಿಟ್ಟು ಗೌರವಿಸಿರುವಂತೆ ಭಾಸವಾಗುತ್ತದೆ. ಇಲ್ಲಿ ವಾದಿರಾಜರನ್ನು ವೇದಶಾಸ್ತ್ರಗಳಿಗೆ ಹೊಸ ವ್ಯಾಖ್ಯಾನ ಮಾಡಿದವರು. ತಾರತಮ್ಯವನ್ನು ಹೋಗಲಾಡಿಸಿ ಅನ್ಯಧರ್ಮೀಯರನ್ನು ಸೌಹಾರ್ದತೆಯಿಂದ ಸ್ವೀಕರಿಸುವವರು ಎಂದು ಸ್ತುತಿಸಲಾಗಿದೆ. ತಮ್ಮನ್ನು ಗೌರವಿಸಿರುವ ಹಿನ್ನೆಲೆಯಲ್ಲಿ ಎರಡನೇ ನುಡಿ ವಿಶೇಷಾರ್ಥವನ್ನು ಪಡೆಯಬಲ್ಲುದಾಗಿದೆ.

ಈ ಕೃತಿಯಲ್ಲಿ ಕೆಲವು ಪಾಠದೋಷಗಳೂ ಲುಪ್ತಭಾಗಗಳೂ ಇದ್ದುದನ್ನು ಸರಿಪಡಿಸಿ ಊಹಾಪಾಠವನ್ನು [ ] ಕಂಸದಲ್ಲಿ ಕೊಟ್ಟಿದೆ.

೨೩

'ವೈಕುಂಠದಾಸರು ಶ್ರೀವಾದಿರಾಜರನ್ನು ಪ್ರಾರ್ಥಿಸಿರುವ ಕೃತಿ. ವಾದಿರಾಜರು ಇವರನ್ನು ಹೊಗಳಿದುದಕ್ಕೆ ಪ್ರತಿಯಾಗಿ ವಿನಯ ಪ್ರಕಟಿಸಿರುವಂತಿದೆ. ವಾದಿರಾಜರು ವೈಕುಂಠ ದಾಸರನ್ನು ಕುರಿತು ರಚಿಸಿರುವ ನಾಲ್ಕು ಕೃತಿಗಳಿದ್ದರೆ ವೈಕುಂಠದಾಸರೂ ವಾದಿರಾಜರನ್ನು ಕುರಿತು ಈ ಮೂರು ಕೃತಿಗಳನ್ನು ರಚಿಸಿದ್ದಾರೆ. ವಾದಿರಾಜರ ನಾಲ್ಕು ಕೃತಿಗಳೂ ವೈಕುಂಠ 'ದಾಸೋತ್ತಮ' ನ ಸ್ಥಾನದಲ್ಲಿಟ್ಟು ಸ್ತುತಿಸಿದವಾಗಿವೆ. ಇದನ್ನು ಗಮನಿಸಿದರೆ ವೈಕುಂಠದಾಸರು ವಾದಿರಾಜರಿಗೆ ಹಿರಿಯ ಸಮಕಾಲೀನರಾಗಿರುವಂತೆ ಕಂಡುಬರುತ್ತದೆ. ೨೩ರ ಕೃತಿಯಲ್ಲಿ ದಾಸರು ತಮ್ಮನ್ನು ಗೂಢವಾಸಿ ಕಡುಪಾತಕ ಸ್ವಾಮಿದ್ರೋಹಿ, ಮೂಢಮನುಷ್ಯ ಎಂದೆಲ್ಲ ಕರೆದುಕೊಳ್ಳುವ ಮೂಲಕ ತಮ್ಮನ್ನು ದಾಸನನ್ನಾಗಿ ಗುರುತಿಸಿದ್ದಕ್ಕೆ ಕೃತಜ್ಞತೆ ಭಾವವನ್ನು ವ್ಯಕ್ತಪಡಿಸಿರುವಂತಿದೆ.

೨೪

ಇದೂ ಸಹ ವಾದಿರಾಜರನ್ನು ಸ್ತುತಿಸಿರುವ ಕೃತಿ. ಇದರಲ್ಲಿ ಶ್ರೀ ಹರಿಏಕನಿಷ್ಠೆ ಸ್ಪಷ್ಟವಾಗಿದೆ.

ಮೂಜಗವನುದರದೊಳಿಟ್ಟ

ಏಕಮೇವಾದ್ವೀತಿಯಮೆಂಬಾಗಮಕೆ ಸಮನಾಗಿ

ಆದಿಮೂರ್ತಿ, ಚತುರ್ಮುಖಾದಿಶೇಷದೇವಾರಾಧ್ಯ

ಇತ್ಯಾದಿ ಪ್ರತಿಮೆಗಳು ಸರ್ವಂ ಹರಿಮಯ ಎಂಬುದನ್ನೆ ಕುರಿತದ್ದಾಗಿವೆ. ಇಲ್ಲಿ ಶ್ರೀ ಕೃಷ್ಣನ ವಟಪತ್ರಶಾಯಿ ಸಚಿತ್ರ ಸುಂದರವಾಗಿರುವಂತೆಯೇ ಅವನ ಗೊಲ್ಲ ರೂಪಿನ ಚಿತ್ರವೂ ಅಷ್ಟೇ ಸುಂದರವಾಗಿದೆ. ಆ ಕಾಲದ ಅತ್ಯಂತ ಸಹಜವಾದ ಗೋವಳರ ಉಡುಪಿನ ಚಿತ್ರವನ್ನೇ ಗೋಪಾಲಕ ಕೃಷ್ಣನಿಗೆ ಕಲ್ಪಿಸಲಾಗಿದೆ. ಇದೇ ಬಗೆಯ ಚಿತ್ರ ಇವರ ಇನ್ನೊಂದು ಉಗಾಭೋಗದಲ್ಲೂ ಇದೆ (೫೦) ಕೃಷ್ಣಾವತಾರದ ಚಿತ್ರಗಳ ಮೂಲಕವೇ ಇಲ್ಲಿಯ ಹರಿಯನ್ನು ಕಟ್ಟಿಕೊಡುವ ಚಿತ್ರ ಮನೋಹರವಾಗಿದ್ದು ಮೊದಲ ಮತ್ತು ಕೊನೆಯ ನುಡಿಯಲ್ಲಿ ಅವನ ಸರ್ವವ್ಯಾಪಕತೆಯನ್ನು ಹೇಳಲಾಗಿದೆ.

. ಶ್ರೀಕಾಂತ, ವಟದೆಲೆ, ಸಾಯುಜ್ಯ, ಶರಣಾಗತ ಮುಂತಾದ ಶ್ರೀ ವೈಷ್ಣವ ಪರಿಭಾಷೆಗಳೇ ಇಲ್ಲಿ ನೇರವಾಗಿ ಬಳಕೆಯಾಗಿದೆ. ' ಶ್ರೀಕಾಂತ ' ಶ್ರೀವೈಷ್ಣವ ಕಲ್ಪನೆಯ ಶ್ರೀಹರಿಯಾದರೆ 'ವಟದಲೆ ' ಶ್ರೀ ವೈಷ್ಣವ ತತ್ವದಲ್ಲಿ ವಿಶೇಷವಾಗಿ ಬಳಕೆಯಾಗುವ ಜಗದಾದಿಯ ಸೃಷ್ಟಿಕರ್ತನಾದ ಶ್ರೀಹರಿಯ ರೂಪವಿಶೇಷ. 'ಸಾಯುಜ್ಯ ' ಶ್ರೀವೈಷ್ಣವ ಮೋಕ್ಷ ಪರಿಭಾಷೆ ಮೋಕ್ಷವನ್ನು ಸಾಯುಜ್ಯಪದವಿ ಎಂದೇ ಈ ತತ್ವ ಹೇಳುತ್ತದೆ. 'ಶರಣಾಗತ ' ದಾಸರ 'ಪ್ರಪತ್ತಿ ಧರ್ಮ'ವನ್ನು ಸೂಚಿಸುತ್ತಿದೆ.

ಇದಕ್ಕೆ ವಾದಿರಾಜರು ದಾಸರು ಪ್ರಸಂಗ ಮಾಡುತ್ತಿರುವಾಗ ದಾಸರ ತೊಡೆಯ ಮೇಲೆ ಮಗುವಾಗಿ ಕಂಡ ಶ್ರೀ ಹರಿಯನ್ನು ವಾದಿರಾಜರು 'ದಾಸೋತ್ತಮನುನೀನೇ' ಎಂದು ಹಾಡಿದ್ದಕ್ಕೆ ದಾಸರು ಹೇಳಿದ ಕೃತಿ ಎಂಬರ್ಥದ ಸಂಪ್ರದಾಯದ ಟಿಪ್ಪಣಿಯಿದೆ. ಇದರಿಂದ ವಾದಿರಾಜರು ವೈಕುಂಠದಾಸರು ಪದೇ ಪದೇ ಭೇಟಿ ಮಾಡುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಇವರಿಬ್ಬರ ನಡುವಿನ ಸ್ತುತಿಗಳಿಗೆಲ್ಲ ಈ ಬಗೆಯ ಟಿಪ್ಪಣಿಗಳು ದೊರೆಯುತ್ತವೆ.

ಈ ಕೀರ್ತನೆಯನ್ನು ಕನ್ನಡ – ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಶ್ರೀ ಸುಧಾಕರರು ಸಂಪಾದಿಸಿರುವ ಪುಸ್ತಕದಲ್ಲಿ ಕನಕದಾಸರದ್ದೆಂದು ನೀಡಲಾಗಿದೆ. ಕನಕದಾಸರ

ಅಂಕಿತವಿಲ್ಲದಿದ್ದರೂ ಅವರದ್ದೆಂದು ಹೇಳುವ ಸಂಪಾದಕರು ಯಾವ ಆಧಾರವನ್ನೂ ನೀಡಿಲ್ಲ (ಇಂತಹ ಹಲವು ದೋಷಗಳು ಈ ಪುಸ್ತಕದಲ್ಲಿವೆ). ಅನಗತ್ಯವಾಗಿ ಕೃತಿಯ ಕರ್ತೃತ್ವದ ಗೊಂದಲವನ್ನು ಸೃಷ್ಟಿಸಿದ್ದಾರೆ. ಇದು ಸ್ಪಷ್ಟವಾಗಿ ವೈಕುಂಠದಾಸರ ಕೃತಿಯಾಗಿದೆ.

೨೫, ೨೬

ವೈಕುಂಠದಾಸರ ಕಾಲದಲ್ಲಿ ಅಚ್ಯುತವಿಠಲರೆಂಬ ಒಬ್ಬ ದಾಸರು ವೈಕುಂಠದಾಸರನ್ನು ಗೆಲ್ಲುವೆನೆಂದು ಬಿರುದಾವಳಿಯೊಂದಿಗೆ ಪಾಂಡುರಂಗದಿಂದ ಬಂದು ದಾಸರನ್ನು ಕೆಣಕಲು ಅವರ ಕಣ್ಣುಗಳೇ ಹೋದವೆಂದೂ ಪಶ್ಚಾತ್ತಾಪದಿಂದ ಶರಣಾಗಲು ಕರುಣಾಳುವಾದ ದಾಸರು ಶ್ರೀಹರಿಯನ್ನು ಈ ಎರಡು ಕೃತಿಗಳಿಂದ ಸ್ತೋತ್ರಗೈದು ಅಚ್ಯುತದಾಸರಿಗೆ ಕಣ್ಣು ಬರಿಸಿದರೆಂದೂ ಪ್ರತೀತಿಯಿದೆ. ಸಂಪ್ರದಾಯದ ಪುಸ್ತಕಗಳಲ್ಲಿ ಟಿಪ್ಪಣಿಯಿದೆ.

ಈ ಅಚ್ಯುತದಾಸರು ಯಾರು ಎಂಬುದು ನಿಶ್ಚಿತವಾಗಿಲ್ಲ. ಇವರ ಕಾಲದಲ್ಲಿ ಈ ಹೆಸರಿನ ಅಥವಾ ಅಂಕಿತದ ದಾಸರು ಇದ್ದ ಬಗ್ಗೆ ಸುಳಿವುಗಳಿಲ್ಲ. ಆದರೆ ಈ ಅಂಕಿತದಲ್ಲಿ (ಅಚ್ಯುತವಿಠಲ) ಹಲವು ಕೀರ್ತನೆಗಳು ಕಂಡು ಬರುತ್ತವೆ. ಈ ಬಗ್ಗೆ ಹೆಚ್ಚಿನ ಶೋಧ ಆಗಬೇಕಾಗಿದೆ.

ಒಟ್ಟಿನಲ್ಲಿ ಇದು ಆ ಕಾಲದಲ್ಲಿ ವೈಕುಂಠದಾಸರಿಗಿದ್ದ ಹಿರಿಮೆಯನ್ನು ತೋರಿಸುತ್ತದೆ. ೨೫ರಲ್ಲಿ ತಮ್ಮ ಕಣ್ಣು ನಾಲಗೆಯನ್ನೇ ಪ್ರತಿಯಾಗಿ ನೀಡುವ ಆಗ್ರಹ ಇದ್ದರೆ ೨೬ ರಲ್ಲಿ 'ವರನಾಮಸುಳಾದಿ ನೇಮದಿಂದ ಪಾಡು'ತ್ತಿದ್ದ ತಮ್ಮ ಸಾತ್ವಿಕ ಬದುಕನ್ನೇ ಸವಾಲಿಗೊಡ್ಡುವ ಧ್ವನಿಯಿದೆ. 'ನಾಮ ಸುಳಾದಿ' ಪದದಿಂದ ದಾಸರ ದಾಸವೃತ್ತಿ ಅಧಿಕೃತತೆಯನ್ನು ಪಡೆಯುತ್ತದೆ.

೨೭

ಇದು ದಾಸರ ಬಗ್ಗೆ ಒಂದು ಪವಾಡವನ್ನು ಹುಟ್ಟುಹಾಕಿರುವ ಕೃತಿ. ವೈಕುಂಠದಾಸರು ಮಾಡಿದ ಗೋದಾನ, ಅಂತರಂಗ ಭಕ್ತನ ದಾನ–ಕೈಗೊಳ್ಳಲು ಶ್ರೀಹರಿಯೇ ವೈಷ್ಣವರೂಪದಲ್ಲಿ ಬ್ರಾಹ್ಮಣನಾಗಿ ಒಂದೊಂದು ಗೋವಿಗೂ ಒಂದೊಂದು ರೂಪ ತಾಳಿ ಬಂದು ಗೋದಾನ ಪಡೆದು ಗುಡಿಯ ಸುತ್ತಲೂ ಕಟ್ಟಿ ಮುದ್ರೆಹಾಕಿ ಗೋಬಾಲಗಳಿಗೆ ಗಂಟೆಕಟ್ಟಿದ 'ದರ್ಶನ ದಸುತ್ತ ಈ ಕೀರ್ತನೆ ಹಬ್ಬಿದೆ. ' ಬಲಿಯಿತ್ತ ದಾನದ ಸವಿಯಂತೆ ಕರ್ಣನಕೈಯ ಹರಸಿದಾನವ ಕೊಂಡಂತೆ ಶ್ರೀಹರಿ ಪಡೆದ ದಾನಕ್ಕೆ ಕೃತಜ್ಞರಾಗಿರುವ ದಾಸರು ತಮ್ಮ ನೂರೊಂದು ಕುಲದವರ ಏಳ್ಗೆಯನ್ನು ಇಲ್ಲಿ ಬಯಸಿದ್ದಾರೆ. ಇದು ದಾಸರ ದೈವಸಾಕ್ಷಾತ್ಕಾರದ ಸಿದ್ಧಿಯನ್ನು ನಿರೂಪಿಸುವಂತಹುದು.

೨೮

ಇದೂ ದಾಸರ ಬಗ್ಗೆ ಇನ್ನೊಂದು ಪವಾಡ ಬೆಳೆಸಿರುವ ಕೃತಿ. ದೇವರ ದರ್ಶನ ಮಾಡಿ ದಾಸರು ಮನೆಗೆ ನಡೆದು ಬರುವಾಗ ಅವರಿಸಿದ ಕತ್ತಲು ಮಳೆಯಿಂದ, ದಾರಿಕಾಣದೆ ದಾಸರು ಕಂಗಾಲಾಗಿದ್ದಾಗ ಬೇಲಾಪುರದ ಚೆನ್ನಿಗರಾಯನೇ ದೀವಟಿಗೆಯವನಾಗಿ ಬಂದು ದಾಸರನ್ನು ಮನೆಗೆ ಮುಟ್ಟಿಸಿದ. ಅದಕ್ಕಾಗಿ ದಾಸರು ಕೊಟ್ಟ ಕಜ್ಜಾಯ ಪಡೆದ ಚಿತ್ರಣವಿಲ್ಲಿದೆ. ಇಲ್ಲಿಯ ವಿಶೇಷವೆಂದರೆ ಇದು ದಾಸರಿಗೆ ಮನವರಿಕೆಯಾಗಿರುವ ಪ್ರತಿಮೆಯಲ್ಲಿ ಕೊಟ್ಟ ಕಜ್ಜಾಯ ದೇವಾಲಯದ ಶ್ರೀಹರಿ ಮತ್ತು ಲಕ್ಷ್ಮಿಯರ ಪದತಳದಲ್ಲಿ ಅರ್ಧರ್ಧ ಇರುವುದರಲ್ಲಿ. ಈ ಪ್ರತಿಮೆ ಶ್ರೀವೈಷ್ಣವ ತತ್ವವಾದ ಲಕ್ಷೀ ಸಮೇತ ವಿಷ್ಣುವಿನ ಅಸ್ತಿತ್ವದ ಕಲ್ಪನೆಗೆ ಇಂಬು ಕೊಡುತ್ತದೆ.

೨೯, ೩೦, ೩೧

ಈ ಮೂರು ಕೃತಿಗಳು ದಾಸರ ವೈಯಕ್ತಿಕ ಜೀವನದತ್ತ ಬೆರಳು ಮಾಡುತ್ತಿವೆ. (ತಂದೆಯಿಂದ ಬಂದ ದೇವರ ಒಡವೆ) ಆಸ್ತಿ, ಐಶ್ವರ್ಯ, ಸ್ಥಾನ, ಬಿರುದು ಇತ್ಯಾದಿಗಳನ್ನು ನಿರಾಕರಿಸಿ ಸ್ವಂತಕಾಲ ಮೇಲೆ ನಿಂತ ಸೂಚನೆಯಿದೆ. ೩೦ರ ಐದನೆಯ ನುಡಿ ಮದುವೆಗೆ ಮುಂಚಿನದೆಂಬ (ಈ ಕೃತಿರಚನೆ) ಸೂಚನೆಯನ್ನು ನೀಡುತ್ತಿದೆ. ೩೧ ಶ್ರೀವೈಷ್ಣವ ಕಲ್ಪನೆಯ ಮೋಕ್ಷದ ತತ್ವವನ್ನು ಹೇಳುವುದರೊಂದಿಗೆ ಶ್ರೀಹರಿಯೇ ತಮಗೆ ಊಳಿಗ ಮಾಡಿರುವ ವಾದಿರಾಜರಂತಿಹ ಹಿರಿಯರೆಲ್ಲ ಹೊಗಳಿರುವ ಬಗೆಗಿನ ಧನ್ಯತೆಯಿದ್ದರೂ ಈ ಲೌಕಿಕ ಆಮಿಷಗಳೇ ತಮ್ಮ ಶರಣಾಗತಿಗೆ ಎಲ್ಲಿ ಅಡ್ಡಿಯಾಗುತ್ತದೋ ಎಂಬ ಭೀತಿಯೂ ಇರುವಂತೆ ಇದೆ. ಇದರಲ್ಲಿ ದಾಸರ ತಂದೆಯ ಹೆಸರು ತಿರುಮಲಾರ್ಯರೆಂದೂ ಇವರು ವರ್ಣಕ ವೃತ್ತಿಯವರಾಗಿದ್ದರೆಂದೂ ತಿಳಿದು ಬರುತ್ತಿದೆ. ಈ ವರ್ಣಕ ಎಂಬ ಪದಕ್ಕೆ ಶಾಸ್ತ್ರಜ್ಞ ವಿದ್ವಾಂಸ, ಎಂಬ ಅರ್ಥವೂ ಇದ್ದು ಆ ಕಾಲದ ರಾಜಗುರುವಾಗಿದ್ದ ತಾತಾಚಾರ್ಯರೇ ಎಂಬುದನ್ನು ಪರಿಶೀಲಿಸಬೇಕಿದೆ. 'ಚಕ್ರವರ್ತಿ' ಎಂದು ಕರೆದಿರುವುದೂ ಒಡವೆ, ಬಿರುದು ಕಿರೀಟಾದಿಗಳ ಉಲ್ಲೇಖಗಳೆಲ್ಲ ಈ ಊಹೆಗೇ ಸಮೀಪವಾಗಿದೆ. ೨೯ರಲ್ಲಿ ಹೆಂಡತಿಯ ಒಲವಿನ ಬಗ್ಗೆ ಪ್ರಸ್ತಾಪವಿದ್ದರೂ ಸತಿಪತಿ ಭಾವವನ್ನು ವ್ಯಕ್ತಪಡಿಸುವ ಭಾವವನ್ನು ಕಾಣಬಹುದು.

೩೨

ಶಿಷ್ಯಳಾದ ವೈಶ್ಯೆ ಮಾದಮ್ಮನ ಪುತ್ರನನ್ನು ಶಿಷ್ಯನನ್ನಾಗಿ ಮಾಡಿಕೊಂಡುದರಿಂದ ಬ್ರಾಹ್ಮಣರೆಲ್ಲರೂ ದಾಸರಿಗೆ ಬಹಿಷ್ಕಾರವಿತ್ತು ಶ್ರಾದ್ಧದ ಊಟಕ್ಕೆ ಹೋಗದಿರಲು ಶ್ರೀಹರಿಯೇ ಬ್ರಾಹ್ಮಣ ರೂಪದಿಂದ ಬಂದುದನ್ನು ಈ ಕೃತಿ ಹೇಳುತ್ತದೆಂದು ಸಂಪ್ರದಾಯದ ಪುಸ್ತಕಗಳಲ್ಲಿ

ಟಿಪ್ಪಣಿಯಿದೆ. ಇಲ್ಲಿ ಶ್ರಾದ್ಧದ ಪರಿಭಾಷೆಯ ವಿವಿಧ ಪದಗಳ ಪ್ರಯೋಗದ ವೈಶಿಷ್ಟ್ಯವಿದೆ. 'ಶ್ರಾದ್ಧ' ವೈದಿಕ ಸಂಪ್ರದಾಯದಲ್ಲಿ ಆಚರಣೆಯಾಗುವ ವಿಧಿ. ತಪ್ಪದೆ ಪಾಲಿಸಬೇಕಾಗಿರುವ ಪೂರ್ವಿಕರ ಸ್ಮರಣೆಯ ವ್ರತ. 'ಬೆಳ್ಳಿಯ ಬಟ್ಟಿನ ಎಣ್ಣೆಗಂಪಿನ' ದಲ್ಲಿ ನಿಮಂತ್ರಣದ (ಊಟಕ್ಕೆ ಅಹ್ವಾನಿಸಿರುವ ಬ್ರಾಹ್ಮಣರು) ಮೂವರ ಸೂಚನೆಯಿದ್ದು ಅವರು ಆಯಾ ಸ್ಥಾನಕ್ಕೆ (ಪಿತೃ, ವಿಷ್ಣು, ವಿಶ್ವೇದೇವ) ವಿಧಿವತ್ತಾಗಿ ಬಂದು ಕುಳಿತಿರುವ ಚಿತ್ರಣವಿದೆ. ಇಲ್ಲಿಯ ಶ್ರೀಹರಿಯ ಈ ಲೀಲೆಯನ್ನು ದಾಸರು ಧನ್ಯತೆಯಿಂದ ಸ್ವೀಕರಿಸಿದ್ದು ಪಿರಿಯವಾಯ್ತು ಎಂದು ಉದ್ಧರಿಸುವ ಮತ್ತು ತಮ್ಮ ಕುಲಕೋಟಿಗೇ ಪರಮಪದವಾಯ್ತು ಎನ್ನುವಲ್ಲಿ ಕೃತಕೃತ್ಯತೆಯಿದೆ.

೩೯

ಶ್ರೀದಾಸರು ವರದನೆಂಬ ಪರಿಚಾರಕನನ್ನು ಶೌಚಕ್ಕೆ ನೀರನ್ನು ತರುವಂತೆ ಹೇಳಲು ಆ ಪರಿಚಾರಕನು ಮಲಗಿದ್ದ ಕಾರಣ ಶ್ರೀ ಕೇಶವನು ತಾನೇ ವರದನಾಕಾರದಿಂದ ಸುತ್ತುತ್ತಿದ್ದ ನೀರನ್ನು ಕೊಡಲು ಕೈಸುಟ್ಟು ಪಾತ್ರೆಯನ್ನು ಬಿಸುಟಾಗ ನೆತ್ತಿಗೆ ತಗಲಿ ರಕ್ತ ಬಂದದ್ದು, ಮಲಗಿದ್ದ ಪರಿಚಾರಕನು ಎದ್ದಾಗ ತಿಳಿಯಲು ಆಗ ದೇವರನ್ನು ಪಶ್ಚಾತ್ತಾಪದಿಂದ ಸ್ತೋತ್ರ ಮಾಡಿದ ಕೀರ್ತನೆ ಎಂದು ಇದಕ್ಕೆ ಸಂಪ್ರದಾಯ ಪುಸ್ತಕದಲ್ಲಿ ಟಿಪ್ಪಣಿ ಇದೆ. ಎರಡನೆಯ ನುಡಿಯಲ್ಲಿ ಇದಕ್ಕೆ ಸೂಚನೆಯೂ ಇದೆ. ಭೃಗುವಿನ ಪ್ರಸಂಗ ಮತ್ತು ಯುದ್ಧಭೂಮಿಯಲ್ಲಿನ ಭೀಷ್ಮನ ಹೊಡೆತಗಳನ್ನು ತನ್ನ ಅರಿಯದೆ ಹೊಡೆದ ಕ್ರಿಯೆಗೆ ಹೋಲಿಸಿಕೊಂಡಿರುವ ಪರಿ ತಮ್ಮ ಅಸಹಾಯಕ ಸ್ಥಿತಿಯಿಂದ ಹೀಗಾಯಿತೆಂಬುದಕ್ಕೆ ನೀಡುವ ಸಹಜವಾದ ಸಾಮಾಜಿಕ ಪ್ರತಿಮೆಗಳ ಪರಿ ಅತ್ಯಂತ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಈಚಿನ ಪುಸ್ತಕ 'ಕನಕದಾಸರ ಕೀರ್ತನೆಗಳು' (ಪ್ರ: ಕ.ಸ.ನಿ.ಸಂ.ಸುಧಾಕರ) ದಲ್ಲಿ ಇದನ್ನೂ ಕನಕದಾಸರ ಹೆಸರಿನಲ್ಲಿ ಗುರುತಿಸಲಾಗಿದೆಯಾದರೂ ಅದಕ್ಕೆ ಆಧಾರವಿಲ್ಲ. ಅಂಕಿತವೂ ಸಮರ್ಥನೀಯವಾಗಿಲ್ಲ. ಇದು ವೈಕುಂಠದಾಸರ ಸುತ್ತ ಹಬ್ಬಿರುವ ಪವಾಡಸೂಚನೆಯೂ ಸ್ಪಷ್ಟವಾಗಿರುವದರಿಂದ ಕನಕದಾಸ ರದ್ದಾಗಲು ಸಾಧ್ಯವಿಲ್ಲ.

೪೦, ೪೧

ಇದು ಮನಸ್ಸಿನ ಸಂಸಾರವನ್ನು ಅತ್ಯಂತ ಸುಂದರವಾಗಿ ನಿರೂಪಿಸಿರುವ ತಾತ್ವಿಕ ಚಿಂತನೆಯೂ ಆಗಬಲ್ಲ ಆತ್ಮನಿವೇದನೆಯ ಕೃತಿ. ಆಸೆ ಮತ್ತು ಲಜ್ಜೆಗಳನ್ನೇ ಇಬ್ಬರು ಹೆಂಡಿರನ್ನಾಗಿ ಕಲ್ಪಿಸಿಕೊಂಡು ಮನಸ್ಸಿನ ಮೇಲಾಗುವ ಅವುಗಳ ಮೇಲಾಟವನ್ನು ತುಂಬ ಸಹಜವಾಗಿ ಚಿತ್ರಿಸಲಾಗಿದೆ.

ಆಸೆಯಿಂದ 'ನರ' ಎಂದೂ ಲಜ್ಜೆಯಿಂದ 'ಹೃದಯೇಶ ' ಎಂದೂ ಸಂಬೋಧಿಸುವ ರೀತಿಯಲ್ಲೇ ಅವುಗಳ ಸ್ಥಾನವನ್ನು ಸೂಚಿಸಿರುವ ದಾಸರು ಇವೆರಡರ ಸೆಳೆತಕ್ಕೊಳಗಾಗಿರುವ ಮನಸ್ಸನ್ನು ಸ್ಥಿರಗೊಳಿಸೆಂದು 'ಲಕ್ಷ್ಮಿಯರಸ ಶ್ರೀಕೃಷ್ಣ'ನನ್ನು ಪ್ರಾರ್ಥಿಸಿದ್ದಾರೆ. ಇವರಿಬ್ಬರ ಕಾಟ 'ಸೀಗೆಯೊಳಗಿದ್ದ ಬಾಳೆಯಂತಾದುದು ' ಎಂಬ ಗಾದೆಯಲ್ಲಿ ಸಮೀಕರಿಸಿರುವ ಪರಿಯೂ ಸೊಗಸಾಗಿದೆ.

ದಾಸರಿಗೆ ತಿರುಮಲಮ್ಮ ಎಂಬ ಹೆಂಡತಿಯಿದ್ದುದನ್ನು ಪ್ರಾಯಶಃ ಈ (೪೧) ಕೀರ್ತನೆಯ ಹಿನ್ನೆಲೆಯಲ್ಲಿಯೇ ಸಂಪ್ರದಾಯದ ಪುಸ್ತಕಗಳು ಕಲ್ಪಿಸಿರಬಹುದು. ಆದರೆ ಕೇಶವದಾಸರು ಹೆಸರಿಸಿರುವ 'ಸೌಮ್ಯನಾಯಕಿ'ಗೆ ಆಧಾರ ತಿಳಿದು ಬರುವುದಿಲ್ಲ. ಇಲ್ಲಿ ತಿರುಮಲೆಯಂತೆ ಎಲೆಯಡಕೆ ಮಡಚಿಕೊಟ್ಟು ಕಾಲೊತ್ತಿದ ಶ್ರೀಹರಿಯ ದರ್ಶನ ಕಂಡಿದ್ದಾರೆ ಇದು ಮತ್ತು ಸೇವಕನ ರೂಪದಲ್ಲಿ ಶೌಚಕ್ಕೆ ನೀರು ಕೊಟ್ಟು ಕಾಲಿಗೆ ಚಪ್ಪಲಿ ಕೊಡುವ ವರದನಂತೆ ಕಂಡಿರುವುದು ಈ ದರ್ಶನಗಳೆಲ್ಲ ಶರಣಾಗತಿ (ಪ್ರಪತ್ತಿ) ಯಲ್ಲಿ ಮುಳುಗಿದ ಭಕ್ತನೊಬ್ಬ ಜೀವ ದೈವದ ತಾದಾತ್ಮ್ಯತೆಯ ಸ್ಥಿತಿಯನ್ನು ತಲುಪುವ ಹಂತವಾಗಿ ಭಾಸವಾಗುತ್ತದೆ. ಅದನ್ನೇ ಇಲ್ಲಿ ದಾಸರೂ ಹೇಳಿದ್ದಾರೆ. 'ಗುರು-ಶಿಷ್ಯ, ಸ್ವಾಮಿ-ಭೃತ್ಯ, ದಂಪತಿಗಳೆಂಬ ತಾರತಮ್ಯಂಗಳೊಂದಿಲ್ಲವೆ ಸ್ವಾಮಿ' ಎಂಬಲ್ಲಿ ಅದು ಧ್ವನಿತವಾಗುತ್ತಿದೆ. ಶ್ರೀವೈಷ್ಣವ ತತ್ವದಲ್ಲಿ ಭಕ್ತ ದೇವರನ್ನು ಕಾಣುವ ವಿಶಿಷ್ಟಪರಿ ಇದು.

೪೨

ಇದು ಪ್ರಸಿದ್ಧವಾದ ಕನಕದಾಸರ ಕೃತಿಯಾದರೂ ವೈಕುಂಠದಾಸರ ಹೆಸರಿನಲ್ಲಿಯೂ ಇರುವುದು ಗಮನಾರ್ಹ. ಇದಕ್ಕೆ ವಾದಿರಾಜರು ವೈಕುಂಠದಾಸರು ರಾತ್ರಿ ೨೦ಗಳಿಗೆಯಲ್ಲಿ ಪ್ರಸಂಗ ಮಾಡುತ್ತಲೇ ದೇವರ ದರ್ಶನಕ್ಕೆ ಹೋದಾಗ, ವಾದಿರಾಜರು ಸ್ತುತಿಸಿದರೂ ಬಾಗಿಲು ತೆರೆಯದಿದ್ದಾಗ ವೈಕುಂಠದಾಸರು ಸ್ತುತಿಸಿದ್ದು ಎಂದು ಸಂಪ್ರದಾಯದ ಪುಸ್ತಕಗಳಲ್ಲಿ ಟಿಪ್ಪಣಿಯೂ ಇದೆ. ವೈಕುಂಠದಾಸರ ಈ ಕೃತಿಯನ್ನು ಸರಳಗೊಳಿಸಿರುವಂತೆ ಕನಕದಾಸರ ಕೃತಿ ಕಂಡುಬಂದರೂ ಎರಡೂ ಕೃತಿಗಳಲ್ಲಿ ಅಂಕಿತಗಳು ಬಹಳ ಸ್ಪಷ್ಟವಾಗಿವೆ ಯಾದ್ದರಿಂದ ಕರ್ತೃತ್ವದ ಪ್ರಶ್ನೆ ಸ್ವಲ್ಪ ಜಟಿಲವೆನಿಸುತ್ತದೆ.

೪೯

ಈ ಸುಳಾದಿ ಕೃಷ್ಣಲೀಲೆಯಲ್ಲಿ ಅಪರೂಪವಾದ ಗೋಕುಲ ನಿರ್ಗಮನದ ಸಂದರ್ಭವನ್ನು ಚಿತ್ರಿಸುತ್ತದೆ. 'ಎಲ್ಲಿ ಯಮುನೆ ಇನ್ನೆಲ್ಲಿಯ ಮನೆವಾರ್ತೆ ' ಎಂಬ ಮಾತಿನಲ್ಲಿ ಗೋಪಿಕೆಯರ ಅಗಲಿಕೆಯ ನೋವು ಮಡುಗಟ್ಟಿದೆ. ಈ ಅಗಲಿಕೆಯನ್ನು, ವಿರಹವನ್ನು

ಮರೆಯಿಸುವ ಬದಲು ಮಧುರೆಯಲ್ಲಿ ನಿನಗೆ ನಡೆದ ಬಿಲ್ಲು ಹಬ್ಬ ನಮ್ಮಲ್ಲಿ ಇನ್ನಷ್ಟು ವೇದನೆಯನ್ನು ಹುಚ್ಚನ್ನು ಹಿಡಿಸಿದೆ (ನಿನ್ನ ಬಿಲ್ಲು ಹಬ್ಬ ಸ್ಮರಗೆಮ್ಮನೊಪ್ಪಿಸಿತು) ಎಂಬ ಭಾವ ಗೋಪಿಕೆಯರ ಮಾನಸಿಕ ತೊಳಲಾಟಕ್ಕೆ ನಿದರ್ಶನವಾಗಿದೆ.

ಈ ಬಿಲ್ಲುಹಬ್ಬ ಮತ್ತು ವಿರಹಭಾವವನ್ನು ಕುರಿತ ಇದೇ ಬಗೆಯ ಕೆಲವು ಕೃತಿಗಳು ಲಕ್ಷ್ಮೀಶನ ಹೆಸರಿನಲ್ಲೂ ಕಂಡುಬರುತ್ತವೆ. ಈ ಕಾಲದಲ್ಲಿ ವಿಜಯನಗರದರಸರ ಅಳ್ವಿಕೆಯಲ್ಲಿ ಈ ಬಿಲ್ಲುಹಬ್ಬದ ಸಂತೋತ್ಸವ ಮುಂತಾದ ಹೆಸರಿನ ಹಬ್ಬವೊಂದರ ಆಚರಣೆಯಲ್ಲಿ ಇದ್ದುದನ್ನು ಅನೇಕ ಶಾಸನಗಳು ಉಲ್ಲೇಖಿಸುತ್ತವೆ. ಕನಕದಾಸರ ಮೋಹನತರಂಗಿಣಿಯಲ್ಲಂತೂ ಇದರ ವಿವರವಾದ ವರ್ಣನೆಯೇ ಬರುತ್ತದೆ.

೬ಮತ್ತು ೭ನೆಯ ನುಡಿಗಳಲ್ಲಿ ಗೋಪ ಗೋಪಿಕೆಯರಲ್ಲಿ ಕೃಷ್ಣ ವಿರಹದಿಂದಾಗಿ ಬದುಕಿನ ಸಾಮಾಜಿಕ ಅಸ್ತವ್ಯಸ್ತತೆಯ ಸೂಚನೆಗಳು (ಕಳ್ಳರಾಗಿ ತಿರುಗಿದವರು, ತರುಣಿಜನರತ್ತ ಹರಿದವರು ಇತ್ಯಾದಿ) ಎಂದು ಅರ್ಥೈಸಬಹುದಾದರೂ ಅದರೊಂದಿಗೆ ಇದೇ ಬಗೆಯ ಜೀವನ ವಿವರವನ್ನು ಹೊಂದಿರುವ ತಿರುಪ್ಪಾಣಾಳ್ವಾರರು ಮತ್ತು ತಿರುಮಂಗೈ ಆಳ್ವಾರರ ಬದುಕಿನ ಪ್ರಸಂಗಕ್ಕೂ ಹೊಂದಿಕೆಯಾಗುತ್ತದೆ. ೬ನೇ ನುಡಿ ಕುಮುದವಲ್ಲಿಯನ್ನು ವರಿಸುವುದಕ್ಕಾಗಿ ಆಕೆ ಹೇಳಿದಂತೆ ಪ್ರತಿದಿನ ಶ್ರೀವೈಷ್ಣವರಿಗೆ ತದಿಯಾರಾಧನೆ ನಡೆಸುವುದಕ್ಕಾಗಿ ಕಳ್ಳತನ ದರೋಡೆ ಮಾಡುತ್ತಿದ್ದು ಶ್ರೀಹರಿಯಿಂದಲೇ ಆಳ್ವಾರರಾಗಿ ತಿರುಗಿದ ತಿರುಮಂಗೈ ಆಳ್ವಾರರನ್ನು ೭ ನೇ ನುಡಿ ಹರಿಭಕ್ತರಾಗಿದ್ದವರು ವೇಶ್ಯೆ ದೇವದೇವಿಯ ಸಂಗಕ್ಕೆ ಬಿದ್ದು ಶ್ರೀಹರಿಯಿಂದಲೇ ಕಳ್ಳತನದ ಆರೋಪಕ್ಕೊಳಗಾಗಿ ಮರಳಿ ಭಕ್ತರಾಗುವ ತಿರುಪ್ಪಾಣಾಳ್ವಾರರನ್ನೂ ಸೂಚಿಸುವಂತಿದೆ.

ಹಾಗೆಯೇ ಇದು ದಾಸರ ಕಾಲದಲ್ಲಾಗಿರುವ ರಾಜಕೀಯ ಸಂಘರ್ಷ (ಮುಸಲ್ಮಾನರದಾಳಿ ಇತ್ಯಾದಿ) ದಿಂದ ಸಮಾಜದಲ್ಲಾಗಿರುವ ನೈತಿಕ ಅಧಃಪತನವನ್ನು ಧ್ವನಿಸುವಂತಿದೆ. ಈ ೬,೭ನೇ ನುಡಿಗಳಲ್ಲಿ ಪಾಠಗಳ ಪುನರಾವರ್ತನೆಯಿದ್ದುದನ್ನು ಸರಿಪಡಿಸಿ ಕೆಲವು ಊಹಾಪಾಠಗಳನ್ನು ಮಾಡಿದೆ.

೫೩

ಈ ಕೃತಿ ಸಾಮಾಜಿಕವಾಗಿ ಮುಖ್ಯವೆನಿಸುತ್ತದೆ. ಇಲ್ಲಿ ಬರುವ 'ವಸುಮತಿಯ ಸುರರ ವಧೆ ಘನವಾಯಿತಲ್ಲ' ಎಂಬ ಸಾಲು ಮಹಮ್ಮದೀಯ ಹಾವಳಿಯ ಸೂಚನೆಯನ್ನು ಧ್ವನಿಸುವಂತಿದೆ. ವಿಜಯನಗರದರಸರ ಅವನತಿಯ ಕಾಲದ ಸಾಮಾಜಿಕ ಏಳುಬೀಳುಗಳತ್ತ ಈ ಕೃತಿ ಬೆಳಕು ಚೆಲ್ಲುತ್ತಿದೆ. ಜನರ ದೌರ್ಜನ್ಯದಿಂದಲೇ ಮಳೆ ಬೆಳೆಯಾಗದೆ ಕೃಷಿಕರಿಗೆ

ತೊಂದರೆಯಾಗಿದೆ. ಜೊತೆಗೆ ರಾಜರುಗಳ ಹಾವಳಿಯಲುಳುಹಿಲ್ಲ ಎಂದಿದ್ದಾರೆ. ಬಯಲ ಮಮತೆ ಬಾಯಿಬಡುಕರು ಮುಂತಾದ ವಿಶೇಷ ಪದಗಳನ್ನು ಬಳಸಿರುವ ಈ ಕೀರ್ತನೆ ಸಮಕಾಲೀನ ಸಾಮಾಜಿಕ ಕಾಳಜಿಯನ್ನು ಹೊಂದಿದೆ.

೫೪

ಇದು ಶ್ರೀವೈಷ್ಣವ ತತ್ವವನ್ನು ಪ್ರತಿಪಾದಿಸುತ್ತಿದೆ. 'ಪತಿ ಅರ್ಜುನನಿಗೆ ನಿರೂಪಿಸಿದರ್ಥವ' ಎಂಬ ಸಾಲಿನಲ್ಲಿ ಅರ್ಜುನನಿಗೆ ಶ್ರೀಕೃಷ್ಣ ಬೋಧಿಸಿದ ಭವಗಗ್ದೀತೆಯ ಹಾಗೂ ತೋರಿದ ವಿಶ್ವರೂಪದರ್ಶನದ ಸಾರ ಸಂಗ್ರಹದ ಶ್ಲೋಕಾರ್ಥದ ಸೂಚನೆಯಿದೆ. ಇದು ಶ್ರೀ ವೈಷ್ಣವ ಧರ್ಮದ ಚರಮಶ್ಲೋಕ. ('ಸರ್ವಧರ್ಮಾನ್ ಪರಿತ್ಯಜ್ಯ........) ಇದೇ ಪ್ರಪತ್ತಿ ಅಥವ ಶರಣಾಗತಿ ತತ್ವದ ಮೂಲ ಸೂತ್ರವಾಗಿದೆ. ಇದರ ಹಿನ್ನೆಲೆಯಲ್ಲಿ ಸಮಾಜಚಿಂತನೆ ಮಾಡಿರುವುದು ಈ ಕೀರ್ತನೆಯ ವೈಶಿಷ್ಟ್ಯ. ತಂದೆ-ತಾಯಿ, ಸತಿ-ಸುತ, ಬಂಧು-ಬಳಗ ಯಾವುದೂ ಶಾಶ್ವತವಲ್ಲ ಅವುಗಳ ಮೋಹಕ್ಕೆ ಸಿಕ್ಕಿದರೆ ದೈವಭಕ್ತಿ ಒದಗುವುದಿಲ್ಲವೆಂದು ಹೇಳುತ್ತ ಕೃಷ್ಣನೊಬ್ಬನ ನಂಬು ಎಂಬ ಹರಿಏಕ ನಿಷ್ಠೆಯನ್ನು ಸಾರುತ್ತಿದೆ.

೫೫, ೫೬

ವೈಕುಂಠದಾಸರ ಸೇವೆಯಲ್ಲಿದ್ದ ಮಾದಮ್ಮನೆಂಬಾಕೆಯ ೮ ವರ್ಷದ ಮಗನು ದಾಸರ ಮನೆಗೆ ಪೂಜಾ ಸಾಧನಗಳನ್ನು ತರಲು ಊರ ಹೊರಗೆ ಹೋಗಿ ತಾಳೆ ಹೂವನ್ನು ಕುಯ್ಯುತ್ತಿರಲು ಅಲ್ಲಿದ್ದ ಸರ್ಪವು ಕಡಿದು ಬಾಲಕನು ಮೃತನಾಗಲು ಜೊತೆಯ ಹುಡುಗರಿಂದ ಸಂಗತಿಯನ್ನು ತಿಳಿದ ಮಾದಮ್ಮ ಶವವನ್ನು ತಂದು ದಾಸರಿಗೆ ತೋರಿಸಿ ಶೋಕಿಸುತ್ತಿರಲು 'ತರುಣಿಯಿಂದ ಸ್ವಾಮಿ ರಕ್ಷಿಸ್ಯಾನೆಂದು' ಸಮಾಧಾನ ಹೇಳಿ ದೇವಸ್ಥಾನಕ್ಕೆ ಹೋಗಿ ನಂಜುಂಡನನ್ನು ಬದುಕಿಸು ಎಂದು ಸ್ವಾಮಿಯ ಬಳಿ ಸ್ತೋತ್ರ ಮಾಡಿದ ಕೀರ್ತನೆ ಎಂದು ಇದಕ್ಕೆ ಸಂಪ್ರದಾಯದ ಪುಸ್ತಕದಲ್ಲಿ ಟಿಪ್ಪಣಿಯಿದೆ. ಈ ಪವಾಡದ ಸತ್ಯಾಸತ್ಯತೆಯು ಏನೇ ಇರಲಿ ದಾಸರು ಸುತ್ತಲಿನ ಸಮಾಜದ ಜನರ ಕಷ್ಟ-ನಷ್ಟಗಳಿಗೂ ಸ್ಪಂದಿಸುತ್ತಿದ್ದರು ಎಂಬುದು ಇದರಿಂದ ವೇದ್ಯವಾಗುತ್ತದೆ. ಜಾತಿಭೇದವಿಲ್ಲದೆ ಜನರ ಕಷ್ಟಗಳನ್ನು ತಮ್ಮದೆಂದು ಸ್ವೀಕರಿಸುತ್ತಿದ್ದ ದಾಸರ ಸಾಮಾಜಿಕ ಕಾಳಜಿ ವಿಶಿಷ್ಟವಾದದ್ದು.

೫೬ನ್ನು ಬದುಕಿದ ನಂಜುಂಡನಿಗೆ ಆಶೀರ್ವಾದ ಮಾಡಿರುವ ಕೀರ್ತನೆ ಎಂದು ಸಂಪ್ರದಾಯದ ಪುಸ್ತಕ ಹೇಳುತ್ತದೆ . ಒಬ್ಬ ವ್ಯಕ್ತಿ ಸಮಾಜದಲ್ಲಿ ಬದುಕಬೇಕಾದ ರೀತಿಯನ್ನು ಈ ಕೃತಿ ಅತ್ಯಂತ ಸೊಗಸಾಗಿ ನಿರೂಪಿಸುತ್ತದೆ. ಯಾವುದೇ ಒಬ್ಬ ತಂದೆ ಅಥವಾ ಗುರು ಮಗ\ಶಿಷ್ಯನಿಗೆ ಹೇಳುವ ಸನ್ನಡತೆಯ ತಿಳುವಳಿಕೆಯಂತೆ ಇದು ಸಾರ್ವಕಾಲಿಕವಾಗಿದೆ.

೫೭

ಶ್ರೀಹರಿ ಏಕನಿಷ್ಠೆಯನ್ನು ಪ್ರತಿಪಾದಿಸುವ ವಿಶಿಷ್ಟ ಕೃತಿ ಇದು. ಹಲವು ಸಮಕಾಲೀನ ಗಾದೆ ಮಾತುಗಳನ್ನು ಬಳಸಿಕೊಂಡು ಅತ್ಯಂತ ಸರಳವಾಗಿ ಆದರೆ ಅಷ್ಟೇ ಖಚಿತವಾಗಿ ಅನ್ಯದೈವಗಳಿಗಿಂತ ಶ್ರೀಹರಿಯೊಬ್ಬನೇ ದೈವ ಎಂಬುದನ್ನು ಪ್ರತಿಪಾದಿಸಿದ್ದಾರೆ.

ಇಲ್ಲಿ ಬರುವ ಗಾದೆಗಳು ಆ ಕಾಲದ ಸಾಮಾಜಿಕ ಜೀವನದ ಚಿತ್ರಣವನ್ನು ನೈತಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತವಾದರೂ ಈ ತತ್ವದಾಚೆಗೂ ಈ ಕೃತಿ ನಿಂತು ಸಾಮಾಜಿಕತೆಯನ್ನು ಪಡೆಯುತ್ತದೆ.

೬೨

'ನೋಡಲೇಬೇಕು ಎನ್ನೊಡೆಯನ'....ಇದು ತಾಳ್ಳಪಾಕಂ (ತೆಲುಗು ವಾಗ್ಗೇಯಕಾರ ಅನ್ನಮಾಚಾರ್ಯರ ಮನೆತನದ ಬಗೆಗಿನ ವಿಶೇಷ ಕೃತಿ. ಅನ್ನಮಾಚಾರ್ಯರ ಮೊಮ್ಮಗ ಚಿನ್ನಯ್ಯನು ದಾಸರನ್ನು ನೋಡಲು ಬಂದಾಗ ಅವನಿಗೆ ತೋರಿಸುವವರಂತೆ ಬೇಲೂರು ಚನ್ನಕೇಶವನನ್ನು ಇಲ್ಲಿ ಸ್ತುತಿಸಲಾಗಿದೆ. ಈ ಚಿನ್ನಯ್ಯ ದಾಸರ ಕಿರಿಯ ಸಮಕಾಲೀನರೆಂದು ಈ ಕೃತಿಯ ಮೂಲಕ ತಿಳಿದು ಬರುತ್ತಿದೆ. ಈ ಚಿನ್ನಯ್ಯ ವೈಕುಂಠದಾಸರನ್ನು ಕುರಿತು ರಚಿಸಿರುವ ಎರಡು ತೆಲುಗು ಕೃತಿಗಳೂ ಕಂಡುಬಂದಿದ್ದು ಈ ಸಂಪುಟದ ಅನುಬಂಧಲ್ಲಿದೆ (೫೨೦,೫೨೧) ಇದರಲ್ಲಿಯೂ ಚಿನ್ನಯ್ಯನೇ ದಾಸರ ಮಹಿಮೆಯನ್ನು ತಿಳಿದು ಬೇಲೂರಿನವರೆಗೆ ಬಂದು ದಾಸರನ್ನು ಕಂಡು ಹೋಗಿರುವ ಸೂಚನೆಯೇ ಇದೆ. ವೈಕುಂಠದಾಸರನ್ನು ಸ್ತುತಿಸಿರುವ ಪುರಂದರದಾಸರ ಕೃತಿ (೫೧೫) ಕನಕದಾಸರ ಎರಡು ಕೃತಿಗಳೂ (೨೧೨,೫೧೩) ದಾಸರ ಹಿರಿಮೆಯನ್ನೇ ಎತ್ತಿ ಹಿಡಿಯುವಂತಿರುವುದರಿಂದ ಇವರೆಲ್ಲರಿಗೂ ವೈಕುಂಠದಾಸರು ಹಿರಿಯ ಸಮಕಾಲೀನರಾಗಿದ್ದು ಇಳಿವಯಸ್ಸಿನ ಅವಧಿಯಲ್ಲಿದ್ದರೆಂದೂ ಗೌರವಾನ್ವಿ– ತರಾಗಿದ್ದರೆಂದೂ ಹೇಳಬಹುದಾಗಿದೆ.

೬೪

ವೈಕುಂಠದಾಸರು ನಂಜನಗೂಡಿಗೆ ಭೇಟಿನೀಡಿದ ಸಂದರ್ಭದಲ್ಲಿ ಮೂಡಿದ ಕೃತಿ ಎಂದು ಇದಕ್ಕೆ ಟಿಪ್ಪಣಿಯಿದೆ. ವೈಕುಂಠ ಎಂಬ ಪದ ಬಿಟ್ಟರೆ ವೈಕುಂಠದಾಸರ ಅಂಕಿತದ ನೇರ ಉಲ್ಲೇಖ ಇದರಲ್ಲಿ ಕೆಂಡುಬಾರದಿದ್ದರೂ ಇದನ್ನು ವೈಕುಂಠದಾಸರದ್ದೇ ಎಂದು ಸಂಪ್ರದಾಯದ ವಾಡಿಕೆಯ ಹಿನ್ನೆಲೆಯಲ್ಲಿ ಸ್ವೀಕರಿಸಿದೆ 'ನಂಜುಂಡ ಮಹದೇವ ' ಎನ್ನುವುದು ಬೇರೊಂದು ಅಂಕಿತವಾಗಿರುವಂತೆ ಭಾಸವಾದರೂ ಈ ಪದದ ಬಳಕೆಯಲ್ಲಿ ದಾಸರು ಶ್ಲೇಷಾರ್ಥವನ್ನು ತಂದಿದ್ದಾರೆ.

ಮೊದಲೆರಡು ನುಡಿಗಳು ನಂಜನು ಉಂಡಿರುವ ಶ್ರೀಹರಿಯ ಎರಡು ಪ್ರತಿಮೆಗಳನ್ನು ಹೇಳಿದರೆ ಮೂರನೇ ನುಡಿಯಲ್ಲಿ ವಿಷಕಂಠನ ಕಲ್ಪನೆಯಿದ್ದರೂ ಅದನ್ನು ಶ್ರೀ ಹರಿ ಏಕನಿಷ್ಠೆಗೆ ಅನುಗುಣವಾಗಿ ಶಿವನನ್ನು 'ರುದ್ರಾಂತರಾತ್ಮ ವೈಕುಂಠ ಸಂಕರ್ಷಣ' ಎಂಬ ವಿಷ್ಣುವಿನ ರೂಪವನ್ನಾಗಿಯೆ ಕಲ್ಪಿಸಲಾಗಿದೆ. ಈ ತತ್ವದ ದೃಷ್ಟಿಯಿಂದಲೂ ಇದು ವೈಕುಂಠದಾಸರದ್ದೇ ಎನ್ನಲು ಅಡ್ಡಿಯಿಲ್ಲ.

೬೯

ಇದನ್ನು 'ಪಾದಾದಿ ಕೇಶಪರ್ಯಂತ ಸ್ತುತಿ' ಎಂದು ಹೆಸರಿಲಾಗಿದೆ. ಹಸ್ತಪ್ರತಿಯಲ್ಲಿ ಪ್ರತಿ ಪಾದದಲ್ಲಿಯೂ ಐಸಿರಿಯ ಎಂಬ ಪದ ಪುನರಾವರ್ತನೆಯಾಗುತ್ತಿದ್ದು ಇದು ಪಲ್ಲವಿಯ ಪದವಾಗಿದೆ. ಆದರೆ ಈ ಕೃತಿಯಲ್ಲಿ ಪಲ್ಲವಿ ಲಭ್ಯವಿಲ್ಲ. ಪಲ್ಲವಿ ಇದ್ದಿರಬೇಕು ಎನಿಸುತ್ತದೆ. ಆದ್ದರಿಂದ ಶೀರ್ಷಿಕೆ ಮತ್ತು ಪಲ್ಲವಿಯ ಪದ ಬಳಸಿ ಪೂರ್ತಿ ಪಲ್ಲವಿಯನ್ನು ಊಹಾಪಾಠ ಮಾಡಿದೆ. ೮ ಸಾಲುಗಳ ಈ ರಚನೆ ಕನ್ನಡಕ್ಕೆ ಹೊಸದು. ತಮಿಳಿನಲ್ಲಿ ಆಳ್ವಾರರ ಪ್ರಬಂಧಗಳು ಈ (ವೆಣ್ಣಾಃ) ಛಂದಸ್ಸಿನಲ್ಲಿವೆ. ಇದು ೮ ಸಾಲುಗಳಿಂದ ಕೂಡಿದ್ದು ೪ ವಿಷ್ಣುಗಣಗಳುಳ್ಳ ಪ್ರತಿಪಾದವನ್ನು ಹೊಂದಿರುತ್ತದೆ. ಮಾತ್ರೆಗಳಲ್ಲಿ ೧೮-೨೦ ಮಾತ್ರೆಗಳು ಕನ್ನಡದಲ್ಲಿ ಕಾಣಿಸಿಕೊಂಡಿವೆ. ವೈಕುಂಠದಾಸರು ಮತ್ತು ಲಕ್ಷ್ಮೀಶರ ಕೆಲವು ಕೀರ್ತನೆಗಳಲ್ಲಿ ಈ ಛಂದಸ್ಸು ಬಳಕೆಯಾಗಿದೆ.

ಕವಿ ತನ್ನ ಕಾವ್ಯ ಕೌಶಲ, ಪಾಂಡಿತ್ಯಕ್ಕೆ ಅನುಗುಣವಾಗಿ ಇಲ್ಲಿ ಪದ 'ಕೌಶಲವನ್ನು ಬೆಳಗಿದ್ದಾನೆ. ಪಾದದಿಂದ ಕೇಶದವರಗೆ ಅತ್ಯಂತ ಮನೋಹರವಾಗಿ ವರ್ಣನೆ ಮೂಡಿ ಬಂದಿದೆ. ಇದರಲ್ಲಿ ಈ ಕೆಳಕಂಡ ವಿಶೇಷವಾದ ಕಥಾ ಸಂದರ್ಭಗಳನ್ನು ಗಮನಿಸಬಹುದು.

ಧರಣಿಯನೀರಡಿಮಾಡಿದ ಪೆಂಪು: ಗಂಗೆಯನ್ನು ಉಂಗುಷ್ಠದ ಬೆರಳಿನಿಂದ ಭೂಮಿಗೆ ಹರಿಸಿದ ಪ್ರಸಂಗ(?).

ಕಲ್ಲಪೆಣ್ಮಾಡಿದ ಸೊಂಪು : ರಾಮಾವತಾರದಲ್ಲಿ ಕಲ್ಲನ್ನು ಸೃಷ್ಟಿಸಿ ಅಹಲ್ಯೆಗೆ ಶಾಪ ವಿಮೋಚನೆ ಮಾಡಿದುದು.

ಕುರುನೃಪಗರ್ವನಿರ್ವಾಹಾಪಗುಂಪು : ಕುರುನೃಪನ ಗರ್ವವನ್ನು ಇಳಿಸುವೋಪಾದಿಯಲ್ಲಿ ಕರ್ಣನ ಬಾಣ ಪ್ರಯೋಗ ಸಂದರ್ಭದಲ್ಲಿ ಅರ್ಜುನನ ರಕ್ಷಣೆಗಾಗಿ ಉಂಗುಟದಿಂದ ಭೂಮಿಯನ್ನೇ ಒತ್ತಿದ ಸಂದರ್ಭ(?).

ಸದಬ್ಜ ಸಂಭೃತದ ಪೊಳೆವ ಕೌಸ್ತುಭಮಣಿ: ಸಮುದ್ರ ಮಥನ ಕಾಲದಲ್ಲಿ ಉದಯಿಸಿದ ಕೌಸ್ತುಭ ಮಣಿಹಾರವನ್ನು ಧರಿಸಿದ ಪ್ರಸಂಗ.

ನೀಲಾಂಗದಳಾಂಗನೆಯರು, ಸುರಪುರ ಮಧ್ಯರಂಗದೊಳಂಗನೆಯರು: ವಿಷ್ಣುವಿನ ಪರಿವಾರ ದೇವತೆಗಳ ಅಥವಾ ಶ್ರೀಭೂನೀಳಾದೇವಿಯರು ಅಥವಾ ಸುರಪುರದ ಲಕ್ಷ್ಮೀಕಾಂತ ದೇವಾಲಯದ ಕೆತ್ತನೆಯ ವಿಗ್ರಹಗಳು ಎಂದೂ ಅರ್ಥೈಸಬಹುದು.

೭೧

ನಾಗಶಯನ, ನಾಗವರದ ಪರಮಪುರುಷ ಪದಗಳ ಮೂಲಕ ಶ್ರೀಹರಿಯನ್ನು ಕುರಿತದ್ದಾದರೂ ದಶಾವತಾರಗಳನ್ನು ಸ್ತುತಿಸುವ ಈ ಕೀರ್ತನೆ, ಶ್ರೀವೈಷ್ಣವ ಸಂಪ್ರದಾಯಕ್ಕೆ ಅನುಗುಣವಾದ ಬುದ್ಧಾವತಾರ ನಿಷೇಧವನ್ನು ಇಲ್ಲಿ ಸ್ಥಾಪಿಸಿದೆ. ಇದಕ್ಕೆ ಬದಲು ಸಾಮಾನ್ಯವಾಗಿ ಬಲರಾಮಾವತಾರವನ್ನು ಈ ಧರ್ಮದಲ್ಲಿ ಹೇಳಿದರೂ ತ್ರಿಪುರ ದಹನಾವತಾರವನ್ನೂ ಹೇಳಲಾಗುತ್ತಿದೆ. ಇಲ್ಲಿ ಈ ತ್ರಿಪುರಾಂತಕ ಕಲ್ಪನೆಯನ್ನು ತರಲಾಗಿದೆ. ತ್ರಿಪುರದ ಸಂಹಾರಕ್ಕಾಗಿ ಅವರ ಸುದತಿಯರ ವ್ರತಭಂಗ ಮಾಡಲು ಶ್ರೀಹರಿ ದಿಗಂಬರನಾಗಿ ನಿಲ್ಲುವ ಪ್ರತಿಮೆಯನ್ನು ಈ ಅವತಾರದಲ್ಲಿ ಕಲ್ಪಿಸಲಾಗುತ್ತದೆ.

ಲಕ್ಷೀಶನ ಸ್ಥಳ ನಿರ್ಧಾರದ ಚರ್ಚೆಯಲ್ಲಿ ಅವನ ಕಾವ್ಯದ ಉಲ್ಲೇಖದಲ್ಲಿ ಬರುವ ಈ ತ್ರಿಪುರ ಸಂಹಾರದ ವರ್ಣನೆ ಹಾಗೂ ಸುರಪುರದಲ್ಲಿರುವ ಲಕ್ಷ್ಮೀಕಾಂತ ದೇವಾಲಯದ ಕಂಬದ ದಶಾವತಾರದ ಶಿಲ್ಪಗಳಲ್ಲಿರುವ ದಿಗಂಬರ ಮೂರ್ತಿಯ ಚಿತ್ರಗಳ ಸಾಮ್ಯವನ್ನು ವಿದ್ವಾಂಸರು ತರುತ್ತಾರೆ. ಇದೂ ಇದೇ ಪ್ರತಿಮೆಯನ್ನು ತರುವ ಇವರ ಇನ್ನೊಂದು ಕೀರ್ತನೆಯೂ ಅದಕ್ಕೆ ನಿದರ್ಶನವಾಗಬಲ್ಲವು. ಕೊನೆಯ ಸಾಲಿನಲ್ಲಿ ಬರುವ ಲಕ್ಷ್ಮಿಯರಸ ಶ್ರೀವೈಷ್ಣವ ಕಲ್ಪನೆಯ ಶ್ರೀಹರಿಯೆ ಆಗಿದ್ದಾನೆ.

೭೨, ೭೩

ಸುಂದರವಾದ ಗೀತೆ, ಶ್ರೀಹರಿಯ ಸ್ತುತಿ. ಅವನ ಸುಂದರವಾದ ತಿಲಕದಲ್ಲಿ ಓಂಕಾರನಾದಮಯತೆ ಗೋಚರವಾಗುತ್ತದೆ ಎಂಬ ವಿಶೇಷ ವರ್ಣನೆ ಇಲ್ಲಿದೆ. (ಪ್ರಣವ ಗೋಚರ) ಮಹಾ ವಿಷ್ಣುವಿನ ವಿಶೇಷ ಅಭರಣಗಳಾದ ಮೌಕ್ತಿಕ, ಕೌಸ್ತುಭ, ಶ್ರೀವತ್ಸ, ವೈಜಯಂತಿಗಳ ಉಲ್ಲೇಖವಿದೆ. ಇವುಗಳನ್ನು ಶ್ರೀ ವೈಷ್ಣವದ ಪರಂಪರೆಯಲ್ಲಿ ಶ್ರೀಹರಿಗೆ ವಿಶೇಷವಾಗಿ ಗುರುತಿಸಲಾಗುತ್ತದೆ. ಅವನ ಹೊಳಪನ್ನು ಶತಕೋಟಿ ಕಿರಣತತಿ ಎಂದಿರುವಲ್ಲಿ ಪುರುಷಸೂಕ್ತದ ಛಾಯೆಯಿದೆ. ಅವನ ಚರಣಗಳನ್ನು 'ಹರ ಸುರೇಶ್ವರ ವಿರಂಚ್ಯಾದಿವಂದಿತ' ಎಂದಿರುವುದು ಶ್ರೀವೈಷ್ಣವ ತತ್ವವಾದ ಹರಿಏಕನಿಷ್ಠೆಯ ದ್ಯೋತಕವಾಗಿದೆ.

೭೫ರಲ್ಲಿ ಶರಣಾಗತಿಯ ತತ್ವವನ್ನು ಪ್ರತಿಪಾದಿಸಲಾಗಿದೆ. ಸಂಪನ್ನವಾದ ನಾದಮಯ ಪದಗಳ ಮೂಲಕ ಶ್ರೀ ಹರಿಯನ್ನು ವರ್ಣಿಸಲಾಗಿದೆ. ಸುರಪುರವನ್ನು ಇಲ್ಲಿ ಸುಮನಸಪುರ ಎಂದು ಉಲ್ಲೇಖಿಸಲಾಗಿದೆ. ಶ್ರೀ ಕೃಷ್ಣನಿಗೆ ಪ್ರಿಯವಾದ ಅತಸೀಕುಸುಮ (ಅಗಸೆಹೂ) ದ ಉಲ್ಲೇಖವಿದೆ. ಇದೂ ಸಹ ಶ್ರೀವೈಷ್ಣವ ಪರಿಭಾಷೆಯಲ್ಲಿ ಮಾತ್ರ ವಿಶೇಷವಾಗಿ ಬಳಸುವ ಪದ. ಇಲ್ಲಿಯೂ ಸಹ ಹರಿಏಕನಿಷ್ಠೆಯ ದ್ಯೋತಕವಾಗಿಯೆ ಶ್ರೀಹರಿಯನ್ನು ಕಲ್ಪಿಸಲಾಗಿದೆ. ಚತುರಾಸ್ಯನುತ, ದಿವಿಜೇಂದ್ರ ಸ್ತೋತ್ರ, ಶತಯಾಗಸುತಮಿತ್ರ ಇತ್ಯಾದಿ ಪದಗಳನ್ನು ನೋಡಬಹುದು.

೭೪

ಇದು ಪಾದಾದಿಕೇಶಪರ್ಯಂತಕ್ಕೆ ಪರ್ಯಾಯವಾಗಿ ರಚಿಸಿರುವ ಅದೇ ಮಾದರಿಯ ಶ್ರೀಕೇಶಾದಿಪಾದಪರ್ಯಂತ ಸ್ತುತಿಯ ಕೃತಿ. ಅದರಲ್ಲಿರುವ ವರ್ಣನೆಗಳೇ ಇಲ್ಲಿ ಸಾಕಷ್ಟು ಪುನರಾವರ್ತನೆಯಾಗುತ್ತವೆ.

'ಭ್ರೂಮಧ್ಯದೊಳೆಳವೆರೆಯಿಂದೊಪ್ಪುವ ನಾಮ'ದ ಮೂಲಕ ಶ್ರೀ ವೈಷ್ಣವ ಚಿನ್ಹೆಯಾದ ನಾಮದ ಉಲ್ಲೇಖವನ್ನು ಕಾಣಬಹುದು. ಇಲ್ಲಿ ನುಡಿಗಳ ವಿಂಗಡನೆ ಅಷ್ಟು ಸಮಂಜಸವಾಗಿ ಬಂದಿಲ್ಲ. ಪದ್ಯದ ಧಾಟಿಯನ್ನು ನೋಡಿದರೆ ನುಡಿಗಳೇ ಇಲ್ಲವೇನೋ ಎನಿಸಿ ದಂಡಕದಂತೆ ಮುಂದುವರಿಯುತ್ತಿದೆ. (ಇದು ದಂಡಕವೇ ಇದ್ದರೂ ಇರಬಹುದು). ಕವಿಗೆ ಸಹಜವಾದ ಕಾವ್ಯ ಭಾಷೆ ಈ ಎರಡೂ ಕೃತಿಗಳಲ್ಲಿ–ಅಷ್ಟೇ ಏಕೆ ಲಕ್ಷ್ಮೀಶನ ಎಲ್ಲ ಕೀರ್ತನೆಗಳಲ್ಲೂ– ನೋಡಬಹುದು. ಕೊನೆಯಲ್ಲಿ ಅಂಕಿತದ ಭಾಗದಲ್ಲಿನ ಪಾದ ಲುಪ್ತವಾಗಿರುವದರಿಂದ ಊಹಾಪಾಠವಾಗಿ ಸೇರಿಸಿದೆ.

೭೫

ಇದೊಂದು ಉದಯರಾಗ, ಸುಪ್ರಭಾತ, ಆದರೆ ಇಲ್ಲಿ ಎಚ್ಚರಿಕೆ ಎಂಬ ಪದ ಎಚ್ಚರವಾಗು ಎಂಬ ಅರ್ಥಕ್ಕಿಂತ 'ಜಾಗ್ರತೆ' 'ಹುಷಾರು' ಎಂಬ ಅರ್ಥದಲ್ಲೇ ಹೆಚ್ಚಾಗಿ ಪ್ರಯೋಗವಾಗಿದೆ.

ಕೃಷ್ಣನ ಬಾಲಲೀಲೆಯ ಮೋಹನ ರೂಪವನ್ನು ಇಲ್ಲಿ ಪ್ರತಿಮೀಕರಿಸಲಾಗಿದೆ. ಗೋಪಿಯರ ಮನೆಗೆ ಬರುವ ಕೃಷ್ಣನಿಂದ ಸಂಕಷ್ಟಕ್ಕೆ ಸಿಕ್ಕಬಹುದಾದ, ಅವನ ಮೋಹಕ್ಕೆ ಸೆಳೆತಕ್ಕೆ ಒಳಗಾಗಬಹುದಾದ ಗೋಪಿಯರಿಗೆ ಎಚ್ಚರಿಕೆಯನ್ನು ನೀಡುವ ಧ್ವನಿ ಇಲ್ಲಿದೆ. ಗೋಪಿಯರಷ್ಟೇ ಅಲ್ಲ ಅರಮನೆಯ ಸೇವಕಿಯರೂ ಇವನ ಸೆಳೆತಕ್ಕೊಳಗಾಗಬಹುದೆಂಬ ಮಾನವ ಸಹಜ ಯೌವನಾಸಕ್ತಿಯನ್ನು ಇಲ್ಲಿ ಅತ್ಯಂತ ಸುಂದರವಾಗಿ ಚಿತ್ರಿಸಿದ್ದಾರೆ.

೭೬

ಇದು ದಶಾವತಾರ ವರ್ಣನೆಯ ಹಾಡು. ಮೂರು ನುಡಿಗಳನ್ನು ಕ್ರಮವಾಗಿ ಹರಿ,ಶಿವ, ಸುರ ಪದಗಳಿಂದ ನಿರ್ಮಿಸಲಾಗಿದೆ. ಒಂದೊಂದು ಪದವನ್ನೂ ಪ್ರತಿಬಾರಿಯೂ ಭಿನ್ನ ಭಿನ್ನ ಅರ್ಥಗಳಲ್ಲೇ ಬಳಸಲಾಗಿದೆ. ಶಿವ ಪದ ಇಲ್ಲಿ 'ವಿಷ್ಣು ' ಅರ್ಥದಲ್ಲೇ ವಿಶೇಷವಾಗಿ ಬಳಕೆಯಾಗಿದೆ. ಹರಿ ಏಕನಿಷ್ಠೆಯನ್ನು ಈ ಪದಬಳಕೆಯಲ್ಲೂ ಸಾಧಿಸಿರುವಂತೆ ತೋರುತ್ತದೆ. 'ಹರಿಪದ' ವನ್ನು 'ಶ್ರೀಪಾದ' ಎಂದು ಶರಣಾಗತಿ ಪ್ರಪತ್ತಿತತ್ವದ ಹಿನ್ನೆಲೆಯಲ್ಲಿ ಬಳಸಲಾಗಿದೆ.

ಈ ಪದಪ್ರಯೋಗಗಳಲ್ಲಿ ಹಲವಕ್ಕೆ ಅರ್ಥ ಗೊಂದಲಗಳಿವೆ. ಅನ್ವಯ ಸಮಸ್ಯೆಯಿದೆ. ಇಲ್ಲಿಯ ಪದ ನಿರ್ಮಿತಿಗೆ ಕವಿ ತನ್ನ ಕಾವ್ಯ ಪ್ರತಿಭೆಯ ಸಾಮರ್ಥ್ಯದ ಸಹಾಯ ಪಡೆದಿರುವುದು ಸ್ಪಷ್ಟವಿದೆ. ಇತರರ ಕೀರ್ತನೆಗಳಿಗಿಂತ ಕವಿ ಲಕ್ಷ್ಮೀಶನ ಕೀರ್ತನೆಗಳು ಹೆಚ್ಚು ಕಾವ್ಯಮಯವಾಗಿರುವುದಕ್ಕೆ ಇದೇ ಕಾರಣವಾಗಿದೆ.

೭೮

ರಾಮನಾಮದ–ತಾರಕ ಅಥವ ಅಷ್ಟಾಕ್ಷರಿಯ–ಉಚ್ಚಾರಣೆಯೇ ಇಷ್ಟಾರ್ಥವನ್ನು ನೀಡುತ್ತದೆ ಎಂಬ ಶರಣಾಗತಿಯ ಸುಲಭೋಪಾಯವನ್ನು ಇಲ್ಲಿ ಹೇಳಿದೆ. ಅದಕ್ಕಾಗಿ ಪ್ರಹ್ಲಾದ, ವಿಭೀಷಣ, ದ್ರೌಪದಿ, ಸುಧನ್ವ, ಅಂಬರೀಷರ ಸಾಕ್ಷಿಗಳನ್ನು ನೀಡಲಾಗಿದೆ. ಸುಧನ್ವನ ಪ್ರತಿಮೆಯನ್ನು ಬಳಸಿರುವುದು ಇಲ್ಲಿ ವಿಶೇಷವಾಗಿದೆ. ಮಹಾಭಾರತದ ರಾಜಸೂಯ ಯಾಗದ ಕುದುರೆ ನಿಮಿತ್ತ ಯುದ್ಧ ಸರಣಿಯಲ್ಲಿ ಈ ಪ್ರಸಂಗ ಬರುತ್ತದೆ. ಕವಿಯೇ ಈ ಕಥಾ ವಸ್ತುವಿನ ಜೈಮಿನಿ ಭಾರತದ ಕರ್ತೃವಾಗಿರುವದರಿಂದ ಈಪ್ರತಿಮೆಯನ್ನು ಇಲ್ಲಿ ಬಳಸಿಕೊಂಡಿರುವುದರ ಔಚಿತ್ಯವಿದೆ.

ಯುದ್ಧಕ್ಕೆ ಹೊರಡುವ ಸಮಯದಲ್ಲಿ ಹೆಂಡತಿಯ ಆಸೆ ತೀರಿಸಲೋಸುಗ ಅನಿವಾರ್ಯವಾಗಿ ನಿಲ್ಲಬೇಕಾಗಿ ಬಂದುದರ ಅಪರಾಧಕ್ಕಾಗಿ ತಂದೆ ಹಂಸಧ್ವಜ ಅವನನ್ನು ಕುದಿಯುವ ಎಣ್ಣೆ ಕೊಪ್ಪರಿಗೆಯಲ್ಲಿ ಹಾಕುವ ರಾಜಾಜ್ಞೆ ಹೊರಡಿಸುತ್ತಾನೆ. ಸುಧನ್ವ ಶ್ರೀ ಕೃಷ್ಣನ ಪರಮ ಭಕ್ತನಾಗಿದ್ದುದರಿಂದ ಕೃಷ್ಣನ ನಾಮಸ್ಮರಣೆ ಅವನನ್ನು ಕುದಿಯುವ ಎಣ್ಣೆಯೂ ತಂಪಾಗಿ ರಕ್ಷಿಸುತ್ತದೆ.

೭೯

ಕವಿ ಲಕ್ಷ್ಮೀಶ ಇಲ್ಲಿ ಕವಿಯಾಗಿಯೇ ಕಾಣಿಸಿಕೊಂಡು ಕೀರ್ತನೆಯನ್ನು ಕಾವ್ಯಮಯ ವಾಗಿಸಿದ್ದಾನೆ. ತನ್ನ ಕಾವ್ಯದ ಪಾತ್ರಗಳನ್ನೆಲ್ಲ ಒಟ್ಟಿಗೆ ತರುವ ಮೂಲಕ ಜೈಮಿನಿ ಭಾರತವೇ

ಕೀರ್ತನೆಯಾಗಿ ರೂಪಗೊಂಡಂತಿದೆ. ಅಲ್ಲದೆ ಕವಿ ತನ್ನ ಷಟ್ಪದಿಯ ಲಯವನ್ನು ಬಿಡಲಾಗಿಲ್ಲ. ಷಟ್ಪದಿಯ ಮಾದರಿಯಲ್ಲೇ ಮೂರು ನುಡಿಗಳನ್ನು ನಿರ್ಮಿಸಿದ್ದಾನೆ.

ಈ ನುಡಿಗಳಲ್ಲಿ ಕ್ರಮವಾಗಿ ಕೃಷ್ಣನು ಪಾಂಡವರ ಯಾಗಕ್ಕೆ ಒಲಿದು ಬಂದದ್ದು, ಯಜ್ಞಾಶ್ವದ ರಕ್ಷೆಯ ಕಾಲದಲ್ಲಿ ಬಭ್ರುವಾಹನನವರೆಗಿನ ರಕ್ಷಣೆಯ ಸ್ವರೂಪ ಹಾಗೂ ಮುಂದುವರಿದು ಇತರರನ್ನು ಸೋಲಿಸಿ ದಂತಿಪುರಕ್ಕೆ ಬಂದು ಯಾಗವನ್ನು ಪೂರೈಸಿದ್ದನ್ನು ಕಥನದ ರೀತಿಯಲ್ಲಿ ಕಟ್ಟಲಾಗಿದೆ. ಇವು ಜೈಮಿನಿ ಭಾರತದ ಪದ್ಯಗಳೋ ಎಂದು ಅನುಮಾನ ಬರುವಷ್ಟು ಸಾಮ್ಯವಿದೆ. ಅದರೆ ಪಲ್ಲವಿ,ಅನುಪಲ್ಲವೀಗಳಿರುವದರಿಂದ ಮತ್ತು ನುಡಿಗಳಿಗೂ ಪಲ್ಲವಿಗೂ ಸಂಬಂಧವಿರುವುದರಿಂದ ಕೀರ್ತನೆ ಎಂದೇ ಹೇಳಬಹುದಾಗಿದೆ.

ಪಲ್ಲವಿಯಲ್ಲಿ ಶ್ರೀಕೃಷ್ಣನನ್ನು ಸಮಿತರ ಕಾವ, ದೇವರದೇವ ಎಂದು ಹೇಳುವ ಮೂಲಕ ಶರಣಾಗತಿ ಮತ್ತು 'ಹರಿಏಕನಿಷ್ಠೆಗಳನ್ನು' ಸೂಚಿಸಿದ್ದಾನೆ.

೮೦, ೮೧

ಇವೆರಡೂ ಲಕ್ಷ್ಮೀ ಸ್ತುತಿಗಳು ಮತ್ತು ವಿಶೇಷವಾದವುಗಳು. ಲಕ್ಷ್ಮಿಯ ಸೌಂದರ್ಯವನ್ನು ಅತ್ಯಂತ ಆಪ್ಯಾಯಮಾನವಾಗಿ ಹಿಡಿದಿಟ್ಟಿವೆ. ೮೦ರಲ್ಲಿ ಲಕ್ಷ್ಮಿಯ ಮುಖದಿರವು ಬೆಳದಿಂಗಳನ್ನು ಮೀರಿಸುವಂತಿದೆ ಎಂದು ಉದ್ಗರಿಸುವ ಕವಿ ಅದರ ವಿವರಗಳನ್ನು ಸೊಗಸಾದ ಕಾವ್ಯ ಪರಿಭಾಷೆಯಲ್ಲಿ ಸೃಷ್ಟಿಸಿದ್ದಾನೆ. ಆಭರಣಗಳ ಹೊಳಪಿಗೆ ಪೀತಾಂಬರದ ಮೆರುಗಿಗೆ ಅದ್ಭುತವಾದ ಪ್ರತಿಮೆಗಳನ್ನು ಸೃಷ್ಟಿಸಲಾಗಿದೆ. ಓಲೆಯ ಹೊಳಪು ಹೊಸತಾವರೆಯ ಮೇಲೆ ಮಳೆ ಸೂಸಿದಂತಿದ್ದರೆ ತಂಬೆಲರಧಿಕವಾಗಿ ಪೀತಾಂಬರವನ್ನು ಸೋಕಲು ಅದರ ಅಂದ ಅಧಿಕವಾಗಿ (ಇಲ್ಲಿ ಕಿರಿ ಎಂಬುದನ್ನು ತುಂಬು, ಅಧಿಕ ಎಂಬ ವಿಶೇಷಾರ್ಥದಲ್ಲಿ ಬಳಸಿದೆ) ಮರಿದುಂಬಿಯ ಹಂಬಲ ಹೊಸದಾಗಿದೆಯಂತೆ. ಈ ಲಕ್ಷ್ಮಿಯು ಶ್ರೀಹರಿಯನ್ನು (ಭಕ್ತನಿಗಾಗಿ) ಕರೆಯಲು ಹೋಗಿ ತಾನೇ ಅವನಲ್ಲಿ ಸೇರಿಹೋದಳೆಂಬ ಕಲ್ಪನೆ ಲಕ್ಷ್ಮಿಯ ಮೂಲಕ ಅರ್ಥಿಸುವ ಶ್ರೀವೈಷ್ಣವ ತತ್ವವನ್ನು ಹೇಳುತ್ತದೆ.

೮೧ರಲ್ಲಿ 'ನಡೆಯುವ ಲಕ್ಷ್ಮಿಯ ಸೌಂದರ್ಯ'ವನ್ನು ಕವಿ ಕಟ್ಟುತ್ತಾನೆ. ಅವಳು ಹೆಜ್ಜೆಯಿಟ್ಟರೆ ಜಡೆಯಲ್ಲಿರುವ ಹೂ ಉದುರುತ್ತದೆಂದೂ ಮುಖದಲ್ಲಿ ಬೆವರು ಮೂಡುತ್ತದೆಂದೂ ಎದೆಯ ಮೇಲಿರುವ ವಲಯಹಾರ ಘಲಿರು ಘಲಿರೆನ್ನುತ್ತದೆಂದೂ ಹೇಳಿರುವ ಕವಿ ಕಲ್ಪನೆ ಅದ್ಭುತವಾಗಿದೆ. ಮುಖದಲ್ಲಿ ಮಂದಹಾಸ ಕೆನ್ನೆಯಲ್ಲಿ ಲಜ್ಜೆ ತೋರುತ್ತ ಸೆರಗನ್ನು ಸರಿಮಾಡಿಕೊಳ್ಳುತ್ತ ಸುಗಂಧ ಸೂಸುತ್ತ ನಡೆಯುತ್ತಾಳೆಂಬ ಕಲ್ಪನೆಯೂ ಅಷ್ಟೇ ಅದ್ಭುತವಾಗಿದೆ.

ಇದು ಕವಿಯೂರಿನ ದೇವಾಲಯದ ಲಕ್ಷ್ಮಿಯ ವಿಗ್ರಹವನ್ನು ಕುರಿತದ್ದಿರುವಂತೆ ತೋರುತ್ತದೆ. ಆ ಶಿಲ್ಪದ ಭಾವ ಭಂಗಿಯನ್ನೇ ಕವಿ ಇಲ್ಲಿ ವರ್ಣಿಸಿರುವ ಸಾಧ್ಯತೆಯಿದೆ. ಮೂರನೇ ನುಡಿಯಲ್ಲಿ ಇದಕ್ಕೆ ಸೂಚನೆ ದೊರೆಯುವಂತಿದೆ. ಆಕೆಯ ನಿಲುವಿನ ಭಂಗಿಯನ್ನೇ ಇದು ನೇರವಾಗಿ ಸೂಚಿಸುತ್ತಿದೆಯಾದರೂ ರೋಜಗಿರಿಯ ಮೇಲೆ......ನೋಡುತ್ತ ಎಂಬ ಸಾಲಿನಲ್ಲಿ ಅರ್ಥದ ಗೊಂದಲವಿದೆ.

ಈ ಕೃತಿ ವೈಕುಂಠದಾಸರ ಅಂಕಿತದಲ್ಲೂ ದೊರೆಯುತ್ತಿದ್ದರೂ ಇದು ಲಕ್ಷ್ಮೀಶನದು ಎನ್ನಲಡ್ಡಿಯಿಲ್ಲ.

ಈ ಎರಡೂ ಕೃತಿಗಳ ಭಾಷೆ ಅತ್ಯಂತ ಸುಂದರವೂ ಮಧುರವೂ ದೇಶೀಯವೂ ಆಗಿ ಕನ್ನಡಕ್ಕೆ ಮೆರಗು ತಂದುಕೊಟ್ಟಂತಿದೆ.

೮೨,೮೩

ಲಕ್ಷ್ಮಿಯನ್ನು ಕುರಿತು ಸುಂದರ ವರ್ಣನೆ ಈ ಕೃತಿಗಳಲ್ಲಿದೆ. ೮೨ರಲ್ಲಿ ಶ್ರೀಮಂತವಾದ ಭಾಷಾಶೈಲಿಯಲ್ಲಿ ಲಕ್ಷ್ಮಿಯನ್ನು ವೇದದಿಂದ ಸ್ತುತಿಸಲ್ಪಡುವವಳು, ಆಶ್ರಿತರ ಪೊರೆವವಳು, ಲೋಕಮಾತೆ, ಆದಿಶಕ್ತಿ ಗುಣಾಢ್ಯೆ ಎಂದೆಲ್ಲ ಸ್ತುತಿಸಲಾಗಿದ್ದರೆ. ೮೩ರಲ್ಲಿ ಅತ್ಯಂತ ಸರಳವಾದ ಭಾಷೆಯಲ್ಲಿ ನಿಂದಾಸ್ತುತಿ ಹೇಳಲಾಗಿದೆ.

೮೩ರ ತ್ರಿಗುಣಾನ್ವಿತ ವಿದಾಯೆ–ಎಂಬಲ್ಲಿ ತ್ರಿಗುಣದಿಂದ ಕೂಡಿರುವವರನ್ನು ತ್ಯಜಿಸುವವಳು ಎಂಬ ಅರ್ಥವಿದ್ದು ಇಲ್ಲಿ ಗುಣ ಎಂಬುದನ್ನು ದೋಷ ಎಂದು ಪರಿಗಣಿಸಬೇಕಾಗುತ್ತದೆ. ಕಫ–ವಾತ ಇವುಗಳಿಂದ ಕೂಡಿರುವವರು ಎಂದರೆ ಲೌಕಿಕರು, ಭಕ್ತರಲ್ಲದವರು, ಸಾಂಸಾರಿಕ ಸಂಕಷ್ಟಗಳಲ್ಲಿ ನರಳುತ್ತಿರುವವರು ಎಂದೇ ಗ್ರಹಿಸಬೇಕಾಗುತ್ತದೆ. ನಿಂದಾಸ್ತುತಿ ಲಕ್ಷ್ಮಿಗಲ್ಲ, ಶ್ರೀಹರಿಗೆ. ಅವತಾರಗಳನ್ನು ಮೈಬಣ್ಣವನ್ನೇ ಲೇವಡಿಮಾಡಿ ಅಂತಹವನಿಗೆ ಒಲಿದೆಯಲ್ಲೇ ಎಂದು ಕೀಟಲೆ ಮಾಡುವ ರೀತಿಯಲ್ಲಿ ಈ ಕೃತಿ ಅತ್ಯಂತ ಆತ್ಮೀಯವಾಗಿದೆ.

೮೪

ಹರಿಯ ಅನಂತತೆಯನ್ನು ಸರ್ವವ್ಯಾಪಕತೆಯನ್ನು ಇಲ್ಲಿ ತಿಳಿಸಿದೆ. ಮನ್ಮಥ ಪ್ರಭಾವದಿಂದ ರಾಗಭಾವಗಳನ್ನು ವಿಷಮ ವಿಗ್ರಹಗಳಲ್ಲಿ ಅಂದರೆ ವಿರಕ್ತರಾದ ಭಕ್ತರಲ್ಲಿ ಎಣಿಸಲು ಸಾಧ್ಯವಿಲ್ಲ. ಇವರು ಪ್ರಾಣ ಇರುವ ಜೀವಿಗಳಂತಲ್ಲ ಎಂಬುದನ್ನು ಇವರಲ್ಲಿ ಪ್ರಾಣವೇ ಇಲ್ಲ ಎಂದು ಪ್ರತಿಪಾದಿಸಲಾಗಿದೆ. ಭಕ್ತನ ಶರಣಾಗತಿಯ ಪರಕಾಷ್ಠೆ 'ಸರ್ವಂಕೃಷ್ಣಾರ್ಪಣಮಸ್ತು ' ಎಂಬ ತತ್ವ ಇಲ್ಲಿ ಮಡುಗಟ್ಟಿದೆ.

ಕುಂದದ, ಅಂದದ, ಸುವಾಸನೆವಾಸದ ಕೇದಗೆಯು ಎಸಳಿನಂತಹ ಲೌಕಿಕಾಸಕ್ತಿಯೇನಾದರೂ ಭಕ್ತನಲ್ಲಿದ್ದರೆ ಅದು ಇನ್ನೂ ಬದುಕಿನ ಸುವಾಸನೆ ಹೊಂದಿದ್ದರೆ 'ಚಿದ್ರೂಪ-ಅವನ ಮನೋದೈವ, ಅರ್ಘ್ಯಾದೈವ ದೈವಸಾಕ್ಷಾತ್ಕಾರ ದೊರಕುವುದಿಲ್ಲ ಎಂದೂ ಇಲ್ಲಿ ಹೇಳಲಾಗಿದೆ. ಅಂಥದೊಂದಕ್ಕಾಗಿ ಹಂಬಲಿಸುವ ಆತ್ಮನಿವೇದನೆ ಇಲ್ಲಿ ವ್ಯಕ್ತವಾಗಿದೆ.

೧೦೩, ೧೦೪

ರುಕ್ಮಿಣಿಯನ್ನು ಸ್ತುತಿಸುವ ಅಪರೂಪದ ಕೃತಿಯಾಗಿದೆ. ಶ್ರೀಹರಿಯ ವಿವಿಧ ರೂಪಗಳನ್ನು ಶ್ರೀ ವೈಷ್ಣವ ಹರಿದಾಸರು ಸ್ತುತಿಸಿದರೂ ಲಕ್ಷ್ಮಿಯನ್ನು ಹೊರತು ಪಡಿಸಿ ಬೇರೆ ಸ್ತ್ರೀ ದೇವತಾ ರೂಪಗಳನ್ನು ಸ್ತುತಿಸುವುದು ತುಂಬ ಕಡಿಮೆ. ಇಲ್ಲಿ ರುಕ್ಮಿಣಿಯನ್ನು ಲಕ್ಷ್ಮೀ ರೂಪದಲ್ಲೇ ಗ್ರಹಿಸಲಾಗಿದೆ. ದ್ವಾರಕಾಪುರಿ ವಿಹಾರಿ, ಎಂಬ ಒಂದು ಪದ ಹಾಗೂ ಮೊದಲು ನುಡಿ ಬಿಟ್ಟರೆ ಉಳಿದುದೆಲ್ಲವೂ ಲಕ್ಷ್ಮೀ ಸ್ತುತಿಯೇ ಎನ್ನುವಷ್ಟರ ಮಟ್ಟಿಗೆ ಸಾಮ್ಯತೆ ಇಲ್ಲಿದೆ. ರುಕ್ಮಿಣಿಯನ್ನು ಕೃಷ್ಣಾವತಾರದಲ್ಲಿ ಲಕ್ಷ್ಮೀರೂಪ ಎಂದೇ ಭಾವಿಸಿರುವುದರಿಂದ ಈ ಸಾಮ್ಯತೆ.

ಮಹಾಲಕ್ಷ್ಮೀಯನ್ನು ನಿಂದಾಸ್ತುತಿ ರೂಪದಲ್ಲಿ ಚಿತ್ರಿಸಿದೆಯಾದರೂ ಈ ಭಾವ ಮೊದಲ ನುಡಿಯಲ್ಲಿ ಮಾತ್ರವಿದೆ, ಚಂಚಲೆ ಅರ್ಥದಲ್ಲಿ ಉಳಿದಂತೆ ಆತ್ಮನಿವೇದನೆಯ ಭಾವವಿದೆ. ಶ್ರೀಹರಿಯ ಕೃಪೆಗೆ ಲಕ್ಷ್ಮೀಕಟಾಕ್ಷಬೇಕೆಂಬ ಶ್ರೀವೈಷ್ಣವ ತತ್ವ ಇಲ್ಲಿದೆ.

ದಾಸರು ರಚಿಸಿರುವ ಎಲ್ಲ ಲಕ್ಷ್ಮೀಸ್ತುತಿಗಳೂ ಚಿಕ್ಕವಾಗಿ ಚೊಕ್ಕವಾಗಿವೆ. ಇವುಗಳಲ್ಲಿ ಹಲವು ಹಾಡಿನ ಸಂಪ್ರದಾಯದಲ್ಲಿವೆ.

೧೦೬,೧೦೭

ಇವು ಶ್ರೀವೈಷ್ಣವ ಸಿದ್ಧಾಂತಾಚಾರ್ಯರಾದ ಶ್ರೀ ರಾಮಾನುಜಾಚಾರ್ಯರನ್ನು ಕುರಿತ ಕೃತಿಗಳು. ಎರಡೂ ಕೃತಿಗಳು ರಾಮಾನುಜ ಗುರುಗಳನ್ನು ಸ್ತುತಿಸುವ ರೂಪದಲ್ಲಿವೆ. ಮೊದಲನೆಯದರಲ್ಲಿ ಜನ, ವರ, ಧರ, ಅಲ, ವಿಶೇಷಣಗಳಿಂದ ವಿಶೇಷೀಕರಿಸಿದ್ದರೆ ಎರಡನೆಯದರಲ್ಲಿ ಪಾಪವಿನಾಶಕನಾಗಿ ಜೀವೋದ್ಧಾರಕನಾಗಿ ನಿತ್ಯ ವಿಭೂತಿದಾಯಕನಾಗಿ, ಭೀತಿ ಪರಿಹಾರಕನಾಗಿ ಕಂಡಿದ್ದಾರೆ. ದೇವರಾಜ ಸುವಾಕ್ಯಮಾತಂ ಎಂಬುದು ಶ್ರೀವೈಷ್ಣವ ತತ್ವವನ್ನು, ವಿಶಿಷ್ಟಾದ್ವೈತ ಸಿದ್ಧಾಂತವನ್ನು ಸೂಚಿಸುತ್ತದೆ. ಇವರನ್ನು ಸವ್ಯಸಾಚಿಯ(ಅರ್ಜುನ) ಸೂತನಾದ (ಸಾರಥಿ) ಶ್ರೀ ಕೃಷ್ಣ ಬೋಧಿಸಿದ ಭಗವದ್ಗೀತೆಗೆ ಶ್ರೀಭಾಷ್ಯವಾಗಿ ಬರೆದ ಯತಿವರ ಎಂದೂ ವಾದಮಂಡಕನೂ ಕಾಷಾಯ ತ್ರಿದಂಡದಿಂದ ಶೋಭಿಸುವ ತುಳಸಿಮಾಲಾಧರನೂ ಆದ ಭಾಷ್ಯಕಾರ ಎಂದೂ ಮನದುಂಬಿ ಆಚಾರ್ಯರ ಎಲ್ಲ ಸಾಧನೆಗಳನ್ನೂ ಸಾಂದ್ರೀಕರಿಸಿರುವ ಈ ಸ್ತುತಿ ಸುಂದರವಾಗಿದೆ.

೧೦೮

ಒಂದು ತತ್ವಪದದಂತೆ ಸಾಗುವ ಈ ಕೃತಿ ಆತ್ಮನಿವೇದನೆಯೂ ಆಗಬಲ್ಲದು, ಲೋಕನೀತಿಯೂ ಆಗಬಲ್ಲದು. ಈ ಜನ್ಮವನ್ನು ವ್ಯಥಾ ಹಾಳು ಮಾಡಬೇಡೆಂಬ ಉಪದೇಶ ಮನೋಭಾವ ಇಲ್ಲಿದೆ. ಸಮಾಜದಲ್ಲಿ ಅಧಃಪತನಕ್ಕೊಳಗಾಗುತ್ತಿರುವ ಜನರಿಗೆ ಹೇಳಿದಂತಿರುವ ಈ ಕೀರ್ತನೆ ತನಗೆ ತಾನೇ ಹೇಳಿಕೊಂಡಂತೆಯೂ ಇದೆ. ಹೆಣ್ಣು, ಹಣ, ಮನೆ, ಆಸ್ತಿಗಳ ಅಹಂಕಾರದಿಂದ ಗುರು, ವಿದ್ವಜ್ಜನರ ಸಂಗ ಮಾಡದಿದ್ದರೆ ತಂದೆ ತಾಯಿ ಸೂತ ಬಂಧುಗಳೇ ಹಿತಾರ್ಥರೆಂದು ನಂಬಿದರೆ, ನರಜನ್ಮ ವ್ಯರ್ಥವಾಗುತ್ತದೆ. ಅದು ಸಾರ್ಥಕವಾಗಬೇಕಾದರೆ ಈ ಮೋಹಬಿಟ್ಟು 'ಅಧೋಕ್ಷಜನ ಮೃದುಪಾದಾರವಿಂದಗಳ ಯಥಾರ್ಥದಿಂ ಭಜಿಸಬೇಕೆಂದು ಹೇಳುವ ಈ ಕೃತಿ ಮನುಷ್ಯನನ್ನು ಸನ್ನಡತೆಯತ್ತ ಕೊಂಡೊಯ್ಯುವ ಸಾಮಾಜಿಕ ಬದ್ಧತೆಯನ್ನು ಹೊಂದಿದೆ.

೯೦, ೧೦೯, ೧೧೦

ಈ ಮೂರು ಕೀರ್ತನೆಗಳು ತಿರುಪತಿ ವೆಂಕಟೇಶನನ್ನು ಕುರಿತ ವರ್ಣನೆಗಳು. ತಿರುಪತಿಗಿರುವ ಪರ್ಯಾಯನಾಮಗಳು, ವೆಂಕಟೇಶನಿಗಿರುವ ಪರ್ಯಾಯನಾಮಗಳು ಲಕ್ಷ್ಮೀರೂಪದ ಅಲಮೇಲ್ಮಂಗಮ್ಮ ಇವುಗಳೊಂದಿಗೆ ದೈವಮಹಿಮೆಗಳನ್ನು ಸುಂದರವಾಗಿ ಈಕೃತಿಗಳಲ್ಲಿ ಅಳವಡಿಸಲಾಗಿದೆ.

೯೦ನೇ ಕೃತಿ ನಾಮಾವಳಿಗಳ ರೂಪದಲ್ಲಿ ಶ್ರೀಹರಿಯ ಮಹಿಮೆಗಳನ್ನು ಹೇಳುತ್ತಾ ಸಾಗುತ್ತದೆ. ಇದು ದೇವರನ್ನು ಏಳಿಸುವ ಎಚ್ಚರಿಕೆಯ ಅಥವ ಸುಪ್ರಭಾತದ ಸ್ತುತಿಯಾಗಿದೆ. ಕೊನೆಯ ನುಡಿಯಲ್ಲಿ ಚಾಮರಾಜ ಒಡೆಯರ್ ಅವರು ದಾಸರು ಮೈಸೂರಿನಲ್ಲಿ ರಾಮೋತ್ಸವಗಳನ್ನು ನಡೆಸುತ್ತಿರುವಾಗ ಕರೆಸಿ ಮರ್ಯಾದೆ ಮಾಡಿ ' ಶ್ರೀ ಚಾಮರಾಟ್ಪಾಲಿತ ಸತ್ಸಂಪ್ರದಾಯ ಸುಜ್ಞಾನ ಬೋಧಿನೀ ಸಮಾಜಾಧಿಪ,' ಎಂದು ನೀಡಿದ್ದ ಪ್ರಶಸ್ತಿಯನ್ನು ಯಥಾವತ್ತಾಗಿ ಬಳಸಿಕೊಳ್ಳಲಾಗಿದೆ. ಇದೇ ಈ ಕೃತಿಯಲ್ಲಿ ದಾಸರ ಅಂಕಿತ ಸ್ಥಾನವನ್ನು ತುಂಬಿದೆ. ಇದರಲ್ಲೇ ಇರುವ ' ಶ್ರೀ ಭಾರ್ಗವಾಸರ ಭಜನೋಲ್ಲಾಸಾ' ಎಂಬುದೂ ದಾಸರನ್ನು ಕುರಿತದ್ದೇ ಅಗಿದೆ. ಅವರು ಹೋದಲ್ಲೆಲ್ಲಾ ಭಜನೆಗಳನ್ನು ಪ್ರಾರಂಭಿಸಿ ಭಜನ ಸಂಘಗಳನ್ನು ಸ್ಥಾಪಿಸಿ 'ಭಾರ್ಗವ ರಾಮ'ನ ಹೆಸರಿನಲ್ಲಿ ಭಜನಮಂದಿರಗಳನ್ನು ಕಟ್ಟಿಸಿರುವುದರ ಸೂಚ್ಯವಾಗಿದೆ.

೧೦೯ನೇ ಕೀರ್ತನೆಯಲ್ಲಿ ನಮ್ಮಾಳ್ವಾರರು (ವಕುಳಾಭರಣ) ಯಮುನಾಚಾರ್ಯರು, ರಾಮಾನುಜರು (ಯತಿಪತಿ) ವೇದಾಂತ ದೇಶಿಕಾಚಾರ್ಯರು (ದೇಶಿಕ) ಇವರುಗಳಿಂದ ಸ್ತುತಿಸಲ್ಪಟ್ಟವನೆಂದು ವೆಂಕಟೇಶನನ್ನು ಕರೆಯಲಾಗಿದೆ. ಇಲ್ಲಿ ಬರುವ 'ಅಸ್ಮತ್ಪರಮದೇಶಿಕ '

'ಅಸ್ಮದ್ದೇಶಿಕ ' ಪದಗಳು ಶ್ರೀವೈಷ್ಣವ ಗುರುಪರಂಪರೆಯಲ್ಲಿ ದೇವರನ್ನು ಸಂಬೋಧಿಸುವ ಪರಿಭಾಷೆಗಳು.

೧೧೦ನೇ ಕೃತಿಯಲ್ಲಿ ಶೇಷಾಚಲನಿವಾಸನೂ ಶೇಷಶಯನನೂ ಭಕ್ತಪೋಷಣನೂ ಅಲಮೇಲ್‌ಮಂಗಾ ವಿಹಾರನೂ ಆದವನೆಂದು ಸ್ತುತಿಸಲಾಗಿದೆ.

ಮೂರು ಕೃತಿಗಳಲ್ಲೂ ತೊಡಕಿಲ್ಲದ ಪ್ರಾಸಲಯ ಬದ್ಧವಾದ ಸಂಸ್ಕೃತ ಭೂಯಿಷ್ಠಭಾಷೆ ಮೆರುಗನ್ನು ತಂದಿದೆ. ದಾಸರು ತಿರುಪತಿ ಯಾತ್ರೆಯನ್ನು ಮಾಡಿರುವ ಬಗ್ಗೆ ಜೀವನ ಚರಿತ್ರೆಯಲ್ಲಿ ಉಲ್ಲೇಖವಿದ್ದು ಹಲವು ಬಾರಿ ದರ್ಶನ ಮಾಡಿದ್ದಾರೆನಿಸುತ್ತದೆ.

೧೧೧

ಶ್ರೀರಂಗಪಟ್ಟಣ ಸಮೀಪದ ದರಿಶಕುಪ್ಪದ ಅಂಜನೇಯನನ್ನು ಸ್ತುತಿಸುವ ಕೃತಿ ಇದು. 'ದರಿಶಕುಪ್ಪ ಶ್ರೀ ಅಂಜನಿತನಯಾ ' ಎಂದೇ ಇದನ್ನು ಪ್ರಾರಂಭಿಸುತ್ತಾರೆ. ಇನ್ನು ಕೆಲವು ಕೀರ್ತನೆಗಳಲ್ಲಿ ಈ ದರಿಶಕುಪ್ಪೆಯನ್ನು ಉಲ್ಲೇಖಿಸಿದ್ದಾರೆ. 'ತುಳಸಿರಾಮದಾಸರ ಚರಿತ್ರಮು' ಎಂಬ ಕೃತಿಯಲ್ಲೂ ಈ ಹೆಸರಿನ ಉಲ್ಲೇಖ ಬರುತ್ತದೆ. ದಾಸರು ಈ ದರಿಶಕುಪ್ಪವನ್ನು ತಮ್ಮ ಚಟುವಟಿಕೆಯ ಕೇಂದ್ರವನ್ನಾಗಿಸಿ ಕೊಂಡಿದ್ದರೆಂದೂ ಸ್ಪಷ್ಟವಾಗಿದೆ. 'ಚರಿತ್ರಮು' ಕೃತಿಯಲ್ಲಿ ಒಂದು ಕಡೆ ' ಶೋಭಕೃತುಸಂ ಮಾಘ ಶುದ್ಧ ದ್ವಾದಶಿಯಿಂದ, ತ್ರಯಾ ಚತುರ್ದಶಿ ಭಾನುವಾರದವರೆಗೆ ಮೈಸೂರಿನ ಪರಕಾಲ ಮಠದಲ್ಲಿದ್ದು, ಮಹಾಯಾತ್ರೆಗೆ ಅನುಜ್ಞೆ ಪಡೆದು ದರಿಶಕುಪ್ಪೆಗೆ ಹಿಂತಿರುಗಿದರೆಂದೂ ಶ್ರೀನಿವಾಸಪುರ ತಾ: ಚೌಡನಪಲ್ಲಿ ಶಿಷ್ಯ ಶ್ರೀನಿವಾಸದಾಸನಿಂದ ಸನ್ಮಾನ ಸತ್ಕಾರ ನಡೆಯಿತೆಂದೂ ಬುಧವಾರ ದರಿಶಕುಪ್ಪದಲ್ಲಿ ಸೇರಿಸಿದ್ದ ಸಾಹಿತಿ–ಪಂಡಿತಜ್ಞರ ಸಭೆಯಲ್ಲಿ ಅಪರಾಹ್ನ ಕರ್ಕಾಟಕ ಲಗ್ನದಲ್ಲಿ ಸಮಾಧಿಸ್ಥರಾದರು' ಎಂದು ಬರುತ್ತದೆ.

ಕೀರ್ತನೆ ೧೦೫ರಲ್ಲಿ ಆಂಜನೇಯನನ್ನು ಸ್ತುತಿಸಲಾಗಿದ್ದು ಅದರಲ್ಲಿ ರಾಮಾನುಜರನ್ನು ಲಕ್ಷ್ಮಣ ರೂಪದಲ್ಲಿ ಭಾವಿಸಿ ರಾಮ ರಾವಣಯುದ್ಧಲ್ಲಿ ಲಕ್ಷ್ಮಣ ಮೂರ್ಛೆ ಹೋದಾಗ ಆಂಜನೇಯ ಸಂಜೀವಿನಿ ತಂದ ಪ್ರಸಂಗವನ್ನು 'ರಾಮಾನುಜ ಮುನಿ ಪ್ರಾಣೋದ್ಧಾರಕ' ಎಂಬ ನುಡಿಯಲ್ಲಿ ತಂದಿದ್ದಾರೆ. ರಾಮಾನುಜರನ್ನು ಲಕ್ಷ್ಮಣಾಂಶರು ಎಂದು ಸಂಪ್ರದಾಯದಲ್ಲಿ ಕರೆದಿರುವುದರ ಹಿನ್ನೆಲೆಯಲ್ಲಿ ಈ ಉಕ್ತಿಯಿದೆ. ಶ್ರೀವೈಷ್ಣವ ಸಂಪ್ರದಾಯದಲ್ಲಿ ಗರುಡ

ಆಂಜನೇಯರನ್ನು 'ಪೆರಿಯತಿರುವಡಿ–ಕಿರಿಯತಿರುವಡಿ' ಎಂದು ಕರೆದು ಆಳ್ವಾರ್ ಸ್ಥಾನದಲ್ಲೇ ಸ್ತುತಿಸುವವದರಿಂದ ಇಲ್ಲಿಯೂ ಆ ವರ್ಗದಲ್ಲೇ ಸೇರಿಸಿದೆ.

೧೧೨

ದಾಸರು ತಮ್ಮ ಆರಾಧ್ಯದೈವ ಮಹದೇವಪುರದ ರಂಗನಾಥನನ್ನು ಸ್ತುತಿಸಿರುವ ಈ ಕೃತಿಯಲ್ಲಿ ದಶಾವತಾರದ ವಿವರಣೆಯಿದೆ. ಶ್ರೀವೈಷ್ಣವ ಸಂಪ್ರದಾಯದಲ್ಲಿ ಸಾಮಾನ್ಯವಾಗಿ ಬುದ್ಧಾವತಾರವನ್ನು ಹೇಳುವುದಿಲ್ಲ. ಬದಲಾಗಿ ಬಲರಾಮಾವತಾರವನ್ನು ಕಲ್ಪಿಸಲಾಗಿದೆ. ಆದರೆ ಇದಕ್ಕೆ ಅಪವಾದಗಳೂ ಉಂಟು. ಅಂಥ ಅಪವಾದವಾಗಿ ಇಲ್ಲಿ ದಾಸರು ಬುದ್ಧಾವತಾರವನ್ನೇ ಒಪ್ಪಿರುವುದನ್ನು ಕಾಣಬಹುದು.

೧೧೪

ರಾಮಾನುಜರನ್ನು ಕುರಿತ ಸ್ತುತಿಗೀತೆ. 'ಚರಮಶ್ಲೋಕದಗೈವುತ.... ಇದು ಆಚಾರ್ಯರ ಮಾರ್ಗ. ಶ್ರೀವೈಷ್ಣವ ಮತದಲ್ಲಿ ಹುಟ್ಟಿದ ಎಲ್ಲರೂ ಶ್ರೀ ವೈಷ್ಣವರಾಗುವುದಿಲ್ಲ. ಪಂಚಸಂಸ್ಕಾರವಾದ ನಂತರವಷ್ಟೇ ಅವನು ಶ್ರೇಷ್ಠ ಶ್ರೀವೈಷ್ಣವನೆನಿಸಿಕೊಳ್ಳುತ್ತಾನೆ. ಈ ಸಂದರ್ಭದಲ್ಲಿ ಅಷ್ಟಾಕ್ಷರಿದ್ವಯ ಮತ್ತು ಚರಮಶ್ಲೋಕಗಳನ್ನು ಗೋಪ್ಯಮಂತ್ರವಾಗಿ ದೀಕ್ಷೆ ಹೊಂದುವವನ ಕಿವಿಯಲ್ಲಿ ಗೋಪ್ಯವಾಗಿ ಹೇಳಲಾಗುತ್ತದೆ. (ಇದರ ಅರ್ಥ, ಮಹತ್ವ, ಲಾಭ ಎಲ್ಲರಿಗೂ ಲಭಿಸಲಿ ಎಂದು ರಾಮಾನುಜರು ಇದನ್ನೇ ಸಾರ್ವಜನಿಕರಿಗೆಲ್ಲ ತಿಳಿಯುವಂತೆ ಗುಡ್ಡದ ಮೇಲೆ ನಿಂತು ಗಟ್ಟಿಯಾಗಿ ಹೇಳಿದರು ಎಂಬ ಪ್ರತೀತಿಯಿರುವುದು). ದೇವರನ್ನು 'ಪ್ರಣವಸ್ವರೂಪ ' ಎಂಬ ವಿಶೇಷಾರ್ಥದಲ್ಲಿ ಶ್ರೀವೈಷ್ಣವ ಧರ್ಮದಲ್ಲಿ ಹೇಳಲಾಗುತ್ತದೆ. ರಾಮಾನುಜರೇ ತಮ್ಮ ' ಶ್ರೀಭಾಷ್ಯದಲ್ಲಿ ಈ ಪಾರಿಭಾಷಿಕ ಪದವನ್ನು ವಿಶೇಷವಾಗಿ ಚರ್ಚಿಸಿದ್ದಾರೆ.

ರಂಗದಾಸರೂ ಆಚಾರ್ಯರಾಗಿ ಒಂದು ಸಂಪ್ರದಾಯದ ಪೀಠಾಧಿಪತಿಗಳಾಗಿ ಈ ಮಾರ್ಗಾನುಯಾಯಿಗಳಾಗಿದ್ದರು ಎಂಬುದಕ್ಕೆ ಇದು ನಿದರ್ಶನವಾಗಿದೆ. ಬಳ್ಳಿಯಲ್ಲಿರುವ ಹೂವನ್ನು ಇಲ್ಲಿ ಜ್ಯೋತಿಗೆ ಹೋಲಿಸಿದೆ. ಅರ್ಪಿಸುವ ಒಂದೊಂದು ಹೂವೂ ಒಂದೊಂದು ಜ್ಞಾನದ ಬೆಳಕು ಎಂಬ ಅರ್ಥದಲ್ಲಿ ಇಲ್ಲಿ ಹೇಳಲಾಗಿದೆ. ಯಾದವಾದ್ರಿ ಮೇಲುಕೋಟೆಯ ಪರ್ಯಾಯನಾಮ. ಕೊನೆಯಲ್ಲಿ ಕೀರ್ತನೆಯ ಸಾರವನ್ನು ಮಂತ್ರ ರಹಸ್ಯದ ಮಹತ್ವವನ್ನು ಕಂದ ಪದ್ಯದಲ್ಲಿ ರಚಿಸಿದ್ದಾರೆ. ಈ ದಾಸರ ಹಲವು ಕೀರ್ತನೆಗಳಲ್ಲಿ ಈ ಬಗೆಯ ಕಂದಪದ್ಯಗಳಿರುವುದು ವಿಶೇಷವಾಗಿದೆ.

೧೧೫

ಶ್ರೀಹರಿಯನ್ನೇ ಗುರುಸ್ಥಾನದಲ್ಲಿಟ್ಟುಕೊಂಡು ಸ್ತುತಿಸಿರುವ ಕೀರ್ತನೆಯಿದು. ತಮ್ಮ ಇಷ್ಟದೈವ 'ಮಹದೇವಪುರರಂಗ ' ನನ್ನು ಗುರುವನ್ನಾಗಿ ಸ್ವೀಕರಿಸಿ ಅದೇ ಅಂಕಿತವನ್ನು ಮುದ್ರೆಯಾಗಿಟ್ಟುಕೊಂಡು ದಾಸರು ಕೃತಿಗಳನ್ನು ರಚಿಸಿದ್ದಾರೆ.

ಗುರುವಿನ ಮೂಲಕವೇ ದೈವದರ್ಶನ ಸಾಧ್ಯ. ಹಾಗೆ ಮಾಡಿದ ದೈವ ಸಾಕ್ಷಾತ್ಕಾರದಿಂದ ಹುಟ್ಟು ಸಾವಿಲ್ಲದ ಮುಕ್ತಿ, ಪರಮ ಪದ ದೊರಕುತ್ತದೆಂಬ ಶ್ರೀವೈಷ್ಣವ ಮೋಕ್ಷತತ್ವ ಇಲ್ಲಿ ಸೂಚ್ಯವಾಗಿದೆ.

೧೧೬

ರಂಗದಾಸರು ಸ್ವಯಂ ಅಧ್ಯಯನದಿಂದ ಜ್ಞಾನಸಂಪಾದನೆ ಮಾಡಿದ ಸಾಧಕರು. ಅಧ್ಯಯನ ಕಾಲದಲ್ಲಿ ಕಾಣಿಸಿಕೊಂಡ ಅನೇಕ ಸಂಶಯಗಳನ್ನು ದೈವ ಸಾಕ್ಷಾತ್ಕಾರದ ಪ್ರತಿಮೆಯ ಮೂಲಕ ಪರಿಹರಿಸಿಕೊಂಡಿರುವುದನ್ನು ಇಲ್ಲಿ ಪ್ರತಿಪಾದಿಸಿದ್ದಾರೆ.

ನಿಷ್ಠಾವಂತ ಶ್ರೀವೈಷ್ಣವ ಧರ್ಮೀಯನೊಬ್ಬನ ನಡೆ – ನುಡಿಯನ್ನು ಈ ಕೀರ್ತನೆ ಹೇಳುತ್ತದೆ. ಇಲ್ಲಿಯ ಈ ಕೆಲವು ಪದಗಳನ್ನು ಹೀಗೆ ಗ್ರಹಿಸಬೇಕು :

ಶ್ರೀಹರಿಮಂತ್ರ – ಓಂ ನಮೋನಾರಾಯಣ – ಅಷ್ಟಾಕ್ಷರಿ

ಶ್ರೀಹರಿಲಾಂಛನ – ತಿರುಮಣಿ ಹಣೆಯಲ್ಲಿ ಧರಿಸುವ ಪುಂಡ್ರ, ನಾಮ

ಸತ್ಯಪ್ರಬಂಧ – ನಾಲಾಯಿರ ದಿವ್ಯ ಪ್ರಬಂಧಗಳು, ಆಳ್ವಾರರ ಸ್ತೋತ್ರ ಗೀತೆಗಳು.

ದ್ವಯಮಂತ್ರ – ಶ್ರೀಹರಿಯನ್ನು ಸ್ತುತಿಸುವ ರಹಸ್ಯಮಂತ್ರದಲ್ಲಿ ಎರಡನೆಯದು (ಶ್ರೀಮನ್ನಾರಾಯಣ ಚರಣಾ ಶರಣಂ ಪ್ರಪದ್ಯೇ ಶ್ರೀಮತಿ ನಾರಾಯಣರಾಯ)

ಸೋಹಂಭಾವ – ಅಹಂಬಹ್ಮಾಸ್ಮಿ – ನನ್ನಲ್ಲೇ ದೇವರಿದ್ದಾನೆ ಎಂಬ ತತ್ವ.

ತಮ್ಮ ಸಾಧನೆಯಲ್ಲಿ ತಾವು ಕಂಡುಕೊಂಡ ದೈವದರ್ಶನದ ಅನುಭವವನ್ನು ಕನಸಿನೋಪಾದಿಯಲ್ಲಿ ಇಲ್ಲಿ ಕಂಡರಿಸಿದ್ದಾರೆ.

೧೨೦

ಈ ಕೃತಿಗೆ 'ಮತವಿಚಾರಕ್ಕಾಗಿ' ಮೇಲುಕೋಟೆಯ ಮಠವೊಂದರಲ್ಲಿ ಸೇರಬೇಕಿದ್ದ ಸಭೆಗೆ ಹೋಗಲು ಗೋಷ್ಠಿಯವರೆಲ್ಲ (ಹಿರಿಯರು ಪ್ರಮುಖರು) ಬೇಡಿಗರಹಳ್ಳಿಯಲ್ಲಿ ತಂಗಿದ್ದ

ಸಮಯದಲ್ಲಿ ಬಳಗಟ್ಟೆಯ ಪುಟ್ಟಣ್ಣಯ್ಯಂಗಾರರ ಸ್ವಪ್ನದಲ್ಲಿ ರಂಗದಾಸರನ್ನು ಸಭೆಗೆ ಕರೆತರಬಾರದೆಂಬ ಸೂಚನೆ ಬಂತೆಂದೂ ಅದನ್ನು ಅವರು ದಾಸರಿಗೆ ತಿಳಿಸಿದರೆಂದೂ ಟಿಪ್ಪಣಿಯಿದೆ.

ದಾಸರು ಬರೆದಿರುವ ಮತವಿಚಾರದ ಗ್ರಂಥಗಳಲ್ಲಿ ಮತನಿಷ್ಠೆಯ ಪರಾಕಾಷ್ಠತೆಯಿದ್ದು ಅವರ ಉಗ್ರಮತ ತತ್ವ ಪ್ರತಿಪಾದನೆಯಿಂದ ಏನಾದರೂ ತೊಂದರೆಯಾದೀತೆಂಬ ಶಂಕೆಯೊಂದು ಸಮುದಾಯದಲ್ಲಿ ಉದ್ಭವಿಸಿರುವಂತೆ ಕಂಡುಬರುತ್ತದೆ. ಈ ಘಟನೆ ದಾಸರಲ್ಲಿನ ದೈವನಿಷ್ಠೆಯನ್ನು ಇನ್ನಷ್ಟು ತೀವ್ರಗೊಳಿಸಲು ಕಾರಣವಾಗಿದೆ. ದಾಸರು ಲೌಕಿಕದಿಂದ ವಿಮುಖಗೊಂಡು ಪಾರಮಾರ್ಥಿಕದ ಕಡೆಗೆ ಸಂಪೂರ್ಣ ಹೊರಳಿರುವುದನ್ನು ಇಲ್ಲಿ ಕಾಣಬಹುದಾಗಿದೆ.

೧೨೧

ಶ್ರೀವೈಷ್ಣವ ತತ್ವದ ಸಾಧನೆಯ ಉತ್ಕೃಷ್ಟ ಸ್ಥಿತಿಯನ್ನು ಇದು ವರ್ಣಿಸುತ್ತದೆ. ಕರ್ಮತ್ಯಾಜ್ಯ ಮಾಡಿ ಅಂದರೆ ಲೌಕಿಕದಿಂದ ವಿಮುಖರಾಗಿ 'ಮರ್ಮಜ್ಯೋತಿಯನ್ನು ಕೂಡಿ' ಎನ್ನುವಲ್ಲಿ ದಾಸರ ಮನಸ್ಥಿತಿ ಪರಿಪಕ್ವವಾದದ್ದರ ನಿದರ್ಶನವಾಗಿದೆ. ಮರ್ಮಜ್ಯೋತಿ ಎನ್ನುವುದು ಯೋಗಸಾಧನೆಯ ಸುಷುಪ್ತಿ ಸ್ಥಿತಿ, ತಪಸ್ಸಿನ ಸಮಾಧಿ ಸ್ಥಿತಿ, ವೈರಾಗ್ಯದ ಬ್ರಹ್ಮಾನಂದ ಸ್ಥಿತಿ; ಆತ್ಮದಲ್ಲಿರುವ ದೈವಸಾಕಾತ್ಕಾರದ ಸ್ಥಿತಿ, ದೈವದಲ್ಲಿ ಸೇರುವ 'ಸೋಹಂ ಬ್ರಹ್ಮಂ'ದ ಶ್ರೀವೈಷ್ಣವ ತತ್ವದ ಗುರಿಯಾಗಿ ಮಹತ್ವದ ಅರ್ಥವನ್ನು ಪಡೆದುಕೊಳ್ಳುತ್ತದೆ. 'ಭಿನ್ನನಾಮರೂಪವನೂಂಕಿ' ಎಂಬುದು ಶ್ರೀವೈಷ್ಣವ ನಿಷ್ಠೆಯಲ್ಲಿನ 'ಹರನಿರಾಕರಣೆಯ ' ತತ್ವ ಪ್ರತಿಪಾದನೆಯಾಗಿದೆ. ಕೊನೆಯ ನುಡಿಯಲ್ಲಿ ಬಳಸಿರುವ ಅರಿಗಳಾರರಸಂಗ ಕರಿಗಳೆಂಟರಭಂಗ ಕಿರಿದು ಎಂಟರ ಅಂಗಗಳನ್ನು ಕ್ರಮವಾಗಿ – ಅರಿಷಡ್ವರ್ಗ, ಅಷ್ಟರುಚಿ, ಅಷ್ಟಾಂಗ ಭೋಗವನ್ನಾಗಿ ಗ್ರಹಿಸಬಹುದಾಗಿದೆ.

ಕರಿಗಳೆಂಟರಭಂಗಕ್ಕೆ 'ಅಷ್ಟಮದ ' ವನ್ನು ಕಲ್ಪಿಸಬಹುದಾದರೂ ಅದಕ್ಕಿಂತ ಅಷ್ಟರುಚಿ ದಾಸರ ಜೀವನಕ್ಕೆ ಹೆಚ್ಚು ಅನ್ವಯವಾಗುವಂತಹುದು. ದಾಸರು ಜೀವಿತಾದಿಯಲ್ಲಿ ರುಚಿಗಳ ನಿರಾಕರಣೆಯನ್ನು ಸಾಧಿಸಿದ್ದವರು. ಕೇವಲ ಸಪ್ಪೆ ಅವಲಕ್ಕಿಯನ್ನೆ ಉದರ ಪೋಷಣೆಗೆ ನಿಮಿತ್ತ ಮಾಡಿಕೊಂಡು ಆಧ್ಯಾತ್ಮವನ್ನು ಗೆದ್ದಿದ್ದ ಋಷಿ ಸದೃಶರಾಗಿದ್ದರು.

೧೨೨

ಶ್ರೀವೈಷ್ಣವ ತತ್ವ ಪ್ರತಿಪಾದನೆಯ ಸರಳ ಸಾಧನೆಗಳಾದ ೧) ತಿರುಮಂತ್ರ: (ಅಷ್ಟಾಕ್ಷರಿ 'ಓಂ ನಮೋ ನಾರಾಯಣಾಯ') ೨)ದ್ವಯಮಂತ್ರ : 'ಶ್ರೀಮನ್ನಾರಾಯಣ ಚರಣಂ ಶರಣಂ

ಪ್ರಪದ್ಯೇ, ಶ್ರೀಮತೇನಾರಾಯಣಾಯ' ಮತ್ತು ೩) ಚರಮಶ್ಲೋಕ (ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ। ಅಹಂತ್ವಾಸರ್ವಪಾಪೇಭ್ಯೋ ಮೋಕ್ಷೈಶ್ಯಾಮಿ ಮಾ ಶುಚಃ ಗಳ ಮಹತ್ವವನ್ನು ಈ ಕೀರ್ತನೆಯಲ್ಲಿ ಹೇಳಲಾಗಿದೆ. ಶರಣಾಗತರಿಗೆ ದೇವನೇ ತಂದೆ, ಗುರು; ಎಲ್ಲ ಸಿದ್ಧಿಗಳನ್ನು ಒದಗಿಸಬಲ್ಲ ಎಂಬುದು ಇಲ್ಲಿಯ ಆಶಯ. ಈ ಮಂತ್ರ ರಹಸ್ಯವನ್ನು ನಿಷ್ಠೆಯಿಂದ ಅನುಸಂಧಾನ ಮಾಡಿದರೇ ಸಾಕು ಮೋಕ್ಷ ಪ್ರಾಪ್ತಿ ಎಂಬ ಸರಳ ತತ್ವ ಇಲ್ಲಿದೆ.

೧೨೩

'ಸೋಹಂಬ್ರಹ್ಮಂ' ನಾನೇಬ್ರಹ್ಮ – ನಾನೇದೇವರು – ನನ್ನ ಹೃದಯ ಕಮಲದಲ್ಲೇ ದೇವರು ನೆಲೆಸಿದ್ದಾನೆ – ನನ್ನ ಆತ್ಮವೇ ದೇವಸ್ವರೂಪ ಎಂಬ ಶ್ರೀವೈಷ್ಣವಧರ್ಮದ ಪ್ರಮುಖ ತತ್ವ ಈ ಕೀರ್ತನೆಯಲ್ಲಡಗಿದೆ. (ಆಂಜನೇಯನು ಎದೆ ಸೀಳಿ ರಾಮನನ್ನು ತೋರಿಸುವ ಪ್ರತಿಮೆ ಗಮನಿಸಿ) ಆತ್ಮ–ಬ್ರಹ್ಮ–ಗುರು ಎಲ್ಲವನ್ನು ಸಮಾನವಾಗಿ ಕಲ್ಪಿಸಿ ತನ್ನ ಭಕ್ತಿಯಲ್ಲಿ ತಾನು ನಂಬಿರುವ ದೈವದಲ್ಲೇ ಇವೆಲ್ಲವನ್ನೂ ಸಮೀಕರಿಸಿರುವುದನ್ನು ಇಲ್ಲಿ ಕಾಣಬಹುದು.

೧೨೪

ಇಲ್ಲಿ 'ಹರಿಅಜರುದ್ರ ಈಶ ಸದಾಶಿವ ' ಎಂಬ ಹಲವು ಶಿವನಾಮಗಳಿದ್ದರೂ ಇವು 'ಹರಿಸ್ತುತಿ' ಯ ಅರ್ಥದಲ್ಲಿಲ್ಲ. ವಿಷ್ಣುಸಹಸ್ರನಾಮಸ್ತೋತ್ರದಲ್ಲಿರುವ ವಿಷ್ಣುವಿನ ಪರ್ಯಾಯನಾಮಗಳು ಶ್ರೀವೈಷ್ಣವ ಧರ್ಮದಲ್ಲಿ ಅದ್ವೈತದಂತೆ ಹರಿಹರಭೇದವಾಗಲಿ, ದ್ವೈತದಂತೆ ಹರಿಸ್ತುತಿಯೊಂದಿಗೆ ಹರಿಸರ್ವೋತ್ತಮತ್ವವಾಗಲಿ ಇಲ್ಲ. ಕೇವಲ ಹರಿ ಏಕ ನಿಷ್ಠೆ ಎಂಬುದಕ್ಕೆ ಅನುಗುಣವಾಗಿ ಇಲ್ಲಿ ಶಿವನಾಮಗಳು ಬಂದಿವೆ.

೧೨೫

ಈ ಕೀರ್ತನೆಯಲ್ಲಿ ಶ್ರೀವೈಷ್ಣವ ತತ್ವವನ್ನು ಅದನ್ನು ಅನುಸರಿಸಿ ಅಮರರಾದ ಆಳ್ವಾರರು ಮತ್ತು ಭಕ್ತರನ್ನು ಜೀವನ ನಿದರ್ಶನಗಳೊಂದಿಗೆ ನಿರೂಪಿಸಲಾಗಿದೆ.

ಗುರುವಿನ ಮೂಲಕ ದೈವಧ್ಯಾನ ಮಾಡುತ್ತಿರುವ ಭಕ್ತನಿಗೆ ದೇವರು ಬೇಡಿದ ವರ ನೀಡುತ್ತಾನೆ. ಭಕ್ತನು ಕೊಟ್ಟರೂ ಕೊಡದಿದ್ದರೂ ಅಪರಾಧ ಮನ್ನಿಸುತ್ತಾನೆ; ನಿಷ್ಠೆಯಿಂದಿದ್ದರೆಂದಿಗೂ ಬಿಡನು;

ವಿರತಿಯನ್ನು ಸಾಧಿಸಿ ಸಂಶಯರಹಿತನಾಗಿ ತತ್ವ ಕಂಡುಕೊಂಡು, ನಿರ್ಮಲವಾಗಿದ್ದು, ಸ್ತುತಿ ಕೇಳುತ್ತ ಸದಾ ದೈವದರ್ಶನ ಮಾಡುವವನಿಗೆ ದೇವರು ಕಾಣಿಸುತ್ತಾನೆ ಎಂಬ ವಿಶಿಷ್ಟಾದ್ವೈತ

ತತ್ವವನ್ನು ಇಲ್ಲಿ ಅತ್ಯಂತ ಸರಳವಾಗಿ ಮತ್ತು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಮುಂದಿನ ನುಡಿಗಳಲ್ಲಿ ಇಂಥ ಸಾಧನೆಯನ್ನು ಮಾಡಿದ ಇಬ್ಬರು ಆಳ್ವಾರರು ಮತ್ತು ಭಕ್ತೆಯಾದ ದ್ರೌಪದಿಯ ನಿದರ್ಶನ ಕೊಟ್ಟಿದ್ದಾರೆ. ನಾಲ್ಕನೆ ನುಡಿಯಲ್ಲಿ ಸ್ತುತಿಸಿರುವ ತಿರುಪ್ಪಾಣಾಳ್ವಾರರನ್ನು ಬ್ರಾಹ್ಮಣ ಶ್ರೇಷ್ಠನಾದ ಲೋಕಸಾರಂಗರು ಕಲ್ಲಲ್ಲಿ ಬೀರಿದ ತಪ್ಪಿಗೆ ಶ್ರೀಹರಿಯಿಂದ ಆಜ್ಞಾಪಿತರಾಗಿ ಹೊತ್ತು ತಂದು ದೇವರ ಸನ್ನಿಧಿಗೆ ಮುಟ್ಟಿಸಿದ್ದನ್ನೂ ಐದನೆ ನುಡಿಯಲ್ಲಿ ಸ್ತುತಿಸಿರುವ ವಿಪ್ರನಾರಾಯಣ (ತೊಂಡರಡಿಪ್ಪೊಡಿಯಾಳ್ವಾರ್) ವಿಪ್ರ ಶ್ರೇಷ್ಠರೇ ಆದರೂ ವೇಶ್ಯೆಯ ಸಂಗಕ್ಕೆ ಸಿಕ್ಕಿ ಅಧಮರಾಗಿ ಮತ್ತೆ ಶ್ರೇಷ್ಠತ್ವಕ್ಕೆ ಏರಿದ್ದನ್ನೂ ಇದಕ್ಕೆ ಕಾರಣವಾದ ಘಟನೆಗಳನ್ನೂ ಇಲ್ಲಿ ಸೂಚ್ಯವಾಗಿ ದಾಖಲಿಸಿದ್ದಾರೆ.

೧೨೭

ಇದು ಶ್ರೀವೈಷ್ಣವರ ನಾಲ್ಕು ದಿವ್ಯ ಕ್ಷೇತ್ರಗಳಲ್ಲಿ ಒಂದಾದ ಮೇಲುಕೋಟೆಯ ಸ್ತುತಿ. ಅಲ್ಲಿಯ ಚೆಲುವನಾರಾಯಣ–ವರಲಕ್ಷ್ಮೀ, ಬೆಟ್ಟದ ಮೇಲಿನ ನರಸಿಂಹ–ಲಕ್ಷ್ಮೀ (ಕಲ್ಯಾಣಮ್ಮ), ರಾಮಾನುಜರು, ಆಳ್ವಾರರು, ದಾಸರ ಗುರುಪೀಠ, ಊರಿನ ವೈಷ್ಣವರು, ಕ್ಷೇತ್ರವನ್ನು ಉದ್ಧರಿಸಿದ ಮೈಸೂರರಸರ ನಾಲ್ವಡಿ ಕೃಷ್ಣರಾಜ ಒಡೆಯರನ್ನು ಈ ಕೃತಿಯಲ್ಲಿ ಸ್ಮರಿಸಲಾಗಿದೆ.

ರಾಮಾನುಜರನ್ನು ಗರುಡಾಂಶರೆಂದು ಇಲ್ಲಿ ಕಲ್ಪಿಸಲಾಗಿದೆ. 'ವೈರ್ಮುಡಿ' ಮೇಲುಕೋಟೆಯ ಪ್ರಸಿದ್ಧ ಉತ್ಸವ. ರಾಮಾನುಜರ ಕಾಲದಲ್ಲಿ ಇದು ಇಲ್ಲದಿದ್ದರೂ ಅವರು ಸ್ಥಾಪಿಸಿದ ಕ್ಷೇತ್ರ ಆ ಹೆಸರಿನಿಂದ ಪ್ರಸಿದ್ಧವಾಗಿರುವುದರಿಂದ ದಾಸರು ರಾಮಾನುಜರಿಗೇ ವೈರ್ಮುಡಿ ಸೇವೆಯನ್ನು ಆರೋಪಿಸಿದ್ದಾರೆ. 'ತಿರುಮಣ್ಣು–ಬಿಳಿನಾಮಕ್ಕೆ ಬಳಸುವ ಮೃತ್ತಿಕೆ– ಇದು ಇಲ್ಲಿ ವಿಪುಲವಾಗಿ ದೊರಕುವ ಕಾರಣದಿಂದ ರಾಮಾನುಜರು–ಈ ಕ್ಷೇತ್ರವನ್ನು ಆರಿಸಿದರೆಂದು ಪ್ರತೀತಿ ಇದೆ. ಎಲ್ಲ ಶ್ರೀ ವೈಷ್ಣವ ದೇವಾಲಯಗಳಲ್ಲೂ ಆಳ್ವಾರರ ಪ್ರತಿಮೆಗಳಿರುತ್ತವೆ. ಮೇಲುಕೋಟೆಯಲ್ಲಿರುವ ಆಳ್ವಾರರ ಸನ್ನಿಧಿಗಳನ್ನೂ ಇಲ್ಲಿ ಸ್ಮರಿಸಲಾಗಿದೆ.

'ವರದವಿಠಲ ' ಎಂಬುದು ಶ್ರೀಹರಿಯ ಪರ್ಯಾಯನಾಮವಾಗಿದ್ದು ಇದು ದಾಸರು ಯತಿಗಳಾಗಿದ್ದ ಉಡ್ಯೆಯರ್ ರಾಮಾನುಜಮಠದ ಗುರುಪೀಠವನ್ನು ಹೇಳುತ್ತಿರುವಂತಿದೆ; (ಆಳ್ವಾರರು ಆಚಾರ್ಯರ ನಂತರ ಗುರುಪೀಠದ ತನಿಯನ್ (ಸ್ತುತಿ–ಶ್ಲೋಕ) ಹೇಳುವುದು ಗುರುಪರಂಪರಾ ಸಂಪ್ರದಾಯ) ಆ ಗುರುಪೀಠದ ಸ್ತುತಿ ಇದಾಗಿರಬಹುದು. ರಾಮಾನುಜರೇ ಸ್ಥಾಪಿಸಿದ್ದ ೭೪ ಪೀಠಗಳಲ್ಲಿ ಇದು ಒಂದೆಂದು ಪ್ರತೀತಿ ಇದೆ.

'ವೆಂಕಟಪುರ ' ಎನ್ನುವುದು ಒಂದು ನಿರ್ದಿಷ್ಟ ಸ್ಥಳದ ಹೆಸರಾಗಿರದೆ ಎಲ್ಲ ಶ್ರೀವೈಷ್ಣವ ಕ್ಷೇತ್ರಗಳನ್ನೂ ಇಲ್ಲಿ ಅರ್ಥೈಸಿದೆ. ಈ ಅರ್ಥದಲ್ಲಿ ಇಲ್ಲಿ ಮೇಲುಕೋಟೆ (ತಿರುಪತಿ ಎಂಬ ಅರ್ಥದಲ್ಲೂ ಕೆಲವೆಡೆ ಉಲ್ಲೇಖವಿದೆ)

ಕೃಷ್ಣಭೂಪಾಲ–ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರನ್ನು ಕುರಿತದ್ದು.

೧೩೪

ದಶಾವತಾರವನ್ನು ಹೇಳುವ ಕೃತಿ. ಹರಿಯನ್ನು ಪರಾತ್ಪರ ಎಂದು ಕರೆದಿದೆ. ಅವತಾರ ಸಂಗತಿಗಳನ್ನು ದ್ವಿಪದಿಗಳಲ್ಲಿ ಸವಿವರವಾಗಿ ನಿರೂಪಿಸಲಾಗಿದೆ. ಭಾರ್ಗವ ರಾಮಾವತಾರದಲ್ಲಿ 'ಪರಶು ' 'ಭಾರ್ಗವ ' ಪದಗಳ ಪ್ರಯೋಗವಿಲ್ಲದಿದ್ದರೂ ಅವತಾರ ವಿವರಣೆಯಲ್ಲೇ ಸೂಚಿಸಲಾಗಿದೆ. ಬುದ್ಧ ಅವತಾರಕ್ಕೆ ಬದಲಾಗಿ ಶ್ರೀವೈಷ್ಣವ ಧರ್ಮ ಸಂಪ್ರದಾಯದ ಬಲರಾಮಾವತಾರವನ್ನು ತರಲಾಗಿದೆ. ಕೊನೆಯಲ್ಲಿ ದಾಸರ ಆರಾಧ್ಯದೈವ ವ್ಯಾಘ್ರಗಿರಿಯ ವರದ ವಿಠಲನ ಬಗೆಗೆ ಸ್ಥಳೀಯವಾಗಿರುವ ಐತಿಹ್ಯದ ಕಥೆಯೊಂದನ್ನು ದಾಖಲಿಸಿದ್ದಾರೆ. 'ತತ್ವ ' ಎಂದರೆ ವಿಶ್ವಕರ್ಮ ಮತ್ತು ಬ್ರಹ್ಮ ಎಂಬ ಎರಡೂ ಅರ್ಥಗಳಿದ್ದು ಇವನಿಂದ ಶಾಪಕ್ಕೊಳಗಾದ 'ಶರಧಿಯೀಂಟಿದ ಮುನಿ ' ಎಂದರೆ ಅಗಸ್ತ್ಯಮುನಿ ವ್ಯಾಘ್ರಗಿರೀಶನನ್ನು ಶರಣು ಹೊಕ್ಕನೆಂಬ ಸಂಗತಿ ಇಲ್ಲಿದೆ. ಈ ವ್ಯಾಘ್ರಗಿರಿಗೆ ಅಗಸ್ತ್ಯಮುನಿ ಸಂಬಂಧದ ಐತಿಹ್ಯವೂ ಪ್ರಚಾರದಲ್ಲಿರುವುದರ ಹಿನ್ನೆಲೆಯಲ್ಲಿ ಈ ಸಂಗತಿಯನ್ನು ಉಲ್ಲೇಖಿಸಿದ್ದಾರಾದರೂ ಇದಕ್ಕೆ ಯಾವ ಪುರಾಣೋಲ್ಲೇಖವೂ ಸಿಗುವುದಿಲ್ಲ. ತಮ್ಮ ಪ್ರತಿಯೊಂದು ಕೀರ್ತನೆಯಲ್ಲಿ ವರದ ವಿಠಲದೊಂದಿಗೆ ವ್ಯಾಘ್ರಗಿರಿ ಪುಲಿಗಿರಿ ಇತ್ಯಾದಿ ಹೆಸರುಗಳಿಂದ ಪ್ರಸಿದ್ಧವಾಗಿರುವ ಚಾಮರಾಜನಗರ ತಾ. ಹುಲಿಗನಮೊರಡಿ ಯನ್ನು ದಾಸರು ಹೆಸರಿಸಿದ್ದಾರೆ.

೧೪೨

ಶ್ರೀಹರಿಯನ್ನು ಪರಾತ್ಪರ, ಪರೇಶ, ವಿರಾಟ್ಪುರುಷ, ವಿಶ್ವಂಧರ ಇತ್ಯಾದಿಯಾಗಿ ಅವನ ಅನಂತತೆಯನ್ನು ಸರಾಗವಾದ ನಾಲ್ಕು ಮಾತ್ರೆಗಳ ನಡೆಯಲ್ಲಿ ಸಂಸ್ಕೃತ ಪದಭೂಯಿಷ್ಠವಾಗಿ ವರ್ಣಿಸಿರುವ ಕೃತಿಯಿದು. ಶ್ರೀಹರಿಯನ್ನು 'ಶಿರೀಷಕುಸುಮದ ಕೋಮಲ ಶರೀರ ' ಎಂದು ವಿಶೇಷಿಸಿ ಕರೆದಿರುವುದು ಅಪರೂಪವಾಗಿದೆ. (ಶಿರೀಷಕುಸುಮವೆಂದರೆ ಬಾಗೆಯಂಥ ಒಂದು ಜಾತಿಯ ಹೂ ಎಂದಷ್ಟೇ ಅರ್ಥವಿದೆ. ಶ್ರೀಹರಿಗೆ ಪ್ರಿಯವಾದ ಮಣಿಹಾರ (ಕೌಸ್ತುಭ, ಶಮಂತಕ ಇತ್ಯಾದಿ) ಗಳಿರುವಂತೆ ಹೂ ಹಾರಗಳ ಉಲ್ಲೇಖ ಕಾಣಸಿಗುವುದಿಲ್ಲ. ಕೃಷ್ಣನಿಗೆ ಅಗಸೆ (ಅಸತೀಪುಷ್ಪ) ಹೂ ಪ್ರಿಯವೆಂದು ಮಾತ್ರ ನಿದರ್ಶನವಿದೆ)

ವ್ಯಾಘ್ರಾಚಲ (ಪುಲಿಗಿರಿ) ಕ್ಕೆ ವ್ಯಾಘ್ರನೆಂಬ ರಾಕ್ಷಸನನ್ನು ಸಂಹರಿಸಿದ ದ್ಯೋತಕವಾಗಿ ಈ ಹೆಸರು ಬಂದುದರ ಐತಿಹ್ಯದ ವಿವರಣೆಯಿದೆ. ಈ ಗಿರಿಗೆ ಶೇಷಾದ್ರಿ. ಫಣಿಗಿರಿ ಎಂಬ ಹೆಸರಿರುವ ಐತಿಹ್ಯದ ಸೂಚನೆಯೂ ಇದೆ.

ಮೂರು ಲೋಕಗಳಿಂದಲೂ ಪೂಜೆಗೊಳ್ಳುವ 'ಹರಿಏಕನಿಷ್ಠೆ'ಯೂ ಇಲ್ಲಿ ವ್ಯಕ್ತವಾಗಿದೆ.

೧೪೭

ಶ್ರೀಹರಿಯನ್ನು ಪುರುಷಸೂಕ್ತದ ಹಿನ್ನೆಲೆಯಲ್ಲಿ ವಾಸುದೇವನ ರೂಪದಲ್ಲಿಯೂ ಕಲ್ಪಿಸಿರುವ ಕೃತಿ. ಬ್ರಹ್ಮನನ್ನು ಮಗನೆಂದು ಜಗತ್ತನ್ನೇ ಶರೀರವಾಗಿರುವನೆಂದೂ ಈ ಜಗತ್ತನ್ನು ನಾಶಗೈಯುವ (ಲಯ) ಹರ ಇವನಿಗೆ ಮೊಮ್ಮಗನೆಂದೂ ಕಲ್ಪಿಸುತ್ತ ಈತ ಅಗಣಿತ ಮಹಿಮ, ನಿಗಮೋದ್ಧಾರ, ನಿಗಮಗೋಚರ, ಮಾಯಾಕಾರ, ಮುನಿಗಳಿಗೆ ಸಿಲುಕದವನು, ಮುನಿಗಳ ಸಮಯ ವ್ಯರ್ಥಮಾಡಿದವನು (ಜಪತಪಮಾಡಿಸಿ) ಎಂದೆಲ್ಲ ವರ್ಣಿಸಿರುವ ಪರಿ ಸೊಗಸಾಗಿದೆ. ಶ್ರೀಹರಿಯ ವಿಶ್ವವ್ಯಾಪಕತೆಯನ್ನು ಶ್ರೀಹರಿಯ ತತ್ವಗಳಿಂದ ಈ ಜೀವ, ಜಗತ್ತುಗಳು ಪರಮಾತ್ಮನ ಶರೀರವೆಂಬ, ಶ್ರೀಹರಿಯೊಬ್ಬನೇ ದೈವವೆಂಬ ಸಂಗತಿಗಳನ್ನು ಇಲ್ಲಿ ಒತ್ತಿ ಹೇಳಿದೆ. ವೈಕುಂಠವನ್ನು ಧಾರ್ಮಿಕ ಪರಿಭಾಷೆಯಾದ 'ಪರಮಪದ ' ಪದದಲ್ಲೇ ಉಲ್ಲೇಖಿಸಿದೆ. ಶ್ರೀವೈಷ್ಣವ ತತ್ವದಲ್ಲಿ ಶ್ರೀಹರಿಯನ್ನು ಪಂಚವ್ಯೂಹಗಳಲ್ಲಿ ಪಟ್ಟಿ ಮಾಡಲಾಗಿದ್ದು ಅದರ ಮೊದಲ ರೂಪವೇ ಈ ವಾಸುದೇವ ಈ ವ್ಯೂಹಕ್ಕೆ ಪರ ಎಂಬ ಹೆಸರಿರುವದರಿಂದ ಪರವಾಸುದೇವ, ಪರಾತ್ಪರ, ಪರೇಶ ಎಂದೆಲ್ಲ ಹೆಸರುಗಳೂ ಇವೆ.

೧೪೮

ಪೂಜಾ ವಿಧಾನದ ಕೀರ್ತನೆಯ ಪರಿಯಲ್ಲಿ ಇದು ಸಾಗುತ್ತದೆ. ವಿವಿಧ ಪೂಜಾ ಕ್ರಿಯೆಗಳ ಮೂಲಕ ದೇವರನ್ನು ಸೇವಿಸಿ ಆನಂದಿಸುವ ಭಕ್ತನ ತನ್ಮಯತೆ ಇಲ್ಲಿದೆ. ಪಾರಂಪರಿತ ಶೋಡಷ ಪೂಜಾ ಕ್ರಮಕ್ಕನುಗುಣವಾಗಿ ಇಲ್ಲಿಯ ಕ್ರಮವೂ ಸಾಗುತ್ತದೆ.

೧೪೯

ಶ್ರೀ ಹರಿಯ ಎಣೆಯಿಲ್ಲದ ಮಹಿಮೆಯನ್ನು ಹೇಳುವ ಮೂಲಕ 'ಹರಿಏಕನಿಷ್ಠೆ'ಯನ್ನೇ ಇಲ್ಲೂ ಪ್ರತಿಪಾದಿಸಿದೆ.

ಜಗತ್ ಕೋಟಿಯನ್ನು ನೋಟ ಮಾತ್ರದಲ್ಲೇ ನಿರ್ಮಿಸುವ ಮತ್ತು ಅದನ್ನು ನಡೆಸುವ ಸೂತ್ರಧಾರಿಯೂ ನೀನಾಗಿರುವೆಯೆಂದು ಹೇಳುತ್ತ ಜಗತ್ತನ್ನು ರಾಗಭಾವಗಳಲ್ಲಿ ತುಂಬುವವನು ವೇದೋಕ್ತನಾದವನು ಎಂದು ಹೇಳಿದ್ದಾರೆ.

ಕೊನೆಯ ನುಡಿಯಲ್ಲಿ ಅರ್ಥ ಸ್ಪಷ್ಟವಿಲ್ಲ. ವೆಂಕಟೇಶ್ವರನ ಹಣದಾಸೆಯನ್ನು ಪದ್ಮಾವತಿ ಪರಿಣಯದಲ್ಲಿ ಮಾಡಿದ ಸಾಲಕ್ಕಾಗಿ ನರರಿಂದ ಕಾಣಿಕೆ, ಹರಕೆಯ ರೂಪವಲ್ಲಿ ವಸೂಲಿ ಮಾಡಿ ಕುಬೇರನಿಗೆ ಅಳೆದು ಕೊಡುವ ಕಥೆಯ ಹಿನ್ನೆಲೆಯನ್ನು ಚಿತ್ರಿಸಿರುವಂತಿದೆ.

೧೫೧

ದಶಾವತಾರವನ್ನು ಹೇಳುವ ಈ ಕೃತಿಯಲ್ಲಿ ಶ್ರೀಹರಿಯನ್ನು ಮನ್ಮಥ ಬ್ರಹ್ಮರ ಪಿತ; ಶಿವ, ಇಂದ್ರರ ತಾತ; ರತಿದೇವಿ ಸರಸ್ವತಿಯರ ಮಾವ ಎಂದು ಹೇಳಿದೆ. ಮೊದಲ ನುಡಿಯಲ್ಲೇ ಕ್ರಮವಾಗಿ ಎಲ್ಲಿ ದಶಾವತಾರಗಳ ಸೂಚನೆಗಳಿದ್ದರೂ ಮತ್ತೆ ಎರಡನೇ ನುಡಿಯಲ್ಲೂ ವರಾಹ, ನರಸಿಂಹ, ವಾಮನ, ಪರಶು, ಬಲರಾಮ, ಕೃಷ್ಣರೂಪಗಳನ್ನು ಸ್ತುತಿಸಲಾಗಿದೆ.

ಪುಲಿಗಿರಿಯ ಐತಿಹ್ಯವನ್ನು ಒಂದು ಅವತಾರದ ರೀತಿಯಲ್ಲಿ ಸ್ತುತಿಸಲಾಗಿದೆ. 'ಕುಂಭಜ ಶಾಪ, ಕುಲಷ' ಎಂಬುದಕ್ಕೆ ಸಂದರ್ಭ ಸ್ಪಷ್ಟವಿಲ್ಲ. ಕುಂಭಜರೆನಿಸಿರುವ ಅಗಸ್ತ್ಯ ವಶಿಷ್ಟ ಇಬ್ಬರಿಗೂ ಇದು ಅನ್ವಯವಾಗುವುದಿಲ್ಲ. ಬಹುಶಃ ಅಗಸ್ತ್ಯ ಸಂಬಂಧದ ಸ್ಥಳಪುರಾಣ ಇದಾಗಿರಬೇಕು.

೧೫೮

ಕೃಷ್ಣನನ್ನು ಕುರಿತು ಸುಂದರವಾದ ಸ್ತುತಿ. ದೇವರ ಮೆರವಣಿಗೆಯ ಪ್ರತಿಮೆಯ ಮೂಲಕ ಕೃಷ್ಣ ಬಂದ ಬಗೆಯನ್ನು ಇಲ್ಲಿ ವರ್ಣಿಸಿದೆ. ಹಲವು ಸುವಾಸನೆಭರಿತ ಹೂಗಳ ಹಾರಗಳಿಂದ ಶೋಭಿಸಿರುವ ಕೃಷ್ಣ ಆನೆಗಳಿಂದಾವೃತ- ನಾಗಿ ಕೂರ್ಮಾವತಾರ ಅಲಂಕಾರದಲ್ಲಿ ಆದಿಶೇಷನ ಮೇಲೆ ವಿರಾಜಿಸಿರುವ ಚಿತ್ರ ಕೊಡುತ್ತಾರೆ. ಶಂಖ ಚಕ್ರಾದಿ ಹಲವು ಲಾಂಛನ ಧ್ವಜಗಳ ಮೆರವಣಿಗೆಯನ್ನು ಬಿಡಿಸಿದ್ದಾರೆ.

ಈ ಮೆರವಣಿಗೆಯನ್ನು ನೋಡಲು ಕೋಟೆಯ ತೆನೆಗಳಲ್ಲಿ ನಿಂತಿರುವ ದಿವ್ಯವಸ್ತ್ರ ಭೂಷಿತ ವಧುಗಳು ಪಾಠಕರಂತೆ ಕಾಣುತ್ತಾರೆ. ಮಂಗಳಕರ ವಾದ್ಯಗಳು ವಾರಾಂಗನೆಯರ ಗಾಯನ, ನಾಟಕ, ನಾಟ್ಯಗಳು, ವಿಪ್ರರ ಸ್ತೋತ್ರ- ಪಠನಗಳು ದಿವ್ಯಭೂಷಣಗಳಿಂದ ವಿವಿಧ ಜ್ಯೋತಿಗಳ ಬೆಳಕಿನಲ್ಲಿ ಬರುವ ಶೌರಿಯ ಚಿತ್ರ ಮನಮೋಹಕವಾಗಿದೆ. ಹೂವು, ಆಭರಣ, ವಾದ್ಯ, ನೃತ್ಯ ಪರಿಭಾಷೆಯ ಹಲವು ಪದಗಳನ್ನು ಆಕರ್ಷಣೀಯವಾಗಿ ಬಳಸಿಕೊಂಡಿದ್ದಾರೆ.

ದಾಸರು ನೋಡಿರುವ ದೇವಾಲಯ ಉತ್ಸವದ ವಿವರಣೆಯಂತೆಯೂ ದಿವ್ಯಾನುಭವದಲ್ಲಿ ಕಂಡ ದೈವಾನುಮಾನದ ದರ್ಶನದಂತೆಯೂ ಎರಡೂ ದೃಷ್ಟಿಯಲ್ಲೂ ಈ ಕೃತಿ ವಿಶೇಷವಾಗಿದೆ.

೧೭೫

ರಾಧೆಯನ್ನು ಕುರಿತ ಕಥನಾತ್ಮಕ ಗೀತವಾಗಿ ಇದು ಕಂಗೊಳಿಸಿದೆ. ರಾಧೆಯನ್ನೇ ಕೇಂದ್ರವಾಗಿಟ್ಟುಕೊಂಡು ರಚಿಸಿರುವ ಈ ಕೃತಿ ರಾಧೆಯ ಕೃಷ್ಣಪ್ರೇಮದ ತವಕ ಧನ್ಯತೆಯನ್ನು ಧ್ವನಿಸುತ್ತದೆ.

ನಂದಾದಿಗಳು ಕಾಳಿಂದಿ ತೀರದ ನಂದನವನಕ್ಕೆ ವಿಹಾರಾರ್ಥವಾಗಿ ಬಂದಿದ್ದಾಗ ಸಂಜೆಯಾಗುವ ಸಮಯದಲ್ಲಿ ನಂದನನು ಕೃಷ್ಣನ ಯೋಗಕ್ಷೇಮವನ್ನು ರಾಧೆಗೆ ವಹಿಸಲಾಗಿ ಅದಕ್ಕಾಗಿಯೇ ಕಾಯುತ್ತಿದ್ದವಳಂತಿದ್ದ ರಾಧೆ ಸಂತೋಷದಿಂದ ಓಡಿ ಬಂದು ಕೃಷ್ಣನನ್ನು ಬರಸೆಳೆದಪ್ಪಿಕೊಂಡು ಮುದ್ದಿಸಿ ಆನಂದವನ್ನು ಹೊಂದಿ ಕೃಷ್ಣನ ಆಸರೆಗಾಗಿ ತವಕಿಸುತ್ತಾಳೆ.

ಸ್ತ್ರೀ ಸಹಜವಾದ ಭಾವನೆಗಳು ಇಲ್ಲಿ ಅತ್ಯಂತ ಸುಂದರವಾಗಿ ಮೂಡಿಬಂದಿದ್ದು ರಾಧೆಯಲ್ಲಿರುವ ಕೃಷ್ಣಭಕ್ತಿಯ, ಸುಪ್ತಮನಸ್ಸಿನ ಬಯಕೆ ಇಲ್ಲಿ ಎದ್ದು ಕಾಣುತ್ತದೆ.

೧೮೦

ಇದು ಹರಿಏಕನಿಷ್ಠೆಯನ್ನು ಪ್ರತಿಪಾದಿಸುವ ವಿಶಿಷ್ಟ ರಚನೆ. ಶಂಕರ ಬ್ರಹ್ಮನಿಂದ ರಚಿಸಲ್ಪಡುವ, ಬ್ರಹ್ಮನ ತಂದೆಯಾಗಿರದ ಸಂಗತಿ ಹೇಳುತ್ತ ಶ್ರೀಹರಿಯೊಬ್ಬನೇ ಜಗತ್ತಿಗೊಡೆಯನೆನ್ನುವ ಈ ಕೃತಿ ಹಲವು ಪುರಾಣದ ನಿದರ್ಶನಗಳನ್ನು ಮತ್ತು ಆಡು ನುಡಿಯ ಗಾದೆ ಮಾತುಗಳನ್ನು ಬಳಸಿ ಸರಳವಾಗಿ ಮತ್ತು ಸುಂದರವಾಗಿ ಶ್ರೀಹರಿಯ ಹಿರಿಮೆಯನ್ನು ನಿರೂಪಿಸುತ್ತದೆ. ಕೆಲವು ಗಾದೆ ಮಾತುಗಳು –

ಧರಣಿಯನಾಳುವ ದೊರೆಯ ಕುಮಾರನು ತಿರುಕೆಯ ಬೇಡುವನೆ.

ಸುರತರುವಿನ ತಂಪುನೆರಳೊಳು ಕುಳಿತು ತಾ ಗರಿಕೆಯನರಸುವನೆ.

ಹೊಳೆಯೊಳು ನೆನೆಯದ ಬಲುಗಟ್ಟಿಕಲ್ಲು ತಾ ಮಳೆಯೊಳು ನೆನೆಯುವುದೆ.

ಎಂಬಂತಹ ತೀರ ಸಾಮಾನ್ಯವಾದ ಹಲವು ಪ್ರತಿಮೆಗಳ ಮೂಲಕ ಶ್ರೀಹರಿಯನ್ನು ಪರಿಪೂರ್ಣ, ನಿಗಮಗೋಚರ, ಪರವಸ್ತು ಎಂದು ಹೇಳುವ ಕವಿ ಇದರ ಬಲದಿಂದಲೇ 'ಇಳೆಯೊಳು ಪುಲಿಗಿರಿ ದಾಸರ ಬಲುಹು ಕುಂದಕವಹುದೆ' ಎಂಬ ಆತ್ಮವಿಶ್ವಾಸವನ್ನು ಪ್ರದರ್ಶಿಸಿದ್ದಾರೆ. ಇದು ಸಾಮಾಜಿಕವಾಗಿ ದಾಸರಿಗೆ, ಭಕ್ತಜನರಿಗಿದ್ದ ಗೌರವವನ್ನು ಸೂಚಿಸುತ್ತದೆ.

೧೮೩

ಈ ಶರೀರದ ಮೇಲಿನ ವ್ಯಾಮೋಹವನ್ನು ಪಂಚೇಂದ್ರಿಯಗಳು ಎಳಸುವ ಸ್ತ್ರೀವ್ಯಾಮೋಹವನ್ನು ಈ ಕೃತಿ ನಿರೂಪಿಸುತ್ತದೆ.

ಶ್ರೀ ವೈಷ್ಣವ ತತ್ವ ' ಈ ಶರೀರ ನನ್ನದಲ್ಲ, ದೈವನಿಯಾಮಕ, ಅವನಿಗೆ ಸೇರಿದ್ದು ' ಎಂಬುದು. ನನ್ನದು ಎಂದುಕೊಂಡಾಗಲೇ ಅದರ ಮೇಲಿನ ವ್ಯಾಮೋಹ, ಅದು ಬಯಸುವ ಆಸೆಗಳಿಗಾಗಿ ಪರಿಶ್ರಮ ಇತ್ಯಾದಿ ಲೋಕಾಸಕ್ತಿ; ಈ ಲೋಕಾಸಕ್ತಿಯ ಅತ್ಯಂತ ಪ್ರಬಲವಾದ ಮತ್ತು ಆಕರ್ಷಕವಾದ ಸೆಳೆತ ಅಥವಾ ಬಯಕೆ ಕಾಮ. ಇದು ಮಾನವ ಸಹಜವಾದದ್ದು. ಇದರ ಸೆಳೆತದ ಪರಿಯನ್ನು ಒಂದೊಂದು ಪಂಚೇಂದ್ರಿಯದ ಹಿನ್ನೆಲೆಯಲ್ಲಿಯೂ ದಾಸರು ವಿವರಿಸುತ್ತ ಅದರ ನಿವೃತ್ತಿಗಾಗಿ ಶ್ರೀ ಹರಿಯನ್ನು ನಿವೇದಿಸಿಕೊಳ್ಳುವ ಮೂಲಕ ಇದಕ್ಕೆ ಮೂಲವಾದ ಶರೀರ ಭ್ರಮೆಯನ್ನೇ ನಿರಾಕರಿಸುವ ಪ್ರಪತ್ತಿಯನ್ನು ಕೈಗೊಂಡಿದ್ದಾರೆ.

೧೮೪, ೧೮೫

ಲಕ್ಷ್ಮೀ ಸಮೇತ ನಾರಾಯಣನನ್ನು ಶ್ರೀವೈಷ್ಣವ ಧರ್ಮಕ್ಕನುಗುಣವಾಗಿ ಇಲ್ಲಿ ಕಲ್ಪಿಸಲಾಗಿದೆ. ಸಂಸಾರಾಂಬುಧಿಯಿಂದ ಪಾರುಮಾಡೆನ್ನುವ ನಿವೇದನೆ ಈ ಕೃತಿಗಳ ಮುಖ್ಯ ವಸ್ತು. ೧೮೪ರಲ್ಲಿ ಮನುಷ್ಯ ಜನ್ಮವೇ ಕೊನೆಯದು. ಕಿಂಕರಭಾವ ಮರೆತೇ ಹಿಂದಿನ ಜನ್ಮಗಳಾಗಿದ್ದವು. ಇನ್ನು ಪುನರಪಿ ಜನ್ಮವಿಲ್ಲ. ನಿನ್ನ ಸೇವೆಯೊಳುನ್ನತರತಿ ಸಲಿಸು ಎಂಬ ಶರಣಾಗತಿಯಿದೆ. ದಾಸರಿಗೆ ಶಬ್ದ ಚಮತ್ಕಾರ ಒಲಿದಿದೆ. ಕನ್ನಡ, ಸಂಸ್ಕೃತ ಶಬ್ದಗಳನ್ನು ಧಾರಳವಾಗಿ ಆದರೆ ಅಷ್ಟೇ ಉಚಿತವಾಗಿ ಬಳಸುವ ಕಲೆ ದಾಸರಿಗೆ ಸಿದ್ಧಿಸಿದೆ. ಅದಕ್ಕೆ ೧೮೫ ಒಂದು ನಿದರ್ಶನವಾಗಿದೆ. ಮೊದಲ ನುಡಿಯಲ್ಲಿ 'ಶ' ಕಾರಯುಕ್ತ ಪದಗಳಿದ್ದರೆ ಎರಡನೇ ನುಡಿಯಲ್ಲಿ 'ಹ' ಕಾರಯುಕ್ತ ಪದಗಳಿವೆ. ಮೂರನೆ ನುಡಿಯಲ್ಲಿ 'ರ' ಕಾರಯುಕ್ತ ಪದಗಳನ್ನು ಜೋಡಿಸಿ ಒಂದು ರೀತಿಯಲ್ಲಿ ಶಬ್ದಾಲಂಕಾರವನ್ನು ಸೃಷ್ಟಿಸಿದ್ದಾರೆ. (ಹಾಗೆಯೇ ೧೮೪ರ ೨ನೇ ನುಡಿಯಲ್ಲಿ 'ಟ' ಪ್ರಯೋಗ.)

'ಶತಸಂಕಾಶ ' ಪದವನ್ನು ವಿಷ್ಣುಸಹಸ್ರನಾಮದ ಹಿನ್ನೆಲೆಯಲ್ಲಿ ಅನಂತತೃಪ್ತ ಎಂಬರ್ಥದಲ್ಲಿ ಬಳಸಿದ್ದಾರೆ. ಪ್ರಜ್ವಲಿಸುವನು, ಅನೇಕ ಪ್ರಕಾಶಮಾನವುಳ್ಳವನು ಎಂಬ ಅರ್ಥವೂ ಧ್ವನಿಸುತ್ತದೆ.

'ವಿದೇಹ ಜಾನರಿ ......ಖಗವರ ' ಎಂಬ ಪದ ಸಮೂಹಕ್ಕೆ ದೇವತೆಗಳಿಂದ '(ವಿದೇಹಜರು) ಮುಚ್ಚಿಡುವುದಕ್ಕೆ (ಗೋಹನ) ಉಚಿತವಾದ ಈ ದೇಹವು ಅಶರೀರಿಯಾದ,

ದೇಹಾತೀತನಾದ (ವಿದೇಹವಿಜಿತ) ಗರುಡವಾಹನನಾದ (ಖಗವರ) ಶ್ರೀಹರಿಗೆ ಮೀಸಲು ವಾರ ಎಂಬರ್ಥವನ್ನು ತಂದಿರುವಂತಿದೆ.

ಅನೇಕ ಹೊಸ ಪದಗಳನ್ನು ಸೃಷ್ಟಿಸುವ, ಪದಗಳಿಗೆ ಹೊಸ ಹೊಸ ಅರ್ಥಛಾಯೆಗಳನ್ನು ತರುವ ಮೂಲಕ ದಾಸರು ವಿಶೇಷ ಪಾಂಡಿತ್ಯವನ್ನು ಮೆರೆದಿದ್ದಾರೆ. ಅನೇಕ ಕೀರ್ತನೆಗಳು ಇದಕ್ಕೆ ನಿದರ್ಶನವಾಗುತ್ತವೆ.

ಸಂಸಾರವನ್ನು ನಿರಾಕರಿಸಿ ಶ್ರೀಹರಿಯ ನಾಮಸ್ಮರಣೆಯೊಂದನ್ನೇ ಬಯಸುವ 'ಶರಣಾಗತಿ ' ತತ್ವ ಈ ಎರಡೂ ಕೃತಿಗಳ ಮುಖ್ಯಭಾವ ಧರೆಯ ರಾಜ್ಯವನೊಲ್ಲೆ.....ಎಂಬಲ್ಲಿಯ ಲೋಕ ಸುಖದ ನಿರಾಕರಣೆ ಎಲ್ಲ ಶ್ರೀವೈಷ್ಣವ ಹರಿದಾಸರ ಮುಖ್ಯ ಧ್ವನಿಯಾಗಿದೆ.

೧೮೬, ೧೮೭, ೧೮೮

ಈ ಮೂರೂ ಕೃತಿಗಳು ಶರಣಾಗತಿಯನ್ನಪೇಕ್ಷಿಸುವ ದಾಸರ ವೈಯುಕ್ತಿಕ ಜೀವನ ವಿವರಗಳನ್ನೊಳಗೊಂಡಿವೆ. ಹರಿಏಕನಿಷ್ಠೆಯಿಂದ ಪ್ರಾರಂಭವಾಗುವ ೧೮೭ನೇ ಕೃತಿಯಲ್ಲಿ ಗಜೇಂದ್ರ ಮೋಕ್ಷ, ಧ್ರುವ, ಪ್ರಹ್ಲಾದ, ದ್ರೌಪದಿ, ವಿಭೀಷಣರ ದುರಿತ ಪರಿಹರಿಸಿದ ಪೌರಾಣಿಕ ಸಂದರ್ಭಗಳನ್ನುಲ್ಲೇಖಿಸುತ್ತ ತನ್ನ ಬದುಕಿನ ಘಟನೆಗಳಲ್ಲೂ ದೈವ ಸಹಾಯದ ಸಂದರ್ಭಗಳನ್ನು ಸ್ಮರಿಸಿರುವ ಚಿತ್ರವಿದೆ.

ನಾನಾ ನಗರ ಸಂಚಾರದಲ್ಲಿ ಕಾಡು ಮೇಡುಗಳ ಅಲೆತ, ಒಂದು ಸಂಜೆ ಈಚಲು ವನದ ಬಂಡಿದಾರಿಯಲ್ಲಿ ಸಿಕ್ಕಿದ್ದಾಗ ಬೆಳಕಾಗಿ ಬಂದು ದಾರಿ ತೋರಿದ್ದು, ಹೆಂಡತಿಗೆ ಉಬ್ಬಸರೋಗ ವಿಪರೀತವಾಗಿದ್ದಾಗ ರೋಗ ನಿವಾರಿಸಿ ಜೀವ ಉಳಿಸಿದ್ದು, ಗುರುಪುತ್ರನನ್ನು ಸಕಾಲದಲ್ಲಿ ಒದಗಿಸಿದ್ದು, ಸೊರಗಿದ್ದ ಅಥವಾ ಕಳೆದುಹೋಗಿದ್ದ ಹಸುಗಳನ್ನು ಮರಳಿ ಪಡೆದಿದ್ದು ಈ ಸಂಗತಿಗಳ ಉಲ್ಲೇಖವಿದೆ. ಬರಗಾಲದ ಸಂದರ್ಭದ ಚಿತ್ರ ಇವರ ಇನ್ನೆರಡು ಕೀರ್ತನೆಗಳಲ್ಲಿ ಬರುವುದರಿಂದ ಆ ಹಿನ್ನೆಲೆಯಲ್ಲಿ ತುರುಸಹಾಯುವಿರುವಂತಿದೆ 'ನರಪೌತ್ರನನು ಬಾಣುದುರಿಯಿಂದ ರಕ್ಷಿಸಿದೆ' ಎಂಬುದು ಪೌರಾಣಿಕ ಸಂದರ್ಭವೊಂದನ್ನು ಹೇಳುವಂತಹುದೋ ಅಥವ ಇದೂ ದಾಸರ ಜೀವನ ಪ್ರಸಂಗವೋ ಎಂಬುದು ದಾಸರ ಜೀವನ ವಿವರಗಳು ಖಚಿತ ಗೊಂಡ ನಂತರವಷ್ಟೇ ನಿರ್ಧಾರವಾಗುವಂತಹುದು.

೧೮೬ಮತ್ತು೧೮೮ ಎರಡೂ ನೇರವಾಗಿ ಶರಣಾಗತಿಯನ್ನು ಹೇಳುತ್ತಿದ್ದು ಈವರೆಗೆ ಇತ್ತ ತಿರುಗದಿದ್ದುದಕ್ಕಾಗಿ ಇದನ್ನು ಮರೆತು ಲೌಕಿಕಾಸಕ್ತಿಯಲ್ಲಿ ಮರೆಯುತ್ತಿದ್ದುದಕ್ಕಾಗಿ ಪಶ್ಚಾತ್ತಾಪವಿದೆ. ನಿನ್ನ ದಾಸರ ದಾಸ ನಾನಯ್ಯ ನೀನೆಗತಿ ಎನಗೆ ನೀರಜನೇತ್ರ ಎಂಬ ಪ್ರಾರಂಭ ಸಾಲುಗಳೇ ಸಂಪೂರ್ಣ ಶರಣಾಗತಿಯ ನಿದರ್ಶನಗಳಾಗಿವೆ.

ದೇಹದಿ ಬಲವಿಲ್ಲದಾದರೂ ಎಂಬುದು ದಾಸರ ಇಳಿವಯಸ್ಸಿನ ಸೂಚನೆಯಂತಿದೆ. ಸೋಹ ವೆಂಬುದಕಿಲ್ಲ ಬೇಸರು ಎಂಬಲ್ಲಿ 'ಅಹಂ'ನ 'ನಾನು' ಎಂಬುದರ ಭಾವವಿದೆ. ಗುರುಕುಲವಾಸದ ಗುರುತೆನಗಿಲ್ಲ, ಪರಮಭಾಗವತರ ಪರಿಚರ್ಯೆಯಿಲ್ಲ, ಮಂತ್ರಾರ್ಥದ ಬೋಧೆ ಮನದೊಳಗಿಲ್ಲ, ತಂತ್ರದೊಳಗೆ ಜಾಣ್ಮೆ ಎನಗಿಲ್ಲ ಎಂಬುದು ಸಂಪ್ರದಾಯ ಬಯಸುವ ಪರಮವೈಷ್ಣವ ಲಕ್ಷಣಗಳು. ಈ ಯಾವ ಅರ್ಹತೆಗಳೂ ತಮಗೆ ಇಲ್ಲದುದರ ಮತ್ತು ಕೇವಲ ನಾಮಸ್ಮರಣೆಯ ಶರಣಾಗತಿಯನ್ನು ಅವಲಂಬಿಸಿರುವುದರ ಸೂಚನೆಯಂತಿದ್ದರೂ ಇಲ್ಲಿ ಇವುಗಳನ್ನು ಸಾಮಾನ್ಯೀಕರಿಸಿರುವಂತಿದೆ.

೨೦೦

ಶ್ರೀಹರಿಯನ್ನು 'ಭವರೋಗ ವೈದ್ಯ' ನೆನ್ನುವ ವಿಶೇಷದ ಹಿನ್ನೆಲೆಯಲ್ಲಿ ಶರೀರರೋಗದ ಸಂಭಾಷಣೆಯನ್ನೇ ಬಳಸಿ ಭಕ್ತಿ ನಿವೇದನೆ ಮಾಡಿಕೊಂಡಿರುವ ಪರಿ ಸ್ವಾರಸ್ಯಕರವಾಗಿದೆ.

ಕಫವಾತ, ಪಿತ್ತಗಳೆಲ್ಲ ಸೇರಿ ಧಾತುಗಳೆಲ್ಲ ವಿಘಾತಗೊಂಡು ಉಸಿರಾಟವಾಡಲಾಗದೆ ಕೆಮ್ಮು, ಗಸೆ, ಉಬ್ಬಸ ರೋಗ ಅಧಿಕವಾಗಿ; ಎದೆ, ನೆತ್ತಿಯೆಲ್ಲ (ಕೇಶರಂಧ್ರದವಕಣೆ) ಘಾಸಿಗೊಂಡಿದೆ ಕಾಯಬಲವೆಲ್ಲ ಮಾಯವಾಗಿದೆ. ಕ್ರಮತಪ್ಪಿದ ದುರ್ವಾಯುವಿನಿಂದ ತಲೆನೋಯುತಿದೆ. ನಿದ್ರೆಯಿಲ್ಲ ರಾತ್ರಿಯೆಲ್ಲ ಎಚ್ಚರ ಮದ್ದು ತಿಂದವನ ಬುದ್ಧಿಯಂತೆ ಮೈಯೆಲ್ಲ ಗುದ್ದಿಕೊಳ್ಳುವಂತಾಗುತ್ತದೆ. ಅಜೀರ್ಣ, ಆಪ್ತರಲ್ಲಿ ಅನುಮಾನ, ಪರಕೀಯತೆ, ಯಾವ ವೈದ್ಯದಿಂದಲೂ ಏನೂ ಆಗಿಲ್ಲ, ರೋಗ ಘನವಾಗಿದೆ, ಶೋಧನೆ ಅತಿಯಾಗುತಿದೆ, ಎಂಬ ಅತ್ಯಂತ ಸರಳ ಮತ್ತು ನೇರ ವಿವರಣೆಯ ಮೂಲಕ ಶರೀರ ಬಾಧೆಯನ್ನು ಬಿಡಿಸಿರುವುದು ಸಹಜ ಸೌಂದರ್ಯಕ್ಕೆ ಉತ್ತಮ ನಿದರ್ಶನವಾಗಿದೆ. ಇದು ಎಲ್ಲ ರೋಗಪೀಡಿತರ ಅನುಭವ ನಿರೂಪಣೆಯಾಗಿರುವಂತೆಯೇ ದಾಸರ ಆತ್ಮರತಿಯೂ ಆಗಬಲ್ಲದು. ಹಿಂದೆ ಒಂದು ಕೀರ್ತನೆಯಲ್ಲಿ ಹೆಂಡತಿಗೂ ಇದೇ ರೋಗವಿದ್ದುದನ್ನು ಉಲ್ಲೇಖಿಸಿರುವುದನ್ನು ೧೮೭ ಗಮನಿಸಿದರೆ ಈ ರೋಗ ದಾಸರಿಗೂ ಇತ್ತೆಂದೇ ಊಹಿಸಬಹುದು.

೨೦೨

ಇದು ವಿಶೇಷವಾದ ನಿಂದಾಸ್ತುತಿ. ದಾಸರು ತಮ್ಮ ದೃಷ್ಟಿಯಲ್ಲಿ ಕಂಡ ದೇವರ ಕೊರತೆಗಳನ್ನು ಇಲ್ಲಿ ಪಟ್ಟಿಮಾಡುತ್ತಾರೆ. 'ಅಷ್ಟಸಿದ್ಧಿಗಳಿದ್ದರೂ ಒಂದಿಷ್ಟು ಕೊರತೆಯಿದೆ ಸಿಟ್ಟುಗೊಳ್ಳಬೇಡ' ಎಂದೇ ಪ್ರಾರಂಭಿಸುತ್ತಾರೆ.

ಹೇಯಗುಣಗಳಿಲ್ಲದಿದ್ದರೂ ಮುನಿಗಳಿಂದ ಸ್ತುತಿಸಲು ಯೋಗ್ಯವಾದ ಲೋಕದ ಜನರ ಅಪವಾದ ಮುಚ್ಚಿಸಲು ಅತಿ ಆಯಾಸ ಪಡುತ್ತೀಯ ಎನ್ನುವಲ್ಲಿ ರಾಮ–ಕೃಷ್ಣರ ಅಪರಾಧ

ಪರಿಹಾರ ಪ್ರಯತ್ನಗಳನ್ನು ಹೇಳುತ್ತಿದ್ದಾರೆ. ನಿನಗೆ ಮಿಥ್ಯಾವಚನವಿಲ್ಲವೆಂಬುದು ಅತ್ಯಧಿಕ ಕೊರತೆ ಎನ್ನುವಲ್ಲಿ ಕೃಷ್ಣನ ಕಾಪಟ್ಯವಿದೆ. ಅಜ್ಞಾನ ಶೂನ್ಯತೆಗೆ ಸಕಲ ವಸ್ತುಗಳೂ ನಿನ್ನಲ್ಲಿದ್ದರೂ ಇಲ್ಲವೆಂಬ ಶಬ್ದವಿಲ್ಲ ಕೊರತೆ, ಪಾಪ ತೊಳೆವ ದೀಪವಾಗಿದ್ದರೂ ಆ ದೀಪದಲ್ಲಿರುವ ಕತ್ತಲಿನ ಕೊರತೆ ನೀನೆ ಪರಂಜ್ಯೋತಿಯಾಗಿರುವಾಗ ಆ ಜ್ಯೋತಿಯಿಂದಲೇ ಆರತಿ ಎತ್ತಿಸಿಕೊಳ್ಳುವ ಪ್ರಿಯತೆಯ ಕೊರತೆ, ನಿನ್ನನ್ನು ಬೈಯುವವರನ್ನೂ ಭಕ್ತರನ್ನಾಗಿ ಹೊಂದಿರುವ ಕೊರತೆ, ಭಕ್ತರನ್ನು ಪಾಲಿಸುವ ನಿತ್ಯಕರ್ಮಗಳಲ್ಲಿ–ನಿತ್ಯತೃಪ್ತನಾದರೂ–ಅತೃಪ್ತನೆಂಬ ಕೊರತೆ, ದುರ್ಗುಣನಾದರೂ ಸಂಪೂರ್ಣ ಶರಣಾದರೆ ಇಷ್ಟಪಡುವ ಕೊರತೆ, ಚೋರ ಜಾರನಾಗಿದ್ದರೂ (ಕೃಷ್ಣನಲ್ಲಿ) ಸಂಸಾರವೈರಿ ಎನಿಸಿಕೊಂಡಿರುವ ಕೊರತೆಗಳನ್ನು ಹೇಳಿದ್ದಾರೆ.

ಈ ಕೊರತೆಗಳನ್ನು ಪಟ್ಟಿ ಮಾಡುವಲ್ಲಿ ಸಹಜತೆಯೂ ತಾರ್ಕಿಕತೆಯ ಕೌಶಲವೂ ವಿಶೇಷವಾಗಿ ಕಂಡುಬರುತ್ತದೆ. ದಾಸರಲ್ಲಿರುವ ಈ ವಿಶೇಷ ಅಂತರ್ದೃಷ್ಟಿ ಅಪರೂಪದ್ದಾಗಿದೆ.

೨೦೧ಮತ್ತು ೨೦೩ ಸಹ ನಿಂದಾಸ್ತುತಿ ಆಗಿದ್ದು ಇವೂ ಸುಂದರವಾಗಿವೆ. ೨೦೧ರಲ್ಲಿ ಕಶ್ಯಪ, ಸತ್ರಾಜಿತ, ಸುತ್ರಾಮ ಜಾಂಬವತಿ ಮುಂತಾದ ಅಪರೂಪದ ಪುರಾಣ ಪ್ರತಿಮೆಗಳಿದ್ದರೆ ೨೦೩ರಲ್ಲಿ ಅವತಾರಗಳೇ ದಾಸರಿಗೆ ಅಪವಾದಗಳಾಗಿ ಕಂಡಿರುವುದು ಉಚಿತವಾಗಿದೆ.

೨೦೪

ಸಮಾಜದಲ್ಲಿರುವ ಜಾತಿ–ಧರ್ಮ–ಶೀಲಗಳನ್ನು ಕುರಿತು ಅತ್ಯಂತ ತೀಕ್ಷ್ಣವಾಗಿ ಸ್ಪಂದಿಸಿರುವ ಸಾಮಾಜಿಕ ಕೀರ್ತನೆ ಇದು. ಇವುಗಳ ಅಧಃಪತನದಿಂದ ಸಜ್ಜನರಿಗಾಗುತ್ತಿರುವ ಅವಮಾನ–ಅಪಮಾನವನ್ನು ನೋಡಿಯು ನೀನು ಸುಮ್ಮನಿರುವುದು ತರವೇ ಎಂಬ ಧೋರಣೆಯಲ್ಲಿ ಈ ಕೀರ್ತನೆ ಸಾಗುತ್ತದೆ.

ಶಾಸ್ತ್ರಧರ್ಮ ಜಾತಿ, ರೀತಿ ನಡತೆಗಳನ್ನು ಮೀರಿ ನಡೆಯುತ್ತಿರುವವರನ್ನು 'ಕೋತಿಜನಗಳು' ಎಂದು ಕರೆದಿದ್ದಾರೆ. ದುರ್ಜನರೇ ಅಧಿಕವಾಗಿ ಲಜ್ಜೆಮೀರಿ ಕುಲವಿನಾಶಕರಾಗಿ (ಕುಲಕಜ್ಜಳರು)ದ್ದಾರೆ ಎಂದು ಸಮಾಜದ ಜನರ ಜೀವನ ಮೌಲ್ಯದತ್ತ ಬೆಳಕು ಚೆಲ್ಲಿದ್ದಾರೆ.

ಶೀಲದ ಬಗೆಗೂ ದಾಸರಲ್ಲಿ ವಿಶೇಷವಾದ ಕಾಳಜಿ ಕಂಡುಬಂದಿದೆ. ಗಂಡನನ್ನು ಬಿಟ್ಟವರು ಗರತಿಯರನ್ನು ಕಂಡು ನಗುತ್ತಿರುವುದು, ಮಿಂಡರೊಂದಿಗಿರುವುದು, ಧೈರ್ಯವಾಗಿಯೇ ಪರಗಂಡಂದಿರೊಂದಿಗೆ ಓಡಾಡುತ್ತಿರುವುದು, ಕಾಳ–ಮೂಳಿಯರೇ ಅಧಿಕವಾಗಿದ್ದು ಅವರನ್ನನುಸರಿಸುವ ಜನರಿರುವುದು (ಇವೆರಡನ್ನು ಬಾಳುಗೇಡಿ ಜನರು ಎಂದು ಕರೆದಿದ್ದಾರೆ) ಇತ್ಯಾದಿ ಸಮಾಜದಲ್ಲಾಗುತ್ತಿರುವ ಬದಲಾವಣೆಗಳಿಗೆ ಕಿಡಿಕಿಡಿಯಾಗುವಷ್ಟು ದಿಟ್ಟವಾಗಿ ಸ್ಪಂದಿಸಿ ಭಾರತೀಯ ಸಂಸ್ಕೃತಿಯ ಸಾಮಾಜಿಕ ಮೌಲ್ಯಗಳನ್ನು ಉಳಿಸುವಲ್ಲಿ ತಮ್ಮದೇ ರೀತಿಯ ಪ್ರಯತ್ನವನ್ನು ಮಾಡಿದ್ದಾರೆ.

೨೦೫

ತಿಗಣೆಯ ಕಾಟವನ್ನು ಸುಗುಣೆಯ ಕೂಟಕ್ಕೆ ಹೋಲಿಸಿರುವ ಈ ಕೃತಿ ಲೋಕನೀತಿಯನ್ನು ಹೇಳುತ್ತಲೇ ಈ ಲೌಕಿಕ ಸುಖ-ಕಾಟದಿಂದ ನಿವೃತ್ತಿಯನ್ನು ಬಯಸುವ ಪ್ರಪತ್ತಿಯನ್ನೂ ಸಾರುತ್ತದೆ.

ತಿಗಣೆಯ ಸಂದುಗೊಂದುಗಳ ಹರಿದಾಟ, ಕಚ್ಚುವಿಕೆ, ರಾತ್ರಿಯ ಅದರ ಚಟುವಟಿಕೆಗಳು ರತಿಸುಖದ ವಿವಿಧ ಕ್ರಿಯೆಗಳಿಗೆ ಹೋಲಿಸಿರುವ ಪರಿ ಅತ್ಯಂತ ಸಹಜತೆಯಿಂದ ಕೂಡಿದೆ. ತಿಗಣೆಯ ಕಾಟದಿಂದ ನರನಾಡಿಗಳಲ್ಲಾಗುವ ಪರಿಣಾಮದ ಒದ್ದಾಡುವಿಕೆ, ಮುಗ್ಧೆಯಪ್ಪುಗೆಯ ಮುದ್ದಾಡುವಿಕೆಗೆ ಹೋಲಿಸಿರುವುದು ಮಾನವ ಸಹಜವಾದ ಲೋಕಸುಖದಾಸಕ್ತಿಯನ್ನು ಧ್ವನಿಸುತ್ತದೆ.

ತಿಗಣೆಯೊಂದಿಗೆ ಚಿಗಟದ ಅಸ್ತಿತ್ವವನ್ನು ಸೂಚಿಸುವ ಮೂಲಕ ಈ ಸುಖದ ಕಾಟದ ಪರಾಕಾಷ್ಠೆಯನ್ನು 'ಬುಗಟೆದ್ದಗಾಯ ' ದ ಮೂಲಕ ಸೂಚಿಸುತ್ತ ಇದರಿಂದ ಬಿಡುಗಡೆ ಕೋರುವ ದಾಸರು ಶ್ರೀಹರಿಯನ್ನು ಇಂತಹ ದುರಿತ ಕೋಲಾಹಲ, ಕಪಟನಾಟಕಧಾರ ಇವೆಲ್ಲ ಅವನೇ ನಡೆಸುವ ವ್ಯಾಪಾರ ಎಂದೂ ಹೇಳುವುದನ್ನು ಮರೆಯುವುದಿಲ್ಲ. ಇವರ ಅನೇಕ ಕೃತಿಗಳಲ್ಲಿ ಈ ಶ್ರೀವೈಷ್ಣವ ನಿಷ್ಠೆ ಸರ್ವಂಹರಿಮಯಂ-ಪುಂಖಾನುಪುಂಖವಾಗಿ ಬರುತ್ತದೆ.

೨೦೭

ಪುರಂದರ 'ತನುವನೀರೊಳಗದ್ದಿ ಫಲವೇನು' ಕೃತಿಯಿಂದ ಪ್ರಭಾವಿತವಾಗಿರುವಂತೆ ತೋರುವ ಈ ಕೀರ್ತನೆ ಅದಕ್ಕಿಂತ ಭಿನ್ನವಾಗಿ ಪ್ರತ್ಯೇಕವಾಗಿಯೇ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಅಕ್ಕರೆಯರಿಯದ ತಾಯಿ ಮಕ್ಕಳು, ದುಃಖಕ್ಕೆ ಆಸರೆಯಾಗದ ಒಕ್ಕಲುತನ, ಮಕ್ಕಳ ಆರೋಗ್ಯವನ್ನು ನೋಡಿಕೊಳ್ಳದ ಮಾತಾಪಿತರು, ಹಗಲುಗನಸಿನ ಹಣಕ್ಕೆ (ಆಸೆಗೆ) ಭ್ರಮಿಸುವ ಮನುಜ, ಮುಂತಾದ ಲೋಕ ವ್ಯವಹಾರವನ್ನು ಮಾರ್ಮಿಕವಾಗಿ ಪ್ರಶ್ನಿಸುವಂತೆಯೇ ತಾವು ಸಮಾಜದಲ್ಲಿ ಕಂಡ ಶೀಲದ ಅನೈತಿಕತೆಯನ್ನು ಪ್ರಶ್ನಿಸಿದ್ದಾರೆ. ಗಂಡನ ದೂರುತ ಮಿಂಡನ ಸೇರುವ ಹೆಂಡತಿ, ಗಂಡನಿಲ್ಲದ ತರುಣಿಯ ಶೃಂಗಾರಗಳಂಥ ಹಲವು ಬಗೆಯ ಸಾಮಾಜಿಕ ಅನೀತಿಯನ್ನು ಇನ್ನೂ ಕೆಲವು ಕೀರ್ತನೆಗಳಲ್ಲೂ ದಾಖಲಿಸುತ್ತಾರೆ.

ಕರೆಯದ ಹಸು, ನೆರೆಯದ ಸೊಸೆಯನ್ನು ತರುವಲ್ಲಿನ ಅಜ್ಞಾನ; ಹಿರಿತನಕ್ಕನುಗುಣವಾಗಿ ನಡೆಯದಾತನ ವ್ಯರ್ಥಹಿರಿತನ, ಸಂಸಾರವನ್ನು ತನ್ನ ಹಿಡಿತದಲಿಟ್ಟುಕೊಳ್ಳದಾತನ ಗಂಡಸುತನ ಮುಂತಾದ ಸಾಮಾಜಿಕ ವ್ಯವಹಾರ ಕುಶಲತೆಯನ್ನು ದಾಖಲಿಸುವುದರ ಮೂಲಕ ಈ ಕೀರ್ತನೆ ಅತ್ಯಂತ ಸಮರ್ಥ ಸಾಮಾಜಿಕ ಕಳಕಳಿಯನ್ನು ಪ್ರದರ್ಶಿಸುತ್ತದೆ.

೨೧೦,೨೧೧

ಇವೆರಡೂ ಶ್ರೀವೈಷ್ಣವ ತತ್ವವಾದ 'ಶ್ರೀಹರಿಏಕನಿಷ್ಠೆ' ಯನ್ನು ವ್ಯಕ್ತಪಡಿಸುವ ಕೃತಿಗಳು. ಸಕಲಭೂತಗಳಲ್ಲಿ ಜಾತ ಚೇತನವಾದ ಇವನು ಲೋಕೈಕನಾಥ, ಬ್ರಹ್ಮರೂಪನೂ ಇವನೆ ಚರ್ಮವಸ್ತ್ರವುಟ್ಟ ರೌದ್ರಕರ್ಮನೂ ಇವನೇ, ಕಾಲಧರ್ಮನೂ ಇವನೆ ಮಲಗಿ ತೇಲುವ ಸೃಷ್ಟಿಕರ್ತನೂ ಇವನೇ, ಅಮರರಿಗೆ ಒಡೆಯ, ಸುಮಶರನ ತಂದೆ, ಗಂಗೆಯನ್ನು ಕೊಟ್ಟವನು; ದುಷ್ಟ ಶಿಕ್ಷಕ ಎಲ್ಲವೂ ರಮೆ–ಕ್ಷಮೆ ಶ್ರೀ–ಭೂದೇವಿಯರ ಪತಿಯಾದ ಈ ವಾಸುದೇವನೇ. ಆದಿಶೇಷನ ಮೇಲೆ ವೈಕುಂಠವಾಸಿಯಾಗಿರುವ ಗರುಡವಾಹನನಾದ ಇವನು ಶೇಷಗಿರಿ. '(ತಿರುಪತಿ)ಯಿಂದ ಈ ವ್ಯಾಘ್ರಗಿರಿಗೆ ಬಂದು ನೆಲಸಿ ಶಂಖಚಕ್ರಧಾರಿಯಾಗಿ ಚರಣ ಸೇವಕನನ್ನು ಶರಣಾಗತರನ್ನು ಪೊರೆಯುತ್ತಿರುವ ಈತನೇ ರಮಾನಿವಾಸನು, ಚಿದ್ವಿಲಾಸನು ಎಂದು ೨೧೦ ಹೇಳಿದರೆ ೨೧೧ ಇದೇ ಭಾವವನ್ನೂ ಪೂಜಾ ವಿಧಾನದ ಹಿನ್ನೆಲೆಯಲ್ಲಿ ಸ್ವಾರಸ್ಯಕರವಾಗಿ ನಿರೂಪಿಸಿದೆ. ಇಂತಹವನಿಗೆ ಹೇಗೆ ಪೂಜೆ ಮಾಡುವುದು ಎಂದು ಉದ್ಗರಿಸುತ್ತ ಷೋಡಷ ಉಪಚಾರಗಳನ್ನು ಹೊಂದಿದ್ದಾನೆಂಬುದನ್ನು ತೋರಿಸಿದೆ. ಇಲ್ಲಿ 'ಈಸವೀಸ' ಪೂಜಾ ಮೂರ್ತಿಯ ಅಳತೆಯಾಗಿಯೂ ವಾಹನಗೀಸನ ಪ್ರತಿಧ್ವನಿ ಶಬ್ದವಾಗಿಯೂ ಬಳಕೆಯಾಗಿದೆ. 'ಸರ್ವಂಹರಿಮಯಂ ಜಗತ್' ತತ್ವದ ಪ್ರತಿಪಾದನೆಯಾಗಿ ಇವು ನಿಲ್ಲುತ್ತವೆ. 'ಈತನೀಗ ವಾಸುದೇವ ಸಕಲ ಲೋಕದೊಡೆಯ' ಎಂಬ ಕನಕದಾಸರ ಕೃತಿಯಂತೆ ಇದೂ ಸಾಗುತ್ತದೆ. ಕನಕದಾಸರ ಈ ಕೃತಿಯನ್ನು ಇದೇ ತತ್ವದ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳುವುದು ಹೆಚ್ಚು ಸೂಕ್ತವೆನಿಸುತ್ತದೆ.

೨೧೨

ಜೀವ–ಪರಮಾತ್ಮನಿಗಿರುವ ಅಂತರವನ್ನು ತುಂಬ ಮಾರ್ಮಿಕವಾಗಿ ಇದು ನಿರೂಪಿಸುತ್ತದೆ. ಶ್ರೀವೈಷ್ಣವ ಮತ ಸಕಲ ಜೀವಗಳೂ ಪರಮಾತ್ಮನೇ ಎಂದು ಹೇಳಿದೆ, ಅದರಂತೆ ಭಕ್ತ–ಪರಮಾತ್ಮ ಒಂದೇ ಆಗುತ್ತಾರೆ ಎಂಬುದು ರಾಧೆ ರಾಸಲೀಲೆ, ಆಂಡಾಳ್ ನಿದರ್ಶನಗಳಲ್ಲಿ ನಿರೂಪಿತವಾಗಿದ್ದರೂ ಸಾಧ್ಯತೆಗೆ ಭಕ್ತ ಅಥವಾ ಜೀವ ಸಂಪೂರ್ಣ ಶರಣಾಗತನಾಗಿರಬೇಕು. ನಿಜಪ್ರಪತ್ತಿಯಲ್ಲಿ ಮುಳುಗಿರಬೇಕು. ಅದಕ್ಕೆ ಮೊದಲಿನ ಅಂದರೆ ಪ್ರಪತ್ತಿಯ ಆರಂಭ ಸ್ಥಿತಿಯಲ್ಲಿ ಜೀವ–ಪರಮಾತ್ಮರು ಬೇರೆ ಬೇರೆಯಗಿಯೇ ಕಲ್ಪಿತರಾಗುತ್ತಾರೆ.

ಪರಮಾತ್ಮನಲ್ಲಿ ಲೀನವಾಗುವುದಕ್ಕಾಗಿಯೇ (ಅಂದರೆ ಪರಮಪದ (ವೈಕುಂಠವನ್ನು) ಸೇರುವುದಕ್ಕಾಗಿಯೇ) ಜೀವನು ದೇವನಲ್ಲಿ 'ಸಾತ್ವಿಕ ತ್ಯಾಗ'ಮಾಡಿ 'ಭರನ್ಯಾಸ' ಮಾಡುತ್ತಾನೆ. ಪರಿಪರಿಯಾಗಿ ಭಗವಂತನನ್ನು ನಿವೇದಿಸಿಕೊಳ್ಳುತ್ತಾನೆ. ಈ ಹಂತದಲ್ಲಿ ಆತ್ಮನಿವೇದನೆಯಾಗಿ ಮತ್ತು ಆ ಮೂಲಕ ಧರ್ಮದ ತಾತ್ವಿಕ ಚಿಂತನೆಯಾಗಿ ಈ ಕೃತಿ ನಿಲ್ಲುತ್ತದೆ. 'ಎಣೆಗಾಣೆ ನಿರ್ವರ್ಗೆ' ಎನ್ನುತ್ತ ಶ್ರೀಹರಿಗಿರುವ ಎಲ್ಲ ವಿಶಿಷ್ಟ ಲಕ್ಷಣಗಳನ್ನೂ ಪಟ್ಟಿಮಾಡಿ ಅದರ ವಿರುದ್ಧ ಗುಣಗಳಲ್ಲಿ ತಮ್ಮನ್ನು ನಿಲ್ಲಿಸಿಕೊಳ್ಳುವ ಮೂಲಕ ಅದರ ನಿವೃತ್ತಿಗಾಗಿ ದಾಸ್ಯತ್ವವನ್ನು ಬಯಸುವ ಧ್ವನಿ ಇಲ್ಲಿದೆ. ಪುಣ್ಯ ಹೀನರಿಗಗ್ರಗಣ್ಯ, ನಿರ್ಗತಿಕ ಎಂದೆಲ್ಲ ಆತ್ಮನಿಂದನೆ ಮಾಡಿಕೊಳ್ಳುತ್ತ 'ಶರಣರ ಧೂಳೀಪಟಲ'ನಾಗಿರುವ ಶರಣಾಗತಿಯನ್ನು ಇಲ್ಲಿ ಮೆರೆದಿದ್ದಾರೆ.

೨೧೩

ಶ್ರೀವೈಷ್ಣವ ಸಿದ್ಧಾಂತದಲ್ಲಿ ಪ್ರಪತ್ತಿಯನ್ನು ಮಾಡುವವನಿಗೆ ಪರಮಪದ (ವೈಕುಂಠವನ್ನು) ಸೇರುವುದೇ ಪರಮ ಪುರುಷಾರ್ಥ. ಈ ವೈಕುಂಠ ಲೋಕದಲ್ಲಿ ಸದಾ ಭಗವಂತನ ಕೈಂಕರ್ಯಪೂರ್ಣ ಆನಂದಾನುಭವ ದೊರಕುತ್ತದೆಂದು ನಂಬಲಾಗಿದೆ. ಶ್ರೀಹರಿಯ ಚರಣಸೇವೆ, ಅವನ ಲೀಲಾ ವಿಲಾಸಗಳ ದರ್ಶನ ಅವನೊಂದಿಗೆ ತನ್ನ ನಲಿವು ಇತ್ಯಾದಿಗಳೇ ಅಲ್ಲಿಯ ಆನಂದಾನುಭವ. (ಇದು ಪರಮಭಕ್ತನಿಗೆ ಇಹಲೋಕದಲ್ಲೇ 'ದರ್ಶನ'ಕ್ಕೆ ಲಭ್ಯವೂ ಹೌದು) ಇದನ್ನನುಭವಿಸುವವರೇ ಮುಕ್ತರು. ಬದ್ಧ ಸಂಸಾರಿಯಾದ ಈ ಜೀವನು ಸಂಸಾರದಿಂದ ನಿವೃತ್ತಿ ಬಯಸಿ, ಆತ್ಮಾನುಭವದ ತೃಪ್ತಿಯಿಂದ ಕೇವಲನಾಗಿ ಮೋಕ್ಷಾಪೇಕ್ಷೆಯ ಮುಮುಕ್ಷುವೆನಿಸಿ ಕರ್ಮದ ಸೋಂಕಿಲ್ಲದೆ ಸಂಸಾರ ಬಂಧನಕ್ಕೊಳಗಾಗದೆ ಭಗವಂತನ ಕೈಂಕರ್ಯದಲ್ಲೇ ಆನಂದಪಡುವ ನಿತ್ಯನಾಗಿರ ಬೇಕಾಗಿರುತ್ತದೆ. ಈ ನಿತ್ಯತ್ವವನ್ನು ಪಡೆಯಬೇಕಾದರೆ ಪ್ರವತ್ತಿಯೊಂದೇ ಸುಲಭೋಪಾಯ. ಈ ಪ್ರಪತ್ತಿಯ ಪರಮಗುರಿಯೇ ಮುಕ್ತತ್ವವನ್ನು ಪಡೆಯುವದು ಆ ಮೂಲಕ ನಿತ್ಯತ್ವಕ್ಕೆ ಅಂದರೆ ವೈಕುಂಠಕ್ಕೆ ದಾರಿ ಮಾಡುಕುವುದು ಈ ನಾಲ್ಕೂ ಶ್ರೀವೈಷ್ಣವ ತತ್ವದಲ್ಲಿ ಮೋಕ್ಷದ ಮೆಟ್ಟಿಲುಗಳು

ಇದನ್ನೇ ದಾಸರು ಈ ಕೃತಿಯಲ್ಲಿ ಅತ್ಯಂತ ಸುಂದರವಾಗಿ ನಿರೂಪಿಸಿರುವುದು. ಜೀವನವನ್ನು ಹಿಂಡಿತಿನ್ನುವ ಸಂಸಾರದ ಬಿಡುಗಡೆಯನ್ನು ಬದ್ಧ ಸಂಸಾರತ್ವದ ಬಿಡುಗಡೆಯಾಗಿ ಅದರ ಪರಿಪರಿಯಾದ ಹಿಂಸೆಯ ವಿವರಣೆಯೊಂದಿಗೆ ನಿವೇದಿಸಿದ್ದಾರೆ. ಸಂಸಾರವನ್ನು ಕಾಂತಾರವೆಂದೂ ಕರ್ಮಗಳನ್ನು ಹೆಮ್ಮರವೆಂದೂ ಧರ್ಮವಿರೋಧವನ್ನು ಬಳ್ಳಿಯ ಬಿಗಿ ಹಿಡಿತವೆಂದೂ ಅಹಂಕಾರ ಮತ್ತು ಆತ್ಮಾಭಿಮಾನವನ್ನು ಹಮ್ಮಿನಗುಂಡಿ ಹೆಮ್ಮೆಯ ಕಂಟಕ ಮೇಲೇಳಲಾಗದ ಕೆಸರಗುಂಡಿ ಹಾಗೂ ನಿವಾರಿಸಲಾಗದ ಕಂಟಕವಾಗಿ ಕಂಡಿರುವ ಪ್ರತಿಮೆ ಅತ್ಯಂತ ಉಚಿತವಾಗಿದೆ ಮತ್ತು ದಾರ್ಶನಿಕವಾಗಿದೆ.

ನಾರೀಮೋಹವು ಭಾರಿ ದುರ್ಗವಾಗಿದೆ. ಹೇಗೋ ಮೀರಿ ಬಂದರೆ ಅರಿಷಡ್ವರ್ಗಗಳು ಮುಳಿದು ತಾಪತ್ರಯಗಳನ್ನುಂಟುಮಾಡುತ್ತವೆನ್ನುತ್ತಾರೆ.

ಮನೆಯಮೋಹ ಅನೇಕ ನರಿಗಳನ್ನು (ಆಸೆ) ಕೂಡಿಕೊಳ್ಳುವ ಮಹಾನದಿ ಎನಿಸಿದೆ. ಧನಿಕರುಗಳು ಪಿಶಾಚಿಗಳಾಗಿ ಹಿಂಬಿಡದೆ ಕಾಡುತ್ತಿದ್ದರೆ ಇನ್ನೊಂದೆಡೆ ಬಂಧು ಬಾಂಧವರು ದುರ್ಮಾಗದೋಪಾದಿಯಲ್ಲಿ ಬಾಧಿಸುತ್ತಾರೆ.

ಕ್ಷುದ್ರ ವಿಷಯಗಳೆಲ್ಲ ಮೇರೆ ಮೀರಿ ದೌರ್ಜನ್ಯವನ್ನಾಗಿಸುತ್ತ ಸ್ಥಿರವಲ್ಲದ (ಅಧ್ರುವ) ಈ ದೇಹವನ್ನು ಕೋಟಲೆಗೀಡುಮಾಡುತ್ತವೆನ್ನುವುದಕ್ಕೆ ಕದ್ರುಸುತರಾದ ವಾಸುಕಿ ಮುಂತಾದ ಸರ್ಪಗಳು ಪಟ್ಟ ಉಪದ್ರವವನ್ನು ಪ್ರತಿಮೆಯಾಗಿ ಬಳಸುತ್ತಾರೆ. (ಸಮುದ್ರಮಥನಕ್ಕೆ ಹಗ್ಗವಾದದ್ದು, ಜನಮೇಜಯ ಇವುಗಳ ನಾಶಕ್ಕೆ ಸರ್ಪಯಾಗವನ್ನೇ ಮಾಡಲುದ್ಯುಗಿಸಿದ್ದು ಇತ್ಯಾದಿಗಳ ಹಿನ್ನೆಲೆಯನ್ನು ಪುರಾಣ ಪ್ರತಿಮೆ ನೀಡುತ್ತದೆ) ಮುಪ್ಪನ್ನು ಉದ್ರಿಕ್ತಾಂಗನೆಯಾಗಿ ಕಲ್ಪಿಸಿ ನಿದ್ರೆಯಲ್ಲೂ ಬಂದು ಕಾಡುತ್ತಾಳೆಂಬ 'ಪ್ರತಿಮಾದರ್ಶನ' ಸುಂದರವಾಗಿದೆ. ಇಲ್ಲಿಯ ಪದನಿರ್ಮಿತಿಯೂ ಅದ್ಭುತವಾಗಿದೆ. ದಾಸರಿಗೆ ಭಾಷೆ-ಭಾವ ಎರಡೂ ಸಿದ್ಧಿಸಿದೆ ಎಂಬುದಕ್ಕೆ ಇಂತಹ ಹಲವು ಕೀರ್ತನೆಗಳು ದೊರಕುತ್ತವೆ.

ಶರಣಾಗತಿಗಾಗಿ ದಾಸತ್ವಕ್ಕಾಗಿ ನರಶ್ರೇಷ್ಠರನ್ನೂ ಭಾಗವತೋತ್ತಮರನ್ನೂ ಅರಸಲು ಹೋಗದೆ ಅವರೆಲ್ಲ ನರಿಗಳಂತೆ ನರಕವಾಸಿಗಳಾಗಿದ್ದಾರೆಂಬ ವ್ಯಂಗ್ಯ ವಾಸ್ತವದ ಸಾಮಾಜಿಕ ಸ್ವರೂಪಕ್ಕೆ ಹಿಡಿದ ಕನ್ನಡಿಯಾಗಿದೆ. ಸಾತ್ವಿಕರಲ್ಲಿಯೂ ನಿಸ್ಸತ್ವ ತುಂಬುವ ಸಮಾಜದ ಡಾಂಭಿಕತನದ ಪಾರಮ್ಯ ಇದರಿಂದ ವೇದ್ಯವಾಗುತ್ತದೆ. (ಶ್ರೀವೈಷ್ಣವ ಸಿದ್ಧಾಂತದಲ್ಲಿ ಪ್ರಪತ್ತಿಯನ್ನನುಸರಿಸುವವನು ಪರಮ ವೈಷ್ಣವನೊಬ್ಬನ ಪಾದತೀರ್ಥ ಸೇವಿಸಬೇಕೆಂಬ, ವೈಷ್ಣವರ ಸೇವೆ ಮಾಡಬೇಕೆಂಬ ಪದ್ಧತಿಯಿದೆ. ಇದಕ್ಕೆ ರಾಮಾನುಜರು ಧನುರ್ದಾಸನ ಪಾದತೀರ್ಥ ಸೇವನೆ ಮಾಡಿದ ನಿದರ್ಶನವಿದೆ)

ಈ ನುಡಿಯ ಹಿನ್ನೆಲೆಯಲ್ಲಿ ದಾಸರು ಯಾವ ಗುರುವನ್ನೂ ಸ್ವೀಕರಿಸಿಲ್ಲದಿರುವುದು ವ್ಯಕ್ತವಾಗುವುದಲ್ಲದೆ ಪುಲಿಗಿರಿವರದನನ್ನೇ ಗುರುಸ್ಥಾನದಲ್ಲಿ ಕಂಡಿದ್ದಾರೆ.

೨೨೧

ಹೆಣ್ಣಿನ ಪ್ರತಿಮೆಯಲ್ಲಿ ಶ್ರೀಹರಿಭಕ್ತಿಯನ್ನು ನಿರೂಪಿಸಿರುವ ಕೃತಿಯಿದು. 'ಬೀಜವಿಲ್ಲದೆ ಬೆಳೆದ ಭೂಜವಿಲ್ಲದ ಬೀಜವಾದ ಇದು ಭೂಜಗಳಿಗೆ ತಾನೆ ಬೀಜವಾಗಿ ಮೆರೆಯುತ್ತಿದೆ'. ಎನ್ನುವಲ್ಲಿ ಹರಿ ಸರ್ವಾಂತರ್ಯಾಮತ್ವವನ್ನು ಸಾರಿದ್ದಾರೆ. ಇದೇ ತತ್ವವನ್ನು ಪಚ್ಚೆ ೨೨೫ ಮತ್ತು ೨೧೭ಗಳ ಪ್ರತಿಮೆಯಲ್ಲೂ ನಿರೂಪಿಸುತ್ತಾರೆ. ಈ ಮೂರು ಪ್ರತಿಮೆಗಳು ಭಕ್ತನೊಬ್ಬನ

ಭಕ್ತಿಯ ವೈಶಿಷ್ಟ್ಯ, ಶರಣಾಗತಿಯ ಸುಲಭೋಪಾಯಗಳನ್ನು ಅತ್ಯಂತ ಸುಂದರವಾದ ಹೋಲಿಕೆಗಳಿಂದ ನೀಡುತ್ತವೆ.

೨೨೨

'ತಂಬೂರಿ'ಯನ್ನು ಅದರ ಹಲವು ಬಳಕೆಗಳನ್ನು ಕುರಿತು ಈ ಕೃತಿ ಬೆಳಕು ಚೆಲ್ಲುತ್ತದೆ. ತಂಬೂರಿ ದಾಸರ ಜೊತೆಯಲ್ಲಿರುವ ಒಂದು ಅವಿಭಾಜ್ಯ ವಸ್ತು. ಅದಿಲ್ಲದೆ ದಾಸವೃತ್ತಿ ಸಾಧ್ಯವಿಲ್ಲ. ಹರಿದಾಸರೂ ಹಿಂದಿನಿಂದ ಈ ತಂಬೂರಿಯ ಬಗ್ಗೆ ಹಲವು ಉಲ್ಲೇಖಗಳನ್ನು ಮಾಡುತ್ತ ಬಂದಿದ್ದಾರೆ. ವಾಸುದೇವನ ನಿಜದಾಸರು ಪಿಡಿಯುವ ಭಾಸುರ ತಂಬೂರಿ ಎಂಬ ಮಾತಿನಿಂದ ಈ ದಾಸರೂ ಅದನ್ನು ಮುಂದುವರಿಸಿದ್ದಾರೆ.

ಆದರೆ ಇಲ್ಲಿ ದಾಸರು ನಿಜವಾಗಿಯೂ ತಂಬೂರಿ ಹಿಡಿದಿದ್ದರೆ, ದಾಸವೃತ್ತಿಯನ್ನನುಸರಿಸುತ್ತಿದ್ದರೇ ಎಂಬುದರ ಬಗ್ಗೆ ಖಚಿತಗೊಳಿಸಲು ಇವರ ಜೀವನ ವಿವರಗಳು ಲಭ್ಯವಿಲ್ಲ. 'ಹರಿಕೃಪೆಯಿಂದ ದೊರೆಯಿತು ಏನಗೀ ಸಿರಿತಂಬೂರಿ' ಎಂಬ ಮಾತಿನಲ್ಲಿ ಇವರು ತಂಬೂರಿಯನ್ನು ಹೊಂದಿದ್ದರೆಂದು ಹೇಳಬಹುದಾಗಿದೆ. ಹಾಗೆಯೇ 'ಶ್ರುತಿಹೀನತೆಯಿಂದತಿಶಯ ಮಾಗದು ಕೃತಿಶತವದು ಸಾರಿ' ಎಂಬ ಸಾಲಿನಲ್ಲಿ ತಮ್ಮ ಕೃತಿಗಳ ರಚನೆಯನ್ನು ದಾಖಲಿಸಿದ್ದಾರೆ ಎನಿಸುತ್ತದೆ. ದಾಸರ ೧೦೨ ಕೃತಿಗಳು ಇದಕ್ಕೆ ಅನುಗುಣವಾಗಿಯೇ ಇವೆ. ಈ ಕೆಲವು ವೈಯುಕ್ತಿಕ ವಿಚಾರಗಳ ಹಿನ್ನೆಲೆಯಲ್ಲಿಯೂ ಈ ಕೃತಿಯನ್ನು ಪರಿಶೀಲಿಸಬೇಕಾಗಿದೆ.

ಹರಿದಾಸರಿಗೆ ತಂಬೂರಿ ಏನೆಲ್ಲ ತಂದುಕೊಡುತ್ತದೆಂಬುದನ್ನು ಮನಮುಟ್ಟುವಂತೆ ಇಲ್ಲಿ ಚಿತ್ರಿಸಿದ್ದಾರೆ. ಇದು ಕೇವಲ ಹರಿನಾಮಸ್ಮರಣೆಗೆ, ದಾಸರ ಭಕ್ತಿ ನಿರೂಪಣೆಗಷ್ಟೇ ಅಲ್ಲದೆ ಲೋಕದ ಜನರಿಗನೇಕ ಸುಕೃತವನ್ನು ಒದಗಿಸುತ್ತದೆ ಕಲಿದೋಷನಿವಾರಣೆಯನ್ನು ಮಾಡುತ್ತದೆನ್ನುವ ಮೂಲಕ ಒಟ್ಟು ದಾಸ ಸಾಹಿತ್ಯಕ್ಕೆ ಭಾಷ್ಯವನ್ನು ಬರೆದಿದ್ದಾರೆ.

೨೨೩

ದಾಸರ ಆರಾಧ್ಯದೈವ ವರದವಿಠಲನ ಆವಾಸಸ್ಥಾನ ಪುಲಿಗಿರಿಯನ್ನು ಕುರಿತ ಕ್ಷೇತ್ರವರ್ಣನೆ ಈ ಕೃತಿ. ಇದರ ಸುಂದರ ಪ್ರಕೃತಿವರ್ಣನೆಯನ್ನು, ನೋಟವನ್ನು, ಯುಗಯುಗಗಳಲ್ಲಿ ಇದಕ್ಕಿದ್ದ ಹೆಸರಿನ ಐತಿಹ್ಯವನ್ನು ಇಲ್ಲಿ ಉಲ್ಲೇಖಿಸಿದ್ದಾರೆ.

ಪುಲಿಗಿರಿ ಗುಂಡ್ಲುಪೇಟೆ ತಾಲೂಕಿನ ಹುಲಗನಮೊರಡಿ. ದಾಸರು ಇಲ್ಲೇ ಇದ್ದರೇ ಅಥವಾ ಸರಗೂರಿನಿಂದ ಇಲ್ಲಿಗೆ ಆಗಾಗ್ಗೆ ಬರುತ್ತಿದ್ದರೋ ಎಂಬ ಬಗ್ಗೆ ದಾಖಲೆಗಳು ಪ್ರಸ್ತುತ ಲಭ್ಯವಿಲ್ಲ. ಸ್ಥಳಪರಿಶೀಲನೆಯೂ ದಾಸರ ಬಗ್ಗೆ ಖಚಿತ ಮಾಹಿತಿ ದೊರಕಿಸಿಲ್ಲ. ಇದು

ದಾಸರ ಮನೆದೇವರಾಗಿರುವ ಸಾಧ್ಯತೆಯಿದೆ. ಸ್ಥಳೀಯ ಐತಿಹ್ಯದಲ್ಲಿ ಇದಕ್ಕೆ ಕೃತಯುಗದಲ್ಲಿ ಶೇಷಾದ್ರಿ ಎಂದೂ ತ್ರೇತಾಯುಗದಲ್ಲಿ ಕನಕಾದ್ರಿ ಎಂದೂ ದ್ವಾಪರಯುಗದಲ್ಲಿ ವೆಂಕಟಾದ್ರಿ ಎಂದೂ ಈ ಕಲಿಯುಗದಲ್ಲಿ ವ್ಯಾಘ್ರಾದ್ರಿ ಎಂದೂ ಹೆಸರಿತ್ತೆಂಬ ದಾಖಲೆಯಿದ್ದು ಅದನ್ನೇ ದಾಸರು ಇಲ್ಲಿ ಉಲ್ಲೇಖಿಸಿದ್ದಾರೆ.

ಇದು ಸೇವಕರಿಗೆ ಸಂತೋಷವನ್ನು ಕೊಡುವ 'ತೋತಾದ್ರಿ'ಯೂ ಹೌದು, ಪಾಪಗಳನ್ನು ನಾಶಮಾಡುವ (ದೋಷಾದ್ರಿ ಹುಡಿಮಾಡಿ) ದೋಷಾದ್ರಿಯೂ ಹೌದು, ಹಾಗೆಯೇ ದುರ್ಜನರಿಗೆ ದೂರದ ಈ ತಾಣ 'ದೂರಾದ್ರಿ' ಯೂ ಹೌದು. 'ದುರ್ಜನರಿಗೆ ದೂರವೆ ಮಂದಿರವು' ಎನ್ನುವ ಆಶಯ ಇಲ್ಲಿದೆ.

ಬಗೆಬಗೆಯ ವೃಕ್ಷಗಳು, ಪ್ರಾಣಿ ಪಕ್ಷಿಗಳಿಂದ ಸುಂದರ ವನವಾಗಿರುವ ಈ ಗಿರಿಯಲ್ಲಿ ಹಲಬಗೆಯ ಕೆಂಪು ಬಣ್ಣದ ಕಲ್ಲುಗಳೂ (ಧಾತು) ಇರುವುದನ್ನು ಹೇಳುವ ದಾಸರು ದೂರಕ್ಕೆ ಈ ಬೆಟ್ಟ ಸರ್ಪಾಕೃತಿಯಲ್ಲಿ ಕಾಣುವುದೆಂಬ ಲೋಕರೂಢಿಯನ್ನು (ರನ್ನ ಪೋಲುವರ್ಣದ ಶಯನ ಕಣ್ಣಲ್ಲಿ ಕಾಣಿಪ) ಹೇಳುತ್ತಾರೆ. ಇಲ್ಲಿ 'ಶಯನ' ಎಂಬುದನ್ನು ಆದಿಶೇಷನ ಹಿನ್ನೆಲೆಯಲ್ಲಿ ಸರ್ಪ ಅರ್ಥದಲ್ಲಿ ಬಳಸಿದ್ದಾರೆ. ಧಾತು ಎಂಬುದನ್ನು ಶ್ಲೇಷಾರ್ಥದಲ್ಲಿ ಬಳಸಿದ್ದಾರೆ ಸ್ಥಳೀಯ ಪ್ರಾಕೃತಿಕ ಲಕ್ಷಣವಾಗಿರುವಂತೆಯೇ ಭಕ್ತರಲ್ಲಿ ಭಕ್ತಿ ಎಂಬ ಈ ಮೂಲವಸ್ತುವನ್ನು ಉದ್ದೀಪಿಸುವ ಶಕ್ತಿ ಕೇಂದ್ರವೂ ಹೌದು.

ಇಲ್ಲಿಯ ದೇವಾಲಯದಲ್ಲಿ ಶಂಕಚಕ್ರ ಗದಾಧಾರಿಯಾದ ಅಭಯಪ್ರದಾಯಕ ವೆಂಕಟೇಶ್ವರನ ಸನ್ನಿಧಿಯಿದ್ದು ಅವನನ್ನೇ ದಾಸರು 'ವರದ ವಿಠಲ' ಎಂಬ ಅಂಕಿತವಾಗಿ ಸ್ವೀಕರಿಸಿದ್ದಾರೆ. ಈ ದೇವಾಲಯ ವಿಶಾಲವಾದ ಪ್ರಾಕಾರವನ್ನು ಗೋಪುರವನ್ನು ಹೊಂದಿದ್ದು ಸರ್ವಜನಾದರಣೀಯವಾಗಿ ಭವ್ಯವಾಗಿದೆ. ಈ ದೇವಾಲಯದ ನೋಟವನ್ನು ದಾಸರು, 'ಚಾರು ವಿಮಾನ ಪ್ರಾಕಾರದಿ ತೋರಿಪ' ಎಂಬಲ್ಲಿ ಸ್ತುತಿಸಿದ್ದಾರೆ. ಇವರ ದೈವಸ್ತುತಿಗಳಲ್ಲಿ ಈ ಕಾರಣದಿಂದಲೇ 'ಶ್ರೀನಿವಾಸ' ನ ಸ್ತುತಿಗಳೇ ಅಧಿಕವಾಗಿವೆ.

೨೨೪, ೨೨೫, ೨೨೬

ಈ ಕೀರ್ತನೆಗಳಲ್ಲೂ ಇದೇ ಪುಲಿಗಿರಿಯನ್ನು ಸ್ತುತಿಸಲಾಗಿದೆ. ಇವರ ಎಲ್ಲ ಕೀರ್ತನೆಗಳಲ್ಲೂ ಅಂಕಿತದಂತೆ ಪುಲಿಗಿರಿ ಮತ್ತದರ ಪರ್ಯಾಯ ಪದಗಳೂ ತಪ್ಪದೆ ಬರುತ್ತವೆ. ಇದರ ಹಿನ್ನೆಲೆಯಲ್ಲಿ ಇವರ ಅಂಕಿತವನ್ನು ಕೇವಲ 'ವರದ ವಿಠಲ ' ಎನ್ನುವುದಕ್ಕಿಂತ 'ಪುಲಿಗಿರಿವಾಸ' 'ವೆಂಕಟವರದ ವಿಠಲ ' ಎಂದೂ (ದಾಸರೇ ಹಲವು ಕಡೆ ಬಳಸಿರುವುದರಂತೆ) ಸ್ವೀಕರಿಸಬೇಕಾಗುತ್ತದೆ.

೨೨೮, ೨೨೯, ೨೩೦

ಈ ಮೂರು ಕೃತಿಗಳು ೧೮೭೬ ರಿಂದ ೧೮೭೯ ರವರೆಗೆ ಕಾಡಿದ ದೊಡ್ಡ ಬರಗಾಲದ ಸಂದರ್ಭವನ್ನು ಕುರಿತ ವಿಶೇಷ ಸಂದರ್ಭದ ಕೃತಿಗಳಾಗಿರುವಂತಿದೆ. ಇದನ್ನು 'ಧಾತು ಸಂವತ್ಸರದ ಬರ ' ಎಂದೇ ಇತಿಹಾಸ ಲೋಕರೂಢಿ ದಾಖಲಿಸಿದೆ. ಆದರೆ ಈ ಬಗ್ಗೆ ಕೀರ್ತನೆಗಳಲ್ಲಿ ಖಚಿತ ಸುಳಿವಿಲ್ಲದಿದ್ದರೂ ಬರ ನಿವಾರಣೆಯ, ವಿಶೇಷವಾಗಿ ಹಸುಗಳ ಸಾವಿನ ನಿವಾರಣೆಯ ಪ್ರಾರ್ಥನೆಯಂತೆ ಇವು ಗೋಚರಿಸುತ್ತವೆ. ೨೨೮,೨೨೯ರಲ್ಲಿ ಅಹಾರವಿಲ್ಲದೆ ಕೊರಗುವ, ಮೇವನ್ನು ಮುಟ್ಟದೆ ಕಂಗೆಟ್ಟ, ಹೊಟ್ಟೆ ನೋವಿನಿಂದ ನರಳುವ, ನಾಲಿಗೆ ನೀಡದ, ಕಾಲು ಸೆಟೆದುಕೊಳ್ಳುವ, ಕಣ್ಣಾಲಿ ಕೆಂಪಾಗುವ, ಇದ್ದಕ್ಕಿದ್ದಂತೆ ಸಾಯುವ ವಿಚಿತ್ರ ರೋಗದ ಹಸುಗಳನ್ನು ಈ ಕಷ್ಟದಿಂದ ಪಾರುಮಾಡುವ ಆಶಯವಿದ್ದರೆ ೨೩೦ರಲ್ಲಿ ಸ್ಪಷ್ಟವಾಗಿ ಬರಗಾಲದ ಚಿತ್ರವಿದೆ. ನೀರಿಲ್ಲದ ಕೆರೆ, ಬಾವಿಗಳು; ಆಹಾರವಿಲ್ಲದೆ ಸಾಯುವ ಪ್ರಾಣಿಗಳು; ಜನರ ಹಾಹಾಕಾರ; ಮೈಲಿಗಳಂತರದಿಂದ ನೀರು ತರುವ ಚಿತ್ರ; ಮರಗಿಡಗಳೆಲ್ಲ ಹಾಗೇ ಒಣಗಿ ಮುರುಟಿರುವ ಚಿತ್ರಗಳನ್ನೆಲ್ಲ ವಿವರವಾಗಿ ನಿರೂಪಿಸುತ್ತಾರೆ. ದಾಸರ ಕಾಲವೂ ಸ್ಪಷ್ಟವಿಲ್ಲದಿರುವುದರಿಂದ ಈ ಕಾಲದಲ್ಲಿ ದಾಸರ ಜೀವಿತಾವಧಿಯನ್ನು ಗುರುತಿಸಿ ಕಾಲ ನಿರ್ಧರಿಸಲು ಇದು ಸಹಾಯಕವಾಗಿದೆ.

೨೩೧

ಅಹೋಬಲದಾಸರಿಗೆ ಶ್ರೀಹರಿ ಬೇರೆ ಗುರು ತುಳಸಿರಾಮದಾಸರು ಬೇರಲ್ಲ. ಶ್ರೀವೈಷ್ಣವ ಶರಣಾಗತಿ ತತ್ವದಲ್ಲಿಯೇ ಈ ಸಮೀಕರಣವಿದೆ. ಭಾಗವತರ–ವೈಷ್ಣವರ ಪಾದ ಸೇವನೆಯೇ ಪರಮಪದಕ್ಕೆ ಸೋಪಾನ ಎಂಬ ಕಲ್ಪನೆಗೆ ಅನುಗುಣವಾಗಿಯೇ ಅಹೋಬಲದಾಸರ ದರ್ಶನವಿದೆ. 'ನಾರಾಯಣ ಯತಿವರ' ಎನ್ನುವುದರಲ್ಲಿ ಹರಿ–ಗುರು ಇಬ್ಬರನ್ನು ನಿರ್ದೇಶಿಸುತ್ತಾರೆ. ಶ್ರೀಹರಿಯ ಶರಣಾಗತ ರಕ್ಷಕ, ಆರ್ತರ, ಆಶ್ರಿತ ಎಂಬ ಗುಣಗಳನ್ನು ದಾಸರು 'ಮೊರೆತೋರಣ' ಎಂಬ ನೂತನ ಪದಪ್ರಯೋಗದಲ್ಲಿ ಕಂಡಿದ್ದಾರೆ. ಮೊರೆಯಿಡುವವರಿಗೆ ನಿನ್ನ ಮನೆ ಬಾಗಿಲು ಸದಾ ತೆರೆದಿರುತ್ತದೆಂಬ ಭಾವ ಇಲ್ಲಿದೆ. 'ತೋರಣ' ಎಂಬುದನ್ನು ತೆರೆದ ಬಾಗಿಲಿಗೆ ಹೋಲಿಸಿರುವ ಕಲ್ಪನೆ ಸೊಗಸಾಗಿದೆ. ದೂರುಹೊರಿಸುವವನೂ ನೀನೆ, ನಿವಾರಿಸುವವನೂ ನೀನೆಂಬುದಾದರೂ ಪ್ರಪಂಚಕ್ಕದು ತಿಳಿಯುದೆ ಅಪರಾಧಿಯನ್ನಾಗಿಸುತ್ತಾರೆ. ನಿನ್ನ ಭಕ್ತರನ್ನು ಹೀಗೇಕೆ ಪರೀಕ್ಷಿಸುವೆ, ನಿನಗಿರುವ ಬಿರುದು ಬರಿದೆ ಬಿರುದೇ ಮಂಗಳ ಪುರಿಯ ವಾಸನಾದ ದಾಸ ತುಳಸಿರಾಮರ ಹಿರಿಮೆ ನಾನು ನಿನ್ನ ದಾಸನಾಗಿದ್ದೇನೆ ದೊರೆಯೇ ಎಂಬ ಆತ್ಮನಿವೇದನೆ ಇಲ್ಲಿ ಮುಖ್ಯವಾಗಿದೆ. 'ಮಂಗಳಪುರಿ' ಬೆಂಗಳೂರಿಗಿರುವ 'ಕಲ್ಯಾಣನಗರ' ದ ಪರ್ಯಾಯ ಹೆಸರು. ಬೆಂಗಳೂರಿನ ಕಂಟೋನ್ಮೆಂಟಿನ

ಕ್ಲೋಸಪೇಟೆಯಲ್ಲಿ ವಾಸವಿದ್ದ ಗುರು ತುಳಸಿರಾಮದಾಸರನ್ನು ಕುರಿತದ್ದಾದರೂ ಅವರ ಮೂಲಕ ಕಾಣುತ್ತಿರುವ ಶ್ರೀಹರಿಯನ್ನು ಕುರಿತದ್ದಾಗಿದೆ. ಇವರ ಅನೇಕ ಕೀರ್ತನೆಗಳಲ್ಲಿ ಈ ರೀತಿಯ ಹರಿ–ಗುರು ಏಕೀಭಾವ ಬಂದಿರುವದನ್ನು ಕಾಣಬಹುದು.

೨೪೪

ಪುರಂದರದಾಸರ ಕೃತಿಯಂತೆ ತೋರುವ ಈ ಕೀರ್ತನೆ ಅದರಿಂದಲೇ ಪ್ರಭಾವಿತವಾಗಿದ್ದರೂ ಅಹೋಬಲದಾಸರದ್ದು ಅದೇ ಧಾಟಿಯಲ್ಲಿದ್ದು ತನ್ನತನವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

೨೫೮

ಗುರು ತುಳಸಿರಾಮದಾಸರನ್ನು ಕುರಿತು ಮನ ತುಂಬಿಹಾಡುವ ದಾಸರು ಗುರು–ದೈವ ಸಮೀಕರಣವನ್ನು ಮಾಡುತ್ತಾರೆ. ಗುರುವಿನ ಮೂಲಕವೇ ದೈವ–ತತ್ವ ಕಂಡಿರುವ ಇವರು ಗುರುವೇ ಮೋಕ್ಷಕ್ಕೆ ದಾರಿಯೆಂದು ಗುರುವಿನಲ್ಲೇ ಪ್ರಪತ್ತಿಮಾಡಿರುವ ಗುರುನಿಷ್ಠರು. ತಮ್ಮ ಅಂಕಿತವನ್ನೇ 'ಗುರು ತುಳಸಿರಾಮ' ಎಂದು ಸ್ವೀಕರಿಸಿರುವದರಿಂದಲೇ ಆ ನಿಷ್ಠೆ ವ್ಯಕ್ತವಾಗಿರುವದನ್ನು ಕಾಣಬಹುದು. ಈ ಕಾರಣದಿಂದ ಇವರ ಎಲ್ಲಾ ಕೃತಿಗಳೂ ಗುರುಸ್ತುತಿಗಳೋ ಎನಿಸುವಷ್ಟು ಗುರುಮಯವಾಗಿವೆಯಾದರೂ ನಿರ್ದಿಷ್ಟವಾಗಿ ಗುರುವನ್ನೇ ಸ್ತುತಿಸಿರುವ ಹತ್ತಕ್ಕೂ ಹೆಚ್ಚು ಕೃತಿಗಳು ದೊರಕುತ್ತವೆ. ಈ ಕೃತಿಯು ಅಂಥವುಗಳಲ್ಲಿ ಒಂದು.

ಇದರ ವೈಶಿಷ್ಟ್ಯವಿರುವುದು ಕೆಲವೆಡೆ ಪಾದ ಮತ್ತು ಪ್ರಾಸತುಂಬಲು ಸಂಗೀತ ಪರಿಭಾಷೆಯನ್ನೇ ಬಳಸಿರುವುದು ರಾಗಾಲಾಪನೆಯ 'ಸರಿಗಮಪದನಿ' ಯ ರಾಗಾರೋಹಣ ಕ್ರಮವನ್ನು ಕೃತಿಯ ಭಾಗವಾಗಿಯೇ ಸ್ವೀಕರಿಸಿರುವ ಮೂಲಕ ತಮಗಿರುವ ಶಾಸ್ತ್ರೀಯ ಸಂಗೀತ ಜ್ಞಾನವನ್ನು ದಾಖಲಿಸಿದ್ದಾರೆ.

೨೭೬

ಅತ್ಯಂತ ಸರಳವಾದ ಆತ್ಮನಿವೇದನಾ ಸ್ತುತಿ. ಅಹೋಬಲದಾಸರ ಎಲ್ಲ ಆತ್ಮನಿವೇದನಾ ಸ್ತುತಿಗಳೂ ಸರಳವಾಗಿ ಸುಲಭವಾಗಿಯೇ ಇವೆ. ಪುರಂದರದಾಸರ ಇದೇ ಬಗೆಯ ಕೀರ್ತನೆ ಇದರ ಮೇಲೆ ಪ್ರಭಾವ ಬೀರಿರುವಂತಿದೆ.

ನಾರಾಯಣ ಒಳಗಿದ್ದರೆ ಏನು ತಾನೆ ದೊರಕದೆಂಬ ಸಂಪೂರ್ಣ ಆತ್ಮತೃಪ್ತಿ ಎಲ್ಲ ಶ್ರೀವೈಷ್ಣವ ಹರಿದಾಸರಲ್ಲೂ ಸರ್ವೇ ಸಾಮಾನ್ಯ. ಭರತಪುರಿ ಎಂಬುದು ದರಿಶಕುಪ್ಪದ ಸಂಸ್ಕೃತೀಕರಣ.

೨೮೨

ಶ್ರೀಹರಿ ಏಕನಿಷ್ಠೆಯನ್ನು ಪ್ರತಿಪಾದಿಸುವ ಈ ಕೃತಿ ಅಹೋಬಲದಾಸರ ಕೀರ್ತನೆಗಳ ಶ್ರೀವೈಷ್ಣವ ತತ್ವಪ್ರತಿಪಾದನೆಯ ದ್ಯೋತಕವಾಗಿದೆ. 'ಲೋಕನಾಥ' 'ಸರ್ವಸಯೇಕ ' ಪದಗಳು ಶ್ರೀ ಮನ್ನಾರಾಯಣನೊಬ್ಬನೇ ದೈವ ಎಂಬ ತತ್ವದ ನಿದರ್ಶನಗಳಾಗಿವೆ. 'ಸಾಕು ಸರ್ವಧರ್ಮದಿಂ.... ಸ್ನೇಹವ ನೂಕಿ....' ಎಂಬುದು ಭಗವದ್ಗೀತೆಯ 'ಸರ್ವಧರ್ಮಾನ್ ಪರಿತ್ಯಜ್ಯ' ಎಂಬುದರ ಸಾರವೇ ಆಗಿದೆ. ಇದು ಶ್ರೀವೈಷ್ಣವ ತತ್ವವಾದ 'ಶರಣಾಗತಿ ಧರ್ಮವನ್ನು' ಸಾರುವ ನಿತ್ಯಪಠಣದ 'ಚರಮಶ್ಲೋಕವಾಗಿ' ರಹಸ್ಯತ್ರಯಗಳಲ್ಲಿ ಒಂದಾಗಿದೆ.

ಇಲ್ಲಿ ಬರುವ 'ಭ್ರಮರ ಕೀಟನ್ಯಾಯ ' ಎಂಬುದು ತಾತ್ವಿಕ ಪರಿಭಾಷೇಗೇ ಹೆಚ್ಚು ಅನ್ವಯವಾಗುವಂತಿದೆ. ಶ್ರೀವೈಷ್ಣವ ಧರ್ಮದಲ್ಲಿ ರಾಮಾನುಜರ ನಂತರ ಆದ ಎರಡು ಪಂಗಡಗಳೆಂದರೆ ವಡಗಲೆ-ತೇಂಗಲೆ. ಇವುಗಳಲ್ಲಿ ಹದಿನೆಂಟು ಮುಖ್ಯ ವಿಷಯಗಳಲ್ಲಿ ಭೇದ ಕಾಣಿಸಿರುವದನ್ನು ಪ್ರಾಜ್ಞರು ಪಟ್ಟಿ ಮಾಡುತ್ತಾರೆ. ಮುಖ್ಯವಾಗಿ ಈ ಭೇದವನ್ನು 'ಮರ್ಕಟಕಿಶೋರನ್ಯಾಯ' ಮತ್ತು 'ಮಾರ್ಜಾಲ ಕಿಶೋರನ್ಯಾಯ'ದ ಹಿನ್ನೆಲೆಯಲ್ಲಿ ಗುರುತಿಸುತ್ತಾರೆ. ಮರ್ಕಟ ಕಿಶೋರ ನ್ಯಾಯವೆಂದರೆ ಕೋತಿಮರಿ ತಾಯಿಯನ್ನು ಭದ್ರವಾಗಿ ಹಿಡಿದರಷ್ಟೇ ಅದಕ್ಕೆ ರಕ್ಷಣೆ ದೊರಕುವಂತೆ ಜೀವನು ಪರಮಾತ್ಮನಲ್ಲಿ ಪ್ರಯತ್ನ ಪೂರ್ವಕವಾಗಿ ಕರ್ತವ್ಯ ನಿರ್ವಹಣೆಯಿಂದ ಪ್ರಪತ್ತಿ ಮಾಡಿದರಷ್ಟೇ ಮೋಕ್ಷ ದೊರಕುತ್ತದೆಂಬುದು. ಇದನ್ನೇ ಇಲ್ಲಿ 'ಭ್ರಮರಕೀಟನ್ಯಾಯ ಸಹಜ' ನೆಂದಿರುವುದು. ಇದು ವಡಗಲೆ ಅಂದರೆ 'ದೇಶಿಕರ್' ಸಂಪ್ರದಾಯದ ತತ್ವ. ಈ ದಾಸರು ತುಳಸಿರಾಮದಾಸರ ಶಿಷ್ಯರಾಗಿ ವಡಗಲೆ ತತ್ವಾನುಷ್ಠಾನಮಾಡಿದ್ದಾರೆ. ತುಳಸಿರಾಮದಾಸರು ವಡಗಲೆ ಸಂಪ್ರದಾಯದ ಮುಖ್ಯಮಠ 'ಪರಕಾಲಮಠ'ದ ಶಿಷ್ಯರಾಗಿದ್ದಾರೆ.

ಮಾರ್ಜಾಲ ಕಿಶೋರವೆಂಬುದು ಸ್ವಪ್ರಯತ್ನವಿಲ್ಲದೆ ಸುಲಭವಾಗಿ ಪ್ರಪತ್ತಿ ಮಾಡಿದರೂ ಮೋಕ್ಷ ದೊರಕುತ್ತದೆ. ಬೆಕ್ಕಿನಮರಿ ಸುಮ್ಮನಿದ್ದರೂ ತಾಯಿ ಕಚ್ಚಿಹಿಡಿದು ರಕ್ಷಿಸುವಂತೆ ಭಗವಂತನ ಕೃಪೆ ಎಲ್ಲರ ಮೇಲೂ ನಿರ್ಹೇತುವಾಗಿರುತ್ತದೆ. ಭೇದವಿಲ್ಲ, ಆಚಾರ್ಯದಲ್ಲಿ ಪ್ರಪತ್ತಿ ಮಾಡಿದರೂ ಸಾಕು ಮೋಕ್ಷ ಸಾಧ್ಯ ಎಂಬ ತತ್ವ . ಇದು ತೇಂಗಲೆ-ಜೀಯರ್-ಸಂಪ್ರದಾಯದ ನಂಬಿಕೆ. ಎರಡರಲ್ಲೂ ಪ್ರಪತ್ತಿ ಮುಖ್ಯ. ಅದರ ಅನುಸಂಧಾನದಲ್ಲಿ ಭೇದವಿದೆಯಷ್ಟೇ.

ಇಲ್ಲಿ ಬರುವ ಕಿಂತುಭವದ್ದರ್ಶನೇ......ಎಂಬ ಸಂಸ್ಕೃತ ಉದ್ಧರಣದಲ್ಲಿ ದೋಷವಿದೆ. ಅಷ್ಟಪ್ರಣವ ಎಂಬುದರಲ್ಲಿ ಪ್ರಣವ (ಓಂಕಾರ) ದಿಂದ ಮೊದಲಾಗುವ ಮಂತ್ರರಾಜವೆನಿಸಿರುವ ಅಷ್ಟಾಕ್ಷರಿ ಮಂತ್ರವನ್ನು ನಿರ್ದೇಶಿಸಿದೆ.

ಶಾಸ್ತ್ರ ನಿಷ್ಠವಾದ ಪರಿಭಾಷೆಯಲ್ಲಿ ಭಗವಂತನನ್ನು ಸ್ತುತಿಸುವ ಮೂಲಕ ಆತ್ಮನಿವೇದನೆ ಮಾಡಿಕೊಂಡಿರುವ ವೈಶಿಷ್ಟ್ಯ ಇಲ್ಲಿದೆ. ಇದು ದಾಸರ ಪಾಂಡಿತ್ಯಕ್ಕೂ ನಿದರ್ಶನವಾಗಿದೆ.

೩೫೪

'ಭಗವತ್ಸೇವೆ ' ಎಂದೇ ಈ ಕೀರ್ತನೆಯನ್ನು ಹೆಸರಿಸಿದ್ದಾರೆ. ಭಗವತ್ಸೇವೆ ಮಾಡುವ ಪರಿಪರಿಯಾದ ವಿಧಾನಗಳನ್ನು ಇಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಶ್ರೀವೈಷ್ಣವ ಸಂಪ್ರದಾಯ ಸ್ತುತಿಸುವ 'ಶ್ರೀ ಭೂನೀಳಾಸಮೇತ ಶ್ರೀ ಮನ್ನಾರಾಯಣನ' ಚಿತ್ರಣ ಇಲ್ಲೂ ವ್ಯಕ್ತವಾಗಿರುವುದನ್ನು ಕಾಣಬಹುದು.

೩೫೭

ಇದನ್ನೊಂದು 'ಮುಕ್ತಿ ಪ್ರಾರ್ಥನೆ' ಎಂದು ದಾಸರು ಕರೆದಿದ್ದಾರೆ. ೨೭.೭.೭೨ ಪರೀಧಾವಿ, ಆಷಾಢ ಶು ೧೧ ಭಾನುವಾರ ರಾತ್ರಿ ಮಲಗಿದಾಗ ಪ್ರಾರ್ಥನೆ, ಧ್ಯಾನ ಎಂದು ಟಿಪ್ಪಣಿ ಹಾಕಿದ್ದಾರೆ, ದಾಸರು ಮರಣ ಶಯ್ಯೆಯಲ್ಲಿರುವಾಗ ನಿಧನಕ್ಕೆ ಎರಡು ತಿಂಗಳು ಮೊದಲು ಈ ಕೀರ್ತನೆ ರಚಿಸಿದ್ದಾರೆ. ಶ್ರೀಹರಿ ಧ್ಯಾನದಲ್ಲಿ ಲೀನವಾದ ಮನಸ್ಸು ಭಕ್ತಿಯಲ್ಲಿ ಪಕ್ವಗೊಂಡು ಶರೀರ ಸುಖಾಂತ್ಯವಾಗಿ ಹಾತೊರೆಯುವ (ಶುಲ್ಕವಿಲ್ಲದಂತೆ) ಸಾವಿನ ಕೋರಿಕೆಯನ್ನು ಶ್ರೀಹರಿಯಲ್ಲಿ ಇಟ್ಟಿದ್ದಾರೆ. ಇಲ್ಲಿ ಶ್ರೀಹರಿಯ ದಶಾವತಾರದ ವರ್ಣನೆಯಿದೆ. ಯಾವ ಅವತಾರದ ಹೆಸರನ್ನು ಹೆಸರಿಸಿದರೆ ಆಯಾ ಅವತಾರಗಳ ಪರ್ಯಾಯ ಸಾರಗಳನ್ನು ಬಳಸಿರುವುದು ಮತ್ತು ವಾಮನನನ್ನು ಬ್ರಹ್ಮಚಾರಿ ಎಂದೂ ಬಲರಾಮನನ್ನು ಬಲ್ಲರಾಮ ಎಂದು ಕರೆದಿರುವುದನ್ನು (ಪ್ರಾಸಕ್ಕಾಗಿ) ಗಮನಿಸಬಹುದು. ಬೌದ್ಧಾವತಾರದ ಬದಲು ಶ್ರೀವೈಷ್ಣವ ಸಂಪ್ರದಾಯದ ಬಲರಾಮಾವತಾರ ಇಲ್ಲಿಯೂ ಉಲ್ಲೇಖಗೊಂಡಿರುವದನ್ನು ನೋಡಬಹುದು.

೩೭೩.

ಶ್ರೀವೈಷ್ಣವ ಪುರಾತನ ಭಕ್ತರಾದ ೧೨ಜನ ಆಳ್ವಾರರಲ್ಲಿ ಒಬ್ಬರು ನಮ್ಮಾಳ್ವಾರರು. ಇವರನ್ನು ಕುರಿತ ಸ್ತುತಿ ಈ ಕೀರ್ತನೆ. ಈ ಧರ್ಮದಲ್ಲಿ ಆಳ್ವಾರರಲ್ಲೆಲ್ಲ ನಮ್ಮಾಳ್ವಾರರಿಗೆ ವಿಶಿಷ್ಟವಾದ ಮತ್ತು ಪ್ರಧಾನವಾದ ಸ್ಥಾನವಿದೆ. ಆಳ್ವಾರ್ ಸಾಹಿತ್ಯ–ನಾಲ್ಕುಸಾವಿರ (ನಾಲಾಯಿರ) ದಿವ್ಯ ಪ್ರಬಂಧವನ್ನು ಉಳಿಸಿಕೊಟ್ಟವರೆಂದು ಇವರಿಗೆ ವಿಶೇಷವಾದ ಸ್ಥಾನವಿದೆ. ಎಲ್ಲ ಪ್ರಮುಖ ವಿಷ್ಣು ದೇವಾಲಯಗಳಲ್ಲೂ ಕನಿಷ್ಟ ಪಕ್ಷ ನಮ್ಮಾಳ್ವಾರರ ವಿಗ್ರಹವಾದರೂ ಇರುತ್ತದೆ. ಆಳ್ವಾರರಲ್ಲಿ ಅಗ್ರ ಪೂಜೆಗೆ ಇವರು ಅರ್ಹರಾಗಿದ್ದಾರೆ. ದೇವಾಲಯಗಳಲ್ಲಿ ಭಕ್ತರ ತಲೆಯ ಮೇಲೆ ಇಡುವ ಶ್ರೀ ಪಾದ ನಮ್ಮಾಳ್ವಾರರ ಸಂಕೇತ. ಅದನ್ನು 'ಶಠಾರಿ' ಎಂದೂ ನಮ್ಮಾಳ್ವಾರರನ್ನು

'ಶಠಗೋಪ' ಎಂದೂ ಕರೆಯುತ್ತಾರೆ. ಇವರು ಹುಣಿಸೆಮರದ ಪೊಟರೆಯಲ್ಲೇ ಇದ್ದುದರಿಂದ 'ವಕುಳಾಭರಣ ' ಎಂದೂ ಕರೆಯುತ್ತಾರೆ.

ನಮ್ಮಾಳ್ವಾರರ ಜೀವನಗಾಥೆ ತುಂಬ ವಿಶೇಷವಾಗಿದ್ದು ಅದನ್ನೆಲ್ಲ ದಾಸರು ಇದರಲ್ಲಿ ಅಡಕಗೊಳಿಸಿದ್ದಾರೆ. ನಮ್ಮಾಳ್ವಾರರು ರಚಿಸಿರುವ ನಾಲ್ಕು ಕೃತಿಗಳು ಚತುರ್ವೇದಕ್ಕೆ ಸಮ ಎನ್ನಲಾಗಿದೆ.

ಇವರ ತಿರುವಾಯ್ಮೊಳಿ ಶ್ರೀವೈಷ್ಣವ ಪವಿತ್ರ ಗ್ರಂಥವಾಗಿದ್ದು ವಿಶಿಷ್ಟಾದ್ವೈತ ಸಿದ್ಧಾಂತ ಸಾರವಾಗಿದೆ. ಇವರ ಕೃತಿಗಳು ಹಿಂದಿನ ಹತ್ತು ಆಳ್ವಾರರ ಪ್ರಬಂಧಗಳ ಸಾರವಾಗಿದೆ ಎಂದೂ ಪ್ರತೀತಿಯಿದೆ. ಶ್ರೀವೈಷ್ಣವ ಆಚಾರ್ಯ ಪರಂಪರೆಯ ಪ್ರಥಮಾಚಾರ್ಯರಾದ ನಾಥಮುನಿಗಳು ಹಿಂದಿನ ಆಳ್ವಾರರ (ಲುಪ್ತವಾಗಿದ್ದ) ಪ್ರಬಂಧಗಳನ್ನು ನಮ್ಮಾಳ್ವಾರರಿಂದಲೇ ಯೋಗದೆಸೆಯಲ್ಲಿ ಕಲಿತರೆಂಬ ಅಭಿಪ್ರಾಯವೂ ಇದೆ. ಈ ಕಾರಣದಿಂದಲೇ ಇವರನ್ನು ಆಳ್ವಾರರುಗಳ ಶರೀರರೂಪ, 'ದ್ರಾವಿಡವೇದ ಪಿತಾಮಹ', ಶ್ರೀವೈಷ್ಣವ ಪರಂಪರೆಯನ್ನು ಸೃಷ್ಟಿಸಿದ 'ಆದಿವೈಷ್ಣವ ದೀಕ್ಷಾಚಾರ್ಯ' ಎಂದೆಲ್ಲ ಕರೆಯಲಾಗಿದೆ. ಇವರ ನಾಲ್ಕು ಕೃತಿಗಳ ಹೆಸರು 'ತಿರುವಿರುತ್ತುಂ' 'ತಿರುವಾಶಿರಿಯಂ' 'ಪೆರಿಯ ತಿರುವಂದದಾದಿ' ಮತ್ತು 'ತಿರುವಾಯ್ಮೊಳಿ'.

೪೩೬

ಇದು ಶ್ರೀವೈಷ್ಣವ ದಿವ್ಯಕ್ಷೇತ್ರಗಳಾದ ಶ್ರೀರಂಗ, ತಿರುಪತಿ, ಕಂಚಿ, ಮೇಲುಕೋಟೆಗಳ ದೇವರಗಳನ್ನು ಮತ್ತು ಅಲ್ಲಲ್ಲಿ ನೆಲೆಸಿರುವ ಲಕ್ಷ್ಮಿಯನ್ನು ಅದೇ ಹೆಸರುಗಳಿಂದ ಸ್ತುತಿಸಿರುವ ಕೀರ್ತನೆ. ಶ್ರೀವೈಷ್ಣವರ 'ನೂರೆಂಟು' ತಿರುಪತಿಗಳ ಅಥವಾ 'ದಿವ್ಯದೇಶಗಳಲ್ಲಿ ' ಮೊದಲನೆಯದೂ ಪ್ರಧಾನವಾದುದೂ ಆದ ಶ್ರೀರಂಗದ ರಂಗನಾಥನನ್ನು ಪಲ್ಲವಿ ಅನುಪಲ್ಲವಿಗಳಲ್ಲಿ ಸ್ತುತಿಸಲಾಗಿದೆ. ಇಲ್ಲಿಯ ಲಕ್ಷ್ಮಿಯನ್ನು ರಂಗನಾಯಕಿ ಎಂದು ಕರೆಯಲಾಗುತ್ತದೆ. ಶ್ರೀವೈಷ್ಣವರಲ್ಲಿ ಪ್ರಚಲಿತವಿರುವ ರಂಗಮಣಿ, ರಂಗವಲ್ಲಿ, ಶ್ರೀರಂಗಮ್ಮ ಮುಂತಾದ ಸ್ತ್ರೀ ವ್ಯಕ್ತಿನಾಮಗಳು ಈ ಮೂಲದವೇ. ದಾಸರು ಇಲ್ಲಿ 'ಮಣಿದೇವಿ' ಎಂದು ಕರೆದಿದ್ದಾರೆ. ಇಲ್ಲಿಯ ರಂಗನಾಥ ಆದಿಶೇಷನ ಮೇಲೆ ಪವಡಿಸಿದ್ದಾನೆ. ಕಾವೇರಿಯ ದಡದಲ್ಲಿದ್ದಾನೆ. ಇದು ಶ್ರೀವೈಷ್ಣವ ಪರಮಪೂಜ್ಯವಾದ ಸ್ಥಳ, ಇಕ್ವಾಕು ವಂಶಸ್ಥರಿಂದ ಪೂಜೆಗೊಳ್ಳುತ್ತಿದ್ದ ದೇವರೆಂದು ಇದಕ್ಕೆ ಐತಿಹ್ಯವಿದೆ. ಶ್ರೀರಾಮ ಇದನ್ನು ವಿಭೀಷಣನಿಗೆ ನೀಡಿದನೆಂದೂ ವಿಭೀಷಣ ಲಂಕೆಗೆ ಕೊಂಡೊಯ್ಯಲಾಗದುದರಿಂದ ಸ್ವಾಮಿದರ್ಶನಕ್ಕಾಗಿ ಪ್ರತಿ ೧೨ ವರ್ಷಕ್ಕೊಮ್ಮೆ ಬಂದು ರಾತ್ರಿವೇಳೆ ಪೂಜಿಸುತ್ತಾನೆಂದೂ ಪ್ರತೀತಿಯಿದೆ. ಈ ಐತಿಹ್ಯದ ಹಿನ್ನೆಲೆಯಿಂದಲೇ ಇಲ್ಲಿ ವಿಭೀಷಣನು ಉಲ್ಲೇಖಗೊಂಡಿದ್ದಾನೆ. ಶ್ರೀವೈಷ್ಣವರಿಗೆ ಶ್ರೀರಂಗಯಾತ್ರೆ ಕಾಶಿಯಾತ್ರೆಯಷ್ಟೇ ಮುಖ್ಯವಾದದ್ದು.

ಎರಡನೇ ನುಡಿ ತಿರುಪತಿಯ ವೆಂಕಟೇಶ ಮತ್ತು ಲಕ್ಷ್ಮೀಯಾದ ಕೊಲ್ಲಾಪುರದ 'ಅಲಮೇಲ್ ಮಂಗಮ್ಮ' ಹಾಗೂ ಗೋವಿಂದರಾಜನನ್ನು ಕುರಿತದ್ದು. ಇದೂ ನೂರೆಂಟು ತಿರುಪತಿಗಳಲ್ಲಿ ಒಂದಾದ ಶ್ರೀವೈಷ್ಣವ ದಿವ್ಯಕ್ಷೇತ್ರ. ಮೂರನೆಯ ನುಡಿ ಕಂಚಿಯ ವರದರಾಜನನ್ನು ಅಲ್ಲಿಯ ಲಕ್ಷ್ಮೀಯಾದ 'ಪೆರುಂದೇವಿತಾಯಾರ್' ಅನ್ನು ಸ್ತುತಿಸುತ್ತದೆ. ಕಂಚಿ ಅತ್ಯಂತ ಪ್ರಾಚೀನ ಧಾರ್ಮಿಕ ಕ್ಷೇತ್ರ, ದೇವಾಲಯಗಳ ಆಗರ. ಕಾಳಿದಾಸನಿಂದ ಹ್ಯೂಯೇನ್‌ತ್ಸಾಂಗನವರೆಗೆ ಈ ನಗರ ಸ್ತುತಿಸಲ್ಪಟ್ಟಿದೆ. ಈ ನಗರದಲ್ಲಿ ಎರಡು ಭಾಗಗಳಿವೆ. ವಿಷ್ಣು ಕಂಚಿ, ಶಿವಕಂಚಿ (ದೊಡ್ಡಕಂಚಿ). ವಿಷ್ಣುಕಂಚಿ ಅಥವಾ ಚಿಕ್ಕಕಂಚಿ ಶ್ರೀವೈಷ್ಣವ ದಿವ್ಯಕ್ಷೇತ್ರಗಳಲ್ಲಿ ಒಂದು. ಇದಕ್ಕೆ ಸತ್ಯವ್ರತ ಕ್ಷೇತ್ರವೆಂದೂ ಹೆಸರಿದೆ. ಬ್ರಹ್ಮ ಇಲ್ಲಿ ಯಾಗವನ್ನು ಮಾಡಿದನೆಂದೂ ಸರಸ್ವತಿಗೆ ಇದು ಇಷ್ಟವಾಗದೆ ಅಡ್ಡಿಪಡಿಸಲು ವೈಗ್ಯೆ ನದಿಯಾಗಿ ಹರಿದು ಯಾಗಶಾಲೆ ನಾಶಮಾಡತೊಡಗಿದಳೆಂದೂ ಬ್ರಹ್ಮನ ಪ್ರಾರ್ಥನೆಯಂತೆ ವಿಷ್ಣು ಆದಿಶೇಷನಾಗಿ ನದಿಯನ್ನು ತಡೆದನೆಂದೂ ಯಜ್ಞಾಂತ್ಯದಲ್ಲಿ ಯಜ್ಞಕುಂಡದಲ್ಲಿ ಪ್ರತ್ಯಕ್ಷವಾಗಿ ವರದರಾಜಸ್ವಾಮಿಯಾಗಿ ನಿಂತಿದ್ದಾನೆಂದೂ ಇದಕ್ಕೆ ಐತಿಹ್ಯವಿರುವುದನ್ನು ದಾಸರು ಇಲ್ಲಿ ಬಳಸಿಕೊಂಡಿದ್ದಾರೆ.

ನಾಲ್ಕನೇನುಡಿ ಇನ್ನೊಂದು ದಿವ್ಯಕ್ಷೇತ್ರವಾದ ಮೇಲುಕೋಟೆ (ಯದುಗಿರಿ) ಯನ್ನು ಕುರಿತದ್ದು ಇಲ್ಲಿಯ 'ಸ್ವಾಮಿ' ಯನ್ನು ಶೆಲ್ವಪಿಳ್ಳೆ ಚೆಲ್ವರಾಯ (ಚೆಲುವನಾರಾಯಣ) ಎಂದೂ, ಅಮ್ಮನವರನ್ನು ಯದುಗಿರಿಯಮ್ಮ ಎಂದೂ ಕರೆಯಲಾಗುತ್ತಿದೆ. ರಾಮಾನುಜರು ತಮ್ಮ ಕಾರ್ಯಕ್ಷೇತ್ರವಾಗಿಸಿಕೊಂಡಿದ್ದ ಪುಣ್ಯಭೂಮಿಯಿದು. ಉತ್ಸವಮೂರ್ತಿ ಸಂಪತ್ಕುಮಾರನನ್ನು ಡೆಲ್ಲಿಯ ಬಾದಷಹನಿಂದ ಬಿಡಿಸಿಕೊಂಡು ತಂದ ಐತಿಹ್ಯವಿದ್ದು ಈ ಸಂಪತ್ಕುಮಾರ ಉತ್ಸವ ಮೂರ್ತಿಯೇ 'ವೈರಮುಡಿ ' ಎಂದು ಪ್ರಸಿದ್ಧವಾಗಿರುವದರಿಂದ ರಾಮಾನುಜರನ್ನೇ (ಯತಿರಾಜರು) ಇಲ್ಲಿಯ ಸಂಪತ್ತು ಎಂದು ವರ್ಣಿಸಲಾಗಿದೆ.

ಕೊನೆಯನುಡಿ ದಾಸರ ಆರಾಧ್ಯದೈವ ಹೆಜ್ಜಾಜಿಯ ಚನ್ನಕೇಶವನನ್ನು ಕುರಿತದ್ದು. ಕೇಶವನು ದಾಸರಿಗೆ ಮುಕ್ತಿಯ ಮಾರ್ಗವನ್ನು ತೋರಿಸಿರುವುದನ್ನು ಅಂತ್ಯಕಾಲದಲ್ಲಿ ಸಾಕ್ಷಾತ್ಕರಿಸಿಕೊಂಡಿರುವಂತಿದೆ. ಶ್ರೀಹರಿ ಶಾಮಶರ್ಮದಾಸರನ್ನು ಪರಿಶುದ್ಧತೆ (ವಿರಜೆ)ಯಲ್ಲಿ ಸ್ವಾಮಿನಿಷ್ಠೆಯಲ್ಲಿ ತಲ್ಲೀನನನ್ನಾಗಿಸಿ (ಮಜ್ಜನಗೈಸಿ) ವೈಕುಂಠವನ್ನು (ಮುಕ್ತಿಮಾರ್ಗ) ಸಜ್ಜುಗೊಳಿಸಿದ್ದಾನೆ. ಇಂತಹ ಒಂದು ಅನನ್ಯತೆ ದಾಸತ್ವವನ್ನು ಸಾಧಿಸಿದವರಲ್ಲದೆ ಅನ್ಯರಲ್ಲಿ ಕಾಣಲು ಬರುವುದಿಲ್ಲ.

೪೫೬

ಜಡ, ಜೀವಿಗಳು ಪರಮಾತ್ಮನ ಶರೀರ 'ಸರ್ವಂ ಹರಿಮಯ ' ಎಂಬ ವೈಶಿಷ್ಟ್ಯತೆಯನ್ನು ಪ್ರತಿಪಾದಿಸುವ ಕೃತಿ ಇದು. ನಾನು ನಿನ್ನ ಸೊತ್ತು ಎಂಬುದನ್ನರಿತೂ ನಾನೇ ಸ್ವತಂತ್ರ

ನಿನ್ನದೇನೂ ಇಲ್ಲ, ಎಲ್ಲಾ ನನ್ನದೇ ಎಂಬ ಭಾವದಿಂದ 'ಕದ್ದುಬಂದೆ' ಎಂಬುದನ್ನು 'ಸಂಸಾರದಲ್ಲಿ ಬಿದ್ದೆ' ಎಂಬುದಾಗಿ ಅತ್ಯಂತ ಸೊಗಸಾಗಿ ನಿರೂಪಿಸಿದ್ದಾರೆ.

ಈ ತಪ್ಪಿನಿಂದ ಪಾರುಮಾಡಿ ಮೋಕ್ಷಕರುಣಿಸು, ನಿನ್ನ ಸರ್ವವ್ಯಾಪಕತೆ ಯನ್ನು ಗೀತೋಪದೇಶದ ಬೆಳಕಿನಲ್ಲಿ ಹೇಳಿದ್ದರೂ ಮೋಹದ ಬಲೆಯಲ್ಲಿ ಮುಚ್ಚಿಹೋಗಿದ್ದ ನನ್ನನ್ನು ಕರುಣಿಸು, ನಾನೀಗ ಶರಣಾಗತನಾಗಿದ್ದೇನೆ; ನನ್ನದೇನೂ ಇಲ್ಲ, ಎಲ್ಲವೂ ನಿನ್ನದೇ ಎಂಬ ಭಾವವಿದೆ. ಇದನ್ನು ಸಾಮಾಜಿಕವಾಗಿಯೂ ಪರಿಗಣಿಸಬಹುದಾಗಿದೆ. ಮನುಷ್ಯನಲ್ಲಿರುವ 'ನಾನು ' ಎಂಬ 'ಅಹಂ' ನ ಸ್ವರೂಪವನ್ನು ಅದರ ನಿರಾಕರಣೆಯ ಅಗತ್ಯವನ್ನು ಒತ್ತಿ ಹೇಳುವ ಮೂಲಕ ಶುದ್ಧ ಮಾನವತ್ವವನ್ನು ಪ್ರತಿಪಾದಿಸುವ ಕೃತಿಯೂ ಆಗಿ ನಿಲ್ಲುತ್ತದೆ.

೪೫೮

ಇಲ್ಲಿಯೂ ಹರಿಏಕನಿಷ್ಠೆ ಮತ್ತು ಶರಣಾಗತಿ ತತ್ವವಿದೆ. ಪ್ರಕೃತಿಯಲ್ಲಿರುವ ಸತ್ವ-ರಜಸ್ಸು-ತಮಸ್ಸುಗಳಿಗೆ ಒಳಪಟ್ಟು ಈ ಜೀವ ಬುಗುರಿಯಾಡುತ್ತದೆ. ನೀನು ಆಡಿಸುತ್ತೀಯೇ, ನಿನ್ನಮೇಲೆ ದಯೆ ಬರಲೂ ಬಿಡಲೂ ನೀನೇ ಕಾರಣ ಎಂಬಲ್ಲಿ ಬುಗುರಿಯಾಟಕ್ಕೂ ಅದನ್ನು ನಿಭಾಯಿಸುವ ಕ್ರಿಯಾಶಕ್ತಿಯನ್ನು ದೈವ ಪ್ರಜ್ಞೆಗೂ ಹೋಲಿಸಿದ್ದಾರೆ. 'ಹಣ್ಣು' ಪದವನ್ನು ಪಕ್ವಗೊಂಡಿಹ ದೇಹ-ಮನಸ್ಸುಗಳಿಗೆ ಹೋಲಿಸಿದೆ. ದಾಸರು ತಮಗೆ ವಯಸ್ಸಾಗಿರುವುದನ್ನು, ಹರಿಭಕ್ತಿಯಲ್ಲಿ ಪಕ್ವವಾಗಿರುವುದನ್ನು ಹೇಳಿದ್ದಾರೆ.

ನೀನು ವೈಕುಂಠದಲ್ಲಿರದೆ ಇಲ್ಲಿ ನಮ್ಮನ್ನು ಕಾಯಿಸದೆ ಸಹನೆಯಿಲ್ಲದ ನನ್ನನ್ನು ಸೊರಗಿಸಬೇಡೆಂಬ ಆರ್ತತೆಯೊಂದಿಗೆ ತಮಗಿರುವ 'ಅಳಿಸಿಹೋಗದ, ತಪ್ಪಿಲ್ಲದ ನೆನಪಿನ ಶಕ್ತಿ'ಯನ್ನು ಹೇಳಿಕೊಳ್ಳುತ್ತ ಅದನ್ನು ಶ್ರೀಹರಿಸ್ತುತಿಗೆ ಮೀಸಲಿಟ್ಟಿರುವ ದೈವಭಕ್ತಿಯನ್ನು ಪ್ರಕಟಿಸಿದ್ದಾರೆ. ಮೋಕ್ಷಕ್ಕೆ ನೀನಿಲ್ಲದೆ ಅನ್ಯದೈವವಿಲ್ಲ ಎಂಬ ಹರಿಏಕನಿಷ್ಠೆ ತುಂಬಿದೆ.

೪೬೧

ಹರಿಏಕನಿಷ್ಠೆಯ ಪ್ರತೀಕವಾಗಿ ತಾತ್ವಿಕವಾಗಿಯೂ ಲೋಕದ ಮಾನವ ಜನ್ಮದ ಸಾರ್ಥಕತೆಗೆ ಭಕ್ತಿಯನ್ನು ಅನುಸರಿಸುವ ಲೋಕೋಕ್ತಿಯಾಗಿಯೂ ಈ ಕೀರ್ತನೆ ನಿಲ್ಲುತ್ತದೆ. ಇಲ್ಲಿ 'ಯಮ' ಸಾವಿಗೆ ಹೆದರದಿರುವಂತಹ ಆತ್ಮಸ್ಥೈರ್ಯವಿದೆ. ಯಮನಿಗೆ ಹೆದರಿ ಲೋಕಶಕ್ತಿಯಲ್ಲಿ ಮನಸ್ಸಿಟ್ಟು ಅವನಿಗೆ ಅನ್ನವಾದರೆ-ಆಹಾರವಾದರೆ, ಅವನಲ್ಲಿ ದೈನ್ಯತೆಯಿಂದ ಬೇಡಿದರೆ ಅದರಿಂದ ಮುಕ್ತಿ ದೊರುಕುವುದಿಲ್ಲ. ಯಮನಾಗಲಿ-ರುದ್ರನಾಗಲಿ ಇವರೆಲ್ಲ ನಾರಾಯಣನಿಗೆ ಉಪ್ಪಿನಕಾಯಿಯಾಗಿರುವವರು ಅಂದರೆ ಅಧೀನರು, ಅವನ ಆಜ್ಞಾಪಾಲಕರು. ಆದ್ದರಿಂದ ಅವರನ್ನೆಲ್ಲ ಬಿಟ್ಟು ಹರಿಯೊಬ್ಬನನ್ನೇ ನಂಬಿದರೆ ಕರುಣಾಮಯನಾದ ಅವನು ಸುಲಭವಾಗಿ ಮೋಕ್ಷ ಕರುಣಿಸುತ್ತಾನೆ, ಎನ್ನುವುದು ಇಲ್ಲಿಯಭಾವ.

ಇಲ್ಲಿ ಬಳಸಿರುವ 'ಉಪ್ಪಿನಕಾಯಿ' ಗೆ ಕಠೋಪನಿಷತ್ತಿನಲ್ಲಿ ಬರುವ ' ಉಪಸೇಚನ ' ಪದಪ್ರಯೋಗದ ಹಿನ್ನೆಲೆಯನ್ನು ಕೊಡುತ್ತಾರೆ. ಹಾಗೆಯೇ ರಾಮನ ಮಾತು ' ಸಕೃದೇವ ಪ್ರಪನ್ನಾಯ ' ಮತ್ತು ಕೃಷ್ಣನ ಹಾಡು 'ಸರ್ವಧರ್ಮಾನ್ ಪರಿತ್ಯಜ್ಯ' ಎಂಬುದು ಶ್ರೀವೈಷ್ಣವ ಚರಮಶ್ಲೋಕಗಳನ್ನು ಧರ್ಮದ ಪ್ರಪತ್ತಿಯ ನಿಷ್ಠೆಯನ್ನು ಸೂಚಿಸುತ್ತದೆ.

೪೬೨

ಇದನ್ನು ಮೂಲಗುರು ಶ್ರೀಮನ್ನಾರಾಯಣನಿಂದ ಸಾಕ್ಷಾದ್ಗುರುಗಳವರೆಗೆ ಇರುವ ಆಚಾರ್ಯರನ್ನು ಸ್ತುತಿಸುವ ಹಾಡಿದೆಂದು ತಮ್ಮ ಭಾವಾರ್ಥದಲ್ಲಿ ದಾಸರು ಹೇಳಿದ್ದಾರೆ. ಜೀವದ ಶರಣಾಗತಿಗೆ ಪರಮಾತ್ಮದರ್ಶನ ಮಾಡಿಸುವ ಆಚಾರ್ಯ–ಗುರುಗಳಲ್ಲಿ ತಮ್ಮ ತಪ್ಪಿನ ಒಕ್ಕಣೆ ಒಪ್ಪಿಸಿ ಅವರಿಂದ ಪರಮಾತ್ಮನಿಗೆ ಶಿಫಾರಸು ಮಾಡಿಸುವ ತಂತ್ರ ಇಲ್ಲಿದೆ.

ಅವನು ಕೊಟ್ಟ ಜ್ಞಾನದ ಕಣ್ಣನ್ನು ನಾನು ಅಜ್ಞಾನಿಯಾಗಿ ನೋಡದಾದೆ ಎನ್ನುವುದಕ್ಕೆ ಇಲ್ಲಿ ಮುಖವನ್ನು ಜ್ಞಾನಕ್ಕೂ ಮಸಿಯನ್ನು ಅಜ್ಞಾನಕ್ಕೂ ಪ್ರತಿಮೆ ಮಾಡಿದೆ. ಜೀವನದಲ್ಲಿ ಪಾಪಮಾಡಿಸುವುದು ಅಜ್ಞಾನವಂತರನ್ನಾಗಿ ಮಾಡುವುದು ಅವನ ಆಟವಾಗಿದೆ. ಅವನು ಕೊಟ್ಟ ಮಸಿಯನ್ನು ನಾನು ಕಣ್ಣಿಗೆ ಹಚ್ಚುವ (ಕಾಡಿಗೆಯಾಗಿ)ಬದಲು ಮುಖಕ್ಕೆ ಹಚ್ಚಿ ಅಜ್ಞನಾದೆ. ತಪ್ಪು ನನ್ನದೆಂದು ಅವನಿಗೆ ಹೇಳಿ ನನ್ನಲ್ಲಿ ಕರುಣೆ ಮೂಡಿಸುವಂತೆ ನನ್ನನ್ನು ಅನುಗ್ರಹಿಸುವಂತೆ ಕೃಪೆ ತೋರಿ ಎಂದು ಸತ್ಸಂಪ್ರದಾಯದ ಗುರು–ಆಚಾರ್ಯರನ್ನು ಬೇಡುವ ಭಾವವಿದೆ.

೪೬೯

ಸ್ವಪ್ನದಲ್ಲಿ ಸಾಕ್ಷಾತ್ಕಾರವಾದ ಕಾಳಿಂಗಕೃಷ್ಣನ ದರ್ಶನವನ್ನು ಈ ಕೀರ್ತನೆಯಲ್ಲಿ ರೂಪಿಸಲಾಗಿದೆ. 'ಬೆಂಗಳೂರಿನ ಮಗನ ಮನೆಯಲ್ಲಿ ನೂತನವಾಗಿ ತಂದ ಅರ್ಚಾಮೂರ್ತಿ ಕಾಳಿಂಗ ಕೃಷ್ಣನ ವಿಗ್ರಹವನ್ನು ಶಾಸ್ತ್ರೋಕ್ತವಾಗಿ ಪೂಜೆಮಾಡಿ ಮಲಗಿದ ರಾತ್ರಿ ಕಂಡ ಕನಸು' ಎಂದು ದಾಸರು ಇದಕ್ಕೆ ಟಿಪ್ಪಣಿ ಹಾಕಿದ್ದಾರೆ.

ಗೋಕುಲದಲ್ಲಿ ಗೋರಕ್ಷಕನಾಗಿದ್ದ, ಗೋಪಾಲಕರ ಅಕ್ಕರೆಯ ಕೂಸಾಗಿದ್ದ, ಗೋವರ್ಧನ ಧಾರಿಯಾಗಿದ್ದ, ಗೋಪಿಕೆಯರ ಮನದನ್ನನಾಗಿದ್ದ, ಕಾಳಿಂಗ ಮರ್ದನದ, ಕಂಸ ಸಂಹಾರದ, ಕುಬ್ಜೆಯ ಗೂನು ನಿವಾರಣೆಯ (ಕಂಸ ಸಂಹಾರಕ್ಕಾಗಿ, ಮಧುರೆಗೆ ಹೋಗುವಾಗ ಮಾರ್ಗ ಮಧ್ಯದಲ್ಲಿ ಕಂಸನ ಅಂತಃಪುರ ದಾಸಿಯಾದ ಕುಬ್ಜೆಯ ಗೂನನ್ನು ಶ್ರೀಕೃಷ್ಣ ತನ್ನ ಸ್ಪರ್ಶದ ಮೂಲಕ ಹೋಗಲಾಡಿಸಿದ ಕಥೆಯೊಂದು ಭಾಗವತದಲ್ಲಿದೆ) ಪೂತನಿಯ ಸಂಹಾರದ ಚಿತ್ರ ಈ ಕೀರ್ತನೆಯಲ್ಲಿ ಮೂಡಿ ಬಂದಿವೆ

ತನ್ನನ್ನು ರಕ್ಷಿಸಿ ತನ್ನನ್ನು ಕಾಡುವವರನ್ನು ಶಿಕ್ಷಿಸುವ ಮೊರೆಯು ಇದರಲ್ಲಿದ್ದು ಶ್ರೀವೈಷ್ಣವ ಶರಣಾಗತಿ ತತ್ವವೂ ಅಭಿವ್ಯಕ್ತವಾಗಿದೆ. ಆಧುನಿಕ ಕಾಲದಲ್ಲೂ ಆಧ್ಯಾತ್ಮಿಕ ಸಾಧನೆ ಮಾಡುತ್ತ ದೈವ ಸಾಕ್ಷಾತ್ಕಾರ ಮಾಡಿಕೊಳ್ಳುವ ಭಕ್ತರು ಇರುತ್ತಾರೆಂಬುದಕ್ಕೆ ದಾಸರ ಈ ಕೃತಿ ಸಾಕ್ಷಿಯಾಗಿದೆ.

೪೭೨

ದಾಸರು ಬಾಲಕೃಷ್ಣನನ್ನು ಕಲ್ಪಿಸಿಕೊಂಡು ತಾಯಿಯ ಸ್ಥಾನದಲ್ಲಿ ನಿಂತು ಅನ್ನ ತಿನ್ನಿಸುವ ಪರಿ ಇಲ್ಲಿ ವಿಶಿಷ್ಟವಾಗಿ ಮೂಡಿದೆ. ಇಲ್ಲಿಯ 'ತುತ್ತು' ' ಒತ್ತೊತ್ತಿನತುತ್ತು ' ದಾಸರು ಪರಮಾತ್ಮನಿಗೆ ಅರ್ಪಿಸುವ ಭಕ್ತಿಯ ಆಧ್ಯಾತ್ಮಿಕ ಅನ್ನ. ವಾಮನ, ಗೀತಾಚಾರ್ಯ ಬಾಲಕೃಷ್ಣನ ವಿವಿಧ ತುಂಟಾಟಗಳು ಗೋಪಿಕೆಯರ ಮೋಹನ ರೂಪಗಳ ಜೊತೆಗೆ ಕನಕದಾಸ, ಪುರಂದರದಾಸ, ಕುಮಾರವ್ಯಾಸ, ಲಕ್ಷ್ಮೀಶರಿಂದ ಸ್ತುತಿಗೊಂಡ ಕೃಷ್ಣನ ಚಿತ್ರವನ್ನು ದಾಸರು ಬಿಡಿಸಿರುವುದು ವಿಶೇಷವಾದದ್ದು ಮತ್ತು ಅಪರೂಪವಾದದ್ದು.

೪೭೭

ಪ್ರಪತ್ತಿಧರ್ಮದ ಸಂಪೂರ್ಣತೆ ಈ ಕೃತಿಯಲ್ಲಿ ವ್ಯಕ್ತವಾಗಿದೆ. ಸಂಪೂರ್ಣವಾಗಿ ಲೌಕಿಕದಿಂದ ವಿಮುಖರಾಗಿ ಎಲ್ಲವನ್ನೂ ಭಗವಂತನ ಪಾದದಲ್ಲೇ ಕಾಣುವ ಶರಣಾಗತಿ ಇಲ್ಲಿಯ ಭಾವ. ತಮಗೆ ಏನೇ ತೊಂದರೆಯಾದರೂ ಅದಕ್ಕೆ ಪ್ರತಿಭಟಿಸದೆ, ಅದನ್ನು ಸಹಿಸುವ, ಭಗವತ್ಪ್ರಸಾದ, ಭಗವಂತನ ಪರೀಕ್ಷೆ ಎಂದು ಸ್ವೀಕರಿಸುವ ಅಪರೂಪದ ಸಹನಶೀಲತೆ ಈ ಶರಣಾಗತಿಯ ವಿಶಿಷ್ಟಗುಣ.

ಊರಿನ ಕೆಲವು ದುಷ್ಟರಿಂದ ದಾಸರ ಕುಟುಂಬದ ಮೇಲೆ ನಡೆದ ತೀವ್ರತರ ಹಲ್ಲೆಯಿಂದ ನೊಂದ ಮನಸ್ಸು ಈ ನಾದವನ್ನು ಹೊರಹೊಮ್ಮಿಸಿದೆ. ೩.೪.೯೨ ಯುಗಾದಿ ಹಬ್ಬದಂದು ಕ್ಷುಲ್ಲಕ ಕಾರಣಕ್ಕಾಗಿ ದಾಸರ ಹಿತ್ತಲಿಗೆ ಬೆಂಕಿಹಾಕಿ ಗಿಡಮರಗಳನ್ನೆಲ್ಲ ಧ್ವಂಸ ಮಾಡಲಾಯಿತು. ಇದಾದ ಐದು ದಿನಗಳಿಗೇ (೯.೪.೯೨) ದಾಸರು ವೈಕುಂಠವಾಸಿಗಳಾದರು. ಇಲ್ಲಿ ಬರುವ ದಾಯಿಗರು, ರಾಕ್ಷಸರು, ಶ್ಲೇಷಾರ್ಥವನ್ನು ಹೊಂದಿವೆ. ಭಗವದ್ಭಕ್ತ ಯಾವಾಗಲೂ ಒಂಟಿಯಾಗಿರುತ್ತಾನೆ. ಹಾಗೆಂದೇ ಅವನ ಮೇಲೆ ಆಕ್ರಮಣಗಳು ನಡೆಯುತ್ತಿರುತ್ತವೆ. ಆದರೆ ಅವನು ಅಧೀರನಲ್ಲ, ಅವನಿಗೆ ಭಗವಂತನ ಬೆಂಬಲವಿರುತ್ತದೆ. ಅದರ ಮುಂದೆ ಲೌಕಿಕದ ಯಾವ ಬಲವೂ ಸಾಟಿಯಿಲ್ಲ. ಎಂಬ ಕೃಷ್ಣನ ಭಗವದ್ಗೀತಾ ತತ್ವ ಇಲ್ಲಿದೆ. ಶ್ರೀಕೃಷ್ಣ ಅರ್ಜುನನ ಕಡೆ ತಾನೊಬ್ಬನೇ ಇದ್ದು ದುರ್ಯೋಧನನ ಕಡೆ ತನ್ನ ಇಡೀ ಸೈನ್ಯಬಲವನ್ನು ನೀಡಿ ಧರ್ಮವನ್ನು ಜಯಿಸುವ ತತ್ವ ಇದು. ದಾಸರ ಶರಣಾಗತಿ ಮನೋಭಾವ ಇಲ್ಲಿ ಅತ್ಯುತ್ತಮವಾಗಿ ಮೂಡಿಬಂದಿದೆ.

೪೮೨

ಅಷ್ಟಾಕ್ಷರಿಮಂತ್ರದ ಮಹತ್ವವನ್ನು ಕೃಷಿಪರಿಭಾಷೆಯಲ್ಲಿ ಹೇಳುವುದರ ಜೊತೆ ಜೊತೆಗೇ ಅದರಿಂದ ಪುನೀತರಾದ ಶ್ರೀವೈಷ್ಣವ ಭಕ್ತರನ್ನೂ ಸ್ತುತಿಸಲಾಗಿದೆ. ಪುರಂದರ ದಾಸರ ಇದೇ ರೀತಿಯ ಕೀರ್ತನೆ (ಉಗಾಭೋಗ) ಯಿಂದ ಇದು ಪ್ರಭಾವಿತವಾಗಿದ್ದರೂ ಅದಕ್ಕಿಂತ ಭಿನ್ನವಾದ ಪ್ರಪತ್ತಿಧರ್ಮದ ಆಶಯ ಈ ಕೀರ್ತನೆಯ ವೈಶಿಷ್ಟ್ಯವಾಗಿದೆ. ನಾರದ ಅಂಬರೀಷ ಪ್ರಹ್ಲಾದ, ರುಕ್ಮಾಂಗದ, ಧ್ರುವ ಮೊದಲಾದ ಭಾಗವತ ಶ್ರೇಷ್ಠರಿಂದ ಆರಂಭವಾದ ಹರಿಭಕ್ತಿ ಆಳ್ವಾರರಲ್ಲಿ ಮಡುಗಟ್ಟಿ ಅದನ್ನೆಲ್ಲ ರಾಮಾನುಜರು ಒಕ್ಕಣೆ ಮಾಡಿ ಪ್ರಚಾರಮಾಡಿ ನಾಡಿನ ಜನತೆಗೆ ಉಣಬಡಿಸಿದರು. ರಾಮಾನುಜರಿಂದ ಈ ಶ್ರೀವೈಷ್ಣವ ಧರ್ಮ ಪ್ರವೃದ್ಧಿಮಾನಕ್ಕೆ ಬಂದಿದೆ ಎಂಬುದನ್ನು ಈ ಕೀರ್ತನೆ ಹೇಳುತ್ತದೆ. ಇದರ ಭಾವವನ್ನು ಕೃಷಿ ಪರಿಭಾಷೆಯಲ್ಲಿ ಬೆಳೆಸಿರುವುದು ವಿಶಿಷ್ಟವಾಗಿದ್ದು (ಬೀಜ, ಬಿತ್ತು, ಗೊಬ್ಬರ, ನೀರು, ಗಾಳಿ, ಕಾವಲು, ಬೆಳೆ, ಒಕ್ಕಣೆ ಇತ್ಯಾದಿ) ರಾಮಾನುಜರು ಈ ಧರ್ಮವನ್ನು ಜಾತಿ ಮತಭೇದವಿಲ್ಲದೆ ಎಲ್ಲರಿಗೂ ಬೋಧಿಸಿದರು; ಶ್ರೀಮಣಿ 'ತಿರುಮಣಿ' ಊರ್ಧ್ವ ಪುಂಡ್ರ ಧಾರ್ಮಿಕ ಸಂಕೇತ ಹಣೆಯಲ್ಲಿ ಧರಿಸುವ ನಾಮದಲ್ಲಿ ಅದರ ಅರ್ಥವನ್ನು ತುಂಬಿದರು; ಆಳ್ವಾರರ ಪ್ರಬಂಧಗಳನ್ನೆಲ್ಲ 'ನಾರಾಯಣ ದಿವ್ಯಪ್ರಬಂಧ' ವೆನಿಸಿ ವೇದ ಸಮಾನಗೊಳಿಸಿದರು; ಗೋಪ್ಯಮಂತ್ರದ ಉದ್ಘೋಷ ಧರೆ–ಗಿರಿಯಲ್ಲೆಲ್ಲ ಪ್ರತಿಧ್ವನಿಸಿತು ಎಂಬುದನ್ನು ಪ್ರತಿಮೆಗಳ ಮೂಲಕ ಪ್ರತಿಪಾದಿಸಲಾಗಿದೆ.

೪೮೩

'ಸೋಹಂಬ್ರಹ್ಮಂ ' ಎಂಬ ಶ್ರೀವೈಷ್ಣವ ತತ್ವವನ್ನು ಈ ಕೀರ್ತನೆ ಪ್ರತಿಪಾದಿಸುತ್ತದೆ(ಸ:– ವಿಷ್ಣು, ಅಹ:–ಜೀವಾತ್ಮ, ಬ್ರಹ್ಮ–ಪರಿಪೂರ್ಣ, ಸರ್ವಸ್ವ)

ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಕಾರ ತತ್ವಗಳು ಮೂರು (೧) ಚಿತ್ತು (೨)ಅಚಿತ್ತು (೩)ಈಶ್ವರ– ಪರಬ್ರಹ್ಮ. ಜಡಸ್ವರೂಪವಾದ ಜಗತ್ತನ್ನು ಚೇತನಸ್ವರೂಪವಾದ ಜೀವ ಅನುಭವಿಸುತ್ತಿದ್ದರೂ ಇವು ಸರ್ವೇಶ್ವರನಾದ ನಾರಾಯಣನಿಂದ ನಿಯಾಮಕವಾಗಿರುತ್ತವೆ. ಇವುಗಳ ಅಸ್ತಿತ್ವಕ್ಕೆ ಪರಮಾತ್ಮನೊಬ್ಬನೇ ಇರುವವನು ಎನ್ನುವುದರಿಂದಲೇ ಇದು ವಿಶಿಷ್ಟಾದ್ವೈತವೆನಿಸಿತು.

ಈ ತತ್ವದ ಅರ್ಥವಾದ ಶ್ರೀಮನ್ನಾರಾಯಣನೇ ಸರ್ವಸ್ವ, ಬ್ರಹ್ಮ, ಪರಿಪೂರ್ಣ. ಇವನಲ್ಲೇ ಜಗತ್ತೂ, ಜೀವವೂ ಎಲ್ಲವೂ ಅಡಕವಾಗಿದೆ ಎಂಬುದನ್ನು ಈ ಕೀರ್ತನೆ 'ವಿಶ್ವರೂಪದರ್ಶನ' ಗಳ ಪ್ರತಿಮೆಯ ಮೂಲಕ ಪ್ರತಿಪಾದಿಸುತ್ತದೆ.

ಕೋಟೆ–ಪೇಟೆ ಚೆನ್ನಿಗರಾಯ ದಾಸರ ಆರಾಧ್ಯದೈವಕ್ಕಿರುವ ಪ್ರತೀತಿಯ ಕಥೆಯನ್ನೊಳಗೊಂಡ ಸಂಗತಿಯಾಗಿದೆ.

೪೮೬

ದಾಸರ ಆರಾಧ್ಯದೈವ ಹೆಜ್ಜಾಜಿ ಚನ್ನಕೇಶವನನ್ನು ಏಳಿಸುವ ಕೃತಿ. 'ಕೋಟೆ ಚೆನ್ನಿಗ ' ಎಂಬ ಹೆಸರೂ ಈ ದೇವರಿಗಿದ್ದು ಇದಕ್ಕೊಂದು ದಂತಕಥೆಯೂ ಇದೆ. ಪ್ರತಿ ಹುಣ್ಣಿಮೆಯ ರಾತ್ರಿ ಭಾಗವತರೂ ಸುಮಂಗಲೆಯರೂ ಮಂಗಳದ್ರವ್ಯಗಳು, ಮಂಗಳ ವಾದ್ಯಗಳೊಂದಿಗೆ 'ಪೇಟೆ ಚೆನ್ನಿಗ' ಎಂಬ ಇನ್ನೊಂದು ಹೆಸರಿರುವ ಪಕ್ಕದೂರಾದ ದೊಡ್ಡಬೆಳವಂಗಲದ ಚೆನ್ನಕೇಶವ ದೇವಾಲಯದ ಕಡೆಯಿಂದ ಮಂಗಳಗೀತೆಗಳನ್ನು ಹಾಡುತ್ತ ಕುಣಿಯುತ್ತ ಬರುತ್ತಾರೆ ಎಂಬ ಪ್ರತೀತಿಯನ್ನೇ ಈ ಕೀರ್ತನೆಯಲ್ಲಿ ರೂಪಕ ಗೊಳಿಸಲಾಗಿದೆ. ಶ್ರೀದೇವಿ ಭೂದೇವಿ ಸಮೇತ ಶ್ರೀಮನ್ನಾರಾಯಣ ದೇವರನ್ನು ಕುದುರೆ, ಗರುಡ ವಾಹನಗಳನ್ನು ಉತ್ಸವಕ್ಕೆ ಬಳಸಲಾಗುತ್ತದೆ. ಹೆಜ್ಜಾಜಿಯ ದೇವಾಲಯ ಪೂರ್ವಾಭಿಮುಖವಾಗಿರುವುದರಿಂದ ಮುನ್ನಾನ (ಎದುರು) ಸೂರ್ಯೋದಯವೆಂದು ಹೇಳುತ್ತಾರೆ.

ಈ ಐತಿಹ್ಯದ ಹಿಂದೆ ಇತಿಹಾಸ ಇದ್ದಿರಬಹುದಾದ. ಸಾಧ್ಯತೆಯಿದೆ ಹೆಜ್ಜಾಜಿ ಎಂಬುದನ್ನು ಸಸ್ಯಸಂಬಂಧದಿಂದ ಹಿರಿದು–ಜಾಜಿ ಎಂದು ವಿಭಾಗಿಸುವದಕ್ಕಿಂತ ಇತಿಹಾಸ ಸಂಬಂಧದಿಂದ ಹಿರಿದು–ಆಜಿ ಎಂದು ವಿಭಾಗಿಸುವುದು ಹೆಚ್ಚು ಸೂಕ್ತವಾಗುತ್ತದೆ. ಆಜಿ ಎಂದರೆ ಯುದ್ಧಭೂಮಿ. ಗಂಗರ ಪ್ರಮುಖ ರಾಜಕೀಯ ಕೇಂದ್ರವಾಗಿ ಇದು ಮೆರೆದಿರುವುದರ ಸುಳಿವು ಶಾಸನಗಳಲ್ಲಿ ದೊರಕುತ್ತದೆ. ಗಂಗರ ಒಂದು ಪ್ರಮುಖ ಯುದ್ಧ ಇಲ್ಲಿ ನಡೆದಿರುವುದರ ಸೂಚನೆ ಈ ಸ್ಥಳನಾಮದಲ್ಲಿರುವಂತಿದೆ. ಈ ಐತಿಹ್ಯದಲ್ಲಿ ಇದರ ವಾಸನೆಯಿದೆ.

೫೦೯

ಇದು ಶ್ರೀವೈಷ್ಣವ ಆಳ್ವಾರರಲ್ಲಿ ಬರುವ ಆಂಡಾಳ್–ಗೋದಾದೇವಿಯ ಸ್ತುತಿ. ಮನಸ್ಸು ಮತ್ತು ಭಕ್ತನ ನಡುವೆ ನಡೆಯುವ ಸಂಭಾಷಣೆಯ ಶೈಲಿಯಲ್ಲಿ ಈ ಕೃತಿಯಿದೆ. ಶ್ರೀವಿಲ್ಲಿಪುತ್ತೂರಿನಲ್ಲಿ ತಿರುವಾಡಿಪ್ಪೂರದಲ್ಲಿ ಹುಟ್ಟಿದ ಗೋದೆಯನ್ನು ನಂಬು, ವೈಕುಂಠ ದೊರೆಯುತ್ತದೆಂಬ ಭಕ್ತನ ಧನ್ಯತೆ ಇಲ್ಲಿದೆ. ಗೋದೆಯ ಧನುರ್ಮಾಸವ್ರತ ಅದಕ್ಕಾಗಿ ರಚಿಸಿದ ತಿರುಪಾವೈ ಪದ್ಯಮಾಲೆ ಅದರಿಂದ ಕರ್ನಾಟಕದಲ್ಲಿ ನಡೆಯುತ್ತಿರುವ ಧನುರ್ಮಾಸದ ಭಜನೆಯ ಪರಂಪರೆಯ ಚಿತ್ರ ಇಲ್ಲಿದೆ. ೫೦೮ರಲ್ಲಿ ಗುರುರಾಮಾನುಜರನ್ನು ಸ್ತುತಿಸಿದೆ. ಈ ಎರಡು ಸ್ತುತಿಗಳು ಈಚೆಗೆ ದೊರೆತವುಗಳಾಗಿವೆ.

ಇಲ್ಲಿ ಗೋದೆ ಹಾಡಿರುವ 'ತಿರುಪ್ಪಾವೈ ' ಕೃತಿಯು ೩೦ ಪದ್ಯಗಳು ವೇದಮೂಲದವೆಂಬುದನ್ನು ಸೂಚಿಸಲಾಗಿದೆ. ಗೋದೆಯನ್ನು ಭೂದೇವಿಯ ಸ್ವರೂಪದವಳೆಂದು ಭಾವಿಸಿರುವ ಪರಂಪರಾ ಭಕ್ತಿಯಿದೆ.

ಇನ್ನೊಂದು ತಮಿಳು ಕೃತಿಯಲ್ಲಿ ಸತಿ–ಪತಿಭಾವವನ್ನು ತಂದಿದ್ದಾರೆ. ಸತಿಯಾಗಿ ಅನುಭವಿಸಿದ ಪರಮಾತ್ಮನೊಂದಿಗಿನ ಸಖ್ಯದ ಭಾವನೆಯನ್ನು ಸಖಿಗೆ ನಿರೂಪಿಸುವ ಶೈಲಿ ಇಲ್ಲಿದೆ. ಪರಮಾತ್ಮನನ್ನು ಬೇರೆಯಾಗಿ ಕಾಣುತ್ತ ಅವನಲ್ಲಿ ಲೀನವಾಗುವ ಸಮರ್ಪಣಾ ಭಾವ ಇಲ್ಲಿದೆ.

೫೧೧

ವಾದಿರಾಜರು ವೈಕುಂಠದಾಸರನ್ನು ಕುರಿತು ರಚಿಸಿರುವ ಕೃತಿ ಎಂದು ಗುರುತಿಸಲಾಗಿದೆ. ಇದರಲ್ಲಿ ದಶಾವತಾರದ ವರ್ಣನೆಯಿದೆ. ವೇದವತಂದು–ಮತ್ಸ್ಯ ಬೆಟ್ಟವ ತಂದು, ಕೂರ್ಮ, ಭೂಮಿಯ ಸಾಧಿಸಿ–ವರಾಹ, ಭಾಗದಾನ–ವಾಮನ ನೃಪಸಂಹಾರ–ಪರಶುರಾಮ, ಕಂಬದ ಲೊಡದವ–ನಾರಸಿಂಹ, ನಂದಗೋಕುಲ ಕೃಷ್ಣ ನಿರ್ಮಾಣದಿಂದ ತ್ರಿಪುರಸಂಹಾರ' ಇಂದುವದನೆ ಸಹಿತ ಪುಣ್ಯದೊಳಾಡಿ ರಾಮಾವತಾರಗಳ ಸೂಚನೆಯಿದೆ. ಇದು ದಾಸರ ತೊಡೆಯ ಮೇಲೆ ಮಗುವಿನ ರೂಪದಲ್ಲಿ ಕಂಡ ಕೇಶವನ ವರ್ಣನೆ ಎಂದು ಸಂಪ್ರದಾಯದ ಮಾತಿದೆ.

೫೧೬

ಈ ಕೃತಿ ಕನಕದಾಸ ಸ್ತುತಿ. ಕನಕದಾಸರು ಶ್ರೀವೈಷ್ಣವತತ್ವ ಪರಂಪದರೆಗೇ ಸೇರಿದವರೆಂಬುದು ಸ್ಪಷ್ಟ. ಇದಕ್ಕೆ ಇವರ ಕೀರ್ತನೆಗಳಲ್ಲಿ ಹಲವು ಉದಾಹರಣೆಗಳು ದೊರಕುತ್ತವೆ. ರಾಮಾನುಜರನ್ನೂ ಸ್ತುತಿಸಿರುವ ಎರಡು ಕೃತಿಗಳಿವೆ (ರಾಮಾನುಜರೇ ನಮೋ ನಮೋ, ರಾಮಾನುಜ ಮತೋದ್ಧಾರಕೆ) ತಾತಾಚಾರ್ಯ (ತಿರುಮಲಾರ್ಯ)ರನ್ನು ಸ್ತುತಿಸುವ ೩–೪ಕೃತಿಗಳಿವೆ. ಶ್ರೀವೈಷ್ಣವ ಪರಿಭಾಷೆ ಅನೇಕ ಕೀರ್ತನೆಗಳಲ್ಲಿ ಕಂಡುಬರುತ್ತದೆ (ತಿರುಮಂತ್ರ, ಅಷ್ಟಾಕ್ಷರಿ, ಊರ್ಧ್ವಪುಂಡ್ರ, ತಿರುಮಣಿ ಇತ್ಯಾದಿ) ಶ್ರೀವೈಷ್ಣವಕೀರ್ತನೆಗಳ ಮುಖ್ಯ ಲಕ್ಷಣಗಳಾದ ಹರಿಏಕನಿಷ್ಠೆ, ಲಕ್ಷ್ಮೀಸಮೇತ ಪರಿಕಲ್ಪನೆ, ಮಂತ್ರ ಮಹಿಮೆ ಪ್ರಪತ್ತಿಧರ್ಮ (ಶರಣಾಗತಿ ಭಾವ) ಇತ್ಯಾದಿಗಳು ದಟ್ಟವಾಗಿ ಕಾಣಸಿಗುತ್ತವೆ. ವೈಕುಂಠದಾಸರನ್ನು ಹೆಸರಿಸಿಯೇ ಸ್ತುತಿಸಿರುವ ಕೀರ್ತನೆ (೧೧೫)ಯೊಂದಿಗೆ ಇದರಲ್ಲಿ ಹೆಸರಿಸದೇ ಸ್ತುತಿಸಿರುವುದು ಕಂಡು ಬರುತ್ತದೆ. ಇನ್ನೊಂದೆಡೆ

'ಸಿರಿಗಂಧ ಕುಂಕುಮ ಸಾದು ಜವ್ವಾಜಿಕ-
ಸ್ತುರಿ ತಿಲಕವನಿಡುವುದ ನಾನೊಲ್ಲೆ
ಸಿರಿ ಊರ್ಧ್ವಪುಂಡ್ರ ದ್ವಾದಶನಾಮವಿಡುವವರ
ಪರಿಚಾರಕರ ಪರಿಚಾರಕನೆನಿಸೆನ್ನಾ'

ಎಂದು ಸ್ಪಷ್ಟವಾಗಿ ದೈವಸಂಪ್ರದಾಯವನ್ನು ನಿರಾಕರಿಸುತ್ತ ವಿಶಿಷ್ಟಾದ್ವೈತ ಸಂಪ್ರದಾಯವನ್ನು ಸ್ವೀಕರಿಸಿರುವುದು ಕಂಡು ಬರುತ್ತದೆ. ಆದ್ದರಿಂದ ಕನಕದಾಸರ ಸಂಪ್ರದಾಯ ಶ್ರೀವೈಷ್ಣವ ವಿನಾ ಮಾಧ್ವವಲ್ಲ ಎಂಬುದನ್ನು ಸುಲಭವಾಗಿ ಹೇಳಬಹುದಾಗಿದೆ. ಮಧ್ವಾಚಾರ್ಯರೊಂದಿಗಿರುವ ಮತ್ತು ಅವರ ಮಠದೊಂದಿಗಿನ ಸಂಬಂಧ, ಅವರನ್ನು ಕುರಿತ ಸ್ತುತಿಗಳೆಲ್ಲ ಅವರೂ ಇವರನ್ನು ಆದರಿಸುತ್ತಿದ್ದುದರ ಸೂಚನೆಯೇ ವಿನಾ ಅವರೇ ಇವರ ಗುರುಗಳಾಗಿದ್ದರು ಎಂಬರ್ಥದಲ್ಲಿ ನೋಡಲಾಗದು.

ಈ ಕೀರ್ತನೆ ಮೇಲಿನ ಅಭಿಪ್ರಾಯವನ್ನು ಖಚಿತಪಡಿಸುವಲ್ಲಿ ಮುಖ್ಯವಾಗುತ್ತದೆ. ಇದು ಒಂದು ರೀತಿಯಲ್ಲಿ ಕನಕದಾಸರ ಜೀವನ ಚರಿತ್ರೆ. ಅವರು ಪೂರ್ವಜೀವನದಿಂದ ದಾಸರಾಗಿ ಪರಿವರ್ತಿತರಾದ ಸಂಗತಿಯನ್ನು ಇದು ಬಿಡಿಸುತ್ತದೆ. ಹರಿದಾಸನಾಗುವುದಕ್ಕೆ ಮೊದಲಿನ 'ಕನಕ ದಳದಲಿ ಬಂದು ಕಲೆತನೆಂದರೆ ಫೌಜು ಕನುಕಮನುಕಾಗುವುದು' ಎಂಬಲ್ಲಿ ಅದರ ಸೂಚನೆಯಿದೆ. ಈ 'ಮೊನೆಗಾರತನವೆಂಬ ಶನಿ ಬಿಡಿಸಿ ತವಪಾದ ವನಜವನು ಸೇರಿಸಿದೆ.' 'ತವದಾಸರಿಗೆ ಅಡಿಯಾಗಿಸಿದೆ, ತಾಮಸಾಹಂಕಾರ ದುರ್ಮತಿ ದುರಿತ ಕಣಜವನು ಕಿತ್ತೆಸೆದೆ' ಎಂಬ ಸಾಲುಗಳು ದಾಸರ ಪರಿವರ್ತನೆಗೆ ಕಾರಣವಾದ ಗುರುಗಳ ಸಹವಾಸ, ಸಾಹಚರ್ಯವನ್ನು ಧ್ವನಿಸುತ್ತವೆ.

ಈ ಗುರು ಈ ಕೀರ್ತನೆಯಲ್ಲಿ ಮಧ್ವಪರಂಪರೆಯವರಂತೂ ಆಗಿರಲು ಸಾಧ್ಯವಿಲ್ಲ. ಏಕೆಂದರೆ 'ತಿರುಮಂತ್ರ' 'ರಹಸ್ಯ' ವೀರವೈಷ್ಣವರ ಚರಣಸೇವೆ ಮುಂತಾದ ಪದಗಳೆಲ್ಲ ಶ್ರೀವೈಷ್ಣವ ಪಾರಿಭಾಷಿಕ ಪದಗಳೇ ಅಗಿವೆ. ಅ.ಪ ಯಲ್ಲಿ ಬರುವ 'ಗುರು(ತಿರು)ಮಂತ್ರ ಮೂಲ ಸದ್ಗುರುಮೂರ್ತಿ ನೀನಾಗಿ ಕರೆಯ ಸೇರಿಸ(ಸಿ)ದೆ ಹರಿಯೆ' ಎಂಬುದು ೫ನೇ ನುಡಿಯ 'ಇದು ರಹಸ್ಯವು ಎಂದು ಹಿತವಬೋಧಿಸಿ ಎನಗೆ ಬದುಕಿಸಿದೆ ಬದುಕಿದೆನು ಹರಿಯೆ ' ಎಂಬುದಕ್ಕೆ ಸಂಬಂಧಿಸಿದುದಾಗಿದೆ. [ಈ ಉಲ್ಲೇಖದಲ್ಲಿ ಕಂಸದಲ್ಲಿ ಕೊಟ್ಟಿರುವುದು ತಿದ್ದುಪಡಿಯಾಗಬೇಕಾಗಿರುವ ಸರಿಪಾಠ]. ಶ್ರೀವೈಷ್ಣವ ಸಂಪ್ರದಾಯದಲ್ಲಿ ಮಂತ್ರೋಪದೇಶವನ್ನು 'ರಹಸ್ಯಮಂತ್ರ' ಎಂದೇ ಕರೆಯಲಾಗಿದೆ. ತಿರುಮಂತ್ರ (ಅಷ್ಟಾಕ್ಷರಿ)ವನ್ನು ಒಳಗೊಂಡ ಮೂರು ಮಂತ್ರಗಳೇ 'ರಹಸ್ಯತ್ರಯ' ಗಳಾಗಿರುವುದು. ಇದನ್ನು ಗಮನಿಸಿದರೆ

ಕನಕದಾಸರಿಗೆ ತಾತಾಚಾರ್ಯರು ಅಥವ ವೈಕುಂಠದಾಸರ ಮೂಲಕ ಮಂತ್ರೋಪದೇಶವನ್ನು ಒಳಗೊಂಡ 'ಪಂಚಸಂಸ್ಕಾರ' ಕ್ರಿಯೆ ಆಗಿರುವಂತೆ ಕಾಣುತ್ತದೆ.

'ಮನದೊಳಗೆ ಎರಡಿಲ್ಲ ಮನದಾನೆ(ಸೆ) ಮೇಲ್ಕಡಿವಮನವ ಹಿಮ್ಮೆಟ್ಟಿಸಿದೆ ಗುರುವೆ' ಎಂಬಲ್ಲಿ ಈ ಎರಡಿಲ್ಲ ಎಂಬುದು ದ್ವೈತವನ್ನೇ ಸೂಚಿಸುತ್ತಿರುವಂತಿದ್ದರೆ ಭೇರಿನಿಸ್ಸಾಳಗಳು ಎಂಬ ಪದಗುಚ್ಛ ವೈಕುಂಠದಾಸರ ಕೀರ್ತನೆಯಲ್ಲೂ ಕಂಡುಬರುತ್ತಿದ್ದು ಈ ಕೃತಿ ಗುರುರೂಪದಲ್ಲಿ ವೈಕುಂಠದಾಸರನ್ನೇ ಕುರಿತದ್ದೆಂದು ಹೇಳಲು ಇದೂ ಸಹಾಯಕವಾಗುತ್ತದೆ. ಗುರುವಿನ ಮೂಲಕವೇ ಭಗವಂತನ ಕೃಪೆಯಾಚಿಸುವ ಮತ್ತು ಹರಿ–ಗುರು ಒಂದೇ ಆಗುವ ಶ್ರೀವೈಷ್ಣವ ಪ್ರಪತ್ತಿಧರ್ಮಕ್ಕೆ ಈ ಕೃತಿ ಅನ್ವಯವಾಗುತ್ತದೆ.

ಅನುಬಂಧ-೩

ಪುರಾಣನಾಮ ಮತ್ತು ತತ್ತ್ವವಿಚಾರಸೂಚಿ

ಶ್ರೀವೈಷ್ಣವ ಹರಿದಾಸರೂ ಇತರ ಹರಿದಾಸರಂತೆ ಪುರಾಣ ಪ್ರತಿಮೆಗಳನ್ನು ವಿಶೇಷವಾಗಿ ಬಳಸಿದ್ದಾರೆ. ವಿಶಿಷ್ಟಾದ್ವೈತವೂ ವೇದಮೂಲವೇ ಆಗಿದ್ದು ಅದರ ಸಾರಸಂಗ್ರಹವಾಗಿರುವ. ತಮಿಳು ಪ್ರಬಂಧಗಳ ಆಧಾರದ ಮೇಲೆ ನಿಂತಿದ್ದರೂ ಈಶ, ಪ್ರಶ್ನ, ಕಠ, ಕೇನ, ಮಂಡೂಕ, ತೈತ್ತಿರೀಯ, ಛಾಂದೋಗ್ಯ, ಬೃಹದಾರಣ್ಯಕ ಮುಂತಾದ ಉಪನಿಷತ್ತುಗಳ ಸಾರವೂ ಆಗಿದೆ. ಈ ವೇದ-ಉಪನಿಷತ್ತುಗಳ ಆಧಾರದ ಮೇಲೆ ಬಂದಿರುವ ಪುರಾಣಗಳು ಹೆಚ್ಚು ಜನಪ್ರಿಯವಾಗಿದ್ದು ಅನೇಕ ಪುರಾಣಗಳ ಪ್ರಸಂಗಗಳನ್ನು ವಿಶೇಷವಾಗಿ ಭಾಗವತ ಪ್ರಸಂಗಗಳನ್ನು ಶ್ರೀ ವೈಷ್ಣವ ಹರಿದಾಸರೂ ಉಲ್ಲೇಖಿಸುತ್ತಾರೆ. ಹೀಗೆ ಉಲ್ಲೇಖಿಸುವ ಸಂಗತಿ-ಸನ್ನಿವೇಶಗಳೆಲ್ಲ ಶ್ರೀವೈಷ್ಣವತತ್ತ್ವಕ್ಕೆ ಅನುಗುಣವಾದ ಶರಣಾಗತಿ ಧರ್ಮವನ್ನು ಸಾರುವ ಸಂದರ್ಭಗಳೇ ಆಗಿರುತ್ತವೆಂಬುದನ್ನು ಗಮನಿಸಬೇಕು.

ಶ್ರೀವೈಷ್ಣವತತ್ವವು ಶ್ರೀಹರಿಯನ್ನು ಪರ-ವ್ಯೂಹ-ವಿಭವ-ಅಂತರ್ಯಾಮಿ ಮತ್ತು ಅರ್ಚಾ ಎಂಬ ಐದು ವಿಭಾಗಗಳಲ್ಲಿ ಸೃಷ್ಟಿಸಿಕೊಂಡು ಸ್ತುತಿಸುತ್ತದೆ. ಪರದಲ್ಲಿ 'ವಾಸುದೇವ'ನೊಬ್ಬನೇ ಶ್ರೀ ಮನ್ನಾರಾಯಣ ರೂಪನಾಗಿರುತ್ತಾನೆ. ವ್ಯೂಹದಲ್ಲಿ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರನ್ನಾಗಿ ನಾರಾಯಣನನ್ನು ಕಲ್ಪಿಸಿ ಇವರುಗಳ ಬೇರೆ ಬೇರೆ ರೂಪಗಳನ್ನೇ 'ದ್ವಾದಶ ನಾಮಗಳಲ್ಲಿ' ಸ್ತುತಿಸಿದೆ. ಈ ದ್ವಾದಶ ನಾಮಗಳಾದ ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ ತ್ರಿವಿಕ್ರಮ, ವಾಮನ, ಶ್ರೀಧರ, ಹೃಷಿಕೇಶ, ಪದ್ಮನಾಭ, ದಾಮೋದರನ ನಾಮಗಳು ಶ್ರೀವೈಷ್ಣವರಿಗೆ ಪರಮ ಪೂಜ್ಯವಾದವುಗಳಾಗಿವೆ. ನಿತ್ಯಾನುಸಂಧಾನದಲ್ಲಿ ತಪ್ಪದೆ ಉಚ್ಚರಿಸುವ ಈ ನಾಮಗಳಲ್ಲೇ ಭಗವಂತನನ್ನು ಸ್ತುತಿಸುವುದರಲ್ಲಿ ಇವರಿಗೆ ವಿಶೇಷವಾದ ಆಸಕ್ತಿ.

ವಿಭವದಲ್ಲಿ ಅವತಾರಗಳ ಕಲ್ಪನೆಯಿದ್ದು ಭಗವಂತನ ದಶಾವತಾರವೂ ಸೇರಿ ಒಟ್ಟು ೩೯ ಅವತಾರಗಳನ್ನು ವಿಶಿಷ್ಟಾದ್ವೈತ ಪ್ರತಿಪಾದಿಸುತ್ತದೆ. ಈ ಅವತಾರಗಳನ್ನೆಲ್ಲ ಉಪನಿಷತ್ತು-ಪುರಾಣಗಳಿಂದ ತೆಗೆದುಕೊಳ್ಳಲಾಗಿದೆ. ಉಳಿದ ಅವತಾರಗಳಿಗಿಂತ ದಶಾವತಾರದ ವರ್ಣನೆ

ಹರಿದಾಸರಿಗೆ ಹೆಚ್ಚು ಪ್ರಿಯ. ಅದರಲ್ಲೂ ರಾಮ ಕೃಷ್ಣರ ವರ್ಣನೆ ಅದ್ವಿತೀಯವಾಗಿದೆ. ಶ್ರೀವೈಷ್ಣವ ದಶಾವತಾರ ಕಲ್ಪನೆಯಲ್ಲಿ ಬುದ್ಧಾವತಾರವಿಲ್ಲ. ಅದರ ಬದಲಿಗೆ ಬಲರಾಮನನ್ನು ತಪ್ಪಿದರೆ ತ್ರಿಪುರಸಂಹಾರಕನನ್ನು ಚಿತ್ರಿಸಲಾಗಿದೆ. ಉಳಿದಂತೆ ವಾಮನ ನರಸಿಂಹರನ್ನು ಅಧಿಕವಾಗಿಯೂ ಉಳಿದವುಗಳನ್ನು ಕ್ವಚಿತ್ತಾಗಿಯೂ ಸುತ್ತಿಸಿದ್ದಾರೆ. ಇತರೆ ಅವತಾರಗಳಲ್ಲಿ ನಾರದ, ನರನಾರಾಯಣ, ಮೋಹಿನಿ, ಅವತಾರಗಳನ್ನು ಹೆಚ್ಚಾಗಿ ಉಲ್ಲೇಖಿಸುತ್ತಾರೆ. 'ಅಂತರ್ಯಾಮಿ' ಧ್ಯಾನಮೂರ್ತಿಯಾಗಿದ್ದು 'ಅರ್ಚಾ'ದಲ್ಲಿ ಆರಾಧನಾಮೂರ್ತಿಗಳಿವೆ. ವಿವಿಧ ಕ್ಷೇತ್ರ ದೇವತೆಗಳ ಸ್ತುತಿಯೂ ಇಲ್ಲಿ ಕಂಡುಬರುತ್ತದೆ. ಭಕ್ತ–ಭಾಗವತರನ್ನು ಕುರಿತಂತೆ ಅನೇಕ ಪರಾಣ ಮತ್ತು ಮತೀಯ ಸಂದರ್ಭ–ಸನ್ನಿವೇಶಗಳನ್ನು ಚಿತ್ರಿಸಿದ್ದಾರೆ. ಕೃಷ್ಣಾವತಾರ ಮತ್ತು ರಾಮಾವತಾರಕ್ಕೆ ಸಂಬಂಧಿಸಿದ ಭಾಗವತಭಕ್ತರ ಪ್ರಸಂಗಗಳೇ ಅಧಿಕವಾಗಿ ಕಾಣಿಸಿಕೊಂಡಿವೆ. ಶಿಷ್ಟ ಪರಿಪಾಲನೆಯ ಭಕ್ತೋದ್ಧಾರದ ಸಂದರ್ಭ ಎಷ್ಟು ಪ್ರಿಯವೋ ಶಿಷ್ಟನಿಗ್ರಹದ ದುಷ್ಟರ ಸಂಹಾರದ ಸಂದರ್ಭಗಳೂ ನಮ್ಮ ದಾಸರಿಗೆ ಅಷ್ಟೇ ಪ್ರಿಯವಾಗಿರುವುದು ವಿಶೇಷ. ವಾಲಿ, ರಾವಣ, ಕಂಸ, ಕೌರವ, ಪೂತನಿ, ಶಿಶುಪಾಲ, ತ್ರಿಪುರ, ಕೇಶಿ, ಮಧುಕೈಟಭರು, ಧೇನುಕ ಹಲವು ದುಷ್ಟರ ನಿಗ್ರಹದ ಚಿತ್ರಗಳು ಬರುತ್ತವೆ.

ಭಾಗವತ ಭಕ್ತರಲ್ಲಿ ಅಗ್ರೇಸರರಾಗಿರುವ ವಾಹನ ದೇವತೆಗಳಾದ ಶೇಷ (ನಾಗರಾಜ)ನನ್ನೂ ಪೆರಿಯತಿರುವಡಿ ಕಿರಿಯತಿರುವಡಿ ಎನಿಸಿರುವ ಗರುಡ–ಹನುಮಂತರನ್ನೂ ವಿಶೇಷವಾಗಿ ಸ್ತುತಿಸಿರುವುದು ಕಂಡುಬರುತ್ತದೆ. ಹನುಮಂತನನ್ನು ಕುರಿತು ಸ್ವತಂತ್ರ ಕೃತಿಗಳೇ ಇವೆ. ಪದೇ ಪದೇ ಉಲ್ಲೇಖಗೊಳ್ಳುವ ಧ್ರುವ, ಪ್ರಹ್ಲಾದ, ಗಜೇಂದ್ರ ಮೋಕ್ಷ, ಅಹಲ್ಯೆ, ಬಲಿ, ಈ ಪುರಾಣ ಪ್ರತಿಮೆಗಳ ಜೊತೆಗೆ ಅಂಬರೀಷ, ಅಜಾಮಿಳ, ಅಕ್ರೂರ, ಶಬರಿ, ದ್ರೌಪದಿ, ರುಕ್ಮಿಣಿ, ಭಾಮೆ, ಕೈಕೇಯಿ, ಸುಗ್ರೀವ ಮುಂತಾದವರೂ ಬರುತ್ತಾರೆ.

ಈ ವಿಶಿಷ್ಟಾದ್ವೈತ ದಾಸರೆಲ್ಲ ಈಚಿನವರಾಗಿರುವುದರಿಂದ ಅವರ ಹಿಂದಿನ ಹರಿದಾಸರನ್ನು ಭಾಗವತ ಭಕ್ತರನ್ನಾಗಿ ಸ್ಮರಿಸಿರುವುದು ವಿಶೇಷವಾಗಿ ಕಂಡುಬರುವ ಸಂಗತಿ. ಪುರಂದರ–ಕನಕ–ಲಕ್ಷ್ಮೀಶ ಇವರುಗಳ ಉಲ್ಲೇಖಗಳೂ ವಿರಳವಾಗಿಯಾದರೂ ಕಾಣಿಸಿಕೊಂಡಿದೆ. ಶ್ರೀವೈಷ್ಣವ ಹರಿದಾಸರ ಇನ್ನೊಂದು ವಿಶೇಷ ಅಂಶವೆಂದರೆ ಮತಾಚಾರ್ಯರನ್ನು ಮತೀಯ ಭಕ್ತೋತ್ತಮರಾದ ಆಳ್ವಾರರನ್ನು ಅವರ ಜೀವನ ಪ್ರಸಂಗಗಳನ್ನು ಅಷ್ಟೇ ಸಹಜವಾಗಿ ಪುರಾಣ ಪ್ರತಿಮೆಗಳಂತೆ ಕಂಡರಿಸಿರುವುದು, ಆಳ್ವಾರರಲ್ಲಿ ಪ್ರಧಾನಾಳ್ವಾರರಾದ ನಮ್ಮಾಳ್ವಾರರನ್ನು ಮತ್ತು ಭಕ್ತೆ ಆಂಡಾಳ್‌ರನ್ನು ಆಚಾರ್ಯರಲ್ಲಿ ಪ್ರಧಾನಾಚಾರ್ಯರಾದ ರಾಮಾನುಜರನ್ನು ಎಲ್ಲ ಶ್ರೀವೈಷ್ಣವ ಹರಿದಾಸರೂ ಸ್ಮರಿಸಿದ್ದಾರೆ. ಉಳಿದಂತೆ ತೊಂಡರಡಿಪ್ಪೊಡಿಯಾಳ್ವಾರ್, ತಿರುಪ್ಪಾಣಾಳ್ವಾರ್ ಮತ್ತು ತಿರುಮಂಗೈ ಆಳ್ವಾರರ ಜೀವನ ಸಂಗತಿಗಳು ಕೂತೂಹಲ ಸಂಗತಿಗಳಿಂದ ಕೂಡಿರುವುದರಿಂದ ಅವುಗಳನ್ನು ಉಲ್ಲೇಖಿಸುತ್ತಾರೆ.

ಇತರ ಆಳ್ವಾರರನ್ನೂ ಆಚಾರ್ಯತ್ರಯರಲ್ಲಿ ಉಳಿದಿಬ್ಬರು ಆಚಾರ್ಯರನ್ನೂ (ನಾಥ ಮತ್ತು ಯಾಮುನ) ಕ್ವಚಿತ್ತಾಗಿ ಸ್ತುತಿಸಿರುವುದು ಕಂಡುಬರುತ್ತದೆ.

ಈ ಎಲ್ಲಾ ಪುರಾಣ ಮತ್ತು ಮತೀಯ ಸಂಗತಿಗಳು ಹಲವು ಕೀರ್ತನೆಗಳಲ್ಲಿ ಬೇರೆ ಬೇರೆ ವಿವರಣೆಗಳಲ್ಲಿ ಪದೇಪದೇ ಕಾಣಿಸಿಕೊಳ್ಳುವುದರಿಂದ ಪ್ರತಿಯೊಂದು ಕೀರ್ತನೆಯ ಟಿಪ್ಪಣಿಯೂ ಮತ್ತೆ ಮತ್ತೆ ಪುನರಾವರ್ತನೆಯಾಗುವುದನ್ನು ತಪ್ಪಿಸಲು ಆಯಾ ಭಕ್ತರ ಹೆಸರನ್ನಷ್ಟೇ ಅಲ್ಲಿ ಸೂಚಿಸಿ ಇಲ್ಲ ಪ್ರತ್ಯೇಕವಾಗಿ ಅಕಾರಾದಿಯಾಗಿ ಅವರ ಪ್ರಸಂಗದ ವಿಶೇಷತೆಯನ್ನೂ ದಾಸರ ಕೃತಿಗಳಲ್ಲಿ ಚಿತ್ರಿತವಾಗಿರುವ ಸಂಗತಿಯ ವಿವರಗಳನ್ನೂ ಸಂಕ್ಷಿಪ್ತವಾಗಿ ಪಟ್ಟಿಮಾಡಲಾಗಿದೆ. ಈಗಾಗಲೆ ಇತರ ದಾಸರುಗಳ ಮೂಲಕ ಉಲ್ಲೇಖಗೊಂಡಿರುವ ಪ್ರಸಿದ್ಧ ಪುರಾಣ ಪ್ರಸಂಗಗಳನ್ನು ಬಿಟ್ಟು ನೂತನ ಮತ್ತು ವಿಶೇಷ ಸಂಗತಿಗಳನ್ನುಳ್ಳ ಪ್ರಸಂಗಗಳನ್ನು ಮಾತ್ರ ಇಲ್ಲಿ ನೀಡಿದೆ.

ಅಂಬರೀಷ :

ಏಕಾದಶೀ ವ್ರತನಿಷ್ಠ ಭಾಗವತಭಕ್ತ. ಒಂದು ಏಕಾದಶೀ ವ್ರತದಲ್ಲಿ ಪಾರಣೆ ಊಟಕ್ಕಾಗಿ (ಪಾರಣೆ ಊಟವೆಂದರೆ ಉಪವಾಸದ ಮಾರನೆ ದಿನದ ಹಬ್ಬದ ಅಡಿಗೆಯ ಊಟ) ದೂರ್ವಾಸರನ್ನು ಆಮಂತ್ರಿಸುತ್ತಾನೆ. ಅವರು ಬರುವುದು ತಡವಾದಾಗ ಬರುವುದಿಲ್ಲವೆಂದು ಭಾವಿಸಿ ಊಟಕ್ಕೆ ಕುಳಿತು ತೀರ್ಥಸೇವನೆ ಮಾಡುತ್ತಾನೆ. (ತೀರ್ಥಸೇವನೆ ಎಂದರೆ ಆಪೋಷನ ಹಾಕುವುದು, ಆಪೋಷನ ಹಾಕಿದರೆ ಊಟಮಾಡುವುದು ಎಂದೇ ಅರ್ಥ (ಭಾಗವತರಲ್ಲಿ ಊಟಮಾಡುವುದೂ ಒಂದು ಶಿಸ್ತು. ಎಲ್ಲ ಪದಾರ್ಥಗಳನ್ನೂ ಬಡಿಸುವವರೆಗೆ ಏನನ್ನೂ ಮುಟ್ಟುವಂತಿಲ್ಲ ಅಂದರೆ ತಿನ್ನುವಂತಿಲ್ಲ. ಬಡಿಸಿಯಾದ ಮೇಲೆ ತೊವ್ವೆ-ತುಪ್ಪ ಹಾಕಿದ ಮೇಲೆ ನೀರನ್ನು ಅಂಗೈಯಲ್ಲಿ ಹಾಕಿಕೊಂಡು ಎಲೆಯ ಸುತ್ತಲೂ ಬಿಟ್ಟುಕೊಂಡು ಅನಂತರ ದೇವರ ತೀರ್ಥಸೇವನೆ ಮಾಡಿ ಆಮೇಲೆ ಊಟಮಾಡಬೇಕು. ಇಡೀ ಪಂಕ್ತಿಯಲ್ಲಿ ಈ ಶಿಸ್ತು ಇರುತ್ತದೆ). ಅನಂತರ ಬಂದ ದೂರ್ವಾಸಮುನಿ ಕೋಪಗೊಂಡು ಅವನ ನಾಶಕ್ಕೆ ಕೃತ್ಯೆಯೊಂದನ್ನು ನಿರ್ಮಿಸಿಬಿಡುತ್ತಾನೆ. ವ್ರತ ನಿಷ್ಠನಾದ ಅಂಬರೀಷ ತನ್ನ ರಕ್ಷಣೆಗೆ ಶ್ರೀಕೃಷ್ಣನ ಮೊರೆಹೋಗುತ್ತಾನೆ. ಭಕ್ತರ ಬಂಧು ಕೃಷ್ಣ ಚಕ್ರಾಯುಧದಿಂದ ಕೃತ್ಯೆಯನ್ನು ಸಂಹರಿಸಿ ಅಂಬರೀಷನನ್ನು ರಕ್ಷಿಸುತ್ತಾನೆ. ವ್ರತನಿಷ್ಠೆ, ಆಚಾರಪಾಲನೆಯ ಸಂದರ್ಭಕ್ಕೆ ಈ ಅಂಬರೀಷನ ಉಲ್ಲೇಖ ಪದೇ ಪದೇ ಬರುತ್ತದೆ.

ಈ ಅಂಬರೀಷನೊಂದಿಗೆ ಇನ್ನೊಬ್ಬ ಅಂಬರೀಷನೂ ಇದ್ದ ಉಲ್ಲೇಖವೂ ಇಲ್ಲಿ ಬಂದಿದೆ. ನಾರದ ಮತ್ತು ಪರ್ವತೇಶ್ವರರ ಗರ್ವಭಂಗಕ್ಕಾಗಿ ತಾನೇ ವಿವಾಹವಾಗುವ 'ಶ್ರೀಮತಿ' ಯ ತಂದೆಯಾಗಿ ಈ ಅಂಬರೀಷನ ಉಲ್ಲೇಖವಿದೆ.

ಇಕ್ಷ್ವಾಕು ವಂಶದ ರಾಜನಾದ ಈತನ ಮಗಳು ಶ್ರೀಮತಿಯ ವಿವಾಹಕ್ಕೆ ನಾರದ ಪರ್ವತರು ಪೈಪೋಟಿಯಾಗಿ ಮಧ್ಯಸ್ತಿಕೆಗಾಗಿ ಶ್ರೀವಿಷ್ಣುವಿನ ಮೊರೆ ಹೋಗುತ್ತಾರೆ. ಸ್ವಯಂವರ ಕಾಲದಲ್ಲಿ ಇಬ್ಬರೂ ಪರಸ್ಪರ ವಿಕಾರಮುಖಕ್ಕೆ ವರ ಬೇಡುತ್ತಾರೆ. ವಿಷ್ಣುವೇ ಮಧ್ಯೆ ಕಾಣಿಸಿಕೊಂಡು ವಿವಾಹವಾಗಿ ಕಪಿ–ಕೋಡಗ ರೂಪದಿಂದ ನಾರದ ಪರ್ವತರ ಮುಖಭಂಗ, ಗರ್ವಭಂಗವಾಗುತ್ತದೆ.

ಅಕ್ರೂರ :

ಕಂಸನ ಪಾಳಯದಲ್ಲಿದ್ದ ಕ್ಷತ್ರಿಯರಾಜ ಕಂಸನ ಅಪ್ಪಣೆಯಂತೆ ಕೃಷ್ಣ ಬಲರಾಮರನ್ನು ಮಧುರೆಗೆ ಕರೆದುಕೊಂಡು ಹೋಗುವವನಾಗಿ ಕಾಣಿಸಿಕೊಳ್ಳುತ್ತಾನೆ. ಕೃಷ್ಣನ ಬಗ್ಗೆ ಅಭಿಮಾನ–ಭಕ್ತಿಯುಳ್ಳವನಾಗಿದ್ದುದರಿಂದ ಮಾರ್ಗ ಮಧ್ಯದಲ್ಲಿ ಕೃಷ್ಣ ಇವನಿಗೊಲಿದು ಯಮುನಾ ತೀರದಲ್ಲಿ ತನ್ನ ದಿವ್ಯರೂಪದರ್ಶನ ಮಾಡಿಸುತ್ತಾನೆ. ಆದ್ದರಿಂದಲೇ ಕೃಷ್ಣನನ್ನು 'ಅಕ್ರೂರ ವರದ ' ಎಂದು ಕರೆದಿದೆ. ಮುಂದೆ ಶ್ರೀ ಕೃಷ್ಣ ಇವನಿಗೆ ಶ್ಯಮಂತಕಮಣಿಯನ್ನು ಕೊಡುತ್ತಾನೆ. ಇದರಿಂದ ಅಕ್ರೂರ ಕೀರ್ತಿವಂತನಾಗುತ್ತಾನೆ

ಅಜಾಮಿಳ :

ಪರಮ ಭಾಗವತ ಎಂದು ಪ್ರಸಿದ್ಧನಾಗಿರುವ ಇವನು ಕನೂಜದ ಒಬ್ಬ ಭಾಗವತ ಬ್ರಾಹ್ಮಣ. ಅಂತ್ಯಕಾಲದಲ್ಲಿ ನಾರಾಯಣ ಎಂದು ಕೂಗಿದ್ದರಿಂದ ಮೋಕ್ಷ ಪಡೆದನೆಂದೂ ಶ್ರೀಹರಿಯ ನಾಮಸ್ಮರಣೆಯೊಂದರಿಂದಲೇ ದೇವರನ್ನು ಒಲಿಸಿಕೊಳ್ಳಬಹುದಾದಷ್ಟು ಸುಲಭವೆಂದೂ ಪ್ರತಿಪಾದಿಸಲು ಈ ಕಥೆಯನ್ನು ಉಲ್ಲೇಖಿಸಲಾಗುತ್ತದೆ.

ಇವನು ಜೀವನವೆಲ್ಲ ಹೊಲತಿಯೊಂದಿಗೆ ಸಂಸಾರ ಮಾಡಿದರೂ ಮಕ್ಕಳಿಗೆಲ್ಲ ಹರಿನಾಮದ ಹೆಸರುಗಳನ್ನೇ ಇಟ್ಟು ಸಂಸಾರ ಸುಖದಲ್ಲಿ ತಲ್ಲೀನನಾಗಿರುತ್ತಾನೆ. ಸಾಯುವ ಕಾಲದಲ್ಲಿ ಯಮದೂತರು ಬಂದೆಳೆವಾಗ, ತನ್ನ ಕಿರಿಯ ಮಗನನ್ನು ಹೆಸರಿಡಿದು 'ನಾರಾಯಣಾ' ಎಂದು ಕರೆದಾಗ ಪರಮಾತ್ಮನೇ ಪ್ರತ್ಯಕ್ಷನಾಗಿ ವೈಕುಂಠಕ್ಕೆ ಕೊಂಡೊಯ್ಯುತ್ತಾನೆಂದು ಭಾಗವತದಲ್ಲಿ ಇವನ ಕಥೆಯಿದೆ.

ಅದಿತಿ :

ಇಂದ್ರ ದೇವತೆಗಳು ದ್ವಾದಶಾದಿತ್ಯರುಗಳ ತಾಯಿ ಕಶ್ಯಪಮುನಿ ಪತ್ನಿ ದಕ್ಷಪ್ರಜಾಪತಿ ರಾಜನ ಮಗಳು. ಕೃಷ್ಣನು ನರಕಾಸುರನನ್ನು ಕೊಂದು ಅವನಲ್ಲಿದ್ದ ಅದಿತಿಯ ಕುಂಡಲವನ್ನು

ಕೊಡಲು ಅವಳ ಬಳಿಗೆ ಭಾಮೆಯೊಂದಿಗೆ ಹೋಗಿದ್ದಾಗ ಭಾಮೆಗೆ ಅವಳು ಶ್ರೀ ಕೃಷ್ಣ ಭೂಮಿಯ ಮೇಲಿರುವವರೆಗೂ ಸುಗಂಧವತಿಯಾಗಿ ಯುವತಿಯಾಗಿ ಇರು ಎಂದು ವರ ನೀಡಿದ್ದಳು.

ಅಷ್ಟಾಕ್ಷರಿ :

ಶ್ರೀ ವೈಷ್ಣವರು ಅನುಸಂಧಾನ ಮಾಡುವ ರಹಸ್ಯತ್ರಯದಲ್ಲಿ ಮೊದಲನೆಯದು. ಅದೇ 'ಓಂ ನಮೋ ನಾರಾಯಣಾಯ' ಈ ನಾಮೋಚ್ಚಾರಣೆಯೊಂದರಿಂದಲೇ ಭಗವಂತನನ್ನು ಕಾಣಲು, ಮೋಕ್ಷ ಪ್ರಾಪ್ತಿಯಾಗಲು ಸಾಧ್ಯ; ಇದಕ್ಕಿಂತ ಸುಲಭೋಪಾಯವಿಲ್ಲ ಎಂಬ ತತ್ವ ಇದರಲ್ಲಿದೆ. ಸಾಧಕನಿಗೆ ಪ್ರಪತ್ತಿಧರ್ಮದ ಅನುಷ್ಠಾನದಲ್ಲಿ ಇದೊಂದು ಮುಖ್ಯ ಸಾಧಕವಾಗಿ ಕಾರ್ಯ ನಿರ್ವಹಿಸುತ್ತದೆ. ಇದರ ಬಗ್ಗೆ ರಾಮಾನುಜಾಚಾರ್ಯರಿಂದ ಮೊದಲುಗೊಂಡು ಅನೇಕ ಆಚಾರ್ಯರು, ಮತನಿಷ್ಠರು ದೀರ್ಘವಾದ ವ್ಯಾಖ್ಯಾನಗಳನ್ನೇ ಮಾಡಿದ್ದಾರೆ. ರಾಮಾನುಜರ 'ರಹಸ್ಯತ್ರಯಸಾರ' ಕೃತಿಯ ಮುಖ್ಯವಸ್ತುವೇ ಇದು ಮತ್ತು ರಹಸ್ಯತ್ರಯದ ಇನ್ನೆರಡು ಧ್ಯಾನಶ್ಲೋಕಗಳಾದ ದ್ವೈವಮಂತ್ರ ಹಾಗೂ ಚರಮಶ್ಲೋಕಗಳ ವ್ಯಾಖ್ಯಾನವಾಗಿದೆ. ಈ ಅಷ್ಟಾಕ್ಷರಿಯನ್ನು 'ಮೂಲಮಂತ್ರ' 'ಮಹಾಮಂತ್ರ' ಮಂತ್ರರಾಜ' ಎಂದೆಲ್ಲ ಕರೆಯಲಾಗಿದೆ.

ಆಂಡಾಳ್ :

ಶ್ರೀವೈಷ್ಣವ ಆಳ್ವಾರರಲ್ಲಿ ಬರುವ ಏಕೈಕ ಭಕ್ತೆ ಈ ಆಂಡಾಳ್. ಪೆರಿಯಾಳ್ವಾರರ ಮಗಳು. ಶ್ರೀವಿಲ್ಲಿಪೂತ್ತೂರಿನ ವಟಪತ್ರಶಾಯಿಯ ಆರಾಧಕರಾಗಿದ್ದ ಪೆರಿಯಾಳ್ವಾರರು ಹೂದೋಟ ನಿರ್ಮಿಸಿ ಪ್ರತಿನಿತ್ಯ ದೇವರಿಗೆ ಹೂಮಾಲೆಯಲ್ಲಿ ಅಲಂಕರಿಸುವುದರಲ್ಲಿ ತಲ್ಲೀನರಾಗಿರುತ್ತಿದ್ದ ಪರಮ ಭಕ್ತರು. ಇವರಿಗೆ ಹೂದೋಟದಲ್ಲಿ ಸಿಕ್ಕಿದ ಮಗಳೇ ಈ ಆಂಡಾಳ್. ಇವಳೂ ತಂದೆಯಂತೆ ಕೃಷ್ಣನಲ್ಲಿ ಮನಸ್ಸಿಟ್ಟು ಸದಾ ಕೃಷ್ಣ ಧ್ಯಾನದಲ್ಲೇ ನಿರತಳಾಗಿರುತ್ತಿದ್ದಳು. ತಂದೆ ಕಟ್ಟಿಡುತ್ತಿದ್ದ ದೇವರ ಹಾರವನ್ನು ತಂದೆಗೆ ಕಾಣದಂತೆ ತಾನೊಮ್ಮೆ ಧರಿಸಿ ಚೆನ್ನಾಗಿ ಕಾಣುತ್ತದೆಯೇ ಎಂದು ನೋಡಿಕೊಂಡು ತೆಗೆದಿಡುತ್ತಿದ್ದಳು. ಒಮ್ಮೆ ಪೆರಿಯಾಳ್ವಾರರು ಇದನ್ನು ನೋಡಿ ಪರಮಾಪಚಾರವಾಯಿತೆಂದು ಮನನೊಂದು ಮತ್ತೆ ಹೂ ತಂದು ಕಟ್ಟಿ ದೇವರಿಗೆ ಕೊಂಡೊಯ್ದರು. ತಡವಾಗಿದ್ದಕ್ಕೆ ಕ್ಷಮೆಯಾಚಿಸಿದರು. ದೇವರು ಈ ಹಾರ ಬೇಡ ನಿಮ್ಮ ಮಗಳು ಧರಿಸಿದ್ದ ಹಾರವನ್ನು ತನ್ನಿ. ಅದೇ ನನಗೆ ಪ್ರಿಯವೆಂದು ಅಪ್ಪಣೆ ಕೊಡಿಸಿದುದನ್ನು ಕೇಳಿ ಮಗಳ ಭಕ್ತಿಗೆ ಮೆಚ್ಚಿ ತನಗೊಲಿಯದ ದೈವ ಮಗಳಿಗೆ ಒಲಿದುದನ್ನು ಕಂಡು ಆನಂದಿತರಾಗಿ ಪ್ರತಿನಿತ್ಯ ತಾವೇ ಮಗಳಿಗೆ ತೊಡಿಸಿ ನಂತರ ದೇವರಿಗರ್ಪಿಸುತ್ತಿದ್ದರು. ಈ ಕಾರಣದಿಂದ ಆಂಡಾಳಳನ್ನು 'ಸೂಡಿಕೊಡುತ್ತ ನಾಚ್ಚಿಯಾರ್' ಎಂದು ಕರೆಯಲಾಗಿದೆ. ಎಂದರೆ ಮುಡಿದು ಕೊಡುವ ಭಕ್ತೆ ಎಂದರ್ಥ.

ಆಂಡಾಳ್ ಪರಮಾತ್ಮನನ್ನು ಒಲಿಸಿಕೊಳ್ಳುವುದಕ್ಕಾಗಿ ತಿರುಪ್ಪಾವೈ ಎಂಬ ವ್ರತವನ್ನು ಧನುರ್ಮಾಸದಕಾಲದಲ್ಲಿ ಮಾಡಿ ಪ್ರತಿದಿನವೂ ತಾನೇ ರಚಿಸಿದ ಒಂದೊಂದು ಪದ್ಯಗಳಿಂದ ತನ್ನ ಸಖಿಯರೊಡಗೂಡಿ ಬೆಳಗಿನಜಾವ ಚಳಿಯಲ್ಲಿ ತಣ್ಣೀರಲ್ಲಿ ಮಿಂದು ದೇವರನ್ನು ಸ್ತುತಿಸುವ ಈ ವ್ರತ ಶ್ರೀವೈಷ್ಣವರಲ್ಲಿ ಇಂದಿಗೂ ಪ್ರಚಲಿತವಾಗಿದೆ. ಈ ವ್ರತವನ್ನು ಮಾಡಿದ್ದರಿಂದಲೇ ಆಂಡಾಳ್ ರಂಗನಾಥನನ್ನು ಮದುವೆಯಾದಳು ಎಂಬ ಘಟನೆಯೂ ಇವಳ ಕಥೆಯೊಂದಿಗೆ ಸೇರಿದೆ. ರಂಗನಾಥನು ಮದುಮಗನಾಗಿ ದೇವತೆಗಳೊಂದಿಗೆ ಬಂದು ಪೆರಿಯಾಳ್ವಾರರಿಂದ ಧಾರಾಪೂರ್ವಕವಾಗಿ ಆಂಡಾಳಳನ್ನು ಕನ್ಯಾದಾನ ಪಡೆದು ಶಾಸ್ತ್ರೋಕ್ತವಾಗಿ ಮದುವೆಯಾದ ಚಿತ್ರವಿದೆ. ಇದು ಆಂಡಾಳ್ ಬರೆದಿರುವ 'ನಾಚ್ಚಿಯಾರ್ ತಿರುಮೊಳಿ' ಗ್ರಂಥದಲ್ಲಿದೆ. ತಿರುಪ್ಪಾವೈ ಹೆಸರಿನಲ್ಲೇ ಆ ವ್ರತದ ಪದ್ಯಗಳು ಪ್ರಸಿದ್ಧಿಯಾಗಿವೆ. ಇದರ ಬಗ್ಗೆ ಅನೇಕ ಅನುವಾದ ವ್ಯಾಖ್ಯಾನ–ಉಪನ್ಯಾಸಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಇದೊಂದು ಸರ್ವಶ್ರೇಷ್ಠ ಕೃತಿ ಅತ್ಯುತ್ಕೃಷ್ಟ ಸಾಹಿತ್ಯ ಕೃತಿ ಎಂದೆಲ್ಲ ವಿದ್ವಾಂಸರು ಮೆಚ್ಚಿದ್ದಾರೆ. ಸುಂದರವಾದ ಪ್ರಕೃತಿವರ್ಣನೆಗೆ, ಸತಿಪತಿಭಾವಕ್ಕೆ, ಆತ್ಮೀಯತೆಯ ಸಹಜ ಸಂಭಾಷಣ ಶೈಲಿಗೆ ಈ ಕೃತಿ ಹೆಸರಾಗಿದೆ.

ಈ ಧನುರ್ಮಾಸದ ವ್ರತಾಚರಣೆಯ ಸಂಕೇತವಾಗಿಯೇ ಇಂದಿಗೂ ದಕ್ಷಿಣಭಾರತದಲ್ಲಿ ಒಂದು ಮುಖ್ಯ ಸಾಮಾಜಿಕ ಚಟುವಟಿಕೆಯಾಗಿ, ಜಾನಪದ ಸಂಸ್ಕೃತಿಯಾಗಿ ಆಚರಣೆ ಯಲ್ಲಿರುವ ಬೆಳಗಿನ ಜಾವದ ಭಜನೆ ಕಂಡುಬರುತ್ತದೆ. ಧನುರ್ಮಾಸದಲ್ಲೇ ಅಂದರೆ ಡಿಸೆಂಬರ್ ೧೫ರಿಂದ ಜನವರಿ ೧೪ರವರೆಗೆ ಸಂಕ್ರಾಂತಿ ಹಬ್ಬದವರೆಗೆ ಎಲ್ಲ ವಿಷ್ಣುದೇವಾಲಯಗಳಲ್ಲೂ ಬೆಳಗಿನ ಜಾವದ ಪೂಜೆ, ಊರಿನ ಬೀದಿಗಳಲ್ಲಿ ಭಜನೆ ಇರುತ್ತದೆ ಶ್ರೀ ವೈಷ್ಣವರಿಗೆ ಈ ಹಬ್ಬ 'ಪೊಂಗಲ್' ಎಂದೇ ಪ್ರಸಿದ್ಧವಾಗಿದೆ.

ಆಳ್ವಾರರು :

ಶ್ರೀ ವೈಷ್ಣವ ಭಕ್ತರಾದ ಆಳ್ವಾರ್ ಪರಂಪರೆಯಲ್ಲಿ ಆಂಡಾಳ್ ಎಂಬ ಭಕ್ತೆಯೂ ಸೇರಿ ೧೨ಜನ ಆಳ್ವಾರರು ಬರುತ್ತಾರೆ. ಅವರೆಂದರೆ –

ಪೊಯ್‌ಗೈಯಾಳ್ವಾರ್, ಪೂದತ್ತಾಳ್ವಾರ್, ಪೇಯಾಳ್ವಾರ್ ತಿರುಮಳಿಶೈಯಾಳ್ವಾರ್, ಕುಲಶೇಖರಾಳ್ವಾರ್, ಪೆರಿಯಾಳ್ವಾರ್, ಆಂಡಾಳ್, ತೊಂಡರಡಿಪ್ಪೊಡಿಯಾಳ್ವಾರ್, ತಿರುಪ್ಪಾಣಾಳ್ವಾರ್, ತಿರುಮಂಗೈಯಾಳ್ವಾರ್, ನಮ್ಮಾಳ್ವಾರ್ ಮತ್ತು ಮಧುರಕವಿಯಾಳ್ವಾರ್. ಈ ಕ್ರಮದಲ್ಲಿ ಭಿನ್ನತೆಗಳಿವೆ. ಈ ಆಳ್ವಾರರಲ್ಲಿ ಯಾರಾದ ಮೇಲೆ ಯಾರು ಎಂಬ ಬಗ್ಗೆ ಹಲವು ಅಭಿಪ್ರಾಯಗಳಿವೆ. ಬಹುಜನಶ್ರುತವಾದ ಗುರುಪರಂಪರಾ ಕ್ರಮವನ್ನು ಇಲ್ಲಿ ಅನುಸರಿಸಿದೆ. ಈ ಆಳ್ವಾರರೆಲ್ಲರೂ ತಮಿಳುನಾಡಿನ ವಿವಿಧ ಸ್ಥಳಗಳಲ್ಲಿ ಕಾಣಿಸಿಕೊಂಡಿರುವ

ವಿಷ್ಣುಭಕ್ತರು. ಇವರಲ್ಲಿ ಎಲ್ಲ ಜಾತಿಯವರೂ ಇದ್ದಾರೆ. ಬ್ರಾಹ್ಮಣ, ಕ್ಷತ್ರಿಯ, ಅಂತ್ಯಜ, ಕಳ್ಳ ಇತ್ಯಾದಿ. ಇವರು ಪ್ರಪತ್ತಿ ಧರ್ಮದ ಕಾರಣದಿಂದ ಭಗವದ್ಭಕ್ತರಾಗಿ ಶ್ರೀವೈಷ್ಣವ ಸಾಧುಸಂತರ, ಜ್ಞಾನಿಗಳ, ಭಕ್ತರ ಪರಂಪರೆಯಲ್ಲಿ ಅನನ್ಯ ಸ್ಥಾನವನ್ನು ಪಡೆದಿದ್ದಾರೆ.

ಚರಿತ್ರೆಯ ದೃಷ್ಟಿಯಿಂದ ಇವರೆಲ್ಲ ಪಲ್ಲವರ ಕಾಲಕ್ಕೆ ಅಂದರೆ ಕ್ರಿ.ಶ ೭ನೇ ಶತಮಾನದಿಂದ ೯ನೇ ಶತಮಾನಕ್ಕೆ ಸೇರಿದವರೆನ್ನಬಹುದು. ಇವರೊಬ್ಬೊಬ್ಬರ ಬಗೆಗೂ ರಂಜನೀಯವಾದ ಕಥೆಗಳಿವೆ. ಅವುಗಳನ್ನೂ ಇವರು ರಚಿಸಿರುವ ಕೃತಿಗಳಾದ 'ನಾಲಾಯಿರ ದಿವ್ಯಪ್ರಬಂಧಗಳನ್ನೂ' ಶ್ರೀವೈಷ್ಣವರು ಭಯಭಕ್ತಿಯಿಂದ ದೈವಸ್ತುತಿಗೆ, ಭಗವನ್ನಾಮಸ್ಮರಣೆಗೆ ಅನುಸಂಧಾನ ಮಾಡುತ್ತಾರೆ. ಅವರ ಆಚರಣೆ–ಅರ್ಚನೆ–ಆರಾಧನೆಗಳೆಲ್ಲ ಈ ಆಳ್ವಾರರ ಸಂದೇಶಕ್ಕೆ ಅನುಗುಣವಾಗಿವೆ.

ಸ್ತ್ರೀ–ಪುರುಷ, ಜಾತಿಭೇದ, ವೃತ್ತಿ–ಸ್ಥಾನಗಳಾಚೆನಿಂತು ಪರಿಶುದ್ಧ ಮಾನವರಾಗಿ ಭಕ್ತಿಯೇ ಮುಕ್ತಿಗೆದಾರಿ, ಭಕ್ತಿಗೆ ಎಲ್ಲರೂ ಅಧಿಕಾರಿಗಳು, ಶರಣಾಗತಿ ಮುಕ್ತಿಯಸುಲಭೋಪಾಯ ಎಂಬ ಶ್ರೀವೈಷ್ಣವ ತತ್ವಕ್ಕೆ ಆಳ್ವಾರರು ಮೂಲ ಸಾಧಕರಾಗಿದ್ದಾರೆ.

ಕಾರ್ತವೀರ್ಯಾರ್ಜುನ :

ಪರಶುರಾಮನಿಂದ ಹತನಾದ ಸಹಸ್ರಬಾಹುಗಳ ರಾಜ. ದತ್ತಾತ್ರೇಯನಿಂದ ಯುದ್ಧಕಾಲದಲ್ಲಿ ಸಹಸ್ರಬಾಹುಗಳಿರಲೆಂದು ವರ ಪಡೆದಿದ್ದು, ಅಗ್ನಿಯ ಹಸಿವಿಗಾಗಿ ಇಡೀ ಭೂಮಿಯನ್ನೇ ಭಿಕ್ಷೆ ನೀಡಿದ್ದನು. ಅಗ್ನಿ ವಸಿಷ್ಠನ ಆಶ್ರಮ ದಹಿಸಿದಾಗ ಪರಶುರಾಮನಿಂದ ಸಾವಿನ ಶಾಪಕ್ಕೆ ಒಳಗಾಗಿ ಜಮದಗ್ನಿಯ ಆಶ್ರಮದ ಕಾಮಧೇನುವಿನ ಅಪಹರಣದಿಂದ ಹತನಾದನು ಎಂಬ ಸಾಮಾನ್ಯ ಸಂಗತಿಯೊಂದಿಗೆ ಇಲ್ಲಿ ವಿಷ್ಣು ಪರವಾದ ಇನ್ನೊಂದು ವಿಶೇಷ ಸಂಗತಿಯನ್ನು ದಾಖಲಿಸಲಾಗಿದೆ.

ವಿಷ್ಣುವಿನ ಚಕ್ರಾಯುಧಕ್ಕೆ ಗರ್ವವುಂಟಾಗಲು ಪರೀಕ್ಷಾರ್ಥವಾಗಿ ವಿಷ್ಣು ತನ್ನ ಚಕ್ರಕ್ಕೆ ಕಾರ್ತವೀರ್ಯನಾಗಿ ಹುಟ್ಟಲು ಹೇಳಿ ತಾನು ಪರಶುರಾಮನಾಗಿ ಹುಟ್ಟಿ ಅವನ ಸಹಸ್ರಬಾಹುಗಳನ್ನು ಕಡಿದು ಅದರ ಗರ್ವಭಂಗ ಮಾಡುವ ಮೂಲಕ ಹರಿಪಾರಮ್ಯ–ಅವತಾರ ವೈಶಿಷ್ಟ್ಯದ ಸೂಚನೆಯಿದೆ.

ಕುಚೇಲ–ಸುದಾಮ :

ಈ ಎರಡೂ ಹೆಸರುಗಳಿಂದ ಪ್ರಸಿದ್ಧನಾಗಿರುವ ಈ ಭಾಗವತ ಭಕ್ತ ಶ್ರೀಕೃಷ್ಣನ ಸಹಪಾಠಿ, ಬಹಳ ಬಡತನದಲ್ಲಿದ್ದವನು. ಪತ್ನಿಯ ಸಲಹೆಯಂತೆ ಒಮ್ಮೆ ಕೃಷ್ಣನ ದರ್ಶನಕ್ಕಾಗಿ ಅವನಿಗೆ

ಪ್ರಿಯವಾಗಿದ್ದ ಒಂದೇ ಹಿಡಿ ಅವಲಕ್ಕಿಯೊಂದಿಗೆ ಹೋಗಿದ್ದಾಗ ಕೃಷ್ಣ ಅವಲಕ್ಕಿ ತಿಂದು ಅವನನ್ನು ಶ್ರೀಮಂತನನ್ನಾಗಿ ಮಾಡಿದ ಪ್ರಸಂಗದ ಕಥೆ. ಭಾಗವತರಿಗೆ ಅತ್ಯಂತ ಪ್ರಿಯವಾದುದು.

ಕುಬ್ಜೆ :

ಕಂಸನ ಅಂತಃಪುರದ ದಾಸಿ ವಕ್ರರೂಪಿ. ಬಲರಾಮಕೃಷ್ಣರು ಕಂಸನ ಆಮಂತ್ರಣದಂತೆ ಮಧುರೆಗೆ ಬರುವಾಗ ದಾರಿಯಲ್ಲಿ ಗಂಧದ ಬಟ್ಟಲು ಹಿಡಿದು ಇವಳು ಸಂಧಿಸುತ್ತಾಳೆ. ಇವಳು ನೀಡಿದ ಗಂಧದಿಂದ ಸಂಪ್ರೀತನಾದ ಕೃಷ್ಣ ಇವಳ ಪಾದಮೆಟ್ಟಿ ಗದ್ದಮೇಲೆತ್ತಿ ಗೂನು ಹೋಗಲಾಡಿಸಿ ಸುಂದರಿಯನ್ನಾಗಿಸುತ್ತಾನೆ.

ಕೇಶಿ :

ಕಂಸಪರಿವಾರದಲ್ಲಿದ್ದ ರಾಕ್ಷಸ. ಕುದುರೆಯ ರೂಪದಲ್ಲಿ ಗೋಕುಲಕ್ಕೆ ಬಂದು ಜನರನ್ನು ಪೀಡಿಸುತ್ತಿರುವುದನ್ನು ಗಮನಿಸಿ ಶ್ರೀಕೃಷ್ಣನು ಇವನನ್ನು ಸಂಹರಿಸುತ್ತಾನೆ. ಆದ್ದರಿಂದಲೇ ಇವನು 'ಕೇಶವ 'ನಾಗುತ್ತಾನೆ.

ಗಜೇಂದ್ರ ಮೋಕ್ಷ :

ಶ್ರೀವೈಷ್ಣವ ಭಕ್ತರಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಭಾಗವತ ಕಥೆ. ಆನೆಯೊಂದರ ಕಾಲನ್ನು ಮೊಸಳೆ ಹಿಡಿದಾಗ ಆನೆ ಸೊಂಡಿಲಲ್ಲಿ ಕಮಲವನ್ನು ಹಿಡಿದು ಶ್ರೀ ಹರಿಯನ್ನು ಮೊರೆ ಹೋಗಲು ಆಕ್ಷಣವೇ ಗರುಡ ವಾಹನನಾಗಿ ಬಂದು ಮೊಸಳೆಯನ್ನು ಚಕ್ರದಿಂದ ತರಿದು ಆನೆಯನ್ನು ರಕ್ಷಿಸುವ ಕಥೆ. ಭಾಗವತದಲ್ಲಿ ಈ ಆನೆ ಪೂರ್ವಜನ್ಮದಲ್ಲಿ ಪಾಂಡ್ಯ ದೇಶದಲ್ಲಿ ಇಂದ್ರದ್ಯುಮ್ನ ಎಂಬ ವೈಷ್ಣವರಾಜನಾಗಿದ್ದು ಅಗಸ್ತ್ಯನ ಶಾಪದಿಂದ ಆನೆಯಾಗಿದ್ದನೆಂದೂ ಮೊಸಳೆಯದೂ ಇದೇ ಬಗೆಯ ಶಾಪ ಜನ್ಮವೆಂದೂ ಇದೆ.

ಗರುಡ :

ಶ್ರೀವಿಷ್ಣುವಿನ ವಾಹನ. ವಿಷ್ಣುವು ಗರುಡನ ಶಕ್ತಿ ಸಾಮರ್ಥ್ಯಕ್ಕೆ ಮೆಚ್ಚಿ ತನ್ನ ವಾಹನವನ್ನಾಗಿಸಿಕೊಂಡನೆಂಬ ಭಾಗವತ ಕಥೆಯಿದೆ. ಶ್ರೀ ವೈಷ್ಣವ ಭಾಗವತರಲ್ಲಿ ಗರುಡನಿಗೆ ವಿಷ್ಣುವಿನ ವಾಹನ ದೇವತೆಗಳಲ್ಲಿ ಆದ್ಯ ಸ್ಥಾನವಿದೆ. ಗರುಡನನ್ನು 'ಪೆರಿಯ ತಿರುವಡಿ' ಎಂದು ಕರೆಯಲ್ಪಟ್ಟಿದ್ದು ಶ್ರೀವೈಷ್ಣವ ದೇವಾಲಯಗಳಲ್ಲಿ ಉತ್ಸವ ಕಾಲದಲ್ಲಿ ಗರುಡ ವಾಹನವೇ ವಿಶೇಷವಾಗಿ ಬಳಕೆಯಲ್ಲಿರುವುದು.

ತಿರುಪ್ಪಾಣಾಳ್ವಾರ್ :

೧೨ಜನ ಆಳ್ವಾರರ ಗುಂಪಿನಲ್ಲಿ ಅಂತ್ಯಜರಾಗಿ ಕಾಣಿಸಿಕೊಳ್ಳುವ ಈ ಆಳ್ವಾರರು

ಉರೈಯೂರಿನವರು. ಶ್ರೀರಂಗದಲ್ಲಿ ಕಾವೇರಿಯ ದಕ್ಷಿಣ ತೀರದಲ್ಲಿ ನೆಲೆಸಿ ಅಲ್ಲಿಂದಲೇ ದೇವರ ಕಡೆ ಮುಖಮಾಡಿ ಧ್ಯಾನಾಸಕ್ತರಾಗಿ ಕುಳಿತು ಭಗವಂತನನ್ನು ಹಲವು ಕೀರ್ತನೆಗಳ ಮೂಲಕ ಸುಮಧುರವಾಗಿ ಹಾಡುತ್ತಾ ಮೈಮರೆಯುತ್ತಿದ್ದರು. ಇವರನ್ನು ಗುರುಪರಂಪರಾ ಪ್ರಭಾವರಲ್ಲಿ 'ಭಗವದ್ಧ್ಯಾನ ವಿದ್ಯಾ ಸಾರ್ವಭೌಮ' ಎಂದು ಸ್ತುತಿಸಲಾಗಿದೆ.

ದೇವಾಲಯದ ಪ್ರಧಾನ ಅರ್ಚಕರಾಗಿದ್ದ ವಿಪ್ರೋತ್ತಮ ಲೋಕಸಾರಂಗ ರೆಂಬುವವರು ಪ್ರತಿನಿತ್ಯ ಕಾವೇರಿಯಿಂದ ದೇವರಿಗೆ ಮಡಿನೀರು ಕೊಂಡೊಯ್ಯುತ್ತಿದ್ದವರು ಒಂದು ದಿನ ಇವರು ಕುಳಿತ ದಾರಿಯಲ್ಲಿ ಬಂದು ಇವರನ್ನು ಎಬ್ಬಿಸಲು ಒಂದು ಕಲ್ಲನ್ನು ಇವರ ಮೇಲೆ ಎಸೆಯುತ್ತಾರೆ. ಆದಿನ ರಾತ್ರಿ ಭಗವಂತ ಲೋಕಸಾರಂಗರ ಕನಸಿನಲ್ಲಿ ಬಂದು 'ಭಾಗವತಾಪಚಾರ ಮಾಡಿದವರು ತಿರುಪ್ಪಾಣರಲ್ಲ ನೀನು' ನನ್ನ ಭಕ್ತನಿಗೆ ಹೀಗೆ ಅಪಚಾರ ಮಾಡಬಹುದೇ ಕೂಡಲೇ ಹೋಗಿ ಅವರನ್ನು ನಿನ್ನ ಹೆಗಲ ಮೇಲೆ ಹೊತ್ತು ನನ್ನ ಸನ್ನಿಧಿಗೆ ಕರೆತಾ' ಎಂದು ಹೇಳಿದಂತಾಗಿ ಬೆಚ್ಚಿಬಿದ್ದು ತಮ್ಮ ತಪ್ಪಿನ ಅರಿವಾಗಿ ಬೆಳಗಾಗುತ್ತಲೇ ಓಡಿ ಬಂದು ತಿರುಪ್ಪಾಣರು ಬೇಡ ಬೇಡವೆಂದರೂ ಕೇಳದೆ ಅವರನ್ನು ರಂಗನಾಥನ ಸನ್ನಿಧಿಗೆ ಹೊತ್ತು ತರುತ್ತಾರೆ. ಜನರೆಲ್ಲ ನಿಬ್ಬೆರಗಾಗುತ್ತಾರೆ. ಭಗವಂತನ ಅರ್ಚಾಮೂರ್ತಿಯನ್ನು ಕಾಣುವ ಭಾಗ್ಯವೇ ಇಲ್ಲದಿದ್ದ ತಿರುಪ್ಪಾಣರಿಗೆ ಕಣ್ತುಂಬ ನೋಡುವ ಸುಸಮಯದಿಂದ ಧನ್ಯರಾಗಿ ಭಾವಪರವಶರಾಗಿ ಹಾಡಿದ ಹಾಡೇ ಅವರ ಕೃತಿ ' ಅಮಲನಾದಿ ಪಿರಾನ್'. ಭಗವಂತನ ದರ್ಶನ ಅವನ ಭಕ್ತರಿಗೆ ಸುಲಭಾತಿಸುಲಭ ಎಂಬುದಕ್ಕೆ ತಿರುಪ್ಪಾಣರು ಆದರ್ಶ. ಭಕ್ತರಿಗೆ ಜಾತಿ–ಕುಲ–ಸ್ಥಾನಗಳ ಅಡ್ಡಿಯಿಲ್ಲ ಎಂಬ ತತ್ವವೂ ಇವರಲ್ಲಡಗಿದೆ. ಇವರನ್ನು 'ತಿರುಪ್ಪಾಣಿ' ಎಂದೂ ಕರೆಯುತ್ತಾರೆ.

ತಿರುಮಂಗೈ ಆಳ್ವಾರ್ :

ಶ್ರೀವೈಷ್ಣವ ಆಳ್ವಾರರಲ್ಲಿ ಹತ್ತನೆಯವನಾಗಿದ್ದ ನೀಲ ಹೆಸರಿನ ಇವರು ಕಳ್ಳರ ಜಾತಿಗೆ ಸೇರಿದವರಾಗಿದ್ದು ಚೋಳರ ಸೈನ್ಯದಲ್ಲಿ ಸೈನ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಶ್ರೀವೈಷ್ಣವ ಕನ್ಯೆಯಾದ ಕುಮುದವಲ್ಲಿಯನ್ನು ಮೋಹಿಸಲಾಗಿ ಆಕೆಯನ್ನು ಪಡೆಯಲು ಆಕೆಯ ಆಶಯದಂತೆ ವೈಷ್ಣವದೀಕ್ಷೆ ಕೈಗೊಂಡು ಪ್ರತಿನಿತ್ಯ ಭಾಗವತ ತದಿಯಾರಾಧನೆ (ವೈಷ್ಣವರಿಗೆ ಭೋಜನ) ನಡೆಸಬೇಕೆಂಬ ವ್ರತ ಕೈಗೊಂಡನು. ಪಾಳೆಯದ ಖಜಾನೆಯನ್ನೆಲ್ಲ ಬಳಸಿ ಬರಿಗೈಯಾಗಿ ಕೊನೆಗೆ ವ್ರತ ನಿಷ್ಠೆಗಾಗಿ ಕಳ್ಳತನಕ್ಕೂ ಇಳಿದು ದಾರಿಹೋಕರನ್ನು ಸುಲಿಸುತ್ತಿದ್ದನು. ಪರೀಕ್ಷಾರ್ಥವಾಗಿ ಲಕ್ಷ್ಮೀನಾರಾಯಣರೇ ನವದಂಪತಿಗಳಾಗಿ ಬಂದರೂ ತಿಳಿಯದೆ ಅವರನ್ನು ದೋಚಿ ಒಡವೆ ವಸ್ತ್ರ ಗಂಟು ಕಟ್ಟಿ ಎತ್ತಲಾಗದೆ, ಇವನಾರೋ

ಮಾಯಾಕಾರನೆಂದು ಅವನನ್ನು ಕೊಲ್ಲಲೂ ಹವಣಿಸಲಾಗಿ ವಿಷ್ಣು 'ಅಷ್ಟಾಕ್ಷರಿ' ಮಂತ್ರೋಪದೇಶ ಮಾಡಿದ ಮೇಲೆ ಮೂಟೆ ಹಗುರವಾದದ್ದನ್ನು ಕಂಡು ತಿರುಮಂಗೈ ಲಕ್ಷ್ಮೀನಾರಾಯಣರೇ ಬಂದವರೆಂದು ತಿಳಿದು ಸಾಷ್ಟಾಂಗವೆರಗಿ ಶರಣಾಗತನಾಗಿ ಭಗವಂತನ ಸೇವೆಗೆ ಮುಡುಪಾದನು. ಭಗವಂತನನ್ನು ಸ್ತುತಿಸಿರುವ 'ಪೆರಿಯ ತಿರುಮೊಳಿ', 'ಶಿರಿಯ ತಿರುಮಡಲ್' ಮುಂತಾದ ಹಲವು ಭಕ್ತಿಗೀತೆಗಳ ಪ್ರಬಂಧಗಳನ್ನು ಇವರು ರಚಿಸಿದ್ದಾರೆ.

ತಿರುಮಣಿ :

ಶ್ರೀವೈಷ್ಣವರು ಹಣೆಯ ಮೇಲೆ ಧರಿಸುವ ಚಿನ್ಹೆ, ನಾಮ, ಇದನ್ನು ಪುಂಡ್ರ ಊರ್ಧ್ವ ಪುಂಡ್ರ, ತಿರುನಾಮ, ಪಂಗನಾಮ ಮೂರುನಾಮ ಎಂದೂ ಕರೆಯುತ್ತಾರೆ. ಎರಡು ಬಿಳಿಯ ನಾಮಗಳ ನಡುವೆ ಒಂದು ಕೆಂಪುನಾಮ, ಇವುಗಳನ್ನು ಸೇರಿಸುವ ಮೂಗಿನ ಭಾಗದಲ್ಲಿ 'ವೈ' ಆಕಾರದಲ್ಲಿದ್ದರೆ ತೇಂಗಲೆ ಸಂಪ್ರದಾಯವೆಂದೂ 'ಯು' ಆಕಾರದಲ್ಲಿದ್ದರೆ ವಡಗಲೆ ಸಂಪ್ರದಾಯವೆಂದೂ ಗ್ರಹಿಸಲಾಗುತ್ತದೆ. ಬಿಳಿಯನಾಮಗಳನ್ನು ಶ್ರೀಮನ್ನಾರಾಯಣನ ಪಾದಗಳೆಂದೂ, ಕೆಂಪುನಾಮವನ್ನು ಶ್ರೀ ಮಹಾಲಕ್ಷ್ಮಿ ಎಂದೂ ಭಾವಿಸಲಾಗುತ್ತದೆ. ದಾರ್ಶನಿಕವಾಗಿ ಬಿಳಿನಾಮಗಳು ಕುಂಡಲಿನಿ ಶಕ್ತಿಯು ಹರಿಯುವ ಇಡಾ, ಪಿಂಗಳಾ ನಾಡಿಗಳನ್ನು, ಕೆಂಪುನಾಮ ಸುಷುಮ್ನ ನಾಡಿಯನ್ನು ಸೂಚಿಸುತ್ತದೆನ್ನಲಾಗಿದೆ. ಈ ನಾಮವನ್ನು ಯತಿಗಳು, ಗುರುಗಳು, ಧರ್ಮನಿಷ್ಠರು ಮತ್ತು ಇತರರೂ ವಿಶೇಷ ಸಂದರ್ಭಗಳಲ್ಲಿ ದೇಹದ ೧೨ ಭಾಗಗಳಲ್ಲಿ ಧರಿಸುವುದರಿಂದ 'ದ್ವಾದಶನಾಮ' ಎಂದೂ ಕರೆಯುತ್ತಾರೆ.

ಈ ನಾಮಕ್ಕೆ ಧರಿಸುವ ಬಿಳಿ ಬಣ್ಣವನ್ನೇ ಪ್ರತ್ಯೇಕವಾಗಿ 'ತಿರುಮಣಿ' ತಿರುಮಣ್ಣು, ಬಿಳಿನಾಮ ಎಂದೂ ಕರೆಯುವ ವಾಡಿಕೆಯಿದೆ.

ತಿರುವಲ್ಲಿಕ್ಕೇಣಿ :

ಮದರಾಸಿನ (ಚೆನ್ನೈ) ಮಧ್ಯಭಾಗದ ಹೆಸರು 'ಟ್ರೆಪ್ಲಿಕೇನ್' ಎಂದು ಹೆಸರಿದೆ. ಹಿಂದಿನ ಬಹುದಾರಣ್ಯ ಕ್ಷೇತ್ರವೆಂದು ಪ್ರತೀತಿ. ಐದು ದೇವಾಲಯಗಳಿದ್ದು ಪಾರ್ಥಸಾರಥಿ (ಉತ್ಸವರ್) ದೇವಸ್ಥಾನ ಪ್ರಸಿದ್ಧಿಯಾಗಿದೆ. ಇದರೊಂದಿಗೆ ರಂಗನಾಥ (ಮನ್ನಾರ್) ನರಸಿಂಹ (ಅಳಹಿಯಸಿಂಗರ್) ಶ್ರೀರಾಮ (ಚಕ್ರವರ್ತಿತಿರುಮಗನ್) ಮತ್ತು ಗರುಡಾರೂಢ ವಿಷ್ಣು (ದೇವಪೆರುಮಾಳ್) ದೇವಾಲಯಗಳೂ ಇವೆ.

ತುಳಸಿ :

ಸಮುದ್ರಮಂಥನ ಕಾಲದಲ್ಲಿ ಹುಟ್ಟಿದ ಅಮೃತ ಕಲಶದಿಂದ ಆನಂದ ಭರಿತನಾದ ವಿಷ್ಣುವಿನ ಕಣ್ಣಿಂದ ಬಿದ್ದ ಆನಂದ ಬಾಷ್ಪದಿಂದ ಹುಟ್ಟಿದ ಗಿಡ. ಲಕ್ಷ್ಮಿಯೊಂದಿಗೆ ವಿಷ್ಣುವು

ಈ ಗಿಡವನ್ನು ವಿವಾಹವಾಗುವನು ಎಂಬ ಉಲ್ಲೇಖದ ಜೊತೆಗೆ ಇನ್ನೊಂದು ಉಲ್ಲೇಖವೂ ಕಂಡುಬರುತ್ತದೆ.

ಶ್ರೀ ಲಕ್ಷ್ಮಿಯ ಅಂಶದಿಂದ ಹುಟ್ಟಿದ ಧರ್ಮಧ್ವಜ–ಮಾಧವಿಯರ ಪುತ್ರಿ. ಬಾಲ್ಯದಲ್ಲಿ ಬ್ರಹ್ಮನಿಂದ ವಿಷ್ಣುಪತ್ನಿಯಾಗುವ ವರ ಪಡೆದಳಾದರೂ ತಾನು ಗಿಡವಾಗುವ ಸೂಚನೆಯನ್ನು ಪಡೆದಿದ್ದಳು. ನಾರದರ ಸೂಚನೆಯಂತೆ ಶಂಖಚೂಡನೆಂಬ ಪ್ರಬಲದೇವತೆಗಳ ವಿರೋಧಿನಾಯಕನ ಹೆಂಡತಿಯಾದಳು. ದೇವತೆಗಳ ಹೋರಾಟದಲ್ಲಿ ಸತ್ತ ಶಂಖಚೂಡನ ವೇಷದಿಂದ ವಿಷ್ಣು ಇವಳ ಬಳಿ ಬಂದಾಗ ಈತನ ನಿಜರೂಪ ತಿಳಿದು ಗಿಡವಾಗಿ ಅವನನ್ನು ಸೇರಿದಳು.

ತ್ರಿಪುರಾಸುರ :

ತಾರಕಾಸುರನ ಮಕ್ಕಳಾದ ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ ಎಂಬ ಮೂವರು ರಾಕ್ಷಸರಾಜರು ಬ್ರಹ್ಮನಿಂದ ಯಾರಿಂದಲೂ ಭೇದಿಸಲಾಗದ ಪಟ್ಟಣ ರಚಿಸುವ ಸಾಮರ್ಥ್ಯದ ವರ ಪಡೆದು, ಕ್ರಮವಾಗಿ ಸ್ವರ್ಗದಲ್ಲಿ ಸುವರ್ಣನಗರಿ, ಅಂತರಿಕ್ಷದಲ್ಲಿ ರಜತನಗರಿ, ಭೂಮಿಯಲ್ಲಿ ಕಬ್ಬಿಣ ನಗರಿಗಳನ್ನು ದೇವಶಿಲ್ಪಿಯಿಂದ ನಿರ್ಮಿಸಿ ಮೂರು ಲೋಕಗಳಿಗೂ ಕಂಟಕರಾಗಿದ್ದರು.

ದೇವತೆಗಳ ಕೋರಿಕೆ ಮೇರೆಗೆ ಶಿವನು ಆ ಮೂರು ಲೋಕಗಳು ಒಟ್ಟಿಗೆ ಕೂಡುವ ಸಮಯದಲ್ಲಿ (ಇದು ಅಂತರಿಕ್ಷದಲ್ಲಿ ಒಂದೇ ಕಕ್ಷೆಯಲ್ಲಿ ಗ್ರಹಗಳು ಕೂಡುವ ಖಗೋಳ ವಿಜ್ಞಾನದ ಸೂಚನೆಯಂತಿದೆ) ಭೂಮಿಯೇ ರಥವಾಗಿ, ವೇದಗಳೇ ಕುದುರೆಯಾಗಿ, ಬ್ರಹ್ಮಸಾರಥಿಯಾಗಿ, ಸೂರ್ಯ ಚಂದ್ರರು ಚಕ್ರಗಳಾಗಿ, ಮೇರು ಪರ್ವತವನ್ನೇ ಬಿಲ್ಲಾಗಿ ಮಾಡಿಕೊಂಡು ವಿಷ್ಣುವನ್ನು ಆಹ್ವಾನಿಸಿದಾಗ ಅವನು ಬಾಣವಾಗಿ ಬಂದು ತ್ರಿಪುರಗಳನ್ನು ಸಂಹಾರ ಮಾಡುತ್ತಾನೆ. ತ್ರಿಪುರ ಸಂಹಾರವಾಗಬೇಕಾದರೆ ಅವನ ಮಡದಿಯ ವ್ರತಭಂಗವಾಗುವ ಶರತ್ತಿದ್ದುದರಿಂದ ಶ್ರೀಹರಿ ಬೆತ್ತಲೆಯಾಗಿ ವ್ರತನಿಷ್ಠಳಾದ ತ್ರಿಪುರನ ಹೆಂಡತಿಯ ಮುಂದೆ ಬಂದನೆಂದೂ ಅವಳು ವಿಚಲಿತಳಾಗಿ ವ್ರತಭಂಗವಾಯಿತೆಂದು ಆ ಸಮಯದಲ್ಲಿ ತ್ರಿಪುರ ದಹನವಾಯಿತೆಂದೂ ಕಥೆ ಇದೆ. ದಶಾವತಾರಗಳಲ್ಲಿ ಕೆಲವೆಡೆ ಬಲರಾಮನ ಬದಲು ತ್ರಿಪುರ ಸಂಹಾರಕನನ್ನು ತರುತ್ತಾರೆ.

ತ್ರಿಪುರರನ್ನು ಹರನೇ ಸಂಹಾರ ಮಾಡಿದ್ದರೂ ಅದು ವಿಷ್ಣುವಿನ ಕಾರಣದಿಂದ ಆದುದರಿಂದ ಹರಿಯೇ ಸಂಹಾರ ಮಾಡಿಸಿದನು ಎಂಬ ಹರಿಪಾರಮ್ಯ ಇಲ್ಲಿದೆ.

ತ್ರಿಶಿರ :

ಖರನ ಸೇನಾಪತಿಯಾಗಿದ್ದು ಖರದೂಷಣರೊಂದಿಗೆ ಶ್ರೀರಾಮನಿಂದ ಹತನಾದ ರಾಕ್ಷಸ. ಸಜ್ಜನರಿಗೆ ಉಪಟಳ ಕೊಡುತ್ತಿದ್ದ ಖರದೂಷಣ, ತ್ರಿಶಿರ ಮತ್ತು ಹದಿನಾಲ್ಕು ಸಾವಿರ ಸೈನಿಕರನ್ನು ಶ್ರೀರಾಮಲಕ್ಷ್ಮಣರು ವನವಾಸ ಕಾಲದಲ್ಲಿ ಈ ಗುಂಪಿನ ಶೂರ್ಪಣಕಿಯ ಕಿವಿ-ಮೂಗು ಕೊಯ್ದು ನೆಪದಿಂದ ಸಂಹರಿಸಿದರು

ದುರ್ವಾಸ :

ಬಹಳ ಕೋಪಿಷ್ಠ ಮುನಿ ಎಂಬ ಹೆಸರಿಗೆ ಪಾತ್ರನಾಗಿರುವ ಈ ದೂರ್ವಾಸಮುನಿಯ ಹಲವು ಸಂದರ್ಭಗಳನ್ನು ಉಲ್ಲೇಖಿಸಲಾಗಿದೆ. ಅವುಗಳಲ್ಲಿ ವಿಶೇಷವಾದದ್ದು ಭಾಗವತ ಭಕ್ತ ಅಂಬರೀಷನ ನಾಶಕ್ಕಾಗಿ ಕೃತ್ಯೆಯೊಂದನ್ನು ಬಿಟ್ಟು ಅವನು ಕೃಷ್ಣನ ಮೊರೆ ಹೊಕ್ಕಾಗ ಕೃಷ್ಣನ ಸುದರ್ಶನ ಚಕ್ರಕ್ಕೆ ಹೆದರಿ ಅಂಬರೀಷನನ್ನೇ ಮೊರೆಹೊಕ್ಕ ಅಪರೂಪದ ಸಂಗತಿಯ ಉಲ್ಲೇಖ ಇಲ್ಲಿದೆ.

ದ್ರೌಪದಿ :

ದ್ರೌಪದಿಯ ಅಕ್ಷಯವಸ್ತ್ರ ಮತ್ತು ಅಕ್ಷಯಾನ್ನಗಳ ಪ್ರಸಂಗಗಳನ್ನು ಇಲ್ಲಿ ವಿಶೇಷವಾಗಿ ಸ್ಮರಿಸಲಾಗಿದೆ. ಅಕ್ಷಯ ವಸ್ತ್ರವನ್ನು ಕೃಷ್ಣ ಆಪತ್ಕಾಲದಲ್ಲಿ ನೀಡಿ ಮಾನ ಕಾಪಾಡಲು, ದ್ರೌಪದಿಯ ಆರ್ತನಾದ, ಸ್ತುತಿ, ನಾಮಸ್ಮರಣೆಯಷ್ಟೇ ಅಲ್ಲದೆ ಉಪಕಾರ ಸ್ಮರಣೆಯೂ ಕಾರಣವಾಗಿದೆ ಎಂಬ ವಿಶೇಷ ಅಂಶವನ್ನು ದಾಸರು ಇಲ್ಲಿ ಉಲ್ಲೇಖಿಸುತ್ತಾರೆ.

ವಿವಾಹಪೂರ್ವದಲ್ಲಿ ಒಮ್ಮೆ ಕೃಷ್ಣ ಇವಳ ಮನೆಗೆ ಬಂದಿದ್ದಾಗ ಆಕಸ್ಮಿಕವಾಗಿ ಆದ ಕಾಲಿನ ಗಾಯಕ್ಕೆ ದ್ರೌಪದಿ ತಾನು ಉಡದಿದ್ದ ಹೊಸ ಪೀತಾಂಬರದ ಬಟ್ಟೆ ಕಟ್ಟಿದ್ದರಿಂದ ಪ್ರತಿ ಉಪಕಾರಕ್ಕಾಗಿ ಅವಳ ಆಪತ್ಕಾಲದಲ್ಲಿ ವಸ್ತ್ರದಾನ ಮಾಡಿದನೆಂದು ಉಲ್ಲೇಖಿಸುತ್ತಾರೆ. ಇದಕ್ಕೆ ಭಾಗವತದ ಒಂದು ಆವೃತ್ತಿಯಲ್ಲಿ (ಮುನ್ಷಿಯವರ ಕೃಷ್ಣಾವತಾರ) ಆಧಾರವಿದೆ.

ಅಕ್ಷಯಾನ್ನವೂ ಕೃಷ್ಣನ ಆಪತ್ಕಾಲದ ನೆರವೇ ಆಗಿದೆ. ಪಾಂಡವರ ಪರೀಕ್ಷೆಗಾಗಿ ವನವಾಸ ಕಾಲದಲ್ಲಿ ದುರ್ಯೋಧನನ ಕೋರಿಕೆ ಮೇರೆಗೆ ಬಂದಿದ್ದ ದೂರ್ವಾಸಾತಿಥ್ಯಕ್ಕಾಗಿ ದ್ರೌಪದಿ ಕೃಷ್ಣನ ಮೊರೆ ಹೋದಾಗ ಕೃಷ್ಣ ಕಾಣಿಸಿಕೊಂಡು ತೊಳೆದಿಟ್ಟಿದ್ದ ಪಾತ್ರೆಯಲ್ಲಿ ಅಂಟಿಕೊಂಡಿದ್ದ ಒಂದೇ ಅಗಳನ್ನು ತಿಂದು ಅತಿಥಿಗಳೆಲ್ಲ ತಿಂದುತೇಗುವಂತಹ ಸಮೃದ್ಧಿ ಸೃಷ್ಟಿಸುತ್ತಾನೆ.

ಧೇನುಕಾಸುರ :

ಕಂಸನ ಪಾಳೆಯದಲ್ಲಿದ್ದ ಒಬ್ಬ ರಾಕ್ಷಸ. ಶ್ರೀ ಕೃಷ್ಣನನ್ನು ಸಂಹರಿಸಲು ಕಂಸ ಕಳಿಸಿದ ಈ ರಾಕ್ಷಸ ಕತ್ತೆಯ ರೂಪ ತಾಳಿ ಶ್ರೀ ಕೃಷ್ಣ ಬಲರಾಮ ಗೋಪರ ತಾಳೆವನದಲ್ಲಿ ತಾಳೆಹಣ್ಣುಗಳನ್ನುದುರಿಸಿ ತಿನ್ನುತ್ತಿರುವಾಗ ಮೇಲೆ ಬಂದು ಬೀಳುತ್ತಾನೆ. ಬಲರಾಮ ಇವನ ಹಿಂಗಾಲುಗಳನ್ನು ಹಿಡಿದು ಗರಗರ ತಿರುಗಿಸಿ ತಾಳೆಮರಕ್ಕೆ ಹೊಡೆದು ಕೊಲ್ಲುತ್ತಾನೆಂದು ಭಾಗವತ ಉಲ್ಲೇಖಿಸಿದೆ. ಆದರೂ ಕೃಷ್ಣನನ್ನೇ ಧೇನುಕಾಸುರಮಥನ ಎಂದು ಹೇಳಿರುವ ಅನೇಕ ದಾಸರ ಕೃತಿಗಳಿವೆ.

ನಮ್ಮಾಳ್ವಾರ್ :

ಇವರು ಅಂತ್ಯಜ ಕುಲರ ವೆಳ್ಳಾಳಜಾತಿಗೆ ಸೇರಿದ್ದು ಹನ್ನೊಂದನೇ ಆಳ್ವಾರರಾಗಿ ಕಾಣಿಸುತ್ತಾರೆ. ತಾಮ್ರಪರ್ಣಿನದಿ ತೀರದ ಕುರುಂಗೂರಿನಲ್ಲಿ ಹುಟ್ಟಿದ ಇವರು ಹುಟ್ಟಿದಾರಭ್ಯ ಹದಿನಾರುವರ್ಷದವರೆಗೂ-ಕಣ್ಣುಬಿಡದ, ಮಾತನಾಡದ, ಮಿಸುಕಾಡದ ಈ ಮಗುವನ್ನು ಹೆತ್ತವರು ನಿರಾಕರಿಸಿ ಊರ ಹೊರಗೆ ಇದ್ದ-ಹುಣಸೆಮರದ ಪೊಟರೆಯಲ್ಲಿ ನೀರು ಆಹಾರಗಳಿಲ್ಲದೆ ಯೋಗನಿದ್ರೆಯಲ್ಲಿದ್ದರೆಂದು ಐತಿಹ್ಯವಿದೆ.

ಹನ್ನೆರಡನೇ ಆಳ್ವಾರರಾದ ಮಧುರಕವಿಯಾಳ್ವಾರರು ಯಾತ್ರೆಯಲ್ಲಿರುವಾಗ ಕಾಣಿಸಿದ ದಿವ್ಯಜ್ಯೋತಿಯನ್ನು ಅರಸುತ್ತಾ ಬಂದಾಗ ಅದು ನಮ್ಮಾಳ್ವಾರರ ಬಳಿ ಕರೆತಂದಿತು. ಇವರ ದಿವ್ಯಯೋಗವನ್ನು ಕಂಡು ಎಚ್ಚರಿಸಿ ತತ್ವಜ್ಞಾನಕ್ಕೆ ಮಾರು ಹೋಗಿ ತಮ್ಮ ಆಚಾರ್ಯರನ್ನಾಗಿ ಸ್ವೀಕರಿಸಿದರು. ನಂತರ ನಮ್ಮಾಳ್ವಾರರು ಜೀವನ ಪೂರ್ತಿ ಭಗವಂತನ ಸ್ತುತಿಯಲ್ಲೇ ಕಾಲಕಳೆದರು. ಸತಿ-ಪತಿ ಭಾವದಲ್ಲಿ ಭಗವಂತನನ್ನು ಕಂಡು ಧನ್ಯರಾದ, ತಾವು ಕಂಡ ದರ್ಶನವನ್ನು ಕೃತಿಗಳ ಮೂಲಕ ಹಾಡಿದ ನಮ್ಮಾಳ್ವಾರರು 'ತಿರುವಾಯ್‌ಮೊಳಿ' 'ತಿರುವಿರುತ್ತಮ್' ಮೊದಲಾದ ನಾಲ್ಕು ಕೃತಿಗಳನ್ನು ರಚಿಸಿದ್ದಾರೆ. ಅತ್ಮನಿವೇದನೆ, ಕ್ಷೇತ್ರವರ್ಣನೆ, ಪ್ರಕೃತಿಸೌಂದರ್ಯ, ಇಷ್ಟದೇವತಾಸ್ತುತಿಗಳು ಈ ಕೃತಿಗಳಲ್ಲಿ ಭಾವಗೀತಾತ್ಮಕವಾಗಿ ಹೊರಹೊಮ್ಮಿವೆ.

ಆಳ್ವಾರರಲ್ಲೆಲ್ಲಾ ಇವರನ್ನು ಪ್ರಧಾನ ಆಳ್ವಾರರನ್ನಾಗಿ ಸ್ತುತಿಸಲಾಗಿದೆ. ಶ್ರೀವೈಷ್ಣವ ಸಂಪ್ರದಾಯ ನಮ್ಮಾಳ್ವಾರರ ಸ್ಮರಣೆಯಿಂದ ತುಂಬಿಹೋಗಿದೆ. ದೇವಾಲಯಗಳಲ್ಲಿ, ಭಕ್ತರ ತಲೆಯ ಮೇಲಿಡುವ ಭಗವಂತನ ಪಾದ ಮುದ್ರಿಕೆ ಎನಿಸಿರುವ 'ಶಠಗೋಪ' ನಮ್ಮಾಳ್ವಾರರ ಸಂಕೇತ. ಇವರಿಗೆ 'ಶಠಗೋಪ' ಎಂಬ ಹೆಸರೂ ಇದೆ.

ನರಕಾಸುರ :

ಭೂದೇವಿಯ ಪುತ್ರನಾದ ಅಸುರ. ವರಾಹಾವತಾರ ಕಾಲದಲ್ಲಿ ವಿಷ್ಣುವಿನ ಶರೀರದಿಂದ ಬಿದ್ದ ಬೆವರಿನಿಂದ ಭೂಮಿ ಪುತ್ರನಾಗಿ ಜನಿಸಿ ಭೌಮ್ಯಾಸುರನೆಂದೂ ಹೆಸರಿದೆ. ಭೂದೇವಿಯ

ಕೋರಿಕೆಯಂತೆ ತನ್ನ ದಾಡೆಯನ್ನೇ ಮುರಿದು ಪ್ರಬಲ ವೈಷ್ಣವಾಸ್ತ್ರವಾಗಿ ಮಾಡಿ ಅವನಿಗೆ ಕೊಟ್ಟಿರುತ್ತಾನೆ.

ಕೃಷ್ಣಾವತಾರದವರೆಗೂ ಇವನ ಉಪಟಳ ಇರುತ್ತದೆ. ಬೇಸತ್ತ ದೇವತೆಗಳು ಕೃಷ್ಣನಿಗೆ ಮೊರೆ ಹೋದಾಗ ಭೂದೇವಿ ಅಂಶಳಾದ ಸತ್ಯಭಾಮೆಯೊಡನೆ ನರಕಾಸುರನಗರ ಪ್ರಾಗ್ಜ್ಯೋತಿಷಪುರಕ್ಕೆ ಬಂದು; ಗಿರಿ, ಜಲ, ಅಗ್ನಿ, ಶಸ್ತ್ರ, ವಾಯು ಮಾರ್ಗಗಳನ್ನು ಭೇದಿಸಿ ಮುರನಿರ್ಮಿತ ಸಹಸ್ರಬಾಹು (ಪಾಶ)ಗಳನ್ನು ಭೇದಿಸಿ ಮುರನನ್ನು ಸಂಹರಿಸಿ, ನರಕಾಸುರನನ್ನು ಚಕ್ರಾಯುಧದಿಂದ ಕತ್ತರಿಸಿ, ಅವನ ಸೈನ್ಯ ಸಮಸ್ತವನ್ನೂ ನಾಶಮಾಡಿ ಇವನು ದೇವತೆಗಳಿಂದ ವಶಪಡಿಸಿಕೊಂಡಿದ್ದ ಅಮೂಲ್ಯ ವಸ್ತುಗಳನ್ನೆಲ್ಲ ಅವರವರಿಗೆ ಹಿಂತಿರುಗಿಸುತ್ತಾನೆ. (ಆಗಲೇ ಅದಿತಿಯಿಂದ ಸತ್ಯಭಾಮೆ ಚಿರಯೌವನದ ವರ ಪಡೆಯುವುದು) ನರಕಾಸುರನ ಮಗ ಭಗದತ್ತನಿಗೆ ರಾಜ್ಯ ಒಪ್ಪಿಸಿ ಆಶೀರ್ವದಿಸುತ್ತಾನೆ. (ಇವನೇ ಮುಂದೆ ಯುದ್ಧದಲ್ಲಿ ಅರ್ಜುನನ ಮೇಲೆ ತಂದೆಯಿಂದ ಬಂದಿದ್ದ ಅಸ್ತ್ರ ಪ್ರಯೋಗಿಸಿದಾಗ ಕೃಷ್ಣನೇ ಉಪಶಮನ ಮಾಡುತ್ತಾನೆ.) ನರಕಾಸುರನ ಸೆರೆಯಲ್ಲಿದ್ದ ಅರವತ್ತು ಸಾವಿರ ರಾಜಕನ್ಯೆಯರನ್ನು ಬಿಡಿಸುತ್ತಾನಲ್ಲದೆ ಅವರನ್ನೆಲ್ಲ ದ್ವಾರಕೆಗೆ ಕರೆತರುತ್ತಾನೆ. ನರಕನ ಅಂತಃಪುರದಲ್ಲಿದ್ದ ಹದಿನಾರುಸಾವಿರದ ನೂರು ರಾಣಿಯರನ್ನು ವಿವಾಹವಾಗಿ ತನ್ನ ರಾಣಿಯರನ್ನಾಗಿ ಮಾಡಿಕೊಳ್ಳುತ್ತಾನೆ.

ನರನಾರಾಯಣ :

ಶ್ರೀ ಹರಿಯ ಅವತಾರಗಳಲ್ಲಿ ಒಂದು, ಸಹೋದರ ರೂಪ, ಹಿರಣ್ಯಕಶಿಪುವಿನ ವಧೆಯ ನಂತರ ನರಸಿಂಹನ ನರಾಕಾರ ನರಮುನಿಯಾಗಿಯೂ ಸಿಂಹಾಕಾರ ನಾರಾಯಣ ಮುನಿಯಾಗಿಯೂ ಅವತರಿಸುತ್ತಾರೆ. ಧರ್ಮ ಮತ್ತು ಮೂರ್ತಿ ದಂಪತಿಮುನಿಗಳಿಗೆ ಅವರ ಇಚ್ಛೆಯಂತೆ ನಾರಾಯಣನೇ ಅವಳಿ ಮಕ್ಕಳಾಗಿ ಹುಟ್ಟಿದ ರೂಪವೆಂದೂ ಭಿನ್ನ ಕಥೆಗಳಿವೆಯಾದರೂ ನಿರೂಪಣೆಯಲ್ಲಿ ಹೋಲಿಕೆಯಿದೆ.

ಸಾವಿರ ವರ್ಷ ತಪಸ್ಸು ಮಾಡಿದವರಿಂದ ಮಾತ್ರ ಮರಣವಾಗಲೆಂಬ ವರ ಪಡೆದಿದ್ದ ಸಹಸ್ರಕವಚನೆಂಬ ರಾಕ್ಷಸನ ಸಂಹಾರಕ್ಕಾಗಿ ಈ ಅವತಾರ ಮಾಡಿ ಬದರಿಕಾಶ್ರಮದಲ್ಲಿ ಸಾವಿರ ವರ್ಷದ ತಪಸ್ಸಿಗೆ ಕುಳಿತಿರುತ್ತಾರೆ. ಇವರ ಘೋರ ತಪಸ್ಸಿಗೆ ಹೆದರಿದ ಇಂದ್ರಾದಿಗಳು ತಪೋಭಂಗ ಮಾಡಲು ಅಪ್ಸರೆಯರನ್ನು ಕಳಿಸುತ್ತಾರೆ. ಇವರೇ ಸೃಷ್ಟಿಸಿದ–ಊರ್ವಶಿ ತ್ರಿಲೋಕಸುಂದರಿಯ ರನ್ನು ಕಂಡು ಬೆರಗಾಗಿ ಅಪ್ಸರೆಯರೆಲ್ಲ ಹಿಂತಿರುಗುತ್ತಾರೆಂದೂ ಪ್ರಹ್ಲಾದನು ಇವರನ್ನು ಕೆಣಕಿ ಪರಾಜಿತನಾಗಿ ಶ್ರೀಹರಿಯಿಂದಲೇ ಅವರ ಅವತಾರಾಂಶ ತಿಳಿಯಿತೆಂದು ಉಲ್ಲೇಖವಿದೆ.

ತಪಸ್ಸು ಮಾಡುತ್ತಲೇ ಇವರು ಸರದಿಯ ಮೇಲೆ ಒಬ್ಬರಿಗೆ ಆಯಾಸವಾದರೆ ಇನ್ನೊಬ್ಬರಂತೆ ಸಹಸ್ರಕವಚನೊಂದಿಗೆ ಯುದ್ಧ ಮಾಡುತ್ತ ಅವನ ೯೯೯ ಕವಚಗಳನ್ನು ಸಂಹರಿಸುತ್ತಾರೆ. ಹೆದರಿದ ಸಹಸ್ರಕವಚ ಸೂರ್ಯನ ಮೊರೆಹೊಕ್ಕು ಪಾರಾಗುತ್ತಾನೆ. ಮುಂದೆ ಈ ನರನಾರಾಯಣರೇ ಅರ್ಜುನ ಕೃಷ್ಣರಾಗಿ ಹುಟ್ಟಿ ಕರ್ಣನಾಗಿ ಹುಟ್ಟಿದ ಸಹಸ್ರಕವಚನಿಂದ ಉಳಿದಿದ್ದ ಕೊನೆಯ ಕವಚವನ್ನು ಕೃಷ್ಣ ಯುದ್ಧ ಭೂಮಿಯಲ್ಲಿ ದಾನವಾಗಿ ಪಡೆಯುವ ಮೂಲಕ ಪೂರ್ಣಮಾಡುತ್ತಾರೆ.

ಪುರುಹೂತ:

ಇಂದ್ರನ ಹೆಸರು. ದೇವ ಅಂತರಿಕ್ಷಲೋಕದ ಕೋಟಿ ದೇವತೆಗಳ ಪ್ರಧಾನ ದೇವತೆ. ಕಶ್ಯಪ–ಅದಿತಿಯರ ಮಗ. ಇಂದ್ರರು ಹದಿನಾಲ್ಕು ಮಂದಿಯೆಂದು (ಯಜ್ಞ, ರೋಚನ, ಸತ್ಯಜಿತ್, ತ್ರಿಶಿಖ, ವಿಭು, ಮಂತ್ರದ್ರುಮ, ಪುರಂದರ, ಬಲಿ, ಅದ್ಭುತ, ಶಂಭು ವೈವೃತಿ, ಋತಧಾಮ, ದಿವ್ಯಸ್ತುತಿ, ಶುಭ) ಚತುರ್ಮುಖನ ಒಂದು ಹಗಲಲ್ಲಿ ಇವರು ಆಳುವರೆಂದೂ ಈಗ ಆಳುತ್ತಿರುವವನು ಏಳನೆಯವನೆಂದೂ ಇವನಿಗೆ ಪುರಂದರ, ಪುರದರ, ಪುರುಹೂತ ಎಂದೆಲ್ಲ ಹೆಸರುಗಳಿವೆಯೆಂದೂ ಭಾಗವತ ಪುರಾಣದಲ್ಲಿದೆ.

ಇವನು ಶ್ರೀಕೃಷ್ಣನ ಸಾಮರ್ಥ್ಯವರಿಯದೆ ಮಳೆಗರೆಸಿದಾಗ ಕೃಷ್ಣ ಮಂದರ ಪರ್ವತವನ್ನೇ ಕಿರುಬೆರಳಲ್ಲಿ ಎತ್ತಿ ಅದರಡಿಯಲ್ಲಿ ಗೋಕುಲವನ್ನು ರಕ್ಷಿಸಿ ಮಂದರೋದ್ಧಾರ ಎನಿಸುತ್ತಾನೆ.

ಪೂದತ್ತಾಳ್ವಾರ್:

ಹನ್ನೆರಡು ಜನ ಆಳ್ವಾರರಲ್ಲಿ ಮೊದಲು ಮೂವರು ಆಳ್ವಾರರ ಜೀವನ ವಿವರಗಳು ಲಭ್ಯವಿಲ್ಲ. ಇವರನ್ನು ಪುಷ್ಪಜಾತರೆಂದು ಕಲ್ಪಿಸಲಾಗಿದೆ. ಇವರಲ್ಲಿ ಒಬ್ಬರಾಗಿರುವ ಪೂದತ್ತಾಳ್ವಾರರು ಮಾಧವಿ ಕುಸುಮೋದ್ಭವರೆಂದು ಪ್ರತೀತಿ. ಹುಟ್ಟುತ್ತಲೇ ಜ್ಞಾನ–ಭಕ್ತಿ–ವೈರಾಗ್ಯ ಸಂಪನ್ನರಾಗಿ ಈ ಮೂವರೂ ಒಂದೊಂದು ಗ್ರಾಮದಲ್ಲಿ ಒಂದೊಂದೇ ರಾತ್ರಿ ಇರುತ್ತಿದ್ದರೆಂದೂ ಒಂದು ದಿನ ರಾತ್ರಿ ತಿರುಕ್ಕೋವಿಲೂರಿನಲ್ಲಿದ್ದಾಗ ಭಾರಿ ಮಳೆಯುಂಟಾಗಿ ಆಶ್ರಯಕ್ಕಾಗಿ ಒಂದೇ ಜಗುಲಿಯಲ್ಲಿ ಈ ಮೂವರೂ ಬಂದು ಸೇರಿದರೆಂದೂ ನಿಲ್ಲುವಷ್ಟೇ ಜಾಗದಲ್ಲಿ ಒತ್ತಟ್ಟಿಗೆ ನಿಂತಿದ್ದಾಗ ಇವರಿಗರಿವಿಲ್ಲದಂತೆ ಭಗವಂತ ಇವರ ಮಧ್ಯೆಸೇರಿ ಬಂದು ಇನ್ನಷ್ಟು ಒತ್ತುತ್ತಿರುವಾಗ ಯೋಗದೃಷ್ಟಿಯ ಈ ಭಕ್ತರು ಭಗವಂತನನ್ನು ಕಂಡು ಆನಂದ ತುಂದಿಲರಾಗಿ ಮೈಮರೆತು 'ತಿರುವಂದಾದಿ' ಎಂಬ ಮೂರುನೂರು ಪಾಶುರ ಪದ್ಯಗಳ ಕೃತಿಯನ್ನು ಹಾಡುತ್ತಾರೆಂದು ಇವರ ಬಗ್ಗೆ ಕಥೆಯಿದೆ. ಈ ತಿರುವಂದಾದಿಯಲ್ಲಿ ಎರಡನೆಯ ನೂರುಪಾಶುರ ಪೂದತ್ತಾಳ್ವಾರರದೆಂದು ಗುರುಪರಂಪರೆ ಹೇಳುತ್ತದೆ.

ಪೆರಿಯಾಳ್ವಾರ್:

ಶ್ರೀವೈಷ್ಣವ ಪುರಾತನ ಭಕ್ತರಾದ ೧೨ಜನ ಆಳ್ವಾರರ ಪರಂಪರೆಯಲ್ಲಿ ೬ನೆಯವರಾಗಿ ಕಾಣಿಸಿಕೊಳ್ಳುವ ಇವರು ಆಂಡಾಳ ತಂದೆಯೂ ಆಗಿದ್ದಾರೆ. ಶ್ರೀವಿಲ್ಲಿಪುತ್ತೂರಿನ ಭಾಗವತ ಬ್ರಾಹ್ಮಣರಾಗಿದ್ದ ಇವರು ಅಲ್ಲಿಯ ಆರಾಧ್ಯದೈವ ವಟಪತ್ರಶಾಯಿ (ಆಲದೆಲೆಯ ಮೇಲೆ ಮಲಗಿರುವ ಶಿಶುರೂಪಿ ಕೃಷ್ಣ) ಗೆ ಪ್ರತಿದಿನ ತಾವೆ ಪೋಷಿಸುತ್ತಿದ್ದ ಹೂತೋಟದಿಂದ ವಿವಿಧ ಹೂಗಳನ್ನು ಬಿಡಿಸಿ ತಂದು ಕಟ್ಟಿ ಹಾರವಾಗಿ ಅರ್ಪಿಸಿ ಆನಂದ ಪಡುತ್ತಿದ್ದ ಪರಮಭಕ್ತರು.

ಇವರ ಭಕ್ತಿಯನ್ನು 'ವಾತ್ಸಲ್ಯಭಕ್ತಿ ' ಎಂದು ಕರೆದಿದ್ದಾರೆ ತಾಯಿಮಗುವಿನ ಸಂಬಂಧದ ಭಕ್ತಿ. ಭಗವಂತನನ್ನು ಮಗುವನ್ನಾಗಿ ಕಲ್ಪಿಸಿ ತಾವು ತಾಯಿಯಾಗಿ ಸದಾ ಆ ಮಗುವಿನ ರಕ್ಷಣೆಯನ್ನೇ ಬಯಸುತ್ತಿದ್ದರು. ಜಗತ್ತಿನ ಪಾಲನೆಯನ್ನೇ ಹೊತ್ತಿರುವ ಜಗದೀಶ್ವರನಿಗೆ ಯಾವಾಗ ಎಲ್ಲಿ ಯಾರಿಂದ ಏನು ಕೇಡು ಸಂಭವಿಸುವುದೋ ಎಂಬ ಆತಂಕದಲ್ಲೇ ಆ ಮಗುರೂಪಿಯನ್ನು ಆರೈಕೆ ಮಾಡುತ್ತಿದ್ದ ತಾಯಿ ಹೃದಯ ಅವರ ಕೃತಿಗಳಲ್ಲಿದೆ. ಅವರ 'ತಿರುಪ್ಪಲ್ಲಾಂಡು' ದೇವರಿಗೇ ಆಶೀರ್ವಾದ ಮಾಡುವ ಭಾವದ ಅಪೂರ್ವ ಸ್ತುತಿರೂಪ. ಆ ಅರ್ಹತೆಯೂ ಅವರಿಗಿತ್ತು. (ಮಗುವಿನ ರೂಪದ ದೇವರ ಅರಾಧನೆ ಮತ್ತು ಮಗಳನ್ನು ಆ ರಂಗನಾಥನಿಗೇ ಕೊಟ್ಟು ಮದುವೆ ಮಾಡಿದ ' ಮಾವ 'ನೂ ಆಗಿದ್ದುದು) ಈ 'ತಿರುಪ್ಪಲ್ಲಾಂಡು ' ಶ್ರೀವೈಷ್ಣವ ನಿತ್ಯಾನುಸಂಧಾನದಲ್ಲಿ ಅತಿಮುಖ್ಯ ಸ್ಥಾನ ಪಡೆದಿದೆ. ಪ್ರಬಂಧಗಳ ಪಠಾಣ ಇದರಿಂದಲೇ ಆರಂಭವಾಗಿ ಇದರಿಂದಲೇ ಮುಕ್ತಾಯವಾಗುತ್ತದೆ. ದೇವತಾರಾಧನೆಯ ಮಂಗಳಾರತಿಯಲ್ಲಿ (ಶ್ರೀವೈಷ್ಣವ ಸಂಪ್ರದಾಯದಲ್ಲಿ ಇದನ್ನು ಶಾತ್ತುಮೊರೆ ಎಂದು ಕರೆದಿದ್ದು ಇದಕ್ಕೆ 'ಮಂಗಳಾಶಾಸನ ' ಎಂದೂ ಹೆಸರಿದೆ. ಇದರಲ್ಲಿ ಆಳ್ವಾರರ ಪ್ರಬಂಧಗಳಿಂದಾಯ್ದ ನಿರ್ದಿಷ್ಟ ಪಾಶುರ ಶ್ಲೋಕಗಳ ಸಾಮೂಹಿಕ ಪಠನವಿರುತ್ತದೆ.) ಇದರ ಪಠನ ಕಡ್ಡಾಯವಾಗಿರುತ್ತದೆ.

ಭಗವಂತನು ಇವರಿಗೆ ಕನಸಿನ ರೂಪದಲ್ಲಿ ಶಿಶುರೂಪದಲ್ಲೇ ದರ್ಶನವಿತ್ತಿದ್ದನೆಂದೂ ಅದರ ಲಾಲನೆ–ಪಾಲನೆಯಲ್ಲಿ ಭಾವಪೂರ್ಣರಾಗಿ ಮೈಮರೆಯುತ್ತಿದ್ದರೆಂದೂ ಇವರ ಕಥೆಯಲ್ಲಿ ಬರುತ್ತದೆ. ಈ ಸಂಗತಿಯನ್ನು ಇಲ್ಲಿ ಪ್ರತಿಮೆಯಾಗಿ ಬಳಸಿದ್ದಾರೆ.

ಪ್ರಬಂಧ:

ಆಳ್ವಾರರ ಕೃತಿಗಳನ್ನು ' ಪ್ರಬಂಧಗಳು ' ಎಂದು ಕರೆಯಲಾಗುತ್ತದೆ. ೧೨ ಜನ ಆಳ್ವಾರರು ನಾಲ್ಕು ಸಾವಿರ ಪದ್ಯಗಳನ್ನು ಈ ಪ್ರಬಂಧ ಕೃತಿಗಳಲ್ಲಿ ರಚಿಸಿದ್ದು ಶ್ರೀವೈಷ್ಣವ ಮತೀಯರು ಇವನ್ನು 'ನಾಲಾಯಿರ ದಿವ್ಯಪ್ರಬಂಧ ' ಗಳು ಎಂದು ಹೆಸರಿಸಿರುವ ಸಂಪ್ರದಾಯವಿದೆ. ಈ ಪದ್ಯಗಳನ್ನು 'ಪಾಶುರ' ಗಳು ಎಂದೂ ಕರೆಯುಲಾಗುತ್ತದೆ. ತಮ್ಮ

ನಿತ್ಯಾನುಸಂಧಾನದಲ್ಲಿ ಈ ಪಾಶುರಗಳನ್ನು ಪಠಿಸುವ ದೈವಾರಾಧನೆಯಲ್ಲಿ ಅತಿಮುಖ್ಯವಾಗಿ ಬಳಸುವ ಕ್ರಮವಿದೆ. ವೇದಗಳಿಗೆ ಸಮಾನವಾಗಿ ಈ ಪ್ರಬಂಧಗಳನ್ನು ಗುರುತಿಸಲಾಗಿದೆ. ಶ್ರೀವೈಷ್ಣವ ಮತಸಿದ್ಧಾಂತಕ್ಕೆ ಇದನ್ನು ಒಂದು ಪ್ರಮಾಣವಾಗಿ ರಾಮಾನುಜಾಚಾರ್ಯರು ಸ್ವೀಕರಿಸಿದ್ದಾರೆ.

ಬಲರಾಮ:

ಶ್ರೀಕೃಷ್ಣನ ಅಣ್ಣನಾಗಿ ಬಾಲಲೀಲೆಯಲ್ಲಿ ಮತ್ತು ಇತರೆಡೆಗಳಲ್ಲೂ ಅಲ್ಲಲ್ಲೇ ಇವನ ಉಲ್ಲೇಖ ಬರುತ್ತದಾದರೂ ಶ್ರೀವೈಷ್ಣವ ಧರ್ಮದಲ್ಲಿ ಬಲರಾಮನನ್ನು ಮುಖ್ಯವಾಗಿ 'ದಶಾವತಾರ ' ದ ಒಂದು ಅವತಾರವನ್ನಾಗಿ ಕಲ್ಪಿಸಲಾಗಿದೆ. ಸಾಮಾನ್ಯವಾಗಿ ಪ್ರಚಲಿತವಿರುವ 'ಬುದ್ಧಾವತಾರ ' ಈ ಸಂಪ್ರದಾಯದ ದೇವತಾತಾರತಮ್ಯದಲ್ಲಿಲ್ಲ.

ಮಧು-ಕೈಟಭರು:

ಅಣ್ಣತಮ್ಮಂದಿರು, ವಿಷ್ಣುವಿನ ಕಿವಿಯ ಗುಗ್ಗೆಯಿಂದ ಜನಿಸಿದ ರಾಕ್ಷಸರು. ಬ್ರಹ್ಮನನ್ನು ಪೀಡಿಸಲು ಬ್ರಹ್ಮ ವಿಷ್ಣುವಿನ ಮೊರೆಹೋಗಲು ವಿಷ್ಣು ಇವರೊಡನೆ ಹೋರಾಡುತ್ತಿರುವಾಗ ಈ ರಾಕ್ಷಸರು ವಿಷ್ಣುವಿನ ಪರಾಕ್ರಮಕ್ಕೆ ಮೆಚ್ಚಿ 'ವರ ' ಕೇಳಲು ವಿಷ್ಣು ನೀವು ನನ್ನಿಂದ ವಧ್ಯರಾಗಬೇಕೆಂದು ಕೇಳಲು ಅವರು 'ನೀರಿಲ್ಲದ ಭೂಮಿಯಲ್ಲಿ ಕೊಲ್ಲು 'ಎಂದು ವರ ನೀಡುತ್ತಾರೆ. ಆದರೆ ಎಲ್ಲೆಡೆಯೂ ನೀರಿರುವುದರಿಂದ ಸಾಧ್ಯವಾಗದೆ ವಿಷ್ಣು ಕೊನೆಗೆ ತನ್ನ ತೊಡೆಯಮೇಲೆ ಕೆಡೆದುಕೊಂಡು ಕೊಲ್ಲುತ್ತಾನೆಂದು ಭಾಗವತ ಉಲ್ಲೇಖವಿದೆ. ಈ ದುಷ್ಟಸಂಹಾರದ ಚಿತ್ರ ದಾಸರಲ್ಲಿ ಪದೇ ಪದೇ ಕಂಡುಬರುತ್ತದೆ.

ಮಾನಗಿರಿ-ಮಾಂಗಿರಿ :

ದಾಸರ ಆರಾಧ್ಯದೈವವಿರುವ ಮಾವಿನ ಕೆರೆಯ ರಂಗನಾಥನ ಸನ್ನಿಧಿ. ಹಾಸನ ಜಿಲ್ಲೆಯ ಹೊಳೆನರಸಿಪುರ ತಾಲ್ಲೂಕಿನಲ್ಲಿ ಹೇಮಾವತಿ ನದಿ ತೀರದಲ್ಲಿ ಬೆಟ್ಟದ ಮೇಲೆ ಇದೆ. ಅನೇಕ ಭಕ್ತಾದಿಗಳನ್ನು ಹೊಂದಿರುವ, ಜನವರಿ ಸಮಯದಲ್ಲಿ ವಿಶೇಷಜಾತ್ರೆ ನಡೆಯುವ ಸ್ಥಳೀಯ ಪ್ರಸಿದ್ಧ ದೇವರ ಕ್ಷೇತ್ರವೆನಿಸಿದೆ.

ದಾಸರು ಪರಿಪರಿಯಾಗಿ ಮಾವಿನಕೆರೆರಂಗನಾಥನನ್ನು ಸ್ತುತಿಸಿದ್ದಾರೆ. ಜಾತ್ರೆಯನ್ನು, ಅದರ ವೈಭವವನ್ನು, ತೇರನ್ನು ಕುರಿತು ವರ್ಣಿಸಿದ್ದಾರೆ. ಈ ರಂಗನಾಥನನ್ನು ಅಲ್ಲಿಯ ಐತಿಹ್ಯದ ಹಿನ್ನೆಲೆಯಲ್ಲಿ ಶಿವ-ಕೇಶವನ ಐಕ್ಯತೆಯ ಸಂಕೇತವನ್ನಾಗಿ ಸಾರಿದ್ದಾರೆ.

ಸ್ಥಳಪುರಾಣದ ಪ್ರಕಾರ ಮೊದಲು ಈ ರಂಗನಾಥನನ್ನು ಶಿವ ಎಂದೂ ಪೂಜಿಸಲಾಗುತ್ತಿತ್ತು. ಭಕ್ತಾದಿಗಳಲ್ಲಿ ರಂಗನಾಥನೇ ಶಿವನೇ ಎಂದು ಪಂಥವೇರ್ಪಟ್ಟು

ದೇವರಿಗೇ ಅದರ ನಿರ್ಧಾರಕ್ಕೆ ಬಿಟ್ಟು ಒಂದು ದಿನ ಶಿವನಾದರೆ ನಂದಿ ರಂಗನಾಥನಾದರೆ ಹನುಮಂತ ಕಾಣಿಸಿಕೊಳ್ಳಲಿ ಎಂದು ಬಾಗಿಲು ಭದ್ರಪಡಿಸಿ ಊರಿಗೆ ಬಂದು ಮಾರನೆ ದಿನ ಹೋಗಿ ನೋಡಲಾಗಿ ಒಂದು ಬಂಡೆಯಲ್ಲಿ ಮಾರುತಿಯ ರೂಪ ಗೋಚರವಾಗಿ ಅಂದಿನಿಂದ ರಂಗನಾಥ ಕ್ಷೇತ್ರ ಎಂದೇ ಪ್ರಸಿದ್ಧವಾಗಿದೆ. ರಂಗನಾಥನ ಅಸ್ತಿತ್ವಕ್ಕೆ ಕಾರಣನಾದ ಹನುಮಂತನೂ ಅಲ್ಲಿ ಪೂಜೆಗೊಳ್ಳುತ್ತಿದ್ದಾನೆ. ದೇವರ ಪ್ರಸಿದ್ಧಿಗೆ ಪೂರಕವಾದ ದಂತಕತೆಯೂ ಪ್ರಚಲಿತದಲ್ಲಿದೆ. ಭಕ್ತಾದಿ ದಂಪತಿಗಳೊಬ್ಬರು ಮಕ್ಕಳಿಗಾಗಿ ಬೆಟ್ಟದ ದೇವರನ್ನು ಪ್ರಾರ್ಥಿಸಿ ಹರಸಿಕೊಂಡು ಹೋಗಲು ಮಗನುದಯಿಸಿದ ಮೇಲೆ ಹರಕೆಯನ್ನು ನಿರ್ಲಕ್ಷಿಸಿದ್ದರಿಂದ ತೊಂದರೆಯುಂಟಾಗಿ ಕ್ಷಮಾಪಣೆಗಾಗಿ ಬಂದ ವನಿತೆಯಿತ್ತ ಪೊಂಗಲನ್ನು ಸ್ವೀಕರಿಸಿ ಕಷ್ಟ ನಿವಾರಿಸಿದ ಪ್ರಸಂಗವನ್ನು ಸ್ಥಳೀಯರು ಹೇಳುತ್ತಾರೆ.

ದಾಸರು ತಮ್ಮ ಕೃತಿಗಳಲ್ಲಿ ಈ ಎಲ್ಲ ಐತಿಹ್ಯಗಳನ್ನೂ ದಾಖಲಿಸಿದ್ದಾರೆ.

ಮಾವಳಿಪುರ–ಮಹಾಬಲಿಪುರ:

ಪಾಂಡವರ ಗುಹಾಂತರ್ದೇವಾಲಯಗಳಿರುವ ಐತಿಹಾಸಿಕ ಸ್ಥಳ. ಶ್ರೀವೈಷ್ಣವವರಿಗೆ 'ಆಳ್ವಾರಪಾಟ್ಟಿಲ್ ಕ್ಷೇತ್ರ' ಎಂದರೆ ಆಳ್ವಾರರು ಸ್ತುತಿಸಿರುವ ಪವಿತ್ರ ಸ್ಥಳ. ಪೂದತ್ತಾಳ್ವಾರರು ಅವತರಿಸಿದ ಪುಣ್ಯಭೂಮಿ.

ಮೂಲತತ್ವ:

ಪ್ರಪಂಚದ ಮೂರುತತ್ವಗಳಾದ ಚಿತ್–ಅಚಿತ್–ಈಶ್ವರ ಅಥವಾ ಪುರುಷ–ಪ್ರಕೃತಿ–ಪರಮಾತ್ಮ ಅಥವಾ ಜೀವ–ಜಗತ್ತು–ಜಗನ್ನಿಯಾಮಕ ಅಥವಾ ಚೇತನ–ಅಚೇತನ–ಚಿರಚೇತನ ಈ ಮೂರನ್ನು ವಿವರಿಸಿ ಪರಸ್ಪರ ಸಂಬಂಧ ಅರ್ಥಗಳನ್ನು ತಿಳಿಸುವುದೇ ಎಲ್ಲ ದರ್ಶನಗಳ ಗುರಿ. ಇದರ ಜಿಜ್ಞಾಸೆಯೇ ಅನೇಕ ಸಿದ್ಧಾಂತಗಳ, ಮತಗಳ – ಪಂಥಗಳ ಹುಟ್ಟಿಗೆ ಕಾರಣವಾಗಿದೆ. ದ್ವೈತ – ಅದ್ವೈತ –ವಿಶಿಷ್ಟಾದ್ವೈತಗಳೂ ಇದರ ಫಲವೇ.

ವಿಶಿಷ್ಟಾದ್ವೈತ ಈ ಮೂಲ ತತ್ವವನ್ನು ಹೇಗೆ ಸಿದ್ಧಾಂತಮಾಡಿ ವಿವರಿಸುತ್ತದೆ ಎಂಬುದೇ ವಿಶಿಷ್ಟಾದ್ವೈತದ ಮೂಲತತ್ವವಾಗಿರುತ್ತದೆ. ಎಲ್ಲ ಪಂಥಗಳವರಿಗೂ ಇದರ ವಿಶ್ಲೇಷಣೆಗೆ ಬಳಸಿರುವ ಆಕರಗಳೆಂದರೆ ಉಪನಿಷತ್ತು, ಬ್ರಹ್ಮಸೂತ್ರ, ಮತ್ತು ಭಗವದ್ಗೀತೆ. ಈ ಮೂರನ್ನು ಈ ಕಾರಣದಿಂದ ಪ್ರಸ್ಥಾನತ್ರಯಗಳೆಂದು ಕರೆಯಲಾಗಿದೆ. ಆದರೆ ಶ್ರೀ ವೈಷ್ಣವ ಧರ್ಮಕ್ಕೆ ಆಳ್ವಾರರ ದಿವ್ಯ ಪ್ರಬಂಧಗಳೂ ಒಂದು ಆಕರವಾಗಿರುವುದರಿಂದ ಪ್ರಸ್ಥಾನ ಚತುಷ್ಟಯವೆನಿಸಿದೆ.

ಸಾಮಾನ್ಯವಾಗಿ ಎಲ್ಲ ಮತಗಳೂ ದುಃಖವನ್ನು ದೂರಮಾಡಿ ಸುಖಾಪೇಕ್ಷೆಯ ವಸ್ತುವಾದ 'ತತ್ವ', ಅದರಿಂದ ಪಡೆಯಬೇಕಾದ ಫಲವಾದ 'ಪುರುಷಾರ್ಥ' ಮತ್ತು ಅದಕ್ಕಾಗಿ ಅನುಸರಿಸಬೇಕಾದ ಮಾರ್ಗವಾದ 'ಹಿತ' ಈ ಮೂರು ಅಂಶಗಳನ್ನೇ ಸಿದ್ಧಾಂತವಾಗಿ

ಚರ್ಚಿಸುತ್ತವೆ. ವಿಶಿಷ್ಟಾದ್ವೈತ ಸಿದ್ಧಾಂತ ಇವುಗಳನ್ನು ಪ್ರತ್ಯೇಕವಾಗಿ ಚರ್ಚಿಸದೆ ಒಂದೊಂದಕ್ಕೂ ಮಾರ್ಗೋಪಾಯ ಹುಡುಕದೆ ಇವುಗಳಿಗೆಲ್ಲ ಕಾರಣನಾದ ಇವುಗಳನ್ನೆಲ್ಲ ತಾನೆ ಹೊಂದಿರುವ ಜಗನ್ನಿಯಾಮಕನಾದ ಶ್ರೀಮನ್ನಾರಾಯಣ ಒಬ್ಬನನ್ನೇ ಅವಲಂಬಿಸಿದರೆ, ಧ್ಯಾನಿಸಿದರೆ, ಶರಣಾದರೆ, ಇವೆಲ್ಲ ಸುಲಭವಾಗಿ ಪ್ರಾಪ್ತಿಯಾಗುತ್ತದೆಂಬ ಸರಳ ಉಪಾಯವನ್ನು ಈ ಮೂಲತತ್ವ ಹೊಂದಿದೆ. ಜೀವ-ಜಗತ್ತುಗಳು ಬೇರೆಬೇರೆಯಾದರೂ ಅವುಗಳಿಗಿಂತ ಬೇರೆಯಾಗಿರುವ ನಾರಾಯಣನ ದೇಹ ಮತ್ತು ಪ್ರಕಾರಗಳೇ ಆಗಿವೆ. ಇವುಗಳ ಚಟುವಟಿಕೆ ಅವನ ಒಂದು ಗುಣ ವಿಶೇಷವೇ ಆಗಿದೆ. ಪರಮಾತ್ಮ-ಜೀವ-ಜಗತ್ತುಗಳ ಸಂಬಂಧ ಒಂದನ್ನೊಂದು ಬಿಡದ ಅಪೃಥಕ್ ಸಂಬಂಧವಾಗಿದೆ. ತನ್ನ ದೇಹವೆನಿಸಿದ ಈ ಜಗತ್ತಿನ ಸಕಲ ಜೀವಿಗಳೂ 'ಏಕದೇಹಾವಯವನ್ಯಾಯ ' ದಂತೆ ಐಕಮತ್ಯದಿಂದ ಕೂಡಿರಬೇಕೆಂಬ 'ವಸುಧೈವ ಕುಟುಂಬಕಂ ' ಎಂಬ ಸಮಾನತಾತತ್ವ ಈ ಮೂಲ ತತ್ವದ ತಿರುಳು.

ಯದುಗಿರಿ:

ಯಾದವಾದ್ರಿ, ತಿರುನಾರಾಯಣಪುರ ಎಂದೆಲ್ಲ ಕರೆಸಿಕೊಳ್ಳುವ ಶ್ರೀವೈಷ್ಣವ ತೀರ್ಥಕ್ಷೇತ್ರವಾದ ಮೇಲುಕೋಟೆ. ರಾಮಾನುಜರು ಕರ್ನಾಟಕದಲ್ಲಿ ಶ್ರೀವೈಷ್ಣವ ಧರ್ಮವನ್ನು ಪ್ರಸಾರ ಮಾಡಲು ಮಾಡಿಕೊಂಡಿದ್ದ ಕೇಂದ್ರಸ್ಥಾನ ಇದು. ರಾಮಾನುಜರ ಕಾರಣದಿಂದಲೇ ಭೂಗತವಾಗಿದ್ದ ಚೆಲುವನಾರಾಯಣ ಸ್ವಾಮಿಯ ದೇವಾಲಯ ಜೀರ್ಣೋದ್ಧಾರವಾಗಿ ಭವ್ಯವಾಗಿ ನಿರ್ಮಾಣವಾಯಿತು. ಬೆಟ್ಟದ ಮೇಲೆ ಯೋಗಾನರಸಿಂಹಸ್ವಾಮಿ ದೇವಾಲಯವೂ ಅಭಿವೃದ್ಧಿ ಹೊಂದಿತು. ಶ್ರೀವೈಷ್ಣವ ಪ್ರಮುಖ ನಾಲ್ಕು ದಿವ್ಯಕ್ಷೇತ್ರಗಳಲ್ಲಿ ಕರ್ನಾಟಕದಲ್ಲಿರುವ ಒಂದು ಕ್ಷೇತ್ರವಾಗಿದ್ದು ಪವಿತ್ರ ಸ್ಥಳವಾಗಿದೆ. ಇಲ್ಲಿ ನಡೆಯುವ ವೈರಮುಡಿ (ವಜ್ರಕಿರೀಟ) ಮಹೋತ್ಸವ ಅತ್ಯಂತ ಜನಪ್ರಿಯ. ರಾಮಾನುಜರಿಂದಲೇ ಈ ಕ್ಷೇತ್ರವಾಗಿರುವುದು.

ರಹಸ್ಯತ್ರಯ :

ಶ್ರೀವೈಷ್ಣವ ಧರ್ಮದ ಸಾರ, ತಿರುಳೇ, ಈ ರಹಸ್ಯತ್ರಯ. ಹೀಗೆಂದರೆ ಮೂರು ರಹಸ್ಯಮಂತ್ರಗಳು ಇವುಗಳೆಂದರೆ

೧. ಮೂಲಮಂತ್ರ : 'ಓಂ ನಮೋ ನಾರಾಯಣಾಯ'

೨. ದ್ವಯಮಂತ್ರ : 'ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೆ ಶ್ರೀಮತೇ ನಾರಾಯಣಾಯ'

೩. ಚರಮಶ್ಲೋಕ : ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ಅಹಂತ್ವಾಂ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮ ಮಾಶುಚಃ

ಮೋಕ್ಷವನ್ನು ಬಯಸುವ ಮುಮುಕ್ಷುವಿಗೆ ಶ್ರೀವೈಷ್ಣವ ಮೂಲತತ್ವ-ಹಿತ-ಪುರುಷಾರ್ಥಗಳ ಸ್ವರೂಪವನ್ನು ಸಂಶಯ ವಿಪರ್ಯಾಸಗಳಿಗೆ ಆಸ್ಪದವಿಲ್ಲದಂತೆ ಯಥಾವತ್ತಾಗಿ ಮನದಟ್ಟು ಮಾಡಿಕೊಡುವ ಸದಾಚಾರ್ಯಾಭಿದಾನ ಪೂರ್ವಕವಾದ ಉಪದೇಶ ಮಾತ್ರದಿಂದ ಪ್ರಾಪ್ತವಾಗುವ ವಿಶೇಷ ಜ್ಞಾನ ಎಂದು ಇದನ್ನು ಕರೆಯಲಾಗಿದೆ.

ಪ್ರತಿಯೊಬ್ಬ ಶ್ರೀವೈಷ್ಣವ ವಟುವಿಗೂ ಉಪನಯನ ಕಾಲದಲ್ಲಿ ಈ ರಹಸ್ಯತ್ರಯ ಮಂತ್ರಗಳನ್ನು ಕಿವಿಯಲ್ಲಿ ರಹಸ್ಯವಾಗಿ ಉಪದೇಶಿಸಲಾಗುತ್ತದೆ. ಆದ್ದರಿಂದಲೇ ಇದನ್ನು ರಹಸ್ಯತ್ರಯ ಎಂದು ಕರೆಯಲಾಗಿದೆ. ಇದನ್ನೇ ರಾಮಾನುಜರು ತಮಗೆ ತಮ್ಮ ಗುರುಗಳಿಂದಾದ ಉಪದೇಶ ಕಾಲದಲ್ಲಿ ಇದರ ಫಲ ಸರ್ವಜನರಿಗೂ ತಿಳಿಯಬೇಕೆಂಬ ಜನಾನುರಾಗದಿಂದ ಗಿರಿಯ ಮೇಲೆ ಏರಿ ಜನರೆಲ್ಲ ಒಟ್ಟುಮಾಡಿ ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಉದ್ಘೋಷಿಸುತ್ತಾರೆಂದು ಅವರ ಜೀವನ ವೃತ್ತಾಂತದಲ್ಲಿ ಮುಖ್ಯ ಸಂಗತಿಯಾಗಿ ಬರುತ್ತದೆ. ಈ ಮೂರು ಮಂತ್ರಗಳ ವ್ಯಾಖ್ಯಾನ ಗ್ರಂಥವೇ ರಾಮಾನುಜರ 'ರಹಸ್ಯತ್ರಯಸಾರ' ಗ್ರಂಥ.

ರಾಮಾನುಜ:

ಶ್ರೀವೈಷ್ಣವ ಮತಸ್ಥಾಪಕರೆನಿಸಿರುವ ಇವರನ್ನು 'ಯತಿರಾಜ' 'ಎಂಬೇರುಮಾನಾರ್' 'ಲಕ್ಷ್ಮಣಮುನಿ' 'ಉಡೈಯರ್' ಭಾಷ್ಯಕಾರ ಮುಂತಾದ ಹಲವು ಹೆಸರುಗಳಿಂದ ಕರೆಯಲಾಗಿದೆ. ಶ್ರೀವೈಷ್ಣವ ಸಿದ್ಧಾಂತವನ್ನು 'ರಾಮಾನುಜದರ್ಶನ' ಎಂದೇ ಹೆಸರಿಸುತ್ತಾರೆ.

ವಿಶಿಷ್ಟಾದ್ವೈತದ ವೈಶಿಷ್ಟ್ಯಗಳನ್ನು ಆಳ್ವಾರರ ಪ್ರಬಂಧ ಪ್ರಮಾಣವನ್ನು ಮುಖ್ಯವಾಗಿ ಪರಿಗಣಿಸಿ ನಾರಾಯಣನೇ ಪರತತ್ವ, ಅವನಲ್ಲಿ ಶರಣಾಗತವೇ ಹಿತ, ಅವರ ಕೈಂಕರ್ಯವೇ ಪುರುಷಾರ್ಥ ಎಂಬ ರಾಗರಹಿತ ಫಲರಹಿತ ಕರ್ಮಾನುಷ್ಠಾನವನ್ನು ಭಗವದ್ಗೀತೆಯ ಸಾರವನ್ನು ಜಗತ್ತಿಗೆ ಸಾರಿದ ಯತಿಗಳಾಗಿದ್ದಾರೆ. ಮಿಕ್ಕ ಮತಗಳಿಗಿಲ್ಲದ ದೇಶೀಮೂಲದ ಚಿಂತನೆಯಿಂದ ಪ್ರದೇಶ ಭಾಷೆಯೊಂದನ್ನು ವೇದ ಸಮಾನಗೊಳಿಸುವ ಮೂಲಕ ವಿಶಿಷ್ಟಾದ್ವೈತಕ್ಕೆ 'ಉಭಯವೇದಾಂತ ' ವೆಂಬ ಹೆಸರನ್ನು ತಂದುಕೊಟ್ಟು ತಾವು 'ಉಭಯವೇದಾಂತ ಸಿಂಹಾಸನಾಧಿಪತಿ ' ಎನಿಸಿದ ಆಚಾರ್ಯ ಪುರುಷರು.

೧೦೧೭-೧೧೩೭ರ ಅವಧಿಯಲ್ಲಿದ್ದ ರಾಮಾನುಜರು ಯಾದವ ಪ್ರಕಾಶರ ಶಿಷ್ಯರಾಗಿ ನಾಥಮುನಿಗಳು ಯಾಮಾನಾಚಾರ್ಯರ ನಂತರ ವಿಶಿಷ್ಟಾದ್ವೈತ ಪೀಠದ ಗುರುಗಳಾಗಿ ಆಳ್ವಾರರ ಪ್ರಬಂಧದ ಪ್ರಚಾರ, ಮತಸ್ಥಾಪನೆಯ ಗುರುತರ ಕಾರ್ಯ ಕೈಗೊಂಡು ಚೋಳರಾಜರ ಶಿವಭಕ್ತಿಯ ಉಪಟಳಕ್ಕೆ ಒಳಗಾಗಿ ಕರ್ನಾಟಕದಲ್ಲಿ ತಮ್ಮ ಕಾರ್ಯಕ್ಷೇತ್ರ ಮುಂದುವರಿಸಿ ಹೊಯ್ಸಳ ವಿಷ್ಣುವರ್ಧನನ ಆಶ್ರಯದಲ್ಲಿ ತೊಂಡನೂರು- ಮೇಲುಕೋಟೆಯಲ್ಲಿ ನೆಲೆಯೂರಿ

ಶ್ರೀವೈಷ್ಣವಧರ್ಮವನ್ನು ದಕ್ಷಿಣ ಭಾರತದಾದ್ಯಂತ ವಿಸ್ತರಿಸಿದರು. ತಿರುಪತಿ–ಕಂಚಿ–ಶ್ರೀರಂಗ–ಮೇಲುಕೋಟೆಗಳನ್ನು ಶ್ರೀವೈಷ್ಣವ ದಿವ್ಯ ಕ್ಷೇತ್ರಗಳಾಗಿ ಅಭಿವೃದ್ಧಿಪಡಿಸಿದರು. ತಮ್ಮ ನಂತರವೂ ಈ ಧರ್ಮ ಅನೂಚಾನವಾಗಿ ಬೆಳೆದುಕೊಂಡು ಹೋಗಲು ಪೀಠಗಳನ್ನು ಸ್ಥಾಪಿಸಿ ವಿಶಿಷ್ಟಾದ್ವೈತ ಮಠಗಳನ್ನು ಹುಟ್ಟುಹಾಕಿದರು.

ಶ್ರೀ ಭಾಷ್ಯ (ಭಗವದ್ಗೀತೆಯ ವ್ಯಾಖ್ಯಾನ) ರಹ್ಯಸತ್ರಯ ಸಾರ (ವಿಶಿಷ್ಟಾದ್ವೈತ ತತ್ವದ ವ್ಯಾಖ್ಯಾನ) ಮುಂತಾದ ಪ್ರಮುಖ ಆಕರ ಗ್ರಂಥಗಳನ್ನು ತಾವು ರಚಿಸಿ ಶಿಷ್ಯರಿಂದಲೂ ಬರೆಸಿ ಶ್ರೀವೈಷ್ಣವ ಧರ್ಮವನ್ನು ಶಾಶ್ವತಗೊಳಿಸಿದ ಮತಾಚಾರ್ಯರು.

ಶರಭಂಗ ಮುನಿ:

ಶ್ರೀರಾಮಾವತಾರ ಕಾಲದಲ್ಲಿ ವನವಾಸ ಕಾಲದಲ್ಲಿ ಕಾನನದಲ್ಲಿ ತಮ್ಮ ಆಶ್ರಮದ ಬಳಿಬಂದ (ಗೋದಾವರಿತೀರದ ದಂಡಕಾರಣ್ಯದಲ್ಲಿ) ಶ್ರೀರಾಮನನ್ನು ಸಂದರ್ಶಿಸಿ ಕೃತಾರ್ಥರಾಗಿ ದೇಹತ್ಯಾಗ ಮಾಡುತ್ತಾರೆ. ರಾಮನಿಂದ ಮೋಕ್ಷ ಪ್ರಾಪ್ತರಾದ ಮುನಿಗಳಾಗಿ ಉಲ್ಲೇಖಿತರಾಗಿದ್ದಾರೆ.

ವಿಪ್ರನಾರಾಯಣ:

ತೊಂಡರಡಿಪ್ಪೊಡಿಯಾಳ್ವಾರ್ ಎಂಬ ಆಳ್ವಾರರಗಿರುವ ಹೆಸರು. 'ಭಕ್ತಾಂಘ್ರಿರೇಣು ' ಎಂದೂ ಇವರನ್ನು ಗುರುತಿಸುತ್ತಾರೆ. ಪಾಂಡ್ಯ ದೇಶದ ಮಂಡುಗುಡಿಯಲ್ಲಿ ಜನಿಸಿದ ಈ ಬ್ರಾಹ್ಮಣೋತ್ತಮ ಶ್ರೀರಂಗದ ಬಳಿ ತಿರುಕ್ಕರೆಂಬನೂರ್ ಎಂಬ ಊರಿನಲ್ಲಿ ನೆಲೆನಿಂತು ಹೂವಿನ ತೋಟ ಮಾಡಿಕೊಂಡು ಹೂವಿನ ಕೈಂಕರ್ಯವನ್ನು ಶ್ರೀರಂಗನಾಥನಿಗೆ ಸಲ್ಲಿಸುತ್ತ ವೇದಗಳ ಅಧ್ಯಯನಲ್ಲಿ ನಿರತರಾಗಿ ಶುದ್ಧ ಬ್ರಹ್ಮಚರ್ಯ ವ್ರತನಿಷ್ಠರಾಗಿದ್ದರು. ಆ ಊರಿನ ವೇಶ್ಯೆ ದೇವದೇವಿಯೆಂಬರಿಗೆ ಇವರ ಮೇಲೆ ಮೋಹವುಂಟಾದರೂ ಇವರ ದಿವ್ಯನಿರ್ಲಕ್ಷ್ಯಕ್ಕೆ ಹಟತೊಟ್ಟು ಒಲಿಸಿಕೊಳ್ಳಲು ನಿರ್ಧರಿಸಿ ಕಪಟ ವೈರಾಗ್ಯ ಪ್ರದರ್ಶಿಸಿ ಅವರ ಅನುಮತಿ ಪಡೆದು ಅವರಿಗೆ ತೋಟದಲ್ಲಿ ಸಹಾಯಕಿಯಾಗಿ ನಿಂತಳು. ಒಂದು ದಿನ ಮಳೆಯಲ್ಲಿ ಸಿಕ್ಕಿ ಅವರ ಮನೆಯಲ್ಲಿ ಉಳಿಯಬೇಕಾಗಿ ಬಂದಾಗ ಅವಳ ಸೌಂದರ್ಯಕ್ಕೆ ಮರುಳಾಗಿ ಮನೋನಿಗ್ರಹ ಸೋತು ಅವಳ ವಶವಾದರು. ಅಂದಿನಿಂದ ಭಗವಂತನ ಮೇಲಿನ ಪ್ರೇಮ ವೇಶ್ಯೆಯ ಕಡೆ ತಿರುಗಿತು. ಲೋಕ ನಿಂದನೆಗೂ ತಲೆಕೊಡಲಿಲ್ಲ. ಅದರೆ ದೇವದೇವಿಗೇ ಇವರ ಆಸ್ತಿಯೆಲ್ಲ ಕರಗಿ ಬರಿಗೈಯಿಂದಾಗಿ ಇವರಲ್ಲಿ ಬೇಸರವುಂಟಾಗಿ ಇವರನ್ನು ಅರಮನೆಯ ಚಿನ್ನದ ಬಟ್ಟಲು ಕದ್ದ ಅಪವಾದಕ್ಕೆ ಈಡುಮಾಡಿದಳು. ಈ ಪರಿಸ್ಥಿತಿಯಲ್ಲಿ ಪಶ್ಚಾತ್ತಾಪಕ್ಕೊಳಗಾದ ವಿಪ್ರನಾರಾಯಣರು ಮತ್ತೆ ತಮ್ಮ ಪ್ರೇಮವನ್ನು ದೇವರಲ್ಲಿ ಸ್ಥಿರಗೊಳಿಸಿದರು. ಭಾಗವತ ದಾಸರಾಗಿ

ತಮ್ಮ ಪಾಪ ಕಳೆಯಲೆತ್ನಿಸಿ ಪರಮಾತ್ಮನ ಕೃಪೆಗೆ ಪಾತ್ರರಾದರು. ನಂತರ ದೇವದೇವಿಯೂ ಇವರ ಸಹವಾಸದ ಕಾರಣದಿಂದ ನಿಜವೈರಾಗ್ಯಕ್ಕೆ ಒಳಗಾಗಿ ಇವರ ನೆರಳಾಗಿ ಆಶ್ರಯಿಸಿದಳು. ಇವರು 'ತಿರುಮಾಲೆ ' 'ತಿರುಪ್ಪಳ್ಳಿಯಳುಚ್ಚಿ ' ಎಂಬ ಎರಡು ಕೃತಿಗಳನ್ನು ರಚಿಸಿ ಭಗವಂತನ್ನು ಸ್ತುತಿಸಿದ್ದಾರೆ.

ವಿರಾದ:

ತುಂಬುರನೆಂಬ ಗಂಧರ್ವ. ಕಶ್ಯಪ–ಅರಿಷ್ಟೆಯರ ಮಗ. ಕುಬೇರನ ಬಳಿಗೆ ಹೋಗಲಿದ್ದ ರಂಭೆ ಅಪ್ಸರೆಯರನ್ನು ಕೆಣಕಿದ ಕಾರಣದಿಂದ ಕುಬೇರನಿಂದ ರಾಕ್ಷಸನಾಗಿ ಹುಟ್ಟುವ ಶಾಪಕ್ಕೆ ಕಾರಣನಾಗಿದ್ದವನು. ನಂತರ ದಂಡಕಾರಣ್ಯದಲ್ಲಿ ಅರಣ್ಯವಾಸಿಗಳಾಗಿದ್ದು ಸೀತಾರಾಮಲಕ್ಷ್ಮಣರ ದರ್ಶನ ಪಡೆದು ಶಾಪವಿಮೋಚನೆ ಪಡೆದವನು. ರಾಮನಿಂದ ಹತನಾದ ರಾಕ್ಷಸನೆನಿಸಿದನು.

ವಿಶಿಷ್ಟಾದ್ವೈತ:

ಶ್ರೀವೈಷ್ಣವ ಮತವು 'ಶ್ರೀವೈಷ್ಣವಸಿದ್ಧಾಂತ ' 'ರಾಮಾನುಜ ದರ್ಶನ ' ಭಗವದ್ರಾಮಾನುಜೀಯ 'ಉಭಯ ವೇದಾಂತ' 'ಸವಿಶೇಷಾದ್ವೈತ' ಮುಂತಾದ ಹೆಸರುಗಳಲ್ಲಿ ಪ್ರಚಲಿತವಾಗಿರುವ ಧರ್ಮ. ವಿಶೇಷಣಗಳಿಂದ ಕೂಡಿದ ದ್ವೈತವಾಗಿರುವುದರಿಂದ ವಿಶಿಷ್ಟಾದ್ವೈತವೆನಿಸಿದೆ.

ಜಗತ್ ಸ್ವರೂಪಿಯಾದ ದೇವರನ್ನು 'ಪುರುಷ' 'ಬ್ರಹ್ಮ' ಎಂದು ಕರೆದು ಅವನಲ್ಲಿ 'ಚಿತ್' 'ಅಚಿತ್' ಎಂಬ ಎರಡು ವಿಶೇಷಣಗಳಿವೆ ಎಂದೂ ಈ ಎರಡೂ ಬೇರೆ ಬೇರೆಯಲ್ಲ ಒಂದೇ. ಪರಮಾತ್ಮನ ವಿನಾ ಬೇರೆವಸ್ತುವಿಲ್ಲ ಪರಮಾತ್ಮನೊಬ್ಬನೇ ಎಂದು ಪ್ರತಿಪಾದಿಸುವ ತತ್ವ. ' ಅದ್ವೈತವಾದರೆ ಈ ಎರಡೂ ಭಿನ್ನವಾದವುಗಳು ಪರಮಾತ್ಮ ಮತ್ತು ವಸ್ತುಗಳು ಬೇರೆ ಎಂದು ಪ್ರತಿಪಾದಿಸುವ ತತ್ವ ದ್ವೈತವೆನಿಸಿದೆ. ವಿಶಿಷ್ಟಾದ್ವೈತ ಈ ಚಿಂತನೆಯನ್ನೇ ವಿಸ್ತರಿಸಿ ಚೇತನ ಅಚೇತನಗಳು ಪರಮಾತ್ಮನಿಗಿಂತ ಬೇರೆಯಾದರೂ ಅವು ಪರಮಾತ್ಮನಿಗೆ ಶರೀರವಾಗಿರತಕ್ಕವು, ವಿಶೇಣಗಳು, ಪರಮಾತ್ಮನಿಲ್ಲದೆ ಇವುಗಳು ಇಲ್ಲ. ಆದ್ದರಿಂದ ಈ ವಿಶೇಷಣಗಳಿಂದ ಕೂಡಿದ ಪರಮಾತ್ಮನೊಬ್ಬನೇ ದೈವ ಎಂದು ಅಂಗೀಕರಿಸಿರುವ ಮತವಾಗಿ ವಿಶಿಷ್ಟಾದ್ವೈತವೆನಿಸಿದೆ.

ಶಂಬರ:

ತಿಮಿಧ್ವಜ ಈ ಹೆಸರಿನ ರಾಕ್ಷಸನು ಇಂದ್ರನೊಂದಿಗೆ ಮಾಡುವ ಯುದ್ಧದಲ್ಲಿ ಇಂದ್ರನಿಗೆ ದಶರಥ ಸಹಾಯ ಮಾಡುತ್ತಾನೆಂದು ದನುವಿನ ಮಗನಾದರೂ ರಾಕ್ಷಸ ಎಂಬ ಇನ್ನೊಂದು ಉಲ್ಲೇಖವಿದ್ದ ಇವನು ಮಾಯಾವಿ. ಕೃಷ್ಣಪುತ್ರ ಪ್ರದ್ಯುಮ್ನನಿಂದ ವಧೆಯಾಗುತ್ತಾನೆ.

ಶಿಶುಪಾಲ:

ಯದುವಂಶದ ದೊರೆ. ಇವನು ಹುಟ್ಟಿದಾಗ ನಾಲ್ಕು ಕೈಗಳು ಮೂರುಕಣ್ಣುಗಳಿದ್ದು ಯಾರು ಇವನನ್ನು ಸ್ಪರ್ಷಿಸಿದಾಗ ಹೆಚ್ಚಿನ ಅಂಗಗಳು ಕಳಚುತ್ತವೋ ಅವನೇ ಇವನ ಮೃತ್ಯುವಾಗುತ್ತಾನೆ ಎಂಬ ಅಶರೀರವಾಣಿ ಇರುತ್ತದೆ. ಇವರ ತಾಯಿ ಶ್ರೀಕೃಷ್ಣನ ಸೋದರತ್ತೆ ಶ್ರುತಶ್ರವೆಯಾಗಿದ್ದುದರಿಂದ ಒಮ್ಮೆ ಮನೆಗೆ ಬಂದಿದ್ದ ಕೃಷ್ಣ ಈ ಬಾಲಕನನ್ನು ಎತ್ತಿಕೊಳ್ಳಲಾಗಿ ಹೆಚ್ಚಿನ ಅಂಗಗಳು ಬೀಳುತ್ತವೆ. ಇದರಿಂದ ಹೆದರಿದ ತಾಯಿ ಇವನನ್ನು ಉಳಿಸಿಕೊಳ್ಳಲು ಶ್ರೀಕೃಷ್ಣನನ್ನು ಪ್ರಾರ್ಥಿಸುತ್ತಾಳೆ. ಆಗ ಕೃಷ್ಣ ಇವನ ನೂರು ತಪ್ಪಿನವರೆಗೆ ಕ್ಷಮಿಸುವುದಾಗಿ ವಾಗ್ದಾನ ಮಾಡುತ್ತಾನೆ. ಪಾಂಡವರ ರಾಜಸೂಯ ಯಾಗಕಾಲದಲ್ಲಿ ಭೀಮನಿಂದ ಸೋತಿದ್ದ ಶಿಶುಪಾಲನೂ ಬಂದಿದ್ದು ಯಜ್ಞದ ಹವಿಸ್ಸನ್ನು ಕೃಷ್ಣನಿಗೆ ಅರ್ಪಿಸಲು ನಿರ್ಧರಿಸಿದಾಗ ಶಿಶುಪಾಲ ಪ್ರತಿಭಟಿಸಿ ಕೃಷ್ಣನನ್ನು ನಿಂದಿಸುತ್ತಾನೆ. ಆ ವೇಳೆಗೆ ನೂರು ತಪ್ಪು ದಾಟಿದ್ದ ಶಿಶುಪಾಲನನ್ನು ಕೃಷ್ಣ ತನ್ನ ಚಕ್ರಾಯುಧದಿಂದ ಸಂಹರಿಸುತ್ತಾನೆ. ಮಧುರುಚಿಯನ್ನು ಇಲ್ಲಿಯ ಹವಿಸ್ಸಿಗೆ ಹೋಲಿಸಿದ್ದಾರೆ.

ಶುಂಭ:

ನಿಶುಂಭನೆಂಬ ರಾಕ್ಷಸನ ಅಣ್ಣ. ತಪಸ್ಸಿನಿಂದ ಬ್ರಹ್ಮನನ್ನು ಒಲಿಸಿಕೊಂಡು ಅಯೋನಿಜೆ ಕನ್ಯೆಯಿಂದಲ್ಲದೆ ಇತರರಿಂದ ಮರಣವಾಗಬಾರದೆಂಬ ವರ ಪಡೆದು ದೇವತೆಗಳನ್ನು ಪೀಡಿಸುತ್ತಿರುತ್ತಾನೆ. ದೇವತೆಗಳು ಆದಿಶಕ್ತಿಗೆ ಮೊರೆಹೋಗಲು ಆಕೆ ಕಾಶಿಕ ಎಂಬ ಕನ್ಯೆಯನ್ನು ಸೃಷ್ಟಿಸಿಬಿಡಲು ಆಕೆಯ ರೂಪಕ್ಕೆ ಮರುಳಾದ ಶುಂಭನಿಶುಂಭರು ಆಕೆಯನ್ನು ಮೋಹಿಸಲು ತನ್ನನ್ನು ಗೆದ್ದವರನ್ನು ಮಾತ್ರ ವರಿಸುವುದಾಗಿ ಹೇಳಿದ ಅವಳ ಪಂಥಕ್ಕೆ ಇಬ್ಬರೂ ಸೈನಿಕರೊಂದಿಗೆ ಹೋರಾಡಿ ಮಡಿಯುವರು.

ಸತ್ರಾಜಿತ:

ಯದುವಂಶದ ಒಬ್ಬರಾಜ, ಸೂರ್ಯನಿಂದ ಅಪರೂಪದ ಶ್ಯಮಂತಮಣಿಯನ್ನು ಪಡೆದಿದ್ದ. ಇದನ್ನು ಧರಿಸಿದವರಿಗೆ ಇದರ ತೂಕದ ಎಂಟುಪಟ್ಟು ಚಿನ್ನವನ್ನು ಇದು ಕೊಡುತ್ತಿತ್ತಲ್ಲದೆ ಇದನ್ನು ಅಶುಚಿಯಾಗಿದ್ದಾಗ ಧರಿಸಿದರೆ ಅಂಥವರನ್ನು ಕೊಲ್ಲುವ ಶಕ್ತಿ ಇದಕ್ಕಿತ್ತು.

ಕೃಷ್ಣನು ಈ ರತ್ನವನ್ನು ಉಗ್ರಸೇನನಿಗೆ ಕೋಡಬೇಕೆಂದೂ ಆತನೇ ಇದಕ್ಕೆ ಯೋಗ್ಯನೆಂದೂ ಸತ್ರಾಜಿತನಿಗೆ ಹೇಳಿದ್ದನಾದರೂ ಆತ ತನ್ನ ತಮ್ಮನಿಗೆ ಕೊಟ್ಟಿದ್ದನು. ತಮ್ಮ ಪ್ರಸೇನಜಿತ್ತನು ಬೇಟೆಗೆ ಹೋಗಿದ್ದಾಗ ಸಿಂಹವೊಂದರಿಂದ ಹತನಾಗಿ ಜಾಂಬವಂತನಿಗೆ ಆ ಹಾರ ದೊರಕಿ ಮಗಳು ಜಾಂಬುವತಿಯ ಬಳಿಯಿತ್ತು.

ಪ್ರಸೇನನು ಬೇಟೆಯಿಂದ ಹಿಂತಿರುಗದಿರಲು ಕೃಷ್ಣನೇ ಅವನನ್ನು ಕೊಂದು ಶ್ಯಮಂತಕಮಣಿಯನ್ನು ಅಪಹರಿಸಿದ್ದಾನೆಂದು ಸತ್ರಾಜಿತನು ದೂರುತ್ತಾನೆ. ಕೃಷ್ಣ ನಿರಪರಾಧಿ ಎಂದು ತಿಳಿದ ಮೇಲೆ ತನ್ನ ಮಗಳು ಸತ್ಯಭಾಮೆಯನ್ನು ಕೃಷ್ಣನಿಗೆ ಕೊಟ್ಟು ಸತ್ರಾರ್ಜಿತ ಬಂಧುವಾಗುತ್ತಾನೆ.

ಮುಂದೆ ಶತಧನ್ವನು ಸತ್ರಾಜಿತನನ್ನು ಕೊಂದು ಶಮಂತಕಮಣಿಯನ್ನು ಅಪಹರಿಸಿದ್ದರಿಂದ ಕೃಷ್ಣ ಬಲರಾಮರು ಅವನನ್ನು ಬೆನ್ನಟ್ಟಲು, ಅಕ್ರೂರನ ಆಶ್ರಯ ಬೇಡಿದಾಗ ಅಕ್ರೂರ ನಿರಾಕರಿಸುತ್ತಾನೆ. ಅಕ್ರೂರ ಕೃಷ್ಣನಿಗೆ ನೆರವಾದ್ದರಿಂದ ಕೃಷ್ಣ ಶತಧನ್ವನ ಸಂಹಾರ ಮಾಡಿ ಆ ಮಣಿಯನ್ನು ಪಡೆದು ಅಕ್ರೂರನಿಗೆ ಕೊಟ್ಟು ಅಕ್ರೂರವರದನಾಗುತ್ತಾನೆ.

ಹನುಮಂತ:

ಶ್ರೀವೈಷ್ಣವ ಭಾಗವತದಲ್ಲಿ 'ಕಿರಿಯ ತಿರುವಡಿ' ಎಂದು ಪ್ರಚಲಿತನಾಗಿರುವ ಭಾಗವತ ಭಕ್ತ, ಶ್ರೀರಾಮಭಂಟನಾಗಿ ವಾಹನನಾಗಿ ಭಕ್ತಾಗ್ರೇಸರ ಎನಿಸಿಕೊಂಡಿದ್ದಾನೆ. ರಾಮಾವತಾರದಲ್ಲಿ ಶ್ರೀರಾಮನಿಗೆ ಸಹಾಯ ಮಾಡಿದ ಅನೇಕ ಪ್ರಸಂಗಗಳ ಮೂಲಕ ಇವನ ಉಲ್ಲೇಖ ಬರುತ್ತದೆ. ದ್ವೈತ ಸಂಪ್ರದಾಯದಲ್ಲಿ ಇವನನ್ನು ಪ್ರಾಣದೇವರು ಎಂದು ಗುರುತಿಸಿದೆಯಾದರೂ ವಿಶಿಷ್ಟಾದ್ವೈತ ಸಂಪ್ರದಾಯದಲ್ಲಿ ಆ ಹೆಸರಿನ ಉಲ್ಲೇಖವಿಲ್ಲ. ಇವನನ್ನು ಪರಮ ಭಾಗವತ ಭಕ್ತನನ್ನಾಗಿ ಕಲ್ಪಿಸಿ ಸ್ಮರಣೆ–ಸ್ತುತಿ–ಆರಾಧನೆಗಳಲ್ಲಿ ಪ್ರಧಾನವಾಗಿ ಪರಿಗಣಿಸಿದ್ದರೂ ಹನುಮಂತ ಅಥವ ಅದಕ್ಕೆ ಪರ್ಯಾಯವಾದ ಮಾರುತಿ, ಆಂಜನೇಯ, ಪವನಸುತ, ವಾಯುಪುತ್ರ ಇತ್ಯಾದಿ ಯಾವುದೇ ಹೆಸರನ್ನು ಶ್ರೀವೈಷ್ಣವ ಮತೀಯರು ತಮ್ಮ ಹೆಸರುಗಳಲ್ಲಿ ಬಳಸುತ್ತಿಲ್ಲ ಎಂಬುದೊಂದು ವಿಶೇಷ ಅಂಶವಾಗಿದೆ. (ಇತರೆ ವಾಹನ ದೇವತೆಗಳಾದ ಶೇಷ (ಸರ್ಪ) ಗರುಡನ ಹೆಸರುಗಳು ಬಳಕೆಯಲ್ಲಿವೆ).

ಅನುಬಂಧ-೪

ವಿಶಿಷ್ಟಪದ ಸೂಚಿ

ಅಡಿ (ಪಾದ, ಶ್ರೀಪಾದ)
ಅಣಿಮಾ (ಅಷ್ಟಸಿದ್ಧಿಗಳಲ್ಲಿ ಒಂದು)
ಅತ್ತೆಮಾವ
ಅದ್ವೈತ
ಅನ್ನವಸ್ತ್ರ
ಅಭಯಹಸ್ತ
ಅಲಮೇಲ ಮಂಗಾಮಣಿ
ಅಲರ್ಮೇಲ್ಮಂಗ
ಅಲರ್ಮೇರ್‌ಮಂಗಾ
ಅಲರ್‌ಮೇಲಮ್ಮ
ಅವಲಕ್ಕಿ
ಅಸತೀಕುಸುಮ (ಶ್ರೀಕೃಷ್ಣನಿಗೆ ಪ್ರಿಯವಾದ ಅಗಸೆ ಹೂ)
ಆಂಡಾಳದೇವಿ
ಆಗಮ
ಆಚಾರ್ಯ (ರಾಮಾನುಜ)
ಆಚಾರ್ಯರುಗಳು (ಶ್ರೀವೈಷ್ಣವಾಚಾರ್ಯರು)
ಅಡಿಪ್ಪೂರಂ ತಿರುವಾಡಿಪ್ಪೂರಂ (ಅಂಡಾಳ್ ಜಯಂತಿ)
ಉಪವೀತ (ಜನಿವಾರ)
ಆಳುವಾರರು (ಶ್ರೀವೈಷ್ಣವ ಸಂತರು)
ಉಪ್ಪಿನಕಾಯಿ =
ಉಭಯವೇದ (ಆಳ್ವಾರರ ಪ್ರಬಂಧ ಮತ್ತು ಚತುರ್ವೇದ)
ಉಭಯ ವೇದಾಂತ (ಶ್ರೀವೈಷ್ಣವ ಧರ್ಮ)
ಉಷ್ಣಶೀತ (ಉಬ್ಬಸರೋಗ)
ಎಂಬೆರುಮಾನಾರ್ (ಪೂರ್ವಾಚಾರ್ಯರು)
ಏಕಾದಶಿ
ಒಕ್ಕಣೆ (ಕೃಷಿಪರಿಭಾಷೆ)
ಓಂಕಾರ
ಓಂ ನಮೋನಾರಾಯಣಾಯ (ಅಷ್ಟಾಕ್ಷರಿ)
ಕಂಟಿಕಮಾನು
ಕಂಚುಕನ್ನಡಿ
ಕಚ್ಚೆಕೈಬಾಯಿ
ಕಫ
ಕಲಿಯುಗ
ಕಾಮಧೇನು
ಕಾರಿಕುಮಾರ (ನಮ್ಮಾಳ್ವಾರರು)
ಕಾಳನಮಹಿಳೆಯರು
ಕುಲಶೇಖರರು (ಆಳ್ವಾರರು)

ಕ್ಷೀರ
ಕೂರೇಶ
ಕೌಸ್ತುಭ (ವಿಷ್ಣುವಿನ ವಿಶೇಷಹಾರ)
ಗುಂಬ ವಾದ್ಯ (ಘಟ)
ಗಜೇಂದ್ರ ಮೋಕ್ಷ
ಗೋದಾದೇವಿ (ಆಂಡಾಳ್)
ಗೌರ್ನಮೆಂಟು
ಗೋದಾನ
ಚರಮಶ್ಲೋಕ (ಮಂತ್ರರಹಸ್ಯದಲ್ಲಿ ಒಂದು)
ಚಿಗಟು (ಚಿತ್ರಾನ್ನ)
ಚಿಂತಾಮಣಿ
ಚಿತ್ರಾನ್ನ
ಚಿದುಂಬ
ಚಿದ್ರೂಪ (ಮನಸ್ಸಿನರೂಪದ ದೈವ)
ಚಿದ್ವಿಲಾಸ
ಚಿತ್ಕಳೆ
ಜಠರ
ಜಾತಿ
ತಂಬೂರಿ
ತತ್ವಮಸಿ
ತಾಂಬೂಲ
ತಾರಕಬ್ರಹ್ಮ
ತಾಳತಂಬೂರಿ
ತಿಗಣೆ
ತಿರುಕ
ತಿರುಪ್ಪಾಣಿ (ಆಳ್ವಾರರು)
ತಿರುಪ್ಪಾವೈ (ಗೋದಾದೇವಿ (ಆಂಡಾಳ್)
ಯ ಕೃತಿ)
ತಿರುಮಂಗೈಯ್ಯರು (ಆಳ್ವಾರರು)
ತಿರುಮಂತ್ರ (ಅಷ್ಟಾಕ್ಷರಿ)
ತಿರುಮಣಿ (ನಾಮ)
ತಿರುಮಣ್ಣು (ಬಿಳಿನಾಮ)
ತೀರ್ಥರು (ಆಚಾರ್ಯರು)
ತಿರುಮಳಿಶೆಯ್ಯಾಳ್ವಾರ್
ತಿರುಮೊಳಿ (ಆಳ್ವಾರರ ಕೃತಿ)
ತಿರಿಮೊಳಿಶಯ್ಯರು (ಆಳ್ವಾರರು)
ತಿರುವಡಿ (ಶ್ರೀಪಾದ)
ತಿರುವಾಯ್ಮೊಳಿ (ಆಳ್ವಾರರ ಕೃತಿ)
ತೋಟಗಾರ
ದಂಡಿಗೆ
ದಾಸೋಹಂ
ದ್ವಾದಶಿಯಪಾರಣೆ
ದಧಿ (ತುಪ್ಪ)
ದಿವ್ಯಸೂರಿಗಳು (ಆಳ್ವಾರಾಚಾರ್ಯರು)
ದಂಡ
ದಿವ್ಯಸೂರಿಸಮಾಜ
ದುರ್ವಾಯು
ಧನುರ್ಮಾಸದವ್ರತ
(ಸಂಕ್ರಾಂತಿಯವರೆಗೆ ಒಂದು ತಿಂಗಳು
ಆಚರಿಸುವ ವ್ರತ)
ದ್ವಯ (ಮಂತ್ರ)
ನಂಟರು
ನಮ್ಮಾಳ್ವಾರರು
ನಮೋನಾರಾಯಣಾಯ
ನವನೀತ
ನಾಟಕ (ರಚನೆ)
ನಾಥ (ನಾಥಮುನಿ)
ನಾಥನಾಯಕಿ
ನಿಗಮ

ಭ್ರಮರ ಕೀಟನ್ಯಾಯ
(ಶ್ರೀ ವೈಷ್ಣವಸಿದ್ಧಾಂತದ ದೃಷ್ಟಿ.)
ಮಂಗಳಾಶಾಸನ (ಶ್ರೀವೈಷ್ಣವ
ಪೂಜಾಕ್ರಮದಲ್ಲಿ ಕೊನೆಯಲ್ಲಿ ಹಾಡುವ
ಹಾಡುಗಳು.)
ಮಂತ್ರಜ್ಞಾನರಹಸ್ಯ
ಮಂತ್ರರಹಸ್ಯ (ಅಷ್ಟಾಕ್ಷರಿ)
ಮಂತ್ರಪೂತ
ಮಂತ್ರಾರ್ಥ (ರಹಸ್ಯ ಮಂತ್ರಗಳ ಗ್ರಹಿಕೆ)
ಮದ್ದು (ಔಷಧ)
ಮನೆವಾರ್ತೆ
ಮಸಿ
ಮಹಿಮಾ
ಮಳೆ
ಮಧುರಕವಿ (ಆಳ್ವಾರರು)
ಮಾಯಾಮೃಗ
ಮಿಂಡ
ಮುಖ್ಯಜನರಲ್
ಮುತ್ತು
ಮಾತ್ರೆ
ಮೂಲಪ್ರಣವ (ಬ್ರಹ್ಮ)
ಮೂಲಮಂತ್ರ (ಅಷ್ಟಾಕ್ಷರಿ)
ಮೃದಂಗ
ಮೃಷ್ಟಾನ್ನ (ಮೇವು)
ಯತಿಗಣಪ್ರಾಸ
ಯತಿಪತಿ (ರಾಮಾನುಜ)
ಯತಿರಾಜ
(ರಾಮಾನುಜ)
ಯದುಕುಲ
ಯದುರಾಜ
ಯಾತ
ಯಾದವ (ರಾಮಾನುಜರ ಮೊದಲಗುರು
ಅದ್ವೈತಮುನಿ ಯಾದವ ಪ್ರಕಾಶಕರು)
ಯಾಮುನ (ಯಾಮುನಾಚಾರ್ಯರು)
ಲವಣಜಲಧಿ
ವಕುಳಾಭರಣ (ನಮ್ಮಾಳ್ವಾರರು)
ವನವಾಸ
ವಾತ
ವಿಪ್ರನಾರಾಯಣ (ಆಳ್ವಾರರು)
ವಿಶಿಷ್ಟಾದ್ವೈತ
ವೀರವೈಷ್ಣವ
ವೀರಶೈವಾಚಾರ
ವೈಜಯಂತಿ
ವೈರ್ಮುಡಿ (ಮೇಲುಕೋಟೆಯಲ್ಲಿ ಪ್ರಸಿದ್ಧ
ಉತ್ಸವ)
ವೈಷ್ಣವ, ವೈಷ್ಣವಕುಲ, (ಬ್ರಾಹ್ಮಣರು
ನಿಮಂತ್ರಣದವರು)
ವೈಷ್ಣವರು
ವೈಷ್ಣವಾಸ್ತ್ರ
ಶಂಖಚಕ್ರ
ಶಠಗೋಪ (ನಮ್ಮಾಳ್ವಾರರು)
ಶಾಲ್ಯನ್ನ (ದೇವರಿಗೆ ಅರ್ಪಿಸುವ ಹಾಲು–
ಅನ್ನ ಸೇರಿ ಮಾಡುವ ನೈವೇದ್ಯ)
ಶ್ರಾದ್ಧದನ್ನ (ಶ್ರಾದ್ಧದ ದಿನ ಮಾಡುವ
ಮಡಿಯ ಅಡುಗೆ)
ಶ್ರಾವಣಕಡೆ ಶನಿವಾರ
ಶ್ವಾಸ (ಶ್ರೀಪದ (ಶ್ರೀಹರಿಯಪಾದ))
ಶ್ರೀಪಾದ ತೀರ್ಥ
ಶ್ರೀಭಾಷ್ಯ
ಶ್ರೀವತ್ಸ (ವಿಷ್ಣುವಿನ ವಿಶೇಷವಾದ

ಎದೆಹಾರ)
ಶ್ರೀವೈಷ್ಣವ
ಶ್ರೀವೈಷ್ಣವ (ಸುರಭೂಜ)
ಶ್ರೀ ಸೂಕ್ತಿ
ಶ್ರೀಹರಿಮಂತ್ರ (ಅಷ್ಟಾಕ್ಷರಿ)
ಶ್ರೀಹರಿಲಾಂಛನ (ತ್ರಿಪುಂಡ್ರ)
ಸಂಗೀತಗಾನ
ಸಗುಣ
ಸಚ್ಚಿದಾನಂದ
ಸತ್ಯಪ್ರಬಂಧ (ಆಳ್ವಾರರ ಹಾಡುಗಳು)
ಸವ್ಯಸಾಚಿ (ಅರ್ಜುನನ ಸಾರಥಿ ಕೃಷ್ಣ, ರಾಮಾನುಜ)
ಸಿಂಹ ಕಿಶೋರನ್ಯಾಯ
ಸುಂಕ
ಸುರತಕೇಳಿ
ಸೇತು
ಸೊಸೆ
ಸೋಹಂ, ಸೋಹಂಭಾವ
ಸೋಹಮಸ್ಮಿ
ಸ್ವರಗತಿತಾಳ
ಹಣ್ಣು
ಹರಿಕಥೆ
ಹರಿದಾಸರು
ಹರಿದಾಸರವ್ರತ (ಏಕಾದಶಿವ್ರತ)
ಹರಿಪದ (ಮೋಕ್ಷ, ಶ್ರೀಹರಿಯ ಪಾದ, ಶರಣಾಗತಿ ಧರ್ಮ)
ಹರಿವಾಸರ (ಏಕಾದಶಿ)
ಹಲನೇಗಿಲು (ದ್ವಿರುಕ್ತಿ)
ಹಾಡುಕಥೆ
ಹಾರುವ

ಅನುಬಂಧ–೫

ಸಂಖ್ಯಾಪದ ಸೂಚಿ

ಅರಿಗಳಾರು	– ಅರಿಷಡ್ವರ್ಗ (ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ)
ಅರಿಷಡ್ವರ್ಗ	–
ಅವಯವಸಾಸಿರ	– ವಿಷ್ಣು
ಅಷ್ಟತೀರ್ಥ	– ಎಂಟು ತೀರ್ಥಕ್ಷೇತ್ರಗಳು (ವೇದ, ವೈಕುಂಠ, ವರಾಹ,ಪದ್ಮ, ಪರಾಶರ, ಕುಶ, ಪಲಾಶ, ಕಲ್ಯಾಣ)
ಅಷ್ಟಭಾಗ್ಯ	– ಅಷ್ಟೈಶ್ವರ್ಯ ಅಥವ ಅಷ್ಟಮದಗಳು (?) ಅಥವ ಅಷ್ಟಸಿದ್ಧಿ
ಅಷ್ಟಪಾಶ	– ಅಷ್ಟೈಶ್ವರ್ಯ (?) ಧನ, ಧಾನ್ಯ, ವಾಹನ, ವಸ್ತ್ರ, ಪುತ್ರ, ಮಿತ್ರ, ಕಳತ್ರ, ಭೃತ್ಯ)
ಅಷ್ಟಭೂತಿ	– ಅಷ್ಟಮೂರ್ತಿ
ಅಷ್ಟಪ್ರಣವ	– ಅಷ್ಟಾಕ್ಷರಿಮಂತ್ರ (ಓಂ ನಮೋ ನಾರಾಯಣಾಯ)
ಅಷ್ಟಮದ	– ಧನ, ಕುಲ, ವಿದ್ಯಾ, ರೂಪ, ಯೌವನ, ಬಲ, ಪಾಳ, ಅಧಿಕಾರ, ಪರಿವಾರ
ಅಷ್ಟಮೂರ್ತಿ	– ಭವ ಶರ್ವ, ಈಶಾನ, ಪಶುಪತಿ, ಭೀಮ, ಉಗ್ರ, ಮಹದೇವ, ರುದ್ರ
ಅಷ್ಟಯೋನಿ	– ಹೀನ ಜನ್ಮಗಳು
ಅಷ್ಟಶೈಲ	– ಶೈಲಗಳು ಸಂಖ್ಯೆಯಲ್ಲಿ (ಮೈನಾಕ ಮಂದರ ಮೇರು ಕೈಲಾಸ ಗಂದಮಾದನ) ಮತ್ತು

		ಏಳರ ಸಂಖ್ಯೆಯಲ್ಲಿ (ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷವಾನ್, ವಿಂಧ್ಯ, ಪಾರಿಯಾತ್ರ
		ಇಲ್ಲಿಯ ಎಂಟೂ ಶ್ರೀ ವೈಷ್ಣವ ಕ್ಷೇತ್ರಗಳೆ (?)
ಅಷ್ಟಸಿದ್ಧಿ	–	ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವ
ಅಷ್ಟಾಕ್ಷರಿ	–	ಓಂ ನಮೋ ನಾರಾಯಣಾಯ (ಶ್ರೀವೈಷ್ಣವ ಮಂತ್ರರಾಜ)
ಅಷ್ಟಾಕ್ಷರ ಯುಗ ಮಂತ್ರ	–	ಅಷ್ಟಾಕ್ಷರಿ ಮತ್ತು ದ್ವಯಮಂತ್ರ ಶ್ರೀಮನ್ನಾರಾಯಣ ಚರಣಂ ಶರಣಂ ಪ್ರಪದ್ಯೆ ಶ್ರೀಮತೇ ನಾರಾಯಣಾಯ ನಮಃ)
ಆರುಗಿರಿ	–	ಆರು ಬೆಟ್ಟಗಳು
ಆರುಮಂದಿ	–	ಅರಿಷಡ್ವರ್ಗ
ಆರುಮೂರು	–	ಅರಿಷಡ್ವರ್ಗ ಮತ್ತು ತ್ರಿವರ್ಗ (ಧರ್ಮ ಅರ್ಥ ಕಾಮ) ಗಳು (?)
ಆರೆಂಟು	–	ಅರಿಷಡ್ವರ್ಗ ಮತ್ತು ಅಷ್ಟಮದ
ಈರಡಿ	–	ಎರಡು ಅಡಿ
ಎಂಟಾರು	–	ಅಷ್ಟಮದ ಮತ್ತು ಅರಿಷಡ್ವರ್ಗ
ಎಂಟುಗೇಣಿನದೇಹ	–	ದೇಹದ ಅಳತೆ
ಎರಡುಲೋಕ	–	
ಏಕದಂತ	–	ಗಣಪತಿ
ಏಳು ಎಂಟು ಆತ್ಮ ವಿಚಾರ	–	ಸಪ್ತವ್ಯಸನಗಳು (ವಾಕ್ಪಾರುಷ, ಅರ್ಥದೂಷಣ, ದಂಡಪಾರುಷ್ಯ, ಮೃಗಮದ್ಯೂತ ಸ್ತ್ರೀಪಾನ ಮತ್ತು ಅಷ್ಟಮದಗಳು (?)
ಏಳು ಜನ್ಮ	–	
ಏಳು ಪೆಡೆಯವನು	–	ಕಾಳಿಂಗಸರ್ಪ
ಏಳುವ್ಯಸನ	–	ಸಪ್ತವ್ಯಸನ (ವಾಕ್ಪಾರುಷ

	ಅರ್ಥದೂಷಣ, ದಂಡಪಾರುಶ್ಯ, ಮೃಗನು, ದ್ಯೂತ, ಸ್ತ್ರೀ, ಪಾನ
ಏಳುಸುತ್ತಿನಕೋಟೆ	_ ತಿರುಪತಿ
ಐಮೊಗದಹಿ	– ಐದು ಹೆಡೆಹಾವು
ಐವರಕೂಟ	– ಪಂಚೇಂದ್ರಿಯ
ಒಂದೆರಡು ಮೂರೆಂಬ	– ಅಷ್ಟಾಕ್ಷರಿ, ದ್ವಯಾ, ಚರವು ಶ್ಲೋಕ (ಶ್ರೀವೈಷ್ಣವ ಮಂತ್ರತ್ರಯ)
ಒಂಬತ್ತುಗೇಟಿನ ಮೋಟ	– ದೇಹ (ಒಂಬತ್ತು ರಂಧ್ರಗಳಿರುವ)
ಕರಣತ್ರಯ	– ತ್ರಿಕರಣ (ತನು,ಮನ, ಧನ)
ಕರಣನಾಲ್ಕರರಿವು	– ಚತುರ್ವರ್ಗ (?) (ಧರ್ಮ, ಅರ್ಥ, ಕಾಮ, ಮೋಕ್ಷ)
ಕಲ್ಪಕೋಟಿ	– ಕಲ್ಪ = ಯುಗ; ಕೋಟಿಯುಗ –(?)
ಗಂಡರೈವರು	– ಪಾಂಡವರು
ಜ್ಞಾನತ್ರಯ	– ತತ್ವ, ಹಿತ, ಪುರುಷಾರ್ಥ (ತತ್ವತ್ರಯಗಳು)
ಚತುರ್ಬಲ	– ಚದುರಂಗ (ಆನೆ, ಕುದುರೆ, ರಥ, ಕಾಲಾಳು)
ಚತುರಾನನ	– ಬ್ರಹ್ಮ
ತಾಪತ್ರಯ	– ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ
ತುಂಟರೈವರು	– ಪಂಚೇಂದ್ರಿಯಗಳು (ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ)
ತ್ರಿಕಲತ್ರ	– ವಿಷ್ಣು
ತ್ರಿಗುಣ	– ತ್ರಿವರ್ಗ (?)
ತ್ರಿಣಯ	– ಮುಕ್ಕಣ್ಣ
ತ್ರಿವಿಷ್ಟಪಾದಿಪಾನುಭವ್ಯ	– (?)
ತ್ರಿಜಗ	– ಮೂರುಲೋಕಗಳು (ಭೂಲೋಕ, ದೇವಲೋಕ, ಪಾತಾಳಲೋಕ)
ತ್ರಿದಂಡ	– ವಾಗ್ದಂಡ, ಕರ್ಮದಂಡ, ಮನೋದಂಡ
ತ್ರಿಪುಟಿ	– ಜ್ಞಾತೃ , ಜ್ಞಾನ, ಜ್ಞೇಯ
ತ್ರಿಸರ	– ಮೂರುಗೆರೆ, ಮಡಿಕೆ (ಕೊರಳಲ್ಲಿರುವ)
ದಶ ಅವತಾರ	– ಮತ್ಸ್ಯ, ಕೂರ್ಮ, ವರಾಹ,

	ನಾರಸಿಂಹ, ವಾಮನ, ಪರಶುರಾಮ, ರಾಮ, ಬಲರಾಮ, ಕೃಷ್ಣ, ಕಲ್ಕಿ
ದಶಗಣ	– (?) ೧೫೪
ದಶಗ್ರೀವ	– ರಾವಣ
ದಶವೇಶ	– ದಶಾವತಾರ
ದಶಶತಲೋಚನ	– ಸಹಸ್ರಾಕ್ಷ = ವಿಷ್ಣು
ದಶಶಿರ, ದಶಾನನ	– ರಾವಣ
ದುಷ್ಟಕಾಮಾದಿಗಳು	– ಅರಿಷಡ್ವರ್ಗಗಳು
ದ್ವಯಮಂತ್ರ	– ಮಂತ್ರರಹಸ್ಯದಲಿ ಎರಡನೆಯದು
ಧಾತುಗಳು	– ಚರ್ಮ, ರಕ್ತ, ಮಾಂಸ, ಮೇದಸ್ಸು, ಮಜ್ಜೆ, ಅಸ್ಥಿ, ವೀರ್ಯ ಎಂಬ ಸಪ್ತಧಾತುಗಳು
ನವರತ್ನ	–
ನಾದಮೂರು	– ಸುನಾದ, ಮಹಾನಾದ, ನಿಷ್ಕಲನಾದ
ನೂರೆಂಟು ತಿರುಪತಿ	– ಚೋಳನಾಡ ತಿರುಪತಿಗಳು ೪೦, ಪಾಂಡ್ಯನಾಡು ತಿರುಪತಿಗಳು ೧೮, ಮಲೆನಾಡ ತಿರುಪತಿಗಳು ೧೩, ನಡುನಾಡ ತಿರುಪತಿಗಳು ೨, ತೆಂಕನಾಡು ತಿರುಪತಿಗಳು ೨೨, ವಡನಾಡು ತಿರುಪತಿಗಳು ೧೨ ಮತ್ತು ಮೇಲುಕೋಟೆ.
ಪಂಚಮುಖಿ	– ಗಣಪತಿ
ಪಂಚಶರ	– ಮನ್ಮಥ
ಪಂಚಲಿಂಗ	– ಈಶ್ವರ
ಪಂಚವದನ	– ಶಿವ
ಪಂಚ ಸಂಸ್ಕಾರ	– ತಾಪ, ಪುಂಡ್ರ, ನಾಮ, ಮಂತ್ರ, ಯಾಗಗಳ ಅರ್ಹತೆಯನ್ನು ಪಡೆಯುವ ವಿಧಿ ವಿಧಾನ, ಉಪನಯನ ಕಾಲದಲ್ಲಿ ಶಾಸ್ತ್ರೋಕ್ತ ವಾಗಿ ವಟುವಿಗೆ ಈ ಸಂಸ್ಕಾರ ಕ್ರಿಯೆಯನ್ನು ನಡೆಸುವ ಶ್ರೀ ವೈಷ್ಣವ ಮತದ ಒಂದು ಆಚರಣೆ.
ಪಂಚಾಕ್ಷರಿ	– ಓಂ ನಮಃ ಶಿವಾಯ

ಬಿಲ್ಲುಹಬ್ಬ	–	
ಭ್ರಷ್ಟಗುಣಗಳು	–	ಅರಿಷಡ್ವರ್ಗ (?)
ಮುಕ್ಕಣ್ಣ	–	ಈಶ್ವರ
ಮೂಜಗ	–	ಮೂರು ಜಗತ್ತು
ಮೂರಂಗವೇಶ	–	ತ್ರಿಮೂರ್ತಿ
ಮೂರಡಿ	–	ವಾಮನಾವತಾರದಲ್ಲಿ ಬಲಿಯಿಂದ ಬೇಡಿದ ದಾನ
ಮೂರು ಐದರರಿವು	–	ತ್ರಿಕರಣ ಮತ್ತು ಪಂಚೇಂದ್ರಿಯ (?)
ಮೂರುತೆರ	–	ತಾಪತ್ರಯ (?)
ಮೂರುಮಂತ್ರ	–	ಅಷ್ಟಾಕ್ಷರಿ, ದ್ವಯ, ಚರಮಶ್ಲೋಕಗಳು
ಮೂರುಲೋಕ	–	
ರೂಪಿಸಾಸಿರ	–	ವಿಷ್ಣು
ಲೋಕತ್ರಯ	–	
ವರ್ಗಮೂರು	–	ತ್ರಿವರ್ಗ (ಧರ್ಮ, ಅರ್ಥ, ಕಾಮ)
ವೇದನಾಲ್ಕು	–	ಯಜುರ್ವೇದ, ಋಗ್ವೇದ, ಸಾಮವೇದ, ಅಥರ್ವವೇದ,
ಶತಕೋಟಿಪ್ರಕಾಶ	–	
ಶತಭಾಸ	–	ಸಹಸ್ರರೂಪಿ, ವಿಷ್ಣು
ಶತಯಾಗ ಸುತಮಿತ್ರ	–	ಇಂದ್ರನ ಮಗನಾದ ಅರ್ಜುನನ ಮಿತ್ರ ಕೃಷ್ಣ, ವಿಷ್ಣು
ಶತರುಚಿರುಚಿರಾಭರಣ	–	ವಿಷ್ಣು
ಶತಸಂಕಾಶ	–	
ಶ್ರುತಿಕೋಟಿ	–	
ಷಡ್ವೈರಿ	–	ಅರಿಷಡ್ವರ್ಗ
ಸಪ್ತಋಷಿ	–	ವಿಶ್ವಾಮಿತ್ರ, ಜಮದಗ್ನಿ, ಭರದ್ವಾಜ, ಗೌತಮ, ಅತ್ರಿ, ವಸಿಷ್ಠ, ಕಶ್ಯಪ
ಸಾಧಿಸಿದಾರೊಳು	–	ಅರಿಷಡ್ವರ್ಗ
ಸಾಸಿರರಾಮಕಥೆಯುಳ್ಳನಕ	–	ಶಾಶ್ವತವಾಗಿ

ಸಪ್ತಸಮುದ್ರ	–	ಲವಣ (ಉಪ್ಪು), ಇಕ್ಷು(ಕಬ್ಬಿನರಸ), ಸುರಾ(ಮದ್ಯ), ಸರ್ಪಿಸ್(ತುಪ್ಪ), ದಧಿ(ಮೊಸರು), ಕ್ಷೀರ(ಹಾಲು) ಜಲ (ನೀರು)
ಸಾರಸಾಕ್ಷ	–	ಸಹಸ್ರಾಕ್ಷ, ವಿಷ್ಣು
ಸಾಸಿರಪೆಸರು	–	ವಿಷ್ಣು
ಸಾಸಿರಮುಖ	–	ವಿಷ್ಣು
ಹತ್ತಾಳ್ವಾರರು	–	ಹತ್ತುಜನ ಆಳ್ವಾರರು (ಶ್ರೀವೈಷ್ಣವ ಸಂತರು)
ಹದಿನಾಲ್ಕು ಲೋಕ	–	
ಹದಿನೇಳು ತತ್ವಂಗಳು	–	
ಹನ್ನೆರಡುನಾಮ	–	ದ್ವಾದಶನಾಮ (ಶ್ರೀವೈಷ್ಣವ ಧರ್ಮೀಯರು ದೇಹದ ಹನ್ನೆರಡು ಭಾಗ ಗಳಲ್ಲಿ ಧರಿಸುವ ನಾಮಗಳು)
ಹರಿದಾರಿ	–	ಸುಮಾರು ಮೂರು ಮೈಲಿಗಳ ಒಂದು ಅಳತೆ

ಅನುಬಂಧ–೬

ಕೀರ್ತನೆಗಳ ಅಕಾರಾದಿ

ಸಾರಸ್ವತ ಡಾ|| ಶಿವರಾಮ ಕಾರಂತರಿಗೆ
ನಮಸ್ಕಾರಪೂರ್ವಕವಾಗಿ
[illegible]
[illegible]

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ



ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು